ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೦

ವಿರಾಟಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ಮಾಲಂಕಾರದೊಂದಿಗೆ

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೦

ವಿರಾಟಪರ್ವ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಹಾಗೂ ಶ್ರೀವಾದಿರಾಜತೀರ್ಥರ
ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ಶೇಷಗಿರಿ ಆಚಾರ್ಯ,

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ವಿರಾಟಪರ್ವ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ 32 ಅಡಿಯ ಭವ್ಯ ಪ್ರತಿಮೆಯ ಬ್ರಹ್ಮಕಲಶೋತ್ಸವದ ಶುಭಸಂದರ್ಭದಲ್ಲಿ ಹೇಮಲಂಬಿ ಸಂವತ್ಸರದ ವೈಶಾಖ ಶುದ್ಧ ಪೂರ್ಣಿಮೆಯಂದು (10.05.2017) ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ವಿರಾಟಪರ್ವ
ಭಾಗ-೧೦

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-63-7

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XX + 788 = 808
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಶ್ರೀ ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್, ಮೈಸೂರು
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್

ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ನುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ಭಾರತದಲ್ಲಿಯೇ ಅತ್ಯಂತ ಸಾರವತ್ತಾದ ಪರ್ವಗಳು ವಿರಾಟಪರ್ವ ಮತ್ತು ಉದ್ಯೋಗಪರ್ವ. 'ವಿರಾಟೋದ್ಯೋಗಸಾರವಾನ್' ಎಂಬ ಮಾತಿದೆ. ಇದಕ್ಕೆ ಅನೇಕ ಕಾರಣಗಳಿವೆ. ಪಾಂಡವರು ಅಜ್ಞಾತವಾಸವನ್ನು ಕೈಗೊಳ್ಳುವ ಪ್ರಸಂಗವು ಈ ಪರ್ವದಲ್ಲಿದೆ. ಪಾಂಡವರು ತಮ್ಮನ್ನು ಮುಚ್ಚಿಟ್ಟುಕೊಳ್ಳುವುದೆಂದರೆ ಬೆಂಕಿಯನ್ನು-ಗಾಳಿ-ಸೂರ್ಯರನ್ನು ಬಚ್ಚಿಟ್ಟಂತೆ. ಈಗಾಗಲೇ ಜರಾಸಂಧನ ವಧೆಗೈದ ಭೀಮನು ಲೋಕವಿಖ್ಯಾತನಾಗಿದ್ದಾನೆ. ಅವನನ್ನು ಅರಿಯದ ನರರೇ ಇಲ್ಲದಿರುವಾಗ ಅಜ್ಞಾತ ವಾಸ ಹೇಗೆ ಸಾಧ್ಯ? ಹೀಗಿದ್ದರೂ ಸಕಲಜೀವರ ಹೃದಯದಲ್ಲಿ ಜ್ಞಾತನಾಗಿ ಕುಳಿತ ಮುಖ್ಯವಾಯು ಅಜ್ಞಾತವಾಗಿಯೂ ದೇಹದ ಸಮಗ್ರ ಚೇಷ್ಟೆಗಳ ಜೊತೆಗೆ ಜೀವರ ಸಾಧನೆಗಳನ್ನು ಮಾಡಿಸಬಲ್ಲ. ಆ ಮುಖ್ಯವಾಯುವೇ ಭೀಮನಾದ್ದರಿಂದ ಅಸಾಧ್ಯವೂ ಸಾಧ್ಯ. ಭೀಮನು ಶೂದ್ರವೇಷ ಧರಿಸಿ ಸೂದನಾದರೆ ಅರ್ಜುನನು ಷಂಢ ವೇಷ ಧರಿಸಿದ. ನಕುಲ-ಸಹದೇವರು ಅಶ್ವಪಾಲಕ-ಗೋಪಾಲಕರಾದರು. ಯತಿಯಾದ ಧರ್ಮರಾಜನನ್ನು ಎಲ್ಲರೂ ಅನುಸರಿಸಿದರು. ದ್ರೌಪದಿಯು ಭೀಮನಂತೆ ಶೂದ್ರಸ್ತ್ರೀಯಾಗಿ ಸೈರಂಧ್ರಿ ಎನಿಸಿದಳು. ಅನುಪಮ ತೇಜಸ್ಸಿನ ಧರ್ಮಾಭಿಮಾನಿಗಳು ನಿಗೂಹಿತ ವೇಷದಿಂದ ವಿರಾಟನ ಬಳಿ ಇದ್ದರೆಂಬುದು ವಿರಾಟನ ಭಾಗ್ಯವೇ ಸರಿ. ಭೀಮನು ಅಡುಗೆ ವೇಷ ಧರಿಸಿದ್ದರೂ ದುಷ್ಟರ ಹನನವೆಂಬ ಕ್ಷಾತ್ರಧರ್ಮಕ್ಕೆ ತಿಲಮಾತ್ರದಷ್ಟು ವಂಚನೆ ಮಾಡಲಿಲ್ಲವೆಂಬುದು ಅತಿಶಯ. ಜೀಮೂತ-ಕೀಚಕರೆಂಬ ಮಹಾಮಲ್ಲರನ್ನು ಬಾಹುಗಳಿಂದಲೇ ಮಣಿಸಿದನೆಂಬುದು ಸಾಮರ್ಥ್ಯದ್ಯೋತಕ ಮಹಾಗುಣ. ಕೀಚಕನ ವಧೆಯನ್ನು ಮಾಡುವವರೇ ಇಲ್ಲವೆಂದು ಜನ ಭಾವಿಸಿದ್ದಾಗ; ಆತನನ್ನು ಮಾಂಸದ ಮುದ್ದೆಯನ್ನಾಗಿಸಿ ಉಪಕೀಚಕರನ್ನೂ ಅನಾಯಾಸವಾಗಿ ಸಂಹರಿಸಿದ ಭೀಮನ ಪರಾಕ್ರಮಕ್ಕೆ ಕಲಿಪುರುಷನಾದ ದುರ್ಯೋಧನನೂ ಬೆರಗಾದನೆಂದ ಬಳಿಕ ಪಾಮರ ಮಾನವರಾದ ನಾವೇನು ಉಸುರಿಯೇವು?

ವಿರಾಟಪರ್ವವು ಒಂದು ವಿಧದಲ್ಲಿ ತಾರತಮ್ಯವನ್ನೂ ತಿಳಿಸುತ್ತದೆ. ಜೀವೋತ್ತಮನಾದ ಭೀಮನ ಮಹಿಮೆಯನ್ನು ತಿಳಿಸಿದನಂತರ ದೇವೋತ್ತಮನಾದ

ಅರ್ಜುನನ ಮಹಿಮೆಯನ್ನೂ ಸಾರಿದೆ. ದುರ್ಯೋಧನಾದಿಗಳ ಅಜ್ಞಾನವನ್ನೂ ತೋರಿದೆ. ಗೋಗ್ರಹಣದ ನೆಪದಲ್ಲಿ ಅರ್ಜುನನ ವಿಜಯವನ್ನು ಎತ್ತಿತೋರಿದೆ. ಅಜ್ಞಾತವಾಸವನ್ನು ಕಳೆದು ಪಾಂಡವರು ನಿಜರೂಪದಲ್ಲಿ ಮೆರೆದಾಗ ವಿರಾಟನು ಬೆರಗಾಗುತ್ತಾನೆ. ಕೊನೆಗೆ ಸರ್ವೋತ್ತಮನಾದ ಶ್ರೀಕೃಷ್ಣನ ಸಾನ್ನಿಧ್ಯದಲ್ಲಿ ಅಭಿಮನ್ಯು-ಉತ್ತರೆಯರ ವಿವಾಹವೆಂಬ ಪರಮಮಂಗಳ ಪ್ರಸಂಗದಲ್ಲಿ ವಿರಾಟ ಪರ್ವ ಕೊನೆಗೊಳ್ಳುತ್ತದೆ. ಈ ಪರ್ವದಲ್ಲಿ ನಡೆದ ಮಂಗಳಪ್ರಸಂಗ ಮುಂದೆ ಪರೀಕ್ಷಿತನ ಜನ್ಮಕ್ಕೆ ನಾಂದಿಯಾಗಿ ಭಾಗವತದ ಮೂಲಕ ಮನುಕುಲಕ್ಕೆ ಅಜರಾಮರವಾದ ಜೀವನ ಸಂದೇಶವನ್ನು ನೀಡಿದೆ.

ವ್ಯಾಸರ ಶ್ಲೋಕ-ಶ್ಲೋಕಗಳಲ್ಲಿ ತುಂಬಿದ ರಸವನ್ನು ಆಸ್ವಾದಿಸಲು ಈ ಕನ್ನಡಾನುವಾದವು ಓದುಗರಿಗೆ, ಸಹೃದಯ ಸಜ್ಜನವರ್ಗಕ್ಕೆ ಸಾಧನವಾಗಿದೆ. ಶ್ರೇಷ್ಠ ವಿದ್ವಾಂಸರಾದ ಶೇಷಗಿರಿ ಆಚಾರ್ಯರ ಅವಿರತ ಶ್ರಮಕ್ಕೆ ಈ ಕೃತಿ ಕನ್ನಡಿಯಂತಿದೆ. ಉತ್ತಮ ಅನುವಾದಕರಾದ ವಿದ್ವಾನ್ ಶೇಷಗಿರಿ ಆಚಾರ್ಯರಿಗೆ ಶ್ರೀ ಹರಿವಾಯು ಗುರುಗಳು, ಶ್ರೀರಾಮಚಂದ್ರದೇವರು ಆಯುರಾರೋಗ್ಯಗಳನ್ನು ಕೊಟ್ಟು ಇನ್ನೂ ವಿಶೇಷ ಸೇವೆಯನ್ನು ಸ್ವೀಕರಿಸಲಿ. ಇವರ ಅನುವಾದಕ್ಕೆ ಪೂರಕವಾಗಿ ಶ್ರಮಿಸಿದ ಎಲ್ಲ ಸಾಧಕರಿಗೂ ಭಗವಂತನು ಸನ್ಮಂಗಳವನ್ನುಂಟು ಮಾಡಲಿ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಪ್ರಕಾಶಕರ ನುಡಿ

ಮಹಾಭಾರತ ವಿರಾಟಪರ್ವ ಮತ್ತು ಅದರ ಕನ್ನಡಾನುವಾದವನ್ನು ಹರಿವಾಯು ಗುರುಗಳ ದಯದಿಂದ ಜಿಜ್ಞಾಸುಗಳಿಗೆ ಒದಗಿಸುತ್ತಿದ್ದೇವೆ. ಈ ಪರ್ವದಲ್ಲಿ ವೈರಾಟಪರ್ವ, ಸಮಯಪಾಲನಾ ಪರ್ವ, ಕೀಚಕವಧ ಪರ್ವ, ಗೋಗ್ರಹಣ ಪರ್ವ ಮತ್ತು ವೈವಾಹಿಕ ಪರ್ವ ಎಂಬ ಅವಾಂತರ ಪರ್ವಗಳಿವೆ. ಶ್ರೀಮದಾಚಾರ್ಯರು ವಿರಾಟಪರ್ವದ ಕಥೆಯನ್ನು ಮಹಾಭಾರತ ತಾತ್ಪರ್ಯನಿರ್ಣಯದ 22ನೆಯ ಅಧ್ಯಾಯದಲ್ಲಿ ಸಂಗ್ರಹಿಸಿ ತಾತ್ಪರ್ಯಗಳನ್ನು ತಿಳಿಸಿದ್ದಾರೆ.

ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ವನಪರ್ವದ ಭಾಗವನ್ನು ಅರ್ಥಸಹಿತ ನಾಲ್ಕು ಸಂಪುಟಗಳಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಅಕ್ಕಿ ಮುಹೂರ್ತದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಅದ್ಭುತವಾದ ಶ್ರೀಮಹಾಭಾರತ ಶುದ್ಧಪಾಠದ ಮುದ್ರಣಕಾರ್ಯಕ್ಕೆ ಪೂರ್ಣವಾಗಿ ಆರ್ಥಿಕ ನೆರವನ್ನು ನೀಡಿರುವುದು ನಮ್ಮ ಘನವೆತ್ತ ಕರ್ನಾಟಕ ಸರ್ಕಾರ. ಹಿಂದಿನ ಕಾಲದಲ್ಲಿ ರಾಜಾಶ್ರಯ ಇತ್ತು. ಈಗಲೂ ಇಂತಹ ಚಾರಿತ್ರಾತ್ಮಕ ಕಾರ್ಯದಲ್ಲಿ ನಮಗೆ ಸರ್ಕಾರದ ಆಶ್ರಯ ದೊರಕಿದೆ. ಸರ್ಕಾರದ ಹಾಗೂ ಕರ್ನಾಟಕ ಸಂಸ್ಕೃತ

ವಿಶ್ವವಿದ್ಯಾಲಯದ ಎಲ್ಲಾ ಪದಾಧಿಕಾರಿಗಳಿಗೆ ನಮ್ಮ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಈ ಕೃತಿಯ ಸಂಪಾದನಾ ಕಾರ್ಯದಲ್ಲಿ ಸಂಪೂರ್ಣವಾಗಿ ಮುತುವರ್ಜಿ ವಹಿಸಿ ಗ್ರಂಥ ಸಂಶೋಧನೆ-ಸಂಪಾದನೆ-ಅರ್ಥ ವಿವರಣೆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ನಮ್ಮ ನಾಡಿನ ಪ್ರಸಿದ್ಧ ವಿದ್ವಾಂಸರಾದ ವಿದ್ವಾನ್ ಶ್ರೀ ಪಿ.ಎಸ್. ಶೇಷಗಿರಿ ಆಚಾರ್ಯರಿಗೆ ನಮನಗಳ ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಶ್ರೀಮಹಾಭಾರತ ಶುದ್ಧಪಾಠದ ಸಮಗ್ರ ಕಾರ್ಯನಿರ್ವಾಹಕರಾದ ಡಾ।। ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾ ವಿದ್ಮನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ದೋಷರಹಿತವಾಗಿ, ಸುಂದರವಾಗಿ ಅಕ್ಷರಜೋಡಣೆಯನ್ನು ಮಾಡಿದ ಶ್ರೀಮತಿ ನಾಗಲತಾ ಹಾಗೂ ಶ್ರೀ ಶರತ್‌ಚಂದ್ರ ಎಂ. ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಆಸ್ತಿಕ ಸಮಾಜಕ್ಕೆ ನಮ್ಮ ಸಂಸ್ಥೆಯ ಹಾಗೂ ವಿದ್ವನ್ಮಂಡಲಿಯ ಅನನ್ಯವಾದ ಉಪಾಯನ ಈ ಗ್ರಂಥ. ಇದನ್ನು ಸ್ವೀಕರಿಸಿ ಅಧ್ಯಯನ ಮಾಡಿ ಆಂತರಿಕ ಸಂಪತ್ತನ್ನು ಸಭ್ಯ ಸಮಾಜ ಬೆಳೆಸಿಕೊಳ್ಳಲಿ, ತನ್ಮೂಲಕ ವಿದ್ವಾಂಸರ ಈ ಶ್ರಮ ಸಾರ್ಥಕವಾಗಲಿ ಎಂದು ಅಪೇಕ್ಷಿಸುತ್ತಿದ್ದೇನೆ.

ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್
ನಿರ್ದೇಶಕರು, ತತ್ತ್ವಸಂಶೋಧನಸಂಸತ್,
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ವಿರಾಟಪರ್ವವನ್ನು ಕುರಿತು

ವಿರಾಟಪರ್ವವು ಮಹಾಭಾರತದ ನಾಲ್ಕನೆಯ ಪರ್ವ. ಇದರಲ್ಲಿ ಎಪ್ಪತ್ತಾರು ಅಧ್ಯಾಯಗಳಿವೆ. ಬೇರೆ ಬೇರೆ ಮೂಲ ಪ್ರತಿಗಳಲ್ಲಿ ಈ ಅಧ್ಯಾಯಗಳ ಸಂಖ್ಯೆಯಲ್ಲಿ ಒಂದೆರಡು ಸಂಖ್ಯೆಯ ವ್ಯತ್ಯಾಸವಿದ್ದರೂ ಶ್ಲೋಕಗಳು ಮಾತ್ರ ಎಲ್ಲಾ ಪ್ರತಿಗಳಲ್ಲಿಯೂ ಸಮಾನವಾಗಿವೆ.

ವಿರಾಟಪರ್ವದಲ್ಲಿ ವೈರಾಟಪರ್ವ, ಪಾಂಡವಪ್ರವೇಶಪರ್ವ, ಸಮಯಪಾಲನ ಪರ್ವ, ಕೀಚಕವಧಪರ್ವ, ಗೋಗ್ರಹಣ ಪರ್ವ, ವೈವಾಹಿಕಪರ್ವಗಳೆಂಬ ಆರು ಅವಾಂತರ ಪರ್ವಗಳಿವೆ. ಕೆಲವು ಪ್ರತಿಗಳಲ್ಲಿ ಮೊದಲನೆಯ ಮೂರು ಅವಾಂತರ ಪರ್ವಗಳನ್ನೂ ವೈರಾಟಪರ್ವವೆಂದು ಉಲ್ಲೇಖಿಸಲಾಗಿದೆ. ಮಹಾಭಾರತದ ಹದಿನೆಂಟು ಪರ್ವಗಳಲ್ಲಿ ಒಟ್ಟು ನೂರು ಅವಾಂತರಪರ್ವಗಳಿವೆ ಎಂದು ಆದಿಪರ್ವದಲ್ಲಿಯೇ ಉಲ್ಲೇಖವಿದೆ. ಆದರೆ ನಾವು ಈಗ ನೋಡುವಂತೆ ಒಟ್ಟು ತೊಂಬತ್ತಾರು ಅವಾಂತರಪರ್ವಗಳು ಮಾತ್ರ ದೊರೆಯುತ್ತವೆ. ಪಾಂಡವ ಪ್ರವೇಶಪರ್ವ ಮತ್ತು ಸಮಯಪಾಲನ ಪರ್ವಗಳನ್ನು ಸೇರಿಸಿದರೆ ಆ ಸಂಖ್ಯೆಯು ಸದ್ಯಕ್ಕೆ ತೊಂಬತ್ತೆಂಟಾಗುತ್ತದೆ. ಮುಂದಿನ ಪರ್ವಗಳಲ್ಲಿಯೂ ಹೀಗೆ ಏನಾದರೂ ವ್ಯತ್ಯಾಸಗಳು ದೊರೆತರೆ ಆ ಸಂಖ್ಯೆಯು ನೂರಕ್ಕೆ ಸರಿಯಾಗಬಹುದು.

ಆಚಾರ್ಯರು ತಮ್ಮ ಮಹಾಭಾರತ ತಾತ್ಪರ್ಯನಿರ್ಣಯದ ಎರಡನೆಯ ಅಧ್ಯಾಯದಲ್ಲಿ ವಿರಾಟಪರ್ವದಲ್ಲಿ ಸುಯೋಧನನ ಮಾತುಗಳೆಂದು ಉದಾಹರಿಸಿರುವ–

ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ ।
ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮ ॥

ಮೊದಲಾದ ಭೀಮಸೇನನ ಸರ್ವಾಧಿಕ ಬಲಾದಿ ಪ್ರತಿಪಾದಕವಾದ ಮತ್ತು ತನ್ಮೂಲಕ ವಾಯುದೇವರ ಜೀವೋತ್ತಮತ್ವ ಪ್ರತಿಪಾದಕವಾದ ಶ್ಲೋಕಗಳು ಇಲ್ಲಿ

ಗೋಗ್ರಹಣಪರ್ವದ ಪ್ರಾರಂಭದಲ್ಲಿ ಕಂಡುಬರುತ್ತವೆ. ಮೇಲೆ ಉದಾಹರಿಸಿದ ಈ ಶ್ಲೋಕವು ಮುದ್ರಿತ ಪುಸ್ತಕಗಳಲ್ಲಿ 'ಬಲಭದ್ರಶ್ಚ ಭೀಮಶ್ಚ...' ಎಂಬುದಾಗಿಯೇ ಇದೆ. ಆದರೆ ಎಲ್ಲಾ ತಾಳೆಗರಿಗಳಲ್ಲಿಯೂ ಆಚಾರ್ಯರು ಉದಾಹರಿಸಿದಂತೆಯೇ ಈ ಶ್ಲೋಕವು ದೊರೆಯುವುದು ಬಹಳ ಶ್ಲಾಘನೀಯವಾದ ಸಂಗತಿಯಾಗಿದೆ. ಇಂತಹ ವ್ಯತ್ಯಾಸಗಳಿಗೂ ಕಾರಣವನ್ನು ಆಚಾರ್ಯರು 'ಕ್ವಚಿದ್ ಗ್ರಂಥಾನ್ ಪ್ರಕ್ಷಿಪಂತಿ...' ಎಂದು ತಿಳಿಸಿದ್ದಾರೆ.

ಇನ್ನು ಮಹಾಭಾರತದಲ್ಲಿ ಎಷ್ಟೋ ಗೂಢಾರ್ಥ ಪ್ರತಿಪಾದಕವಾದ ಶ್ಲೋಕಗಳಿವೆ ಎಂದು ಕೇಳಿಬರುತ್ತದೆ. ಒಂದು ಮುದ್ರಿತಪುಸ್ತಕದಲ್ಲಂತೂ ಅಂತಹ ಎಂಟುಸಾವಿರದ ಎಂಟು ನೂರು ಶ್ಲೋಕಗಳಿವೆ. ಅವುಗಳ ಅರ್ಥವನ್ನು ವ್ಯಾಸರು ತಿಳಿದಿದ್ದಾರೆ, ಶುಕರು ತಿಳಿದಿದ್ದಾರೆ, ಸಂಜಯನು ತಿಳಿದಿದ್ದಾನೋ ಅಥವಾ ಇಲ್ಲವೋ ಎಂದು ಸಂಶಯವಿದೆ ಎಂದು ಹೇಳುವ ಒಂದು ಶ್ಲೋಕವೂ ಇದೆ. ಅಂತಹ ಎರಡು ಶ್ಲೋಕಗಳು ವಿರಾಟಪರ್ವದಲ್ಲಿ ಕಂಡುಬರುತ್ತವೆ. ಉತ್ತರ ಗೋಗ್ರಹಣಕಾಲದಲ್ಲಿ ದ್ರೋಣರು ನಪುಂಸಕ ವೇಷದಲ್ಲಿರುವ ಅರ್ಜುನನನ್ನು ಗುರುತಿಸಿ ಭೀಷ್ಮರನ್ನು ಕುರಿತು ಸಂಕೇತ ಭಾಷೆಯಲ್ಲಿ ಹೀಗೆ ಹೇಳುತ್ತಾರೆ-

ನದೀಜ ಲಂಕೇಶವನಾರಿ ಕೇತುಃ
ನಗಾಹ್ವಯೋ ನಾಮ ನಗಾರಿಸೂನುಃ ।
ಗತ್ಯಾ ಸುರೇಶಃ ಕ್ವಚಿದಂಗನೇವ
ಗುರುರ್ಬಭಾಷೇ ವಚನಂ ತದಾನೀಮ್ ॥

ನದೀಜ= ಎಲೈ ಗಂಗಾಪುತ್ರರಾದ ಭೀಷ್ಮರೇ, ಲಂಕೇಶವನಾರಿಕೇತುಃ= ಲಂಕೇಶನಾದ ರಾವಣನ ಅಶೋಕವನವನ್ನು ಧ್ವಂಸಮಾಡಿದ ಹನುಮಂತನನ್ನು ಧ್ವಜವಾಗಿ ಹೊಂದಿದ, ನಗಾಹ್ವಯೋ ನಾಮ= ಅರ್ಜುನವೃಕ್ಷದ ಹೆಸರನ್ನು ಹೊಂದಿರುವ, ನಗಾರಿಸೂನುಃ= ಪರ್ವತಗಳಿಗೆ ಶತ್ರುವಾದ ಇಂದ್ರನ ಪುತ್ರನಾದ ಇವನು (ಅರ್ಜುನನು), ಗತ್ಯಾ=ನಡಿಗೆಯಲ್ಲಿ, ಸುರೇಶಃ= ದೇವೇಂದ್ರನಂತೆಯೂ,

ಕ್ವಚಿತ್= ಕಂಠದ ಮೇಲ್ಭಾಗದಲ್ಲಿ ಉದ್ದವಾದ ಕೇಶಗಳನ್ನು ಧರಿಸಿರುವುದರಿಂದ, ಅಂಗನೇವ= ಸ್ತ್ರೀಯಂತೆಯೂ ಕಾಣುತ್ತಿದ್ದಾನೆ ಎಂದು ಆಗ ಗುರುಗಳಾದ ದ್ರೋಣಾಚಾರ್ಯರು ಹೇಳಿದರು ಎಂದು ಈ ಶ್ಲೋಕದ ಅಭಿಪ್ರಾಯವನ್ನು ವಾದಿರಾಜರು ಲಕ್ಷಾಲಂಕಾರದಲ್ಲಿ ತಿಳಿಸಿದ್ದಾರೆ.

ಅದರಂತೆ–

ಬರ್ಹಿಬರ್ಹಿಣರಾಜಾನಾಂ ಬರ್ಹಿಣಾಂ ಬರ್ಹಿಣಾಮಿವ ।
ಪತತಾಂ ಪತತಾಂ ಘೋಷಃ ಪತತಾಂ ಪತತಾಮಿವ ॥

ನವಿಲುಗರಿಯ ಪುಂಖಗಳನ್ನು ಹೊಂದಿ ಒಂದರ ಹಿಂದೆ ಒಂದರಂತೆ ಸಂಬದ್ಧವಾಗಿ ಹೋಗುವ ಬಾಣಗಳ ಘೋಷವು ಒಂದರ ಹಿಂದೆ ಒಂದರಂತೆ ಹೋಗುವ ನವಿಲುಗಳ ಘೋಷದಂತಿದೆ ಎಂದು ಈ ಶ್ಲೋಕದ ಅಭಿಪ್ರಾಯವನ್ನೂ ವಾದಿರಾಜರು ಲಕ್ಷಾಲಂಕಾರದಲ್ಲಿ ತಿಳಿಸಿದ್ದಾರೆ. ಇದಲ್ಲದೆ ಲಕ್ಷಾಲಂಕಾರದಲ್ಲಿ ಎಷ್ಟೋ ಕ್ಲಿಷ್ಟವಾದವುಗಳ ಅರ್ಥವನ್ನೂ ಮತ್ತು ಪದಗಳ ಅನ್ವಯವನ್ನೂ ತಿಳಿಸಿ ಮಹೋಪಕಾರವನ್ನು ಮಾಡಿದ್ದಾರೆ. ಅವರ ಕರುಣಾಪೂರ್ಣವಾದ ಉಪಕಾರವಿಲ್ಲದಿದ್ದರೆ ಮಹಾಭಾರತವನ್ನು ಅರ್ಥಮಾಡಿಕೊಳ್ಳುವುದು ಇನ್ನೂ ಕಷ್ಟಕರವಾಗುತ್ತಿದ್ದಿತು. ವಾದಿರಾಜರ ವ್ಯಾಖ್ಯಾನವು ಇನ್ನೂ ವಿಸ್ತಾರವಾಗಿರಬೇಕೆಂದು ನಮ್ಮಂತಹ ಅಲ್ಪರಿಗೆ ತೋರುತ್ತದೆ. ಆದರೆ ಭಗವತ್ಪ್ರೇರಣೆಯಂತೆಯೇ ಎಲ್ಲವನ್ನೂ ಮಾಡುವ ಅವರು ಭಗವತ್ಪ್ರೇರಣೆಯಂತೆಯೇ ಇಷ್ಟನ್ನೇ ಬರೆದಿದ್ದಾರೆ ಎಂದು ಸಮಾಧಾನ ಮಾಡಿಕೊಳ್ಳಬೇಕಾಗಿದೆ.

ಪರಮಗುರುಗಳಾದ, ಪರಮಪೂಜ್ಯರಾದ, ಪ್ರಾತಃಸ್ಮರಣೀಯರಾದ ಶ್ರೀವಿದ್ಯಾಮಾನ್ಯರ ಮತ್ತು ಗುರುಗಳಾದ ಪರಮಪೂಜ್ಯರಾದ ಶ್ರೀಪೇಜಾವರ ಮಠಾಧೀಶರ ಮತ್ತು ಪರಮಪೂಜ್ಯರಾದ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶ ತೀರ್ಥಪೂಜ್ಯಚರಣರ ಪ್ರೇರಣೆಯಿಂದ ಮತ್ತು ಕೃಪಾಬಲದಿಂದ ದುಸ್ಸಾಧ್ಯವಾದ ಮಹಾಭಾರತ ಮೂಲದ ಸಂಶೋಧನೆ ಮತ್ತು ಅನುವಾದ ಎಂಬ ಈ ಕಾರ್ಯದಲ್ಲಿ ತೊಡಗಿ ಈಗ ವಿರಾಟಪರ್ವದ ಅನುವಾದವನ್ನು ಮುಗಿಸಿದ್ದೇನೆ.

ನನ್ನ ಜ್ಞಾನದಾರಿದ್ರ್ಯದಿಂದಲೂ ಮತ್ತು ಅನವಧಾನದಿಂದಲೂ ಅನೇಕ ತಪ್ಪುಗಳು ಉಂಟಾಗಿರುವ ಸಾಧ್ಯತೆ ಇದೆ. ವಿದ್ವಾಂಸರು ಮತ್ತು ಅಧ್ಯೇತೃಗಳು ಆ ತಪ್ಪುಗಳನ್ನು ತಿದ್ದುಕೊಂಡು ನನಗೆ ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಪರಮಪೂಜ್ಯರಾದ ಗುರುಗಳ ಚರಣಕಮಲಗಳಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಈ ಸಂಶೋಧನೆ ಮತ್ತು ಅನುವಾದಕಾರ್ಯವನ್ನು ಅವರ ಅಂತರ್ಯಾಮಿಯಾದ ಭಾರತೀಪತಿ ಮುಖ್ಯಪ್ರಾಣಾಂತರ್ಯಾಮಿ ರುಕ್ಮಿಣೀ ಸತ್ಯಭಾಮಾ ಸಹಿತ ಗೋಪಾಲಕೃಷ್ಣಾಭಿನ್ನನಾದ ಹನುಮತ್ಸೀತಾ ಸಮೇತನಾದ ರಾಮಚಂದ್ರನಿಗೂ ಮತ್ತು ಅಜವಿಟ್ಠಲನಿಗೂ ಸಮರ್ಪಿಸುತ್ತಿದ್ದೇನೆ. ಶ್ರೀಕೃಷ್ಣಾರ್ಪಣಮಸ್ತು.

– ಪಿ.ಎಸ್. ಶೇಷಗಿರಿ ಆಚಾರ್ಯ

ಮೈಸೂರು

★ ★ ★ ★ ★

ವಿರಾಟಪರ್ವದ ಸಂಶೋಧನೆ ಕುರಿತು

ಉಡುಪಿಯ ಅಷ್ಟಮಠಗಳಲ್ಲಿನ ಮಾತೃಕೆಗಳನ್ನು ಅನುಸರಿಸಿ ಲಕ್ಷಾಲಂಕಾರಕ್ಕನುಗುಣವಾದ ಪಾಠವನ್ನು ಶೋಧಿಸಿ ಮುದ್ರಿಸುವ ಮಹತ್ಕಾರ್ಯ ಸುಮಾರು 6 ವರ್ಷಗಳಿಂದ ನಡೆಯುತ್ತಿದೆ. ಇಂದಿನ ಎಲ್ಲಾ ಅಷ್ಟಮಠಾಧೀಶರ ಮತ್ತು ಸುಬ್ರಹ್ಮಣ್ಯಮಠಾಧೀಶರ ವಿಶೇಷ ಸಹಕಾರವು ನಮಗೆ ದೊರೆತಿದೆ. ಮಹಾಭಾರತದ ಎಲ್ಲಪರ್ವಗಳ ಮೂಲಪ್ರತಿಗಳು ದೊರೆಯುತ್ತಿದ್ದರೂ, ವಿರಾಟಪರ್ವಕ್ಕೆ ಸಂಬಂಧಿಸಿದಂತೆ ಸುಮಾರು 20 ಪ್ರತಿಗಳು ದೊರೆತಿವೆ. ಬಹುಶಃ ವಿರಾಟಪರ್ವದ ಲೇಖನವು ಸುಭಿಕ್ಷೆಗೆ ಕಾರಣ ಎಂಬ ಕಾರಣದಿಂದ ಅನೇಕರು ಬರೆದಿರಬಹುದು. ಅವುಗಳಲ್ಲಿ ಸುಮಾರು 12 ಪ್ರತಿಗಳ ಪಾಠವು ಒಂದೇ ತೆರನಾಗಿದೆ. ಪೇಜಾವರ-ಅದಮಾರು-ಕೃಷ್ಣಾಪುರ-ಸೋದೆ-ಸುಬ್ರಹ್ಮಣ್ಯ ಮಠಗಳ ಪ್ರತಿಗಳಲ್ಲಿ ಕೆಲವು ಅಪೂರ್ವಪಾಠಗಳು ಶ್ರೀಮದಾಚಾರ್ಯರ ಮತ್ತು ಲಕ್ಷಾಲಂಕಾರಕ್ಕನುಗುಣವಾಗಿ ದೊರೆತಿವೆ. ನಿಮಗೆ ಇದರ ಹೆಚ್ಚಿನ ಮಾಹಿತಿ ಸಂಸ್ಕೃತದ ಆವೃತ್ತಿಯಲ್ಲಿ ದೊರೆಯುತ್ತದೆ. ವಾಚಕರ ಸೌಲಭ್ಯವನ್ನು ಅನುಸರಿಸಿ ಕನ್ನಡದ ಆವೃತ್ತಿಯಲ್ಲಿ ಪಾಠಾಂತರಗಳನ್ನು ನೀಡಿರುವುದಿಲ್ಲ. ನಿರ್ಣೀತವಾದ ಪಾಠದ ಆಧಾರದಲ್ಲಿ ಶ್ಲೋಕಗಳನ್ನು ಮಾತ್ರ ನೀಡಲಾಗಿದೆ. ಉಪಯೋಗಿಸಿದ ಹಸ್ತಪ್ರತಿಗಳ ಸಂಖ್ಯೆಯ ವಿವರ ಇಂತಿದೆ. 281, 45, 972, 1249, 49, 295, 1319, 1262, 1162. ಕೆಲವೊಂದು ಮಾತೃಕೆಗಳಲ್ಲಿ ಸಂಖ್ಯೆ ಇರುವುದಿಲ್ಲ. ಈ ಮೂಲಪಾಠ ಸಂಶೋಧನೆಯಲ್ಲಿ ಮತ್ತು ಮೂಲಪ್ರತಿಗಳ ಪಾಠಾಂತರಗಳ ಲೇಖನದಲ್ಲಿ ಅನೇಕ ವಿದ್ವಾಂಸರು ಸಹಕರಿಸಿರುತ್ತಾರೆ. ವಿದ್ವಾನ್ ಶಂಕರನಾರಾಯಣಾಚಾರ್ಯ, ಪಲಿಮಾರು; ವಿದ್ವಾನ್ ಲಕ್ಷ್ಮೀಶಾಚಾರ್ಯ, ಪಲಿಮಾರು; ವಿದ್ವಾನ್ ಸುಬ್ರಹ್ಮಣ್ಯ ಸಾಮಗ, ವಿದ್ವಾನ್ ಮಾಧವಾಚಾರ್ಯ, ವಿದ್ವಾನ್ ಶ್ರೀನಿವಾಸ ಕೊರ್ಲಹಳ್ಳಿ ಇವರೆಲ್ಲರಿಗೂ ತುಂಬುಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಪೂರ್ವ ಪ್ರತಿಗಳನ್ನು ಸಂಶೋಧನೆಗಾಗಿ ನೀಡಿದ ಪರಮಪೂಜ್ಯ ಶ್ರೀಪಾದರುಗಳಿಗೆ, ನನ್ನ ಗುರುಗಳಾದ ಪರಮಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ಮತ್ತು ವಿದ್ಯಾಧೀಶತೀರ್ಥ ಶ್ರೀಪಾದರಿಗೆ ಅನಂತ ಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

- ಡಾ|| ಬೆ.ನಾ. ವಿಜಯೀಂದ್ರಾಚಾರ್ಯ, ಮೈಸೂರು
ಕಾರ್ಯನಿರ್ವಾಹಕ

★ ★ ★ ★ ★

ವಿಷಯಾನುಕ್ರಮಣಿಕೆ

ವಿರಾಟಪರ್ವ

ಪುಟ ಸಂ.

1. ಸೂದರನ್ನು ಮತ್ತು ಬಾಣಸಿಗರನ್ನು ಕಳುಹಿಸಿಕೊಟ್ಟು ಬ್ರಾಹ್ಮಣರ ಅನುಮತಿಯನ್ನು ಪಡೆದು ದ್ರೌಪದಿ ಮತ್ತು ಧೌಮ್ಯರಿಂದ ಯುಕ್ತರಾಗಿ ಯುಧಿಷ್ಠಿರಾದಿಗಳ ಪ್ರಯಾಣ 1

2. ತಮ್ಮಂದಿರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ವಿರಾಟನಗರದಲ್ಲಿ ಛದ್ಮವೇಷದಿಂದ ವಾಸಮಾಡಲು ಯುಧಿಷ್ಠಿರನ ನಿರ್ಧಾರ 13

3. ಭೀಮಾರ್ಜುನರಿಂದ ಕ್ರಮವಾಗಿ ಸೂದವೇಷ ಮತ್ತು ಷಂಡವೇಷಧಾರಣ ಕಥನ 20

4. ನಕುಲ ಸಹದೇವರಿಂದ ಅಶ್ವಪಾಲ ಮತ್ತು ಗೋಪಾಲವೇಷಗಳ ಧಾರಣಕಥನ ಮತ್ತು ದ್ರೌಪದಿಯಿಂದ ಸೈರಂಧ್ರೀವೇಷಗ್ರಹಣಕಥನ 30

5. ಪಾಂಡವರಿಗೆ ಧೌಮ್ಯರಿಂದ ರಾಜನ ಮನೆಯಲ್ಲಿ ವಾಸಮಾಡುವ ಪ್ರಕಾರದ ಕಥನ 37

6. ದ್ರೌಪದಿಯ ಜೊತೆಯಲ್ಲಿ ಪಾಂಡವರಿಂದ ವಿರಾಟನಗರ ಪ್ರಾಪ್ತಿ 56

7. ತಮ್ಮ ಆಯುಧಗಳನ್ನು ಶಮೀವೃಕ್ಷದಲ್ಲಿ ಕಟ್ಟಿಟ್ಟು ಪಾಂಡವರಿಂದ ವಿರಾಟನಗರಪ್ರವೇಶ 62

8. ಯುಧಿಷ್ಠಿರನು ಮಾಡಿದ ದುರ್ಗಾಸ್ತುತಿ 76

9. ಯತಿವೇಷದಿಂದ ಯುಧಿಷ್ಠಿರನ ವಿರಾಟಸಭಾಪ್ರವೇಶ ಮತ್ತು ನಿವಾಸ 85

10. ವಿರಾಟಸಭೆಗೆ ಸೂದವೇಷದಿಂದ ಭೀಮಸೇನನ ಪ್ರವೇಶ 104

11. ಷಂಡವೇಷದಿಂದ ಅರ್ಜುನನ ಸಭಾಪ್ರವೇಶ 112

12. ನಕುಲನ ವಿರಾಟಸಭಾ ಪ್ರವೇಶ 120

13. ಗೋಪಾಲಕವೇಷದಿಂದ ಸಹದೇವನ ಸಭಾಪ್ರವೇಶ 125

14. ಸೈರಂಧ್ರಿಯ ವೇಷವನ್ನು ಧರಿಸಿ ದ್ರೌಪದಿಯಿಂದ ಸುದೇಷ್ಣೆಯ ಗೃಹದಲ್ಲಿ ಪ್ರವೇಶ 132

15. ಪಾಂಡವರಿಂದ ತಮ್ಮ ತಮ್ಮ ವ್ಯಾಪಾರಗಳಿಂದ ವಿರಾಟನ ತೋಷಣ ಮತ್ತು ಶಂಕರೋತ್ಸವದಲ್ಲಿ ಭೀಮಸೇನನಿಂದ ಮಹಾಮಲ್ಲನ ವಧೆ 152

16. ಕೀಚಕನಿಂದ ದ್ರೌಪದಿಯ ಮುಂದೆ ತನ್ನ ಕಾಮದ ಆವಿಷ್ಕಾರ 164

17. ದ್ರೌಪದಿಯಿಂದ ಕೀಚಕನ ನಿರಾಕರಣೆ 178

18. ಕೀಚಕನ ಪ್ರೇರಣೆಯಂತೆ ಸುದೇಷ್ಣೆಯಿಂದ ದ್ರೌಪದಿಗೆ ಕೀಚಕನ ಮನೆಗೆ ಹೋಗುವಂತೆ ಒತ್ತಾಯ 184

19. ಕೀಚಕಗೃಹಕ್ಕೆ ದ್ರೌಪದಿಯ ಪ್ರಯಾಣ. ಸೂರ್ಯನಿಂದ ದ್ರೌಪದಿಯ ರಕ್ಷಣೆಗಾಗಿ ರಾಕ್ಷಸನ ಪ್ರೇಷಣ. ಕೀಚಕನಿಂದ ದ್ರೌಪದಿಗೆ ಪಾದಘಾತ. ವಿರಾಟ ಮತ್ತು ಸುದೇಷ್ಣೆಯರನ್ನು ಕುರಿತು ದ್ರೌಪದಿಯ ರೋಷವಚನಗಳು 197

20. ಕೀಚಕನ ವಿಷಯದಲ್ಲಿ ಮೃದುವಾಗಿ ನಡೆದುಕೊಂಡ ವಿರಾಟನಿಗೆ ದ್ರೌಪದಿಯ ನಿಂದನೆ. ಯುಧಿಷ್ಠಿರನಿಂದ ಅವಳಿಗೆ ಸಮಾಧಾನ. ಸುದೇಷ್ಣೆಯ ಬಳಿಗೆ ಹೋಗಿ ದ್ರೌಪದಿಯಿಂದ ಸದ್ಯದಲ್ಲಿಯೇ ಕೀಚಕನ ವಿನಾಶದ ಕಥನ 211

21. ಕೀಚಕನ ಜನ್ಮಾದಿಕಥನ 226

22. ರಾತ್ರಿಯಲ್ಲಿ ದ್ರೌಪದಿ ಮತ್ತು ಭೀಮಸೇನರ ಸಂವಾದ. ಕೀಚಕನನ್ನು ಕೊಲ್ಲುವಂತೆ ಭೀಮಸೇನನಿಗೆ ದ್ರೌಪದಿಯ ಒತ್ತಾಯ 236

23. ದ್ರೌಪದಿಯಿಂದ ತನ್ನ ಹಿಂದಿನ ವೈಭವವನ್ನು ನೆನೆದು ಶೋಕಪೂರ್ವಕವಾಗಿ ಭೀಮನ ಬಳಿಯಲ್ಲಿ ಕೀಚಕನನ್ನು ಕೊಲ್ಲುವಂತೆ ಒತ್ತಾಯ 262

24. ದ್ರೌಪದಿ-ಭೀಮ ಸಂವಾದ. ದ್ರೌಪದಿಯಿಂದ ಕೀಚಕನನ್ನು ಕೊಲ್ಲುವಂತೆ ಭೀಮಸೇನನಿಗೆ ಒತ್ತಾಯ 269

25. ನರ್ತನಾಗಾರದಲ್ಲಿ ಕೀಚಕನ ವಧೆ 284

26. ಭೀಮಸೇನನಿಂದ ಉಪಕೀಚಕರ ವಧೆ 309

27. ಸುದೇಷ್ಣೆಯು ನಗರದಿಂದ ಹೊರಗೆ ಹೋಗುವಂತೆ ಹೇಳಿದಾಗ ಹದಿಮೂರು ದಿವಸ ಅವಕಾಶ ಕೊಡುವಂತೆ ದ್ರೌಪದಿಯ ಪ್ರಾರ್ಥನೆ 320

28. ಹಸ್ತಿನಪುರಕ್ಕೆ ಹಿಂದಿರುಗಿದ ಚಾರರಿಂದ ದುರ್ಯೋಧನನಿಗೆ ಕೀಚಕನ ವಧೆಯ ಕಥನ 330

29. ದುರ್ಯೋಧನಾದಿಗಳಿಂದ ಪಾಂಡವರ ಅನ್ವೇಷಣೆಗೆ
ಪುನಃ ಮಂತ್ರಾಲೋಚನೆ 337

30. ದ್ರೋಣ ಮತ್ತು ಭೀಷ್ಮರಿಂದ ಪಾಂಡವರು ವಾಸಿಸುವ
ದೇಶದ ಲಕ್ಷಣಕಥನ 342

31. ಕರ್ಣ-ದುಶ್ಶಾಸನಾದಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು
ಮಾಡಿ ವಿರಾಟನ ಗೋಗ್ರಹಣವನ್ನು ಮಾಡಲು ದುರ್ಯೋಧನನ
ನಿರ್ಧಾರ. ಸುಶರ್ಮನಿಂದ ಮೊದಲು ಗೋಗ್ರಹಣ 353

32. ಗೋಧನದ ರಕ್ಷಣೆ ಮಾಡಲು ವಿರಾಟಪುತ್ರ ಮತ್ತು ಪಾಂಡವರ ಗಮನ 366

33. ವಿರಾಟ-ಸುಶರ್ಮರ ಹಾಗೂ ಅವರ ಸೈನ್ಯಗಳ ಯುದ್ಧ 376

34. ಭೀಮಸೇನನಿಂದ ಸುಶರ್ಮಗೃಹೀತನಾದ ವಿರಾಟನ ಬಿಡುಗಡೆ
ಮತ್ತು ಅನಂತರ ಧರ್ಮರಾಜನಿಂದ ಭೀಮಸೇನಗೃಹೀತನಾದ
ಸುಶರ್ಮನ ಬಿಡುಗಡೆ 383

35. ಯುಧಿಷ್ಠಿರನ ಪ್ರೇರಣೆಯಂತೆ ವಿರಾಟನ ದೂತರಿಂದ ನಗರದಲ್ಲಿ
ವಿರಾಟನ ಜಯಘೋಷಣೆ 396

36. ದುರ್ಯೋಧನನಿಂದ ಉತ್ತರ ಗೋಗ್ರಹಣ.
ಗವಾಧ್ಯಕ್ಷನಿಂದ ಉತ್ತರನಿಗೆ ಆ ವಾರ್ತೆಯ ನಿವೇದನ 403

37. ಉತ್ತರನ ಪೌರುಷ. ಬೃಹನ್ನಳೆಯಿಂದ ಸಾರಥ್ಯ ಸ್ವೀಕಾರ.
ಗೋಗ್ರಹಣಕ್ಕಾಗಿ ಗಮನ 407

38. ಕುರುಸೈನ್ಯವನ್ನು ನೋಡಿ ಭಯದಿಂದ ಪಲಾಯನ ಮಾಡುವ
ಉತ್ತರನನ್ನು ಹಿಡಿದು ಅರ್ಜುನನ ಶಮೀವೃಕ್ಷದ ಸಮೀಪಗಮನ 424

39. ಅರ್ಜುನನ ಆದೇಶದಂತೆ ಉತ್ತರನಿಂದ ಶಮೀವೃಕ್ಷವನ್ನು
ಏರಿ ಆಯುಧಗಳ ಅನಯನ 440

40. ವಿವಿಧ ಆಯುಧಗಳನ್ನು ನೋಡಿ ಉತ್ತರನ ಪ್ರಶ್ನೆ 450

41. ಅರ್ಜುನನಿಂದ ಉತ್ತರನಿಗೆ ಪಾಂಡವರ ಆಯುಧಗಳ ಪರಿಚಯ 455

42. ಅರ್ಜುನನಿಂದ ಉತ್ತರನಿಗೆ ತಾವು ಪಾಂಡವರೆಂದು ಕಥನ 461

43. ಉತ್ತರನಿಂದ ಅರ್ಜುನನ ಕ್ಷಮಾಯಾಚನೆ ಮತ್ತು ಸಾರಥಿತ್ವ ಸ್ವೀಕಾರ 471

44. ರಥವನ್ನು ಸಿದ್ಧಪಡಿಸಿ ಅರ್ಜುನನಿಂದ ಯುದ್ಧಭೂಮಿಗೆ ಗಮನ 481

45. ಅರ್ಜುನನನ್ನು ಗುರುತಿಸಿ ದ್ರೋಣರಿಂದ ದುರ್ಯೋಧನನಿಗೆ ನಿವೇದನೆ ಮತ್ತು ತಮ್ಮ ಸೈನ್ಯದಲ್ಲಿ ಸೋಲಿನ ಶಕುನಗಳ ನಿರೂಪಣೆ 487

46. ದ್ರೋಣರ ಮಾತನ್ನು ಕೇಳಿ ಸೈನ್ಯದ ಮೌನ. ದುರ್ಯೋಧನನ ಪ್ರೋತ್ಸಾಹವಚನಗಳು. ಕರ್ಣನ ಆಕ್ಷೇಪ 491

47. ಕರ್ಣನ ಆತ್ಮಶ್ಲಾಘನೆ ಮತ್ತು ಅರ್ಜುನನನ್ನು ಕೊಲ್ಲುವ ಮಿಥ್ಯಾಪ್ರತಿಜ್ಞೆ 499

48. ಅರ್ಜುನನ ದುರ್ಜಯತ್ವವನ್ನು ಹೇಳಿ ಕೃಪಾಚಾರ್ಯರಿಂದ ಕರ್ಣನ ನಿಂದೆ 506

49. ಕರ್ಣನಿಂದ ಕೃಪರ ಮತ್ತು ಅಶ್ವತ್ಥಾಮರಿಂದ ಕರ್ಣ-ದುರ್ಯೋಧನರ ನಿಂದನೆ 512

50. ಭೀಷ್ಮರ ಸಾಂತ್ವನ. ದುರ್ಯೋಧನ ಮತ್ತು ಕರ್ಣರಿಂದ ಕ್ಷಮಾಯಾಚನೆ 520

51. ಭೀಷ್ಮರಿಂದ ಅಜ್ಞಾತವಾಸದ ಸಮಯವು ಮುಗಿದಿದೆ ಎಂದು ಹೇಳಿ ಯುದ್ಧಕ್ಕಾಗಿ ಅಭಿಯಾನ 526

52. ಯುದ್ಧವನ್ನು ನೋಡಲು ಆಕಾಶದಲ್ಲಿ ಇಂದ್ರಾದಿಗಳ ಆಗಮನ 534

53. ಯುದ್ಧಾರಂಭ. ಅರ್ಜುನನಿಂದ ಬಾಣಗಳ ಮೂಲಕ ಭೀಷ್ಮಾದಿಗಳ ಅಭಿವಂದನೆ ಮತ್ತು ಕುಶಲಪ್ರಶ್ನೆ 539

54. ದುರ್ಯೋಧನನನ್ನು ಹುಡುಕುತ್ತಾ ಅರ್ಜುನನಿಂದ ಗೋವುಗಳ ಪ್ರತಿನಿವರ್ತನ 544

55. ಅರ್ಜುನನಿಂದ ಉತ್ತರನಿಗೆ ದ್ರೋಣಾದಿಗಳ ರಥಗಳ ಪರಿಚಯ 554

56. ಭೀಷ್ಮಾದಿಗಳ ಜೊತೆಯಲ್ಲಿ ಅರ್ಜುನನ ಯುದ್ಧ ಮತ್ತು ಕರ್ಣನ ಪರಾಭವ 560

57. ಅರ್ಜುನನಿಂದ ಪರಾಜಿತನಾದ ಕರ್ಣನ ಪಲಾಯನ 576

58. ದ್ರೋಣಾರ್ಜುನರ ಯುದ್ಧ. ಅಶ್ವತ್ಥಾಮರ ಆಗಮನಾನಂತರದಲ್ಲಿ ದ್ರೋಣರ ಅಪಯಾನ 597

59. ಅಶ್ವತ್ಥಾಮನ ಪರಾಜಯ 618

60. ಅರ್ಜುನನಿಂದ ಒಟ್ಟಿಗೆ ದ್ರೋಣಾದಿಗಳ ಜೊತೆಯಲ್ಲಿ ಯುದ್ಧ 621

61. ಭೀಷ್ಮಾರ್ಜುನರು ಯುದ್ಧಕ್ಕೆ ಸಿದ್ಧರಾಗುತ್ತಿರಲು ದೇವತೆಗಳಿಂದ ಅವರ ಪ್ರಶಂಸೆ 633

62. ಭೀಷ್ಮಾರ್ಜುನರ ಯುದ್ಧ. ಭೀಷ್ಮರ ಪರಾಭವ 639

63. ಅರ್ಜುನನು ಯುದ್ಧಭೂಮಿಯಿಂದ ಅಪಯಾನ ಮಾಡುತ್ತಿದ್ದಾನೆಂದು
ಕರ್ಣನ ಶಂಕೆ. ದ್ರೋಣರಿಂದ ಅದರ ಪರಿಹಾರ 649

64. ಭೀಷ್ಮ-ದುಃಶಾಸನರ ಜೊತೆಯಲ್ಲಿ ಅರ್ಜುನನ ಯುದ್ಧ 654

65. ಉತ್ತರನನ್ನು ಸಮಾಧಾನಪಡಿಸಿ ಅರ್ಜುನನಿಂದ ದುರ್ಯೋಧನನ
ಕಡೆಗೆ ಗಮನ. ದುರ್ಯೋಧನನ ಪಲಾಯನ 668

66. ಶತ್ರುಗಳನ್ನು ಗೆದ್ದು ಅವರ ವಸ್ತ್ರಗಳನ್ನು ಅಪಹರಿಸಿ ಅರ್ಜುನನ ಪ್ರತಿನಿವೃತ್ತಿ 683

67. ಅರ್ಜುನನಿಂದ ಪುನಃ ಷಂಡವೇಷ ಸ್ವೀಕಾರ. ನಗರದಲ್ಲಿ ಉತ್ತರನ
ಜಯವನ್ನು ಘೋಷಿಸುವಂತೆ ಒತ್ತಾಯ 697

68. ಉತ್ತರನ ವಿಜಯ ವಿಷಯದಲ್ಲಿ ಕಂಕ-ವಿರಾಟರ ವಿವಾದ.
ವಿರಾಟನಿಂದ ತಾಡಿತನಾದ ಕಂಕನ ಮುಖದಿಂದ ರಕ್ತಸ್ರಾವ.
ಸೈರಂಧ್ರಿಯಿಂದ ತನ್ನ ಉತ್ತರೀಯದಲ್ಲಿ ರಕ್ತಗ್ರಹಣ 704

69. ಯುದ್ಧದಿಂದ ಉತ್ತರನ ಪ್ರತಿನಿವೃತ್ತಿ 722

70. ಉತ್ತರನಿಂದ ದೇವಪುತ್ರನ ಜಯದ ಕಥನ. ರಾಜನ ಸಂತೋಷ
ಮತ್ತು ಅರ್ಜುನನಿಂದ ಉತ್ತರೆಗೆ ವಸ್ತ್ರಾದಿದಾನ 728

71. ಯುಧಿಷ್ಠಿರನ ಮುಖದಲ್ಲಿ ರಕ್ತವನ್ನು ನೋಡಿ ಭೀಮಾರ್ಜುನರ ರೋಷ
ವಚನಗಳು ಮತ್ತು ಯುಧಿಷ್ಠಿರನಿಂದ ಅವರ ಸಾಂತ್ವನ 742

72. ಮರುದಿವಸದಲ್ಲಿ ಪಾಂಡವರಿಂದ ಸಿಂಹಾಸನದಲ್ಲಿ ಉಪವೇಶನ.
ವಿರಾಟನ ಆಕ್ಷೇಪ ಮತ್ತು ಅರ್ಜುನನ ಉತ್ತರ 748

73. ಪಾಂಡವರನ್ನು ಗುರುತಿಸಿದ ವಿರಾಟನ ಹರ್ಷವಚನಗಳು 754

74. ಉತ್ತರನಿಂದ ಉತ್ತರೆಯನ್ನು ಅರ್ಜುನನಿಗೆ ಕೊಡುವಂತೆ ಒತ್ತಾಯ
ಮತ್ತು ಯುಧಿಷ್ಠಿರನ ಅಭಯದಾನ 760

75. ಅರ್ಜುನನಿಂದ ಸೊಸೆಯಾಗಿ ಉತ್ತರೆಯ ಸ್ವೀಕಾರ.
ವಿರಾಟನ ಹರ್ಷ ಮತ್ತು ದುರ್ಯೋಧನನ ದುರ್ಬುದ್ಧಿ 767

76. ಕೃಷ್ಣನ ಸನ್ನಿಧಿಯಲ್ಲಿ ಅಭಿಮನ್ಯು-ಉತ್ತರೆಯರ ವಿವಾಹ 776

★ ★ ★ ★ ★

ಮಹಾಭಾರತ

ವಿರಾಟಪರ್ವ

೧. ವೈರಾಟಪರ್ವ

ಒಂದನೆಯ ಅಧ್ಯಾಯ

ಸೂದರನ್ನು ಮತ್ತು ಬಾಣಸಿಗರನ್ನು ಕಳುಹಿಸಿಕೊಟ್ಟು ಬ್ರಾಹ್ಮಣರ
ಅನುಮತಿಯನ್ನು ಪಡೆದು ದ್ರೌಪದಿ ಮತ್ತು ಧೌಮ್ಯರಿಂದ
ಯುಕ್ತರಾಗಿ ಯುಧಿಷ್ಠಿರಾದಿಗಳ ಪ್ರಯಾಣ.

ಜನಮೇಜಯಃ

ಕಥಂ ವಿರಾಟನಗರೇ ಮಮ ಪೂರ್ವಪಿತಾಮಹಾಃ ।
ಅಜ್ಞಾತವಾಸಮುಷಿತಾ ದುರ್ಯೋಧನಭಯಾರ್ದಿತಾಃ ॥೧॥

ಜನಮೇಜಯ– ನನ್ನ ಪೂರ್ವಪಿತಾಮಹರಾದ ಯುಧಿಷ್ಠಿರಾದಿಗಳು ದುರ್ಯೋಧನನ ಭಯದಿಂದ ಪೀಡಿತರಾಗಿ ವಿರಾಟನಗರದಲ್ಲಿ ಹೇಗೆ ಅಜ್ಞಾತವಾಸವನ್ನು ಮಾಡಿದರು?

ಪತಿವ್ರತಾ ಮಹಾಭಾಗಾ ಸತತಂ ಸತ್ಯವಾದಿನೀ ।
ದ್ರೌಪದೀ ವಾ ಕಥಂ ಬ್ರಹ್ಮನ್ನಜ್ಞಾತಂ ದುಃಖಮಾವಸತ್ ॥೨॥

ಪತಿವ್ರತೆಯೂ, ಮಹಾನುಭಾವಳೂ, ಯಾವಾಗಲೂ ಸತ್ಯವನ್ನೇ ನುಡಿಯುವವಳೂ ಆದ ದ್ರೌಪದಿಯು ಎಲೈ ಬ್ರಾಹ್ಮಣರೇ, ಹೇಗೆ ಅಜ್ಞಾತವಾಸ ದುಃಖವನ್ನು ಅನುಭವಿಸಿದಳು?

ತೇ ಚ ಬ್ರಾಹ್ಮಣಮುಖ್ಯಾಶ್ಚ ಸೂತಾಃ ಪೌರೋಗವೈಃ ಸಹ ।
ಅಜ್ಞಾತವಾಸಮೂಷುಸ್ತೇ ಕಥಂ ಚ ಪರಿಚಾರಕಾಃ ॥೩॥

ಆ ಬ್ರಾಹ್ಮಣಪ್ರಧಾನರು, ಸೂತರು, ಬಾಣಸಿಗರು ಮತ್ತು ಪರಿಚಾರಕರೂ ಸಹ ಹೇಗೆ ಅಜ್ಞಾತವಾಸದ ಸಮಯವನ್ನು ಕಳೆದರು?

ವೈಶಂಪಾಯನಃ

ತದಾ ಸರ್ವಾನ್ ವರಾನ್ ಲಬ್ಧ್ವಾ ಧರ್ಮರಾಜೋ ಯುಧಿಷ್ಠಿರಃ ।
ಗತ್ವಾऽऽಶ್ರಮಂ ಬ್ರಾಹ್ಮಣೇಭ್ಯೋ ಹ್ಯಾಚಖ್ಯೌ ಸರ್ವಮೇವ ತತ್ ॥೪॥

ವೈಶಂಪಾಯನ– ಆಗ ಧರ್ಮರಾಜನಾದ ಯುಧಿಷ್ಠಿರನು ಎಲ್ಲಾ ವರಗಳನ್ನು ಪಡೆದು ಆಶ್ರಮಕ್ಕೆ ಹೋಗಿ ಬ್ರಾಹ್ಮಣರಿಗೆ ಎಲ್ಲವನ್ನೂ ವಿವರಿಸಿದನು.

ಕಥಯಿತ್ವಾ ತು ತತ್ಸರ್ವಂ ಬ್ರಾಹ್ಮಣೇಭ್ಯೋ ಯುಧಿಷ್ಠಿರಃ ।
ಅರಣೇಸಹಿತಂ ಭಾಂಡಂ ಬ್ರಾಹ್ಮಣಾಯ ನ್ಯವೇದಯತ್ ॥೫॥

ಯುಧಿಷ್ಠಿರನು ಆಶ್ರಮವಾಸಿಗಳಾದ ಬ್ರಾಹ್ಮಣರಿಗೆ ಎಲ್ಲವನ್ನು ಅರಿಕೆ ಮಾಡಿ ಅರಣೇಸಹಿತವಾದ ಭಾಂಡವನ್ನು ಆ ಬ್ರಾಹ್ಮಣನಿಗೆ ಒಪ್ಪಿಸಿದನು.

ಧರ್ಮೇಣ ತೇऽಭ್ಯನುಜ್ಞಾತಾಃ ಪಾಂಡವಾಃ ಸತ್ಯವಾದಿನಃ ।
ಅಜ್ಞಾತವಾಸಂ ವತ್ಸ್ಯಂತಃ ಧನ್ಯಾ ವರ್ಷಂ ತ್ರಯೋದಶಮ್ ॥೬॥

ಉಪ್ಯೋಪವಿಶ್ಯ ವಿದ್ವಾಂಸಃ ಸಹಿತಾಃ ಸಂಶಿತವ್ರತಾಃ ।
ಯೇ ತದ್‌ಭಕ್ತಾಃ ವಸಂತಿ ಸ್ಮ ವನವಾಸೇ ತಪಸ್ವಿನಃ ॥೭॥

ತಾನಬ್ರುವನ್ ಮಹಾತ್ಮಾನಃ ಶಿಷ್ಟಾಃ ಪ್ರಾಂಜಲಯಸ್ತದಾ ।
ಅಭ್ಯನುಜ್ಞಾಪಯಿಷ್ಯಂತಸ್ತಂ ವಿವಾಸಂ ಧೃತವ್ರತಾಃ ॥೮॥

ಯಮಧರ್ಮರಾಜನಿಂದ ಅನುಮತಿಯನ್ನು ಪಡೆದ ಸತ್ಯವಾದಿಗಳಾದ ಆ ಪಾಂಡವರು ಪ್ರಚ್ಛನ್ನವೇಷದಿಂದ ಅಜ್ಞಾತವಾಸವನ್ನು ಕಳೆಯುವವರಾಗಿ ಒಳ್ಳೆಯ ವ್ರತಶೀಲರೂ, ವಿದ್ವಾಂಸರೂ ಆದ ಅವರೆಲ್ಲರೂ ಸಮೀಪದಲ್ಲಿ ಒಟ್ಟಿಗೆ ಕುಳಿತು ತಮ್ಮಲ್ಲಿ ಅನುರಾಗವುಳ್ಳ ಮಹಾತ್ಮರಾದ ಆ ತಪಸ್ವಿಗಳಿಗೆ ಕೈಮುಗಿದು ತಮ್ಮ ಅಜ್ಞಾತವಾಸಕ್ಕೆ ಅವರಿಂದ ಅನುಮತಿಯನ್ನು ಪಡೆಯುವವರಾಗಿ ಅವರನ್ನು ಕುರಿತು ಶಿಷ್ಟರೂ, ಧೃತವ್ರತರೂ ಆದ ಪಾಂಡವರು ಮಾತನಾಡಿದರು.

ಯುಧಿಷ್ಠಿರಃ

ವಿದಿತಂ ಭವತಾ ಸರ್ವಂ ಧಾರ್ತರಾಷ್ಟ್ರ್ಯೈರ್ಯಥಾ ವಯಮ್ ।
ಛದ್ಮನಾ ಹೃತರಾಜ್ಯಾಶ್ಚ ನಿಃಸ್ವಾಶ್ಚ ಬಹುಶಃ ಕೃತಾಃ ॥೯॥

ಉಷಿತಾಶ್ಚ ವನೇ ವಾಸಂ ಯಥಾ ದ್ವಾದಶ ವತ್ಸರಾನ್ ।
ಭವದ್ಭಿರೇವ ಸಹಿತಾ ವನ್ಯಾಹಾರಾ ದ್ವಿಜೋತ್ತಮಾಃ ॥೧೦॥

ಯುಧಿಷ್ಠಿರ– ನಾವು ಧೃತರಾಷ್ಟ್ರನ ಪುತ್ರರಿಂದ ಹೇಗೆ ಮೋಸದಿಂದ ರಾಜ್ಯಾಪಹಾರವನ್ನು ಹೊಂದಿ ನಿರ್ಧನರಾಗಿ ಮಾಡಲ್ಪಟ್ಟೆವು? ಹೇಗೆ ಹನ್ನೆರಡು ವರ್ಷಗಳ ಕಾಲ ನಿಮ್ಮ ಜೊತೆಯಲ್ಲಿಯೇ ಕಾಡಿನ ಆಹಾರವನ್ನು ಸೇವಿಸಿ ವನವಾಸವನ್ನು ಮಾಡಿದೆವು? ಎಲೈ ದ್ವಿಜೋತ್ತಮರೇ, ನಿಮಗೆ ತಿಳಿದಿದೆ.

ಅಜ್ಞಾತವಾಸಸಮಯಂ ಶೇಷಂ ವರ್ಷಂ ತ್ರಯೋದಶಮ್ ।
ತದ್ ವತ್ಸ್ಯಾಮೋ ವಯಂ ಛನ್ನಾಸ್ತದನುಜ್ಞಾತುಮರ್ಹತ ॥೧೧॥

ನಾವು ಈಗಿರುವ ಹದಿಮೂರನೆಯ ವರ್ಷವನ್ನು ಅಜ್ಞಾತವಾಸದ ನಿಯಮದಲ್ಲಿ ಛನ್ನವೇಷವನ್ನು ಧರಿಸಿ ಎಲ್ಲಾದರೂ ವಾಸಮಾಡುವೆವು. ಅದಕ್ಕೆ ನೀವು ಅನುಮತಿಯನ್ನು ಕೊಡಬೇಕು.

ಸುಯೋಧನಶ್ಚ ದುಷ್ಟಾತ್ಮಾ ಕರ್ಣಶ್ಚ ಸಹಸೌಬಲಃ ।
ಜಾನಂತೋ ವಿಷಮಂ ಕುರ್ಯುರಸ್ಮಾಸ್ವತ್ಯಂತವೈರಿಣಃ ॥೧೨॥

ಗುಪ್ತಾಕಾರಾಶ್ಚ ಮತ್ತಾಶ್ಚ ಕ್ಷಯೇ ತ್ವಸ್ಯ ಜನಸ್ಯ ಚ ।
ದುಷ್ಪಾತ್ಮನಾಂ ಹಿ ಕಸ್ತೇಷಾಂ ಪ್ರಾಜ್ಞೋ ವೈ ವಿಶ್ವಸೇದ್ ಭುವಿ ॥೧೩॥

ನಮಗೆ ಪರಮವೈರಿಗಳಾದ ದುಷ್ಪಾತ್ಮನಾದ ಸುಯೋಧನನು, ಶಕುನಿ ಮತ್ತು ಕರ್ಣರೂ ಸಹ ಅಜ್ಞಾತವಾಸದ ಸಮಯದಲ್ಲಿ ನಮ್ಮನ್ನು ಹುಡುಕಿಸುವುದಾದರೆ ನಮಗೆ ಇನ್ನೂ ಹೆಚ್ಚಿನ ದುಃಖವನ್ನು ಒಡ್ಡುವರು. ದುರ್ಯೋಧನನ ಮನೆಯಲ್ಲಿ ರಹಸ್ಯವಾಗಿ ದ್ರೋಹವನ್ನು ಮಾಡುವವರೂ, ಮತ್ತರಂತೆ ಇರುವವರೂ ಆದ ಅನೇಕ ಚಾರರು ಇದ್ದಾರೆ.

ಅಪಿ ನಸ್ತದ್ ಭವೇದ್ ಭೂಯೋ ಯದ್ವಯಂ ಬ್ರಾಹ್ಮಣೈಃ ಸಹ ।
ಸಮರ್ಥಾಸ್ತೇಷು ರಾಷ್ಟ್ರೇಷು ಸ್ವರಾಜ್ಯಂ ಸ್ಥಾಪಯಾಮ ಹಿ ॥೧೪॥

ನಾವು ಹಿಂದೆ ಇದ್ದಂತೆ ಇನ್ನೊಮ್ಮೆ ಬ್ರಾಹ್ಮಣರ ಜೊತೆಯಲ್ಲಿ ಸೇರಿ ನಮ್ಮ ಆ ರಾಷ್ಟ್ರಗಳಲ್ಲಿ ಪ್ರತಿಷ್ಠಿತರಾಗುತ್ತೇವೆಯೇ?

ವೈಶಂಪಾಯನಃ

ಇತ್ಯುಕ್ತ್ವಾ ದುಃಖಮೋಹಾರ್ತಃ ಶುಚಿರ್ಧರ್ಮಸುತಸ್ತದಾ ।
ಸಮ್ಮೂರ್ಚ್ಛಿತೋಽಭವದ್ ರಾಜಾ ಸಾಸ್ರಕಂಠೋ ಯುಧಿಷ್ಠಿರಃ ॥೧೫॥

ವೈಶಂಪಾಯನ– ಹೀಗೆ ಹೇಳಿ ಶುಚಿಯೂ, ಯಮಧರ್ಮಪುತ್ರನೂ, ರಾಜನೂ ಆದ ಯುಧಿಷ್ಠಿರನು ಕಣ್ಣೀರಿನಿಂದ ಬಿಗಿದ ಕಂಠವುಳ್ಳವನಾಗಿ ದುಃಖ ಮೋಹಗಳಿಂದ ಪೀಡಿಸಲ್ಪಟ್ಟು ಮೂರ್ಛಿತನಾದನು.

ತಸ್ಮಿನ್ ಸಮ್ಮೂರ್ಚ್ಛಿತೇ ಭೂರಿ ಭ್ರಾತರಶ್ಚಾಸ್ಯ ಸರ್ವಶಃ ।
ಶೋಕಮಾಪೇದಿರೇ ತತ್ರ ದೃಷ್ಟ್ವಾ ರಾಜಾನಮಾತುರಮ್ ॥೧೬॥

ರಾಜನು ಹೀಗೆ ದುಃಖಿತನಾಗಿ ಮೂರ್ಛೆ ಹೊಂದಿದುದನ್ನು ನೋಡಿ ಅವನ ಎಲ್ಲಾ ತಮ್ಮಂದಿರೂ ದುಃಖವನ್ನು ಪಟ್ಟರು.

ಅಥ ಧೌಮ್ಯೋಽಬ್ರವೀದ್ ವಾಕ್ಯಂ ಮಹಾರ್ಥಂ ನೃಪತಿಂ ತದಾ ॥೧೭॥

ರಾಜನ್ ವಿದ್ವಾನ್ ಭವಾನ್ ದಾಂತಃ ಸತ್ಯಸಂಧೋ ಜಿತೇಂದ್ರಿಯಃ ।
ನೈವಂವಿಧಾಃ ಪ್ರಮುಹ್ಯಂತಿ ನರಾಃ ಕಸ್ಯಾಂಚಿದಾಪದಿ ॥೧೮॥

ಆಗ ಧೌಮ್ಯರು ರಾಜನನ್ನು ಕುರಿತು ದೊಡ್ಡ ಅರ್ಥವುಳ್ಳ ಈ ಮಾತುಗಳನ್ನು ಆಡಿದರು. ರಾಜನೇ, ನೀನು ವಿದ್ವಾಂಸ, ಸತ್ಯಸಂಧ, ಜಿತೇಂದ್ರಿಯ ಮತ್ತು ಇಂದ್ರಿಯ ನಿಗ್ರಹವುಳ್ಳವನು. ಇಂತಹವರು ಯಾವ ವಿಪತ್ತಿನಲ್ಲಿಯೂ ಮೋಹಕ್ಕೆ ಒಳಗಾಗುವುದಿಲ್ಲ.

ದೇವೈರಪ್ಯಾಪದಃ ಪ್ರಾಪ್ತಾಃ ಛನ್ನೈಶ್ಚ ಬಹುಭಿಸ್ತದಾ ।
ತತ್ರ ತತ್ರ ಸಪತ್ನಾನಾಂ ನಿಗ್ರಹಾರ್ಥಂ ಮಹಾತ್ಮಭಿಃ ॥೧೯॥

ಮಹಾತ್ಮರಾದ ದೇವತೆಗಳೂ ಕೂಡ ಅನೇಕ ಆಪತ್ತುಗಳನ್ನು ಹೊಂದಿ ಶತ್ರುಗಳನ್ನು ನಿಗ್ರಹಿಸಲು ಅಲ್ಲಲ್ಲಿ ಛನ್ನವೇಷವನ್ನು ಧರಿಸಿದರು.

ಇಂದ್ರೇಣ ನಿಷಧಂ ಪ್ರಾಪ್ಯ ಗಿರಿಪ್ರಸ್ಥಾಶ್ರಯೇ ತದಾ ।
ಛನ್ನೇನೋಷ್ಯ ಕೃತಂ ಕರ್ಮ ದ್ವಿಷತಾಂ ಬಲನಿಗ್ರಹೇ ॥೨೦॥

ಇಂದ್ರನು ನಿಷಧ ದೇಶದಲ್ಲಿ ಗಿರಿಪ್ರಸ್ಥ ಎಂಬ ಸ್ಥಳದಲ್ಲಿ ಶತ್ರುಗಳ ಬಲವನ್ನು ನಿಗ್ರಹಿಸಲು ಛನ್ನವೇಷವನ್ನು ಧರಿಸಿ ಆ ಕಾರ್ಯವನ್ನು ಮಾಡಿದನು.

ದಿತಿಪುತ್ರೈರ್ಹೃತೇ ರಾಜ್ಯೇ ದೇವರಾಜೋಽಪಿ ದುಃಖಿತಃ ।
ಬ್ರಹ್ಮಾಣಂ ತೋಷಯಿಷ್ಯಂಶ್ಚ ಬ್ರಹ್ಮರೂಪಂ ವಿಧಾಯ ಚ ॥೨೧॥

ಪ್ರಸಾದಾದ್ ಬ್ರಹ್ಮಣೋ ರಾಜನ್ ದಿತೇಃ ಪುತ್ರಾನ್ ಮಹಾಬಲಾನ್ ।
ವಿಜಿತ್ಯ ತರಸಾ ಶತ್ರೂನ್ ಪುನರ್ಲೋಕಾನವಾಪ ಹ ॥೨೨॥

ಎಲೈ ರಾಜನೇ, ದಿತಿಯ ಪುತ್ರರು ತನ್ನ ರಾಜ್ಯವನ್ನು ಅಪಹರಿಸುತ್ತಿರಲು ದೇವರಾಜನಾದ ಇಂದ್ರನೂ ಸಹ ಬ್ರಹ್ಮದೇವರನ್ನು ಸಂತೋಷಪಡಿಸಿ ತಾನು ಬ್ರಾಹ್ಮಣರೂಪವನ್ನು ಧರಿಸಿ ಬ್ರಹ್ಮದೇವರ ಅನುಗ್ರಹದಿಂದ ಮಹಾಬಲಿಷ್ಠರಾದ ಶತ್ರುಗಳಾದ ದಿತಿಪುತ್ರರನ್ನು ಶೀಘ್ರವಾಗಿ ಸೋಲಿಸಿ ಪುನಃ ತನ್ನ ಲೋಕವನ್ನು ಪಡೆದನು.

ವಿಷ್ಣುನಾಽಶ್ಮಗಿರಿಂ ಪ್ರಾಪ್ಯ ತದಾಽದಿತ್ಯಾಂ ನಿವತ್ಸ್ಯತಾ ।
ಗರ್ಭೇ ವಧಾರ್ಥಂ ದೈತ್ಯಾನಾಮಜ್ಞಾತಂ ಚೋಷಿತಂ ಚಿರಮ್ ॥೨೩॥

ವಿಷ್ಣುವು ಅಶ್ಮಗಿರಿಯ ಆಶ್ರಮದಲ್ಲಿ ಅದಿತಿಯ ಗರ್ಭದಲ್ಲಿ ನಿವಾಸ ಮಾಡಿ ದೈತ್ಯರ ವಧೆಗೋಸ್ಕರ ದೈತ್ಯರಿಗೆ ತಿಳಿಯದಂತೆ ಬಹುಕಾಲ ಇದ್ದನು.

ಪ್ರೋಷ್ಯ ವಾಮನರೂಪೇಣ ಪ್ರಚ್ಛನ್ನಬ್ರಹ್ಮಚಾರಿಣಾ ।
ಬಲೇರಥಾಹೃತಂ ರಾಜ್ಯಂ ವಿಕ್ರಮೈಸ್ತಚ್ಚ ತೇ ಶ್ರುತಮ್ ॥೨೪॥

ಬ್ರಾಹ್ಮಣ ವಟುವಿನ ರೂಪವನ್ನು ಧರಿಸಿ ವಾಮನನಾಗಿ ಬಲಿಯ ಯಜ್ಞಕ್ಕೆ ಹೋಗಿ ತನ್ನ ಮೂರು ಹೆಜ್ಜೆಗಳಿಂದ ಬಲಿಯ ರಾಜ್ಯವನ್ನು ಅಪಹರಿಸಿದ ವಿಷಯವನ್ನು ನೀನು ಕೇಳಿದ್ದೀಯೆ.

ಔರ್ವೇಣ ವಸತಾ ಚ್ಛನ್ನಮೂರೌ ಬ್ರಹ್ಮರ್ಷಿಣಾ ಪುರಾ ।
ಯತ್ ಕೃತಂ ತಾತ ಲೋಕೇಷು ತಚ್ಚ ಸರ್ವಂ ಶ್ರುತಂ ತ್ವಯಾ ॥೨೫॥

ಎಲೈ ಪ್ರೀತಿಪಾತ್ರನೇ, ಹಿಂದೆ ಬ್ರಹ್ಮರ್ಷಿಗಳಾದ ಔರ್ವರು ತನ್ನ ತಾಯಿಯ ತೊಡೆಯಲ್ಲಿ ಛನ್ನರಾಗಿ ವಾಸಮಾಡಿ ಲೋಕದಲ್ಲಿ ಏನು ಮಾಡಿದರು ಎಂಬ ಎಲ್ಲವನ್ನು ನೀನು ಕೇಳಿದ್ದೀಯೆ.

ಅಜ್ಞಾತಂ ಚಾಪಿ ಧರ್ಮಜ್ಞ ಹರಿಣಾ ವೃತ್ರನಿಗ್ರಹೇ ।
ವಜ್ರಂ ಪ್ರವಿಶ್ಯ ಶಕ್ರಸ್ಯ ಯತ್ ಕೃತಂ ತಚ್ಚ ತೇ ಶ್ರುತಮ್ ॥೨೬॥

ನಾರಾಯಣನು ವೃತ್ರನ ನಿಗ್ರಹದ ಸಮಯದಲ್ಲಿ ಅಜ್ಞಾತನಾಗಿ ಇಂದ್ರನ ವಜ್ರಾಯುಧವನ್ನು ಪ್ರವೇಶಿಸಿ ಏನು ಮಾಡಿದನೆಂಬ ವಿಷಯವನ್ನು ನೀನು ಕೇಳಿದ್ದೀಯೆ.

ಹುತಾಶನೇನ ಯಚ್ಚಾಪಃ ಪ್ರವಿಶ್ಯ ಚ್ಛನ್ನಮಾಸತಾ ।
ವಿಬುಧಾನಾಂ ಹಿತಂ ಕರ್ಮ ಕೃತಂ ತಚ್ಚಾಪಿ ತೇ ಶ್ರುತಮ್ ॥೨೭॥

ಅಗ್ನಿಯು ಜಲವನ್ನು ಪ್ರವೇಶಿಸಿ ಛನ್ನರೂಪದಿಂದ ಇದ್ದು ದೇವತೆಗಳಿಗೆ ಏನು ಉಪಕಾರವನ್ನು ಮಾಡಿದನೆಂಬುದನ್ನೂ ನೀನು ಕೇಳಿದ್ದೀಯೆ.

ತಥಾ ವಿವಸ್ವತಾ ಚಾಪಿ ಛನ್ನೇನೋತ್ತಮತೇಜಸಾ ।
ನಿರ್ದಗ್ಧಾ ರಿಪವಃ ಸರ್ವೇ ವಸತಾ ಭುವಿ ವರ್ಷತಃ ॥೨೮॥

ಹಾಗೆಯೇ, ಸೂರ್ಯನೂ ಒಂದು ವರ್ಷಕಾಲ ಭೂಮಿಯಲ್ಲಿ ಛನ್ನವೇಷದಿಂದ ವಾಸಮಾಡಿ ತನ್ನ ಉತ್ತಮವಾದ ತೇಜಸ್ಸಿನಿಂದ ಎಲ್ಲ ಶತ್ರುಗಳನ್ನೂ ಜಯಿಸಿದನು.

ವಿಷ್ಣುನಾ ವಸತಾ ಚಾಪಿ ಗೃಹೇ ದಶರಥಸ್ಯ ಚ ।
ದಶಗ್ರೀವೋ ಹತಶ್ಛನ್ನಂ ಸಂಯುಗೇ ಭೀಮಕರ್ಮಣಾ ॥೨೯॥

ಭಯಂಕರವಾದ ಕಾರ್ಯಗಳನ್ನು ಮಾಡುವ ವಿಷ್ಣುವೂ ಸಹ ದಶರಥನ ಮನೆಯಲ್ಲಿ ತಾನು ವಿಷ್ಣುವೆಂದು ತಿಳಿಯಗೊಡದೇ ಛನ್ನನಾಗಿ ವಾಸಮಾಡಿ ಯುದ್ಧದಲ್ಲಿ ದಶಶಿರನಾದ ರಾವಣನನ್ನು ಕೊಂದನು.

ಏವಮೇತೇ ಮಹಾತ್ಮಾನಃ ಪ್ರಚ್ಛನ್ನಾಸ್ತತ್ರ ತತ್ರ ಹ ।
ಅಜಯನ್ ಶಾತ್ರವಾನ್ ಮುಖ್ಯಾಂಸ್ತಥಾ ತ್ವಮಪಿ ಜೇಷ್ಯಸಿ ॥೩೦॥

ಹೀಗೆ ಈ ಮಹಾತ್ಮರು ಅಲ್ಲಲ್ಲಿ ಪ್ರಚ್ಛನ್ನರಾಗಿ ತಮ್ಮ ಪ್ರಧಾನ ಶತ್ರುಗಳನ್ನು ಜಯಿಸಿದರು. ಅದರಂತೆ ನೀನೂ ಜಯಿಸುವಿ.

ಇತಿ ಧೌಮ್ಯೇನ ಧರ್ಮಜ್ಞೋ ವಾಕ್ಯೈಃ ಸಂಪರಿಹರ್ಷಿತಃ ।
ಶಾಸ್ತ್ರಬುದ್ಧಿಃ ಪುನರ್ಭೂತ್ವಾ ವ್ಯಷ್ಟಂಭತ ಯುಧಿಷ್ಠಿರಃ ॥೩೧॥

ಧರ್ಮಜ್ಞನಾದ ಯುಧಿಷ್ಠಿರನು ಹೀಗೆ ಧೌಮ್ಯರಿಂದ ಬೋಧಿಸಲ್ಪಟ್ಟವನಾಗಿ ಸಂತೋಷಗೊಂಡು ಶಾಸ್ತ್ರಬುದ್ಧಿಯುಳ್ಳವನಾಗಿ ಸಮಾಧಾನವನ್ನು ತಂದುಕೊಂಡನು.

ಅಥಾಬ್ರವೀನ್ಮಹಾಬಾಹುರ್ಭೀಮಸೇನೋ ಮಹಾಬಲಃ ।
ರಾಜಾನಂ ಬಲಿನಾಂ ಶ್ರೇಷ್ಠೋ ಗಿರಾ ಸಂಪರಿಹರ್ಷಯನ್ ॥೩೨॥

ಆಗ ಮಹಾಬಾಹುವೂ, ಮಹಾಬಲನೂ, ಬಲಿಷ್ಠರಲ್ಲಿ ಶ್ರೇಷ್ಠನೂ ಆದ ಭೀಮಸೇನನು ರಾಜನನ್ನು ಸಂತೋಷಪಡಿಸುತ್ತಾ ರಾಜನನ್ನು ಕುರಿತು ಹೀಗೆ ಮಾತನಾಡಿದನು.

ಅವೇಕ್ಷ್ಯ ಮಹಾರಾಜ ತವ ಗಾಂಡೀವಧನ್ವನಾ ।
ಧರ್ಮಾನುಗತಯಾ ಬುದ್ಧ್ಯಾ ನ ಕಿಂಚಿತ್ ಸಾಹಸಂ ಕೃತಮ್ ॥೩೩॥

ಎಲೈ ಮಹಾರಾಜನೇ, ನಿನ್ನ ಧರ್ಮಾನುಗತವಾದ ಬುದ್ಧಿಯನ್ನು ಅನುಸರಿಸುತ್ತಾ ಗಾಂಡೀವ ಧನುಸ್ಸನ್ನು ಹೊಂದಿದ ಅರ್ಜುನನು ಇದುವರೆಗೆ ಯಾವ ಸಾಹಸಕಾರ್ಯವನ್ನು ಮಾಡಲಿಲ್ಲವೆಂಬುದನ್ನು ಗಮನಿಸು.

ಸಹದೇವೋ ಮಯಾ ನಿತ್ಯಂ ನಕುಲಶ್ಚ ನಿವಾರಿತಃ ।
ಶಕ್ತೋ ವಿಧ್ವಂಸನೇ ತೇಷಾಂ ಶತ್ರುಘ್ನೌ ಭೀಮವಿಕ್ರಮೌ ॥೩೪॥

ನಕುಲ-ಸಹದೇವರಿಬ್ಬರೂ ಶತ್ರುಗಳಿಗೆ ಭಯಂಕರವಾದ ಪರಾಕ್ರಮವುಳ್ಳವರು ಮತ್ತು ಅವರನ್ನು ನಾಶಮಾಡಲು ಸಮರ್ಥರಾದವರು. ನಾನು ಅವರನ್ನು ಯಾವಾಗಲೂ ತಡೆದಿದ್ದೇನೆ.

ನ ವಯಂ ವರ್ತ್ಮ ಹಾಸ್ಯಾಮೋ ಯಸ್ಮಿನ್ ಯೋಕ್ಷ್ಯತಿ ನೋ ಭವಾನ್ ।
ತದ್ವಿಧತ್ತಾಂ ಭವಾನ್ ಸರ್ವಂ ಕ್ಷಿಪ್ರಂ ಜೇಷ್ಯಾಮಹೇ ಪರಾನ್ ॥೩೫॥

ನೀನು ಹಾಕಿಕೊಟ್ಟ ದಾರಿಯನ್ನು ನಾವು ಯಾವಾಗಲೂ ಪರಿತ್ಯಾಗಮಾಡಿಲ್ಲ. ಆದ್ದರಿಂದ ನೀನು ಅಪ್ಪಣೆಯನ್ನು ಕೊಡು. ಶೀಘ್ರವಾಗಿ ಶತ್ರುಗಳನ್ನು ಜಯಿಸುವೆವು.

ಇತ್ಯುಕ್ತೋ ಭೀಮಸೇನೇನ ಧರ್ಮರಾಜೋ ಯುಧಿಷ್ಠಿರಃ ।
ಸುಖೋಪವಿಷ್ಟೋ ವಿದ್ವದ್ಭಿಸ್ತಾಪಸೈಃ ಸಂಶಿತವ್ರತೈಃ ॥೩೬॥

ಯೇ ತದಭ್ಯಾಽಭವಂಸ್ತಸ್ಮಿನ್ ವನವಾಸೇ ತಪಸ್ವಿನಃ ।
ತಾನಬ್ರವೀನ್ ಮಹಾಪ್ರಾಜ್ಞಃ ಶಿಷ್ಟಾನ್ ರಾಜಾ ಕೃತಾಂಜಲಿಃ ॥೩೭॥

ಹೀಗೆ ಭೀಮಸೇನನಿಂದ ಹೇಳಲ್ಪಟ್ಟ ಧರ್ಮರಾಜನಾದ ಯುಧಿಷ್ಠಿರನು ಒಳ್ಳೆಯ ವ್ರತಧಾರಿಗಳಾದ, ತಮ್ಮಲ್ಲಿ ಅನುರಾಗವುಳ್ಳ, ವನವಾಸದಲ್ಲಿ ತಮ್ಮ ಜೊತೆಯಲ್ಲೇ ಇದ್ದ ವಿದ್ವಾಂಸರಾದ, ಶಿಷ್ಟರಾದ, ತಾಪಸರನ್ನು ಕುರಿತು ಕೈಗಳನ್ನು ಮುಗಿದು ಮಹಾಪ್ರಾಜ್ಞನಾದ ಅವನು ಮಾತನಾಡಿದನು.

ವಿದಿತಂ ಭವತಾಂ ಸರ್ವಂ ಧಾರ್ತರಾಷ್ಟ್ರೈರ್ಯಥಾ ವಯಮ್ ।
ಛದ್ಮನಾ ಹೃತರಾಜ್ಯಾಶ್ಚ ನಿಃಸ್ವಾಶ್ಚ ಬಹುಶಃ ಕೃತಾಃ ॥೩೮॥

ಉಷಿತಾಃ ಸ್ಮೋ ವನೇ ಕೃಚ್ಛ್ರೇ ಯತ್ಸಾದ್ ದ್ವಾದಶ ವತ್ಸರಾನ್ ।
ಅಜ್ಞಾತಚರ್ಯಾಂ ಸಮಯೇ ಶೇಷಂ ವರ್ಷಂ ತ್ರಯೋದಶಮ್ ॥೩೯॥

ತದ್ವತ್ಸ್ಯಮಃ ಕ್ವಚಿಚ್ಚನ್ನಾಸ್ತದನುಜ್ಞಾಪಯಾಮಹೇ ॥೪೦॥

ನಾವು ಧೃತರಾಷ್ಟ್ರಪುತ್ರರಿಂದ ಹೇಗೆ ಮೋಸದಿಂದ ರಾಜ್ಯಾಪಹಾರಕ್ಕೆ ಒಳಗಾಗಿ ನಿರ್ಧನರಾಗಿ ಮಾಡಲ್ಪಟ್ಟೆವು ಮತ್ತು ಕಾಡಿನಲ್ಲಿ ಬಹಳ ಕಷ್ಟವಾದ ವನವಾಸವನ್ನು ಹನ್ನೆರಡು ವರ್ಷಗಳ ಕಾಲ ಹೇಗೆ ಕಳೆದೆವು ಎಂಬ ಎಲ್ಲಾ ವಿಷಯವೂ ನಿಮಗೆ ತಿಳಿದಿದೆ. ನಾವು ಉಳಿದಿರುವ ಹದಿಮೂರನೆಯ ವರ್ಷವನ್ನು ಅಜ್ಞಾತಚರ್ಯೆಯಿಂದ ಎಲ್ಲಿಯಾದರೂ ಕಳೆಯುವೆವು. ನೀವು ಅದಕ್ಕೆ ಅನುಮತಿಯನ್ನು ನೀಡಬೇಕು.

ಇತ್ಯುಕ್ತಾ ಧರ್ಮರಾಜೇನ ಬ್ರಾಹ್ಮಣಾಃ ಪರಮಾಶಿಷಃ ।
ಪ್ರಯುಜ್ಯಾಪೃಚ್ಛ್ಯ ಭರತಾನ್ ಯಥಾಸ್ವಾನ್ ಪ್ರಯಯುರ್ಗೃಹಾನ್ ॥

ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ಆ ಬ್ರಾಹ್ಮಣರು ಆ ಭರತವಂಶೋತ್ಪನ್ನರಿಗೆ ಶ್ರೇಷ್ಠವಾದ ಆಶೀರ್ವಾದವನ್ನು ಮಾಡಿ ಅವರ ಅನುಮತಿಯನ್ನು ಪಡೆದು ತಮ್ಮ ತಮ್ಮ ಮನೆಗಳಿಗೆ ಹೋದರು.

ಸರ್ವೇ ವೇದವಿದೋ ವಿಪ್ರಾ ಯತಯೋ ಮುನಯಸ್ತಥಾ ।
ಆಶೀರುಕ್ತ್ವಾ ಯಥಾನ್ಯಾಯಂ ಪುನರ್ದರ್ಶನಕಾಂಕ್ಷಿಣಃ ॥೪೨॥

ತೇ ತದ್ಭೃತ್ಯಾಶ್ಚ ಸೂದಾಶ್ಚ ಶಿಲ್ಪಿನಃ ಪರಿಚಾರಕಾಃ ।
ಅನುಜ್ಞಾಪ್ಯ ಯಥಾನ್ಯಾಯಂ ಪುನರ್ದರ್ಶನಭಾಷಿಣಃ ॥೪೩॥

ಎಲ್ಲಾ ವೇದಜ್ಞರಾದ ವಿಪ್ರರೂ, ಸಂನ್ಯಾಸಿಗಳೂ, ಋಷಿಗಳೂ ಆಶೀರ್ವಾದವನ್ನು ಮಾಡಿ ಪುನಃ ಬೇಗ ನಿಮ್ಮ ದರ್ಶನವಾಗಲಿ ಎಂದು ಆಶಿಸಿ ಹೊರಟರು. ಪಾಂಡವರ ಸೇವಕರೂ, ಸೂದರೂ, ಕುಶಲಕರ್ಮಿಗಳೂ, ಪರಿಚಾರಕರೂ ಸಹ ಅವರಿಗೆ ಯೋಗ್ಯವಾದ ರೀತಿಯಲ್ಲಿ ಪಾಂಡವರ ಅನುಮತಿಯನ್ನು ಪಡೆದು ಪುನಃ ಬೇಗ ದರ್ಶನವನ್ನು ಬಯಸುತ್ತೇವೆಂದು ಹೇಳುತ್ತಾ ಹೊರಟರು.

ಸಹ ಧೌಮ್ಯೇನ ವಿದ್ವಾಂಸಸ್ತಥಾ ತೇ ಪಂಚ ಪಾಂಡವಾಃ ।
ಉತ್ಥಾಯ ಪ್ರಯಯುರ್ವೀರಾಃ ಕೃಷ್ಣಾಮಾದಾಯ ಭಾರತ ॥೪೪॥

ಎಲೈ ಭಾರತನೇ, ವೀರರೂ, ವಿದ್ವಾಂಸರೂ ಆದ ಆ ಪಂಚಪಾಂಡವರು ದ್ರೌಪದಿಯನ್ನು ಮತ್ತು ಧೌಮ್ಯರನ್ನು ಕರೆದುಕೊಂಡು ಅಲ್ಲಿಂದ ಎದ್ದು ಮುಂದಕ್ಕೆ ಹೊರಟರು.

ಕ್ರೋಶಮಾತ್ರಮತಿಕ್ರಮ್ಯ ತಸ್ಮಾದ್ ವಾಸಾನ್ನಿಮಿತ್ತತಃ ।
ಶ್ವೋಭೂತೇ ಮನುಜವ್ಯಾಘ್ರಾಶ್ಚನ್ನವಾಸಾರ್ಥಮುದ್ಯತಾಃ ॥೪೫॥

ಪೃಥಕ್ ಶಾಸ್ತ್ರವಿದಃ ಸರ್ವೇ ಸರ್ವೇ ಮಂತ್ರವಿಶಾರದಾಃ ।
ಸಂಧಿವಿಗ್ರಹಕಾಲಜ್ಞಾಃ ಮಂತ್ರಾಯ ಸಮುಪಾವಿಶನ್ ॥೪೬॥

ತಮ್ಮ ವಾಸಸ್ಥಳದಿಂದ ಒಂದು ಕ್ರೋಶಮಾತ್ರ ನಡೆದು ಮರುದಿನದಿಂದ ಅಜ್ಞಾತವಾಸವನ್ನು ಮಾಡಲು ಉದ್ಯುಕ್ತರಾಗಿ ಮನುಜವ್ಯಾಘ್ರರೂ, ಶಾಸ್ತ್ರಜ್ಞರೂ, ಮಂತ್ರವಿಶಾರದರೂ, ಸಂದಿವಿಗ್ರಹಕಾಲವನ್ನು ತಿಳಿದವರೂ ಆದ ಪಾಂಡವರು ಮಂತ್ರಾಲೋಚನೆಯನ್ನು ಮಾಡಲು ಒಂದು ಕಡೆಯಲ್ಲಿ ಕುಳಿತರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಪ್ರಥಮೋऽಧ್ಯಾಯಃ ॥
॥ ವೈರಾಟಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೊದಲನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ

ನಾರಾಯಣಾನುಗ್ರಹತೋ ಯಥಾವತ್
ನಿಸ್ತೀರ್ಯ ತಾನ್ ದ್ವಾದಶಾಬ್ದಾನ್ ವನೇ ತೇ ।
ವಿಸೃಜ್ಯ ಚ ಬ್ರಾಹ್ಮಣಾದೀನ್ ಸಧೌಮ್ಯಾನ್
ಅಜ್ಞಾತವಾಸಾಯ ತತೋ ಮನೋ ದಧುಃ ॥೧॥

ಶ್ರೀಹರಿಯ ಅನುಗ್ರಹದಿಂದ ಪಾಂಡವರು ಸರಿಯಾದ ರೀತಿಯಲ್ಲಿ ಹನ್ನೆರಡು ವರ್ಷಗಳನ್ನು ವನವಾಸದಲ್ಲಿ ಕಳೆದು ಧೌಮ್ಯರನ್ನೂ ಋಷಿಮುನಿಗಳು ಮುಂತಾದವರನ್ನೂ ಬೀಳ್ಕೊಟ್ಟು ಕ್ಷತ್ರಿಯ ವೇಷವನ್ನು ಬಿಟ್ಟು ಅಜ್ಞಾತವಾಸಕ್ಕೆ ಸಂಕಲ್ಪಿಸಿದರು.

ಗತ್ವಾ ವಿರಾಟಸ್ಯ ಪುರೀಂ ನಿಧಾಯ
ಹೇತೀಃ ಶಮ್ಯಾಂ ಛನ್ನರೂಪಾ ಬಭೂವುಃ ।
ಯತಿಸ್ಸೂದಃ ಷಂಡವೇಷೋऽಶ್ವಸೂತ
ವೇಷೋ ಗೋಪೋ ಗಂಧಕರ್ತ್ರೀ ಚ ಜಾತಾಃ ॥೨॥

ಪಾಂಡವರು ವಿರಾಟನಗರದ ಬಳಿಗೆ ಹೋಗಿ ಬನ್ನಿಮರದಲ್ಲಿ ಆಯುಧಗಳನ್ನಿರಿಸಿ ಮಾರುವೇಷ ತೊಟ್ಟರು. ಕ್ರಮವಾಗಿ ಸಂನ್ಯಾಸಿ, ಅಡಿಗೆಯವ, ನಪುಂಸಕ, ಸೂತ, ಗೋವಳ ಮತ್ತು ಸೈರಂಧ್ರಿಗಳಾದರು.

ಸರ್ವೇ ವಿರಾಟಂ ಯಯುರತ್ರ ದೇವವತ್
ಸಂಭಾವಿತಾಸ್ತೇನ ಶುಭೋರುಲಕ್ಷಣಾಃ ।
ಯುಧಿಷ್ಠಿರಸ್ಯೈವ ಶುಶ್ರೂಷಣಂ ತೇ
ಚಕ್ರುರ್ಹೃದಾ ವಾಸುದೇವಸ್ಯ ನಾನ್ಯತ್ ॥೩॥

ಪಾಂಡವರೂ ದ್ರೌಪದಿಯೂ ಎಲ್ಲರೂ ವಿರಾಟರಾಜನ ಬಳಿಗೆ ಹೋದರು. ಉತ್ತಮ ಶುಭಲಕ್ಷಣಯುಕ್ತರಾದ ಅವರು ದೇವತೆಗಳಂತೆ ರಾಜನಿಂದ ಸತ್ಕರಿಸಲ್ಪಟ್ಟರು. ಅವರು ರಾಜನ ಸೇವೆ ಮಾಡಲಿಲ್ಲ. ಯುಧಿಷ್ಠಿರನೊಳಗೆ ಶ್ರೀಹರಿ ಇರುವನೆಂಬ ಭಾವನೆಯಿಂದ ಅವನ ಸೇವೆಯನ್ನೇ ಮಾಡಿದರು.

ಪರಪಾಕೋ ಗೃಹಸ್ಥಸ್ಯ ಕ್ಷತ್ರಿಯಸ್ಯ ವಿಶೇಷತಃ ।
ನ ಯೋಗ್ಯ ಇತಿ ಸೂದಸ್ಯ ಬಭ್ರೇ ವೇಷಂ ವೃಕೋದರಃ ॥೪॥

ಗೃಹಸ್ಥನಾದ ಕ್ಷತ್ರಿಯನಿಗೆ ವಿಶೇಷ ಕಾರಣವಿದ್ದಾಗ ಹೊರತು ಬೇರೆ ಸಮಯದಲ್ಲಿ ಪರಾನ್ನ ಭೋಜನ ಉಚಿತವಲ್ಲ ಎಂದು ಭೀಮ ಅಡಿಗೆಯವನ ವೇಷ ಧರಿಸಿದ.

ವೈದಿಕವ್ಯವಹಾರೇಷು ಜ್ಞಾನಾಧಿಕ್ಯಪ್ರಸಿದ್ಧಿತಃ ।
ಜಾನೀಯುರ್ಭೀಮ ಇತ್ಯೇವ ಸೂದವೇಷಸ್ತತೋऽಭವತ್ ॥೫॥

ವೈದಿಕ ವ್ಯವಹಾರಗಳಲ್ಲಿ ಜ್ಞಾನದ ಹೆಚ್ಚಳ ಎದ್ದು ಕಾಣುವುದರಿಂದ ಈತ ಭೀಮ ಎಂದು ಜನರು ತಿಳಿಯುವ ಸಂಭವವಿದ್ದಿತು. ಅದರಿಂದ ಶೂದ್ರವೇಷ ಧರಿಸಿದ.

ಸ್ವೀಯಂ ವೇದವಿದಾಂ ಸರ್ವಂ ದೇವೇಶಾನಾಂ ಚ ಕಿಂ ಪುನಃ।
ಅತಸ್ತೇಽನ್ಯಾಶ್ರಯಂ ನೈವ ಚಕ್ರುಃ ಸ್ವಬಲಸಂಶ್ರಯಾತ್ ॥ ೬ ॥

ವೇದವೇತ್ತರಾದ ಮಾನವರಿಗೂ ಋಷಿಗಳಿಗೂ ತಮಗಿಂತ ಕೆಳಗಿನವರ ಎಲ್ಲವೂ ತಮ್ಮ ಸೊತ್ತೇ ಆಗುವುದೆಂದಮೇಲೆ ದೇವೋತ್ತಮರಿಗೆ ಏನು ಹೇಳಬೇಕು? ಆದರಿಂದಲೂ ತಮ್ಮ ಬಲವನ್ನೇ ಆಶ್ರಯಿಸಿದ್ದ ಪ್ರಯುಕ್ತವೂ ಪಾಂಡವರು ಪರಾಶ್ರಯವನ್ನು ಮಾಡಲೇ ಇಲ್ಲ.

ಶಾಪಾದೇವಾರ್ಜುನಃ ಷಂಡವೇಷೋಽಭೂನ್ನಕುಲಸ್ತಥಾ ।
ಕ್ಷತ್ರಿಯಾನಂತರತ್ವಾತ್ತು ಸೂತಜಾತೇಸ್ತಥಾಽಭವತ್ ॥ ೭ ॥

ಊರ್ವಶಿಯ ಶಾಪದಿಂದಲೆ ಅರ್ಜುನ ನಪುಂಸಕ ವೇಷದವನಾದ. ಕ್ಷತ್ರಿಯ ಜಾತಿಗೆ ಹತ್ತಿರ ಜಾತಿಯವನು ಸೂತನಾದ್ದರಿಂದ ನಕುಲ ಸೂತ ಜಾತಿಯವನಾದ.

ಸೂತಸ್ಯಾನಂತರತ್ವಾತ್ತು ವೈಶ್ಯಜಾತೇಸ್ತಥಾಽಭವತ್ ।
ಸಹದೇವೋ ವೈಶ್ಯಜಾತಿರ್ಗೋಪಾಲಸ್ತೇಷು ಚೋತ್ತಮಃ ।
ತತೋ ಗೋಪಾಲತಾಮಾಪ ಯತಿಃ ಪೂಜ್ಯೋಽಖಿಲೈರ್ಯತಃ ॥ ೮ ॥

ಯತಿರಾಸೀದ್ಧರ್ಮಜೋಽತಃ ಸೋಽಭ್ಯಾಸಾರ್ಥಂ ಸದೈವ ಚ ।
ಅಕ್ಷಾಸಕ್ತೋಽಭವತ್ ಪಶ್ಚಾದ್ದರ್ಶಯಿಷ್ಯನ್ ಸ್ವಶಿಷ್ಟತಾಮ್ ॥ ೯ ॥

ಸೂತ ಜಾತಿಯ ಅನಂತರದವನು ವೈಶ್ಯ ಜಾತಿಯಾದ್ದರಿಂದ ಸಹದೇವ ವೈಶ್ಯನಾದ. ವೈಶರಲ್ಲಿಯೂ ಗೋಪಾಲಕ ಉತ್ತಮನಾದ್ದರಿಂದ ಗೋಪಾಲಕನಾದ. ಯತಿ ಎಲ್ಲವರ್ಣ, ಎಲ್ಲಆಶ್ರಮದವರಿಗೂ ಪೂಜ್ಯನಾಗಿರುವುದರಿಂದ ಧರ್ಮರಾಜ ಯತಿಯಾದ. ಜೂಜಾಟದಲ್ಲಿ ತನ್ನ ಅದ್ವಿತೀಯತ್ವವನ್ನು ತೋರುವುದಕ್ಕಾಗಿ ತನ್ನ ಅಭ್ಯಾಸ ಕೌಶಲವನ್ನು ಮೆರೆಸಬೇಕೆಂದು ಸದಾ ಜೂಜಿನಲ್ಲಿ ನಿರತನಾದ.

ಭೀಮಸೇನಸಧರ್ಮಾರ್ಥಂ ಶೂದ್ರಾ ಸೈರಂಧ್ರಿಕಾಽಭವತ್ ।
ದ್ರೌಪದೀ ಭರ್ತೃಸಾಧರ್ಮ್ಯಂ ಸ್ತ್ರೀಣಾಂ ಧರ್ಮೋ ಯತಸ್ಸದಾ ॥ ೧೦ ॥

ದ್ರೌಪದಿ ಭೀಮಸೇನನಿಗೆ ಸಮಾನಧರ್ಮಿಣಿ ಎನಿಸುವ ಉದ್ದೇಶದಿಂದ ಶೂದ್ರ ವೇಷದ ಸೈರಂಧ್ರಿಯಾದಳು. ಏಕೆಂದರೆ ಪತಿಗೆ ಸಮಾನಧರ್ಮಿಣಿಯೆನಿಸುವುದೇ ಸ್ತ್ರೀಯರಿಗೆ ಸದಾ ಧರ್ಮವಾಗಿದೆ.

★ ★ ★ ★ ★

ಎರಡನೆಯ ಅಧ್ಯಾಯ

ತಮ್ಮಂದಿರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ವಿರಾಟನಗರದಲ್ಲಿ ಛನ್ನವೇಷದಿಂದ ವಾಸಮಾಡಲು ಯುಧಿಷ್ಠಿರನ ನಿರ್ಧಾರ

ವೈಶಂಪಾಯನಃ

ನಿವೃತ್ತವನವಾಸಾಸ್ತೇ ಸತ್ಯಸಂಧಾ ಯಶಸ್ವಿನಃ ।
ಅಕುರ್ವಂತ ಪುನರ್ಮಂತ್ರಂ ಸಹ ಧೌಮ್ಯೇನ ಪಾಂಡವಾಃ ॥೧॥

ವೈಶಂಪಾಯನ– ವನವಾಸವನ್ನು ಮುಗಿಸಿದ ಸತ್ಯಸಂಧರೂ, ಯಶಸ್ವಿಗಳೂ ಆದ ಆ ಪಾಂಡವರು ಧೌಮ್ಯರ ಜೊತೆಯಲ್ಲಿ ಸೇರಿ ಪುನಃ ಮಂತ್ರಾಲೋಚನೆಯನ್ನು ಮಾಡಿದರು.

ಅಥಾಬ್ರವೀನ್ಮಹಾರಾಜ ಕುಂತೀಪುತ್ರೋ ಯುಧಿಷ್ಠಿರಃ ।
ಭ್ರಾತೄನ್ ಕೃಷ್ಣಾಂ ಚ ಸಂಪ್ರೇಕ್ಷ್ಯ ಧೌಮ್ಯಂ ಚ ಕುರುನಂದನ ॥೨॥

ಎಲೈ ಮಹಾರಾಜನೇ, ಕುರುನಂದನನೇ, ಕುಂತೀಪುತ್ರನಾದ ಯುಧಿಷ್ಠಿರನು ತಮ್ಮಂದಿರನ್ನೂ, ದ್ರೌಪದಿಯನ್ನೂ ಮತ್ತು ಧೌಮ್ಯರನ್ನು ನೋಡುತ್ತಾ ಮಾತನಾಡಿದನು.

ದ್ವಾದಶೇಮಾನಿ ವರ್ಷಾಣಿ ರಾಷ್ಟ್ರಾದ್ ವಿಪ್ರೋಷಿತಾ ವಯಮ್ ॥೩॥

ತ್ರಯೋದಶಮಿಮಂ ಪ್ರಾಪ್ತಂ ಕ್ವ ನು ವತ್ಸ್ಯಾಮಹೇऽರ್ಜುನ ।
ಅಬುದ್ಧಾ ಧಾರ್ತರಾಷ್ಟ್ರೈಶ್ಚ ಸಮಗ್ರಾಃ ಸಹ ಕೃಷ್ಣಯಾ ॥೪॥

ಈ ಹನ್ನೆರಡು ವರ್ಷಗಳ ಕಾಲ ನಾವು ರಾಜ್ಯವನ್ನು ಬಿಟ್ಟು ವಾಸಮಾಡಿದೆವು. ಎಲೈ ಅರ್ಜುನನೇ, ಪ್ರಾಪ್ತವಾದ ಈ ಹದಿಮೂರನೆಯ ವರ್ಷವನ್ನು ದ್ರೌಪದಿಯ ಜೊತೆಯಲ್ಲಿ ನಾವೆಲ್ಲರೂ ಧೃತರಾಷ್ಟ್ರಪುತ್ರರಿಗೆ ತಿಳಿಯದಂತೆ ಎಲ್ಲಿ ಕಳೆಯೋಣ?

ಅರ್ಜುನಃ

ತಸ್ಯೈವ ವರದಾನೇನ ಧರ್ಮಸ್ಯ ಮನುಜಾಧಿಪ ।
ಅಜ್ಞಾತಾ ವಿಚರಿಷ್ಯಾಮೋ ನರಾಣಾಂ ಭರತರ್ಷಭ ॥೫॥

ಅರ್ಜುನ– ಎಲೈ ಮನುಜಾಧಿಪನೇ, ಭರತಶ್ರೇಷ್ಠನೇ, ಆ ಯಮದೇವರ ವರದಿಂದಲೇ ನಾವು ಬೇರೆ ಮನುಷ್ಯರಿಗೆ ತಿಳಿಯದಂತೆ ಅಜ್ಞಾತವಾಸವನ್ನು ಆಚರಿಸುವೆವು.

ತಾನಿ ರಾಷ್ಟ್ರಾಣಿ ವಾಸಾಯ ಕೀರ್ತಯಿಷ್ಯಾಮಿ ಕಾನಿಚಿತ್ ।
ರಮಣೀಯಾನಿ ಗುಪ್ತಾನಿ ತೇಷಾಂ ಕಿಂಚಿತ್ತು ರೋಚಯ ॥೬॥

ಅಜ್ಞಾತವಾಸಕ್ಕೆ ಯೋಗ್ಯವಾದ, ಸುಂದರವಾದ ಮತ್ತು ಸುರಕ್ಷಿತವಾದ ಕೆಲವು ರಾಷ್ಟ್ರಗಳನ್ನು ಹೇಳುವೆನು. ಅವುಗಳಲ್ಲಿ ಯಾವುದನ್ನಾದರೂ ಆರಿಸು.

ಸಂತಿ ರಮ್ಯಾ ಜನಪದಾ ಬಹವಸ್ತ್ವಭಿತಃ ಕುರೂನ್ ।
ಪಾಂಚಾಲಾಶ್ಚೈವ ಮತ್ಸ್ಯಾಶ್ಚ ಸಾಲ್ವವೈದೇಹಬಾಹ್ಲಿಕಾಃ ॥೭॥

ದಶಾರ್ಣಾಃ ಶೂರಸೇನಾಶ್ಚ ಕಳಿಂಗಾ ಮಗಧಾ ಅಪಿ ॥೮॥

ಕುರುರಾಜ್ಯದ ಸುತ್ತಲೂ ಅನೇಕ ಸುಂದರವಾದ ರಾಜ್ಯಗಳಿವೆ. ಪಾಂಚಾಲದೇಶ, ಮತ್ಸ್ಯದೇಶ, ಸಾಲ್ವವಿದೇಹ ಬಾಹ್ಲಿಕದೇಶಗಳು, ದಶಾರ್ಣ, ಶೂರಸೇನ, ಕಳಿಂಗ, ಮತ್ತು ಮಗಧ ದೇಶಗಳೂ ಇವೆ.

ವಿರಾಟನಗರಂ ಚಾಪಿ ಶ್ರೂಯತೇ ಶತ್ರುಕರ್ಶನ ।
ರಮಣೀಯಂ ಜನಾಕೀರ್ಣಂ ಸುಭಿಕ್ಷಂ ಸ್ಫೀತಮೇವ ಚ ॥೯॥

ನಾನಾರಾಷ್ಟ್ರಾಣಿ ಚಾನ್ಯಾನಿ ಶ್ರೂಯಂತೇ ಸುಬಹೂನ್ಯಪಿ ॥೧೦॥

ಶತ್ರುಕರ್ಶನನಾದವನೇ, ವಿರಾಟನಗರವಾದರೂ ರಮಣೀಯವೂ, ಜನನಿಬಿಡವೂ, ಶುದ್ಧವೂ ಮತ್ತು ಸುಭಿಕ್ಷೆಯಿಂದ ಕೂಡಿದುದೂ ಎಂದು ಕೇಳಿಬರುತ್ತಿದೆ. ಅಲ್ಲದೇ ಇನ್ನೂ ಅನೇಕ ರಾಷ್ಟ್ರಗಳೂ ಕೇಳಿ ಬರುತ್ತಿವೆ.

ಯತ್ರ ತೇ ರೋಚತೇ ರಾಜಂಸ್ತತ್ರ ಗಚ್ಛಾಮಹೇ ವಯಮ್ ।
ಕತಮಸ್ಮಿನ್ ಜನಪದೇ ಮಹಾರಾಜ ನಿವತ್ಸ್ಯಸಿ ॥೧೧॥

ಎಲೈ ರಾಜನೇ, ನಿನಗೆ ಇಷ್ಟವಾದಲ್ಲಿ ನಾವು ಹೋಗೋಣ. ಮಹಾರಾಜನೇ, ಯಾವ ದೇಶದಲ್ಲಿ ನೀನು ವಾಸಮಾಡುವಿ?

ಯುಧಿಷ್ಠಿರಃ

ಏವಮೇತನ್ಮಹಾಬಾಹೋ ಯಥಾ ಸ ಭಗವಾನ್ ಪ್ರಭುಃ ।
ಅಬ್ರವೀತ್ ಸರ್ವಭೂತೇಶಸ್ತಥೈತನ್ನ ತದನ್ಯಥಾ ॥೧೨॥

ಯುಧಿಷ್ಠಿರ– ಎಲೈ ಮಹಾಬಾಹುವೇ, ಭಗವಂತನೂ, ಪ್ರಭುವೂ ಮತ್ತು ಸರ್ವಭೂತೇಶನೂ ಆದ ಯಮನು ಹೇಳಿದಂತೆಯೇ ಎಲ್ಲವೂ ಆಗುತ್ತದೆ. ಅದರಲ್ಲಿ ವ್ಯತ್ಯಾಸವಿಲ್ಲ.

ಅವಶ್ಯಂ ತ್ವೇವ ವಾಸಾರ್ಥಂ ರಮಣೀಯಂ ಶಿವಂ ಸುಖಮ್ ।
ಸಮ್ಮಂತ್ರ್ಯ ಸಹಿತೈಃ ಸರ್ವೈರ್ದ್ರಷ್ಟವ್ಯಮಕುತೋಭಯಮ್ ॥೧೩॥

ಅಜ್ಞಾತವಾಸದ ಸಲುವಾಗಿ ರಮಣೀಯವೂ, ಮಂಗಳವೂ, ಸುಖಕರವೂ, ಭಯರಹಿತವೂ ಆದ ಒಂದು ದೇಶವನ್ನು ನಾವೆಲ್ಲರೂ ಮಂತ್ರಾಲೋಚನೆಯನ್ನು ಮಾಡಿ ನಿರ್ಧರಿಸಬೇಕು.

ಮಾತ್ಸ್ಯೋ ವಿರಾಟೋ ಬಲವಾನ್ ಸಾರ್ವಭೌಮಶ್ಚ ವಿಶ್ರುತಃ ।
ದಾನಶೀಲೋ ವದಾನ್ಯಶ್ಚ ವೃದ್ಧಃ ಸತ್ಸು ಸುಸಮ್ಮತಃ ॥೧೪॥

ಮತ್ಸ್ಯ ದೇಶದ ರಾಜನಾದ ವಿರಾಟನು ಬಲಿಷ್ಠನೂ, ಸಾರ್ವಭೌಮನೂ ಆಗಿ ಪ್ರಖ್ಯಾತನಾಗಿದ್ದಾನೆ. ಅವನು ದಾನಶೀಲನೂ, ಉದಾರಿಯೂ, ವೃದ್ಧನೂ, ಸಜ್ಜನರಿಗೆ ಸಮ್ಮತನೂ ಆಗಿದ್ದಾನೆ.

ಗುಣವಾನ್ ಲೋಕವಿಖ್ಯಾತೋ ದೃಢಭಕ್ತಿರ್ವಿಶಾರದಃ ।
ತತ್ರ ಮೇ ರೋಚತೇ ಪಾರ್ಥ ಮತ್ಸ್ಯರಾಜಾಂತಿಕೇಽನಘ ॥೧೫॥

ಅವನು ಗುಣವಂತನೂ, ಲೋಕವಿಖ್ಯಾತನೂ, ವಿದ್ವಾಂಸನೂ, ದೃಢಭಕ್ತಿಯುಳ್ಳವನೂ ಆಗಿದ್ದಾನೆ. ಎಲೈ ಅನಘನೇ, ಅವನ ಬಳಿಯಲ್ಲಿ ವಾಸವು ನನಗೆ ಇಷ್ಟವಾಗುತ್ತದೆ.

ವಿರಾಟನಗರೇ ತಾತ ಮಾಸಾನ್ ದ್ವಾದಶ ಸಂಶ್ರಿತಾಃ ।
ಕುರ್ವಂತಸ್ತಸ್ಯ ಕರ್ಮಾಣಿ ವಸಾಮೇತಿ ಹ ರೋಚಯೇ ॥೧೬॥

ಎಲೈ ಪ್ರೀತಿಪಾತ್ರನೇ, ವಿರಾಟನಗರದಲ್ಲಿ ಅವನ ಪರಿಚರ್ಯೆಯನ್ನು ಮಾಡುತ್ತಾ ಹನ್ನೆರಡು ತಿಂಗಳುಗಳ ಕಾಲ ನಾವು ವಾಸಮಾಡುವೆವೆಂದು ನನಗೆ ಇಷ್ಟವಾಗುತ್ತದೆ.

ಯಾನಿ ಯಾನೀಹ ಕರ್ಮಾಣಿ ತಸ್ಯೈ ಚಕೃಮಹೇ ವಯಮ್ ।
ಕರ್ತುಂ ಯೋ ಯತ್ ಸ ತತ್ ಕರ್ಮ ಬ್ರವೀತು ಕುರುನಂದನ ॥

ಎಲೈ ಕುರುನಂದನನೇ, ನಮ್ಮಲ್ಲಿ ಯಾರು ಯಾರು ಅವನ ಏನೇನು ಕರ್ಮವನ್ನು ಮಾಡುವೆವು ಎಂದು ಎಲ್ಲರೂ ಹೇಳಿ.

ಅರ್ಜುನಃ

ನರದೇವ ಕಥಂ ಕರ್ಮ ತಸ್ಯ ರಾಷ್ಟ್ರೇ ಚರಿಷ್ಯಸಿ ।
ಮಾನುಷೇಂದ್ರ ವಿರಾಟಸ್ಯ ರಂಸ್ಯಸೇ ಕೇನ ಕರ್ಮಣಾ ॥೧೮॥

ಅರ್ಜುನ– ನರದೇವನೇ, ಮನುಷ್ಯಶ್ರೇಷ್ಠನೇ, ವಿರಾಟನ ದೇಶದಲ್ಲಿ ನೀನು ಹೇಗೆ ಕರ್ಮವನ್ನು ಮಾಡುತ್ತೀಯೆ? ವಿರಾಟನಿಗೆ ಯಾವ ಕಾರ್ಯವನ್ನು ಮಾಡಿಕೊಟ್ಟು ನೀನು ಸಂತೋಷಪಡುವಿ?

ಅಕ್ಲಿಷ್ಟವೇಷಧಾರೀ ಚ ಧಾರ್ಮಿಕೋ ಹ್ಯನಸೂಯಕಃ ।
ನ ತವಾಭ್ಯುಚಿತಂ ಕರ್ಮ ನೃಶಂಸಂ ನಾಪಿ ಕೈತವಮ್ ॥೧೯॥

ನೀನು ಸರಳವೇಷವನ್ನು ಧರಿಸುವವನೂ, ಧಾರ್ಮಿಕನೂ ಮತ್ತು ಅಸೂಯಾರಹಿತನೂ ಆಗಿದ್ದೀಯೆ. ಕ್ರೂರವಾದ ಅಥವಾ ಕಪಟದಿಂದ ಕೂಡಿದ ಯಾವ ಕಾರ್ಯವೂ ನಿನಗೆ ಯೋಗ್ಯವಾದುದಲ್ಲ.

ಸತ್ಯವಾಗಸಿ ಯಾಜ್ಞೀಯೋ ರಾಗಕ್ರೋಧವಿವರ್ಜಿತಃ ।
ಮೃದುರ್ವದಾನ್ಯೋ ಹ್ರೀಮಾಂಶ್ಚ ಧಾರ್ಮಿಕಃ ಸತ್ಯವಿಕ್ರಮಃ ॥೨೦॥

ನೀನು ಸತ್ಯವಚನನೂ, ಯಜ್ಞಪ್ರಿಯನೂ, ಕಾಮಕ್ರೋಧರಹಿತನೂ, ಮೃದುವೂ, ಉದಾರಿಯೂ, ನಾಚಿಕೆಸ್ವಭಾವದವನೂ, ಧಾರ್ಮಿಕನೂ ಮತ್ತು ನಿಜವಾದ ವಿಕ್ರಮವನ್ನು ಹೊಂದಿದವನೂ ಆಗಿದ್ದೀಯೆ.

ರಾಜನ್ ತ್ವಂ ತಪಸಾ ಕ್ಲಿಷ್ಟಃ ಕಥಂ ತಸ್ಯ ಚರಿಷ್ಯತಿ ।
ನ ದುಃಖಮುಚಿತಂ ಕಿಂಚಿದ್ ರಾಜನ್ ಪಾಪಮತೇರ್ಯಥಾ ॥೨೧॥

ಸ ಇಮಾಮಾಪದಂ ಪ್ರಾಪ್ಯ ಕಥಂ ಘೋರಾಂ ತರಿಷ್ಯಸಿ ॥೨೨॥

ಎಲೈ ರಾಜನೇ, ತಪಸ್ಸಿನಿಂದ ದಣಿದ ನೀನು ಹೇಗೆ ಅವನ ಕರ್ಮವನ್ನು ಮಾಡುವಿ? ರಾಜನೇ, ದುಷ್ಟಬುದ್ಧಿಯುಳ್ಳವನಿಗೆ ಯೋಗ್ಯವಾದ ಯಾವ ದುಃಖದ ಕಾರ್ಯವೂ ನಿನಗೆ ಉಚಿತವಲ್ಲ. ಇಂತಹ ಘೋರವಾದ ಆಪತ್ತಿಗೆ ಸಿಲುಕಿದ ನೀನು ಇದನ್ನು ಹೇಗೆ ದಾಟುವಿ?

ಯುಧಿಷ್ಠಿರಃ

ಶೃಣುಧ್ವಂ ಯಚ್ಚರಿಷ್ಯಾಮಿ ಅಹಂ ವೈ ಕುರುನಂದನ ॥೨೩॥

ವಿರಾಟಂ ಸಮನುಪ್ರಾಪ್ಯ ರಾಜಾನಂ ಮತ್ಸ್ಯನಂದನಮ್ ।
ಸಭಾಸ್ತಾರೋ ಭವಿಷ್ಯಾಮಿ ವಿರಾಟಸ್ಯೇತಿ ಮೇ ಮತಿಃ ॥೨೪॥

ಯುಧಿಷ್ಠಿರ– ಎಲೈ ಕುರುನಂದನನೇ, ನಾನು ಏನು ಮಾಡುವೆನೆಂದು ಎಲ್ಲರೂ ಕೇಳಿ. ನಾನು ಮತ್ಸ್ಯನಂದನನಾದ ವಿರಾಟನನ್ನು ಸಮೀಪಿಸಿ ಅವನ ಸಭೆಯ ಗಣ್ಯವ್ಯಕ್ತಿಯಾಗುವೆನೆಂದು ನನ್ನ ಅಭಿಪ್ರಾಯ.

ಕಂಕೋ ನಾಮ ಬ್ರುವಾಣೋಽಹಂ ಮತಾಕ್ಷಃ ಸಾಧುದೇವಿತಾ ॥೨೫॥

ವೈಡೂರ್ಯಕಾಂಚನಾನ್ ದಾಂತಾನ್ ಸ್ಫಾಟಿಕಾನ್ ರಾಜತಾನಪಿ ।
ಕೃಷ್ಣಾಕ್ಷಾನ್ ಲೋಹಿತಾಕ್ಷಾಂಶ್ಚ ಧಾರಯಿಷ್ಯೇ ಸುವೇಷ್ಟಿತಾನ್ ॥೨೬॥

ಅರಿಷ್ಟಾನ್ ರಾಜಗೋಲಿಂಗಾನ್ ದರ್ಶನೀಯಾನ್ ಸುವರ್ಚಸಃ ॥೨೭॥

ನಾನು ಕಂಕ ಎಂಬ ಹೆಸರಿನವನು ಎಂದು ಹೇಳಿಕೊಳ್ಳುತ್ತಾ, ಅಕ್ಷವಿದ್ಯೆಯನ್ನು ತಿಳಿದು ಚೆನ್ನಾಗಿ ಆಡುವವನು ಎಂದು ಹೇಳುತ್ತಾ, ವೈಡೂರ್ಯದಿಂದ ಮಾಡಿದ ಕಾಂಚನ ಮಯವಾದ, ದಂತಮಯವಾದ, ಸ್ಫಟಿಕಮಯವಾದ, ರಜತಮಯವಾದ, ಕಪ್ಪು ಚುಕ್ಕೆಗಳನ್ನು ಹೊಂದಿರುವ, ಕೆಂಪುಚುಕ್ಕೆಯನ್ನು ಹೊಂದಿರುವ, ಎಲ್ಲಿಯೂ ಸೀಳದಿರುವ ರಾಜಚಿಹ್ನೆಗಳನ್ನು, ಗೋಚಿಹ್ನೆಗಳನ್ನು ಒಳಗೊಂಡ, ಕಾಂತಿಯುಕ್ತವಾದ ಮನೋಹರವಾದ ದಾಳಗಳನ್ನು ಬಟ್ಟೆಯಲ್ಲಿ ಚೆನ್ನಾಗಿ ಸುತ್ತಿ ಅವನಿಗೆ ಕೊಡುವೆನು.

ಲೋಹಿತಾಶ್ಚಾಶ್ಮಗರ್ಭಾಶ್ಚ ಸಂತಿ ತಾತ ಧನಾನಿ ಮೇ ।
ದರ್ಶನೀಯಾನ್ ಸಭಾನಂದಾನ್ ಕುಶಲೈಃ ಸಾಧು ನಿಷ್ಠಿತಾನ್ ॥೨೮॥

ಅಪ್ಯೇತಾನ್ ಪಾಣಿನಾ ಸ್ಪೃಷ್ಟಾ ಸಂಪ್ರಹೃಷ್ಯಂತಿ ಮಾನವಾಃ ॥೨೯॥

ಮನೋಹರವೂ, ಸಭೆಯಲ್ಲಿದ್ದವರಿಗೆ ಸಂತೋಷವನ್ನು ಕೊಡುವವೂ, ಕುಶಲರಿಂದ ಪ್ರಶಂಸಿಸಲ್ಪಟ್ಟವೂ ಆದ ಈ ದಾಳಗಳನ್ನು ಕೈಯಿಂದ ಮುಟ್ಟಿದರೂ ಮನುಷ್ಯರು ಸಂತೋಷ ಪಡುತ್ತಾರೆ.

ತಾನ್ ವಿಕೀರ್ಯ ಸಮೇ ದೇಶೇ ರಮಣೀಯಾನ್ ವಿಪಾಂಸುಲೇ ।
ದೇವಿಷ್ಯಾಮಿ ಯಥಾಕಾಮಂ ಸ ವಿಹಾರೋ ಭವಿಷ್ಯತಿ ॥೩೦॥

ಅಂತಹ ಹಾಸು ಮತ್ತು ದಾಳಗಳನ್ನು ಧೂಳಿಲ್ಲದ, ಮನೋಹರವಾದ, ಸಮತಟ್ಟಾದ ನೆಲದ ಮೇಲೆ ಹರಡಿ ನನಗೆ ಇಷ್ಟಬಂದಂತೆ ದ್ಯೂತವನ್ನು ಆಡುವೆನು. ಅದು ನನ್ನ ವಿಹಾರವಾಗುವುದು.

ಕಂಕೋ ನಾಮ್ನಾ ಪರಿವ್ರಾಜೋ ವಿರಾಟಸ್ಯ ಸಭಾಸದಃ ।
ಜ್ಯೋತಿಷೇ ಶಕುನಜ್ಞಾನೇ ನಿಮಿತ್ತೋ ಚಾಕ್ಷಕೌಶಲೇ ॥೩೧॥

ನಾನು ಕಂಕ ಎಂಬ ಪರಿವ್ರಾಜಕನಾಗಿ ಜ್ಯೋತಿಷದಲ್ಲಿಯೂ, ಶಕುನಗಳಲ್ಲಿಯೂ, ಅಕ್ಷಕೌಶಲದಲ್ಲಿಯೂ ಮತ್ತು ದೈವಸೂಚನೆಗಳಲ್ಲಿಯೂ ಪರಿಣಿತನಾದ ಸಭಾಸದನಾಗಿ ವಿರಾಟನ ಜೊತೆಯಲ್ಲಿ ಇರುತ್ತೇನೆ.

ಬ್ರಾಹ್ಮೋ ವೇದೋ ಮಯಾऽಧೀತೋ ವೇದಾಂಗಾನಿ ಚ ಸರ್ವಶಃ ॥

ಧರ್ಮಕಾಮಾರ್ಥಮೋಕ್ಷೇಷು ನೀತಿಶಾಸ್ತ್ರೇಷು ಪಾರಗಃ ।
ಪೃಷ್ಟೋऽಹಂ ಕಥಯಿಷ್ಯಾಮಿ ರಾಜ್ಞಃ ಪ್ರಿಯಹಿತಂ ವಚಃ ॥೩೩॥

ನಾನು ಬ್ರಹ್ಮವಿಷಯಕವಾದ ವೇದಗಳನ್ನೂ, ವೇದಾಂಗಗಳನ್ನೂ ಸಂಪೂರ್ಣವಾಗಿ ಅಧ್ಯಯನ ಮಾಡಿದ್ದೇನೆ. ಧರ್ಮಾರ್ಥಕಾಮಮೋಕ್ಷಶಾಸ್ತ್ರಗಳಲ್ಲಿ ಮತ್ತು ನೀತಿಶಾಸ್ತ್ರಗಳಲ್ಲಿ ಪಾರಂಗತನಾಗಿದ್ದೇನೆ ಎಂದು ಹೇಳುತ್ತಾ ರಾಜನು ಕೇಳಿದಾಗ ಅವನಿಗೆ ಪ್ರಿಯವೂ, ಹಿತವೂ ಆದ ವಚನಗಳನ್ನು ಹೇಳುವೆನು.

ಆಸಂ ಯುಧಿಷ್ಠಿರಸ್ಯಾಹಂ ಪುರಾ ಪ್ರಾಣಸಮಃ ಸಖಾ ।
ಇತಿ ವಕ್ಷ್ಯಾಮಿ ರಾಜಾನಂ ಯದಿ ಮಾಮನುಯೋಕ್ಷ್ಯತೇ ॥೩೪॥

ರಾಜನು ನನ್ನನ್ನು ಕೇಳಿದರೆ ಅವನನ್ನು ಕುರಿತು ನಾನು ಹಿಂದೆ ಯುಧಿಷ್ಠಿರನಿಗೆ ಪ್ರಾಣಪ್ರಿಯನಾದ ಸ್ನೇಹಿತನಾಗಿದ್ದೆ ಎಂದು ಹೇಳುವೆನು.

ವಿರಾಟನಗರೇ ಛನ್ನಃ ಕೃಷ್ಣಯಾ ಚ ಸಹಾನುಗೈಃ ।
ಇತ್ಯೇವ ಮತ್ತತ್ತಿಜ್ಞಾತಂ ವಿಚರಿಷ್ಯಾಮ್ಯಹಂ ಯಥಾ ॥೩೫॥

ವಿರಾಟನಗರದಲ್ಲಿ ಈ ರೀತಿ ಛನ್ನನಾಗಿ ದ್ರೌಪದಿ ಮತ್ತು ತಮ್ಮಂದಿರಿಂದ ಒಡಗೂಡಿ ನಾನು ವಾಸವನ್ನು ಮಾಡಿ ಸಂಚರಿಸುವೆನು ಎಂದು ನನ್ನ ಅಭಿಪ್ರಾಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ದ್ವಿತೀಯೋऽಧ್ಯಾಯಃ ॥
॥ ವೈರಾಟಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ಭೀಮಾರ್ಜುನರಿಂದ ಕ್ರಮವಾಗಿ ಸೂದವೇಷ ಮತ್ತು
ಷಂಡವೇಷಧಾರಣ ಕಥನ

ವೈಶಂಪಾಯನಃ

ಏವಂ ನಿರ್ದಿಶ್ಯ ಚಾತ್ಮಾನಂ ಭೀಮಸೇನಮುವಾಚ ಹ ।
ಭೀಮಸೇನ ಕಥಂ ಕರ್ಮ ಮತ್ಸ್ಯರಾಷ್ಟ್ರೇ ಚರಿಷ್ಯಸಿ ॥೧॥

ವೈಶಂಪಾಯನ– ಯುಧಿಷ್ಠಿರನು ಹೀಗೆ ತನ್ನ ವಿಷಯದಲ್ಲಿ ಮಾತನಾಡಿ ಭೀಮಸೇನನನ್ನು ಕುರಿತು- 'ಭೀಮಸೇನನೇ, ಮತ್ಸ್ಯದೇಶದಲ್ಲಿ ನೀನು ಹೇಗೆ ಕರ್ಮವನ್ನು ಮಾಡುವಿ?' ಎಂದು ಕೇಳಿದನು.

ಹತ್ವಾ ಕ್ರೋಧವಶಾಂಸ್ತಾತ ಪರ್ವತೇ ಗಂಧಮಾದನೇ ।
ಯಕ್ಷಾನ್ ಕ್ರೋಧಾಭಿತಾಮ್ರಾಕ್ಷಾನ್ ರಾಕ್ಷಸಾಂಶ್ಚಾತಿಪೌರುಷಾನ್ ॥೨॥

ಪ್ರಾದಾಃ ಪಾಂಚಾಲಕನ್ಯಾಯೈ ಪದ್ಮಾನಿ ಸುಬಹೂನ್ಯಪಿ ॥೩॥

ಪ್ರೀತಿಪಾತ್ರನೇ, ಗಂಧಮಾದನ ಪರ್ವತದಲ್ಲಿ ಕ್ರೋಧವಶ ದೈತ್ಯರನ್ನೂ ಕ್ರೋಧದಿಂದ ಕೆಂಪಾದ ಕಣ್ಣುಗಳುಳ್ಳ ಯಕ್ಷರನ್ನೂ ಮತ್ತು ಮಹಾಪೌರುಷವುಳ್ಳ ರಾಕ್ಷಸರನ್ನೂ ಸಂಹರಿಸಿ, ಪಾಂಚಾಲಕುಮಾರಿಯಾದ ದ್ರೌಪದಿಗೆ ಅನೇಕ ಪದ್ಮಪುಷ್ಪಗಳನ್ನು ತಂದುಕೊಟ್ಟಿದ್ದೀಯೆ.

ಬಕಂ ರಾಕ್ಷಸರಾಜಾನಂ ಭೀಷಣಂ ಪುರುಷಾದಕಮ್ ।
ಜಘ್ನಿವಾನಸಿ ಕೌಂತೇಯ ಬ್ರಾಹ್ಮಣಾರ್ಥಮರಿಂದಮ ॥೪॥

ಕ್ಷೇಮಾ ಚಾಭಯಸಂವೀತಾ ಹ್ಯೇಕಚಕ್ರಾ ತ್ವಯಾ ಕೃತಾ ॥೫॥

ಎಲೈ ಕೌಂತೇಯನೇ, ಎಲೈ ಅರಿಂದಮನೇ, ಏಕಚಕ್ರನಗರದಲ್ಲಿ ಮಹಾಭಯಂಕರನೂ, ಮನುಷ್ಯ ಭಕ್ಷಕನೂ ಮತ್ತು ರಾಕ್ಷಸರಾಜನೂ ಆದ ಬಕಾಸುರನನ್ನು ಬ್ರಾಹ್ಮಣರ ಹಿತಕ್ಕಾಗಿ ಸಂಹರಿಸಿ ಏಕಚಕ್ರನಗರಕ್ಕೆ ಕ್ಷೇಮವನ್ನು ಮತ್ತು ಅಭಯವನ್ನು ಉಂಟುಮಾಡಿದ್ದೀಯೆ.

ಹಿಡಿಂಬಂ ಚ ಮಹಾವೀರ್ಯಂ ಕಿಮ್ಮೀರಂ ಚಾತಿಪೌರುಷಮ್ ।
ತ್ವಯಾ ಹತ್ವಾ ಮಹಾಬಾಹೋ ವನಂ ನಿಷ್ಕಂಟಕಂ ಕೃತಮ್ ॥೬॥

ಎಲೈ ಮಹಾಬಾಹುವೇ, ಮಹಾಬಲಶಾಲಿಯೂ ಮತ್ತು ಮಹಾಪೌರುಷವುಳ್ಳವನೂ ಆದ ಹಿಡಿಂಬ ಮತ್ತು ಕಿಮ್ಮೀರರನ್ನು ಕೊಂದು ವನವನ್ನು ನಿಷ್ಕಂಟಕವನ್ನಾಗಿ ಮಾಡಿದ್ದೀಯೆ.

ಆಪದಂ ಚಾಪಿ ಸಂಪ್ರಾಪ್ತಾ ದ್ರೌಪದೀ ಚಾರುಹಾಸಿನೀ ।
ಜಟಾಸುರವಧಂ ಕೃತ್ವಾ ತ್ವಯಾ ಚ ಪರಿಮೋಕ್ಷಿತಾ ॥೭॥

ಚಾರುಹಾಸಿನಿಯಾದ ದ್ರೌಪದಿಯು ಜಟಾಸುರನಿಂದ ಆಪತ್ತಿಗೆ ಒಳಗಾಗುತ್ತಿರಲು ಅವನನ್ನು ಸಂಹರಿಸಿ ದ್ರೌಪದಿಯನ್ನು ಬಿಡಿಸಿದ್ದೀಯೆ.

ಮತ್ಸ್ಯರಾಜಾಂತಿಕೇ ತಾತ ವೀರ್ಯಪೂರ್ಣೋಽತ್ಯಮರ್ಷಣಃ ।
ವೃಕೋದರ ವಿರಾಟಸ್ಯ ಬಲವಾನಬಲೀಯಸಃ ॥೮॥

ಸಮೀಪೇ ನಗರೇ ತಸ್ಯ ರಂಸ್ಯತೇ ಕೇನ ಕರ್ಮಣಾ ॥೯॥

ಮನ್ಯೇ ನಿವಾಸಂ ಭೀಮಸ್ಯ ದುಷ್ಕರಂ ತಸ್ಯ ಭೂಪತೇಃ ॥೧೦॥

ಪ್ರೀತಿಪಾತ್ರನೇ, ನೀನು ವೀರ್ಯಪೂರ್ಣನೂ, ಬಹಳ ಕ್ರೋಧಶೀಲನೂ ಮತ್ತು ಬಲಿಷ್ಠನೂ ಆಗಿದ್ದೀಯೆ. ಅಂತಹ ನೀನು ದುರ್ಬಲನಾದ ಮತ್ಸ್ಯರಾಜನಾದ ವಿರಾಟನ ಸಮೀಪದಲ್ಲಿ ಅವನ ಪಟ್ಟಣದಲ್ಲಿ ಯಾವ ಕಾರ್ಯವನ್ನು ಮಾಡಿ ಸಂತೋಷಪಡುತ್ತೀಯೆ? ಆ ರಾಜನ ಸಮೀಪದಲ್ಲಿ ಭೀಮಸೇನನ ವಾಸವು ಕಷ್ಟಕರವಾದುದೆಂದು ನನಗೆ ತೋರುತ್ತದೆ.

ಭೀಮಃ

ಪೌರೋಗವೋ ಬ್ರುವಾಣೋಽಹಂ ವಲಲೋ ನಾಮ ಭಾರತ ।
ಉಪಸ್ಥಾಸ್ಯಾಮಿ ರಾಜಾನಂ ವಿರಾಟಮಿತಿ ರೋಚಯೇ ॥೧೧॥

ಭೀಮ– ಎಲೈ ಭಾರತನೇ, ನಾನು ವಲಲನೆಂಬ ಬಾಣಸಿಗ ಅಧ್ಯಕ್ಷನೆಂದು ಹೇಳಿಕೊಳ್ಳುತ್ತಾ ವಿರಾಟನ ಸಮೀಪದಲ್ಲಿ ಅವನ ಕಾರ್ಯವನ್ನು ಮಾಡುವೆನು.

ರಸಾನ್ ನಾನಾವಿಧಾಂಶ್ಚಾಪಿ ಸ್ವಾದೂನ್ ಸುಮಧುರಾಂಸ್ತದಾ ।
ಸೂಪಾಂಶ್ಚಾಪಿ ಕರಿಷ್ಯಾಮಿ ಕುಶಲೋಽಸ್ಮಿ ಮಹಾನಸೇ ॥೧೨॥

ಅನೇಕ ವಿಧವಾದ ರುಚಿಕರವಾದ ಮಧುರವಾದ ರಸಗಳನ್ನು ಮತ್ತು ಸೂಪಗಳನ್ನು ಮಾಡುವೆನು. ನಾನು ಅಡಿಗೆಯ ಮನೆ ಕೆಲಸದಲ್ಲಿ ನಿಪುಣನಾಗಿದ್ದೇನೆ.

ಪೂರ್ವಮಪ್ಯಾಶಿತಾಂಸ್ತೇನ ಕರ್ತಾಸ್ಮಿ ಸುಗುಣಾನ್ವಿತಾನ್ ।
ಸ್ವಾದು ವ್ಯಂಜನಮಾಸ್ವಾದ್ಯ ಮನ್ಯೇ ಪ್ರೀತೋ ಭವಿಷ್ಯತಿ ॥೧೩॥

ಅವನು ಹಿಂದೆ ಎಂದೂ ಸೇವಿಸದಂತಹ ರುಚಿಕರವಾದ ಗುಣಾನ್ವಿತವಾದ ವ್ಯಂಜನಗಳನ್ನು ಮಾಡುವವನಾಗುತ್ತೇನೆ. ಅವುಗಳ ಸವಿಯನ್ನು ನೋಡಿ ವಿರಾಟನು ಸಂತೋಷಗೊಳ್ಳುವನು ಎಂದು ಭಾವಿಸುತ್ತೇನೆ.

ಆಹರಿಷ್ಯಾಮಿ ದಾರೂಣಾಂ ಪಾಟಿತಾನಾಂ ಶತಂ ಶತಮ್ ।
ರಾಜಾ ಕರ್ಮಾಣಿ ಮೇ ದೃಷ್ಟ್ವಾ ನ ಮಾಂ ಪರಿಭವಿಷ್ಯತಿ ॥೧೪॥

ಒಡೆದ ಸೌದೆಗಳ ನೂರು ನೂರರ ಕಟ್ಟನ್ನು ಹೊತ್ತು ತರುವೆನು. ನನ್ನ ಕಾರ್ಯವನ್ನು ನೋಡುವ ರಾಜನು ನನ್ನನ್ನು ಅವಮಾನಗೊಳಿಸುವುದಿಲ್ಲ.

ಯೇ ಚ ತಸ್ಯ ಮಹಾಮಲ್ಲಾಃ ಸಮರೇಷ್ವಪರಾಜಿತಾಃ ।
ಕೃತಪ್ರತಾಪಾ ಬಹುಶೋ ರಾಜ್ಞಃ ಪ್ರತ್ಯಾಯಿಕಾ ಬಲೇ ॥೧೫॥

ರಾಜೋಪಜೀವಿನಃ ಸರ್ವೇ ಪರೇಷಾಂ ಚ ಭಯಾವಹಾಃ ।
ಸರ್ವಾಂಸ್ತಾನ್ ನಿಹನಿಷ್ಯಾಮಿ ರತಿಂ ರಾಜ್ಞಃ ಪ್ರವರ್ಧಯನ್ ॥೧೬॥

ಮಲ್ಲಯುದ್ಧದಲ್ಲಿ ಅಪರಾಜಿತರಾದ, ಅನೇಕ ಬಾರಿ ತಮ್ಮ ಪ್ರತಾಪವನ್ನು ತೋರಿಸಿರುವ, ರಾಜನಿಗೆ ಪ್ರೀತಿಪಾತ್ರರಾದ ಉಳಿದ ಮಲ್ಲರಿಗೆ ಭಯವನ್ನು ಉಂಟುಮಾಡುವ ಎಲ್ಲಾ ಮಹಾಮಲ್ಲರನ್ನೂ ಉರುಳಿಸಿ ರಾಜನಿಗೆ ಸಂತೋಷವನ್ನು ಉಂಟುಮಾಡುತ್ತೇನೆ.

ನ ಚ ತಾನ್ ಯುಧ್ಯಮಾನೋಽಹಂ ನಯಿಷ್ಯೇ ಯಮಸಾದನಮ್ ।
ತಥಾ ತಾನ್ ನಿಹನಿಷ್ಯಾಮಿ ಜೀವಿಷ್ಯಂತಿ ಯಥಾऽऽತುರಾಃ ॥೧೭॥

ಹಾಗೆ ಮಲ್ಲಯುದ್ಧವನ್ನು ಮಾಡುತ್ತಾ ನಾನು ಅವರನ್ನು ಯಮಲೋಕಕ್ಕೆ ಕಳುಹಿಸುವುದಿಲ್ಲ. ಅವರು ದುರ್ಬಲರಾಗಿ ಬದುಕಿರುವ ಹಾಗೆ ಮಾಡುವೆನು.

ವೃಷೋ ವಾ ಮಹಿಷೋ ವಾऽಪಿ ನಾಗೋ ವಾ ಷಷ್ಟಿಹಾಯನಃ ।
ಸಿಂಹೋ ವ್ಯಾಘ್ರೋ ಯದಾ ಚಾನ್ಯೋ ಗ್ರಹೀತವ್ಯೋ ಭವಿಷ್ಯತಿ ॥೧೮॥

ತಾನ್ ಸರ್ವಾನ್ ದುರ್ಗ್ರಹಾನನ್ಯೈರಾಶೀವಿಷವಿಷೋಪಮಾನ್ ।
ಬಲಾದಹಂ ಗ್ರಹೀಷ್ಯಾಮಿ ಮತ್ಸ್ಯರಾಜಸ್ಯ ಪಶ್ಯತಃ ॥೧೯॥

ಗೂಳಿಯಾಗಲಿ ಅಥವಾ ಕೋಣವಾಗಲಿ ಅಥವಾ ಆರವತ್ತು ವರ್ಷ ವಯಸ್ಸಿನ ಆನೆಯಾಗಲಿ, ಸಿಂಹವಾಗಲಿ ಅಥವಾ ವ್ಯಾಘ್ರವಾಗಲಿ ಅಥವಾ ಬೇರೆ ಯಾವುದೇ ಪ್ರಾಣಿಯಾಗಲಿ ಹಿಡಿಯಬೇಕಾಗಿ ಬಂದಾಗ ವಿಷಸರ್ಪದಂತೆ ಹಿಡಿಯಲು ಅಸಾಧ್ಯವಾದ ಅವೆಲ್ಲವನ್ನೂ ಮತ್ಸ್ಯರಾಜನ ಕಣ್ಣೆದುರಿಗೆ ನಾನು ನನ್ನ ಬಲದಿಂದ ಹಿಡಿಯುವೆನು.

ಆರಾಳಿಕಾ ವಾ ಸೂದಾ ವಾ ಯೇऽಸ್ಯ ಯುಕ್ತಾ ಮಹಾನಸೇ ।
ತಾನಹಂ ಪ್ರೀಣಯಿಷ್ಯಾಮಿ ಮಾನುಷಾನ್ ಸ್ವೇನ ಕರ್ಮಣಾ ॥೨೦॥

ಅವನ ಅಡುಗೆಯ ಮನೆಯಲ್ಲಿರುವ ಅನ್ನವನ್ನು ಮಾಡುವವರೂ, ಕ್ಷೀರಾದಿ ಪಾಕವನ್ನು ಮಾಡುವವರೂ, ಸೂಪಾದಿಗಳನ್ನು ಮಾಡುವವರೂ ಆದ ಮನುಷ್ಯರನ್ನು ನನ್ನ ಕಾರ್ಯದಿಂದ ಸಂತೋಷಪಡಿಸುವೆನು.

ಆರಾಳಿಕೋ ಗೋವಿಕರ್ತಾ ಸೂಪಕರ್ತಾ ನಿಯೋಧಕಃ ।
ಆಸಂ ಯುಧಿಷ್ಠಿರಸ್ಯಾಹಮಿತಿ ವಕ್ಷ್ಯಾಮಿ ಮಾನುಷಾನ್ ॥೨೧॥

ನಾನು ಹಿಂದೆ ಯುಧಿಷ್ಠಿರನ ಮನೆಯಲ್ಲಿ ಅನ್ನಕರ್ತನೂ, ಸೂಪಕರ್ತನೂ, ಕ್ಷೀರಾದಿ ಪಾಕಕರ್ತನೂ ಮತ್ತು ಕುಸ್ತಿಯನ್ನು ಮಾಡುವವನೂ ಆಗಿದ್ದೆನು ಎಂದು ಆ ಮನುಷ್ಯರಿಗೆ ಹೇಳುವೆನು.

ಇತ್ಯೇವಂ ಮತ್ಪ್ರತಿಜ್ಞಾತಂ ವಿಹರಿಷ್ಯಾಮ್ಯಹಂ ಯಥಾ ।
ವಿರಾಟನಗರೇ ಚಟ್ಟನ್ನೋ ಮತ್ಸ್ಯರಾಜಸಮೀಪತಃ ॥೨೨॥

ಇದು ವಿರಾಟನಗರದಲ್ಲಿ ಮತ್ಸ್ಯರಾಜ್ಯದ ಸಮೀಪದಲ್ಲಿ ಛನ್ನವೇಷವನ್ನು ಧರಿಸಿ ನಾನು ಹೇಗೆ ಇರುತ್ತೇನೆ ಎಂಬ ವಿಷಯದಲ್ಲಿ ನನ್ನ ಅಭಿಪ್ರಾಯ.

ಯುಧಿಷ್ಠಿರಃ

ಅಗ್ನಿರ್ಬ್ರಾಹ್ಮಣರೂಪೇಣ ಪ್ರಚ್ಛನ್ನೋ ಯಮಯಾಚತ ।
ಮಹಾಶನಂ ಬ್ರಾಹ್ಮಣಂ ಮಾಂ ಪ್ರಮುಂಚಾರ್ಜುನ ಖಾಂಡವೇ ॥೨೩॥

ಸಂಶುಶ್ರುವೇ ಚ ಧರ್ಮಾತ್ಮಾ ಯಸ್ತಮರ್ಥಂ ಚಕಾರ ಹ ।
ತಸ್ಮೈ ಬ್ರಾಹ್ಮಣರೂಪಾಯ ಹುತಾಶಾಯ ಮಹಾಯಶಾಃ ॥೨೪॥

ಯುಧಿಷ್ಠಿರ– ಅಗ್ನಿಯು ಬ್ರಾಹ್ಮಣರೂಪವನ್ನು ಧರಿಸಿ ಪ್ರಚ್ಛನ್ನನಾಗಿ ಯಾವ ಅರ್ಜುನನನ್ನು, ಖಾಂಡವವನದಲ್ಲಿ ನಾನು ಬಹಳ ಊಟವನ್ನು ಮಾಡುವ ಬ್ರಾಹ್ಮಣನಾಗಿದ್ದೇನೆ. ನನ್ನನ್ನು ಖಾಂಡವವನದಲ್ಲಿ ಬಿಟ್ಟುಬಿಡು ಎಂದು ಬೇಡಿದಾಗ, ಯಾವ ಧರ್ಮಾತ್ಮನಾದ ಅರ್ಜುನನು ಹಾಗೆಯೇ ಆಗಲಿ ಎಂದು ಪ್ರತಿಜ್ಞೆಯನ್ನು ಮಾಡಿ, ಆ ಬ್ರಾಹ್ಮಣರೂಪನಾದ ಅಗ್ನಿಗೆ ಮಹಾಯಶಸ್ವಿಯಾದ ಅರ್ಜುನನು ಆ ಕಾರ್ಯವನ್ನು ನೆರವೇರಿಸಿದನೋ,

ಯಶ್ಚ ದೇವಾನ್ ಮನುಷ್ಯಾಂಶ್ಚ ಸರ್ವಾಂಶ್ಚೈಕರಥೋऽಜಯತ್ ।
ಸ ಭೀಮಧನ್ವಾ ಶ್ವೇತಾಶ್ವಃ ಪಾಂಡವಃ ಕಿಂ ಕರಿಷ್ಯತಿ ॥೨೫॥

ಯಾವನು ದೇವತೆಗಳನ್ನೂ ಮತ್ತು ಮನುಷ್ಯರೆಲ್ಲರನ್ನೂ ಒಂದೇ ರಥದಲ್ಲಿ ಯುದ್ಧಮಾಡಿ ಜಯಿಸಿದನೋ ಅಂತಹ ಭಯಂಕರ ಧನುಸ್ಸುಳ್ಳವನೂ, ಶ್ವೇತಾಶ್ವನೂ, ಪಾಂಡುಪುತ್ರನೂ ಆದ ಅರ್ಜುನನು ಏನು ಮಾಡುವನು?

ಆಶೀವಿಷಸಮಸ್ಪರ್ಶೋ ನಾಗಾನಾಮಿವ ವಾಸುಕಿಃ ।
ಅಹೀನಾಂ ದೃಷ್ಟಿವಿಷವದ್ ಅಗ್ನಿಸ್ತೇಜಸ್ವಿನಾಮಿವ ॥೨೬॥

ಸಮುದ್ರ ಇವ ಸಿಂಧೂನಾಂ ಶೈಲಾನಾಂ ಹಿಮವಾನಿವ ।
ಮಹೇಂದ್ರ ಇವ ದೇವಾನಾಂ ದಾನವಾನಾಂ ಬಲಿರ್ಯಥಾ ॥೨೭॥

ಸರ್ಪಗಳಲ್ಲಿ ವಾಸುಕಿ ಇದ್ದಂತೆ, ಅಹಿಗಳಲ್ಲಿ ದೃಷ್ಟಿ ವಿಷವುಳ್ಳ ಅಹಿಯಂತೆ, ತೇಜಸ್ವಿಗಳಲ್ಲಿ ಅಗ್ನಿಯಂತೆ ಇರುವವನೂ, ಸರೋವರಗಳಲ್ಲಿ ಸಮುದ್ರದಂತೆ

ಇರುವವನೂ, ಪರ್ವತಗಳಲ್ಲಿ ಹಿಮಾಲಯದಂತೆಯೂ, ದೇವತೆಗಳಲ್ಲಿ ಮಹೇಂದ್ರನಂತೆಯೂ, ದಾನವರಲ್ಲಿ ಬಲಿಯಂತೆಯೂ ಇರುವವನೂ,

ಸುಪ್ರತೀಕೋ ಗಜಾನಾಂ ಚ ಯುಗ್ಯಾನಾಂ ತುರಗೋ ಯಥಾ ।
ಕುಬೇರ ಇವ ಯಕ್ಷಾಣಾಂ ಮೃಗಾಣಾಂ ಕೇಸರೀ ಯಥಾ ॥೨೮॥

ರಾಕ್ಷಸಾನಾಂ ದಶಗ್ರೀವೋ ದೈತ್ಯಾನಾಮಿವ ಶಂಬರಃ ।
ರುದ್ರಾಣಾಮಿವ ಕಾಪಾಲೀ ವಿಷ್ಣುರ್ಬಲವತಾಮಿವ ॥೨೯॥

ಗಜಗಳಲ್ಲಿ ಸುಪ್ರತೀಕದಂತೆಯೂ, ನೊಗಕ್ಕೆ ಹೂಡುವ ಪ್ರಾಣಿಗಳಲ್ಲಿ ಅಶ್ವದಂತೆಯೂ, ಯಕ್ಷರಲ್ಲಿ ಕುಬೇರನಂತೆಯೂ, ಮೃಗಗಳಲ್ಲಿ ಸಿಂಹದಂತೆಯೂ, ರಾಕ್ಷಸರಲ್ಲಿ ರಾವಣನಂತೆಯೂ, ದೈತ್ಯರಲ್ಲಿ ಶಂಬರನಂತೆಯೂ, ರುದ್ರರಲ್ಲಿ ಕಪಾಲಿಯಂತೆಯೂ, ಬಲಿಷ್ಠರಲ್ಲಿ ವಿಷ್ಣುವಿನಂತೆಯೂ ಇರುವವನೂ,

ರೋಷಾಮರ್ಷಸಮಾಯುಕ್ತೋ ಭುಜಂಗಾನಾಂ ಚ ತಕ್ಷಕಃ ।
ವಾಯುವೇಗಬಲೋದ್ಭೂತೋ ಗರುಡಃ ಪತತಾಮಿವ ॥೩೦॥

ತಪತಾಮಿವ ಚಾದಿತ್ಯಃ ಪ್ರಜಾನಾಂ ಬ್ರಾಹ್ಮಣೋ ಯಥಾ ।
ಹ್ರದಾನಾಮಿವ ಪಾತಾಳಂ ಪರ್ಜನ್ಯೋ ನದತಾಮಿವ ॥೩೧॥

ರೋಷಾಮರ್ಷಯುಕ್ತನಾಗಿ ಭುಜಂಗಗಳಲ್ಲಿ ತಕ್ಷಕನಂತೆಯೂ, ವಾಯುವೇಗ ಮತ್ತು ಬಲಗಳನ್ನು ಹೊಂದಿದವನಾಗಿ ಪಕ್ಷಿಗಳಲ್ಲಿ ಗರುಡನಂತೆಯೂ, ಪ್ರಕಾಶಿಸುವವರಲ್ಲಿ ಸೂರ್ಯನಂತೆಯೂ, ಪ್ರಜೆಗಳಲ್ಲಿ ಬ್ರಾಹ್ಮಣನಂತೆಯೂ, ನಿಮ್ನ ಪ್ರದೇಶಗಳಲ್ಲಿ ಪಾತಾಳದಂತೆಯೂ, ಗುಡುಗುವುದರಲ್ಲಿ ಪರ್ಜನ್ಯನಂತೆಯೂ ಇರುವವನೂ (ಆದ ಅರ್ಜುನನು),

ಆಯುಧಾನಾಂ ವರೋ ವಜ್ರಃ ಕಕುದ್ಮಾಂಶ್ಚ ಗವಾಂ ವರಃ ।
ಧೃತರಾಷ್ಟ್ರಶ್ಚ ನಾಗಾನಾಂ ಹಸ್ತಿಪ್ವೈರಾವತೋ ವರಃ ॥೩೨॥

ಪುತ್ರಃ ಪ್ರಿಯಾಣಾಮಧಿಕೋ ಭಾರ್ಯಾ ಚ ಸುಹೃದಾಂ ವರಾ ।
ಗಿರೀಣಾಂ ಪ್ರವರೋ ಮೇರುರ್ದೇವಾನಾಂ ಮಧುಸೂದನಃ ॥೩೩॥

ಗ್ರಹಾಣಾಂ ಪ್ರವರಶ್ಚಂದ್ರಃ ಸರಸಾಂ ಮಾನಸಂ ವರಮ್ ॥೩೪॥

ಆಯುಧಗಳಲ್ಲಿ ವಜ್ರವು ಶ್ರೇಷ್ಠವಾದುದು, ಗೋವುಗಳಲ್ಲಿ ಗೂಳಿಯು ಶ್ರೇಷ್ಠವಾದುದು, ನಾಗಗಳಲ್ಲಿ ಧೃತರಾಷ್ಟ್ರನು ಶ್ರೇಷ್ಠನಾದವನು, ಗಜಗಳಲ್ಲಿ ಐರಾವತವು ಶ್ರೇಷ್ಠವಾದುದು, ಪ್ರಿಯರಲ್ಲಿ ಪುತ್ರನು ಶ್ರೇಷ್ಠನಾದವನು, ಸ್ನೇಹಿತರಲ್ಲಿ ಪತ್ನಿಯು ಶ್ರೇಷ್ಠಳಾದವಳು, ಪರ್ವತಗಳಲ್ಲಿ ಮೇರುವು ಶ್ರೇಷ್ಠವಾದುದು, ದೇವತೆಗಳಲ್ಲಿ ಮಧುಸೂದನನು ಶ್ರೇಷ್ಠನಾದವನು, ಗ್ರಹಗಳಲ್ಲಿ ಚಂದ್ರನು ಶ್ರೇಷ್ಠನಾದವನು, ಸರೋವರಗಳಲ್ಲಿ ಮಾನಸ ಸರೋವರವು ಶ್ರೇಷ್ಠವಾದುದು.

ಯಥೈತಾನಿ ವಿಶಿಷ್ಟಾನಿ ಸ್ವಜಾತ್ಯಾಂ ವೃಕೋದರ ।
ಏವಂ ಯುವಾಂ ಗುಡಾಕೇಶಃ ಶ್ರೇಷ್ಠಃ ಸರ್ವಧನುಷ್ಮತಾಮ್ ॥೩೫॥

ಸೋಯಮಿಂದ್ರಾದನವಮೋ ವಾಸುದೇವಾಚ್ಚ ಭಾರತ ॥೩೬॥

ಎಲೈ ವೃಕೋದರನೇ, ಹೇಗೆ ಇವು ತಮ್ಮ ತಮ್ಮ ಜಾತಿಗಳಲ್ಲಿ ಶ್ರೇಷ್ಠವಾಗಿವೆಯೋ ಹಾಗೆ ಯುವಕನಾದ ಗುಡಾಕೇಶನು ಎಲ್ಲ ಧನುರ್ಧಾರಿಗಳಲ್ಲಿ ಶ್ರೇಷ್ಠನಾದವನು. ಎಲೈ ಭಾರತನೇ, ಅವನು ಇಂದ್ರನಿಗೂ ಮತ್ತು ವಾಸುದೇವನಿಗೂ ಕಡಿಮೆಯಾದವನಲ್ಲ.

ಉಷಿತ್ವಾ ಪಂಚ ವರ್ಷಾಣಿ ಸಹಸ್ರಾಕ್ಷಸ್ಯ ವೇಶ್ಮನಿ ।
ಬ್ರಹ್ಮಚರ್ಯವ್ರತೇ ಯುಕ್ತಃ ಸರ್ವಶಸ್ತ್ರಭೃತಾಂ ವರಃ ॥೩೭॥

ಅವನು ಐದುವರ್ಷಗಳ ಕಾಲ ಇಂದ್ರನ ಮನೆಯಲ್ಲಿದ್ದು ಬ್ರಹ್ಮಚರ್ಯ ವ್ರತವನ್ನು ಧರಿಸಿ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾಗಿದ್ದಾನೆ.

ಅವಾಪ ಚಾಸ್ತ್ರಮಸ್ರಜ್ಞಃ ಸರ್ವಂ ಸರ್ವಜ್ಞಸಮ್ಮತಃ ।
ಕ್ಷಿಪ್ರಂ ಚಾಣು ಚ ಚಿತ್ರಂ ಚ ಧ್ರುವಂ ಚ ವದತಾಂ ವರಃ ॥೩೮॥

ಅನುಜ್ಞಾತಃ ಸುರೇಂದ್ರೇಣ ಪುನಃ ಪ್ರತ್ಯಾಗತೋ ಮಹೀಮ್ ॥೩೯॥

ಅಸ್ತ್ರಜ್ಞನೂ ಮತ್ತು ಸರ್ವಜ್ಞನೆಂದೂ ಎಲ್ಲರಿಗೂ ಸಮ್ಮತನಾದ ಅವನು ಶೀಘ್ರವಾದ, ಸಣ್ಣದಾದ ಮತ್ತು ದೊಡ್ಡದಾದ ಮತ್ತು ವಿಚಿತ್ರವಾದ ಎಲ್ಲಾ ಅಸ್ತ್ರಗಳನ್ನು ಸಂಪಾದಿಸಿದ್ದಾನೆ. ನಿಶ್ಚಯವಾಗಿ ಅವನು ಮಾತನಾಡುವವರಲ್ಲಿ ಶ್ರೇಷ್ಠನಾಗಿದ್ದಾನೆ. ದೇವೇಂದ್ರನ ಅನುಮತಿಯನ್ನು ಪಡೆದು ಅವನು ಪುನಃ ಭೂಮಿಗೆ ಬಂದಿದ್ದಾನೆ.

ಯಸ್ಯ ದೀರ್ಘೌ ಸಮೌ ಬಾಹೂ ಜ್ಯಾಘಾತಕಠಿನತ್ವಚೌ ॥೪೦॥

ದಕ್ಷಿಣೇ ಚೈವ ಸವ್ಯೇ ಚ ಗವಾಮಿವ ಹವಿಷ್ಕೃತೌ ।
ತಲಾಂಗುಲಿತ್ರಾಭ್ಯುಚಿತೌ ನಾಗರಾಜಕರೋಪಮೌ ॥೪೧॥

ಅವನ ಎರಡು ಬಾಹುಗಳು ಸಮವಾಗಿ, ದೀರ್ಘವಾಗಿ ಇದ್ದು ಎದೆಯ ಉಜ್ಜುವಿಕೆಯಿಂದ ಕಠಿಣವಾಗಿವೆ. ಬಲ ಮತ್ತು ಎಡ ಬಾಹುಗಳು ಬಾಣಗಳಿಗೆ ಶತ್ರುರೂಪವಾದ ಹವಿಸ್ಸನ್ನು ಕೊಡುವಂತಹವುಗಳಾಗಿವೆ. ಆನೆಯ ಸೊಂಡಿಲಿನಂತಿರುವ ಕೈಗಳು ಒಳ್ಳೆಯ ಹಸ್ತರಕ್ಷೆಗಳಿಗೆ (ಗ್ಲೌಸ್) ಉಚಿತವಾಗಿವೆ.

ಶ್ಯಾಮೋ ಯುವಾ ಗುಡಾಕೇಶೋ ದರ್ಶನೀಯಶ್ಚ ಪಾಂಡವಃ ।
ಗಾಂಡೀವಧನ್ವಾ ಶ್ವೇತಾಶ್ವಃ ಕಿರೀಟೀ ವಾನರಧ್ವಜಃ ॥೪೨॥

ಶ್ಯಾಮವರ್ಣನೂ, ಯುವಕನೂ, ನಿದ್ದೆಯನ್ನು ಗೆದ್ದವನೂ, ಸುಂದರನೂ, ಗಾಂಡೀವ ಧನುಸ್ಸುಳ್ಳವನೂ, ಶ್ವೇತಾಶ್ವನೂ, ವಾನರಧ್ವಜವುಳ್ಳವನೂ, ಪಾಂಡುಪುತ್ರನೂ ಆದ ಅರ್ಜುನನು,

ಕಿಂರೂಪಧಾರೀ ಕಿಂಕರ್ಮಾ ಕಿಂಚೇಷ್ಟಃ ಕಿಂಪರಾಯಣಃ ।
ಬೀಭತ್ಸುರ್ಭೀಮಧನ್ವಾ ಚ ಕಿಂ ಕರಿಷ್ಯತಿ ಚಾರ್ಜುನಃ ॥೪೩॥

ಕುಂತೀಪುತ್ರೋ ವಿರಾಟಸ್ಯ ರಮತೇ ಕೇನ ಕರ್ಮಣಾ ॥೪೪॥

ಎಂತಹ ರೂಪವನ್ನು ಧರಿಸುತ್ತಾನೆ? ಎಂತಹ ಕರ್ಮವನ್ನು ಮಾಡುತ್ತಾನೆ? ಎಂತಹ ನಡವಳಿಕೆಯನ್ನು ತೋರಿಸುತ್ತಾನೆ? ಏನನ್ನು ಅವಲಂಬಿಸುತ್ತಾನೆ? ಕುಂತೀಪುತ್ರನೂ, ಭಯಂಕರ ಧನುಸ್ಸುಳ್ಳವನೂ, ಬೀಭತ್ಸುವೂ ಆದ ಅರ್ಜುನನು ವಿರಾಟನ ಸಮೀಪದಲ್ಲಿ ಯಾವ ಕರ್ಮವನ್ನು ಮಾಡಿ ವಿಹರಿಸುತ್ತಾನೆ?

ಅರ್ಜುನಃ

ಇಮೌ ಕಿಣಕೃತೌ ಬಾಹೂ ಜ್ಯಾಘಾತಕಠಿನತ್ವಚೌ ।
ನಿತ್ಯಂ ಕಂಚುಕಸಂವೃನ್ನೌ ನಾನ್ಯಥಾ ಗೋಪ್ತುಮುತ್ಸಹೇ ॥೪೫॥

ಅರ್ಜುನ– ಈ ನನ್ನ ಎರಡು ಬಾಹುಗಳು ಜ್ಯಾಘಾತದಿಂದ ಜಡ್ಡುಕಟ್ಟಿವೆ. ಇದನ್ನು ನಾನು ಯಾವಾಗಲೂ ಕಂಚುಕದಿಂದ ಮುಚ್ಚಿಕೊಳ್ಳಬೇಕು. ಬೇರೆಯ ರೀತಿಯಲ್ಲಿ ಅವುಗಳನ್ನು ಮರೆಮಾಡಲು ಸಾಧ್ಯವಿಲ್ಲ.

ಕಿಂತು ಕಾರ್ಯವಶಾದೇತದಾಚರಿಷ್ಯಾಮಿ ಕುತ್ಸಿತಮ್ ।
ಆಖ್ಯಾತಃ ಷಂಡಕೋಽಸ್ಮೀತಿ ಪ್ರತಿಜ್ಞಾತಂ ಹಿ ಪಾಪಕಮ್ ॥೪೬॥

ಆದರೆ ಕಾರ್ಯವಶದಿಂದ ಇಂತಹ ಒಂದು ಹೀನ ಕೆಲಸವನ್ನು ಮಾಡುವೆನು. ನಾನು ಷಂಡನಾದವನು ಎಂದು ಹೇಳಿಕೊಂಡು ಇಂತಹ ಹೀನ ಕೆಲಸವನ್ನು ಮಾಡುತ್ತೇನೆ.

ಬಾಹೂ ಮೇ ಭರತಶ್ರೇಷ್ಠ ಮಹಾವ್ಯಂಜನಲಕ್ಷಿತೌ ।
ಜ್ಯಾಘಾತೌ ಚ ಮಹಾಂತೌ ಮೇ ಸಂವರ್ತುಂ ನೃಪ ದುಷ್ಕರೌ ॥೪೭॥

ಎಲೈ ರಾಜನೇ, ಭರತಶ್ರೇಷ್ಠನೇ, ನನ್ನ ಎರಡು ದೀರ್ಘ ಬಾಹುಗಳು ಒಳ್ಳೆಯ ಲಕ್ಷಣಗಳಿಂದ ಕೂಡಿ ಹೆದೆಯ ಸ್ಪರ್ಶದಿಂದ ಜಡ್ಡುಕಟ್ಟಿವೆ. ಅವುಗಳನ್ನು ಮುಚ್ಚಿಕೊಳ್ಳಲು ಬಹಳ ಕಷ್ಟವಾಗುತ್ತದೆ.

ಉಭೌ ಕಂಚುಕಸಂಛನ್ನೌ ಲಂಬಿನೌ ಜಾನುದೇಶತಃ ।
ವಲಯೈಃ ಛಾದಯಿಷ್ಯಾಮಿ ಬಾಹೂ ಕಿಣಕೃತಾವುಭೌ ॥೪೮॥

ಜಡ್ಡುಕಟ್ಟಿದ ಈ ಎರಡು ಬಾಹುಗಳನ್ನು ಮಂಡಿಯವರೆಗೂ ಇಳಿಬಿದ್ದಿರುವ ಕಂಚುಕದಿಂದ ಮುಚ್ಚಿ ಬಳೆಗಳಿಂದಲೂ ಆಚ್ಛಾದಿಸುವೆನು.

ಉಭೌ ಕಂಬೂ ಸಮಾಯುಜ್ಯ ಕುಂಡಲೇ ಪರಿಪಾತುಕೇ ।
ವೇಣೀಕೃತಶಿರಾ ಭೂತ್ವಾ ಭವಿಷ್ಯಾಮಿ ಬೃಹನ್ನಳಾ ॥೪೯॥

ಎರಡು ಕೈಗಳಲ್ಲಿಯೂ ಶಂಖಗಳಿಂದ ಮಾಡಿದ ಬಳೆಗಳನ್ನು ಧರಿಸಿ, ಕಿವಿಗಳಿಗೆ ಕುಂಡಲಗಳನ್ನು ಹಾಕಿಕೊಂಡು, ತಲೆ ಕೂದಲುಗಳನ್ನು ದೀರ್ಘವಾಗಿ ಮಾಡಿಕೊಂಡು ನಾನು ಬೃಹನ್ನಳೆಯಾಗುವೆನು.

ಪಠನ್ನಾಖ್ಯಾಯಿಕಾಂ ನಾಮ ಸ್ತ್ರೀಭಾವೇನ ಪುನಃ ಪುನಃ ।
ಪ್ರಜಾನಾಂ ಸಮುದಾಚಾರಂ ಬಹು ನರ್ಮಕೃತಂ ವದನ್ ॥೫೦॥

ರಮಯಿಷ್ಯಾಮಿ ರಾಜಾನಮನ್ಯಂ ಚಾಂತಃಪುರೇ ಜನಮ್ ॥೫೧॥

ನಾನು ಸ್ತ್ರೀಸ್ವಭಾವಕ್ಕೆ ಅನುಗುಣವಾಗಿ ಅನೇಕ ಕಥೆಗಳನ್ನು ಮತ್ತೆ ಮತ್ತೆ ಹೇಳುತ್ತಾ, ಪ್ರಜೆಗಳ ಆಚರಣೆಗಳನ್ನು ಬಹಳ ವಿನೋದವುಂಟಾಗುವಂತೆ ಹೇಳುತ್ತಾ ರಾಜನನ್ನು ಮತ್ತು ಉಳಿದ ಅಂತಃಪುರದ ಜನರನ್ನು ಸಂತೋಷಪಡಿಸುವೆನು.

ನೃತ್ತಂ ಗೀತಂ ಚ ವಾದಿತ್ರಂ ದಿವ್ಯಂ ಚ ವಿವಿಧಂ ತಥಾ ।
ಶಿಕ್ಷಯಿಷ್ಯಾಮ್ಯಹಂ ರಾಜನ್ ವಿರಾಟನಗರೇ ಸ್ತ್ರಿಯಃ ॥೫೨॥

ಎಲೈ ರಾಜನೇ, ನಾನು ವಿರಾಟನಗರದಲ್ಲಿ ಸ್ತ್ರೀಯರಿಗೆ ನೃತ್ಯವನ್ನೂ, ಗೀತವನ್ನೂ ಮತ್ತು ದಿವ್ಯವಾದ ವಿವಿಧವಾದ ವಾದ್ಯಗಳನ್ನೂ ಕಲಿಸುವೆನು.

ಸ್ತ್ರೀಭಾವಸಮುದಾಚಾರಾನ್ ನೃತ್ತಗೀತಕಥಾಶ್ರಯೈಃ ।
ಛಾದಯಿಷ್ಯಾಮಿ ರಾಜೇಂದ್ರ ಮಾಯಯಾऽऽತ್ಮಾನಮಾತ್ಮನಾ ॥೫೩॥

ಎಲೈ ರಾಜೇಂದ್ರನೇ, ನಾನು ನೃತ್ಯ , ಗೀತ ಮತ್ತು ಕಥೆಗಳಿಂದ ಸ್ತ್ರೀಯರ ಸ್ವಭಾವ ಮತ್ತು ಆಚಾರಗಳನ್ನು ಬಿಂಬಿಸುತ್ತಾ, ನನ್ನ ಸಾಮರ್ಥ್ಯದಿಂದ ನನ್ನನ್ನು ನಾನೇ ಆಚ್ಛಾದನೆ ಮಾಡಿಕೊಳ್ಳುವೆನು.

ಯುಧಿಷ್ಠಿರಸ್ಯ ಗೇಹೇऽಸ್ಮಿನ್ ದ್ರೌಪದೀಪರಿಚಾರಿಕಾ ।
ಉಷಿತಾऽಸ್ಮೀತಿ ವಕ್ಷ್ಯಾಮಿ ಧರ್ಮರಾಜಸ್ಯ ಸಮ್ಮತಾ ॥೫೪॥

ನಾನು ಧರ್ಮರಾಜನ ಮನೆಯಲ್ಲಿ ಧರ್ಮರಾಜನಿಗೆ ಸಮ್ಮತಳಾದ ದ್ರೌಪದಿಯ ಪರಿಚಾರಿಕೆಯಾಗಿ ವಾಸಮಾಡುತ್ತಿದ್ದೆನೆಂದು ಹೇಳುವೆನು.

ಉರ್ವಶ್ಯಾ ಅಪಿ ಶಾಪೇನ ಪ್ರಾಪ್ತೋऽಸ್ಮಿ ನೃಪ ಪಂಡತಾಮ್ ।
ಶಕ್ರಪ್ರಸಾದಾನ್ಮುಕ್ತೋऽಹಂ ವರ್ಷಾಣಾಂ ತತ್ತ್ರಯೋದಶಮ್ ॥೫೫॥

ಏತೇನ ವಿಧಿನಾ ಚ್ಛನ್ನಃ ಕೃತಕೇನ ಯಥಾಬಲಮ್ ।
ವಿಹರಿಷ್ಯಾಮಿ ರಾಜೇಂದ್ರ ವಿರಾಟನಗರೇ ಸುಖಮ್ ॥೫೬॥

ಅರ್ಜುನ– ಈ ನನ್ನ ಎರಡು ಬಾಹುಗಳು ಜ್ಯಾಘಾತದಿಂದ ಜಡ್ಡುಕಟ್ಟಿವೆ. ಇದನ್ನು ನಾನು ಯಾವಾಗಲೂ ಕಂಚುಕದಿಂದ ಮುಚ್ಚಿಕೊಳ್ಳಬೇಕು. ಬೇರೆಯ ರೀತಿಯಲ್ಲಿ ಅವುಗಳನ್ನು ಮರೆಮಾಡಲು ಸಾಧ್ಯವಿಲ್ಲ.

ಕಿಂತು ಕಾರ್ಯವಶಾದೇತದಾಚರಿಷ್ಯಾಮಿ ಕುತ್ಸಿತಮ್ ।
ಆಖ್ಯಾತಃ ಷಂಡಕೋಽಸ್ಮೀತಿ ಪ್ರತಿಜ್ಞಾತಂ ಹಿ ಪಾಪಕಮ್ ॥೪೬॥

ಆದರೆ ಕಾರ್ಯವಶದಿಂದ ಇಂತಹ ಒಂದು ಹೀನ ಕೆಲಸವನ್ನು ಮಾಡುವೆನು. ನಾನು ಷಂಡನಾದವನು ಎಂದು ಹೇಳಿಕೊಂಡು ಇಂತಹ ಹೀನ ಕೆಲಸವನ್ನು ಮಾಡುತ್ತೇನೆ.

ಬಾಹೂ ಮೇ ಭರತಶ್ರೇಷ್ಠ ಮಹಾವ್ಯಂಜನಲಕ್ಷಿತೌ ।
ಜ್ಯಾಘಾತೌ ಚ ಮಹಾಂತೌ ಮೇ ಸಂವರ್ತಂ ನೃಪ ದುಷ್ಕರೌ ॥೪೭॥

ಎಲೈ ರಾಜನೇ, ಭರತಶ್ರೇಷ್ಠನೇ, ನನ್ನ ಎರಡು ದೀರ್ಘ ಬಾಹುಗಳು ಒಳ್ಳೆಯ ಲಕ್ಷಣಗಳಿಂದ ಕೂಡಿ ಹೆದೆಯ ಸ್ಪರ್ಶದಿಂದ ಜಡ್ಡುಕಟ್ಟಿವೆ. ಅವುಗಳನ್ನು ಮುಚ್ಚಿಕೊಳ್ಳಲು ಬಹಳ ಕಷ್ಟವಾಗುತ್ತದೆ.

ಉಭೌ ಕಂಚುಕಸಂಛನ್ನೌ ಲಂಬಿನೌ ಜಾನುದೇಶತಃ ।
ವಲಯೈಃ ಛಾದಯಿಷ್ಯಾಮಿ ಬಾಹೂ ಕಿಣಕೃತಾವುಭೌ ॥೪೮॥

ಜಡ್ಡುಕಟ್ಟಿದ ಈ ಎರಡು ಬಾಹುಗಳನ್ನು ಮಂಡಿಯವರೆಗೂ ಇಳಿಬಿದ್ದಿರುವ ಕಂಚುಕದಿಂದ ಮುಚ್ಚಿ ಬಳೆಗಳಿಂದಲೂ ಆಚ್ಛಾದಿಸುವೆನು.

ಉಭೌ ಕಂಬೂ ಸಮಾಯುಜ್ಯ ಕುಂಡಲೇ ಪರಿಪಾತುಕೇ ।
ವೇಣೀಕೃತಶಿರಾ ಭೂತ್ವಾ ಭವಿಷ್ಯಾಮಿ ಬೃಹನ್ನಳಾ ॥೪೯॥

ಎರಡು ಕೈಗಳಲ್ಲಿಯೂ ಶಂಖಗಳಿಂದ ಮಾಡಿದ ಬಳೆಗಳನ್ನು ಧರಿಸಿ, ಕಿವಿಗಳಿಗೆ ಕುಂಡಲಗಳನ್ನು ಹಾಕಿಕೊಂಡು, ತಲೆ ಕೂದಲುಗಳನ್ನು ದೀರ್ಘವಾಗಿ ಮಾಡಿಕೊಂಡು ನಾನು ಬೃಹನ್ನಳೆಯಾಗುವೆನು.

ಪಠನ್ನಾಖ್ಯಾಯಿಕಾಂ ನಾಮ ಸ್ತ್ರೀಭಾವೇನ ಪುನಃ ಪುನಃ ।
ಪ್ರಜಾನಾಂ ಸಮುದಾಚಾರಂ ಬಹು ನರ್ಮಕೃತಂ ವದನ್ ॥೫೦॥

ರಮಯಿಷ್ಯಾಮಿ ರಾಜಾನಮನ್ಯಂ ಚಾಂತಃಪುರೇ ಜನಮ್ ॥೫೧॥

ನಾನು ಸ್ತ್ರೀಸ್ವಭಾವಕ್ಕೆ ಅನುಗುಣವಾಗಿ ಅನೇಕ ಕಥೆಗಳನ್ನು ಮತ್ತೆ ಮತ್ತೆ ಹೇಳುತ್ತಾ, ಪ್ರಜೆಗಳ ಆಚರಣೆಗಳನ್ನು ಬಹಳ ವಿನೋದವುಂಟಾಗುವಂತೆ ಹೇಳುತ್ತಾ ರಾಜನನ್ನು ಮತ್ತು ಉಳಿದ ಅಂತಃಪುರದ ಜನರನ್ನು ಸಂತೋಷಪಡಿಸುವೆನು.

ನೃತ್ತಂ ಗೀತಂ ಚ ವಾದಿತ್ರಂ ದಿವ್ಯಂ ಚ ವಿವಿಧಂ ತಥಾ ।
ಶಿಕ್ಷಯಿಷ್ಯಾಮ್ಯಹಂ ರಾಜನ್ ವಿರಾಟನಗರೇ ಸ್ತ್ರಿಯಃ ॥೫೨॥

ಎಲೈ ರಾಜನೇ, ನಾನು ವಿರಾಟನಗರದಲ್ಲಿ ಸ್ತ್ರೀಯರಿಗೆ ನೃತ್ಯವನ್ನೂ, ಗೀತವನ್ನೂ ಮತ್ತು ದಿವ್ಯವಾದ ವಿವಿಧವಾದ ವಾದ್ಯಗಳನ್ನೂ ಕಲಿಸುವೆನು.

ಸ್ತ್ರೀಭಾವಸಮುದಾಚಾರಾನ್ ನೃತ್ತಗೀತಕಥಾಶ್ರಯೈಃ ।
ಛಾದಯಿಷ್ಯಾಮಿ ರಾಜೇಂದ್ರ ಮಾಯಯಾऽऽತ್ಮಾನಮಾತ್ಮನಾ ॥೫೩॥

ಎಲೈ ರಾಜೇಂದ್ರನೇ, ನಾನು ನೃತ್ಯ , ಗೀತ ಮತ್ತು ಕಥೆಗಳಿಂದ ಸ್ತ್ರೀಯರ ಸ್ವಭಾವ ಮತ್ತು ಆಚಾರಗಳನ್ನು ಬಿಂಬಿಸುತ್ತಾ, ನನ್ನ ಸಾಮರ್ಥ್ಯದಿಂದ ನನ್ನನ್ನು ನಾನೇ ಆಚ್ಛಾದನೆ ಮಾಡಿಕೊಳ್ಳುವೆನು.

ಯುಧಿಷ್ಠಿರಸ್ಯ ಗೇಹೇऽಸ್ಮಿನ್ ದ್ರೌಪದೀಪರಿಚಾರಿಕಾ ।
ಉಷಿತಾऽಸ್ಮೀತಿ ವಕ್ಷ್ಯಾಮಿ ಧರ್ಮರಾಜಸ್ಯ ಸಮ್ಮತಾ ॥೫೪॥

ನಾನು ಧರ್ಮರಾಜನ ಮನೆಯಲ್ಲಿ ಧರ್ಮರಾಜನಿಗೆ ಸಮ್ಮತಳಾದ ದ್ರೌಪದಿಯ ಪರಿಚಾರಿಕೆಯಾಗಿ ವಾಸಮಾಡುತ್ತಿದ್ದೆನೆಂದು ಹೇಳುವೆನು.

ಊರ್ವಶ್ಯಾ ಅಪಿ ಶಾಪೇನ ಪ್ರಾಪ್ತೋऽಸ್ಮಿ ನೃಪ ಷಂಡತಾಮ್ ।
ಶಕ್ರಪ್ರಸಾದಾನ್ಮುಕ್ತೋऽಹಂ ವರ್ಷಾಣಾಂ ತತ್ತ್ರಯೋದಶಮ್ ॥೫೫॥

ಏತೇನ ವಿಧಿನಾ ಚ್ಛನ್ನಃ ಕೃತಕೇನ ಯಥಾಬಲಮ್ ।
ವಿಹರಿಷ್ಯಾಮಿ ರಾಜೇಂದ್ರ ವಿರಾಟನಗರೇ ಸುಖಮ್ ॥೫೬॥

ಎಲೈ ರಾಜನೇ, ಊರ್ವಶಿಯ ಶಾಪದಿಂದ ನಾನು ಷಂಡನಾಗಿದ್ದೇನೆ. ಇಂದ್ರನ ಅನುಗ್ರಹದಿಂದ ನಾನು ಶಾಪದಿಂದ ನಿರ್ಮುಕ್ತನಾದೆ. ಆದ್ದರಿಂದ ಎಲೈ ರಾಜೇಂದ್ರನೇ, ಈ ಹದಿಮೂರನೆಯ ವರ್ಷವನ್ನು ಈ ರೀತಿಯಾಗಿ ಒಂದು ಕೃತಕವೇಷವನ್ನು ಧರಿಸಿ ವಿರಾಟನಗರದಲ್ಲಿ ನನ್ನ ಶಕ್ತಿ ಇದ್ದಷ್ಟು ಸುಖವಾಗಿ ವಿಹರಿಸುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ತೃತೀಯೋಽಧ್ಯಾಯಃ ॥
॥ ವೈರಾಟಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ನಕುಲ ಸಹದೇವರಿಂದ ಅಶ್ವಪಾಲ ಮತ್ತು ಗೋಪಾಲವೇಷಗಳ ಧಾರಣಕಥನ ಮತ್ತು ದ್ರೌಪದಿಯಿಂದ ಸೈರಂಧ್ರೀವೇಷಗ್ರಹಣಕಥನ.

ಯುಧಿಷ್ಠಿರಃ

ಕಿಂಕರ್ತಾ ಕಿಂಸಮಾಚಾರೋ ನಕುಲೋಽಯಂ ಭವಿಷ್ಯತಿ ।
ಸುಕುಮಾರಶ್ಚ ಶೂರಶ್ಚ ದರ್ಶನೀಯಃ ಸುಖೈಧಿತಃ ॥೧॥

ಅದುಃಖಾರ್ಹಶ್ಚ ಬಾಲಶ್ಚ ಲಾಲಿತಶ್ಚಾಪಿ ನಿತ್ಯಶಃ ।
ಸೋಽಯಮಾರ್ತಶ್ಚ ಶಾಂತಶ್ಚ ಕಿಂ ನು ರೋಚಯಿತಾ ತ್ವಿಹ ॥೨॥

ಯುಧಿಷ್ಠಿರ– ಸುಕುಮಾರನೂ, ಶೂರನೂ, ಸುಂದರನೂ, ಸುಖವಾಗಿ ಬೆಳೆದ ಈ ನಕುಲನು ಯಾವ ಕಾರ್ಯವನ್ನು ಮತ್ತು ಯಾವ ಆಚಾರವನ್ನು ಮಾಡುವನು? ಅವನು ಚಿಕ್ಕವನೂ, ದುಃಖಕ್ಕೆ ಯೋಗ್ಯನಲ್ಲದವನೂ, ನಿತ್ಯವೂ ಪ್ರೀತಿಯಿಂದ ಲಾಲಿತನೂ ಆದವನು. ಅಂತಹ ಅವನು ಈಗ ಆರ್ತನೂ, ಶಾಂತನೂ ಆಗಿ ಏನನ್ನು ಮಾಡಲು ಬಯಸುವನು?

ನಕುಲಃ

ಅಶ್ವಾಧ್ಯಕ್ಷೋ ಭವಿಷ್ಯಾಮಿ ವಿರಾಟಸ್ಯೇತಿ ಮೇ ಮತಿಃ ।
ದಾಮಗ್ರಂಥೀತಿ ನಾಮ್ನಾಽಹಂ ಕರ್ಮೈತತ್ ಸುಪ್ರಿಯಂ ಮಮ ॥೩॥

ದಾಮಗ್ರಂಥೀ ಪರಿಜ್ಞಾತಾ ಕುಶಲೋ ದಾಮಕರ್ಮಣಿ ॥೪॥

ನಕುಲ– ನಾನು ವಿರಾಟನ ಅಶ್ವಾಧ್ಯಕ್ಷನಾಗುವೆನು ಎಂದು ನನ್ನ ಅಭಿಪ್ರಾಯ. ದಾಮಗ್ರಂಥಿ ಎಂಬ ಹೆಸರನ್ನು ಇಟ್ಟುಕೊಂಡು ಎಲ್ಲರಿಂದಲೂ ಹಾಗೆಯೇ ತಿಳಿಯಲ್ಪಟ್ಟವನಾಗಿ ಅಶ್ವಗಳ ಕಾರ್ಯಗಳಲ್ಲಿ ಕುಶಲನಾಗಿರುವೆನು. ಈ ಕಾರ್ಯವು ನನಗೆ ಬಹಳ ಪ್ರಿಯವಾದುದು.

ಕುಶಲೋಸ್ಮ್ಯಶ್ವಶಿಕ್ಷಾಯಾಂ ತಥೈವಾಶ್ವಚಿಕಿತ್ಸಿತೇ ।
ಅಶ್ವಾನ್ ಪರಿಭವಿಷ್ಯಂತಿ ವಡವಾ ಜಾತು ನ ಕ್ವಚಿತ್ ।
ಪ್ರಿಯಾಶ್ಚ ಸತತಂ ಮೇಽಶ್ವಾಃ ಕುರುರಾಜ ಯಥಾ ತವ ॥೫॥

ನಾನು ಅಶ್ವಶಿಕ್ಷೆಯಲ್ಲಿಯೂ ಮತ್ತು ಅಶ್ವಗಳ ಚಿಕಿತ್ಸೆಯಲ್ಲಿಯೂ ಪರಿಣತನಾದವನು. ಎಲೈ ಕುರುರಾಜನೇ, ನಿನಗೆ ಅಶ್ವಗಳು ಪ್ರಿಯವಾದಂತೆ ನನಗೂ ಅಶ್ವಗಳು ಸತತವಾಗಿ ಪ್ರಿಯವಾದವುಗಳು. ನಾನು ಸಾಕಿದ ಹೆಣ್ಣು ಕುದುರೆಗಳು ಗಂಡು ಕುದುರೆಗಳ ಮೇಲೆ ಎಂದೂ ಆಕ್ರಮಣ ಮಾಡುವುದಿಲ್ಲ.

ನ ಮಾಂ ಪರಿಹರಿಷ್ಯಂತಿ ಕಿಶೋರಾ ವಡವಾಸ್ತಥಾ ।
ನ ಧೃಷ್ಟಾಶ್ಚ ಭವಿಷ್ಯಂತಿ ಪೃಷ್ಠೇ ಧುರಿ ಚ ಮದ್ಗತಾಃ ॥೬॥

ಸಣ್ಣ ಕುದುರೆಗಳಾಗಲೀ ಅಥವಾ ಹೆಣ್ಣು ಕುದುರೆಗಳಾಗಲೀ ನನ್ನಿಂದ ದೂರ ಹೋಗುವುದಿಲ್ಲ. ನನ್ನ ವಶದಲ್ಲಿರುವ ಕುದುರೆಗಳು ಸವಾರಿಯಲ್ಲಿಯೂ ಮತ್ತು ನೊಗದಲ್ಲಿಯೂ ದುಷ್ಟಗಳಾಗುವುದಿಲ್ಲ.

ಪ್ರೇಕ್ಷಂತೇ ಯೇ ಚ ಮಾಂ ಕೇಚಿದ್ ವಿರಾಟನಗರೇ ಜನಾಃ ।
ತೇಭ್ಯ ಏವಂ ಪ್ರವಕ್ಷ್ಯಾಮಿ ವಿಚರಿಷ್ಯಾಮ್ಯಹಂ ಸುಖಮ್ ॥೭॥

ವಿರಾಟನಗರದಲ್ಲಿ ಯಾವ ಜನರು ನನ್ನನ್ನು ನೋಡುತ್ತಾರೋ ಅವರಿಗೆ ಹೀಗೆ ಹೇಳುತ್ತಾ ಸುಖವಾಗಿ ಸಂಚರಿಸುವೆನು.

ನಕುಲೇನೈವಮುಕ್ತಸ್ತು ಧರ್ಮರಾಜೋಽಬ್ರವೀದ್ ವಚಃ ॥೮॥

ಬೃಹಸ್ಪತಿಸಮೋ ಬುದ್ಧ್ಯಾ ನಯೇ ಚೋಶನಸಾ ಸಮಃ ।
ಮಂತ್ರೈರ್ನಾನಾವಿಧೈರ್ನೀತಃ ಪಥ್ಯೈಃ ಸುಪರಿನಿಷ್ಠಿತಃ ॥೯॥

ನಕುಲನಿಂದ ಹೀಗೆ ಹೇಳಲ್ಪಟ್ಟ ಧರ್ಮರಾಜನು ಹೀಗೆ ಮಾತನಾಡಿದನು– 'ಬುದ್ಧಿಯಲ್ಲಿ ಬೃಹಸ್ಪತಿಗೆ ಸಮನಾದವನೂ, ನೀತಿಯಲ್ಲಿ ಶುಕ್ರನಿಗೆ ಸಮನಾದವನೂ, ನಾನಾ ವಿಧವಾದ ಹಿತವಾದ ಮಂತ್ರಗಳಲ್ಲಿ (ಮಂತ್ರಾಲೋಚನೆಯಲ್ಲಿ) ಪರಿಣತನಾಗಿ ಪಳಗಿದವನೂ,

ಸುಪ್ರಣೀತೈಃ ಸುಮಾರ್ಗಸ್ಥೋ ರಾಜತಂತ್ರಮಪಾಲಯತ್ ॥೧೦॥

ತಥಾ ಸಜ್ವಲಿತಂ ಕಿಂಚಿದ್ ದದೃಶುಸ್ತದ್ವಿದೋ ಜನಾಃ ।
ಸುನೀತಿಮಾಯೀ ಸುಶೂರಶ್ಚ ಸರ್ವಮಂತ್ರವಿಶಾರದಃ ॥೧೧॥

ಚೆನ್ನಾಗಿ ಪ್ರಯೋಗಿಸಲ್ಪಟ್ಟ ರಾಜತಂತ್ರಗಳನ್ನು ಸನ್ಮಾರ್ಗದಲ್ಲಿದ್ದು ಪಾಲಿಸುವವನೂ, ಎಲ್ಲ ಮಾಯಿಗಳನ್ನೂ ಒಳ್ಳೆಯ ಮಾರ್ಗಕ್ಕೆ ತರುವವನೂ, ಶೂರನೂ, ಸರ್ವಮಂತ್ರ ವಿಶಾರದನೂ, ಜನರ ಕಣ್ಣಿಗೆ ಯಾವಾಗಲೂ ಅಧಿಕನಾಗಿ ಕಾಣುವವನೂ,

ಅಧಿಕಂ ಮಾತುರಸ್ಮಾಕಂ ಕುಂತ್ಯಾಃ ಪ್ರಿಯತರಃ ಸದಾ ।
ಸಹದೇವ ಕಥಂ ಕರ್ಮ ತಸ್ಯ ರಾಷ್ಟ್ರೇ ಕರಿಷ್ಯತಿ ॥೧೨॥

ಕಿಂ ವಾ ತ್ವಂ ತಾತ ಕುರ್ವಾಣಃ ಪ್ರಚ್ಛನ್ನೋ ವಿಚರಿಷ್ಯಸಿ ॥೧೩॥

ನಮ್ಮ ತಾಯಿಯಾದ ಕುಂತಿಗೆ ಯಾವಾಗಲೂ ಬಹಳವಾಗಿ ಪ್ರಿಯನಾದವನೂ ಆದ ಸಹದೇವನು ವಿರಾಟನ ರಾಷ್ಟ್ರದಲ್ಲಿ ಹೇಗೆ ಕಾರ್ಯವನ್ನು ಮಾಡುವನು? ಪ್ರೀತಿಪಾತ್ರನೇ, ಯಾವ ಕರ್ಮವನ್ನು ಮಾಡಿ ನೀನು ಪ್ರಚ್ಛನ್ನನಾಗಿ ಸಂಚರಿಸುವಿ?'

ಸಹದೇವಃ

ಗೋಸಂಖ್ಯಾತಾ ಭವಿಷ್ಯಾಮಿ ವಿರಾಟಸ್ಯೇತಿ ರೋಚಯೇ ॥೧೪॥

ಪ್ರತಿಮೋಕ್ತಾ ಚ ದೋಗ್ಧಾ ಚ ಸಂಖ್ಯಾನಕುಶಲೋ ಗವಾಮ್ ।
ತಂತ್ರೀಪಾಲೇತಿ ಮೇ ನಾಮ ಸ್ವಯಂ ಪ್ರೋಕ್ತಂ ಭವಿಷ್ಯತಿ ॥೧೫॥

ಸಹದೇವ– ನಾನು ವಿರಾಟನ ಗೋಗಣನೆ ಮಾಡುವವನಾಗಿ ಇರುವೆನು ಎಂದು ನನ್ನ ಅಭಿಪ್ರಾಯ. ಹಸುಗಳನ್ನು ಬಿಡುವವನೂ, ಹಾಲನ್ನು ಕರೆಯುವವನೂ, ಗೋವುಗಳ ಗಣನೆಯನ್ನು ಮಾಡುವವನೂ ಆದ ನನಗೆ ತಂತ್ರೀಪಾಲನೆಂದು ನಾನೇ ಹೆಸರನ್ನು ಇಟ್ಟುಕೊಳ್ಳುವೆನು.

ಅರೋಗಾ ಬಹುಲಾಃ ಪುಷ್ಟಾಃ ಕ್ಷೀರವತ್ಯೋ ಬಹುಪ್ರಜಾಃ ।
ನಿಷ್ಪನ್ನಸತ್ತ್ವಾಃ ಸುಭೃತಾ ವ್ಯಪೇತಜ್ವರಕಿಲ್ಬಿಷಾಃ ॥೧೬॥

ನಷ್ಟಚೋರಭಯಾ ನಿತ್ಯಂ ವ್ಯಾಧಿವ್ಯಾಪ್ರವಿವರ್ಜಿತಾಃ ।
ಗಾವಶ್ಚ ಸುಸುಖಾ ರಾಜನ್ ನಿರುದ್ವಿಗ್ನಾ ನಿರಾಮಯಾಃ ॥೧೭॥

ಭವಿಷ್ಯಂತಿ ಮಯಾ ಗುಪ್ತಾ ವಿರಾಟಪಶವೋ ನೃಪ ।
ನಿಪುಣಶ್ಚ ಚರಿಷ್ಯಾಮಿ ಪ್ರೀತಿರತ್ರ ಪರಾ ಹಿ ಮೇ ॥೧೮॥

ನನ್ನಿಂದ ರಕ್ಷಿಸಲ್ಪಟ್ಟ ಗೋವುಗಳು ರೋಗರಹಿತವಾಗಿ ಬಹಳವಾಗಿ, ಪುಷ್ಟವಾಗಿ ಹಾಲನ್ನು ಕೊಡುವವುಗಳಾಗಿ, ಅನೇಕ ಕರುಗಳನ್ನು ಉಳ್ಳವುಗಳಾಗಿ, ಬಲಿಷ್ಠವಾಗಿ ಚೆನ್ನಾಗಿ ಸಾಕಲ್ಪಟ್ಟು ಜ್ವರಾದಿ ರೋಗರಹಿತವಾಗಿರುತ್ತವೆ. ಚೋರಭಯವು ಇರುವುದಿಲ್ಲ. ವ್ಯಾಧಿ ಅಥವಾ ವ್ಯಾಪ್ರಗಳ ಭಯವೂ ಇರುವುದಿಲ್ಲ. ಎಲೈ ರಾಜನೇ, ವಿರಾಟನ ಗೋವುಗಳು ಯಾವ ಆತಂಕವೂ ಇಲ್ಲದೆ ರೋಗವೂ ಇಲ್ಲದೇ ನನ್ನ ಬಳಿಯಲ್ಲಿ ಸುಖವಾಗಿ ಇರುತ್ತವೆ. ಎಲೈ ರಾಜನೇ, ನಾನು ಈ ಕೆಲಸವನ್ನು ನಿಪುಣತೆಯಿಂದ ಮಾಡುವೆನು. ಇದರಲ್ಲಿ ನನಗೆ ಬಹಳ ಸಂತೋಷವಿದೆ.

ಅಹಂ ಹಿ ಭವತೋ ಗೋಷು ಪ್ರಕೃತಃ ಸತತಂ ಪುರಾ ।
ತತ್ರ ಮೇ ಕೌಶಲಂ ಸರ್ವಮ್ ಅವಬುದ್ಧಂ ವಿಶಾಂಪತೇ ॥೧೯॥

ಎಲೈ ರಾಜನೇ, ನಾನು ಹಿಂದೆ ಸತತವಾಗಿ ನಿನ್ನ ಗೋವುಗಳನ್ನು ನೋಡಿಕೊಳ್ಳುತ್ತಿದ್ದೆ. ಅದರಲ್ಲಿ ನನಗಿರುವ ಕೌಶಲವು ನಿನಗೆ ತಿಳಿದಿದೆ.

ರಕ್ಷಣಂ ಚರಿತಂ ಚೈವ ಗವಾಂ ಮಂಗಲಲಕ್ಷಣಮ್ ।
ತತ್ಸರ್ವಂ ಮೇ ಸುವಿದಿತಮ್ ಅನ್ಯಚ್ಚಾಪಿ ಮಹೀಪತೇ ॥೨೦॥

ವೃಷಭಾನಪಿ ಜಾನಾಮಿ ರಾಜನ್ ಪೂಜಿತಲಕ್ಷಣಾನ್ ।
ಯೇಷಾಂ ಮೂತ್ರಮುಪಾಘ್ರಾಯ ಅಪಿ ವಂಧ್ಯಾ ಪ್ರಸೂಯತೇ ॥೨೧॥

ಗೋವುಗಳ ರಕ್ಷಣೆ, ಗೋವುಗಳ ನಡತೆ, ಗೋವುಗಳ ಸಲ್ಲಕ್ಷಣಗಳು ಎಲ್ಲವನ್ನೂ ನಾನು ತಿಳಿದಿದ್ದೇನೆ. ಅದೂ ಅಲ್ಲದೇ, ಎಲೈ ರಾಜನೇ, ನಾನು ವೃಷಭಗಳನ್ನೂ ತಿಳಿದಿದ್ದೇನೆ. ಯಾವ ವೃಷಭಗಳ ಮೂತ್ರವನ್ನು ಆಘ್ರಾಣಿಸಿದರೆ ವಂಧ್ಯೆಯೂ ಮಕ್ಕಳನ್ನು ಪಡೆಯುತ್ತಾಳೋ ಅಂತಹ ವೃಷಭಗಳ ಶ್ರೇಷ್ಠವಾದ ಲಕ್ಷಣಗಳನ್ನು ತಿಳಿದಿದ್ದೇನೆ.

ಸೋಽಹಮೇವಂ ಚರಿಷ್ಯಾಮಿ ಪ್ರೀತಿರತ್ರ ಪರಾ ಹಿ ಮೇ ।
ನ ಚ ಮಾಂ ವೇತ್ಸ್ಯತಿ ಪರಃ ತತ್ತೇ ರೋಚತು ಪಾರ್ಥಿವ ॥೨೨॥

ನಾನು ಹೀಗೆ ಸಂಚರಿಸುವೆನು. ಈ ವಿಷಯದಲ್ಲಿ ನನಗೆ ಸಂತೋಷವಿದೆ. ಅಲ್ಲಿ ಇನ್ನೊಬ್ಬರು ಯಾರೂ ನನ್ನನ್ನು ಗುರುತಿಸುವುದಿಲ್ಲ. ಇದಕ್ಕೆ ನೀನು ಅನುಮತಿಯನ್ನು ಕೊಡು.

ಯುಧಿಷ್ಠಿರಃ

ಕೇನಾತ್ರ ಕರ್ಮಣಾ ಕೃಷ್ಣಾ ದ್ರೌಪದೀ ವಿಚರಿಷ್ಯತಿ ।
ನ ಹಿ ಕಿಂಚನ ಜಾನಾತಿ ಕರ್ಮ ಕರ್ತುಂ ಯಥಾ ಸ್ತ್ರಿಯಃ ॥೨೩॥

ಯುಧಿಷ್ಠಿರ– ದ್ರುಪದ ಕುಮಾರಿಯಾದ ಕೃಷ್ಣೆಯು ಯಾವ ಕರ್ಮವನ್ನು ಮಾಡಿ ಅಲ್ಲಿ ಕಾಲವನ್ನು ಕಳೆಯುವಳು? ಎಲ್ಲ ಸ್ತ್ರೀಯರೂ ಮಾಡುವ ಯಾವ ಕರ್ಮಗಳನ್ನೂ ಮಾಡಲು ಅವಳು ತಿಳಿದಿಲ್ಲ.

ಮಾಲ್ಯಾನ್ ಗಂಧಾನಲಂಕಾರಾನ್ ವಸ್ತ್ರಾಣಿ ವಿವಿಧಾನಿ ಚ ।
ಏತಾನ್ಯೇವಾಭಿಜಾನಾತಿ ಯತೋ ಜಾತಾ ಚ ಭಾಮಿನೀ ॥೨೪॥

ಅವಳು ಜನ್ಮತಳೆದ ರೀತಿಯಲ್ಲಿ ಆ ಭಾಮೆಯು ಮಾಲೆಗಳು, ಗಂಧಗಳು, ಅಲಂಕಾರಗಳು, ವಿವಿಧವಾದ ವಸ್ತ್ರಗಳು ಇಷ್ಟನ್ನೇ ತಿಳಿದಿದ್ದಾಳೆ.

ಇಯಂ ತು ನಃ ಪ್ರಿಯಾ ಭಾರ್ಯಾ ಪ್ರಾಣೇಭ್ಯೋಽಪಿ ಗರೀಯಸೀ ।
ಮಾತೇವ ಪರಿಪಾಲ್ಯಾ ಚ ಪೂಜ್ಯಾ ಜ್ಯೇಷ್ಠಾ ಸ್ವಸೇವ ಚ ॥೨೫॥

ಇವಳು ನಮ್ಮ ಪ್ರಾಣಕ್ಕಿಂತಲೂ ಪ್ರಿಯಳಾದ ನಮ್ಮ ಪತ್ನಿ. ಅವಳನ್ನು ತಾಯಿಯಂತೆ ಪರಿಪಾಲಿಸಬೇಕು ಮತ್ತು ಅಕ್ಕನಂತೆ ಪೂಜಿಸಬೇಕು.

ಸುಕುಮಾರೀ ಸುಶೀಲಾ ಚ ರಾಜಪುತ್ರೀ ಯಶಸ್ವಿನೀ ।
ಕಥಂ ವತ್ಸ್ಯತಿ ಕಲ್ಯಾಣೀ ವಿರಾಟನಗರೇ ಸತೀ ॥೨೬॥

ರಾಜಕುಮಾರಿಯಾದ ಅವಳು ಸುಕುಮಾರಿ, ಸುಶೀಲೆ, ಯಶಸ್ವಿನಿಯಾದವಳು. ಕಲ್ಯಾಣಿಯಾದ ಅವಳು ವಿರಾಟನಗರದಲ್ಲಿ ಹೇಗೆ ವಾಸಿಸುವಳು?

ದ್ರೌಪದೀ

ಅಹಂ ವತ್ಸ್ಯಾಮಿ ರಾಜೇಂದ್ರ ನಿರ್ವೃತೋ ಭವ ಪಾರ್ಥಿವ ।
ಯಥಾ ತೇ ಮತ್ಕೃತೇ ಶೋಕೋ ನ ಭವೇನ್ನೃಪ ತಚ್ಛೃಣು ॥೨೭॥

ದ್ರೌಪದಿ– ಎಲೈ ರಾಜೇಂದ್ರನೇ, ನಾನು ಅಲ್ಲಿ ವಾಸಮಾಡುವೆನು. ನೀನು ಸಮಾಧಾನದಿಂದಿರು. ನನ್ನ ಸಲುವಾಗಿ ನಿನಗೆ ಯಾವ ಶೋಕವೂ ಆಗದಿರುವ ಬಗೆಯನ್ನು ಹೇಳುತ್ತೇನೆ, ಅದನ್ನು ಕೇಳು.

ಯಥಾ ತು ಮಾಂ ನ ಜಾನಂತಿ ತತ್ಕರಿಷ್ಯಾಮ್ಯಹಂ ವಿಭೋ ।
ಛನ್ನಾ ವತ್ಸ್ಯಾಮ್ಯಹಂ ಯನ್ಮಾಂ ನ ವಿಜ್ಞಾಸ್ಯಂತಿ ಕೇಚನ ॥೨೮॥

ಪ್ರಭುವೇ, ನಾನು ಯಾರೂ ತಿಳಿಯದಿರುವಂತೆ ಪ್ರಚ್ಛನ್ನಳಾಗಿ ಅಲ್ಲಿ ವಾಸ ಮಾಡುವೆನು. ಯಾರೂ ನನ್ನನ್ನು ಗುರುತಿಸುವುದಿಲ್ಲ.

ವೃತ್ತಂ ತಚ್ಚ ಸಮಾಖ್ಯಾಸ್ಯೇ ಶಮಾಪ್ನುಹಿ ವಿಶಾಂಪತೇ ।
ಸೈರಂಧ್ರೀಜಾತಿಸಂಪನ್ನಾ ನಾಮ್ನಾಽಹಂ ವ್ರತಚಾರಿಣೀ ॥೨೯॥

ನಾನು ಏನು ಮಾಡುವೆನೆಂದು ಹೇಳುವೆನು, ರಾಜನೇ, ಸಂತೋಷವನ್ನು ಹೊಂದು. ಸೈರಂಧ್ರೀಜಾತಿಯಲ್ಲಿ ಹುಟ್ಟಿದ ನಾನು ವ್ರತಚಾರಿಣಿ ಎಂದು ಹೇಳಿಕೊಳ್ಳುತ್ತೇನೆ.

ಸೈರಂಧ್ರ್ಯೋ ರಕ್ಷಿತಾಃ ಸ್ತ್ರೀಣಾಂ ಭುಜಿಷ್ಯಾಃ ಸಂತಿ ಭಾರತ ।
ಏಕಪತ್ನ್ಯಃ ಸ್ತ್ರಿಯಶ್ಚೈತಾ ಇತಿ ಲೋಕಸ್ಯ ನಿಶ್ಚಯಃ ॥೩೦॥

ಎಲೈ ಭಾರತನೇ, ಸೈರಂಧ್ರಿಯರು ರಾಜಕುಲದಲ್ಲಿ ರಕ್ಷಿತರಾದ ಸೇವಕಿಯರು. ಅವರು ಒಬ್ಬನೇ ಪತಿಯನ್ನುಳ್ಳವರು ಎಂದು ಲೋಕದಲ್ಲಿ ವಿದಿತವಾಗಿದೆ.

ಸಾಽಹಂ ಬ್ರುವಾಣಾ ಸೈರಂಧ್ರೀ ಕುಶಲಾ ಕೇಶಕರ್ಮಣಿ ।
ನಾಽಹಂ ತವ ಭವಿಷ್ಯಾಮಿ ದುರ್ಭರಾ ರಾಜವೇಶ್ಮನಿ ॥೩೧॥

ನಾನು ಕೇಶಪ್ರಸಾಧನದಲ್ಲಿ ನಿಪುಣಳಾದ ಸೈರಂಧ್ರೀ ಎಂದು ಹೇಳಿಕೊಳ್ಳುತ್ತಾ ಅಲ್ಲಿ ಇರುವೆನು. ರಾಜನ ಮನೆಯಲ್ಲಿ ನಾನು ನಿನಗೆ ದುರ್ಭರಳಾಗಿ ಇರುವುದಿಲ್ಲ.

ಕೃತಾ ಚೈವ ಸದಾ ರಕ್ಷಾ ವ್ರತೇನೈವ ನರಾಧಿಪ ।
ಸುದೇಷ್ಣಾಂ ಪ್ರತ್ಯುಪಸ್ಥಾಸ್ಯೇ ರಾಜಭಾರ್ಯಾಂ ಯಶಸ್ವಿನೀಮ್ ॥೩೨॥

ಎಲೈ ನರಾಧಿಪನೇ, ನನ್ನ ವ್ರತವೇ ನನಗೆ ಸದಾ ರಕ್ಷಣೆಯನ್ನು ನೀಡಿದೆ. ನಾನು ರಾಜಭಾರ್ಯೆಯಾದ ಕೀರ್ತಿವಂತಳಾದ ಸುದೇಷ್ಣೆಯ ಸಮೀಪದಲ್ಲಿ ಇರುವೆನು.

ಸಾ ರಕ್ಷಿಷ್ಯತಿ ಮಾಂ ಪ್ರಾಪ್ತಾಂ ಮಾ ತೇ ಭೂದ್ದುಃಖಮೀದೃಶಮ್ ।
ಅನುಗುಪ್ತಾ ಚರಿಷ್ಯಾಮಿ ಯನ್ಮಾಂ ತ್ವಮನುಪೃಚ್ಛಸಿ ॥೩೩॥

ಸಮೀಪಕ್ಕೆ ಬಂದ ನನ್ನನ್ನು ಅವಳು ರಕ್ಷಿಸುವಳು. ನನ್ನ ವಿಷಯದಲ್ಲಿ ನೀನು ಹೀಗೆ ದುಃಖಪಡಬೇಡ. ವ್ರತಗಳಿಂದ ರಕ್ಷಿತಳಾದಂತೆ ಅನಂತರ ಸುದೇಷ್ಣೆಯಿಂದಲೂ ರಕ್ಷಿತಳಾಗಿ ನಾನು ಅಲ್ಲಿ ವಾಸಮಾಡುವೆನು. ನೀನು ನನ್ನನ್ನು ಕೇಳಿದ ಪ್ರಶ್ನೆಗೆ ಇದು ಉತ್ತರ.

ಯುಧಿಷ್ಠಿರಃ

ಯಥಾ ನ ದುರ್ಹೃದಃ ಪಾಪಾ ಭವಂತಿ ಸುಖಿನಃ ಪುನಃ ।
ಕುರ್ಯಾಸ್ತಥಾ ತ್ವಂ ಕಲ್ಯಾಣಿ ಲಕ್ಷಯೇಯುರ್ನ ವರ್ಣತಃ ॥

ಯುಧಿಷ್ಠಿರ– ನಿನ್ನನ್ನು ನೋಡಿ ಕೆಟ್ಟ ಮನಸ್ಸುಳ್ಳವರು ಮತ್ತು ಪಾಪಿಗಳು ಪುನಃ ಸುಖವಾಗಿ ಇರದಂತೆ ನೀನು ನಡೆದುಕೋ. ಎಲೌ ಕಲ್ಯಾಣಿಯೇ, ನೀನು ಕ್ಷತ್ರಿಯ ವರ್ಣದವಳೆಂದು ಯಾರೂ ಗುರುತಿಸದಂತೆ ನಿನ್ನನ್ನು ನೀನು ನೋಡಿಕೊಳ್ಳಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಚತುರ್ಥೋಽಧ್ಯಾಯಃ ॥
॥ ವೈರಾಟಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ಪಾಂಡವರಿಗೆ ಧೌಮ್ಯರಿಂದ ರಾಜನ ಮನೆಯಲ್ಲಿ ವಾಸಮಾಡುವ ಪ್ರಕಾರದ ಕಥನ.

ಯುಧಿಷ್ಠಿರಃ

ಕರ್ಮಾಣ್ಯುಕ್ತಾನಿ ಯುಷ್ಮಾಭಿರ್ಯಾನಿ ತಾನಿ ಚರಿಷ್ಯಥ ।
ಮಮ ಚಾಪಿ ಯಥಾ ಬುದ್ಧಿರುಚಿತಾ ಹಿ ವಿನಿಶ್ಚಯಾತ್ ॥೧॥

ಯುಧಿಷ್ಠಿರ– ನೀವು ಯಾವ ಯಾವ ಕರ್ಮಗಳನ್ನು ಹೇಳಿದ್ದೀರೋ ಅವೆಲ್ಲವನ್ನೂ ಮಾಡುವಿರಿ. ನನ್ನ ಬುದ್ಧಿಯೂ ಕೂಡ ನಾನು ಮಾಡುವ ಕರ್ಮದ ವಿಷಯದಲ್ಲಿ ನಾನು ಹೇಳಿದಂತೆಯೇ ನಿಶ್ಚಿತವಾಗಿದೆ.

ಪುರೋಹಿತೋಽಯಮಸ್ಮಾಕಮ್ ಅಗ್ನಿಹೋತ್ರಾಣಿ ರಕ್ಷತು ।
ಸೂದಾಃ ಪೌರೋಗವೈಃ ಸಾರ್ಧಂ ದ್ರುಪದಸ್ಯ ನಿವೇಶನೇ ॥೨॥

ಈ ನಮ್ಮ ಪುರೋಹಿತರು ದ್ರುಪದನ ಮನೆಯಲ್ಲಿ ಸೂದರ ಮತ್ತು ಪೌರೋಗವರ ಜೊತೆಯಲ್ಲಿ ನಮ್ಮ ಅಗ್ನಿಹೋತ್ರಗಳನ್ನು ರಕ್ಷಿಸಲಿ.

ಇಂದ್ರಸೇನಮುಖಾಶ್ಚೈತೇ ರಥಾನಾದಾಯ ಕೇವಲಾನ್ ।
ಯಾಂತು ದ್ವಾರವತೀಂ ಶೀಘ್ರಮಿತಿ ಮೇ ವರ್ತತೇ ಮತಿಃ ॥೩॥

ಇಂದ್ರಸೇನ ಮೊದಲಾದ ನಮ್ಮ ಸಾರಥಿಗಳು ರಥಗಳನ್ನು ಮಾತ್ರ ತೆಗೆದುಕೊಂಡು ದ್ವಾರಾವತಿಗೆ ಶೀಘ್ರವಾಗಿ ಹೊರಡಲಿ ಎಂದು ನನ್ನ ಅಭಿಪ್ರಾಯ.

ಇಮಾಶ್ಚ ನಾರ್ಯೋ ದ್ರೌಪದ್ಯಾಃ ಸರ್ವತಃ ಪರಿಚಾರಿಕಾಃ ।
ಪಾಂಚಾಲಾನೇವ ಗಚ್ಛಂತು ಸೂದಾಃ ಪೌರೋಗವೈಃ ಸಹ ॥೪॥

ದ್ರೌಪದಿಯ ಪರಿಚಾರಿಕೆಯರಾದ ಈ ಎಲ್ಲಾ ನಾರಿಯರು ಸೂದರ ಮತ್ತು ಪೌರೋಗವರ ಜೊತೆಯಲ್ಲಿ ಪಾಂಚಾಲದೇಶಕ್ಕೆ ಹೋಗಲಿ.

ಸರ್ವೈರಪಿ ಚ ವಕ್ತವ್ಯಂ ನ ಪ್ರಾಜ್ಞಾಯಂತ ಪಾಂಡವಾಃ ।
ಗತಾ ಹ್ಯಸ್ಮಾನಪಾಹಾಯ ಸರ್ವೇ ದ್ವೈತವನಾದಿತಿ ॥೫॥

ಎಲ್ಲರೂ ಸಹ ದ್ವೈತವನದಲ್ಲಿ ನಮ್ಮನ್ನು ಬಿಟ್ಟು ಎಲ್ಲ ಪಾಂಡವರೂ ಅಲ್ಲಿಂದ ಹೊರಟು ಹೋದರು. ಈಗ ಅವರು ಎಲ್ಲಿದ್ದಾರೆಯೋ ತಿಳಿದಿಲ್ಲ ಎಂದು ಹೇಳಬೇಕು.

ವೈಶಂಪಾಯನಃ

ತಾನನ್ವಶಾಸದ್ ಧರ್ಮಾತ್ಮಾ ಸರ್ವಧರ್ಮವಿಶೇಷವಿತ್ ।
ಧೌಮ್ಯಃ ಪುರೋಹಿತೋ ರಾಜನ್ ಪಾಂಡವಾನ್ ಪುರುಷರ್ಷಭಾನ್ ॥

ವೈಶಂಪಾಯನ– ರಾಜನೇ, ಪುರುಷರ್ಷಭರಾದ ಆ ಪಾಂಡವರಿಗೆ ಎಲ್ಲಾ ಧರ್ಮಗಳನ್ನೂ ತಿಳಿದ, ಸ್ವತಃ ಧರ್ಮಾತ್ಮರಾದ ಪುರೋಹಿತರಾದ ಧೌಮ್ಯರು ಉಪದೇಶವನ್ನು ಮಾಡಿದರು.

ಧೌಮ್ಯಃ

ವಿದಿತೇ ಚಾಪಿ ವಕ್ತವ್ಯಂ ಸುಹೃದ್ಭಿರನುರಾಗತಃ ।
ಅತೋಽಹಮಪಿ ವಕ್ಷ್ಯಾಮಿ ಹೇತುಮಾತ್ರಂ ನಿಬೋಧತ ॥೭॥

ಧೌಮ್ಯರು– ವಿಶ್ವಾಸಪಾತ್ರರಾದವರು ಶ್ರೋತೃಗಳಿಗೆ ತಿಳಿದಿದ್ದರೂ ಸಹ ಪ್ರೀತಿಯಿಂದ ವಿಷಯಗಳನ್ನು ಹೇಳಬೇಕು. ಆದ್ದರಿಂದ ನಾನೂ ಸಹ ನಿಮಿತ್ತ ಮಾತ್ರನಾಗಿ ಹೇಳುವೆನು. ಅದನ್ನು ತಿಳಿಯಿರಿ.

ಹಂತೇಮಾಂ ರಾಜವಸತಿಂ ರಾಜಪುತ್ರಾ ಬ್ರವೀಮಿ ವಃ ।
ಯಥಾ ರಾಜಕುಲಂ ಪ್ರಾಪ್ಯ ಚರನ್ ಪ್ರೇಷ್ಯೋ ನ ದುಷ್ಯತಿ ॥೮॥

ಸಂತೋಷ. ರಾಜಪುತ್ರರೇ, ರಾಜನ ಮನೆಯಲ್ಲಿ ಸೇವಕನು ಹೇಗೆ ವಾಸ ಮಾಡಿದರೆ ದೋಷಕ್ಕೆ ಪಾತ್ರನಾಗುವುದಿಲ್ಲವೋ ಅಂತಹ ಪ್ರಕಾರವನ್ನು ನಿಮಗೆ ಹೇಳುತ್ತೇನೆ.

ದುರ್ವಸನ್ನೇವ ಕೌರವ್ಯಾಜಾನತಾ ರಾಜವೇಶ್ಮನಿ ।
ಅಮಾನಿತೇನ ಮಾನಾರ್ಹ ಗೂಢೇನ ಪರಿವತ್ಸರಮ್ ॥೯॥

ಎಲೈ ಕೌರವ್ಯನೇ, ಮಾನಾರ್ಹನೇ, ರಾಜನ ಮನೆಯಲ್ಲಿ ಸನ್ಮಾನಿತನಾಗದಿದ್ದರೂ ಗೂಢವಾಗಿ ಇನ್ನೊಬ್ಬರಿಗೆ ತಿಳಿಯದಂತೆ ಒಂದು ವರ್ಷ ಕಷ್ಟದ ವಾಸವನ್ನು ಮಾಡಬೇಕು.

ದೃಷ್ಟದ್ವಾರೋ ಲಭೇದ್ ದ್ರಷ್ಟುಂ ರಾಜಸ್ವೇಷು ನ ವಿಶ್ವಸೇತ್ ।
ನ ಚಾನುಶಿಷ್ಯಾದ್ ರಾಜಾನಮಪೃಚ್ಛಂತಂ ಕದಾಚನ ॥೧೦॥

ದ್ವಾರದಲ್ಲಿ ರಾಜನು ತನ್ನನ್ನು ನೋಡಿದ ಮೇಲೆ ರಾಜನು ತನ್ನನ್ನು ನೋಡುವಂತೆ ಒಳಗೆ ಪ್ರವೇಶಿಸಬೇಕು. ರಾಜನ ಯಾವ ಸ್ವತ್ತುಗಳಲ್ಲಿಯೂ ತನ್ನದೆಂಬ ಭಾವನೆಯನ್ನು ತಳೆಯಬಾರದು. ರಾಜನು ಕೇಳದಿದ್ದ ವಿಷಯದಲ್ಲಿ ಎಂದೂ ಅವನಿಗೆ ಉಪದೇಶವನ್ನು ಮಾಡಬಾರದು.

ತೂಷ್ಣೀಂ ತ್ವೇನಮುಪಾಸೀತ ಕಾಲೇ ಸಮಭಿಪೂಜಯನ್ ।
ತದೇವಾಸನಮಾತಿಷ್ಠೇದ್ ಯತ್ರ ನಾಭಿಷಜೇತ್ ಪರಃ ॥೧೧॥

ಮೌನವನ್ನು ಧರಿಸಿ ಕಾಲಕಾಲಗಳಲ್ಲಿ ರಾಜನಿಗೆ ಪೂಜೆಯನ್ನು ಸಲ್ಲಿಸಿ ಅವನ ಸಮೀಪದಲ್ಲಿರಬೇಕು. ಯಾವ ಆಸನದಲ್ಲಿ ಇನ್ನೊಬ್ಬನು ಬಂದು ಕುಳಿತುಕೊಳ್ಳಲಾರನೋ ಅಂತಹ ಆಸನವನ್ನೇ ಸ್ವೀಕರಿಸಬೇಕು.

ಯೋ ನಯಾನಯಪರ್ಯಂಕಂ ನ ಪೀಠಂ ನ ಗಜಂ ರಥಮ್ ।
ಆರೋಹೇತ್ ಸಮ್ಮತೋಸ್ಮೀತಿ ಸ ರಾಜವಸತಿಂ ವಸೇತ್ ॥೧೨॥

ಯಾವನು ರಾಜನಿಗೆ ತಾನು ಸಮ್ಮತನಾದರೂ ತಾನು ರಾಜನಿಗೆ ಸಮ್ಮತ ಎಂಬ ಕಾರಣದಿಂದ ಅವನ ಆಸನಗಳನ್ನಾಗಲೀ, ಪೀಠವನ್ನಾಗಲೀ, ಗಜವನ್ನಾಗಲೀ, ರಥವನ್ನಾಗಲೀ ಏರುವುದಿಲ್ಲವೋ ಅಂತಹವನು ರಾಜನ ಮನೆಯಲ್ಲಿ ವಾಸ ಮಾಡಬೇಕು.

ನೈಷಾಂ ದಾರೇಷು ಕುರ್ವೀತ ಮೈತ್ರೀಂ ಪ್ರಾಜ್ಞಃ ಕದಾಚನ ।
ಅಂತಃಪುರಚರಾ ಯೇ ಚ ದ್ವೇಷ್ಟಿ ಯಾನಹಿತಾಶ್ಚ ತೇ ॥೧೩॥

ರಾಜನ ಪತ್ನಿಯರಲ್ಲಿ ಅಥವಾ ಅಂತಃಪುರದ ದಾಸಿಯರ ಜೊತೆಯಲ್ಲಿ ಸ್ನೇಹವನ್ನು ಮಾಡಬಾರದು. ಅವರು ಯಾವ ಅಹಿತರನ್ನು ದ್ವೇಷ ಮಾಡುತ್ತಾರೆಯೋ ಅವರ ಜೊತೆಯಲ್ಲಿಯೂ ಸ್ನೇಹವನ್ನು ಮಾಡಬಾರದು.

ಪಾಂಡವಾಗ್ನಿರಯಂ ಲೋಕೇ ಸರ್ವಶಸ್ತ್ರಮಯೋ ಮಹಾನ್ ।
ಭರ್ತಾ ಗೋಪ್ತಾ ಚ ಭೂತಾನಾಂ ರಾಜಾ ಪುರುಷವಿಗ್ರಹಃ ॥೧೪॥

ಎಲೈ ಪಾಂಡವನೇ, ಎಲ್ಲಾ ಪ್ರಜೆಗಳನ್ನೂ ಪೋಷಿಸುವ ಮತ್ತು ರಕ್ಷಿಸುವ ಈ ರಾಜನು ಪುರುಷರೂಪವನ್ನು ಧರಿಸಿದ ಸರ್ವಶಸ್ತ್ರಮಯವಾದ ದೊಡ್ಡ ಅಗ್ನಿ ಎಂದು ತಿಳಿಯಬೇಕು.

ಸರ್ವಾತ್ಮನಾ ವರ್ತಮಾನಂ ಯಥಾ ದೋಷೋ ನ ಸಂಸ್ಪೃಶೇತ್ ।
ರಾಜಾನಮುಪಜೀವಂತಂ ತಸ್ಯ ವೃತ್ತಿಂ ನಿಬೋಧತ ॥೧೫॥

ರಾಜನನ್ನು ಉಪಜೀವಿಸಿಕೊಂಡು ಸರ್ವರೀತಿಯಿಂದ ಅವನ ಜೊತೆಯಲ್ಲಿಯೇ ಇರುವವನಿಗೆ ದೋಷವು ಉಂಟಾಗದಿರುವ ನಡವಳಿಕೆಯನ್ನು ಹೇಳುತ್ತೇನೆ, ಕೇಳಿ.

ನಾತಿವರ್ತೇತ ಮರ್ಯಾದಾಂ ಪುರುಷೋ ರಾಜಸಮ್ಮತಃ ।
ವ್ಯವಹಾರಂ ಪುನರ್ಲೋಕೇ ಮರ್ಯಾದಾಂ ಪಂಡಿತಾ ವಿದುಃ ॥೧೬॥

ರಾಜನಿಗೆ ಸಮ್ಮತನಾದ ಪುರುಷನು ತನ್ನ ಮರ್ಯಾದೆಯನ್ನು (ಎಲ್ಲೆಯನ್ನು) ಮೀರಬಾರದು. ರಾಜನ ಜೊತೆಯಲ್ಲಿ ಮಾಡುವ ವ್ಯವಹಾರದ ರೀತಿಯನ್ನು ಮತ್ತು ಸೇವಕರ ಎಲ್ಲೆಯನ್ನು ಲೋಕದಲ್ಲಿ ಪಂಡಿತರು ತಿಳಿದಿರುತ್ತಾರೆ.

ನ ಹಿ ಪುತ್ರಂ ನ ನಪ್ತಾರಂ ನ ಭ್ರಾತರಮರಿಂದಮ ।
ಸಮತಿಕ್ರಾಂತಮರ್ಯಾದಂ ಪೂಜಯಂತಿ ನರಾಧಿಪಾಃ ॥೧೭॥

ಎಲೈ ಅರಿಂದಮನೇ, ತನ್ನ ಮರ್ಯಾದೆಯನ್ನು ಮೀರಿದವನು ಪುತ್ರನಾಗಲೀ ಅಥವಾ ಪೌತ್ರನಾಗಲೀ ಅಥವಾ ತಮ್ಮನೇ ಆದರೂ ಸಹ ರಾಜರು ಅವನನ್ನು ಸತ್ಕರಿಸುವುದಿಲ್ಲ.

ಗಚ್ಛನ್ನಪಿ ಪರಾಂ ಭೂಮಿಂ ಭೂಮಿಪಾಲನಿಯೋಜಿತಃ ।
ಜಾತ್ಯಂಧ ಇವ ಮನ್ಯೇತ ಮರ್ಯಾದಾಮನುಚಿಂತಯನ್ ॥೧೮॥

ರಾಜನ ಪ್ರೀತಿಗೆ ಒಳಗಾಗಿ, ರಾಜನಿಂದ ನಿಯೋಜಿಸಲ್ಪಟ್ಟು ಬಹಳ ವೈಭವೋಪೇತವಾದ ಸ್ಥಳಕ್ಕೆ ಹೋದರೂ ತನ್ನ ಮರ್ಯಾದೆಯನ್ನು ಸ್ಮರಿಸಿಕೊಂಡು ಸೇವಕನು ಹುಟ್ಟುಕುರುಡನಂತೆ ಇರಬೇಕು.

ಯತ್ರೋಪವಿಷ್ಟಃ ಸಂಕಲ್ಪಂ ನೋಪಹನ್ಯಾದ್ ಬಲೀಯಸಃ ।
ತದಾಸನಂ ರಾಜಕುಲೇ ಈಪ್ಸೇತ ಪುರುಷೋ ವಸನ್ ॥೧೯॥

ಎಲ್ಲಿ ಕುಳಿತುಕೊಂಡರೆ ಅಲ್ಲಿ ಕುಳಿತುಕೊಳ್ಳಲು ಬಯಸಿದ ತನಗಿಂತ ಪ್ರಬಲನಾದವನ ಸಂಕಲ್ಪವನ್ನು ಮುರಿಯುವುದಿಲ್ಲವೋ ಅಂತಹ ಆಸನವನ್ನೇ ರಾಜಕುಲದಲ್ಲಿ ವಾಸಮಾಡುವ ಪುರುಷನು ಅಪೇಕ್ಷಿಸಬೇಕು.

ಯತ್ರ ಯತ್ರೈನಮಾಸೀನಂ ಶಂಕೇರನ್ ದೃಷ್ಟಚಾರಿಣಃ ।
ನ ತತ್ರೋಪವಿಶೇದ್ ಯೋ ವೈ ಸ ರಾಜವಸತಿಂ ಭವೇತ್ ॥೨೦॥

ಎಲ್ಲಿ ಕುಳಿತುಕೊಂಡರೆ ಅಂತಃಪುರ ಜನರು ಇವನನ್ನು ಶಂಕಿಸುವುದಿಲ್ಲವೋ ರಾಜನ ಮನೆಯಲ್ಲಿ ವಾಸಮಾಡುವವನು ಅಂತಹ ಸ್ಥಳದಲ್ಲಿಯೇ ಕುಳಿತುಕೊಳ್ಳಬೇಕು.

ಸ ಭೂಮೌ ಕಾಮಮಾಸೀತ ತಿಷ್ಠೇದ್ ವಾ ರಾಜಸನ್ನಿಧೌ ।
ನ ತ್ವೇವಾಸನಮನ್ಯಸ್ಯ ಪ್ರಾರ್ಥಯೀತ ಕದಾಚನ ॥೨೧॥

ಮನಸ್ಸಿಗೆ ಬಂದಂತೆ ರಾಜನ ಎದುರಿಗೆ ಭೂಮಿಯ ಮೇಲೆ ಕುಳಿತುಕೊಳ್ಳಬಹುದು. ಅಥವಾ ರಾಜಸನ್ನಿಧಿಯಲ್ಲಿ ನಿಲ್ಲಲೂ ಬಹುದು. ಆದರೆ ಇನ್ನೊಬ್ಬನ ಆಸನವನ್ನು ಎಂದೂ ಬಯಸಲೂ ಬಾರದು.

ಪರಾಸನಗತಂ ಹ್ಯೇನಂ ಪರಸ್ಯ ಪರಿಚಾರಕಾಃ ।
ಪರಿಷದವ್ಯಕರ್ಷೇಯುಃ ಪರಿಹಾಸ್ಯೇತ ಶತ್ರುಭಿಃ ॥೨೨॥

ಇನ್ನೊಬ್ಬನ ಆಸನದಲ್ಲಿ ಕುಳಿತುಕೊಂಡ ಸೇವಕನನ್ನು ಆ ಇನ್ನೊಬ್ಬನ ಸೇವಕರು ಸಭೆಯಲ್ಲಿ ಕೆಳಗೆ ಎಳೆಯುತ್ತಾರೆ. ಆಗ ಶತ್ರುಗಳಿಂದ ಹಾಸ್ಯಕ್ಕೆ ಈಡಾಗಬೇಕಾಗುತ್ತದೆ.

ನಿತ್ಯಂ ವಿಪ್ರತಿಷಿದ್ಧಂ ತು ಪುರಸ್ತಾದಾಸನಂ ಮತಮ್ ।
ಅರ್ಥಾರ್ಥೇ ಹಿ ಯದಾ ಭೃತ್ಯೋ ರಾಜಾನಮುಪತಿಷ್ಠತೇ ॥೨೩॥

ಯಾವುದಾದರೂ ಒಂದು ಪ್ರಯೋಜನದ ಅಪೇಕ್ಷೆಯಿಂದ ಭೃತ್ಯನು ರಾಜನನ್ನು ಸಮೀಪಿಸಿದರೆ ರಾಜನ ಮುಂದಿನ ಆಸನವು ಅವನಿಗೆ ಯಾವಾಗಲೂ ನಿಷಿದ್ಧವಾದುದು.

ಯತ್ನಾಚ್ಚೋಪಚರೇದೇನಮಗ್ನಿವತ್ ದೇವವಚ್ಚ ಹ ।
ಅನೃತೇನೋಪಚೀರ್ಣಾ ಹಿ ಹಿಂಸ್ಯಾದೇನಮಸಂಶಯಮ್ ॥೨೪॥

ಅಗ್ನಿಯನ್ನು ಮತ್ತು ದೇವತೆಯನ್ನು ಉಪಚರಿಸಿದಂತೆ ರಾಜನನ್ನು ಪ್ರಯತ್ನ ಪೂರ್ವಕವಾಗಿ ಉಪಚರಿಸಬೇಕು. ಮೋಸದ ಉಪಚಾರವನ್ನು ಮಾಡಿದರೆ ರಾಜನು ಅವನನ್ನು ಖಂಡಿತವಾಗಿ ಹಿಂಸಿಸುತ್ತಾನೆ.

ಯಸ್ಯ ಭರ್ತಾऽನುಯುಂಜೀತ ತದೇವಾಭ್ಯನುವರ್ಣಯೇತ್ ।
ಪ್ರಮಾದಮವಹೇಲಾಂ ಚ ಕೋಪಂ ಚ ಪರಿವರ್ಜಯೇತ್ ॥೨೫॥

ರಾಜನು ಯಾವ ಪುರುಷನ ಬಗ್ಗೆ ಪ್ರಶ್ನೆ ಮಾಡುತ್ತಾನೆಯೋ ಅದೇ ವಿಷಯವನ್ನು ಅವನಿಗೆ ಹೇಳಬೇಕು. ರಾಜಕಾರ್ಯದಲ್ಲಿ ಪ್ರಮಾದವನ್ನಾಗಲೀ ಅಥವಾ ರಾಜನಿಗೆ ಅವಹೇಳನವನ್ನಾಗಲೀ ಅಥವಾ ರಾಜನ ಸನ್ನಿಧಿಯಲ್ಲಿ ಕೋಪವನ್ನಾಗಲೀ ಮಾಡಬಾರದು.

ಸಮರ್ಥನಾಸು ಸರ್ವಾಸು ಹಿತಂ ಚ ಪ್ರಿಯಮೇವ ಚ ।
ಸಂವರ್ಣಯೇತ್ ತದೇವಾಸ್ಯ ಪ್ರಿಯಾದಪಿ ಹಿತಂ ಭವೇತ್ ॥೨೬॥

ಯಾವುದಾದರೂ ಒಂದು ಕಾರ್ಯವನ್ನು ಸಮರ್ಥಿಸುವಾಗ ರಾಜನಿಗೆ ಹಿತವಾದುದನ್ನೂ ಮತ್ತು ಪ್ರಿಯವಾದುದನ್ನೂ ವರ್ಣಿಸಬೇಕು. ಅದೇ ಅವನಿಗೆ ಪ್ರಿಯಕ್ಕಿಂತಲೂ ಹೆಚ್ಚು ಹಿತವಾಗಿರುತ್ತದೆ.

ಅನುಕೂಲೋ ಭವೇಚ್ಚಾಸ್ಯ ಸರ್ವಾರ್ಥೇಷು ಕಥಾಸು ಚ ।
ಅಪ್ರಿಯಂ ಚಾಹಿತಂ ಯತ್ ಸ್ಯಾತ್ ತದಸ್ಮೈ ನಾನುವರ್ಣಯೇತ್ ॥

ಎಲ್ಲ ಕಾರ್ಯಗಳಲ್ಲಿಯೂ ಮತ್ತು ಎಲ್ಲ ಮಾತುಗಳಲ್ಲಿಯೂ ರಾಜನಿಗೆ ಅನುಕೂಲವಾಗಿರಬೇಕು. ರಾಜನಿಗೆ ಯಾವುದು ಅಪ್ರಿಯವೋ ಅಥವಾ ಅಹಿತವೋ ಅವನಿಗೆ ಅದನ್ನು ವರ್ಣಿಸಬಾರದು.

ನಾಹಮಸ್ಯ ಪ್ರಿಯೋऽಸ್ಮೀತಿ ಮತ್ವಾ ಸೇವೇತ ಪಂಡಿತಃ ।
ಅಪ್ರಮತ್ತಶ್ಚ ಯತ್ತಶ್ಚ ಹಿತಂ ಕುರ್ಯಾತ್ ಪ್ರಿಯಂ ಚ ತತ್ ॥೨೮॥

ಪಂಡಿತನಾದವನೂ ಸಹ ನಾನು ರಾಜನಿಗೆ ಪ್ರಿಯನಾದವನು ಎಂಬ ಭಾವನೆಯಿಂದ ಸೇವೆಯನ್ನು ಮಾಡಬಾರದು. ಪ್ರಮಾದಕ್ಕೆ ಒಳಗಾಗದೇ ಪ್ರಯತ್ನ ಪೂರ್ವಕವಾಗಿ ರಾಜನಿಗೆ ಹಿತವನ್ನು ಮಾಡಬೇಕು. ಅದೇ ರಾಜನಿಗೆ ಪ್ರಿಯವಾಗಿರುತ್ತದೆ.

ದಕ್ಷಿಣಂ ವಾऽಥ ವಾಮಂ ವಾ ಭಾಗಮಾಸೀತ ಪಂಡಿತಃ ।
ರಕ್ಷಿಣಾಮಾತ್ತಶಸ್ತ್ರಾಣಾಂ ಪಶ್ಚಾತ್ ಸ್ಥಾನಂ ವಿಧೀಯತೇ ॥೨೯॥

ಪಂಡಿತನಾದವನು ರಾಜನ ಮುಂದೆ ಎಡಭಾಗದಲ್ಲಿ ಅಥವಾ ಬಲಭಾಗದಲ್ಲಿ ಕುಳಿತುಕೊಳ್ಳಬೇಕು. ರಾಜನ ಹಿಂದುಗಡೆಯ ಸ್ಥಾನವು ಶಸ್ತ್ರಧಾರಿಗಳಾದ ಅಂಗರಕ್ಷಕರಿಗೆ ಸೇರಿದುದು ಎಂದು ಹೇಳಲ್ಪಡುತ್ತದೆ.

ಪೂಜ್ಯಮಾನೋऽಪಿ ಯೋ ರಾಜಾ ನರೋ ನ ಪ್ರತಿಪೂಜಯೇತ್ ।
ನೈತಮಾರಾಧಯೇಜ್ಜಾತು ಶಾಸ್ತಾ ಶಿಷ್ಯಾನಿವಾಲಸಾನ್ ॥೩೦॥

ಯಾವನು ರಾಜನು ತನ್ನನ್ನು ಪೂಜಿಸಿದರೂ ರಾಜನಿಗೆ ಪ್ರತಿಯಾಗಿ ಪೂಜೆಯನ್ನು ಸಲ್ಲಿಸುವುದಿಲ್ಲವೋ ಅಂತಹವನನ್ನು ಸೋಮಾರಿಗಳಾದ ಶಿಷ್ಯರನ್ನು ಗುರುವು ಹೇಗೆ ಪೂಜಿಸುವುದಿಲ್ಲವೋ ಹಾಗೆ ಎಂದೂ ಪೂಜಿಸಬಾರದು.

ನಾಸ್ಯ ಯುಗ್ಯಂ ನ ಪರ್ಯಂಕಂ ನಾಸನಂ ನ ರಥಂ ತಥಾ ।
ಆರೋಹೇತ್ ಸಾಂತ್ವಿತೋऽಸ್ಮೀತಿ ಯೋ ರಾಜವಸತಿಂ ಭವೇತ್ ॥೩೧॥

ಯೋ ವೈ ಗೃಹೇಭ್ಯಃ ಪ್ರವಸನ್ ಚಾತ್ಮಾನಮನುಸಂಸ್ಮರೇತ್ ।
ಉತ್ಥಾನೇ ನಿತ್ಯಸಂಕಲ್ಪೋ ನಿಸ್ತಂದ್ರೀ ಸಂಯತಾತ್ಮವಾನ್ ॥೩೨॥

ರಾಜನ ಅರಮನೆಯಲ್ಲಿ ವಾಸಮಾಡುವವನು ರಾಜನು ತನಗೆ ಸಮಾಧಾನ ಮಾಡಿದ್ದಾನೆಂದು ತಿಳಿದು ಅವನ ಅಶ್ವಗಳನ್ನಾಗಲೀ, ಆಸನವನ್ನಾಗಲೀ, ಮಂಚವನ್ನಾಗಲೀ, ರಥವನ್ನಾಗಲೀ ಏರಬಾರದು. ಯಾವನು ರಾಜನು ತನಗೆ ಒಪ್ಪಿಸಿದ ಕಾರ್ಯವನ್ನು ಮಾಡಲು ಅದನ್ನು ಸ್ಮರಿಸಿಕೊಂಡು ಮನೆಯಿಂದ ಹೊರಗೆ ಪ್ರವೇಶ ಮಾಡುತ್ತಾನೋ ಅವನು ಯಾವಾಗಲೂ ಪ್ರಯತ್ನಶೀಲನಾಗಿದ್ದು ಆ ಕಾರ್ಯದ

ನಿತ್ಯಸಂಕಲ್ಪವನ್ನು ಹೊಂದಿದ್ದು ಸೋಮಾರಿತನವನ್ನು ಬಿಟ್ಟು ಮನೋನಿಗ್ರಹದಿಂದ ಕೂಡಿದವನಾಗಿರಬೇಕು.

ಪರೀತಃ ಕ್ಷುತ್ತಿಪಾಸಾಭ್ಯಾಂ ವಿಹಾಯ ಪರಿದೇವನಮ್ ।
ದುಃಖೇನ ಸುಖಮನ್ವಿಚ್ಛೇದ್ ಯೋ ರಾಜವಸತಿಂ ವಸೇತ್ ॥೩೩॥

ರಾಜನ ಮನೆಯಲ್ಲಿ ವಾಸಮಾಡುವ ಸೇವಕನು ಹಸಿವು, ನೀರಡಿಕೆಗಳಿಂದ ಪೀಡಿತನಾದರೂ ಗೋಳಾಡುವುದನ್ನು ಬಿಟ್ಟು ದುಃಖದಿಂದ ಸುಖವನ್ನು ಸಂಪಾದಿಸಲು ಪ್ರಯತ್ನ ಪಡಬೇಕು.

ಅನ್ಯೇಷು ಪ್ರೇಷ್ಯಮಾಣೇಷು ಪುರಸ್ತಾದ್ ಧೀರ ಉತ್ಪತೇತ್ ।
ಕರಿಷ್ಯಾಮ್ಯಹಮಿತ್ಯೇವಂ ಯಃ ಸ ರಾಜಸು ಸಿದ್ಧ್ಯತಿ ॥೩೪॥

ಒಂದು ಕಾರ್ಯಕ್ಕಾಗಿ ಬೇರೆಯವರು ಕಳುಹಿಸಲ್ಪಡುತ್ತಿರಲು ಯಾವ ಧೀರನಾದವನು ತಾನೇ ರಾಜನ ಮುಂದೆ ನಿಂತು ನಾನೇ ಈ ಕೆಲಸವನ್ನು ಮಾಡುವೆನು ಎಂದು ಹೇಳುವನೋ ಅಂತಹವನು ರಾಜನ ಬಳಿಯಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ.

ಉಷ್ಣೇ ವಾ ಯದಿ ವಾ ಶೀತೇ ರಾತ್ರೌ ವಾ ಯದಿ ವಾ ದಿವಾ ।
ಆದಿಷ್ಟೋ ನ ವಿಕಲ್ಪೇತ ಯಃ ಸ ರಾಜಸು ಸಿದ್ಧ್ಯತಿ ॥೩೫॥

ಋಜುರ್ಮೃದುಃ ಸತ್ಯವಾದೀ ಯಃ ಸ ರಾಜಸು ಸಿದ್ಧ್ಯತಿ ॥೩೬॥

ಉಷ್ಣವಾಗಲೀ ಅಥವಾ ಶೀತವಾಗಲೀ, ರಾತ್ರಿಯಾಗಲೀ ಅಥವಾ ಹಗಲಾಗಲೀ ರಾಜನು ಆದೇಶವನ್ನು ಕೊಟ್ಟಾಗ ಯಾವನು ವಿಚಾರ ಮಾಡುವುದಿಲ್ಲವೋ ಅಂತಹವನು ರಾಜನ ಮನೆಯಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ. ನೇರಸ್ವಭಾವದವನೂ, ಮೃದುವೂ, ಸತ್ಯವಾದಿಯಾದವನೂ ರಾಜನ ಮನೆಯಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ.

ನೈವ ಲಾಭಾದ್ಧರ್ಷಮಿಯಾನ್ನ ವ್ಯಥೇಚ್ಚ ವಿಮಾನಿತಃ ।
ಸಮಃ ಪೂರ್ಣತುಲೇವ ಸ್ಯಾದ್ ಯೋ ರಾಜವಸತಿಂ ವಸೇತ್ ॥೩೭॥

ರಾಜನ ಮನೆಯಲ್ಲಿ ವಾಸಮಾಡುವವನು ಲಾಭದಿಂದ ಸಂತೋಷವನ್ನು ಪಡಬಾರದು. ಅವಮಾನ ಮಾಡಿದಾಗ ದುಃಖವನ್ನು ಪಡಬಾರದು. ಪೂರ್ಣವಾದ ತಕ್ಕಡಿಯಂತೆ ಯಾವಾಗಲೂ ಸಮಾಧಾನದಿಂದ ಇರಬೇಕು.

ಅಲ್ಪೇಚ್ಛೋ ಧೃತಿಮಾನ್ ರಾಜ್ಞಃ ಛಾಯೇವಾನಪಗಃ ಸದಾ ।
ದಕ್ಷಃ ಪ್ರದಕ್ಷಿಣೋ ಧೀರೋ ಯೋ ರಾಜವಸತಿಂ ವಸೇತ್ ॥೩೮॥

ರಾಜನ ಮನೆಯಲ್ಲಿ ವಾಸಮಾಡುವವನು ಅಲ್ಪತೃಪ್ತನಾಗಿದ್ದು, ಧೈರ್ಯಶಾಲಿಯಾಗಿದ್ದು, ರಾಜನನ್ನು ಯಾವಾಗಲೂ ನೆರಳಿನಂತೆ ಅನುಸರಿಸಿ ದಕ್ಷನೂ ಮತ್ತು ಅನುಕೂಲನೂ ಆಗಿರಬೇಕು.

ಇತಿಹಾಸಪುರಾಣಜ್ಞಃ ಕುಶಲಃ ಸತ್ಕಥಾಸು ಚ ।
ವದಾನ್ಯಃ ಸತ್ಯವಾಕ್ ಚಾಪಿ ಯೋ ರಾಜವಸತಿಂ ವಸೇತ್ ॥೩೯॥

ರಾಜನ ಮನೆಯಲ್ಲಿ ವಾಸಮಾಡುವವನು ಇತಿಹಾಸ ಪುರಾಣಗಳನ್ನು ತಿಳಿದವನೂ, ಸತ್ಕಥೆಯಲ್ಲಿ ಕುಶಲನಾದವನೂ, ಉದಾರಿಯೂ, ಸತ್ಯವಚನನೂ ಆಗಿರಬೇಕು.

ನ ಮಿಥೋ ಭಾಷಿತಂ ರಾಜ್ಞೋ ಮನುಷ್ಯೇಷು ಪ್ರಕಾಶಯೇತ್ ।
ಯಂ ಚಾಸೂಯಂತಿ ರಾಜಾನಃ ಪುರುಷಂ ನ ವದೇಚ್ಚ ತಮ್ ॥೪೦॥

ರಾಜನಿಗೂ ಮತ್ತು ತನಗೂ ನಡೆದ ಸಂಭಾಷಣೆಯನ್ನು ಬೇರೆ ಯಾರಿಗೂ ತಿಳಿಸಬಾರದು. ರಾಜನು ಯಾರ ಮೇಲೆ ಅಸೂಯೆಪಡುತ್ತಾನೋ ಅಂತಹ ಪುರುಷನ ಜೊತೆಯಲ್ಲಿ ಮಾತನಾಡಬಾರದು.

ನೈಷಾಂ ಕರ್ಮಸು ಸಂಯುಕ್ತೋ ಧನಂ ಕಿಂಚಿದಪಿ ಸ್ಪೃಶೇತ್ ।
ಪ್ರಾಪ್ನುಯಾದಾದದಾನೋ ಹಿ ಬಂಧಂ ವಾ ವಧಮೇವ ವಾ ॥೪೧॥

ರಾಜಕಾರ್ಯದಲ್ಲಿ ನಿರತನಾದವನು ಕಣ್ಣಿಗೆ ಕಾಣುವ ಯಾವ ಧನವನ್ನೂ ಮುಟ್ಟಬಾರದು. ಹಾಗೇನಾದರೂ ಧನವನ್ನು ತೆಗೆದುಕೊಂಡರೆ ರಾಜನಿಂದ ಬಂಧನವನ್ನಾಗಲೀ ಅಥವಾ ವಧೆಯನ್ನಾಗಲೀ ಪಡೆಯುತ್ತಾನೆ. (ಅವನು ಪ್ರಸನ್ನನಾದ ರಾಜನಿಂದಲೇ ಧನ, ವಸ್ತ್ರಮೊದಲಾದ ಎಲ್ಲವನ್ನೂ ಪಡೆಯುತ್ತಾನೆ).

ಯಾನಂ ವಸ್ತ್ರಮಲಂಕಾರಂ ಯಚ್ಚಾನ್ಯತ್ ಸಂಪ್ರಯಚ್ಛತಿ ।
ತದೇವ ಧಾರಯನ್ನಿತ್ಯಮೇವಂ ಪ್ರಿಯತರೋ ಭವೇತ್ ॥೪೨॥

ರಾಜನು ಯಾವ ವಾಹನವನ್ನು ಅಥವಾ ವಸ್ತ್ರವನ್ನು ಅಥವಾ ಅಲಂಕಾರವನ್ನು ಕೊಡುತ್ತಾನೆಯೋ ಅದನ್ನೇ ಯಾವಾಗಲೂ ಧರಿಸಬೇಕು. ಹೀಗೆ ಮಾಡಿದರೆ ರಾಜನಿಗೆ ಬಹಳ ಪ್ರಿಯನಾಗುತ್ತಾನೆ.

ತುಲ್ಯೋಪಸ್ಥಿತಯೋಃ ಪಶ್ಯನ್ ಮಮ ಚಾನ್ಯಸ್ಯ ಚೋಭಯೋಃ ।
ಅನ್ಯಂ ಪುಷ್ಣಾತಿ ಮದ್ದೀನಮಿತಿ ಧೀರೋ ನ ಮುಹ್ಯತಿ ॥೪೩॥

ಇಬ್ಬರು ಸೇವಕರೂ ಸಮಾನರಾಗಿರುವಾಗ ರಾಜನು ನನಗಿಂತ ಹೀನನಾದವನನ್ನು ಪೋಷಿಸುತ್ತಿದ್ದಾನೆ ಎಂದು ಧೀರನಾದವನು ಮೋಹಕ್ಕೆ ಒಳಗಾಗಬಾರದು.

ಶ್ರೇಯಾಂಸಂ ಹಿ ಪರಿತ್ಯಜ್ಯ ವೈದ್ಯಂ ಕರ್ಮಣಿ ನಿಷ್ಠಿತಮ್ ।
ಪಾಪೀಯಾಂಸಂ ಪ್ರಕುರ್ವೀರನ್ ಶೀಲಮೇಷಾಂ ತಥಾವಿಧಮ್ ॥೪೪॥

ವಿದ್ವಾಂಸನನ್ನೂ, ಶ್ರೇಷ್ಠನನ್ನೂ ಮತ್ತು ಕಾರ್ಯದಕ್ಷನನ್ನೂ ಬಿಟ್ಟು ರಾಜರು ಒಬ್ಬ ಪಾಪಿಷ್ಠನನ್ನು ಆ ಕಾರ್ಯಕ್ಕೆ ನೇಮಿಸುತ್ತಾರೆ. ರಾಜರ ಸ್ವಭಾವವು ಹೀಗಿರುತ್ತದೆ.

ನೈಷಾಂ ದಾರೇಷು ಕುರ್ವೀತ ಪ್ರಾಜ್ಞೋ ಮೈತ್ರೀಂ ಕಥಂಚನ ।
ರಕ್ಷಿಣಶ್ಚ ನ ಸೇವೇತ ಯೋ ರಾಜವಸತಿಂ ವಸೇತ್ ॥೪೫॥

ರಾಜನ ಮನೆಯಲ್ಲಿ ವಾಸಮಾಡುವವನು ರಾಜನ ಪತ್ನಿಯರಲ್ಲಿ ಯಾವ ಕಾರಣದಿಂದಲೂ ಸ್ನೇಹವನ್ನು ಮಾಡಬಾರದು. ರಾಜನ ಅಂಗರಕ್ಷಕರ ಸೇವೆಯನ್ನೂ ಮಾಡಬಾರದು.

ಯದಾ ಹ್ಯಭಿಸಮೀಕ್ಷೇತ ಪ್ರೇಷ್ಯಂ ಸ್ತ್ರೀಭಿಃ ಸಮಾಗತಮ್ ।
ಬುದ್ಧಿಃ ಪರಿಭವೇತ್ ತಸ್ಯ ರಾಜಾ ಶಂಕೇತ ವಾ ಪುನಃ ॥೪೬॥

ತನ್ನ ಸೇವಕನು ಅಂತಃಪುರದ ಸ್ತ್ರೀಯರ ಜೊತೆಯಲ್ಲಿ ಮಾತನಾಡುವುದನ್ನು ರಾಜನು ನೋಡಿದರೆ ಅವನ ಬುದ್ಧಿಯು ಕೆಡುತ್ತದೆ ಮತ್ತು ಅವನು ಸೇವಕನನ್ನು ಶಂಕಿಸಲೂ ಬಹುದು.

ಶಂಕಿತಸ್ಯ ಪುನಃ ಸ್ತ್ರೀಷು ಕಸ್ಯ ಭೃತ್ಯಸ್ಯ ಭೂಮಿಪಃ ।
ಜೀವಿತಂ ಸಾಧು ಮನ್ಯೇತ ಪ್ರಕೃತಿಭ್ಯೋ ಬಲಾತ್ ಕೃತಃ ॥೪೭॥

ತನ್ನ ಸ್ತ್ರೀಯರ ವಿಷಯದಲ್ಲಿ ಸೇವಕನ ಮೇಲೆ ಶಂಕೆಯುಂಟಾದರೆ ಯಾವ ಸಮಾಧಾನಚಿತ್ತನಾದ ರಾಜನು ಆ ಸೇವಕನ ಜೀವನವನ್ನು ಒಳ್ಳೆಯದು ಎಂದು ಭಾವಿಸಿಯಾನು?

ಹರ್ಷವಸ್ತುಷು ಚಾಪ್ಯತ್ರ ವರ್ತಮಾನೇಷು ಕೇಷುಚಿತ್ ।
ನಾತಿಗಾಢಂ ಪ್ರಹೃಷ್ಟಃ ಸ್ಯಾತ್ ತಾನ್ಯೇವಾಸ್ಯಾನುಪೂಜಯೇತ್ ॥೪೮॥

ತನಗೆ ಸಂತೋಷವನ್ನು ಕೊಡುವ ಅನೇಕ ವಸ್ತುಗಳು ಸುತ್ತಲೂ ಇದ್ದರೂ ಬಹಳವಾಗಿ ಸಂತೋಷಗೊಳ್ಳಬಾರದು ಮತ್ತು ಅವುಗಳಿಂದ ರಾಜನನ್ನೇ ಪೂಜಿಸಬೇಕು.

ಹರ್ಷಾದ್ಧಿ ಮಂದಃ ಪುರುಷಃ ಸ್ವೈರಂ ಕುರ್ವೀತ ವೈಕೃತಮ್ ।
ತಸ್ಯ ಚಾಂತಃಪುರೇ ವೃತ್ತಿಮೀಕ್ಷ್ಣಂಕುರ್ವೀತ ಭೂಮಿಪಃ ॥೪೯॥

ಅಧಮನಾದ ಪುರುಷನು ಸಂತೋಷದಿಂದ ತನ್ನ ಮನಸ್ಸಿಗೆ ಬಂದಂತೆ ವಿಕಾರವನ್ನು ಮಾಡುತ್ತಾನೆ. ಅಂತಃಪುರದಲ್ಲಿದ್ದ ರಾಜನು ಅವನನ್ನು ಗಮನಿಸುತ್ತಾನೆ.

ಅಂತಃಪುರಗತಂ ಹ್ಯೇನಂ ಸ್ತ್ರಿಯಃ ಕ್ಲೀಬಾಶ್ಚ ಸರ್ವಶಃ ।
ವರ್ತಮಾನಂ ಯಥಾವಚ್ಚ ಕುತ್ಸಯೇಯುರಸಂಶಯಮ್ ॥೫೦॥

ಹೀಗೆ ತನ್ನ ಮನಸ್ಸಿಗೆ ಬಂದಂತೆ ಇರುವ ಪುರುಷನನ್ನು ಅಂತಃಪುರದಲ್ಲಿರುವ ಎಲ್ಲ ಸ್ತ್ರೀಯರು ಮತ್ತು ನಪುಂಸಕರು ಖಂಡಿತವಾಗಿ ಮೂದಲಿಸುತ್ತಾರೆ.

ತಸ್ಮಾತ್ ಗಂಭೀರಮಾತ್ಮಾನಂ ಕೃತ್ವಾ ಹರ್ಷಂ ನಿಯಮ್ಯ ಚ ।
ನಿತ್ಯಮಂತಃಪುರೇ ರಾಜ್ಞೋ ನ ವೃತ್ತಂ ಕೀರ್ತಯೇದ್ ಬಹಿಃ ॥೫೧॥

ಆದ್ದರಿಂದ ತನ್ನ ಸಂತೋಷವನ್ನು ನಿಯಂತ್ರಿಸಿಕೊಂಡು ಗಂಭೀರವಾಗಿದ್ದು, ನಿತ್ಯವೂ ಅಂತಃಪುರದಲ್ಲಿ ನಡೆಯುವ ರಾಜನ ಸಮಾಚಾರವನ್ನು ಹೊರಗೆ ಹೇಳಬಾರದು.

ಯಥಾ ಹಿ ಸುಮಹಾಮಂತ್ರೋ ಭಿದ್ಯಮಾನೋ ಹರೇತ್ ಸುಖಮ್ ।
ಏವಮಂತಃಪುರೇ ವೃತ್ತಂ ಶ್ರೂಯಮಾಣಂ ಬಹಿರ್ಭವೇತ್ ॥೫೨॥

ಹೀಗೆ ಮಂತ್ರಾಲೋಚನೆಯನ್ನು ಮಾಡಿದ ವಿಷಯವು ಬಹಿರಂಗವಾದರೆ ಶುಭವನ್ನು ತರುವುದಿಲ್ಲವೋ ಅದರಂತೆ ಅಂತಃಪುರದ ಸಮಾಚಾರವು ಹೊರಗೆ ಹೇಳಲ್ಪಟ್ಟರೆ ಸುಖವನ್ನು ತರುವುದಿಲ್ಲ.

ಯಾ ತು ವೃತ್ತಿರಬಾಹ್ಯಾನಾಂ ಬಾಹ್ಯಾನಾಮಪಿ ಕೇವಲಮ್ ।
ಉಭಯೇಷಾಂ ಸಮಸ್ತಾನಾಂ ಶೃಣು ರಾಜೋಪಜೀವಿನಾಮ್ ॥೫೩॥

ರಾಜನನ್ನು ಉಪಜೀವಿಸುವ ರಾಜನ ಸಮೀಪದಲ್ಲಿ ಅರಮನೆಯಲ್ಲಿರುವ ಮತ್ತು ದೂರದಲ್ಲಿರುವ ಎಲ್ಲ ಸೇವಕರ ನಡತೆಯನ್ನು ಹೇಳುತ್ತೇನೆ, ಕೇಳು.

ನ ಸ್ತ್ರಿಯೋ ಜಾತು ಮನ್ಯೇತ ಬಾಹ್ಯೋ ವಾऽऽಭ್ಯಂತರೋऽಪಿ ವಾ ।
ಅನುಜೀವಿನಾಂ ನರೇಂದ್ರಸ್ತು ಸೃಜೇದ್ಧಿ ಸುಮಹದ್ಭಯಮ್ ॥೫೪॥

ಅಂತಃಪುರದ ಸ್ತ್ರೀಯರ ಜೊತೆಯಲ್ಲಿ ಆಂತರಿಕನಾದವನಾಗಲೀ, ಬಾಹ್ಯನಾದವನಾಗಲೀ ಹೆಚ್ಚಿನ ಸಂಪರ್ಕವನ್ನು ಹೊಂದಬಾರದು. ಇಲ್ಲದಿದ್ದರೆ ರಾಜನು ಅಂತಹ ತನ್ನ ಸೇವಕರಿಗೆ ದೊಡ್ಡ ಭಯವನ್ನು ಉಂಟುಮಾಡಿಯಾನು.

ಮತ್ವಾऽಸ್ಯ ಪ್ರಿಯಮಾತ್ಮಾನಂ ರಾಜರತ್ನಾನಿ ರಾಜವತ್ ।
ಅರಾಜಾ ರಾಜಯೋಗ್ಯಾನಿ ನೋಪಯುಂಜೀತ ಪಂಡಿತಃ ॥೫೫॥

ಪಂಡಿತನಾದವನೂ ಸಹ ತಾನು ರಾಜನಲ್ಲದಿದ್ದರೂ ರಾಜನಿಗೆ ಪ್ರಿಯನೆಂದು ತಿಳಿದು ರಾಜನಿಗೆ ಯೋಗ್ಯವಾದ ರತ್ನಗಳನ್ನು ರಾಜನಂತೆ ಎಂದೂ ಉಪಯೋಗಿಸಬಾರದು.

ಅರಾಜಾನಂ ಹಿ ರತ್ನಾನಿ ರಾಜಕಾಂತಾನಿ ರಾಜವತ್ ।
ಭುಂಜಾನಂ ನ ನರಂ ರಾಜಾ ತಿತಿಕ್ಷೇತಾನುಜೀವಿನಮ್ ॥೫೬॥

ತನ್ನ ಸೇವಕನು ರಾಜನಂತೆ ರಾಜನಿಗೆ ಪ್ರಿಯವಾದ ರತ್ನಗಳನ್ನು ಉಪಯೋಗಿಸುವುದನ್ನು ನೋಡಿದರೆ ರಾಜನು ಎಂದೂ ಸಹಿಸುವುದಿಲ್ಲ.

ತಸ್ಮಾದವ್ಯಕ್ತಭೋಗೇನ ಭೋಕ್ತವ್ಯಂ ಭೂತಿಮಿಚ್ಛತಾ ।
ತುಲ್ಯಭೋಗಂ ಹಿ ರಾಜಾ ತು ಭೃತ್ಯಂ ಕೋಪೇನ ಯೋಜಯೇತ್ ॥

ಆದ್ದರಿಂದ ತನ್ನ ಶ್ರೇಯಸ್ಸನ್ನು ಬಯಸುವವನು ಇನ್ನೊಬ್ಬರಿಗೆ ಗೊತ್ತಿಲ್ಲದ್ದಂತೆ ತನ್ನ ಭೋಗವನ್ನು ಭೋಗಿಸಬೇಕು. ರಾಜನು ತನ್ನ ಸಮಾನವಾದ ಭೋಗವುಳ್ಳ ಭೃತ್ಯನ ಮೇಲೆ ಕೋಪವನ್ನು ತೋರಿಸುತ್ತಾನೆ.

ನ ಚಾಪತ್ಯೇನ ಸಂಪ್ರೀತಿಂ ರಾಜ್ಞಃ ಕುರ್ವೀತ ಕೇನಚಿತ್ ।
ಅಧಿಕ್ಷಿಪ್ತಮನರ್ಥಂ ಚ ದ್ವೇಷ್ಯಂ ಚ ಪರಿವರ್ಜಯೇತ್ ॥೫೮॥

ರಾಜನ ಮಕ್ಕಳ ಜೊತೆಯಲ್ಲಿ ಎಂದೂ ಬಹಳ ಸಲಿಗೆಯನ್ನು ಮಾಡಬಾರದು. ರಾಜನಿಂದ ನಿಂದಿತರಾದವರನ್ನು ಮತ್ತು ರಾಜನ ಶತ್ರುಗಳನ್ನು ಮತ್ತು ರಾಜನು ಕೆಟ್ಟದೆಂದು ಹೇಳಿದ ವಸ್ತುಗಳನ್ನು ಪರಿತ್ಯಾಗ ಮಾಡಬೇಕು.

ಏನಾನ್ ತು ಸೇವಮಾನಸ್ಯ ನರಸೀಮಾಂ ಚತುರ್ವಿಧಾಮ್ ।
ದ್ವಿಧಾ ವಿಭಿದ್ಯತೇ ಮೂಲಂ ರಾಜಮೂಲೋಪಸೇವಿನಃ ॥೫೯॥

ರಾಜ ಸ್ತ್ರೀಯರಿಂದ ದೂರವಿರುವುದು, ರಾಜಭೋಗವನ್ನು ಭೋಗಿಸದಿರುವುದು, ರಾಜನಿಗೆ ಸಮಾನವಾದ ಭೋಗವನ್ನು ಭೋಗಿಸದಿರುವುದು ಮತ್ತು ರಾಜನ ದ್ವೇಷಿಗಳನ್ನು ಪರಿತ್ಯಾಗ ಮಾಡುವುದು ಈ ನಾಲ್ಕು ಸೇವಕರ ಮರ್ಯಾದೆಯ ಸ್ಥಳ (ಎಲ್ಲೆ). ಈ ಎಲ್ಲೆಗಳನ್ನು ಮೀರಿದರೆ ರಾಜಸೇವಕನಿಗೆ ತನ್ನ ಮೂಲವು ಎರಡು ಸೀಳಾಗಿ ಒಡೆಯುತ್ತದೆ.

ಏತೈಸ್ತು ವಿಪರೀತಾ ಯಾ ನರಸೀಮಾ ನರಾಧಿಪೈಃ ।
ತಯಾ ಕುರ್ವೀತ ಸಂಸರ್ಗಂ ನ ವಿರೋಧಂ ಕಥಂಚನ ॥೬೦॥

ಈ ಎಲ್ಲೆಗಳನ್ನು ಮೀರದಂತೆ ರಾಜರು ಹಾಕಿಕೊಟ್ಟ ಒಳಭಾಗದಲ್ಲಿ ಇರುವ ಜನರ ಜೊತೆಯಲ್ಲಿ ಸಂಸರ್ಗವನ್ನು ಮಾಡಿದರೆ ಯಾವ ವಿರೋಧವೂ ಉಂಟಾಗುವುದಿಲ್ಲ.

ಬಂಧುಭಿಶ್ಚ ನರೇಂದ್ರಶ್ಚ ಬಲವದ್ಭಿಶ್ಚ ಮಾನವೈಃ ।
ಸಾಧು ಮನ್ಯೇತ ಸಂಸರ್ಗಂ ನ ವಿರೋಧಂ ಕಥಂಚನ ॥೬೧॥

ರಾಜನ ಬಂಧುಗಳ ಜೊತೆಯಲ್ಲಿಯೂ ಮತ್ತು ಬಲಿಷ್ಠರಾದ ಪುರುಷರ ಜೊತೆಯಲ್ಲಿಯೂ ಸಂಬಂಧವು ಶ್ರೇಷ್ಠವೆಂದು ತಿಳಿಯಬೇಕು. ಅವರ ಜೊತೆಯಲ್ಲಿ ಎಂದೂ ವಿರೋಧವನ್ನು ಮಾಡಬಾರದು.

ಆಭ್ಯಾಂ ತು ನರಸೀಮಾಭ್ಯಾಂ ವಿರುದ್ಧಸ್ಯಾಲ್ಪಚೇತಸಃ ।
ಪ್ರಥಮಂ ಛಿದ್ಯತೇ ನಿದ್ರಾ ದ್ವಿತೀಯಂ ಜಾಯತೇ ಭಯಮ್ ॥೬೨॥

ಸೇವಕರ ಈ ಎರಡು ಎಲ್ಲೆಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವ ಅಲ್ಪ ಮನುಷ್ಯನಿಗೆ ಮೊದಲು ನಿದ್ರೆಯು ನಾಶವಾಗುತ್ತದೆ, ಅನಂತರ ಭಯವು ಉಂಟಾಗುತ್ತದೆ.

ಉದ್ಧತಾನಾಂ ಚ ಯೋ ವೇಷಃ ಕುಹಕಾನಾಂ ಚ ಯೋ ಭವೇತ್ ।
ರಾಜವೇಷಂ ಚ ವಿಸ್ಪಷ್ಟಂ ಸೇವಮಾನೋ ನ ವರ್ಧತೇ ॥೬೩॥

ಇತರಾಭ್ಯಾಂ ತು ವೇಷಾಭ್ಯಾಂ ಪರಿಹಾಸ್ಯೇತ ಬಾಂಧವೈಃ ॥೬೪॥

ರಾಜನಿಗೆ ಉದ್ಧತರಾಗಿರುವವರ ವೇಷವನ್ನು ಮತ್ತು ಕುಹಕಿಗಳ ವೇಷವನ್ನು ಎಂದೂ ಧರಿಸಬಾರದು. ರಾಜವೇಷವನ್ನು ಸ್ಪಷ್ಟವಾಗಿ ಧರಿಸುವ ಸೇವಕನು ಎಂದೂ ಅಭಿವೃದ್ಧಿಯನ್ನು ಹೊಂದುವುದಿಲ್ಲ. ಉಳಿದ ಎರಡು ವೇಷಗಳನ್ನು ಧರಿಸಿದರೆ ಬಂಧುಗಳಿಂದ ಪರಿಹಾಸಕ್ಕೆ ಈಡಾಗುತ್ತಾನೆ.

ಅಪುಂಭಿಶ್ಚೈವ ಪುಂಭಿಶ್ಚ ಸ್ತ್ರೀಭಿಃ ಸ್ತ್ರೀದರ್ಶಿಭಿರ್ನರೈಃ ।
ಶಕ್ಯೇ ಸತಿ ನ ಸಂಭಾಷಾಂ ಜಾತು ಕುರ್ವೀತ ಕರ್ಹಿಚಿತ್ ॥೬೫॥

ನಪುಂಸಕರ ಜೊತೆಯಲ್ಲಿ, ಸ್ತ್ರೀಯರ ಜೊತೆಯಲ್ಲಿ ಮತ್ತು ಸ್ತ್ರೀಲೋಲರ ಜೊತೆಯಲ್ಲಿ ಸಾಧ್ಯವಾದರೆ ಯಾವ ಕಾರಣದಿಂದಲೂ ಸಂಭಾಷಣೆಯನ್ನು ಮಾಡಬಾರದು.

ಪ್ರತಿಸಂಭಾಷಮಾಣೋಽಪಿ ತ್ರಿಭಿರೇತೈರಚೇತನಃ ।
ಶ್ಯೇನಃ ಪೇಶೀಮಿವಾದತ್ತೇ ಪುರುಷೋ ಭೂತಿಮಾತ್ಮನಃ ॥೬೬॥

ಎಚ್ಚರವಿಲ್ಲದೇ ಈ ಮೂರು ಜನರ ಜೊತೆಯಲ್ಲಿ ಮಾತನಾಡುವ ಮನುಷ್ಯನು ಗಿಡುಗವು ಮಾಂಸವನ್ನು ಎತ್ತಿಕೊಂಡು ಹೋದಂತೆ ತನ್ನ ಐಶ್ವರ್ಯವನ್ನು ತಾನೇ ನಾಶಮಾಡಿಕೊಳ್ಳುತ್ತಾನೆ.

ಯೇ ತು ರಾಜ್ಞಾ ಹ್ಯಸತ್ಕಾರಂ ಲಭೇರನ್ ಕಾರಣಾರ್ಥಿನಃ ।
ತೈಶ್ಚ ಸಾಮಂತದೂತೈಶ್ಚ ನ ಸಂಸಜ್ಜೇತ ಕರ್ಹಿಚಿತ್ ॥೬೭॥

ಯಾರು ತಾವು ಮಾಡಿದ ಕಾರ್ಯಗಳಿಂದಾಗಿ ರಾಜನಿಂದ ಅಸತ್ಕಾರವನ್ನು ಪಡೆಯುವರೋ ಅವರ ಜೊತೆಯಲ್ಲಿ ಮತ್ತು ಸಾಮಂತರಾಜರ ದೂತರ ಜೊತೆಯಲ್ಲಿ ಎಂದೂ ಸಂಸರ್ಗವನ್ನು ಹೊಂದಬಾರದು.

ನ ಚಾನ್ಯಾಚರಿತಾಂ ಭೂಮಿಮಸಂದಿಷ್ಟೋ ಮಹೀಪತೇಃ ।
ಉಪಸೇವೇತ ಮೇಧಾವೀ ಯೋ ರಾಜವಸತಿಂ ವಸೇತ್ ॥೬೮॥

ಮೇಧಾವಿಯಾದ ರಾಜಸೇವಕನು ರಾಜನ ಅಪ್ಪಣೆಯಿಲ್ಲದೆ ಇನ್ನೊಬ್ಬರು ನಿಲ್ಲುವ ಪ್ರದೇಶದಲ್ಲಿ ಎಂದೂ ನಿಲ್ಲಬಾರದು.

ನ ಚ ಸಂದರ್ಶನೇ ಕಿಂಚಿತ್ ಪ್ರವೃದ್ಧಮಭಿಸಂಜಪೇತ್ ।
ಅಪಿ ಹೈತದ್ ದರಿದ್ರಾಣಾಂ ವ್ಯಲೀಕಸ್ಥಾನಮುತ್ತಮಮ್ ॥೬೯॥

ರಾಜನನ್ನು ನೋಡಿ ತನ್ನ ಕಾರ್ಯವನ್ನು ಹೇಳಿದ ಮೇಲೆ ಬಹಳ ಹೊತ್ತು ಮಾತನಾಡಬಾರದು. ತಮ್ಮ ಕಾರ್ಯವು ಮುಗಿದ ಮೇಲೆ ಮಾತನಾಡುವುದನ್ನು ದರಿದ್ರರೂ ಸಹಿಸುವುದಿಲ್ಲ, ಇನ್ನು ರಾಜರು ಹೇಗೆ ಸಹಿಸಿಯಾರು?

ಅರ್ಥಕಾಮಾ ಚ ಯಾ ನಾರೀ ರಾಜಾನಂ ಸ್ಯಾದುಪಸ್ಥಿತಾ ।
ಅನುಜೀವೀ ತಥಾ ಯುಕ್ತಾಂ ನಿಧ್ಯಾಯನ್ ದುಷ್ಯತೇ ಚ ಸಃ ॥೭೦॥

ಯಾವ ಹೆಂಗಸು ಧನಕಾಮನೆಯಿಂದ ರಾಜನ ಸಮೀಪಕ್ಕೆ ಬರುತ್ತಾಳೋ ಸೇವಕನಾದವನು ಅಂತಹ ನಾರಿಯನ್ನು ಹೆಚ್ಚು ಚಿಂತನೆಯನ್ನು ಮಾಡಬಾರದು. ಹಾಗೆ ಮಾಡಿದರೆ ಅವನು ದೋಷಕ್ಕೆ ಒಳಗಾಗುತ್ತಾನೆ.

ತಸ್ಮಾನ್ನಾರೀಂ ನ ನಿಧ್ಯಾಯೇತ್ ತಥಾ ಯುಕ್ತಾಂ ವಿಚಕ್ಷಣಃ ।
ತಥಾ ಕ್ಷುತಂ ಚ ವಾತಂ ಚ ನಿಷ್ಠೀವಂ ಚಾಚರೇಚ್ಛನೈಃ ॥೭೧॥

ಆದ್ದರಿಂದ ವಿಚಕ್ಷಣನಾದವನು ಅಂತಹ ನಾರಿಯರ ಚಿಂತೆಯನ್ನು ಬಿಡಬೇಕು. ಅದರಂತೆ ರಾಜನ ಸಮೀಪದಲ್ಲಿ ಸೀನುವುದನ್ನಾಗಲೀ, ಅಪಾನವಾಯುವನ್ನು ಬಿಡುವುದಾಗಲೀ ಅಥವಾ ಉಗುಳುವುದನ್ನಾಗಲೀ ಮಾಡಿದರೆ ಮೆಲ್ಲಗೆ ಮಾಡಬೇಕು.

ನ ನರ್ಮಸು ಹಸೇಜ್ಜಾತು ಮೂಢವೃತ್ತಿರ್ಹಿ ಸಾ ಸ್ಮೃತಾ ।
ಸ್ಮಿತಂ ತು ಮೃದುಪೂರ್ವೇಣ ದರ್ಶಯೀತ ಪ್ರಸಾದಜಮ್ ॥೭೨॥

ಹಾಸ್ಯ ಪ್ರಸಂಗಗಳಲ್ಲಿ ಗಟ್ಟಿಯಾಗಿ ನಗಬಾರದು. ಅದು ಅಧಮಜನರ ನಡವಳಿಕೆ ಎಂದು ಹೇಳಲ್ಪಡುತ್ತದೆ. ತನ್ನ ಸಂತೋಷದಿಂದ ಉಂಟಾದ ನಗುವನ್ನು ಮಂದಹಾಸದಿಂದಲೇ ತೋರಿಸಬೇಕು.

ನ ಚಾಕ್ಷ್ಣೌ ನ ಭುಜೌ ಜಾತು ನ ಚ ವಕ್ತ್ರಂ ಸಮಾಕ್ಷಿಪೇತ್ ।
ನ ಚ ತಿರ್ಯಗವೇಕ್ಷೇತ ಚಕ್ಷುರ್ಭ್ಯಾಂ ಸಮ್ಯಗಾಚರೇತ್ ॥೭೩॥

ರಾಜನ ಎದುರಿನಲ್ಲಿ ಕಣ್ಣುಗಳನ್ನಾಗಲೀ, ಭುಜಗಳನ್ನಾಗಲೀ ಅಥವಾ ಮುಖವನ್ನಾಗಲೀ ಕುಣಿಸಬಾರದು. ಓರೆನೋಟದಿಂದ ನೋಡಬಾರದು. ನೇರವಾಗಿ ನೋಡಬೇಕು.

ಭ್ರುಕುಟಿಂ ಚ ನ ಕುರ್ವೀತ ನ ಚಾಂಗುಷ್ಠೈರ್ಮಹೀಂ ಲಿಖೇತ್ ।
ನಾತಿಗಾಢಂ ಪ್ರಹೃಷ್ಯೇತ ಜಾತು ರಾಜ್ಞಃ ಸಮೀಪತಃ ॥೭೪॥

ರಾಜನ ಸಮೀಪದಲ್ಲಿ ಇರುವವನು ಹುಬ್ಬುಗಳನ್ನು ಗಂಟುಹಾಕಬಾರದು. ಅಂಗುಷ್ಠದಿಂದ ಭೂಮಿಯನ್ನು ಬರೆಯಬಾರದು ಮತ್ತು ಗಟ್ಟಿಯಾಗಿ ಸದ್ದುಮಾಡುತ್ತಾ ಸಂತೋಷವನ್ನು ವ್ಯಕ್ತಪಡಿಸಬಾರದು.

ನ ಪ್ರಶಂಸೇನ್ನ ಚಾಸೂಯೇತ್ ಪ್ರಿಯೇಷು ಚ ಹಿತೇಷು ಚ ।
ಸ್ತೂಯಮಾನೇಷು ವಾ ತತ್ರ ದೂಷ್ಯಮಾಣೇಷು ವಾ ಪುನಃ ॥೭೫॥

ರಾಜನಿಗೆ ಪ್ರಿಯರಾದವರು ಮತ್ತು ಹಿತರಾದವರು ಪ್ರಶಂಸಿಸಲ್ಪಡುವಾಗ ಅಥವಾ ಅಹಿತರಾದವರು ದೂಷಿಸಲ್ಪಡುವಾಗ ತಾನು ಪ್ರಶಂಸೆಯನ್ನಾಗಲೀ, ಅಸೂಯೆಯನ್ನಾಗಲೀ ಮಾಡಬಾರದು.

ಅಥ ಸಂದೃಶ್ಯಮಾನೇಷು ಪ್ರಿಯೇಷು ಚ ಹಿತೇಷು ಚ ।
ಶ್ರೂಯಮಾಣೇಷು ವಾಕ್ಯೇಷು ವರ್ಣಯೇದಮೃತಂ ಯಥಾ ॥೭೬॥

ರಾಜನಿಗೆ ಪ್ರಿಯರಾದವರು ಮತ್ತು ಹಿತರಾದವರು ಕಣ್ಣಿಗೆ ಬಿದ್ದು ಸೇವಕನ ವಾಕ್ಯವನ್ನು ಕೇಳುವುದಾದರೆ ಅವರಿಗೆ ಅಮೃತದಂತೆ ಹಿತವಾಗುವಂತೆ ಮಾತನಾಡಬೇಕು.

ನ ರಾಜ್ಞಃ ಪ್ರತಿಕೂಲಾನಿ ಸೇವಮಾನಃ ಸುಖೀ ಭವೇತ್ ।
ಪುತ್ರೋ ವಾ ಯದಿ ವಾ ಭ್ರಾತಾ ಯದ್ಯಪ್ಯಾತ್ಮಸಮೋ ಭವೇತ್ ॥೭೭॥

ರಾಜನಿಗೆ ಪ್ರತಿಕೂಲವನ್ನು ಆಚರಿಸುವ ಸೇವಕನು ಎಂದೂ ಸುಖಿಯಾಗುವುದಿಲ್ಲ. ಅವನು ರಾಜಪುತ್ರನೇ ಆಗಲಿ ಅಥವಾ ರಾಜಭ್ರಾತೃವೇ ಆಗಲಿ ಅಥವಾ ರಾಜನಿಗೆ ಸಮಾನನಾದವನೇ ಆಗಲಿ ರಾಜನು ಅದನ್ನು ಸಹಿಸುವುದಿಲ್ಲ.

ಅಪ್ರಮತ್ತೋ ಹಿ ರಾಜಾನಂ ರಂಜಯೇತ್ ಶೀಲಸಂಪದಾ ।
ಉತ್ಥಾನೇನ ತು ಮೇಧಾವೀ ಶೌಚೇನ ದ್ವಿವಿಧೇನ ತಮ್ ॥೭೮॥

ಮೇಧಾವಿಯಾದ ಸೇವಕನಾದವನು ಜಾಗರೂಕನಾಗಿ ತನ್ನ ಶೀಲ, ಸಂಪತ್ತುಗಳಿಂದ, ಉದ್ಯಮ ಶೀಲತೆಯಿಂದ ಮತ್ತು ಉಭಯವಿದವಾದ (ಆಂತರಿಕ ಮತ್ತು ಬಾಹ್ಯ) ಶೌಚದಿಂದ ರಾಜನನ್ನು ಸಂತೋಷ ಪಡಿಸಬೇಕು.

ಸ್ನಾನಂ ಹಿ ವಸ್ತ್ರಶುದ್ಧಿಶ್ಚ ಶಾರೀರಂ ಶೌಚಮುಚ್ಯತೇ ।
ಅಸಕ್ತಿಃ ಪ್ರಾಕೃತಾರ್ಥೇಷು ದ್ವಿತೀಯಂ ಶೌಚಮುಚ್ಯತೇ ॥೭೯॥

ಸ್ನಾನ, ಮತ್ತು ಶುದ್ಧವಾದ ವಸ್ತ್ರಧಾರಣ ಇದು ಶರೀರದ ಶುದ್ಧಿ ಎನಿಸುತ್ತದೆ. ಸುತ್ತಲೂ ಕಾಣುವ ವಸ್ತುಗಳಲ್ಲಿ ಆಸಕ್ತಿ ಇಲ್ಲದಿರುವುದು ಆಂತರಿಕವಾದ ಶೌಚವೆನಿಸುತ್ತದೆ.

ರಾಜಾ ಭೋಜೋ ವಿರಾಟ್ ಸಮ್ರಾಟ್ ಕ್ಷತ್ರಿಯೋ ಭೂಪತಿರ್ನೃಪಃ ।
ಯ ಏತೈಃ ಸ್ತೂಯತೇ ಶಬ್ದೈಃ ಕಸ್ತಂ ನಾರ್ಚಿತುಮರ್ಹತಿ ॥೮೦॥

ರಾಜ, ಭೋಜ, ವಿರಾಟ್, ಸಮ್ರಾಟ್, ಕ್ಷತ್ರಿಯ, ಭೂಪತಿ, ನೃಪ ಇಂತಹ ಶಬ್ದಗಳಿಂದ ಸ್ತೋತ್ರ ಮಾಡಲ್ಪಡುವ ರಾಜನನ್ನು ಯಾರು ತಾನೆ ಅರ್ಚಿಸುವುದಿಲ್ಲ?

ತಸ್ಮಾದ್ ಭಕ್ತೋ ಹಿ ಯುಕ್ತಃ ಸನ್ ಸತ್ಯವಾದೀ ಜಿತೇಂದ್ರಿಯಃ ।
ಮೇಧಾವೀ ಧೃತಿಮಾನ್ ಪ್ರಾಜ್ಞಃ ಸಂಶ್ರಯೀತ ಮಹೀಪತಿಮ್ ॥೮೧॥

ಆದ್ದರಿಂದ ಪ್ರಾಜ್ಞನಾದ ಸೇವಕನು ರಾಜನಲ್ಲಿ ಅನುರಾಗವನ್ನು ಹೊಂದಿದವನಾಗಿ ಸತ್ಯವಾದಿಯೂ, ಜಿತೇಂದ್ರಿಯನೂ, ಮೇಧಾವಿಯೂ, ಧೈರ್ಯಶಾಲಿಯೂ ಆಗಿ ರಾಜನನ್ನು ಆಶ್ರಯಿಸಬೇಕು.

ಏಷ ವಃ ಸಮುದಾಚಾರಃ ಸಮುದ್ದಿಷ್ಟೋ ಯಥಾವಿಧಿ ।
ಯಥಾऽರ್ಥಾನ್ ಸಂಪ್ರಪತ್ಸ್ಯಂತೇ ಪಾರ್ಥ ರಾಜೋಪಜೀವಿನಃ ॥೮೨॥

ಎಲೈ ಯುಧಿಷ್ಠಿರನೇ, ರಾಜನನ್ನು ಉಪಜೀವಿಸುವವರು ಹೇಗೆ ಅಭಿವೃದ್ಧಿಯನ್ನು ಹೊಂದುತ್ತಾರೆ ಎಂಬ ವಿಷಯದಲ್ಲಿ ನಾನು ನಿಮಗೆ ಶಾಸ್ತ್ರವಿಧಿಯಂತೆ ನಡೆದುಕೊಳ್ಳಬೇಕಾದ ಸಮಾಚಾರವನ್ನು ತಿಳಿಸಿದ್ದೇನೆ.

ಸಂವತ್ಸರಮಿಮಂ ತಾವದ್ ಏವಂಶೀಲಾ ಬುಭೂಷತ ।
ತತಃ ಸ್ವವಿಷಯಂ ಪ್ರಾಪ್ಯ ಯಥಾಕಾಮಂ ಚರಿಷ್ಯಥ ॥೮೩॥

ಈ ಒಂದು ವರ್ಷವನ್ನು ಇಂತಹ ನಡವಳಿಕೆ ಉಳ್ಳವರಾಗಿ ಕಳೆಯಿರಿ. ಅನಂತರ ನಿಮ್ಮ ರಾಜ್ಯವನ್ನು ಮರಳಿ ಪಡೆದು ನಿಮಗೆ ಇಷ್ಟಬಂದಂತೆ ನಡೆದುಕೊಳ್ಳಬಹುದು.

ವೈಶಂಪಾಯನಃ

ತಂ ತಥೇತ್ಯಬ್ರುವನ್ ಪಾರ್ಥಾಃ ಋಷಿಕಲ್ಪಂ ಯಶಸ್ವಿನಮ್ ।
ಪ್ರಹೃಷ್ಟಾಶ್ಚಾಭಿವಾದ್ಯೈನಮುಪಾತಿಷ್ಠನ್ ಪರಂತಪಾಃ ॥೮೪॥

ವೈಶಂಪಾಯನ– ಪರಂತಪರಾದ ಪಾರ್ಥರು ಋಷಿಸಮಾನರಾದ, ಕೀರ್ತಿವಂತರಾದ ಧೌಮ್ಯರ ಮಾತುಗಳನ್ನು ಕೇಳಿ ಸಂತೋಷಗೊಂಡು ಹಾಗೆಯೇ ಆಗಲಿ ಎಂದು ಹೇಳಿ ಅವರಿಗೆ ನಮಸ್ಕಾರವನ್ನು ಮಾಡಿ ಅಲ್ಲಿಂದ ಹೊರಟರು.

ತೇಷಾಂ ಪ್ರತಿಷ್ಠಮಾನಾನಾಂ ಮಂತ್ರಾಂಶ್ಚ ಬ್ರಾಹ್ಮಣೋऽಜಪತ್ ।
ಸರ್ವವಿಘ್ನಪ್ರಶಮನಾನರ್ಥಸಿದ್ಧಿಕರಾಂಸ್ತಥಾ ॥೮೫॥

ಭವಾಯ ರಾಷ್ಟ್ರಲಾಭಾಯ ಪರಾಯ ವಿಜಯಾಯ ಚ ॥೮೬॥

ಅವರು ಹೊರಟಂತೆ ಬ್ರಾಹ್ಮಣರಾದ ಧೌಮ್ಯರು ಎಲ್ಲ ವಿಘ್ನಗಳನ್ನೂ ಪರಿಹಾರ ಮಾಡುವಂತಹ, ಅರ್ಥಸಿದ್ಧಿಯನ್ನು ಉಂಟುಮಾಡತಕ್ಕಂತಹ, ಸಮೃದ್ಧಿಯನ್ನೂ, ರಾಷ್ಟ್ರಲಾಭವನ್ನೂ ಮತ್ತು ಶ್ರೇಷ್ಠವಾದ ವಿಜಯವನ್ನೂ ಸಂಪಾದಿಸಿಕೊಡುವಂತಹ ಮಂತ್ರಗಳನ್ನು ಜಪಿಸಿದರು.

ತತೋಽಬ್ರವೀದಸೌ ವಿಪ್ರೋ ವಾಚಮಾಶೀಃ ಪ್ರಯುಜ್ಯ ಚ ।
ಸ್ವದ್ರವ್ಯಪ್ರತಿಲಾಭಾಯ ಶತ್ರೂಣಾಂ ವಿನಯಾಯ ಚ ॥೮೭॥

ಸ್ವಸ್ತಿ ವೋಽಸ್ತು ಶಿವಃ ಪಂಥಾ ದ್ರಕ್ಷ್ಯಾಮಿ ಪುನರಾಗತಾನ್ ।

ಅನಂತರ ತಮ್ಮ ದ್ರವ್ಯವನ್ನು ಪುನಃ ಪಡೆಯುವುದಕ್ಕೆ ಮತ್ತು ಶತ್ರುಗಳನ್ನು ಸದೆ ಬಡಿಯುವುದಕ್ಕೆ ಯೋಗ್ಯವಾದ ಆಶೀರ್ವಾದಗಳನ್ನು ಮಾಡಿ 'ನಿಮಗೆ ಮಂಗಳವಾಗಲಿ, ನಿಮ್ಮ ಮಾರ್ಗವು ಕ್ಷೇಮದಿಂದಿರಲಿ, ಪುನಃ ಹಿಂದಿರುಗಿದ ನಿಮ್ಮನ್ನು ನೋಡುವೆನು' ಎಂದು ಹೇಳಿದರು.

ಇತ್ಯುಕ್ತಾ ಹೃಷ್ಟಮನಸೋ ಗುರುಣಾ ತೇನ ಧೀಮತಾ ॥೮೮॥

ಯುಧಿಷ್ಠಿರಮುಖಾಃ ಸರ್ವೇ ಗಂತುಂ ಸಮುಪಚಕ್ರಮುಃ ॥೮೯॥

ಮೇಧಾವಿಗಳಾದ ಗುರುಗಳಿಂದ ಹೀಗೆ ಹೇಳಲ್ಪಟ್ಟವರಾಗಿ ಸಂತೋಷಗೊಂಡ ಮನಸ್ಸುಳ್ಳ ಯುಧಿಷ್ಠಿರ ಮೊದಲಾದವರೆಲ್ಲರೂ ಅಲ್ಲಿಂದ ಹೊರಡಲು ಉದ್ಯುಕ್ತರಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಪಂಚಮೋಽಧ್ಯಾಯಃ ॥
॥ ವೈರಾಟಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★

ಆರನೆಯ ಅಧ್ಯಾಯ

ದ್ರೌಪದಿಯ ಜೊತೆಯಲ್ಲಿ ಪಾಂಡವರಿಂದ ವಿರಾಟನಗರ ಪ್ರಾಪ್ತಿ

ವೈಶಂಪಾಯನಃ

ತತಃಪಾವಕಮುಜ್ಜ್ವಾಲ್ಯ ಮಂತ್ರಹವ್ಯಪುರಸ್ಕೃತಮ್ ॥೧॥

ತೇऽಗ್ನಿಂ ಪ್ರದಕ್ಷಿಣಂ ಕೃತ್ವಾ ಬ್ರಾಹ್ಮಣಂ ಚ ಪುರೋಹಿತಮ್ ।
ಅಭಿವಾದ್ಯ ತತಃ ಸರ್ವೇ ಪ್ರಾದ್ರವನ್ ಸಹ ಕೃಷ್ಣಯಾ ॥೨॥

ವೈಶಂಪಾಯನ– ಅನಂತರ ಮಂತ್ರ ಮತ್ತು ಹವಿಸ್ಸುಗಳಿಂದ ಅಗ್ನಿಯನ್ನು ಪ್ರಜ್ವಲಗೊಳಿಸಿ ಪಾಂಡವರು ಅಗ್ನಿಯನ್ನು ಮತ್ತು ಪುರೋಹಿತರಾದ ಬ್ರಾಹ್ಮಣರನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಎಲ್ಲರೂ ದ್ರೌಪದಿಯ ಜೊತೆಯಲ್ಲಿ ಅಲ್ಲಿಂದ ಹೊರಟರು.

ಯುಧಿಷ್ಠಿರಃ

ಅನುಶಿಷ್ಟೋऽಸ್ಮಿ ಭದ್ರಂ ತೇ ನೈತದ್ ವಕ್ತಾऽಸ್ತಿ ಕಶ್ಚನ ।
ಕುಂತೀಮೃತೇ ಮಾತರಂ ಚ ವಿದುರಂ ಚ ಮಹಾಮತಿಮ್ ॥೩॥

ಯದೇವಾನಂತರಂ ಕಾರ್ಯಂ ತದ್ ಭವಾನ್ ಕರ್ತುಮರ್ಹತಿ ।
ತಾರಣಾಯ ಸುದುಃಖಸ್ಯ ಪ್ರಸ್ಥಾನಾಯಾಭಯಾಯ ಚ ॥೪॥

ಯುಧಿಷ್ಠಿರ– ನಮಗೆ ಒಳ್ಳೆಯ ಉಪದೇಶವನ್ನು ನೀಡಿದ್ದೀರಿ. ನಿಮಗೆ ಮಂಗಳವಾಗಲಿ. ತಾಯಿಯಾದ ಕುಂತಿಯನ್ನು ಬಿಟ್ಟು ಮತ್ತು ಮಹಾಮತಿಯಾದ ವಿದುರನನ್ನು ಬಿಟ್ಟು ನಮಗೆ ಇಂತಹ ಮಾತನ್ನು ಹೇಳುವವರು ಯಾರೂ ಇಲ್ಲ. ನಾವು ಈ ದುಃಖವನ್ನು ದಾಟುವುದಕ್ಕೆ ಮತ್ತು ಪ್ರಯಾಣ ಮಾಡುವುದಕ್ಕೆ ಮತ್ತು ಕ್ಷೇಮದಿಂದಿರುವುದಕ್ಕೆ ಮುಂದೆ ಮಾಡಬೇಕಾದ ಕಾರ್ಯಗಳನ್ನು ತಾವು ಮಾಡಬೇಕು.

ವೈಶಂಪಾಯನಃ

ತೇಷಾಂ ಪ್ರತಿಷ್ಠಮಾನಾನಾಂ ಧೌಮ್ಯೋ ಮಂತ್ರಾನಥಾಜಪತ್ ।
ಸರ್ವವಿಘ್ನಪ್ರಶಮನಾನ್ ಅರ್ಥಸಿದ್ಧಿಕರಾಂಸ್ತಥಾ ॥೫॥

ವೈಶಂಪಾಯನ– ಪಾಂಡವರು ಹೊರಟಂತೆ ಧೌಮ್ಯರು ಸರ್ವವಿಘ್ನಗಳನ್ನು ಪರಿಹಾರ ಮಾಡುವ ಮತ್ತು ಅರ್ಥಸಿದ್ಧಿಯನ್ನು ಉಂಟುಮಾಡುವ ಮಂತ್ರಗಳನ್ನು ಜಪಿಸಿದರು.

ಯಾಜ್ಞಸೇನೀಂ ಪುರಸ್ಕೃತ್ಯ ಸರ್ವ ಏವ ಮಹಾರಥಾಃ ।
ಪ್ರಾದ್ರವನ್ ಸಹ ಧೌಮ್ಯೇನ ಬದ್ಧಶಸ್ತ್ರಾ ವನಾದ್ ವನಮ್ ॥೬॥

ಮಹಾರಥರಾದ ಅವರೆಲ್ಲರೂ ಶಸ್ತ್ರಗಳನ್ನು ಕಟ್ಟಿಕೊಂಡು, ದ್ರೌಪದಿಯನ್ನು ಮುಂದೆ ಮಾಡಿಕೊಂಡು ಧೌಮ್ಯರ ಜೊತೆಯಲ್ಲಿ ವನದಿಂದ ವನಕ್ಕೆ ಓಡಿದರು.

ತೇ ವೀರಾ ಬದ್ಧನಿಸ್ತ್ರಿಂಶಾ ಧನುರ್ಬಾಣಕಲಾಪಿನಃ ।
ಅಗಚ್ಛನ್ ಭೀಮಧನ್ವಾನಃ ಕಾಮ್ಯಕಾದ್ ಯಮುನಾಂ ನದೀಮ್ ॥೭॥

ಕತ್ತಿಗಳನ್ನು ಕಟ್ಟಿಕೊಂಡು ಧನುರ್ಬಾಣಕಲಾಪಗಳನ್ನು ಧರಿಸಿದ ಆ ವೀರರು ಕೈಯಲ್ಲಿ ಭಯಂಕರವಾದ ಧನುಸ್ಸನ್ನು ಹಿಡಿದು ದ್ವೈತವನದಿಂದ ಕಾಮ್ಯಕವನಕ್ಕೂ, ಅಲ್ಲಿಂದ ಮುಂದೆ ಯಮುನಾ ನದಿಗೂ ಹೋದರು.

ಉತ್ತರೇಣ ದಶಾರ್ಣಾನಾಂ ಪಾಂಚಾಲಾನ್ ದಕ್ಷಿಣೇನ ತು ।
ಅಂತರೇಣ ಯಕೃಲ್ಲೋಮಾನ್ ಶೂರಸೇನಾಂಶ್ಚ ಪಾಂಡವಾಃ ॥೮॥

ಕಾಳಿಂದೀದಕ್ಷಿಣಂ ತೀರಮನ್ವಗಚ್ಛನ್ ಪದಾತಯಃ ।
ತತಃ ಪ್ರತ್ಯಕ್ ಪ್ರಯಾತಾಸ್ತೇ ಸಂಕ್ರಾಮಂತೋ ವನಾದ್ ವನಮ್ ॥೯॥

ದಶಾರ್ಣದೇಶದ ಉತ್ತರಭಾಗದಲ್ಲಿ ಮತ್ತು ಪಾಂಚಾಲದೇಶದ ದಕ್ಷಿಣ ಭಾಗದಲ್ಲಿ ಯಕೃಲ್ಲೋಮ ಮತ್ತು ಶೂರಸೇನ ದೇಶಗಳ ಮಧ್ಯದಲ್ಲಿ ಪಾದದಿಂದಲೇ ನಡೆದ ಪಾಂಡವರು ಯಮುನಾ ನದಿಯ ದಕ್ಷಿಣ ತೀರವನ್ನು ತಲುಪಿದರು. ಅಲ್ಲಿಂದ ಅವರು ಪಶ್ಚಿಮಾಭಿಮುಖವಾಗಿ ನಡೆಯುತ್ತಾ ಕಾಡಿನಿಂದ ಕಾಡಿಗೆ ಹೊರಟರು.

ವಸಾನಾ ವನದುರ್ಗೇಷು ರಮಣೀಯೇಷು ಧನ್ವಿನಃ ।
ಪಲ್ವಲೇಷು ಚ ರಮ್ಯೇಷು ನದೀನಾಂ ಸಂಗಮೇಷು ಚ ॥೧೦॥

ಧನುಸ್ಸನ್ನು ಧರಿಸಿದ ಅವರು ಮನೋಹರವಾದ ವನದುರ್ಗಗಳಲ್ಲಿಯೂ, ಮನೋಹರವಾದ ಜೌಗು ಪ್ರದೇಶದಲ್ಲಿಯೂ ಮತ್ತು ನದಿಗಳ ಸಂಗಮಗಳಲ್ಲಿಯೂ ವಿಶ್ರಮಿಸಿಕೊಳ್ಳುತ್ತಾ ಮುಂದೆ ನಡೆದರು.

ದ್ರುಮಾನ್ ನಾನಾವಿಧಾಕಾರಾನ್ ನಾನಾವಿಧಲತಾಕುಲಾನ್ ।
ಕುಸುಮಾಢ್ಯಾನ್ ಮನಃಕಾಂತಾನ್ ಶುಭಗಂಧಾನ್ ಮನೋರಮಾನ್॥

ಪಾರ್ಥಾ ನಿರೀಕ್ಷಮಾಣಾಶ್ಚ ತಾನ್ ದ್ರುಮಾನ್ ಪುಷ್ಪಶಾಲಿನಃ ।
ಜಿಘ್ರಂತಃ ಪುಷ್ಪಗಂಧಾಂಶ್ಚ ಸುಸುಗಂಧಾನ್ ಮನೋರಮಾನ್ ॥೧೨॥

ನಾನಾ ವಿಧವಾದ ಆಕಾರವನ್ನು ಹೊಂದಿದ, ನಾನಾ ವಿಧವಾದ ಲತೆಗಳಿಂದ ತುಂಬಿದ ಪುಷ್ಪಭರಿತವಾದ, ಮನೋಹರವಾದ ಶುಭಗಂಧವುಳ್ಳ ಮರಗಳನ್ನು ನೋಡುತ್ತಾ ಆ ಪುಷ್ಪಗಳ ಮನೋಹರವಾದ ಸುವಾಸನೆಯನ್ನು ಆಘ್ರಾಣಿಸುತ್ತಾ ಪಾಂಡವರು ಮುಂದೆ ಸಾಗಿದರು.

ವಿಧ್ಯಂತೋ ಮೃಗಜಾತಾನಿ ಮಹೇಷ್ವಾಸಾ ಮಹಾಬಲಾಃ ।
ಉಷಿತ್ವಾ ದ್ವಾದಶ ಸಮಾ ವನೇ ಪರಪುರಂಜಯಾಃ ॥೧೩॥

ಲುಬ್ಧಾನ್ ಬ್ರುವಾಣಾ ಮಾತ್ಸ್ಯಸ್ಯ ವಿಷಯಂ ಪ್ರಾವಿಶಂಸ್ತದಾ ॥೧೪॥

ಮಹಾಧನುಷ್ಕರೂ ಮತ್ತು ಮಹಾಬಲರೂ ಮತ್ತು ಪರಪುರಂಜಯರೂ ಆದ ಅವರು ಹನ್ನೆರಡು ವರ್ಷಗಳ ಕಾಲ ಕಾಡಿನಲ್ಲಿ ವಾಸಮಾಡಿದವರಾಗಿ ಸದ್ಯದಲ್ಲಿ ಅನೇಕ ಮೃಗಗಳನ್ನು ಸಂಹರಿಸುತ್ತಾ ತಮ್ಮನ್ನು ಬೇಡರೆಂದು ಹೇಳಿಕೊಂಡು ಮತ್ಸ್ಯದೇಶವನ್ನು ಪ್ರವೇಶಿಸಿದರು.

ತತ್ರ ಧೌಮ್ಯಂ ಮಹಾತ್ಮಾನಂ ಪಾಂಡವೇಯಾ ವ್ಯಸರ್ಜಯನ್ ।
ಅಗ್ನಿಹೋತ್ರಂ ಪರಿಚರನ್ ಸೋಽಬುದ್ಧೋಽವಸದಾಶ್ರಮೇ ॥೧೫॥

ಅಲ್ಲಿ ಪಾಂಡುಪುತ್ರರು ಮಹಾತ್ಮರಾದ ಧೌಮ್ಯರನ್ನು ಬೀಳ್ಕೊಟ್ಟರು. ಅವರಾದರೂ ಅಗ್ನಿಹೋತ್ರವನ್ನು ರಕ್ಷಣೆ ಮಾಡುತ್ತಾ ಯಾರಿಗೂ ತಿಳಿಯದಂತೆ ತಮ್ಮ ಆಶ್ರಮದಲ್ಲಿ ವಾಸಮಾಡಿದರು.

ತತೋ ಜನಪದಂ ಪ್ರಾಪ್ಯ ಕೃಷ್ಣಾ ರಾಜಾನಮಬ್ರವೀತ್ ॥೧೬॥

ಪಶ್ಯೈಕಪದ್ಯೋ ದೃಶ್ಯಂತೇ ಕ್ಷೇತ್ರೇ ಗೋಷ್ಠಂ ಸಮಾವೃತಾಃ ।
ವೃಕ್ಷಾಂಶ್ಚೋಪವನೋಪೇತಾನ್ ಗ್ರಾಮಾಣಾಂ ನಗರಸ್ಯ ಚ ॥೧೭॥

ಅನಂತರ ಮತ್ಸ್ಯದೇಶವನ್ನು ತಲುಪಿದ ದ್ರೌಪದಿಯು ರಾಜನನ್ನು ಕುರಿತು 'ನೋಡು, ಗೋಷ್ಠಗಳ ಸುತ್ತಲೂ ಇರುವ ಫಲಗಳಲ್ಲಿ ಏಕಪದಿ ಹುಳುಗಳು ಕಂಡುಬರುತ್ತಿವೆ. ವೃಕ್ಷಗಳು ಗ್ರಾಮಗಳ ಮತ್ತು ನಗರಗಳ ಉಪವನಗಳಿಂದ ಮಿಶ್ರಿತವಾಗಿರುವುದು ಕಂಡುಬರುತ್ತಿದೆ.

ವ್ಯಕ್ತಂ ದೂರೇ ವಿರಾಟಸ್ಯ ರಾಜಧಾನೀ ಭವಿಷ್ಯತಿ ।
ವಸಾಮೇಹಾಪರಾಂ ರಾತ್ರಿಂ ಬಲವಾನ್ ಮೇ ಪರಿಶ್ರಮಃ ॥೧೮॥

ಬಹುಶಃ ವಿರಾಟನ ರಾಜಧಾನಿಯು ದೂರದಲ್ಲಿದೆ ಎಂದು ತೋರುತ್ತದೆ. ಇದೊಂದು ರಾತ್ರಿ ಇಲ್ಲಿಯೇ ವಾಸಮಾಡೋಣ. ನನಗೆ ಬಹಳ ದಣಿವಾಗಿದೆ' (ಎಂದು ಹೇಳಿದಳು)

ಯುಧಿಷ್ಠಿರಃ

ಇಮಾಂ ಕಮಲಪತ್ರಾಕ್ಷೀಂ ದ್ರೌಪದೀಂ ಮಾದ್ರಿನಂದನ ।
ಬಾಹುಭ್ಯಾಂ ನಕುಲಾದಾಯ ಮುಹೂರ್ತಂ ದ್ರೌಪದೀಂ ನಯ ॥೧೯॥

ತತೋಽದೂರೇ ವಿರಾಟಸ್ಯ ನಗರಂ ಭರತರ್ಷಭ ।
ರಾಜಧಾನ್ಯಾಂ ನಿವತ್ಸ್ಯಾಮಃ ಸುಮುಕ್ತಮಿವ ನೋ ವನಮ್ ॥೨೦॥

ಯುಧಿಷ್ಠಿರ– ಎಲೈ ಮಾದ್ರಿನಂದನನಾದ ನಕುಲನೇ, ಈ ಕಮಲಾಕ್ಷಿಯಾದ ದ್ರೌಪದಿಯನ್ನು ಒಂದು ಮುಹೂರ್ತದ ಕಾಲ ನಿನ್ನ ಬಾಹುಗಳಿಂದ ಎತ್ತಿಕೊಂಡು ನಡೆಯುವವನಾಗು. ಎಲೈ ಭರತರ್ಷಭನೇ, ವಿರಾಟನ ನಗರವು ಇಲ್ಲಿಯೇ ಸಮೀಪದಲ್ಲಿರುವಂತೆ ಕಾಣುತ್ತದೆ. ನಾವು ರಾಜಧಾನಿಯಲ್ಲಿ ವಾಸಮಾಡೋಣ. ನಾವು ಕಾಡನ್ನು ದಾಟಿಬಂದಂತೆಯೇ ಆಗಿದೆ.

ನಕುಲಃ

ಪೂರ್ವಾಹ್ಣೇ ಮೃಗಯಾಂ ಗತ್ವಾ ವನೇ ವಿದ್ಧಾ ಮಹಾಮೃಗಾಃ ।
ಅಟವೀ ಚ ಮಯಾ ದೂರಂ ಸೃತಾ ಮೃಗವಧೇಪ್ಸಯಾ ॥೨೧॥

ವಿಷಮಾ ಹ್ಯತಿದುರ್ಗಾ ಚ ವೇಗವತ್ ಪರಿಧಾವತಾ ।
ಸೋಽಹಂ ಘರ್ಮಾಭಿತಪ್ತೋ ವೈ ನೈನಾಮಾದಾತುಮುತ್ಸಹೇ ॥೨೨॥

ನಕುಲ– ಈ ದಿನ ಬೆಳಿಗ್ಗೆ ನಾನು ಬೇಟೆಗೆ ಹೋಗಿ ಅನೇಕ ಮೃಗಗಳನ್ನು ಬೇಟೆಯಾಡಿದೆ. ಮೃಗಗಳ ವಧೆಯನ್ನು ಉದ್ದೇಶಿಸಿ ನಾನು ವಿಷಮವೂ, ಬಹಳ ಕಠಿಣವೂ ಆದ ಕಾಡಿನಲ್ಲಿ ಬಹಳ ವೇಗದಿಂದ ಬಹುದೂರದವರೆಗೆ ಓಡಿ ಬೇಟೆಯಾಡಿದೆ. ನನಗೆ ಬಹಳ ಉಷ್ಣವೂ ಮತ್ತು ದಣಿವೂ ಆಗಿದೆ. ನಾನು ಇವಳನ್ನು ಎತ್ತಿಕೊಳ್ಳಲಾರೆ.

ಯುಧಿಷ್ಠಿರಃ

ಸಹದೇವ ತ್ವಮಾದಾಯ ಮುಹೂರ್ತಂ ದ್ರೌಪದೀಂ ನಯ ।
ರಾಜಧಾನ್ಯಾಂ ನಿವತ್ಸ್ಯಾಮಃ ಸುಮುಕ್ತಮಿವ ನೋ ವನಮ್ ॥೨೩॥

ಯುಧಿಷ್ಠಿರ– ಸಹದೇವನೇ, ನೀನು ಒಂದು ಮುಹೂರ್ತದ ಕಾಲ ದ್ರೌಪದಿಯನ್ನು ಎತ್ತಿಕೊಂಡು ಮುಂದೆ ನಡೆ. ನಾವು ರಾಜಧಾನಿಯಲ್ಲಿಯೇ ವಾಸ ಮಾಡೋಣ. ಕಾಡನ್ನು ಬಿಟ್ಟುಬಂದಂತೆಯೇ ಆಗಿದೆ.

ಸಹದೇವಃ

ಅಹಮಪ್ಯಸ್ಮಿ ತೃಷಿತಃ ಕ್ಷುಧಯಾ ಚ ಪ್ರಪೀಡಿತಃ ।
ಪರಿಶ್ರಾಂತಶ್ಚ ಭದ್ರಂ ತೇ ನೈನಾಮಾದಾತುಮುತ್ಸಹೇ ॥೨೪॥

ಸಹದೇವ– ನಾನೂ ಸಹ ಹಸಿವು ಮತ್ತು ನೀರಡಿಕೆಗಳಿಂದ ಪೀಡಿತನಾಗಿದ್ದೇನೆ. ಬಹಳ ದಣಿವೂ ಆಗಿದೆ. ನಿನಗೆ ಮಂಗಳವಾಗಲಿ. ನಾನು ಇವಳನ್ನು ಎತ್ತಿಕೊಳ್ಳಲಾರೆ.

ಯುಧಿಷ್ಠಿರಃ

ಏಹಿ ವೀರ ವಿಶಾಲಾಕ್ಷ ವೀರಸಿಂಹ ಇವಾರ್ಜುನ ॥೨೫॥

ಇಮಾಂ ಕಮಲಪತ್ರಾಕ್ಷೀಂ ದ್ರೌಪದೀಂ ದ್ರುಪದಾತ್ಮಜಾಮ್ ।
ಪರಿಗೃಹ್ಯ ಮುಹೂರ್ತಂ ತ್ವಂ ಬಾಹುಭ್ಯಾಂ ಕುಶಲಂ ವ್ರಜ ॥೨೬॥

ರಾಜಧಾನ್ಯಾಂ ನಿವತ್ಸ್ಯಾಮಃ ಸುಮುಕ್ತಮಿವ ನೋ ವನಮ್ ॥೨೭॥

ಯುಧಿಷ್ಠಿರ– ವಿಶಾಲಾಕ್ಷನಾದ ವೀರಸಿಂಹನಂತಿರುವ ವೀರನಾದ ಅರ್ಜುನನೇ ಇಲ್ಲಿ ಬಾ. ದ್ರುಪದ ಕುಮಾರಿಯಾದ ಕಮಲಾಕ್ಷಿಯಾದ ಈ ದ್ರೌಪದಿಯನ್ನು ಬಾಹುಗಳಿಂದ ಎತ್ತಿಕೊಂಡು ಒಂದು ಮುಹೂರ್ತದವರೆಗೆ ಕ್ಷೇಮದಿಂದ ಮುಂದೆ ನಡೆ. ನಾವು ರಾಜಧಾನಿಯಲ್ಲಿಯೇ ವಾಸಮಾಡೋಣ. ಕಾಡನ್ನು ಬಿಟ್ಟಂತೆಯೇ ಆಗಿದೆ.

ವೈಶಂಪಾಯನಃ

ಗುರೋರ್ವಚನಮಾಜ್ಞಾಯ ಸಂಪ್ರಹೃಷ್ಟೋ ಧನಂಜಯಃ ।
ತಾಮಾದಾಯಾರ್ಜುನಸ್ತೂರ್ಣಂ ಶಾರ್ದೂಲಃ ಪೃಷತೀಮಿವ ॥೨೮॥

ವೈಶಂಪಾಯನ– ಅಣ್ಣನ ಮಾತನ್ನು ಕೇಳಿ ಸಂತೋಷಗೊಂಡ ಅರ್ಜುನನು ಹುಲಿಯು ಒಂದು ಹೆಣ್ಣು ಜಿಂಕೆಯನ್ನು ಎತ್ತಿದಂತೆ ಅವಳನ್ನು ಎತ್ತಿಕೊಂಡನು.

ಪ್ರವವ್ರಾಜ ಮಹಾಬಾಹುರರ್ಜುನಃ ಪ್ರಿಯದರ್ಶನಃ ।
ಜಟಿಲೋ ವಲ್ಕಲಧರಃ ಶರತೂಣೀಧನುರ್ಧರಃ ॥೨೯॥

ಸ್ಕಂಧೇ ಕೃತ್ವಾ ವರಾರೋಹಾಂ ಬಾಲಾಮಾಯತಲೋಚನಾಮ್ ।
ಆನೀಯ ನಗರಾಭ್ಯಾಶಮವಾತಾರಯದರ್ಜುನಃ ॥೩೦॥

ಮಹಾಬಾಹುವೂ, ಪ್ರಿಯದರ್ಶನನೂ ಜಟಿಲನೂ, ವಲ್ಕಲಧಾರಿಯೂ, ಬಿಲ್ಲುಬಾಣಬತ್ತಳಿಕೆಗಳನ್ನು ಧರಿಸಿದವನೂ ಆದ ಅರ್ಜುನನು ವಿಶಾಲಾಕ್ಷಿಯೂ, ಸುಂದರಿಯೂ ಆದ ಆ ಬಾಲೆಯನ್ನು ಹೆಗಲಿನ ಮೇಲೆ ಎತ್ತಿಕೊಂಡು ನಗರದ ಸಮೀಪಕ್ಕೆ ಬಂದು ಅವಳನ್ನು ಇಳಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಷಷ್ಠೋऽಧ್ಯಾಯಃ ॥
॥ ವೈರಾಟಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ತಮ್ಮ ಆಯುಧಗಳನ್ನು ಶಮೀವೃಕ್ಷದಲ್ಲಿ ಕಟ್ಟಿಟ್ಟು
ಪಾಂಡವರಿಂದ ವಿರಾಟನಗರಪ್ರವೇಶ

ವೈಶಂಪಾಯನಃ

ಸ ರಾಜಧಾನೀಂ ಸಂಪ್ರಾಪ್ಯ ಪಾರ್ಥಿವೋಽರ್ಜುನಮಬ್ರವೀತ್ ॥೧॥

ಇಮಾನಿ ಪುರುಷವ್ಯಾಘ್ರ ಆಯುಧಾನಿ ಪರಂತಪ ।
ಕಸ್ಮಿನ್ ನ್ಯಾಸಯಿತವ್ಯಾನಿ ಗುಪ್ತಿಶ್ಚೈಷಾಂ ಕಥಂ ಭವೇತ್ ॥೨॥

ವೈಶಂಪಾಯನ– ರಾಜನಾದ ಯುಧಿಷ್ಠಿರನು ವಿರಾಟರಾಜಧಾನಿಯನ್ನು ತಲುಪಿ ಅರ್ಜುನನನ್ನು ಕುರಿತು, 'ಎಲೈ ಪುರುಷವ್ಯಾಘ್ರನೇ, ಪರಂತಪನೇ, ಈ ಆಯುಧಗಳನ್ನು ಎಲ್ಲಿ ನ್ಯಾಸವಾಗಿ ಇಡಬೇಕು? ಇವುಗಳ ರಕ್ಷಣೆಯಾದರೂ ಹೇಗೆ ಆದೀತು?

ಸಾಯುಧಾ ಹಿ ವಯಂ ತಾತ ಪ್ರವೇಕ್ಷ್ಯಾಮಃ ಪುರಂ ಯದಿ ।
ಸಮುದ್ವೇಗಂ ಜನಸ್ಯಾಸ್ಯ ಕರಿಷ್ಯಾಮೋ ನ ಸಂಶಯಃ ॥೩॥

ಪ್ರೀತಿಪಾತ್ರನೇ, ನಾವು ಆಯುಧಸಹಿತರಾಗಿ ನಗರವನ್ನು ಪ್ರವೇಶಿಸಿದರೆ ನಗರದ ಜನರಿಗೆ ಭಯವನ್ನು ಉಂಟುಮಾಡುವೆವು. ಇದರಲ್ಲಿ ಸಂಶಯವಿಲ್ಲ.

ಗಾಂಡೀವಂ ಹಿ ನರವ್ಯಾಘ್ರ ತ್ರಿಷು ಲೋಕೇಷು ವಿಶ್ರುತಮ್ ।
ಕಥಂ ನಾವಿಷ್ಕೃತಾಃ ಸ್ಯಾಮೋ ಧಾರ್ತರಾಷ್ಟ್ರಸ್ಯ ಮಾರಿಷ ॥೪॥

ನರವ್ಯಾಘ್ರನೇ, ವೀರನೇ, ಗಾಂಡೀವ ಧನುಸ್ಸಾದರೂ ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾದುದು. ನಾವು ಹೇಗೆ ದುರ್ಯೋಧನನಿಂದ ಗುರುತಿಸಲ್ಪಡದೇ ಇರುತ್ತೇವೆ?

ಯದಿದಂ ಧನುರಾದಾಯ ಚರೇಮ ಸಜನೇ ಪುರೇ ।
ಕ್ಷಿಪ್ರಂ ನಃ ಪ್ರತಿಜಾನೀಯುರ್ಮನುಷ್ಯಾ ನಾತ್ರ ಸಂಶಯಃ ॥೫॥

ನಾವು ಜನನಿಬಿಡವಾದ ಈ ಪಟ್ಟಣದಲ್ಲಿ ಧನುಸ್ಸುಗಳನ್ನು ತೆಗೆದುಕೊಂಡು ತಿರುಗಿದರೆ ಜನರು ಬಹುಬೇಗ ನಮ್ಮನ್ನು ಗುರುತಿಸುವರು. ಇದರಲ್ಲಿ ಸಂಶಯವಿಲ್ಲ.

ಏಕಸ್ಮಿನ್ನಪಿ ವಿಜ್ಞಾತೇ ಸಮಯಂ ನ ವ್ಯತೀತ್ಯ ಚ ।
ಭೂಯೋ ದ್ವಾದಶ ವರ್ಷಾಣಿ ಪ್ರವಿಶೇಮ ವನಂ ವಯಮ್ ॥೬॥

ಸಮಯವು ಕಳೆಯುವುದಕ್ಕಿಂತ ಮುಂಚೆಯೇ ನಮ್ಮಲ್ಲಿ ಒಬ್ಬರನ್ನಾದರೂ ಅವರು ಗುರುತಿಸಿದರೆ ನಾವು ಪುನಃ ಹನ್ನೆರಡು ವರ್ಷಗಳ ಕಾಲ ಕಾಡಿಗೆ ಹೋಗಬೇಕಾದೀತು!

ತಸ್ಮಾತ್ ಸರ್ವಾಣಿ ಶಸ್ತ್ರಾಣಿ ಪ್ರಚ್ಛನ್ನಂ ನ್ಯಸ್ಯ ಕುತ್ರಚಿತ್ ।
ಪ್ರವಿಶೇಮ ಪುರಶ್ರೇಷ್ಠಂ ತದಾ ಸಮ್ಯಕ್ ಕೃತಂ ಭವೇತ್ ॥೭॥

ಆದ್ದರಿಂದ ಎಲ್ಲ ಶಸ್ತ್ರಗಳನ್ನೂ ಎಲ್ಲಿಯಾದರೂ ಒಂದು ಕಡೆಯಲ್ಲಿ ಮುಚ್ಚಿಟ್ಟು ನಾವು ಶ್ರೇಷ್ಠವಾದ ನಗರವನ್ನು ಪ್ರವೇಶಿಸೋಣ. ಆಗ ಒಳ್ಳೆಯದಾಗುತ್ತದೆ' ಎಂದು ಹೇಳಿದನು.

ಅಜಾತಶತ್ರೋರ್ವಚನಂ ಶ್ರುತ್ವಾ ಚೈವ ಮಹಾಯಶಾಃ ।
ಉವಾಚ ಧರ್ಮಪುತ್ರಂ ತಮರ್ಜುನಃ ಪರವೀರಹಾ ॥೮॥

ಅಜಾತಶತ್ರುವಾದ ಯುಧಿಷ್ಠಿರನ ಮಾತನ್ನು ಕೇಳಿ ಮಹಾಕೀರ್ತಿವಂತನೂ, ಪರವೀರರನ್ನು ಹನನ ಮಾಡುವವನೂ ಆದ ಅರ್ಜುನನು ಧರ್ಮಪುತ್ರನನ್ನು ಕುರಿತು ಮಾತನಾಡಿದನು.

ಇಯಂ ವನೇ ಮನುಷ್ಯೇಂದ್ರ ಮಹತೀ ದೃಶ್ಯತೇ ಶಮೀ ।
ಭೀಮಶಾಖಾ ದುರಾರೋಹಾ ಶ್ಮಶಾನಸ್ಯ ಸಮೀಪತಃ ॥೯॥

ವಿಪುಲಾಕೀರ್ಣಶಾಖಾ ಚ ವಾಯಸೈರುಪಸೇವಿತಾ ।
ಸಮೀಪೇ ಚ ಶ್ಮಶಾನಸ್ಯ ಗೃಹಂ ನಾಸ್ಯ ವಿಶೇಷತಃ ॥೧೦॥

ಸಮಾಸಜ್ಯಾಯುಧಾನ್ಯಸ್ಯಾಂ ಗಚ್ಛಾಮೋ ನಗರಂ ಪ್ರತಿ ॥೧೧॥

ಮನುಷ್ಯೇಂದ್ರನೇ, ಕಾಡಿನಲ್ಲಿ ಇಲ್ಲಿ ಈ ದೊಡ್ಡ ಶಮೀವೃಕ್ಷವು ಕಾಣುತ್ತಿದೆ. ಇದು ಭಯಂಕರವಾದ ಕೊಂಬೆಗಳಿಂದ ಕೂಡಿದ್ದು ಹತ್ತಲು ಬಹಳ ಕಷ್ಟವಾಗಿದ್ದು ಶ್ಮಶಾನದ ಸಮೀಪದಲ್ಲಿದೆ. ವಿಸ್ತಾರವಾದ ಕೊಂಬೆಗಳು ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡು ಕಾಗೆಗಳಿಗೆ ಆಶ್ರಯವಾಗಿವೆ. ಈ ಸ್ಮಶಾನದ ಸಮೀಪದಲ್ಲಿ ಯಾವ ಮನೆಯೂ ಇಲ್ಲ

ಎಂಬುದು ವಿಶೇಷ. ಆದ್ದರಿಂದ ಈ ಶಮೀವೃಕ್ಷದಲ್ಲಿ ನಮ್ಮ ಆಯುಧಗಳನ್ನು ತೂಗು ಹಾಕಿ ನಗರಕ್ಕೆ ಹೋಗೋಣ.

ಉತ್ಪಥೇನಾಪಿ ಜಾತೇಯಮಮನುಷ್ಯನಿಷೇವಿತೇ ।
ನ ಚಾಸ್ಯಾಂ ಸಂಚರಿಷ್ಯಂತಿ ಮನುಷ್ಯಾಃ ಪಾರ್ಥ ಕೇಚನ ॥೧೨॥

ಇದು ದಾರಿಯನ್ನು ಬಿಟ್ಟು ಪಕ್ಕದಲ್ಲಿ ಜನರು ಸಂಚಾರ ಮಾಡದಿರುವ ಸ್ಥಳದಲ್ಲಿ ಬೆಳೆದಿದೆ. ಎಲೈ ಪಾರ್ಥನೇ, ಇಲ್ಲಿ ಯಾವ ಜನರೂ ತಿರುಗಾಡುವುದಿಲ್ಲ.

ಧನುರ್ಭಿಃ ಪುರುಷಂ ಕೃತ್ವಾ ಚರ್ಮಕೋಶಾಸ್ಥಿಸಂವೃತಮ್ ।
ಉದ್ಬಂಧಮಿವ ಕೃಷ್ಣಂ ಚ ಧನೂಂಷ್ಯಾವಹ ಸಂವೃತಮ್ ॥೧೩॥

ಧನುಸ್ಸುಗಳಿಂದ ಚರ್ಮ, ಕೋಶ ಮತ್ತು ಅಸ್ಥಿಗಳಿಂದ ಕೂಡಿದ ಒಂದು ಕಪ್ಪು ಪುರುಷಾಕಾರವನ್ನು ಮಾಡಿ ಧನುಸ್ಸುಗಳನ್ನು ಮುಚ್ಚಿ ಅದರೊಳಗೆ ಸೇರಿಸಿ ಆ ಮನುಷ್ಯನು ನೇಣುಹಾಕಿಕೊಂಡಂತೆ ಮಾಡು.

ಅಸ್ಯಾಮಾಯುಧಮಾಸಜ್ಯ ಗಚ್ಛೇಮ ನಗರಂ ವಯಮ್ ॥೧೪॥

ಏವಂ ಪರಿಹರಿಷ್ಯಂತಿ ಮನುಷ್ಯಾ ವನಚಾರಿಣಃ ॥೧೫॥

ಅತ್ಯೇವಂ ನಾವಬುದ್ಧ್ಯಂತೇ ಮನುಷ್ಯಾಃ ಕೇಚಿದಾಯುಧಮ್ ॥೧೬॥

ಈ ಶಾಖೆಯಲ್ಲಿ ಆಯುಧಗಳನ್ನು ತೂಗುಹಾಕಿ ನಾವು ನಗರಕ್ಕೆ ಹೋಗೋಣ. ಹಾಗೆ ಮಾಡಿದರೆ ವನಚಾರಿಗಳಾದ ಜನರು ಈ ವೃಕ್ಷದಿಂದ ದೂರದಲ್ಲಿಯೇ ಹೋಗುತ್ತಾರೆ. ಯಾವ ಮನುಷ್ಯರೂ ಇಲ್ಲಿ ಆಯುಧಗಳಿರುವುದನ್ನು ತಿಳಿಯುವುದಿಲ್ಲ.

ವೈಶಂಪಾಯನಃ

ಏವಮುಕ್ತ್ವಾ ಸ ರಾಜಾನಂ ಧರ್ಮಾತ್ಮಾನಂ ಧನಂಜಯಃ ।
ಪ್ರಚಕ್ರಮೇ ನಿಧಾನಾಯ ಶಸ್ತ್ರಾಣಾಂ ಭರತರ್ಷಭ ॥೧೭॥

ವೈಶಂಪಾಯನ– ಎಲೈ ಭರತರ್ಷಭನೇ, ಧನಂಜಯನು ಧರ್ಮಿಷ್ಠನಾದ ಯುಧಿಷ್ಠಿರನನ್ನು ಕುರಿತು ಹೀಗೆ ಹೇಳಿ ಶಸ್ತ್ರಗಳನ್ನು ಇಡಲು ಉದ್ಯುಕ್ತನಾದನು.

ತಾನಿ ಸರ್ವಾಣಿ ಸನ್ನಹ್ಯ ಪಂಚ ಪಂಚಾಚಲೋಪಮಾಃ ।
ಆಯುಧಾನಿ ಕಲಾಪಾಂಶ್ಚ ನಿಸ್ತ್ರಿಂಶಾಂಶ್ಚಾತುಲಪ್ರಭಾನ್ ॥೧೮॥

ಐದು ಸಣ್ಣಪರ್ವತಗಳಂತಿದ್ದ ಆ ಎಲ್ಲಾ ಆಯುಧಗಳನ್ನೂ, ಅದರ ಪರಿಕರಗಳನ್ನೂ ಮತ್ತು ಮಹಾಪ್ರಭೆಯುಳ್ಳ ಕತ್ತಿಗಳನ್ನೂ ಚೆನ್ನಾಗಿ ಕಟ್ಟಿ ಇಡಲು ಉದ್ಯುಕ್ತನಾದನು.

ತತೋ ಯುಧಿಷ್ಠಿರೋ ರಾಜಾ ಸಹದೇವಮುವಾಚ ಹ ।
ಆರುಹ್ಯೇಮಾಂ ಶಮೀಂ ವೀರ ನಿಧತ್ಸ್ವೈಹಾಯುಧಾನಿ ನಃ ॥೧೯॥

ಆಗ ರಾಜನಾದ ಯುಧಿಷ್ಠಿರನು ಸಹದೇವನನ್ನು ಕುರಿತು ವೀರನೇ, ಈ ವೃಕ್ಷವನ್ನು ಏರಿ ನಮ್ಮ ಆಯುಧಗಳನ್ನು ಅದರಲ್ಲಿ ಇಡು.

ಇತಿ ಸಂದಿಶ್ಯ ತಂ ಪಾರ್ಥಃ ಪುನರೇವ ಧನಂಜಯಮ್ ।
ಅಬ್ರವೀದಾಯುಧಾನೀಹ ನಿಧಾತುಂ ಭರತರ್ಷಭ ॥೨೦॥

ಹೀಗೆ ಸಹದೇವನಿಗೆ ಸಂದೇಶವನ್ನು ನೀಡಿ ಯುಧಿಷ್ಠಿರನು ಪುನಃ ಅರ್ಜುನನನ್ನು ಕುರಿತು ಭರತರ್ಷಭನೇ, ನಿನ್ನ ಆಯುಧಗಳನ್ನು ಇಲ್ಲಿ ಇಡು ಎಂದು ಹೇಳಿದನು.

ಯೇನ ದೇವಾನ್ ಮನುಷ್ಯಾಂಶ್ಚ ಪಿಶಾಚೋರಗರಾಕ್ಷಸಾನ್ ।
ನಿವಾತಕವಚಾಂಶ್ಚಾಪಿ ಪೌಲೋಮಾಂಶ್ಚ ಪರಂತಪ ॥೨೧॥

ಕಾಲಕೇಯಾಂಶ್ಚ ದುರ್ಧರ್ಷಾನ್ ಸರ್ವಾಂಶ್ಚೈಕರಥೋಽಜಯತ್ ।
ಸ್ಫೀತಾನ್ ಜನಪದಾಂಶ್ಚಾನ್ಯಾನಜಯತ್ ಕುರುನಂದನಃ ॥೨೨॥

ಯಾವ ಆಯುಧಗಳಿಂದ (ಗಾಂಡೀವ ಧನುಸ್ಸಿನಿಂದ) ಮನುಷ್ಯರನ್ನು, ಪಿಶಾಚಿಗಳನ್ನು, ಸರ್ಪರಾಕ್ಷಸರನ್ನು, ನಿವಾತಕವಚರನ್ನು, ಪೌಲೋಮರನ್ನು, ಸೋಲಿಸಲು ಅಸಾಧ್ಯರಾದ ಕಾಲಕೇಯರನ್ನು ಇವರೆಲ್ಲರನ್ನೂ ಒಂದೇ ರಥದಲ್ಲಿ ಕುಳಿತು ಕುರುನಂದನನೂ, ಪರಂತಪನೂ ಆದ ಅರ್ಜುನನು ಇವರನ್ನು ಜಯಿಸಿ ಶುಭ್ರವಾದ ಬೇರೆ ದೇಶಗಳನ್ನೂ ಗೆದ್ದನೋ;

ಏತದುಗ್ರಂ ಮಹಾಘೋರಂ ಸಪತ್ನಗಣಸೂದನಮ್ ।
ಅಪಜ್ಯಮಕರೋತ್ ಪಾರ್ಥೋ ಗಾಂಡೀವಮಭಯಂಕರಮ್ ॥೨೩॥

ಯೇನ ವೀರಃ ಕುರುಕ್ಷೇತ್ರಮಭ್ಯರಕ್ಷತ್ ಪರಂತಪಃ ।

ಅಂತಹ ಉಗ್ರವೂ ಮಹಾಘೋರವೂ, ಶತ್ರುಸಂಹಾರಕವೂ, ಸ್ವಕೀಯರಿಗೆ ಅಭಯಪ್ರದವೂ ಆದಂತಹ ಯಾವ ಧನುಸ್ಸಿನಿಂದ ಪರಂತಪನೂ, ವೀರನೂ ಆದ ಅವನು (ಉತ್ತರ) ಕುರುಕ್ಷೇತ್ರವನ್ನು ಜಯಿಸಿದನೋ ಅಂತಹ ಗಾಂಡೀವ ಧನುಸ್ಸಿನ ಹೆದೆಯನ್ನು ಬಿಚ್ಚಿದನು.

ಜೃಂಭತೇ ಚ ಧನುಃಶ್ರೇಷ್ಠೇ ನ್ಯಾಸಾರ್ಥಂ ನೃಪಸತ್ತಮಃ ॥೨೪॥

ಧರ್ಮಪುತ್ರೋ ಮಹಾತೇಜಾಃ ಸರ್ವಲೋಕವಶಂಕರಮ್ ।
ಭುಜಂಗಭೋಗಸದೃಶಂ ಮಣಿಕಾಂಚನಭೂಷಣಮ್ ॥೨೫॥

ವಿತ್ರಾಸನಂ ದಾನವಾನಾಂ ರಾಕ್ಷಸಾನಾಂ ಚ ನಿತ್ಯಶಃ ।
ಧನೂರತ್ನಂ ಮಹಾತೇಜಾ ಜೃಂಭಯಾಮಾಸ ಪಾಂಡವಃ ॥೨೬॥

ಅರ್ಜುನನು ತನ್ನ ಶ್ರೇಷ್ಠವಾದ ಧನುಸನ್ನು ನ್ಯಾಸವಾಗಿಡುವ ಸಲುವಾಗಿ ನೇರವಾಗಿ ಮಾಡುತ್ತಿರಲು ನೃಪಶ್ರೇಷ್ಠನೂ, ಮಹಾತೇಜಸ್ವಿಯೂ, ಪಾಂಡುಪುತ್ರನೂ ಆದ ಯುಧಿಷ್ಠಿರನು ಎಲ್ಲ ಲೋಕವನ್ನು ವಶಪಡಿಸಿಕೊಳ್ಳುವಂತಹ ಸರ್ಪಶರೀರಕ್ಕೆ ಸದೃಶವಾದ, ಮಣಿಕಾಂಚನಗಳಿಂದ ಅಲಂಕೃತವಾದ, ದಾನವರಿಗೂ ಮತ್ತು ರಾಕ್ಷಸರಿಗೂ ಯಾವಾಗಲೂ ಭಯವನ್ನು ಉಂಟುಮಾಡುವ ತನ್ನ ಶ್ರೇಷ್ಠವಾದ ಧನುಸ್ಸನ್ನು ಹೆದೆಯನ್ನು ಸಡಲಿಸಿ ನೇರವಾಗಿ ಮಾಡಿದನು.

ಪಾಂಚಾಲಾನ್ ಯೇನ ಸಂಗ್ರಾಮೇ ಭೀಮಸೇನೋऽಜಯತ್ ಪ್ರಭುಃ ।
ಪ್ರತ್ಯಷೇಧದ್ ಬಹೂನೇಕಃ ಸಪತ್ನಾಂಶ್ಚಾಪಿ ದಿಗ್ಜಯೇ ॥೨೭॥

ನಿಶಮ್ಯ ಯಸ್ಯ ವಿಷ್ಫಾರಂ ವಿದ್ರವಂತಿ ರಣೇ ಪರೇ ।
ಪರ್ವತಸ್ಯೇವ ದೀರ್ಣಸ್ಯ ವಿಸ್ಫೋಟಮಶನೇರಿವ ॥೨೮॥

ಸೈಂಧವಂ ಯೇನ ರಾಜಾನಂ ಜಿತ್ವಾ ಕ್ರುದ್ಧಃ ಪರಾಮೃಶತ್ ।
ಯೇನ ಕ್ರೋಧವಶಾನ್ ಜಘ್ನೇ ರಾಕ್ಷಸಾನ್ ಗಂಧಮಾದನೇ ॥೨೯॥

ದಿವ್ಯಂ ಸೌಗಂಧಿಕಂ ಪುಷ್ಪಂ ಯೇನಾಜ್ಯೈಷೀತ್ ಸ ಪಾಂಡವಃ ।
ತ್ರಿಗರ್ತಾನ್ ಯೇನ ಸಂಗ್ರಾಮೇ ಜಿತ್ವಾ ತ್ರೈಗರ್ತಮಾನಯತ್ ॥೩೦॥

ಇಂದ್ರಾಯುಧಸಮಸ್ಪರ್ಶಂ ವಜ್ರಹಾಟಕಭೂಷಿತಮ್ ।
ಜ್ಯಾಪಾಶಂ ಧನುಷಸ್ತಸ್ಯ ಭೀಮಸೇನೋऽವತಾರಯತ್ ॥೩೧॥

ಪ್ರಭುವಾದ ಭೀಮಸೇನನು ಯಾವ ಧನುಸ್ಸಿನಿಂದ ಯುದ್ಧದಲ್ಲಿ ಅನೇಕ ಮಂದಿ ಪಾಂಚಾಲರನ್ನು ಒಬ್ಬನೇ ಜಯಿಸಿದನೋ, ದಿಗ್ವಿಜಯಕಾಲದಲ್ಲಿಯೂ ಸಹ ಅನೇಕ ಶತ್ರುಗಳನ್ನು ಜಯಿಸಿದನೋ, ಯಾವ ಧನುಸ್ಸಿನ ಝೀಂಕಾರವನ್ನು ಕೇಳಿ ಶತ್ರುಗಳು ಯುದ್ಧದಲ್ಲಿ ಓಡಿಹೋಗುತ್ತಾರೆಯೋ, ಯಾವ ಧನುಸ್ಸಿನ ಶಬ್ದವು ಪರ್ವತವು ಬಿರಿಯುವಂತೆ ಮತ್ತು ಸಿಡಿಲಿನಂತೆ ಕೇಳಿಬರುತ್ತದೆಯೋ, ಯಾವ ಧನುಸ್ಸಿನಿಂದ ಕೋಪಗೊಂಡ ಅವನು ಸೈಂಧವನಾದ ಜಯದ್ರಥನನ್ನು ಸೋಲಿಸಿ ಕೈಯಿಂದ ಹಿಡಿದನೋ, ಯಾವ ಧನುಸ್ಸಿನಿಂದ ಗಂಧಮಾದನ ಪರ್ವತದಲ್ಲಿ ಕ್ರೋಧವಶ ರಾಕ್ಷಸರನ್ನು ಸಂಹರಿಸಿ ದಿವ್ಯವಾದ ಸೌಗಂಧಿಕ ಪುಷ್ಪವನ್ನು ಸಂಪಾದಿಸಿದನೋ, ಯಾವ ಧನುಸ್ಸಿನಿಂದ ತ್ರಿಗರ್ತರನ್ನು ಗೆದ್ದು ಆ ದೇಶದ ರಾಜನನ್ನು ಹಿಡಿದು ತಂದನೋ, ಅಂತಹ ಇಂದ್ರಾಯುಧಕ್ಕೆ ಸಮವಾದ ಒರಟಾದ ಸ್ಪರ್ಶವುಳ್ಳ, ವಜ್ರಸುವರ್ಣಗಳಿಂದ ಅಲಂಕೃತವಾದ ತನ್ನ ಧನುಸ್ಸಿನ ಹೆದೆಯನ್ನು ಬಿಚ್ಚಿದನು..

ನಕುಲಂ ಪುನರಾಹೂಯ ಧರ್ಮರಾಜೋ ಯುಧಿಷ್ಠಿರಃ ।
ಉವಾಚ ಚೈನಂ ಸಂಗ್ರಾಮೇ ಸರ್ವಾನ್ ಶತ್ರೂನ್ ಜಿಘಾಂಸಸಿ ॥೩೨॥

ಸುರಾಷ್ಟ್ರಾನ್ ಜಿತವಾನ್ ಯೇನ ಶಾರ್ಙ್ಗಗಾಂಡೀವಸನ್ನಿಭಮ್ ।
ಸುವರ್ಣವಿಕೃತಂ ಸಾರಮಿಂದ್ರಾಯುಧನಿಭಂ ವರಮ್ ॥೩೩॥

ತವಾನುರೂಪಂ ಸುದೃಢಂ ಚಾಪಮೇತದಲಂಕೃತಮ್ ।
ತತ್ ಸ್ರಂಸಯಿತ್ವಾ ಜ್ಯಾಪಾಶಂ ನಿಧಾತುಂ ಧನುರಾಹರ ॥೩೪॥

ಧರ್ಮರಾಜನಾದ ಯುಧಿಷ್ಠಿರನು ಪುನಃ ಅನಂತರ ನಕುಲನನ್ನು ಕರೆದು, 'ಯಾವ ಧನುಸ್ಸಿನಿಂದ ನೀನು ಶತ್ರುಗಳನ್ನು ಕೊಲ್ಲಲು ಬಯಸುತ್ತೀಯೋ, ಯಾವ ಶಾರ್ಙ್ಗ ಗಾಂಡೀವ ಧನುಸ್ಸಿನ ಕಾಂತಿಯುಳ್ಳ ಧನುಸ್ಸಿನಿಂದ ಸೌರಾಷ್ಟ್ರ ದೇಶವನ್ನು ಗೆದ್ದೆಯೋ, ಅಂತಹ ಸುವರ್ಣದಿಂದ ಅಲಂಕೃತವಾದ ಇಂದ್ರಾಯುಧದ ಕಾಂತಿಯುಳ್ಳ ಶ್ರೇಷ್ಠವಾದ,

ಬಲಿಷ್ಠವಾದ, ಸುದೃಢವಾದ ನಿನಗೆ ಯೋಗ್ಯವಾದ ಅಲಂಕೃತವಾದ ಈ ಧನುಸ್ಸಿನ ಹೆದೆಯನ್ನು ಸಡಿಲಿಸಿ ಇಲ್ಲಿ ಇಡಲು ತೆಗೆದುಕೊಂಡು ಬಾ' ಎಂದು ಹೇಳಿದನು.

ವೈಶಂಪಾಯನಃ

ಮಾದ್ರೀಪುತ್ರೋ ಮಹಾಬಾಹುಸ್ತಾಮ್ರಾಸ್ಯೋ ಮಿತಭಾಷಿತಾ ।
ಕುಲೇ ನಾಸ್ತಿ ಸಮೋ ರೂಪೇ ಯಸ್ಯೇತಿ ನಕುಲಃ ಸ್ಮೃತಃ ॥೩೫॥

ಅಜಯತ್ ಪಶ್ಚಿಮಾಮಾಶಾಂ ಧನುಷಾ ಯೇನ ಪಾಂಡವಃ ।
ಸುವರ್ಣವಿಕೃತಂ ಸಾರಮಿಂದ್ರಾಯುಧವರೋಪಮಮ್ ॥೩೬॥

ತತ್ ಸ್ರಂಸಯಿತ್ವಾ ಜ್ಯಾಪಾಶಂ ನಿಧಾತುಂ ಧನುರಾಹರತ್ ॥೩೭॥

ವೈಶಂಪಾಯನ– ಮಹಾಬಾಹುವೂ, ಮಿತವಾಗಿ ಮಾತನಾಡುವವನೂ, ತಾಮ್ರಾಸ್ಯನೂ, ಯಾವನಿಗೆ ಸೌಂದರ್ಯದಲ್ಲಿ ಮತ್ತು ಕುಲದಲ್ಲಿ ಸಮಾನನಾದವನು ಇಲ್ಲದಿರುವ ಕಾರಣ ನಕುಲ ಎಂಬ ಹೆಸರಿದೆಯೋ, ಅಂತಹ ಮಾದ್ರೀಪುತ್ರನಾದ ಪಾಂಡವನಾದ ನಕುಲನು ಯಾವ ಧನುಸ್ಸಿನಿಂದ ಪಶ್ಚಿಮ ದಿಕ್ಕನ್ನು ಜಯಿಸಿದನೋ ಅಂತಹ ಸುವರ್ಣಭೂಷಿತವಾದ ಬಲಿಷ್ಠವಾದ ಇಂದ್ರನ ವಜ್ರಾಯುಧವನ್ನು ಹೋಲುವ ತನ್ನ ಧನುಸ್ಸಿನ ಜ್ಯಾ ಪಾಶವನ್ನು ಸಡಿಲಿಸಿ ಅಲ್ಲಿ ಇಡುವುದಕ್ಕೋಸ್ಕರ ಧನುಸ್ಸನ್ನು ತಂದನು.

ಸಹದೇವಂ ಚ ಸಂಪ್ರೇಕ್ಷ್ಯ ಪುನರ್ಧರ್ಮಸುತೋಽಬ್ರವೀತ್ ॥೩೮॥

ಅನಂತರ ಧರ್ಮರಾಜನು ಸಹದೇವನನ್ನು ನೋಡಿ ಮಾತನಾಡಿದನು.

ಕಳಿಂಗಾನ್ ದಾಕ್ಷಿಣಾತ್ಯಾಂಶ್ಚ ಮಗಧಾಂಶ್ಚಾಪಿ ದಿಗ್ಜಯೇ ।
ಯೇನೈವ ಶತ್ರೂನ್ ಸಮರೇಷ್ವಧಾಕ್ಷೀರರಿಮರ್ದನ ॥೩೯॥

ತತ್ ಸ್ರಂಸಯಿತ್ವಾ ಜ್ಯಾಪಾಶಂ ನಿಧಾತುಂ ಧನುರಾಹರ ॥೪೦॥

ಎಲೈ ಶತ್ರುಮರ್ದನನೇ, ದಿಗ್ವಿಜಯ ಕಾಲದಲ್ಲಿ ಕಳಿಂಗರನ್ನೂ, ದಾಕ್ಷಿಣಾತ್ಯರನ್ನೂ ಮತ್ತು ಮಗಧರನ್ನೂ ಯಾವ ನಿನ್ನ ಧನುಸ್ಸಿನಿಂದ ಯುದ್ಧದಲ್ಲಿ ಸುಟ್ಟುಹಾಕಿದೆಯೋ

ಅಂತಹ ನಿನ್ನ ಧನುಸ್ಸಿನ ಜ್ಯಾ ಪಾಶವನ್ನು ಸಡಿಲಿಸಿ ಇಲ್ಲಿ ಇಡಲು ತೆಗೆದುಕೊಂಡು ಬಾ' ಎಂದು ಹೇಳಿದನು.

ವೈಶಂಪಾಯನಃ

ಅಜಯದ್ ದಕ್ಷಿಣಾಮಾಶಾಂ ಧನುಷಾ ಯೇನ ಪಾಂಡವಃ ।
ತತ್ ಸ್ರಂಸಯಿತ್ವಾ ಜ್ಯಾಪಾಶಂ ನಿಧಾತುಂ ಧನುರಾಹರತ್ ॥೪೧॥

ವೈಶಂಪಾಯನ– ಪಾಂಡುಪುತ್ರನಾದ ಸಹದೇವನು ತನ್ನ ಯಾವ ಧನುಸ್ಸಿನಿಂದ ದಕ್ಷಿಣ ದಿಕ್ಕನ್ನು ಗೆದ್ದನೋ, ಅಂತಹ ಧನುಸ್ಸಿನ ಹೆದೆಯನ್ನು ಸಡಿಲಿಸಿ ಅಲ್ಲಿ ಇಡಲು ತೆಗೆದುಕೊಂಡು ಬಂದನು.

ದೀರ್ಘಾಂಶ್ಚ ಖಡ್ಗಾನ್ ಸುದೃಢಾನ್ ನಿಶಿತಾನ್ ಕನಕತ್ಸರೂನ್ ।
ವಿವಿಧಾನ್ ಕ್ಷುರನಾರಾಚಾನ್ ನಿಸ್ತ್ರಿಂಶಾಂಶ್ಚ ಶರಾನಪಿ ॥೪೨॥

ಆಯುಧಾನಿ ಕಲಾಪಾಂಶ್ಚ ಗದಾಶ್ಚ ನಿದಧುಃ ಸಹ ।
ಅಥಾಬ್ರವೀದ್ ಧರ್ಮರಾಜಃ ಸಹದೇವಂ ಪರಂತಪಃ ॥೪೩॥

ದೀರ್ಘವಾದ, ಸುದೃಢವಾದ, ಹರಿತವಾದ ಚಿನ್ನದ ಹಿಡಿಯಿರುವ ಖಡ್ಗಗಳನ್ನೂ ಅನೇಕ ವಿಧವಾದ ಕ್ಷುರನಾರಾಚಗಳನ್ನೂ, ಅಸಿಗಳನ್ನೂ, ಬಾಣಗಳನ್ನೂ, ಬೇರೆ ಆಯುಧಗಳನ್ನೂ ಮತ್ತು ಆಯುಧದ ಸಲಕರಣೆಗಳನ್ನೂ ಮತ್ತು ಗದೆಗಳನ್ನೂ ಎಲ್ಲರೂ ಸೇರಿ ಒಟ್ಟಿಗೆ ಇಟ್ಟರು. ಅನಂತರ ಪರಂತಪನಾದ ಧರ್ಮರಾಜನು ಸಹದೇವನನ್ನು ಕುರಿತು ಮಾತನಾಡಿದನು.

ಆಯುಧಾನಿ ಕಲಾಪಾಂಶ್ಚ ಗದಾಶ್ಚ ವಿಪುಲಾಸ್ತಥಾ ।
ತಾನಿ ಸರ್ವಾಣಿ ಸನ್ನಹ್ಯ ವಾಸೋಭಿಃ ಪರಿವೇಷ್ಟ್ಯ ಚ ॥೪೪॥

ಆರೋಹ ಯಾವದೇತಾನಿ ನಿಧಾತುಂ ವಿಹಗೈರ್ವೃತಾಮ್ ।
ಶಮೀಮಾರುಹ್ಯ ಮಹತೀಂ ನಿಕ್ಷಿಪಾದ್ಯಾಯುಧಾನಿ ನಃ ॥೪೫॥

ಈ ಎಲ್ಲಾ ಆಯುಧಗಳನ್ನೂ, ಆಯುಧದ ಸಲಕರಣೆಗಳನ್ನೂ, ಹಾಗೆಯೇ ವಿಪುಲವಾದ ಗದೆಗಳನ್ನೂ, ಎಲ್ಲವನ್ನೂ ಬಟ್ಟೆಯಿಂದ ಚೆನ್ನಾಗಿ ಬಿಗಿದು ಈ ಪಕ್ಷಿಗಳಿಂದ

ತುಂಬಿದ ಮರದ ಮೇಲೆ ಇಡಲು ಈ ಮರವನ್ನು ಹತ್ತು. ಈಗ ಈ ದೊಡ್ಡ ಶಮೀವೃಕ್ಷವನ್ನು ಹತ್ತಿ ನಮ್ಮ ಆಯುಧಗಳನ್ನು ಅಲ್ಲಿ ಇಡು.

ಇದಂ ಗೋಮೃಗಮಭ್ಯಾಶೇ ಗತಸತ್ತ್ವಮಚೇತನಮ್ ।
ಹಾರ್ಯಮುತ್ಕೃತ್ಯ ವೈ ವೀರ ಧನೂಂಷಿ ಪರಿವೇಷ್ಟಯ ॥೪೬॥

ಇಲ್ಲಿ ಸಮೀಪದಲ್ಲಿ ಒಂದು ಗೋವು ಮೃತವಾಗಿದೆ. ವೀರನೇ, ಅದರ ಚರ್ಮವನ್ನು ತೆಗೆದು ಬಿಲ್ಲುಗಳಿಗೆ ಸುತ್ತು.

ಏವಮುಕ್ತೋ ಮಹಾಬಾಹುಃ ಸಹದೇವೋ ಯಥೋಕ್ತವತ್ ।
ಶಮೀಮಾರುಹ್ಯ ತ್ವರಿತೋ ಧನೂಂಷಿ ಪರಿವೇಷ್ಟಯತ್ ॥೪೭॥

ಹೀಗೆ ಹೇಳಲ್ಪಟ್ಟ ಮಹಾಬಾಹುವಾದ ಸಹದೇವನು ಯುಧಿಷ್ಠಿರನು ಹೇಳಿದಂತೆಯೇ ಶಮೀವೃಕ್ಷವನ್ನು ಹತ್ತಿ ಶೀಘ್ರವಾಗಿ ಧನುಸ್ಸುಗಳನ್ನು ಗೋಚರ್ಮದಿಂದ ಸುತ್ತಿದನು.

ಶೀತವಾತಾತಪಭಯಾದ್ ವರ್ಷತ್ರ್ಯಾಣಾಯ ದುರ್ಜಯಃ ।
ತಾನಿ ವೀರಯಶೋಜ್ಞಾನನಿರಾಬಾಧಾನಿ ಸರ್ವಶಃ ॥೪೮॥

ಪುನಃ ಪುನಃ ಸುಸಂವೇಷ್ಟ್ಯ ಕೃತ್ವಾ ಸುದೃಢಮಾವರಮ್ ॥೪೯॥

ಚಳಿ ಗಾಳಿ ಬಿಸಿಲುಗಳ ಭಯದಿಂದ ರಕ್ಷಣೆಯನ್ನು ಮಾಡಲು ದುರ್ಜಯನಾದ ಸಹದೇವನು ಪಾಂಡವರ ಕೀರ್ತಿಯಿಂದಲೂ ಮತ್ತು ಜ್ಞಾನದಿಂದಲೂ ನಿರ್ಬಾಧವಾದ ಆ ಆಯುಧಗಳನ್ನು ಪುನಃಪುನಃ ಎಲ್ಲಕಡೆಗಳಲ್ಲಿಯೂ ಚೆನ್ನಾಗಿ ಸುತ್ತಿ ದೃಢವಾದ ಆವರಣವನ್ನು ಮಾಡಿದನು.

ಅಥಾಪರಮದೂರಸ್ಥಮುಂಛವೃತ್ತಿಕಲೇಬರಮ್ ।
ಪ್ರಾಯೋಪವೇಶಾದುಚ್ಚುಷ್ಕಂ ಸ್ನಾಯುಚರ್ಮಾಸ್ಥಿಸಂಯುತಮ್ ॥೫೦॥

ತಚ್ಚಾನೀಯ ಧನುರ್ಮಧ್ಯೇ ನಿಬಬಂಧುಶ್ಚ ಪಾಂಡವಾಃ ।
ಉಪಾಯಕುಶಲಾಃ ಸರ್ವೇ ಸಪ್ರಹಾಸಮಥಾಬ್ರುವನ್ ॥೫೧॥

ಅನಂತರ ಅಲ್ಲಿಯೇ ಸಮೀಪದಲ್ಲಿದ್ದ ಪ್ರಾಯೋಪ್ರವೇಶವನ್ನು ಮಾಡಿ ತನ್ನ ಶರೀರವನ್ನು ತ್ಯಜಿಸಿದ್ದ ಒಬ್ಬ ಉಂಛವೃತ್ತಿ ಬ್ರಾಹ್ಮಣನ ಸ್ನಾಯು ಚರ್ಮ ಅಸ್ಥಿಗಳಿಂದ ಕೂಡಿದ ಒಣಗಿದ ಶರೀರವನ್ನು ತಂದು ಅದನ್ನು ಧನುಸ್ಸುಗಳ ಮಧ್ಯದಲ್ಲಿಟ್ಟು ಉಪಾಯ ಕುಶಲರಾದ ಪಾಂಡವರು ಚೆನ್ನಾಗಿ ಕಟ್ಟಿ ಎಲ್ಲರೂ ನಗುತ್ತಾ ಮಾತನಾಡಿದರು.

ಅಸ್ಯ ಬದ್ಧಸ್ಯ ದೌರ್ಗಂಧ್ಯಾನ್ಮನುಷ್ಯಾ ವನಚಾರಿಣಃ ।
ದೂರಾತ್ ಪರಿಹರಿಷ್ಯಂತಿ ಸಸತ್ತ್ವೇಯಂ ಶಮೀತಿ ಹ ॥೫೨॥

ಇಲ್ಲಿ ಕಟ್ಟಲ್ಪಟ್ಟ ದೇಹದ ದುರ್ವಾಸನೆಯಿಂದ ವನಚಾರಿಗಳಾದ ಮನುಷ್ಯರು ಈ ಶಮಿಯಲ್ಲಿ ಶವವಿದೆ ಎಂದು ತಿಳಿದು ದೂರದಿಂದಲೇ ಇದನ್ನು ಬಿಟ್ಟು ಹೋಗುತ್ತಾರೆ.

ಅಥಾಬ್ರವೀನ್ಮಹಾರಾಜೋ ಧರ್ಮಾತ್ಮಾ ಸ ಯುಧಿಷ್ಠಿರಃ ॥೫೩॥

ರಜ್ಜುಭಿಃ ಸುಕೃತಂ ಪ್ರಾಜ್ಞ ವಿನಿರ್ಬಧ್ನೀಹಿ ಪಾಂಡವ ॥೫೪॥

ಯಾನಿ ಚಾತ್ರ ವಿಶಾಲಾನಿ ರೂಢಮೂಲಾನಿ ಮನ್ಯಸೇ ।
ತೇಷಾಮುಪರಿ ಬಧ್ನೀಹಿ ಇದಂ ವಿಪ್ರಕಲೇಬರಮ್ ॥೫೫॥

ಅನಂತರ ಮಹಾರಾಜನಾದ ಧರ್ಮಾತ್ಮನಾದ ಯುಧಿಷ್ಠಿರನು ಸಹದೇವನನ್ನು ಕುರಿತು, 'ಪಾಂಡವನೇ, ಪ್ರಾಜ್ಞನೇ, ಎಲ್ಲಿ ಎಲ್ಲಿ ರಂಧ್ರಗಳು ಕಾಣುತ್ತದೆಯೋ ಅಲ್ಲೆಲ್ಲಾ ಹಗ್ಗಗಳಿಂದ ಚೆನ್ನಾಗಿ ಬಿಗಿದು ಅದರ ಮೇಲೆ ಈ ಬ್ರಾಹ್ಮಣನ ಕಳೇಬರವನ್ನು ಇಡು' ಎಂದು ಹೇಳಿದನು.

ವೈಶಂಪಾಯನಃ

ತಚ್ಛ್ರುತ್ವಾ ಸಹದೇವಸ್ತು ಪರ್ಯಬಧ್ನತ ತಚ್ಛವಮ್ ॥೫೬॥

ವೈಶಂಪಾಯನ– ಅದನ್ನು ಕೇಳಿ ಸಹದೇವನು ಆ ಶವವನ್ನು ಕಟ್ಟಿದನು.

ಸಹ ಧರ್ಮೇಣ ಧರ್ಮಾತ್ಮಾ ಭ್ರಾತೃಭಿಶ್ಚ ವಿವಿತ್ಸತಾ ।
ಅರಣೀಗ್ರಹಣೇ ಕಾಲೇ ವರಾನ್ ದತ್ತಃ ಪರಂತಪಃ ॥೫೭॥

ತಾನ್ಯಾಯುಧಾನ್ಯುಪಾಧಾಯ ಪ್ರೋವಾಚ ಮಧುರಾಕ್ಷರಮ್ ।
ಯುಧಿಷ್ಠಿರಃ ಶುಚಿರ್ಭೂತ್ವಾ ಮನಸಾऽಭಿಪ್ರಣಮ್ಯ ಚ ॥೫೮॥

ಅರಣೀಗ್ರಹಣ ಕಾಲದಲ್ಲಿ ತನ್ನನ್ನು ಪರೀಕ್ಷಿಸಲು ಬಂದ ಯಮದೇವನಿಂದ ತನ್ನ ತಮ್ಮಂದಿರ ಜೊತೆಯಲ್ಲಿ ವರಗಳನ್ನು ಪಡೆದ ಧರ್ಮಾತ್ಮನಾದ ಯುಧಿಷ್ಠಿರನು ಆ ಆಯುಧಗಳನ್ನು ಹಾಗೆ ಇಟ್ಟು ಶುಚಿರ್ಭೂತನಾಗಿ ಮನಸ್ಸಿನಲ್ಲಿಯೇ ನಮಸ್ಕರಿಸಿ ಮಧುರವಾದ ಅಕ್ಷರಗಳಿಂದ ಗಟ್ಟಿಯಾಗಿ ಹೇಳಿದನು.

ಯುಧಿಷ್ಠಿರಃ

ಬ್ರಹ್ಮಾಣಮಿಂದ್ರಂ ವರದಂ ಕುಬೇರಂ ವರುಣಾನಿಲೌ ।
ರುದ್ರಂ ಯಮಂ ಚ ವಿಷ್ಣುಂ ಚ ಸೋಮಾರ್ಕೌ ಧರ್ಮಮೇವ ಚ ॥

ಪೃಥಿವೀಮಂತರಿಕ್ಷಂ ಚ ದಿಶಶ್ಚೋಪದಿಶಸ್ತಥಾ ।
ವಸೂಂಶ್ಚ ಮರುತಶ್ಚೈವ ಜ್ವಲನಂ ಚಾತಿತೇಜಸಮ್ ॥೬೦॥

ದಿವಾಚರಾ ರಾತ್ರಿಚರಾಣಿ ವಾऽಪಿ
ಯಾನೀಹ ಭೂತಾನ್ಯನುಕೀರ್ತಿತಾನಿ ।
ತೇಭ್ಯೋ ನಮಸ್ಕೃತ್ಯ ಚ ಸುವ್ರತೇಭ್ಯಃ
ಪ್ರಣಮ್ಯ ತೇಷಾಂ ಶರಣಂ ಗತೋऽಹಮ್ ॥೬೧॥

ಯುಧಿಷ್ಠಿರ– ಬ್ರಹ್ಮದೇವರು, ಇಂದ್ರ , ವರದನಾದ ಕುಬೇರ, ವರುಣಾನಿಲರು, ರುದ್ರ , ಯಮ, ವಿಷ್ಣು, ಚಂದ್ರಸೂರ್ಯರು, ಯಮಧರ್ಮ, ಪೃಥಿವೀ, ಅಂತರಿಕ್ಷ, ದಿಕ್ಕುಗಳು, ಅವಾಂತರ ದಿಕ್ಕುಗಳು, ವಸುಗಳು, ಮರುತ್ತುಗಳು, ಅತಿತೇಜಸ್ವಿಯಾದ ಅಗ್ನಿ, ದಿವಾಚರರು ಮತ್ತು ನಿಶಾಚರರು ಮತ್ತು ನಾನು ಮುಂಚೆ ಹೇಳಿದ ಎಲ್ಲಾ ಭೂತಗಳು- ಈ ಎಲ್ಲಾ ಒಳ್ಳೆಯ ವ್ರತಧಾರಿಗಳಿಗೆ ನಮಸ್ಕರಿಸಿ ನಾನು ಅವರಿಗೆ ಶರಣಾಗತನಾಗಿದ್ದೇನೆ.

ಸರ್ವಾಯುಧಾನೀಹ ಮಹಾಬಲಾನಿ
ನ್ಯಾಸಂ ಮಹಾದೇವಸಮೀಪತೋ ವೈ ।
ನ್ಯಸ್ಯಾಮ್ಯಹಂ ವಾಯುಸಮೀಪತಶ್ಚ
ವನಸ್ಪತೀನಾಂ ಚ ಸಪರ್ವತಾನಾಮ್ ॥೬೨॥

ಮಹಾಬಲಿಷ್ಠವಾದ ಈ ಎಲ್ಲಾ ಆಯುಧಗಳನ್ನೂ ನಾನು ಮಹಾದೇವನಾದ ನಾರಾಯಣನ ಸಮೀಪದಲ್ಲಿಯೂ, ವಾಯುದೇವರ ಸಮೀಪದಲ್ಲಿಯೂ, ವನಸ್ಪತಿ ಮತ್ತು ಪರ್ವತಗಳ ಸಮೀಪದಲ್ಲಿಯೂ ನ್ಯಾಸವಾಗಿ ಇಡುತ್ತಿದ್ದೇನೆ (ಲಕ್ಷಾಲಂಕಾರ).

ಏಷ ನ್ಯಾಸೋ ಮಯಾ ನ್ಯಸ್ತಃ ಸೂರ್ಯಸೋಮಾನಿಲಾಂತಿಕೇ ।
ಮಹ್ಯಂ ಪಾರ್ಥಾಯ ವಾ ದೇಯಂ ಪೂರ್ಣೇ ವರ್ಷೇ ತ್ರಯೋದಶೇ ॥

ಇದನ್ನು ನಾನು ಸೂರ್ಯಚಂದ್ರ ಅಗ್ನಿಗಳ ಸಮೀಪದಲ್ಲಿ ನ್ಯಾಸವಾಗಿ ಇಡುತ್ತಿದ್ದೇನೆ. ಹದಿಮೂರನೆಯ ವರ್ಷವು ಪೂರ್ಣವಾದ ಮೇಲೆ ಇದನ್ನು ನನಗಾಗಲೀ ಅಥವಾ ಅರ್ಜುನನಿಗಾಗಲೀ ಕೊಡಬೇಕು.

ನೇದಂ ಭೀಮಾಯ ದಾತವ್ಯಮಯಂ ಕ್ರುದ್ಧೋ ವೃಕೋದರಃ ॥೬೪॥

ಅಮರ್ಷಾತ್ ನಿತ್ಯಸಂಕ್ರುದ್ಧೋ ಧೃತರಾಷ್ಟ್ರಸುತಾನ್ ಪ್ರತಿ ।
ಅಪೂರ್ಣಕಾಲೇ ಪ್ರಹರೇತ್ ಕ್ರೋಧಸಂಜಾತಮತ್ಸರಃ ॥೬೫॥

ಇದನ್ನು ಭೀಮಸೇನನಿಗೆ ಕೊಡಬಾರದು. ಅವನು ಕೋಪಿಷ್ಠನಾದವನು. ಧೃತರಾಷ್ಟ್ರನ ಪುತ್ರರ ಮೇಲೆ ಸರ್ವದಾ ಬಹಳ ಕ್ರುದ್ಧನಾದ ಅವನು ತನ್ನ ಕೋಪದಿಂದ ಉಂಟಾದ ಮಾತ್ಸರ್ಯದಿಂದ ಕಾಲವು ಪೂರ್ಣವಾಗುವುದಕ್ಕೆ ಮೊದಲೇ ಅವರನ್ನು ಸಂಹರಿಸಬಹುದು.

ಪುನಃ ಪ್ರವೇಶೋ ನಃ ಸ್ಯಾತ್ ತು ವನವಾಸಾಯ ಸರ್ವದಾ ।
ಸಮಯೇ ಪರಿಪೂರ್ಣೇ ತು ಧಾರ್ತರಾಷ್ಟ್ರಾನ್ ನಿಹನ್ಮಹಿ ॥೬೬॥

ಏಷ ಚಾರ್ಥಶ್ಚ ಧರ್ಮಶ್ಚ ಕಾಮಃ ಕೀರ್ತಿಃ ಕುಲಂ ಯಶಃ ।
ಮಮಾಯತ್ತಮಿದಂ ಸರ್ವಂ ಜೀವಿತಂ ಚ ನ ಸಂಶಯಃ ॥೬೭॥

ಆಗ ನಮಗೆ ಪುನಃ ಸರ್ವದಾ ವನವಾಸವೇ ಪ್ರಾಪ್ತವಾಗುತ್ತದೆ. ಹದಿಮೂರನೆಯ ವರ್ಷದ ಸಮಯವು ಪರಿಪೂರ್ಣವಾದ ಮೇಲೆ ನಾವು ಧಾರ್ತರಾಷ್ಟ್ರರನ್ನು ಕೊಲ್ಲುವೆವು. ನನ್ನ ಅರ್ಥ, ಧರ್ಮ, ಕಾಮ, ಕೀರ್ತಿ, ಕುಲ, ಯಶಸ್ಸು ಮತ್ತು ಪ್ರಾಣ ಎಲ್ಲವನ್ನೂ ಒತ್ತೆಯಾಗಿ ಇಡುತ್ತಿದ್ದೇನೆ. ಇದರಲ್ಲಿ ಸಂಶಯವಿಲ್ಲ.

ವೈಶಂಪಾಯನಃ

ದೇವತೇಭ್ಯೋ ನಮಸ್ಕೃತ್ಯ ಶಮೀಂ ಕೃತ್ವಾ ಪ್ರದಕ್ಷಿಣಮ್ ।
ನಗರಂ ಗಂತುಮಾಯಾತಾಃ ಸರ್ವೇ ತೇ ಭ್ರಾತರಃ ಸಹ ॥೬೮॥

ವೈಶಂಪಾಯನ– ಆ ಎಲ್ಲಾ ಸಹೋದರರೂ ಜೊತೆಯಲ್ಲಿ ದೇವತೆಗಳಿಗೆ ನಮಸ್ಕಾರವನ್ನು ಮಾಡಿ ಶಮಿಗೆ ಪ್ರದಕ್ಷಿಣೆಯನ್ನು ಮಾಡಿ ನಗರವನ್ನು ಪ್ರವೇಶಿಸಲು ಹೊರಟರು.

ಆಗೋಪಾಲವಿಪಾಲೇಭ್ಯಃ ಕರ್ಷಕೇಭ್ಯಃ ಪರಂತಪಾಃ ।
ಆಜಗ್ಮುರ್ನಗರಾಭ್ಯಾಶಂ ಶ್ರಾವಯಂತಃ ಪುನಃ ಪುನಃ ॥೬೯॥

ಗೋಪಾಲಕರು ಮತ್ತು ಕುರಿ ಕಾಯುವವರಿಂದ ಹಿಡಿದು ಎಲ್ಲ ಕೃಷೀವಲರಿಗೆ ಪರಂತಪರಾದ ಅವರು ಪುನಃಪುನಃ ಹೀಗೆಯೇ ಪ್ರಸಿದ್ಧಿಪಡಿಸುತ್ತಾ ನಗರದ ಸಮೀಪಕ್ಕೆ ಬಂದರು.

ಅಶೀತಿಶತವರ್ಷೇಯಂ ಮಾತಾऽಸ್ಮಾಕಮಿಹಾಂತಿಕೇ ।
ಹಂತ ಕಾಲಪರೀಣಾಮಾ ಮೃತ್ಯೋಸ್ತು ವಶಮೇಯುಷೀ ॥೭೦॥

ನ ಚಾಗ್ನಿಸಂಸ್ಕಾರಮಿಯಂ ಪ್ರಾಪಿತಾ ಕುಲಧರ್ಮತಃ ॥೭೧॥

ಎಂಬತ್ತು ವರ್ಷದ ನಮ್ಮ ತಾಯಿಯು ಇಲ್ಲಿಯೇ ಸಮೀಪದಲ್ಲಿ ಕಾಲವಶಳಾಗಿ ಮೃತ್ಯುವನ್ನು ಹೊಂದಿದಳು. ನಮ್ಮ ಕುಲಧರ್ಮಕ್ಕೆ ಅನುಸಾರವಾಗಿ ನಾವು ಅವಳಿಗೆ ಅಗ್ನಿಸಂಸ್ಕಾರವನ್ನು ಮಾಡಲಿಲ್ಲ.

ಯಃ ಸಮಾಸಾದ್ಯತೇ ಕಶ್ಚಿತ್ ತಸ್ಮಿನ್ ದೇಶೇ ಯದೃಚ್ಛಯಾ ।
ಅಚಿರಾತ್ ತಸ್ಯ ಮರಣಂ ಭವಿಷ್ಯತಿ ನ ಸಂಶಯಃ ॥೭೨॥

ತದೈವಮೂಚುಸ್ತೇ ತತ್ರ ಕುಲಧರ್ಮೋ ನ ಈದೃಶಃ ॥೭೩॥

ಯಾರಾದರೂ ಈ ಸ್ಥಳಕ್ಕೆ ಅಕಸ್ಮಾತ್ತಾಗಿ ಬಂದರೆ ತಕ್ಷಣವೇ ಅವರಿಗೆ ಮರಣ ಉಂಟಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಇದು ನಮ್ಮ ಕುಲಧರ್ಮ ಎಂದು ಅವರು ಹೇಳಿಕೊಂಡು ಬಂದರು.

ವೈಶಂಪಾಯನಃ

ವಿಶ್ರಾವಯಂತಸ್ತೇ ಸರ್ವೇ ದಿಶಃ ಸರ್ವಾ ವ್ಯನಾದಯನ್ ।
ಸ್ವರ್ಗತೇಯಮಿಹಾಸ್ಮಾಕಂ ಜನನೀ ಶೋಕವಿಹ್ವಲಾ ॥೭೪॥

ವನೇ ವಿಚರಮಾಣಾನಾಂ ಲುಬ್ಧಾನಾಂ ವನಚಾರಿಣಾಮ್ ।
ಕುಲಧರ್ಮೋ೭ಯಮಸ್ಮಾಕಂ ಪೂರ್ವೈರಾಚರಿತಃ ಪುರಾ ॥೭೫॥

ವೈಶಂಪಾಯನ– ಹೀಗೆ ಅವರು ಎಲ್ಲ ದಿಕ್ಕುಗಳು ಪ್ರತಿಧ್ವನಿಸುವಂತೆ ಈ ನಮ್ಮ ತಾಯಿಯು ಶೋಕವಿಹ್ವಲಳಾಗಿ ಇಲ್ಲಿ ಸ್ವರ್ಗಸ್ಥಳಾದಳು. ವನದಲ್ಲಿ ವಾಸಿಸುವ, ವನದಲ್ಲಿಯೇ ಸಂಚರಿಸುವ ಬೇಡರಾದ ನಮಗೆ ಹೀಗೆ ಅಗ್ನಿಸಂಸ್ಕಾರವನ್ನು ಮಾಡದಿರುವುದು ಹಿಂದಿನಿಂದ ನಡೆದುಕೊಂಡು ಬಂದ ನಮ್ಮ ಕುಲಧರ್ಮ ಎಂದು ಘೋಷಣೆ ಮಾಡುತ್ತಾ ನಡೆದರು.

ಏವಂ ತೇ ಸಮಯಂ ಕೃತ್ವಾ ಸಮಂತಾದವಘುಷ್ಯ ಚ ।
ಭೀಮಸೇನಾರ್ಜುನೌ ಚೈವ ಮಾದ್ರೀಪುತ್ರಾವುಭಾವಪಿ ॥೭೬॥

ಯುಧಿಷ್ಠಿರಶ್ಚ ಕೃಷ್ಣಾ ಚ ರಾಜಪುತ್ರೀ ಸುಮಧ್ಯಮಾ ।
ತತೋ ಯಥಾಸಮಾಜ್ಞಪ್ತಂ ನಗರಂ ಪ್ರಾವಿಶಂಸ್ತದಾ ॥೭೭॥

ಹೀಗೆ ನಿಯಮವನ್ನು ಮಾಡಿಕೊಂಡು ಎಲ್ಲ ಕಡೆಯಲ್ಲಿಯೂ ಘೋಷಣೆಯನ್ನು ಮಾಡುತ್ತಾ ಭೀಮಸೇನ, ಅರ್ಜುನ, ಮಾದ್ರೀಪುತ್ರರಾದ ನಕುಲ ಸಹದೇವರು, ಯುಧಿಷ್ಠಿರ, ರಾಜಪುತ್ರಿಯೂ ಸುಮಧ್ಯಮೆಯೂ ಆದ ದ್ರೌಪದಿ ಅವರೆಲ್ಲರೂ ಮೊದಲು ಸಮಾಲೋಚನೆ ಮಾಡಿದಂತೆ ಆಗ ನಗರವನ್ನು ಪ್ರವೇಶಿಸಿದರು.

ಮತ್ಸ್ಯರಾಜ್ಞೋ ವಿರಾಟಸ್ಯ ಸಮೀಪಂ ವಸ್ತುಮಂಜಸಾ ।
ಅಜ್ಞಾತಚರ್ಯಾಂ ಚರಿತುಂ ವರ್ಷಂ ರಾಷ್ಟ್ರೇ ತ್ರಯೋದಶಮ್ ॥೭೮॥

ಅವರು ಮತ್ಸ್ಯರಾಜನಾದ ವಿರಾಟನ ಸಮೀಪದಲ್ಲಿ ವಾಸ ಮಾಡಿ ಅವನ ರಾಷ್ಟ್ರದಲ್ಲಿ ಹದಿಮೂರನೆಯ ವರ್ಷದ ಅಜ್ಞಾತವಾಸವನ್ನು ಮಾಡಲು ಪ್ರವೇಶಿಸಿದರು.

ಅಥ ಚ್ಛನ್ನಾನಿ ನಾಮಾನಿ ಚಕಾರೈಷಾಂ ಯುಧಿಷ್ಠಿರಃ ।
ಜಯೋ ಜಯೇಶೋ ವಿಜಯೋ ಜಯತ್ಸೇನೋ ಜಯದ್ಬಲಃ ॥೭೯॥

ಆಪತ್ಸು ನಾಮಭಿಸ್ತೈ ತ್ವೈಃ ಸಮಾಹೂತಾಃ ಪರಸ್ಪರಮ್ ॥೮೦॥

ಆಗ ಯುಧಿಷ್ಠಿರನು ಅವರಿಗೆ ಜಯ, ಜಯೇಶ, ವಿಜಯ, ಜಯತ್ಸೇನ ಮತ್ತು ಜಯದ್ಬಲ ಎಂಬ ಪ್ರಚ್ಛನ್ನ ನಾಮಗಳನ್ನು ಹೊಸದಾಗಿ ಇಟ್ಟನು. ಆಪತ್ತು ಒದಗಿದಾಗ ಅವರು ಪರಸ್ಪರವಾಗಿ ಈ ಹೆಸರುಗಳಿಂದ ಕರೆಯುತ್ತಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಸಪ್ತಮೋऽಧ್ಯಾಯಃ ॥

॥ ವೈರಾಟಪರ್ವಣಿ ವಿರಾಟನಗರಪ್ರವೇಶೋ ನಾಮ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ಯುಧಿಷ್ಠಿರನು ಮಾಡಿದ ದುರ್ಗಾಸ್ತುತಿ

ವೈಶಂಪಾಯನಃ

ವಿರಾಟನಗರಂ ರಮ್ಯಂ ಗಚ್ಛಮಾನೋ ಯುಧಿಷ್ಠಿರಃ ।
ಅಸ್ತುವನ್ಮನಸಾ ದೇವೀಂ ದುರ್ಗಾಂ ತ್ರಿಭುವನೇಶ್ವರೀಮ್ ॥೧॥

ಯಶೋದಾಗರ್ಭಸಂಭೂತಾಂ ನಾರಾಯಣವರಪ್ರಿಯಾಮ್ ।
ನಂದಗೋಪಕುಲೇ ಜಾತಾಂ ಮಾಂಗಲ್ಯಾಂ ಕುಲವರ್ದ್ಧನೀಮ್ ॥೨॥

ಕಂಸವಿದ್ರಾವಣಕರೀಮಸುರಾಣಾಂ ಭಯಂಕರೀಮ್ ।
ಶಿಲಾತಳವಿನಿಕ್ಷಿಪ್ತಾಮಾಕಾಶಾಂತರಗಾಮಿನೀಮ್ ॥೩॥

ವಾಸುದೇವಸ್ಯ ಭಗಿನೀಂ ದಿವ್ಯಮಾಲ್ಯವಿಭೂಷಿತಾಮ್ ।
ದಿವ್ಯಾಂಬರಧರಾಂ ದೇವೀಂ ಖಡ್ಗಖೇಟಕಧಾರಿಣೀಮ್ ॥೪॥

ವೈಶಂಪಾಯನ– ವಿರಾಟ ನಗರಕ್ಕೆ ಹೋಗುತ್ತಾ ಯುಧಿಷ್ಠಿರನು ತ್ರಿಭುವನೇಶ್ವರಿಯಾದ, ಯಶೋದಾ ಗರ್ಭಸಂಭೂತಳಾದ, ನಾರಾಯಣನಿಗೆ ಬಹಳ ಪ್ರಿಯಳಾದ, ನಂದಗೋಪಕುಲದಲ್ಲಿ ಜನಿಸಿದ, ಮಂಗಳಪ್ರದಳಾದ, ವಂಶವರ್ಧಿನಿಯಾದ, ಕಂಸನಿಗೆ ನಾಶವನ್ನು ಉಂಟು ಮಾಡಿದ, ಅಸುರರಿಗೆ ಭಯಂಕರಳಾದ, ಕಲ್ಲಿನ ಬಂಡೆಯ ಮೇಲೆ ಅಪ್ಪಳಿಸಿದಾಗ ಆಕಾಶಕ್ಕೆ ಹಾರಿದ, ದಿವ್ಯಮಾಲೆಗಳಿಂದ ಭೂಷಿತಳಾದ, ದಿವ್ಯಾಂಬರಳಾದ, ಖಡ್ಗಖೇಟಗಳನ್ನು ಧರಿಸಿದ ದುರ್ಗಾದೇವಿಯನ್ನು ಮನಸ್ಸಿನಲ್ಲಿಯೇ ಸ್ತೋತ್ರ ಮಾಡಿದನು.

ಸ್ತೋತುಂ ಪ್ರಚಕ್ರಮೇ ಭೂಯೋ ವಿವಿಧೈಃ ಸ್ತೋತ್ರಸಂಭವೈಃ ।
ಆಮಂತ್ರ್ಯ ದರ್ಶನಾಕಾಂಕ್ಷೀ ರಾಜಾ ದೇವೀಂ ಸಹಾನುಜಃ ।
ನಮೋಸ್ತು ವರದೇ ಕೃಷ್ಣೇ ಕೌಮಾರವ್ರತಚಾರಿಣಿ ॥೫॥

ರಾಜನು ತಮ್ಮಂದಿರ ಜೊತೆಯಲ್ಲಿ ದುರ್ಗಾದೇವಿಯ ದರ್ಶನಾಕಾಂಕ್ಷಿಯಾಗಿ ಅವಳನ್ನು ಮನಸ್ಸಿನಲ್ಲಿಯೇ ಆಮಂತ್ರಿಸಿ ಅನೇಕ ವಿಧವಾದ ಸ್ತೋತ್ರದಿಂದ ಸ್ತೋತ್ರ ಮಾಡಲು ಪ್ರಾರಂಭಿಸಿದನು. ವರಪ್ರದಳಾದ ಕೃಷ್ಣೆಯೇ, ಕುಮಾರವ್ರತವನ್ನು ಧರಿಸಿದವಳೇ ನಿನಗೆ ನಮಸ್ಕಾರ.

ಬಾಲಾರ್ಕಸದೃಶಾಕಾರೇ ಪೂರ್ಣಚಂದ್ರನಿಭಾನನೇ ।
ಚತುರ್ಭುಜೇ ಚತುರ್ವಕ್ತ್ರೇ ಪೀನಶ್ರೋಣಿಪಯೋಧರೇ ॥೬॥

ಮಯೂರಪಿಚ್ಛವಲಯೇ ಗದಾಚಕ್ರಾಸಿಧಾರಿಣಿ ।
ನಮಸ್ತೇಂಬುಜಪತ್ರಾಕ್ಷಿ ನಮಸ್ತೇ ತ್ರಿದಶಾರ್ಚಿತೇ ॥೭॥

ಎಳೆಯ ಸೂರ್ಯನನ್ನು ಹೋಲುವವಳೇ, ಪೂರ್ಣಚಂದ್ರನಂತಹ ಮುಖವುಳ್ಳವಳೇ, ನಾಲ್ಕು ಭುಜಗಳುಳ್ಳವಳೇ, ನಾಲ್ಕು ಮುಖವುಳ್ಳವಳೇ, ಉನ್ನತವಾದ ನಿತಂಬ ಮತ್ತು ಸ್ತನಗಳುಳ್ಳವಳೇ, ನವಿಲಿನ ಬಣ್ಣದ ಬಳೆಗಳನ್ನು ತೊಟ್ಟವಳೇ, ಗದೆ ಚಕ್ರ ಮತ್ತು ಖಡ್ಗಗಳನ್ನು ಧರಿಸಿದವಳೇ, ಕಮಲಾಕ್ಷಿಯೇ ನಿನಗೆ ನಮಸ್ಕಾರ. ದೇವತೆಗಳಿಂದ ಅರ್ಚಿತಳಾದವಳೇ ನಿನಗೆ ನಮಸ್ಕಾರ.

ದೈತ್ಯದಾನವದರ್ಪಘ್ನೇ ದೈತ್ಯದಾನವಪೂಜಿತೇ ।
ಶೈಲರಾಜಸುತೇ ದೇವಿ ನಮಸ್ತೇ ವಿಂಧ್ಯವಾಸಿನಿ ॥೮॥

ದೈತ್ಯದಾನವರ ದರ್ಪವನ್ನು ನಾಶಮಾಡಿದವಳೇ, ದೈತ್ಯದಾನವರಿಂದ ಪೂಜಿತಳಾದವಳೇ, ಶೈಲರಾಜನಾದ ಹಿಮಾಲಯನ ಸುತೆಯೇ, ವಿಂಧ್ಯಶೈಲವಾಸಿನಿಯೇ, ದೇವಿಯೇ ನಿನಗೆ ನಮಸ್ಕಾರ.

ಸರ್ವಪ್ರಹರಣೋಪೇತೇ ಸರ್ವಜ್ಞೇ ಸರ್ವಗೇ ಶುಭೇ ।
ಅಜಿತೇ ವಿಜಯೇ ಭದ್ರೇ ಭದ್ರಕಾಳಿ ರಣಪ್ರಿಯೇ ॥೯॥

ಕೃಷ್ಣೇ ದೇವಿ ನಮಸ್ತುಭ್ಯಂ ನಮಃ ಕೈಟಭಮರ್ದಿನಿ ।
ನಮೋ ಗಾಯತ್ರಿ ಸಾವಿತ್ರಿ ನಮಸ್ತೇ ಜಾತವೇದಸಿ ॥೧೦॥

ಎಲ್ಲ ಆಯುಧಗಳನ್ನು ಧರಿಸಿದವಳೇ, ಸರ್ವಜ್ಞಳಾದವಳೇ, ಸರ್ವತ್ರ ವ್ಯಾಪ್ತಳಾದವಳೇ, ಶುಭಳಾದವಳೇ, ಯಾರಿಗೂ ಸೋಲದವಳೇ, ವಿಜಯಶೀಲಳಾದವಳೇ, ಮಂಗಳಪ್ರದಳಾದವಳೇ, ರಣಪ್ರಿಯಳೇ, ಭದ್ರಕಾಳಿಯೇ, ಕೃಷ್ಣೆಯೇ, ದೇವಿಯೇ ನಿನಗೆ ನಮಸ್ಕಾರ. ಕೈಟಭ ಸಂಹಾರಿಣಿಯೇ ನಿನಗೆ ನಮಸ್ಕಾರ. ಗಾಯತ್ರಿಯೇ, ಸಾವಿತ್ರಿಯೇ, ಸರ್ವಜ್ಞಳೇ ನಿನಗೆ ನಮಸ್ಕಾರ.

ವಾಗೀಶ್ವರಿ ನಮಸ್ತುಭ್ಯಂ ಮೇನಕಾಯಾಃ ಸುತೇ ನಮಃ ।
ಶಂಕರಾರ್ಧಶರೀರಸ್ಥೇ ನಮಸ್ತೇ ವಿಷ್ಣುಪೂಜಿತೇ ॥೧೧॥

ವಾಗೀಶ್ವರಿಯೇ ನಿನಗೆ ನಮಸ್ಕಾರ. ಮೇನಕೆಯ ಮಗಳೇ ನಿನಗೆ ನಮಸ್ಕಾರ. ಶಂಕರನ ಅರ್ಧಶರೀರಳಾದವಳೇ, ವಿಷ್ಣುವನ್ನು ಪೂಜಿಸುವವಳೇ ನಿನಗೆ ನಮಸ್ಕಾರ.

ನಮೋ ಬ್ರಹ್ಮಾಣಿ ರುದ್ರಾಣಿ ನಮೋ ನಾರಾಯಣಪ್ರಿಯೇ ।
ನಮಸ್ತ್ರೈಲೋಕ್ಯವಿಖ್ಯಾತೇ ನಮಸ್ತೇऽಮರಪೂಜಿತೇ ॥೧೨॥

ಬ್ರಹ್ಮಾಣಿಯೇ, ರುದ್ರಾಣಿಯೇ, ನಾರಾಯಣಪ್ರಿಯಳೇ ನಿನಗೆ ನಮಸ್ಕಾರ. ಮೂರುಲೋಕಗಳಲ್ಲಿಯೂ ಪ್ರಖ್ಯಾತಳಾದವಳೇ ನಿನಗೆ ನಮಸ್ಕಾರ. ದೇವತೆಗಳಿಂದ ಪೂಜಿತಳಾದವಳೇ ನಿನಗೆ ನಮಸ್ಕಾರ.

ಪದ್ಮಕಿಂಜಲ್ಕವರ್ಣಾಭೇ ಚಾರುಪದ್ಮನಿಭಾನನೇ ।
ಮಹಾಸಿಂಹರಥಾರೂಢೇ ನಮಃ ಶಾರ್ದೂಲವಾಹಿನಿ ॥೧೩॥

ಪದ್ಮಕೇಸರದ ವರ್ಣವುಳ್ಳವಳೇ, ಸುಂದರವಾದ ಪದ್ಮದಂತಹ ಮುಖವುಳ್ಳವಳೇ, ಮಹಾಸಿಂಹಗಳನ್ನು ಹೂಡಿದ ರಥದಲ್ಲಿ ಕುಳಿತವಳೇ, ಶಾರ್ದೂಲವಾಹಿನಿಯೇ ನಿನಗೆ ನಮಸ್ಕಾರ.

ಮಹೇಂದ್ರಾಣಿ ನಮಸ್ತುಭ್ಯಂ ನಮಸ್ತೇ ಭಕ್ತವತ್ಸಲೇ ।
ಮಹಿಷಾಸುರದರ್ಪಘ್ನಿ ಕಂಸಾಸುರಭಯಂಕರಿ ॥೧೪॥

ಮಹೇಂದ್ರಾಣಿಯೇ (ಇಂದ್ರನ ಪತ್ನಿಯಾದ ಶಚಿಯಲ್ಲಿ ಸನ್ನಿಹಿತಳಾದವಳೇ) ನಿನಗೆ ನಮಸ್ಕಾರ. ಭಕ್ತವತ್ಸಲೆಯೇ ನಿನಗೆ ನಮಸ್ಕಾರ. ಮಹಿಷಾಸುರನ ದರ್ಪವನ್ನು ಕಳೆದವಳೇ, ಕಂಸಾಸುರನಿಗೆ ಭಯಂಕರಳಾದವಳೇ ನಿನಗೆ ನಮಸ್ಕಾರ.

ಕಾಳರಾತ್ರಿ ಮಹಾರಾತ್ರಿ ಯಶಸ್ಕರಿ ಶುಭಾನನೇ ।
ಕೌಮಾರಂ ವ್ರತಮಾಸ್ಥಾಯ ತ್ರಿದಿವಂ ಪಾಲಿತಂ ತ್ವಯಾ ॥೧೫॥

ತೇನ ತ್ವಂ ಸ್ತೂಯಸೇ ದೇವಿ ತ್ರಿದಶೈಃ ಪೂಜ್ಯಸೇಽಪಿ ಚ ।
ಸುರೇಶ್ವರಿ ಮಹಾದೇವಿ ಮಹಿಷಾಸುರಘಾತಿನಿ ॥೧೬॥

ಕಾಳರಾತ್ರಿಯೇ, ಮಹಾರಾತ್ರಿಯೇ, ಕೀರ್ತಿಪ್ರದಳೇ, ಶುಭಾನನೆಯೇ, ಕೌಮಾರವ್ರತವನ್ನು ಧರಿಸಿ ಸ್ವರ್ಗವನ್ನು ರಕ್ಷಿಸಿದವಳೇ, ಆ ಕಾರಣದಿಂದ ನೀನು ದೇವತೆಗಳಿಂದ ಪೂಜಿಸಲ್ಪಡುತ್ತೀಯೆ. ಸುರೇಶ್ವರಿಯೇ, ಮಹಿಷಾಸುರ ಮರ್ದಿನಿಯೇ ಮಹಾದೇವಿಯೇ ನಿನಗೆ ನಮಸ್ಕಾರ.

ಪ್ರಪನ್ನೋಽಹಂ ಸುರಶ್ರೇಷ್ಠೇ ದಯಾಂ ಕುರು ಶಿವಾ ಭವ ।
ಜಯಾ ತ್ವಂ ವಿಜಯಾ ತ್ವಂ ಚ ಸಂಗ್ರಾಮೇ ವಿಜಯಪ್ರದಾ ॥೧೭॥

ಭವಿಷ್ಯಸಿ ಸುಸಂಪ್ರೀತಾ ವರದಾ ಭವ ಸಾಂಪ್ರತಮ್ ।
ವಿಂಧ್ಯಾಚಲೇ ನಗಶ್ರೇಷ್ಠೇ ತವ ಸ್ಥಾನಂ ಹಿ ಶಾಶ್ವತಮ್ ॥೧೮॥

ಸುರೋತ್ತಮಳೇ ನಾನು ನಿನಗೆ ಶರಣಾಗತನಾಗಿದ್ದೇನೆ. ನನ್ನಲ್ಲಿ ದಯೆಯನ್ನು ತೋರು. ಮಂಗಳಪ್ರದಳಾಗು. ನೀನು ಜಯ-ವಿಜಯ ಎಂದು ಕರೆಸಿಕೊಳ್ಳುತ್ತೀಯೆ. ನೀನು ಯುದ್ಧದಲ್ಲಿ ಜಯವನ್ನು ಕೊಡುವವಳಾಗುವಿ. ಈಗ ನನಗೆ ಪ್ರಸನ್ನಳಾಗಿ ವರವನ್ನು ಕೊಡುವವಳಾಗು. ಶ್ರೇಷ್ಠವಾದ ವಿಂಧ್ಯಪರ್ವತವು ನಿನ್ನ ಶಾಶ್ವತವಾದ ವಾಸಸ್ಥಾನ.

ಕಾಳಿ ಕಾಳಿ ಮಹಾಕಾಳಿ ಸೀಧುಮಾಂಸವಸಾಪ್ರಿಯೇ ।
ತ್ರೈಲೋಕ್ಯಮಾತರ್ಜನನಿ ಮಮೇಹ ವರದಾ ಭವ ॥೧೯॥

ಕಾಳಿ ಕಾಳಿ ಮಹಾಕಾಳಿಯೇ, ಅಮೃತ, ಮಾಂಸ ಮತ್ತು ವಸೆಗಳಲ್ಲಿ ಪ್ರೀತಿಯುಳ್ಳವಳೇ, ಮೂರುಲೋಕಗಳ ತಾಯಿಯೇ, ನನ್ನ ತಾಯಿಯೇ ಈಗ ನನಗೆ ವರವನ್ನು ಕೊಡು.

ಭಾರಾವತರಣೇ ಯೇ ತ್ವಾಂ ಸಂಸ್ಮರಿಷ್ಯಂತಿ ಮಾನವಾಃ ।
ಪ್ರಣಮಂತಿ ಚ ಯೇ ನಿತ್ಯಂ ಪ್ರಭಾತೇ ಚ ನರಾ ಭುವಿ ॥೨೦॥

ನ ತೇಷಾಂ ದುರ್ಲಭಂ ಕಿಂಚಿತ್ ಪುತ್ರತೋ ಧನತೋಽಪಿ ವಾ ।
ದುರ್ಗಾತ್ ತಾರಯಸೇ ನಿತ್ಯಂ ತೇನ ದುರ್ಗಾ ಸ್ಮೃತಾ ಪುರಾ ॥೨೧॥

ಕಷ್ಟವು ಒದಗಿದಾಗ ಅದನ್ನು ಕಳೆಯಲು ಯಾವ ಮಾನವರು ನಿನ್ನನ್ನು ಸ್ಮರಿಸುವರೋ, ಯಾವ ಮಾನವರು ಭೂಮಿಯಲ್ಲಿ, ಪ್ರಾತಃಕಾಲದಲ್ಲಿ ನಿನಗೆ ನಮಸ್ಕಾರವನ್ನು ಮಾಡುವರೋ ಅವರಿಗೆ ಮಕ್ಕಳಾಗಲೀ, ಧನವಾಗಲೀ ಯಾವುದೂ ದುರ್ಲಭವಲ್ಲ. ಕಷ್ಟದಿಂದ ದಾಟಿಸುವ ಕಾರಣದಿಂದ ನಿನಗೆ ಇಂದಿನಿಂದ ಯಾವಾಗಲೂ ದುರ್ಗಾ ಎಂಬ ಹೆಸರು ಬಂದಿದೆ.

ಕಾಂತಾರೇಷ್ವವಸನ್ನಾನಾಂ ಮಗ್ನಾನಾಂ ಚ ಮಹಾರ್ಣವೇ ।
ದಸ್ಯುಭಿಃ ಸನ್ನಿರುದ್ಧಾನಾಂ ತ್ವಂ ಗತಿಃ ಪರಮಾ ನೃಣಾಮ್ ॥೨೨॥

ಕಾಡಿನಲ್ಲಿ ಸಿಲುಕಿಕೊಂಡವರಿಗೆ, ಸಮುದ್ರದಲ್ಲಿ ಮುಳುಗುವವರಿಗೆ, ಕಳ್ಳರಿಂದ ಬಂಧನಕ್ಕೆ ಒಳಗಾದ ಪುರುಷರಿಗೆ ನೀನೇ ಪರಮಗತಿ.

ಜಲಪ್ರತರಣೇ ದೇವಿ ಕಾಂತಾರೇಷ್ವಟವೀಷು ಚ ।
ಯೇ ಸ್ಮರಂತಿ ಮಹಾದೇವೀಂ ನೈವ ಸೀದಂತಿ ತೇ ನರಾಃ ॥೨೩॥

ದೇವಿಯೇ, ನೀರನ್ನು ದಾಟುವಾಗ, ಕಾಡುಗಳನ್ನು ದಾಟುವಾಗ ಯಾರು ಮಹಾದೇವಿಯಾದ ನಿನ್ನನ್ನು ಸ್ಮರಿಸುತ್ತಾರೋ ಅಂತಹ ಮನುಷ್ಯರು ಎಂದೂ ಕಷ್ಟಕ್ಕೆ ಒಳಗಾಗುವುದಿಲ್ಲ.

ತ್ವಂ ಕೀರ್ತಿಃ ಶ್ರೀರ್ಧೃತಿಃ ಸಿದ್ಧಿರ್ಹ್ರೀರ್ವಿದ್ಯಾ ಸಂತತಿರ್ಮತಿಃ ।
ಸಂಧ್ಯಾ ರಾತ್ರಿಃ ಪ್ರಭಾ ನಿದ್ರಾ ಜ್ಯೋತ್ಸ್ನಾ ಕಾಂತಿಃ ಕ್ಷಮಾ ದಯಾ॥೨೪॥

ನೀನೇ ಕೀರ್ತಿ, ಸಂಪತ್ತು, ಧೈರ್ಯ, ಸಿದ್ಧಿ, ಹ್ರೀ, ವಿದ್ಯಾ, ಸಂತತಿ, ಮತಿ, ಸಂಧ್ಯಾಕಾಲ, ರಾತ್ರಿ, ಪ್ರಭಾ, ನಿದ್ರಾ, ಬೆಳದಿಂಗಳು, ಕಾಂತಿ, ಕ್ಷಮಾ, ದಯಾ (ಇವೆಲ್ಲವೂ ನಿನ್ನ ಅಧೀನ ಎಂದು ಅಭಿಪ್ರಾಯ).

ನೃಣಾಂ ಬಂಧುವಧಕ್ಲೇಶಂ ಪುತ್ರದಾರಧನಕ್ಷಯಮ್ ।
ವ್ಯಾಧಿಮೃತ್ಯುಭಯಂ ಘೋರಂ ಪೂಜಿತಾ ನಾಶಯಿಷ್ಯಸಿ ॥೨೫॥

ನಿನ್ನನ್ನು ಪೂಜಿಸಿದರೆ ಮನುಷ್ಯರಿಗೆ ಉಂಟಾಗುವ ಬಂಧುವಧದ ಕ್ಲೇಶವನ್ನೂ ಭಾರ್ಯಾಪುತ್ರ ಧನಕ್ಷಯವನ್ನೂ, ವ್ಯಾಧಿ ಭಯ ಮತ್ತು ಮೃತ್ಯು ಭಯವನ್ನೂ ನಾಶ ಮಾಡುವಿ.

ಸೋಽಹಂ ರಾಜ್ಯಪರಿಭ್ರಷ್ಟಃ ಶರಣಂ ತ್ವಾಮುಪಾಗತಃ ।
ಪ್ರಣತಶ್ಚ ತಥಾ ಮೂರ್ಧ್ನಾ ಚರಣೌ ತೇ ಸುರೇಶ್ವರಿ ॥೨೬॥

ಎಲೌ ಸುರೇಶ್ವರಿಯೇ, ನಾನು ಈಗ ರಾಜ್ಯಭ್ರಷ್ಟನಾಗಿ ನಿನಗೆ ಶರಣಾಗತನಾಗಿ ಬಂದು ನಿನ್ನ ಪಾದಗಳಿಗೆ ಶಿರಸಾ ನಮಸ್ಕಾರವನ್ನು ಮಾಡಿದ್ದೇನೆ.

ತ್ರಾಹಿ ಮಾಂ ಪದ್ಮಪತ್ರಾಕ್ಷಿ ಸತ್ಯೇ ಸತ್ಯಾ ಭವಸ್ವ ನಃ ।
ಶರಣಂ ಭವ ಮೇ ದುರ್ಗೇ ಶರಣ್ಯೇ ಭಕ್ತವತ್ಸಲೇ ॥೨೭॥

ಸತ್ಯನಾಮಕಳೇ, ಕಮಲಪತ್ರಾಕ್ಷಿಯೇ, ನನ್ನನ್ನು ರಕ್ಷಣೆ ಮಾಡಿ ನಮ್ಮ ವಿಷಯದಲ್ಲಿ ಸತ್ಯಳಾಗು. ದುರ್ಗೆಯೇ, ಶರಣ್ಯೆಯೇ, ಭಕ್ತವತ್ಸಲಳೇ, ನನಗೆ ರಕ್ಷಣೆಯನ್ನು ನೀಡುವವಳಾಗು.

ಆಪನ್ಮಹಾರ್ಣವೇ ಘೋರೇ ಅಸ್ಮಿನ್ ವಿಷಮದುರ್ಗಮೇ ।
ದುಸ್ತರೇ ತ್ರಾಹಿ ಮಾಂ ಭದ್ರೇ ಪರಕೀಯನಿವೇಶನೇ ॥೨೮॥

ಮಂಗಳಪ್ರದಳೇ, ದಾಟಲು ಅಸಾಧ್ಯವಾದ ಬಹಳ ಕ್ರೂರವಾದ ಇನ್ನೊಬ್ಬರ ಮನೆಯಲ್ಲಿ ವಾಸ ಮಾಡುವ ಈ ದೊಡ್ಡ ಆಪತ್ತೆಂಬ ಸಮುದ್ರದಲ್ಲಿ ನನ್ನನ್ನು ರಕ್ಷಿಸು.

ಯಥಾ ನ ಜಾನಾತಿ ನರೋಽತ್ರ ಕಶ್ಚಿದ್
ಯುಧಿಷ್ಠಿರೋಽತ್ರಾವಸತೀತಿ ದುರ್ಗೇ ।
ತಥಾ ಕುರು ಸ್ವರ್ಗಸದಾಂ ವರಿಷ್ಠೇ
ತ್ವಚ್ಚಾರುಪದ್ಮಾಬ್ಜಪುರಃ ಸ್ಥಿತೋಽಹಮ್ ॥೨೯॥

ದುರ್ಗೆಯೇ, ಸ್ವರ್ಗವಾಸಿಗಳಲ್ಲಿ ಶ್ರೇಷ್ಠಳಾದವಳೇ, ಇಲ್ಲಿ ಯುಧಿಷ್ಠಿರನು ವಾಸ ಮಾಡುತ್ತಿದ್ದಾನೆ ಎಂದು ಯಾರಿಗೂ ತಿಳಿಯದಂತೆ ಮಾಡು. ನಾನು ನಿನ್ನ ಪಾದಕಮಲಗಳ ಎದುರಿನಲ್ಲಿ ನಿಂತಿದ್ದೇನೆ.

ದುಃಖಾನ್ವಿತೋಽಹಂ ಪ್ರಲಪಾಮಿ ದುರ್ಗೇ
ಉನ್ಮತ್ತವದ್ ದೀನಮನಾ ನಿರಾಶಃ ।
ಪ್ರಸೀದ ದುರ್ಗೇ ಮಮ ಸಾನುಜಸ್ಯ
ಸಮೀಹಿತಂ ತತ್ ಕುರು ತೇ ನಮೋಽಸ್ತು ॥೩೦॥

ಎಲೌ ದುರ್ಗೆಯೇ, ನಾನು ಹುಚ್ಚನಂತೆ ಮನೋದೈನ್ಯದಿಂದ ನಿರಾಶೆಯಿಂದಲೂ, ದುಃಖದಿಂದಲೂ ಕೂಡಿದವನಾಗಿ ಬಡಬಡಿಸುತ್ತಿದ್ದೇನೆ. ದುರ್ಗೆಯೇ, ನನಗೂ, ನನ್ನ ತಮ್ಮಂದಿರಿಗೂ ಪ್ರಸನ್ನಳಾಗು. ನಮ್ಮ ಮನೋಭೀಷ್ಟವನ್ನು ನೆರವೇರಿಸು. ನಿನಗೆ ನಮಸ್ಕಾರ.

ವೈಶಂಪಾಯನಃ

ಏವಂ ಸ್ತುತಾ ಹಿ ಸಾ ದೇವೀ ದರ್ಶಯಾಮಾಸ ಪಾಂಡವಮ್ ।
ಉಪಸಂಗಮ್ಯ ರಾಜಾನಂ ವಚನಂ ಚೇದಮಬ್ರವೀತ್ ॥೩೧॥

ವೈಶಂಪಾಯನ– ಹೀಗೆ ಸ್ತೋತ್ರ ಮಾಡಲ್ಪಟ್ಟ ದುರ್ಗಾದೇವಿಯು ಪಾಂಡವನಾದ ಯುಧಿಷ್ಠಿರನಿಗೆ ಪ್ರತ್ಯಕ್ಷಳಾಗಿ ಅವನ ಸಮೀಪಕ್ಕೆ ಬಂದು ರಾಜನಾದ ಅವನನ್ನು ಕುರಿತು ಈ ಮಾತನ್ನಾಡಿದಳು.

ಶೃಣು ರಾಜನ್ ಮಹಾಬಾಹೋ ಮದೀಯಂ ವಚನಂ ಪ್ರಭೋ ।
ಭವಿಷ್ಯತ್ಯಚಿರಾದೇವ ಸಂಗ್ರಾಮೇ ವಿಜಯಸ್ತವ ॥೩೨॥

ರಾಜನೇ, ಮಹಾಬಾಹುವೇ, ಪ್ರಭುವೇ, ನನ್ನ ಮಾತನ್ನು ಕೇಳು. ಶೀಘ್ರವಾಗಿಯೇ ಯುದ್ಧದಲ್ಲಿ ನಿನಗೆ ಜಯ ಉಂಟಾಗುವುದು.

ಕ್ಷೋಭಯಿಷ್ಯಾಮಿ ಸಂಪ್ರಾಪ್ತಾಂ ಸಮಸ್ತಾಂ ಕುರುವಾಹಿನೀಮ್ ।

ಯುದ್ಧಕ್ಕೆ ಬಂದ ಸಮಗ್ರವಾದ ಕುರುಸೈನ್ಯವನ್ನು ನಾನು ತಲ್ಲಣಗೊಳಿಸುತ್ತೇನೆ.

ದೇವೀ

(ಮಮ ಪ್ರಸಾದಾತ್ ನಿರ್ಜಿತ್ಯ ಹತ್ವಾ ಕೌರವವಾಹಿನೀಮ್)
ರಾಜ್ಯಂ ನಿಷ್ಕಂಟಕಂ ಕೃತ್ವಾ ಭೋಕ್ಷ್ಯಸೇ ಪೃಥಿವೀಂ ಪುನಃ ॥೩೩॥

ದೇವಿ– ನೀನು ನನ್ನ ಅನುಗ್ರಹದಿಂದ ಕೌರವ ಸೈನ್ಯವನ್ನು ಗೆದ್ದು ಸಂಹಾರ ಮಾಡಿ ನಿಷ್ಕಂಟಕವಾದ ರಾಜ್ಯವನ್ನು ಆಳುತ್ತಾ ಪುನಃ ಪೃಥಿವಿಯನ್ನು ಭೋಗಿಸುವಿ.

ಭ್ರಾತೃಭಿಃ ಸಹಿತೋ ವೀರ ವೃದ್ಧಿಂ ಪ್ರಾಪ್ಸ್ಯಸಿ ಪುಷ್ಕಲಾಮ್ ।
ಮತ್ಪ್ರಸಾದಾಚ್ಚ ತೇ ಸೌಖ್ಯಮಾರೋಗ್ಯಂ ಚ ಭವಿಷ್ಯತಿ ॥೩೪॥

ವೀರನೇ, ತಮ್ಮಂದಿರ ಜೊತೆಯಲ್ಲಿ ನೀನು ಪುಷ್ಕಳವಾದ ಸಮೃದ್ಧಿಯನ್ನು ಹೊಂದುವಿ. ನನ್ನ ಅನುಗ್ರಹದಿಂದ ನಿನಗೆ ಸೌಖ್ಯವೂ, ಆರೋಗ್ಯವೂ ಉಂಟಾಗುವುದು.

ಯೇ ಚ ಮಾಂ ಕೀರ್ತಯಿಷ್ಯಂತಿ ಲೋಕೇ ವಿಗತಮತ್ಸರಾಃ ।
ತೇಷಾಂ ತುಷ್ಟಿಂ ಪ್ರದಾಸ್ಯಾಮಿ ರಾಜ್ಯಮಾಯುರ್ಬಲಂ ಸುತಾನ್ ॥೩೫॥

ಲೋಕದಲ್ಲಿ ಯಾರು ಮಾತ್ಸರ್ಯರಹಿತರಾಗಿ ನನ್ನನ್ನು ಸ್ತೋತ್ರ ಮಾಡುವರೋ ಅವರಿಗೆ ತೃಪ್ತಿಯನ್ನೂ, ರಾಜ್ಯವನ್ನೂ, ಆಯುಸ್ಸನ್ನೂ, ಬಲವನ್ನೂ ಮತ್ತು ಪುತ್ರರನ್ನೂ ಕೊಡುವೆನು.

ಪ್ರವಾಸೇ ನಗರೇ ವಾऽಪಿ ಸಂಗ್ರಾಮೇ ಶತ್ರುಸಂಗರೇ ।
ಅಟವ್ಯಾಂ ದುರ್ಗಕಾಂತಾರೇ ಸಾಗರೇ ಗಿರಿಗಹ್ವರೇ ॥೩೬॥

ಯೇ ಸ್ಮರಿಷ್ಯಂತಿ ಮಾಂ ರಾಜನ್ ಯಥಾಹಂ ಭವತಾ ಸ್ಮೃತಾ ।
ನ ತೇಷಾಂ ದುರ್ಲಭಂ ಕಿಂಚಿದಸ್ಮಿನ್ ಲೋಕೇ ಭವಿಷ್ಯತಿ ॥೩೭॥

ಪ್ರವಾಸ ಕಾಲದಲ್ಲಿ, ನಗರದಲ್ಲಿ, ಯುದ್ಧದಲ್ಲಿ, ಶತ್ರುಗಳ ಮಧ್ಯದಲ್ಲಿ, ಕಾಡಿನಲ್ಲಿ, ದಾಟಲು ಅಸಾಧ್ಯವಾದ ಕಾಡಿನಲ್ಲಿ, ಸಮುದ್ರದಲ್ಲಿ, ಪರ್ವತದ ಗುಹೆಗಳಲ್ಲಿ ನೀನು ನನ್ನನ್ನು ಸ್ಮರಿಸಿದಂತೆ ಯಾರು ನನ್ನನ್ನು ಸ್ಮರಿಸುವರೋ ಅವರಿಗೆ, ಎಲೈ ರಾಜನೇ, ಈ ಲೋಕದಲ್ಲಿ ದುರ್ಲಭವಾದುದು ಯಾವುದೂ ಇಲ್ಲ.

ಇದಂ ಸ್ತೋತ್ರವರಂ ಭಕ್ತ್ಯಾ ಶೃಣುಯಾದ್ ವಾ ಪಠೇತ ವಾ ।
ತಸ್ಯ ಸರ್ವಾಣಿ ಕಾರ್ಯಾಣಿ ಸಿದ್ಧಿಂ ಯಾಸ್ಯಂತಿ ಪಾಂಡವ ॥೩೮॥

ಎಲೈ ಪಾಂಡವನೇ, ಈ ಶ್ರೇಷ್ಠವಾದ ಸ್ತೋತ್ರವನ್ನು ಯಾರು ಶ್ರವಣ ಮಾಡುವರೋ ಅಥವಾ ಪಠಣ ಮಾಡುವರೋ ಅವರ ಎಲ್ಲಾ ಕಾರ್ಯಗಳೂ ಸಿದ್ಧಿಸುವುವು.

ಮತ್ಪ್ರಸಾದಾಚ್ಚ ವಃ ಸರ್ವಾನ್ ವಿರಾಟನಗರೇ ಸ್ಥಿತಾನ್ ।
ನೈವ ಜ್ಞಾಸ್ಯಂತಿ ಕುರವೋ ನರೋ ವಾ ತನ್ನಿವಾಸಿನಃ ॥೩೯॥

ವಿರಾಟ ನಗರದಲ್ಲಿ ನೀನು ವಾಸ ಮಾಡುವಾಗ ನನ್ನ ಅನುಗ್ರಹದಿಂದ ಕುರುಗಳಾಗಲೀ, ಆ ನಗರ ವಾಸಿಗಳಾದ ಯಾವ ಮನುಷ್ಯರೇ ಆಗಲಿ ನಿಮ್ಮನ್ನು ಗುರುತಿಸುವುದಿಲ್ಲ.

ಇತ್ಯುಕ್ತ್ವಾ ಸಾ ತದಾ ದೇವಿ ಯುಧಿಷ್ಠಿರಮರಿಂದಮಮ್ ।
ರಕ್ಷಾಂ ಕೃತ್ವಾ ಚ ಪಾಂಡೂನಾಂ ತತ್ರೈವಾಂತರಧೀಯತ ॥೪೦॥

ಅರಿಂದಮನಾದ ಯುಧಿಷ್ಠಿರನಿಗೆ ಹೀಗೆ ಹೇಳಿ ಆ ದೇವಿಯು ಪಾಂಡವರಿಗೆಲ್ಲಾ ರಕ್ಷಣೆಯನ್ನು ನೀಡಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಅಷ್ಟಮೋऽಧ್ಯಾಯಃ ॥
॥ ವೈರಾಟಪರ್ವಣಿ ದುರ್ಗಾಸ್ತುತಿ ನಾಮ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಯತಿ ವೇಷದಿಂದ ಯುಧಿಷ್ಠಿರನ ವಿರಾಟಸಭಾಪ್ರವೇಶ ಮತ್ತು ನಿವಾಸ

ವೈಶಂಪಾಯನಃ

ತತಸ್ತು ತೇ ಪುಣ್ಯತಮಾಂ ಶಿವಾಂ ಶುಭಾಂ
ಮಹರ್ಷಿಗಂಧರ್ವನಿಷೇವಿತೋದಕಾಮ್ ।
ತ್ರಿಲೋಕಕಾಂತಾಮವತೀರ್ಯ ಜಾಹ್ನವೀಮ್
ಋಷೀಂಶ್ಚ ದೇವಾಂಶ್ಚ ಪಿತೄನತರ್ಪಯನ್ ॥೧॥

ವೈಶಂಪಾಯನ– ಅನಂತರ ಅವರು ಅತ್ಯಂತ ಪವಿತ್ರವಾದ, ಮಂಗಳಪ್ರದವಾದ, ಶುಭಳಾದ, ಮಹರ್ಷಿ-ಗಂಧರ್ವರಿಂದ ಸೇವಿತವಾದ ಜಲವುಳ್ಳ, ಮೂರುಲೋಕಗಳಲ್ಲಿಯೂ ಪ್ರಿಯಳಾದ ಜಾಹ್ನವಿಯಲ್ಲಿ ಇಳಿದು ದೇವತೆಗಳಿಗೂ, ಋಷಿಗಳಿಗೂ ಮತ್ತು ಪಿತೃಗಳಿಗೂ ತರ್ಪಣವನ್ನು ನೀಡಿದರು.

ವರಪ್ರದಾನಂ ಹ್ಯನುಮಂತ್ಯ ಪಾರ್ಥಿವೋ
ಹುತಾಗ್ನಿಹೋತ್ರಃ ಕೃತಜಪ್ಯಮಂಗಲಃ ।
ದಿಶಂ ತಥೈಂದ್ರೀಮಭಿತಃ ಪ್ರಪೇದಿವಾನ್
ಕೃತಾಂಜಲಿರ್ಧರ್ಮಮುಪಾಹ್ವಯಚ್ಛನೈಃ ॥೨॥

ಯಮದೇವರು ತನಗೆ ಕೊಟ್ಟ ವರವನ್ನು ಚಿಂತಿಸುತ್ತಾ ಧರ್ಮರಾಜನು ಅಗ್ನಿಹೋತ್ರವನ್ನು ಮಾಡಿ ಆಹ್ನಿಕ ಮತ್ತು ಪ್ರಾತಃಮಂಗಲಗಳನ್ನು ಪೂರೈಸಿ ಕೈಗಳನ್ನು

ಮುಗಿದುಕೊಂಡು ಯಮನನ್ನು ಆಹ್ವಾನ ಮಾಡುತ್ತಾ ನಿಧಾನವಾಗಿ ಪೂರ್ವದಿಕ್ಕಿನ ಕಡೆಗೆ ನಡೆದನು.

ವರಪ್ರದಾನಂ ಮಮ ದತ್ತವಾನ್ ಪಿತಾ
ಪ್ರಸನ್ನಚೇತಾ ವರದಃ ಪ್ರಜಾಪತಿಃ ।
ಜಲಾರ್ಥಿನೋ ಮೇ ತೃಷಿತಸ್ಯ ಸೋದರಾ
ಮಯಾ ಪ್ರಯುಕ್ತಾ ವಿವಿಶುರ್ಜಲಾಶಯಮ್ ॥೩॥

ಪ್ರಸನ್ನಚಿತ್ತನೂ, ವರಪ್ರದನೂ, ಪ್ರಜಾಪತಿಯೂ ಆದ ನನ್ನ ತಂದೆಯು ನನಗೆ ವರಗಳನ್ನು ನೀಡಿದನು. ಬಾಯಾರಿದ ನನಗೆ ನೀರನ್ನು ತರಲು ಆದೇಶಿಸಲ್ಪಟ್ಟ ನನ್ನ ತಮ್ಮಂದಿರು ನೀರಿನಲ್ಲಿ ಇಳಿದರು.

ನಿಪಾತಿತಾ ಯಕ್ಷವರೇಣ ತೇ ವನೇ
ಮಹಾಹವೇ ಯಜ್ಞಭೃತೇವ ದಾನವಾಃ ।
ಮಯಾ ಚ ಗತ್ವಾ ವರದೋ ಹಿ ತೋಷಿತೋ
ವಿವಕ್ಷತಾ ಪ್ರಶ್ನಸಮುಚ್ಚಯಂ ಗುರುಃ ॥೪॥

ದೊಡ್ಡ ಯುದ್ಧದಲ್ಲಿ ನಾರಾಯಣನು ದಾನವರನ್ನು ಉರುಳಿಸಿದಂತೆ ಕಾಡಿನಲ್ಲಿ ಅವರು ಒಬ್ಬ ಶ್ರೇಷ್ಠನಾದ ಯಕ್ಷನಿಂದ ಉರುಳಿಸಲ್ಪಟ್ಟರು. ಹಿರಿಯನಾದ ಆ ಯಕ್ಷನು ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರವನ್ನು ನೀಡಿ ವರಪ್ರದನಾದ ಅವನನ್ನು ಸಂತೋಷಪಡಿಸಿದೆನು.

ಸ ಮೇ ಪ್ರಸನ್ನೋ ಭಗವಾನ್ ವರಂ
ದದೌ ಪರಿಷ್ವಜಂಶ್ಚಾಹ ತಥೈವ ಸೌಹೃದಾತ್ ।
ವೃಣೀಷ್ವ ಯದ್ ವಾಂಛಸಿ ಪಾಂಡುನಂದನ
ಸ್ಥಿತೋಽಂತರಿಕ್ಷೇ ವರದೋಽಸ್ಮಿ ಪಶ್ಯ ಮಾಮ್ ॥೫॥

ಪ್ರಸನ್ನನಾದ ಆ ಪೂಜ್ಯನು ನನಗೆ ವರವನ್ನು ನೀಡಿದನು. ಹಾಗೆಯೇ ಪ್ರೀತಿಯಿಂದ ನನ್ನನ್ನು ಆಲಂಗಿಸಿ, 'ಪಾಂಡುನಂದನನೇ, ಇಷ್ಟವಾದ ವರವನ್ನು ಕೇಳು. ನಾನು ವರಪ್ರದನಾಗಿ ಬಂದಿದ್ದೇನೆ. ಅಂತರಿಕ್ಷದಲ್ಲಿ ನಿಂತಿದ್ದೇನೆ. ನನ್ನನ್ನು ನೋಡು' ಎಂದು ಹೇಳಿದನು.

ಸ ವೈ ಮಯೋಕ್ತೋ ವರದಃ ಪಿತಾ ಪ್ರಭುಃ
ಸದೈವ ಮೇ ಧರ್ಮರತಾ ಮತಿರ್ಭವೇತ್ ।
ಇಮೇ ಚ ಜೀವಂತು ಮಮಾನುಜಾಃ ಪ್ರಭೋ
ವಯಶ್ಚ ರೂಪಂ ಚ ಬಲಂ ತಥಾऽऽಪ್ನುಯುಃ ॥೬॥

ವರಪ್ರದನೂ, ಪ್ರಭುವೂ, ತಂದೆಯೂ ಆದ ಅವನಿಗೆ, 'ನಾನು ನನಗೆ ಯಾವಾಗಲೂ ಧರ್ಮದಲ್ಲಿ ರತಿ ಇರುವ ಬುದ್ಧಿ ಉಂಟಾಗಲಿ ಎಂದು ಕೇಳಿದೆನು. ಪ್ರಭುವೇ, ಈ ನನ್ನ ತಮ್ಮಂದಿರು ಪುನಃ ಜೀವಿಸಿ ವಯಸ್ಸನ್ನು, ರೂಪವನ್ನು ಮತ್ತು ಬಲವನ್ನು ಹೊಂದುವವರಾಗಲಿ' (ಎಂದೂ ಕೇಳಿದೆನು).

ಕ್ಷಮಾ ಚ ಕೀರ್ತಿಶ್ಚ ಯಥೇಷ್ಟತೋ ಭವೇದ್
ವ್ರತಸ್ಯ ಸತ್ಯಸ್ಯ ಸಮಾಪ್ತಿರೇವ ಚ ।
ವರೋ ಮಯೈಷೋऽಸ್ತು ಯಥಾ ತು ಕೀರ್ತಿತೋ
ನ ತನ್ನೃಷಾ ದೇವವರೋ ಯಥಾऽಬ್ರವೀತ್ ॥೭॥

ಕ್ಷಮೆ ಮತ್ತು ಕೀರ್ತಿಗಳು ವಿಪುಲವಾಗಿ ಉಂಟಾಗಬೇಕು. ನಾವು ಮಾಡಿದ ಪ್ರತಿಜ್ಞೆಯು ಸಮಾಪ್ತಿಗೊಳ್ಳಬೇಕು. ಇದು ನಾನು ಕೇಳುತ್ತಿರುವ ವರ. ಈ ವರವನ್ನು ನೀಡು ಎಂದು ಕೇಳಿದೆನು. ಹಾಗೆಯೇ ಆಗಲಿ ಎಂದು ಆ ದೇವಶ್ರೇಷ್ಠನು ನೀಡಿದ ವರವು ಎಂದೂ ಸುಳ್ಳಾಗುವುದಿಲ್ಲ.

ಸ ಚ ದ್ವಿಜಾತಿಸ್ತರುಣಸ್ತ್ರಿದಂಡಿಭೃತ್
ಕಮಂಡಲೂಷ್ಮೀಷಧರೋ ವ್ಯಜಾಯತ ।
ಸುರಕ್ತಮಾಂಜಿಷ್ಠವರಾಂಬರಃ ಶಿಖೀ
ಪವಿತ್ರಪಾಣಿರ್ದದೃಶೇ ತದದ್ಭುತಮ್ ॥೮॥

ಆಗ ಇದ್ದಕ್ಕಿದ್ದಂತೆಯೇ ಧರ್ಮರಾಜನು ತರುಣನೂ, ತ್ರಿದಂಡಧಾರಿಯೂ, ಕಮಂಡಲು ಮತ್ತು ಉಷ್ಣೀಷ (ರುಮಾಲು) ಧರಿಸಿದ ಬ್ರಾಹ್ಮಣನೂ ಆಗಿ ಮಾರ್ಪಟ್ಟನು. ಮಂಜಿಷ್ಠದಂತೆ ಕೆಂಪಾದ ವಸ್ತ್ರವನ್ನು ಉಟ್ಟವನಾಗಿ ಶಿಖೆಯನ್ನು ಧರಿಸಿ ಪವಿತ್ರ ಪಾಣಿಯಾಗಿ ಕಾಣಿಸಿಕೊಂಡನು. ಆ ದೃಶ್ಯವು ಅದ್ಭುತವಾಗಿದ್ದಿತು.

ತಥೈವ ತೇಷಾಮಪಿ ಧರ್ಮಚಾರಿಣಾಂ
ಯಥೇಪ್ಸಿತಾಹಾರ್ಯಭರಣಾಂಬರಸ್ರಜಃ ।
ಕ್ಷಣೇನ ರಾಜನ್ನಭವನ್ಮಹಾತ್ಮನಾಂ
ಪ್ರಶಸ್ತಧರ್ಮಾಗ್ರ್ಯಫಲಾಭಿಕಾಂಕ್ಷಿಣಾಮ್ ॥೯॥

ಅದರಂತೆಯೇ ಧರ್ಮಚಾರಿಗಳಾದ ಅವನ ತಮ್ಮಂದಿರು ಮತ್ತು ದ್ರೌಪದಿಗೂ ಅವರಿಗೆ ಅಭೀಷ್ಟವಾದ, ಅವರಿಗೆ ಯೋಗ್ಯವಾದ ವಸ್ತ್ರಮತ್ತು ಮಾಲೆಗಳು ಒಂದು ಕ್ಷಣದಲ್ಲಿ ಉಂಟಾದವು. ಎಲೈ ರಾಜನೇ, ಮಹಾತ್ಮರಾದ ಪ್ರಶಸ್ತವಾದ ಧರ್ಮವನ್ನು ಆಚರಣೆ ಮಾಡುವುದರಿಂದ ಉಂಟಾಗುವ ಫಲವನ್ನು ಆಶಿಸುವ ಅವರಿಗೆ ಎಲ್ಲವೂ ಒಂದು ಕ್ಷಣದಲ್ಲಿ ಸಿದ್ಧವಾಯಿತು.

ನವೇನ ರೂಪೇಣ ವಿಶಾಂಪತಿರ್ವ್ಯತಃ
ಸ್ವಧರ್ಮರೂಪೇಣ ಬಭೌ ಪ್ರತಾಪವಾನ್ ।
ನಿಬದ್ಧವೈಡೂರ್ಯಸಿತಾನ್ ಸಕಾಂಚನಾನ್
ನೃಪಸ್ತಥಾಽಕ್ಷಾನ್ ಪರಿವೇಷ್ಟ್ಯ ವಾಸಸಾ ॥೧೦॥

ರಾಜನಾದ ಯುಧಿಷ್ಠಿರನು ಹೊಸ ರೂಪವನ್ನು ಧರಿಸಿ ಪ್ರತಾಪಶಾಲಿಯಾದ ಅವನು ತನ್ನ ಧರ್ಮದ ರೂಪದಿಂದಲೇ ಕಂಗೊಳಿಸಿದನು. ಅವನು ವೈಡೂರ್ಯವನ್ನು ಮೆಟ್ಟಿದ, ಸುವರ್ಣದಿಂದ ಕೂಡಿದ ದಾಳಗಳನ್ನು ಚೆನ್ನಾಗಿ ಬಟ್ಟೆಯಲ್ಲಿ ಸುತ್ತಿಕೊಂಡನು.

ತತೋ ವಿರಾಟಂ ಪ್ರಥಮಂ ಯುಧಿಷ್ಠಿರೋ
ದದರ್ಶ ದೂರಾತ್ ಸುಸಮೃದ್ಧತೇಜಸಮ್ ।
ಅನಂತತೇಜೋಜ್ವಲಿತಂ ಯಥಾಽನಲಂ
ದುರಾಸದಂ ತೀಕ್ಷ್ಣವಿಷಂ ಯಥೋರಗಮ್ ॥೧೧॥

ಅನಂತರ ಯುಧಿಷ್ಠಿರನು ಮೊದಲು ದೂರದಿಂದಲೇ ವಿಪುಲವಾದ ತೇಜಸ್ಸುಳ್ಳ ಅಗ್ನಿಯಂತೆ ಅನಂತ ತೇಜಸ್ಸಿನಿಂದ ಜ್ವಲಿಸುವ, ತೀಕ್ಷ್ಣ ವಿಷವುಳ್ಳ ಸರ್ಪದಂತೆ ದುರಾಸದನಾದ ವಿರಾಟನನ್ನು ನೋಡಿದನು.

ಸಭಾಗತಂ ಪ್ರಾಂಜಲಿಭಿರ್ಜನೈರ್ವೃತಂ
ವಿಚಿತ್ರನಾನಾವಿಧಶಸ್ತ್ರಧಾರಿಭಿಃ ।
ಉಪಾಯನೈಷ್ಫೈಃ ಪ್ರವಿಶದ್ಭಿರಾಚಿತಂ
ದ್ವಿಜೈಶ್ಚ ಶಿಕ್ಷಾಕ್ಷರಮಂತ್ರಧಾರಿಭಿಃ ॥೧೨॥

ಸಿತೋಚ್ಛ್ರಿತೋಷ್ಣೀಷನಿರುದ್ಧಮೂರ್ಧಜಂ
ವಿಚಿತ್ರವೈಡೂರ್ಯವಿಕಾರಕುಂಡಲಮ್ ।
ವಿರಾಟಮಾಯಾಚ್ಚ ಯುಧಿಷ್ಠಿರಸ್ತದಾ
ಬೃಹಸ್ಪತಿಃ ಶಕ್ರಮಿವ ತ್ರಿವಿಷ್ಟಪೇ ॥೧೩॥

ಸಭೆಯಲ್ಲಿ ಕೈಮುಗಿದ ಜನರಿಂದ ಸುತ್ತುವರಿಯಲ್ಪಟ್ಟಂತಹ, ವಿಚಿತ್ರವಾದ ನಾನಾ ವಿಧವಾದ ಶಸ್ತ್ರಗಳನ್ನು ಧರಿಸಿದವರಿಂದ ಸುತ್ತುವರಿಯಲ್ಪಟ್ಟಂತಹ, ಕೈಯಲ್ಲಿ ಕಾಣಿಕೆಯನ್ನು ಹಿಡಿದು ಪ್ರವೇಶ ಮಾಡುವ ಜನರಿಂದ ತುಂಬಿದ ಸಭೆಯಲ್ಲಿದ್ದ, ವೇದ ಮಂತ್ರ ಮತ್ತು ಪಾಠಗಳಿಂದ ಕೂಡಿದ ಬ್ರಾಹ್ಮಣರಿಂದ ಸುತ್ತುವರಿಯಲ್ಪಟ್ಟ ಉನ್ನತವಾದ ಬಿಳಿಯ ರುಮಾಲನ್ನು ತಲೆಯ ಮೇಲೆ ಧರಿಸಿದ, ವಿಚಿತ್ರವಾದ ವೈಡೂರ್ಯಗಳನ್ನು ಕೆತ್ತಿದ ಕುಂಡಲಗಳನ್ನು ಧರಿಸಿದ ವಿರಾಟನನ್ನು, ಸ್ವರ್ಗಲೋಕದಲ್ಲಿ ಬೃಹಸ್ಪತಿಯು ಇಂದ್ರನನ್ನು ಸಮೀಪಿಸುವಂತೆ ಯುಧಿಷ್ಠಿರನು ಸಮೀಪಿಸಿದನು.

ತಮಾವ್ರಜಂತಂ ಪ್ರಸಮೀಕ್ಷ್ಯ ಪಾಂಡವಂ
ವಿರಾಟರಾಜೋ ಮುದಿತೇನ ಚಕ್ಷುಷಾ ।
ಪಪ್ರಚ್ಛ ಚೈನಂ ಸ ನರಾಧಿಪೋ ಮುಹುಃ
ದ್ವಿಜಾಶ್ಚ ಯೇ ಚಾಸ್ಯ ಸಭಾಸದಸ್ತದಾ ॥೧೪॥

ಹತ್ತಿರ ಬರುತ್ತಿದ್ದ ಆ ಪಾಂಡವನನ್ನು ವಿರಾಟರಾಜನು ಸಂತೋಷಗೊಂಡ ಕಣ್ಣುಗಳಿಂದ ಚೆನ್ನಾಗಿ ನೋಡಿ ನರಾಧಿಪನಾದ ಇವನು ಯಾರು ಎಂದು ಮತ್ತೆ ಮತ್ತೆ ಕೇಳಿದನು. ಅಲ್ಲಿದ್ದ ಬ್ರಾಹ್ಮಣರು ಮತ್ತು ಅವನ ಸಭಾಸದರೂ ಸಹ ಹಾಗೆಯೇ ಕೇಳಿದರು.

ಕೋ ವಾ ವಿಜಾನಾತಿ ಪುರಾऽಸ್ಯ ದರ್ಶನಂ
ಯುವಾಂ ಸಭಾಂ ಯೋऽಯಮುಪೈತಿ ಮಾಮಿಕಾಮ್ ।
ರೂಪೇಣ ಸಾರೇಣ ವಿದಾರಯನ್ ಮಹೀಂ
ಶ್ರಿಯಾ ಹ್ಯಯಂ ವೈಶ್ರವಣೋ ದ್ವಿಜೋ ಯಥಾ ॥೧೫॥

ಈ ಯಾವ ವ್ಯಕ್ತಿಯು ನನ್ನ ಸಭೆಯನ್ನು ಪ್ರವೇಶಿಸುತ್ತಿದ್ದಾನೆಯೋ ಅವನನ್ನು ನಿಮ್ಮಲ್ಲಿ ಯಾರು ಇದಕ್ಕಿಂತ ಮೊದಲು ನೋಡಿದ್ದೀರಿ? ಇವನು ರೂಪದಿಂದಲೂ ಮತ್ತು ಬಲದಿಂದಲೂ ಭೂಮಿಯನ್ನು ಸೀಳುವಂತೆ ತೋರುತ್ತಿದೆ. ಈ ಬ್ರಾಹ್ಮಣನು ಕುಬೇರನಂತೆ ಕಾಂತಿಯಿಂದ ಕಂಗೊಳಿಸುತ್ತಿದ್ದಾನೆ.

ಮೃಗೇಂದ್ರರಾಡ್ ವಾರಣಯೂಥಪೋಪಮಃ
ಪ್ರಭಾತ್ಯಯಂ ಕಾಂಚನಪರ್ವತೋ ಯಥಾ ।
ವಿರಾಜತೇ ಪಾವಕಸೂರ್ಯಸನ್ನಿಭಃ
ಸಚಂದ್ರನಕ್ಷತ್ರ ಇವಾಂಶುಮಾನಹಃ ॥೧೬॥

ಮೃಗರಾಜನಾದ ಸಿಂಹದಂತೆ, ಯೂಥಪತಿಯಾದ ಗಜದಂತೆ, ಕಾಂಚನ ಪರ್ವತದಂತೆ ಇವನು ಹೊಳೆಯುತ್ತಿದ್ದಾನೆ. ಅಗ್ನಿಸೂರ್ಯರನ್ನು ಹೋಲುವ ಇವನು ಹಗಲು ಸೂರ್ಯಚಂದ್ರ ಮತ್ತು ನಕ್ಷತ್ರಗಳಿಂದ ಕೂಡಿದಂತೆ ವಿರಾಜಿಸುತ್ತಿದ್ದಾನೆ. (ಅವನ ಮಂದಹಾಸವು ಚಂದ್ರನಂತೆ, ದಂತಪಂಕ್ತಿಯು ನಕ್ಷತ್ರದಂತೆ, ಸ್ವತಃ ಸೂರ್ಯನಂತೆ ಇದ್ದಾನೆ ಎಂದು ಅಭಿಪ್ರಾಯ-ವಾದಿರಾಜರು).

ನ ದೃಶ್ಯತೇऽಸ್ಯಾನುಚರೋ ನ ಕುಂಜರೋ
ನ ಚೋಷ್ಣರಶ್ಮಿಃ ಕಿರಣೈಃ ಸಮುಚ್ಛ್ರಿತಃ ।
ನ ಕುಂಡಲೇ ನಾಂಗದಮಸ್ಯ ನ ಸ್ರಜೋ
ವಿಚಿತ್ರತಾಂಗಶ್ಚ ರಥಶ್ಚತುರ್ಯುಜಃ ॥೧೭॥

ಇವನಿಗೆ ಯಾವ ಅನುಚರರಾಗಲೀ ಅಥವಾ ಗಜಗಳಾಗಲೀ ಕಾಣುತ್ತಿಲ್ಲ. ಇವನು ಕಿರಣಗಳಿಂದ ಕೂಡಿದ ಉನ್ನತನಾದ ಉಷ್ಣರಶ್ಮಿಯಾದ ಸೂರ್ಯನಲ್ಲ. ಇವನು ಕುಂಡಲಗಳನ್ನಾಗಲೀ, ಮಾಲೆಗಳನ್ನಾಗಲೀ ಧರಿಸಿಲ್ಲ. ನಾಲ್ಕು ಕುದುರೆಗಳನ್ನು ಹೂಡಿದ

ರಥವೂ ಇಲ್ಲ. ಆದರೂ ತನ್ನ ತೇಜಸ್ಸಿನಿಂದಲೇ ಅತ್ಯಂತ ಆಶ್ಚರ್ಯಕರವಾಗಿ ಶೋಭಿಸುತ್ತಿದ್ದಾನೆ.

ಕ್ಷಾತ್ರಂ ಚ ರೂಪಂ ಹಿ ಬಿಭರ್ತ್ಯಯಂ ಭೃಶಂ
ಗಜೇಂದ್ರಶಾರ್ದೂಲಮಹರ್ಷಭೋಪಮಃ ।
ಅಭ್ಯಾಗತೋಽಸ್ಮಾನನಲಂಕೃತೋಽಪಿ ಸನ್
ವಿರಾಜತೇ ಭಾನುರಿವಾಚಿರೋದಯಃ ॥೧೮॥

ವಿಭಾತ್ಯಯಂ ಕ್ಷತ್ರಿಯ ಏವ ಸರ್ವಥಾ
ವಿರಾಟ ಇತ್ಯೇವಮುವಾಚ ತಂ ಪ್ರತಿ ॥೧೯॥

ಗಜೇಂದ್ರನನ್ನು, ವ್ಯಾಘ್ರವನ್ನು, ಮಹಾವೃಷಭನನ್ನು ಹೋಲುವ ಇವನು ಸ್ಪಷ್ಟವಾಗಿ ಕ್ಷತ್ರಿಯ ರೂಪವನ್ನು ಧರಿಸಿದವನು. ನಮ್ಮನ್ನು ಸಮೀಪಿಸುತ್ತಿರುವ ಇವನು ಯಾವ ಅಲಂಕಾರವಿಲ್ಲದಿದ್ದರೂ ಆಗ ತಾನೇ ಉದಯಿಸಿದ ಸೂರ್ಯನಂತೆ ಕಂಗೊಳಿಸುತ್ತಿದ್ದಾನೆ. ಇವನು ನಿಶ್ಚಿತವಾಗಿ ಕ್ಷತ್ರಿಯನೆಂದೇ ತೋರುತ್ತಿದೆ ಎಂದು ವಿರಾಟನು ಅವನ ವಿಷಯದಲ್ಲಿ ಹೇಳಿದನು.

ಸಸಾಗರಾಂತಾಮಯಮದ್ಯ ಮೇದಿನೀಂ
ಪ್ರಶಾಸಿತುಂ ಚಾರ್ಹತಿ ವಾಸವೋಪಮಃ ।
ನಾಕ್ಷತ್ರಿಯೋ ನೂನಮಯಂ ಭವಿಷ್ಯತಿ
ಮೂರ್ಧಾಭಿಷಿಕ್ತಃ ಪ್ರತಿಭಾತಿ ಮಾಂ ಪ್ರತಿ ॥೨೦॥

ತುಲ್ಯಂ ಹಿ ರೂಪಂ ಪ್ರತಿದೃಶ್ಯತೇಽಸ್ಯ
ವ್ಯಾಘ್ರಸ್ಯ ಸಿಂಹಸ್ಯ ನರರ್ಷಭಸ್ಯ ॥೨೧॥

ಇಂದ್ರನಿಗೆ ಸಮಾನವಾದ ಇವನು ಸಾಗರಾಂತವಾದ ಭೂಮಿಯನ್ನು ಆಳಲು ಯೋಗ್ಯನಾಗಿದ್ದಾನೆ. ಇವನು ಕ್ಷತ್ರಿಯನಾಗದಿರಲು ಸಾಧ್ಯವಿಲ್ಲ. ಮೂರ್ಧಾಭಿಷಿಕ್ತನಾದ ರಾಜನಂತೆ ನನಗೆ ತೋರುತ್ತಿದ್ದಾನೆ. ಅವನ ಆಕಾರವು ವ್ಯಾಘ್ರಕ್ಕೆ, ಸಿಂಹಕ್ಕೆ ಮತ್ತು ದೊಡ್ಡ ಗೂಳಿಗೆ ಸಮಾನವಾಗಿ ತೋರುತ್ತಿದೆ.

ಯದೇಷ ಕಾಮಂ ಪರಿಮಾರ್ಗತೇ ದ್ವಿಜಃ
ತದಸ್ಯ ಸರ್ವಂ ಕ್ರಿಯತಾಮಸಂಶಯಮ್ ।
ಪ್ರಿಯಂ ಚ ಮೇ ದರ್ಶನಮೀದೃಶೇ ಜನೇ
ದ್ವಿಜೇಷು ಮುಖ್ಯೇಷು ತಥಾऽತಿಥಿಷ್ವಪಿ ॥೨೨॥

ಧನೇಷು ರತ್ನೇಷ್ವಥ ಗೋಷು ವೇಶ್ಮಸು
ಪ್ರಕಾಮತೋ ಮೇ ವಿಚರತ್ವವಾರಿತಃ ॥೨೩॥

ಈ ಬ್ರಾಹ್ಮಣನು ಯಾವ ಅಭೀಷ್ಟವನ್ನು ಬಯಸುತ್ತಾನೆಯೋ ಅವೆಲ್ಲವನ್ನೂ ಅವನಿಗೆ ನಿಸ್ಸಂಶಯವಾಗಿ ನೆರವೇರಿಸಿ. ನನಗೆ ಇಂತಹ ಜನರನ್ನು ನೋಡಲು, ಶ್ರೇಷ್ಠ ಬ್ರಾಹ್ಮಣರನ್ನು ನೋಡಲು, ಹಾಗೆಯೇ ಅತಿಥಿಗಳನ್ನು ನೋಡಲು ಬಹಳ ಸಂತೋಷವಾಗುತ್ತದೆ. ಇವನು ನನ್ನ ಧನಗಳಲ್ಲಿಯೂ, ರತ್ನಗಳಲ್ಲಿಯೂ, ಗೋವುಗಳಲ್ಲಿಯೂ, ಮನೆಗಳಲ್ಲಿಯೂ ತನಗೆ ಇಷ್ಟ ಬಂದಂತೆ ಯಾರಿಂದಲೂ ತಡೆಯಲ್ಪಡದೆ ಸಂಚರಿಸುವವನಾಗಲಿ.

ವೈಶಂಪಾಯನಃ

ಏವಂ ಬ್ರುವಾಣಸ್ತಮನಂತತೇಜಸಾ
ವಿರಾಜಮಾನಂ ಸಹಸೋತ್ಥಿತೋ ನೃಪಃ ।
ಅನೇನ ರೂಪೇಣ ಸಮೀಪಮಾಗತಂ
ತ್ರಿದಂಡಕುಂಡ್ಯಂಕುಶಶಿಕ್ಯಧಾರಿಣಮ್ ॥೨೪॥

ವೈಶಂಪಾಯನ– ಹೀಗೆ ಹೇಳುತ್ತಾ ರಾಜನು ಅಂತಹ ರೂಪದಿಂದ ಸಮೀಪಕ್ಕೆ ಬಂದ ತ್ರಿದಂಡ, ಕಮಂಡಲು ಮತ್ತು ಅಂಕುಶ ಧಾರಿಯಾದ, ಅನಂತ ತೇಜಸ್ಸಿನಿಂದ ಕಂಗೊಳಿಸುವ ಆ ಬ್ರಾಹ್ಮಣನನ್ನು ನೋಡಿ ಹೀಗೆ ಹೇಳುತ್ತಾ ತಕ್ಷಣದಲ್ಲಿ ಎದ್ದು ನಿಂತನು.

ಸಮುದ್ಯತಾ ಸಾऽऽಸ ಸಭಾ ಸಪಾರ್ಥಿವಾ
ಸವಿಪ್ರರಾಜನ್ಯವಿಶಾ ಸಶೂದ್ರಕಾ ।
ಸಭಾಗತಂ ಪ್ರೇಕ್ಷ್ಯ ತಪಂತಮರ್ಚಿಷಾ
ವಿನಿಃಸೃತಂ ರಾಹುಮುಖಾದ್ಯಥಾ ರವಿಮ್ ॥೨೫॥

ತನ್ನ ಕಾಂತಿಯಿಂದ ಕಂಗೊಳಿಸುತ್ತಾ ಸಭೆಯನ್ನು ಪ್ರವೇಶಿಸಿ ರಾಹುಮುಖದಿಂದ ಮುಕ್ತನಾದ ಸೂರ್ಯನಂತಿದ್ದ ಆ ಯತಿಯನ್ನು ನೋಡಿ ರಾಜರು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಈ ಎಲ್ಲರಿಂದಲೂ ಕೂಡಿದ ಆ ಸಭೆಯು ಎದ್ದು ನಿಂತಿತು.

ಸ ತೇನ ಪೂರ್ವಂ ಜಯತಾದ್ ಭವಾನಿತಿ
ದ್ವಿಜಾತಿನೋಕ್ತೋಽಭಿಮುಖಂ ಕೃತಾಂಜಲಿಃ ।
ಜಯಂ ಜಯಾರ್ಹೇಣ ಸಮೇತ್ಯ ವರ್ಧಿತೋ
ವಿರಾಟರಾಜೋ ಹ್ಯಭಿವಾದಯಚ್ಚ ತಮ್ ॥೨೬॥

ಆ ಯತಿಯು ಮೊದಲು ರಾಜನನ್ನು ಕುರಿತು ನಿನಗೆ ಜಯವಾಗಲಿ ಎಂದು ಅವನಿಗೆ ಜಯವನ್ನು ವರ್ಧಿಸಿದನು. ವಿರಾಟರಾಜನು ಅವನಿಗೆ ಅಭಿಮುಖನಾಗಿ ಕೈಗಳನ್ನು ಜೋಡಿಸಿ ಅವನಿಗೆ ನಮಸ್ಕಾರವನ್ನು ಮಾಡಿದನು.

ತಮಬ್ರವೀತ್ ಪ್ರಾಂಜಲಿರೇವ ಪಾರ್ಥಿವೋ
ವಿರಾಟರಾಜೋ ಮಧುರಾಕ್ಷರಂ ವಚಃ ॥೨೭॥

ಪ್ರಾಪ್ತಃ ಕುತಸ್ತ್ವಂ ಭಗವನ್ ಕಿಮಿಚ್ಛಸಿ
ಕ್ವ ವಾಸ್ಯಸೇ ಕಿಂ ಕರವಾಣಿ ತೇ ದ್ವಿಜ ॥೨೮॥

ಕೈಗಳನ್ನು ಮುಗಿದುಕೊಂಡೇ ಪಾರ್ಥಿವನಾದ ವಿರಾಟರಾಜನು ಮಧುರವಾದ ಮಾತುಗಳಿಂದ ನೀವು ಎಲ್ಲಿಂದ ಬಂದಿದ್ದೀರಿ? ಏನು ಬಯಸುತ್ತೀರಿ? ಯಾರಿಂದ ವಾಸಿಸಲ್ಪಡುತ್ತೀರಿ? (ಯತಿಗಳು ಇನ್ನೊಬ್ಬರಿಂದಲೇ ವಾಸಿಸಲ್ಪಡಬೇಕು). ಬ್ರಾಹ್ಮಣರೇ, ನಿಮಗೆ ನಾನು ಏನು ಮಾಡಲಿ? ಎಂದು ಕೇಳಿದನು.

ಶ್ರುತಂ ಚ ಶೀಲಂ ಚ ಕುಲಂ ಚ ಶಂಸ ಮೇ
ಗೋತ್ರಂ ತಥಾ ನಾಮ ಚ ದೇಶಮೇವ ಚ ।
ಸತ್ಯಪ್ರತಿಜ್ಞಾ ಹಿ ಭವಂತಿ ಸಾಧವೋ
ವಿಶೇಷತಃ ಪ್ರವ್ರಜಿತಾ ದ್ವಿಜಾತಯಃ ॥೨೯॥

ನಿಮ್ಮ ವಿದ್ಯೆಯನ್ನು, ಶೀಲವನ್ನು ಮತ್ತು ಕುಲವನ್ನು ನನಗೆ ಹೇಳಿ. ನಿಮ್ಮ ಗೋತ್ರ, ನಾಮ ಮತ್ತು ದೇಶವನ್ನು ಹೇಳಿ. ಸಜ್ಜನರು ಸತ್ಯವನ್ನೇ ನುಡಿಯುವವರಾಗುತ್ತಾರೆ. ಅದರಲ್ಲಿಯೂ ಸಂನ್ಯಾಸಿಗಳಾದ ಬ್ರಾಹ್ಮಣರು ವಿಶೇಷವಾಗಿ ಸತ್ಯವನ್ನು ನುಡಿಯುವರು.

ತವಾನುರೂಪಂ ಪ್ರಚರಾಮಿ ತೇ ಹ್ಯಹಂ
ನ ಚಾವಮಂತಾ ಹಿ ಶುಭಾಭಿಭಾಷಿತಾ ।
ಅಪೂಜಿತಾ ಹ್ಯಗ್ನಿಸಮಾ ದ್ವಿಜಾತಯಃ
ಕುಲಂ ದಹೇಯುಃ ಸವಿಷಾ ಇವೋರಗಾಃ ॥೩೦॥

ನಿಮಗೆ ಯೋಗ್ಯವಾದ ರೀತಿಯಲ್ಲಿ ನಾನು ನಿಮ್ಮ ಜೊತೆಯಲ್ಲಿ ನಡೆದುಕೊಳ್ಳುತ್ತೇನೆ. ನಿಮಗೆ ಎಂದೂ ಅವಮಾನವನ್ನು ಮಾಡುವುದಿಲ್ಲ. ಶುಭವನ್ನೇ ಮಾತನಾಡುತ್ತೇನೆ. ಬ್ರಾಹ್ಮಣರನ್ನು ಪೂಜೆ ಮಾಡದಿದ್ದರೆ ಅವರು ಅಗ್ನಿಗೆ ಸಮಾನರಾದವರು. ವಿಷದಿಂದ ಕೂಡಿದ ಸರ್ಪಗಳಂತೆ ಅವರು ಕುಲವನ್ನೇ ದಹಿಸಿಯಾರು!

ಸರ್ವಾಂ ಚ ಭೂಮಿಂ ತವ ದಾತುಮುತ್ಸಹೇ
ಸದಂಡಕೋಶಂ ವಿಸೃಜಾಮಿ ತೇ ಪುರಮ್ ।
ಕಸ್ಯಾಸಿ ರಾಜ್ಞೋ ವಿಷಯಾದಿಹಾಗತಃ
ಕಿಂ ಕರ್ಮ ಚಾತ್ರಾಚರಸಿ ದ್ವಿಜೋತ್ತಮ ॥೩೧॥

ನಾನು ನನ್ನ ಎಲ್ಲಾ ಭೂಮಿಯನ್ನೂ ನಿಮಗೆ ಕೊಡಲು ಬಯಸುತ್ತೇನೆ. ಸೈನ್ಯ ಮತ್ತು ಕೋಶದಿಂದ ಕೂಡಿದ ಈ ನಗರವನ್ನು ನಿಮ್ಮ ಸಲುವಾಗಿ ಬಿಟ್ಟುಕೊಡುತ್ತೇನೆ. ಯಾವ ರಾಜನ ಉದ್ದೇಶದಿಂದ ನೀವು ಇಲ್ಲಿಗೆ ಬಂದಿದ್ದೀರಿ? ಬ್ರಾಹ್ಮಣಶ್ರೇಷ್ಠರೇ, ನೀವು ಇಲ್ಲಿ ಯಾವ ಕಾರ್ಯವನ್ನು ಮಾಡುತ್ತೀರಿ?

ಏವಂ ಬ್ರುವಾಣಂ ತಮುವಾಚ ಪಾರ್ಥಿವೋ
ಯುಧಿಷ್ಠಿರೋ ಧರ್ಮಮವೇಕ್ಷ್ಯ ಚಾಸಕೃತ್ ।
ಸತ್ಯಂ ವಚಃ ಕೋ ನ್ವಿಹ ವಕ್ತುಮುತ್ಸಹೇದ್
ಯಥಾಪ್ರತಿಜ್ಞಂ ತು ಶೃಣುಷ್ವ ಪಾರ್ಥಿವ ।
ಶ್ರುತಂ ಚ ಶೀಲಂ ಚ ಕುಲಂ ಚ ಕರ್ಮ ಚ
ಶೃಣುಷ್ವ ಮೇ ಜನ್ಮ ಚ ದೇಶಮೇವ ಚ ॥೩೨॥

ಹೀಗೆ ಹೇಳುತ್ತಿದ್ದ ರಾಜನನ್ನು ಕುರಿತು ಸ್ವತಃ ರಾಜನಾದ ಯುಧಿಷ್ಠಿರನು ಅನೇಕ ಬಾರಿ ಧರ್ಮವನ್ನು ವಿಮರ್ಶೆ ಮಾಡಿ ಇಲ್ಲಿ ಸತ್ಯವಚನವನ್ನು ಯಾರು ಹೇಳಲು ಸಾಧ್ಯ ಎಂದು (ವಿಮರ್ಶೆ ಮಾಡಿ) ರಾಜನೇ, ನಮ್ಮ ಪ್ರತಿಜ್ಞೆಗೆ ಅನುಗುಣವಾಗಿ ಹೇಳುತ್ತೇನೆ, ಕೇಳು. ನನ್ನ ವಿದ್ಯೆಯನ್ನೂ ಶೀಲವನ್ನೂ, ಕುಲವನ್ನೂ, ಕರ್ಮವನ್ನೂ, ಜನ್ಮವನ್ನೂ ಮತ್ತು ದೇಶವನ್ನೂ ಕೇಳಿ ತಿಳಿದುಕೋ ಎಂದು ಹೇಳಿದನು (ತಾವು ಧರ್ಮರಾಜಾದಿಗಳು ಎಂದು ಸತ್ಯವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಅಜ್ಞಾತ ವಾಸದಲ್ಲಿ ಹೇಗೆ ಕಾಲ ಕಳೆಯಬೇಕೆಂದು ಅಣ್ಣತಮ್ಮಂದಿರು ಪರಸ್ಪರ ಪ್ರತಿಜ್ಞೆ ಮಾಡಿದಂತೆ ಹೇಳುತ್ತೇನೆ. ಸ್ವತಃ ಯತಿಯಾಗದಿದ್ದರೂ ಪ್ರತಿಜ್ಞೆಗೆ ಅನುಗುಣವಾಗಿ ಯತಿಯಾಗಿದ್ದೇನೆ ಎಂದು ಯುಧಿಷ್ಠಿರನ ಅಭಿಪ್ರಾಯ- ಲಕ್ಷಾಲಂಕಾರ).

ಗುರೂಪದೇಶಾನ್ನಿಯಮಾದ್ ದೃಢವ್ರತಂ
ಕುಲಕ್ರಮಾರ್ಥಂ ಪಿತೃಭಿರ್ನಿಯೋಜಿತಮ್ ।
ದ್ವಿಜೋ ವ್ರತೇನಾಸ್ಮಿ ನ ಚ ದ್ವಿಜಃ ಪ್ರಭೋ
ಸುಮುಂಡಿತಃ ಪ್ರವ್ರಜಿತಸ್ತ್ರಿದಂಡಭೃತ್ ॥೩೩॥

ಗುರುಗಳ ಉಪದೇಶದಿಂದ ಕುಲಕ್ರಮಕ್ಕೆ ಅನುಸಾರವಾಗಿ ಪಿತೃಗಳಿಂದ ನಿಯೋಜಿತನಾಗಿ ನಿಯಮದಿಂದ ದೃಢವ್ರತನಾಗಿದ್ದೇನೆ. ವ್ರತದಿಂದ ಬ್ರಾಹ್ಮಣನಾಗಿದ್ದೇನೆ. ಆದರೆ ಪ್ರಭುವೇ, ನಾನು ಶಿರಸ್ಸನ್ನು ಮುಂಡನ ಮಾಡಿಕೊಂಡು ತ್ರಿದಂಡವನ್ನು ಹಿಡಿದು ಸಂನ್ಯಾಸಿಯಾದುದರಿಂದ ಬ್ರಾಹ್ಮಣನಲ್ಲ ಎಂದು ಹೇಳಬಹುದು (ಗುರೂಪದೇಶ ಎಂದರೆ ಗುರುಗಳಾದ ಧೌಮ್ಯರ ಉಪದೇಶದಂತೆ ಎಂದು ಅರ್ಥ. ಪಿತೃಭಿರ್ನಿಯೋಜಿತಮ್ ಎಂದರೆ ತಂದೆಯಾದ ಯಮದೇವರ ಆದೇಶಕ್ಕೆ ಅನುಗುಣವಾಗಿ ಎಂದರ್ಥ. ಕುಲಕ್ರಮಾರ್ಥಂ ಎಂದರೆ ಬ್ರಾಹ್ಮಣ ಕುಲದಲ್ಲಿ ಯತಿಯಾಗಿ ಕಾಲಿಡಲು ಎಂದರ್ಥ. ವ್ರತದಿಂದ ದ್ವಿಜನಾಗಿದ್ದೇನೆ, ಆದರೆ ನಿಜವಾಗಿ ದ್ವಿಜನಲ್ಲ, ನಾನು ಕ್ಷತ್ರಿಯ ಎಂದು ಅಭಿಪ್ರಾಯ. ಆದ್ದರಿಂದ ಧರ್ಮರಾಜನ ಯಾವ ಮಾತೂ ಸಹ ಅನೃತವಲ್ಲ- ಲಕ್ಷಾಲಂಕಾರ).

ಇದಂ ಶರೀರಂ ಮಮ ಪಶ್ಯ ಮಾನುಷಂ
ಸಮಾವೃತಂ ಪಂಚಭಿರೇವ ಧಾತುಭಿಃ ।

ಮಮೈವ ಪಂಚೇಂದ್ರಿಯಗಾತ್ರದರ್ಶಿನೋ
ವದಂತಿ ಪಂಚೈವ ಪಿತ್ಸ್ಯಾನ್ ಯಥಾಶ್ರುತಿ ॥೩೪॥

ಈ ನನ್ನ ಮನುಷ್ಯ ಶರೀರವನ್ನು ನೋಡು. ಇದು ಪಂಚಧಾತುಗಳಿಂದ ಕೂಡಿದುದಾಗಿದೆ. ಪಂಚೇಂದ್ರಿಯದಿಂದ ಕೂಡಿದ ನನ್ನ ಶರೀರವನ್ನು ನೋಡುವ ಜನರು ನನಗೆ ಪಂಚ ಪಿತೃಗಳೆಂದು ತಾವು ತಿಳಿದಂತೆ ಹೇಳುತ್ತಾರೆ (ದೇಹವು ತಂದೆಯ ವೀರ್ಯದಿಂದ ಉಂಟಾದರೂ ದೇಹದಲ್ಲಿ ಆಕಾಶಾದಿಪಂಚಭೂತಗಳೇ ಪ್ರಧಾನವಾಗಿರುವುದರಿಂದ ಆ ಭೂತಾಭಿಮಾನಿದೇವತೆಗಳೇ ಮುಖ್ಯವಾದ ತಂದೆಯರೆಂದು ವೇದದ ಅಭಿಪ್ರಾಯ. ತಾನು ಪಾಂಡುಪುತ್ರನೆಂದು ಹೇಳಿದರೆ ಅಜ್ಞಾತವಾಸದ ಭಂಗವಾಗುತ್ತದೆ. ಬೇರೆಯವರ ಪುತ್ರನೆಂದು ಹೇಳಿದರೆ ಸುಳ್ಳನ್ನು ಹೇಳಿದಂತಾಗುತ್ತದೆ. ಆದ್ದರಿಂದ ಯುಧಿಷ್ಠಿರನು ಹೀಗೆ ಹೇಳುತ್ತಾನೆ- ವಾದಿರಾಜರು).

ಮನುಷ್ಯಜಾತಿತ್ವಮಚಿಂತಯನ್ನಹಂ
ನ ಚಾಸ್ಮ್ಯತುಲ್ಯಃ ಪಿತೃಭಿಃ ಸ್ವಭಾವತಃ ।
ಕಂಕೋಽಸ್ಮಿ ನಾಮ್ನಾ ವಿಷಯಂ ತವಾಗತೋ
ವ್ರತೀ ದ್ವಿಜಾತಿಃ ಸ್ವಕೃತೇನ ಕರ್ಮಣಾ ॥೩೫॥

ಈ ಮನುಷ್ಯ ಜಾತಿಯನ್ನು ಚಿಂತಿಸದಿದ್ದರೆ ನಾನು ಸ್ವಾಭಾವಿಕವಾಗಿ ನನ್ನ ಪಿತೃಗಳಿಗೆ ಅಸಮಾನನಾದವನಲ್ಲ (ಮನುಷ್ಯತ್ವವು ಔಪಾಧಿಕವಾದುದು. ತನ್ನ ಪಿತೃಗಳಾದ ಪಂಚ ಮಹಾಭೂತಾದಿ ದೇವತೆಗಳಂತೆ ತಾನೂ ಒಬ್ಬ ದೇವತೆ ಎಂದು ಆಂತರಿಕ ಅಭಿಪ್ರಾಯ). ನಾನು ಕಂಕ ಎಂಬ ಹೆಸರಿನಿಂದ ನನ್ನ ಕರ್ಮದಿಂದ ಬ್ರಾಹ್ಮಣನಾಗಿ ಮತ್ತು ಸಂನ್ಯಾಸಿಯಾಗಿ ನಿನ್ನ ದೇಶಕ್ಕೆ ಬಂದಿದ್ದೇನೆ (ನನ್ನ ಕರ್ಮ ಎಂದರೆ ತಾವು ಮಾಡಿಕೊಂಡ ಸಂಕೇತ ಎಂದು ಆಂತರಿಕ ಅಭಿಪ್ರಾಯ).

ದ್ಯೂತಪ್ರಸಂಗಾದ್ ವನಗೋಽಸ್ಮಿ ರಾಜನ್
ಸತ್ಯಪ್ರತಿಜ್ಞಾ ವ್ರತಿನಶ್ಚರಾಮ ಹ ।
ಯುಧಿಷ್ಠಿರಸ್ಯಾಸ್ಮಿ ಸಖಾಽಭವಂ ಪುರಾ
ಗೃಹಪ್ರವೇಶೇ ಚ ಶರೀರಮೇವ ॥೩೬॥

ಗೃಹೇ ಚ ತಸ್ಯೋಷಿತವಾನಹಂ ಚಿರಂ
ರಾಜಾಽಸ್ಮಿ ತಸ್ಯ ಸ್ಮ ಪುರೇ ಭವನ್ ಪುರಾ ॥೩೭॥

ರಾಜನೇ, ನಾನು ದ್ಯೂತಪ್ರಸಂಗದಿಂದ ಪಣದಲ್ಲಿ ಎಲ್ಲವನ್ನೂ ಕಳೆದುಕೊಂಡು ಕಾಡಿಗೆ ಬಂದಿದ್ದೇನೆ (ಶಕುನಿಯ ಜೊತೆಯಲ್ಲಿ ದ್ಯೂತವನ್ನು ಆಡಿ ರಾಜ್ಯವನ್ನು ಕಳೆದುಕೊಂಡು ಸಂನ್ಯಾಸಿಯಾಗಿ ಬಂದಿದ್ದೇನೆ ಎಂದು ಆಂತರಿಕ ಅಭಿಪ್ರಾಯ). ನಾನು ಸತ್ಯಪ್ರತಿಜ್ಞನಾಗಿ ವ್ರತವನ್ನು ಧರಿಸಿ ನಿನ್ನ ಬಳಿಗೆ ಬಂದಿದ್ದೇನೆ. ನಾನು ಹಿಂದೆ ಯುಧಿಷ್ಠಿರನ ಸ್ನೇಹಿತನಾಗಿದ್ದೆ. ಅವನ ಮನೆಯಲ್ಲಿಯೇ ಇರುತ್ತಿದ್ದೆ. ಅವನ ಶರೀರವೇ ನಾನೆಂದು ತಿಳಿ (ತನಗೆ ತಾನು ಪ್ರಿಯನಾದುದರಿಂದ ಯುಧಿಷ್ಠಿರನ ಸ್ನೇಹಿತ ಎಂದೂ, ತಾನೇ ಯುಧಿಷ್ಠಿರನಾದುದರಿಂದ ಅವನ ಶರೀರವೇ ತನ್ನ ಶರೀರವೆಂದೂ, ಅವನ ಗೃಹವೇ ತನ್ನ ಗೃಹವೆಂದೂ ಆಂತರಿಕ ಅಭಿಪ್ರಾಯ). ಅವನ ಮನೆಯಲ್ಲಿ ನಾನು ಬಹುಕಾಲ ವಾಸವನ್ನು ಮಾಡಿದೆ. ಅವನ ಪಟ್ಟಣದಲ್ಲಿ ನಾನೇ ರಾಜನಾಗಿದ್ದೆ (ರಾಜನಂತೆ ಎಲ್ಲರಿಂದಲೂ ಪೂಜ್ಯನಾಗಿದ್ದೆ ಎಂದು ಬಾಹ್ಯ ಅಭಿಪ್ರಾಯ. ತಾನೇ ಯುಧಿಷ್ಠಿರನೆಂದು ಒಳಗಿನ ಅಭಿಪ್ರಾಯ).

ಮದಾಜ್ಞಯಾ ತತ್ರ ವಿಚೇರುರಂಗನಾ
ಮಮ ಪ್ರಿಯಾರ್ಥಂ ದಮಯಂತಿ ವಾಜಿನಃ ।
ಮಯಾ ಕೃತಂ ತಸ್ಯ ಪುರೇ ತು ಯತ್ ಪುರಾ
ನ ತತ್ ಕದಾಚಿತ್ ಕೃತವಾನ್ ಜನೋಽನ್ಯಥಾ ॥೩೮॥

ನನ್ನ ಆಜ್ಞೆಯಂತೆ ಅಲ್ಲಿ ವನಿತೆಯರು ತಿರುಗಾಡುತ್ತಿದ್ದರು. ನನ್ನ ಸಂತೋಷಕ್ಕಾಗಿ ಕುದುರೆಗಳನ್ನು ಪಳಗಿಸುತ್ತಿದ್ದರು. ನಾನು ಆ ಪಟ್ಟಣದಲ್ಲಿ ಹಿಂದೆ ಮಾಡಿದ ಯಾವ ಕಾರ್ಯವನ್ನೂ ಯಾರೂ ನಿಷೇಧ ಮಾಡುತ್ತಿರಲಿಲ್ಲ.

ಸೋಽಹಂ ಪುರಾ ತಸ್ಯ ವಯಃಸಮಃ ಸಖಾ
ಚರಾಮಿ ಸರ್ವಾಂ ವಸುಧಾಂ ಸುದುಃಖಿತಃ ।
ನ ವೈ ಪ್ರಶಾಂತಿಂ ಕ್ವಚಿದಾಪ್ತವಾನಹಂ
ವ್ರತೋಪದೇಶಾನ್ನಿಯಮೇನ ಮಾರಿತಃ ॥೩೯॥

ನಾನು ಹಿಂದೆ ಅವನ ಸಮಾನ ವಯಸ್ಸಿನ ಸ್ನೇಹಿತನಾಗಿದ್ದೆ. ಈಗ ದುಃಖದಿಂದ ಭೂಮಿಯಲ್ಲೆಲ್ಲಾ ತಿರುಗುತ್ತಿದ್ದೇನೆ. ಎಲ್ಲಿಯೂ ಶಾಂತಿಯು ದೊರಕುತ್ತಿಲ್ಲ. ವ್ರತೋಪದೇಶದಿಂದಲೂ ಮತ್ತು ನಿಯಮದಿಂದಲೂ ನಾನು ಬಾಧಿತನಾಗಿದ್ದೇನೆ (ತಾನೇ ಯುಧಿಷ್ಠಿರನಾದ್ದರಿಂದ ಯುಧಿಷ್ಠಿರನ ಜನ್ಮದಿನವೇ ತನ್ನ ಜನ್ಮದಿನ. ಯುಧಿಷ್ಠಿರನ ಮರಣದಿನವೇ ತನ್ನ ಮರಣದಿನ. ಆದ್ದರಿಂದ ಯುಧಿಷ್ಠಿರನಿಗೆ ಸಮಾನವಾದ ವಯಸ್ಸು ಎಂದು ಹೇಳುತ್ತಾನೆ. ಧೌಮ್ಯರ ಉಪದೇಶದಿಂದಲೂ ಮತ್ತು ತಾವು ಮಾಡಿಕೊಂಡ ನಿಯಮದಿಂದಲೂ ಪೀಡಿತನಾಗಿ ದುಃಖಿತನಾಗಿದ್ದೇನೆ ಎಂದು ಒಳಗಿನ ಅಭಿಪ್ರಾಯ).

ವೈಯಾಘ್ರಪಾದ್ಯೋಽಸ್ಮಿ ನರೇಂದ್ರ ಗೋತ್ರತಃ
ತದೇವ ಸೌಖ್ಯಂ ಮೃಗಯಾಮಹೇ ಪುನಃ ।
ಕೃತಜ್ಞಭಾವೇನ ಮಯಾಽನುಕೀರ್ತಿತಂ
ಯುಧಿಷ್ಠಿರಸ್ಯಾತ್ಮಸಮಸ್ಯ ಚೇಪ್ಸಿತಮ್ ॥೪೦॥

ನಾನು ವೈಯಾಘ್ರಪಾದ ಗೋತ್ರಕ್ಕೆ ಸೇರಿದವನು. ನಾನು ಮೊದಲು ಅನುಭವಿಸಿದ ಸುಖವನ್ನೇ ಇನ್ನೊಮ್ಮೆ ನಿನ್ನ ಬಳಿಯಲ್ಲಿ ಅಪೇಕ್ಷಿಸುತ್ತೇನೆ. ಯುಧಿಷ್ಠಿರನ ಮೇಲಿನ ಕೃತಜ್ಞಭಾವದಿಂದ ನನ್ನ ಆತ್ಮಸಮನಾದ ಅವನ ವಿಷಯವನ್ನು ನಾನು ನಿನ್ನ ಬಳಿ ಪ್ರಸ್ತಾಪ ಮಾಡಿದೆ (ವ್ಯಾಘ್ರಪಾತ್ ಎಂಬ ಋಷಿಯ ಗೋತ್ರಕ್ಕೆ ಸೇರಿದವನು ಎಂದು ಹೊರಗಿನ ಅಭಿಪ್ರಾಯ. ವೈಯಾಘ್ರಪಾದ್ಯ ಎಂದರೆ ಭೀಷ್ಮರಂತೆ ಕುರುವಂಶಕ್ಕೆ ಸೇರಿದವನು ಎಂದು ಒಳಗಿನ ಅಭಿಪ್ರಾಯ).

ಇಮಂ ಹಿ ಮೋಕ್ಷಾಶ್ರಮಮಾಶ್ರಿತಸ್ಯ ಮೇ
ಯುಧಿಷ್ಠಿರಸ್ತುಲ್ಯಗುಣೋ ಭವಾನಪಿ ।
ನ ಮೇಽದ್ಯ ಮಾತಾ ನ ಪಿತಾ ನ ಬಾಂಧವಾ
ನ ಮೇಽಸ್ತಿ ರೂಪಂ ನ ರತಿರ್ನ ಸಂತತಿಃ ॥೪೧॥

ಈ ಮೋಕ್ಷಾಶ್ರಮವನ್ನು ಆಶ್ರಯಿಸಿದ ನನಗೆ ಯುಧಿಷ್ಠಿರನು ಸಮಾನವಾದ ಗುಣವುಳ್ಳವನು. ನೀನೂ ಸಹ ಅವನಂತೆಯೇ. ಈ ದಿನ ನನಗೆ ತಾಯಿಯಾಗಲೀ,

ತಂದೆಯಾಗಲೀ, ಬಂಧುಗಳಾಗಲೀ, ರೂಪವಾಗಲೀ, ಸಂತೋಷವಾಗಲೀ ಅಥವಾ ಸಂತತಿಯಾಗಲೀ ಇಲ್ಲ (ತಾನು ಯತಿಯಾಗಿರುವುದರಿಂದ ಎಲ್ಲವನ್ನೂ ತೊರೆದಿದ್ದೇನೆ ಎಂದು ಹೊರಗಿನ ಅಭಿಪ್ರಾಯ. ಎಲ್ಲರೂ ಇದ್ದರೂ ಈ ದಿನ ಯಾರೂ ಉಪಕಾರ ಮಾಡಲು ಸಾಧ್ಯವಿಲ್ಲವಾದ್ದರಿಂದ ಯಾರೂ ಇಲ್ಲವೆಂದು ಒಳಗಿನ ಅಭಿಪ್ರಾಯ).

ಸುಖಂ ಚ ದುಃಖಂ ಚ ಹಿ ತುಲ್ಯಮದ್ಯ ಮೇ
ಪ್ರಿಯಾಪ್ರಿಯೇ ತುಲ್ಯಗತಿರ್ಗತಾಗತೇ ।
ಮುಕ್ತೋಽಸ್ಮಿ ಕಾಮಾಚ್ಚ ಧನಾಚ್ಚ ಸಾಂಪ್ರತಂ
ತ್ವದಾಶ್ರಮೇ ವಸ್ತುಮಿಹಾಭ್ಯುಪಾಗತಃ ॥೪೨॥

ಈ ದಿನ ನನಗೆ ಸುಖದುಃಖಗಳೆರಡೂ ಸಮಾನವಾದವುಗಳು. ಪ್ರಿಯಾಪ್ರಿಯಗಳು ಗಮನಾಗಮನಗಳು ಎಲ್ಲವೂ ಸಮಾನವಾದವು. ಸದ್ಯಕ್ಕೆ ಭೋಗದಿಂದಲೂ ಮತ್ತು ಧನದಿಂದಲೂ ನಿರ್ಮುಕ್ತನಾಗಿದ್ದೇನೆ. ನಿನ್ನ ಆಶ್ರಯದಲ್ಲಿ ವಾಸ ಮಾಡಲು ಇಲ್ಲಿಗೆ ಬಂದಿದ್ದೇನೆ.

ಸಂವತ್ಸರೇಣೇಹ ಸಮಾಪ್ಯತೇ ತ್ವಿದಂ
ಮಮ ವ್ರತಂ ದುಷ್ಕೃತಕರ್ಮಕಾರಿಣಃ ।
ತತೋ ಭವಂತಂ ಪರಿತೋಷ್ಯ ಕರ್ಮಭಿಃ
ಪುನರ್ವ್ರಜಿಷ್ಯಾಮಿ ಕುತೂಹಲಂ ಯತಃ ॥೪೩॥

ದುಷ್ಕಾರ್ಯವನ್ನು ಮಾಡಿದ ನನ್ನ ಈ ವ್ರತವು ಒಂದು ವರ್ಷಕ್ಕೆ ಸಮಾಪ್ತಿಗೊಳ್ಳುತ್ತದೆ. ಅನಂತರ ನನ್ನ ಕಾರ್ಯಗಳಿಂದ ನಿನ್ನನ್ನು ಸಂತೋಷ ಪಡಿಸಿ ನನ್ನ ಮನಸ್ಸಿಗೆ ಬಂದ ಕಡೆ ನಾನು ಹೋಗುವೆನು.

ಅಕ್ಷಾನ್ ನಿವಪ್ತುಂ ಕುಶಲೋಽಸ್ಮ್ಯಹಂ ಸದಾ
ಪರಾಜಿತಃ ಶಕುನಿರುತಾನಿ ಚಿಂತಯನ್ ।
ಮೃಗದ್ವಿಜಾನಾಂ ಚ ರುತಾನಿ ಚಿಂತಯನ್
ನಿರಾಶ್ರಯಃ ಪ್ರವ್ರಜಿತೋಽಸ್ಮಿ ಭಿಕ್ಷುಕಃ ॥೪೪॥

ನಾನು ದಾಳಗಳನ್ನು ಉರುಳಿಸುವುದರಲ್ಲಿ ಕುಶಲನಾಗಿದ್ದೇನೆ. ಶಕುನ ಪಕ್ಷಿಗಳ ಅಪಶಬ್ದಗಳನ್ನು ಚಿಂತಿಸುತ್ತಾ ಪರಾಜಿತನಾದೆ. ಮೃಗಪಕ್ಷಿಗಳ ಶಬ್ದವನ್ನು ಚಿಂತಿಸುತ್ತಾ ನಿರಾಶ್ರಯನಾಗಿ ಸಂನ್ಯಾಸಿಯಾಗಿ ಹೊರಟುಬಂದಿದ್ದೇನೆ. (ಶಕುನಿರುತ ಎಂದರೆ ಸೌಬಲನಾದ ಶಕುನಿಯ ಕೆಟ್ಟ ಮಾತುಗಳು ಎಂದು ಅಭಿಪ್ರಾಯ. ಮೃಗದ್ವಿಜಗಳು ಎಂದರೆ ಅರಣೀಹರಣ ಸಮದಲ್ಲಿ ಮೃಗರೂಪವನ್ನು ಧರಿಸಿದ ಯಮನ ಮತ್ತು ದ್ವಿಜರು ಎಂದರೆ ಧೌಮ್ಯಾದಿ ಬ್ರಾಹ್ಮಣರ ವಾಕ್ಯವನ್ನು ಸ್ಮರಿಸುತ್ತಾ ಅವರ ಆದೇಶದಂತೆ ಸಂನ್ಯಾಸಿಯಾಗಿದ್ದೇನೆ ಎಂದು ಆಂತರಿಕ ಅಭಿಪ್ರಾಯ).

ತಮೇವಮುಕ್ತೇ ವಚನೇ ನರಾಧಿಪಃ
ಕೃತಾಂಜಲಿಃ ಪ್ರವ್ರಜಿತಂ ಸಮೀಕ್ಷ್ಯ ಚ ।
ಅಥಾಬ್ರವೀದ್ ಹೃಷ್ಟಮನಾಃ ಶುಭಾಕ್ಷರಂ
ಮನೋನುಗಂ ಸರ್ವಸಭಾಗತಂ ವಚಃ ॥೪೫॥

ಆ ಸಂನ್ಯಾಸಿಯು ಹೀಗೆ ಹೇಳುತ್ತಿರಲು ರಾಜನು ಕೈಗಳನ್ನು ಮುಗಿದು ಅವನನ್ನು ನೋಡಿ ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಎಲ್ಲ ಸಭಾಸದರ ಮನಸ್ಸಿಗೆ ಅನುಗುಣವಾದಂತಹ ಶುಭವಾದ ಮಾತುಗಳನ್ನು ಆಡಿದನು.

ದದಾನಿ ತೇ ಹಂತ ವರಂ ಯದೀಪ್ಸಿತಂ
ಪ್ರಶಾಧಿ ಮತ್ಸ್ಯಾನ್ ಯದಿ ಮನ್ಯತೇ ಭವಾನ್ ।
ಪ್ರಿಯಾ ಹಿ ಧೂರ್ತಾ ಮಮ ಚಾಕ್ಷಕೋವಿದಾಃ ।
ತ್ವಂ ಚಾಪಿ ದೇವೋಪಮ ರಾಜ್ಯಮರ್ಹತಿ ॥೪೬॥

ದೇವಸದೃಶನಾದವನೇ, ನೀನು ಇಷ್ಟಪಟ್ಟ ವರಗಳನ್ನು ಸಂತೋಷದಿಂದ ಕೊಡುವೆನು. ನಿನಗೆ ಇಷ್ಟವಾಗುವುದಾದರೆ ಮತ್ಸ್ಯದೇಶವನ್ನೇ ಆಳು. ಅಕ್ಷಕೋವಿದರಾದವರು ನನಗೆ ಪ್ರಿಯರಾದವರು. ನೀನಾದರೂ ರಾಜ್ಯಕ್ಕೆ ಅರ್ಹನಾದವನು.

ಸಮಾನಯಾನಾಸನವಸ್ತ್ರಭೋಜನಂ
ಪ್ರಭೂತಮಾಲ್ಯಾಭರಣಾನುಲೇಪನಮ್ ।

ಸಾ ಸಾರ್ವಭೌಮೋಪಮ ಸರ್ವದಾಽರ್ಹಸಿ
ಪ್ರಿಯಂ ಹಿ ಮನ್ಯೇ ತವ ನಿತ್ಯದರ್ಶನಮ್ ॥೪೭॥

ಸಾರ್ವಭೌಮಸದೃಶನಾದವನೇ, ನೀನು ನನಗೆ ಸಮಾನವಾದ ಯಾನಾಸನ, ವಸ್ತ್ರಭೋಜನಗಳನ್ನು ಸ್ವೀಕರಿಸಲು, ಗಂಧಮಾಲೆಯ ಆಭರಣಗಳನ್ನು ಸ್ವೀಕರಿಸಲು ಯಾವಾಗಲೂ ಯೋಗ್ಯನಾಗಿದ್ದೀಯೆ. ನಿತ್ಯವೂ ನಿನ್ನ ದರ್ಶನವು ನನಗೆ ಸಂತೋಷಕರವಾದುದು ಎಂದು ಭಾವಿಸುತ್ತೇನೆ.

ಯೇ ತ್ವಾಽಭಿಧಾವೇಯುರನರ್ಥಪೀಡಿತಾ
ದ್ವಿಜಾತಿಮುಖ್ಯಾ ಯದಿ ವೇತರೇ ಜನಾಃ ।
ಸರ್ವಾಣಿ ಕಾರ್ಯಾಣ್ಯಹಮರ್ಥಿತಸ್ತ್ವಯಾ
ತೇಷಾಂ ಕರಿಷ್ಯಾಮಿ ನ ಮೇಽತ್ರ ಸಂಶಯಃ ॥೪೮॥

ಬ್ರಾಹ್ಮಣರಾಗಲೀ, ಇತರರಾಗಲೀ ಕಷ್ಟದಿಂದ ಪೀಡಿತರಾಗಿ ನಿನ್ನ ಬಳಿಗೆ ಓಡಿಬಂದು ನಿನಗೆ ಶರಣಾಗತನಾದರೆ ನೀನು ಹೇಳುವ ಎಲ್ಲಾ ಉಪಕಾರವನ್ನೂ ನಾನು ಅವರಿಗೆ ಮಾಡುವೆನು. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಮಮಾಂತಿಕೇ ಯಶ್ಚ ತವಾಪ್ರಿಯಂ ಚರೇತ್
ಪ್ರವಾಸಯೇ ತಂ ಪ್ರವಿಚಿಂತ್ಯ ಮಾನವಮ್ ।
ಯಚ್ಚಾಪಿ ಕಿಂಚಿದ್ ವಸು ವಿದ್ಯತೇ ಮಮ
ಪ್ರಭುರ್ಭವಾಂಸ್ತಸ್ಯ ವಶೇ ವಸೇಹ ಚ ॥೪೯॥

ನನ್ನ ಸಮೀಪದಲ್ಲಿ ನಿನಗೆ ಯಾರಾದರೂ ಅಪ್ರಿಯವನ್ನು ಮಾಡಿದರೆ ಅಂತಹ ಮನುಷ್ಯರನ್ನು ನಾನು ವಿಚಾರ ಮಾಡಿ ಗಡಿಪಾರು ಮಾಡುತ್ತೇನೆ. ನನ್ನ ಬಳಿ ಏನು ಸಂಪತ್ತು ಇದೆಯೋ ಅವೆಲ್ಲಕ್ಕೂ ನೀನು ಒಡೆಯ. ಆದ್ದರಿಂದ ಇಲ್ಲಿ ವಾಸಮಾಡು.

ಯುಧಿಷ್ಠಿರಃ

ಅತೋಽತಿಲಾಭಃ ಪರಮೋ ನ ವಿದ್ಯತೇ
ನ ಮೇ ಜಿತಂ ಕಿಂಚನ ಧಾರಯೇ ಧನಮ್ (ಮನಃ) ।
ನ ಭೋಜನಂ ಕಿಂಚನ ಸಂಸ್ಪೃಶೇ ತ್ವಿಹ
ಹವಿಷ್ಯಭೋಜೀ ನಿಶಿ ಚ ಕ್ಷಿತೀಶಯಃ ॥೫೦॥

ಯುಧಿಷ್ಠಿರ– ಇದಕ್ಕಿಂತ ಹೆಚ್ಚಿನ ಲಾಭವು ನನಗೆ ಯಾವುದೂ ಇಲ್ಲ. ವೈರಾಗ್ಯದಿಂದ ವಶೀಕರಿಸಲ್ಪಟ್ಟ ನನ್ನ ಮನಸ್ಸಿಗೆ ಯಾರೂ ವಿರೋಧ ಮಾಡಲಾರರು. ನಿನ್ನ ಮನೆಯಲ್ಲಿ ನಾನು ಯಾವ ಭೋಜನವನ್ನೂ ಸ್ವೀಕರಿಸುವುದಿಲ್ಲ. ನಾನು ಹವಿಷ್ಯಾನ್ನ ಭೋಜಿಯಾಗಿ ರಾತ್ರಿಯಲ್ಲಿ ನೆಲದ ಮೇಲೆ ಮಲಗಿಕೊಳ್ಳುತ್ತೇನೆ.

ವ್ರತೋಪದೇಶಾತ್ ಸಮಯೋ ಹಿ ನೈಷ್ಠಿಕೋ
ನ ಕ್ರೋಧಿತವ್ಯಂ ನರದೇವ ಕಸ್ಯಚಿತ್ ।
ಏವಂಪ್ರತಿಜ್ಞಸ್ಯ ಮಮೇಹ ಭೂಪತೇ
ನಿವಾಸಬುದ್ಧಿರ್ಭವಿತಾ ತು ನಾನ್ಯಥಾ ॥೫೧॥

ಏವಂ ವರಂ ಮಾತ್ಸ್ಯ ವೃಣೇ ಪ್ರವಾರಿತಂ
ಕೃತೀ ಭವಿಷ್ಯಾಮಿ ವರೇಣ ತೇನ ವೈ ॥೫೨॥

ಗುರುಗಳು ಉಪದೇಶ ಮಾಡಿದ ವ್ರತಕ್ಕೆ ಅನುಸಾರವಾಗಿ ಇದು ನನ್ನ ನೈಷ್ಠಿಕ ವ್ರತ. ರಾಜನೇ, ಇದರಿಂದ ಯಾರ ಮೇಲೂ ಕೋಪಗೊಳ್ಳಬಾರದು. ರಾಜನೇ, ಈ ನನ್ನ ಪ್ರತಿಜ್ಞೆಯನ್ನು ನಡೆಸಿಕೊಡುವುದಾದರೆ ಇಲ್ಲಿ ವಾಸ ಮಾಡುವ ಮನಸ್ಸನ್ನು ಮಾಡುತ್ತೇನೆ. ಇಲ್ಲದಿದ್ದರೆ ಇಲ್ಲ. ಮತ್ಸ್ಯರಾಜನೇ, ಈ ವರವನ್ನು ನಾನು ನಿನ್ನನ್ನು ಬೇಡುತ್ತೇನೆ. ಈ ವರವನ್ನು ನೀಡಿದರೆ ನಾನು ಕೃತಕೃತ್ಯನಾಗುವೆನು.

ವೈಶಂಪಾಯನಃ

ಏವಂ ತು ರಾಜ್ಞಃ ಪ್ರಥಮಃ ಸಮಾಗಮೋ
ಬಭೂವ ಮಾತ್ಸ್ಯಸ್ಯ ಯುಧಿಷ್ಠಿರಸ್ಯ ಚ ।
ವಿರಾಟರಾಜ್ಞಃ ಸ ಹಿ ತೇನ ಸಂಗಮೋ
ಬಭೂವ ವಿಷ್ಣೋರಿವ ವಜ್ರಪಾಣಿನಾ ॥೫೩॥

ವೈಶಂಪಾಯನ– ಹೀಗೆ ಮತ್ಸ್ಯರಾಜನಾದ ವಿರಾಟನಿಗೂ ಮತ್ತು ಯುಧಿಷ್ಠಿರನಿಗೂ ಪ್ರಥಮ ಸಮಾಗಮ ಉಂಟಾಯಿತು. ಆ ಸಮಾಗಮವು ವಿಷ್ಣುವಿಗೂ ಮತ್ತು ವಜ್ರಪಾಣಿಯಾದ ಇಂದ್ರನಿಗೂ ಆದ ಸಮಾಗಮದಂತೆ ಇದ್ದಿತು.

ತಮಾಸನಸ್ಥಂ ಪ್ರಿಯರೂಪದರ್ಶನಂ
ನಿರೀಕ್ಷಮಾಣೋ ನ ತತರ್ಪ ಭೂಮಿಪಃ ।
ಸಭಾಂ ಚ ತಾಂ ಪ್ರಜ್ವಲಯನ್ ಯುಧಿಷ್ಠಿರಃ
ಶ್ರಿಯಾ ಯಥಾ ಶಕ್ರ ಇವ ತ್ರಿವಿಷ್ಟಪಮ್ ॥೫೪॥

ಆಸನದಲ್ಲಿ ಪ್ರಿಯರೂಪವನ್ನು ಧರಿಸಿಕುಳಿತ ಆ ಯತಿಯನ್ನು ಎಷ್ಟು ನೋಡಿದರೂ ರಾಜನಿಗೆ ತೃಪ್ತಿಯೇ ಆಗುತ್ತಿರಲಿಲ್ಲ. ಯುಧಿಷ್ಠಿರನು ಆ ಸಭೆಯನ್ನು ಇಂದ್ರನು ಸ್ವರ್ಗಲೋಕವನ್ನು ತನ್ನ ಕಾಂತಿಯಿಂದ ಬೆಳಗುವಂತೆ ಬೆಳಗುತ್ತಾ ಅಲ್ಲಿ ಇದ್ದನು.

ಏವಂ ಸ ಲಬ್ಧ್ವಾ ನೃಪತಿಃ ಸಮಾಗಮಂ
ವಿರಾಟರಾಜೇನ ನರರ್ಷಭಸ್ತದಾ ।
ಉವಾಸ ವೀರಃ ಪರಮಾರ್ಚಿತಃ ಸುಖೀ
ಸ ವಾऽಸ್ಯ ಕಶ್ಚಿಚ್ಚ ನ ತತ್ ಬುಬೋಧ ॥೫೫॥

ನರಶ್ರೇಷ್ಠನೂ, ರಾಜನೂ ಆದ ಯುಧಿಷ್ಠಿರನು ಹೀಗೆ ವಿರಾಟರಾಜನ ಜೊತೆಯಲ್ಲಿ ಸಮಾಗಮವನ್ನು ಹೊಂದಿ, ಅವನಿಂದ ಚೆನ್ನಾಗಿ ಪೂಜಿಸಲ್ಪಟ್ಟು, ವೀರನಾದ ಅವನು ಸುಖದಿಂದ ಅಲ್ಲಿ ವಾಸಮಾಡಿದನು. ಯಾವ ಜನರೂ ಅವನನ್ನು ಯುಧಿಷ್ಠಿರನೆಂದು ತಿಳಿಯಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ದ್ವಿತೀಯೋऽಧ್ಯಾಯಃ ॥
ವೈರಾಟಪರ್ವಣಿ ಯುಧಿಷ್ಠಿರಮಾತ್ಸ್ಯಸಮಾಗಮೋ ನಾಮ ನವಮೋऽಧ್ಯಾಯಃ

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ವಿರಾಟಸಭೆಗೆ ಸೂದವೇಷದಿಂದ ಭೀಮಸೇನನ ಪ್ರವೇಶ

ವೈಶಂಪಾಯನಃ

ಅಥಾಪರೋ ಭೀಮಬಲಃ ಶ್ರಿಯಾ ಜ್ವಲನ್
ನೃಪಾಯಯೌ ಸಿಂಹವಿಲಾಸವಿಕ್ರಮಃ ।
ಅಸಿಪ್ರವೇಕೇ ಪ್ರತಿಮುಚ್ಯ ಶಾಣಿತೇ
ಖಜಂ ಚ ದರ್ವಿಂ ಚ ಕರೇಣ ಧಾರಯನ್ ॥೧॥

ವೈಶಂಪಾಯನ– ಎಲೈ ರಾಜನೇ, ಅನಂತರ ಮಹಾಬಲವುಳ್ಳವನೂ, ಕಾಂತಿಯಿಂದ ಬೆಳಗುವವನೂ, ಸಿಂಹದ ವಿಲಾಸ ಮತ್ತು ವಿಕ್ರಮವನ್ನು ಹೊಂದಿದವನೂ ಆದ ಇನ್ನೊಬ್ಬನು ಬಾಣಸಿಗರು ಉಪಯೋಗಿಸುವ ಸಾಣೆ ಹಿಡಿದ ಚಾಕು, ಚೂರಿಗಳು, ಸೌಟು ಮತ್ತು ಅನ್ನ ಬಸಿಯುವ ಮುತ್ತಲು ಮೊದಲಾದ ಸಾಧನವನ್ನು ಕೈಯಲ್ಲಿ ಹಿಡಿದು ಪ್ರವೇಶಿಸಿದನು.

ಗಭೀರರೂಪಃ ಪರಮೇಣ ವರ್ಚಸಾ
ರವಿರ್ಯಥಾ ಲೋಕಮಿಮಂ ವಿಭಾಸಯನ್ ।
ಸುಕೃಷ್ಣವಾಸಾ ಗಿರಿರಾಜಸಾರವಾನ್
ಸ ಮತ್ಸ್ಯರಾಜಂ ಸಮುಪೇತ್ಯ ತಸ್ಥಿವಾನ್ ॥೨॥

ಗಂಭೀರ ರೂಪವುಳ್ಳ ಅವನು, ಸೂರ್ಯನು ತನ್ನ ತೀವ್ರ ಪ್ರಕಾಶದಿಂದ ಲೋಕವನ್ನು ಬೆಳಗುವಂತೆ ಸಭೆಯನ್ನು ಬೆಳಗುತ್ತಾ ಬಹಳ ಮಲಿನವಾದ ವಸ್ತ್ರವನ್ನು ಧರಿಸಿ ಪರ್ವತ ಸಾರದ ಬಲವುಳ್ಳವನಾಗಿ ಮತ್ಸ್ಯರಾಜನನ್ನು ಸಮೀಪಿಸಿ ನಿಂತನು.

ಸಭಾಗತೋ ವಾರಣಯೂಥಪೋಪಮಃ
ತಮಿಸ್ರಯಾ ರಾತ್ರಿಮಿವಾವಭಾಸಯನ್ ।
ಸಹಸ್ರನೇತ್ರಾವರಜಾಂತಕೋಪಮಃ
ತ್ರಿಲೋಕಪಾಲಾಧಿಪತಿರ್ಯಥಾ ಹರಿಃ ॥೩॥

ಗಜಯೂಥ ಪತಿಗೆ ಸದೃಶನಾದ ಅವನು ಸಭೆಗೆ ಬಂದಾಗ ಭಯದಿಂದ ಎಲ್ಲರೂ ಕಣ್ಣುಮುಚ್ಚಲು ಅವರಿಗೆ ರಾತ್ರಿಯಂತೆ ಭಾಸವಾಯಿತು. ಅವನು ಇಂದ್ರನ ಅನಂತರದ ದಿಕ್ಕಿಗೆ ಅಧಿಪತಿಯಾದ ಯಮನಂತೆ, ತ್ರಿಲೋಕಪಾಲನಕ್ಕೆ ಅಧಿಪತಿಯಾದ ಹರಿಯಂತೆ ಸಭೆಗೆ ಬಂದನು.

ತಮಾವ್ರಜಂತಂ ಗಜಯೂಥಪೋಪಮಂ
ನಿರೀಕ್ಷಮಾಣೋ ನವಸೂರ್ಯವರ್ಚಸಮ್ ।
ಭಯಾತ್ ಸಮುದ್ವಿಗ್ನವಿಷಣ್ಣಚೇತನೋ
ದಿಶಶ್ಚ ಸರ್ವಾಃ ಪ್ರಸಮೀಕ್ಷ್ಯ ಚಾಸಕೃತ್ ॥೪॥

ಆನೆಯ ಸಲಗನಂತೆ, ಉದಿಸಿದ ಸೂರ್ಯನಂತೆ, ಕಾಂತಿಯನ್ನು ಹೊಂದಿ ಬರುತ್ತಿದ್ದ ಅವನನ್ನು ನೋಡಿದ ಜನರು ಭಯದಿಂದಲೂ ಉದ್ವೇಗದಿಂದಲೂ, ವಿಷಾದದಿಂದಲೂ ಕೂಡಿದ ಮನಸ್ಸುಳ್ಳವರಾಗಿ ಎಲ್ಲ ದಿಕ್ಕುಗಳಲ್ಲಿಯೂ ಪುನಃಪುನಃ ನೋಡಿದರು.

ತಮೇಕವಸ್ತ್ರಂ ಪರಸೈನ್ಯವಾರಣಂ
ಸಭಾsವಿದೂರಾನ್ನೃಪತಿರ್ಯಪಾತ್ಮಜಮ್ ।
ಸಮೀಕ್ಷ್ಯ ವೈಕ್ಲವ್ಯಮುಪೇಯಿವಾನ್ ಶನೈಃ
ಜನಾಶ್ಚ ಭೀತಾಃ ಪರಿತಃ ಪ್ರಸರ್ಪಿರೇ ॥೫॥

ಅಥಾಬ್ರವೀನ್ಮತ್ಸ್ಯಪತಿಃ ಸಭಾಗತಾನ್
ಭೃಶಾತುರೋಷ್ಣಂ ಪರಿನಿಶ್ವಸನ್ನಿವ ॥೬॥

ಏಕವಸ್ತ್ರವನ್ನು ಧರಿಸಿದವನೂ, ಶತ್ರುಸೈನ್ಯ ನಿವಾರಣನೂ ಆದ ಆ ರಾಜಕುಮಾರನು ಸಭೆಗೆ ಸಮೀಪದಲ್ಲಿ ಬರುತ್ತಿರುವುದನ್ನು ನೋಡಿದ ವಿರಾಟ ರಾಜನು ಮನಸ್ಸಿನಲ್ಲಿ ವೈಕ್ಲವ್ಯವನ್ನು ಹೊಂದಿದನು. ಸಭೆಯಲ್ಲಿದ್ದ ಜನರೂ ಸಹ ಭಯದಿಂದ ಮೆಲ್ಲಗೆ ಅಲ್ಲಲ್ಲಿ ಸಂಚರಿಸಲು ಪ್ರಾರಂಭಿಸಿದರು. ಅನಂತರ ಮತ್ಸ್ಯರಾಜನು ಭಯದಿಂದ ಬಿಸಿಯಾಗಿ ನಿಟ್ಟುಸಿರನ್ನು ಬಿಡುತ್ತಾ ಸಭೆಯಲ್ಲಿದ್ದವರನ್ನು ಕುರಿತು ಕೇಳಿದನು.

ಕೋಽಯಂ ಯುವಾ ವಾರಣರಾಜಸನ್ನಿಭಃ
ಸಭಾಮಭಿಪ್ಸತಿ ಹಿ ಮಾಮಿಕಾಂ ಶುಭಾಮ್ ।
ಕೋ ವಾ ವಿಜಾನಾತಿ ಪುರಾಽಸ್ಯ ದರ್ಶನಂ
ಮೃಗೇಂದ್ರಶಾರ್ದೂಲಗತೇರ್ಹಿ ಮಾಮಕಃ ॥೭॥

ನನ್ನ ಶುಭವಾದ ಸಭೆಗೆ ಬರುತ್ತಿರುವ ಗಜರಾಜನನ್ನು ಹೋಲುವ ಈ ಯುವಕನು ಯಾರು? ಸಿಂಹದಂತೆ, ಶಾರ್ದೂಲದಂತೆ ನಡಿಗೆಯುಳ್ಳ ಇವನನ್ನು ನನ್ನವರು ಯಾರಾದರೂ ಇದಕ್ಕಿಂತ ಮೊದಲು ನೋಡಿದ್ದೀರಾ?

ವ್ಯೂಢಾಂತರಾಂಸೋ ಮೃಗರಾಡಿವೋತ್ಕಟೋ
ಯ ಏಷ ದಿವ್ಯಃ ಪುರುಷಃ ಪ್ರಕಾಶತೇ ।
ರಾಜಶ್ರಿಯಾ ಹ್ಯೇಷ ವಿಭಾತಿ ರಾಜವದ್
ವಿರಾಜತೇ ರುಗ್ಮಗಿರಿಪ್ರಭೋಪಮಃ ॥೮॥

ನಾಕ್ಷತ್ರಿಯೋ ನೂನಮಯಂ ಭವಿಷ್ಯತಿ
ಸಹಸ್ರನೇತ್ರಪ್ರತಿಮಸ್ತಥಾ ಹ್ಯಸೌ ॥೯॥

ಪುಷ್ಟವಾದ ಭುಜವುಳ್ಳವನೂ, ಮೃಗರಾಜನಾದ ಸಿಂಹದಂತೆ ಉತ್ಕಟನೂ ಆಗಿ ಈ ಧೀರಪುರುಷನು ಕಂಗೊಳಿಸುತ್ತಿದ್ದಾನೆ. ಇವನು ರಾಜನಂತೆ ರಾಜನ ಕಾಂತಿಯಿಂದ ಹೊಳೆಯುತ್ತಿದ್ದಾನೆ. ಸುವರ್ಣಗಿರಿಯ ಕಾಂತಿಯಂತೆ ಬೆಳಗುತ್ತಿದ್ದಾನೆ. ಇವನು ಕ್ಷತ್ರಿಯನಾಗದಿರಲು ಸಾಧ್ಯವಿಲ್ಲ. ಏಕೆಂದರೆ ಇವನು ಇಂದ್ರನಿಗೆ ಸಮಾನವಾಗಿ ಕಾಣುತ್ತಿದ್ದಾನೆ.

ರೂಪೇಣ ಯಶ್ಚಾಪ್ರತಿಮೋ ಹ್ಯಯಂ ಮಹಾನ್
ಮಹೀಮಿಮಾಂ ಶಕ್ರ ಇವಾಭಿಪಾಲಯೇತ್ ।
ನಾಭೂಮಿಪೋಽಯಂ ಹಿ ಮತಿರ್ಮಮೇತಿ ಚ
ಚ್ಯುತಃ ಸಮೃದ್ಧ್ಯಾ ನಭಸೀವ ನಾಹುಷಃ ॥೧೦॥

ರೂಪದಿಂದ ಅಪ್ರತಿಮನಾದ ಇವನು ಬಹಳ ದೊಡ್ಡ ಆಕೃತಿಯನ್ನು ಹೊಂದಿದ್ದಾನೆ. ಇವನು ಈ ಭೂಮಿಯನ್ನು ಇಂದ್ರನಂತೆ ಆಳಬಹುದು. ಇವನು ರಾಜನಲ್ಲದಿರಲು

ಸಾಧ್ಯವಿಲ್ಲ ಎಂದು ನನ್ನ ಅಭಿಪ್ರಾಯ. ತನ್ನ ಸಮೃದ್ಧಿಯಿಂದ ಆಕಾಶದಿಂದ ಕೆಳಗೆ ಉರುಳಿದ ನಹುಷ ಪುತ್ರನಾದ ಯಯಾತಿಯಂತೆ ಕಾಣುತ್ತಿದ್ದಾನೆ.

ವೈಶಂಪಾಯನಃ

ವಿತರ್ಕಮಾಣಸ್ಯ ಚ ತಸ್ಯ ಪಾಂಡವಃ
ಸಭಾಮತಿಕ್ರಮ್ಯ ವೃಕೋದರೋಽಬ್ರವೀತ್ ।
ಜಯೇತಿ ರಾಜಾನಮಭಿಪ್ರಮೋದಯನ್
ಸುಖೇನ ಸಭ್ಯಂ ಚ ಸಮಾಗತಂ ಜನಮ್ ॥೧೧॥

ತತೋ ನೃಪಂ ವಾಕ್ಯಮುವಾಚ ಪಾಂಡವೋ
ಯಥಾऽऽನುಪೂರ್ವ್ಯಾತ್ ಕೃಪಯಾऽನ್ವಿತೋತ್ತರಮ್ ॥೧೨॥

ವೈಶಂಪಾಯನ– ವಿರಾಟ ರಾಜನು ಹೀಗೆ ತರ್ಕಮಾಡುತ್ತಿರಲು ಪಾಂಡವನಾದ ವೃಕೋದರನು ಸಭೆಯನ್ನು ದಾಟಿ ಅವನ ಬಳಿಗೆ ಬಂದು ನಿನಗೆ ಜಯವಾಗಲಿ ಎಂದು ಅಭಿನಂದಿಸಿ ರಾಜನನ್ನು ಸಂತೋಷಪಡಿಸಿದನು. ಅವನ ಆ ಧೋರಣೆಯನ್ನು ನೋಡಿ ಸಭಾಸದರೂ ಸಹ ಸುಖದಿಂದ ಕೂಡಿದರು. ಅನಂತರ ಪಾಂಡವನು ರಾಜನನ್ನು ಕುರಿತು ಅವನು ಉತ್ತರವನ್ನು ಅವಶ್ಯವಾಗಿ ಹೇಳುವಂತೆ ಕೃಪೆಯಿಂದ ಅವನನ್ನು ಕುರಿತು ಮೊದಲಿನಿಂದ ಮಾತನಾಡಿದನು.

ತ್ವಾಂ ಜೇವಿತುಂ ಶತ್ರುದಮಾಗತೋऽಸ್ಮ್ಯಹಂ
ತ್ವಮೇವ ಲೋಕೇ ಪರಮೋ ಹಿ ಸಂಶ್ರಯಃ ।
ನರೇಂದ್ರ ಸೂದೋऽಸ್ಮಿ ಚತುರ್ಥವರ್ಣಭಾಗ್
ಗುರೂಪದೇಶಾತ್ ಪರಿಚಾರಕರ್ಮಕೃತ್ ॥೧೩॥

ಎಲೈ ಶತ್ರುದಮನಾದ ರಾಜನೇ, ನಾನು ನಿನ್ನನ್ನು ಆಶ್ರಯಿಸಿ ಜೀವಿಸಲು ಬಂದಿದ್ದೇನೆ. ಏಕೆಂದರೆ ಈ ಲೋಕದಲ್ಲಿ ನೀನೇ ದೊಡ್ಡ ಆಶ್ರಯದಾತನಾಗಿದ್ದೀಯೆ. ನರೇಂದ್ರನೇ, ನಾನು ನಾಲ್ಕನೆಯ ವರ್ಣದವನಾದ ಸೂದನಾಗಿದ್ದೇನೆ. ಗುರುವಿನ ಉಪದೇಶದಂತೆ (ಧರ್ಮರಾಜನ ಆಜ್ಞೆಯಂತೆ) ಪರಿಚಾರ ಕರ್ಮವನ್ನು ಮಾಡುವವನು.

ಜಾನಾಮಿ ಸೂಪಾಂಶ್ಚ ರಸಾಂಶ್ಚ ಸಂಸ್ಕೃತಾನ್
ಮಾಂಸಾನ್ಯಪೂಪಾಂಶ್ಚ ಪಚಾಮಿ ಶೋಭನಾನ್ ।
ರಾಗಪ್ರಕಾರಾಂಶ್ಚ ಬಹೂನ್ ಫಲಾಶ್ರಯಾನ್
ಮಹಾನಸೇ ಮೇ ನ ಸಮೋಽಸ್ತಿ ಸೂಪಕೃತ್ ॥೧೪॥

ನಾನು ಒಳ್ಳೆಯ ಸೂಪಗಳನ್ನು, ಸುಸಂಸ್ಕೃತವಾದ ರಸಗಳನ್ನು ಮಾಡಲು ತಿಳಿದಿದ್ದೇನೆ. ಮಾಂಸವನ್ನೂ ಮತ್ತು ಒಳ್ಳೆಯ ಅಪೂಪಗಳನ್ನೂ ಸಿದ್ಧಪಡಿಸುತ್ತೇನೆ. ಫಲರಸಗಳಿಂದ ಅನೇಕ ವಿಧವಾದ ಪೇಯಗಳನ್ನು ತಯಾರಿಸುತ್ತೇನೆ. ಅಡುಗೆ ಮನೆಯಲ್ಲಿ ನನ್ನಂತೆ ಸೂಪವನ್ನು ಮಾಡುವವರು ಯಾರೂ ಇಲ್ಲ.

ತಮಬ್ರವೀನ್ಮತ್ಸ್ಯಪತಿಃ ಪ್ರಹೃಷ್ಟವತ್
ಪ್ರಿಯಂ ಪ್ರಗಲ್ಭಂ ಮಧುರಂ ವಿನೀತವತ್ ॥೧೫॥

ಅವನನ್ನು ಕುರಿತು ಮತ್ಸ್ಯಪತಿಯಾದ ವಿರಾಟನು ಸಂತೋಷದಿಂದ ಕೂಡಿ ವಿನಯದಿಂದ ಪ್ರಿಯವೂ, ಉದಾರವೂ ಆದ ಮಧುರವಾದ ಮಾತನ್ನು ಆಡಿದನು.

ನ ಶೂದ್ರತಾಂ ಕಾಂಚನ ಲಕ್ಷಯಾಮಿ ತೇ
ಕುಬೇರಚಂದ್ರೇಂದ್ರದಿವಾಕರಪ್ರಭ ॥೧೬॥

ಎಲೈ ಕುಬೇರನಿಗೆ, ಚಂದ್ರನಿಗೆ, ಇಂದ್ರನಿಗೆ, ಸೂರ್ಯನಿಗೆ ಸಮಾನವಾದ ಪ್ರಭೆಯುಳ್ಳವನೇ, ನಿನ್ನಲ್ಲಿ ನಾನು ಯಾವ ಶೂದ್ರಲಕ್ಷಣಗಳನ್ನೂ ಕಾಣುತ್ತಿಲ್ಲ.

ಹುತಾಶನಾಶೀವಿಷತುಲ್ಯತೇಜಸೋ
ನ ಕರ್ಮ ತೇ ಯೋಗ್ಯಮಿದಂ ಮಹಾನಸೇ ।
ನ ಸೂಪಕಾರೀ ಭವಿತುಂ ತ್ವಮರ್ಹಸಿ
ಸುಪರ್ಣಗಂಧರ್ವಮಹೋರಗೋಪಮ ॥೧೭॥

ನಿನ್ನ ತೇಜಸ್ಸು ಅಗ್ನಿಗೆ ಮತ್ತು ಆಶೀವಿಷಸರ್ಪಕ್ಕೆ ಸಮಾನವಾಗಿದೆ. ಅಡುಗೆ ಮನೆಯ ಕೆಲಸವು ನಿನಗೆ ಯೋಗ್ಯವಾದುದಲ್ಲ. ಗರುಡ, ಗಂಧರ್ವ, ಮಹೋರಗಗಳನ್ನು ಹೋಲುವವನೇ, ನೀನು ಸೂದನಾಗಿ ಸೂಪವನ್ನು ಮಾಡಲು ಅರ್ಹನಲ್ಲ.

ಅನೀಕಕರ್ಣಾಗ್ರಧರೋ ಧ್ವಜೇ ರಥೀ
ಭವಾರ್ಯ ಮೇ ವಾರಣವಾಹಿನೀಪತಿಃ ।
ನ ನೀಚಕರ್ಮಾ ಭವಿತುಂ ತ್ವಮರ್ಹಸಿ
ಪ್ರಶಾಸಿತುಂ ಭೂಮಿಮಿಮಾಂ ತ್ವಮರ್ಹಸಿ ॥೧೮॥

ಎಲೈ ಪೂಜ್ಯನೇ, ನೀನು ಧ್ವಜರಥಗಳನ್ನು ಹೊಂದಿ ನನ್ನ ಸೇನಾನಾಯಕನಾಗು ಅಥವಾ ನನ್ನ ಗಜಯೂಥಕ್ಕೆ ಅಧಿಪತಿಯಾಗು. ನೀನು ನೀಚಕರ್ಮವನ್ನು ಮಾಡಬಾರದು. ಈ ಭೂಮಿಯನ್ನು ಆಳಲು ನೀನು ಯೋಗ್ಯನಾಗಿದ್ದೀಯೆ.

ವೈಶಂಪಾಯನಃ/ಭೀಮಃ

ಚತುರ್ಥವರ್ಣೋ೯ಽಸ್ಮ್ಯಹಮಿತ್ಯುವಾಚ ತಂ
ನಾನ್ಯಂ ವೃಣೇ ತ್ವಾಮಹಮೀದೃಶಂ ಪದಮ್ ।
ಜಾತ್ಯಾ ಹಿ ಶೂದ್ರೋ ವಲಲೋ ಹಿ ನಾಮ್ನಾ
ಜಿಜೀವಿಷುಸ್ತ್ವದ್ವಿಷಯಂ ಸಮಾಗತಃ ॥೧೯॥

ವೈಶಂಪಾಯನ/ ಭೀಮ– ಆಗ ಭೀಮಸೇನನು, ನಾನು ನಾಲ್ಕನೆಯ ವರ್ಣವಾದ ಶೂದ್ರವರ್ಣಕ್ಕೆ ಸೇರಿದವನು. ನೀನು ಹೇಳಿದಂತಹ ಪದವಿಗಳನ್ನು ನಾನು ಬಯಸುವುದಿಲ್ಲ. ನಾನು ಶೂದ್ರಜಾತಿಯವನು. ವಲಲ ಎಂದು ಹೆಸರು. ನಿನ್ನನ್ನು ಆಶ್ರಯಿಸಿ ಜೀವಿಸಲು ನಿನ್ನ ರಾಜ್ಯಕ್ಕೆ ಬಂದಿದ್ದೇನೆ ಎಂದು ಹೇಳಿದನು.

ರಾಜ್ಞಾ ನಿಯುಕ್ತೋಽಸ್ಮಿ ಮಹಾನಸೇ ಪುರಾ
ಬಭೂವ ಸರ್ವಪ್ರಭುರನ್ನಪಾನದಃ ।
ಅಥಾಪಿ ಮಾಮುತ್ಸ್ಯಜಸೇ ಮಹೀಪತೇ
ವ್ರಜಾಮ್ಯಹಂ ಯಾವದಿತೋ ಯಥಾಗತಮ್ ॥೨೦॥

ನಾನು ಹಿಂದೆ ರಾಜನಿಂದ (ಧರ್ಮರಾಜನಿಂದ) ಅಡಿಗೆ ಮನೆಯಲ್ಲಿ ನಿಯೋಜಿತನಾಗಿ ಅನ್ನಪಾನಗಳನ್ನು ಕೊಡುತ್ತಾ ಎಲ್ಲರಿಗೂ ಪ್ರಭುವಾಗಿದ್ದೆನು. ಎಲೈ ರಾಜನೇ, ಹಾಗಾದರೂ ನನ್ನನ್ನು ನೀನು ಪರಿತ್ಯಾಗ ಮಾಡುವುದಾದರೆ ನಾನು ಬಂದಂತೆಯೇ ಇಲ್ಲಿಂದ ಹೊರಟು ಹೋಗುತ್ತೇನೆ.

ತ್ವಮನ್ನಸಂಸ್ಕಾರವಿಧೌ ಪ್ರಶಾಧಿ ಮಾಂ
ಭವಾಮಿ ತೇऽಹಂ ನರದೇವ ಸೂಪಕೃತ್ ।
ಬಲೇನ ತುಲ್ಯಶ್ಚ ನ ವಿದ್ಯತೇ ಮಯಾ
ನಿಯುದ್ಧಶೀಲೋऽಸ್ಮಿ ಸದಾ ಹಿ ಪಾರ್ಥಿವ ॥೨೧॥

ಎಲೈ ರಾಜನೇ, ನನಗೆ ನಿನ್ನ ಅನ್ನಸಂಸ್ಕಾರದ ವಿಷಯದಲ್ಲಿ ಆಜ್ಞೆಯನ್ನು ಮಾಡು. ನಾನು ನಿನ್ನ ಸೂಪಕಾರಿಯಾಗುತ್ತೇನೆ. ನನಗೆ ಬಲದಲ್ಲಿ ಸಮಾನರಾದವರು ಯಾರೂ ಇಲ್ಲ. ಎಲೈ ರಾಜನೇ, ಕುಸ್ತಿಯು ನನಗೆ ಬಹಳ ಪ್ರಿಯವಾದುದು (ಅದು ನನ್ನ ಹವ್ಯಾಸ).

ಗಜಾಂಶ್ಚ ಸಿಂಹಾಂಶ್ಚ ಸಮೇಯಿವಾನಹಂ
ಸದಾ ಕರಿಷ್ಯಾಮಿ ತವಾನಘ ಪ್ರಿಯಮ್ ।
ನ ನೀಚಕರ್ಮಾ ತವ ಮಾದೃಶಃ ಪ್ರಭೋ
ಬಲಸ್ಯ ಮತ್ತಃ ಪ್ರಬಲೋ ಭವೇದಿತಿ ॥೨೨॥

ಎಲೈ ಅನಘನೇ, ನಾನು ಆನೆಗಳ ಮತ್ತು ಸಿಂಹಗಳ ಜೊತೆಯಲ್ಲಿ ಸೆಣೆಸಿ ನಿನಗೆ ಯಾವಾಗಲೂ ಪ್ರಿಯವನ್ನು ಮಾಡುವೆನು. ನಾನು ನೀಚಕಾರ್ಯವನ್ನು ಮಾಡುವುದಿಲ್ಲ. ಪ್ರಭುವೇ, ಬಲದಲ್ಲಿ ನನಗಿಂತ ಅಧಿಕರಾದವರು ಇನ್ನೊಬ್ಬರು ಇರಬಾರದೆಂದು ನಾನು ಹೀಗೆ ಮಾಡುತ್ತೇನೆ.

ಸ್ವಕರ್ಮತುಷ್ಟಾಶ್ಚ ವಯಂ ನರಾಧಿಪ
ಪ್ರಶಾಧಿ ಮಾಂ ಸೂಪಪದೇ ಯದೀಚ್ಛಸಿ ।
ಯೇ ಸಂತಿ ಮಲ್ಲಾ ಬಲವೀರ್ಯಸಮ್ಮತಾಃ
ತಾನೇವ ಯೋತ್ಸ್ಯಾಮಿ ತವಾಭಿಹರ್ಷಯನ್ ॥೨೩॥

ತಮೇವಮುಕ್ತೇ ವಚನೇ ನರಾಧಿಪಃ
ಪ್ರತ್ಯಬ್ರವೀನ್ ಮತ್ಸ್ಯಪತಿಃ ಪ್ರಹೃಷ್ಟವತ್ ॥೨೪॥

ಎಲೈ ರಾಜನೇ, ನನ್ನ ಕಾರ್ಯದಿಂದ ನಾನು ತೃಪ್ತಿಯಿಂದಿರುತ್ತೇನೆ. ನಿನಗೆ ಇಷ್ಟವಾಗುವುದಾದರೆ ನನ್ನನ್ನು ಸೂದನಾಗಿ ನೇಮಿಸು. ನಿನ್ನ ರಾಜ್ಯದಲ್ಲಿ ಬಲವೀರ್ಯ

ಸಮ್ಮತರಾದ ಯಾವ ಮಲ್ಲರು ಇದ್ದಾರೆಯೋ ನಾನು ನಿನಗೆ ಸಂತೋಷವನ್ನು ಉಂಟುಮಾಡುತ್ತಾ ಅವರ ಜೊತೆಯಲ್ಲಿಯೇ ಯುದ್ಧವನ್ನು (ಕುಸ್ತಿಯನ್ನು) ಮಾಡುವೆನು. ಅವನು ಹೀಗೆ ಹೇಳುತ್ತಿರಲು ಮತ್ಸ್ಯಪತಿಯಾದ ವಿರಾಟರಾಜನು ಸಂತೋಷದಿಂದ ಹೀಗೆ ಮಾತನಾಡಿದನು.

ಏವಂ ನ ಮನ್ಯೇ ತವ ಕರ್ಮ ತತ್ಸಮಂ
ಸಮುದ್ರನೇಮಿಂ ಪೃಥಿವೀಂ ತ್ವಮರ್ಹಸಿ ।
ತ್ರಿಲೋಕಪಾಲೋ ಹಿ ಯದಾ ವಿರೋಚತೇ
ತಥಾऽದ್ಯ ಮೇ ವಿಷ್ಣುರಿವಾಭಿರೋಚಸೇ ॥೨೫॥

ಇಷ್ಟು ಹೇಳಿದರೂ ನಿನಗೆ ಸೂದಕರ್ಮವು ಯೋಗ್ಯವಾದುದಲ್ಲ ಎಂದು ನನ್ನ ಅಭಿಪ್ರಾಯ. ನೀನು ಸಮುದ್ರವನ್ನೇ ಪರಿಧಿಯಾಗಿ ಉಳ್ಳ ಭೂಮಿಯನ್ನು ಆಳಲು ಅರ್ಹನಾದವನು. ನೀನು ಮೂರುಲೋಕಕ್ಕೆ ಪಾಲಕನಾಗಿ ಕಂಗೊಳಿಸುವುದಾದರೆ ಆಗ ನನಗೆ ಅದು ವಿಷ್ಣುವಿನಂತೆ ಪ್ರಿಯವಾಗುತ್ತದೆ.

ಯಥಾ ತು ಕಾಮಸ್ತವ ತತ್ ತಥಾ ಕೃತಂ
ಮಹಾನಸೇ ಮೇ ಭವ ವೈ ಪುರಸ್ಕೃತಃ ।
ನರಾಶ್ಚ ಮೇ ತತ್ರ ಮಯಾ ಸದಾऽರ್ಚಿತಾ
ಭವಸ್ವ ತೇಷಾಮಧಿಪೋ ಮಯಾ ಕೃತಃ ॥೨೬॥

ನಿನ್ನ ಆಸೆಯು ಹೇಗಿದೆಯೋ ಅದನ್ನು ಹಾಗೆಯೇ ನೆರವೇರಿಸುತ್ತೇನೆ. ನನ್ನ ಮಹಾನಸದಲ್ಲಿ ನೀನು ಎಲ್ಲರಿಂದಲೂ ಪುರಸ್ಕಾರವನ್ನು ಹೊಂದಿ ಇರು. ಅಲ್ಲಿರುವ ಜನರು ನನ್ನಿಂದ ಯಾವಾಗಲೂ ಸತ್ಕಾರವನ್ನು ಹೊಂದುವರು. ನನ್ನ ಅಪ್ಪಣೆಯಂತೆ ನೀನು ಅವರಿಗೆ ಅಧಿಪತಿಯಾಗಿ ಇರು.

ವೈಶಂಪಾಯನಃ

ತಥಾ ಸ ಭೀಮೋ ವಿಹಿತೋ ಮಹಾನಸೇ
ವಿರಾಟರಾಜಸ್ಯ ಬಭೂವ ವೈ ಪ್ರಿಯಃ ।
ಉವಾಸ ರಾಜನ್ ನ ಚ ತಂ ಪೃಥಗ್ ಜನೋ
ಬುಬೋಧ ತಸ್ಯಾನುಚರಶ್ಚ ಕಶ್ಚನ ॥೨೭॥

ವೈಶಂಪಾಯನ– ಹೀಗೆ ಭೀಮನು ಮಹಾನಸದಲ್ಲಿ ನಿಯುಕ್ತನಾಗಿ ವಿರಾಟ ರಾಜನಿಗೆ ಪ್ರಿಯನಾದವನಾದನು. ರಾಜನೇ, ಅವನು ವಿರಾಟರಾಜನ ಬಳಿಯಲ್ಲಿ ವಾಸಮಾಡಿದನು. ಸಾಮಾನ್ಯಜನರಾಗಲೀ ಅಥವಾ ವಿರಾಟನ ಅನುಚರರಾಗಲೀ ಯಾರೂ ಅವನನ್ನು ಭೀಮಸೇನನೆಂದು ತಿಳಿಯಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ವಿರಾಟಪರ್ವಣಿ ದಶಮೋऽಧ್ಯಾಯಃ ॥

॥ ವೈರಾಟಪರ್ವಣಿ ಭೀಮಸೇನಪ್ರವೇಶೋ ನಾಮ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ಷಂಡವೇಷದಿಂದ ಅರ್ಜುನನ ಸಭಾಪ್ರವೇಶ

ವೈಶಂಪಾಯನಃ

ಅಥಾಪರೋऽದೃಶ್ಯತ ವರ್ಣವಾನ್ ಯುವಾ
ಸ್ತ್ರೀವೇಷಧಾರೀ ಸಮಲಂಕೃತೋ ಭೃಶಮ್ ।
ಪ್ರವಾಲಚಿತ್ರೇ ಪ್ರವಿಮುಚ್ಯ ಕುಂಡಲೇ
ಉಭೇ ಚ ಕಂಬೂ ಪರಿವರ್ತಕೇ ತಥಾ ॥೧॥

ವೈಶಂಪಾಯನ– ಅನಂತರ ಇನ್ನೊಬ್ಬ ಯುವಕನು ಒಳ್ಳೆಯ ಬಣ್ಣದಿಂದ ಕೂಡಿದವನಾಗಿ, ಸ್ತ್ರೀವೇಷಧಾರಿಯಾಗಿ, ಚೆನ್ನಾಗಿ ಅಲಂಕಾರವನ್ನು ಮಾಡಿಕೊಂಡು ಹವಳಗಳಿಂದ ಕೂಡಿದ ವಿಚಿತ್ರವಾದ ಕರ್ಣಕುಂಡಲಗಳನ್ನು ಧರಿಸಿ ಶಂಖದಿಂದ ಮಾಡಿದ ಗುಂಡಗಿರುವ ಬಿಚ್ಚೋಲೆಗಳನ್ನು ಧರಿಸಿ ಕಂಡುಬಂದನು.

ಕೃಷ್ಣೇ ಚ ರಕ್ತೇ ಚ ನಿಬಂಧ ವಾಸಸೀ
ಶರೀರವಾನ್ ಶಕ್ರಬೃಹಸ್ಪತಿಪ್ರಭಃ ।
ಬಹೂಂಶ್ಚ ದೀರ್ಘಾಂಶ್ಚ ವಿಕೀರ್ಯ ಮೂರ್ಧಜಾನ್
ಮಹಾಭುಜೋ ಮತ್ತಗಜೇಂದ್ರವಿಕ್ರಮಃ ॥೨॥

ಕಪ್ಪು ಮತ್ತು ಕೆಂಪು ಬಣ್ಣದ ವಸ್ತ್ರಗಳನ್ನು ಉಟ್ಟು ಶ್ರೇಷ್ಠವಾದ ಶರೀರವನ್ನು ಉಳ್ಳವನಾಗಿ, ಶುಕ್ರ ಬೃಹಸ್ಪತಿಗಳಿಗೆ ಸಮಾನವಾದ ಕಾಂತಿಯನ್ನು ಹೊಂದಿ ತನ್ನ ದೀರ್ಘವಾದ ವಿಪುಲವಾದ ಕೇಶಗಳನ್ನು ಕೆದರಿಕೊಂಡು ಮಹಾಭುಜವುಳ್ಳವನಾಗಿ ಮತ್ತ ಗಜೇಂದ್ರನ ವಿಕ್ರಮವನ್ನು ಹೊಂದಿ ಸಭೆಯನ್ನು ಪ್ರವೇಶಿಸಿದನು.

ಕ್ಲೈಬ್ಯೇನ ವೇಷೇಣ ನ ಭಾತಿ ಭಾತಿ ಚ
ಗ್ರಹಾಭಿಪನ್ನೋ ನಭಸೀವ ಚಂದ್ರಮಾಃ ।
ಗತೇನ ಚೋರ್ವೀಂ ಪರಿಕಂಪಯಂಸ್ತದಾ
ವಿರಾಟಮಾಸಾದ್ಯ ಸಭಾಸಮೀಪತಃ ॥೩॥

ಅವನು ಆಕಾಶದಲ್ಲಿ ಗ್ರಹಗಳಿಂದ ಪೀಡೆಗೆ ಒಳಗಾದ ಚಂದ್ರನಂತೆ ತನ್ನ ಷಂಡವೇಷದಿಂದ ಶೋಭಿಸುವುದಿಲ್ಲ. ಆದರೂ ದೇಹದ ನಿಲುವಿನಿಂದ ಪ್ರಕಾಶಿಸುತ್ತಾನೆ. ಅವನು ತನ್ನ ನಡಿಗೆಯಿಂದ ಭೂಮಿಯನ್ನು ನಡುಗಿಸುತ್ತಾ ಸಭೆಯ ಸಮೀಪದಿಂದ ವಿರಾಟರಾಜನ ಸಮೀಪಕ್ಕೆ ಬಂದನು.

ತಂ ಪ್ರೇಕ್ಷ್ಯ ರಾಜೋಪಗತಂ ಸಭಾತಳೇ
ತತಃ ಪ್ರತಿಚ್ಛನ್ನಮಮಿತ್ರಮರ್ದನಮ್ ।
ವಿರಾಜಮಾನಂ ಸುರರಾಜವರ್ಚಸಂ
ಸುತಂ ಸುರೇಂದ್ರಸ್ಯ ಗಜೇಂದ್ರವಿಕ್ರಮಮ್ ॥೪॥

ಸರ್ವಾನಪೃಚ್ಛಚ್ಚ ಸಮೀಪಚಾರಿಣಃ
ಕುತೋऽಯಮಾಯಾತಿ ನ ಮೇ ಪುರಾ ಶ್ರುತಃ ।
ನ ಚೈನಮೂಚುರ್ವಿದಿತಂ ನರಾಸ್ತದಾ
ಸವಿಸ್ಮಯಂ ವಾಕ್ಯಮಿದಂ ನೃಪೋऽಬ್ರವೀತ್ ॥೫॥

ರಾಜನು ಮಾರುವೇಷದಿಂದ ಬಂದಿದ್ದ ಶತ್ರುಮರ್ದನನೂ, ಸುರರಾಜನಂತೆ ಕಂಗೊಳಿಸುವವನೂ, ಇಂದ್ರನ ಪುತ್ರನಂತೆ ವಿರಾಜಮಾನನಾದವನೂ, ಗಜೇಂದ್ರ ವಿಕ್ರಮನೂ ಆದ ಅವನು ಸಭೆಯ ಸಮೀಪಕ್ಕೆ ಬಂದುದನ್ನು ನೋಡಿ ಸಮೀಪದಲ್ಲಿದ್ದ ಎಲ್ಲರನ್ನೂ ಕುರಿತು ಇವನು ಎಲ್ಲಿಂದ ಬರುತ್ತಿದ್ದಾನೆ? ಇವನನ್ನು ನಾನು ಹಿಂದೆ ಎಂದೂ

ಕೇಳಲಿಲ್ಲ(ಕಾಣಲಿಲ್ಲ) ಎಂದು ಹೇಳಿದನು. ಆ ಜನರು ನಮಗೆ ಈ ವ್ಯಕ್ತಿಯು ತಿಳಿದಿಲ್ಲ ಎಂದು ಹೇಳಿದರು. ಆಗ ರಾಜನು ವಿಸ್ಮಯದಿಂದ ಹೀಗೆ ಮಾತನಾಡಿದನು.

ಗಜೇಂದ್ರಲೀಲೋ ಮೃಗರಾಜಗಾಮೀ
ವೃಷೇಕ್ಷಣೋ ದೇವಸುತೋಗ್ರತೇಜಾಃ ।
ಪೀನಾಂಸಬಾಹುಃ ಕನಕಾವದಾತಃ
ಕೋಽಯಂ ನರೋ ಮೇ ನಗರಂ ಪ್ರವಿಷ್ಟಃ ॥೬॥

ಗಜೇಂದ್ರ ಲೀಲೆಯುಳ್ಳವನೂ, ಸಿಂಹದಂತೆ ನಡೆಯುವವನೂ, ವೃಷಭದಂತೆ ಕಣ್ಣುಳ್ಳವನೂ, ದೇವಸುತರಂತೆ ಉಗ್ರವಾದ ತೇಜಸ್ಸುಳ್ಳವನೂ, ಪುಷ್ಟವಾದ ವಕ್ಷಸ್ಥಲ ಮತ್ತು ಬಾಹುಗಳನ್ನು ಉಳ್ಳವನೂ, ಸುವರ್ಣದಂತೆ ಶುಭ್ರನಾದವನೂ ಆಗಿ ನನ್ನ ನಗರವನ್ನು ಪ್ರವೇಶಿಸಿದ ಈ ಮನುಷ್ಯನು ಯಾರು?

ಕಿಮೇಷ ದೇವೇಂದ್ರಸುತಃ ಕಿಮೇಷ
ಬ್ರಹ್ಮಾತ್ಮಜೋ ವಾ ಕಿಮಯಂ ಸ್ವಯಂಭೂಃ ।
ಉಮಾಸುತೋ ವೈಶ್ರವಣಾತ್ಮಜೋ ವಾ
ಪ್ರೇಕ್ಷ್ಯೈನಮಾಸೀದಿತಿ ಮೇ ಪ್ರತರ್ಕಃ ॥೭॥

ಇವನೇನು ದೇವೇಂದ್ರನ ಪುತ್ರನೋ? ಅಥವಾ ಬ್ರಹ್ಮದೇವರ ಮಗನೋ? ಅಥವಾ ಸ್ವಯಂ ಬ್ರಹ್ಮದೇವನೋ? ಅಥವಾ ಉಮಾಸುತನಾದ ಷಣ್ಮುಖನೋ? ಅಥವಾ ಕುಬೇರನ ಮಗನೋ? ಎಂದು ಇವನನ್ನು ನೋಡಿದ ನನಗೆ ತರ್ಕ ಉಂಟಾಗುತ್ತಿದೆ.

ವೈಶಂಪಾಯನಃ

ಸಭಾಮತಿಕ್ರಮ್ಯ ಸ ವಾಸವೋಪಮೋ
ನಿರೀಕ್ಷ್ಯಮಾಣೋ ಬಹುಭಿಃ ಸಭಾಗತೈಃ ।
ಸ ತತ್ರ ರಾಜಾನಮಮಿತ್ರಹಾಽಬ್ರವೀದ್
ಬೃಹನ್ನಳಾಽಹಂ ನರದೇವ ನರ್ತಕೀ ॥೮॥

ವೈಶಂಪಾಯನ– ಅನೇಕ ಸಭಾಸದರಿಂದ ನಿರೀಕ್ಷಿಸಲ್ಪಟ್ಟವನಾಗಿ ಇಂದ್ರನಿಗೆ ಸದೃಶನಾದ ಅರ್ಜುನನು ಸಭೆಯನ್ನು ದಾಟಿ ಶತ್ರುಸೂದನನಾದ ಅವನು ರಾಜನನ್ನು ಕುರಿತು, 'ರಾಜನೇ, ನಾನು ಬೃಹನ್ನಳೆ ಎಂಬ ನರ್ತಕಿ ಎಂದು ಹೇಳಿದನು.

ವೇಣೀಂ ಪ್ರಕುರ್ಯಾಂ ರುಚಿರೇ ಚ ಕುಂಡಲೇ
ತಥಾ ಸ್ರಜಃ ಪ್ರಾವರಣಾನಿ ಸಂಹರೇ ।
ಸ್ನಾನಂ ಚರೇಯಂ ವಿಮೃಜೇ ಚ ದರ್ಪಣಂ
ವಿಶೇಷಕೇಷ್ವಪಿ ಕೌಶಲಂ ಮಮ ॥೯॥

ನಾನು ಹೆರಳುಗಳನ್ನು ಹಾಕುವೆನು. ಒಳ್ಳೆಯ ಕರ್ಣಕುಂಡಲಗಳನ್ನು ಮಾಡಬಲ್ಲೆ. ಒಳ್ಳೆಯ ಮಾಲೆಗಳನ್ನು ಕಟ್ಟಬಲ್ಲೆ. ಒಳ್ಳೆಯ ಪರದೆಗಳನ್ನೂ ನಿರ್ವಹಿಸುತ್ತೇನೆ. ಸ್ನಾನವನ್ನು ಮಾಡಿಸುತ್ತೇನೆ. ಕನ್ನಡಿಗಳನ್ನು ಒರೆಸುತ್ತೇನೆ. ತಿಲಕಗಳನ್ನು ಇಡುವುದರಲ್ಲಿ ನನಗೆ ಕೌಶಲವಿದೆ.

ಕ್ಲೀಬೇಷು ಬಾಲೇಷು ಜನೇಷು ನರ್ತನೇ
ಶಿಕ್ಷಾಪ್ರದಾನೇಷು ಚ ಯೋಗ್ಯತಾ ಮಮ ।
ಕರೋಮಿ ವೇಣೀಷು ಚ ಪುಷ್ಪಪೂರಣಂ
ನ ಮೇ ಸ್ತ್ರಿಯಃ ಕರ್ಮಣಿ ಕೌಶಲಾಧಿಕಾಃ ॥೧೦॥

ನಪುಂಸಕರಿಗೆ, ಬಾಲಕರಿಗೆ ಮತ್ತು ಉಳಿದ ಜನರಿಗೆ ನರ್ತನವನ್ನು ಹೇಳಿಕೊಡಲು ನನಗೆ ಯೋಗ್ಯತೆ ಇದೆ. ನಾನು ಹೂವುಗಳಿಂದ ತುಂಬಿದ ಹೆರಳುಗಳನ್ನು ಮಾಡುತ್ತೇನೆ. ಈ ಕರ್ಮಗಳಲ್ಲಿ ಬೇಕಾದ ಕೌಶಲದಲ್ಲಿ ಸ್ತ್ರೀಯರು ನನಗಿಂತಲೂ ಅಧಿಕರಲ್ಲ.

ವೈಶಂಪಾಯನಃ

ತಮಬ್ರವೀತ್ ಪ್ರಾಂಶುಮುದೀಕ್ಷ್ಯ ವಿಸ್ಮಿತೋ
ವಿರಾಟರಾಜೋಪಸೃತಂ ಮಹಾಯಶಾಃ ॥೧೧॥

ವೈಶಂಪಾಯನ– ಎತ್ತರವಾಗಿದ್ದ ಅವನು ಸಮೀಪಿಸುವುದನ್ನು ನೋಡಿ ಮಹಾಕೀರ್ತಿವಂತನಾದ ವಿರಾಟರಾಜನು ಆಶ್ಚರ್ಯಗೊಂಡು ಅವನನ್ನು ಕುರಿತು ಹೇಳಿದನು.

ನಾರ್ಹಸ್ತು ವೇಷೋಽಯಮನೂರ್ಜಿತಸ್ತೇ
ನಾಪುಂಸ್ತ್ವಮರ್ಹೋ ನರದೇವಸಿಂಹ ।
ತವೈಷ ವೇಷಃ ಶುಭವೇಷಭೂಷಣೈಃ
ವಿಭೂಷಿತೋ ಭೂತಪತೇರಿವ ಪ್ರಭೋ ॥೧೨॥

ಈ ವೇಷವು ನಿನಗೆ ಯೋಗ್ಯವಾದುದಲ್ಲ. ಇದು ಪ್ರಶಂಸನೀಯವೂ ಅಲ್ಲ. ನರದೇವಸಿಂಹನೇ, ನೀನು ನಪುಂಸಕನಾಗಿರಲು ಅರ್ಹನಲ್ಲ. ಈ ನಿನ್ನ ವೇಷವು ಶುಭವೇಷಭೂಷಣಗಳಿಂದ ಅಲಂಕರಿಸಲ್ಪಟ್ಟರೆ ರುದ್ರದೇವನಂತೆ ತೋರುತ್ತದೆ.

ವಿಭಾತಿ ಭಾನೋರಿವ ರಶ್ಮಿಮಾಲಿನೋ
ಘನಾವರುದ್ಧೇ ಗಗನೇ ಘನೈರಿವ ।
ಧನುರ್ಹಿ ಮನ್ಯೇ ತವ ಶೋಭಯೇದ್ ಭುಜೌ
ತಥಾಹಿ ಪೀನಾವತಿಮಾತ್ರಮಾಯತೌ ॥೧೩॥

ನಿನ್ನ ವೇಷವು ಆಕಾಶದಲ್ಲಿ ಮೋಡಗಳಿಂದ ಮುಚ್ಚಲ್ಪಟ್ಟ ರಶ್ಮಿಮಾಲೆಯಾದ ಸೂರ್ಯನಂತೆ ತೋರುತ್ತದೆ. ನಿನ್ನ ಭುಜಗಳಿಗೆ ಧನುಸ್ಸು ಒಪ್ಪುವುದೆಂದು ತೋರುತ್ತದೆ. ನಿನ್ನ ಭುಜಗಳು ಹಾಗೆಯೇ ಪುಷ್ಟವೂ ವಿಸ್ತಾರವಾಗಿಯೂ ಇವೆ.

ಪ್ರಗೃಹ್ಯ ಚಾಪಂ ಪ್ರತಿರೂಪಮಾತ್ಮನೋ
ರಕ್ಷಸ್ವ ದೇಶಂ ಪುರಮದ್ಯ ಸಂಶ್ರಿತಃ ।
ಪುತ್ರೇಣ ತುಲ್ಯಂ ಭವ ಮೇ ಬೃಹನ್ನಳೇ
ವೃದ್ಧೋಽಸ್ಮಿ ವಿತ್ತಂ ಪ್ರತಿಪಾದಯಾಮಿ ತೇ ॥೧೪॥

ನೀನು ನನ್ನ ಪಟ್ಟಣದಲ್ಲಿ ನೆಲೆಸಿ ನಿನಗೆ ಯೋಗ್ಯವಾದ ಬಿಲ್ಲನ್ನು ಹಿಡಿದು ನನ್ನ ದೇಶವನ್ನು ರಕ್ಷಣೆ ಮಾಡು. ಬೃಹನ್ನಳೆಯೇ, ನೀನು ನನ್ನ ಪುತ್ರನಿಗೆ ಸಮಾನವಾಗಿರು. ನನಗೆ ವಯಸ್ಸಾಗಿದೆ. ನಿನಗೆ ಬೇಕಾದ ಧನವನ್ನು ಕೊಡುತ್ತೇನೆ.

ತ್ವಂ ರಕ್ಷ ಮೇ ಸರ್ವಮಿದಂ ಪುರಂ ಪ್ರಭೋ
ನ ಷಂಡತಾಂ ಕಾಂಚನ ಲಕ್ಷಯಾಮಿ ತೇ ।

ಪ್ರಶಾಧಿ ಮತ್ಸ್ಯಾಂಸ್ತರಸಾ ವಿವರ್ಧಯನ್
ದದಾಮಿ ರಾಜ್ಯಂ ತವ ಸತ್ಯವಾಗಹಮ್ ॥೧೫॥

ಪ್ರಭುವೇ, ನನ್ನ ಈ ಎಲ್ಲಾ ಸಂಪತ್ತನ್ನೂ ರಕ್ಷಿಸು. ನಿನ್ನಲ್ಲಿ ನಪುಂಸಕನ ಯಾವ ಲಕ್ಷಣಗಳೂ ನನಗೆ ಕಾಣುತ್ತಿಲ್ಲ. ಮತ್ಸ್ಯದೇಶವನ್ನು ಶೀಘ್ರವಾಗಿ ಅಭಿವೃದ್ಧಿಪಡಿಸುತ್ತಾ ಆಳುವವನಾಗು. ನಾನು ನಿನಗೆ ನನ್ನ ರಾಜ್ಯವನ್ನೇ ಕೊಡುತ್ತೇನೆ. ನಾನು ಯಾವಾಗಲೂ ಸತ್ಯವನ್ನೇ ಮಾತನಾಡುವವನು.

ವೈಶಂಪಾಯನಃ

ತಸ್ಯಾಗ್ರತಃ ಸ್ವಾನಿ ಧನೂಂಷಿ ಪಾರ್ಥಿವೋ
ಬಹೂನಿ ದೀರ್ಘಾಣಿ ಚ ವರ್ಣವಂತಿ ಚ ।
ದದೌ ಸ ಸಜ್ಯಾನಿ ಬಲಾನ್ವಿತಾನಿ
ಜಿಜ್ಞಾಸಮಾನಃ ಕಿಮಯಂ ಕರಿಷ್ಯತಿ ॥೧೬॥

ವೈಶಂಪಾಯನ– ಆ ರಾಜನು ಇವನು ಏನು ಮಾಡುತ್ತಾನೆ ಎಂದು ಪರೀಕ್ಷಿಸಲು ಅವನ ಎದುರಿಗೆ ದೀರ್ಘವಾದ ಒಳ್ಳೆಯ ಬಣ್ಣದಿಂದ ಕೂಡಿದ ಹೆದೆ ಏರಿಸಿದ ಬಲಿಷ್ಠವಾದ ಅನೇಕ ಧನುಸ್ಸುಗಳನ್ನು ಇಟ್ಟನು.

ತತೋಽರ್ಜುನಃ ಕ್ಲೀಬತರಂ ವಚೋಽಬ್ರವೀತ್
ನ ಮೇ ಧನುರ್ಧಾರಿತಮೀದೃಶಂ ಪ್ರಭೋ ।
ನ ಚಾಪಿ ದೃಷ್ಟಂ ಧನುರೀದೃಶಂ ಕ್ವಚಿತ್
ನ ಮಾದೃಶಾಃ ಸಂತಿ ಧನುರ್ಧರಾ ಭುವಿ ॥೧೭॥

ಆಗ ಅರ್ಜುನನು ಹೇಡಿಯಂತೆ ಮಾತನಾಡಿದನು. ಪ್ರಭುವೇ, ನಾನು ಇಂತಹ ಧನುಸ್ಸನ್ನು ಎಂದೂ ಹಿಡಿದಿಲ್ಲ. ಅಥವಾ ನೋಡಿಯೂ ಇಲ್ಲ ಮತ್ತು ನನ್ನಂತಹ ನಪುಂಸಕರು ಭೂಮಿಯಲ್ಲಿ ಧನುರ್ಧಾರಿಗಳಾಗಿರುವುದಿಲ್ಲ.

ನೃತ್ಯಾಮಿ ಗಾಯಾಮಿ ಚ ವಾದಯಾಮ್ಯಹಂ
ಪ್ರನರ್ತನೇ ಕೌಶಲನೈಪುಣಂ ಮಮ ।

ತದುತ್ತರಾಯಾಃ ಪರಿದತ್ಸ್ವ ನರ್ತನೇ
ಭವಾಮಿ ದೇವ್ಯಾ ನರದೇವ ನರ್ತಕೀ ॥೧೮॥

ನೃತ್ಯವನ್ನು ಮಾಡುತ್ತೇನೆ. ಗಾಯನವನ್ನು ಮಾಡುತ್ತೇನೆ. ವಾದ್ಯಗಳನ್ನು ನುಡಿಸುತ್ತೇನೆ. ನೃತ್ಯದಲ್ಲಿ ನನಗೆ ಬಹಳ ಕೌಶಲವಿದೆ. ಆದ್ದರಿಂದ ನನ್ನನ್ನು ನರ್ತನವನ್ನು ಕಲಿಸಲು ಉತ್ತರೆಗೆ ಕೊಡುವವನಾಗು. ರಾಜನೇ, ನಾನು ಅವಳ ನರ್ತಕಿಯಾಗುತ್ತೇನೆ.

ವಿರಾಟಃ

ದದಾಮಿ ತೇ ತಂ ಹಿ ವರಂ ಬೃಹನ್ನಳೇ
ಸುತಾಂ ಹಿ ಮೇ ನರ್ತಯ ಯಾಶ್ಚ ತಾದೃಶೀಃ ॥೧೯॥

ಬೃಹನ್ನಳೆಯೇ, ನಿನಗೆ ಆ ವರವನ್ನು ಕೊಡುತ್ತೇನೆ. ನನ್ನ ಮಗಳಿಗೂ ಮತ್ತು ಅವಳಂತಹ ಬೇರೆ ಕನ್ಯೆಯರಿಗೂ ನರ್ತನವನ್ನು ಕಲಿಸು.

ವೈಶಂಪಾಯನಃ

ತತೋ ವಿರಾಟಃ ಸ್ವಯಮಾಹ್ವಯತ್ ಸುತಾಂ
ನರಾಧಿಪಸ್ತಾಂ ಚ ಸುಮಧ್ಯಸುಂದರೀಮ್ ।
ಉವಾಚ ಚೈನಾಂ ಮುದಿತೇನ ಚೇತಸಾ
ಬೃಹನ್ನಳಾ ನಾಮ ಸಖೀ ಭವತ್ವಿಯಮ್ ॥೨೦॥

ಸುಗಾತ್ರಿ ಸಂಪ್ರೀತಿನಿಬದ್ಧಸೌಹೃದಾ
ತವಾಂಗನೇ ಪ್ರಾಣಸಮಾ ಚ ನಿತ್ಯದಾ ॥೨೧॥

ವೈಶಂಪಾಯನ– ಅನಂತರ ರಾಜನಾದ ವಿರಾಟನು ತನುಮಧ್ಯಮಳಾದ ಸುಂದರಿಯಾದ ತನ್ನ ಮಗಳನ್ನು ತಾನೇ ಕರೆದು ಅವಳನ್ನು ಕುರಿತು ಸಂತೋಷ ತುಂಬಿದ ಮನಸ್ಸಿನಿಂದ ಈ ಬೃಹನ್ನಳೆಯು ನಿನ್ನ ಸ್ನೇಹಿತೆಯಾಗಲಿ. ಸುಂದರಿಯೇ, ಅವಳಲ್ಲಿ ಪ್ರೀತಿಯನ್ನೂ ವಿಶ್ವಾಸವನ್ನೂ ಮಾಡುವವಳಾಗು. ಅಂಗನೆಯೇ, ಅವಳು ಯಾವಾಗಲೂ ನಿನಗೆ ಪ್ರಾಣಸಮಳಾಗಿರುತ್ತಾಳೆ.

ಪ್ರಕಾಮಭಕ್ಷ್ಯಾಭರಣಾಂಬರಾ ಶುಭಾ
ಚರತ್ವಿಯಂ ಸರ್ವಜನೇಷ್ವವಾರಿತಾ ।
ನ ದುಷ್ಕುಲೀನಾ ತ್ವಿಯಾಮಕೃತಿರ್ಭವೇತ್
ನ ನೃತ್ತಭೇದೇ ಭವತೀದೃಶೋ ಜನಃ ॥೨೨॥

ಅವಳಿಗೆ ಬೇಕಾದ ಭಕ್ಷ್ಯಗಳನ್ನು, ಆಭರಣಗಳನ್ನು ಮತ್ತು ವಸ್ತ್ರಗಳನ್ನು ತೆಗೆದುಕೊಂಡು ಶುಭಳಾದ ಈ ಬೃಹನ್ನಳೆಯು ಎಲ್ಲ ಜನರಲ್ಲಿಯೂ ಯಾವ ತಡೆಯೂ ಇಲ್ಲದಂತೆ ಸಂಚರಿಸಲಿ. ಇಂತಹ ಆಕೃತಿಯನ್ನು ಹೊಂದಿದವರು ಎಂದೂ ಕೆಟ್ಟ ಕುಲದಿಂದ ಬಂದವರಾಗಿರುವುದಿಲ್ಲ. ನೃತ್ಯದ ವಿಷಯದಲ್ಲಿಯೂ ಇಂತಹ ವ್ಯಕ್ತಿಯು ಇರುವುದಿಲ್ಲ(ಇವಳೇ ಮಹಾನರ್ತಕಿ).

ತಥಾ ಸಮಾದಿಶ್ಯ ಸುತಾಂ ನರಾಧಿಪಃ
ಪ್ರವೇಶ್ಯತಾಂ ಸಾಧು ಗೃಹಂ ತವೇತಿ ಚ ।
ಸ ಶಿಕ್ಷಯಾಮಾಸ ಚ ಗೀತವಾದಿತಂ
ಸುತಾಂ ವಿರಾಟಸ್ಯ ಧನಂಜಯಃ ಪ್ರಭುಃ ॥೨೩॥

ರಾಜನು ತನ್ನ ಮಗಳಿಗೆ ಹಾಗೆ ಆದೇಶವನ್ನು ನೀಡಿ, ನಿನ್ನ ಮನೆಯಲ್ಲಿ ಅವಳಿಗೆ ಚೆನ್ನಾಗಿ ಪ್ರವೇಶವನ್ನು ಕೊಡು ಎಂದು ಹೇಳಿದನು. ಪ್ರಭುವಾದ ಧನಂಜಯನಾದರೂ ವಿರಾಟ ಪುತ್ರಿಗೆ ಗೀತ-ವಾದ್ಯಗಳಲ್ಲಿ ಶಿಕ್ಷಣವನ್ನು ನೀಡಿದನು.

ಸಖೀಶ್ಚ ತಸ್ಯಾಃ ಪರಿಚಾರಿಕಾಸ್ತಥಾ
ಪ್ರಿಯಶ್ಚ ತಸ್ಯಾಃ ಪ್ರಬಭೂವ ಪಾಂಡವಃ ॥೨೪॥

ಅವಳ ಸಖಿಯರಿಗೂ ಮತ್ತು ಪರಿಚಾರಿಕೆಯರಿಗೂ ಗೀತ-ವಾದ್ಯಗಳನ್ನು ಕಲಿಸಿ ಪಾಂಡವನಾದ ಅರ್ಜುನನು ಅವಳಿಗೆ ಪ್ರಿಯನಾದನು.

ತಥಾ ಸ ತತ್ರೈವ ಧನಂಜಯೋಽವಸತ್
ಪ್ರಿಯಾಣಿ ಕುರ್ವನ್ ಸಹ ತಾಭಿರಾತ್ಮವಾನ್ ।
ತಥಾ ಗತಂ ತತ್ರ ನ ಜಜ್ಞಿರೇ ಜನಾ
ಬಹಿಶ್ಚರಾ ವಾಽಪ್ಯಥವೇತರೇ ಜನಾಃ ॥೨೫॥

ಈ ರೀತಿಯಲ್ಲಿ ಧನಂಜಯನು ರಾಜಕುಮಾರಿಗೆ ಪ್ರಿಯವನ್ನು ಮಾಡುತ್ತಾ, ರಾಜಕುಮಾರಿ ಮತ್ತು ಅವರ ಸೇವಕಿಯರ ಜೊತೆಯಲ್ಲಿ ಧೈರ್ಯಶಾಲಿಯಾದ ಅವನು ವಾಸಮಾಡಿದನು. ಅಲ್ಲಿ ಅಂತಃಪುರ ಜನರಾಗಲೀ ಅಥವಾ ಹೊರಗಿನ ಜನರಾಗಲೀ ಯಾರೂ ಅವನ ನಿಜಸ್ವರೂಪವನ್ನು ತಿಳಿಯಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಏಕಾದಶೋಽಧ್ಯಾಯಃ ॥

ವೈರಾಟಪರ್ವಣಿ ಅರ್ಜುನಪ್ರವೇಶೋ ನಾಮ ಏಕಾದಶೋಽಧ್ಯಾಯಃ

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ನಕುಲನ ವಿರಾಟಸಭಾ ಪ್ರವೇಶ

ವೈಶಂಪಾಯನಃ

ಅಥಾಪರೋಽದೃಶ್ಯತ ಪಾಂಡವಃ ಪ್ರಭುಃ
ವಿರಾಟರಾಜ್ಞಃ ತುರಗಾನವೇಕ್ಷಿತಾ ।
ತಮಾಪತಂತಂ ದದೃಶುಃ ಪೃಥಗ್ ಜನಾಃ
ಪ್ರಮುಕ್ತಮಭ್ರಾದಿವ ಚಂದ್ರಮಂಡಲಮ್ ॥೧॥

ವೈಶಂಪಾಯನ– ಅನಂತರ ಪ್ರಭುವಾದ ಇನ್ನೊಬ್ಬ ಪಾಂಡವನು ವಿರಾಟ ರಾಜನ ಅಶ್ವಗಳನ್ನು ನೋಡಿಕೊಳ್ಳುವವನಾಗಿ ಕಂಡುಬಂದನು. ಸಾಮಾನ್ಯ ಜನರು ಮೋಡದಿಂದ ಚಂದ್ರಮಂಡಲವು ಬಿದ್ದಂತೆ ಅವನ ಬರುವಿಕೆಯನ್ನು ಗಮನಿಸಿದರು.

ಸ ವೈ ಹಯಾನೈಕ್ಷತ ತಾನಿತಸ್ತತಃ
ಸಮೀಕ್ಷಮಾಣಂ ಚ ದದರ್ಶ ಮತ್ಸ್ಯರಾಟ್ ।
ದೃಷ್ಟ್ವಾ ತಥೈನಂ ಹಿ ಕುರೂತ್ತಮಂ ತತಃ
ಪಪ್ರಚ್ಛ ತಾನ್ ಸರ್ವಸಭಾಸದಸ್ತದಾ ॥೨॥

ಅವನು ಬರುತ್ತಲೇ ವಿರಾಟ ರಾಜನ ಕುದುರೆಗಳನ್ನು ನೋಡುತ್ತಿದ್ದನು. ಅಲ್ಲಲ್ಲಿ ಕುದುರೆಗಳನ್ನು ನೋಡುತ್ತಿದ್ದ ಅವನನ್ನು ಗಮನಿಸಿದ ಮತ್ಸ್ಯರಾಜನಾದ ವಿರಾಟನು ಆ ಕುರೂತ್ತಮನನ್ನು ನೋಡಿ ಅಲ್ಲಿದ್ದ ಎಲ್ಲಾ ಸಭಾಸದರನ್ನೂ ಆಗ ಪ್ರಶ್ನೆ ಮಾಡಿದನು.

ಕೋ ವಾ ವಿಜಾನಾತಿ ಪುರಾऽಸ್ಯ ದರ್ಶನಂ
ಯೋऽಯಂ ಯುವಾऽಭ್ಯೇತಿ ಹಿ ಮಾಮಿಕಾಂ ಸಭಾಮ್ ।
ಪ್ರಿಯೋ ಹಿ ಮೇ ದರ್ಶನತೋऽಪಿ ಸಮ್ಮತೋ
ಬ್ರವೀತು ಕಶ್ಚಿದ್ ಯದಿ ದೃಷ್ಟವಾನಿಮಮ್ ॥೩॥

ಯಾವ ಯುವಕನು ನನ್ನ ಸಭೆಗೆ ಬರುತ್ತಿದ್ದಾನೆಯೋ ಅವನನ್ನು ಹಿಂದೆ ಯಾರಾದರೂ ನೋಡಿದ್ದೀರಾ? ಅವನು ನನಗೆ ಪ್ರಿಯನೂ ಮತ್ತು ಸುಂದರನಾಗಿಯೂ ಕಾಣುತ್ತಿದ್ದಾನೆ. ಅವನನ್ನು ಯಾರಾದರೂ ಮೊದಲು ನೋಡಿದ್ದರೆ ನನಗೆ ಹೇಳಿ.

ಅಯಂ ಹಯಾನ್ ಪಶ್ಯತಿ ಮಾಮಕಾನ್ ಮುಹುಃ
ಧ್ರುವಂ ಹಯಜ್ಞೋ ಭವಿತಾ ವಿಚಕ್ಷಣಃ ।
ಪ್ರವೇಶ್ಯತಾಮೇಷ ಸಮೀಪಮಾಶು ವೈ
ವಿಭಾತಿ ವೀರೋ ಹಿ ಯಥಾऽಮರಸ್ತಥಾ ॥೪॥

ಅವನು ನನ್ನ ಕುದುರೆಗಳನ್ನು ಮತ್ತೆ ಮತ್ತೆ ನೋಡುತ್ತಿದ್ದಾನೆ. ಖಂಡಿತವಾಗಿಯೂ ಅವನು ಕುದುರೆಯ ಲಕ್ಷಣಗಳನ್ನು ತಿಳಿದ ವಿಚಕ್ಷಣನಾಗಿದ್ದಾನೆ. ಅವನನ್ನು ನನ್ನ ಸಮೀಪಕ್ಕೆ ಕರೆತನ್ನಿ. ಆ ವೀರನು ದೇವತೆಯಂತೆ ಕಂಗೊಳಿಸುತ್ತಿದ್ದಾನೆ.

ವಿತರ್ಕಯತ್ಯೇವ ಹಿ ಮತ್ಸ್ಯರಾಜನಿ
ತ್ವರನ್ ಕುರೂಣಾಮೃಷಭಃ ಸಮಾಗಮತ್ ।
ಅಭ್ಯೇತ್ಯ ರಾಜಾನಮಮಿತ್ರಹಾऽಬ್ರವೀತ್
ಜಯೋಸ್ತು ತೇ ಪಾರ್ಥಿವ ಭದ್ರಮಸ್ತು ಚ ॥೫॥

ತತಃ ಪ್ರಣಮ್ಯೋಪನತಃ ಕುರೂತ್ತಮೋ
ವಿರಾಟರಾಜಾನಮುವಾಚ ಪಾರ್ಥಿವಃ ॥೬॥

ಮತ್ಸ್ಯರಾಜನು ಹೀಗೆ ಊಹೆ ಮಾಡುತ್ತಿರುವಾಗಲೇ ಕುರುಶ್ರೇಷ್ಠನಾದ ನಕುಲನು ಅವನ ಸಮೀಪಕ್ಕೆ ಬಂದನು. ಶತ್ರುಸಂಹಾರಕನಾದ ಅವನು ರಾಜನನ್ನು ಸಮೀಪಿಸಿ ರಾಜನೇ, ನಿನಗೆ ಜಯವಾಗಲಿ ಮತ್ತು ಮಂಗಳವಾಗಲಿ ಎಂದು ಹೇಳಿದನು. ಅನಂತರ ಹತ್ತಿರದಲ್ಲಿದ್ದ ಕುರೂತ್ತಮನಾದ ನಕುಲನು ವಿರಾಟ ರಾಜನನ್ನು ನಮಸ್ಕರಿಸಿ ಅವನನ್ನು ಉದ್ದೇಶಿಸಿ ಮಾತನಾಡಿದನು.

ತವಾಗತೋಹಂ ಪುರಮದ್ಯ ಭೂಪತೇ
ಜಿಜೀವಿಷುರ್ವೇತನಭೋಜನಾರ್ಥಿಕಃ ।
ತವಾಶ್ವಬಂಧಃ ಸುಭೃತೋ ಭವಾಮ್ಯಹಂ
ಕುರುಷ್ವ ಮಾಮಶ್ವಪತಿಂ ಯದೀಚ್ಛಸಿ ॥೭॥

ರಾಜನೇ, ನಾನು ವೇತನ ಮತ್ತು ಭೋಜನವನ್ನು ಅರಸಿ ಜೀವಿಸಲು ನಿನ್ನ ಪಟ್ಟಣಕ್ಕೆ ಬಂದಿದ್ದೇನೆ. ಚೆನ್ನಾಗಿ ಪೋಷಿಸಿದರೆ ನಾನು ನಿನ್ನ ಅಶ್ವಬಂಧನಾಗುತ್ತೇನೆ. ನಿನಗೆ ಇಷ್ಟವಾದರೆ ನನ್ನನ್ನು ನಿನ್ನ ಅಶ್ವಪತಿಯನ್ನಾಗಿ ಮಾಡು.

ವಿರಾಟಃ

ರಥಾನಿ ಯಾನಾನಿ ಧನಂ ನಿವೇಶನಂ
ನ ಮೇಽಶ್ವಸೂತೋ ಭವಿತುಂ ತ್ವಮರ್ಹಸಿ ।
ಕುತೋಽಸಿ ಕಸ್ಯಾಸಿ ಕಥಂ ತ್ವಮರ್ಹಸಿ
ಬ್ರವೀಹಿ ಶಿಲ್ಪಂ ತವ ವಿದ್ಯತೇ ಚ ಯತ್ ॥೮॥

ವಿರಾಟ– ರಥವನ್ನಾಗಲೀ, ಯಾನಗಳನ್ನಾಗಲೀ, ಧನವನ್ನಾಗಲೀ, ಮನೆಗಳನ್ನಾಗಲೀ ಕೊಡುತ್ತೇನೆ. ನೀನು ಅಶ್ವಸೂತನಾಗಲು ಅರ್ಹನಲ್ಲ. ಎಲ್ಲಿಂದ ಬಂದಿದ್ದೀಯೆ? ಯಾರಿಗೆ ಸೇರಿದವನು? ಏನು ಕೆಲಸವನ್ನು ಮಾಡಲು ಯೋಗ್ಯನಾಗಿದ್ದೀಯೆ? ನಿನ್ನ ಬಳಿ ಯಾವ ನಿಪುಣತೆ ಇದೆ? ಎಲ್ಲವನ್ನೂ ನನಗೆ ಹೇಳು.

ನಕುಲಃ

ಪಂಚಾನಾಂ ಪಾಂಡುಪುತ್ರಾಣಾಂ ಜ್ಯೇಷ್ಠೋ ರಾಜಾ ಯುಧಿಷ್ಠಿರಃ ।
ತೇನಾಹಮಶ್ವೇಷು ಪುರಾ ಪ್ರಯುಕ್ತಃ ಶತ್ರುಕರ್ಶನ ॥೯॥

ನಕುಲ– ಐದು ಜನ ಪಾಂಡುಪುತ್ರರಲ್ಲಿ ಯುಧಿಷ್ಠಿರ ರಾಜನು ಹಿರಿಯನಾದವನು. ಎಲೈ ಶತ್ರುಕರ್ಶನನೇ, ನಾನು ಹಿಂದೆ ಅವನ ಬಳಿ ಅಶ್ವಗಳ ಮೇಲ್ವಿಚಾರಣೆಯಲ್ಲಿ ನಿಯೋಜಿತನಾಗಿದ್ದೆನು.

ಅಶ್ವಾನಾಂ ಪ್ರಕೃತಿಂ ವೇದ್ಮಿ ವಿನಯಂ ಚಾಪಿ ಸರ್ವಶಃ ।
ದುಷ್ಟಾನಾಂ ಪ್ರತಿಪತ್ತಿಂ ಚ ಕೃತ್ಸ್ನಂ ಚಾಪಿ ಚಿಕಿತ್ಸಿತಮ್ ॥೧೦॥

ಅಶ್ವಗಳ ಸ್ವಭಾವಗಳನ್ನು ತಿಳಿದಿದ್ದೇನೆ. ಅವುಗಳನ್ನು ಎಲ್ಲಾ ರೀತಿಯಲ್ಲಿಯೂ ಪಳಗಿಸುವುದನ್ನು ತಿಳಿದಿದ್ದೇನೆ. ದುಷ್ಟಾಶ್ವಗಳ ಲಕ್ಷಣಗಳನ್ನೂ, ಅವುಗಳನ್ನು ಪಳಗಿಸುವ ರೀತಿಯನ್ನೂ ಮತ್ತು ಎಲ್ಲಾ ಅಶ್ವ ಚಿಕಿತ್ಸೆಗಳನ್ನೂ ತಿಳಿದಿದ್ದೇನೆ.

ನ ಕಾತರಂ ಸ್ಯಾನ್ಮಮ ಜಾತು ವಾಹನಂ
ನ ಮೇऽಸ್ತಿ ದುಷ್ಟಾ ಬಡವಾ ಕುತೋ ಹಯಾಃ ।
ಜಾನಂಸ್ತು ಮಾಮಾಹ ಸ ಚಾಪಿ ಪಾಂಡವೋ
ಯುಧಿಷ್ಠಿರೋ ಗ್ರಾಂಥಿಕಮೇವ ನಾಮತಃ ॥೧೧॥

ನನ್ನ ವಾಹನವಾದ ಅಶ್ವಗಳು ಎಂದೂ ಗಾಬರಿಗೊಳ್ಳುವುದಿಲ್ಲ. ನನ್ನ ಬಳಿ ಹೆಣ್ಣು ಕುದುರೆಗಳೇ ದುಷ್ಟವಾಗುವುದಿಲ್ಲ. ಇನ್ನು ಗಂಡು ಕುದುರೆಗಳು ಹೇಗೆ ದುಷ್ಟವಾದಾವು? ಇದನ್ನು ತಿಳಿದ ಪಾಂಡವನಾದ ಯುಧಿಷ್ಠಿರನು ನನ್ನನ್ನು ಅಶ್ವಗ್ರಂಥಿ ಎಂಬ ನಾಮದಿಂದಲೇ ಕರೆದನು.

ಮಾತಲಿರಿವ ದೇವಪತೇಃ ದಶರಥನೃಪತೇಃ ಸುಮಂತ್ರ ಇವ ಯಂತಾ ।
ಸಹಸಾಹ ಇವ ಜಾಮದಗ್ನೇಃ ತಥೈವ ತವ ಶಿಕ್ಷಯಾಮ್ಯಶ್ವಾನ್ ॥೧೨॥

ದೇವಪತಿಯಾದ ಇಂದ್ರನಿಗೆ ಮಾತಲಿಯು ಸಾರಥಿಯಾಗಿದ್ದಂತೆ, ದಶರಥ ರಾಜನಿಗೆ ಸುಮಂತ್ರನಂತೆ, ಜಮದಗ್ನಿಪುತ್ರನಾದ ಪರಶುರಾಮನಿಗೆ ಸಹಸಾಹನಂತೆ ನಾನು ನಿನ್ನ ಅಶ್ವಗಳಿಗೆ ಶಿಕ್ಷಣವನ್ನು ಕೊಡುವೆನು.

ಯುಧಿಷ್ಠಿರಸ್ಯ ರಾಜೇಂದ್ರ ನರರಾಜಸ್ಯ ಶಾಸನಾತ್ ।
ಶತಸಾಹಸ್ರಕೋಟೀನಾಮಶ್ವಾನಾಮಸ್ತಿ ರಕ್ಷಿತಾ ॥೧೩॥

ಎಲೈ ರಾಜೇಂದ್ರನೇ, ನಾನು ಹಿಂದೆ ರಾಜನಾದ ಯುಧಿಷ್ಠಿರನ ಶಾಸನದಂತೆ ಅವನ ನೂರಾರು ಸಹಸ್ರಕೋಟಿ ಅಶ್ವಗಳಿಗೆ ರಕ್ಷಕನಾಗಿದ್ದೆ.

ವಿರಾಟಃ

ಯದಸ್ತಿ ಕಿಂಚಿನ್ಮಮ ವಾಜಿವಾಹನಂ
ತದಸ್ತು ಸರ್ವಂ ತ್ವದಧೀನಮದ್ಯ ವೈ ।
ಯೇ ಚಾಪಿ ಕೇಚಿನ್ಮಮ ವಾಜಿಯೋಧಾಃ
ತ್ವದಾಶ್ರಯಾಃ ಸಾರಥಯಶ್ಚ ಸಂತು ಮೇ ॥೧೪॥

ವಿರಾಟ– ನನ್ನ ಬಳಿ ಏನೇನು ಅಶ್ವವಾಹನಗಳಿವೆಯೋ ಅವೆಲ್ಲವೂ ಈ ದಿನ ನಿನ್ನ ವಶವಾಗಲಿ. ನನ್ನ ಅಶ್ವಯೋಧರು ಯಾರಿದ್ದಾರೆಯೋ ಮತ್ತು ಸಾರಥಿಗಳು ಯಾರಿದ್ದಾರೆಯೋ ಅವರೆಲ್ಲರೂ ನಿನ್ನ ವಶದಲ್ಲಿರಲಿ.

ಇದಂ ತವೇಷ್ಟಂ ವಿಹಿತಂ ಸುರೋಪಮ
ಪ್ರಬ್ರೂಹಿ ಯತ್ ತೇ ಪ್ರಸಮೀಕ್ಷಿತಂ ವರಮ್ ।
ನ ತೇऽನುರೂಪಂ ಹಯಕರ್ಮ ದೃಶ್ಯತೇ
ವಿಭಾಸಿ ರಾಜೇವ ನ ಕರ್ಮ ವಾಜಿನಾಮ್ ॥೧೫॥

ಎಲೈ ದೇವಸದೃಶನೇ, ನಿನ್ನ ಈ ಇಷ್ಟವನ್ನು ನಾನು ನೆರವೇರಿಸಿದ್ದೇನೆ. ನಿನಗೆ ಬೇಕಾದ ಬೇರೆ ವರವನ್ನು ಕೇಳು. ಈ ಅಶ್ವಕಾರ್ಯವು ನಿನಗೆ ಅನುರೂಪವಾಗಿ ತೋರುವುದಿಲ್ಲ. ನೀನು ರಾಜನಂತೆ ಕಾಣುತ್ತಿರುವಿ. ಅಶ್ವಕರ್ಮಕಾರಕನಲ್ಲ.

ಯುಧಿಷ್ಠಿರಸ್ಯೇವ ಹಿ ದರ್ಶನೇನ ಮೇ
ಸಮಂ ತವೇದಂ ಪ್ರಿಯದರ್ಶ ದರ್ಶನಮ್ ।
ಕಥಂ ನು ಭೃತ್ಯೈಃ ಸ ವಿನಾಕೃತೋ ವನೇ
ಚರತ್ಯನಿಂದ್ಯೋ ರಮತೇ ಚ ಪಾಂಡವಃ ॥೧೬॥

ನಿನ್ನನ್ನು ನೋಡಿದರೆ ಯುಧಿಷ್ಠಿರನನ್ನು ನೋಡಿದಂತೆಯೇ ನನಗೆ ಸಂತೋಷವಾಗುತ್ತಿದೆ. ಪ್ರಿಯದರ್ಶನನೇ, ಆ ಪಾಂಡುಪುತ್ರನೂ, ಅನಿಂದ್ಯನೂ ಆದ ಯುಧಿಷ್ಠಿರನು ಭೃತ್ಯರಿಲ್ಲದೆ ಆ ಕಾಡಿನಲ್ಲಿ ಹೇಗೆ ಸಂಚರಿಸುತ್ತಾನೆ? ಹೇಗೆ ವಿಹರಿಸುತ್ತಾನೆ?

ವೈಶಂಪಾಯನಃ

ತಥಾ ಸ ಗಂಧರ್ವವರೋಪಮೋ ಯುವಾ
ವಿರಾಟರಾಜ್ಞಾ ಮುದಿತೇನ ಪೂಜಿತಃ ।
ನ ಚೈವಮನ್ಯೇಽಪಿ ವಿದುಃ ಕಥಂಚನ
ಪ್ರಿಯಾಭಿರಾಮಂ ವಿಚರಂತಮೇಕದಾ ॥೧೭॥

ವೈಶಂಪಾಯನ– ಹೀಗೆ ಗಂಧರ್ವಶ್ರೇಷ್ಠನಿಗೆ ಸದೃಶನಾದ ಯುವಕನಾದ ನಕುಲನು ಸಂತೋಷಗೊಂಡ ವಿರಾಟರಾಜನಿಂದ ಪೂಜಿತನಾದನು. ವಿರಾಟ ರಾಜನಿಗೆ ಪ್ರಿಯನಾಗಿ ಸಂತೋಷದಿಂದ ತಿರುಗಾಡುವ ಅವನನ್ನು ಅಲ್ಲಿ ಯಾರೂ ತಿಳಿಯಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ದ್ವಾದಶೋಽಧ್ಯಾಯಃ ॥

॥ ವೈರಾಟಪರ್ವಣಿ ನಕುಲಪ್ರವೇಶೋ ನಾಮ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಗೋಪಾಲಕವೇಷದಿಂದ ಸಹದೇವನ ಸಭಾಪ್ರವೇಶ

ವೈಶಂಪಾಯನಃ

ಅಥಾಪರೋಽದೃಶ್ಯತ ವೈ ಶಶೀ ಯಥಾ
ಹುತೋ ಹವಿರ್ಭಿರ್ಹಿ ಯಥಾಽಧ್ವರೇ ಶಿಖೀ ।
ಯಥಾ ಸಮಾಲಕ್ಷ್ಯತ ಚಾರುದರ್ಶನಃ
ಪ್ರಕಾಶವಾನ್ ಸೂರ್ಯ ಇವಾಚಿರೋದಿತಃ ॥೧॥

ಅನಂತರ ಇನ್ನೊಬ್ಬನು ಚಂದ್ರನಂತೆ, ಯಜ್ಞದಲ್ಲಿ ಹವಿಸ್ಸುಗಳಿಂದ ಹುತವಾದ ಅಗ್ನಿಯಂತೆ ಕಂಡುಬಂದನು. ಸುಂದರನಾದ ಅವನು ಆಗ ತಾನೇ ಉದಯಿಸಿದ ಸೂರ್ಯನಂತೆ ಪ್ರಕಾಶವುಳ್ಳವನಾಗಿ ಎಲ್ಲರಿಂದಲೂ ಗಮನಿಸಲ್ಪಟ್ಟನು.

ತಮಾವ್ರಜಂತಂ ಸಹದೇವಮಗ್ರಣೀಃ
ನೃಪೋ ವಿರಾಟೋ ನಚಿರಾತ್ ಸಮೈಕ್ಷತ ।
ಪ್ರೈಕ್ಷಂತ ತಂ ತತ್ರ ಪೃಥಕ್ ಸಮಾಗತಾಃ
ಸಭಾಸದಃ ಸರ್ವಮನೋಹರಪ್ರಭಮ್ ॥೨॥

ಯುವಾನಮಾಯಾಂತಮಮಿತ್ರಕರ್ಶನಂ
ಪ್ರಮುಕ್ತಮಭ್ರಾದಿವ ಚಂದ್ರಮಂಡಲಮ್ ॥೩॥

ಹಾಗೆ ಬರುತ್ತಿದ್ದ ಸಹದೇವನನ್ನು ನಾಯಕನಾದ ವಿರಾಟರಾಜನು ಶೀಘ್ರವಾಗಿ ನೋಡಿದನು. ಅಲ್ಲಿ ಬಂದ ಉಳಿದ ಸಭಾಸದರೂ ಸಹ ಮನೋಹರ ಕಾಂತಿಯುಳ್ಳ ಯುವಕನೂ, ಶತ್ರುಕರ್ಶನನೂ ಆದ ಅವನನ್ನು ಮೋಡದಿಂದ ಬಿದ್ದ ಚಂದ್ರಮಂಡಲದಂತೆ ನೋಡಿದರು.

ಯಷ್ಟ್ಯಾ ಪ್ರಮಾಣಾನ್ವಿತಯಾ ಸುದರ್ಶನಂ
ದಾಮಾನಿ ಪಾಶಂ ಚ ನಿಬದ್ಧ್ಯ ಪೃಷ್ಠತಃ ।
ಮೌಂಜೀಂ ಚ ತಂತ್ರೀಂ ಮಹತೀಂ ಸುಸಂಹಿತಾಂ
ಬಾಲೈಶ್ಚ ದಾಮ್ನೈರ್ಬಹುಭಿಃ ಸಮಾವೃತಾಮ್ ॥೪॥

ಕೈಯಲ್ಲಿ ಸರಿಯಾದ ಅಳತೆಯ ಕೋಲನ್ನು ಹಿಡಿದು ಮನೋಹರನಾಗಿದ್ದಂತಹ, ಸಣ್ಣ ಮತ್ತು ದೊಡ್ಡ ಹಗ್ಗಗಳನ್ನು ಹಿಂದೆ ಕಟ್ಟಿಕೊಂಡಿದ್ದಂತಹ, ಮೌಂಜಿಯನ್ನು ಮತ್ತು ದೊಡ್ಡ ತಂತಿಯನ್ನು ಚೆನ್ನಾಗಿ ಜೋಡಿಸಿಕೊಂಡಿದ್ದಂತಹ ಬಾಲದ ಲೋಮಗಳಿಂದ ಮಾಡಿದ ಹಗ್ಗಗಳಿಂದಲೂ ಕೂಡಿದಂತಹ ಅವನನ್ನು ನೋಡಿದರು.

ಸ ಚಾಪಿ ರಾಜಾನಮುವಾಚ ವೀರ್ಯವಾನ್
ಕುರುಷ್ವ ಮಾಂ ಪಾರ್ಥಿವ ಗೋಷ್ಠವಸ್ಥಿತಮ್ ।
ಮಯಾ ಹಿ ಗುಪ್ತಾಃ ಪಶವೋ ಭವಂತು ತೇ
ಸಂತಃ ಸುನಿದ್ರಾಃ ಪ್ರಭವೋಽಸ್ಮಿ ವಲ್ಲವಃ ॥೫॥

ಪರಾಕ್ರಮಶಾಲಿಯಾದ ಅವನಾದರೂ ರಾಜನನ್ನು ಕುರಿತು ರಾಜನೇ, ನೀನು ನನ್ನನ್ನು ನಿನ್ನ ಗವಾಧ್ಯಕ್ಷನನ್ನಾಗಿ ಮಾಡು. ನನ್ನಿಂದ ರಕ್ಷಿತವಾದ ನಿನ್ನ ಗೋವುಗಳು

ಸಾಧುವೂ ಮತ್ತು ಒಳ್ಳೆಯ ನಿದ್ರೆಯನ್ನು ಮಾಡುವವೂ ಆಗಲಿ. ನಾನು ವಲ್ಲವ ಜಾತಿಗೆ ಸೇರಿದವನು.

ನ ಶ್ವಾಪದೇಭ್ಯೋ ನ ಚ ರೋಗತೋ ಭಯಂ
ನ ಚಾಪಿ ತಾಸಾಮುತ ತಸ್ಕರಾದ್ ಭಯಮ್ ।
ಪಯಃಪ್ರಭೂತಾ ಬಹುಲಾ ನಿರಾಮಯಾ
ಭವಂತಿ ಗಾವಃ ಸುಭೃತಾ ನರಾಧಿಪ ॥೬॥

ನಾನು ಗವಾಧ್ಯಕ್ಷನಾಗಿದ್ದರೆ ಎಲೈ ರಾಜನೇ, ನನ್ನಿಂದ ಸುರಕ್ಷಿತವಾದ ಗೋವುಗಳಿಗೆ ಕ್ರೂರ ಮೃಗಗಳ ಭಯವಿರುವುದಿಲ್ಲ. ರೋಗಗಳ ಭಯವಾಗಲೀ ಅಥವಾ ಕಳ್ಳರ ಭಯವಾಗಲೀ ಇರುವುದಿಲ್ಲ. ಬಹಳ ಹಾಲನ್ನು ಕೊಡುತ್ತವೆ, ಬೇಗ ಬೆಳೆಯುತ್ತವೆ ಮತ್ತು ಆರೋಗ್ಯವಾಗಿರುತ್ತವೆ.

ನಿಶಮ್ಯ ರಾಜಾ ಸಹದೇವಭಾಷಿತಂ
ನಿರೀಕ್ಷ್ಯ ಮಾದ್ರೀಸುತಮಭ್ಯನಂದತ್ ।
ಉವಾಚ ಹೃಷ್ಟೋ ಮುದಿತೇನ ಚೇತಸಾ
ಅವಲ್ಲವತ್ವಂ ತ್ವಯಿ ವೀರ ಲಕ್ಷಯೇ ॥೭॥

ರಾಜನು ಸಹದೇವನ ಮಾತುಗಳನ್ನು ಕೇಳಿ ಮತ್ತು ಅವನನ್ನು ನೋಡಿ ಸಂತೋಷ ಪಟ್ಟನು. ಅವನು ಸಂತುಷ್ಟಗೊಂಡ ಮನಸ್ಸಿನಿಂದ ಸಹದೇವನನ್ನು ಕುರಿತು ವೀರನೇ, ನಿನ್ನಲ್ಲಿ ಯಾವ ಗೋಪಾಲಕನ ಲಕ್ಷಣಗಳೂ ಕಾಣುವುದಿಲ್ಲ ಎಂದು ಹೇಳಿದನು.

ಧೈರ್ಯಾದ್ ವಪುಃ ಕ್ಷಾತ್ರಮಿವೇಹ ತೇ ದೃಢಂ
ಪ್ರಕಾಶತೇ ಕೌರವವಂಶಜಸ್ಯ ವಾ ।
ನಾಪಂಡಿತೇಯಂ ತವ ದೃಶ್ಯತೇ ತನುಃ
ಭವೇಹ ರಾಜ್ಯೇ ಮಮ ಮಂತ್ರಧರ್ಮಭೃತ್ ॥೮॥

ನಿನ್ನ ಧೈರ್ಯವನ್ನು ನೋಡಿದರೆ ಈ ನಿನ್ನ ದೃಢವಾದ ಶರೀರವು ಕ್ಷತ್ರಿಯ ಶರೀರವೆಂದು ಪ್ರಕಾಶಿಸುತ್ತದೆ. ಅಥವಾ ನೀನು ಕೌರವವಂಶಕ್ಕೆ ಸೇರಿದವನೇ ಆಗಿರಬೇಕು. ನಿನ್ನ ಶರೀರವನ್ನು ನೋಡಿದರೆ ನೀನು ವಿದ್ವಾಂಸನೆಂದು ತೋರುತ್ತದೆ. ಆದ್ದರಿಂದ ನನ್ನ ರಾಜ್ಯದಲ್ಲಿ ಮಂತ್ರಧರ್ಮವನ್ನು ಧರಿಸಿದ ನನ್ನ ಮಂತ್ರಿಯಾಗು.

ಪ್ರಶಾಧಿ ಮತ್ಸ್ಯಾನ್ ಸಹರಾಜಕಾನಿಮಾನ್
ಬೃಹಸ್ಪತಿಃ ಶಕ್ರಯುತಾನಿವಾಮರಾನ್ ।
ಬಲಂ ಚ ಮೇ ರಕ್ಷ ಸುವೇಷ ಸರ್ವಶೋ
ಗೃಹಾಣ ಖಡ್ಗಂ ಪ್ರತಿರೂಪಮಾತ್ಮನಃ ॥೯॥

ಅನೀಕಕರ್ಣಾಗ್ರಧರೋ ಬಲಸ್ಯ ಮೇ
ಪ್ರಭುರ್ಭವಾನಸ್ತು ಗೃಹಾಣ ಕಾರ್ಮುಕಮ್ ॥೧೦॥

ಬೃಹಸ್ಪತಿಯು ಇಂದ್ರನಿಂದ ಕೂಡಿದ ದೇವತೆಗಳನ್ನು ರಕ್ಷಿಸಿದಂತೆ ಈ ಮತ್ಸ್ಯದೇಶ ಮತ್ತು ರಾಜಕ ದೇಶಗಳನ್ನು ಆಳುವವನಾಗು. ಒಳ್ಳೆಯ ವೇಷವನ್ನು ಹೊಂದಿದವನೇ, ನನ್ನ ಸೈನ್ಯವನ್ನು ಸರ್ವರೀತಿಯಲ್ಲಿ ರಕ್ಷಣೆ ಮಾಡು. ನಿನಗೆ ಯೋಗ್ಯವಾದ ಖಡ್ಗವನ್ನು ತೆಗೆದುಕೊ. ನೀನು ನನ್ನ ಸೈನ್ಯದ ಪ್ರಭುವಾಗಿ ಸೇನಾನಾಯಕನಾಗು. ಕೈಗೆ ಬಿಲ್ಲನ್ನು ತೆಗೆದುಕೊ.

ವಿರಾಟರಾಜ್ಞಾಭಿಹಿತಃ ಕುರೂತ್ತಮಃ
ಪ್ರಶಸ್ಯ ರಾಜಾನಮಭಿಪ್ರಣಮ್ಯ ಚ ।
ಉವಾಚ ಮಾತ್ಸ್ಯಪ್ರವರಂ ಮಹಾಮತಿಃ
ಶೃಣುಷ್ವ ರಾಜನ್ ಮಮ ವಾಕ್ಯಮುತ್ತಮಮ್ ॥೧೧॥

ವಿರಾಟರಾಜನಿಂದ ಹೀಗೆ ಹೇಳಲ್ಪಟ್ಟ ಆ ಕುರುಶ್ರೇಷ್ಠನು ರಾಜನನ್ನು ಪ್ರಶಂಸಿಸಿ ಅವನಿಗೆ ನಮಸ್ಕರಿಸಿ ಆ ಮತ್ಸ್ಯಶ್ರೇಷ್ಠನನ್ನು ಕುರಿತು ಮಹಾಮತಿಯಾದ ಸಹದೇವನು ರಾಜನೇ, ನನ್ನ ಶ್ರೇಷ್ಠವಾದ ಮಾತನ್ನು ಕೇಳು ಎಂದು ಹೇಳಿದನು.

ಬಾಲೋ ಹ್ಯಹಂ ಜಾತಿವಿಶೇಷದೂಷಿತಃ
ಕುತೋಽದ್ಯ ಮೇ ನೀತಿಷು ಯುಕ್ತಮಂತ್ರತಾ ।
ಸ್ವಕರ್ಮಯುಕ್ತಾಶ್ಚ ವಯಂ ನರಾಧಿಪ
ಪ್ರಶಾಧಿ ಮಾಂ ಗೋಪರಿರಕ್ಷಣೇಽನಘ ॥೧೨॥

ನಾನು ಬಾಲಕ. ಜಾತಿವಿಶೇಷದಿಂದ ದೂಷಿತನಾದವನು. ರಾಜನೀತಿಗಳಲ್ಲಿ ಮಂತ್ರಾಲೋಚನೆಯನ್ನು ನೀಡುವ ಸಾಮರ್ಥ್ಯವು ನನಗೆ ಎಲ್ಲಿಂದ ಬರಬೇಕು?

ರಾಜನೇ ನಾವು ನಮ್ಮ ಕರ್ಮದಲ್ಲಿ ನಿರತರಾಗಿ ತೃಪ್ತರಾಗಿರುತ್ತೇವೆ. ಅನಘನೇ, ನನ್ನನ್ನು ನಿನ್ನ ಗೋರಕ್ಷಣೆಯ ವಿಷಯದಲ್ಲಿ ಶಾಸನವನ್ನು ಮಾಡು.

ವೈಶ್ಯೋಽಸ್ಮಿ ನಾಮ್ನಾಽಹಮರಿಷ್ಟನೇಮಿಃ
ಗೋಸಂಖ್ಯ ಆಸಂ ಕುರುಪುಂಗವಾನಾಮ್ ।
ವಸ್ತುಂ ತ್ವಯೀಚ್ಛಾಮಿ ವಿಶಾಂ ವರಿಷ್ಠ
ರಾಜನ್ಯಸಿಂಹಾನ್ ನ ಹಿ ವೇದ್ಮಿ ಪಾರ್ಥಿವಾನ್ ॥೧೩॥

ನ ಜೀವಿತುಂ ಶಕ್ಯಮತೋಽನ್ಯಕರ್ಮಣಾ
ನ ಚ ತ್ವದನ್ಯೋ ಮಮ ರೋಚತೇ ನೃಪಃ ॥೧೪॥

ನಾನು ಅರಿಷ್ಟನೇಮಿ ಎಂಬ ವೈಶ್ಯನಾಗಿದ್ದೆ. ನಾನು ಕುರುಪುಂಗವರಾದ ಯುಧಿಷ್ಠಿರಾದಿಗಳಿಗೆ ಗೋಸಂಖ್ಯನಾಗಿದ್ದೆ. ಮನುಷ್ಯರಲ್ಲಿ ಶ್ರೇಷ್ಠನಾದವನೇ, ನಾನು ನಿನ್ನಲ್ಲಿ ವಾಸಮಾಡಲು ಇಚ್ಛಿಸುತ್ತೇನೆ. ನನಗೆ ಬೇರೆ ರಾಜಸಿಂಹರ ಪರಿಚಯವಿಲ್ಲ. ನನಗೆ ಗೊತ್ತಿರುವ ಕರ್ಮವನ್ನು ಬಿಟ್ಟು ಬೇರೆಯ ಕರ್ಮದಿಂದ ಬದುಕಲು ಸಾಧ್ಯವಿಲ್ಲ. ನಿನ್ನನ್ನು ಬಿಟ್ಟು ಬೇರೆ ಯಾವ ರಾಜನೂ ನನಗೆ ಇಷ್ಟವಾಗುವುದೂ ಇಲ್ಲ.

ವಿರಾಟಃ

ತ್ವಂ ಬ್ರಾಹ್ಮಣೋ ವಾ ಯದಿ ಭೂಮಿಪಾಲಃ
ಸುಭದ್ರನೇಮೀಶ್ವರರೂಪವಾನಸಿ ।
ಆಚಕ್ಷ್ವ ಮೇ ತತ್ತ್ವಮಮಿತ್ರಕರ್ಶನ
ನ ವಲ್ಲವತ್ವಂ ತ್ವಯಿ ದೃಶ್ಯತೇ ಸಮಮ್ ॥೧೫॥

ವಿರಾಟ– ನೀನು ಬ್ರಾಹ್ಮಣನೋ ಅಥವಾ ಭೂಮಿಪಾಲನೋ ಅಥವಾ ರಾಜನೋ ಇರಬೇಕು. ಸುಭದ್ರವಾದ ಪರಿಚಯವುಳ್ಳ ದೇಶದ ರಾಜನಂತೆ (ಸಮುದ್ರ ಪರಿವೆಯುಳ್ಳ ಭೂಪತಿಯಂತೆ) ರೂಪವನ್ನು ಹೊಂದಿದ್ದೀಯೆ. ಶತ್ರುಕರ್ಶನನೇ, ನಿನ್ನ ನಿಜವಾದ ಸ್ವರೂಪವನ್ನು ಹೇಳು. ನನಗೆ ನಿನ್ನಲ್ಲಿ ಗೋಪಾಲಕನ ಲಕ್ಷಣವು ಕಾಣುವುದಿಲ್ಲ.

ಕಸ್ಯಾಸಿ ರಾಜ್ಞೋ ವಿಷಯಾದಿಹಾಗತಃ
ಕಿಂ ಚಾಪಿ ಶಿಲ್ಪಂ ತವ ವಿದ್ಯತೇ ಕೃತಮ್ ।

ಕಥಂ ತ್ವಮಸ್ಮಾಸು ನಿವತ್ಸ್ಯಸೇ ಸದಾ
ವದಸ್ವ ಕಿಂ ಚಾಪಿ ತವೇಹ ವೇತನಮ್ ॥೧೬॥

ಯಾವ ರಾಜನ ದೇಶದಿಂದ ಇಲ್ಲಿಗೆ ಬಂದಿದ್ದೀಯೆ? ಎಂತಹ ವಿಧವಾದ ನೈಪುಣ್ಯವನ್ನು ಸಂಪಾದಿಸಿದ್ದೀಯೆ? ನೀನು ಯಾವ ರೀತಿಯಿಂದ ನಮ್ಮಲ್ಲಿ ವಾಸ ಮಾಡುವಿ? ನಿನಗೆ ವೇತನವಾದರೂ ಏನು? ಎಲ್ಲವನ್ನೂ ನನಗೆ ಹೇಳು.

ಸಹದೇವಃ

ಪಂಚಾನಾಂ ಪಾಂಡುಪುತ್ರಾಣಾಂ ಜ್ಯೇಷ್ಠೋ ರಾಜಾ ಯುಧಿಷ್ಠಿರಃ ।
ತಸ್ಯಾಷ್ಟಶತಸಾಹಸ್ರಾ ಗವಾಂ ವರ್ಗಾಃ ಶತಂ ಶತಮ್ ॥೧೭॥

ಸಹದೇವ– ಐದು ಜನ ಪಾಂಡುಪುತ್ರರಲ್ಲಿ ಯುಧಿಷ್ಠಿರನು ಹಿರಿಯನಾದವನು. ಅವನಿಗೆ ಎಂಟುಲಕ್ಷ ಗೋವುಗಳಿದ್ದ ನೂರು ನೂರು ಗುಂಪುಗಳು ಅನೇಕವಿದ್ದವು.

ಅಪರೇ ದಶಸಾಹಸ್ರಾ ದ್ವಿಸ್ತಾವಂತಸ್ತಥಾ ಪರೇ ।
ತೇಷಾಂ ಗೋಸಂಖ್ಯ ಆಸಂ ವೈ ತಂತ್ರೀಪಾಲೇತಿ ಮಾಂ ವಿದುಃ ॥೧೮॥

ಅಲ್ಲದೇ ಹತ್ತುಸಹಸ್ರ ಸಂಖ್ಯೆಯ ಬೇರೆ ಗುಂಪುಗಳೂ ಇದ್ದವು. ಅದರಂತೆ ಇಪ್ಪತ್ತು ಸಾವಿರ ಸಂಖ್ಯೆಯ ಬೇರೆ ಗುಂಪುಗಳೂ ಇದ್ದವು. ನಾನು ಅವೆಲ್ಲದರ ಗಣನೆಯನ್ನು ಮಾಡುತ್ತಿದ್ದೆ. ನನ್ನನ್ನು ತಂತ್ರೀಪಾಲನೆಂದು ಕರೆಯುತ್ತಾರೆ.

ಭೂತಂ ಭವ್ಯಂ ಭವಿಷ್ಯಚ್ಚ ಯಚ್ಚಾನ್ಯತ್ ಗೋಧನಂ ಕ್ವಚಿತ್ ।
ನ ಮೇಽಸ್ಯವಿದಿತಂ ಕಿಂಚಿತ್ ಸಮಂತಾದ್ ದಶಯೋಜನಮ್ ॥೧೯॥

ಇಲ್ಲಿಂದ ಹತ್ತು ಯೋಜನ ವಿಸ್ತಾರದಲ್ಲಿ ಇರುವ ಮತ್ತೆ ಮುಂದೆ ಬರುವ ಎಲ್ಲ ಗೋಧನಗಳನ್ನು ನಾನು ತಿಳಿದಿದ್ದೇನೆ. ಗೋವುಗಳ ವಿಷಯದಲ್ಲಿ ನನಗೆ ತಿಳಿಯದಿರುವುದು ಏನೂ ಇಲ್ಲ.

ಗುಣಾಃ ಸುವಿದಿತಾ ಹ್ಯಾಸನ್ ಮಯಾ ತಸ್ಯ ಮಹಾತ್ಮನಃ ।
ಅಸಕೃತ್ ಸ ಮಯಾ ದೃಷ್ಟಃ ಕುರುರಾಜೋ ಯುಧಿಷ್ಠಿರಃ ॥೨೦॥

ನಾನು ಮಹಾತ್ಮನಾದ ಯುಧಿಷ್ಠಿರನ ಗುಣಗಳನ್ನು ಚೆನ್ನಾಗಿ ತಿಳಿದಿದ್ದೆ ಮತ್ತು ಆ ಕುರುರಾಜನನ್ನು ಅನೇಕ ಬಾರಿ ನೋಡಿದ್ದೆ. ನಾನು ಎಣಿಸಿದ ಗೋವುಗಳ ಸಂಖ್ಯೆ

ಅಪಾರವಾದದ್ದು ಮತ್ತು ತಿಳಿಯಲು ಅಸಾಧ್ಯವಾದದ್ದು. ನನ್ನ ಗೋವುಗಳೆಲ್ಲವೂ ಬೇಗ ಇಮ್ಮಡಿಗೊಳ್ಳುತ್ತವೆ, ಸಾಧುವಾಗಿರುತ್ತವೆ ಮತ್ತು ಒಳ್ಳೆಯ ಕರುಗಳನ್ನು ಪಡೆಯುತ್ತವೆ.

ಅನೇಕಕ(ನ ಗ)ಣಿತಾ ಗಾವೋ ದುರ್ವಿಜ್ಞೇಯಾ ಮಹತ್ತರಾಃ ।
ಬಹುಕ್ಷೀರತರಾಸ್ತಾ ವೈ ವಹ್ನ್ಯಃ ಸತ್ಯಃ ಸುಪುತ್ರಿಕಾಃ ॥೨೧॥

ಕ್ಷಿಪ್ರಂ ಚ ಗಾವೋ ಬಹುಲಾ ಭವಂತಿ
ನ ತಾಸು ರೋಗೋ ಭವತೀಹ ಕಶ್ಚಿತ್ ।
ಅಜ್ಞಾತಚರ್ಯಾಮವಸನ್ಮಹಾತ್ಮಾ
ಯಥಾ ರವಿಶ್ಚಾಸ್ತಗಿರಿಂ ಪ್ರವಿಷ್ಟಃ ॥೨೨॥

ನನ್ನ ಕೈಯಲ್ಲಿ ಗೋವುಗಳು ಬೇಗ ಸಂಖ್ಯೆಯಲ್ಲಿ ಬೆಳೆಯುತ್ತವೆ. ಅವುಗಳಲ್ಲಿ ಯಾವ ರೋಗವೂ ಉಂಟಾಗುವುದಿಲ್ಲ. ಹೀಗೆ ಪಾಂಡವನಾದ ಸಹದೇವನು ತನಗೆ ಇಷ್ಟವಾದಂತೆ ವಿರಾಟನಿಂದ ಗೋವಲ್ಲವ ಪದವಿಯನ್ನು ಪಡೆದು ಮಹಾತ್ಮನಾದ ಅವನು ರವಿಯು ಅಸ್ತಗಿರಿಯನ್ನು ಪ್ರವೇಶಿಸಿದಂತೆ ಅಜ್ಞಾತವಾಸವನ್ನು ಮಾಡಿದನು.

ಏವಂ ವಿರಾಟೇ ನ್ಯವಸಂಶ್ಚ ಪಾಂಡವಾ
ಯಥಾ ಪ್ರತಿಜ್ಞಾಭಿರಮೋಘವಿಕ್ರಮಾಃ ।
ಅಬುದ್ಧಚರ್ಯಾಂ ಚರಿತುಂ ಯಥಾಯಥಂ
ಸಮುದ್ರನೇಮೀಮಭಿಶಾಸ್ತುಮೀಶ್ವರಾಃ ॥೨೩॥

ಅಮೋಘ ವಿಕ್ರಮರಾದ ಪಾಂಡವರು ಹೀಗೆ ತಮ್ಮ ಪ್ರತಿಜ್ಞೆಗೆ ಅನುಸಾರವಾಗಿ ವಿರಾಟನಲ್ಲಿ ವಾಸವನ್ನು ಮಾಡಿದರು. ಯಾರಿಗೂ ತಿಳಿಯದಂತೆ ತಮಗೆ ಯೋಗ್ಯವಾದ ಕಾರ್ಯಗಳನ್ನು ಮಾಡುತ್ತಾ ಸಮುದ್ರನೇಮಿಯಾದ ಭೂಮಿಯನ್ನು ಆಳಲು ಸಮರ್ಥರಾದ ಅವರು ಹೀಗೆ ಅಜ್ಞಾತವಾಸವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ತ್ರಯೋದಶೋಽಧ್ಯಾಯಃ ॥

॥ ವೈರಾಟಪರ್ವಣಿ ಸಹದೇವಪ್ರವೇಶೋ ನಾಮ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಕಥಂ ತ್ವಮಸ್ಮಾಸು ನಿವತ್ಸ್ಯಸೇ ಸದಾ
ವದಸ್ವ ಕಿಂ ಚಾಪಿ ತವೇಹ ವೇತನಮ್ ॥೧೬॥

ಯಾವ ರಾಜನ ದೇಶದಿಂದ ಇಲ್ಲಿಗೆ ಬಂದಿದ್ದೀಯೆ? ಎಂತಹ ವಿಧವಾದ ನೈಪುಣ್ಯವನ್ನು ಸಂಪಾದಿಸಿದ್ದೀಯೆ? ನೀನು ಯಾವ ರೀತಿಯಿಂದ ನಮ್ಮಲ್ಲಿ ವಾಸ ಮಾಡುವಿ? ನಿನಗೆ ವೇತನವಾದರೂ ಏನು? ಎಲ್ಲವನ್ನೂ ನನಗೆ ಹೇಳು.

ಸಹದೇವಃ

ಪಂಚಾನಾಂ ಪಾಂಡುಪುತ್ರಾಣಾಂ ಜ್ಯೇಷ್ಠೋ ರಾಜಾ ಯುಧಿಷ್ಠಿರಃ ।
ತಸ್ಯಾಷ್ಟಶತಸಾಹಸ್ರಾ ಗವಾಂ ವರ್ಗಾಃ ಶತಂ ಶತಮ್ ॥೧೭॥

ಸಹದೇವ– ಐದು ಜನ ಪಾಂಡುಪುತ್ರರಲ್ಲಿ ಯುಧಿಷ್ಠಿರನು ಹಿರಿಯನಾದವನು. ಅವನಿಗೆ ಎಂಟುಲಕ್ಷ ಗೋವುಗಳಿದ್ದ ನೂರು ನೂರು ಗುಂಪುಗಳು ಅನೇಕವಿದ್ದವು.

ಅಪರೇ ದಶಸಾಹಸ್ರಾ ದ್ವಿಸ್ತಾವಂತಸ್ತಥಾ ಪರೇ ।
ತೇಷಾಂ ಗೋಸಂಖ್ಯ ಆಸಂ ವೈ ತಂತ್ರೀಪಾಲೇತಿ ಮಾಂ ವಿದುಃ ॥೧೮॥

ಅಲ್ಲದೇ ಹತ್ತುಸಹಸ್ರ ಸಂಖ್ಯೆಯ ಬೇರೆ ಗುಂಪುಗಳೂ ಇದ್ದವು. ಅದರಂತೆ ಇಪ್ಪತ್ತು ಸಾವಿರ ಸಂಖ್ಯೆಯ ಬೇರೆ ಗುಂಪುಗಳೂ ಇದ್ದವು. ನಾನು ಅವೆಲ್ಲದರ ಗಣನೆಯನ್ನು ಮಾಡುತ್ತಿದ್ದೆ. ನನ್ನನ್ನು ತಂತ್ರೀಪಾಲನೆಂದು ಕರೆಯುತ್ತಾರೆ.

ಭೂತಂ ಭವ್ಯಂ ಭವಿಷ್ಯಚ್ಚ ಯಚ್ಚಾನ್ಯತ್ ಗೋಧನಂ ಕ್ವಚಿತ್ ।
ನ ಮೇಽಸ್ಯವಿದಿತಂ ಕಿಂಚಿತ್ ಸಮಂತಾದ್ ದಶಯೋಜನಮ್ ॥೧೯॥

ಇಲ್ಲಿಂದ ಹತ್ತು ಯೋಜನ ವಿಸ್ತಾರದಲ್ಲಿ ಇರುವ ಮತ್ತೆ ಮುಂದೆ ಬರುವ ಎಲ್ಲ ಗೋಧನಗಳನ್ನು ನಾನು ತಿಳಿದಿದ್ದೇನೆ. ಗೋವುಗಳ ವಿಷಯದಲ್ಲಿ ನನಗೆ ತಿಳಿಯದಿರುವುದು ಏನೂ ಇಲ್ಲ.

ಗುಣಾಃ ಸುವಿದಿತಾ ಹ್ಯಾಸನ್ ಮಯಾ ತಸ್ಯ ಮಹಾತ್ಮನಃ ।
ಅಸಕೃತ್ ಸ ಮಯಾ ದೃಷ್ಟಃ ಕುರುರಾಜೋ ಯುಧಿಷ್ಠಿರಃ ॥೨೦॥

ನಾನು ಮಹಾತ್ಮನಾದ ಯುಧಿಷ್ಠಿರನ ಗುಣಗಳನ್ನು ಚೆನ್ನಾಗಿ ತಿಳಿದಿದ್ದೆ ಮತ್ತು ಆ ಕುರುರಾಜನನ್ನು ಅನೇಕ ಬಾರಿ ನೋಡಿದ್ದೆ. ನಾನು ಎಣಿಸಿದ ಗೋವುಗಳ ಸಂಖ್ಯೆ

ಅಪಾರವಾದದ್ದು ಮತ್ತು ತಿಳಿಯಲು ಅಸಾಧ್ಯವಾದದ್ದು. ನನ್ನ ಗೋವುಗಳೆಲ್ಲವೂ ಬೇಗ ಇಮ್ಮಡಿಗೊಳ್ಳುತ್ತವೆ, ಸಾಧುವಾಗಿರುತ್ತವೆ ಮತ್ತು ಒಳ್ಳೆಯ ಕರುಗಳನ್ನು ಪಡೆಯುತ್ತವೆ.

ಅನೇಕಕ(ನ ಗ)ಣಿತಾ ಗಾವೋ ದುರ್ವಿಜ್ಞೇಯಾ ಮಹತ್ತರಾಃ ।
ಬಹುಕ್ಷೀರತರಾಸ್ತಾ ವೈ ವಹ್ನ್ಯಃ ಸತ್ಯಃ ಸುಪುತ್ರಿಕಾಃ ॥೨೧॥

ಕ್ಷಿಪ್ರಂ ಚ ಗಾವೋ ಬಹುಲಾ ಭವಂತಿ
ನ ತಾಸು ರೋಗೋ ಭವತೀಹ ಕಶ್ಚಿತ್ ।
ಅಜ್ಞಾತಚರ್ಯಾಮವಸನ್ಮಹಾತ್ಮಾ
ಯಥಾ ರವಿಶ್ಚಾಸ್ತಗಿರಿಂ ಪ್ರವಿಷ್ಟಃ ॥೨೨॥

ನನ್ನ ಕೈಯಲ್ಲಿ ಗೋವುಗಳು ಬೇಗ ಸಂಖ್ಯೆಯಲ್ಲಿ ಬೆಳೆಯುತ್ತವೆ. ಅವುಗಳಲ್ಲಿ ಯಾವ ರೋಗವೂ ಉಂಟಾಗುವುದಿಲ್ಲ. ಹೀಗೆ ಪಾಂಡವನಾದ ಸಹದೇವನು ತನಗೆ ಇಷ್ಟವಾದಂತೆ ವಿರಾಟನಿಂದ ಗೋವಲ್ಲವ ಪದವಿಯನ್ನು ಪಡೆದು ಮಹಾತ್ಮನಾದ ಅವನು ರವಿಯು ಅಸ್ತಗಿರಿಯನ್ನು ಪ್ರವೇಶಿಸಿದಂತೆ ಅಜ್ಞಾತವಾಸವನ್ನು ಮಾಡಿದನು.

ಏವಂ ವಿರಾಟೇ ನ್ಯವಸಂಶ್ಚ ಪಾಂಡವಾ
ಯಥಾ ಪ್ರತಿಜ್ಞಾಭಿರಮೋಘವಿಕ್ರಮಾಃ ।
ಅಬುದ್ಧಚರ್ಯಾಂ ಚರಿತುಂ ಯಥಾಯಥಂ
ಸಮುದ್ರನೇಮೀಮಭಿಶಾಸ್ತುಮೀಶ್ವರಾಃ ॥೨೩॥

ಅಮೋಘ ವಿಕ್ರಮರಾದ ಪಾಂಡವರು ಹೀಗೆ ತಮ್ಮ ಪ್ರತಿಜ್ಞೆಗೆ ಅನುಸಾರವಾಗಿ ವಿರಾಟನಲ್ಲಿ ವಾಸವನ್ನು ಮಾಡಿದರು. ಯಾರಿಗೂ ತಿಳಿಯದಂತೆ ತಮಗೆ ಯೋಗ್ಯವಾದ ಕಾರ್ಯಗಳನ್ನು ಮಾಡುತ್ತಾ ಸಮುದ್ರನೇಮಿಯಾದ ಭೂಮಿಯನ್ನು ಆಳಲು ಸಮರ್ಥರಾದ ಅವರು ಹೀಗೆ ಅಜ್ಞಾತವಾಸವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ತ್ರಯೋದಶೋಽಧ್ಯಾಯಃ ॥

॥ ವೈರಾಟಪರ್ವಣಿ ಸಹದೇವಪ್ರವೇಶೋ ನಾಮ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ಸೈರಂಧ್ರಿಯ ವೇಷವನ್ನು ಧರಿಸಿ ದ್ರೌಪದಿಯಿಂದ
ಸುದೇಷ್ಣೆಯ ಗೃಹದಲ್ಲಿ ಪ್ರವೇಶ

ವೈಶಂಪಾಯನಃ

ತತಃ ಕೃಷ್ಣಾ ಸುಕೇಶೀ ಸಾ ದರ್ಶನೀಯಾ ಶುಚಿಸ್ಮಿತಾ ।
ವೇಣೀಕೇಶಾಂತಮುತ್‌ಕ್ಷಿಪ್ಯ ಪೀನವೃತ್ತಪಯೋಧರಾ ॥೧॥

ಜುಗೂಹ ದಕ್ಷಿಣೇ ಪಾರ್ಶ್ವೇ ಮೃದೂನಸಿತಲೋಚನಾ ॥೨॥

ವೈಶಂಪಾಯನ– ಅನಂತರ ಒಳ್ಳೆಯ ಕೇಶವುಳ್ಳವಳೂ, ಸುಂದರಿಯೂ, ಶುಚಿಸ್ಮಿತೆಯೂ, ಪೀನವೃತ್ತಪಯೋಧರೆಯೂ ಆದ ದ್ರೌಪದಿಯು ತನ್ನ ಮೃದುವಾದ ಕೂದಲುಗಳನ್ನು ತಿರುಚಿ ಉಂಡೆ ಮಾಡಿ ಬಲಪಾರ್ಶ್ವದಲ್ಲಿ ಒಳಗೆ ಸಿಕ್ಕಿಸಿಕೊಂಡಳು (ವಾರೆ ದುರುಬಿನಂತೆ ಮಾಡಿಕೊಂಡಳು).

ವಾಸಶ್ಚ ಪರಿಧಾಯೈಕಂ ಕೃಷ್ಣಂ ಸುಮಲಿನಂ ಮಹತ್ ।
ಕೃತ್ವಾ ವೇಷಂ ಚ ಸೈರಂಧ್ರ್ಯಾಃ ಕೃಷ್ಣಾ ವ್ಯಚರದಾರ್ತವತ್ ॥೩॥

ಬಹಳ ಕೊಳೆಯಾದ ಒಂದು ಕೃಷ್ಣ ವಸ್ತ್ರವನ್ನು ಹೊದ್ದುಕೊಂಡು ಸೈರಂಧ್ರಿಯ ವೇಷವನ್ನು ಹಾಕಿಕೊಂಡು ದ್ರೌಪದಿಯು ಆರ್ತಳಂತೆ ತಿರುಗಾಡಿದಳು.

ಪ್ರವಿಷ್ಯಾ ನಗರಂ ಭೀರುಃ ಸೈರಂಧ್ರೀವೇಷಸಂಯುತಾ ।
ತಾಂ ನರಾಃ ಗಚ್ಛಮಾನಾಂ ತು ಸ್ತ್ರಿಯಶ್ಚ ಸಮುಪಾದ್ರವನ್ ॥೪॥

ಅಪೃಚ್ಛಂಸ್ತೇ ಚ ತಾಂ ದೃಷ್ಟ್ವಾ ಕಾ ತ್ವಂ ಕಿಂ ಚ ಚಿಕೀರ್ಷಸಿ ॥೫॥

ಸೈರಂಧ್ರಿಯ ವೇಷವನ್ನು ಹೊಂದಿ ನಗರವನ್ನು ಪ್ರವೇಶಿಸಿ ತಿರುಗಾಡುತ್ತಿದ್ದ ಆ ಭೀರುವನ್ನು ಸ್ತ್ರೀಯರು ಮತ್ತು ಪುರುಷರು ಓಡಿಬಂದು ಸಮೀಪಿಸಿ ನೀನು ಯಾರು? ಮತ್ತು ಏನು ಮಾಡಲು ಇಚ್ಛಿಸುತ್ತೀಯೆ? ಎಂದು ಕೇಳಿದರು.

ಸಾ ತಾನುವಾಚ ರಾಜೇಂದ್ರ ಸೈರಂಧ್ರ್ಯಹಮುಪಾಗತಾ ।
ಕರ್ಮ ಚೇಚ್ಛಾಮಿ ವೈ ಕರ್ತುಂ ತಸ್ಯಾ ಯಾ ಮಾಂ ಭರಿಷ್ಯತಿ ॥೬॥

ರಾಜೇಂದ್ರನೇ, ಅವಳು ಅವರನ್ನು ಕುರಿತು, ನಾನು ಸೈರಂಧ್ರಿಯಾಗಿ ಬಂದಿದ್ದೇನೆ. ಯಾರು ನನ್ನನ್ನು ಪೋಷಿಸುತ್ತಾರೋ ಅವರ ಸೇವೆಯನ್ನು ಮಾಡಲು ಇಚ್ಛಿಸುತ್ತೇನೆ ಎಂದು ಹೇಳಿದಳು.

ತಸ್ಯಾ ವೇಷೇಣ ರೂಪೇಣ ಶ್ಲಕ್ಷ್ಣಯಾ ಚ ಗಿರಾ ತಥಾ ।
ನ ಚ ಶ್ರದ್ದಧತಾಂ ದಾಸೀಮನ್ನಹೇತೋರುಪಸ್ಥಿತಾಮ್ ॥೭॥

ಅವಳ ವೇಷವನ್ನು, ರೂಪವನ್ನು, ಮಧುರವಾದ ಮಾತುಗಳನ್ನು ಕೇಳಿದ ಜನರು ಅವಳನ್ನು ಅನ್ನಕ್ಕೋಸ್ಕರವಾಗಿ ಬಂದ ದಾಸಿ ಎಂದು ಯಾರೂ ನಂಬಲಿಲ್ಲ.

ವಿರಾಟಸ್ಯ ತು ಕೈಕೇಯೀ ಭಾರ್ಯಾ ಪರಮಸಮ್ಮತಾ ।
ಆಲೋಕಯಂತೀ ದದೃಶೇ ಪ್ರಾಸಾದಾದ್ ದ್ರುಪದಾತ್ಮಜಾಮ್ ॥೮॥

ಕೇಕೇಯ ದೇಶದ ರಾಜಕುಮಾರಿಯಾದ, ವಿರಾಟನಿಗೆ ಅತಿಸಮ್ಮತಳಾದ ವಿರಾಟನ ಭಾರ್ಯೆಯು ತನ್ನ ಆರಮನೆಯ ಉಪ್ಪರಿಗೆಯಿಂದ ದ್ರೌಪದಿಯನ್ನು ನೋಡಿದಳು.

ಸಾ ಸಮೀಕ್ಷ್ಯ ತಥಾರೂಪಾಮನಾಥಾಮೇಕವಾಸಸೀಮ್ ।
ಸ್ತ್ರೀಭಿಶ್ಚ ಪುರುಷೈಶ್ಚಾಪಿ ಸರ್ವತಃ ಪರಿವಾರಿತಾಮ್ ॥೯॥

ವಿರಾಟಭಾರ್ಯಾ ತಾಂ ದೇವೀಂ ಕಾರುಣ್ಯಾಜ್ಜಾತಸಂಭ್ರಮಾ ।
ಅಪ್ರೇಷಯತ್ ಸಮೀಪಸ್ಥಾಃ ಸ್ತ್ರಿಯೋ ವೃದ್ಧಾಶ್ಚ ಸಮ್ಮತಾಃ ॥೧೦॥

ಅನಾಥಳಾಗಿ ಒಂದು ವಸ್ತ್ರವನ್ನು ಧರಿಸಿ ಸ್ತ್ರೀಯರಿಂದಲೂ ಮತ್ತು ಪುರುಷರಿಂದಲೂ ಎಲ್ಲ ಕಡೆಗಳಿಂದಲೂ ಸುತ್ತುವರಿಯಲ್ಪಟ್ಟು ಆ ರೀತಿಯಿಂದ ಇದ್ದ ಆ ದೇವಿಯನ್ನು ನೋಡಿ ವಿರಾಟರಾಜನ ಭಾರ್ಯೆಯು ಕರುಣೆಯಿಂದ ಸಂಭ್ರಮ ಉಂಟಾದವಳಾಗಿ ಸಮೀಪದಲ್ಲಿದ್ದ ಸ್ತ್ರೀಯರನ್ನೂ ಮತ್ತು ಸಮ್ಮತರಾದ ವೃದ್ಧರನ್ನೂ ಅವಳ ಬಳಿಗೆ ಕಳುಹಿಸಿದಳು.

ಅನುನೀಯ ತತಃ ಸರ್ವಾ ಆನಯಧ್ವಮಿಹೈವ ತಾಮ್ ।
ಯದಾ ದೃಷ್ಟಾ ಮಯಾ ಸಾಧ್ವೀ ಕಂಪತೇ ಮೇ ಮನಸ್ತದಾ ॥೧೧॥
ತಸ್ಮಾಚ್ಛೀಘ್ರಮಿಹಾನಾಯ್ಯ ದರ್ಶಯಧ್ವಂ ಯದೀಚ್ಛತಿ ॥೧೨॥

ಎಲ್ಲ ಜನರನ್ನು ದೂರ ಸರಿಸಿ ಅವಳನ್ನು ನೀವೆಲ್ಲರೂ ಇಲ್ಲಿಗೇ ಕರೆದುಕೊಂಡು ಬನ್ನಿ. ನಾನು ಆ ಸಾಧ್ವಿಯನ್ನು ನೋಡಿದಾಗ ನನ್ನ ಮನಸ್ಸು ನಡುಗುತ್ತದೆ. ಆದ್ದರಿಂದ ಅವಳು ಬಯಸಿದರೆ ಶೀಘ್ರವಾಗಿ ಇಲ್ಲಿಗೆ ಕರೆದುಕೊಂಡು ಬಂದು ನನಗೆ ತೋರಿಸಿ ಎಂದು ಹೇಳಿದಳು.

ತಾಸ್ತಥೋಕ್ತಾ ಉಪಾಗಮ್ಯ ದ್ರೌಪದೀಂ ಪರಿಸಂಗತಾಃ ।
ಆನೀಯ ಸರ್ವಥಾ ತ್ವೇನಾಮಬ್ರುವನ್ ಮಧುರಾಂ ಗಿರಮ್ ॥೧೩॥

ಸುದೇಷ್ಣೆಯಿಂದ ಹಾಗೆ ಹೇಳಲ್ಪಟ್ಟ ಅವರು ದ್ರೌಪದಿಯ ಸಮೀಪಕ್ಕೆ ಬಂದು ಅವಳನ್ನು ಕುರಿತು ಬಹಳ ಮಧುರವಾದ ಮಾತನ್ನು ಆಡಿದರು.

ಭದ್ರೇ ತ್ವಾಂ ದ್ರಷ್ಟುಮಿಚ್ಛಂತೀ ಸುದೇಷ್ಣಾ ಹರ್ಮ್ಯಭೂತಳೇ ।
ಸ್ಥಿತಾ ತ್ವದರ್ಥಂ ಹಿ ವಯಂ ತ್ವತ್ಸಮೀಪಮುಪಾಗತಾಃ ॥೧೪॥

ಮಂಗಳಸ್ವರೂಪಳೇ, ನಿನ್ನನ್ನು ನೋಡಲು ಬಯಸಿ ಸುದೇಷ್ಣೆಯು ಅರಮನೆಯ ಉಪ್ಪರಿಗೆಯಲ್ಲಿ ಕಾದಿದ್ದಾಳೆ. ನಿನ್ನನ್ನು ಕರೆತರುವ ಸಲುವಾಗಿ ನಾವು ನಿನ್ನ ಬಳಿಗೆ ಬಂದಿದ್ದೇವೆ.

ತ್ವದರ್ಥಂ ಪ್ರೈಷಯಚ್ಚಾಸ್ಮಾನ್ ದ್ರಷ್ಟುಂ ತಾಂ ತ್ವಂ ಯದೀಚ್ಛಸಿ ।
ಆಯಾಹ್ಯಸ್ಮಾಭಿರೇವಾದ್ಯ ರಕ್ಷ್ಯಮಾಣಾ ಯಥೇಪ್ಸಿತಃ ॥೧೫॥

ನಿನ್ನ ಸಲುವಾಗಿ ಅವಳು ನಮ್ಮನ್ನು ಕಳುಹಿಸಿದ್ದಾಳೆ. ನೀನು ಅವಳನ್ನು ನೋಡಲು ಬಯಸುವುದಾದರೆ ನಮ್ಮ ಜೊತೆಯಲ್ಲಿ ಈಗಲೇ ಪೂರ್ಣರಕ್ಷಣೆಯುಳ್ಳವಳಾಗಿ ನಿನ್ನ ಇಷ್ಟದಂತೆ ಬಾ.

ವೈಶಂಪಾಯನಃ

ತಚ್ಛ್ರುತ್ವಾ ದ್ರೌಪದೀ ತಾಸಾಂ ವಚನಂ ವಾಕ್ಯಕೋವಿದಾ ।
ಈಪ್ಸಿತಾರ್ಥಾತಿಲಾಭೇನ ಹೃಷ್ಟಾ ಯಾತಾ ಗೃಹೋತ್ತಮಮ್ ॥೧೬॥

ವೈಶಂಪಾಯನ– ಅವರ ಮಾತನ್ನು ಕೇಳಿದ ವಾಕ್ಯವಿಶಾರದೆಯಾದ ದ್ರೌಪದಿಯು ಅಭೀಷ್ಟವಾದ ಅರ್ಥವು ದೊರೆತುದರ ಸಂತೋಷದಿಂದ ಶ್ರೇಷ್ಠವಾದ ಅರಮನೆಗೆ ಹೋದಳು.

ಅಥ ಸಾ ಛಿನ್ನಪಟ್ಟಾಭ್ಯಾಂ ವಲ್ಕಲಾಜಿನಸಂವೃತಾ ।
ರಾಜವೇಶ್ಮ ಸಮಾಗಮ್ಯ ಯತ್ರಾಗ್ನ್ಯಮಹಿಷೀ ಸ್ಥಿತಾ ॥೧೭॥

ಸುದೇಷ್ಣಾಮಗಮತ್ ಕೃಷ್ಣಾ ರಾಜಭಾರ್ಯಾಂ ಯಶಸ್ವಿನೀಮ್ ॥೧೮॥

ಮೊದಲು ಖಂಡಿಸದ ರೇಷ್ಮೆ ವಸ್ತ್ರಗಳನ್ನು ಉಡುತ್ತಿದ್ದ ಅವಳು ಎರಡು ತುಂಡು ರೇಷ್ಮೆಯ ಬಟ್ಟೆಯನ್ನು ಧರಿಸಿ, ನಾರುಮಡಿ ಮತ್ತು ಕೃಷ್ಣಾಜಿನದಿಂದ ಸಂಭೃತಳಾಗಿ ಅರಮನೆಗೆ ಬಂದು ಎಲ್ಲಿ ಪಟ್ಟದ ರಾಣಿಯಾದ ಸುದೇಷ್ಣೆ ಇದ್ದಳೋ ಆ ಪ್ರದೇಶಕ್ಕೆ ಯಶಸ್ವಿನಿಯಾದ ದ್ರೌಪದಿಯು ಹೋದಳು.

ಕೃಷ್ಣಾನ್ ಕೇಶಾನ್ ಮೃದೂನ್ ದೀರ್ಘಾನ್ ಸಮುದ್ಗ್ರಥ್ಯಾಸಿತೇಕ್ಷಣಾ ।
ಕುಂಚಿತಾಗ್ರಾನ್ ಸುಸೂಕ್ಷ್ಮಾಗ್ರಾನ್ ದರ್ಶನೀಯಾನ್ ನಿಬದ್ಧ್ಯ ಚ ॥

ಜುಗೂಹ ದಕ್ಷಿಣೇ ಪಾರ್ಶ್ವೇ ಮೃದೂನಸಿತಲೋಚನಾ ॥೧೯॥

ತನ್ನ ಕಪ್ಪಾದ, ಮೃದುವಾದ, ತೆಳುವಾದ ಮತ್ತು ಸುಂದರವಾದ ಕೇಶರಾಶಿಯನ್ನು ವಾರೆತುರುಬಿನಂತೆ ಗಂಟುಮಾಡಿ ಕೃಷ್ಣಲೋಚನೆಯಾದ ಅವಳು ಬಲಗಡೆಯ ಪಾರ್ಶ್ವದಲ್ಲಿ ಒಳಗೆ ಸೇರಿಸಿದಳು.

ಸಾ ಪ್ರವಿಶ್ಯ ವಿರಾಟಸ್ಯ ದ್ರೌಪದ್ಯಂತಃಪುರಂ ಶುಭಾ ।
ಹ್ರೀನಿಷೇವಾನ್ವಿತಾ ಬಾಲಾ ಕಂಪಮಾನಾ ಲತೇವ ಸಾ ॥೨೧॥

ನಾಚಿಕೆ ಸ್ವಭಾವದವಳಾದ, ಬಾಲೆಯಾದ ಮತ್ತು ಶುಭಳಾದ ದ್ರೌಪದಿಯು ವಿರಾಟನ ಅಂತಃಪುರವನ್ನು ಪ್ರವೇಶಿಸಿ ನಡುಗುವ ಬಳ್ಳಿಯಂತೆ ಇದ್ದಳು.

ಅಭಿಗಮ್ಯ ಚ ಸುಶ್ರೋಣೀ ಸರ್ವಲಕ್ಷಣಸಂಯುತಾ ।
ದದರ್ಶಾವಸ್ಥಿತಾಂ ಹೈಮೇ ಪೀಠೇ ರತ್ನಪರಿಚ್ಛದೇ ॥೨೨॥

ರಕ್ತಸೂಕ್ಷ್ಮಾಂಶುಕಧರಾಂ ಮೇಘೇ ಸೌದಾಮಿನೀಮಿವ ।
ನಾನಾವರ್ಣವಿಚಿತ್ರಾಂ ಚ ಸರ್ವಾಭರಣಭೂಷಿತಾಮ್ ॥೨೩॥

ಸುಭ್ರೂಂ ಸುಕೇಶೀಂ ಸುಶ್ರೋಣೀಂ ಕುಬ್ಜವಾಮನಮಧ್ಯಗಾಮ್ ।
ಬಹುಪುಷ್ಪೋಪಕೀರ್ಣಾಯಾಂ ಭೂಮ್ಯಾಂ ವೇದೀಮಿವಾಧ್ವರೇ ॥೨೪॥

ಸುದೇಷ್ಣಾಂ ರಾಜಮಹಿಷೀಂ ಸರ್ವಾಲಂಕಾರಸಂಯುತಾಮ್ ॥೨೫॥

ಎಲ್ಲ ಲಕ್ಷಣಗಳಿಂದ ಕೂಡಿದ ಸುಶ್ರೋಣಿಯಾದ ಅವಳು ಎದುರಿಗೆ ಬಂದು ರತ್ನದ ಹಾಸಿಗೆ ಹಾಸಿದ್ದ ಸುವರ್ಣಪೀಠದಲ್ಲಿ ಕುಳಿತಿದ್ದ, ಕೆಂಪಾದ ಸೂಕ್ಷ್ಮವಸ್ತ್ರವನ್ನು ಧರಿಸಿದ್ದ ಮೇಘಗಳ ಮಧ್ಯದಲ್ಲಿ ಮಿಂಚಿನಂತೆ ಹೊಳೆಯುತ್ತಿದ್ದ, ಅನೇಕ ವರ್ಣಗಳಿಂದ ಕೂಡಿದ್ದ ಆಭರಣದಿಂದ ಅಲಂಕೃತಳಾದ, ಒಳ್ಳೆಯ ಹುಬ್ಬು ಕೇಶ ಮತ್ತು ಶ್ರೋಣ ಪ್ರದೇಶವುಳ್ಳ, ಕುಬ್ಜರ ಮತ್ತು ವಾಮನರ ಮಧ್ಯದಲ್ಲಿದ್ದ ಯಜ್ಞದ ವೇದಿಕೆಯಂತೆ ಅನೇಕ ಪುಷ್ಪಗಳನ್ನು ಹರಡಿದ ಭೂಮಿಯ ಮೇಲೆ ಪೀಠದಲ್ಲಿ ಕುಳಿತಿದ್ದ ಸರ್ವಾಲಂಕಾರಗಳಿಂದ ಅಲಂಕೃತಳಾಗಿದ್ದ ರಾಜಮಹಿಷಿಯಾದ ಸುದೇಷ್ಣೆಯನ್ನು ನೋಡಿದಳು.

ತಾಃ ಸರ್ವಾ ದ್ರೌಪದೀಂ ದೃಷ್ಟ್ವಾ ಸಂತಪ್ತಾಃ ಪರಮಾಂಗನಾಃ ।
ತ್ವರಿತಾಶ್ಚೋಪತಸ್ಥುಸ್ತಾಂ ಸಹಸೋತ್ಥಾಯ ಚಾಸನಾತ್ ॥೨೬॥

ಆ ಎಲ್ಲಾ ಶ್ರೇಷ್ಠ ವನಿತೆಯರೂ ದ್ರೌಪದಿಯನ್ನು ನೋಡಿ ಸಂತಾಪಗೊಂಡು ತಮ್ಮ ಆಸನಗಳಿಂದ ಬೇಗ ಎದ್ದು ಶೀಘ್ರವಾಗಿ ಅವಳ ಸಮೀಪಕ್ಕೆ ಬಂದರು.

ನಿರೀಕ್ಷಮಾಣಾಸ್ತಾಃ ಸರ್ವಾಃ ಶಚೀಂ ದೇವೀಮಿವಾಗತಾಮ್ ।
ಗೂಢಗುಲ್ಫಾಂ ವರಾರೋಹಾಂ ಕೃಷ್ಣಾಂ ತಾಮ್ರಾಯತೇಕ್ಷಣಾಮ್ ॥೨೭॥

ಅತಿಸರ್ವಾನವದ್ಯಾಂಗೀಂ ತನುಗಾತ್ರೀಂ ಸುಮಧ್ಯಮಾಮ್ ॥೨೮॥

ಅವರೆಲ್ಲರೂ ಶಚಿದೇವಿಯಂತೆ ಬಂದಿದ್ದ ಗೂಢವಾದ ಮಣಿಗಂಟುಳ್ಳ, ಒಳ್ಳೆಯ ತೊಡೆಗಳನ್ನುಳ್ಳ ಕೆಂಪಾದ ಕಣ್ಣುಳ್ಳ ಸರ್ವಥಾ ದೋಷರಹಿತವಾದ ಅವಯವಗಳಿಂದ ಕೂಡಿದ ಕೃಶಳಾದಂತಹ ಒಳ್ಳೆಯ ಮಧ್ಯಪ್ರದೇಶವನ್ನು ಉಳ್ಳಂತಹ ದ್ರೌಪದಿಯನ್ನು ನೋಡಿದರು.

ನಾತಿಹ್ರಸ್ವಾಂ ನ ಮಹತೀಂ ಜಾತಾಂ ಬಹುತೃಣೇ ವನೇ ।
ಮೃಗರೋಹೀಮಿವಾನಿಂದ್ಯಾಂ ಸುಕೇಶೀಂ ಮೃಗಲೋಚನಾಮ್ ॥೨೯॥

ಮೃಗರೋಹೀಮಿವಾನೀತಾಂ ಯೂಥಭ್ರಷ್ಟಾಮಿವ ದ್ವಿಪಾಮ್ ।
ಲಕ್ಷ್ಮೀಮಿವ ವಿಶಾಲಾಕ್ಷೀಂ ವಿದ್ಯಾಮಿವ ಯಶಸ್ವಿನೀಮ್ ॥೩೦॥

ಬಹಳ ಕುಬ್ಜಳಲ್ಲದ, ಬಹಳ ಸ್ಥೂಲಳಲ್ಲದ, ಬಹಳ ಹುಲ್ಲುಗಳಿರುವ ಕಾಡಿನಲ್ಲಿ ಜಿಂಕೆಯ ಮರಿಯಂತೆ ಬೆಳೆದ, ಅನಿಂದಿತಳಾದ, ಒಳ್ಳೆಯ ಕೇಶವನ್ನು ಹೊಂದಿದ, ಮೃಗಲೋಚನೆಯಾದ, ಗುಂಪಿನಿಂದ ಚದುರಿ ಎಳೆದು ತರಲ್ಪಟ್ಟ ಜಿಂಕೆಯ ಮರಿಯಂತೆ ಹೆಣ್ಣಾನೆಯಂತೆ ಇದ್ದಂತಹ, ವಿಶಾಲಾಕ್ಷಿಯಾದ ಯಶಸ್ವಿನಿಯಾದ ವಿದ್ಯಾಸ್ವರೂಪಳಂತಿದ್ದ ಲಕ್ಷ್ಮಿಯಂತಿದ್ದ ಅವಳನ್ನು ನೋಡಿದರು (ದ್ರೌಪದಿಯನ್ನು ನೋಡಿದರು).

ರೋಹಿಣೀಮಿವ ತಾರಾಣಾಂ ದೀಪ್ತಾಮಗ್ನಿಶಿಖಾಮಿವ ।
ಪಾರ್ವತೀಮಿವ ರುದ್ರಾಣೀಂ ವೇಲಾಮಿವ ಮಹೋದಧೇಃ ॥೩೧॥

ಸುಲಭಾಮಿವ ನಾಗೀನಾಂ ಮೃಗೀಣಾಮಿವ ಕಿನ್ನರೀಮ್ ।
ಗಂಗಾಮಿವ ವಿಶುದ್ಧಾಂಗೀಂ ಶಾರದೀಮಿವ ಶಾರ್ವರೀಮ್ ॥೩೨॥

ನಕ್ಷತ್ರಗಳಲ್ಲಿ ರೋಹಿಣಿಯಂತೆ, ಜ್ವಲಿಸುವ ಅಗ್ನಿಶಿಖೆಯಂತೆ, ರುದ್ರನ ಪತ್ನಿಯಾದ ಪಾರ್ವತಿಯಂತೆ, ಸಾಗರದ ತೀರವಿದ್ದಂತೆ, ನಾಗಿಗಳಲ್ಲಿ ಸುಲಭಳಿದ್ದಂತೆ, ಮೃಗಗಳಲ್ಲಿ ಕಿನ್ನರಿಯಂತೆ, ವಿಶುದ್ಧಾಂಗಳಾದ, ಗಂಗೆಯಂತೆ, ಶರತ್ಕಾಲದ ರಾತ್ರಿಯಂತೆ (ಇದ್ದ ದ್ರೌಪದಿಯನ್ನು ನೋಡಿದರು).

ತಾಮಚಿಂತ್ಯತಮಾಂ ಲೋಕೇ ಇಲಾಮಿವ ಯಶಸ್ವಿನೀಮ್ ।
ಸಾವಿತ್ರೀಮಿವ ದುರ್ಧರ್ಷಾಂ ಬ್ರಾಹ್ಮ್ಯಾ ಲಕ್ಷ್ಮ್ಯಾ ಸಮನ್ವಿತಾಮ್ ॥

ಸುದೇಷ್ಣಾ ಪರ್ಯಪೃಚ್ಛತ್ ತಾಂ ವಿಸ್ಮಯೋತ್ಫುಲ್ಲಲೋಚನಾ ॥೩೪॥

ಲೋಕದಲ್ಲಿ ಬುದ್ಧಿಗೆ ನಿಲುಕದ ಸೌಂದರ್ಯವುಳ್ಳ, ಯಶಸ್ವಿನಿಯಾದ ಇಲಾದೇವಿಯಂತಿದ್ದ, ದುರ್ಧರ್ಷಳಾದ, ಸಾವಿತ್ರಿಯಂತೆ ಬ್ರಾಹ್ಮತೇಜಸ್ಸಿನಿಂದ ಶೋಭಿಸುತ್ತಿದ್ದ, ಅವಳನ್ನು ನೋಡಿ ಆಶ್ಚರ್ಯದಿಂದ ಅರಳಿದ ಕಣ್ಣುಳ್ಳವಳಾಗಿ ಸುದೇಷ್ಣೆಯು ಪ್ರಶ್ನೆ ಮಾಡಿದಳು.

ಕಾ ತ್ವಂ ಸರ್ವಾನವದ್ಯಾಂಗಿ ಕುತೋಽಸಿ ತ್ವಮಿಹಾಗತಾ ।
ಕಸ್ಯ ವಾ ತ್ವಂ ವಿಶಾಲಾಕ್ಷಿ ಕಿಂ ವಾ ತೇ ಕರವಾಣ್ಯಹಮ್ ॥೩೫॥

ಗೂಢಗುಲ್ಫಾ ಸಮಾನೋರೂಃ ತ್ರಿಗಂಭೀರಾ ಷಡುನ್ನತಾ ।
ರಕ್ತಾ ಪಂಚಸು ರಕ್ತೇಷು ಹಂಸಗದ್ಗದಭಾಷಿಣೀ ॥೩೬॥

ಅನವದ್ಯಾಂಗಿಯೇ ನೀನು ಯಾರು? ಎಲ್ಲಿಂದ ಇಲ್ಲಿಗೆ ಬಂದಿದ್ದೀಯೆ? ವಿಶಾಲಾಕ್ಷಿಯೇ, ನೀನು ಯಾರಿಗೆ ಸೇರಿದವಳು? (ಯಾರ ಪತ್ನಿ?) ನಾನು ನಿನಗೆ ಏನು ಮಾಡಲಿ? ನೀನು ನಾಭಿ ಮತ್ತು ಎರಡು ಶ್ರೋತ್ರಗಳಲ್ಲಿ ಗಂಭೀರವಾಗಿಯೂ, ಎರಡು ಕಪೋಲಗಳು, ಕುಚಗಳು, ಶ್ರೋಣಿಪ್ರದೇಶ ಮತ್ತು ಅಂಗುಲಿಗಳ ತುದಿ ಇವುಗಳಲ್ಲಿ ಉನ್ನತವಾಗಿಯೂ ಕೆಳತುಟಿ, ಅಂಗೈಗಳು, ಪಾದತಳಗಳು ಈ ಐದು ಪ್ರದೇಶಗಳಲ್ಲಿ ಕೆಂಪಾಗಿಯೂ ಇರುವ ದೇಹವನ್ನು ಧರಿಸಿದವಳಾಗಿ ಹಂಸದಂತೆ ಗದ್ಗದವಾದ ಮಾತುಗಳನ್ನು ಆಡುತ್ತಿದ್ದೀಯೆ.

ಸುಕೇಶೀ ಸುಸ್ವರಾ ಶ್ಯಾಮಾ ಪೀನಶ್ರೋಣಿಪಯೋಧರಾ ।
ಆರಾಲಪಕ್ಷ್ಮನಯನಾ ಬಿಂಬೋಷ್ಠೀ ತನುಮಧ್ಯಮಾ ॥೩೭॥

ಕಂಬುಗ್ರೀವಾ ಗೂಢಸಿರಾ ಪೂರ್ಣಚಂದ್ರನಿಭಾನನಾ ।
ದಾನವೀ ಕಿನ್ನರೀ ವಾ ತ್ವಂ ಗಂಧರ್ವೀ ವನದೇವತಾ ॥೩೮॥

ಒಳ್ಳೆಯ ಕೇಶಗಳನ್ನು, ಒಳ್ಳೆಯ ಸ್ವರವನ್ನು ಹೊಂದಿ ಶ್ಯಾಮವರ್ಣದವಳೂ ಆಗಿ ಪೀನವಾದ ಶ್ರೋಣಿ ಮತ್ತು ಪಯೋಧರವನ್ನು ಹೊಂದಿ, ಬಾಗಿದ ಹುಬ್ಬುಗಳನ್ನುಳ್ಳ ಕಣ್ಣನ್ನೂ ಬಿಂಬಫಲದಂತಹ ತುಟಿಯನ್ನೂ, ಕೃಶವಾದ ಮಧ್ಯವನ್ನೂ, ಶಂಖದಂತಿರುವ ಕಂಠವನ್ನೂ, ಚರ್ಮದೊಳಗೆ ಮುಳುಗಿರುವ ಧಮನಿಗಳನ್ನೂ, ಪೂರ್ಣಚಂದ್ರನನ್ನು ಹೋಲುವ ಮುಖವನ್ನೂ ಹೊಂದಿದ್ದೀಯೆ. ನೀನು ದಾನವಿಯೇ? ಅಥವಾ ಕಿನ್ನರಿಯೇ? ಅಥವಾ ಗಂಧರ್ವಿಯೇ? ಅಥವಾ ವನದೇವತೆಯೇ?

ಅಪ್ಸರಾ ವಾऽಸಿ ನಾಗೀ ವಾ ತಾರಾ ವಾ ತ್ವಂ ವಿಲಾಸಿನೀ ।
ಅಲಂಬುಸಾ ಮಿಶ್ರಕೇಶೀ ಪುಂಡರೀಕಾऽಕ್ಷಮಾಲಿನೀ ॥೩೯॥

ತೇನ ತೇನೈವ ಸಂಪನ್ನಾ ಕಾಶ್ಮೀರೀವ ತುರಂಗಮಾ ।
ಇಂದ್ರಾಣೀ ತ್ವಥ ರುದ್ರಾಣೀ ಸ್ವಾಹಾ ವಾऽಪ್ಯಥವಾ ರತಿಃ ॥೪೦॥

ದೇವಿ ದೇವೀಷು ವಿಖ್ಯಾತಾ ಬ್ರೂಹಿ ಕಾ ತ್ವಮಿಹಾಗತಾ ।
ತವ ಹ್ಯನುಪಮಂ ರೂಪಂ ಭೂಷಣೈರಪಿ ವರ್ಜಿತಮ್ ॥೪೧॥

ಅಥವಾ ಅಪ್ಸರೆಯೇ? ಅಥವಾ ಸರ್ಪಕನ್ಯೆಯೇ? ಅಥವಾ ತಾರೆಯೇ? ಅಥವಾ ವಿಲಾಸಿನಿಯೇ? ಅಥವಾ ಅಲಂಬುಸಾ, ಮಿಶ್ರಕೇಶೀ, ಪುಂಡರೀಕಾ, ಅಕ್ಷಮಾಲಿನೀ ಈ ಅಪ್ಸರೆಯರಲ್ಲಿ ಒಬ್ಬಳೇ? ಕಾಶ್ಮೀರದೇಶದ ಹೆಣ್ಣುಕುದುರೆಯಂತೆ ಎಲ್ಲ ಲಕ್ಷಣದಿಂದಲೂ ಸಂಪನ್ನಳಾಗಿರುವ ನೀನು ಇಂದ್ರನ ಪತ್ನಿಯೇ? ರುದ್ರನ ಪತ್ನಿಯೇ? ಸ್ವಾಹಾ ದೇವಿಯೇ? ಅಥವಾ ರತಿಯೇ? ಎಲೌ ದೇವಿಯೇ, ದೇವತೆಗಳಲ್ಲಿ ವಿಖ್ಯಾತಳಾದ ನೀನು ಯಾರು? ಮತ್ತು ಏಕೆ ಇಲ್ಲಿ ಬಂದಿದ್ದೀಯೆ? ಎಂದು ಹೇಳು. ನಿನ್ನ ಈ ರೂಪವು ಅಲಂಕಾರವಿಲ್ಲದಿದ್ದರೂ ಅಸದೃಶವಾಗಿ ಕಂಗೊಳಿಸುತ್ತಿದೆ.

ತ್ವಾಂ ಸೃಷ್ಟ್ವೋತ್ಪರತಂ ಮನ್ಯೇ ಲೋಕಕರ್ತಾರಮೀಶ್ವರಮ್ ।
ನ ತೃಪ್ಯಂತಿ ಸ್ತ್ರಿಯೋ ದೃಷ್ಟ್ವಾ ಕಾ ನ ಪುಂಸಾಂ ರತಿರ್ಭವೇತ್ ॥೪೨॥

ನಿನ್ನನ್ನು ಸೃಷ್ಟಿ ಮಾಡಿ ಲೋಕಸೃಷ್ಟಿ ಮಾಡುವ ಈಶ್ವರನು ಸೃಷ್ಟಿಯನ್ನು ನಿಲ್ಲಿಸಿ ಧನ್ಯನಾಗಿದ್ದಾನೆಂದು ನಾನು ಭಾವಿಸುತ್ತೇನೆ. ಸ್ತ್ರೀಯರಿಗೂ ಸಹ ನಿನ್ನನ್ನು ನೋಡಿ ತೃಪ್ತಿಯುಂಟಾಗುತ್ತಿಲ್ಲ. ನಿನ್ನ ದರ್ಶನದಿಂದ ಹೇಗೆ ಪುರುಷರಿಗೆ ಸುಖವಾಗದೇ ಇದ್ದೀತು?

ದ್ರೌಪದೀ

ನಾಸ್ಮಿ ದೇವೀ ನ ಗಂಧರ್ವೀ ನ ಯಕ್ಷೀ ನ ಚ ಕಿನ್ನರೀ ।
ಸೈರಂಧ್ರೀ ನಾಮ ಮೇ ಜಾತಿರ್ವನ್ಯಮೂಲಫಲಾಶನಾ ॥೪೩॥

ದ್ರೌಪದೀ– ನಾನು ದೇವತೆಯಲ್ಲ; ಗಂಧರ್ವಿಯಲ್ಲ; ಯಕ್ಷಿಯಲ್ಲ; ಕಿನ್ನರಿಯಲ್ಲ. ನಾನು ಸೈರಂಧ್ರೀ ಜಾತಿಗೆ ಸೇರಿದವಳು. ಕಾಡಿನಲ್ಲಿ ದೊರೆಯುವ ಗೆಡ್ಡೆ ಮತ್ತು ಫಲಗಳನ್ನು ಆಹಾರವಾಗಿ ಸೇವಿಸುವವಳು.

ಪತೀನಾಂ ಪ್ರೇಕ್ಷಮಾಣಾನಾಂ ಕಸ್ಮಿಂಶ್ಚಿತ್ ಕಾರಣಾಂತರೇ ।
ಕೇಶಪಕ್ಷೇ ಪರಾಮೃಷ್ಟಾ ಸಾऽಹಂ ತ್ರಸ್ತಾ ವನಂ ಗತಾ ॥೪೪॥

ಯಾವುದೋ ಒಂದು ಸಂದರ್ಭದಲ್ಲಿ ನನ್ನ ಪತಿಗಳು ನೋಡುತ್ತಿರುವಂತೆಯೇ ನಾನು ನನ್ನ ಕೇಶಗಳಲ್ಲಿ ಎಳೆದಾಡಲ್ಪಟ್ಟೆ. ಅದರಿಂದ ಹೆದರಿ ಕಾಡಿಗೆ ಬಂದೆನು.

ತತ್ರ ದ್ವಾದಶವರ್ಷಾಣಿ ವನ್ಯಮೂಲಫಲಾಶನಾ ।
ಚರಾಮ್ಯನಿಲಯಾ ಸುಭ್ರು ಸಾ ತವಾಂತಿಕಮಾಗತಾ ॥೪೫॥

ಅಲ್ಲಿ ಕಾಡಿನಲ್ಲಿ ನಾನು ಗೆಡ್ಡೆಗೆಣಸುಗಳು ಮತ್ತು ಫಲಗಳನ್ನು ಆಹಾರವಾಗಿ ಸೇವಿಸಿ ಹನ್ನೆರಡು ವರ್ಷವನ್ನು ಕಳೆದೆ. ಎಲೌ ಸುಂದರಿಯೇ, ನಾನು ಮನೆ ಇಲ್ಲದೆ ತಿರುಗಾಡುತ್ತಾ ಈಗ ನಿನ್ನ ಸಮೀಪಕ್ಕೆ ಬಂದಿದ್ದೇನೆ.

ಜಾನಾಮಿ ಕೇಶಾನ್ ಗ್ರಥಿತುಂ ಜಾನಾಮಿ ಗ್ರಥಿತುಂ ಮಣೀನ್ ।
ಮಲ್ಲಿಕೋತ್ಪಲಪದ್ಮಾನಾಂ ಜಾನಾಮಿ ಗ್ರಥಿತುಂ ಸ್ರಜಃ ॥೪೬॥

ಸಿಂಧುವಾರಕಜಾತೀನಾಂ ರಚಯಾಮ್ಯವತಂಸಕಾನ್ ॥೪೭॥

ನನಗೆ ಹೆರಳನ್ನು ಹಾಕಲು ಬರುತ್ತದೆ. ಮಣಿಗಳಿಂದ ಹಾರವನ್ನು ಮಾಡಲು ಬರುತ್ತದೆ. ಮಲ್ಲಿಗೆ, ಉತ್ಪಲ ಮತ್ತು ಪದ್ಮಗಳಿಂದ ಪುಷ್ಪಮಾಲೆಯನ್ನು ಕಟ್ಟುವುದನ್ನು ನಾನು ತಿಳಿದಿದ್ದೇನೆ. ಸಿಂಧುವಾರ ಮೊದಲಾದ ಪುಷ್ಪಗಳ ಪುಷ್ಪಗುಚ್ಛವನ್ನೂ ಸಹ ನಾನು ಮಾಡುತ್ತೇನೆ.

ಪತ್ರಂ ಮೃಗಾಂಗಮಗರುಂ ಪಿಂಕ್ಷೇ ಚ ಹರಿಚಂದನಮ್ ।
ಪ್ರಥಯಿಷ್ಯಾಮಿ ಚಿತ್ರಾಶ್ಚ ಸ್ರಜಃ ಪರಮಶೋಭನಾಃ ॥೪೮॥

ಪತ್ರ (ಪತ್ರೆ), ಕಸ್ತೂರಿ, ಅಗರು, ಶ್ರೀಗಂಧ ಇವುಗಳನ್ನು ತೇಯುತ್ತೇನೆ. ವಿಚಿತ್ರ ಮತ್ತು ಬಹಳ ಸುಂದರವಾದ ಮಾಲೆಗಳನ್ನು ಹೆಣೆಯುತ್ತೇನೆ.

ಆರಾಧಯಂ ಸತ್ಯಭಾಮಾಂ ಕೃಷ್ಣಸ್ಯ ಮಹಿಷೀಂ ಪ್ರಿಯಾಮ್ ।
ಕೃಷ್ಣಾಂ ಚ ಭಾರ್ಯಾಂ ಪಾರ್ಥಾನಾಂ ನಾರೀಣಾಮುತ್ತಮಾಂ ತಥಾ ॥

ನಾನು ಹಿಂದೆ ಕೃಷ್ಣನ ಪ್ರಿಯ ಮಹಿಷಿಯಾದ ಸತ್ಯಭಾಮೆಯನ್ನೂ, ಪಾಂಡವರ ಪತ್ನಿಯಾದ ನಾರಿಯರಲ್ಲಿ ಶ್ರೇಷ್ಠಳಾದ ದ್ರೌಪದಿಯನ್ನೂ ಆರಾಧಿಸಿದ್ದೇನೆ.

ತಯಾಽಸ್ಮಿ ಸುಭೃತಾ ಚಾಹಮಿಷ್ಟಲಾಭೇನ ತೋಷಿತಾ ।
ಮಾಲಿನೀತಿ ಚ ಮೇ ನಾಮ ಸ್ವಯಂ ದೇವೀ ಚಕಾರ ಹ ॥೫೦॥

ಕೃಷ್ಣಾ ಕಮಲಪತ್ರಾಕ್ಷೀ ಸಾ ಮೇ ಪ್ರಾಣಸಮಾ ಸಖೀ ॥೫೧॥

ನಾನು ಅವರಿಬ್ಬರಿಂದಲೂ ನನ್ನ ಅಭೀಷ್ಟಗಳನ್ನು ಪೂರೈಸಿ ಚೆನ್ನಾಗಿ ಪೂಜಿಸಲ್ಪಟ್ಟು ಸಂತೋಷಪಡಿಸಲ್ಪಟ್ಟಿದ್ದೇನೆ. ಸತ್ಯಭಾಮಾದೇವಿಯು ಸ್ವತಃ ನನಗೆ ಮಾಲಿನೀ ಎಂದು ಹೆಸರಿಟ್ಟಳು. ಕಮಲಾಕ್ಷಿಯಾದ ದ್ರೌಪದಿಯು ನನಗೆ ಪ್ರಾಣಸಮಳಾದ ಸ್ನೇಹಿತೆ.

ನ ಚಾಹಂ ಚಿರಮಿಚ್ಛಾಮಿ ಕ್ವಚಿದ್ ವಸ್ತುಂ ಶುಭಾನನೇ ।
ವ್ರತಂ ಕಿಲೈತದಸ್ಮಾಕಂ ಕುಲಧರ್ಮೋಯಮೀದೃಶಃ ॥೫೨॥

ಯೋ ಹ್ಯಸ್ಮಾಕಂ ತು ಹರೇದ್ ದ್ರವ್ಯಂ ದೇಶಂ ವಸನಮೇವ ವಾ ।
ನ ಕ್ರೋದ್ಧವ್ಯಂ ಕಿಲಾಸ್ಮಾಭಿರಸ್ಮದ್ಗುರುರಮರ್ಷಣಃ ॥೫೩॥

ಎಲೌ ಶುಭಾನನೆಯೇ, ನಾನು ಬಹಳ ಕಾಲ ಇಲ್ಲಿ ವಾಸಿಸಲು ಇಷ್ಟಪಡುವುದಿಲ್ಲ. ಇದು ನಮ್ಮ ವ್ರತ. ನಮ್ಮ ಕುಲಧರ್ಮವು ಹೀಗೆಯೇ ಇರುತ್ತದೆ. ಯಾರು ನಮ್ಮ ಧರ್ಮವನ್ನಾಗಲೀ, ದೇಶವನ್ನಾಗಲೀ ಅಥವಾ ವಸ್ತ್ರವನ್ನಾಗಲೀ ಅಪಹರಿಸುತ್ತಾರೋ ಅವರ ಮೇಲೆ ಕೋಪವನ್ನು ಮಾಡಬಾರದು. ಏಕೆಂದರೆ ನನ್ನ ಪತಿಯು ಶಾಂತಸ್ವಭಾವದವನು (ಮತ್ತು ಇದು ನಮ್ಮ ಕುಲಧರ್ಮ).

ಸಾಽಹಂ ವನಾನಿ ದುರ್ಗಾಣಿ ತೀರ್ಥಾನಿ ಚ ಸರಾಂಸಿ ಚ ।
ಶೈಲಾಂಶ್ಚ ವಿವಿಧಾನ್ ರಮ್ಯಾನ್ ಸರಿತಶ್ಚ ಸಮುದ್ರಗಾಃ ॥೫೪॥

ಭರ್ತೃಶೋಕಪರೀತಾಂಗೀ ಭರ್ತುಶ್ಚ ಬ್ರಹ್ಮಚಾರಿಣೇ ।
ವಿಚರಾಮಿ ಮಹೀಂ ದುರ್ಗಾಂ ಯತ್ರಸಾಯಂನಿವೇಶನಾ ॥೫೫॥

ಅಂತಹ ನಾನು ವನಗಳನ್ನೂ, ದುರ್ಗಗಳನ್ನೂ, ತೀರ್ಥಗಳನ್ನೂ, ಸರೋವರಗಳನ್ನೂ, ಪರ್ವತಗಳನ್ನೂ, ಸುಂದರವಾದ ಸಮುದ್ರವನ್ನು ಸೇರುವ ಅನೇಕ ನದಿಗಳನ್ನೂ ಸಮೀಪಿಸಿ ಸಂಚರಿಸುತ್ತಾ ಪತಿಯ ಶೋಕದಿಂದ ಮರುಗುತ್ತಾ ಪತಿಯ ನಿಮಿತ್ತ ಬ್ರಹ್ಮಚಾರಿಣಿಯಾಗಿ ಸಾಯಂಕಾಲದಲ್ಲಿ ಎಲ್ಲಿರುವೆನೋ ಅಲ್ಲಿಯೇ ಬಿಡಾರವನ್ನು ಮಾಡುವವಳಾಗಿ ಭೂಮಿಯಲ್ಲಿ ದುರ್ಗಗಳಲ್ಲಿ ಸಂಚರಿಸುತ್ತಿದ್ದೇನೆ.

ವೀರಪತ್ನೀ ಯಥಾ ದೇವೀ ಚರಮಾಣೇಷು ಭರ್ತೃಷು ।
ಸಾಽಹಂ ವಿವತ್ಸಾ ವಿಧಿನಾ ಗಂಧಮಾದನಪರ್ವತಾತ್ ॥೫೬॥

ತತ್ರ ದ್ವಾದಶವರ್ಷಾಣಿ ವನ್ಯಮೂಲಫಲಾಶನಾ ।
ಚರಾಮ್ಯನಿಲಯಾ ಸುಭ್ರು ಸಾ ತವಾಂತಿಕಮಾಗತಾ ॥೪೫॥

ಅಲ್ಲಿ ಕಾಡಿನಲ್ಲಿ ನಾನು ಗೆಡ್ಡೆಗೆಣಸುಗಳು ಮತ್ತು ಫಲಗಳನ್ನು ಆಹಾರವಾಗಿ ಸೇವಿಸಿ ಹನ್ನೆರಡು ವರ್ಷವನ್ನು ಕಳೆದೆ. ಎಲೌ ಸುಂದರಿಯೇ, ನಾನು ಮನೆ ಇಲ್ಲದೆ ತಿರುಗಾಡುತ್ತಾ ಈಗ ನಿನ್ನ ಸಮೀಪಕ್ಕೆ ಬಂದಿದ್ದೇನೆ.

ಜಾನಾಮಿ ಕೇಶಾನ್ ಗ್ರಥಿತುಂ ಜಾನಾಮಿ ಗ್ರಥಿತುಂ ಮಣೀನ್ ।
ಮಲ್ಲಿಕೋತ್ಪಲಪದ್ಮಾನಾಂ ಜಾನಾಮಿ ಗ್ರಥಿತುಂ ಸ್ರಜಃ ॥೪೬॥

ಸಿಂಧುವಾರಕಜಾತೀನಾಂ ರಚಯಾಮ್ಯವತಂಸಕಾನ್ ॥೪೭॥

ನನಗೆ ಹೆರಳನ್ನು ಹಾಕಲು ಬರುತ್ತದೆ. ಮಣಿಗಳಿಂದ ಹಾರವನ್ನು ಮಾಡಲು ಬರುತ್ತದೆ. ಮಲ್ಲಿಗೆ, ಉತ್ಪಲ ಮತ್ತು ಪದ್ಮಗಳಿಂದ ಪುಷ್ಪಮಾಲೆಯನ್ನು ಕಟ್ಟುವುದನ್ನು ನಾನು ತಿಳಿದಿದ್ದೇನೆ. ಸಿಂಧುವಾರ ಮೊದಲಾದ ಪುಷ್ಪಗಳ ಪುಷ್ಪಗುಚ್ಛವನ್ನೂ ಸಹ ನಾನು ಮಾಡುತ್ತೇನೆ.

ಪತ್ರಂ ಮೃಗಾಂಗಮಗರುಂ ಪಿಂಕ್ಷೇ ಚ ಹರಿಚಂದನಮ್ ।
ಪ್ರಥಯಿಷ್ಯಾಮಿ ಚಿತ್ರಾಶ್ಚ ಸ್ರಜಃ ಪರಮಶೋಭನಾಃ ॥೪೮॥

ಪತ್ರ (ಪತ್ರೆ), ಕಸ್ತೂರಿ, ಅಗರು, ಶ್ರೀಗಂಧ ಇವುಗಳನ್ನು ತೇಯುತ್ತೇನೆ. ವಿಚಿತ್ರ ಮತ್ತು ಬಹಳ ಸುಂದರವಾದ ಮಾಲೆಗಳನ್ನು ಹೆಣೆಯುತ್ತೇನೆ.

ಆರಾಧಯಂ ಸತ್ಯಭಾಮಾಂ ಕೃಷ್ಣಸ್ಯ ಮಹಿಷೀಂ ಪ್ರಿಯಾಮ್ ।
ಕೃಷ್ಣಾಂ ಚ ಭಾರ್ಯಾಂ ಪಾರ್ಥಾನಾಂ ನಾರೀಣಾಮುತ್ತಮಾಂ ತಥಾ ॥

ನಾನು ಹಿಂದೆ ಕೃಷ್ಣನ ಪ್ರಿಯ ಮಹಿಷಿಯಾದ ಸತ್ಯಭಾಮೆಯನ್ನೂ, ಪಾಂಡವರ ಪತ್ನಿಯಾದ ನಾರಿಯರಲ್ಲಿ ಶ್ರೇಷ್ಠಳಾದ ದ್ರೌಪದಿಯನ್ನೂ ಆರಾಧಿಸಿದ್ದೇನೆ.

ತಯಾಽಸ್ಮಿ ಸುಭೃತಾ ಚಾಹಮಿಷ್ಟಲಾಭೇನ ತೋಷಿತಾ ।
ಮಾಲಿನೀತಿ ಚ ಮೇ ನಾಮ ಸ್ವಯಂ ದೇವೀ ಚಕಾರ ಹ ॥೫೦॥

ಕೃಷ್ಣಾ ಕಮಲಪತ್ರಾಕ್ಷೀ ಸಾ ಮೇ ಪ್ರಾಣಸಮಾ ಸಖೀ ॥೫೧॥

ನಾನು ಅವರಿಬ್ಬರಿಂದಲೂ ನನ್ನ ಅಭೀಷ್ಟಗಳನ್ನು ಪೂರೈಸಿ ಚೆನ್ನಾಗಿ ಪೂಜಿಸಲ್ಪಟ್ಟು ಸಂತೋಷಪಡಿಸಲ್ಪಟ್ಟಿದ್ದೇನೆ. ಸತ್ಯಭಾಮಾದೇವಿಯು ಸ್ವತಃ ನನಗೆ ಮಾಲಿನೀ ಎಂದು ಹೆಸರಿಟ್ಟಳು. ಕಮಲಾಕ್ಷಿಯಾದ ದ್ರೌಪದಿಯು ನನಗೆ ಪ್ರಾಣಸಮಳಾದ ಸ್ನೇಹಿತೆ.

ನ ಚಾಹಂ ಚಿರಮಿಚ್ಛಾಮಿ ಕ್ವಚಿದ್ ವಸ್ತುಂ ಶುಭಾನನೇ ।
ವ್ರತಂ ಕಿಲೈತದಸ್ಮಾಕಂ ಕುಲಧರ್ಮೋ ಯಮೀದೃಶಃ ॥೫೨॥

ಯೋ ಹ್ಯಸ್ಮಾಕಂ ತು ಹರೇದ್ ದ್ರವ್ಯಂ ದೇಶಂ ವಸನಮೇವ ವಾ ।
ನ ಕ್ರೋದ್ಧವ್ಯಂ ಕಿಲಾಸ್ಮಾಭಿರಸ್ಮದ್ಗುರುರಮರ್ಷಣಃ ॥೫೩॥

ಎಲೌ ಶುಭಾನನೆಯೇ, ನಾನು ಬಹಳ ಕಾಲ ಇಲ್ಲಿ ವಾಸಿಸಲು ಇಷ್ಟಪಡುವುದಿಲ್ಲ. ಇದು ನಮ್ಮ ವ್ರತ. ನಮ್ಮ ಕುಲಧರ್ಮವು ಹೀಗೆಯೇ ಇರುತ್ತದೆ. ಯಾರು ನಮ್ಮ ಧರ್ಮವನ್ನಾಗಲೀ, ದೇಶವನ್ನಾಗಲೀ ಅಥವಾ ವಸ್ತ್ರವನ್ನಾಗಲೀ ಅಪಹರಿಸುತ್ತಾರೋ ಅವರ ಮೇಲೆ ಕೋಪವನ್ನು ಮಾಡಬಾರದು. ಏಕೆಂದರೆ ನನ್ನ ಪತಿಯು ಶಾಂತಸ್ವಭಾವದವನು (ಮತ್ತು ಇದು ನಮ್ಮ ಕುಲಧರ್ಮ).

ಸಾಽಹಂ ವನಾನಿ ದುರ್ಗಾಣಿ ತೀರ್ಥಾನಿ ಚ ಸರಾಂಸಿ ಚ ।
ಶೈಲಾಂಶ್ಚ ವಿವಿಧಾನ್ ರಮ್ಯಾನ್ ಸರಿತಶ್ಚ ಸಮುದ್ರಗಾಃ ॥೫೪॥

ಭರ್ತೃಶೋಕಪರೀತಾಂಗೀ ಭರ್ತುಶ್ಚ ಬ್ರಹ್ಮಚಾರಿಣೇ ।
ವಿಚರಾಮಿ ಮಹೀಂ ದುರ್ಗಾಂ ಯತ್ರಸಾಯಂನಿವೇಶನಾ ॥೫೫॥

ಅಂತಹ ನಾನು ವನಗಳನ್ನೂ, ದುರ್ಗಗಳನ್ನೂ, ತೀರ್ಥಗಳನ್ನೂ, ಸರೋವರಗಳನ್ನೂ, ಪರ್ವತಗಳನ್ನೂ, ಸುಂದರವಾದ ಸಮುದ್ರವನ್ನು ಸೇರುವ ಅನೇಕ ನದಿಗಳನ್ನೂ ಸಮೀಪಿಸಿ ಸಂಚರಿಸುತ್ತಾ ಪತಿಯ ಶೋಕದಿಂದ ಮರುಗುತ್ತಾ ಪತಿಯ ನಿಮಿತ್ತ ಬ್ರಹ್ಮಚಾರಿಣಿಯಾಗಿ ಸಾಯಂಕಾಲದಲ್ಲಿ ಎಲ್ಲಿರುವೆನೋ ಅಲ್ಲಿಯೇ ಬಿಡಾರವನ್ನು ಮಾಡುವವಳಾಗಿ ಭೂಮಿಯಲ್ಲಿ ದುರ್ಗಗಳಲ್ಲಿ ಸಂಚರಿಸುತ್ತಿದ್ದೇನೆ.

ವೀರಪತ್ನೀ ಯಥಾ ದೇವೀ ಚರಮಾಣೇಷು ಭರ್ತೃಷು ।
ಸಾಽಹಂ ವಿವತ್ಸಾ ವಿಧಿನಾ ಗಂಧಮಾದನಪರ್ವತಾತ್ ॥೫೬॥

ಶೃಣೋಮಿ ತವ ಸೌಶೀಲ್ಯಂ ಭರ್ತುರ್ಮಧುರಭಾಷಿಣಿ ॥೫೭॥

ಎಲೌ ಮಧುರಭಾಷಿಣಿಯೇ, ಪತಿಗಳು ಸಂಚರಿಸುವಾಗ ವೀರಪತ್ನಿಯಾದ ದ್ರೌಪದಿಯು ಸಂಚರಿಸಿದಂತೆ ನಾನೂ ಸಹ ವಿವತ್ಸಳಾಗಿ (ಮಕ್ಕಳ ಜೊತೆಯಲ್ಲಿಲ್ಲದೆ) ನನ್ನ ವಿಧಿಯಂತೆ ಗಂಧಮಾದನ ಪರ್ವತದಲ್ಲಿದ್ದಾಗ ನಿನ್ನ ಮತ್ತು ನಿನ್ನ ಪತಿಯ ಒಳ್ಳೆಯ ಶೀಲವನ್ನು ಕೇಳಿದೆ.

ಮಾಹಾತ್ಮ್ಯಂ ಚ ತತಃ ಶ್ರುತ್ವಾ ಬ್ರಾಹ್ಮಣಾನಾಂ ಸಮೀಪತಃ ।
ತ್ವಾಮುಪಸ್ಥಾತುಮಿಚ್ಛಾಮಿ ತತಶ್ಚಾಹಮಿಹಾಗತಾ ॥೫೮॥

ಅಲ್ಲಿ ಬ್ರಾಹ್ಮಣರ ಮುಖದಿಂದ ನಿನ್ನ ಮಹಿಮೆಯನ್ನು ಕೇಳಿ ನಿನ್ನನ್ನು ಆಶ್ರಯಿಸಲು ಬಯಸಿ ಇಲ್ಲಿಗೆ ಬಂದಿದ್ದೇನೆ.

ಗುರವೋ ಮಮ ಧರ್ಮಶ್ಚ ವಾಯುಃ ಶಕ್ರಸ್ತಥಾऽಶ್ವಿನೌ ।
ತೇಷಾಂ ಪ್ರಸಾದಾಚ್ಚ ನ ಮಾಂ ಕಶ್ಚಿದ್ ಧರ್ಷಯತೇ ಪುಮಾನ್ ॥೫೯॥

ನನಗೆ ಯಮ, ವಾಯು, ಇಂದ್ರ ಮತ್ತು ಅಶ್ವಿನಿಗಳು ಗುರುಗಳು. ಅವರ ಅನುಗ್ರಹದಿಂದ ಯಾವ ಪುರುಷನೂ ನನ್ನನ್ನು ಅವಮಾನ ಮಾಡಲಾರ.

ಸುದೇಷ್ಣಾ

ನ ಭರೇಯಮಹಂ ಭದ್ರೇ ಸಂಶಯೋ ಮಮ ವಿದ್ಯತೇ ।
ರಾಜಾ ತ್ವಯಂ ಹಿ ತ್ವಾಂ ದೃಷ್ಟ್ವಾ ಮತಿಂ ಪಾಪಾಂ ಕರಿಷ್ಯತಿ ॥೬೦॥

ಸುದೇಷ್ಣೇ– ಮಂಗಳಸ್ವರೂಪಳೇ, ನಾನು ನಿನ್ನನ್ನು ಭರಿಸಲಾರೆ. ನನಗೆ ಸಂಶಯ ಉಂಟಾಗಿದೆ. ಈ ರಾಜನು ನಿನ್ನನ್ನು ನೋಡಿ ಕೆಟ್ಟಬುದ್ಧಿಯನ್ನು ಮಾಡಬಹುದು.

ಸಾऽಹಂ ತ್ವಾಂ ನ ಕ್ಷಮಾಂ ಮನ್ಯೇ ವಸಂತೀಮಿಹ ವೇಶ್ಮನಿ ।
ಏಷ ದೋಷೋऽತ್ರ ಸುಶ್ರೋಣಿ ಕಥಂ ವಾ ಭೀರು ಮನ್ಯಸೇ ॥೬೧॥

ಆದ್ದರಿಂದ ನೀನು ನನ್ನ ಮನೆಯಲ್ಲಿ ವಾಸಮಾಡುವುದು ಯೋಗ್ಯವಲ್ಲವೆಂದು ಭಾವಿಸುತ್ತೇನೆ. ಸುಶ್ರೋಣಿಯೇ, ಈ ವಿಷಯದಲ್ಲಿ ಈ ದೋಷವಿದೆ. ಭೀರುವೇ, ನಿನ್ನ ಅಭಿಪ್ರಾಯವಾದರೂ ಏನು?

ಸ್ಥಿತಾ ರಾಜಕುಲೇ ನಾರ್ಯೋ ಯಾಶ್ಚೇಮಾ ಮಮ ವೇಶ್ಮನಿ ।
ತ್ವಾಮೇವೈತಾ ನಿರೀಕ್ಷಂತೇ ವಿಸ್ಮಯಾದ್ ವರವರ್ಣಿನಿ ॥೬೨॥

ಎಲೌ ಸುಂದರಿಯೇ, ರಾಜಕುಲದಲ್ಲಿ ಜನಿಸಿ ನನ್ನ ಮನೆಯಲ್ಲಿರುವ ವನಿತೆಯರೆಲ್ಲರೂ ಆಶ್ಚರ್ಯದಿಂದ ನಿನ್ನನ್ನೇ ನೋಡುತ್ತಿದ್ದಾರೆ.

ವೃಕ್ಷಾಂಶ್ಚೋಪಸ್ಥಿತಾನ್ ಪಶ್ಯ ಯ ಇಮೇ ಮಮ ವೇಶ್ಮನಿ ।
ವಿನಮಂತೇ ಹಿ ತ್ವಾಂ ದೃಷ್ಟ್ವಾ ಪುಮಾಂಸಂ ಕಂ ನ ಲೋಭಯೇಃ ॥

ನನ್ನ ಮನೆಯ ಸಮೀಪದಲ್ಲಿರುವ ಈ ವೃಕ್ಷಗಳನ್ನು ನೋಡು. ಅವೂ ಸಹ ನಿನ್ನನ್ನು ನೋಡಲು ನಿನ್ನ ಕಡೆಗೆ ಬಾಗಿವೆ. ಹೀಗಿರುವಾಗ ಯಾವ ಪುರುಷನನ್ನು ನೀನು ಪ್ರಲೋಭಗೊಳಿಸಲಾರೆ?

ರಾಜಾ ವಿರಾಟಃ ಸುಶ್ರೋಣಿ ದೃಷ್ಟ್ವಾ ತೇ ಪರಮಂ ವಪುಃ ।
ಮಾಂ ವಿಹಾಯ ವರಾರೋಹೇ ತ್ವಾಂ ಗಚ್ಛೇತ್ ಸರ್ವಚೇತಸಾ ॥೬೪॥

ಎಲೌ ಸುಂದರಿಯೇ, ವಿರಾಟರಾಜನು ನಿನ್ನ ಶ್ರೇಷ್ಠವಾದ ಶರೀರವನ್ನು ನೋಡಿ ನನ್ನನ್ನು ಬಿಟ್ಟು ಪೂರ್ಣವಾದ ಮನಸ್ಸಿನಿಂದ ನಿನ್ನನ್ನೇ ಹೊಂದಬಹುದು.

ಯಂ ಹಿ ತ್ವಮನವದ್ಯಾಂಗೀ ನರಮಾಯತಲೋಚನೇ ।
ಸುಪ್ರಸನ್ನಾ ಹಿ ವೀಕ್ಷೇಥಾಃ ಸ ಕಾಮವಶಗೋ ಭವೇತ್ ॥೬೫॥

ಎಲೌ ಅನವದ್ಯಾಂಗಿಯೇ, ವಿಶಾಲವಾದ ಕಣ್ಣುಳ್ಳವಳೇ, ಯಾವ ಪುರುಷನನ್ನು ನೀನು ಪ್ರಸನ್ನಳಾಗಿ ನೋಡುವಿಯೋ ಅವನು ಕಾಮವಶನಾಗುವನು.

ಸುಸ್ನಾತಾऽಲಂಕೃತಾ ಚ ತ್ವಂ ಯಮೀಕ್ಷೇಥಾ ಹಿ ಮಾನವಮ್ ।
ಗ್ಲಾನಿರ್ನ ತಸ್ಯ ದುಃಖಂ ವಾ ನ ತಂದ್ರಿರ್ನ ಪರಾಜಯಃ ॥೬೬॥

ನ ಶೋಚೇನ್ನ ಚ ಸಂಪಶ್ಯೇನ್ನ ಚ ಕ್ರುದ್ಧ್ಯೇನ್ನಾನೃತಂ ವದೇತ್ ॥೬೭॥

ಸುಸ್ನಾತಳೂ, ಅಲಂಕೃತಳೂ ಆದ ನೀನು ಯಾವ ಪತಿಯನ್ನು ನೋಡುವೆಯೋ ಅವನಿಗೆ ಆಯಾಸವಾಗಲೀ, ದುಃಖವಾಗಲೀ, ಆಲಸ್ಯವಾಗಲೀ, ಪರಾಜಯವಾಗಲೀ

ಇರುವುದಿಲ್ಲ. ಅವನು ಶೋಕಪಡುವುದಿಲ್ಲ. ಸಂತಾಪಪಡುವುದಿಲ್ಲ. ಕೋಪಗೊಳ್ಳುವುದಿಲ್ಲಮತ್ತು ಅನೃತವನ್ನು ನುಡಿಯುವುದಿಲ್ಲ.

ಯಂ ತ್ವಂ ಸರ್ವಾನವದ್ಯಾಂಗಿ ಭಜೇಥಾಃ ಸಮಲಂಕೃತಾ ।
ನ ವ್ಯಾಧಿರ್ನ ಜರಾ ತಸ್ಯ ನ ಚ ತೃಷ್ಣಾ ನ ಕ್ಷುಧಾ ಭವೇತ್ ॥೬೮॥

ಎಲೌ ಅನವಂದ್ಯಾಂಗಿಯೇ, ನೀನು ಅಲಂಕೃತಳಾಗಿ ಯಾವ ಪತಿಯನ್ನು ಭಜಿಸುವಿಯೋ ಅವನಿಗೆ ವ್ಯಾಧಿಯಾಗಲೀ, ಜರೆಯಾಗಲೀ, ಹಸಿವು ನೀರಡಿಕೆಗಳಾಗಲೀ ಇರುವುದಿಲ್ಲ.

ಯಸ್ಯ ತ್ವಂ ವಶಗಾ ಸುಭ್ರು ಭವೇರಂಕಗತಾ ಸತೀ ।
ಪಂಚತ್ವಮಪಿ ಸಂಪ್ರಾಪ್ತಂ ಯಂ ಚ ತ್ವಂ ಪುರುಷಂ ಸ್ಪೃಜೇಃ ॥೬೯॥

ಬಾಹುಭ್ಯಾಮನುರೂಪಾಭ್ಯಾಂ ಸ ಜೀವೇದಿತಿ ಮೇ ಮತಿಃ ॥೭೦॥

ಎಲೌ ಸುಂದರಿಯೇ, ಸಾಧ್ವಿಯಾದ ನೀನು ಯಾವ ಪತಿಯ ತೊಡೆಯ ಮೇಲೆ ಕುಳಿತುಕೊಳ್ಳುವಿಯೋ ಅಥವಾ ಪಂಚತ್ವವನ್ನು ಹೊಂದಿದ ಯಾವನನ್ನು ನಿನ್ನ ಅನುರೂಪವಾದ ಬಾಹುಗಳಿಂದ ಆಲಂಗಿಸುವಿಯೋ ಅವನು ಪುನಃ ಬದುಕುವನು ಎಂದು ನನ್ನ ಅಭಿಪ್ರಾಯ.

ಯಸ್ಯ ತು ತ್ವಂ ಭವೇರ್ಭಾರ್ಯಾ ಯಂ ಚ ಹೃಷ್ಟಾ ಪರಿಷ್ವಜೇಃ ।
ಅತಿಜೀವೇತ್ ಸ ಸರ್ವೇಷು ದೇವೇಷ್ವಿವ ಪುರಂದರಃ ॥೭೧॥

ಯಾರಿಗೆ ನೀನು ಪತ್ನಿಯಾಗುವಿಯೋ, ಯಾರನ್ನು ನೀನು ಆಲಂಗಿಸುವೆಯೋ ಅವನು ಎಲ್ಲ ದೇವತೆಗಳಲ್ಲಿ ಇಂದ್ರನಂತೆ ಉಳಿದೆಲ್ಲರನ್ನೂ ಮೀರಿ ಬದುಕುವನು.

ಅಧ್ಯಾರೋಹೇದ್ ಯಥಾ ವೃಕ್ಷಂ ವಧಾಯಾರುಹ್ಯ ತಿಷ್ಠತಿ ।
ರಾಜವೇಶ್ಮನಿ ಲೇಖಾಗ್ರ್ಯ ನನು ಸ್ಯಾಸ್ತ್ವಂ ತಥಾ ಮಮ ॥೭೨॥

ರಾಜನ ಅರಮನೆಯಲ್ಲಿ ಸುಂದರಿಯಾದ ನೀನು ವಾಸವನ್ನು ಮಾಡಿದರೆ ಅದು ನನ್ನನ್ನು ಕೊಲ್ಲುವ ಶತ್ರುವು ಮರವನ್ನು ಏರಿ ಕುಳಿತಿರುವಾಗ ಅದೇ ಮರವನ್ನು ಹತ್ತಿದಂತೆ ಆಗುವುದಷ್ಟೆ.

ಯಥಾ ಕರ್ಕಟಕೀ ಗರ್ಭಮಾಧತ್ತೇ ಮೃತ್ಯುಮಾತ್ಮನಃ ।
ತಥಾವಿಧಮಹಂ ಮನ್ಯೇ ತವ ಸುಭ್ರು ಸಮಾಗಮಮ್ ॥೭೩॥

ಎಲೌ ಸುಂದರಿಯೇ, ಹೇಗೆ ಹೆಣ್ಣು ಚೇಳು ತನ್ನ ಮರಣಕ್ಕಾಗಿಯೇ ಗರ್ಭವನ್ನು ಧರಿಸುತ್ತದೆಯೋ ಹಾಗೆ ನಿನ್ನ ಸಮಾಗಮವೆಂದು ಭಾವಿಸುತ್ತೇನೆ.

ಅನುಮಾನಯೇ ತ್ವಾಂ ಸೈರಂಧ್ರಿ ನಾವಮನ್ಯೇ ಕಥಂಚನ ।
ಭರ್ತೃಶೀಲಭಯಾದ್ ಭದ್ರೇ ತವ ವಾಸಂ ನ ರೋಚಯೇ ॥೭೪॥

ಸೈರಂಧ್ರಿಯೇ, (ಇಲ್ಲಿಂದ ಹೋಗಲು) ನಿನಗೆ ಅನುಮತಿಯನ್ನು ಕೊಡುತ್ತೇನೆ. ನಿನ್ನನ್ನು ಅವಮಾನ ಮಾಡುತ್ತಿಲ್ಲ. ಮಂಗಳಸ್ವರೂಪಳೇ, ಪತಿಯ ಶೀಲದ ಭಯದಿಂದಾಗಿ ನನ್ನ ಮನೆಯಲ್ಲಿ ನಿನ್ನ ವಾಸವು ನನಗೆ ಇಷ್ಟವಾಗುವುದಿಲ್ಲ.

ಸೈರಂಧ್ರೀ

ನಾಹಂ ಶಕ್ಯಾ ವಿರಾಟೇನ ನಾಪಿ ಚಾನ್ಯೇನ ಕೇನಚಿತ್ ।
ದೇವಗಂಧರ್ವಯಕ್ಷೈರ್ವಾ ದ್ರಷ್ಟುಂ ದುಷ್ಟೇನ ಚೇತಸಾ ॥೭೫॥

ಸೈರಂಧ್ರೀ– ವಿರಾಟನಾಗಲೀ ಅಥವಾ ಇನ್ನೊಬ್ಬ ಪುರುಷನಾಗಲೀ ಅಥವಾ ದೇವಗಂಧರ್ವ ಯಕ್ಷನಾಗಲೀ ನನ್ನನ್ನು ದುಷ್ಟ ಮನಸ್ಸಿನಿಂದ ನೋಡಲು ಸಾಧ್ಯವಿಲ್ಲ.

ಗಂಧರ್ವಾಃ ಪಾಲಯಂತೇ ಮಾಂ ಸುಕುಲ್ಯಾಃ ಪಂಚ ಸುವ್ರತಾಃ ।
ಪುತ್ರಾ ದೇವಾದಿದೇವಾನಾಂ ಸೂರ್ಯಪಾವಕವರ್ಚಸಃ ॥೭೬॥

ಒಳ್ಳೆಯ ಕುಲದಲ್ಲಿ ಜನಿಸಿದ ಒಳ್ಳೆಯ ವ್ರತನಿಷ್ಠರಾದ ಐದು ಜನ ಗಂಧರ್ವರು ನನ್ನನ್ನು ರಕ್ಷಿಸುತ್ತಾರೆ. ಅವರು ದೇವಾದಿ ದೇವತೆಗಳ ಪುತ್ರರು ಮತ್ತು ಸೂರ್ಯಾಗ್ನಿಗಳಿಗೆ ಸಮವಾದ ಪ್ರಭಾವವುಳ್ಳವರು.

ಯಶ್ಚ ದುಃಶೀಲವಾನ್ ಮರ್ತ್ಯೋ ಮಾಂ ಸ್ಪೃಶೇದ್ ದುಷ್ಟಚೇತಸಾ ।
ಸ ತಾಮೇವ ನಿಶಾಂ ಶೀಘ್ರಂ ಶಯೀತ ಮುಸಲೈರ್ಹತಃ ॥೭೭॥

ಯಾವ ದುಷ್ಟಶೀಲವುಳ್ಳ ಪುರುಷನು ದುಷ್ಟಭಾವನೆಯಿಂದ ನನ್ನನ್ನು ಮುಟ್ಟುತ್ತಾನೆಯೋ ಅವನು ಅದೇ ರಾತ್ರಿ ಶೀಘ್ರವಾಗಿ ಒನಕೆಗಳಿಂದ ಹೊಡೆಯಲ್ಪಟ್ಟು ಸತ್ತು ಮಲಗುತ್ತಾನೆ.

ಯಸ್ಯಾಪಿ ಹಿ ಶತಂ ಪೂರ್ಣಂ ಬಾಂಧವಾನಾಂ ಭವೇದಿಹ ।
ಸಹಸ್ರಂ ವಾ ವಿಶಾಲಾಕ್ಷಿ ಕೋಟಿರ್ವಾऽಪಿ ಸಹಸ್ರಿಕಾ ॥೭೮॥

ದುಷ್ಟಚಿತ್ತಸ್ಯ ಮಾಂ ಬ್ರೂಯಾನ್ನ ಸ ಜೀವೇತ್ ತವಾಗ್ರತಃ ॥೭೯॥

ಯಾವನಿಗೆ ನೂರು ಜನ ಬಾಂಧವರು ಇಲ್ಲಿ ಸಹಾಯವಾಗಿರುತ್ತಾರೆಯೋ ಅಥವಾ ಸಹಸ್ರ ಬಾಂಧವರು ಅಥವಾ ಸಹಸ್ರಕೋಟಿ ಬಾಂಧವರು ಸಹಾಯರಾಗಿದ್ದರೂ ಸಹ ಎಲೌ ವಿಶಾಲಾಕ್ಷಿಯೇ, ದುಷ್ಟ ಮನಸ್ಸಿನಿಂದ ನನ್ನ ಜೊತೆ ಮಾತನಾಡಿದರೆ ಅವನು ನಿನ್ನ ಮುಂದೆ ಬದುಕಿರುವುದಿಲ್ಲ.

ನ ತಸ್ಯ ತ್ರಿದಶಾ ದೇವಾ ನಾಸುರಾ ನ ಚ ಪನ್ನಗಾಃ ।
ತೇಭ್ಯೋ ಗಂಧರ್ವರಾಜೇಭ್ಯಃ ತ್ರಾಣಂ ಕುರ್ಯುರಸಂಶಯಮ್ ॥೮೦॥

ಅಂತಹವನಿಗೆ ದೇವತೆಗಳಾಗಲೀ, ಅಸುರರಾಗಲೀ, ಸರ್ಪಗಳಾಗಲೀ ನನ್ನ ಪತಿಗಳಾದ ಗಂಧರ್ವರಾಜರಿಂದ ರಕ್ಷಣೆಯನ್ನು ಕೊಡುವುದಿಲ್ಲ. ಈ ವಿಷಯದಲ್ಲಿ ಸಂಶಯವಿಲ್ಲ.

ಸುತೇಷು ಚ ವಿಸತ್ವಂ ಮೇ ಸ್ವಜನೇ ಬಾಂಧವೇಷು ವಾ ।
ನಾಹಂ ಶಕ್ಯಾ ನರೈಃ ಸ್ಪೃಷ್ಟುಂ ನ ಚ ಮೇ ವೃತ್ತಿಮೀದೃಶಮ್ ॥೮೧॥

ನನ್ನ ಮಕ್ಕಳಲ್ಲಿ ವಿಶೇಷವಾದ ಬಲವಿದೆ. ನನ್ನ ಸ್ವಜನರಲ್ಲಿಯೂ ಮತ್ತು ಬಂಧುಗಳಲ್ಲಿಯೂ ಹಾಗೆಯೇ. ನನ್ನನ್ನು ಇನ್ನೊಬ್ಬನು ಸ್ಪರ್ಶಿಸಲು ಸಾಧ್ಯವಿಲ್ಲ. ನನ್ನ ನಡವಳಿಕೆ ಅಂತಹದಲ್ಲ.

ಯಾ ಮೇ ನ ದದ್ಯಾದುಚ್ಛಿಷ್ಟಂ ನ ಚ ಪಾದೌ ಪ್ರಧಾವಯೇತ್ ।
ಪ್ರಿಯೈ ರತ್ನೈನ ವಸ್ತ್ರೈರ್ವಾ ಗಂಧರ್ವಾಃ ಪತಯೋ ಮಮ ॥೮೨॥

ಯಾರು ನನಗೆ ಪ್ರಿಯವಾದ ವಸ್ತ್ರಗಳನ್ನು ಮತ್ತು ರತ್ನಗಳನ್ನು ನೀಡಿದರೂ ನನಗೆ ಉಚ್ಛಿಷ್ಟವನ್ನು ಕೊಡುವುದಿಲ್ಲವೋ ಅಥವಾ ತಮ್ಮ ಪಾದಗಳನ್ನು ತೊಳೆಸಿಕೊಳ್ಳುವುದಿಲ್ಲವೋ ಅಂತಹವರಿಗೆ ನನ್ನ ಪತಿಗಳಾದ ಗಂಧರ್ವರು ರಕ್ಷಣೆಯನ್ನು ಕೊಡುತ್ತಾರೆ.

ಯೋ ಮಾಂ ಹಿ ಪುರುಷೋ ಗೃದ್ಧ್ಯೇತ್ ಯಥಾಽನ್ಯಾಂ ಪ್ರಾಕೃತಾಂ ಸ್ತ್ರಿಯಾಮ್ ।
ತಾಮೇವ ಸ ಇಮಾಂ ರಾತ್ರಿಂ ಪ್ರವಿಶೇದಪರಂ ತನುಮ್ ॥೮೩॥

ಯಾವ ಪುರುಷನು ನನ್ನನ್ನು ಬೇರೆ ಪ್ರಾಕೃತ ವನಿತೆಯಂತೆ ಆಸೆ ಪಡುತ್ತಾನೆಯೋ ಅವನು ಅದೇ ರಾತ್ರಿ ಇನ್ನೊಂದು ಶರೀರವನ್ನು ಹೊಂದುತ್ತಾನೆ.

ನ ಚಾಪ್ಯಹಂ ಚಾಲಯಿತುಂ ಶಕ್ಯಾ ಕೇನಚಿದಂಗನೇ ।
ದುಃಖಶೀಲಾ ಹಿ ಗಂಧರ್ವಾಃ ತೇ ಚ ಮೇ ಬಲಿನಃ ಪ್ರಿಯಾಃ ॥೮೪॥

ಏವಂ ನಿವಸಮಾನಾಯಾಂ ಮಯಿ ಮಾ ತೇ ಭಯಂ ಹಿ ಭೂತ್ ॥

ಎಲೌ ಅಂಗನೆಯೇ, ನನ್ನನ್ನು ಯಾರೂ ಅಲುಗಾಡಿಸಲು ಸಾಧ್ಯವಿಲ್ಲ. ನನ್ನ ಪತಿಗಳಾದ ಗಂಧರ್ವರು ಕಷ್ಟಸಹಿಷ್ಣುಗಳು, ಬಲಿಷ್ಠರು ಮತ್ತು ನನಗೆ ಬಹಳ ಪ್ರಿಯರಾದವರು. ನಾನು ಹೀಗೆ ವಾಸವನ್ನು ಮಾಡುವಾಗ ನನ್ನಿಂದ ನಿನಗೆ ಯಾವ ಭಯವೂ ಉಂಟಾಗುವುದಿಲ್ಲ.

ವೈಶಂಪಾಯನಃ

ಏವಮುಕ್ತಾ ತು ಸೈರಂಧ್ರ್ಯಾ ಸುದೇಷ್ಣಾ ವಾಕ್ಯಮಬ್ರವೀತ್ ॥೮೬॥

ವಸೇಹ ಮಯಿ ಕಲ್ಯಾಣಿ ಯದಿ ತೇ ವೃತ್ತಮೀದೃಶಮ್ ।
ಕಶ್ಚ ತೇ ದಾತುಮುಚ್ಛಿಷ್ಟಂ ಪುಮಾನರ್ಹತಿ ಶೋಭನೇ ॥೮೭॥

ಪ್ರಧಾವಯೇಚ್ಚ ಕಃ ಪಾದೌ ಲಕ್ಷ್ಮೀಂ ದೃಷ್ಟ್ವೇವ ಬುದ್ಧಿಮಾನ್ ॥೮೮॥

ವೈಶಂಪಾಯನ– ಸೈರಂಧ್ರಿಯಿಂದ ಹೀಗೆ ಹೇಳಲ್ಪಟ್ಟ ಸುದೇಷ್ಣೆಯು ಮಾತನಾಡಿದಳು. ಕಲ್ಯಾಣಿಯೇ, ನಿನ್ನ ನಡತೆಯು ಹೀಗಿರುವುದಾದರೆ ಇಲ್ಲಿ ನನ್ನ ಬಳಿಯಲ್ಲಿ ವಾಸವನ್ನು ಮಾಡು. ಎಲೌ ಶೋಭನೆಯೇ, ಯಾವ ಮನುಷ್ಯನು ನಿನಗೆ ಉಚ್ಛಿಷ್ಟವನ್ನು ಕೊಟ್ಟಾನು? ಮತ್ತು ಲಕ್ಷ್ಮಿಯಂತಿರುವ ನಿನ್ನನ್ನು ನೋಡಿ ಯಾವ ವಿವೇಕಿಯಾದವನು ತನ್ನ ಪಾದವನ್ನು ತೊಳೆಸಿಕೊಂಡಾನು?

ಏವಮಾಚಾರಸಂಪನ್ನಾ ಏವಂ ದೇವಪರಾಯಣಾ ।
ವಾಕ್ ಚ ತ್ವಮಸಿ ಭೂತಾನಾಂ ಸಾವಿತ್ರೀವ ದ್ವಿಜನ್ಮನಾಮ್ ॥೮೯॥

ಇಂತಹ ಆಚಾರಸಂಪನ್ನಳಾದ ದೇವಪರಾಯಣಳಾದ, ನೀನು ಬ್ರಾಹ್ಮಣರಿಗೆ ಗಾಯತ್ರಿ ಇದ್ದಂತೆ, ಎಲ್ಲ ಪ್ರಾಣಿಗಳಿಂದಲೂ ಸ್ತೋತ್ರಕ್ಕೆ ಅರ್ಹಳಾಗಿದ್ದೀಯೆ.

ದೇವತೇವ ಹಿ ಕಲ್ಯಾಣೀ ಪೂಜಿತಾ ವರವರ್ಣಿನೀ ।
ವಸ ಭದ್ರೇ ಮಯಾ ಪ್ರೀತಾ ಪ್ರೀತಿರ್ಹಿ ಮಮ ವರ್ತತೇ ॥೯೦॥

ಸರ್ವಕಾಮೈಃ ಪ್ರಮುದಿತಾ ನಿರುದ್ವಿಗ್ನಮನಾಃ ಸುಖಮ್ ॥೯೧॥

ಎಲೌ ಸುಂದರಿಯೇ, ಕಲ್ಯಾಣಿಯೇ, ದೇವತೆಯಂತೆ ಪೂಜಿಸಲ್ಪಟ್ಟು ನನ್ನ ಜೊತೆಯಲ್ಲಿ ಸಂತೋಷದಿಂದ ವಾಸಮಾಡು. ನಿನ್ನನ್ನು ನೋಡಿದರೆ ನನಗೂ ಸಂತೋಷ ಉಂಟಾಗುತ್ತದೆ. ಎಲ್ಲ ಭೋಗಗಳಿಂದಲೂ ಕೂಡಿದವಳಾಗಿ ಯಾವ ಉದ್ವೇಗವಿಲ್ಲದೆ ಸುಖಸಂತೋಷದಿಂದ ನನ್ನ ಮನೆಯಲ್ಲಿ ವಾಸಮಾಡು.

ಸುದೇಷ್ಣಯೈವಮುಕ್ತಾ ಸಾ ಸುಪ್ರೀತಾ ಚಾರುಹಾಸಿನೀ ।
ನಿರ್ವಿಶಂಕಾ ವಿರಾಟಸ್ಯ ವಿವೇಶಾಂತಃಪುರಂ ತದಾ ॥೯೨॥

ಸುದೇಷ್ಣೆಯಿಂದ ಹೀಗೆ ಹೇಳಲ್ಪಟ್ಟ ಚಾರುಹಾಸಿನಿಯಾದ ದ್ರೌಪದಿಯು ಬಹಳ ಸಂತೋಷಗೊಂಡವಳಾಗಿ ಯಾವ ಶಂಕೆಯೂ ಇಲ್ಲದೆ ಆಗ ವಿರಾಟನ ಅಂತಃಪುರವನ್ನು ಪ್ರವೇಶಿಸಿದಳು.

ಯಾಜ್ಞಸೇನೀ ಸುದೇಷ್ಣಾಂ ತು ಶಿಶ್ರೂಷಂತೀ ವಿಶಾಂಪತೇ ।
ಅವಸತ್ ಪರಿಚಾರಾರ್ಹಾ ಸುದುಃಖಂ ಜನಮೇಜಯ ॥೯೩॥

ಎಲೈ ರಾಜನಾದ ಜನಮೇಜಯನೇ, ಯಜ್ಞಸೇನನ ಪುತ್ರಿಯಾದ ದ್ರೌಪದಿಯು ತಾನೇ ಪರಿಚಾರಕ್ಕೆ ಅರ್ಹಳಾದರೂ ಸಹ ಸುದೇಷ್ಣೆಯ ಸೇವೆಯನ್ನು ಮಾಡುತ್ತಾ ದುಃಖದಿಂದ ವಾಸಿಸಿದಳು.

ಏವಂ ವಿರಾಟೇ ನ್ಯವಸಂತ ಪಾಂಡವಾಃ
ಕೃಷ್ಣಾ ತಥಾऽಂತಃಪುರಮೇತ್ಯ ಶೋಭನಾ ।
ಅಜ್ಞಾತಚರ್ಯಾಂ ಪ್ರತಿರುದ್ಧಮಾನಸಾ
ಯಥಾऽಗ್ನಯೋ ಭಸ್ಮನಿ ಗೂಢಚೇತಸಃ ॥೯೪॥

ಹೀಗೆ ವಿರಾಟನ ಬಳಿಯಲ್ಲಿ ಪಾಂಡವರೂ, ಅದರಂತೆ ಅಂತಃಪುರವನ್ನು ಸೇರಿ ಶೋಭನಳಾದ ದ್ರೌಪದಿಯೂ ಅಜ್ಞಾತಚರ್ಯೆಯ ಕಾಲದಲ್ಲಿ ಮುದುಡಿದ ಮನಸ್ಸುಳ್ಳವಳಾಗಿ ಭಸ್ಮದಿಂದ ಮರೆಯಾದ ತೇಜಸ್ಸುಳ್ಳ ಅಗ್ನಿಯಂತೆ ವಾಸಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಚತುರ್ದಶೋऽಧ್ಯಾಯಃ ॥

॥ ವೈರಾಟಪರ್ವಣಿ ಸೈರಂಧ್ರೀನಿವಾಸೋ ನಾಮ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

॥ ಪಾಂಡವ ಪ್ರವೇಶ ಪರ್ವ ಮುಗಿಯಿತು ॥

★ ★ ★ ★

ಸಮಯಪಾಲನ ಪರ್ವ

ಮಹಾಭಾರತತಾತ್ಪರ್ಯನಿರ್ಣಯಃ

ಅಥಾಜಗಾಮ ಮಲ್ಲಕಃ ಸಮಸ್ತಭೂಮಿಮಂಡಲೇ ।
ವರೇಣ ಯೋಽಜಿತೋ ಜಯೀ ಶಿವಸ್ಯ ಸಂಜಗರ್ಜ ಚ ॥ ೧೧ ॥

ಬಳಿಕ ಶಿವನ ವರ ಬಲದಿಂದ ಸಮಸ್ತ ಭೂಮಂಡಲದಲ್ಲಿ ಯಾರಿಗೂ ಸೋಲದ ವಿಜಯಿಯಾಗುತ್ತಿದ್ದ ದುಷ್ಪಮಲ್ಲನೊಬ್ಬ ಬಂದ, ಸಿಂಹನಾದಗೈದ.

ತಮೀಕ್ಷ್ಯ ಸರ್ವಮಲ್ಲಕಾ ವಿರಾಟರಾಜಸಂಶ್ರಯಾಃ ।
ಪ್ರದುದ್ರುವುರ್ಭಯಾರ್ದಿತಾಸ್ತದಾऽವದದ್ ಯುಧಿಷ್ಠಿರಃ ॥ ೧೨ ॥

ಆ ಮಲ್ಲನನ್ನು ಕಂಡು ವಿರಾಟರಾಜನ ಆಶ್ರಯದಲ್ಲಿದ್ದ ಎಲ್ಲ ಮಲ್ಲರೂ ಭಯದಿಂದ ಕಂಗೆಟ್ಟು ಓಡಿದರು. ಆಗ ಯುಧಿಷ್ಠಿರ ನುಡಿದ.

ಯ ಏಷ ಸೂದ ಆಶು ತಂ ನಿಹತ್ಯ ಮಲ್ಲಮೋಜಸಾ ।
ಯಶಸ್ತವಾಭಿವರ್ಧಯೇತ್ ಸಮಾಹ್ವಯಾದ್ಯ ತಂ ನೃಪ ॥ ೧೩ ॥

'ರಾಜನೆ, ನಮ್ಮ ಅಡಿಗೆಯವನು ಈ ಮಲ್ಲನನ್ನು ತನ್ನ ಬಲದಿಂದ ಬೇಗನೆ ಕೊಂದು ನಿನ್ನ ಕೀರ್ತಿಯನ್ನು ಹೆಚ್ಚಿಸಬಲ್ಲ. ಅವನನ್ನು ಕರೆಸು'.

ಇತೀರಿತೇ ಸಮಾಹುತೋ ಜಗಾದ ಮಾರುತಿರ್ವಚಃ ।
ಪ್ರಸಾದತೋ ಹರೇರಹಂ ನಿಸೂದಯೇಽದ್ಯ ಮಲ್ಲಕಮ್ ॥ ೧೪ ॥

ಯುಧಿಷ್ಠಿರ ಹೀಗೆ ಹೇಳಿದಾಗ ವಿರಾಟ ಭೀಮನನ್ನು ಕರೆಸಿದ. ಭೀಮನೆಂದ 'ಹರಿಯ ಅನುಗ್ರಹದಿಂದ ನಾನೀಗಲೇ ಮಲ್ಲನನ್ನು ಸಂಹರಿಸುವೆನು'.

ಸಮಸ್ತದೇವವೃಂದತೋ ಮಹಾನ್ ಯ ಏವ ಕೇಶವಃ ।
ಸಮಸ್ತದೇವನಾಮವಾಂಸ್ತದೀಯಭಕ್ತಿತೋ ಬಲಮ್ ॥ ೧೫ ॥

ಸಮಸ್ತ ದೇವಸಮೂಹಕ್ಕಿಂತಲೂ ಯಾರು ಉತ್ತಮನೋ, ಯಾರು ಸಮಸ್ತದೇವತೆಗಳ ನಾಮಗಳಿಂದಲೂ ಕರೆಸಿಕೊಳ್ಳುವನೋ ಅವನು ಶ್ರೀಕೇಶವ. ಅವನ ಭಕ್ತಿಯಿಂದಲೇ ನನ್ನಲ್ಲಿ ಬಲ ವ್ಯಕ್ತವಾಗುತ್ತದೆ.

ಯ ಏವ ದೇವನಾಮಧಾ ಇತಿ ಶ್ರುತಿರ್ಜಗಾದ ಹಿ ।
ಮಹಾಂಶ್ಚ ದೇವ ಏಷ ತತ್ ಸ ಮೇ ಜಯಂ ವಿಧಾಸ್ಯತಿ ॥ ೧೬ ॥

ಶ್ರೀಹರಿಯೇ ಎಲ್ಲ ದೇವತೆಗಳ ನಾಮವನ್ನು ಹೊತ್ತವನೆಂದು ಶ್ರುತಿ ಹೇಳಿದೆ. ಅದರಿಂದಲೂ ಎಲ್ಲ ದೇವತೆಗಳಿಗಿಂತ ಉತ್ತಮನಾದ್ದರಿಂದಲೂ ಮಹಾದೇವನೆನಿಸಿದವನು ಶ್ರೀಹರಿ. ಅವನೆ ನನಗೆ ಜಯ ಉಂಟುಮಾಡುವನು.

ಯುಧಿಷ್ಠಿರಾಭಿಧಶ್ಚ ಯೋ ಯುಧಿಷ್ಠಿರೇ ಸ್ಥಿತಃ ಸದಾ ।
ತ್ವಯಿ ಸ್ಥಿತಸ್ತ್ವಮಿತ್ಯಸೌ ಸದಾಽಭಿಧೀಯತೇ ಹರಿಃ ॥ ೧೭ ॥

ಆ ಹರಿಯೇ ಸದಾ ಯುಧಿಷ್ಠಿರನಲ್ಲಿದ್ದು ಯುಧಿಷ್ಠಿರನ ನಾಮದಿಂದ ಕರೆಸಿಕೊಳ್ಳುತ್ತಾನೆ. ನಿನ್ನಲ್ಲಿದ್ದು 'ತ್ವಂ' ಎಂಬ ನಾಮದಿಂದಲೂ ಕರೆಸಿಕೊಳ್ಳುತ್ತಾನೆ.

ಇತಿ ಬ್ರುವಾಣೋ ಮಲ್ಲಂ ತಮಭಿಯಾತೋ ವೃಕೋದರಃ ।
ಅನಯನ್ಮೃತ್ಯುಲೋಕಾಯ ಬಲಾಢ್ಯೈರಪಿ ದುರ್ಜಯಮ್ ॥ ೧೮ ॥

ಭೀಮಸೇನ ಹೀಗೆ ಹೇಳುತ್ತ, ಬಲಾಢ್ಯರಿಗೂ ಗೆಲ್ಲಲಾಗದಿದ್ದ ಆ ಮಲ್ಲನನ್ನು ಆಕ್ರಮಿಸಿ ಮೃತ್ಯುಲೋಕಕ್ಕೆ ಕಳುಹಿಸಿಕೊಟ್ಟ.

★ ★ ★ ★

ಹದಿನೈದನೆಯ ಅಧ್ಯಾಯ

ಪಾಂಡವರಿಂದ ತಮ್ಮ ತಮ್ಮ ವ್ಯಾಪಾರಗಳಿಂದ ವಿರಾಟನ ತೋಷಣ ಮತ್ತು ಶಂಕರೋತ್ಸವದಲ್ಲಿ ಭೀಮಸೇನನಿಂದ ಮಹಾಮಲ್ಲನ ವಧೆ

ಜನಮೇಜಯಃ

ಏವಂ ವಿರಾಟನಗರೇ ವಸಂತಃ ಸತ್ಯವಿಕ್ರಮಾಃ ।
ಅತ ಊರ್ಧ್ವಂ ನರವ್ಯಾಘ್ರಾಃ ಕಿಮಕುರ್ವತ ಪಾಂಡವಾಃ ॥೧॥

ಜನಮೇಜಯ– ಸತ್ಯವಿಕ್ರಮರೂ, ನರಶ್ರೇಷ್ಠರೂ ಆದ ಪಾಂಡವರು ಹೀಗೆ ವಿರಾಟನಗರದಲ್ಲಿ ವಾಸಮಾಡುತ್ತಾ ಮುಂದೆ ಏನು ಮಾಡಿದರು?

ವೈಶಂಪಾಯನಃ

ಏವಂ ತೇ ನ್ಯವಸಂಸ್ತತ್ರ ಪ್ರಚ್ಛನ್ನಾಃ ಕುರುನಂದನಾಃ ।
ಆರಾಧಯಂತೋ ರಾಜಾನಂ ಯದಕುರ್ವತ ತಚ್ಛೃಣು ॥೨॥

ವೈಶಂಪಾಯನ– ಆ ಕುರುನಂದನು ಪ್ರಚ್ಛನ್ನವೇಷವನ್ನು ಧರಿಸಿ ವಾಸಮಾಡಿ ರಾಜನನ್ನು ಸಂತೋಷಪಡಿಸುತ್ತಾ ಏನು ಮಾಡಿದರು ಎಂಬುದನ್ನು ಕೇಳು.

ತೃಣಬಿಂದುಪ್ರಸಾದಾಚ್ಚ ಧರ್ಮಸ್ಯ ಚ ಮಹಾತ್ಮನಃ ।
ಅಜ್ಞಾತವಾಸಮೇವಂ ತೇ ವಿರಾಟನಗರೇऽವಸನ್ ॥೩॥

ತೃಣಬಿಂದು ಋಷಿಗಳ ಅನುಗ್ರಹದಿಂದಲೂ ಮತ್ತು ಮಹಾತ್ಮನಾದ ಯಮಧರ್ಮನ ಅನುಗ್ರಹದಿಂದಲೂ ಅವರು ಹೀಗೆ ವಿರಾಟನಗರದಲ್ಲಿ ಅಜ್ಞಾತವಾಸವನ್ನು ಮಾಡಿದರು.

ಯುಧಿಷ್ಠಿರಃ ಸಭಾಸ್ತಾರಃ ಸಭ್ಯಾನಾಮಭವತ್ ಪ್ರಿಯಃ ।
ತಥೈವ ಚ ವಿರಾಟಸ್ಯ ಸಪುತ್ರಸ್ಯ ವಿಶಾಂಪತೇ ॥೪॥

ಎಲೈ ರಾಜನೇ, ಯುಧಿಷ್ಠಿರನು ಸಭಾಸ್ತಾರನಾಗಿ ಎಲ್ಲಾ ಸಭಾಸದರಿಗೂ ವಿರಾಟನಿಗೂ ಮತ್ತು ಅವನ ಪುತ್ರರಿಗೂ ಪ್ರಿಯನಾದನು.

ಸ ಹ್ಯಕ್ಷಹೃದಯಜ್ಞಸ್ತಾನ್ ಕ್ರೀಡಯಾಮಾಸ ಪಾಂಡವಃ ।
ಅಕ್ಷವತ್ಯಾಂ ಯಥಾಕಾಮಂ ಸೂತ್ರಬದ್ಧಾನಿವ ದ್ವಿಜಾನ್ ॥೫॥

ಈಗ ಅಕ್ಷಹೃದಯವನ್ನು ತಿಳಿದ ಪಾಂಡವನು ಪಗಡೆಯ ಆಟದಲ್ಲಿ ತನಗೆ ಇಷ್ಟ ಬಂದಂತೆ ದಾರದಿಂದ ಕಟ್ಟಿದ ಪಕ್ಷಿಗಳಂತೆ ಅವರಿಂದ ಪಗಡೆ ಆಟವನ್ನು ಆಡಿಸಿದನು.

ಅಜ್ಞಾತಂ ಚ ವಿರಾಟಸ್ಯ ವಿಜಿತ್ಯ ವಸು ಧರ್ಮರಾಟ್ ।
ಭ್ರಾತೃಭ್ಯಃ ಪುರುಷವ್ಯಾಘ್ರೋ ಯಥೇಷ್ಟಂ ಸಂಪ್ರಯಚ್ಛತಿ ॥೬॥

ವಿರಾಟನಿಗೆ ತಿಳಿಯದಂತೆ ಪುರುಷವ್ಯಾಘ್ರನಾದ ಧರ್ಮರಾಜನು ಬೇರೆಯವರ ಜೊತೆಯಲ್ಲಿಯೂ ಆಟವಾಡಿ ಧನವನ್ನು ಗೆದ್ದು ಅದನ್ನು ತಮ್ಮಂದಿರಿಗೆ ಯಥೇಷ್ಟವಾಗಿ ಕೊಡುತ್ತಿದ್ದನು.

ಭೀಮಸೇನೋಽಪಿ ಮಾಂಸಾನಿ ಭಕ್ಷ್ಯಾಣಿ ವಿವಿಧಾನಿ ಚ ।
ಅತಿಸೃಷ್ಟಾನಿ ಮಾತ್ಸ್ಯೇನ ವಿಕ್ರೀಣನ್ನಿವ ಭ್ರಾತೃಷು ॥೭॥

ಭೀಮಸೇನನೂ ಸಹ ವಿರಾಟನು ಕೊಟ್ಟ ಮಾಂಸಗಳನ್ನು, ವಿವಿಧವಾದ ಭಕ್ಷ್ಯಗಳನ್ನು ಉಳಿದುದನ್ನು ತಮ್ಮಂದಿರಿಗೆ ಮಾರುವಂತೆ ಕೊಡುತ್ತಿದ್ದನು (ಸುಮ್ಮನೆ ಕೊಟ್ಟರೆ ಯಾರಾದರೂ ಪರಸ್ಪರ ಸಂಬಂಧವನ್ನು ತಿಳಿಯಬಹುದು ಎಂದು ಮಾರುವ ಸೋಗಿನಿಂದ ಕೊಡುತ್ತಿದ್ದನು ಎಂದು ಅಭಿಪ್ರಾಯ-ವಾದಿರಾಜರು).

ವಾಸಾಂಸಿ ಪರಿಜೀರ್ಣಾನಿ ಲಬ್ಧಾನ್ಯಂತಃಪುರೇಽರ್ಜುನಃ ।
ವಿಕ್ರೀಣನ್ ನಾಮ ಸರ್ವೇಭ್ಯಃ ಪಾಂಡವೇಭ್ಯಃ ಪ್ರಯಚ್ಛತಿ ॥೮॥

ಅರ್ಜುನನೂ ಸಹ ಅಂತಃಪುರದಲ್ಲಿ ತನಗೆ ಕೊಟ್ಟ ಸ್ವಲ್ಪ ಹಳೆಯ ವಸ್ತ್ರಗಳನ್ನು ಮಾರುವವನಂತೆ ಎಲ್ಲ ಸಹೋದರರಿಗೂ ಕೊಡುತ್ತಿದ್ದನು.

ಬೀಭತ್ಸುರಪಿ ಗೀತೇನ ನೃತೇನ ಚ ಪಾಂಡವಃ ।
ವಿರಾಟಂ ತೋಷಯಾಮಾಸ ಸರ್ವಾಶ್ಚಾಂತಃಪುರೇ ಸ್ತ್ರಿಯಃ ॥೯॥

ಪಾಂಡುಪುತ್ರನಾದ ಅರ್ಜುನನೂ ತನ್ನ ಗಾನದಿಂದ ಮತ್ತು ಒಳ್ಳೆಯ ಮಾತಿನಿಂದ ವಿರಾಟನನ್ನು ಮತ್ತು ಅಂತಃಪುರದ ಎಲ್ಲಾ ಸ್ತ್ರೀಯರನ್ನು ಸಂತೋಷಪಡಿಸುತ್ತಿದ್ದನು.

ಅಶ್ವೈರ್ವಿನೀತೈರ್ಜವನೈಸ್ತತ್ರ ತತ್ರ ಸಮಾಗತೈಃ ।
ತೋಷಯಾಮಾಸ ನಕುಲೋ ರಾಜಾನಂ ರಾಜಸತ್ತಮ ॥೧೦॥

ನಕುಲೋಽಪಿ ಧನಂ ಲಬ್ಧ್ವಾ ಕೃತೇ ಕರ್ಮಣಿ ವಾಜಿನಾಮ್ ।
ತುಷ್ಟೇ ತಸ್ಮಿನ್ ನರಪತೌ ಪಾಂಡವೇಭ್ಯಃ ಪ್ರಯಚ್ಛತಿ ॥೧೧॥

ಎಲೈ ರಾಜಶ್ರೇಷ್ಠನೇ, ನಕುಲನು ಅವನ ಬಳಿಗೆ ಬಂದ ಅಶ್ವಗಳನ್ನು ಪಳಗಿಸಿ ಒಳ್ಳೆಯ ವೇಗವನ್ನು ಕಲಿಸಿ ರಾಜನನ್ನು ಸಂತೋಷಪಡಿಸುತ್ತಿದ್ದನು. ನಕುಲನೂ ಸಹ ಅಶ್ವಕಾರ್ಯವನ್ನು ಮಾಡಿ ಸಂತೋಷಗೊಂಡ ರಾಜನು ಕೊಟ್ಟ ಧನವನ್ನು ಉಳಿದ ಪಾಂಡವರಿಗೆ ಕೊಡುತ್ತಿದ್ದನು.

ವಿನೀತಾನ್ ಋಷಭಾನ್ ದೃಷ್ಟ್ವಾ ಸಹದೇವೇನ ಭಾವಿತಾನ್ ।
ಸ ತು ಹೃಷ್ಟಶ್ಚ ಸಂಪ್ರಾದಾತ್ ತದಾ ರಾಜಾ ಧನಂ ಬಹು ॥೧೨॥

ಸಹದೇವನು ಎತ್ತುಗಳನ್ನು ಪಳಗಿಸುವುದನ್ನು ನೋಡಿ ಸಂತೋಷಗೊಂಡ ರಾಜನು ಅವನಿಗೆ ಬಹಳ ಧನವನ್ನು ಕೊಡುತ್ತಿದ್ದನು.

ಸಹದೇವೋ ಗವಾಂ ನಿತ್ಯಂ ಕೃತೇ ಮಂಗಲಕರ್ಮಣಿ ।
ಅಧ್ಯಕ್ಷತ್ವಾಚ್ಚ ಯಲ್ಲೇಭೇ ರಾಜ್ಞಃ ಕಲ್ಯಾಣಕಾರ್ಯವಾನ್ ॥೧೩॥

ಸಹದೇವೋಽಪಿ ಗೋಪಾನಾಂ ವೇಷಮಾಸ್ಥಾಯ ಪಾಂಡವಃ ।
ದಧಿ ಕ್ಷೀರಂ ಘೃತಂ ಚೈವ ಪಾಂಡವೇಭ್ಯಃ ಪ್ರಯಚ್ಛತಿ ॥೧೪॥

ಗವಾಧ್ಯಕ್ಷನಾದ ಸಹದೇವನು ಗೋವುಗಳಿಗೆ ನಿತ್ಯವೂ ಮಂಗಳಕಾರ್ಯವನ್ನು ಮಾಡಿ, ರಾಜನಿಗೆ ಕಲ್ಯಾಣವನ್ನು ಉಂಟುಮಾಡಿ ಅವನಿಂದ ಧನವನ್ನು ಪಡೆಯುತ್ತಿದ್ದನು. ಗೋಪಾಲಕರ ವೇಷವನ್ನು ಧರಿಸಿದ ಪಾಂಡವನಾದ ಸಹದೇವನೂ ಸಹ ಪಾಂಡವರಿಗೆ ದಧಿ-ಕ್ಷೀರ ಮತ್ತು ಘೃತಗಳನ್ನು ಕೊಡುತ್ತಿದ್ದನು.

ಕೃಷ್ಣಾಽಪಿ ಸರ್ವಾನ್ ಭ್ರಾತೄಂಸ್ತಾನ್ ನಿರೀಕ್ಷಂತೀ ತಪಸ್ವಿನೀ ।
ಯಥಾ ಪುನರವಿಜ್ಞಾತಾ ತಥಾ ಚರತಿ ಭಾಮಿನೀ ॥೧೫॥

ದ್ರೌಪದಿಯೂ ಸಹ ದುಃಖದಿಂದ ಕೂಡಿದವಳಾಗಿ ಯಾರಿಗೂ ತಿಳಿಯದಂತೆ ಆ ಎಲ್ಲ ಸಹೋದರರನ್ನು ನೋಡುತ್ತಾ (ಕೋಪದಿಂದ) ಅಸಮಾಧಾನದಿಂದ ಸಂಚರಿಸುತ್ತಿದ್ದಳು.

ಏವಂ ಸಂಭಾದಯಂತಸ್ತೇ ತದಾऽನ್ಯೋನ್ಯಂ ಮಹಾರಥಾಃ ।
ಪ್ರೇಕ್ಷಮಾಣಾಸ್ತದಾ ಕೃಷ್ಣಾಮೂಷುಶ್ಚನ್ನಾ ನರಾಧಿಪ ॥೧೬॥

ಎಲೈ ರಾಜನೇ, ಹೀಗೆ ಆ ಮಹಾರಥರು ತಮ್ಮ ನಿಜರೂಪವನ್ನು ಮರೆಸಿ ದ್ರೌಪದಿಯನ್ನು ಮತ್ತು ಪರಸ್ಪರವಾಗಿ ಸಹೋದರರನ್ನೂ ನೋಡುತ್ತಾ ಪ್ರಚ್ಛನ್ನ ವೇಷದಿಂದ ಕಾಲವನ್ನು ಕಳೆದರು.

ವಿರಾಟನಗರೇ ಚೇರುಃ ಪುನರ್ಗರ್ಭೇ ಧಿತಾ ಇವ ।
ಸಶಂಕಾ ಧಾರ್ತರಾಷ್ಟ್ರಸ್ಯ ಭಯಾತ್ ಪಾಂಡುಸುತಾಸ್ತದಾ ॥೧೭॥

ಪಾಂಡುಸುತರು ವಿರಾಟನಗರದಲ್ಲಿ ಪುನಃ ಗರ್ಭದಲ್ಲಿ ಬೆಳೆದಂತೆ ದುರ್ಯೋಧನನ ಭಯವನ್ನು ಯಾವಾಗಲೂ ಶಂಕಿಸುತ್ತಾ ಕಳೆದರು.

ಅಥ ಮಾಸೇ ಚತುರ್ಥೇ ತು ಶಂಕರಸ್ಯ ಮಹೋತ್ಸವಃ ।
ಆಸೀತ್ ಸಮೃದ್ಧೋ ಮತ್ಸ್ಯೇಷು ಪುರುಷಾಣಾಂ ಸುಸಮ್ಮತಃ ॥೧೮॥

ಅನಂತರ ನಾಲ್ಕನೆಯ ತಿಂಗಳಿನಲ್ಲಿ ಮತ್ಸ್ಯದೇಶದಲ್ಲಿ ಎಲ್ಲರಿಗೂ ಸಮ್ಮತವಾದ ಶಂಕರನ ಮಹೋತ್ಸವವು ಜರುಗಿತು.

ತತ್ರ ಮಲ್ಲಾಃ ಸಮಾಪೇತುರ್ದಿಗ್ಭ್ಯೋ ರಾಜನ್ ಮಹಾಬಲಾಃ ॥೧೯॥

ಮಹಾಕಾಯಾ ಮಹಾವೀರ್ಯಾಃ ಕಾಲಕೇಯಾ ಇವಾಸುರಾಃ ।
ವೀರ್ಯವಂತೋ ಬಲೋದಗ್ರಾ ರಾಜ್ಞಾ ಸಮಭಿಪೂಜಿತಾಃ ॥೨೦॥

ರಾಜನೇ, ಅಲ್ಲಿಗೆ ಮಹಾಬಲರೂ, ದೊಡ್ಡ ದೇಹವುಳ್ಳವರೂ ಕಾಲಕೇಯ ರಾಕ್ಷಸರಂತೆ ಮಹಾಪರಾಕ್ರಮಿಗಳೂ, ಬಲದಿಂದ ಉನ್ಮತ್ತರೂ ರಾಜನಿಂದ ಅನೇಕ ಬಾರಿ ಗೌರವವನ್ನು ಸ್ವೀಕರಿಸಿದವರೂ ಆದ ಅನೇಕ ಮಲ್ಲರು ಎಲ್ಲ ದಿಕ್ಕುಗಳಿಂದಲೂ ಬಂದರು.

ಸಿಂಹಸ್ಕಂಧಕಟಗ್ರೀವಾಃ ಸ್ವದಾತಾ ಮನಸ್ವಿನಃ ।
ಅಸಕೃಲ್ಲಬ್ಧಲಜ್ಜಾಸ್ತೇ ರಂಗೇ ಪಾರ್ಥಿವಸನ್ನಿಧೌ ॥೨೧॥

ಅವರು ಸಿಂಹದಂತಹ ಭುಜ, ಕಟಿ ಮತ್ತು ಕತ್ತುಗಳನ್ನು ಉಳ್ಳವರಾಗಿ ಒಳ್ಳೆಯ ವಸ್ತ್ರಗಳನ್ನು ಧರಿಸಿ ಧೈರ್ಯಶಾಲಿಗಳಾಗಿ ಅನೇಕ ಬಾರಿ ರಾಜಸನ್ನಿಧಿಯಲ್ಲಿ ಮಲ್ಲಯುದ್ಧದಲ್ಲಿ ಪರಾಜಿತರೂ ಆಗಿದ್ದವರಾಗಿದ್ದರು.

ತೇಷಾಮೇಕೋ ಮಹಾನಾಸೀತ್ ಸರ್ವಮಲ್ಲಾನ್ ಸಮಾಹ್ವಯತ್ ।
ವ್ಯಾವಲ್ಗಮಾನೋ ದದೃಶೇ ಗರ್ಜಿತೋದ್ಗತಿಭಿಃ ಸ್ಥಿತಃ ॥೨೨॥

ಅವರಲ್ಲಿ ಒಬ್ಬ ಮಹಾಮಲ್ಲನಿದ್ದನು. ಅವನು ಗಟ್ಟಿಯಾಗಿ ಮಾತನಾಡುತ್ತಾ, ಗರ್ಜನೆಯನ್ನು ಮಾಡುತ್ತಾ , ಗರ್ವದಿಂದ ನಡೆದಾಡುತ್ತಾ ಉಳಿದ ಎಲ್ಲಾ ಮಲ್ಲರನ್ನೂ ಆಹ್ವಾನ ಮಾಡುತ್ತಿದ್ದುದು ಕಂಡುಬಂದಿತು.

ವಿತ್ರಸ್ತಮನಸಃ ಸರ್ವೇ ಮಲ್ಲಾಸ್ತೇ ಹತಚೇತಸಃ ।
ಅವಾಙ್ಮುಖಾಶ್ಚ ಭೀತಾಶ್ಚ ಮಲ್ಲಾಶ್ಚಾನ್ಯೇ ವಿಚೇತಸಃ ॥೨೩॥

ಉಳಿದ ಮಲ್ಲರೆಲ್ಲರೂ ಮನಸ್ಸಿನಲ್ಲಿ ಹೆದರಿ ತಮ್ಮ ಚೇತಸ್ಸನ್ನೇ ಕಳೆದುಕೊಂಡವರಂತೆ ಭೀತರಾಗಿ ಮುಖವನ್ನು ಕೆಳಗೆ ಮಾಡಿದರು. ಇನ್ನೂ ಕೆಲವು ಮಲ್ಲರು ಮೂರ್ಛೆ ಹೋದರು.

ಅಣುತ್ವಮಪರೇ ಚೈವ ವಾಂಛಂತೀವ ಪ್ರವಿಹ್ವಲಾಃ ।
ಗಾಂ ಪ್ರವೇಷ್ಟುಮಿವೇಚ್ಛಂತಿ ಖಂ ಗಂತುಮಿವ ಚೋತ್ಥಿತಾಃ ॥೨೪॥

ಇನ್ನು ಕೆಲವರು ಮನಸ್ಸಿನಲ್ಲಿ ಬಹಳ ವಿಹ್ವಲರಾಗಿ ತಾವು ಬಾಲಕರಾಗಲು ಬಯಸಿದಂತೆ ಕಂಡುಬಂದಿತು. ಕೆಲವರು ಭೂಮಿಯೊಳಗೆ ಪ್ರವೇಶ ಮಾಡಲು ಇಚ್ಛಿಸಿದರು. ಇನ್ನು ಕೆಲವರು ಆಕಾಶಕ್ಕೆ ಹಾರುವಂತೆ ಎದ್ದುನಿಂತರು.

ತ್ರಸ್ತಾಃ ಶಾಂತಾ ವಿಷಣ್ಣಾಶ್ಚ ನಿಃಶಬ್ದಾ ವಿಹ್ವಲೇಕ್ಷಣಾಃ ।
ವಿರಾಟರಾಜಮಲ್ಲಾಸ್ತೇ ಭಗ್ನಚಿತ್ತಾ ಹತಪ್ರಭಾಃ ॥೨೫॥

ವಿರಾಟರಾಜನ ಮಲ್ಲರೆಲ್ಲರೂ ಹೆದರಿ ಶಾಂತರಾಗಿ, ವಿಷಾದದಿಂದ ಕೂಡಿ ನಿಶ್ಶಬ್ದರಾಗಿ ಅಧೀರಕಣ್ಣುಗಳನ್ನು ಹೊಂದಿದವರಾಗಿ ತಮ್ಮ ಕಾಂತಿಯನ್ನು ಕಳೆದುಕೊಂಡು ಭಗ್ನಚಿತ್ತರಾದರು.

ಮಲ್ಲೇಂದ್ರನಿಹತಾಃ ಸರ್ವೇ ನ ಕಿಂಚಿತ್ ಪ್ರವದಂತಿ ತೇ ।
ಮಲ್ಲ ಉದ್ವೀಕ್ಷ್ಯ ತಾನ್ ಮಲ್ಲಾನ್ ತ್ರಸ್ತಾನ್ ವಾಕ್ಯಮುವಾಚ ಹ ॥

ಆ ದೊಡ್ಡ ಮಲ್ಲನನ್ನು ನೋಡಿ ಹೆದರಿದ ಅವರು ಯಾರೂ ಮಾತನಾಡಲಿಲ್ಲ. ಅವರೆಲ್ಲರೂ ಹೆದರುವುದನ್ನು ನೋಡಿ ಆ ಮಹಾಮಲ್ಲನು ಅವರನ್ನು ಕುರಿತು ಕೇಳಿದನು.

ಆಗತಂ ಮಲ್ಲರಾಜಂ ಮಾಂ ಕೃತ್ಸ್ನೇ ಪೃಥಿವಿಮಂಡಲೇ ।
ಸಿಂಹವ್ಯಾಘ್ರಗಜೈಃ ಸಾರ್ಧಂ ಕ್ರೀಡಂತಂ ವಿದ್ಧಿ ಭೂಪತೇ ॥೨೭॥

ರಾಜನೇ, ನಾನು ಸಮಗ್ರವಾದ ಪೃಥಿವಿ ಮಂಡಲದಲ್ಲಿ ಶ್ರೇಷ್ಠನಾದ ಮಲ್ಲರಾಜನು. ನಾನು ಸಿಂಹ, ವ್ಯಾಘ್ರ , ಗಜಗಳ ಜೊತೆಯಲ್ಲಿ ಆಡುತ್ತೇನೆ ಎಂದು ನೀನು ತಿಳಿ.

ಮಲ್ಲೇಂದ್ರಸ್ಯ ವಚಃ ಶ್ರುತ್ವಾ ಬಲದರ್ಪಸಮನ್ವಿತಮ್ ।
ವಿರಾಟೋ ವೀಕ್ಷ್ಯ ತಾನ್ ಮಲ್ಲಾನ್ ತ್ರಸ್ತಾನ್ ವಾಕ್ಯಮುವಾಚ ಹ ॥

ಅನೇನ ಸಹ ಮಲ್ಲೇನ ಕೋ ಯೋದ್ಧುಂ ಶಕ್ತಿಮಾನ್ ನರಃ ॥೨೯॥

ಆ ಮಲ್ಲರಾಜನ ಬಲದರ್ಪಸಹಿತವಾದ ಮಾತನ್ನು ಕೇಳಿ ವಿರಾಟರಾಜನು ತನ್ನ ಎಲ್ಲಾ ಮಲ್ಲರೂ ಹೆದರಿರುವುದನ್ನು ನೋಡಿ ಈ ಮಲ್ಲನ ಜೊತೆಯಲ್ಲಿ ಯುದ್ಧ ಮಾಡಲು ಯಾರಿಗೆ ಶಕ್ತಿ ಇದೆ ಎಂದು ಕೇಳಿದನು.

ವೈಶಂಪಾಯನಃ

ತತೋ ಯುಧಿಷ್ಠಿರೋಽವಾದೀತ್ ಶ್ರುತ್ವಾ ಮತ್ಸ್ಯಪತೇರ್ವಚಃ ॥೩೦॥

ಅಸ್ತಿ ಮಲ್ಲೋ ಮಹಾರಾಜ ಮಯಾ ದೃಷ್ಟೋ ಯುಧಿಷ್ಠಿರೇ ।
ಅನೇನ ಸಹ ಮಲ್ಲೇನ ಯೋದ್ಧುಂ ಶಕ್ನೋತಿ ಭೂಪತೇ ॥೩೧॥

ವೈಶಂಪಾಯನ– ಮತ್ಸ್ಯರಾಜನ ಮಾತನ್ನು ಕೇಳಿ ಯುಧಿಷ್ಠಿರನು ಹೇಳಿದನು– 'ಮಹಾರಾಜನೇ, ನಾನು ಯುಧಿಷ್ಠಿರನ ಸಮೀಪದಲ್ಲಿ ನೋಡಿದ ಒಬ್ಬ ಮಲ್ಲನಿದ್ದಾನೆ. ಭೂಪತಿಯೇ, ಅವನಿಗೆ ಈ ಮಲ್ಲನ ಜೊತೆಯಲ್ಲಿ ಯುದ್ಧಮಾಡಲು ಸಾಧ್ಯವಾಗುತ್ತದೆ'.

ಯೋಽಸೌ ಮಲ್ಲೋ ಮಯಾ ದೃಷ್ಟಃ ಪೂರ್ವಂ ಯೌಧಿಷ್ಠಿರೇ ಬಲೇ ।
ಸೋಽಯಂ ಮಲ್ಲೋ ವಸತ್ಯೇಷ ರಾಜಂಸ್ತವ ಮಹಾನಸೇ ॥೩೨॥

ನಾನು ಯುಧಿಷ್ಠಿರನ ಸಮೀಪದಲ್ಲಿ ಹಿಂದೆ ಯಾವ ಮಲ್ಲನನ್ನು ನೋಡಿದ್ದೆನೋ ರಾಜನೇ, ಅವನು ಈಗ ನಿನ್ನ ಮಹಾನಸ (ಅಡುಗೆಯ ಮನೆ)ದಲ್ಲಿ ವಾಸಿಸುತ್ತಿದ್ದಾನೆ.

ಯುಧಿಷ್ಠಿರವಚಃ ಶ್ರುತ್ವಾ ವ್ಯಕ್ತಮಾಹೇತಿ ಪಾರ್ಥಿವಃ ।
ಸೋಽಪ್ಯಥಾಹೂಯತಾಂ ಕ್ಷಿಪ್ರಂ ಯೋದ್ಧುಂ ಮಲ್ಲೇನ ಸಂಸದಿ ॥೩೩॥

ಯುಧಿಷ್ಠಿರನ ಮಾತನ್ನು ಕೇಳಿ ಯುಕ್ತವಾದ ಮಾತುಗಳು ಎಂದು ತಿಳಿದ ರಾಜನು ಈ ಮಲ್ಲನ ಜೊತೆಯಲ್ಲಿ ಸಭೆಯಲ್ಲಿ ಯುದ್ಧಮಾಡಲು ಅವನನ್ನೂ ಬೇಗ ಕರೆಯಿರಿ (ಎಂದು ಆಜ್ಞೆಯನ್ನು ಮಾಡಿದನು).

ಭೀಮಸೇನೋ ವಿರಾಟೇನ ಆಹೂತಶ್ಚೋದಿತಸ್ತಥಾ ।
ಯೋದ್ಧುಂ ತತೋಽಬ್ರವೀದ್ ವಾಕ್ಯಂ ಯೋದ್ಧುಂ ಶಕ್ನೋಮಿ ಭೂಪತೇ

ನರೇಂದ್ರ ತೇ ಪ್ರಭಾವೇನ ಶ್ರಿಯಾ ಶಕ್ಯಾ ಚ ಶಾಸನಾತ್ ।
ಅನೇನ ಸಹ ಮಲ್ಲೇನ ಯೋದ್ಧುಂ ರಾಜೇಂದ್ರ ಶಕ್ನುಯಾಮ್ ॥೩೫॥

ಭೀಮಸೇನನು ವಿರಾಟನಿಂದ ಆಹೂತನಾಗಿ ಯುದ್ಧವನ್ನು ಮಾಡಲು ಪ್ರೇರಿಸಲ್ಪಟ್ಟವನಾಗಿ ರಾಜನನ್ನು ಕುರಿತು, ಎಲೈ ಭೂಪತಿಯೇ, ನರೇಂದ್ರನೇ, ನಿನ್ನ ಪ್ರಭಾವದಿಂದ, ಐಶ್ವರ್ಯದಿಂದ, ಶಕ್ತಿಯಿಂದ ಮತ್ತು ಆಜ್ಞೆಯಿಂದ ನಾನು ಈ ಮಲ್ಲನ ಜೊತೆಯಲ್ಲಿ ಯುದ್ಧವನ್ನು ಮಾಡಲು ಸಮರ್ಥನಾಗುತ್ತೇನೆ ಎಂದು ಹೇಳಿದನು.

ಯುಧಿಷ್ಠಿರಕೃತಶ್ರೇಯಾ ವಿಶ್ರಮಶ್ಚ ವಿಶಾಂಪತೇ ।
ಮಹಾದೇವಸ್ಯ ಭಕ್ತ್ಯಾ ಚ ತಂ ಮಲ್ಲಂ ಪಾತಯಾಮ್ಯಹಮ್ ॥೩೬॥

ಎಲೈ ರಾಜನೇ, ಯುಧಿಷ್ಠಿರನು ಹಿಂದೆ ನನಗೆ ಮಾಡಿದ ಶ್ರೇಯಸ್ಸಿನಿಂದಲೂ ಮತ್ತು ಮಹಾದೇವನಾದ ನಾರಾಯಣನ ಭಕ್ತಿಯ ಬಲದಿಂದಲೂ ನಾನು ಯಾವುದೇ ಶ್ರಮವಿಲ್ಲದೇ ಈ ಮಲ್ಲನನ್ನು ಕೆಡವುತ್ತೇನೆ (ಲಕ್ಷಾಲಂಕಾರ).

ವೈಶಂಪಾಯನಃ

ಚೋದಿತೋ ಭೀಮಸೇನಸ್ತು ಮಲ್ಲಮಾಹೂಯ ಮಂಡಲೇ ।
ಯೋದ್ಧುಂ ವ್ಯವಸ್ಥಿತೋ ವೀರೋ ರೇಣುಂ ಸಮ್ಮೃಜ್ಯ ಹಸ್ತಯೋಃ ॥

ಅಥ ಸೂದೇನ ತಂ ಮಲ್ಲಂ ಯೋಧಯಾಮಾಸ ಪಾರ್ಥಿವಃ ॥೩೮॥

ವೈಶಂಪಾಯನ– ಹಾಗೆ ಪ್ರೇರಿಸಲ್ಪಟ್ಟ ಭೀಮಸೇನನು ಮಂಡಲದಲ್ಲಿ ಮಲ್ಲನನ್ನು ಕರೆದು ಯುದ್ಧವನ್ನು ಮಾಡಲು ನಿಶ್ಚಯಿಸಿ, ವೀರನಾದ ಅವನು ಕೈಗಳಿಗೆ ಧೂಳು ಮಣ್ಣನ್ನು ಸವರಿಕೊಂಡನು. ಅನಂತರ ರಾಜನು ತನ್ನ ಸೂದನಿಂದ ಆ ಮಲ್ಲನ ಜೊತೆಯಲ್ಲಿ ಯುದ್ಧವನ್ನು ಮಾಡಿಸಿದನು.

ನೋದ್ಯಮಾನಸ್ತತೋ ಭೀಮೋ ದುಃಖೇನೇವಾಕರೋತ್ ಪದಮ್ ।
ನ ಹಿ ಶಕ್ನೋಮಿ ವಿವೃತಂ ಪ್ರತ್ಯಾಖ್ಯಾತುಂ ನರಾಧಿಪಮ್ ॥೩೯॥

ಆಗ ಯುದ್ಧ ಮಾಡಲು ಪ್ರೇರಿಸಲ್ಪಟ್ಟ ಭೀಮನು ಮೊದಲು ರಾಜನನ್ನು ಸ್ಪಷ್ಟವಾಗಿ ನಿರಾಕರಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳುತ್ತಾ ಕಷ್ಟದಿಂದಲೋ ಎಂಬಂತೆ ನಡೆದಾಡಿದನು.

ತತಃ ಸ ಪುರುಷವ್ಯಾಘ್ರಃ ಶಾರ್ದೂಲಶಿಥಿಲಂ ಚರನ್ ।
ಪ್ರವಿವೇಶ ಮಹಾರಂಗಂ ವಿರಾಟಮಭಿಹರ್ಷಯನ್ ॥೪೦॥

ಅನಂತರ ಪುರುಷವ್ಯಾಘ್ರನಾದ ಅವನು ವ್ಯಾಘ್ರದಂತೆ ನಿಧಾನವಾಗಿ ಚಲಿಸುತ್ತಾ ಮಹಾರಂಗವನ್ನು ಪ್ರವೇಶಿಸಿ ವಿರಾಟನಿಗೆ ಸಂತೋಷವನ್ನು ಉಂಟುಮಾಡಿದನು.

ಬದ್ಧಕಕ್ಷೋಽಥ ಕೌಂತೇಯಃ ತತಸ್ತಾನ್ ಹರ್ಷಯನ್ ಜನಾನ್ ।
ತತ್ರ ತಂ ವೃತ್ರಸಂಕಾಶಂ ಭೀಮೋ ಮಲ್ಲಂ ಸಮಾಹ್ವಯತ್ ॥೪೧॥

ಕಕ್ಷೇ ಮಲ್ಲಂ ಗೃಹೀತ್ವಾ ತು ನನಾದ ಭುವಿ ಸಿಂಹವತ್ ॥೪೨॥

ಕೌಂತೇಯನಾದ ಭೀಮಸೇನನು ವಸ್ತ್ರವನ್ನು ಸರಿಯಾಗಿ ಸಿಕ್ಕಿಸಿಕೊಂಡು ಆ ಸಭಾಸದರನ್ನು ಸಂತೋಷಪಡಿಸುತ್ತಾ ವೃತ್ರಾಸುರನಂತಿದ್ದ ಆ ಮಲ್ಲನನ್ನು ಆಹ್ವಾನ ಮಾಡಿ ಪಕ್ಕೆಯಲ್ಲಿ ಅವನನ್ನು ಹಿಡಿದು ಸಿಂಹದಂತೆ ಗರ್ಜನೆ ಮಾಡಿದನು.

ತಾವುಭೌ ಸುಮಹೋತ್ಸಾಹಾವುಭೌ ಭೀಮಪರಾಕ್ರಮೌ ।
ಮತ್ತಾವಿವ ಮಹಾಕಾಯೌ ವಾರಣೌ ಸನ್ನಿಪೇತತುಃ ॥೪೩॥

ಅವರಿಬ್ಬರೂ ಬಹಳ ಉತ್ಸಾಹ ಉಳ್ಳವರೂ, ಭಯಂಕರ ಪರಾಕ್ರಮ ಉಳ್ಳವರೂ, ದೊಡ್ಡ ಶರೀರ ಉಳ್ಳವರೂ ಆಗಿ ಮದಗಜಗಳಂತೆ ಪರಸ್ಪರವಾಗಿ ಎರಗಿದರು.

ತತಸ್ತೌ ನರಶಾರ್ದೂಲೌ ಬಾಹುಯುದ್ಧಂ ಸಮೀಯತುಃ ।
ವೀರೌ ಪರಮಸಂಹೃಷ್ಟಾವನ್ಯೋನ್ಯಜಯಕಾಂಕ್ಷಿಣೌ ॥೪೪॥

ಆಸೀತ್ ಸುಭೀಮಃ ಸಂಪಾತೋ ವಜ್ರಪರ್ವತಯೋರಿವ ।
ಉಭೌ ಪರಮಸಂಹೃಷ್ಟೌ ಬಲೇನಾತಿಬಲಾವುಭೌ ॥೪೫॥

ಅನ್ಯೋನ್ಯಸ್ಯಾಂತರಂ ಪ್ರೇಪ್ಸೂ ಪರಸ್ಪರಜಯೇಷಿಣೌ ।
ಉಭೌ ಪರಮಸಂಹೃಷ್ಟೌ ಮತ್ತಾವಿವ ಮಹಾಗಜೌ ॥೪೬॥

ಅನಂತರ ಪರಮಸಂತೋಷದಿಂದ ಕೂಡಿದ ನರಶಾರ್ದೂಲರಾದ ಆ ವೀರರು ಪರಸ್ಪರ ಜಯಾಕಾಂಕ್ಷಿಗಳಾಗಿ ಬಾಹುಯುದ್ಧವನ್ನು ಮಾಡಿದರು. ಅವರಿಬ್ಬರೂ ಬಹಳ ಸಂತೋಷದಿಂದ ಕೂಡಿದವರಾಗಿ ಬಲದಲ್ಲಿ ಬಹಳ ಶ್ರೇಷ್ಠರಾಗಿದ್ದರು. ಅವರ ಪರಸ್ಪರ ಎರಗುವಿಕೆಯು ಪರ್ವತದ ಮೇಲೆ ವಜ್ರಾಯುಧವು ಬಿದ್ದಂತೆ ಬಹಳ ಭಯಂಕರವಾಗಿದ್ದಿತು. ಪರಸ್ಪರ ಜಯಾಕಾಂಕ್ಷಿಗಳಾದ ಅವರು ಪರಮಸಂತುಷ್ಟರಾಗಿ ಮದಿಸಿದ ಮಹಾಗಜಗಳಂತೆ ಇನ್ನೊಬ್ಬರ ದೌರ್ಬಲ್ಯವನ್ನು ಹುಡುಕುತ್ತಾ ಹೋರಾಡಿದರು.

ಕೃತಪ್ರತಿಕೃತೈಶ್ಚಿತ್ರೈರ್ಬಾಹುಭಿಶ್ಚ ಸುಸಂಕಟೈಃ ।
ಸನ್ನಿಪಾತಾವಧೂತೈಶ್ಚ ಪ್ರಮಾಥೋನ್ಮಂಥನೈಸ್ತಥಾ ॥೪೭॥

ಕ್ಷೇಪಣೈರ್ಮುಷ್ಟಿಭಿಶ್ಚೈವ ವರಾಹೋದ್ಧತನಿಸ್ವನೈಃ ।
ತಲೈರ್ವಜ್ರನಿಪಾತೈಶ್ಚ ಪ್ರಸೃಷ್ಟಾಭಿಸ್ತಥೈವ ಚ ॥೪೮॥

ಶಲಾಕಹಸ್ತಪಾತೈಶ್ಚ ಪಾದೋದ್ಧೂತೈಶ್ಚ ದಾರುಣೈಃ ।
ಜಾನುಭಿಶ್ಚಾಶ್ಮನಿಘ್ನೋಷ್ಯೈಃ ಶಿರೋಭಿಶ್ಚಾವಘಟ್ಟನೈಃ ॥೪೯॥

ಒಬ್ಬರು ಮಾಡಿದ ಕಾರ್ಯಕ್ಕೆ ಇನ್ನೊಬ್ಬರು ಪ್ರತಿಕಾರ್ಯವನ್ನು ಮಾಡುತ್ತಿದ್ದರು. ವಿಚಿತ್ರವಾದ ಪಟ್ಟುಗಳನ್ನು ಬಾಹುಗಳಿಂದ ಹಾಕಿ, ಸನ್ನಿಪಾತ, ಅವಧೂತ, ಪ್ರಮಾಥ, ಉನ್ಮಂಥನ, ಕ್ಷೇಪಣ, ಮುಷ್ಟಿ, ವರಾಹೋದ್ಧತ, ನಿಸ್ವನ ಮೊದಲಾದ ಕುಸ್ತಿಯ ಪ್ರಕಾರದಿಂದಲೂ; ವಜ್ರಗಳ ಪಾತದಂತಿರುವ ಹಸ್ತತಲ ಪ್ರಹಾರದಿಂದಲೂ; ಶಲಾಕ ಮತ್ತು ಹಸ್ತಗಳ ಪಾತದಿಂದಲೂ ದಾರುಣವಾದ ಪಾದಘಾತಕಗಳಿಂದಲೂ; ಬಂಡೆಯ ಶಬ್ದದಂತೆ ಕೇಳಿಬರುವ ಮಂಡಿಗಳ ಮತ್ತು ತಲೆಗಳ ಅವಘಟ್ಟನದಿಂದಲೂ ಯುದ್ಧವನ್ನು ಮಾಡಿದರು.

ತದ್ಯುದ್ಧಮಭವದ್ ಘೋರಮಶಸ್ತ್ರಂ ಬಾಹುತೇಜಸಾ ।
ಬಲಪ್ರಾಣೇನ ಶೂರಾಣಾಂ ಸಮಾಜೋತ್ಸವಸನ್ನಿಧೌ ॥೫೦॥

ಸಮಾಜೋತ್ಸವದ ಸಂದರ್ಭದಲ್ಲಿ ಬಲ ಮತ್ತು ಪ್ರಾಣಗಳಿಂದ ಶೂರರಾದ ಅವರಿಗೆ ಶಸ್ತ್ರರಹಿತವಾದ ಬಾಹುಯುದ್ಧವು ಹೀಗೆ ಘೋರವಾಗಿ ನಡೆಯಿತು.

ಅರಜ್ಯತ ಜನಃ ಸರ್ವಃ ಸೋತ್ಕೃಷ್ಟನಿನದೋತ್ಥಿತಃ ।
ಬಲಿನೋಃ ಸಂಯುಗೇ ರಾಜನ್ ವೃತ್ರವಾಸವಯೋರಿವ ॥೫೧॥

ಬಲಿಷ್ಠರಾದ ಅವರಿಬ್ಬರೂ ವೃತ್ರವಾಸವರಂತೆ ಯುದ್ಧವನ್ನು ಮಾಡುವಾಗ ಎಲೈ ರಾಜನೇ, ಎಲ್ಲ ಜನರೂ ಸಂತೋಷಗೊಂಡರು. ಶ್ರೇಷ್ಠವಾದ ಸಂತೋಷ ಶಬ್ದವು ಎಲ್ಲಕಡೆಯಲ್ಲಿಯೂ ಕೇಳಿ ಬಂದಿತು.

ಪ್ರಕರ್ಷಣಾಕರ್ಷಣಯೋರಭ್ಯಾಕರ್ಷವಿಕರ್ಷಣೈಃ ।
ಆಕರ್ಷತುರಥಾನ್ಯೋನ್ಯಂ ಜಾನುಭಿಶ್ಚಾಪಿ ಜಘ್ನತುಃ ॥೫೨॥

ಒಬ್ಬರನ್ನೊಬ್ಬರು ಎಳೆದಾಡುವುದು ಮೊದಲಾದ ಕುಸ್ತಿಯ ಪ್ರಕಾರದಿಂದ ಅವರು ಯುದ್ಧವನ್ನು ಮಾಡಿ ಮಂಡಿಗಳಿಂದಲೂ ಒಬ್ಬರನ್ನೊಬ್ಬರು ಹೊಡೆದರು.

ತತಃ ಶಬ್ದೇನ ಮಹತಾ ಭರ್ತ್ಸಯಂತೌ ಪರಸ್ಪರಮ್ ।
ವ್ಯೂಢೋರಸ್ಕೌ ದೀರ್ಘಭುಜೌ ನಿಯುದ್ಧಕುಶಲಾವುಭೌ ॥೫೩॥

ಬಾಹುಭಿಃ ಸಮಸಜ್ಜೇತಾಮಾಯಸೈಃ ಪರಿಘೈರಿವ ॥೫೪॥

ಅನಂತರ ದೊಡ್ಡ ಸ್ವರದಿಂದ ಒಬ್ಬರನ್ನೊಬ್ಬರು ಹೀಯಾಳಿಸುತ್ತಾ ಪುಷ್ಟವಾದ ವಕ್ಷಸ್ಥಲ ಮತ್ತು ಭುಜಗಳುಳ್ಳ ಕುಸ್ತಿಯ ಪಟುಗಳಾದ ಅವರಿಬ್ಬರೂ ಕಬ್ಬಿಣದ ಒನಕೆಗಳಂತಹ ಬಾಹುಗಳಿಂದ ಒಬ್ಬರನ್ನೊಬ್ಬರು ಹಿಡಿದರು.

ಉತ್ಪಪಾತಾಥ ಭೀಮಸ್ತು ಮಲ್ಲಂ ಕಕ್ಷೇ ಗೃಹೀತವಾನ್ ।
ಪಾರ್ಶ್ವಂ ನಿಗೃಹ್ಯ ಹಸ್ತೇನ ಪಾತಯಾಮಾಸ ಮಲ್ಲಕಮ್ ॥೫೫॥

ಚಕರ್ಷ ದೋರ್ಭ್ಯಾಮುತ್ಪಾಟ್ಯ ಭೀಮೋ ಮಲ್ಲಮಮಿತ್ರಹಾ ॥೫೬॥

ಆಗ ಭೀಮಸೇನನು ಮೇಲೆ ಹಾರಿ ಮಲ್ಲನನ್ನು ಪಕ್ಕೆಯಲ್ಲಿ ಹಿಡಿದನು. ಅವನ ಪಕ್ಕೆಯನ್ನು ಸ್ವಾಧೀನ ಮಾಡಿಕೊಂಡು ತನ್ನ ಕೈಯಿಂದ ಅವನನ್ನು ಕೆಡವಿ ತನ್ನ ಬಾಹುಗಳಿಂದ ಮೇಲಕ್ಕೆ ಎತ್ತಿ ಶತ್ರುಸೂದನನಾದ ಭೀಮನು ಆ ಮಲ್ಲನನ್ನು ರಂಗದಲ್ಲಿ ಎಳೆದಾಡಿದನು.

ವಿನದಂತಮಭಿಕ್ರೋಧಾತ್ ಶಾರ್ದೂಲ ಇವ ದಾರುಣಃ ।
ತಮುದ್ಯಮ್ಯ ಮಹಾಬಾಹುರ್ಭ್ರಾಮಯಾಮಾಸ ಪಾಂಡವಃ ॥೫೭॥

ತತೋ ಮಲ್ಲಾಶ್ಚ ಮತ್ಸ್ಯಾಶ್ಚ ವಿಸ್ಮಯಂ ಚಕ್ರಿರೇ ಭೃಶಮ್ ॥೫೮॥

ಕ್ರೋಧದಿಂದ ಕಿರುಚುತ್ತಿದ್ದ ಆ ಮಲ್ಲನನ್ನು ಘೋರವಾದ ವ್ಯಾಘ್ರದಂತೆ ಮಹಾಬಾಹುವಾದ ಭೀಮಸೇನನು ಮೇಲೆತ್ತಿ ತಿರುಗಿಸಿದನು. ಆಗ ಉಳಿದ ಮಲ್ಲರು ಮತ್ಸ್ಯದೇಶದ ಪ್ರಜೆಗಳೂ ಸಹ ಬಹಳ ಆಶ್ಚರ್ಯಪಟ್ಟರು.

ಭ್ರಾಮಯಿತ್ವಾ ಶತಗುಣಂ ಗತಸತ್ವಮಚೇತನಮ್ ।
ಪ್ರತ್ಯಪಿಂಕ್ಷನ್ ಮಹಾಬಾಹುರ್ಮಲ್ಲಂ ಭುವಿ ವೃಕೋದರಃ ॥೫೯॥

ಮಹಾಬಾಹುವಾದ ವೃಕೋದರನು ಹಾಗೆ ನೂರು ಬಾರಿ ಮಲ್ಲನನ್ನು ತಿರುಗಿಸಿ ತನ್ನ ಬಲವನ್ನು ಕಳೆದುಕೊಂಡು ವಿಚೇತನನಾದ ಆ ಮಲ್ಲನನ್ನು ಭೂಮಿಯಲ್ಲಿ ಹಾಕಿ ಅವನನ್ನು ಹಿಟ್ಟಿನಂತೆ ಒರೆಸಿದನು.

ತಸ್ಮಿನ್ ವಿನಿಹತೇ ಮಲ್ಲೇ ವಜ್ರಿಣೇವ ಮಹಾಚಲೇ ।
ವಿರಾಟಃ ಪರಮಂ ಹರ್ಷಮಗಚ್ಛತ್ ಸಹ ಬಂಧುಭಿಃ ॥೬೦॥

ಮಹಾಪರ್ವತವು ಇಂದ್ರನಿಂದ ಹತವಾದಂತೆ (ಬಿರಿದಂತೆ) ಆ ಮಹಾಮಲ್ಲನು ಹತನಾಗುತ್ತಿರಲು ವಿರಾಟರಾಜನೂ ಮತ್ತು ಅವನ ಬಂಧುಗಳೂ ಬಹಳ ಸಂತೋಷಗೊಂಡರು.

ಪ್ರಹರ್ಷಾತ್ ಪ್ರದದೌ ವಿತ್ತಂ ಬಹು ರಾಜಾ ಮಹಾಮನಾಃ ।
ವಲಲಾಯ ಮಹಾರಂಗೇ ಯಥಾ ವೈಶ್ರವಣಸ್ತಥಾ ॥೬೧॥

ಉದಾರಿಯಾದ ಆ ರಾಜನು ಸಂತೋಷದಿಂದ ಮಹಾರಂಗದಲ್ಲಿ ವಲಲನಿಗೆ ಕುಬೇರನು ಕೊಡುವಂತೆ ಬಹಳ ಧನವನ್ನು ಕೊಟ್ಟನು.

ಏವಂ ಸ ಸುಬಹೂನ್ ಮಲ್ಲಾನ್ ಪುರುಷಾಂಶ್ಚ ಮಹಾಬಲಾನ್ ।
ವಿನಿಘ್ನನ್ ಮತ್ಸ್ಯರಾಜಸ್ಯ ಪ್ರೀತಿಮಾವಹದುತ್ತಮಾಮ್ ॥೬೨॥

ಹೀಗೆ ಮಹಾಬಲಿಷ್ಠನಾದ ಭೀಮಸೇನನು ಮಹಾಬಲಿಷ್ಠರಾದ ಅನೇಕ ಮಲ್ಲರನ್ನೂ ಮತ್ತು ಪುರುಷರನ್ನೂ ಸಂಹಾರ ಮಾಡುತ್ತಾ ವಿರಾಟರಾಜನಿಗೆ ಬಹಳ ಸಂತೋಷವನ್ನು ಉಂಟುಮಾಡಿದನು.

ಯದಾऽಸ್ಯ ತುಲ್ಯಃ ಪುರುಷೋ ನ ಕಶ್ಚಿತ್ ತತ್ರ ದೃಶ್ಯತೇ ।
ತತೋ ವ್ಯಾಘ್ರೈಶ್ಚ ಸಿಂಹೈಶ್ಚ ದ್ವಿರದೈಶ್ಚಾಪ್ಯಯುಧ್ಯತ ॥೬೩॥

ಅವನ ಜೊತೆಯಲ್ಲಿ ಯುದ್ಧವನ್ನು ಮಾಡುವ ಸಮಾನನಾದ ಪುರುಷನು ದೊರೆಯದಿದ್ದಾಗ ಭೀಮಸೇನನು ವ್ಯಾಘ್ರ, ಸಿಂಹ ಮತ್ತು ಗಜಗಳ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ವಿರಾಟೇನ ತು ದತ್ತಾನಿ ಚಿತ್ರಾಣಿ ವಿವಿಧಾನಿ ಚ ।
ಸ್ಥಿತೇಭ್ಯಃ ಪುರುಷೇಭ್ಯಶ್ಚ ದತ್ತ್ವಾ ದ್ರವ್ಯಾಣಿ ಜಗ್ಮಿವಾನ್ ॥೬೪॥

ವಿರಾಟನು ಕೊಟ್ಟ ಚಿತ್ರವಾದ ಮತ್ತು ವಿವಿಧವಾದ ಮತ್ತು ವಿಚಿತ್ರವಾದ ದ್ರವ್ಯಗಳನ್ನು ಅವನು ಸಭೆಯಲ್ಲಿ ಕುಳಿತಿದ್ದ ಪುರುಷರಿಗೇ ಕೊಟ್ಟು ಹೊರಟು ಹೋಗುತ್ತಿದ್ದನು.

ಪುನರಂತಃಪುರಗತಃ ಸ್ತ್ರೀಣಾಂ ಮಧ್ಯೇ ವೃಕೋದರಃ ।
ಯುಧ್ಯತೇ ಸ್ಮ ವಿರಾಟಸ್ಯ ಗಜೈಃ ಸಿಂಹೈರ್ಮಹಾಬಲೈಃ ॥೬೫॥

ಪುನಃ ಅಂತಃಪುರಕ್ಕೆ ಹೋಗಿ ವನಿತೆಯರನ್ನು ಸಂತೋಷಪಡಿಸಲು ವೃಕೋದರನು ಅವರ ಎದುರಿಗೆ ಸಿಂಹ, ಗಜಗಳ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದನು.

ಬೀಭತ್ಸುರಪಿ ಗೀತೇನ ನೃತ್ತೇನಾಪಿ ಚ ಪಾಂಡವಃ ।
ವಿರಾಟಂ ತೋಷಯಾಮಾಸ ಸರ್ವಾಶ್ಚಾಂತಃಪುರಸ್ತ್ರಿಯಃ ॥೬೬॥

ಪಾಂಡವನಾದ ಅರ್ಜುನನೂ ಸಹ ತನ್ನ ನೃತ್ಯ-ಗೀತಗಳಿಂದ ವಿರಾಟನನ್ನೂ ಮತ್ತು ಅಂತಃಪುರದಲ್ಲಿರುವ ಎಲ್ಲಾ ಸ್ತ್ರೀಯರನ್ನೂ ಸಂತೋಷಪಡಿಸುತ್ತಿದ್ದನು.

ಅಶ್ವೈರ್ವಿನೀತೈರ್ಜವನೈಸ್ತತ್ರ ತತ್ರ ಸಮಾಗತೈಃ ।
ತೋಷಯಾಮಾಸ ನಕುಲೋ ವಿರಾಟಂ ರಾಜಸತ್ತಮ ॥೬೭॥

ತಸ್ಮೈ ದೇಯಂ ದದೌ ರಾಜಾ ಬಹು ದ್ರವ್ಯಂ ಶುಭಂ ಮುದಾ ॥೬೮॥

ಎಲೈ ರಾಜಸತ್ತಮನೇ, ನಕುಲನೂ ಸಹ ಅಶ್ವಗಳನ್ನು ಪಳಗಿಸಿ ವೇಗವನ್ನು ಕಲಿಸಿ ವಿರಾಟನನ್ನು ಸಂತೋಷಪಡಿಸಿದನು. ಅವನಿಗೆ ವಿರಾಟನು ಸಂತೋಷದಿಂದ ಬಹಳ ಶುಭ ದ್ರವ್ಯಗಳನ್ನು ನೀಡಿದನು.

ವಿನೀತತ್ವಂ ಗವಾಂ ದೃಷ್ಟ್ವಾ ಸಹದೇವಂ ಚ ತುಷ್ಟವಾನ್ ।
ತಸ್ಮಿನ್ ಕಾಲೇ ನೃಪಃ ಪ್ರಾದಾತ್ ತಸ್ಯ ಪ್ರೀತೋ ಧನಂ ಬಹು ॥೬೯॥

ಗೋವುಗಳು ಸಾಧುವಾಗಿರುವುದನ್ನು ನೋಡಿ ಸಂತೋಷಗೊಂಡು ವಿರಾಟನು ಸಹದೇವನಿಗೆ ಆ ಕಾಲದಲ್ಲಿ ಬಹಳ ಧನವನ್ನು ಕೊಟ್ಟನು.

ದ್ರೌಪದೀ ಪ್ರೇಕ್ಷ್ಯ ತಾನ್ ಸರ್ವಾನ್ ಕ್ಲಿಶ್ಯಮಾನಾನ್ ಮಹಾರಥಾನ್ ।
ನಾತಿಪ್ರೀತಮನಾ ರಾಜನ್ ನಿಃಶ್ವಾಸಪರಮಾऽಭವತ್ ॥೭೦॥

ದ್ರೌಪದಿಯು ಕಷ್ಟಪಡುತ್ತಿದ್ದ ಆ ಎಲ್ಲಾ ಮಹಾರಥರನ್ನೂ ನೋಡಿ ಬಹಳ ಸಂತೋಷವಿಲ್ಲದೆ ಯಾವಾಗಲೂ ನಿಟ್ಟುಸಿರನ್ನು ಬಿಡುತ್ತಿದ್ದಳು.

ಏವಂ ತೇ ನ್ಯವಸಂಸ್ತತ್ರ ಪ್ರಚ್ಛನ್ನಾಃ ಪುರುಷರ್ಷಭಾಃ ।
ಕರ್ಮಾಣಿ ತಾನಿ ಕುರ್ವಾಣಾ ವಿರಾಟನೃಪತೇಸ್ತದಾ ॥೭೧॥

ಎಲೈ ರಾಜನೇ, ಹೀಗೆ ವಿರಾಟರಾಜನ ಸೇವೆಯನ್ನು ಮಾಡುತ್ತಾ ಪುರುಷರ್ಷಭರಾದ ಪಾಂಡವರು ಪ್ರಚ್ಛನ್ನರಾಗಿ ವಿರಾಟನಗರದಲ್ಲಿ ವಾಸವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಪಂಚದಶೋऽಧ್ಯಾಯಃ ॥

॥ ವೈರಾಟಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

॥ ಸಮಯಪಾಲನಪರ್ವ ಸಮಾಪ್ತಂ ॥

★ ★ ★ ★ ★

ಕೀಚಕವಧಪರ್ವ

ಮಹಾಭಾರತತಾತ್ಪರ್ಯನಿರ್ಣಯಃ

ಏವಂ ನಿವಸತಾಂ ತತ್ರ ಪಾಂಡವಾನಾಂ ಮಹಾತ್ಮನಾಮ್ ।
ಸಂವತ್ಸರೇ ದ್ವಿಮಾಸೋನೇ ವಿಜಿತ್ಯ ದಿಶ ಆಗತಃ ।
ಕೀಚಕೋ ಮತ್ಸ್ಯನೃಪತೇಃ ಸ್ಯಾಲೋ ಬಲವತಾಂ ವರಃ ॥ ೧೯ ॥

ಹೀಗೆ ಮಹಾತ್ಮರಾದ ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸ ಮಾಡುತ್ತಿದ್ದಾಗ ಒಂದು ವರ್ಷ ತುಂಬಲು ಎರಡೇ ತಿಂಗಳುಗಳಿದ್ದಾಗ ವಿರಾಟರಾಜನ ಭಾವನಾದ, ಬಲಶಾಲಿಗಳಲ್ಲಿ ಶ್ರೇಷ್ಠನಾದ ಕೀಚಕ ದಿಗ್ವಿಜಯ ಮಾಡಿ ಹಿಂತಿರುಗಿ ಬಂದ.

ಸ ದ್ರೌಪದೀಮೀಕ್ಷ್ಯ ಮನೋಭವಾರ್ತಃ
ಸಂಪ್ರಾರ್ಥಯಾಮಾಸ ತಯಾ ನಿರಸ್ತಃ ।
ಮಾಸೇ ಗತೇ ಭಗಿನೀಂ ಸ್ವಾಂ ಸುದೇಷ್ಣಾಂ
ಸಂಪ್ರಾರ್ಥಯಾಮಾಸ ತದರ್ಥಮೇವ ॥ ೨೦ ॥

ಕೀಚಕ ದ್ರೌಪದಿಯನ್ನು ಕಂಡು ಕಾಮಾರ್ತನಾಗಿ ಬೇಡಿದ. ಅವಳು ತಿರಸ್ಕರಿಸಿದಳು. ಒಂದು ತಿಂಗಳು ಕಳೆದ ಬಳಿಕ ಕೀಚಕ ದ್ರೌಪದೀಸಂಗಕ್ಕಾಗಿ ತನ್ನ ಸೋದರಿಯಾದ ಸುದೇಷ್ಣೆಯನ್ನು ಕೇಳಿಕೊಂಡ.

ತಯಾ ನಿಷಿದ್ಧೋऽಪಿ ಪುನಃ ಪುನಸ್ತಾಂ
ಯದಾ ಯಯಾಚೇऽಥ ಚ ಸಾऽऽಹ ಕೃಷ್ಣಾಮ್ ।
ಸಮಾನಯಾಶ್ವೇವ ಸುರಾಂ ಮದರ್ಥ
ಮಿತೀರಿತಾ ನೇತಿ ಭೀತಾऽವದತ್ಸಾ ॥ ೨೧ ॥

ಸುದೇಷ್ಣೆಮೊದಲಿಗೆ ಬೇಡವೆಂದಳು. ಆದರೂ ಕೀಚಕ ಮತ್ತೆ ಮತ್ತೆ ಕೇಳಿಕೊಂಡಾಗ ಅವಳು ದ್ರೌಪದಿಗೆ ಹೇಳಿದಳು 'ಕೀಚಕನ ಮನೆಯಿಂದ ನನಗೆ ಮದ್ಯ ತಂದುಕೊಡು'. ಅವಳು ಹೀಗೆ ಹೇಳಿದಾಗ ದ್ರೌಪದಿ ಭೀತಳಾಗಿ ಬೇಡ ಎಂದಳು.

★ ★ ★ ★ ★

ಹದಿನಾರನೆಯ ಅಧ್ಯಾಯ

ಕೀಚಕನಿಂದ ದ್ರೌಪದಿಯ ಮುಂದೆ ತನ್ನ ಕಾಮದ ಆವಿಷ್ಕಾರ.

ವೈಶಂಪಾಯನಃ

ವಸಮಾನೇಷು ಪಾರ್ಥೇಷು ಮಾತ್ಸ್ಯಸ್ಯ ನಗರೇ ತದಾ ।
ಮಹಾರಥೇಷು ಚ್ಛನ್ನೇಷು ಮಾಸಾ ದಶ ಸಮತ್ಯಯುಃ ॥೧॥

ವೈಶಂಪಾಯನ– ಮಹಾರಥರಾದ ಪಾಂಡವರು ವಿರಾಟನಗರದಲ್ಲಿ ಛನ್ನರಾಗಿ ವಾಸಮಾಡುತ್ತಾ ಹತ್ತು ತಿಂಗಳುಗಳು ಕಳೆದವು.

ಯಾಜ್ಞಸೇನೀ ಸುದೇಷ್ಣಾಂ ತು ಶಿಶ್ರೂಷಂತೀ ಶುಚಿಸ್ಮಿತಾ ।
ಅವಸತ್ ಪರಿಚಾರಾರ್ಹಾ ಸುದುಃಖಿಂ ಜನಮೇಜಯ ॥೨॥

ಜನಮೇಜಯನೇ, ತಾನು ಸ್ವತಃ ಪರಿಚರಿಸಲ್ಪಡಬೇಕಾದ ಶುಚಿಸ್ಮಿತೆಯಾದ ದ್ರೌಪದಿಯು ಸುದೇಷ್ಣೆಯ ಸೇವೆ ಮಾಡುತ್ತಾ ದುಃಖದಿಂದ ವಾಸಮಾಡಿದಳು.

ತಾಂ ದೇವೀಂ ತೋಷಯಾಮಾಸ ತಥಾ ಚಾಂತಃಪುರೇ ಸ್ತ್ರಿಯಃ ।
ತಸ್ಮಿನ್ ವರ್ಷೇ ಗತಪ್ರಾಯೇ ಕೀಚಕಸ್ತು ಮಹಾಬಲಃ ॥೩॥

ತಥಾ ಚರಂತೀಂ ಪಾಂಚಾಲೀಂ ಸುದೇಷ್ಣಾಯಾ ನಿವೇಶನೇ ।
ಸೇನಾಪತಿರ್ವಿರಾಟಸ್ಯ ದದರ್ಶ ಜಲಜೇಕ್ಷಣಾಮ್ ॥೪॥

ಅವಳು ಆ ದೇವಿಯನ್ನು ಮತ್ತು ಅಂತಃಪುರ ಸ್ತ್ರೀಯರನ್ನು ಸಂತೋಷ ಪಡಿಸಿದಳು. ವರ್ಷವು ಮುಗಿಯುತ್ತಾ ಬರುತ್ತಿರಲು ವಿರಾಟನ ಸೇನಾಪತಿಯೂ, ಮಹಾಬಲನೂ ಆದ ಕೀಚಕನು ಸುದೇಷ್ಣೆಯ ಮನೆಯಲ್ಲಿ ಸಂಚರಿಸುತ್ತಿದ್ದಂತಹ ಪದ್ಮನೇತ್ರೆಯಾದ ದ್ರೌಪದಿಯನ್ನು ನೋಡಿದನು.

ತಾಂ ದೃಷ್ಟ್ವಾ ದೇವಗರ್ಭಾಭಾಂ ಚರಂತೀಂ ದೇವತಾಮಿವ ।
ಕೀಚಕಃ ಕಾಮಯಾಮಾಸ ಕಾಮಬಾಣಪ್ರಪೀಡಿತಃ ॥೫॥

ದೇವಕನ್ಯೆಯನ್ನು ಹೋಲುವ, ದೇವತೆಯಂತೆ ತಿರುಗಾಡುವ ಅವಳನ್ನು ನೋಡಿ ಕಾಮಬಾಣ ಪೀಡಿತನಾದ ಕೀಚಕನು ಅವಳನ್ನು ಕಾಮಿಸಿದನು.

ಸ ತು ಕಾಮಾಗ್ನಿಸಂತಪ್ತಃ ಸುದೇಷ್ಣಾಮಭಿಗಮ್ಯ ಚ ।
ಪ್ರಹಸನ್ನಿವ ಸೇನಾನೀರಿದಂ ವಚನಮಬ್ರವೀತ್ ॥೬॥

ಸೇನಾನಿಯಾದ ಅವನು ಕಾಮಾಗ್ನಿ ಸಂತಪ್ತನಾಗಿ ಸುದೇಷ್ಣೆಯ ಬಳಿಗೆ ಬಂದು ಹೀಗೆ ಮಾತನಾಡಿದನು.

ರೂಪೇಣ ಚೋನ್ಮಾದಯತೀವ ಮಾಂ ಭೃಶಮ್
ಗಂಧೇನ ಜಾತಾ ಮದಿರೇವ ಭಾಮಿನೀ ।
ಕಾ ದೇವರೂಪಾ ಹೃದಯಂಗಮಾ ಶುಭೇ
ಹ್ಯಾಚಕ್ಷ್ವ ಮೇ ಕಸ್ಯ ಕುತೋಽತ್ರ ಶೋಭನೇ ॥೭॥

ಶೋಭನಳೇ, ಇವಳು ತನ್ನ ರೂಪದಿಂದ ನನಗೆ ಹುಚ್ಚುಹಿಡಿಸುತ್ತಿದ್ದಾಳೆ. ಇವಳು ಸುಗಂಧದಿಂದ ಕೂಡಿ ಜನಿಸಿದ ಮದಿರೆಯಂತೆ ಹುಚ್ಚುಹಿಡಿಸುತ್ತಿದ್ದಾಳೆ. ಶುಭಳಾದವಳೇ, ಹೃದಯಂಗಮಳಾದ ದೇವರೂಪವನ್ನು ಧರಿಸಿದ ಇವಳು ಯಾರು? ಇಲ್ಲಿಗೆ ಹೇಗೆ ಬಂದಳು ಎಂದು ಹೇಳು.

ಚಿತ್ತಂ ಹಿ ನಿರ್ಮಥ್ಯ ಕರೋತಿ ಮಾಂ ವಶೇ
ನ ಚಾನ್ಯದತ್ರೌಷಧಮಸ್ತಿ ಮೇ ಮತಮ್ ।
ಅಹೋ ತವೇಯಂ ಪರಿಚಾರಿಕಾ ಶುಭಾ
ಪ್ರತ್ಯಗ್ರರೂಪಾ ಪ್ರತಿಭಾತಿ ಮಾಮಿಯಮ್ ॥೮॥

ಇವಳು ನನ್ನ ಮನಸ್ಸನ್ನು ಮರ್ದಿಸಿ ನನ್ನನ್ನು ವಶಪಡಿಸಿಕೊಂಡಿದ್ದಾಳೆ. ಇದಕ್ಕೆ ಬೇರೆ ಔಷಧವಿಲ್ಲವೆಂದು ನನ್ನ ಅಭಿಪ್ರಾಯ. ಅಯ್ಯೋ! ಈ ನಿನ್ನ ಶುಭಳಾದ ಪರಿಚಾರಿಕೆಯು ಹೊಸದಾದ ಸೌಂದರ್ಯವನ್ನು ತಳೆದುಕೊಂಡವಳಂತೆ ನನಗೆ ತೋರುತ್ತಿದೆ.

ಅಯುಕ್ತರೂಪಂ ಹಿ ಕರೋತಿ ಕರ್ಮ ತೇ
ಪ್ರಶಾಸ್ತು ಮಾಂ ಯಚ್ಚ ಮಮಾಸ್ತಿ ಕಿಂಚನ ।
ಪ್ರಭೂತರತ್ನಾಶ್ವರಥಂ ಮಹಾಗಜಂ
ಸಮೃದ್ಧಿಯುಕ್ತಂ ಬಹುಪಾನಭೋಜನಮ್ ॥೯॥

ಅವಳು ತನಗೆ ಅರ್ಹವಲ್ಲದ ರೀತಿಯಲ್ಲಿ ನಿನ್ನ ಸೇವೆಯನ್ನು ಮಾಡುತ್ತಿದ್ದಾಳೆ. ಅದರ ಬದಲು ನನ್ನ ಬಳಿ ಇರುವ ಅನೇಕ ರತ್ನ, ಅಶ್ವರಥಗಳು, ಮಹಾಗಜಗಳು, ಸಮೃದ್ಧಿಯುತವಾದ ಪಾನ, ಭೋಜನಗಳು ಇವುಗಳ ಜೊತೆಯಲ್ಲಿ ನನ್ನನ್ನು ಆಳುವವಳಾಗಲಿ.

ಮನೋಹರಂ ಕಾಂಚನಚಿತ್ರಭೂಷಣಂ
ಗೃಹಂ ಮಹತ್ ಶೋಭಯತಾಮಿಯಂ ಮಮ ।
ತಥಾ ಸುದೇಷ್ಣಾಮನುಮಂತ್ರ್ಯ ಕೀಚಕಃ
ತತಃ ಸಮೇತ್ಯೈತ್ಯ ನರಾಧಿಪಾತ್ಮಜಾಮ್ ॥೧೦॥

ಉವಾಚ ಕೃಷ್ಣಾಮತಿಸಾಂತ್ವಯಂಸ್ತದಾ
ಮೃಗೇಂದ್ರಕನ್ಯಾಮಿವ ಜಂಬುಕೋ ವನೇ ॥೧೧॥

ಮನೋಹರವಾದ ಸುವರ್ಣಾಲಂಕೃತವಾದ ನನ್ನ ದೊಡ್ಡ ಮನೆಯನ್ನು ಇವಳು ಶೋಭಿಸಲಿ. ಹೀಗೆ ಸುದೇಷ್ಣೆಯ ಜೊತೆಯಲ್ಲಿ ಮಾತನಾಡಿ ಕೀಚಕನು ದ್ರುಪದ ರಾಜಕುಮಾರಿಯಾದ ಕೃಷ್ಣೆಯನ್ನು ನರಿಯು ಸಿಂಹದ ಮರಿಯನ್ನು ಸಮೀಪಿಸುವಂತೆ ಸಮೀಪಿಸಿ ಅವಳನ್ನು ಸಮಾಧಾನಪಡಿಸುತ್ತಾ ಮಾತನಾಡಿದನು.

ಕಾ ತ್ವಂ ಕಸ್ಯಾಸಿ ಕಲ್ಯಾಣಿ ಕುತೋ ವಾ ತ್ವಂ ವರಾನನೇ ।
ಪ್ರಾಪ್ತಾ ವಿರಾಟನಗರಂ ತತ್ತ್ವಮಾಚಕ್ಷ್ವ ಶೋಭನೇ ॥೧೨॥

ಕಲ್ಯಾಣಿಯೇ, ಶುಭಾನನೆಯೇ, ಶೋಭನಸ್ವರೂಪಳೇ ನೀನು ಯಾರು? ಯಾರಿಗೆ ಸೇರಿದವಳು? ವಿರಾಟನಗರಕ್ಕೆ ಎಲ್ಲಿಂದ ಬಂದೆ? ಎಲ್ಲವನ್ನೂ ನಿಜವಾಗಿ ಹೇಳು.

ರೂಪಮಗ್ರ್ಯಂ ತಥಾ ಕಾಂತಿಃ ಸೌಕುಮಾರ್ಯಮನುತ್ತಮಮ್ ।
ಏವಂರೂಪಾ ಮಯಾ ನಾರೀ ಕಾಚಿದನ್ಯಾ ಮಹೀತಳೇ ॥೧೩॥

ನ ದೃಷ್ಟಪೂರ್ವಾ ಸುಶ್ರೋಣಿ ಯಾದೃಶೀ ತ್ವಮನಿಂದಿತೇ ।
ಲಕ್ಷ್ಮೀಃ ಪದ್ಮಾಲಯಾ ವಾ ತ್ವಮಥ ಭೂತಿಃ ಸುಮಧ್ಯಮೇ ॥೧೪॥

ಹ್ರೀಃ ಶ್ರೀಃ ಕೀರ್ತಿರಥೋ ಕಾಂತಿಸ್ತವ ರೂಪಂ ಮನೋರಮಮ್ ॥

ನಿನ್ನ ರೂಪವೂ, ಕಾಂತಿಯೂ ಬಹಳ ಶ್ರೇಷ್ಠವಾಗಿದೆ. ನಿನ್ನ ಸೌಕುಮಾರ್ಯವು ಬಹಳ ಉತ್ತಮವಾಗಿದೆ. ಅನಿಂದಿತೆಯೇ, ನಿನ್ನಂತಹ ವನಿತೆಯನ್ನು ನಾನು ಭೂಮಿಯ ಮೇಲೆ ಈ ಹಿಂದೆ ಯಾರನ್ನೂ ನೋಡಲಿಲ್ಲ. ನೀನು ಪದ್ಮಾಲಯಳಾದ ಲಕ್ಷ್ಮಿಯೇ? ಭೂತಿಯೇ? ಅಥವಾ ಸುಮಧ್ಯಮೆಯಾದ ನೀನು ಶ್ರೀದೇವಿಯೇ? ಕೀರ್ತಿಯೇ? ಅಥವಾ ಕಾಂತಿಯೇ? ನಿನ್ನ ರೂಪವು ಮನೋಹರವಾಗಿದೆ.

ನಿರೀಕ್ಷ್ಯ ವಕ್ತ್ರಚಂದ್ರಂ ತೇ ಲಕ್ಷ್ಮ್ಯಾಽನುಪಮಯಾ ಯುತಮ್ ।
ಕೃತ್ಸ್ನೇ ಜಗತಿ ಕೋ ನೇಹ ಕಾಮಸ್ಯ ವಶಗೋ ಭವೇತ್ ॥೧೬॥

ಅನುಪಮ ಕಾಂತಿಯಿಂದ ಕೂಡಿದ ನಿನ್ನ ಮುಖಚಂದ್ರವನ್ನು ನೋಡಿ ಈ ಸಮಸ್ತ ಜಗತ್ತಿನಲ್ಲಿ ಯಾರು ತಾನೇ ಕಾಮವಶರಾಗುವುದಿಲ್ಲ?

ಹಾರಾಲಂಕಾರಯೋಗ್ಯೌ ತು ಸ್ತನೌ ಚೋಭೌ ಸುಶೋಭನೌ ।
ಸುಜಾತೌ ಸಹಿತೌ ಲಕ್ಷ್ಮ್ಯಾ ಪೀನೌ ವೃತ್ತೌ ನಿರಂತರೌ ॥೧೭॥

ಕುಡ್ಮಲಾಂಬುರುಹಾಕಾರೌ ತವ ಸುಭ್ರೂರಥೋದ್ಯತೌ ।
ಕಾಮಪ್ರತೋದಾವಿವ ಮಾಂ ತುದತಶ್ಚಾರುಹಾಸಿನಿ ॥೧೮॥

ನಿನ್ನ ಸುಂದರವಾದ ಸ್ತನಗಳು ಚೆನ್ನಾಗಿ ಬೆಳೆದಿವೆ. ಪುಷ್ಟವಾಗಿ ದುಂಡಗೆ ನಿರಂತರವಾಗಿ ಕಮಲದ ಮೊಗ್ಗಿನಂತಿದ್ದು ಹಾರಾಲಂಕಾರಕ್ಕೆ ಯೋಗ್ಯವಾಗಿವೆ.

ಚಾರುಹಾಸಿನಿಯೇ, ನಿನ್ನ ಸುಂದರವಾದ ಹುಬ್ಬುಗಳು ಮೇಲೆ ಬಾಗಿದ್ದು ಮನ್ಮಥನ ಚಾವಟಿಯಂತೆ ನನ್ನನ್ನು ಪೀಡಿಸುತ್ತಿವೆ.

ವಲೀವಿಭಾಗಚತುರಂ ಸ್ತನಭಾರವಿನಾಮಿತಮ್ ।
ಕರಾಗ್ರಸಮಿತಂ ಮಧ್ಯಂ ತವೇದಂ ತನುಮಧ್ಯಮೇ ॥೧೯॥

ಎಲೌ ತನುಮಧ್ಯಮೆಯೇ, ನಿನ್ನ ಉದರವು ಕೈಯಲ್ಲಿ ಹಿಡಿಯಬಹುದಾದಷ್ಟು ತೆಳುವಾಗಿದ್ದು ವಲಿಯ ವಿಭಾಗಗಳಿಂದಲೂ, ಮೇಲಿನ ಸ್ತನಗಳ ಭಾರದಿಂದಲೂ ಬಾಗಿದೆ.

ದೃಷ್ಟ್ವೈವ ಚಾರುಜಘನಂ ಸರಿತ್ಪುಲಿನಸನ್ನಿಭಮ್ ।
ಕಾಮವ್ಯಾಧಿರಸಹ್ಯೋ ಮಾಮುಪಾಕ್ರಮತಿ ಭಾಮಿನಿ ॥೨೦॥

ಭಾಮಿನಿಯೇ, ನದಿಯ ಮರಳಿನಂತಿರುವ ನಿನ್ನ ಸುಂದರವಾದ ಜಘನವನ್ನು ನೋಡಿ ನನಗೆ ಸಹಿಸಲು ಅಸಾಧ್ಯವಾದ ಕಾಮವ್ಯಾಧಿಯು ಬೆಳೆಯುತ್ತಿದೆ.

ಜಜ್ವಾಲ ಚಾಗ್ನಿಮದನೋ ದಾವಾಗ್ನಿರಿವ ನಿರ್ದಯಃ ।
ತ್ವತ್ಸಂಗಮಾಭಿಸಂಕಲ್ಪವಿವೃದ್ಧೋ ಮೇ ದಹತ್ಯಯಮ್ ॥೨೧॥

ಆತ್ಮಪ್ರದಾನವರ್ಷೇಣ ಸಂಗಮಾಂಭೋಧರೇಣ ಚ ।
ಶಮಯಸ್ವ ವರಾರೋಹೇ ಜ್ವಲಂತಂ ಮನ್ಮಥಾನಲಮ್ ॥೨೨॥

ಕಾಮಾಗ್ನಿ ಎಂಬ ದಾವಾಗ್ನಿಯು ನಿರ್ದಯವಾಗಿ ಪ್ರಜ್ವಲಿಸುತ್ತಾ ನಿನ್ನ ಸಂಗಮದ ಆಸೆಯಿಂದ ವಿವೃದ್ಧವಾಗಿ ನನ್ನನ್ನು ಸುಡುತ್ತಿದೆ. ಆತ್ಮಪ್ರದಾನ ಎಂಬ ಮಳೆಯಿಂದ ಮತ್ತು ಸಂಗಮ ಎಂಬ ಮೋಡದಿಂದ ಎಲೌ ವರಾರೋಹೆಯೇ, ಆ ಸುಡುತ್ತಿರುವ ಮನ್ಮಥಾಗ್ನಿಯನ್ನು ಶಾಂತಗೊಳಿಸುವವಳಾಗು.

ಮಚ್ಚಿತ್ತೋನ್ಮಾದನಕರಾ ಮನ್ಮಥಸ್ಯ ಶರೋತ್ಕರಾಃ ।
ತ್ವತ್ಸಂಗಮಾಶಾನಿಶಿತಾಸ್ತೀವ್ರಾಃ ಶಶಿನಿಭಾನನೇ ॥೨೩॥

ಮಹ್ಯಂ ವಿದಾರ್ಯ ಹೃದಯಮಿದಂ ನಿರ್ದಯವೇಗಿನಃ ।
ಪ್ರವಿಶಂತ್ಯಸಿತಾಪಾಂಗಿ ಪ್ರಚಂಡಾಶ್ಚೈವ ದಾರುಣಾಃ ॥೨೪॥

ಅತ್ಯುನ್ಮಾದಸಮಾರಂಭಾಃ ಪ್ರೀತ್ಯುನ್ಮಾದಕರಾ ಮಮ ।
ಆತ್ಮಪ್ರದಾನಸಂಭೋಗೈರ್ಮಾಮುದ್ಧರ್ತುಮಿಹಾರ್ಹಸಿ ॥೨೫॥

ಎಲೌ ಚಂದ್ರಮುಖಿಯೇ, ನನ್ನ ಮನಸ್ಸಿಗೆ ಹುಚ್ಚನ್ನು ಹಿಡಿಸಿರುವಂತಹ ನಿನ್ನ ಸಂಗಮದ ಆಸೆಯಿಂದ ಹರಿತವಾದಂತಹ ಮನ್ಮಥನ ಶ್ರೇಷ್ಠವಾದ ಬಾಣಗಳು ನಿರ್ದಯವಾದ ವೇಗವುಳ್ಳವುಗಳಾಗಿ ಪ್ರಚಂಡವಾಗಿ ದಾರುಣವಾಗಿ ನನ್ನ ಹೃದಯವನ್ನು ಪ್ರವೇಶಿಸಿ ಭೇದಿಸುತ್ತಿವೆ. ಎಲೌ ಅಸಿತಾಪಾಂಗಿಯೇ, ಅವು ಬಹಳ ಹೆಚ್ಚಿನ ಹುಚ್ಚನ್ನು ಹಿಡಿಸುವವಳಾಗಿ ಪ್ರೀತಿಯ ಹುಚ್ಚನ್ನು ಹಿಡಿಸುತ್ತಿವೆ. ಆತ್ಮಪ್ರದಾನ ಮತ್ತು ಸಂಭೋಗಗಳಿಂದ ನೀನು ನನ್ನನ್ನು ಉದ್ಧಾರ ಮಾಡು.

ಚಿತ್ರಮಾಲ್ಯಾಂಬರಧರಾ ಸರ್ವಾಭರಣಭೂಷಿತಾ ।
ಕಾಮಂ ಪ್ರಕಾಮಂ ಸೇವ ತ್ವಂ ಮಯಾ ಸಹ ವಿಲಾಸಿನಿ ॥೨೬॥

ವಿಲಾಸಿನಿಯೇ, ನೀನು ಚಿತ್ರಮಾಲ್ಯವಸ್ತ್ರಗಳನ್ನು ಧರಿಸಿ ಸರ್ವಾಭರಣ ಭೂಷಿತಳಾಗಿ ನನ್ನ ಜೊತೆಯಲ್ಲಿ ಶ್ರೇಷ್ಠವಾದ ಭೋಗಗಳನ್ನು ಅನುಭವಿಸುವವಳಾಗು.

ನಾರ್ಹಸೀಹಾಸುಖಂ ವಸ್ತುಂ ಸುಖಾರ್ಹಾ ಸುಖವರ್ಜಿತಾ ।
ಪ್ರಾಪ್ನುಹ್ಯನುತ್ತಮಂ ಸೌಖ್ಯಂ ಮತ್ತಸ್ತ್ವಂ ಮತ್ತಗಾಮಿನಿ ॥೨೭॥

ಸುಖಕ್ಕೆ ಅರ್ಹಳಾದ ನೀನು ಸುಖವರ್ಜಿತಳಾಗಿ ಇಲ್ಲಿ ದುಃಖದಿಂದ ಕಾಲವನ್ನು ಕಳೆಯುವುದು ಯುಕ್ತವಲ್ಲ. ಮತ್ತಗಾಮಿನಿಯೇ, ನನ್ನಿಂದ ನೀನು ಶ್ರೇಷ್ಠವಾದ ಸುಖವನ್ನು ಪಡೆಯುವವಳಾಗು.

ಸ್ವಾದೂನ್ಯಮೃತಕಲ್ಪಾನಿ ಪೇಯಾನಿ ವಿವಿಧಾನಿ ಚ ।
ಪಿಬಮಾನಾ ಮನೋಜ್ಞಾನಿ ರಮಮಾಣಾ ಯಥಾಸುಖಮ್ ॥೨೮॥

ಭೋಗೋಪಚಾರಾನ್ ವಿವಿಧಾನ್ ಸೌಭಾಗ್ಯಂ ಚಾಪ್ಯನುತ್ತಮಮ್ ।
ಪಾನಂ ಪಿಬ ಮಹಾಭಾಗೇ ಭೋಗೈಶ್ಚಾನುತ್ತಮೈಃ ಶುಭೈಃ ॥೨೯॥

ಮಹಾಭಾಗ್ಯವಂತಳೇ, ರುಚಿಕರವಾದ ಅಮೃತದಂತಿರುವ ವಿವಿಧ ಮನೋಹರವಾದ ಪೇಯಗಳನ್ನು ಪಾನಮಾಡುತ್ತಾ ನಿನ್ನ ಮನಸ್ಸಿಗೆ ತೋರಿದಂತೆ

ವಿವಿಧವಾದ ಭೋಗೋಪಚಾರಗಳನ್ನೂ ಶ್ರೇಷ್ಠವಾದ ಐಶ್ವರ್ಯವನ್ನೂ ಹೊಂದಿ ವಿಹರಿಸುತ್ತಾ, ಪಾನವನ್ನು ಮಾಡುತ್ತಾ ಅತ್ಯುತ್ತಮ ಶುಭ ಭೋಗಗಳನ್ನು ಪಡೆಯುವವಳಾಗು.

ತಥಾ ತು ದೃಷ್ಟ್ವಾ ಜ್ವಲಿತಾಂ ಚ ಕೀಚಕಃ
ತತಃ ಸಮಭ್ಯೇತ್ಯ ನೃಪಾಧಿಪಾತ್ಮಜಾಮ್ ।
ಉವಾಚ ಕೃಷ್ಣಾಂ ಪರಿಸಾಂತ್ವಯಂಸ್ತದಾ
ಮೃಗೇಂದ್ರಕನ್ಯಾಮಿವ ಜಂಬುಕೋ ವನೇ ॥೩೦॥

ಹೀಗೆ ಸೌಂದರ್ಯದಿಂದ ಬೆಳಗುತ್ತಿರುವ ಆ ರಾಜಕುಮಾರಿಯ ಬಳಿಗೆ ಸಿಂಹದ ಮರಿಯ ಬಳಿಗೆ ನರಿಯು ಬಂದಂತೆ ಕೀಚಕನು ಬಂದು ಅವಳನ್ನು ಸಮಾಧಾನ ಪಡಿಸುತ್ತಾ ಮಾತನಾಡಿದನು.

ಶುಭಂ ಚ ರೂಪಂ ಪ್ರಥಮಂ ಚ ತೇ ವಯೋ
ನಿರರ್ಥಕಂ ಕೇವಲಮದ್ಯ ಭಾಮಿನಿ ।
ಅಧಾರ್ಯಮಾಣಾ ಸ್ರಗಿವೋತ್ತಮಾ ಯಥಾ
ನ ಶೋಭಸೇ ಸುಂದರಿ ಶೋಭನಾ ಸತೀ ॥೩೧॥

ಎಲೌ ಭಾಮಿನಿಯೇ, ನಿನ್ನ ರೂಪವು ಶುಭವಾಗಿದೆ. ವಯಸ್ಸು ಚಿಕ್ಕದು. ಈ ದಿನ ಅವೆರಡೂ ವ್ಯರ್ಥವಾಗುತ್ತಿವೆ. ಎಲೌ ಸುಂದರಿಯೇ, ಮುಡಿಯದ ಮಾಲೆಯಂತೆ ನೀನು ಸುಂದರಿಯಾಗಿದ್ದರೂ ಶೋಭಿಸುತ್ತಿಲ್ಲ.

ನ ತ್ವಂ ಪುರಾ ಜಾತು ಮಯೇಹ ದೃಷ್ಟಾ
ರಾಜ್ಞೋ ವಿರಾಟಸ್ಯ ನಿವೇಶನೇ ಶುಭೇ ।
ರೂಪೇಣ ಮೇ ನಂದಯಸೇ ಮನಸ್ತ್ವಂ
ಸುಗಾತ್ರಿ ಕಸ್ಯಾಸಿ ಕುತೋಽಸಿ ಕಾ ವಾ ॥೩೨॥

ಎಲೌ ಶೋಭನಗಾತ್ರಿಯೇ, ನಾನು ವಿರಾಟನ ಮನೆಯಲ್ಲಿ ಹಿಂದೆ ಎಂದೂ ನಿನ್ನನ್ನು ನೋಡಿರಲಿಲ್ಲ. ನಿನ್ನ ರೂಪದಿಂದ ನನ್ನ ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತಿದ್ದೀಯೆ. ನೀನು ಯಾರಿಗೆ ಸೇರಿದವಳು? ಯಾರು? ಮತ್ತು ಎಲ್ಲಿಂದ ಬಂದವಳು?

ದಾಸಸ್ತವಾಹಂ ಪೃಥುತಾಮ್ರಲೋಚನೇ
ವಶಾನುಗೋ ವಾರಣಖೇಲಗಾಮಿನಿ ।
ಕಂದರ್ಪವೇಗಾಭಿಹತೋಽಸ್ಮ್ಯನಿಂದಿತೇ
ಖಗೋ ವಸಂತೇಷ್ವಿವ ಪುಷ್ಪಮೂರ್ಛಿತಃ ॥೩೩॥

ವಿಸ್ತಾರವಾದ ಕೆಂಪಾದ ಕಣ್ಣುಳ್ಳವಳೇ, ಗಜಲೀಲೆಯ ನಡಿಗೆಯುಳ್ಳವಳೇ, ಅನಿಂದಿತಳೇ, ನಾನು ನಿನ್ನ ದಾಸನಾಗಿ ವಶವರ್ತಿಯಾಗಿದ್ದೇನೆ. ವಸಂತದ ಪುಷ್ಪಗಳಿಂದ ಪಕ್ಷಿಗಳು ಮೂರ್ಛೆ ಹೋದಂತೆ ನಾನು ಮನ್ಮಥದ ವೇಗದಿಂದ ಪೀಡಿತನಾಗಿದ್ದೇನೆ.

ತ್ವಮೀದೃಶೀ ಚಾರುಪರೀತದರ್ಶನಾ
ನಾನ್ಯಸ್ತ್ರಿಯಂ ಸಂಪರಿಚರ್ತುಮರ್ಹಸಿ ।
ಕಿಂ ರಾಜವೇಶ್ಮನ್ಯಸಿತಾಯತೇಕ್ಷಣೇ
ಕರೋಷಿ ಕೇಶಾನ್ ಸ್ವಯಮೇವ ಭಾಮಿನಿ ॥೩೪॥

ಎಲೌ ಭಾಮಿನಿಯೇ, ನೀನು ಇಂತಹ ಸುಂದರಿಯಾಗಿ ಕಾಣುತ್ತಿದ್ದೀಯೆ. ಅಂತಹ ನೀನು ಇನ್ನೊಬ್ಬ ವನಿತೆಯ ಸೇವೆಯನ್ನು ಮಾಡುವುದು ಯೋಗ್ಯವಲ್ಲ. ವಿಶಾಲ ನೇತ್ರೆಯೇ, ರಾಜನ ಮನೆಯಲ್ಲಿ ಇನ್ನೊಬ್ಬರಿಗೆ ಏಕೆ ನೀನೇ ಕೇಶಪ್ರಸಾಧನವನ್ನು ಮಾಡುತ್ತಿದ್ದೀಯೆ?

ಅನ್ಯಾ ಹಿ ನಾರ್ಯಸ್ತವ ಕರ್ಮ ಕುರ್ಯುಃ
ಪ್ರತೀತರೂಪಾಸ್ತವ ಚಾರುನೇತ್ರೇ ।
ಅಧಾರ್ಯಮಾಣೇವ ಜನೇನ ಮಂಜರೀ
ಸುಗಾತ್ರಿ ಕಿಂ ಜೀರ್ಯಸಿ ಚಾರುಹಾಸಿನಿ ॥೩೫॥

ಚಾರುನೇತ್ರೆಯೇ, ಉಳಿದ ಸುಂದರಿಯರು ನೀನು ಮಾಡುವ ಕೆಲಸವನ್ನು ಮಾಡುವರು. ಚಾರುಹಾಸಿನಿಯೇ, ಸುಗಾತ್ರಿಯೇ, ಮುಡಿಯದಿದ್ದ ಹೂಗೊಂಚಲಿನಂತೆ ಏಕೆ ಸವೆದು ಹೋಗುತ್ತಿದ್ದೀಯೆ?

ತ್ಯಜಾಮಿ ದಾರಾನ್ ಮಮ ಯೇ ಪುರಾತನಾನ್
ಭವಾಮಿ ದಾಸಶ್ಚ ವಶಾನುಗಶ್ಚ ತೇ ।

ಸುಗಾತ್ರಿ ಮಹ್ಯಂ ಸುಕೃತೇನ ತೇ ಶಪೇ
ಯಥಾ ಮಮ ತ್ವಂ ಹೃದಯೇ ಪ್ರತಿಷ್ಠಿತಾ ॥೩೬॥

ಸುಗಾತ್ರಿಯೇ, ನಾನು ನನ್ನ ಹಿಂದಿನ ಪತ್ನಿಯರೆಲ್ಲರನ್ನೂ ಬಿಟ್ಟು ನಿನ್ನ ದಾಸನೂ, ವಶವರ್ತಿಯೂ ಆಗುತ್ತೇನೆ. ನಾನು ನನ್ನ ಪುಣ್ಯದ ಮೇಲೆ ಪ್ರತಿಜ್ಞೆಯನ್ನು ಮಾಡಿ ಹೇಳುತ್ತಿದ್ದೇನೆ, ನೀನು ನನ್ನ ಹೃದಯದಲ್ಲಿ ಪ್ರತಿಷ್ಠಿತಳಾಗಿದ್ದೀಯೆ.

ಮಮಾನುರೂಪಾ ತ್ವಮನಿಂದ್ಯಲೋಚನೇ
ಸ್ವಯಂ ತಥಾऽऽತ್ಮಾನಮಿಹಾನುಚಿಂತಯ ।
ಪ್ರತ್ಯಕ್ಷಮೇತತ್ ತವ ಚಾರುದರ್ಶನೇ
ಯಥಾ ವಯಸ್ತುಲ್ಯವಪುಸ್ತಥಾऽऽವಯೋಃ ॥೩೭॥

ಅನಿಂದ್ಯನೇತ್ರೆಯೇ, ನೀನು ನನಗೆ ಅನುರೂಪಳಾದವಳು. ನೀನೇ ನಿನ್ನನ್ನು ವಿಮರ್ಶೆ ಮಾಡಿಕೊಂಡು ನೋಡು. ಚಾರುದರ್ಶಿನಿಯೇ, ನಮ್ಮಿಬ್ಬರಿಗೂ ವಯಸ್ಸು ಮತ್ತು ರೂಪಗಳು (ದೇಹಗಳು) ಸಮಾನವಾಗಿವೆ ಎಂಬುದು ಪ್ರತ್ಯಕ್ಷವಾಗಿದೆ.

ಪ್ರಭೂತರತ್ನೋಪಹಿತಂ ಸುಭಾಜನಂ
ಪರೈಹಿ ಚಾದ್ಯೈವ ಮಮೋತ್ತಮಂ ಗೃಹಮ್ ।
ಪ್ರಾಸಾದಮಾಲಾಗ್ರವಿಶಾಲತೋರಣಂ
ಕುಬೇರಪರ್ಜನ್ಯನಿವೇಶನೋಪಮಮ್ ॥೩೮॥

ಶ್ರೇಷ್ಠಳಾದ ನೀನು ಅನೇಕ ರತ್ನಗಳಿಂದ ಮತ್ತು ಅಲಂಕಾರಗಳಿಂದ ಕೂಡಿದ ಉಪ್ಪರಿಗೆಗಳಿಂದಲೂ, ಶ್ರೇಷ್ಠವಾದ ಮಾಲೆಗಳಿಂದಲೂ, ವಿಶಾಲವಾದ ತೋರಣಗಳಿಂದಲೂ ಕೂಡಿದ, ಕುಬೇರನ ಮನೆಯಂತಿರುವ, ಪರ್ಜನ್ಯನ ಮನೆಯಂತಿರುವ ನನ್ನ ಶ್ರೇಷ್ಠವಾದ ಗೃಹಕ್ಕೆ ಉತ್ತಮಳಾದ ನೀನು ಈ ದಿನವೇ ಬರುವವಳಾಗು.

ಯದಸ್ತಿ ತತ್ರಾವಸಥೇ ಮದರ್ಹಣಂ
ವಸು ಪ್ರಭಾವೋಪಗತಂ ಮಮಾಂತಿಕೇ ।
ದದಾನಿ ತತ್ಸರ್ವಮಧೀರಲೋಚನೇ
ತ್ವಮಸ್ಯ ಸರ್ವಸ್ಯ ಸುಗಾತ್ರಿ ಭಾಜನಮ್ ॥೩೯॥

ಚಂಚಲಲೋಚನೆಯೇ, ಸುಗಾತ್ರಿಯೇ, ಆ ಮನೆಯಲ್ಲಿ ನನ್ನ ಸೌಖ್ಯಕ್ಕಾಗಿ ನನ್ನ ಪ್ರಭಾವದಿಂದ ಸಂಪಾದಿಸಿದ ಯಾವ ಧನ ಮೊದಲಾದವುಗಳು ಇವೆಯೋ ಅವುಗಳನ್ನು ನಿನಗೆ ಕೊಡುವೆನು. ಅವೆಲ್ಲಕ್ಕೂ ನೀನು ಪಾತ್ರಳಾಗಿದ್ದೀಯೆ.

ದೇವಂ ಪ್ರಪದ್ಯೇ ಶರಣಂ ವೃಷಧ್ವಜಂ
ತ್ರಿಲೋಚನಂ ದಕ್ಷಮಖಪ್ರಣಾಶನಮ್ ।
ಹರಂ ಭವಂ ಸ್ಥಾಣುಮುಮಾಪತಿಂ ವಿಭುಂ
ತ್ವಯಾऽದ್ಯ ಮೇ ಸುಭ್ರು ದದಾತು ಸಂಗಮಮ್ ॥೪೦॥

ಸುಂದರಿಯೇ (ಒಳ್ಳೆಯ ಹುಬ್ಬುಳ್ಳವಳೇ), ನಾನು ಈ ದಿನ ವೃಷಧ್ವಜನೂ, ತ್ರಿಲೋಚನನೂ, ದಕ್ಷಯಜ್ಞ ಭಂಜಕನೂ, ಉಮಾಪತಿಯೂ, ವಿಭುವೂ, ಭವನೂ, ದೇವನೂ ಆದ ಈಶ್ವರನನ್ನೂ ನಿನ್ನ ಸಂಗಮವನ್ನು ಕೊಡು ಎಂದು ಶರಣು ಹೊಂದುತ್ತೇನೆ.

ತ್ವಯಾ ಸಮಾಗಮ್ಯ ಚ ಚಾರುಲೋಚನೇ
ಷಡಾನನಂ ದ್ವಾದಶದೀಪ್ತಲೋಚನಮ್ ।
ವರಂ ವರಾರ್ಹಂ ವರದೇಶ್ವರಂ ವೃಣೇ
ವರೇಣ ತುಷ್ಟೋ ವರಗಾತ್ರಿ ತೋಷಯೇ ॥೪೧॥

ಚಾರುಲೋಚನೆಯೇ, ಈ ದಿನ ದ್ವಾದಶ ದೀಪ್ತನೇತ್ರನಾದ ವರದೇಶ್ವರನಾದ, ವರಾರ್ಹನಾದ ಷಣ್ಮುಖನನ್ನು ಸಮೀಪಿಸಿ ನಿನ್ನ ಸಮಾಗಮವನ್ನು ವರವಾಗಿ ಕೇಳುತ್ತೇನೆ. ಆ ವರದಾನವನ್ನು ಪಡೆದ ಮೇಲೆ ಶೋಭನಗಾತ್ರಿಯೇ, ಸಂತುಷ್ಟನಾಗಿ ಪುನಃ ಷಣ್ಮುಖನನ್ನು ಸಂತೋಷಪಡಿಸುತ್ತೇನೆ.

ಅಯಂ ತು ರಾಜಾ ಪರಸೈನ್ಯವಾರಣಃ
ಸ್ಯಾಲಪ್ರಿಯತ್ವಾನ್ಮಮ ಚಾದ್ಯ ಭಾಮಿನಿ ।
ಕರಿಷ್ಯತೇ ಕಾಮಮಿಮಂ ಯಥೇಷ್ಟತೋ
ಹ್ಯನೀಕಕರ್ಣಾಗ್ರಧರೋऽಸ್ಮಿ ತಸ್ಯ ವೈ ॥೪೨॥

ಎಲೌ ಭಾಮಿನಿಯೇ, ಪರಸೈನ್ಯನಿವಾರಕನಾದ ಈ ರಾಜನು ಭಾವಮೈದುನನ ಮೇಲಿನ ಪ್ರೀತಿಯಿಂದ ಈ ನನ್ನ ಆಸೆಯನ್ನು ನೆರವೇರಿಸಿಕೊಡುತ್ತಾನೆ. ನಾನು ಅವನ ಸೇನಾನಾಯಕನಾಗಿದ್ದೇನೆ.

ಅಪ್ರಾಪ್ಯ ತು ತ್ವಾಮಹಮದ್ಯ ಶೋಭನೇ
ಶ್ರಿಯಂ ಸಮೃದ್ಧಾಮಿವ ಪಾಪಮಾಚರನ್ ।
ವ್ರಜೇಯಮಿಂದ್ರಸ್ಯ ನಿವೇಶನಂ ಶುಭೇ
ತ್ವಯಾ ವಿಸೃಷ್ಟೋ ಹ್ಯಪುನರ್ಭವಾಂ ಗತಿಮ್ ॥೪೩॥

ಶೋಭನೆಯೇ, ಪಾಪವನ್ನು ಮಾಡಿದವನು ಸಮೃದ್ಧವಾದ ಸಂಪತ್ತನ್ನು ಹೊಂದದಿರುವಂತೆ ನಾನು ಈ ದಿನ ನಿನ್ನನ್ನು ಹೊಂದದಿದ್ದರೆ, ನಿನ್ನಿಂದ ಪರಿತ್ಯಕ್ತನಾದರೆ ಇಂದ್ರನ ಮನೆಯನ್ನು ತಲುಪಿ ಪುನರ್ಭವವಿಲ್ಲದ ಗತಿಯನ್ನು ಪಡೆಯುತ್ತೇನೆ.

ಪ್ರಿಯಾಂಶ್ಚ ದಾರಾನ್ ಸಸುತಾನ್ ಕುಲಂ ಧನಂ
ಯಶಶ್ಚ ಕೀರ್ತಿಂ ಹ್ಯಥವಾऽಪಿ ಜೀವಿತಮ್ ।
ತ್ಯಜಾಮಿ ಸರ್ವಂ ಸುಕೃತಂ ತು ಯತ್ಕೃತಂ
ಪ್ರಿಯೇ ತ್ವದರ್ಥಂ ತು ಹಿ ಜೀವನಂ ಮಮ ॥೪೪॥

ಎಲೌ ಪ್ರಿಯೆಯೇ, ನಾನು ನಿನ್ನ ಸಲುವಾಗಿ ಸ್ತ್ರೀಯರನ್ನೂ, ಪುತ್ರಸಹಿತರಾದ ಪತ್ನಿಯರನ್ನೂ, ಕುಲವನ್ನೂ, ಧನವನ್ನೂ, ಕೀರ್ತಿಯನ್ನೂ ಅಥವಾ ಜೀವಿತವನ್ನೂ, ನಾನು ಮಾಡಿದ ಸುಕೃತವನ್ನೂ ಎಲ್ಲವನ್ನೂ ತೊರೆಯುತ್ತೇನೆ. ನನ್ನ ಜೀವನವಿರುವುದೇ ನಿನ್ನ ಸಲುವಾಗಿ.

ಅವಾರಯಂತಂ ಬಲಶೋಕಮುದ್ಧತಂ
ಸಮುದ್ರವೇಗೋಪಮಮಾತುರಂ ಭೃಶಮ್ ।
ಭಜಸ್ವ ಮಾಮದ್ಯ ಶುಭೇನ ಚೇತಸಾ
ಯಥಾ ನ ಶುಷ್ಯೇ ನ ತಪಾಮ್ಯಚೇತನಃ ॥೪೫॥

ತಡೆಯಲು ಸಾಧ್ಯವಾಗದಂತಹ, ಬಲಶೋಕಗಳಿಂದ ಪೀಡಿತವಾದಂತಹ, ಸಮುದ್ರದ ವೇಗದಂತೆ ಬಹಳವಾಗಿ ಕಾತುರನಾದ ನನ್ನನ್ನು ನಾನು ಒಣಗಿ ಹೋಗದಂತೆ ಅಥವಾ ವಿಷಣ್ಣನಾಗಿ ಬಳಲದಂತೆ ಒಳ್ಳೆಯ ಮನಸ್ಸಿನಿಂದ ಈ ದಿನ ಸೇವಿಸು.

ಯಥಾ ನ ಗಚ್ಛೇಯಮಹಂ ಯಮಕ್ಷಯಂ
ತಥಾ ಕುರುಷ್ವಾಶು ವಿಶಾಲಲೋಚನೇ ।
ಅಹಂ ಹಿ ಕಾಂತೇ ತ್ವದಧೀನಜೀವಿತಃ
ತ್ವಯಾ ವಿಮುಕ್ತೋ ನ ಚಿರಂ ಜಿಜೀವಿಷೇ ॥೪೬॥

ವಿಶಾಲನೇತ್ರೆಯೇ, ಈ ದಿನ ನಾನು ಯಮನ ಪಟ್ಟಣಕ್ಕೆ ಹೋಗದಂತೆ ಮಾಡು. ಕಾಂತೆಯೇ, ನನ್ನ ಜೀವನವು ನಿನ್ನ ಅಧೀನವಾಗಿದೆ. ನೀನು ಪರಿತ್ಯಾಗ ಮಾಡಿದರೆ ನಾನು ಬಹಳ ಕಾಲ ಬದುಕಲು ಬಯಸುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಷೋಡಶೋಽಧ್ಯಾಯಃ ॥

॥ ಕೀಚಕವಧಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ದ್ರೌಪದಿಯಿಂದ ಕೀಚಕನ ನಿರಾಕರಣೆ

ವೈಶಂಪಾಯನಃ

ಏವಮುಕ್ತಾಽನವದ್ಯಾಂಗೀ ಕೀಚಕೇನ ದುರಾತ್ಮನಾ ।
ದ್ರೌಪದೀ ತಮುವಾಚೇದಂ ಸೈರಂಧ್ರೀರೂಪಧಾರಿಣೀ ॥೧॥

ವೈಶಂಪಾಯನ– ದುರಾತ್ಮನಾದ ಕೀಚಕನಿಂದ ಹೀಗೆ ಹೇಳಲ್ಪಟ್ಟ ಅನವದ್ಯಾಂಗಿಯಾದ ಸೈರಂಧ್ರೀ ವೇಷಧಾರಿಣಿಯಾದ ದ್ರೌಪದಿಯು ಅವನನ್ನು ಕುರಿತು ಹೀಗೆ ಮಾತನಾಡಿದಳು;

ಅಪ್ರಾರ್ಥನೀಯಾಂ ಕಾಮಾರ್ತಃ ಸೂತಪುತ್ರಾಭಿಮನ್ಯಸೇ ।
ಚತುರ್ಥವರ್ಣಾಂ ಸೈರಂಧ್ರೀಂ ನಿಹೀನಾಂ ಕೇಶಕಾರಿಕಾಮ್ ॥೨॥

ಸೂತಪುತ್ರನೇ, ನಾಲ್ಕನೆಯ ವರ್ಣಕ್ಕೆ ಸೇರಿದ, ಜಾತಿಯಲ್ಲಿ ಹೀನಳಾದ, ಕೇಶಕಾರಿಣಿಯಾದ, ಆರ್ಥಿಸಲು ಯೋಗ್ಯವಲ್ಲದ ಸೈರಂಧ್ರಿಯನ್ನು ನೀನು ಕಾಮಾರ್ಥನಾಗಿ ಬಯಸುತ್ತಿದ್ದೀಯೆ.

ಏತೇನೈವ ಚ ಯತ್ನೇನ ವಿತ್ತೇನ ಚ ಮನೋರಮಾ ।
ಅನ್ಯಾ ಶಕ್ಯಾ ತ್ವಯಾ ಪ್ರಾಪ್ತುಂ ಸ್ವಜಾತಿಕುಲವರ್ಧನೀ ॥೩॥

ಇದೇ ಪ್ರಯತ್ನ ಮತ್ತು ಧನದಿಂದ ಸುಂದರಿಯಾದ ನಿನ್ನ ಜಾತಿ ಮತ್ತು ಕುಲಗಳನ್ನು ಅಭಿವೃದ್ಧಿಪಡಿಸುವ ಇನ್ನೊಬ್ಬ ವನಿತೆಯನ್ನು ನೀನು ಪಡೆಯಲು ಸಾಧ್ಯ.

ಸ್ವೇಷು ದಾರೇಷು ಮೇಧಾವೀ ಕುರುತೇ ಯತ್ನಮುತ್ತಮಮ್ ।
ಸ್ವದಾರನಿರತೋ ಹ್ಯಾಶು ನರೋ ಭದ್ರಾಣಿ ಪಶ್ಯತಿ ॥೪॥

ನ ಚಾಧರ್ಮೇಣ ಲಿಪ್ಯೇತ ನ ಚಾಕೀರ್ತಿಮವಾಪ್ನುಯಾತ್ ।
ಸ್ವದಾರೇಷು ರತಿರ್ಧರ್ಮೋ ಮೃತಸ್ಯಾಪಿ ನ ಸಂಶಯಃ ॥೫॥

ಮೇಧಾವಿಯಾದ ಪುರುಷನು ತನ್ನ ಪತ್ನಿಯಲ್ಲಿಯೇ ಪ್ರಯತ್ನಪಡುತ್ತಾನೆ. ತನ್ನ ಪತ್ನಿಯಲ್ಲಿ ನಿರತನಾದ ಮನುಷ್ಯನು ಬೇಗ ಕಲ್ಯಾಣವನ್ನು ಹೊಂದುತ್ತಾನೆ. ಅಧರ್ಮದಿಂದ ಲಿಪ್ತನಾಗುವುದಿಲ್ಲ. ಅಪಕೀರ್ತಿಯನ್ನು ಪಡೆಯುವುದಿಲ್ಲ. ಸತ್ತರೂ ಸಹ ತನ್ನ ಪತ್ನಿಯಲ್ಲಿ ರತಿಯು ಧರ್ಮವೆನಿಸುತ್ತದೆ. ಇದರಲ್ಲಿ ಸಂಶಯವಿಲ್ಲ.

ಸ್ವಜಾತಿದಾರಾ ಮರ್ತ್ಯಸ್ಯ ಇಹ ಲೋಕೇ ಪರತ್ರ ಚ ।
ಪ್ರೇತಕಾರ್ಯಾಣಿ ಕುರ್ವಂತಿ ನಿವಾಪ್ಯೈಸ್ತರ್ಪಯಂತಿ ಚ ॥೬॥

ತದಕ್ಷಯ್ಯಂ ಚ ಧರ್ಮ್ಯಂ ಚ ಸ್ವರ್ಗ್ಯಮಾಹುರ್ಮನೀಷಿಣಃ ॥೭॥

ತಮ್ಮ ಜಾತಿಯ ಪತ್ನಿಯರು ಮನುಷ್ಯರಿಗೆ ಈ ಲೋಕದಲ್ಲಿಯೂ ಹಿತವನ್ನು ಮಾಡುತ್ತಾರೆ. ಪರಲೋಕಕ್ಕೆ ಹೋದಮೇಲೆ ಪ್ರೇತಕಾರ್ಯಗಳನ್ನೂ, ನಿವಾಪಗಳನ್ನೂ ಮತ್ತು ತರ್ಪಣವನ್ನೂ ಕೊಡುತ್ತಾರೆ. ಸ್ವಪತ್ನೀರತಿಯು ಅಕ್ಷಯವಾದ ಧರ್ಮದಾಯಕವೆಂದೂ, ಸ್ವರ್ಗಸಾಧನವೆಂದೂ ಜ್ಞಾನಿಗಳು ಹೇಳುತ್ತಾರೆ.

ಸ್ವಜಾತಿದಾರಜಾಃ ಪುತ್ರಾ ಜಾಯಂತೇ ಕುಲಪೂಜಿತಾಃ ॥೮॥

ತೇ ಕ್ಷೇತ್ರಜಾಶ್ಚ ಪಿತ್ರ್ಯಾಶ್ಚ ಶ್ರೂಯಂತೇ ಕುಲವರ್ಧನಾಃ ।
ತಸ್ಮಾತ್ ಸ್ವದಾರನಿರತಾ ಭವಂತಿ ಪುರುಷಾಃ ಶುಭಾಃ ॥೯॥

ಪ್ರಿಯಾ ಹಿ ಪ್ರಾಣಿನಾಂ ದಾರಾಃ ತಸ್ಮಾತ್ ತ್ವಂ ಧರ್ಮಭಾಗ್ ಭವ ॥

ತನ್ನ ಜಾತಿಯ ಪತ್ನಿಯಲ್ಲಿ ಹುಟ್ಟಿದ ಮಕ್ಕಳು ಕುಲದಲ್ಲಿ ಪೂಜಿತರಾಗುತ್ತಾರೆ. ಅವರು ಕ್ಷೇತ್ರಜರೆನಿಸುತ್ತಾರೆ. ಪಿತೃಗಳಿಗೆ ಸಮ್ಮತರಾಗುತ್ತಾರೆ ಮತ್ತು ಕುಲವರ್ಧನರಾಗುತ್ತಾರೆ ಎಂದು ಕೇಳಿಬರುತ್ತದೆ. ಆದ್ದರಿಂದ ಸತ್ಪುರುಷರು ತಮ್ಮ ಪತ್ನಿಯರಲ್ಲಿಯೇ ನಿರತರಾಗಿರುತ್ತಾರೆ. ಎಲ್ಲರಿಗೂ ತಮ್ಮ ಪತ್ನಿಯರು ಪ್ರಿಯರಷ್ಟೇ! ಆದ್ದರಿಂದ ನೀನು ಧರ್ಮಭಾಜನನಾಗು.

ಪರದಾರರತೋ ಮರ್ತ್ಯೋ ನ ಚ ಭದ್ರಾಣಿ ಪಶ್ಯತಿ ।
ನ ಚ ಧರ್ಮೇಣ ಲಿಪ್ಯೇತ ನ ಚ ಕೀರ್ತಿಮವಾಪ್ನುಯಾತ್ ॥೧೧॥

ಪರದಾರರತನಾದ ಮನುಷ್ಯನು ಮಂಗಳವನ್ನು ನೋಡುವುದಿಲ್ಲ. ಧರ್ಮವನ್ನು ಸಂಪಾದಿಸುವುದಿಲ್ಲ ಮತ್ತು ಅಪಕೀರ್ತಿಯನ್ನು ಹೊಂದುವನು.

ಪರದಾರೇ ನ ತೇ ಬುದ್ಧಿರ್ಜಾತು ಕಾರ್ಯಾ ಕಥಂಚನ ।
ವಿವರ್ಜನಮಕಾರ್ಯಾಣಾಮೇತತ್ ಸತ್ಪುರುಷವ್ರತಮ್ ॥೧೨॥

ಪರಪತ್ನಿಯರಲ್ಲಿ ಎಂದೂ ನೀನು ಮನಸ್ಸನ್ನು ಮಾಡಬಾರದು. ಅಕಾರ್ಯವನ್ನು ಪರಿತ್ಯಾಗಮಾಡುವುದು ಸತ್ಪುರುಷರ ವ್ರತ.

ಮಿಥ್ಯಾಭಿಲಾಷೀ ಚ ನರಃ ಕಾಮಾತ್ಮಾ ಮೋಹಸಂಸ್ಥಿತಃ ।
ಅಧರ್ಮಮಯಶಶ್ಚಾಪಿ ಪ್ರಾಪ್ನುಯಾಚ್ಚ ಮಹದ್ ಭಯಮ್ ॥೧೩॥

ಅಯೋಗ್ಯವನ್ನು ಆಶಿಸುವ ಕಾಮಾತ್ಮನೂ, ಮೋಹಪರವಶನೂ ಆದ ಮನುಷ್ಯನು ಅಧರ್ಮವನ್ನೂ, ಅಪಕೀರ್ತಿಯನ್ನೂ ಮತ್ತು ಮಹಾಭಯವನ್ನೂ ಹೊಂದುವನು.

ಪರದಾರಾಸ್ಮಿ ಭದ್ರಂ ತೇ ನಾಹಂ ಶಕ್ಯಾ ತ್ವಯಾ ಸದಾ ।
ಸ್ಪೃಷ್ಟುಂ ದ್ರಷ್ಟುಂ ತಥಾ ಪ್ರಾಪ್ತುಂ ಕಾಮದಗ್ಧೇನ ಚೇತಸಾ ॥೧೪॥

ನಾನು ಪರದಾರಳಾಗಿದ್ದೇನೆ. ನಿನಗೆ ಮಂಗಳವಾಗಲಿ. ನೀನು ಕಾಮದಗ್ಧವಾದ ಮನಸ್ಸಿನಿಂದ ನನ್ನನ್ನು ಎಂದಾದರೂ ನೋಡುವುದಾಗಲೀ, ಸ್ಪರ್ಶಿಸುವುದಾಗಲೀ ಅಥವಾ ಪಡೆಯುವುದಾಗಲೀ ಸಾಧ್ಯವಿಲ್ಲ.

ಮಾಂ ಹಿ ತ್ವಮವಮನ್ವಾನಃ ಸೂತಪುತ್ರ ವಿನಂಕ್ಷ್ಯಸಿ ।
ಆಶು ಚಾದ್ಯೈವ ನ ಚಿರಾತ್ ಸಪುತ್ರಃ ಸಹಬಾಂಧವಃ ॥೧೫॥

ಸೂತಪುತ್ರನೇ, ನೀನು ನನ್ನನ್ನು ಬಯಸಿದರೆ ಈ ದಿನವೇ ಶೀಘ್ರವಾಗಿ ಪುತ್ರ-ಬಾಂಧವರ ಜೊತೆಯಲ್ಲಿ ವಿನಾಶವನ್ನು ಹೊಂದುವಿ.

ದುರ್ಲಭಾಮಭಿಮನ್ವಾನೋ ಮಾಂ ವೀರೈರಭಿರಕ್ಷಿತಾಮ್ ।
ಪತಿಷ್ಯಸ್ಯವಶಸ್ತೂರ್ಣಂ ವೃಂತಾತ್ ತಾಳಫಲಂ ಯಥಾ ॥೧೬॥

ವೀರರಿಂದ ಚೆನ್ನಾಗಿ ರಕ್ಷಿತಳಾದ, ನಿನಗೆ ಎಂದೂ ಸಿಗಲಾರದ ನನ್ನನ್ನು ಬಯಸಿದರೆ ನೀನು ತಾಳೆಯ ಫಲವು ತೊಟ್ಟುಕಳಚಿ ಬೀಳುವಂತೆ ಶೀಘ್ರವಾಗಿ ವಿವಶನಾಗಿ ಬೀಳುವಿ.

ನ ಚಾಪ್ಯಹಂ ತ್ವಯಾ ಶಕ್ಯಾ ಸ್ಪಷ್ಟುಂ ದುಷ್ಟೇನ ಚೇತಸಾ ।
ಕಾಮವೇಗೋದ್ಧತಾಂಗೇನ ಗಂಧರ್ವಾಃ ಪತಯೋ ಮಮ ॥೧೭॥

ಕಾಮವೇಗದಿಂದ ಕೂಡಿದ ಶರೀರವುಳ್ಳ ನಿನ್ನಿಂದ ದುಷ್ಟಮನಸ್ಸಿನಿಂದ ನನ್ನನ್ನು ಮುಟ್ಟಲೂ ಸಾಧ್ಯವಿಲ್ಲ. ನನ್ನ ಪತಿಗಳು ಗಂಧರ್ವರು.

ತೇ ತ್ವಾಂ ವಿಹನ್ಯುಃ ಕುಪಿತಾಃ ಸಾನುಬಂಧಮಮರ್ಷಣಾಃ ।
ಸೀತಾರ್ಥಂ ಹಿ ದಶಗ್ರೀವಂ ಯಥಾ ರಾಮಃ ಸಬಾಂಧವಮ್ ॥೧೮॥

ಕ್ರೋಧಶೀಲರಾದ ಅವರು ಕೋಪಗೊಂಡು ಸೀತೆಯ ಸಲುವಾಗಿ ರಾಮನು ಸಬಾಂಧವನಾದ ರಾವಣನನ್ನು ಕೊಂದಂತೆ ನಿನ್ನ ಬಂಧುಗಳ ಜೊತೆಯಲ್ಲಿ ನಿನ್ನನ್ನು ಕೊಂದಾರು.

ಪತಿಷ್ಯಸಿ ತಥಾ ಮೂರ್ಖಿ ಪಾತಾಳೇ ಕ್ರೂರದರ್ಶನೇ ।
ಯಥಾ ನಿಶ್ಚೇತನೋ ಬಾಲಸ್ತೀರಸ್ಥಃ ಕೂಪಮುತ್ತರಮ್ ॥೧೯॥

ಯಥಾ ಲಂಘಿತುಮಿಚ್ಛೇತ ತಥೈವ ತ್ವಂ ಮನೋಽದಧಾಃ ।
ಅಭವ್ಯರೂಪೈಃ ಪುರುಷೈಃ ಪಂಥಾನಂ ಗಂತುಮಿಚ್ಛಸಿ ॥೨೦॥

ಮೂರ್ಖನೇ, ನೀನು ಕ್ರೂರದರ್ಶನವಾದ ಪಾತಾಳದಲ್ಲಿ ಬೀಳುವಿ. ದುರ್ಬಲನಾದ ಬಾಲಕನು ಕೂಪದ ತೀರದಲ್ಲಿನಿಂತು ದಾಟಲು ಇಚ್ಛೆಪಟ್ಟಂತೆ ನೀನು ನಿನ್ನ ಮನಸ್ಸನ್ನು ಮಾಡಿದ್ದೀಯೆ. ದುಷ್ಟಪುರುಷರು ನಡೆದ ದಾರಿಯಲ್ಲಿನಡೆಯುವುದಕ್ಕೆ ನೀನು ಬಯಸುತ್ತಿದ್ದೀಯೆ.

ಯೋ ಮಾಮಜ್ಞಾಯ ಕಾಮಾರ್ತ ಅಬದ್ಧಾನಿ ಪ್ರಭಾಷಸೇ ।
ಅಶಕ್ತಶ್ಚ ಪುಮಾನ್ ಶೀಲಂ ನ ಲಂಘಯಿತುಮರ್ಹತಿ ॥೨೧॥

ಏಕೆಂದರೆ ನನ್ನ ಸ್ವರೂಪವನ್ನು ತಿಳಿಯದೆ ಕಾಮಾರ್ತನಾಗಿ ಅಬದ್ಧ ಮಾತುಗಳನ್ನು ಆಡುತ್ತಿದ್ದೀಯೆ. ದುರ್ಬಲನಾದ ಪುರುಷನು ಎಂದೂ ಶೀಲದ ಗೆರೆಯನ್ನು ದಾಟಬಾರದು.

ಪತನ್ ಹಿ ಪಾತಾಳಮುಖೇ ಮಹೋದಧೌ
ಕ್ಷಿತಿಂ ಪ್ರವಿಷ್ಟೋ ಯದಿ ಚೋರ್ಧ್ವಮುತ್ಪತೇತ್ ।
ದಿಶಃ ಪ್ರಪನ್ನೋ ಗಿರಿಗಹ್ವರಾಣಿ ವಾ
ಗುಹಾಂ ಪ್ರವಿಷ್ಟೋಽಂತರಿತೋಽಪಿ ವಾ ಕ್ಷಿತೇಃ ॥೨೨॥

ಜುಹ್ವನ್ ಜಪನ್ ವಾ ಪ್ರಪತನ್ ಗಿರೇಸ್ತಟಾದ್
ಹುತಾಶನಾದಿತ್ಯಗತಿಂ ಗತೋಽಪಿ ವಾ ।
ಭಾರ್ಯಾಭಿಮತ್ತಃ ಪುರುಷೋ ಮಹಾತ್ಮಾ
ನ ಜಾತು ಮುಚ್ಯೇತ ಕಥಂಚನಾರ್ಹತಃ ॥೨೩॥

ನೀನು ಪಾತಾಳದ ಆಳಕ್ಕಿಳಿದರೂ, ಮಹೋದಧಿಯಲ್ಲಿ ಮುಳುಗಿದರೂ, ಭೂಮಿಯಲ್ಲಿ ಪ್ರವೇಶ ಮಾಡಿದರೂ, ಆಕಾಶಕ್ಕೆ ಹಾರಿದರೂ, ದಿಕ್ಕುಗಳಲ್ಲಿ ಹೋಗಿ ಸೇರಿದರೂ, ಪರ್ವತದ ಗುಹೆಗಳಲ್ಲಿ ಅಡಗಿದರೂ, ಭೂಮಿಯಲ್ಲಿ ಮರೆಮಾಡಿಕೊಂಡರೂ, ಹೋಮವನ್ನು ಮಾಡಿದರೂ, ಜಪವನ್ನು ಮಾಡಿದರೂ, ಗಿರಿಶಿಖರದಿಂದ ಬಿದ್ದರೂ, ಅಗ್ನಿ ಮತ್ತು ಆದಿತ್ಯರ ಗತಿಯನ್ನು ಹೊಂದಿದರೂ,

ಇನ್ನೊಬ್ಬರ ಭಾರ್ಯೆಯಲ್ಲಿ ಆಸಕ್ತನಾದ ದುಷ್ಟನಾದ ನೀನು ಪಾಪದಿಂದಲಾಗಲೀ ಅಥವಾ ಯೋಗ್ಯವ್ಯಕ್ತಿಯ ಹಸ್ತದ ಶಿಕ್ಷೆಯಿಂದಲಾಗಲೀ ಬಿಡುಗಡೆಯನ್ನು ಹೊಂದುವುದಿಲ್ಲ.

ಮೋಘಂ ತವೇದಂ ವಚನಂ ಭವಿಷ್ಯತಿ
ಪ್ರತೋಲನಂ ವಾ ತುಲಯಾ ಮಹಾಗಿರೇಃ ।
ಮಾ ತಾರಕಾಣಾಮಧಿಪಂ ಯಥಾ ಶಿಶುಃ
ಮಾಂ ಬಾಲವತ್ ಪ್ರಾಪ್ಸ್ಯಸಿ ದುರ್ಲಭಾಂ ಸತೀಮ್ ॥೨೪॥

ಈ ನಿನ್ನ ಮಾತುಗಳು ದೊಡ್ಡ ಪರ್ವತವನ್ನು ತಕ್ಕಡಿಯಲ್ಲಿ ತೂಗುವ ಪ್ರಯತ್ನದಂತೆ ವ್ಯರ್ಥವಾಗುತ್ತವೆ. ಶಿಶುವು ನಕ್ಷತ್ರಾಧಿಪನಾದ ಚಂದ್ರನನ್ನು ಪಡೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ನಾನು ನಿನ್ನಿಂದ ಪಡೆಯಲು ಸಾಧ್ಯವಿಲ್ಲದವಳು.

ದಾರಾಭಿಮರ್ಶೀ ಪುರುಷೋ ಮಹಾತ್ಮನಾಂ
ಗತ್ವಾಽಪಿ ದೇವಾನ್ ಶರಣಂ ನ ವಿಂದತಿ ।
ಇಮಾಂ ಮತಿಂ ಕೀಚಕ ಮುಂಚ ಕಾಮಿನಾಂ
ಮಾ ನೀನಶೋ ಜೀವಿತಮಾತ್ಮನಃ ಪ್ರಿಯಮ್ ॥೨೫॥

ಮಹಾತ್ಮರ ಪತ್ನಿಯನ್ನು ಬಯಸುವವನು ದೇವತೆಗಳ ಬಳಿಗೆ ಹೋದರೂ ರಕ್ಷಣೆಯನ್ನು ಪಡೆಯುವುದಿಲ್ಲ. ಕೀಚಕನೇ, ಕಾಮಿಗಳ ಈ ಬುದ್ಧಿಯನ್ನು ಬಿಡು. ನಿನಗೆ ಪ್ರಿಯವಾದ ಜೀವಿತವನ್ನು ತೊರೆಯಬೇಡ.

ತ್ವಂ ಕಾಲಪಾಶಂ ಪ್ರತಿಮುಚ್ಯ ಕಂಠೇ
ಪ್ರವೇಷ್ಟುಮಿಚ್ಛಸ್ಯುತ ದುಷ್ಪ್ರವೇಶನಮ್ ।
ಹುತಾಶನಂ ಪ್ರಜ್ವಲಿತಂ ಮಹಾವನೇ
ನಿದಾಘಮಧ್ಯಾಹ್ನ ಇವಾತುರಃ ಸ್ವಯಮ್ ॥೨೬॥

ಪ್ರವೇಷ್ಟುಕಾಮೋಽಸಿ ವಧಾಯ ಚಾತ್ಮನಃ
ಕುಲಸ್ಯ ಸರ್ವಸ್ಯ ವಿನಾಶನಾಯ ಚ ।

ನೀನು ಕತ್ತಿಗೆ ಕಾಲಪಾಶವನ್ನು ಕಟ್ಟಿಕೊಂಡು ಪ್ರವೇಶಿಸಲು ಸಾಧ್ಯವಿಲ್ಲದ ಮಹಾವನದಲ್ಲಿ ಬೇಸಿಗೆಯ ಸಮಯದಲ್ಲಿ ಮಧ್ಯಾಹ್ನದಲ್ಲಿ ಉರಿಯುತ್ತಿರುವ ಅಗ್ನಿಯನ್ನು ಆತುರನಾಗಿ ಪ್ರವೇಶಿಸಲು ಇಚ್ಛಿಸುತ್ತಿದ್ದೀಯೆ. ಅದರ ಫಲ ನಿನ್ನ ಕುಲದ ಮತ್ತು ಸರ್ವಸ್ವದ ವಿನಾಶ.

ನ ದೇವಗಂಧರ್ವಮಹರ್ಷಿಸನ್ನಿಧೌ
ನ ನಾಗಲೋಕಾಸುರರಾಕ್ಷಸಾಲಯೇ ॥೨೭॥

ಗೂಢಸ್ಥಿತಾಂ ಮಾಮವಮತ್ಯ ಚೇತಸಾ
ನ ಜೀವಿತಾರ್ಥೀ ಶರಣಂ ತ್ವಮಾಪ್ಸ್ಯಸಿ ॥೨೮॥

ಗೂಢಳಾಗಿರುವ ನನ್ನನ್ನು ನೀನು ಮನಸ್ಸಿನಿಂದ ಅವಮಾನವನ್ನು ಮಾಡಿದರೆ ದೇವ-ಗಂಧರ್ವ-ಮಹರ್ಷಿಗಳ ಸನ್ನಿಧಾನದಲ್ಲಾಗಲೀ, ನಾಗಲೋಕದಲ್ಲಾಗಲೀ, ಅಸುರರಾಕ್ಷಸರ ಆಲಯದಲ್ಲಾಗಲೀ ಜೀವಿತಾರ್ಥಿಯಾದ ನೀನು ರಕ್ಷಣೆಯನ್ನು ಪಡೆಯುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಸಪ್ತದಶೋಽಧ್ಯಾಯಃ ॥

॥ ಕೀಚಕವಧಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ಕೀಚಕನ ಪ್ರೇರಣೆಯಂತೆ ಸುದೇಷ್ಣೆಯಿಂದ ದ್ರೌಪದಿಗೆ ಕೀಚಕನ ಮನೆಗೆ ಹೋಗುವಂತೆ ಒತ್ತಾಯ

ವೈಶಂಪಾಯನಃ

ಪ್ರತ್ಯಾಖ್ಯಾತಸ್ತು ಪಾಂಚಾಲ್ಯಾ ಕೀಚಕಃ ಕಾಮಮೂರ್ಚ್ಛಿತಃ ।
ಪ್ರವಿಶ್ಯ ರಾಜಭವನಂ ಭಗಿನ್ಯಾಸ್ತ ಗ್ರತಃ ಸ್ಥಿತಃ ॥೧॥

ವೈಶಂಪಾಯನ– ಪಾಂಚಾಲಿಯಿಂದ ನಿರಾಕೃತನಾದ ಕೀಚಕನು ಕಾಮ ಮೂರ್ಛಿತನಾಗಿ ರಾಜನ ಭವನವನ್ನು ಪ್ರವೇಶಿಸಿ ಅಕ್ಕನ ಎದುರಿಗೆ ನಿಂತನು.

ಸೋಽಭಿವೀಕ್ಷ್ಯ ಸುಕೇಶಾಂತಾಂ ಸುದೇಷ್ಣಾಂ ಭಗಿನೀಂ ಪ್ರಿಯಾಮ್ ।
ಅಮರ್ಯಾದೇನ ಕಾಮೇನ ಸ್ವಚಿತ್ತೇಽಭಿಪರಿಪ್ಲುತಃ ॥೨॥

ಸ ತು ಮೂರ್ಧ್ನ್ಯಂಜಲಿಂ ಕೃತ್ವಾ ಭಗಿನ್ಯಾಶ್ಚರಣಾವುಭೌ ।
ಸಮ್ಮೋಹಾಭಿಹತಸ್ತೂರ್ಣಂ ವಾತೋದ್ಧೂತ ಇವಾರ್ಣವಃ ॥೩॥

ಪ್ರೋವಾಚ ಚ ಸುದುಃಖಾರ್ತೋ ಭಗಿನೀಂ ನಿಃಶ್ವಸನ್ ಮುಹುಃ ।
ಅವ್ಯಕ್ತಮೃದುನಾ ನಾಮ್ನಾ ಶುಷ್ಯಮಾಣಃ ಪುನಃ ಪುನಃ ॥೪॥

ಅವನು ಒಳ್ಳೆಯ ಬೈತಲೆ ಇರುವ, ಪ್ರಿಯಳಾದ ತನ್ನ ಅಕ್ಕನಾದ ಸುದೇಷ್ಣೆಯನ್ನು ನೋಡಿ ಮರ್ಯಾದೆಯನ್ನು ಮೀರಿದ ಕಾಮದಿಂದ ಪೂರ್ಣವಾದ ಚಿತ್ತವುಳ್ಳವನಾಗಿ ತಲೆ ಮೇಲೆ ಕೈಗಳನ್ನು ಜೋಡಿಸಿ ಅಕ್ಕನ ಚರಣಗಳನ್ನು ಮುಟ್ಟಿ ಬಿರುಗಾಳಿಗೆ ಉಕ್ಕಿದ ಸಮುದ್ರದಂತೆ ಮೋಹದಿಂದ ಅಭಿಹತನಾಗಿ ಮತ್ತೆ ಮತ್ತೆ ನಿಟ್ಟುಸಿರನ್ನು ಬಿಡುತ್ತಾ ಒಣಗಿ ಹೋಗುತ್ತಾ ದುಃಖದಿಂದ ಆರ್ತನಾಗಿ ಅವ್ಯಕ್ತ ಮಧುರವಾದ ನಾಮದಿಂದ ಸುದೇಷ್ಣೆಯನ್ನು ಸಂಬೋಧಿಸಿ ಮಾತನಾಡಿದನು.

ಯಥಾ ಸುದೇಷ್ಣೇ ಸೈರಂಧ್ರ್ಯಾ ಸಂಗಚ್ಛೇಯಂ ಸಕಾಮಯಾ ।
ತಥಾ ಶೀಘ್ರಂ ಕುರುಷ್ವಾದ್ಯ ಮಾಽಹಂ ಪ್ರಾಣಾನ್ ಪ್ರಹಾಸಿಷಮ್ ॥

ಸುದೇಷ್ಣೆಯೇ, ನಾನು ಈ ದಿನ ಸಕಾಮಳಾದ ಸೈರಂಧ್ರಿಯ ಜೊತೆಯಲ್ಲಿ ಸಮಾಗಮವನ್ನು ಹೊಂದುವಂತೆ ಶೀಘ್ರವಾಗಿ ಮಾಡು. ನಾನು ಪ್ರಾಣಗಳನ್ನು ಕಳೆದುಕೊಳ್ಳುವುದು ಬೇಡ.

ಯದೀಯಮನವದ್ಯಾಂಗೀ ನ ಮಾಮದ್ಯಾಭಿಕಾಂಕ್ಷತೇ ।
ಚೇತಸಾಽಭಿಪ್ರಸನ್ನೇನ ಗತೋಽಸ್ಮ್ಯದ್ಯ ಯಮಾಲಯಮ್ ॥೬॥

ಆ ಅನವದ್ಯಾಂಗಿಯು ಈ ದಿನ ಪ್ರಸನ್ನಚಿತ್ತಳಾಗಿ ನನ್ನನ್ನು ಕಾಮಿಸದಿದ್ದರೆ ಈ ದಿನ ನಾನು ಯಮಪಟ್ಟಣಕ್ಕೆ ಹೋದೆನೆಂದು ತಿಳಿ.

ತಮುವಾಚ ಪರಿಷ್ವಜ್ಯ ಸುದೇಷ್ಣಾ ಭ್ರಾತರಂ ಪ್ರಿಯಾಮ್ ॥೭॥

ಶರಣಾಗತೇಯಂ ಸುಶ್ರೋಣೀ ಮಯಾ ದತ್ತಾಭಯಾ ಚ ಸಾ ।
ಶುಭಾಚಾರಾ ಚ ಭದ್ರಂ ತೇ ನೈನಾಂ ವಕ್ತುಮಿಹೋತ್ಸಹೇ ॥೮॥

ನೈಷಾ ಚ ಶಕ್ಯಾ ಹ್ಯನ್ಯೇನ ಸ್ಪಷ್ಟುಂ ದುಷ್ಟೇನ ಚೇತಸಾ ।
ಗಂಧರ್ವಾಃ ಕಿಲ ಪಂಚೈನಾಂ ರಕ್ಷಂತಿ ರಮಯಂತಿ ಚ ॥೯॥

ಏವಮೇಷಾ ಮಮಾಚಷ್ಟ ತಥಾ ಪ್ರಥಮಸಂಗಮೇ ॥೧೦॥

ತನ್ನ ಪ್ರಿಯನಾದ ತಮ್ಮನನ್ನು ಆಲಿಂಗಿಸಿ ಸುದೇಷ್ಣೆಯು ಹೀಗೆ ಹೇಳಿದಳು– 'ಈ ಸುಂದರಿಯು ನನಗೆ ಶರಣಾಗತಳಾಗಿದ್ದಾಳೆ. ನಾನು ಅವಳಿಗೆ ಅಭಯವನ್ನು ಕೊಟ್ಟಿದ್ದೇನೆ. ಅವಳು ಒಳ್ಳೆಯ ಆಚಾರವುಳ್ಳವಳು. ನಿನಗೆ ಮಂಗಳವಾಗಲಿ. ನಾನು ಹೀಗೆ ಅವಳಿಗೆ ಹೇಳಲಾರೆ. ಮತ್ತು ಇನ್ನೊಬ್ಬನು ಅವಳನ್ನು ದುಷ್ಟಮನಸ್ಸಿನಿಂದ ಮುಟ್ಟಲೂ ಸಾಧ್ಯವಿಲ್ಲ. ಐದುಜನ ಗಂಧರ್ವರು ಅವಳನ್ನು ರಕ್ಷಿಸುತ್ತಾರೆ ಮತ್ತು ಸಂತೋಷಪಡಿಸುತ್ತಾರೆ. ನಮ್ಮ ಪ್ರಥಮ ಸಮಾಗಮದಲ್ಲಿ ಅವಳು ನನಗೆ ಹೀಗೆ ಹೇಳಿದಳು.

ತಥೈವ ಗಜನಾಸೋರೂಃ ಸತ್ಯಮಾಹ ಮಮಾಂತಿಕೇ ।
ತೇಽಪಿ ಕ್ರುದ್ಧಾ ಮಹಾತ್ಮಾನೋ ನಾಶಯೇಯುರ್ಹಿ ಜೀವಿತಮ್ ॥೧೧॥

ಸುಂದರವಾದ ಮೂಗುಳ್ಳ ಅವಳು ನನ್ನ ಸಮೀಪದಲ್ಲಿ ಸತ್ಯವನ್ನೇ ನುಡಿದಿದ್ದಾಳೆ. ಕೋಪಗೊಂಡ ಆ ಮಹಾತ್ಮರಾದರೂ ನಿನ್ನ ಜೀವಿತವನ್ನೇ ನಾಶಮಾಡಿಯಾರು.

ರಾಜಾ ಚೈವ ಸಮೀಕ್ಷ್ಯೈನಾಂ ಸಮ್ಮೋಹಂ ಗತವಾನಿಹ ।
ಮಯಾ ಚ ಸತ್ಯವಚನೈರನುನೀತೋ ಮಹೀಪತಿಃ ॥೧೨॥

ರಾಜನೂ ಕೂಡ ಇವಳನ್ನು ನೋಡಿ ಸಮ್ಮೋಹಕ್ಕೆ ಒಳಗಾದನು. ನಾನು ರಾಜನಿಗೆ ಸತ್ಯವಾದ ಹಿತವಚನಗಳನ್ನು ಹೇಳಿ ಸಮಾಧಾನಪಡಿಸಿದೆ.

ಸೋಽಪ್ಯೇನಾಮನಿಶಂ ದೃಷ್ಟ್ವಾ ಮನಸೈವಾಭ್ಯನಂದತ ।
ಭಯಾದ್ ಗಂಧರ್ವಮುಖ್ಯಾನಾಂ ಜೀವಿತಸ್ಯೋಪಘಾತಿನಾಮ್ ॥೧೩॥

ಮನಸಾಽಪಿ ತತಸ್ತ್ವೇನಾಂ ನ ಚಿಂತಯತಿ ಪಾರ್ಥಿವಃ ॥೧೪॥

ಅವನೂ ಸಹ ಇವಳನ್ನು ಯಾವಾಗಲೂ ನೋಡಿ ಮನಸ್ಸಿನಲ್ಲಿಯೇ ಸಂತೋಷ ಪಡುತ್ತಿದ್ದನು. ಜೀವಿತವನ್ನೇ ನಾಶಮಾಡುವ ಗಂಧರ್ವಶ್ರೇಷ್ಠರನ್ನು ಕೇಳಿದ ಮೇಲೆ ಅವರ ಭಯದಿಂದ ಈಗ ಅವನು ಇವಳನ್ನು ಮನಸ್ಸಿನಲ್ಲಿಯೂ ಚಿಂತಿಸುವುದಿಲ್ಲ.

ತೇ ಹಿ ಕ್ರುದ್ಧಾ ಮಹಾತ್ಮಾನೋ ಗರುಡಾನಿಲತೇಜಸಃ ।
ದಹೇಯುರಪಿ ಲೋಕಾಂಸ್ತ್ರೀನ್ ಯುಗಾಂತೇಷ್ವಿವ ಭಾಸ್ಕರಃ ॥೧೫॥

ಕೋಪಗೊಂಡ ಆ ಮಹಾತ್ಮರು ಗರುಡನ, ಅಗ್ನಿಯ ತೇಜಸ್ಸನ್ನು ಹೊಂದಿದವರು. ಯುಗಾಂತಸಮಯದ ಸೂರ್ಯನಂತೆ ಅವರು ಮೂರುಲೋಕಗಳನ್ನೂ ಸುಟ್ಟಾರು.

ಸೈರಂಧ್ರ್ಯಾ ಹ್ಯೇತದಾಖ್ಯಾತಂ ಮಮ ತೇಷಾಂ ಮಹದ್ಬಲಮ್ ।
ತವ ಚಾಹಮಿದಂ ಗುಹ್ಯಂ ಸ್ನೇಹಾದಾಖ್ಯಾಮಿ ಬಂಧುವತ್ ॥೧೬॥

ಮಾ ಗಮಿಷ್ಯಸಿ ವೈ ಕೃಚ್ಛ್ರಂ ಗತಿಂ ಪರಮದುರ್ಗಮಾಮ್ ।
ಬಲಿನಸ್ತೇ ರುಜಂ ಕುರ್ಯುಃ ಕುಲಸ್ಯ ಚ ಧನಸ್ಯ ಚ ॥೧೭॥

ಸೈರಂಧ್ರಿಯೇ ಅವರ ಈ ಮಹಾಬಲವನ್ನು ನನಗೆ ಹೇಳಿದಳು. ನಾನು ಬಂಧುವಿನಂತೆ ನಿನಗೆ ಸ್ನೇಹದಿಂದ ಈ ರಹಸ್ಯವನ್ನು ಹೇಳುತ್ತಿದ್ದೇನೆ. ಪರಮ ದುರ್ಗಮವಾದ ನೀಚಗತಿಯನ್ನು ಹೊಂದಬೇಡ. ಬಲಿಷ್ಠರಾದ ಅವಳ ಪತಿಗಳು ಕುಲಕ್ಕೂ ಮತ್ತು ಧನಕ್ಕೂ ನಾಶವನ್ನು ತಂದೊಡ್ಡಬಹುದು.

ತಸ್ಮಾದಸ್ಯಾಂ ಮನಃ ಕರ್ತುಂ ಯದಿ ಪ್ರಾಣಾಃ ಪ್ರಿಯಸ್ತವ ।
ಮಾ ಚಿಂತಯೇಥಾ ಮಾ ಗಾಸ್ತ್ವಂ ಮತ್ಪ್ರಿಯಂ ಚ ಯದೀಚ್ಛಸಿ ॥೧೮॥

ಆದ್ದರಿಂದ ನಿನಗೆ ನಿನ್ನ ಪ್ರಾಣವು ಪ್ರಿಯವಾದರೆ ಅವಳನ್ನು ಚಿಂತಿಸಬೇಡ. ನನಗೆ ಪ್ರಿಯವನ್ನು ಮಾಡಲು ಬಯಸುವುದಾದರೆ ಅವಳ ಸಮೀಪಕ್ಕೆ ಹೋಗಬೇಡ.

ವೈಶಂಪಾಯನಃ

ಏವಮುಕ್ತಸ್ತು ದುಷ್ಟಾತ್ಮಾ ಭಗಿನೀಂ ಕೀಚಕೋಽಬ್ರವೀತ್ ॥೧೯॥

ಗಂಧರ್ವಾಣಾಂ ಶತಂ ಚಾಪಿ ಸಹಸ್ರಮಯುತಾನಿ ವಾ ।
ಅಹಮೇಕೋ ಹನಿಷ್ಯಾಮಿ ಗಂಧರ್ವಾನ್ ಪಂಚ ಕಿಂ ಪುನಃ ॥೨೦॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಕೀಚಕನು ಅಕ್ಕನನ್ನು ಕುರಿತು ಮಾತನಾಡಿದನು. ಗಂಧರ್ವರು ನೂರುಜನ ಇರಲಿ, ಸಾವಿರವಿರಲಿ, ಹತ್ತುಸಾವಿರವಿರಲಿ, ನಾನೊಬ್ಬನೇ ಅವರನ್ನು ಕೊಲ್ಲುವೆನು. ಇನ್ನು ಐದುಜನ ಗಂಧರ್ವರು ಏನು ಮಾಡುವರು?

ನ ಚ ತ್ವಮಭಿಜಾನೀಷೇ ಸ್ತ್ರೀಣಾಂ ಗುಹ್ಯಮನುತ್ತಮಮ್ ।
ಪುತ್ರಂ ವಾ ಕಿಲ ಪೌತ್ರಂ ವಾ ಭ್ರಾತರಂ ವಾ ವರಾನನಮ್ ॥೨೧॥

ರಹಸೀಹ ನರಂ ದೃಷ್ಟ್ವಾ ನಾನಾಗಂಧವಿಭೂಷಿತಮ್ ॥೨೨॥

ಯೋನಿರುತ್ಸ್ರವ್ಯತೇ ಸ್ತ್ರೀಣಾಮಸತೀನಾಮಿತಿ ಶ್ರುತಮ್ ॥೨೩॥

ನೀನು ಸ್ತ್ರೀಯರ ಒಂದು ಶ್ರೇಷ್ಠವಾದ ರಹಸ್ಯವನ್ನು ತಿಳಿದಿಲ್ಲ. ನಾನಾಗಂಧ ವಿಭೂಷಿತನಾದ ಸುಂದರನಾದ ಪುತ್ರನನ್ನಾಗಲೀ, ಪೌತ್ರನನ್ನಾಗಲೀ, ಭ್ರಾತೃವನ್ನಾಗಲೀ ಏಕಾಂತದಲ್ಲಿನೋಡಿದರೆ ದುಷ್ಟಸ್ತ್ರೀಯರ ಯೋನಿಯು ದ್ರವಿಸುತ್ತದೆ ಎಂದು ನಾನು ಕೇಳಿದ್ದೇನೆ.

ಮಾಂ ನಿರೀಕ್ಷ್ಯಾನುಲಿಪ್ತಾಂಗಂ ಸರ್ವಾಭರಣಭೂಷಿತಮ್ ।
ವಶಮೇಷ್ಯತಿ ಸೈರಂಧ್ರೀ ಮನ್ಮಥೇನ ಪ್ರಪೀಡಿತಾ ॥೨೪॥

ಸಾ ತ್ವಂ ದೃಷ್ಟ್ವಾ ನಯಸ್ವೈನಾಂ ಜೀವಿತಂ ಮೇ ಯದೀಚ್ಛಸಿ ॥೨೫॥

ನಾನು ದೇಹಕ್ಕೆ ಲೇಪವನ್ನು ಮಾಡಿಕೊಂಡು ಸರ್ವಾಭರಣಭೂಷಿತನಾದರೆ ನನ್ನನ್ನು ನೋಡಿ ಕಾಮಪೀಡಿತಳಾದ ಸೈರಂಧ್ರಿಯು ನನ್ನ ವಶವಾಗುವಳು. ನೀನು ನಾನು ಬದುಕುವುದನ್ನು ಬಯಸುವುದಾದರೆ ಅವಳನ್ನು ನೋಡಿ ನನ್ನ ಬಳಿಗೆ ಕಳುಹಿಸು.

ವೈಶಂಪಾಯನಃ

ಏವಮುಕ್ತಾ ಸುದೇಷ್ಣಾ ತು ಶೋಕೇನಾಭಿಪ್ರಪೀಡಿತಾ ।
ಅಹೋ ದುಃಖಮಹೋ ಕೃಚ್ಛ್ರಮಹೋ ಪಾಪಮಿತಿ ಸ್ಮ ಹ ॥೨೬॥

ಪ್ರಾರುದದ್ ಭೃಶದುಃಖಾರ್ತಾ ವಿಷಾದಂ ತಸ್ಯ ವೀಕ್ಷ್ಯ ಸಾ ॥೨೭॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಸುದೇಷ್ಣೆಯು ಬಹಳ ಶೋಕದಿಂದ ಪೀಡಿತಳಾಗಿ- 'ಅಯ್ಯೋ ದುಃಖವೇ, ಅಯ್ಯೋ ಕಷ್ಟವೇ, ಅಯ್ಯೋ ಪಾಪವೇ' ಎಂದು ಹೇಳುತ್ತಾ ಅವನ ವಿಷಾದವನ್ನು ನೋಡಿ ಬಹಳ ದುಃಖದಿಂದ ಆರ್ತಳಾಗಿ ಅತ್ತಳು.

ಪಾತಾಳೇಷು ಪತತ್ಯೇಷ ವಿಲಪನ್ ಬಡವಾಮುಖೇ ।
ತ್ವತ್ಕೃತೇ ವಿನಶಿಷ್ಯಂತಿ ಭ್ರಾತರಃ ಸುಹೃದಶ್ಚ ಮೇ ॥೨೮॥

ಕಿಂ ನು ಶಕ್ಯಂ ಮಯಾ ಕರ್ತುಂ ಯತ್ ತ್ವಮೇವಮಭೀಪ್ಸಿತಃ ।
ನ ಚ ಶ್ರೇಯೋಽಭಿಜಾನೀಷೇ ಕಾಮಮೇವಾನುವರ್ತಸೇ ॥೨೯॥

ಇವನು ವಿಲಾಪವನ್ನು ಮಾಡುತ್ತಾ ಪಾತಾಳದಲ್ಲಿ ಬಡವಾಗ್ನಿಯ ಮುಖದಲ್ಲಿ ಬೀಳುತ್ತಾನೆ. ಅವನ ಸಲುವಾಗಿ (ನಿನ್ನ ಸಲುವಾಗಿ) ನನ್ನ ಸಹೋದರರು ಮತ್ತು ಬಾಂಧವರು ನಾಶವನ್ನು ಹೊಂದುತ್ತಾರೆ. ನೀನು ಇಂತಹ ಅಭಿಪ್ರಾಯವನ್ನು ಹೊಂದಿರುವಾಗ ನಾನು ಏನು ಮಾಡಲು ಸಾಧ್ಯ ? ನೀನು ಶ್ರೇಯಸ್ಸಿನ ಮಾರ್ಗವನ್ನು ಕಾಣುತ್ತಿಲ್ಲ, ಕಾಮವನ್ನೇ ಅನುಸರಿಸುತ್ತಿದ್ದೀಯೆ.

ಧ್ರುವಂ ಗತಾಯುಸ್ತ್ವಂ ಪಾಪ ಯದೇವಂ ಕಾಮಮೋಹಿತಃ ।
ಅಕರ್ತವ್ಯೇ ಹಿ ಮಾಂ ಪಾಪೇ ನಿಯುನಂಕ್ಷಿ ನರಾಧಮ ॥೩೦॥

ಪಾಪಿಷ್ಠನೇ, ನರಾಧಮನೇ, ಕಾಮಮೋಹಿತನಾಗಿ ನೀನು ನಿಶ್ಚಯವಾಗಿ ಆಯುಸ್ಸನ್ನು ಕಳೆದುಕೊಂಡಿದ್ದೀಯೆ. ಏಕೆಂದರೆ ಮಾಡಬಾರದ ಕೆಲಸವನ್ನು ಮಾಡುವಂತೆ ನನಗೆ ಆದೇಶವನ್ನು ಮಾಡುತ್ತಿದ್ದೀಯೆ.

ಅಪಿ ಚೈತತ್ ಪುರಾ ಪ್ರೋಕ್ತಂ ನಿಪುಣೈರ್ಮನುಜೋತ್ತಮೈಃ ।
ಏಕಸ್ತು ಕುರುತೇ ಪಾಪಂ ಸ್ವಜಾತಿಸ್ತೇನ ಹನ್ಯತೇ ॥೩೧॥

ನಿಪುಣನಾದ ಮನುಷ್ಯಶ್ರೇಷ್ಠರು ಹಿಂದೆಯೇ ಹೀಗೆ ಹೇಳಿದ್ದಾರೆ: ಒಬ್ಬ ವ್ಯಕ್ತಿಯು ಪಾಪವನ್ನು ಮಾಡುತ್ತಾನೆ. ಅದರಿಂದ ಅವನ ಜಾತಿಯವರೆಲ್ಲರೂ ವಧೆಗೆ ಈಡಾಗುತ್ತಾರೆ.

ಗತಸ್ತ್ವಂ ಧರ್ಮರಾಜಸ್ಯ ವಿಷಯಂ ನಾತ್ರ ಸಂಶಯಃ ।
ಅದೂಷಿತಮಿಮಂ ಸರ್ವಂ ಸ್ವಜನಂ ಘಾತಯಿಷ್ಯಸಿ ॥೩೨॥

ನೀನು ಯಮಧರ್ಮರಾಜನ ದೇಶವನ್ನು ತಲುಪಿದ್ದೀಯೆ ಎಂಬ ವಿಷಯದಲ್ಲಿ ಸಂಶಯವಿಲ್ಲ. ದುಷ್ಟರಲ್ಲದ ಈ ಎಲ್ಲಾ ಸ್ವಜನರನ್ನೂ ನೀನು ಕೊಲ್ಲಿಸುತ್ತಿದ್ದೀಯೆ.

ಏತತ್ ತು ಮೇ ದುಃಖತರಂ ಯೇನಾಹಂ ಭ್ರಾತೃಸೌಹೃದಾತ್ ।
ವಿದಿತಾರ್ಥಾ ಭವಿಷ್ಯಾಮಿ ತುಷ್ಟೋ ಭವ ಕುಲಕ್ಷಯಾತ್ ॥೩೩॥

ಇದು ನನಗೆ ಅತ್ಯಂತ ದುಃಖಕರವಾದದು. ಏಕೆಂದರೆ ನಿನ್ನ ಮೇಲಿನ ಸ್ನೇಹದಿಂದ ನಾನು ಹೇಳಿದ ಮಾತುಗಳು ನಿಜವಾಗುವುದನ್ನು ನಾನು ನೋಡುವೆನು. ಕುಲಕ್ಷಯವನ್ನು ಮಾಡಿ ಸಂತೋಷ ಪಡು.

ಗಚ್ಛ ಶೀಘ್ರಮಿತಸ್ತ್ವಂ ಹಿ ಸ್ವಮೇವ ಭವನಂ ಶುಭಮ್ ।
ಕಿಂಚಿತ್ ಕಾರ್ಯಂ ಸಮುದ್ದಿಶ್ಯ ಸುರಾಮನ್ನಂ ಚ ಕಾರಯ ॥೩೪॥

ಕೃತೇ ಚಾನ್ನೇ ಸುರಾಯಾಂ ಚ ಪ್ರೇಷಯಿಷ್ಯಸಿ ಮೇ ಪುನಃ ।
ತಾಮಹಂ ಪ್ರೇಷಯಿಷ್ಯಾಮಿ ಮದ್ಧ್ಯನ್ನಾರ್ಥಂ ತವಾಂತಿಕಮ್ ॥೩೫॥

ನೀನು ಬೇಗ ನಿನ್ನ ಮನೆಗೆ ಹಿಂದಿರುಗು. ಯಾವುದೋ ಒಂದು ಉದ್ದೇಶದಿಂದ ಮದ್ಯವನ್ನು ಮತ್ತು ಅನ್ನವನ್ನು ಮಾಡಿಸು. ಅನ್ನವು ಮತ್ತು ಮದ್ಯವು ಸಿದ್ಧವಾಗುತ್ತಿರಲು ನನಗೆ ದೂತರನ್ನು ಕಳುಹಿಸು. ನಾನು ಅವಳನ್ನು ಅದನ್ನು ತರಲು ನಿನ್ನ ಬಳಿಗೆ ಕಳುಹಿಸುವೆನು.

ತತಃ ಸಂಪ್ರೇಷಿತಾಮೇನಾಂ ವಿಜನೇ ನಿರವಗ್ರಹಾಮ್ ।
ಸಾಂತ್ವಯೇಥಾ ಯಥಾನ್ಯಾಯಂ ಯದಿ ಸಾ ಚ ಸಹಿಷ್ಯತಿ ॥೩೬॥

ಸದ್ಯಃ ಕೃತಮಿದಂ ಸರ್ವಂ ಶೇಷಮತ್ರಾನುಚಿಂತಯ ॥೩೭॥

ನಾನು ಅವಳನ್ನು ಕಳುಹಿಸಿದ ಮೇಲೆ ಏಕಾಂತದಲ್ಲಿ ಬಲಾತ್ಕಾರವನ್ನು ಮಾಡದೇ ಅವಳು ಸಹಿಸುವುದಾದರೆ ನ್ಯಾಯದಿಂದ ಅವಳನ್ನು ಸಮಾಧಾನಪಡಿಸು. ನಾನು ಇವೆಲ್ಲವನ್ನೂ ಈಗಲೇ ಮಾಡುತ್ತೇನೆ. ಉಳಿದ ಕಾರ್ಯವನ್ನು ನೀನು ಚಿಂತಿಸು.

ಸುದೇಷ್ಣಯೈವಮುಕ್ತಸ್ತು ಕೀಚಕಃ ಕಾಲಚೋದಿತಃ ।
ತ್ವರಮಾಣಃ ಪ್ರಚಕ್ರಾಮ ಸ್ವಗೃಹಂ ರಾಜವೇಶ್ಮನಃ ॥೩೮॥

ಸುದೇಷ್ಣೆಯಿಂದ ಹೀಗೆ ಹೇಳಲ್ಪಟ್ಟ ಕೀಚಕನು ಕಾಲಚೋದಿತನಾಗಿ ರಾಜನ ಅರಮನೆಯಿಂದ ತನ್ನ ಮನೆಗೆ ಶೀಘ್ರವಾಗಿ ಹೊರಟನು.

ಆಗಮ್ಯ ಚ ಗೃಹಂ ರಮ್ಯಂ ಸುರಾಮನ್ನಂ ಚಕಾರ ಹ ।
ಅಜೈಡಕಂ ಚ ಸುಕೃತಂ ಬಹೂಂಶ್ಚೋಚ್ಚಾವಚಾನ್ ಮೃಗಾನ್ ॥೩೯॥

ಭಕ್ಷ್ಯಾಂಶ್ಚ ವಿವಿಧಾಕಾರಾನ್ ಬಹೂಂಶ್ಚೋಚ್ಚಾವಚಾಂಸ್ತದಾ ।
ಕಾರಯಾಮಾಸ ಕುಶಲೈರನ್ನಪಾನಂ ಸುಸಂಸ್ಕೃತಮ್ ॥೪೦॥

ತನ್ನ ಮನೆಗೆ ಹಿಂದಿರುಗಿ ಅವನು ಸುರೆಯನ್ನೂ ಮತ್ತು ಆಡು ಕುರಿಗಳ ಮಾಂಸದಿಂದ ಮತ್ತು ಬೇರೆಯ ಮೃಗಗಳ ಮಾಂಸಗಳಿಂದ ವಿವಿಧವಾದ ಭಕ್ಷ್ಯಗಳನ್ನೂ ಅನೇಕವಿಧವಾಗಿ ಅನ್ನ-ಪಾನವನ್ನು ಮಾಡುವುದರಲ್ಲಿ ಕುಶಲರಾದವರಿಂದ ಮಾಡಿಸಿದನು.

ತ್ವರಾವಾನ್ ಕಾಲಪಾಶೇನ ಕಂಠೇ ಬದ್ಧಃ ಪಶುರ್ಯಥಾ ।
ನಾವಬುಧ್ಯತ ಮೂಢಾತ್ಮಾ ಮರಣಂ ಸಮುಪಸ್ಥಿತಮ್ ॥೪೧॥

ತ್ವರೆಯಿಂದ ಕೂಡಿದ ಆ ಮೂಢಾತ್ಮನು ಕಂಠದಲ್ಲಿ ಬದ್ಧವಾದ ಪಶುವಿನಂತೆ ಕಾಲಪಾಶದಿಂದ ಬದ್ಧನಾಗಿ ಸಮೀಪದಲ್ಲಿದ್ದ ಮರಣವನ್ನು ತಿಳಿಯಲಿಲ್ಲ.

ಸಂಪಾಕಾಯಾಂ ಸುರಾಯಾಂ ತು ಕೃತೇ ಚಾನ್ನೇ ಸುಸಂಸ್ಕೃತೇ ।
ಕೀಚಕಃ ಪುನರಾಗಮ್ಯ ಸುದೇಷ್ಣಾಂ ವಾಕ್ಯಮಬ್ರವೀತ್ ॥೪೨॥

ಅನ್ನ ಮತ್ತು ಮದ್ಯಗಳು ಚೆನ್ನಾಗಿ ಸಿದ್ಧವಾದ ಮೇಲೆ ಕೀಚಕನೇ ಪುನಃ ಬಂದು ಸುದೇಷ್ಣೆಯನ್ನು ಕುರಿತು ಹೇಳಿದನು.

ಮಧು ಮಾಂಸಂ ಬಹುವಿಧಂ ಭಕ್ಷ್ಯಾಶ್ಚ ವಿವಿಧಾಃ ಕೃತಾಃ ।
ಸುದೇಷ್ಣೇ ಬ್ರೂಹಿ ಸೈರಂಧ್ರೀಂ ಯಥಾ ಸಾ ಮೇ ಗೃಹಂ ವ್ರಜೇತ್ ॥

ಕೇನಚಿತ್ತ್ವದ್ಯ ಕಾರ್ಯೇಣ ತ್ವರ ಶೀಘ್ರಂ ಮಮ ಪ್ರಿಯಮ್ ॥೪೪॥

ಬಹುವಿಧವಾದ ಭಕ್ಷ್ಯಭೋಜ್ಯಗಳು, ಮಧುಮಾಂಸಗಳು ಸಿದ್ಧವಾಗಿವೆ. ಸುದೇಷ್ಣೆಯೇ, ಸೈರಂಧ್ರಿಯು ಯಾವುದಾದರೂ ಕಾರ್ಯವನ್ನು ಉದ್ದೇಶಿಸಿ ನನ್ನ ಮನೆಗೆ ಬರುವಂತೆ ಮಾಡು. ನನ್ನ ಪ್ರಿಯವನ್ನು ಉಂಟುಮಾಡುವುದಕ್ಕೆ ಶೀಘ್ರವಾಗಿ ತ್ವರೆ ಮಾಡು.

ಅಹಂ ಹಿ ಶರಣಂ ದೇವಂ ಪ್ರಪದ್ಯೇ ವೃಷಭಧ್ವಜಮ್ ।
ಸಮಾಗಮಂ ಮೇ ಸೈರಂಧ್ರ್ಯಾ ಮರಣಂ ವಾ ದಿಶೇರಿತಿ ॥೪೫॥

ನಾನು ಈ ದಿನ ದೇವನಾದ ವೃಷಧ್ವಜನನ್ನು ಶರಣುಹೊಂದಿ ನನಗೆ ಸೈರಂಧ್ರಿಯ ಸಮಾಗಮವನ್ನಾಗಲೀ, ಮರಣವನ್ನಾಗಲೀ ಕೊಡು ಎಂದು ಕೇಳುತ್ತೇನೆ.

ವೈಶಂಪಾಯನಃ

ಸಾ ತಮಾಹ ವಿನಿಃಶ್ವಸ್ಯ ಪ್ರತಿಗಚ್ಛ ಸ್ವಕಂ ಗೃಹಮ್ ।
ಏಷಾऽಹಮಪಿ ಸೈರಂಧ್ರೀಂ ಸುರಾರ್ಥೇ ತೂರ್ಣಮಾದಿಶೇ ॥೪೬॥

ವೈಶಂಪಾಯನ– ಅವಳು ನಿಟ್ಟುಸಿರನ್ನು ಬಿಟ್ಟು ಅವನನ್ನು ಕುರಿತು ನಿನ್ನ ಮನೆಗೆ ಹಿಂದಿರುಗು. ನಾನು ಸುರೆಯನ್ನು ತರಲು ಸೈರಂಧ್ರಿಗೆ ಬೇಗನೇ ಆದೇಶ ಮಾಡುತ್ತೇನೆ ಎಂದು ಹೇಳಿದಳು.

ಏವಮುಕ್ತಸ್ತು ಪಾಪಾತ್ಮಾ ಕೀಚಕಸ್ತ್ವರಿತಂ ಪುನಃ ।
ಸ್ವಗೃಹಂ ಪ್ರಾವಿಶತ್ ತೂರ್ಣಂ ಸೈರಂಧ್ರೀಗತಮಾನಸಃ ॥೪೭॥

ಹೀಗೆ ಸುದೇಷ್ಣೆಯಿಂದ ಹೇಳಲ್ಪಟ್ಟ ಪಾಪಾತ್ಮನಾದ ಕೀಚಕನು ಸೈರಂಧ್ರಿಯಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿ ಬೇಗ ತನ್ನ ಮನೆಗೆ ಹಿಂದಿರುಗಿದನು.

ಕೀಚಕಂ ತು ಗತಂ ಜ್ಞಾತ್ವಾ ತ್ವರಮಾಣಂ ಸ್ವಕಂ ಗೃಹಮ್ ।
ಸೈರಂಧ್ರೀಂ ತತ ಆಹೂಯ ಸುದೇಷ್ಣಾ ವಾಕ್ಯಮಬ್ರವೀತ್ ॥೪೮॥

ಗಚ್ಛ ಸೈರಂಧ್ರಿ ಮತ್ಪ್ರೀತ್ಯೈ ಕೀಚಕಸ್ಯ ನಿವೇಶನಮ್ ।
ಸುರಾಮಾನಯ ಸುಶ್ರೋಣಿ ತೃಷಿತಾऽಹಂ ವಿಲಾಸಿನಿ ॥೪೯॥

ಕೀಚಕನು ತ್ವರೆಯಿಂದ ತನ್ನ ಮನೆಗೆ ಹೊರಟುದುದನ್ನು ನೋಡಿ ಸುದೇಷ್ಣೆಯು ಸೈರಂಧ್ರಿಯನ್ನು ಕರೆದು, ಸೈರಂಧ್ರಿಯೇ, ನನ್ನ ಪ್ರೀತಿಗಾಗಿ ಕೀಚಕನ ಮನೆಗೆ ಹೋಗು.

ಸುಶ್ರೋಣಿಯೇ, ವಿಲಾಸಿನಿಯೇ, ನನಗೆ ಬಾಯಾರಿಕೆಯಾಗಿದೆ, ಸುರೆಯನ್ನು ತೆಗೆದುಕೊಂಡು ಬಾ ಎಂದು ಹೇಳಿದಳು.

ವೈಶಂಪಾಯನಃ

ಸುದೇಷ್ಣಯೈವಮುಕ್ತಾ ಸಾ ನಿಃಶ್ವಸಂತೀ ನೃಪಾತ್ಮಜಾ ।
ಅಬ್ರವೀತ್ ಶೋಕಸಂತಪ್ತಾ ನಾಹಂ ತತ್ರ ವ್ರಜಾಮಿ ವೈ ॥೫೦॥

ವೈಶಂಪಾಯನ– ಸುದೇಷ್ಣೆಯಿಂದ ಹೀಗೆ ಹೇಳಲ್ಪಟ್ಟ ರಾಜಕುಮಾರಿಯಾದ ದ್ರೌಪದಿಯು ನಿಟ್ಟುಸಿರನ್ನು ಬಿಡುತ್ತಾ ಶೋಕಸಂತಪ್ತಳಾಗಿ ನಾನು ಅಲ್ಲಿಗೆ ಹೋಗುವುದಿಲ್ಲ ಎಂದು ಹೇಳಿದಳು.

ಸೂತಪುತ್ರೋ ಹಿ ಮಾಂ ಭದ್ರೇ ಕಾಮಾತ್ಮಾ ಚಾಭಿಮನ್ಯತೇ ।
ನ ಗಚ್ಛೇಯಮಹಂ ತಸ್ಯ ರಾಜಪುತ್ರಿ ನಿವೇಶನಮ್ ॥೫೧॥

ತ್ವಮೇವ ಭದ್ರೇ ಜಾನಾಸಿ ಯಥಾ ಸ ನಿರಪತ್ರಪಃ ॥೫೨॥

ಮಂಗಳಸ್ವರೂಪಳೇ, ಕಾಮಾತ್ಮನಾದ ಸೂತಪುತ್ರನು ನನ್ನನ್ನು ಬಯಸುತ್ತಾನೆ. ರಾಜಪುತ್ರಿಯೇ, ಆದ್ದರಿಂದ ಅವನ ಮನೆಗೆ ನಾನು ಹೋಗುವುದಿಲ್ಲ. ಭದ್ರಳೇ, ಅವನು ಹೀಗೆ ನಾಚಿಕೆಗೆಟ್ಟಿದ್ದಾನೆಂದು ನೀನೇ ತಿಳಿದಿದ್ದೀಯೆ.

ಸಮಯಶ್ಚ ಕೃತೋ ಭದ್ರೇ ತ್ವಯಾ ಪ್ರಥಮಸಂಗಮೇ ।
ತಥಾ ನಿವಸಮಾನಾಯಾಂ ಯಥಾಽಹಂ ನಾನ್ಯಚಾರಿಣೀ ॥೫೩॥

ಎಲೌ ಮಂಗಳಸ್ವರೂಪಳೇ, ನಮ್ಮ ಪ್ರಥಮ ಸಮಾಗಮದಲ್ಲಿಯೇ ನಾನು ನನ್ನ ಶರತ್ತುಗಳನ್ನು ಹೇಳಿದ್ದೇನೆ. ಹಾಗೆ ನಾನು ವಾಸಮಾಡುತ್ತಿರುವಾಗ ಇನ್ನೊಬ್ಬನ ಬಳಿಗೆ ಹೋಗುವುದಿಲ್ಲ.

ಕೀಚಕಸ್ತು ಸುಕೇಶಾಂತೇ ಮೂಢೋ ಮದನದರ್ಪಿತಃ ।
ಸ ಮಾಮಿಹ ಗತಾಂ ದೃಷ್ಟ್ವಾ ವ್ಯವಸ್ಯತಿ ನಿರಾಕೃತಃ ॥೫೪॥

ಕಥಂ ನು ವೈ ತತ್ರ ಗತಾಂ ಮರ್ಷಯೇನ್ಮಾಮಬಾಂಧವಾಮ್ ॥೫೫॥

ಒಳ್ಳೆಯ ಬೈತಲೆ ಉಳ್ಳವಳೇ, ನನ್ನಿಂದ ನಿರಾಕೃತನಾಗಿರುವ ಕೀಚಕನು ನಾನು ಅಲ್ಲಿಗೆ ಹೋದರೆ ಮದನದರ್ಪಿತನಾಗಿ, ಮೂಢನಾಗಿ ಅಕಾರ್ಯವನ್ನು ಮಾಡಲು ನಿಶ್ಚಯಿಸುತ್ತಾನೆ. ನಾನು ಬಾಂಧವರಿಲ್ಲದೆ ಒಬ್ಬಳೇ ಅಲ್ಲಿಗೆ ಹೋದರೆ ಅವನು ಹೇಗೆ ಸಹಿಸುತ್ತಾನೆ?

ಬಹ್ವ್ಯಃ ಸಂತಿ ತವ ಪ್ರೇಷ್ಯಾ ರಾಜಪುತ್ರಿ ವಶಾನುಗಾಃ ।
ಅನ್ಯಾಂ ಪ್ರೇಷಯ ಕೈಕೇಯಿ ಸಂರಕ್ಷ್ಯೋऽಹಮಿಹ ತ್ವಯಾ ॥೫೬॥

ರಾಜಪುತ್ರಿಯೇ, ನಿನ್ನ ವಶವರ್ತಿಯರಾದ ಅನೇಕ ಸೇವಕಿಯರು ಇದ್ದಾರೆ. ಕೈಕೇಯಿಯೇ, ಬೇರೆ ಯಾರನ್ನಾದರೂ ಕಳುಹಿಸು. ನೀನು ನನ್ನನ್ನು ಇಲ್ಲಿ ಸಂರಕ್ಷಣೆ ಮಾಡಬೇಕಷ್ಟೆ?

ಕೀಚಕಸ್ಯಾಲಯಂ ದೇವಿ ನ ಯಾಮಿ ಭಯಕಂಪಿತಾ ।
ಯದ್ಯನ್ಯಚ್ಚ ತೇ ಕರ್ಮ ಕರೋಮ್ಯತಿಸುದುಷ್ಕರಮ್ ॥೫೭॥

ದೇವಿಯೇ, ಭಯಕಂಪಿತಳಾದ ನಾನು ಕೀಚಕನ ಮನೆಗೆ ಹೋಗುವುದಿಲ್ಲ. ನಿನ್ನ ಬೇರೆ ಏನಾದರೂ ಕೆಲಸವಿದ್ದರೆ ಹೇಳು. ಕಷ್ಟವಾದರೂ ಅದನ್ನು ಮಾಡುತ್ತೇನೆ.

ವೈಶಂಪಾಯನಃ

ಏವಮುಕ್ತಾ ತು ಪಾಂಚಾಲ್ಯಾ ದೈವಯೋಗೇನ ಕೈಕಯೀ ।
ತಾಂ ವಿರಾಟಸ್ಯ ಮಹಿಷೀ ಕ್ರುದ್ಧಾ ಭೂಯೋऽನ್ವಶಾಸತ ॥೫೮॥

ವೈಶಂಪಾಯನ– ಹೀಗೆ ದ್ರೌಪದಿಯಿಂದ ಹೇಳಲ್ಪಟ್ಟ ವಿರಾಟನ ಮಹಿಷಿಯಾದ ಕೈಕೇಯಿಯು ದೈವಪ್ರೇರಣೆಯಂತೆ ಕೋಪಗೊಂಡು ಪುನಃ ಆಜ್ಞೆಯನ್ನು ಮಾಡಿದಳು.

ಕೀಚಕಂ ಚೈವ ಗಚ್ಛ ತ್ವಂ ಬಲಾತ್ಕಾರೇಣ ಚೋದಿತಾ ।
ನಾಸ್ತಿ ಮೇऽನ್ಯಾ ತ್ವಯಾ ತುಲ್ಯಾ ಸಾ ಮೇ ಶೀಘ್ರತರಂ ವ್ರಜ ॥೫೯॥

ಅವಶ್ಯಂ ತ್ವೇವ ಗಂತವ್ಯಂ ಕಿಮರ್ಥಂ ಮಾಂ ವಿವಕ್ಷಸಿ ।
ಶೀಘ್ರಂ ಗಚ್ಛ ತ್ವರಸ್ವೇತಿ ಮತ್ಪ್ರೀತಿವಶಮಾಚರ ॥೬೦॥

ನ ಹೀದೃಶೋ ಮಮ ಭ್ರಾತಾ ಕಿಂ ತ್ವಂ ಸಮಭಿಶಂಕಸೇ ॥೬೧॥

ನಾನು ಬಲಾತ್ಕಾರ ಮಾಡಿ ನಿನಗೆ ಹೇಳುತ್ತಿದ್ದೇನೆ, ಕೀಚಕನ ಮನೆಗೆ ಹೋಗು. ನಿನಗೆ ಸಮಾನಳಾದ ಯಾವ ಸೇವಕಿಯೂ ನನಗೆ ಇಲ್ಲ. ಆದ್ದರಿಂದ ಬೇಗ ಹೊರಡು. ನೀನು ಖಂಡಿತವಾಗಿ ಹೋಗಬೇಕು. ಏಕೆ ನನ್ನ ಜೊತೆಯಲ್ಲಿ ಮಾತನಾಡುತ್ತಿದ್ದೀಯೆ? ನೀನು ಬೇಗ ಹೋಗಿ ನನ್ನ ಪ್ರೀತಿಯನ್ನು ಸಂಪಾದಿಸಬೇಕು. ನೀನು ನನ್ನ ತಮ್ಮನನ್ನು ಶಂಕಿಸುವಂತೆ ಅವನು ಕೆಟ್ಟಸ್ವಭಾವದವನಲ್ಲ (ಎಂದು ಹೇಳಿದಳು).

ವೈಶಂಪಾಯನಃ

ಉಕ್ತ್ವಾ ಚೈನಾಂ ಬಲಾಚ್ಚೈವ ವಿನಿಯುಜ್ಯ ಪ್ರಭುತ್ವತಃ ।
ಭಾಜನಂ ಪ್ರದದೌ ಚಾಸ್ಯೈ ಸಪಿಧಾನಂ ಹಿರಣ್ಮಯಮ್ ॥೬೨॥

ಯಾ ಸುರಾ ಜಾತಮಂಥಾ ಚ ತಾಮಾನಯ ಸುರಾಮಿತಿ ॥೬೩॥

ಹೀಗೆ ಬಲಾತ್ಕಾರದಿಂದ ಹೇಳಿ, ಒಡತಿಯಾದ್ದರಿಂದ ಆಜ್ಞೆಯನ್ನು ಮಾಡಿ, ಸಿದ್ಧವಾದ ಸುರೆಯನ್ನು ತೆಗೆದುಕೊಂಡು ಬಾ ಎಂದು ಹೇಳಿ ಮುಚ್ಚಳವಿದ್ದ ಚಿನ್ನದ ಪಾತ್ರೆಯನ್ನು ಅವಳ ಕೈಗೆ ಕೊಟ್ಟಳು.

ಸಾ ಶಂಕಮಾನಾ ರುದತೀ ವೇಪಂತೀ ದ್ರುಪದಾತ್ಮಜಾ ।
ದೈವತೇಭ್ಯೋ ನಮಸ್ಕೃತ್ಯ ಶ್ವಶುರೇಭ್ಯಸ್ತಥಾऽಬ್ರವೀತ್ ॥೬೪॥

ಯಥಾಹಂ ಪಾಂಡುಪುತ್ರೇಭ್ಯಃ ಪಂಚಭ್ಯೋ ನಾನ್ಯಚಾರಿಣೀ ।
ತೇನ ಸತ್ಯೇನ ಮಾಂ ದೃಷ್ಟ್ವಾ ಕೀಚಕೋ ಮಾ ವಶಂ ನಯೇತ್ ॥

ದ್ರುಪದಾತ್ಮಜೆಯು ಶಂಕಿಸುತ್ತಾ ಅಳುತ್ತಾ, ನಡುಗುತ್ತಾ ದೇವತೆಗಳಿಗೂ ತನ್ನ ಅತ್ತೆ ಮಾವರಿಗೂ (ಮನಸ್ಸಿನಲ್ಲಿ) ನಮಸ್ಕಾರವನ್ನು ಮಾಡಿ, ಹೇಗೆ ನಾನು ಐದುಜನ ಪಾಂಡುಪುತ್ರರನ್ನು ಬಿಟ್ಟು ಮನಸ್ಸಿನಲ್ಲಿಯೂ ಬೇರೆಯವರನ್ನು ಆಲೋಚಿಸಿಲ್ಲವೋ ಆ ಸತ್ಯವನ್ನು ಗಮನಿಸಿ ದೇವತೆಗಳು ನಾನು ಕೀಚಕನಿಗೆ ವಶವಾಗದಂತೆ ಮಾಡಲಿ ಎಂದು ಪ್ರಾರ್ಥಿಸಿಕೊಂಡಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಅಷ್ಟಾದಶೋऽಧ್ಯಾಯಃ ॥

॥ ಕೀಚಕವಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

ಮಹಾಭಾರತತಾತ್ಪರ್ಯನಿರ್ಣಯಃ

ಬಲಾತ್ ತಯಾ ಪ್ರೇರಿತಾ ತದ್ ಗೃಹಾಯ
ಯದಾऽಗಮತ್ ತೇನ ಹಸ್ತೇ ಗೃಹೀತಾ ।
ವಿಧೂಯ ತಂ ಪ್ರಾದ್ರವತ್ ಸಾ ಸಭಾಯೈ
ಸ್ಮೃತ್ವಾऽऽದಿತ್ಯಸ್ಥಂ ವಾಸುದೇವಂ ಪರೇಶಮ್ ॥೨೨॥

ಸುದೇಷ್ಣೆ ಬಲಾತ್ಕಾರದಿಂದ ದ್ರೌಪದಿಯನ್ನು ಕೀಚಕನ ಮನೆಗೆ ಕಳಿಸಿದಳು. ದ್ರೌಪದಿ ಅಲ್ಲಿಗೆ ಹೋದಾಗ ಕೀಚಕ ಕೈಯಲ್ಲಿ ಹಿಡಿದ. ಅವಳು ಕೈಕೊಡವಿಕೊಂಡು ಪರಮೇಶ್ವರನಾದ ಸೂರ್ಯಾಂತರ್ಗತನಾದ ನಾರಾಯಣನನ್ನು ನೆನೆದು ಸಭೆಯ ಕಡೆಗೆ ಧಾವಿಸಿದಳು.

ಅನುದ್ಯತ್ಯೈನಾಂ ಪಾತಯಿತ್ವಾ ಪದಾ ಸ
ಸಂತಾಡಯಾಮಾಸ ತದಾ ರವಿಸ್ಥಿತಃ ।
ನಾರಾಯಣೋ ಹೇತಿನಾಮೈವ ರಕ್ಷೋ
ನ್ಯಯೋಜಯತ್ ತದದೃಶ್ಯಂ ಸಮಾಗಾತ್ ॥೨೩॥

ಕೀಚಕ ದ್ರೌಪದಿಯನ್ನು ಬೆನ್ನಟ್ಟಿಹೋಗಿ ಕೆಳಗೆ ಬೀಳಿಸಿ ಕಾಲಿಂದ ಒದ್ದ, ಆಗ ಸೂರ್ಯಾಂತರ್ಗತ ನಾರಾಯಣ ದ್ರೌಪದಿಯ ರಕ್ಷಣೆಗೆ ಹೇತಿ, ಎಂಬ ಹೆಸರಿನ ರಾಕ್ಷಸನನ್ನು ಕಳಿಸಿದ. ಆ ರಾಕ್ಷಸ ಅದೃಶ್ಯನಾಗಿ ಬಂದ.

ವಾಯುಸ್ತಮಾವಿಶ್ಯ ಚ ಕೀಚಕಂ ತಂ
ನ್ಯಪಾತಯತ್ತಾಂ ಸಮೀಕ್ಷ್ಯೈವ ಭೀಮಃ ।
ಚುಕೋಪ ವೃಕ್ಷಂ ಚ ಸಮೀಕ್ಷಮಾಣಂ
ತಂ ವಾರಯಾಮಾಸ ಯುಧಿಷ್ಠಿರೋऽಗ್ರಜಃ ॥೨೪॥

ರಾಕ್ಷಸನಲ್ಲಿ ವಾಯು ಆವೇಶಗೊಂಡು ಕೀಚಕನನ್ನು ಕೆಡವಿದ. ದ್ರೌಪದಿಯನ್ನು ಆ ಸ್ಥಿತಿಯಲ್ಲಿ ಕಂಡೊಡನೆ ಭೀಮ ಕುಪಿತನಾದ. ಒಂದು ಮರವನ್ನು ದಿಟ್ಟಿಸತೊಡಗಿದ. ಆ ಭೀಮನನ್ನು ಅಣ್ಣನಾದ ಯುಧಿಷ್ಠಿರ ತಡೆದ.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಕೀಚಕಗೃಹಕ್ಕೆ ದ್ರೌಪದಿಯ ಪ್ರಯಾಣ. ಸೂರ್ಯನಿಂದ ದ್ರೌಪದಿಯ ರಕ್ಷಣೆಗಾಗಿ ರಾಕ್ಷಸನ ಪ್ರೇಷಣ. ಕೀಚಕನಿಂದ ದ್ರೌಪದಿಗೆ ಪಾದಘಾತ. ವಿರಾಟ ಮತ್ತು ಸುದೇಷ್ಣೆಯರನ್ನು ಕುರಿತು ದ್ರೌಪದಿಯ ರೋಷವಚನಗಳು.

ವೈಶಂಪಾಯನಃ

ಅಕೀರ್ತಯತ ಸುಶ್ರೋಣೀ ಧರ್ಮಂ ಶಕ್ರಂ ದಿವಾಕರಮ್ ।
ಮಾರುತಂ ಚಾಶ್ವಿನೌ ದೇವೌ ಕುಬೇರಂ ವರುಣಂ ಯಮಮ್ ॥೧॥

ರುದ್ರಮಗ್ನಿಂ ಭಗಂ ವಿಷ್ಣುಂ ಸ್ಕಂದಂ ಪೂಷಣಮೇವ ಚ ।
ಸಾವಿತ್ರೀಸಹಿತಂ ಚಾಪಿ ಬ್ರಹ್ಮಾಣಂ ಪರ್ಯಕೀರ್ತಯತ್ ॥೨॥

ವೈಶಂಪಾಯನ– ಸುಂದರಿಯಾದ ದ್ರೌಪದಿಯು ಕೀಚಕನ ಮನೆಗೆ ಹೋಗುತ್ತಾ ಯಮುನನ್ನೂ, ಇಂದ್ರನನ್ನೂ, ಸೂರ್ಯನನ್ನೂ, ವಾಯುವನ್ನೂ, ಅಶ್ವಿನೀದೇವತೆಗಳನ್ನೂ, ಕುಬೇರನನ್ನೂ, ವರುಣನನ್ನೂ, ರುದ್ರನನ್ನೂ, ಅಗ್ನಿಯನ್ನೂ, ಭಗನನ್ನೂ, ವಿಷ್ಣುವನ್ನೂ, ಸ್ಕಂದ-ಪೂಷಣರನ್ನೂ ಮತ್ತು ಸಾವಿತ್ರೀ ಸಹಿತನಾದ ಬ್ರಹ್ಮನನ್ನೂ ಸ್ಮರಿಸಿ ಕೀರ್ತಿಸಿದಳು.

ಇತ್ಯೇವಂ ಮೃಗಶಾವಾಕ್ಷೀ ಸುಶ್ರೋಣೀ ಧರ್ಮಚಾರಿಣೀ ।
ಉಪಾತಿಷ್ಠತ ಸಾ ಸೂರ್ಯಂ ಮುಹೂರ್ತಮಬಲಾ ತದಾ ॥೩॥

ಹರಿಣಾಕ್ಷಿಯೂ, ಸುಂದರಿಯೂ ಧರ್ಮಚಾರಿಣಿಯೂ ಆದ ಆ ಅಬಲೆಯು ಒಂದು ಮುಹೂರ್ತದ ಕಾಲ ಸೂರ್ಯನನ್ನು ಪ್ರಾರ್ಥಿಸಿದಳು.

ಸ ತಸ್ಯ ತನುಮಧ್ಯಾಯಾಃ ಸರ್ವಂ ಸೂರ್ಯೋಽವಬುದ್ಧವಾನ್ ।
ಅಂತರ್ಹಿತಂ ತತಸ್ತಸ್ಯಾ ರಕ್ಷೋ ರಕ್ಷಾರ್ಥಮಾದಿಶತ್ ॥೪॥

ತಚ್ಚೈನಾಂ ನಾಜಹಾತ್ ತತ್ರ ಸರ್ವಾವಸ್ಥಾಸ್ವನಿಂದಿತಾಮ್ ॥೫॥

ಆ ತನುಮಧ್ಯಳಾದ ಸುಂದರಿಯ ಎಲ್ಲ ಅಭಿಪ್ರಾಯವನ್ನು ಸೂರ್ಯನು ತಿಳಿದು ಅದೃಶ್ಯನಾದ ಹೇತಿ ಎಂಬ ಒಬ್ಬ ರಾಕ್ಷಸನನ್ನು ಅವಳ ರಕ್ಷಣೆಗಾಗಿ ಕಳುಹಿಸಿದನು. ಆ

ರಾಕ್ಷಸನಾದರೂ ಅನಿಂದಿತಳಾದ ಅವಳನ್ನು ಯಾವ ಕಾಲದಲ್ಲಿಯೂ ಬಿಡಲಿಲ್ಲ (ಬಿಡದೇ ರಕ್ಷಿಸಿದನು).

ಸಾ ಪ್ರತಸ್ಥೇ ಸುಕೇಶಾಂತಾ ತ್ವರಮಾಣಾ ಪುನಃ ಪುನಃ ।
ವಿಳಂಬಮಾನಾ ವಿವಶಾ ಕೀಚಕಸ್ಯ ನಿವೇಶನಮ್ ॥೬॥

ಒಳ್ಳೆಯ ಬೈತಲೆಯುಳ್ಳ ಅವಳು ಸುದೇಷ್ಣೆಯ ಆದೇಶಕ್ಕೆ ವಶಳಾಗಿ ಮತ್ತೆ ಮತ್ತೆ ಬೇಗ ನಡೆಯುತ್ತಾ ಮಧ್ಯೆ ಮಧ್ಯೆ ನಿಲ್ಲುತ್ತಾ ಕೀಚಕನ ಮನೆಯನ್ನು ಪ್ರವೇಶಿಸಿದಳು.

ತಾಂ ಮೃಗೀಮಿವ ವಿತ್ರಸ್ತಾಂ ದೃಷ್ಟ್ವಾ ಹೃಷ್ಟಃ ಸಮಾಗತಾಮ್ ।
ಉತ್ಪಪಾತಾಸನಾತ್ ತೂರ್ಣಂ ನಾವಂ ಲಬ್ಧ್ವೇವ ಪಾರಗಃ ॥೭॥

ಶ್ಲಕ್ಷ್ಣಂ ಚೋವಾಚ ವಾಕ್ಯಂ ಸ ಕೀಚಕಃ ಕಾಮಮೂರ್ಚ್ಛಿತಃ ॥೮॥

ಹೆದರಿದ ಹೆಣ್ಣು ಜಿಂಕೆಯಂತೆ ತನ್ನ ಮನೆಗೆ ಬಂದ ಅವಳನ್ನು ನೋಡಿ ಸಂತೋಷಗೊಂಡ ಕೀಚಕನು ನದಿಯನ್ನು ದಾಟುವವನು ದೋಣಿಯನ್ನು ಪಡೆದಂತೆ ಬೇಗ ತನ್ನ ಆಸನದಿಂದ ಹಾರಿ ಮೇಲೆದ್ದನು. ಕಾಮಮೂರ್ಛಿತನಾದ ಕೀಚಕನು ಅವಳನ್ನು ಕುರಿತು ಮಧುರವಾಗಿ ಮಾತನಾಡಿದನು.

ಸ್ವಾಗತಂ ತೇ ಸುಕೇಶಾಂತೇ ಸುವ್ಯುಷ್ಟಾ ರಜನೀ ಮಮ ।
ಸಾಧು ಮೇ ತ್ವಮನುಪ್ರಾಪ್ತಾ ಚಿರಸ್ಯ ಭವನಂ ತು ಮೇ ॥೯॥

ಒಳ್ಳೆಯ ಬೈತಲೆಯುಳ್ಳವಳೇ, ನಿನಗೆ ಸ್ವಾಗತ. ಈ ದಿನ ರಾತ್ರಿಯು ಕಳೆದು ನನಗೆ ಸುಪ್ರಭಾತವಾಗಿದೆ. ಬಹಳ ಕಾಲದ ಮೇಲೆ ನೀನು ನನ್ನ ಮನೆಗೆ ಬಂದಿದ್ದೀಯೆ. ಬಹಳ ಒಳ್ಳೆಯದಾಯಿತು.

ಕುರುಷ್ವ ಚ ಮಯಿ ಪ್ರೀತಿಂ ವಶಂ ಚೋಪಾನಯಸ್ವ ಮಾಮ್ ।
ಪ್ರತಿಗೃಹ್ಣೀಷ್ವ ಮೇ ಭೋಗಾನ್ ತ್ವದರ್ಥಮುಪಕಲ್ಪಿತಾನ್ ॥೧೦॥

ನನ್ನಲ್ಲಿ ಪ್ರೀತಿಯನ್ನು ಮಾಡು. ನನ್ನನ್ನು ನಿನ್ನ ವಶನನ್ನಾಗಿ ಮಾಡಿಕೋ. ನಿನಗಾಗಿ ಸಿದ್ಧಪಡಿಸಿರುವ ಭೋಗಗಳನ್ನು ಸ್ವೀಕರಿಸು.

ಸರ್ವರುಗ್ಮಮಯೀಂ ಮಾಲಾಂ ಕುಂಡಲೇ ಚ ಹಿರಣ್ಮಯೇ ॥೧೧॥

ಅನಘ್ರ್ಯಾನಿ ಚ ದಿವ್ಯಾನಿ ಕೌಶಿಕಾನ್ಯಜಿನಾನಿ ಚ ।
ಅಸ್ತಿ ಮೇ ಶಯನಂ ದಿವ್ಯಂ ತ್ವದರ್ಥಮುಪಕಲ್ಪಿತಮ್ ॥೧೨॥

ಪೂರ್ಣವಾಗಿ ಚಿನ್ನದಿಂದ ಮಾಡಿದ ಮಾಲೆಗಳು, ಸುವರ್ಣಮಯವಾದ ಕುಂಡಲಗಳು, ಬೆಲೆಬಾಳುವ ದಿವ್ಯವಾದ ರೇಷ್ಮೆ ವಸ್ತ್ರಗಳು ಮತ್ತು ಅಜಿನಗಳನ್ನು ಸ್ವೀಕರಿಸು. ನಿನಗಾಗಿ ನಾನು ದಿವ್ಯವಾದ ಶಯನವನ್ನು ಸಿದ್ಧಪಡಿಸಿದ್ದೇನೆ.

ರೋಹ ತತ್ರ ಮಯಾ ಸಾರ್ಧಂ ಪಿಬ ಶುದ್ಧಾಂ ಚ ವಾರುಣೀಮ್ ।
ವಾಸಾಂಸಿ ಚಂದನಂ ಮಾಲ್ಯಂ ಧೂಪಶುದ್ಧಾಂ ಚ ವಾರುಣೀಮ್ ॥

ನನ್ನ ಜೊತೆಯಲ್ಲಿ ಆ ಶಯನವನ್ನು ಏರು. ಶುದ್ಧವಾದ ಸುರೆಯನ್ನು ಪಾನ ಮಾಡು. ವಸ್ತ್ರಗಳು, ಗಂಧಾದಿ ಲೇಪನಗಳು, ಮಾಲೆಗಳು, ಸುಗಂಧಯುಕ್ತವಾದ ಮದ್ಯ ಎಲ್ಲವನ್ನೂ ಸ್ವೀಕರಿಸು.

ಪ್ರತಿಗೃಹ್ಣೀಷ್ವ ಸುಶ್ರೋಣಿ ವಿಹರ ತ್ವಂ ಯಥೇಚ್ಛಸಿ ॥೧೪॥

ಪ್ರೀತ್ಯಾ ಮೇ ಕುರು ಪದ್ಮಾಕ್ಷಿ ಪ್ರಸಾದಂ ಪ್ರಿಯದರ್ಶನೇ ॥೧೫॥

ಸುಂದರಿಯೇ, ನಿನಗೆ ಇಷ್ಟಬಂದಂತೆ ವಿಹರಿಸು. ಪ್ರಿಯದರ್ಶನೆಯೇ, ಪದ್ಮಾಕ್ಷಿಯೇ, ಪ್ರೀತಿಯಿಂದ ನನಗೆ ಅನುಗ್ರಹವನ್ನು ಮಾಡು.

ಸ್ವಾಸ್ತೀರ್ಣಮಸ್ತಿ ಶಯನಂ ಸಿತಸೂಕ್ಷ್ಮೋತ್ತರಚ್ಛದಮ್ ।
ಅತ್ಯಾರುಹ್ಯ ಮಯಾ ಸಾರ್ಧಂ ಪಿಬೇಮಾಂ ವರವಾರುಣೀಮ್ ॥೧೬॥

ಈ ಹಾಸಿಗೆಯು ಚೆನ್ನಾಗಿ ಹಾಸಲ್ಪಟ್ಟು ತೆಳುವಾದ ಬಿಳಿಯ ವಸ್ತ್ರದಿಂದ ಮುಚ್ಚಲ್ಪಟ್ಟಿದೆ. ನನ್ನ ಜೊತೆಯಲ್ಲಿ ಈ ಶಯನವನ್ನು ಏರಿ ಈ ಶ್ರೇಷ್ಠವಾದ ಮದ್ಯವನ್ನು ಪಾನ ಮಾಡು.

ಭಜಸ್ವ ಮಾಂ ವಿಶಾಲಾಕ್ಷಿ ಭರ್ತಾ ತೇ ಸದೃಶೋಽಸ್ಮ್ಯಹಮ್ ।
ಉಪಸರ್ಪ ವರಾರೋಹೇ ಮೇರುಮರ್ಕಪ್ರಭಾ ಯಥಾ ॥೧೭॥

ವಿಶಾಲಾಕ್ಷಿಯೇ, ನನ್ನನ್ನು ಸ್ವೀಕರಿಸು. ನಾನು ನಿನಗೆ ಸದೃಶನಾದ ಪತಿ. ವರಾರೋಹೆಯೇ, ಸೂರ್ಯನ ಕಾಂತಿಯು ಮೇರುಪರ್ವತವನ್ನು ಸೇರಿದಂತೆ ನನ್ನ ಬಳಿಗೆ ಬಾ.

ವೈಶಂಪಾಯನಃ

ಸಮ್ಮೂಢಃ ಕೀಚಕಸ್ತತ್ರ ಪ್ರಾಪ್ತಾಂ ರಾಜೀವಲೋಚನಾಮ್ ।
ಅಬ್ರವೀದ್ ದ್ರೌಪದೀಂ ದೃಷ್ಟ್ವಾ ದುರಾತ್ಮಾ ಹ್ಯಾತ್ಮಸಮ್ಮತೇಃ ॥೧೮॥

ವೈಶಂಪಾಯನ– ಸಮ್ಮೂಢನಾದ ದುರಾತ್ಮನಾದ ಕೀಚಕನು ಅಲ್ಲಿಗೆ ಬಂದ ರಾಜೀವಲೋಚನೆಯಾದ ದ್ರೌಪದಿಯನ್ನು ನೋಡಿ ತನ್ನನ್ನು ಅಂಗೀಕರಿಸುವಂತೆ ಕೇಳಿಕೊಂಡನು.

ಕೀಚಕೇನೈವಮುಕ್ತಾ ತು ಪಾಂಚಾಲೀ ವರಭಾಷಿಣೀ ।
ಅಬ್ರವೀತ್ ತಮನಾಚಾರಂ ನೇದೃಶಂ ವಕ್ತುಮರ್ಹಸಿ ॥೧೯॥

ಕೀಚಕನಿಂದ ಹೀಗೆ ಹೇಳಲ್ಪಟ್ಟ ಶ್ರೇಷ್ಠವಾಗಿ ಮಾತನಾಡುವ ಪಾಂಚಾಲಿಯು ಆ ಅನಾಚಾರಿಯನ್ನು ಕುರಿತು ನೀನು ಹೀಗೆ ಮಾತನಾಡಬಾರದು ಎಂದು ಹೇಳಿದಳು.

ನಾಹಂ ಶಕ್ಯಾ ತ್ವಯಾ ಸ್ಪಷ್ಟುಂ ಶ್ವಪಾಕೇನೇವ ಬ್ರಾಹ್ಮಣೀ ।
ಮಾ ಗಮಿಷ್ಯಸಿ ದುರ್ಬುದ್ಧೇ ಗತಿಂ ದುರ್ಗಾಂತರಾಂತರಾಮ್ ॥೨೦॥

ಎಲೈ ದುರ್ಬುದ್ಧಿಯೇ, ಚಂಡಾಲನು (ಶ್ವಪಚನು) ಬ್ರಾಹ್ಮಣ ಸ್ತ್ರೀಯನ್ನು ಮುಟ್ಟಲು ಸಾಧ್ಯವಿಲ್ಲದಂತೆ ನೀನು ನನ್ನನ್ನು ಮುಟ್ಟಲು ಸಾಧ್ಯವಿಲ್ಲ. ನೀನು ದುಃಖಮಯವಾದ ನರಕದ ಒಳಗಿರುವ ಅಂಧತಮಸ್ಸಿನ ಗತಿಯನ್ನು ಹೊಂದುವವನಾಗಬೇಡ.

ಯತ್ರ ಗಚ್ಛಂತಿ ಬಹವಃ ಪರದಾರಾಭಿಮರ್ಶಕಾಃ ।
ನರಾಃ ಸಂಭಿನ್ನಮರ್ಯಾದಾಃ ಕೀಟಪುಂಜಗುಹಾಶಯಾಃ ॥೨೧॥

ಧರ್ಮದ ಎಲ್ಲೆಯನ್ನು ಮೀರಿ ಪರಪತ್ನಿಯನ್ನು ಸ್ಪರ್ಶಮಾಡುವ ಎಲ್ಲ ಜನರೂ ಕಾಡಿನ ಗುಹೆಯಲ್ಲಿ ಸೇರಿದ ಕೀಟಸಮುದಾಯದಂತೆ ಹೋಗುವ ಸ್ಥಳಕ್ಕೆ ನೀನು ಹೋಗಬೇಡ.

ಅಪ್ಯೇಷೀನ್ಮಾಂ ಸುರಾಹಾರೀಂ ಸುದೇಷ್ಣಾ ತ್ವನ್ನಿವೇಶನಮ್ ।
ತಸ್ಯೈ ತ್ವಂ ದೇಹಿ ಮದಿರಾಂ ಭಗಿನೀ ತೃಷಿತಾ ತವ ॥೨೨॥

ಸುದೇಷ್ಣೆಯು ಸುರೆಯನ್ನು ತರುವುದಕ್ಕೆ ನಿನ್ನ ಮನೆಗೆ ನನ್ನನ್ನು ಕಳುಹಿಸಿದ್ದಾಳೆ. ಅವಳಿಗಾಗಿ ಸುರೆಯನ್ನು ಕೊಡು. ನಿನ್ನ ಅಕ್ಕನು ಬಾಯಾರಿದ್ದಾಳೆ.

ಪಿಪಾಸಿತಾ ಚ ಕೈಕೇಯೀ ತೂರ್ಣಂ ಮಾಮಾದಿಶತ್ ತತಃ ।
ದೀಯತಾಂ ಮೇ ಸುರಾ ಶೀಘ್ರಂ ಸೂತಪುತ್ರ ವ್ರಜಾಮ್ಯಹಮ್ ॥೨೩॥

ಕೇಕೇಯ ದೇಶದವಳಾದ ಅವಳು ಬಾಯಾರಿಕೆಯಿಂದ ಕೂಡಿದವಳಾಗಿ ಬೇಗ ನಿನ್ನ ಮನೆಗೆ ಹೋಗುವಂತೆ ನನಗೆ ಆಜ್ಞೆ ಮಾಡಿದಳು. ಸೂತಪುತ್ರನೇ, ನನಗೆ ಬೇಗ ಸುರೆಯನ್ನು ಕೊಡು. ನಾನು ಇಲ್ಲಿಂದ ಹೊರಡುತ್ತೇನೆ.

ಕೀಚಕಃ

ಅನ್ಯಾ ಭದ್ರೇ ಹರಿಷ್ಯಂತಿ ರಾಜಪುತ್ರ್ಯಾಃ ಸುರಾಮಿಮಾಮ್ ।
ಕಿಂ ತ್ವಂ ಯಾಸ್ಯಸಿ ಸುಶ್ರೋಣಿ ಮದರ್ಥಂ ತ್ವಮಿಹಾಗತಾ ॥೨೪॥

ಸುಂದರಿಯೇ, ರಾಜಕುಮಾರಿಗೆ ಈ ಮದ್ಯವನ್ನು ಬೇರೆ ಯಾವಳಾದರೂ ತೆಗೆದುಕೊಂಡು ಹೋಗಿ ಕೊಡುವಳು. ಸುಂದರಿಯೇ, ನೀನು ಏಕೆ ಹೋಗುವಿ? ನೀನು ನನ್ನ ಸಲುವಾಗಿ ಇಲ್ಲಿಗೆ ಬಂದಿದ್ದೀಯೆ.

ವೈಶಂಪಾಯನಃ

ಇತ್ಯುಕ್ತ್ವಾ ದಕ್ಷಿಣೇ ಪಾಣೌ ಸೂತಪುತ್ರಃ ಪರಾಮೃಶತ್ ।
ಸಾ ಗೃಹೀತಾ ವಿಧೂನ್ವಂತೀ ಭೂಮೌ ನಿಕ್ಷಿಪ್ಯ ಭಾಜನಮ್ ॥೨೫॥

ಸಭಾಂ ಶರಣಮಾಧಾವತ್ ಯತ್ರ ರಾಜಾ ಯುಧಿಷ್ಠಿರಃ ॥೨೬॥

ವೈಶಂಪಾಯನ– ಹೀಗೆ ಹೇಳಿ ಸೂತಪುತ್ರನಾದ ಕೀಚಕನು ಅವಳ ಬಲಗೈಯನ್ನು ಹಿಡಿದನು. ಅವಳು ಅವನ ಕೈಯನ್ನು ಝಾಡಿಸಿ ನೆಲದ ಮೇಲೆ ಪಾತ್ರೆಯನ್ನಿಟ್ಟು ಯುಧಿಷ್ಠಿರನಿದ್ದ ಸಭೆಯ ಬಳಿಗೆ ತನ್ನ ರಕ್ಷಣೆಗಾಗಿ ಓಡಿಬಂದಳು.

ವಿಶಾಲಾಕ್ಷಿಯೇ, ನನ್ನನ್ನು ಸ್ವೀಕರಿಸು. ನಾನು ನಿನಗೆ ಸದೃಶನಾದ ಪತಿ. ವರಾರೋಹೆಯೇ, ಸೂರ್ಯನ ಕಾಂತಿಯು ಮೇರುಪರ್ವತವನ್ನು ಸೇರಿದಂತೆ ನನ್ನ ಬಳಿಗೆ ಬಾ.

ವೈಶಂಪಾಯನಃ

ಸಮ್ಮೂಢಃ ಕೀಚಕಸ್ತತ್ರ ಪ್ರಾಪ್ತಾಂ ರಾಜೀವಲೋಚನಾಮ್ ।
ಅಬ್ರವೀದ್ ದ್ರೌಪದೀಂ ದೃಷ್ಟ್ವಾ ದುರಾತ್ಮಾ ಹ್ಯಾತ್ಮಸಮ್ಮತೇಃ ॥೧೮॥

ವೈಶಂಪಾಯನ– ಸಮ್ಮೂಢನಾದ ದುರಾತ್ಮನಾದ ಕೀಚಕನು ಅಲ್ಲಿಗೆ ಬಂದ ರಾಜೀವಲೋಚನೆಯಾದ ದ್ರೌಪದಿಯನ್ನು ನೋಡಿ ತನ್ನನ್ನು ಅಂಗೀಕರಿಸುವಂತೆ ಕೇಳಿಕೊಂಡನು.

ಕೀಚಕೇನೈವಮುಕ್ತಾ ತು ಪಾಂಚಾಲೀ ವರಭಾಷಿಣೀ ।
ಅಬ್ರವೀತ್ ತಮನಾಚಾರಂ ನೇದೃಶಂ ವಕ್ತುಮರ್ಹಸಿ ॥೧೯॥

ಕೀಚಕನಿಂದ ಹೀಗೆ ಹೇಳಲ್ಪಟ್ಟ ಶ್ರೇಷ್ಠವಾಗಿ ಮಾತನಾಡುವ ಪಾಂಚಾಲಿಯು ಆ ಅನಾಚಾರಿಯನ್ನು ಕುರಿತು ನೀನು ಹೀಗೆ ಮಾತನಾಡಬಾರದು ಎಂದು ಹೇಳಿದಳು.

ನಾಹಂ ಶಕ್ಯಾ ತ್ವಯಾ ಸ್ಪಷ್ಟುಂ ಶ್ವಪಾಕೇನೇವ ಬ್ರಾಹ್ಮಣೀ ।
ಮಾ ಗಮಿಷ್ಯಸಿ ದುರ್ಬುದ್ಧೇ ಗತಿಂ ದುರ್ಗಾಂತರಾಂತರಾಮ್ ॥೨೦॥

ಎಲೈ ದುರ್ಬುದ್ಧಿಯೇ, ಚಂಡಾಲನು (ಶ್ವಪಚನು) ಬ್ರಾಹ್ಮಣ ಸ್ತ್ರೀಯನ್ನು ಮುಟ್ಟಲು ಸಾಧ್ಯವಿಲ್ಲದಂತೆ ನೀನು ನನ್ನನ್ನು ಮುಟ್ಟಲು ಸಾಧ್ಯವಿಲ್ಲ. ನೀನು ದುಃಖಮಯವಾದ ನರಕದ ಒಳಗಿರುವ ಅಂಧತಮಸ್ಸಿನ ಗತಿಯನ್ನು ಹೊಂದುವವನಾಗಬೇಡ.

ಯತ್ರ ಗಚ್ಛಂತಿ ಬಹವಃ ಪರದಾರಾಭಿಮರ್ಶಕಾಃ ।
ನರಾಃ ಸಂಭಿನ್ನಮರ್ಯಾದಾಃ ಕೀಟಪುಂಜಗುಹಾಶಯಾಃ ॥೨೧॥

ಧರ್ಮದ ಎಲ್ಲೆಯನ್ನು ಮೀರಿ ಪರಪತ್ನಿಯನ್ನು ಸ್ಪರ್ಶಮಾಡುವ ಎಲ್ಲ ಜನರೂ ಕಾಡಿನ ಗುಹೆಯಲ್ಲಿ ಸೇರಿದ ಕೀಟಸಮುದಾಯದಂತೆ ಹೋಗುವ ಸ್ಥಳಕ್ಕೆ ನೀನು ಹೋಗಬೇಡ.

ಅಪ್ಯೇಷೀನ್ಮಾಂ ಸುರಾಹಾರೀಂ ಸುದೇಷ್ಣಾ ತ್ವನ್ನಿವೇಶನಮ್ ।
ತಸ್ಯೈ ತ್ವಂ ದೇಹಿ ಮದಿರಾಂ ಭಗಿನೀ ತೃಷಿತಾ ತವ ॥೨೨॥

ಸುದೇಷ್ಣೆಯು ಸುರೆಯನ್ನು ತರುವುದಕ್ಕೆ ನಿನ್ನ ಮನೆಗೆ ನನ್ನನ್ನು ಕಳುಹಿಸಿದ್ದಾಳೆ. ಅವಳಿಗಾಗಿ ಸುರೆಯನ್ನು ಕೊಡು. ನಿನ್ನ ಅಕ್ಕನು ಬಾಯಾರಿದ್ದಾಳೆ.

ಪಿಪಾಸಿತಾ ಚ ಕೈಕೇಯೀ ತೂರ್ಣಂ ಮಾಮಾದಿಶತ್ ತತಃ ।
ದೀಯತಾಂ ಮೇ ಸುರಾ ಶೀಘ್ರಂ ಸೂತಪುತ್ರ ವ್ರಜಾಮ್ಯಹಮ್ ॥೨೩॥

ಕೇಕೇಯ ದೇಶದವಳಾದ ಅವಳು ಬಾಯಾರಿಕೆಯಿಂದ ಕೂಡಿದವಳಾಗಿ ಬೇಗ ನಿನ್ನ ಮನೆಗೆ ಹೋಗುವಂತೆ ನನಗೆ ಆಜ್ಞೆ ಮಾಡಿದಳು. ಸೂತಪುತ್ರನೇ, ನನಗೆ ಬೇಗ ಸುರೆಯನ್ನು ಕೊಡು. ನಾನು ಇಲ್ಲಿಂದ ಹೊರಡುತ್ತೇನೆ.

ಕೀಚಕಃ

ಅನ್ಯಾ ಭದ್ರೇ ಹರಿಷ್ಯಂತಿ ರಾಜಪುತ್ರ್ಯಾಃ ಸುರಾಮಿಮಾಮ್ ।
ಕಿಂ ತ್ವಂ ಯಾಸ್ಯಸಿ ಸುಶ್ರೋಣಿ ಮದರ್ಥಂ ತ್ವಮಿಹಾಗತಾ ॥೨೪॥

ಸುಂದರಿಯೇ, ರಾಜಕುಮಾರಿಗೆ ಈ ಮದ್ಯವನ್ನು ಬೇರೆ ಯಾವಳಾದರೂ ತೆಗೆದುಕೊಂಡು ಹೋಗಿ ಕೊಡುವಳು. ಸುಂದರಿಯೇ, ನೀನು ಏಕೆ ಹೋಗುವಿ? ನೀನು ನನ್ನ ಸಲುವಾಗಿ ಇಲ್ಲಿಗೆ ಬಂದಿದ್ದೀಯೆ.

ವೈಶಂಪಾಯನಃ

ಇತ್ಯುಕ್ತ್ವಾ ದಕ್ಷಿಣೇ ಪಾಣೌ ಸೂತಪುತ್ರಃ ಪರಾಮೃಶತ್ ।
ಸಾ ಗೃಹೀತಾ ವಿಧೂನ್ವಂತೀ ಭೂಮೌ ನಿಕ್ಷಿಪ್ಯ ಭಾಜನಮ್ ॥೨೫॥

ಸಭಾಂ ಶರಣಮಾಧಾವತ್ ಯತ್ರ ರಾಜಾ ಯುಧಿಷ್ಠಿರಃ ॥೨೬॥

ವೈಶಂಪಾಯನ– ಹೀಗೆ ಹೇಳಿ ಸೂತಪುತ್ರನಾದ ಕೀಚಕನು ಅವಳ ಬಲಗೈಯನ್ನು ಹಿಡಿದನು. ಅವಳು ಅವನ ಕೈಯನ್ನು ಝಾಡಿಸಿ ನೆಲದ ಮೇಲೆ ಪಾತ್ರೆಯನ್ನಿಟ್ಟು ಯುಧಿಷ್ಠಿರನಿದ್ದ ಸಭೆಯ ಬಳಿಗೆ ತನ್ನ ರಕ್ಷಣೆಗಾಗಿ ಓಡಿಬಂದಳು.

ತಾಂ ಕೀಚಕಃ ಪ್ರಧಾವಂತೀಂ ಕೇಶಪಕ್ಷೇ ಪರಾಮೃಶತ್ ।
ಪಾತಯಿತ್ವಾ ಚ ತಾಂ ಭೂಮೌ ಸೂತಪುತ್ರಃ ಪದಾऽವಧೀತ್ ॥೨೭॥

ಓಡುತ್ತಿದ್ದ ಅವಳನ್ನು ಕೀಚಕನು ಹಿಂದಿನಿಂದ ಧಾವಿಸಿ ಬಂದು ಅವಳ ತಲೆ ಕೂದಲನ್ನು ಹಿಡಿದು ನೆಲದ ಮೇಲೆ ಕೆಡವಿ ತನ್ನ ಕಾಲಿನಿಂದ ಒದ್ದನು.

ಸಭಾಯಾಂ ಪಶ್ಯತೋ ರಾಜ್ಞೋ ವಿರಾಟಸ್ಯ ಮಹಾತ್ಮನಃ ।
ಬ್ರಾಹ್ಮಣಾನಾಂ ಚ ವೃದ್ಧಾನಾಂ ಕ್ಷತ್ರಿಯಾಣಾಂ ಚ ಪಶ್ಯತಾಮ್ ॥೨೮॥
ತಸ್ಯಾಃ ಪದಾಭಿತಪ್ತಾಯಾ ಮುಖಾದ್ ರುಧಿರಮಾಸ್ರವತ್ ॥೨೯॥

ಸಭೆಯಲ್ಲಿ ಕುಳಿತಿದ್ದ ಮಹಾತ್ಮನಾದ ವಿರಾಟರಾಜನೂ, ವೃದ್ಧರಾದ ಬ್ರಾಹ್ಮಣರೂ ಮತ್ತು ಕ್ಷತ್ರಿಯರೂ ನೋಡುತ್ತಿರುವಂತೆಯೇ ಒದೆಯಲ್ಪಟ್ಟ ಅವಳ ಬಾಯಿಂದ ರಕ್ತವು ಹರಿಯಿತು.

ತತೋ ದಿವಾಕರೇಣಾಶು ರಾಕ್ಷಸಃ ಸನ್ನಿಯೋಜಿತಃ ।
ಸ ಕೀಚಕಮಪೋವಾಹ ವಾತವೇಗೇನ ಭಾರತ ॥೩೦॥

ಎಲೈ ಭಾರತನೇ, ಆಗ ಸೂರ್ಯನಿಂದ ಅವಳ ರಕ್ಷಣೆಗಾಗಿ ಕಳುಹಿಸಲ್ಪಟ್ಟ ರಾಕ್ಷಸನು ದೊಡ್ಡ ಗಾಳಿಯು ಎಲೆಯನ್ನು ಹಾರಿಸುವಂತೆ ಕೀಚಕನನ್ನು ದೂರಕ್ಕೆ ಹಾರಿಸಿದನು.

ಸ ಪಪಾತ ತದಾ ಭೂಮೌ ರಕ್ಷೋಬಲಸಮೀರಿತಃ ।
ವಿಘೂರ್ಣಮಾನೋ ನಿಶ್ಚೇಷ್ಟಃ ಛಿನ್ನಮೂಲ ಇವ ದ್ರುಮಃ ॥೩೧॥

ಆಗ ರಾಕ್ಷಸನ ಬಲದಿಂದ ಎಸೆಯಲ್ಪಟ್ಟ ಆ ಕೀಚಕನು ಬುಡವನ್ನು ಕಡಿದ ಮರದಂತೆ ನಿಶ್ಚೇಷ್ಟನಾಗಿ ಕೋಪಗೊಂಡು ಭೂಮಿಯ ಮೇಲೆ ಬಿದ್ದನು.

ತಾಂ ದೃಷ್ಟ್ವಾ ತತ್ರ ತೇ ಸಭ್ಯಾ ಹಾಹಾಭೂತಾಃ ಸಮಂತತಃ ।
ನ ಯುಕ್ತಂ ಸೂತಪುತ್ರೇಣ ಕೀಚಕೇತಿ ಚ ಮಾನವಾಃ ॥೩೨॥
ಕಿಮಿದಂ ವಧ್ಯತೇ ಬಾಲಾ ಕೃಪಣಾ ಚಾಪ್ಯಬಾಂಧವಾ ॥೩೩॥

ಅದನ್ನು ನೋಡಿದ ಆ ಸಭಾಸದರೆಲ್ಲರೂ ಹಾಹಾಕಾರವನ್ನು ಮಾಡಿದರು. ಅಲ್ಲಿದ್ದ ಆ ಜನರು ಸೂತಪುತ್ರನು ಮಾಡಿದ ಈ ಕಾರ್ಯವು ಯೋಗ್ಯವಾದುದಲ್ಲ ಎಂದು ಹೇಳಿ ಕೀಚಕನೇ, ಬಂಧುರಹಿತಳೂ, ಕೃಪಣಳೂ, ಬಾಲೆಯೂ ಆದ ಇವಳನ್ನು ಏಕೆ ಒದೆಯುತ್ತಿದ್ದೀಯೆ ಎಂದು ಕೇಳಿದರು.

ತತ್ರಾಸೀನೌ ದದೃಶತುರ್ಯುಧಿಷ್ಠಿರವೃಕೋದರೌ ।
ಅಮೃಷ್ಯಮಾಣೌ ಕೃಷ್ಣಾಯಾಃ ಕೀಚಕೇನ ಪದಾ ವಧಮ್ ॥೩೪॥

ಅಲ್ಲಿ ಕುಳಿತಿದ್ದ ಯುಧಿಷ್ಠಿರ ಮತ್ತು ಭೀಮಸೇನರು ಅದನ್ನು ನೋಡಿ ದ್ರೌಪದಿಗೆ ಕೀಚಕನಿಂದ ಉಂಟಾದ ಪಾದಘಾತವನ್ನು ಸಹಿಸಲಿಲ್ಲ.

ತಾಂ ದೃಷ್ಟ್ವಾ ಭೀಮಸೇನಸ್ಯ ಕ್ರೋಧಾದಸ್ತಮವರ್ತತ ।
ಧೂಮೋಚ್ಛ್ವಾಸಃ ಸಮಭವನ್ನೇತ್ರೇ ಚೋಚ್ಚ್ರಿತಪಕ್ಷ್ಮಣೇ ॥೩೫॥

ಸಸ್ವೇದಾ ಭ್ರುಕುಟೀ ಚೋಗ್ರಾ ಲಲಾಟೇ ಸಮವರ್ತತ ॥೩೬॥

ದ್ರೌಪದಿಯನ್ನು ನೋಡಿದ ಭೀಮಸೇನನಿಗೆ ಕೀಚಕನ ಸಂಹಾರವಾಗುವಂತೆ ಕ್ರೋಧದಿಂದ ಧೂಮದ ಉಚ್ಛ್ವಾಸವು ಉಂಟಾಯಿತು. ಕ್ರೋಧದಿಂದ ತನ್ನ ಹುಬ್ಬನ್ನು ಮೇಲಕ್ಕೆತ್ತಿದನು. ಗಂಟಿಕ್ಕಿದ ಹುಬ್ಬುಗಳಲ್ಲಿ ಅವನ ಹಣೆಯಲ್ಲಿ ಬೆವರು ಉಂಟಾಯಿತು.

ತಸ್ಯ ಭೀಮೋ ವಧಪ್ರೇಪ್ಸುಃ ಕೀಚಕಸ್ಯ ಮಹಾಮನಾಃ ।
ದಂತೈರ್ದದಂತಾಂಸ್ತಥಾ ರೋಷಾನ್ನಿಷ್ಪಿಪೇಷ ಮಹಾಮನಾಃ ॥೩೭॥

ಧೈರ್ಯಶಾಲಿಯಾದ ಭೀಮನು ಆ ಕೀಚಕನ ವಧೆಯನ್ನು ಬಯಸಿ ರೋಷದಿಂದ ತನ್ನ ಹಲ್ಲುಗಳನ್ನು ಕಡಿದನು.

ಅಂಗುಷ್ಠೇನ ಪರಾಮೃಷ್ಟ್ವಾ ಲಲಾಟಂ ಪರವೀರಹಾ ॥೩೮॥

ಭೂಯಃ ಸಂತ್ವರಿತಃ ಕ್ರುದ್ಧಃ ಸಹಸೋತ್ಥಾಯ ಚಾಸನಾತ್ ।
ನಿರೈಕ್ಷತ ದ್ರುಮಂ ದೀರ್ಘಂ ರಾಜಾನಂ ಚಾನ್ವವೈಕ್ಷತ ॥೩೯॥

ಪರವೀರರನ್ನು ಕೊಲ್ಲುವ ಅವನು ತನ್ನ ಹಣೆಯನ್ನು ಅಂಗುಷ್ಠದಿಂದ ಮುಟ್ಟಿ ಪುನಃ ಕ್ರೋಧದಿಂದ ತನ್ನ ಆಸನದಿಂದ ತಕ್ಷಣ ಮೇಲೆದ್ದು ಒಂದು ದೊಡ್ಡ ಮರವನ್ನು ನೋಡಿ ಧರ್ಮರಾಜನ ಮುಖವನ್ನು ನೋಡಿದನು.

ವಧಮಾಕಾಂಕ್ಷಮಾಣಂ ತಂ ಕೀಚಕಸ್ಯ ದುರಾತ್ಮನಃ ।
ಆಕಾರೇಣ ತು ಭೀಮಂ ಸ ಪ್ರತ್ಯಷೇಧದ್ ಯುಧಿಷ್ಠಿರಃ ॥೪೦॥

ದುರಾತ್ಮನಾದ ಕೀಚಕನ ವಧೆಯನ್ನು ಬಯಸುವ ಭೀಮಸೇನನನ್ನು ನೋಡಿ ಯುಧಿಷ್ಠಿರನು ತನ್ನ ಸಂಜ್ಞೆಯಿಂದ ಅವನನ್ನು ನಿಷೇಧಿಸಿದನು.

ತಸ್ಯ ರಾಜಾ ಶನೈಃ ಸಂಜ್ಞಾಂ ಕುಂತೀಪುತ್ರೋ ಯುಧಿಷ್ಠಿರಃ ।
ಚಕಾರ ಭೀಮಸೇನಸ್ಯ ಪಾಂಡುಪುತ್ರಸ್ಯ ಧೀಮತಃ ॥೪೧॥

ಉಪಾಸೀನಂ ತದಾ ಚಾಹ ಕಂಕೋ ನಾಮ ಯುಧಿಷ್ಠಿರಃ ॥೪೨॥

ಕುಂತೀಪುತ್ರನಾದ ಕಂಕ ಎಂಬ ಹೆಸರನ್ನು ಹೊಂದಿದ ಯುಧಿಷ್ಠಿರನು ಮೇಧಾವಿಯಾದ, ಪಾಂಡುಪುತ್ರನಾದ, ಸಮೀಪದಲ್ಲಿ ಕುಳಿತ ಭೀಮಸೇನನನ್ನು ನೋಡಿ ನಿಧಾನವಾಗಿ ಸಂಜ್ಞೆಯನ್ನು ಮಾಡಿ ಮಾತನಾಡಿದನು.

ಸೂದ ಮಾ ಸಾಹಸಂ ಕಾರ್ಷೀಃ ಫಲಿತೋಽಯಂ ವನಸ್ಪತಿಃ ।
ನಾತ್ರ ಶುಷ್ಕಾಣಿ ಕಾಷ್ಠಾನಿ ಸಾಧನೀಯಾನಿ ಕಾನಿಚಿತ್ ॥೪೩॥

ಸೂದನೇ, ಸಾಹಸವನ್ನು ಮಾಡಬೇಡ. ಈ ವೃಕ್ಷವು ಫಲಭರಿತವಾಗಿದೆ. ಇಲ್ಲಿ ನಿನ್ನ ಅಡುಗೆಗೆ ಯಾವ ಒಣ ಕಟ್ಟಿಗೆಯೂ ದೊರೆಯಲು ಸಾಧ್ಯವಿಲ್ಲ.

ಯದಿ ತೇ ದಾರುಕೃತ್ಯಂ ಸ್ಯಾನ್ನಿಷ್ಕ್ರಮ್ಯ ನಗರಾದ್ ಬಹಿಃ ।
ಸಮೂಲಂ ಶಾತಯೇರ್ವೃಕ್ಷಂ ಶ್ರಮಸ್ತೇ ನ ಭವಿಷ್ಯತಿ ॥೪೪॥

ನಿನಗೆ ಪಾಕಶಾಲೆಗೆ ಕಟ್ಟಿಗೆಯು ಬೇಕಾದರೆ ನಗರದ ಹೊರಗೆ ಹೋಗಿ ಮರವನ್ನು ಬೇರುಸಹಿತವಾಗಿ ಕಿತ್ತು ಒಗೆಯುವವನಾಗು. ಅದರಿಂದ ನಿನಗೆ ಶ್ರಮವಾಗುವುದಿಲ್ಲ.

ಯಸ್ಯ ಚಾರ್ದ್ರಸ್ಯ ವೃಕ್ಷಸ್ಯ ಶೀತಚ್ಛಾಯಾಂ ಸಮಾಶ್ರಯೇತ್ ।
ನ ತಸ್ಯ ಪರ್ಣೇ ದ್ರುಹ್ಯೇತ ಪೂರ್ವವೃತ್ತಮನುಸ್ಮರನ್ ॥೪೫॥

ಯಾವ ಹಸಿಯ ಮರದ ತಂಪಾದ ನೆರಳನ್ನು ಆಶ್ರಯಿಸುತ್ತೇವೆಯೋ ಅದು ನಮಗೆ ಮೊದಲು ನೀಡಿದ ನೆರಳನ್ನು ಚಿಂತಿಸಿ ಆ ಮರದ ಎಲೆಗೆ ದ್ರೋಹವನ್ನು ಮಾಡಬಾರದು.

ನ ಕ್ರೋಧಕಾಲಸಮಯೋ ಜಹಿ ಮಾ ಚಾಪಲಂ ಕುರು ।
ಅಪೂರ್ಣೋऽಯಂ ವಿಪಕ್ಷೋನೋ ನೈತದ್ ಬಲವತಾಂ ಬಹು ॥೪೬॥

ಇದು ಕೋಪದ ಸಮಯವಲ್ಲ. ಕೋಪವನ್ನು ಸಂಹರಿಸು. ಚಪಲತೆಯಿಂದ ಏನೂ ಮಾಡಬೇಡ. ಈ ಮರವು ಪೂರ್ಣವಾಗಿಲ್ಲ. ನಿನ್ನ ಅಡುಗೆಗೂ ಉಪಯೋಗಕ್ಕೆ ಬರುವುದಿಲ್ಲ. ಬಲಿಷ್ಠರಾದವರಿಗೆ ಇದನ್ನು ಕೀಳುವುದು ದೊಡ್ಡ ವಿಷಯವಲ್ಲ. (ಇಲ್ಲಿ ಕೀಚಕನು ಒಬ್ಬನೇ ಇರುವುದರಿಂದ ಉಳಿದ ಕೊಂಬೆಗಳಂತಿರುವ ನೂರೈದು ಜನ ಉಪಕೀಚಕರು ಇಲ್ಲಿ ಇಲ್ಲ. ಆದ್ದರಿಂದ ಅಪೂರ್ಣವಾಗಿದೆ. ಅಜ್ಞಾತವಾಸದಲ್ಲಿ ಇನ್ನೂ ಒಂದು ಪಕ್ಷವು ಉಳಿದಿದೆ. ಆದ್ದರಿಂದ ಯಾವ ಸಾಹಸವನ್ನೂ ಮಾಡಬೇಡ ಎಂದು ಸೂಚಿತವಾದ ಅಭಿಪ್ರಾಯ-ಲಕ್ಷಾಲಂಕಾರ).

ವೈಶಂಪಾಯನಃ

ಅಥಾಂಗುಷ್ಠೇನೇವ ಗೃಹ್ಣನ್ ಅಂಗುಷ್ಠಂ ತತ್ರ ಧರ್ಮರಾಟ್ ।
ಪ್ರಬೋಧನಭಯಾದ್ ರಾಜನ್ ಭೀಮಸ್ಯ ಪ್ರತ್ಯಷೇಧಯತ್ ॥೪೭॥

ವೈಶಂಪಾಯನ– ರಾಜನೇ, ಅನಂತರ ಧರ್ಮರಾಜನು ತನ್ನ ಅಂಗುಷ್ಠವು ಇನ್ನೊಂದು ಅಂಗುಷ್ಠದಿಂದ ತಡೆಯುವವನಂತೆ ಮಾಡಿ ತಮ್ಮ ನಿಜಸ್ವರೂಪವು ಎಲ್ಲಿ ತಿಳಿದುಹೋಗುವುದೋ ಎಂಬ ಭಯದಿಂದ ಭೀಮಸೇನನನ್ನು ನಿಷೇಧಿಸಿದನು.

ಭೀಮಸೇನಸ್ತು ತದ್ವಾಕ್ಯಂ ಶ್ರುತ್ವಾ ಪರಪುರಂಜಯಃ ।
ಸಹಸೋತ್ಪತಿತಂ ಕೋಪಂ ನ್ಯಯಚ್ಛದ್ ಧೃತಿಮಾನ್ ಬಲಾತ್ ॥೪೮॥

ಭೀಮಸೇನನಾದರೂ ಆ ವಾಕ್ಯವನ್ನು ಕೇಳಿ ಪರಪುರಂಜಯನೂ, ಧೈರ್ಯಶಾಲಿಯೂ ಆದ ಅವನು ಇದ್ದಕ್ಕಿದ್ದಂತೆಯೇ ಉಂಟಾದ ಆ ಕೋಪವನ್ನು ತನ್ನ ಮನೋಬಲದಿಂದ ತಡೆದನು.

ಇಂಗಿತಜ್ಞಃ ಸ ತು ಭ್ರಾತುಃ ತೂಷ್ಣೀಮಾಸೀದ್ ವೃಕೋದರಃ ॥೪೯॥

ಅಣ್ಣನ ಅಭಿಪ್ರಾಯವನ್ನು ತಿಳಿದ ವೃಕೋದರನು ಸುಮ್ಮನಾದನು.

ಭೀಮಸ್ಯ ಚ ಸಮಾರಂಭಂ ದೃಷ್ಟ್ವಾ ರಾಜ್ಞಸ್ಯ ಚೇಪ್ಸಿತಮ್ ।
ದ್ರೌಪದ್ಯಭ್ಯಧಿಕಂ ಕ್ರುದ್ಧಾ ಪ್ರಾರುದತ್ ಸಾ ಪುನಃ ಪುನಃ ॥೫೦॥

ಭೀಮಸೇನನ ಉಪಕ್ರಮವನ್ನೂ ಮತ್ತು ಧರ್ಮರಾಜನ ಸಂಜ್ಞೆಯನ್ನೂ ನೋಡಿದ ದ್ರೌಪದಿಯು ಬಹಳ ಕೋಪಗೊಂಡು ಪುನಃ ಪುನಃ ಗಟ್ಟಿಯಾಗಿ ರೋದನ ಮಾಡಿದಳು.

ಕೀಚಕೇನಾನುಗಮನಾತ್ ಕೃಷ್ಣಾ ತಾಮ್ರಾಯತೇಕ್ಷಣಾ ।
ಸಭಾದ್ವಾರಮುಪಾಗಮ್ಯ ರುದಂತೀ ವಾಕ್ಯಮಬ್ರವೀತ್ ॥೫೧॥

ಅವೇಕ್ಷಮಾಣಾ ಸುಶ್ರೋಣೀ ಪತೀಂಸ್ತಾನ್ ದೀನಮಾನಸಾನ್ ।
ಆಕಾರಂ ಪರಿರಕ್ಷಂತೀ ಪ್ರತಿಜ್ಞಾಂ ಧರ್ಮಸಂಯುತಾಮ್ ॥೫೨॥

ದಹ್ಯಮಾನೇನ ರೌದ್ರೇಣ ಚಕ್ಷುಷಾ ದ್ರುಪದಾತ್ಮಜಾ ॥೫೩॥

ಕೀಚಕನಿಂದ ಹಿಂಬಾಲಿಸಲ್ಪಟ್ಟ ರಕ್ತಾಕ್ಷಿಯೂ, ವಿಶಾಲಾಕ್ಷಿಯೂ, ಸುಂದರಿಯೂ, ದ್ರುಪದಕುಮಾರಿಯೂ ಆದ ದ್ರೌಪದಿಯು ಉರಿಯುತ್ತಿರುವ ತನ್ನ ಕ್ರೂರವಾದ ಕಣ್ಣುಗಳಿಂದ ದೀನಮನಸ್ಕರಾದ ತನ್ನ ಪತಿಗಳನ್ನು ನೋಡುತ್ತಾ ಸಭಾದ್ವಾರಕ್ಕೆ ಬಂದು ತಾವು ಮಾಡಿಕೊಂಡ ಪ್ರತಿಜ್ಞೆಯನ್ನು ರಕ್ಷಿಸುವ ಸಲುವಾಗಿ ಪ್ರತಿಜ್ಞೆಗೆ ಅನುಗುಣವಾಗಿ ತನ್ನ ಆಕಾರವನ್ನು ರಕ್ಷಿಸುತ್ತಾ ಮಾತನಾಡಿದಳು.

ದ್ರೌಪದೀ

ಪ್ರಜಾರಕ್ಷಣಶೀಲಾನಾಂ ರಾಜ್ಞಾಮಮಿತತೇಜಸಾಮ್ ।
ಕಾರ್ಯಂ ಹಿ ಪಾಲನಂ ನಿತ್ಯಂ ಧರ್ಮೇ ಸತ್ಯೇ ಪ್ರತಿಷ್ಠಿತಾಮ್ ॥೫೪॥

ಸ್ವಪ್ರಜಾಯಾಂ ಪ್ರಜಾಯಾಂ ಚ ವಿಶೇಷಂ ನಾಧಿಗಚ್ಛತಾಮ್ ।
ಪ್ರಿಯೇಷ್ವಪಿ ಚ ದ್ವೇಷ್ಯೇಷು ಸಮತ್ವಂ ಯೇ ಸಮಾಶ್ರಿತಾಃ ॥೫೫॥

ದ್ರೌಪದಿ– ಪ್ರಜೆಗಳ ರಕ್ಷಣೆಗಳಲ್ಲಿ ನಿರತರಾದ, ಅಮಿತಪರಾಕ್ರಮಿಗಳಾದ ಸತ್ಯದಲ್ಲಿಯೂ ಧರ್ಮದಲ್ಲಿಯೂ ಪ್ರತಿಷ್ಠಿತರಾದ ರಾಜರು ಯಾವಾಗಲೂ ಪ್ರಜೆಗಳ

ಪಾಲನೆಯನ್ನು ಮಾಡಬೇಕು. ಯಾವ ರಾಜರು ತಮ್ಮ ಮಕ್ಕಳಿಗೂ ಮತ್ತು ಪ್ರಜೆಗಳಿಗೂ ವಿಶೇಷವನ್ನು ತಿಳಿಯುವುದಿಲ್ಲವೋ, ಯಾವ ರಾಜರು ಪ್ರಿಯರಲ್ಲಿ ಮತ್ತು ದ್ವೇಷಿಗಳಲ್ಲಿ ಸಮವಾಗಿ ನಡೆದುಕೊಳ್ಳುತ್ತಾರೆಯೋ (ಅಂತಹ ರಾಜರು ಯಾವಾಗಲೂ ಪ್ರಜಾಪಾಲನೆಯನ್ನು ಮಾಡಬೇಕು).

ವಿವಾದೇಷು ಪ್ರವೃತ್ತೇಷು ಸಮಂ ಕಾರ್ಯಾನುದರ್ಶಿನಾ ।
ರಾಜ್ಞಾ ಧರ್ಮಾಸನಸ್ಥೇನ ಜಿತೌ ಲೋಕಾವುಭಾವಪಿ ॥೫೬॥

ರಾಜನ್ ಧರ್ಮಾಸನಸ್ಥೋಽಸಿ ರಕ್ಷ ಮಾಂ ತ್ವಮನಾಗಸೀಮ್ ॥೫೭॥

ಯಾವ ರಾಜನು ಧರ್ಮಾಸನದಲ್ಲಿ ಕುಳಿತವನಾಗಿ ಕಾರ್ಯಾಕಾರ್ಯಗಳನ್ನು ತಿಳಿದು ವಿವಾದ ಉಂಟಾದಾಗ ಸಮನಾಗಿ ನಡೆದುಕೊಳ್ಳುತ್ತಾನೆಯೋ, ಅವನು ಈ ಲೋಕ ಮತ್ತು ಪರಲೋಕಗಳನ್ನು ಜಯಿಸುತ್ತಾನೆ. ರಾಜನೇ, ನೀನು ಧರ್ಮಾಸನದಲ್ಲಿ ಕುಳಿತಿದ್ದೀಯೆ. ನಿರಪರಾಧಿಯಾದ ನನ್ನನ್ನು ರಕ್ಷಿಸು.

ಅಹಂ ತ್ವನಪರಾಧಾ ಚ ಕೀಚಕೇನ ದುರಾತ್ಮನಾ ।
ಪಶ್ಯತಸ್ತೇ ಮಹಾರಾಜ ಹತಾ ಪಾದೇನ ದಾಸಿವತ್ ॥೫೮॥

ಮಹಾರಾಜನೇ, ನಾನು ಯಾವ ಅಪರಾಧವನ್ನೂ ಮಾಡಿಲ್ಲ. ದುರಾತ್ಮನಾದ ಕೀಚಕನು ನಿನ್ನ ಕಣ್ಣೆದುರಿಗೇ ದಾಸಿಯಂತೆ ನನ್ನನ್ನು ಕಾಲಿನಿಂದ ಒದ್ದಿದ್ದಾನೆ.

ತ್ವತ್ಸಮಕ್ಷಂ ನೃಪಶ್ರೇಷ್ಠ ನಿಷ್ಪಿಷ್ಟಾ ವಸುಧಾತಳೇ ।
ಅನಾಗಸೀಂ ಕೃಪಾಹಾರ್ಹಾಂ ಮಾಂ ಸ್ತ್ರಿಯಂ ತ್ವಂ ಪರಿಪಾಲಯ ॥೫೯॥

ನೃಪಶ್ರೇಷ್ಠನೇ, ನಿನ್ನ ಕಣ್ಣೆದುರಿಗೇ ನನ್ನನ್ನು ನೆಲದ ಮೇಲೆ ಕೆಡವಿ ಹಿಂಸಿಸಿದ್ದಾನೆ. ನಿರಪರಾಧಿನಿಯೂ, ಕೃಪಾಪಾತ್ರಳೂ, ವನಿತೆಯೂ ಆದ ನನ್ನನ್ನು ರಕ್ಷಿಸು.

ರಕ್ಷ ಮಾಂ ಕೀಚಕಾದ್ ಭೀತಾಂ ಧರ್ಮಂ ರಕ್ಷ ನರೇಶ್ವರ ।
ಮತ್ಸ್ಯಾಧಿಪ ಪ್ರಜಾ ರಕ್ಷ ಪಿತಾ ಪುತ್ರಾನಿವೌರಸಾನ್ ॥೬೦॥

ನರೇಶ್ವರನೇ, ಕೀಚಕನಿಂದ ಹೆದರಿದ ನನ್ನನ್ನು ರಕ್ಷಿಸು. ಅದರಿಂದ ನಿನ್ನ ಧರ್ಮವನ್ನು ರಕ್ಷಿಸು. ಮತ್ಸ್ಯಾಧಿಪನೇ, ತಂದೆಯು ತನ್ನ ಔರಸಪುತ್ರರನ್ನು ರಕ್ಷಿಸುವಂತೆ ಪ್ರಜೆಗಳನ್ನು ರಕ್ಷಿಸುವವನಾಗು.

ಯಸ್ತ್ವಧರ್ಮಾಣಿ ಕಾರ್ಯಾಣಿ ಮೋಹಾದ್ವಾ ಕುರುತೇ ನೃಪಃ ।
ಅಚಿರಾತ್ ತಂ ದುರಾತ್ಮಾನಂ ವಶೇ ಕುರ್ವಂತಿ ಶತ್ರವಃ ॥೬೧॥

ಯಾವ ರಾಜನು ಮೋಹದಿಂದ ಅಧರ್ಮಮಯವಾದ ಕಾರ್ಯಗಳನ್ನು ಎಸಗುತ್ತಾನೆಯೋ ಅಂತಹ ದುರಾತ್ಮನನ್ನು ಶತ್ರುಗಳು ಶೀಘ್ರದಲ್ಲಿಯೇ ವಶಪಡಿಸಿಕೊಳ್ಳುತ್ತಾರೆ.

ಮಾತ್ಸ್ಯಾನಾಂ ಕುಲಜಸ್ತ್ವಂ ಹಿ ತೇಷಾಂ ಸತ್ಯಂ ಪರಾಯಣಮ್ ।
ತ್ವಂ ಕಿಲೈವಂವಿಧೇ ಜಾತಃ ಕುಲೇ ಧರ್ಮಪರಾಯಣೇ ॥೬೨॥

ನೀನು ಮತ್ಸ್ಯದೇಶದ ರಾಜರ ಕುಲದಲ್ಲಿ ಜನಿಸಿದ್ದೀಯೆ. ಅವರು ಯಾವಾಗಲೂ ಸತ್ಯಪರಾಯಣರಾದವರು. ಧರ್ಮಪರಾಯಣರು ಇರುವ ಇಂತಹ ಕುಲದಲ್ಲಿ ನೀನು ಜನಿಸಿದ್ದೀಯೆ.

ಅತಸ್ತ್ವಾಽಹಮಭಿಕ್ರಂದೇ ಶರಣಾರ್ಥಂ ನರಾಧಿಪ ।
ತ್ರಾಹಿ ಮಾಮದ್ಯ ರಾಜೇಂದ್ರ ಕೀಚಕಾತ್ ಪಾಪಪೂರುಷಾತ್ ॥೬೩॥

ಎಲೈ ನರಾಧಿಪನೇ, ಆ ಕಾರಣದಿಂದ ನಿನ್ನ ಎದುರಿಗೆ ನಾನು ರಕ್ಷಣೆಗಾಗಿ ಗೋಳಾಡುತ್ತಿದ್ದೇನೆ. ರಾಜೇಂದ್ರನೇ, ಪಾಪಪುರುಷನಾದ ಕೀಚಕನಿಂದ ನನ್ನನ್ನು ರಕ್ಷಿಸು.

ಅನಾಥಾಮಿತಿ ಮಾಂ ಜ್ಞಾತ್ವಾ ಕೀಚಕಃ ಪುರುಷಾಧಮಃ ।
ಪ್ರಹರತ್ಯೇವ ನೀಚಾತ್ಮಾ ನ ಚ ಧರ್ಮಮವೇಕ್ಷತೇ ॥೬೪॥

ಪುರುಷಾಧಮನಾದ ಕೀಚಕನು ನಾನು ಅನಾಥೆ ಎಂದು ತಿಳಿದು ನನಗೆ ಒದೆಯುತ್ತಿದ್ದಾನೆ. ನೀಚಾತ್ಮನಾದ ಅವನು ಧರ್ಮವನ್ನು ಗಮನಿಸುತ್ತಿಲ್ಲ.

ಅಕಾರ್ಯಾಣಾಮನಾರಂಭಾತ್ ಕಾರ್ಯಾಣಾಮನುಪಾಲನಾತ್ ।
ಪ್ರಜಾಸು ಯೇ ಪ್ರವೃತ್ತಾಸ್ತೇ ಸ್ವರ್ಗಮಾಯಾಂತಿ ಭೂಮಿಪಾಃ ॥೬೫॥

ಯಾವ ರಾಜರು ನಿಷಿದ್ಧವಾದ ಕಾರ್ಯಗಳನ್ನು ಮಾಡದೆ ವಿಹಿತವಾದ ಕಾರ್ಯಗಳನ್ನು ಮಾಡಿ ಪ್ರಜೆಗಳ ರಕ್ಷಣೆಯಲ್ಲಿ ನಿರತರಾಗಿರುತ್ತಾರೆಯೋ ಅಂತಹ ರಾಜರು ಸ್ವರ್ಗವನ್ನು ಪಡೆಯುತ್ತಾರೆ.

ಕಾರ್ಯಾಕಾರ್ಯವಿಶೇಷಜ್ಞಾಃ ಕಾಮಕಾರೇಣ ಪಾರ್ಥಿವಾಃ ।
ಪ್ರಜಾಸು ಕಿಲ್ಬಿಷಂ ಕೃತ್ವಾ ನರಕಂ ಯಾಂತ್ಯಧೋಮುಖಾಃ ॥೬೬॥

ಕಾರ್ಯಾಕಾರ್ಯವಿಶೇಷಗಳನ್ನು ತಿಳಿದ ರಾಜರು ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಂಡು ಪ್ರಜೆಗಳಿಗೆ ಕೇಡನ್ನು ಮಾಡಿದರೆ ಅಧೋಮುಖವಾಗಿ ನರಕಕ್ಕೆ ಹೋಗುತ್ತಾರೆ.

ನೈವ ಯಜ್ಞೈರ್ನ ವಾ ದಾನೈರ್ನ ಗುರೋರುಪಸೇವಯಾ ।
ಪ್ರಾಪ್ನುವಂತಿ ತಥಾ ಧರ್ಮಂ ಯಥಾ ಕಾರ್ಯಾನುಪಾಲನಾತ್ ॥೬೭॥

ವಿಹಿತಕಾರ್ಯವಾದ ಪ್ರಜೆಗಳ ಅನುಪಾಲನೆಯಿಂದ ಎಂತಹ ಧರ್ಮವು ಉಂಟಾಗುತ್ತದೆಯೋ ಅಂತಹ ಧರ್ಮವು ಯಜ್ಞಗಳಿಂದಾಗಲೀ, ದಾನಗಳಿಂದಾಗಲೀ ಅಥವಾ ಗುರುಸೇವೆಯಿಂದಾಗಲೀ ಉಂಟಾಗುವುದಿಲ್ಲ.

ಅಪಿ ಚೈತತ್ ಪುರಾ ಬ್ರಹ್ಮಾ ಪ್ರೋವಾಚೇಂದ್ರಾಯ ಪೃಚ್ಛತೇ ।
ದ್ವಂದ್ವಂ ಕಾರ್ಯಮಕಾರ್ಯಂ ಚ ಲೋಕೇಷ್ವಾಸೀತ್ ಪರಂ ಯಥಾ ॥

ಧರ್ಮಾಧರ್ಮೌ ಪುನರ್ದ್ವಂದ್ವಂ ವಿನಿಯುಕ್ತಮಥಾಪಿ ವೈ ।
ಕ್ರಿಯಾಣಾಮಕ್ರಿಯಾಣಾಂ ಚ ಪ್ರವಣೇ ಪುಣ್ಯಪಾಪಯೋಃ ॥೬೯॥

ಲೋಕಗಳಲ್ಲಿ ಕಾರ್ಯ ಮತ್ತು ಅಕಾರ್ಯಗಳ ಜೋಡಿಯು ಹೇಗೆ ಪ್ರಧಾನವಾಯಿತು ಎಂಬ ಈ ವಿಷಯವನ್ನು ಹಿಂದೆ ಬ್ರಹ್ಮದೇವರು ಪ್ರಶ್ನೆಯನ್ನು ಮಾಡಿದ ಇಂದ್ರನಿಗೆ ಹೇಳಿದರು. ಕಾರ್ಯ ಮತ್ತು ಅಕಾರ್ಯಗಳಿಗೆ (ವಿಹಿತವಾದ ಮತ್ತು ನಿಷಿದ್ಧವಾದ ಕರ್ಮಗಳಿಗೆ) ಫಲವಾದ ಪುಣ್ಯಪಾಪಗಳಲ್ಲಿ ಸಜ್ಜನರ ಸಮುದಾಯ ಮತ್ತು ದುರ್ಜನರ ಸಮುದಾಯವು ನಿರತವಾಗಿರುತ್ತದೆ. ಕಾರ್ಯಾಕಾರ್ಯಗಳ ಸಮುದಾಯವಲ್ಲದೆ, ಪುಣ್ಯಪಾಪಗಳ ಸಮುದಾಯವಲ್ಲದೆ ಧರ್ಮಾಧರ್ಮಗಳ ಜೋಡಿಯು ಪ್ರಪಂಚದಲ್ಲಿ ವಿನಿಯೋಗವನ್ನು ಹೊಂದುತ್ತದೆ.

ಪ್ರಜಾಯಾಂ ಸೃಜ್ಯಮಾನಾಯಾಂ ಪುರಾ ಹ್ಯೇತದುದಾಹೃತಮ್ ।
ಏತದ್ ವೈ ಮಾನುಷಂ ಸಮ್ಯಕ್ ಕಾರ್ಯಂ ದ್ವಂದ್ವತ್ರಯಂ ಭುವಿ ॥

ಹಿಂದೆ ಪ್ರಜೆಗಳನ್ನು ಸೃಷ್ಟಿಮಾಡಿದ ಬ್ರಹ್ಮದೇವರು ಈ ವಿಷಯವನ್ನು ಹೇಳಿದರು. ಈ ಮೂರು ಜೋಡಿಗಳು ಮನುಷ್ಯರಿಗೆ ಸಂಬಂಧಿಸಿದವು. ಭೂಮಿಯಲ್ಲಿ ಮನುಷ್ಯರು ಈ ಮೂರು ದ್ವಂದ್ವಗಳ ವಿಷಯದಲ್ಲಿ ಎಚ್ಚರಿಕೆಯಿಂದ ಇರಬೇಕು.

ಅಸ್ಮಿನ್ ಸುನೀತೇ ದುರ್ನೀತೇ ಸಭ್ಯಾಸ್ತೇ ಕರ್ಮಜಂ ಫಲಮ್ ।
ಕಲ್ಯಾಣಕಾರೀ ಕಲ್ಯಾಣಂ ಪಾಪಕಾರೀ ಚ ಪಾಪಕಮ್ ॥೭೧॥

ಈ ಮೂರು ದ್ವಂದ್ವಗಳು ಚೆನ್ನಾಗಿ ಅಥವಾ ತಪ್ಪಾಗಿ ಅನುಷ್ಠಾನ ಮಾಡಲ್ಪಟ್ಟರೆ ಮನುಷ್ಯರು ಆ ಕರ್ಮದಿಂದ ಉಂಟಾದ ಫಲವನ್ನು ಅನುಭವಿಸುತ್ತಾರೆ. ಶುಭಕಾರ್ಯವನ್ನು ಮಾಡಿದವನು ಶುಭಫಲವನ್ನೂ, ಪಾಪವನ್ನು ಮಾಡಿದವನು ಅಶುಭಫಲವನ್ನೂ ಅನುಭವಿಸುತ್ತಾನೆ.

ತೇನ ಗಚ್ಛತಿ ನಿಃಸಂಗಂ ಸ್ವರ್ಗಾಯ ನರಕಾಯ ವಾ ।
ಸುಕೃತಂ ದುಷ್ಕೃತಂ ವಾऽಪಿ ಕೃತ್ವಾ ಮೋಹೇನ ಮಾನವಃ ॥೭೨॥

ಪಶ್ಚಾತ್ತಾಪೇನ ತಪ್ಯೇತ ಸುಬುದ್ಧೋ ಮರಣಂ ಗತಃ ॥೭೩॥

ಸುಕೃತವನ್ನಾಗಲೀ ಅಥವಾ ಮೋಹದಿಂದ ದುಷ್ಕೃತವನ್ನಾಗಲೀ ಮಾಡಿದ ಮನುಷ್ಯನು ಏಕಾಕಿಯಾಗಿ ಆ ಕರ್ಮದ ಫಲವಾಗಿ ಸ್ವರ್ಗ ಅಥವಾ ನರಕಕ್ಕೆ ಹೋಗುತ್ತಾನೆ. ಅಕಾರ್ಯವನ್ನು ಮಾಡಿ ಎಚ್ಚರಗೊಂಡ ಸಜ್ಜನನು ಬಹಳ ಪಶ್ಚಾತ್ತಾಪವನ್ನು ಹೊಂದುತ್ತಾನೆ. ಅಪ್ರಬುದ್ಧನಾದ ದುರ್ಜನನಾದರೂ ಮರಣವನ್ನು ಹೊಂದಿದ ಮೇಲೆ ನರಕದ ದುಃಖಗಳಿಂದ ತಾಪವನ್ನು ಹೊಂದುತ್ತಾನೆ (ಲಕ್ಷಾಲಂಕಾರ).

ಏತದುಕ್ತ್ವಾ ಪರಂ ವಾಕ್ಯಂ ವಿಸಸರ್ಜ ಶತಕ್ರತುಮ್ ।
ಶಕ್ರೋऽಪ್ಯಾಪೃಚ್ಛ್ಯ ಬ್ರಹ್ಮಾಣಂ ದೇವರಾಜ್ಯಮಪಾಲಯತ್ ॥೭೪॥

ಬ್ರಹ್ಮದೇವರು ಇಂದ್ರನಿಗೆ ಹೀಗೆ ಹೇಳಿ ಅವನನ್ನು ಬೀಳ್ಕೊಟ್ಟರು. ಇಂದ್ರನಾದರೂ ಬ್ರಹ್ಮದೇವರ ಅನುಮತಿಯನ್ನು ಪಡೆದು ದೇವರಾಜ್ಯವನ್ನು ಪಾಲಿಸಿದನು.

ಯಥೋಕ್ತಂ ದೇವದೇವೇನ ಬ್ರಹ್ಮಣಾ ಪರಮೇಷ್ಠಿನಾ ।
ತಥಾ ತ್ವಮಪಿ ರಾಜೇಂದ್ರ ಕಾರ್ಯಾಕಾರ್ಯಸ್ಥಿತೋ ಭವ ॥೭೫॥

ದೇವದೇವನೂ, ಪರಮೇಷ್ಠಿಯೂ ಆದ ಬ್ರಹ್ಮನು ಹೇಳಿದಂತೆ ಎಲೈ ರಾಜೇಂದ್ರನೇ, ನೀನೂ ಸಹ ಕಾರ್ಯ ಮತ್ತು ಅಕಾರ್ಯಗಳ ವಿಷಯದಲ್ಲಿ ನಡೆದುಕೊ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಏಕೋನವಿಂಶೋಽಧ್ಯಾಯಃ ॥

॥ ಕೀಚಕವಧಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಕೀಚಕನ ವಿಷಯದಲ್ಲಿ ಮೃದುವಾಗಿ ನಡೆದುಕೊಂಡ ವಿರಾಟನಿಗೆ ದ್ರೌಪದಿಯ ನಿಂದನೆ. ಯುಧಿಷ್ಠಿರನಿಂದ ಅವಳಿಗೆ ಸಮಾಧಾನ. ಸುದೇಷ್ಣೆಯ ಬಳಿಗೆ ಹೋಗಿ ದ್ರೌಪದಿಯಿಂದ ಸದ್ಯದಲ್ಲಿಯೇ ಕೀಚಕನ ವಿನಾಶದ ಕಥನ.

ವೈಶಂಪಾಯನಃ

ಏವಂ ವಿಲಪಮಾನಾಯಾಂ ಪಾಂಚಾಲ್ಯಾಂ ಮತ್ಸ್ಯಪುಂಗವಃ ।
ಅಶಕ್ತಃ ಕೀಚಕಂ ತತ್ರ ಶಾಸಿತುಂ ವರದರ್ಪಿತಮ್ ॥೧॥

ವಿರಾಟರಾಜಃ ಸೂತಂ ತು ಸಾಂತ್ವೇನೈವ ನ್ಯವಾರಯತ್ ॥೨॥

ವೈಶಂಪಾಯನ– ಹೀಗೆ ಗೋಳಾಡುತ್ತಿದ್ದ ಪಾಂಚಾಲಿಯನ್ನು ನೋಡಿ ಮತ್ಸ್ಯಪುಂಗವನಾದ ವಿರಾಟರಾಜನು ವರದರ್ಪಿತನಾದ ಕೀಚಕನನ್ನು ಶಾಸನಮಾಡಲು ಶಕ್ತನಾಗದೆ ಅವನನ್ನು ಮೃದುವಾಗಿಯೇ ಮಾತನಾಡಿ ನಿವಾರಿಸಿದನು.

ಕೀಚಕಂ ಮತ್ಸ್ಯರಾಜೇನ ಕೃತಾಗಸಮನಿಂದಿತಾ ।
ನಾಪರಾಧಾನುರೂಪೇಣ ದಂಡೇನ ಪ್ರತಿಪಾದಿತಮ್ ॥೩॥

ಪಾಂಚಾಲರಾಜಸ್ಯ ಸುತಾ ದೃಷ್ಟ್ವಾ ಸುರಸುತೋಪಮಾ ।
ಧರ್ಮಜ್ಞಾ ವ್ಯವಹಾರಾಣಾಂ ಕೀಚಕಂ ಕೃತಕಿಲ್ಬಿಷಮ್ ॥೪॥

ಪುನಃ ಪ್ರೋವಾಚ ರಾಜಾನಂ ಸ್ಮರಂತೀ ಧರ್ಮಮುತ್ತಮಮ್ ॥೫॥

ಪಾಂಚಾಲರಾಜಕುಮಾರಿಯೂ, ಸುರಕನ್ಯೆಯಂತಿರುವವಳೂ, ಧರ್ಮಾಧರ್ಮಗಳ ವ್ಯವಹಾರವನ್ನು ತಿಳಿದವಳೂ, ಅನಿಂದಿತಳೂ ಆದ ದ್ರೌಪದಿಯು ಅಪರಾಧಕ್ಕೆ ಅನುಗುಣವಾಗಿ ಕೀಚಕನಿಗೆ ಮತ್ಸ್ಯರಾಜನು ಶಿಕ್ಷೆಯನ್ನು ಕೊಡದಿರುವುದನ್ನು ನೋಡಿ ಶ್ರೇಷ್ಠವಾದ ಧರ್ಮವನ್ನು ಸ್ಮರಿಸಿ ಕೀಚಕನು ಮಾಡಿದ ಅನ್ಯಾಯವನ್ನು ಸ್ಮರಿಸುತ್ತಾ ರಾಜನನ್ನು ಕುರಿತು ಪುನಃ ಮಾತನಾಡಿದಳು.

ಸಂಪ್ರೇಕ್ಷ್ಯ ಚ ವರಾರೋಹಾ ಸರ್ವಾಂಸ್ತತ್ರ ಸಭಾಸದಃ ।
ವಿರಾಟಂ ಚಾಹ ಪಾಂಚಾಲೀ ದುಃಖೇನಾವಿಷ್ಟಚೇತನಾ ॥೬॥

ಸುಂದರಿಯಾದ ಆ ಪಾಂಚಾಲಿಯು ಎಲ್ಲಾ ಸಭಾಸದರನ್ನೂ ಮತ್ತು ರಾಜನನ್ನೂ ನೋಡುತ್ತಾ ದುಃಖದಿಂದ ತುಂಬಿದ ಮನಸ್ಸುಳ್ಳವಳಾಗಿ ಮಾತನಾಡಿದಳು.

ನ ರಾಜನ್ ರಾಜವತ್ ಕಿಂಚಿತ್ ಸಮಾಚರಸಿ ಕೀಚಕೇ ।
ದಸ್ಯೂನಾಮಿವ ತೇ ಧರ್ಮೇ ವಾಸಃ ಸ ಪರಿವರ್ತತೇ ॥೭॥

ರಾಜನೇ, ಕೀಚಕನ ವಿಷಯದಲ್ಲಿ ನೀನು ಯಾವ ರೀತಿಯಲ್ಲಿಯೂ ರಾಜನಂತೆ ನಡೆದುಕೊಳ್ಳುತ್ತಿಲ್ಲ. ನಿನ್ನ ಧರ್ಮದ ಸಂಬಂಧವು ಕಳ್ಳರಿಗಿರುವ ಧರ್ಮದ ಸಂಬಂಧದಂತೆ ಓಲಾಡುತ್ತಿದೆ.

ನ ಕೀಚಕಃ ಸ್ವಧರ್ಮಸ್ಥೋ ನ ಚ ಮಾತ್ಸ್ಯಃ ಕಥಂಚನ ।
ಸಭಾಸದೋಽಪ್ಯಧರ್ಮಜ್ಞಾ ಯ ಇದಂ ಪರ್ಯುಪಾಸತೇ ॥೮॥

ಕೀಚಕನು ತನ್ನ ಧರ್ಮದಲ್ಲಿ ಉಳಿದಿಲ್ಲ. ಮತ್ಸ್ಯರಾಜನು ತನ್ನ ಧರ್ಮದಲ್ಲಿ ನಿಂತಿಲ್ಲ. ಈ ಘಟನೆಯನ್ನು ನೋಡಿ ಸುಮ್ಮನಿರುವ ಸಭಾಸದರೂ ಸಹ ಧರ್ಮವನ್ನು ತಿಳಿದವರಲ್ಲ.

ನ ಧರ್ಮಂ ಕೀಚಕೋ ವೇತ್ತಿ ರಾಜಭೃತ್ಯಾಸ್ತಥೈವ ಚ ।
ನ ರಾಜಾ ವಿನಯಂ ಬ್ರೂತೇ ಅಮಾತ್ಯಾಶ್ಚ ನ ಜಾನತೇ ॥೯॥

ಕೀಚಕನಿಗೆ ಧರ್ಮದ ಜ್ಞಾನವಿಲ್ಲ. ಅದರಂತೆ ರಾಜಭೃತ್ಯರೂ ಧರ್ಮವನ್ನು ತಿಳಿದಿಲ್ಲ. ರಾಜನೂ ಸಹ ಅಪರಾಧ ಮಾಡಿದವನಿಗೆ ಶಿಕ್ಷೆಯ ಬಗ್ಗೆ ಮಾತನಾಡುವುದಿಲ್ಲ. ಅಮಾತ್ಯರೂ ಧರ್ಮವನ್ನು ತಿಳಿದಿಲ್ಲ.

ನೋಪಾಲಭೇ ತ್ವಾಂ ನೃಪತೇ ವಿರಾಟ ನೃಪಸಂಸದಿ ।
ನಾಹಮೇತೇನ ಯುಕ್ತಾ ವೈ ಹಂತುಂ ಮಾತ್ಸ್ಯ ತವಾಂತಿಕೇ ॥೧೦॥

ವಿರಾಟರಾಜನೇ, ಈ ರಾಜಸಭೆಯಲ್ಲಿ ನಾನು ನಿನ್ನನ್ನು ನಿಂದಿಸುತ್ತಿಲ್ಲ. ಮತ್ಸ್ಯರಾಜನೇ, ನಿನ್ನ ಕಣ್ಣೆದುರಿಗೆ ನಾನು ಇವನಿಂದ ಒದೆಯಲ್ಪಡಲು ಯೋಗ್ಯಳಲ್ಲ ಎಂದಿಷ್ಟೇ ಹೇಳುತ್ತಿದ್ದೇನೆ.

ಸಭಾಸದಾಸ್ತು ಪಶ್ಯಂತು ಕೀಚಕಂ ಧರ್ಮಲಂಘಕಮ್ ।
ವಿರಾಟನೃಪತೇ ಪಶ್ಯ ಮಾಮನಾಥಾಮನಾಗಸೀಮ್ ॥೧೧॥

ಸಭಾಸದರು ಕೀಚಕನು ಧರ್ಮವನ್ನು ಮೀರುತ್ತಿರುವುದನ್ನು ನೋಡಲಿ. ವಿರಾಟರಾಜನೇ, ನಾನು ಅನಾಥಳು ಮತ್ತು ನಿರಪರಾಧಿ ಎಂದು ನೀನು ಗಮನಿಸು.

ವಿರಾಟಃ

ಪರೋಕ್ಷಂ ನಾಭಿಜಾನಾಮಿ ವಿಗ್ರಹಂ ಯುವಯೋರಹಮ್ ।
ಅರ್ಥತತ್ತ್ವಮವಿಜ್ಞಾಯ ಕಿಂಸ್ವಿತ್ ಕುಶಲತಾ ಮಮ ॥೧೨॥

ವಿರಾಟ– ನಾನು ತಿಳಿಯದಂತೆ ನಿಮ್ಮಿಬ್ಬರಿಗೆ ಏನು ವಿರೋಧ ಉಂಟಾಗಿದೆಯೋ ಎಂದು ನನಗೆ ತಿಳಿದಿಲ್ಲ. ವಿಷಯವನ್ನು ಸರಿಯಾಗಿ ತಿಳಿಯದೇ ನನ್ನಲ್ಲಿ ಸರಿಯಾಗಲಿ, ತಪ್ಪಾಗಲೀ ಹೇಗೆ ಉಂಟಾಗುತ್ತದೆ?

ದ್ರೌಪದೀ

ಯೇಷಾಂ ನ ವೈರೀ ಸ್ವಪಿತಿ ಪದಾ ಭೂಮಿಮುಪಸ್ಪೃಶನ್ ।
ತೇಷಾಂ ಮಾಂ ಮಾನಿನಾಂ ಭಾರ್ಯಾಂ ಸೂತಪುತ್ರಃ ಪದಾऽವಧೀತ್॥

ದ್ರೌಪದೀ– ಯಾವ ನನ್ನ ಪತಿಗಳ ವೈರಿಯು ಭೂಮಿಯ ಮೇಲೆ ಪಾದವನ್ನು ಊರಿ ನಿದ್ರಿಸುವುದಿಲ್ಲವೋ ಅಂತಹ ಪತಿಗಳ ಮಾನವತಿಯಾದ ಪತ್ನಿಯಾದ ನನ್ನನ್ನು ಸೂತಪುತ್ರನಾದ ಕೀಚಕನು ಕಾಲಿನಿಂದ ಒದ್ದನು.

ಯೇ ವೈ ದದ್ಯುರ್ನ ಯಾಚೇಯುರ್ಬ್ರಹ್ಮಣ್ಯಾಃ ಸತ್ಯವಾದಿನಃ ।
ತೇಷಾಂ ಮಾಂ ಮಾನಿನೀಂ ಭಾರ್ಯಾಂ ಸೂತಪುತ್ರಃ ಪದಾऽವಧೀತ್॥

ಯಾರು ಎಂದೂ ಬೇಡುವುದಿಲ್ಲವೋ ಮತ್ತು ಯಾವಾಗಲೂ ದಾನವನ್ನು ಮಾಡುತ್ತಾರೆಯೋ, ಬ್ರಾಹ್ಮಣವತ್ಸಲರಾಗಿದ್ದಾರೆಯೋ, ಸತ್ಯವಾದಿಗಳೋ ಅಂತಹವರ ಮಾನವತಿಯಾದ ಪತ್ನಿಯಾದ ನನ್ನನ್ನು ಸೂತಪುತ್ರನು ಕಾಲಿನಿಂದ ಒದ್ದನು.

ಯೇಷಾಂ ದುಂದುಭಿರ್ನಿಘ್ರೋಷೋ
ಜ್ಯಾಘೋಷಃ ಶ್ರೂಯತೇऽನಿಶಮ್ ।
ತೇಷಾಂ ಮಾಂ ಮಾನಿನೀಂ ಭಾರ್ಯಾಂ
ಸೂತಪುತ್ರಃ ಪದಾऽವಧೀತ್ ॥೧೫॥

ಯಾರ ದುಂದುಭಿಘೋಷವು ಮತ್ತು ಜ್ಯಾಘೋಷವು ಸತತವಾಗಿ ಕೇಳಿ ಬರುತ್ತದೆಯೋ ಅಂತಹವರ ಮಾನವತಿಯಾದ ಪತ್ನಿಯನ್ನು ಸೂತಪುತ್ರನು ಕಾಲಿನಿಂದ ಒದ್ದನು.

ತೇಜಸ್ವಿನಸ್ತಥಾ ಕ್ಷಾಂತಾ ಬಲವಂತೋऽಭಿಮಾನಿನಃ ।
ಮಹೇಷ್ವಾಸಾ ರಣೇ ಶೂರಾ ಗರ್ವಿತಾ ಮಾನಿತಾಃ ಪುರಾ ॥೧೬॥

ತೇಷಾಂ ಮಾಂ ದಯಿತಾಂ ಭಾರ್ಯಾಂ ಸೂತಪುತ್ರಃ ಪದಾऽವಧೀತ್॥

ಯಾರು ತೇಜಸ್ವಿಗಳೋ ಆದರೂ ಕ್ಷಮಾಶೀಲರೋ, ಬಲಿಷ್ಠರೋ, ಆತ್ಮಾಭಿಮಾನ ಉಳ್ಳವರೋ, ಮಹಾಧನುರ್ಧಾರಿಗಳೋ, ರಣಶೂರರೋ, ಆತ್ಮಗರ್ವ ಉಳ್ಳವರೋ, ಹಿಂದೆ ಎಲ್ಲರಿಂದಲೂ ಸಮ್ಮಾನಿತರೋ ಅಂತಹವರ ಪ್ರೀತಿಯ ಪತ್ನಿಯಾದ ನನ್ನನ್ನು ಸೂತಪುತ್ರನು ಕಾಲಿನಿಂದ ಒದ್ದನು.

ಸರ್ವಲೋಕಮಿಮಂ ಹನ್ಯುರ್ಯದಿ ಕ್ರುದ್ಧಾ ಮಹಾಬಲಾಃ ।
ತೇಷಾಂ ಮಾಂ ಮಾನಿನೀಂ ಭಾರ್ಯಾಂ ಸೂತಪುತ್ರಃ ಪದಾऽವಧೀತ್॥

ಯಾವ ಮಹಾಬಲಿಷ್ಠರಾದ ನನ್ನ ಪತಿಗಳು ಕೋಪಗೊಂಡರೆ ಈ ಲೋಕವೆಲ್ಲವನ್ನೂ ನಾಶಪಡಿಸುವರೋ ಅಂತಹವರ ಮಾನವತಿಯಾದ ಪತ್ನಿಯಾದ ನನ್ನನ್ನು ಸೂತಪುತ್ರನು ಕಾಲಿನಿಂದ ಒದ್ದನು.

ಶರಣಂ ಯೇ ಪ್ರಪನ್ನಾನಾಂ ಭವಂತಿ ಶರಣಾರ್ಥಿನಾಮ್ ।
ಚರಂತಿ ಲೋಕೇ ಪ್ರಚ್ಛನ್ನಾಃ ಕ್ವ ನು ತೇಽದ್ಯ ಮಹಾರಥಾಃ ॥೧೯॥

ಯಾರು ರಕ್ಷಣೆಯನ್ನು ಬಯಸಿ ಬಂದವರಿಗೆ ಯಾವಾಗಲೂ ರಕ್ಷಣೆಯನ್ನು ನೀಡುವವರೋ, ಯಾರು ಲೋಕದಲ್ಲಿ ಪ್ರಚ್ಛನ್ನರಾಗಿ ಸಂಚರಿಸುತ್ತಾರೆಯೋ ಅಂತಹ ಮಹಾರಥರಾದ ನನ್ನ ಪತಿಗಳು ಈ ದಿನ ಎಲ್ಲಿ ಹೋಗಿದ್ದಾರೆ?

ಕಥಂ ತೇ ಸೂತಪುತ್ರೇಣ ವಧ್ಯಮಾನಾಂ ಪ್ರಿಯಾಂ ಸತೀಮ್ ।
ಮರ್ಷಯಂತಿ ಯಥಾ ಕ್ಲೀಬಾ ಬಲವಂತೋಽತಿತೇಜಸಃ ॥೨೦॥

ಬಲಿಷ್ಠರೂ, ಮಹಾತೇಜಸ್ವಿಗಳೂ ಆದ ಅವರು ತಮ್ಮ ಪ್ರಿಯಪತ್ನಿಯನ್ನು ಕೀಚಕನು ಒದೆಯುವುದನ್ನು ನೋಡಿ ನಪುಂಸಕರಂತೆ ಹೇಗೆ ಸಹಿಸಿಕೊಂಡಿದ್ದಾರೆ?

ಕ್ವ ನು ತೇಷಾಮಮರ್ಷಶ್ಚ ವೀರ್ಯಂ ತೇಜಶ್ಚ ತದ್ಬಲಮ್ ।
ನ ಚ ರಕ್ಷಂತಿ ಯೇ ಭಾರ್ಯಾಂ ವಧ್ಯಮಾನಾಂ ದುರಾತ್ಮನಾ ॥೨೧॥

ಅವರ ಕ್ರೋಧ, ವೀರ್ಯ, ತೇಜಸ್ಸು, ಬಲಗಳು ಎಲ್ಲಿ ಹೋದವು? ದುರಾತ್ಮನಿಂದ ಒದೆಯಲ್ಪಡುತ್ತಿರುವ ಅವರ ಪತ್ನಿಯನ್ನು ಅವರು ರಕ್ಷಿಸುತ್ತಿಲ್ಲ.

ಮಯಾಽಪಿ ಶಕ್ಯಂ ಕಿಂ ಕರ್ತುಂ ವಿರಾಟೇ ಧರ್ಮದೂಷಣೇ ।
ಮಾಂ ಮರ್ಷಯತಿ ಯಃ ಪಶ್ಯನ್ ವಧ್ಯಮಾನಾಮನಾಗಸೀಮ್ ॥೨೨॥

ಧರ್ಮೋ ವಿದ್ಧೋ ಹ್ಯಧರ್ಮೇಣ ಸತ್ಯಂ ಯತ್ರಾನೃತೇನ ಚ ।
ಹನ್ಯತೇ ಪ್ರೇಕ್ಷಮಾಣಾನಾಂ ಹತಾಸ್ತತ್ರ ಸಭಾಸದಃ ॥೨೩॥

ಧರ್ಮದೂಷಣನಾದ ವಿರಾಟರಾಜನು ತನ್ನ ಕಣ್ಣೆದುರಿಗೇ ನಿರಪರಾಧಿಯಾದ ನಾನು ಒದೆಯಲ್ಪಡುವುದನ್ನು ನೋಡಿ ಸುಮ್ಮನೆ ಸಹಿಸಿಕೊಂಡಿರುವಾಗ ನಾನಾದರೂ ಏನು ಮಾಡಲಿ? ಯಾವ ಸಭೆಯಲ್ಲಿ ಧರ್ಮವು ಅಧರ್ಮದಿಂದ, ಸತ್ಯವು ಅನೃತದಿಂದ ಕಣ್ಣೆದುರಿಗೇ ಹಿಂಸಿಸಲ್ಪಡುತ್ತದೆಯೋ ಅಲ್ಲಿ ಸಭಾಸದರೆಲ್ಲರೂ ಸತ್ತಂತೆಯೇ ಸರಿ.

ವೈಶಂಪಾಯನಃ

ತಸ್ಯಾಸ್ತತ್ ಕೃಪಣಂ ಶ್ರುತ್ವಾ ಸೈರಂಧ್ರ್ಯಾಃ ಪರಿದೇವಿತಮ್ ॥೨೪॥

ತತಃ ಸಭ್ಯಾಸ್ತು ವಿಜ್ಞಾಯ ಭೂಯಃ ಕೃಷ್ಣಾಮಪೂಜಯನ್ ।
ಸಾಧು ಸಾಧ್ವಿತಿ ಚಾಪ್ಯಾಹುಃ ಕೀಚಕಂ ಚಾಪ್ಯಗರ್ಹಯನ್ ॥೨೫॥

ವೈಶಂಪಾಯನ– ಸೈರಂಧ್ರಿಯ ಆ ಕೃಪಣವಾದ ಗೋಳಾಟವನ್ನು ಕೇಳಿ ಸಭಾಸದರು ವಿಷಯವನ್ನು ತಿಳಿದು ದ್ರೌಪದಿಯನ್ನು ಪುನಃ ಪೂಜಿಸಿದರು. ದ್ರೌಪದಿಯ ಮಾತುಗಳು ಸರಿಯಾಗಿವೆ, ಸರಿಯಾಗಿವೆ ಎಂದು ಹೇಳಿದರು ಮತ್ತು ಕೀಚಕನನ್ನು ನಿಂದಿಸಿದರು.

ಕೇಚಿತ್ ಕೃಷ್ಣಾಂ ಪ್ರಶಂಸಂತಿ ಕೇಚಿನ್ನಿಂದಂತಿ ಕೀಚಕಮ್ ।
ಕೇಚಿನ್ನಿಂದಂತಿ ರಾಜಾನಂ ಕೇಚಿದ್ ದೇವೀಂ ಚ ತಾಂ ನರಾಃ ॥೨೬॥

ಕೆಲವರು ದ್ರೌಪದಿಯನ್ನು ಪ್ರಶಂಸಿಸಿದರು. ಕೆಲವರು ಕೀಚಕನನ್ನು ನಿಂದಿಸಿದರು. ಇನ್ನು ಕೆಲವರು ರಾಜನನ್ನೂ, ಇನ್ನು ಕೆಲವರು ಸುದೇಷ್ಣೆಯನ್ನೂ ನಿಂದಿಸಿದರು.

ಸಭ್ಯಾಃ

ಯಸ್ಯೇಯಂ ಚಾರುಸರ್ವಾಂಗೀ ಭಾರ್ಯಾ ಸ್ಯಾದಾಯತೇಕ್ಷಣಾ ।
ಪರೋ ಲಾಭಸ್ತು ತಸ್ಯ ಸ್ಯಾನ್ನ ಸ ಶೋಚೇತ್ ಕದಾಚನ ॥೨೭॥

ಸಭ್ಯರು– ವಿಶಾಲಾಕ್ಷಿಯೂ, ಸರ್ವಾಂಗಸುಂದರಳೂ ಆದ ಇವಳು ಯಾವನಿಗೆ ಪತ್ನಿಯೋ ಅವನು ಶ್ರೇಷ್ಠವಾದ ಲಾಭವನ್ನು ಪಡೆದವನು. ಅವನು ಎಂದೂ ದುಃಖಪಡಲಾರ.

ಯಸ್ಯಾ ಗಾತ್ರಂ ಶುಭಂ ಪೀನಂ ಮುಖಂ ಜಯತಿ ಪಂಕಜಮ್ ।
ಗತಿರ್ಹಂಸಂ ಸ್ಮಿತಂ ಕುಂದಂ ಸೈಷಾ ನಾರ್ಹತಿ ಪದ್ಧತಿಮ್ ॥೨೮॥

ಯಾವಳ ಶರೀರವು ಶುಭವೂ ಮತ್ತು ಪುಷ್ಟವೂ ಆಗಿದೆಯೋ, ಮುಖವು ಕಮಲವನ್ನು ಗೆಲ್ಲುತ್ತದೆಯೋ, ನಡಿಗೆಯು ಹಂಸವನ್ನೂ, ಮಂದಹಾಸವು ಕುಂದ ಪುಷ್ಪವನ್ನೂ ಗೆಲ್ಲುತ್ತದೆಯೋ ಅಂತಹ ಇವಳು ಪಾದಘಾತಕ್ಕೆ ಅರ್ಹಳಲ್ಲ.

ದ್ವಾತ್ರಿಂಶದ್ ದಶನಾ ಯಸ್ಯಾಃ ಶ್ವೇತಾ ಮಾಂಸನಿಬಂಧನಾಃ ।
ಸ್ನಿಗ್ಧಾಶ್ಚ ಮೃದವಃ ಕೇಶಾಃ ಸೈಷಾ ನಾರ್ಹತಿ ಪದ್ವಧಮ್ ॥೨೯॥

ಯಾವಳ ಮೂವತ್ತೆರಡು ದಂತಗಳು ಶ್ವೇತವಾಗಿದ್ದು ಮಾಂಸದಲ್ಲಿ ನೆಡಲ್ಪಟ್ಟಿದೆಯೋ, ಯಾವಳ ಕೇಶಗಳು ಮೃದುವಾಗಿಯೂ ಮತ್ತು ಒತ್ತಾಗಿಯೂ ಇವೆಯೋ ಅಂತಹ ಇವಳು ಪಾದಘಾತಕ್ಕೆ ಅರ್ಹಳಲ್ಲ.

ಪದ್ಮಂ ಚಕ್ರಂ ಧ್ವಜಃ ಶಂಖಃ ಪ್ರಾಸಾದೋ ಮಕರಸ್ತಥಾ ।
ಯಸ್ಯಾಃ ಪಾಣಿತಳೇ ಸಂತಿ ಸೈಷಾ ನಾರ್ಹತಿ ಪದ್ವಧಮ್ ॥೩೦॥

ಯಾವಳ ಹಸ್ತತಳದಲ್ಲಿ ಪದ್ಮ, ಚಕ್ರ, ಧ್ವಜ, ಶಂಖ, ಪ್ರಾಸಾದ ಮತ್ತು ಮಕರದ ಚಿಹ್ನೆಗಳು ಇವೆಯೋ ಅಂತಹ ಇವಳು ಪಾದಘಾತಕ್ಕೆ ಯೋಗ್ಯಳಲ್ಲ.

ಆವರ್ತಾಃ ಖಲು ಚತ್ವಾರಃ ಸರ್ವೇ ಚೈವ ಪ್ರದಕ್ಷಿಣಾಃ ।
ಸಮಂ ಗಾತ್ರಂ ಶುಭಂ ಸ್ನಿಗ್ಧಂ ಇಯಂ ನಾರ್ಹತಿ ಪದ್ವಧಮ್ ॥೩೧॥

ಯಾವಳ ಎಲ್ಲಾ ನಾಲ್ಕು ಸುಳಿಗಳು ಪ್ರದಕ್ಷಿಣಾಕಾರವಾಗಿವೆಯೋ, ಯಾವಳ ಶರೀರವು ಶುಭವಾಗಿಯೂ ಮತ್ತು ಸ್ನೇಹದಿಂದ ಕೂಡಿದವಾಗಿಯೂ ಇವೆಯೋ ಅಂತಹ ಇವಳು ಪಾದಘಾತಕ್ಕೆ ಯೋಗ್ಯಳಲ್ಲ.

ಅಚ್ಛಿದ್ರಹಸ್ತಪಾದಾ ಚ ಹ್ಯಚ್ಛಿದ್ರದಶನಾ ಚ ಯಾ ।
ಕನ್ಯಾ ಕಮಲಪತ್ರಾಕ್ಷೀ ಕಥಮರ್ಹತಿ ಪದ್ವಧಮ್ ॥೩೨॥

ಯಾವಳ ಹಸ್ತಪಾದಗಳ ಬೆರಳುಗಳ ಮಧ್ಯದಲ್ಲಿ ಅಥವಾ ದಂತಗಳ ಮಧ್ಯದಲ್ಲಿ ರಂಧ್ರಗಳಿಲ್ಲವೋ, ಯಾವಳು ಕಮಲಪತ್ರಾಕ್ಷಿಯೋ ಅಂತಹ ಈ ಕನ್ಯೆಯು ಹೇಗೆ ಪಾದಘಾತಕ್ಕೆ ಈಡಾಗುತ್ತಾಳೆ?

ಸರ್ವಲಕ್ಷಣಸಂಪೂರ್ಣಾ ಪೂರ್ಣಚಂದ್ರನಿಭಾನನಾ ।
ಸುರೂಪಿಣೀ ಸುವದನಾ ನೇಯಂ ಯೋಗ್ಯಾ ಪದಾ ವಧಮ್ ॥೩೩॥

ಎಲ್ಲ ಲಕ್ಷಣಗಳಿಂದ ಭರಿತಳಾದವಳೂ, ಪೂರ್ಣಚಂದ್ರನಂತೆ ಮುಖವುಳ್ಳವಳೂ, ಒಳ್ಳೆಯ ಸೌಂದರ್ಯವುಳ್ಳವಳೂ, ಒಳ್ಳೆಯ ಮಾತುಳ್ಳವಳೂ ಆದ ಇವಳು ಪಾದಘಾತಕ್ಕೆ ಯೋಗ್ಯಳಲ್ಲ.

ದೇವದೇವೀವ ಸುಭಗಾ ಶಕ್ರದೇವೀವ ಶೋಭನಾ ।
ಅಪ್ಸರಾ ಇವ ಸಾರೂಪ್ಯಾನ್ನೇಯಂ ಯೋಗ್ಯಾ ಪದಾ ವಧಮ್ ॥೩೪॥

ದೇವತೆಗಳಿಗೆ ದೇವಿಯಂತೆ ಸುಂದರವಾಗಿರುವ, ಶಕ್ರನ ಪತ್ನಿ ಶಚಿಯಂತೆ ಶೋಭನಳಾದ, ಅಪ್ಸರೆಯನ್ನು ಹೋಲುವ ಇವಳು ಪಾದಘಾತಕ್ಕೆ ಯೋಗ್ಯಳಲ್ಲ.

ನ ಹೀದೃಶೀ ಮನುಷ್ಯೇಷು ಸುಲಭಾ ವರವರ್ಣಿನೀ ।
ನಾರೀ ಸರ್ವಾನವದ್ಯಾಂಗೀ ದೇವೀಂ ಮನ್ಯಾಮಹೇ ವಯಮ್ ॥೩೫॥

ಇತಿ ಸ್ಮಾಪೂಜಯಂಸ್ತತ್ರ ಕೃಷ್ಣಾಂ ಪ್ರೇಕ್ಷ್ಯ ಸಭಾಸದಃ ॥೩೬॥

ಇಂತಹ ಸುಂದರಿಯೂ, ಸರ್ವಾನವದ್ಯಾಂಗಿಯೂ ಆದ ನಾರಿಯು ಮನುಷ್ಯರಲ್ಲಿ ಕಾಣಸಿಗುವುದಿಲ್ಲ. ಇವಳನ್ನು ನಾವು ದೇವತೆ ಎಂದು ತಿಳಿಯುತ್ತೇವೆ. ಹೀಗೆ ಸಭಾಸದರು ದ್ರೌಪದಿಯನ್ನು ನೋಡಿ ತಮ್ಮ ಮಾತುಗಳಿಂದ ಅವಳನ್ನು ಪೂಜಿಸಿದರು.

ಸಾ ವಿನಿಃಶ್ವಸ್ಯ ಸುಶ್ರೋಣೀ ಭೂಯೋಽತಪ್ಯತ ದುರ್ಮುಖೀ ।
ತೂಷ್ಣೀಮಾಸೀದ್ ತದಾ ಕೃಷ್ಣಾ ವಿವಕ್ಷಂತಂ ಯುಧಿಷ್ಠಿರಮ್ ॥೩೭॥

ಆ ಸುಂದರಿಯು ನಿಟ್ಟುಸಿರನ್ನು ಬಿಟ್ಟು ಮುಖದ ಮೇಲೆ ದುಃಖದ ಕಳೆಯನ್ನು ಹೊಂದಿ ಮನಸ್ಸಿನಲ್ಲಿಯೇ ತಾಪವನ್ನು ಪಡುತ್ತಾ ಮಾತನಾಡಲು ಉದ್ಯುಕ್ತನಾದ ಯುಧಿಷ್ಠಿರನನ್ನು ನೋಡಿ ಸುಮ್ಮನಾದಳು.

ಯುಧಿಷ್ಠಿರಸ್ಯ ಕೋಪಾತ್ ತು ಲಲಾಟೇ ಸ್ವೇದ ಆಸ್ರವತ್ ॥೩೮॥

ಅಬ್ರವೀತ್ ಧರ್ಮಪುತ್ರೋಽಥ ಸೈರಂಧ್ರೀಂ ಮಹಿಷೀಂ ಪ್ರಿಯಾಮ್ ।
ಕೃಷ್ಣಾಂ ತತ್ರ ನೃಪಾಭ್ಯಾಶೇ ಪರಿವ್ರಾಜಕರೂಪಧೃಕ್ ॥೩೯॥

ಯುಧಿಷ್ಠಿರನಿಗೆ ಕೋಪದಿಂದ ಹಣೆಯಿಂದ ಬೆವರು ಸುರಿಯಿತು. ಸಂನ್ಯಾಸಿಯ ರೂಪವನ್ನು ಧರಿಸಿದ ಧರ್ಮಪುತ್ರನಾದ ಅವನು ತನ್ನ ಪ್ರಿಯಪತ್ನಿಯಾದ ಸೈರಂಧ್ರಿಯ ವೇಷದಲ್ಲಿದ್ದ ದ್ರೌಪದಿಯನ್ನು ನೋಡಿ ರಾಜನ ಸಮೀಪದಲ್ಲಿ ಮಾತನಾಡಿದನು.

ಗಚ್ಛ ಸೈರಂಧ್ರಿ ಮಾ ಭೈಸ್ತ್ವಂ ಸುದೇಷ್ಣಾಯಾ ನಿವೇಶನಮ್ ।
ರಾಜಾ ಹ್ಯಯಂ ಧರ್ಮಶೀಲೋ ವಿರಾಟಃ ಪರಲೋಕಭೀಃ ॥೪೦॥

ಯತಸ್ತಾ ತ್ವಂ ನ ಪರಿತ್ರಾತಿ ಸತ್ಯೇ ಧರ್ಮಪಥೇ ಸ್ಥಿತಃ ॥೪೧॥

ಸೈರಂಧ್ರಿಯೇ, ಹೆದರಬೇಡ. ವಿರಾಟರಾಜನು ಧರ್ಮಶೀಲನಾದರೂ ಪರಲೋಕಭಯವುಳ್ಳವನಾದರೂ, ಸತ್ಯದಲ್ಲಿ ಮತ್ತು ಧರ್ಮದ ಮಾರ್ಗದಲ್ಲಿ ಇದ್ದವನಾದರೂ ನಿನ್ನನ್ನು ರಕ್ಷಿಸುತ್ತಿಲ್ಲ. ಆದ್ದರಿಂದ ಸುದೇಷ್ಣೆಯ ಮನೆಗೆ ಹೋಗು.

ಭರ್ತಾರಸ್ತವ ಪಶ್ಯಂತಿ ಕ್ಲಿಶ್ಯಂತೇ ಧೀರಚೇತಸಃ ।
ಶುಶ್ರೂಷಯಾ ಕ್ಲಿಶ್ಯಮಾನಾಃ ಪರಲೋಕಂ ಜಯಂತ್ಯುತ ॥೪೨॥

ನಿನ್ನ ಪತಿಗಳು ಎಲ್ಲವನ್ನೂ ನೋಡುತ್ತಿದ್ದಾರೆ. ಧೀರಮನಸ್ಸುಳ್ಳ ಅವರು ಕ್ಲೇಶಕ್ಕೆ ಒಳಗಾಗಿದ್ದಾರೆ. ಶುಶ್ರೂಷೆಯಿಂದ ಕ್ಲೇಶಪಡುವವರು ಪರಲೋಕವನ್ನು ಜಯಿಸುತ್ತಾರೆ.

ಮನ್ಯೇ ನ ಕಾಲಃ ಕ್ರೋಧಸ್ಯ ಪಶ್ಯಂತಿ ಪತಯಸ್ತವ ।
ತೇನ ತ್ವಾಂ ನಾಭಿಧಾವಂತಿ ಗಂಧರ್ವಾಃ ಸೂರ್ಯವರ್ಚಸಃ ॥೪೩॥

ನಿನ್ನ ಪತಿಗಳು ಇದು ಕ್ರೋಧದ ಕಾಲವಲ್ಲವೆಂದು ತಿಳಿದಿದ್ದಾರೆಂದು ಭಾವಿಸುತ್ತೇನೆ. ಆದ್ದರಿಂದ ಸೂರ್ಯನ ತೇಜಸ್ಸುಳ್ಳ ನಿನ್ನ ಪತಿಗಳಾದ ಗಂಧರ್ವರು ನಿನ್ನ ಬಳಿಗೆ ಓಡಿಬರುತ್ತಿಲ್ಲ (ಈಗ ಹಗಲಿನ ಕಾಲವಾದ್ದರಿಂದ ಏನಾದರೂ ಮಾಡಿದರೆ ಅಜ್ಞಾತವಾಸದ ಭಂಗವಾಗುತ್ತದೆ. ಆದ್ದರಿಂದ ರಾತ್ರಿಯಲ್ಲಿ ಅವರು ಕಾರ್ಯಾಚರಣೆಯನ್ನು ಮಾಡುತ್ತಾರೆ ಎಂದು ಧ್ವನಿ-ಲಕ್ಷಾಲಂಕಾರ).

ಭರ್ತುರ್ಭೀರು ಭಯಾದನ್ಯಾ ನ ಕ್ರುಧ್ಯಂತಿ ಕದಾಚನ ।
ಬಹುಭಿಶ್ಚ ಪರಿಕ್ಲೇಶೈರವಜ್ಞಾತಾಶ್ಚ ಶತ್ರುಭಿಃ ॥೪೪॥

ಎಲೌ ಭೀರುವೇ, ಶತ್ರುಗಳಿಂದ ಅನೇಕ ಕ್ಲೇಶಗಳಿಗೆ ಮತ್ತು ಅವಮಾನಗಳಿಗೆ ಒಳಗಾದರೂ ಶ್ರೇಷ್ಠರಾದ ಪತ್ನಿಯರು ಪತಿಗೆ ತೊಂದರೆಯಾಗಬಹುದೆಂಬ ಭಯದಿಂದ ಎಂದೂ ಕ್ರೋಧಕ್ಕೆ ಒಳಗಾಗುವುದಿಲ್ಲ.

ಶ್ರೂಯಂತಾಂ ತೇ ಸುಕೇಶಾಂತೇ ಮೋಕ್ಷಧರ್ಮಾಶ್ರಯಾಃ ಕಥಾಃ ।
ಯಥಾ ಧರ್ಮಃ ಕುಲಸ್ತ್ರೀಣಾಂ ದೃಷ್ಟೋ ಧರ್ಮಾನುರೋಧನಾತ್ ॥

ಒಳ್ಳೆಯ ಬೈತಲೆಯುಳ್ಳವಳೇ, ಮೋಕ್ಷಧರ್ಮವನ್ನು ಆಶ್ರಯಿಸಿದ ಕಥೆಗಳನ್ನು ಕೇಳು. ಧರ್ಮಕ್ಕೆ ಅನುಸಾರವಾದ ಕುಲಸ್ತ್ರೀಯರ ಧರ್ಮಗಳನ್ನು ಋಷಿಗಳು ಹೇಗೆ ಹೇಳಿದ್ದಾರೆಯೋ ಅದನ್ನು ಕೇಳು.

ನಾಸ್ತಿ ಯಜ್ಞಃ ಸ್ತ್ರಿಯಃ ಕಶ್ಚಿತ್ ನ ಶ್ರಾದ್ಧಂ ನಾಪ್ಯುಪೋಷಣಮ್ ।
ಯಾ ಚ ಭರ್ತರಿ ಶು(ಶಿ)ಶ್ರೂಷಾ ಸಾ ಸ್ವರ್ಗಾಯಾಭಿಜಾಯತೇ ॥೪೬॥

ಸ್ತ್ರೀಯರಿಗೆ ಯಾವ ಯಜ್ಞವಾಗಲೀ, ಶ್ರಾದ್ಧವಾಗಲೀ ಅಥವಾ ಉಪವಾಸವಾಗಲೀ ವಿಹಿತವಾಗಿಲ್ಲ. ಪತಿಯ ಶುಶ್ರೂಷೆ ಏನಿದೆಯೋ ಅದರಿಂದಲೇ ಅವರು ಸ್ವರ್ಗವನ್ನು ಜಯಿಸುತ್ತಾರೆ.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।
ಪುತ್ರಸ್ತು ಸ್ಥವಿರೇ ಭಾವೇ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥೪೭॥

ಬಾಲ್ಯದಲ್ಲಿ ತಂದೆಯು ರಕ್ಷಿಸುತ್ತಾನೆ, ಯೌವನದಲ್ಲಿ ಪತಿಯು ರಕ್ಷಿಸುತ್ತಾನೆ, ವಾರ್ಧಕ್ಯದಲ್ಲಿ ಪುತ್ರನು ರಕ್ಷಿಸುತ್ತಾನೆ. ಸ್ತ್ರೀಯು ಎಂದೂ ಸ್ವತಂತ್ರವಾಗಿರುವುದಿಲ್ಲ.

ಅನುರುಧ್ಯಮಾನಾ ಭರ್ತಾರಂ ದೃಶ್ಯಂತೇ ವೀರಪತ್ನಯಃ ।
ಶಿ(ಶು)ಶ್ರೂಷಯಾ ಕ್ಲಿಶ್ಯಮಾನಾಃ ಪತಿಲೋಕಂ ಜಯಂತ್ಯುತ ॥೪೮॥

ಅನನ್ಯಭಾವಶುಶ್ರೂಷಾಃ ಪುಣ್ಯಲೋಕಂ ವ್ರಜಂತ್ಯುತ ॥೪೯॥

ವೀರಪತ್ನಿಯರು ಪತಿಗಳನ್ನು ಅನುಸರಿಸಿ ನಡೆಯುವುದು ಕಂಡುಬರುತ್ತದೆ. ಕಷ್ಟಪಟ್ಟು ಅನನ್ಯಭಾವದಿಂದ ಪತಿಸೇವೆಯನ್ನು ಮಾಡಿ ಪತಿಲೋಕವಾದ ಪುಣ್ಯಲೋಕಗಳನ್ನು ಅವರು ಪಡೆಯುತ್ತಾರೆ.

ನ ಕ್ರೋಧಕಾಲಂ ನಿಯತಂ ಪಶ್ಯಂತಿ ಪತಯಸ್ತವ ।
ನ ಕ್ರುದ್ಧೇ ಪ್ರತಿಯಾಯಾದ್ವೈ ಪತೀಂಸ್ತೇ ವೃತ್ರಹಾ ಅಪಿ ॥೫೦॥

ತೇನ ತ್ವಾಂ ನಾಭಿಧಾವಂತಿ ಗಂಧರ್ವಾಃ ಕಾಮರೂಪಿಣಃ ॥೫೧॥

ನಿಶ್ಚಯವಾಗಿ ನಿನ್ನ ಪತಿಗಳು ಇದು ಕ್ರೋಧಕಾಲವೆಂದು ಭಾವಿಸಿಲ್ಲ. ಆದ್ದರಿಂದ ಕೀಚಕನ ಮೇಲೆ ಎರಗುತ್ತಿಲ್ಲ. ನಿನ್ನ ಪತಿಗಳು ಕ್ರುದ್ಧರಾದರೆ ವೃತ್ರಹಂತಕನಾದ ಇಂದ್ರನೂ ಸಹ ಅವರ ಎದುರಿಗೆ ಬರಲಾರ. ಆ ಕಾರಣದಿಂದ ಕಾಮರೂಪಿಗಳಾದ ನಿನ್ನ ಪತಿಗಳಾದ ಗಂಧರ್ವರು ನಿನ್ನ ಬಳಿಗೆ ಓಡಿಬರುತ್ತಿಲ್ಲ.

ಯದಿ ತೇ ಸಮಯಃ ಕಶ್ಚಿತ್ ಕೃತೋ ಹ್ಯಾಯತಲೋಚನೇ ।
ತಂ ಸ್ಮರಸ್ವ ಕ್ಷಮಾಶೀಲೇ ಕ್ಷಮಾ ಧರ್ಮೋ ಹ್ಯನುತ್ತಮಃ ॥೫೨॥

ವಿಶಾಲಾಕ್ಷಿಯೇ, ನೀನು ಹಿಂದೆ ಏನಾದರೂ ಪ್ರತಿಜ್ಞೆಯನ್ನು ಮಾಡಿದ್ದರೆ ಅದನ್ನು ಸ್ಮರಿಸಿಕೊ. ಕ್ಷಮಾಶೀಲಳೇ, ಕ್ಷಮೆಯು ಶ್ರೇಷ್ಠವಾದ ಧರ್ಮ.

ಕ್ಷಮಾ ಸತ್ಯಂ ಕ್ಷಮಾ ದಾನಂ ಕ್ಷಮಾ ಧರ್ಮಃ ಕ್ಷಮಾ ತಪಃ ।
ಕ್ಷಮಾವತಾಮಯಂ ಲೋಕಃ ಪರಲೋಕಃ ಕ್ಷಮಾವತಾಮ್ ॥೫೩॥

ಕ್ಷಮೆಯೇ ಸತ್ಯ , ಕ್ಷಮೆಯೇ ದಾನ, ಕ್ಷಮೆಯೇ ಧರ್ಮ, ಕ್ಷಮೆಯೇ ತಪಸ್ಸು. ಕ್ಷಮೆ ಉಳ್ಳವರಿಗೆ ಈ ಲೋಕವೂ ಇದೆ. ಪರಲೋಕವೂ ಇದೆ.

ವೈಶಂಪಾಯನಃ

ಇತ್ಯೇವಮುಕ್ತೇ ತಿಷ್ಠಂತೀಂ ಪುನರೇವಾಹ ಧರ್ಮರಾಟ್ ॥೫೪॥

ದುಃಖಂ ರೋದಿಷಿ ವೈ ಭದ್ರೇ ದೀನಾ ತ್ವಂ ರಾಜಸಂಸದಿ ।
ತಸ್ಮಾತ್ ತ್ವಮಪಿ ಸುಶ್ರೋಣಿ ಶೈಲೂಷೀವ ವಿಭಾಸಿ ನಃ ॥೫೫॥

ಹೀಗೆ ಹೇಳಿದರೂ ಇನ್ನೂ ಅಲ್ಲಿಯೇ ನಿಂತಿರುವ ದ್ರೌಪದಿಯನ್ನು ನೋಡಿ ಧರ್ಮರಾಜನು, ಮಂಗಳಸ್ವರೂಪಳೇ, ನೀನು ದೀನಳಾಗಿ ರಾಜಸಭೆಯಲ್ಲಿ ದುಃಖವುಂಟಾಗುವಂತೆ ಅಳುತ್ತಿದ್ದೀಯೆ. ಆದ್ದರಿಂದ ಸುಂದರಿಯೇ, ನೀನೂ ಸಹ ನನಗೆ ಒಬ್ಬ ನಟಿಯಂತೆ ತೋರುತ್ತಿದ್ದೀಯೆ.

ಏವಮುಕ್ತಾ ತು ಸಾ ಭರ್ತ್ರಾ ಸಮುದ್ವೀಕ್ಷ್ಯಾಬ್ರವೀದಿದಮ್ ॥೫೬॥

ಸತ್ಯಮುಕ್ತಂ ತ್ವಯಾ ವಿದ್ವನ್ ಶೈಲೂಷಂ ವಿದ್ಧಿ ಮಾಂ ಪುನಃ ।
ಶೈಲೂಷಕಸ್ಯ ತಸ್ಯಾಹಂ ಯೇಷಾಂ ಜ್ಯೇಷ್ಠೋऽಕ್ಷಕೋವಿದಃ ॥೫೭॥

ಹೀಗೆ ಹೇಳಲ್ಪಟ್ಟ ದ್ರೌಪದಿಯು ಪತಿಯನ್ನು ನೋಡುತ್ತಾ ವಿದ್ವಾಂಸನೇ, ನೀನು ಸತ್ಯವನ್ನು ನುಡಿದಿದ್ದೀಯೆ. ನನ್ನನ್ನು ಶೈಲೂಷಳೆಂದು (ಬಿಲ್ವಫಲವೆಂದು) ತಿಳಿ. ನಾನು ಯಾರ ಹಿರಿಯಣ್ಣನು ಅಕ್ಷಕೋವಿದನಾಗಿ ಶೈಲೂಷನಾಗಿದ್ದಾನೆಯೋ ಅಂತಹವನ ಪತ್ನಿಯಾಗಿ ಶೈಲೂಷಿಯಷ್ಟೆ. (ಶೈಲೂಷ ಎಂದರೆ ನಟ ಮತ್ತು ಬಿಲ್ವಫಲ ಎಂದು ಎರಡರ್ಥವಿದೆ. ಬಿಲ್ವಫಲವು ಸಜ್ಜನರಿಗೆ ಅಯೋಗ್ಯವಾದುದರಿಂದ ನಾನು ನಿನಗೆ ಉಪಕಾರವನ್ನು ಮಾಡುವ ಸ್ಥಿತಿಯಲ್ಲಿಲ್ಲ ಎಂದು ದ್ರೌಪದಿಯ ಒಳಗಿನ ಅಭಿಪ್ರಾಯ-ಲಕ್ಷಾಲಂಕಾರ).

ಏವಮುಕ್ತ್ವಾ ವರಾರೋಹಾ ಪರಿಮೃಜ್ಯಾನನಂ ಶುಭಮ್ ।
ಕೇಶಾನ್ ಪ್ರಮುಕ್ತಾನ್ ಸಂಯಮ್ಯ ರುಧಿರೇಣ ಸಮುಕ್ಷಿತಾನ್ ॥೫೮॥

ಪಾಂಸುಕುಂಠಿತಸರ್ವಾಂಗೀ ಗಜರಾಜವಧೂರಿವ ।
ಪ್ರತಸ್ಥೇ ನಾಗನಾಸೋರೂ ಭರ್ತುರಾಜ್ಞಾಯ ಶಾಸನಮ್ ॥೫೯॥

ಆ ಸುಂದರಿಯು ಹೀಗೆ ಹೇಳಿ ತನ್ನ ಶುಭವಾದ ಮುಖವನ್ನು ಒರೆಸಿಕೊಂಡು ರಕ್ತದಿಂದ ತೊಯ್ದಿದ್ದ ತನ್ನ ಕೂದಲುಗಳನ್ನು ಗಂಟುಕಟ್ಟಿ ಮೈಯೆಲ್ಲಾ ಧೂಳಿನಿಂದ ತುಂಬಿದವಳಾಗಿ ಗಜರಾಜ ವಧುವಿನಂತಿದ್ದ ಸುಂದರವಾದ ನಾಸಿಕವುಳ್ಳ ಅವಳು ಪತಿಯ ಆಜ್ಞೆಯನ್ನು ತಿಳಿದು ಅಲ್ಲಿಂದ ಹೊರಟಳು.

ಏಮುಕ್ತಾ ಮೃಗಶಾಬಾಕ್ಷೀ ನಿರಂತರಪಯೋಧರಾ ।
ಪ್ರಭಾ ನಕ್ಷತ್ರರಾಜಸ್ಯ ಕಾಲಮೇಘೈರಿವಾವೃತಾ ॥೬೦॥

ಏಣಾಕ್ಷಿಯೂ, ನಿರಂತರವಾದ ಸ್ತನವುಳ್ಳವಳೂ ಆದ ಅವಳು ಕಾಲಮೇಘಗಳಿಂದ ಆವೃತವಾದ ಚಂದ್ರನ ಪ್ರಭೆಯಂತೆ ಆ ಸಭೆಯಿಂದ ಹೊರಟಳು.

ಯಸ್ಯಾ ಹ್ಯರ್ಥೇ ಪಾಂಡವೇಯಾಃ ತ್ಯಜೇಯುರಪಿ ಜೀವಿತಮ್ ।
ತಾಂ ತೇ ದೃಷ್ಟ್ವಾ ತಥಾ ಕೃಷ್ಣಾಂ ಕ್ಷಮಿಣೋ ಧರ್ಮಚಾರಿಣಃ ॥೬೧॥
ಸಮಯಂ ನಾತಿವರ್ತಂತೇ ವೇಲಾಮಿವ ಮಹೋದಧಿಃ ॥೬೨॥

ಯಾರ ಸಲುವಾಗಿ ಪಾಂಡುಪುತ್ರರು ತಮ್ಮ ಪ್ರಾಣವನ್ನೂ ಕೊಡುತ್ತಾರೆಯೋ ಅಂತಹ ಆ ದ್ರೌಪದಿಯನ್ನು ನೋಡಿ ಧರ್ಮಚಾರಿಗಳಾದ ಅವರು ಕ್ಷಮೆಯನ್ನು ತಾಳಿದರು. ಸಮುದ್ರವು ದಡವನ್ನು ಮೀರದಂತೆ ಅವರು ತಮ್ಮ ಪ್ರತಿಜ್ಞೆಯನ್ನು ಮೀರಲಿಲ್ಲ.

ಸಾ ಪ್ರವಿಶ್ಯ ಪ್ರವೇಪಂತೀ ಸುದೇಷ್ಣಾಯಾ ನಿವೇಶನಮ್ ।
ರುದತೀ ಚಾರುತನ್ವಂಗೀ ತಸ್ಯಾಸ್ತಸ್ಥಾವಥಾಗ್ರತಃ ॥೬೩॥

ಸುಂದರಿಯೂ, ಕೃಶಾಂಗಿಯೂ ಆದ ಅವಳು ಅಳುತ್ತಾ ಮತ್ತು ನಡುಗುತ್ತಾ ಸುದೇಷ್ಣೆಯ ಮನೆಯನ್ನು ತಲುಪಿ ಅವಳ ಎದುರಿಗೆ ನಿಂತಳು.

ತಮುವಾಚ ವಿರಾಟಸ್ಯ ಮಹಿಷೀ ಶಾಠ್ಯಮಾಸ್ಥಿತಾ ॥೬೪॥

ಕಿಮಿದಂ ಪದ್ಮಸಂಕಾಶಂ ಸುದಂತೋಷ್ಠಾಕ್ಷಿನಾಸಿಕಮ್ ।
ರುದಂತ್ಯಾ ಅವಮೃಷ್ಟಾಸ್ರಂ ಪೂರ್ಣೇಂದುಸಮವರ್ಚಸಮ್ ॥೬೫॥

ಬಿಂಬೋಷ್ಠಂ ಕೃಷ್ಣತಾರಾಭ್ಯಾಮತ್ಯಂತಂ ರುಚಿರಪ್ರಭಮ್ ।
ನಯನಾಭ್ಯಾಮಜಿಹ್ಮಾಭ್ಯಾಂ ಮುಖಂ ತೇ ಮುಂಚತೇ ಜಲಮ್ ॥

ವಿರಾಟನ ಮಹಿಷಿಯಾದ ಸುದೇಷ್ಣೆಯು ಶಾಠ್ಯವನ್ನು ಅವಲಂಬಿಸಿ ಅವಳನ್ನು ಕುರಿತು, ಇದೇನು ಪದ್ಮದಂತಿರುವ ಒಳ್ಳೆಯ ದಂತ, ತುಟಿ, ಅಕ್ಷಿ ಮತ್ತು ನಾಸಿಕಗಳಿರುವ, ಪೂರ್ಣಚಂದ್ರನಿಗೆ ಸಮಾನವಾದ ಕಾಂತಿಯುಳ್ಳ ನಿನ್ನ ಮುಖವು ಅಳುತ್ತಾ ಕಣ್ಣೀರನ್ನು ಸುರಿಸುತ್ತಿದೆ? ತೊಂಡೆಹಣ್ಣಿನಂತಿರುವ ತುಟಿಗಳನ್ನು ಹೊಂದಿರುವ, ಕಪ್ಪಾದ, ಸುಂದರವಾದ ನೇರವಾದ ನಯನಗಳನ್ನು ಹೊಂದಿರುವ ಸುಂದರವಾದ ನಿನ್ನ ಮುಖವು ಕಣ್ಣೀರನ್ನು ಸುರಿಸುತ್ತಿದೆ? ಎಂದು ಕೇಳಿದಳು.

ಕಸ್ತ್ವಾವಧೀದ್ ವರಾರೋಹೇ ಕಸ್ಮಾದ್ ರೋದಿಷಿ ಶೋಭನೇ ।
ಕೋ ವಿಪ್ರಯುಜ್ಯತೇ ದಾರೈಃ ಸಪುತ್ರಪಶುಬಾಂಧವಃ ॥೬೭॥

ಸುಂದರಿಯೇ, ಯಾರು ನಿನಗೆ ಹೊಡೆದರು? ಶೋಭನಳೇ, ಏಕೆ ಅಳುತ್ತಿದ್ದೀಯೆ? ಈ ದಿನ ಯಾರು ಪತ್ನಿ, ಪುತ್ರ, ಪಶು ಬಾಂಧವರಿಂದ ವಿಯೋಗವನ್ನು ಹೊಂದಬೇಕು?

ಕಸ್ಯಾದ್ಯ ರಾಜಾ ಕುಪಿತೋ ವಧಮಾಜ್ಞಾಪಯಿಷ್ಯತಿ ।
ಬ್ರೂಹಿ ಕಿಂ ತೇ ಪ್ರಿಯಂ ಕಾರ್ಯಂ ಕಂ ತ್ಯಜೇ ಘಾತಯಾಮಿ ವಾ ॥

ಈ ದಿನ ರಾಜನು ಕೋಪಗೊಂಡು ಯಾರಿಗೆ ವಧೆಯ ಆಜ್ಞೆಯನ್ನು ನೀಡಬೇಕು? ನಿನಗೆ ಯಾವುದು ಪ್ರಿಯವಾದ ಕಾರ್ಯ ಎಂದು ಹೇಳು. ಯಾರನ್ನು ಪರಿತ್ಯಾಗ ಮಾಡಲಿ? ಅಥವಾ ಯಾರನ್ನು ವಧೆ ಮಾಡಿಸಲಿ?

ವೈಶಂಪಾಯನಃ

ತಾಂ ನಿಃಶ್ವಸ್ಯಾಬ್ರವೀತ್ ಕೃಷ್ಣಾಽಜಾನಂತೀವ ಪೃಚ್ಛಸೇ ।
ಭ್ರಾತುಸ್ತ್ವಂ ಮಾಮನುಪ್ರೇಷ್ಯ ಕಿಮೇವಂ ತ್ವಂ ವಿಕತ್ಥಸೇ ॥೬೯॥

ವೈಶಂಪಾಯನ– ದ್ರೌಪದಿಯು ನಿಟ್ಟುಸಿರನ್ನು ಬಿಟ್ಟು ಅವಳನ್ನು ಕುರಿತು ಏನೂ ತಿಳಿಯದವಳಂತೆ ನನ್ನನ್ನು ಕೇಳುತ್ತಿದ್ದೀಯೆ. ನಿನ್ನ ತಮ್ಮನ ಬಳಿಗೆ ನೀನೇ ನನ್ನನ್ನು ಕಳುಹಿಸಿ ಏಕೆ ಬಾಯಿಗೆ ಬಂದಂತೆ ಮಾತನಾಡುತ್ತಿದ್ದೀಯೆ ಎಂದು ಕೇಳಿದಳು.

ಕೀಚಕೋ ಮಾಽವಧೀತ್ ತತ್ರ ಸುರಾಹಾರೀಮಿತೋ ಗತಾಮ್ ।
ಸಭಾಯಾಂ ಪಶ್ಯತೋ ರಾಜ್ಞೋ ಯಥಾ ವೈ ನಿರ್ಜನೇ ವನೇ ॥೭೦॥

ಸುರೆಯನ್ನು ತರಲು ಇಲ್ಲಿಂದ ಅಲ್ಲಿಗೆ ಹೋದ ನನ್ನನ್ನು ರಾಜನು ನೋಡುತ್ತಿರುವಂತೆಯೇ ನಿರ್ಜನವಾದ ವನದಲ್ಲಿ ಹೇಗೋ ಹಾಗೆ ಕೀಚಕನು ನನ್ನನ್ನು ಒದ್ದನು.

ಸುದೇಷ್ಣಾ

ಘಾತಯಾಮಿ ಸುದಂತೋಷ್ಣಿ ಕೀಚಕಂ ಯದಿ ಮನ್ಯಸೇ ॥೭೧॥

ಭ್ರಾತಾ ಯದ್ಯಪಿ ಮೇ ವ್ಯಕ್ತಂ ಯತಸ್ತ್ವಂ ಧರ್ಮಚಾರಿಣೀ ।
ಯಸ್ತ್ವಾಂ ಕಾಮಾಭಿಭೂತಾತ್ಮಾ ದುರ್ಲಭಾಮವಮನ್ಯತೇ ॥೭೨॥

ಸುಂದರವಾದ ದಂತೋಷ್ಣವುಳ್ಳವಳೇ, ನಿನಗೆ ಅಭಿಪ್ರಾಯವಿದ್ದರೆ ನಾನು ಕೀಚಕನನ್ನು ಕೊಲ್ಲಿಸುತ್ತೇನೆ. ಯದ್ಯಪಿ ಅವನು ನನಗೆ ತಮ್ಮ. ಆದರೂ ನೀನು ಸ್ಪಷ್ಟವಾಗಿ ಧರ್ಮವನ್ನು ಆಚರಿಸುವವಳು. ಅವನು ಕಾಮದಿಂದ ತುಂಬಿದ ಮನಸ್ಸುಳ್ಳವನಾಗಿ

ದುರ್ಲಭಳಾದ ನಿನ್ನನ್ನು ಅವಮಾನ ಮಾಡುವುದರಿಂದ ತಮ್ಮನಾದರೂ ಅವನನ್ನು ಕೊಲ್ಲಿಸುತ್ತೇನೆ.

ದ್ರೌಪದೀ

ಅದ್ಯೈವ ತಂ ಹನಿಷ್ಯಂತಿ ವಿಪ್ರಕರ್ತಾರಮಚ್ಯುತಾಃ ।
ಮನ್ಯೇಹಮದ್ಯ ವಾ ಶ್ವೋ ವಾ ಪರಲೋಕಂ ಗಮಿಷ್ಯತಿ ॥೭೩॥

ದ್ರೌಪದೀ– ಗುಣಗಳಿಂದ ಚ್ಯುತರಾಗದ ನನ್ನ ಪತಿಗಳು ಈ ದಿನವೇ ಪ್ರತೀಕಾರವನ್ನು ಮಾಡಿ ಅವನನ್ನು ಕೊಲ್ಲುವರು. ಈ ದಿನ ಅಥವಾ ನಾಳೆ ಅವನು ಪರಲೋಕಕ್ಕೆ ಹೋಗುವನೆಂದು ನಾನು ಭಾವಿಸಿದ್ದೇನೆ.

ಭ್ರಾತುಃ ಪ್ರಯಚ್ಛ ತ್ವರಿತಂ ಜೀವಶ್ರಾದ್ಧಂ ತ್ವಮದ್ಯ ವೈ ।
ಸುಹೃಷ್ಟಂ ಕುರು ಚೈವೈನಂ ನಾಸೂನ್ ಮನ್ಯೇ ಧರಿಷ್ಯತಿ ॥೭೪॥

ಈ ದಿನವೇ ನೀನು ನಿನ್ನ ತಮ್ಮನಿಗೆ ಶೀಘ್ರವಾಗಿ ಜೀವಶ್ರಾದ್ಧವನ್ನು ಮಾಡು. ಅವನನ್ನು ಸಂತೋಷವಾಗಿಡು. ಅವನು ಬದುಕುವುದಿಲ್ಲವೆಂದು ನಾನು ತಿಳಿದಿದ್ದೇನೆ.

ತೇಷಾಂ ಹಿ ಮಮ ಭರ್ತೃಣಾಂ ಪಂಚಾನಾಂ ಧರ್ಮಚಾರಿಣಾಮ್ ।
ಏಕೋ ದುರ್ಧರ್ಷಣೋಽತ್ಯರ್ಥಂ ಬಲೇ ಚಾಪ್ರತಿಮೋ ಭುವಿ ॥೭೫॥

ನನ್ನ ಪತಿಗಳಾದ ಧರ್ಮಚಾರಿಗಳಾದ ಐವರಲ್ಲಿ ಒಬ್ಬನು ಯಾರಿಂದಲೂ ಸೋಲಿಸಲ್ಪಡದವನು. ಬಲದಲ್ಲಿ ಅವನು ಭೂಮಿಯಲ್ಲಿ ಅಸದೃಶನಾದವನು.

ನಿರ್ಮನುಷ್ಯಮಿಮಂ ಲೋಕಂ ಕುರ್ಯಾತ್ ಕ್ರುದ್ಧೋ ನಿಶಾಮಿಮಾಮ್
ಸ ನ ಸಂಕ್ರುದ್ಧ್ಯತೇ ತಾವದ್ ಗಂಧರ್ವಃ ಕಾಮರೂಪಧೃಕ್ ॥೭೬॥

ಅವನು ಕೋಪಗೊಂಡರೆ ಈ ರಾತ್ರಿಯೇ ಈ ಲೋಕವನ್ನು ನಿರ್ಮನುಷ್ಯನನ್ನಾಗಿ ಮಾಡಿಯಾನು. ಕಾಮರೂಪಿಯಾದ ಗಂಧರ್ವನಾದ ಅವನು ಸದ್ಯಕ್ಕೆ ಕೋಪಗೊಂಡಿಲ್ಲ (ರಾತ್ರಿಯಾಗುವವರೆಗೆ ತನ್ನ ಕೋಪವನ್ನು ವ್ಯಕ್ತಗೊಳಿಸುವುದಿಲ್ಲ ಎಂದು ಧ್ವನಿ-ಲಕ್ಷಾಲಂಕಾರ).

ನೂನಂ ಜ್ಞಾಸ್ಯತಿ ಯಾವದ್ವೈ ಮಮೈತತ್ ಪಾದಘಾತನಮ್ ॥೭೭॥

ತತ್‌ಕ್ಷಣೇ ಕೀಚಕಃ ಪಾಪಃ ಸಪುತ್ರಭ್ರಾತೃಬಾಂಧವಃ ।
ವಿನಶಿಷ್ಯತಿ ದುಷ್ಟಾತ್ಮಾ ಯಥಾ ದುಷ್ಕೃತಕರ್ಮಕೃತ್ ॥೭೮॥

ಅವನು ಕೀಚಕನು ನನ್ನನ್ನು ಒದ್ದ ವಿಷಯವನ್ನು ತಿಳಿದ ತಕ್ಷಣವೇ ಪಾಪಿಯೂ ದುರಾತ್ಮನೂ ಮತ್ತು ದುಷ್ಕಾರ್ಯವನ್ನು ಮಾಡುವವನೂ ಆದ ಕೀಚಕನು ಪುತ್ರ ಭ್ರಾತೃಬಾಂಧವರ ಜೊತೆಯಲ್ಲಿ ವಿನಾಶವನ್ನು ಹೊಂದುವನು.

ಅಪಿ ಚೈತತ್ ಪುರಾ ಪ್ರೋಕ್ತಂ ನಿಪುಣೈರ್ಮನುಜೋತ್ತಮೈಃ ॥೭೯॥

ಏಕಸ್ತು ಕುರುತೇ ಪಾಪಂ ಕಾಲಪಾಶವಶಂ ಗತಃ ।
ನೀಚೋ ಹ್ಯಾತ್ಮಾಪರಾಧೇನ ಕುಲಂ ತೇನ ವಿನಶ್ಯತಿ ॥೮೦॥

ನಿಪುಣರಾದ ಮನುಷ್ಯಶ್ರೇಷ್ಠರು ಇದನ್ನು ಹಿಂದೆಯೇ ಹೇಳಿದ್ದಾರಷ್ಟೆ? ಕಾಲಪಾಶವಶನಾದ ನೀಚನಾದ ಒಬ್ಬನು ಪಾಪವನ್ನು ಮಾಡುತ್ತಾನೆ. ಅವನು ಮಾಡಿದ ಅಪರಾಧದಿಂದ ಅವನ ಕುಲವೇ ನಾಶವನ್ನು ಹೊಂದುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ವಿಂಶೋಽಧ್ಯಾಯಃ ॥

॥ ಕೀಚಕವಧಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ಕೀಚಕನ ಜನ್ಮಾದಿಕಥನ

ವೈಶಂಪಾಯನಃ

ಸುದೇಷ್ಣಾಮೇವಮುಕ್ತ್ವಾ ತು ಸೈರಂಧ್ರೀ ದುಃಖಮೋಹಿತಾ ।
ಕೀಚಕಸ್ಯ ವಧಾರ್ಥಾಯ ವ್ರತದೀಕ್ಷಾಮುಪಾಗಮತ್ ॥೧॥

ವೈಶಂಪಾಯನ– ಸೈರಂಧ್ರಿಯು ದುಃಖಮೋಹಿತಳಾಗಿ ಸುದೇಷ್ಣೆಯನ್ನು ಕುರಿತು ಹೀಗೆ ಮಾತನಾಡಿ ಕೀಚಕನ ವಧೆಗಾಗಿ ವ್ರತದೀಕ್ಷೆಯನ್ನು ತೊಟ್ಟಳು.

ಅಭ್ಯರ್ಥಿತಾ ಚ ನಾರೀಭಿರ್ಮಾನಿತಾ ಚ ಸುದೇಷ್ಣಯಾ ।
ನ ಚ ಸ್ನಾತಿ ನ ಚಾಶ್ನಾತಿ ನ ಪಾಂಸೂನ್ ಪರಿಮಾರ್ಜತಿ ॥೨॥

ರುಧಿರಕ್ಲಿನ್ನವದನಾ ಬಭೂವ ರುದಿತೇಕ್ಷಣಾ ॥೩॥

ಬೇರೆ ಸ್ತ್ರೀಯರಿಂದ ಆರ್ಥಿತಳಾದರೂ ಸುದೇಷ್ಣೆಯಿಂದ ಸಮ್ಮಾನಿತಳಾದರೂ ಅವಳು ಸ್ನಾನವನ್ನು ಮಾಡಲಿಲ್ಲ. ಆಹಾರವನ್ನು ಸೇವಿಸಲಿಲ್ಲ. ಮೈಮೇಲಿನ ಧೂಳನ್ನು ಒರೆಸಿಕೊಳ್ಳಲಿಲ್ಲ. ರಕ್ತದಿಂದ ತೊಯ್ದ ಮುಖವುಳ್ಳವಳಾಗಿ ಅಳುತ್ತಾ ಕುಳಿತಳು.

ತಾಂ ತಥಾ ಶೋಕಸಂತಪ್ತಾಂ ದೃಷ್ಟ್ವಾ ಪ್ರರುದಿತಾಂ ಸ್ತ್ರಿಯಃ ।
ಕೀಚಕಸ್ಯ ವಧಂ ಸರ್ವಾ ಮನೋಭಿಶ್ಚ ಶಶಂಸಿರೇ ॥೪॥

ಹಾಗೆ ಅವಳು ಶೋಕಸಂತಪ್ತಳಾಗಿ ಅಳುತ್ತಿರುವುದನ್ನು ನೋಡಿದ ಎಲ್ಲಾ ಸ್ತ್ರೀಯರು ಕೀಚಕನ ವಧೆಯನ್ನು ಮನಸ್ಸಿನಲ್ಲಿಯೇ ಆಶಿಸಿ ಪ್ರಶಂಸಿಸಿದರು.

ಜನಮೇಜಯಃ

ಅಹೋ ದುಃಖತರಂ ಪ್ರಾಪ್ತಾ ಕೀಚಕೇನ ಪದಾ ಹತಾ ।
ಪತಿವ್ರತಾ ಮಹಾಭಾಗಾ ದ್ರೌಪದೀ ಯೋಷಿತಾಂ ವರಾ ॥೫॥

ಜನಮೇಜಯ– ಅಯ್ಯೋ ಮಹಾನುಭಾವಳೂ, ಪತಿವ್ರತೆಯೂ, ಸ್ತ್ರೀಯರಲ್ಲಿ ಶ್ರೇಷ್ಠಳೂ ಆದ ದ್ರೌಪದಿಯು ಕೀಚಕನಿಂದ ಒದೆಯಲ್ಪಟ್ಟಳು.

ದುಃಶಲಾಂ ಮಾನಯಂತೀ ಯಾ ಭರ್ತೄಣಾಂ ಭಗಿನೀಂ ಶುಭಾಮ್ ।
ನಾಶಪತ್ ಸಿಂಧುರಾಜಂ ತಂ ಬಲಾತ್ಕಾರೇಣ ವಾಹಿತಾ ॥೬॥

ಕಿಮರ್ಥಂ ಧರ್ಷಣಂ ಪ್ರಾಪ್ತಾ ಕೀಚಕೇನ ದುರಾತ್ಮನಾ ।
ನಾಶಪತ್ ತಂ ಮಹಾಭಾಗಾ ಕೃಷ್ಣಾ ಪಾದೇನ ತಾಡಿತಾ ॥೭॥

ತನ್ನ ಪತಿಗಳ ತಂಗಿಯಾದ ದುಃಶಲೆಗೆ ಮಾನವನ್ನು ಕೊಟ್ಟು ಸಿಂಧುರಾಜನು ಅವಳನ್ನು ಬಲಾತ್ಕಾರದಿಂದ ಎಳೆದುಕೊಂಡು ಹೋದಾಗ ಯಾವಳು ಶಾಪವನ್ನು

ಕೊಡಲಿಲ್ಲವೋ,ಅಂತಹ ಮಹಾನುಭಾವಳಾದ ದ್ರೌಪದಿಯು ದುರಾತ್ಮನಾದ ಕೀಚಕನಿಂದ ಕಾಲಿನಿಂದ ಒದೆಯಲ್ಪಟ್ಟಾಗ ಏಕೆ ಶಾಪವನ್ನು ಕೊಡಲಿಲ್ಲ?

ತೇಜೋರಾಶಿರಿಯಂ ದೇವೀ ಧರ್ಮಜ್ಞಾ ಸತ್ಯವಾದಿನೀ ।
ಕೇಶಪಕ್ಷೇ ಪರಾಮೃಷ್ಟಾ ಮರ್ಷಯಿಷ್ಯತ್ಯಶಕ್ತವತ್ ॥೮॥

ಧರ್ಮಜ್ಞಳೂ, ಸತ್ಯವಂತಳೂ ಆದ ಆ ದೇವಿಯು ತೇಜೋರಾಶಿ ಇದ್ದಂತೆ. ತಲೆಯ ಕೂದಲನ್ನು ಹಿಡಿದು ಎಳೆದಾಗಲೂ ಅಶಕ್ತಳಂತೆ ಸಹಿಸುವಳಷ್ಟೆ!

ನೈತತ್ಕಾರಣಮಲ್ಪಂ ಹಿ ಶ್ರೋತುಕಾಮೋಽಸ್ಮಿ ಸತ್ತಮ ।
ಕೃಷ್ಣಾಯಾಸ್ತು ಪರಿಕ್ಲೇಶಾನ್ಮನೋ ಮೇ ದೂಯತೇ ಭೃಶಮ್ ॥೯॥

ಸಜ್ಜನರಲ್ಲಿ ಶ್ರೇಷ್ಠನಾದವನೇ, ಇದಕ್ಕೆ ಅಲ್ಪವಾದ ಕಾರಣವು ಇರಲಾರದು. ಆ ಕಾರಣವನ್ನು ಕೇಳಲು ಬಯಸುತ್ತೇನೆ. ದ್ರೌಪದಿಗೆ ಒದಗಿದ ಕ್ಲೇಶವನ್ನು ಕೇಳಿ ನನ್ನ ಮನಸ್ಸು ದುಃಖದಿಂದ ತುಂಬುತ್ತಿದೆ.

ಕಸ್ಯ ವಂಶೇ ಸಮುದ್ಭೂತಃ ಸ ಚ ದುರ್ವಲಿತೋ ಮುನೇ ।
ಬಲೋನ್ಮತ್ತಃ ಕಥಂ ಚಾಸೀತ್ ಸ್ಯಾಲೋ ಮಾತ್ಸ್ಯಸ್ಯ ಕೀಚಕಃ ॥೧೦॥

ಎಲೈ ಋಷಿಗಳೇ, ದುಷ್ಟನಡತೆಯುಳ್ಳ ಅವನು ಯಾವ ವಂಶದಲ್ಲಿ ಹುಟ್ಟಿದವನು? ವಿರಾಟನ ಭಾವಮೈದುನನಾದ ಆ ಕೀಚಕನು ಹೇಗೆ ಬಲೋನ್ಮತ್ತನಾದನು?

ದೃಷ್ಟ್ವಾಽಪಿ ತಾಂ ಪ್ರಿಯಾಂ ಭಾರ್ಯಾಂ ಸೂತಪುತ್ರೇಣ ತಾಡಿತಾಮ್ ।
ನೈವ ಚುಕ್ಷುಭಿರೇ ವೀರಾಃ ಕಿಮಕುರ್ವತ ತಂ ಪ್ರತಿ ॥೧೧॥

ವೀರರಾದ ಅವಳ ಪತಿಗಳು ತಮ್ಮ ಭಾರ್ಯೆಯು ಸೂತಪುತ್ರನಾದ ಕೀಚಕನಿಂದ ಒದೆಯಲ್ಪಟ್ಟರೂ ಕ್ಷೋಭೆಯನ್ನು ಹೊಂದಲಿಲ್ಲ. ಅವರು ಅವನಿಗೆ ಏನನ್ನು ಮಾಡಿದರು?

ವೈಶಂಪಾಯನಃ

ತ್ವದುಕ್ತೋಽಯಮನುಪ್ರಶ್ನಃ ಕುರೂಣಾಂ ಕೀರ್ತಿವರ್ಧನ ।
ಏತತ್ ಸರ್ವಂ ಯಥಾ ವಕ್ಷ್ಯೇ ವಿಸ್ತರೇಣೈವ ಪಾರ್ಥಿವ ॥೧೨॥

ವೈಶಂಪಾಯನ– ಕುರುವಂಶದ ಕೀರ್ತಿವರ್ಧನನಾದ ಎಲೈ ರಾಜನೇ, ನಿನ್ನ ಪ್ರಶ್ನೆಗೆ ಉತ್ತರವಾಗಿ ನಾನು ವಿಸ್ತಾರವಾಗಿ ಎಲ್ಲವನ್ನೂ ಹೇಳುವೆನು.

ಬ್ರಾಹ್ಮಣ್ಯಾಂ ಕ್ಷತ್ರಿಯಾಜ್ಜಾತಃ ಸೂತೋ ಭವತಿ ಪಾರ್ಥಿವ ।
ಪ್ರಾತಿಲೋಮ್ಯೇನ ಜಾತಾನಾಂ ಸ ಹ್ಯೇಕೋ ದ್ವಿಜ ಏವ ತು ॥೧೩॥

ರಾಜನೇ, ಬ್ರಾಹ್ಮಣ ಸ್ತ್ರೀಯಲ್ಲಿ ಕ್ಷತ್ರಿಯನಿಂದ ಜನಿಸಿದವನು ಸೂತನಾಗುತ್ತಾನೆ. ಇದು ಪ್ರತಿಲೋಮದಿಂದ (ಸ್ತ್ರೀಯರಿಗಿಂತ ಕೆಳಗಿನ ಜಾತಿಯ ಪುರುಷನಿಂದ) ಉಂಟಾದ ಜನನ. ಈ ಸೂತನಿಗೆ ದ್ವಿಜತ್ವವಿದೆ.

ರಥಕಾರಮಿತೀಮಂ ಹಿ ಕ್ರಿಯಾಯುಕ್ತಂ ದ್ವಿಜನ್ಮನಾಮ್ ।
ಕ್ಷತ್ರಿಯಾದವರಂ ವೈಶ್ಯಾದ್ ವಿಶಿಷ್ಟಮಿತಿ ಚಕ್ಷತೇ ॥೧೪॥

ಇಂತಹ ಸೂತನನ್ನು ರಥಕಾರನೆಂದು ಕರೆಯುತ್ತಾರೆ. ಅವನಿಗೆ ದ್ವಿಜರ ಸಂಸ್ಕಾರವಿದೆ. ದ್ವಿಜರಿಗೆ ಯೋಗ್ಯವಾದ ಸಂಸ್ಕಾರವನ್ನು ಹೊಂದಿದವನಾಗುತ್ತಾನೆ. ಇವನು ಕ್ಷತ್ರಿಯರಿಗಿಂತ ನೀಚನು ಮತ್ತು ವೈಶ್ಯರಿಗಿಂತ ಉತ್ತಮನಾಗುತ್ತಾನೆ.

ಸಹ ಸೂತೇನ ಸಂಬಂಧಃ ಕೃತಪೂರ್ವೋ ನರೈಶ್ವರೈಃ ।
ತಥಾಽಪಿ ತೈರ್ಮಹೀಪಾಲ ರಾಜಶಬ್ದೋ ನ ಲಭ್ಯತೇ ॥೧೫॥

ತೇಷಾಂ ತು ಸೂತವಿಷಯಃ ಸೂತಾನಾಂ ನಾಮತಃ ಕೃತಃ ॥೧೬॥

ಉಪಜೀವ್ಯ ಚ ಯತ್ ಕ್ಷತ್ರಂ ಲಬ್ಧಂ ಸೂತೇನ ಯತ್ ಪುರಾ ।

ಹಿಂದಿನ ರಾಜರು ಸೂತರ ಜೊತೆಯಲ್ಲಿ ವಿವಾಹಸಂಬಂಧವನ್ನು ಹೊಂದಿದ್ದರು. ಆದರೂ ಸೂತರಿಗೆ ಎಂದೂ ರಾಜಶಬ್ದವು ಸಲ್ಲುವುದಿಲ್ಲ. ಅವರು ಕ್ಷತ್ರಿಯರನ್ನು ಉಪಜೀವಿಸಿ, ಕ್ಷತ್ರಿಯರಿಂದ ಪಡೆದ ರಾಜ್ಯಕ್ಕೆ ಸೂತರಾಜ್ಯ ಎಂದೇ ಹೆಸರು. ಹಿಂದೆ ಒಬ್ಬ ಸೂತನು ಅಲ್ಲಿ ಅಧಿಪತಿಯಾಗಿದ್ದನು.

ಸೂತಾನಾಮಧಿಪೋ ರಾಜಾ ಕೇಕಯೋ ನಾಮ ವಿಶ್ರುತಃ ॥೧೭॥

ರಾಜಕನ್ಯಾಸಮುದ್ಭೂತಃ ಸಾರಥ್ಯೇಽನುಪಮೋಽಭವತ್ ।
ಪುತ್ರಾಸ್ತಸ್ಯ ಕುರುಶ್ರೇಷ್ಠ ಮಾಲವ್ಯಾಂ ಜಜ್ಞಿರೇ ತದಾ ॥೧೮॥

ಸದ್ಮದ ಸಮಯದಲ್ಲಿ ಸೂತರಾಜ್ಯದಲ್ಲಿ ಕೇಕಯನೆಂಬ ಪ್ರಸಿದ್ಧನಾದ ರಾಜನಿದ್ದನು. ಅವನೂ ಸಹ ರಾಜಕನ್ಯೆಯಲ್ಲಿ ಜನಿಸಿದವನಾಗಿ ಸಾರಥ್ಯದ ವಿಷಯದಲ್ಲಿ ಅಸದೃಶನಾಗಿದ್ದನು. ಎಲೈ ಕುರುಶ್ರೇಷ್ಠನೇ, ಅವನಿಗೆ ಮಾಲವ ದೇಶದ ಪತ್ನಿಯಲ್ಲಿ ಅನೇಕ ಮಕ್ಕಳು ಜನಿಸಿದರು.

ತೇಷಾಮತಿಬಲೋ ಜ್ಯೇಷ್ಠಃ ಕೀಚಕಃ ಸರ್ವಜಿತ್ ಪ್ರಭೋ ।
ಅಗ್ರಜೋ ಬಲಸಮ್ಮತ್ತಃ ತೇನಾಸೀತ್ ಸೂತಷಟ್‌ಶತಮ್ ॥೧೯॥

ಎಲೈ ಪ್ರಭುವೇ, ಅವರಲ್ಲಿ ಜ್ಯೇಷ್ಠನಾದ ಕೀಚಕನು ಅತಿಬಲವನ್ನು ಹೊಂದಿದವನಾಗಿ ಎಲ್ಲರನ್ನೂ ಜಯಿಸಿದನು. ಅವನು ಜ್ಯೇಷ್ಠನಾಗಿ ಬಲಸಮ್ಮತ್ತನಾಗಿದ್ದನು. ಅದರಂತೆ ಇನ್ನೂ ನೂರೈದು ಜನ ಅವನ ತಮ್ಮಂದಿರು, ಒಟ್ಟು ನೂರಾರು ಜನ ಸೂತರಾದರು.

ದ್ವಿತೀಯಾಯಾಂ ತು ಮಾಲವ್ಯಾಂ ಚಿತ್ರಾ ಹ್ಯವರಜಾऽಭವತ್ ।
ತಾಂ ಸುದೇಷ್ಣೇತಿ ವೈ ಪ್ರಾಹುರ್ವಿರಾಟಮಹಿಷೀಂ ಪ್ರಿಯಾಮ್ ॥೨೦॥

ಆ ಮಾಲವದೇಶದ ಎರಡನೆಯ ವನಿತೆಯಲ್ಲಿ ಆ ಸೂತನಿಗೆ ಚಿತ್ರಾ ಎಂಬ ಮಗಳು ಜನಿಸಿದಳು. ಅವಳನ್ನು ಸುದೇಷ್ಣೆ ಎಂದು ಕರೆಯುತ್ತಾರೆ. ಅವಳು ವಿರಾಟನಿಗೆ ಪ್ರಿಯಳಾದ ಪಟ್ಟದ ರಾಣಿ.

ತಾಂ ವಿರಾಟಸ್ಯ ಮಾತ್ಸ್ಯಸ್ಯ ಕೇಕಯಃ ಪ್ರದದೌ ಮುದಾ ।
ಸುರಥಾಯಾಂ ಮೃತಾಯಾಂ ತು ಕೌಸಲ್ಯಾಂ ಶ್ವೇತಮಾತರಿ ॥೨೧॥

ವಿರಾಟನ ಪ್ರಥಮಪತ್ನಿಯಾದ, ಶ್ವೇತ ಎಂಬ ಪುತ್ರನ ತಾಯಿಯಾದ ಕೌಸಲದೇಶದವಳಾದ ಸುರಥಾ ಎಂಬ ರಾಣಿಯು ಮೃತಳಾದ ಮೇಲೆ ಕೇಕಯಾಧಿಪತಿಯು ವಿರಾಟನಿಗೆ ಸುದೇಷ್ಣೆಯನ್ನು ಸಂತೋಷದಿಂದ ಕೊಟ್ಟನು.

ಶ್ವೇತೇ ವಿನಷ್ಟೇ ಶಂಖೇ ಚ ಗತೇ ಮಾತುಲವೇಶ್ಮನಿ ।
ಸುದೇಷ್ಣಾಂ ಮಹಿಷೀಂ ಲಬ್ಧ್ವಾ ರಾಜಾ ದುಃಖಮಪಾನುದತ್ ॥೨೨॥

ಕಾಲಕ್ರಮದಲ್ಲಿ ಶ್ವೇತನು ಮೃತನಾಗಿ ಅವನ ತಮ್ಮನಾದ ಶಂಖನು ಸೋದರ ಮಾವನ ಮನೆಯಲ್ಲಿ ಬೆಳೆಯುತ್ತಿರಲು ಸುದೇಷ್ಣೆಯನ್ನು ರಾಣಿಯಾಗಿ ಪಡೆದ ವಿರಾಟರಾಜನು ತನ್ನ ದುಃಖವನ್ನು ಪರಿಹರಿಸಿಕೊಂಡನು.

ಉತ್ತರಂ ಚೋತ್ತರಾಂ ಚೈವ ವಿರಾಟಾತ್ ಪೃಥಿವೀಪತೇ ।
ಸುದೇಷ್ಣಾ ಸುಷುವೇ ದೇವೀ ಕೈಕಯೀ ಕುಲವೃದ್ಧಯೇ ॥೨೩॥

ಎಲೈ ರಾಜನೇ, ಕೇಕಯಾಧಿಪತಿಯ ಮಗಳಾದ ಸುದೇಷ್ಣೆಯು ವಿರಾಟನ ಕುಲದ ಅಭಿವೃದ್ಧಿಗಾಗಿ ವಿರಾಟನಿಂದ ಉತ್ತರ ಮತ್ತು ಉತ್ತರೆ ಎಂಬ ಎರಡು ಮಕ್ಕಳನ್ನು ಪಡೆದಳು.

ಮಾತೃಷ್ವಸ್ರಸುತಾಂ ರಾಜನ್ ಕೀಚಕಸ್ತಾಮನಿಂದಿತಾಮ್ ।
ಸದಾ ಪರಿಚರನ್ ಪ್ರೀತ್ಯಾ ವಿರಾಟೇ ನ್ಯವಸತ್ ಸುಖೀ ॥೨೪॥

ಎಲೈ ರಾಜನೇ, ತನ್ನ ಚಿಕ್ಕಮ್ಮನ ಮಗಳಾದ ಅನಿಂದಿತಳಾದ ಆ ಸುದೇಷ್ಣೆಯನ್ನು ಪ್ರೀತಿಯಿಂದ ಪರಿಚರಿಸುತ್ತಾ ಕೀಚಕನು ವಿರಾಟನ ನಗರದಲ್ಲಿಯೇ ಸುಖವಾಗಿ ವಾಸ ಮಾಡಿದನು.

ಭ್ರಾತರಸ್ತಸ್ಯ ವಿಕ್ರಾಂತಾಃ ಸರ್ವೇ ಚ ತಮನುವ್ರತಾಃ ।
ವಿರಾಟಸ್ಯೈವ ಸಂಹೃಷ್ಟಾಃ ಬಲಂ ಕೋಶಂ ಚ ವರ್ಧಯನ್ ॥೨೫॥

ಅವನ ತಮ್ಮಂದಿರೆಲ್ಲರೂ ಪರಾಕ್ರಮಶಾಲಿಗಳೂ ಮತ್ತು ಅವನನ್ನೇ ಅನುಸರಿಸುವವರಾಗಿ ವಿರಾಟನ ಸೈನ್ಯವನ್ನು ಮತ್ತು ಕೋಶವನ್ನು ಸಂತೋಷದಿಂದ ಅಭಿವೃದ್ಧಿಪಡಿಸಿದರು.

ಕಾಲೇಯಾ ನಾಮ ದೈತೇಯಾಃ ಪ್ರಾಯಶೋ ಭುವಿ ವಿಶ್ರುತಾಃ ।
ಜಜ್ಞಿರೇ ಕೀಚಕಾ ರಾಜನ್ ಬಾಣೋ ಜ್ಯೇಷ್ಠಸ್ತತೋऽಭವತ್ ॥೨೬॥

ಎಲೈ ರಾಜನೇ, ಹಿಂದೆ ಭೂಮಿಯಲ್ಲಿ ಕಾಲೇಯನಾಮಕರಾಗಿ ಪ್ರಸಿದ್ಧರಾದ ದೈತ್ಯರು ಕೀಚಕರಾಗಿ ಜನಿಸಿದರು. ಹಿಂದೆ ಬಾಣಾಸುರನಾಗಿದ್ದವನು ಜ್ಯೇಷ್ಠನಾದ ಕೀಚಕನೆನಿಸಿಕೊಂಡನು.

ಸ ಹಿ ಸರ್ವಾಸ್ತ್ರಸಂಪನ್ನೋ ಬಲವಾನ್ ಭೀಮವಿಕ್ರಮಃ ।
ಕೀಚಕೋ ನಷ್ಟಮರ್ಯಾದೋ ಬಭೂವ ಭಯದೋ ನೃಣಾಮ್ ॥೨೭॥

ಸರ್ವಾಸ್ತ್ರಸಂಪನ್ನನೂ, ಬಲಿಷ್ಠನೂ, ಭಯಂಕರವಾದ ಪರಾಕ್ರಮವುಳ್ಳವನೂ ಆದ ಕೀಚಕನು ಎಲ್ಲಾ ನೀತಿಯ ಎಲ್ಲೆಯನ್ನು ಮೀರಿದವನಾಗಿ ಎಲ್ಲ ಮನುಷ್ಯರಿಗೆ ಭಯವನ್ನುಂಟುಮಾಡುವವನಾದನು.

ತಂ ಪ್ರಾಪ್ಯ ಬಲಸಮ್ಮತ್ತಂ ವಿರಾಟಃ ಪೃಥಿವೀಪತಿಃ ।
ಜಿಗಾಯಸರ್ವಾಂಶ್ಚ ರಿಪೂನ್ ಯಥೇಂದ್ರೋ ದಾನವಾನ್ ಪುರಾ॥೨೮॥

ವಿರಾಟರಾಜನು ಬಲಸಮ್ಮತ್ತನಾದ ಅವನನ್ನು ಪಡೆದು ಹಿಂದೆ ಇಂದ್ರನು ದಾನವರನ್ನು ಗೆದ್ದಂತೆ ಎಲ್ಲ ಶತ್ರುಗಳನ್ನೂ ಗೆದ್ದನು.

ಮೇಖಲಾಂಶ್ಚ ತ್ರಿಗರ್ತಾಂಶ್ಚ ದಶಾರ್ಣಾಂಶ್ಚ ಕಶೇರುಕಾನ್ ।
ಮಾಲವಾನ್ ಯವನಾಂಶ್ಚೈವ ಪುಳಿಂದಾನ್ ಕಾಶಿಕೋಸಲಾನ್ ॥೨೯॥

ಅಂಗಾನ್ ವಂಗಾನ್ ಕಳಿಂಗಾಂಶ್ಚ ತಂಕಣಾನ್ ಪರತಂಕಣಾನ್ ।
ಮಲದಾನ್ ನಿಷಧಾಂಶ್ಚೈವ ತುಂಡಿಕೇರಾಂಶ್ಚ ಕೋಂಕಣಾನ್ ॥೩೦॥

ಕರದಾಂಶ್ಚ ನಿಷಿದ್ಧಾಂಶ್ಚ ಶಿವಾನ್ ದುಶ್ಛಿಲ್ಲಿಕಾಂಸ್ತಥಾ ॥೩೧॥

ಮೇಖಲರು, ತ್ರಿಗರ್ತರು, ದಶಾರ್ಣರು, ಕಶೇರುಕರು, ಮಾಲವರು, ಯವನರು, ಪುಳಿಂದರು, ಕಾಶಿಕೋಸಲರು, ಅಂಗರು, ವಂಗರು, ಕಳಿಂಗರು, ತಂಕಣರು, ಪರತಂಕಣರು, ಮಲದರು, ನಿಷಧರು, ತುಂಡಿಕೇರರು, ಕೊಂಕಣರು, ಕರದರು, ನಿಷಿದ್ಧರು, ಶಿವರು, ದುಶ್ಛಿಲ್ಲಿಕರು ಮೊದಲಾದ ಎಲ್ಲ ಶತ್ರುಗಳನ್ನೂ ಗೆದ್ದನು.

ಅನ್ಯೇ ಚ ಬಹವಃ ಶೂರಾ ನಾನಾಜನಪದೇಶ್ವರಾಃ ।
ಕೀಚಕೇನ ರಣೇ ಭಗ್ನಾ ವ್ಯದ್ರವಂತ ದಿಶೋ ದಶ ॥೩೨॥

ಇನ್ನೂ ನಾನಾ ರಾಜ್ಯಗಳ ರಾಜರಾಗಿದ್ದ ಅನೇಕ ಶೂರರಾದ ರಾಜರು ಕೀಚಕನಿಗೆ ಯುದ್ಧದಲ್ಲಿ ಸೋತು ದಿಕ್ಕುದಿಕ್ಕುಗಳಿಗೆ ಓಡಿಹೋದರು.

ತಮೇವಂ ವೀರ್ಯಸಂಪನ್ನಂ ನಾಗಾಯುತಬಲಂ ರಣೇ ।
ವಿರಾಟಸ್ತತ್ರ ಸೇನಾಯಾಃ ಚಕಾರ ಪತಿಮಾತ್ಮನಃ ॥೩೩॥

ಹೀಗೆ ಹತ್ತುಸಾವಿರ ಆನೆಯ ಬಲವುಳ್ಳವನಾಗಿ ಯುದ್ಧದಲ್ಲಿ ಪರಾಕ್ರಮಶಾಲಿಯಾದ ಅವನನ್ನು ವಿರಾಟರಾಜನು ತನ್ನ ಸೇನಾಪತಿಯನ್ನಾಗಿ ಮಾಡಿದನು.

ವಿರಾಟಭ್ರಾತರಶ್ಚೈವ ದಶ ದಾಶರಥೋಪಮಾಃ ।
ತೇ ಚೈನಾನನ್ವವರ್ತಂತ ಕೀಚಕಾನ್ ಬಲವತ್ತರಾನ್ ॥೩೪॥

ವಿರಾಟನ ತಮ್ಮಂದಿರಾದ ದಾಶರಥಿ ರಾಮನನ್ನು ಹೋಲುವ ಹತ್ತುಮಂದಿಯೂ ಸಹ ಬಲಿಷ್ಠರಾದ ಈ ಕೀಚಕರನ್ನೇ ಅನುಸರಿಸಿದರು.

ಏವಂವಿಧಬಲೋಪೇತಾಃ ಕೀಚಕಾಸ್ತೇ ಚ ತದ್ವಿಧಾಃ ।
ರಾಜ್ಞಃ ಸ್ಯಾಲಾ ಮಹಾತ್ಮನೋ ವಿರಾಟಸ್ಯ ಹಿತೈಷಿಣಃ ॥೩೫॥

ಏತತ್ ತೇ ಕಥಿತಂ ಸರ್ವಂ ಕೀಚಕಸ್ಯ ಪರಾಕ್ರಮಮ್ ॥೩೬॥

ಇಂತಹ ಬಲವುಳ್ಳ ಆ ಕೀಚಕರು ಇಂತಹ ಚರಿತ್ರೆಯುಳ್ಳವರು. ಎಲ್ಲರೂ ಮಹಾತ್ಮನಾದ ವಿರಾಟನಿಗೆ ಹಿತೈಷಿಗಳಾಗಿದ್ದು ಅವರ ಭಾವಮೈದುನರಾಗಿದ್ದರು. ಕೀಚಕನ ಪರಾಕ್ರಮದ ವಿಷಯದಲ್ಲಿ ನಾನು ನಿನಗೆ ಎಲ್ಲವನ್ನೂ ಹೇಳಿದ್ದೇನೆ.

ದ್ರೌಪದೀ ನ ಶಶಾಪೈನಂ ಯಸ್ಮಾದ್ ತದ್ ಗದತಃ ಶೃಣು ॥೩೭॥

ಕ್ಷರತೀತಿ ತಪಃ ಕ್ರೋಧಾತ್ ಋಷಯೋ ನ ಶಪಂತಿ ಹಿ ।
ಜಾನಂತೀ ತದ್ಯಥಾತತ್ತ್ವಂ ಪಾಂಚಾಲೀ ನ ಶಶಾಪ ತಮ್ ॥೩೮॥

ದ್ರೌಪದಿಯು ಯಾವ ಕಾರಣದಿಂದ ಅವನಿಗೆ ಶಾಪವನ್ನು ನೀಡಲಿಲ್ಲ ಎಂದು ಹೇಳುತ್ತೇನೆ ಅದನ್ನು ಕೇಳು. ತಮ್ಮ ತಪಸ್ಸು ನಾಶವಾಗುವುದೆಂದು ತಿಳಿದು ಋಷಿಗಳು ಶಾಪವನ್ನು ಕೊಡುವುದಿಲ್ಲ. ಈ ಸತ್ಯವನ್ನು ತಿಳಿದ ಪಾಂಚಾಲಿಯು ಅವನನ್ನು ಶಪಿಸಲಿಲ್ಲ.

ಕ್ಷಮಾ ಧರ್ಮಃ ಕ್ಷಮಾ ದಾನಂ ಕ್ಷಮಾ ಯಜ್ಞಃ ಕ್ಷಮಾ ಯಶಃ ।
ಕ್ಷಮಾ ಸತ್ಯಂ ಕ್ಷಮಾ ಶೀಲಂ ಕ್ಷಮಾ ಸತ್ಯಮಿತಿ ಶ್ರುತಿಃ ॥೩೯॥

ಕ್ಷಮೆಯೇ ಧರ್ಮ, ಕ್ಷಮೆಯೇ ದಾನ, ಕ್ಷಮೆಯೇ ಯಜ್ಞ, ಕ್ಷಮೆಯೇ ಯಶಸ್ಸು, ಕ್ಷಮೆಯೇ ಸತ್ಯ, ಕ್ಷಮೆಯೇ ಶೀಲ, ಕ್ಷಮೆಯೇ ಸತ್ಯವೆಂದು ವೇದವಾಕ್ಯವಿದೆ.

ಕ್ಷಮಾವತಾಮಯಂ ಲೋಕಃ ಪರಶ್ಚೈವ ಕ್ಷಮಾವತಾಮ್ ।
ಏತತ್ ಸರ್ವಂ ವಿಜಾನಂತೀ ಸಾ ಕ್ಷಮಾಮನ್ವಪದ್ಯತ ॥೪೦॥

ಕ್ಷಮಾವಂತರಿಗೇ ಈ ಲೋಕವಿದೆ. ಪರಲೋಕವೂ ಕೂಡ ಕ್ಷಮಾವಂತರಿಗೇ ಸಲ್ಲುತ್ತದೆ. ಈ ಎಲ್ಲವನ್ನೂ ತಿಳಿದ ಆ ದ್ರೌಪದಿಯು ಕ್ಷಮೆಯನ್ನೇ ಆಶ್ರಯಿಸಿದಳು.

ಭ್ರಾತೄಣಾಂ ಮತಮಾಜ್ಞಾಯ ಕ್ಷಮಿಣಾಂ ಧರ್ಮಚಾರಿಣಾಮ್ ।
ನಾಶಪತ್ ತಂ ವಿಶಾಲಾಕ್ಷೀ ಸತೀ ಶಕ್ತಾऽಪಿ ಭಾರತ ॥೪೧॥

ಎಲೈ ಭಾರತನೇ, ಧರ್ಮಚಾರಿಗಳಾದ, ಕ್ಷಮಾಶೀಲರಾದ ತನ್ನ ಪತಿಗಳಾದ ಸಹೋದರರ ಅಭಿಪ್ರಾಯವನ್ನು ತಿಳಿದ ವಿಶಾಲಾಕ್ಷಿಯಾದ ದ್ರೌಪದಿಯು ಶಾಪವನ್ನು ಕೊಡಲು ಸಮರ್ಥಳಾಗಿದ್ದರೂ ಸಹ ಶಾಪವನ್ನು ಕೊಡಲಿಲ್ಲ.

ಪಾಂಡವಾಶ್ಚಾಪಿ ತೇ ಸರ್ವೇ ದ್ರೌಪದೀಂ ಪ್ರೇಕ್ಷ್ಯ ದುಃಖಿತಾಃ ।
ಕ್ರೋಧಾಗ್ನಿನಾ ವ್ಯದಹ್ಯಂತ ತದಾ ಕಾಲವ್ಯಪೇಕ್ಷಯಾ ॥೪೨॥

ಆ ಎಲ್ಲ ಪಾಂಡವರಾದರೂ ಸಹ ದ್ರೌಪದಿಯನ್ನು ನೋಡಿ ದುಃಖಿತರಾಗಿ ಸಮಯವನ್ನು ನಿರೀಕ್ಷಿಸುತ್ತಾ ಕ್ರೋಧಾಗ್ನಿಯಿಂದ ಆಗ ಬೆಂದುಹೋದರು.

ಅಯಂ ಭೀಮೋ ಮಹಾಬಾಹುಃ ಸೂದಯಿಷ್ಯಂಸ್ತು ಕೀಚಕಮ್ ।
ವಾರಿತೋ ಧರ್ಮಪುತ್ರೇಣ ವೇಲಯೇವ ಮಹೋದಧಿಃ ॥೪೩॥

ಆಗ ಮಹಾಬಾಹುವಾದ ಭೀಮನು ಕೀಚಕನನ್ನು ಸಂಹರಿಸುವ ಅಭಿಪ್ರಾಯವುಳ್ಳವನಾದರೂ ಯುಧಿಷ್ಠಿರನು ಸಾಗರವನ್ನು ದಡವು ತಡೆದಂತೆ ಅವನನ್ನು ತಡೆದನು.

ಸಂಧಾರ್ಯ ಮನಸಾ ರೋಷಂ ದಿವಾರಾತ್ರಿಂ ವಿನಿಃಶ್ವಸನ್ ।
ಮಹಾನಸೇ ಸದಾ ಕೃಚ್ಛ್ರಾತ್ ಸುಷ್ವಾಪ ರಜನೀಂ ಚ ತಾಮ್ ॥೪೪॥

ಭೀಮಸೇನನಾದರೂ ಆ ರೋಷವನ್ನು ಮನಸ್ಸಿನಲ್ಲಿಯೇ ಧರಿಸಿ ಹಗಲೂ ರಾತ್ರಿಯೂ ನಿಟ್ಟುಸಿರು ಬಿಡುತ್ತಾ ಬಹಳ ಕಷ್ಟದಿಂದ ಅಡುಗೆ ಮನೆಯಲ್ಲಿ ಆ ರಾತ್ರಿಯನ್ನು ದುಃಖದಿಂದ ಮಲಗಿ ಕಳೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಏಕವಿಂಶೋಽಧ್ಯಾಯಃ ॥

॥ ಕೀಚಕವಧಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಕೃಷ್ಣಾ ರಾತ್ರೌ ಭೀಮಸಕಾಶಮೇತ್ಯ ಹಂತುಂ
ಪಾಪಂ ಕೀಚಕಂ ಪ್ರೈರಯತ್ ತಮ್ ।
ಭೀಮಸ್ಯ ಬುದ್ಧ್ಯಾ ನಿಶಿ ಸಾ ಕೀಚಕಂ ಚ
ಜಗಾದ ಗಂತುಂ ಶೂನ್ಯಗೃಹಂ ಸ ಚಾಗಾತ್ ॥೨೫॥

ದ್ರೌಪದಿ ರಾತ್ರಿಯಲ್ಲಿ ಭೀಮನ ಬಳಿಗೆ ಬಂದು ಪಾಪಿ ಕೀಚಕನನ್ನು ಕೊಲ್ಲಲು ಪ್ರೇರಿಸಿದಳು. ಭೀಮ ಹೇಳಿಕೊಟ್ಟ ಬುದ್ಧಿಯಿಂದ ಕೀಚಕನಿಗೆ ರಾತ್ರಿಯಲ್ಲಿ ನಿರ್ಜನವಾದ ನರ್ತನಶಾಲೆಗೆ ಹೋಗಲು ಹೇಳಿದಳು. ಅದರಂತೆ ಕೀಚಕ ಹೋದ.

★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ರಾತ್ರಿಯಲ್ಲಿ ದ್ರೌಪದಿ ಮತ್ತು ಭೀಮಸೇನರ ಸಂವಾದ. ಕೀಚಕನನ್ನು ಕೊಲ್ಲುವಂತೆ ಭೀಮಸೇನನಿಗೆ ದ್ರೌಪದಿಯ ಒತ್ತಾಯ.

ವೈಶಂಪಾಯನಃ

ಸಾ ಸೂತಪುತ್ರಾಭಿಹತಾ ರಾಜಪುತ್ರೀ ಯಶಸ್ವಿನೀ ।
ವಧಂ ಕೃಷ್ಣಾ ಪ್ರರೀಪ್ಸಂತೀ ಸೂತಪುತ್ರಸ್ಯ ಭಾಮಿನೀ ॥೧॥

ಜಗಾಮಾವಾಸವೇಶ್ಮಾಥ ತದಾ ಸಾ ದ್ರುಪದಾತ್ಮಜಾ ।

ವೈಶಂಪಾಯನ– ಯಶಸ್ವಿನಿಯೂ, ಕೋಪಗೊಂಡವಳೂ ಆದ ರಾಜಕುಮಾರಿಯಾದ ಆ ದ್ರೌಪದಿಯು ಸೂತಪುತ್ರನಾದ ಕೀಚಕನ ವಧೆಯನ್ನು ಚಿಂತಿಸುತ್ತಾ ತನ್ನ ವಾಸದ ಮನೆಗೆ ಬಂದಳು.

ಕೃತ್ವಾ ಶೌಚಂ ಯಥಾನ್ಯಾಯಂ ಕೃಷ್ಣಾಽಪಿ ತನುಮಧ್ಯಮಾ ॥೨॥

ಗಾತ್ರಾಣಿ ವಾಸಸೀ ಚೈವ ಪ್ರಕ್ಷಾಲ್ಯ ಸಲಿಲೇನ ಚ ।
ಚಿಂತಯಾಮಾಸ ರುದತೀ ತಸ್ಯ ದುಃಖಸ್ಯ ನಿರ್ಣಯಮ್ ॥೩॥

ಕೃಶಾಂಗಿಯಾದ ದ್ರೌಪದಿಯು ಯಥಾಯೋಗ್ಯವಾಗಿ ಶುದ್ಧಳಾಗಿ ತನ್ನ ದೇಹವನ್ನು ಮತ್ತು ವಸ್ತ್ರಗಳನ್ನು ನೀರಿನಿಂದ ತೊಳೆದು ಅಳುತ್ತಾ ಆ ದುಃಖದ ಪರಿಹಾರವನ್ನು ಕುರಿತು ಚಿಂತಿಸಿದಳು.

ಕಿಂ ಕರೋಮಿ ಕ್ವ ಗಚ್ಛಾಮಿ ಕಥಂ ಕಾರ್ಯಂ ಭವೇನ್ಮಮ ।
ಇತ್ಯೇವಂ ಚಿಂತಯಿತ್ವಾ ಸಾ ಭೀಮಂ ತಂ ಮನಸಾಽಗಮತ್ ॥೪॥

ನಾನ್ಯಃ ಕರ್ತಾ ವಿನಾ ಭೀಮಾನ್ಮಮಾದ್ಯ ಮನಸೇಪ್ಸಿತಮ್ ॥೫॥

ನಾನು ಏನು ಮಾಡಲಿ? ಎಲ್ಲಿಗೆ ಹೋಗಲಿ? ಹೇಗೆ ನನ್ನ ಕಾರ್ಯವು ನೆರವೇರುತ್ತದೆ ಎಂದು ಚಿಂತಿಸುತ್ತಾ, ನನ್ನ ಮನಸ್ಸಿನ ಅಭೀಷ್ಟವನ್ನು ನೆರವೇರಿಸುವವನು ಭೀಮಸೇನನನ್ನು ಬಿಟ್ಟು ಬೇರೆ ಯಾರೂ ಇಲ್ಲ ಎಂದು ನಿಶ್ಚಯಿಸಿ, ಮನಸ್ಸಿನಲ್ಲಿಯೇ ಭೀಮಸೇನನನ್ನು ಸ್ಮರಿಸಿದಳು.

ಪ್ರಾದುರ್ಭೂತಕ್ಷಣಾ ರಾತ್ರೌ ವಿಹಾಯ ಶಯನಂ ಸ್ವಕಮ್ ।
ದುಃಖೇನ ಮಹತಾ ಯುಕ್ತಾ ಮಾನಸೇನ ಮನಸ್ವಿನೀ ॥೬॥

ಪ್ರಾದ್ರವನ್ನಾಥಮಿಚ್ಛಂತೀ ಯಥಾ ನಾಥವತೀ ಸತೀ ॥೭॥

ರಾತ್ರಿಯಾದ ಮೇಲೆ ಒಂದು ಅವಕಾಶವನ್ನು ಪಡೆದವಳಾಗಿ ಮನಸ್ಸಿನಲ್ಲಿ ತುಂಬಾ ದುಃಖದಿಂದ ಕೂಡಿದವಳಾದ ಆ ಮಾನವತಿಯು ತನ್ನ ಹಾಸಿಗೆಯಿಂದ ಎದ್ದು ನಾಥರನ್ನು ಹೊಂದಿದ್ದ ಅವಳು ನಾಥನನ್ನು ಬಯಸುತ್ತಾ ಓಡಿದಳು.

ಸಾ ವೈ ಮಹಾನಸಂ ಪ್ರಾಪ್ಯ ಭೀಮಸೇನಂ ಶುಚಿಸ್ಮಿತಾ ।
ಉಪಾಸರ್ಪತ ಪಾಂಚಾಲೀ ವಾಶಿತೇವ ಮಹಾಗಜಮ್ ॥೮॥

ಶುಚಿಸ್ಮಿತೆಯಾದ ಆ ಪಾಂಚಾಲಿಯು ಅಡಿಗೆ ಮನೆಯನ್ನು ಪ್ರವೇಶಿಸಿ ಚಿಕ್ಕ ವಯಸ್ಸಿನ ಹೆಣ್ಣಾನೆಯು ಮಹಾಗಜವನ್ನು ಸಮೀಪಿಸುವಂತೆ ಭೀಮಸೇನನನ್ನು ಸಮೀಪಿಸಿದಳು.

ವೃಷೇಂದ್ರಮಿವ ಮಾಹೇಯೀ ವನೇ ವೃದ್ಧಾ ತ್ರಿಹಾಯನೀ ।
ಉಪಾತಿಷ್ಠತ ಪಾಂಚಾಲೀ ಭೀಮಂ ಕೌರವ್ಯಮಚ್ಯುತಮ್ ॥೯॥

ಸುರಭಿಧೇನುವಿನ ಕುಮಾರಿಯಾದ ಮೂರುವರ್ಷ ವಯಸ್ಸಿನ ಮಾಹೇಯಿಯು ಶ್ರೇಷ್ಠವಾದ ವೃಷಭದ ಕಡೆಗೆ ಹೋದಂತೆ ಪಾಂಚಾಲಿಯು ತನ್ನ ಗುಣಗಳಿಂದ ಎಂದೂ ಹೀನನಾಗದ ಕೌರವ್ಯನಾದ ಭೀಮಸೇನನನ್ನು ಸಮೀಪಿಸಿದಳು.

ಮೃಗರಾಜಂ ಯಥಾ ದೃಪ್ತಂ ಮಂಡನೀ ವನನಿರ್ಝರೇ ।
ಸುಪ್ತಂ ಸಿಂಹಂ ತದಾ ಸ್ಥಾನೇ ಮೃಗರಾಜಂ ವಧೂರಿವ ॥೧೦॥

ಕಾನನಕ್ಕೆ ಅಲಂಕಾರವಾಗಿರುವ ಹೆಣ್ಣು ಸಿಂಹವು ದರ್ಪದಿಂದ ಕೂಡಿ ಸುಪ್ತವಾಗಿರುವ ಸಿಂಹವನ್ನು ಕಾಡಿನಲ್ಲಿ ಸಮೀಪಿಸುವಂತೆ ಪಾಂಚಾಲಿಯು ಭೀಮಸೇನನನ್ನು ಸಮೀಪಿಸಿದಳು.

ಅಭಿಪ್ರಸಾರ್ಯ ಬಾಹುಭ್ಯಾಂ ಪತಿಂ ಸುಪ್ತಂ ಸಮಾಶ್ಲಿಷತ್ ।
ಸುಜಾತಂ ಗೋಮತೀತೀರೇ ಸಾಲಂ ವಲ್ಲೀವ ಪುಷ್ಪಿತಾ ॥೧೧॥

ಗೋಮತೀನದಿಯ ತೀರದಲ್ಲಿ ಬೆಳೆದ ದೊಡ್ಡ ಸಾಲವೃಕ್ಷವನ್ನು ಪುಷ್ಪಭರಿತವಾದ ಬಳ್ಳಿಯಂತೆ ತನ್ನ ಬಾಹುಗಳನ್ನು ಚಾಚಿ ನಿದ್ರಿಸುತ್ತಿದ್ದ ತನ್ನ ಪತಿಯಾದ ಭೀಮಸೇನನನ್ನು ಆಲಿಂಗಿಸಿದಳು.

ಪರಿಸ್ಪೃಶ್ಯ ಚ ಪಾಣಿಭ್ಯಾಂ ಪತಿಂ ಸುಪ್ತಮಬೋಧಯತ್ ।
ಶ್ರೀರಿವಾನ್ಯಾ ಮಹೋತ್ಸಾಹಂ ಸುಪ್ತಂ ವಿಷ್ಣುಮಿವಾರ್ಣವೇ ॥೧೨॥

ಕೌಮೋವದಾತೇ ಶಯನೇ ಶಯಾನಮೃಷಭೇಕ್ಷಣಮ್ ॥೧೩॥

ಲಕ್ಷ್ಮೀದೇವಿಯು ಸಮುದ್ರಶಾಯಿಯಾದ ಯೋಗನಿದ್ರಾರತನಾದ, ಮಹೋತ್ಸಾಹನಾದ ವಿಷ್ಣುವನ್ನು ಎಬ್ಬಿಸಿದಂತೆ ಶುಭ್ರ, ಶ್ವೇತವಸ್ತ್ರದ ಶಯನದಲ್ಲಿ ಮಲಗಿ ನಿದ್ರಿಸುತ್ತಿದ್ದ ವೃಷಭೇಕ್ಷಣನಾದ ತನ್ನ ಪತಿಯನ್ನು ಕೈಗಳಿಂದ ಸವರಿ ಎಬ್ಬಿಸಿದಳು.

ಯಥಾ ಶಚೀ ದೇವರಾಜಂ ರುದ್ರಾಣೀ ಶಂಕರಂ ಯಥಾ ।
ಬ್ರಹ್ಮಾಣಮಿವ ಸಾವಿತ್ರೀ ಯಥಾ ಷಷ್ಠೀ ಗುಹಂ ತಥಾ ॥೧೪॥

ಶಚಿಯು ದೇವೇಂದ್ರನನ್ನು ಎಬ್ಬಿಸಿದಂತೆ, ಪಾರ್ವತಿಯು ಶಂಕರನನ್ನು ಎಬ್ಬಿಸಿದಂತೆ, ಸಾವಿತ್ರಿಯು ಬ್ರಹ್ಮನನ್ನು ಎಬ್ಬಿಸಿದಂತೆ ಷಷ್ಠೀ ತಿಥಿಯಲ್ಲಿ ಬಂದ ದೇವಸೇನೆಯು ಷಣ್ಮುಖನನ್ನು ಎಬ್ಬಿಸಿದಂತೆ ಭೀಮಸೇನನನ್ನು ಎಬ್ಬಿಸಿದಳು.

ದಿಶಾಂಗಜಸಮಾಕಾರಂ ಗಜಂ ಗಜವಧೂರಿವ ।
ಭೀಮಂ ಪ್ರಾಬೋಧಯತ್ ಕಾಂತಾ ಲಕ್ಷ್ಮೀರ್ದಾಮೋದರಂ ಯಥಾ ॥

ಗಜರಾಜನ ವಧುವು ಗಜರಾಜನನ್ನು ಎಬ್ಬಿಸಿದಂತೆ, ಲಕ್ಷ್ಮಿಯು ದಾಮೋದರನನ್ನು ಎಬ್ಬಿಸಿದಂತೆ, ಕಾಂತೆಯಾದ ದ್ರೌಪದಿಯು ದಿಗ್ಗಜದ ಆಕಾರವನ್ನು ಹೊಂದಿದ್ದ ಭೀಮಸೇನನನ್ನು ಎಬ್ಬಿಸಿದಳು.

ವೀಣೇವ ಮಧುರಾರಕ್ತಂ ಸ್ವರಂ ಗಾಂಧಾರಮಾಶ್ರಿತಾ ।
ಅಭ್ಯಭಾಷತ ಪಾಂಚಾಲೀ ಕೌರವ್ಯಂ ಪಾಂಡುನಂದನಮ್ ॥೧೬॥

ಪಾಂಚಾಲಿಯು ವೀಣೆಯ ಗಾಂಧಾರಸ್ವರದಂತೆ ಮಧುರವಾದ ಮತ್ತು ಪ್ರೀತಿಪೂರ್ವಕವಾದ ಸ್ವರದಿಂದ ಪಾಂಡುನಂದನನಾದ ಕುರುಕುಲದಲ್ಲಿ ಜನಿಸಿದ ಭೀಮಸೇನನನ್ನು ಕುರಿತು ಮಾತನಾಡಿದಳು.

ಉತ್ತಿಷ್ಠೋತ್ತಿಷ್ಠ ಕಿಂ ಶೇಷೇ ಭೀಮಸೇನ ಯಥಾ ಮೃತಃ ।
ನ ಮೃತಃ ಸ ಹಿ ಪಾಪೀಯಾನ್ ಭಾರ್ಯಾಮಾಲಂಬ್ಯ ಜೀವತಿ ॥೧೭॥

ಭೀಮಸೇನನೇ, ಏಕೆ ಮೃತನಾದವನಂತೆ ಮಲಗಿದ್ದೀಯೆ? ಎದ್ದೇಳು, ಎದ್ದೇಳು. ರಾಜಭಾರ್ಯೆಯನ್ನು ಆಶ್ರಯಿಸಿ ಬದುಕಿರುವ ಆ ಪಾಪಿಯಾದ ಕೀಚಕನು ಇನ್ನೂ ಮೃತನಾಗಿಲ್ಲವಷ್ಟೆ?

ತಸ್ಮಿನ್ ಜೀವತಿ ಪಾಪಿಷ್ಠೇ ಸೇನಾವಾಹೇ ಮಮ ದ್ವಿಷಿ ।
ತತ್ ಕರ್ಮ ಕೃತವತ್ಯದ್ಯ ಕಥಂ ನಿದ್ರಾಂ ನಿಷೇವಸೇ ॥೧೮॥

ಪಾಪಿಷ್ಠನೂ, ರಾಜನ ಸೇನಾಪತಿಯೂ, ನನ್ನ ಶತ್ರುವೂ ಆದ ಆ ಕೀಚಕನು ಅಂತಹ ಕೆಲಸವನ್ನು ಮಾಡಿ ಬದುಕಿರುವಾಗ ಈ ದಿನ ನೀನು ಹೇಗೆ ನಿದ್ರೆಯನ್ನು ಮಾಡುತ್ತಿದ್ದೀಯೆ?

ವೈಶಂಪಾಯನಃ

ಸುಖಸುಪ್ತಶ್ಚ ತಂ ಶಬ್ದಂ ನಿಶಮ್ಯ ಚ ವೃಕೋದರಃ ।
ಸಂವೇಜಿತಃ ಕುರುಶ್ರೇಷ್ಠಃ ತೋತ್ರೈರಿವ ಮಹಾಗಜಃ ॥೧೯॥

ವೈಶಂಪಾಯನ– ಸುಖಸುಪ್ತನಾಗಿದ್ದ ಕುರುಶ್ರೇಷ್ಠನಾದ ವೃಕೋದರನು ಆ ಮಾತನ್ನು ಕೇಳಿ ಅಂಕುಶದ ಪ್ರಹಾರಕ್ಕೆ ಒಳಗಾದ ಮಹಾಗಜದಂತೆ ಕೋಪಗೊಂಡನು.

ಸ ವೈ ವಿಹಾಯ ಶಯನಂ ಯಸ್ಮಿನ್ ಸುಪ್ತಃ ಪ್ರಬೋಧಿತಃ ।
ಉದತಿಷ್ಠದಮೇಯಾತ್ಮಾ ಪರ್ಯಂಕೇ ಸೋತ್ತರಚ್ಛದೇ ॥೨೦॥

ಒಳ್ಳೆಯ ಹಾಸನ್ನು ಹಾಸಿದ್ದ ಪರ್ಯಂಕದಲ್ಲಿ ಮಲಗಿದ್ದ ಅಮೇಯಾತ್ಮನಾದ ಅವನು ಎಚ್ಚರಗೊಂಡು ಮೇಲೆದ್ದನು.

ಉಪವಿಶ್ಯ ಚ ದುರ್ಧರ್ಷಃ ಪಾಂಚಾಲಕುಲವರ್ಧನೀಮ್ ।
ಅಥಾಬ್ರವೀದ್ ರಾಜಪುತ್ರೀಂ ಕೌರವ್ಯೋ ಮಹಿಷೀಂ ಪ್ರಿಯಾಮ್ ॥

ದುರ್ಧರ್ಷನಾದ ಕೌರವ್ಯನಾದ ಅವನು ಹಾಸಿಗೆ ಮೇಲೆ ಕುಳಿತು ತನ್ನ ಪ್ರಿಯೆಯು ಮತ್ತು ರಾಣಿಯೂ ಆದ ಪಾಂಚಾಲಕುಲವರ್ಧಿನಿಯಾದ ರಾಜಕುಮಾರಿಯಾದ ದ್ರೌಪದಿಯನ್ನು ಕುರಿತು ಮಾತನಾಡಿದನು.

ಕೇನಾಸ್ಯರ್ಥೇನ ಸಂಪ್ರಾಪ್ತಾ ತ್ವರಿತೇನ ಮಮಾಂತಿಕಮ್ ।
ನ ತೇ ಪ್ರಕೃತಿಮಾನ್ ವರ್ಣಃ ಕೃಶಾ ತ್ವಂ ಭೀರು ಲಕ್ಷಯೇ ॥೨೨॥

ಭೀರುವೇ, ಯಾವ ಉದ್ದೇಶದಿಂದ ಹೀಗೆ ತ್ವರಿತವಾಗಿ ನನ್ನ ಸಮೀಪಕ್ಕೆ ಬಂದಿದ್ದೀಯೆ? ನಿನ್ನ ಬಣ್ಣವು ಎಂದಿನಂತೆ ಇಲ್ಲ. ಕೃಶಳಾಗಿ ಕಾಣುತ್ತಿದ್ದೀಯೆ.

ಪ್ರಕಾಶಂ ಯದಿ ವಾ ಗುಹ್ಯಂ ಸರ್ವಮಾಖ್ಯಾತುಮರ್ಹಸಿ ।
ಆಚಕ್ಷ್ವ ತ್ವಮಶೇಷೇಣ ಸರ್ವಂ ವಿದ್ಯಾಮಹಂ ಯಥಾ ॥೨೩॥

ಅದು ರಹಸ್ಯವಾಗಿರಲಿ ಅಥವಾ ಇಲ್ಲದಿರಲಿ, ನೀನು ಎಲ್ಲವನ್ನೂ ನನಗೆ ಹೇಳು. ನಾನು ಎಲ್ಲವನ್ನೂ ಪೂರ್ಣವಾಗಿ ತಿಳಿಯಬೇಕು.

ಸುಖಂ ವಾ ಯದಿ ವಾ ದುಃಖಂ ಶುಭಂ ವಾ ಯದಿ ವಾಽಶುಭಮ್ ।
ಯದ್ಯಪ್ಯಸುಕೃತಂ ಕರ್ಮ ಕೃತಮಿತ್ಯವಧಾರಯ ॥೨೪॥

ಅದು ಸುಖವಾಗಿರಲಿ ಅಥವಾ ದುಃಖವಾಗಿರಲಿ, ಶುಭವಾಗಿರಲಿ ಅಥವಾ ಅಶುಭವಾಗಿರಲಿ, ನೀನು ಯಾವ ಕಾರ್ಯವನ್ನು ಮಾಡಬೇಕೆಂದು ಬಯಸುತ್ತೀಯೋ ಅದು ಎಷ್ಟೇ ಕಷ್ಟವಾಗಿದ್ದರೂ ನಾನು ಅದನ್ನು ಮಾಡಿದ್ದೇನೆಂದು ತಿಳಿ.

ಅಹಮೇವ ಹಿ ತೇ ಕೃಷ್ಣೇ ವಿಶ್ವಾಸ್ಯಃ ಸರ್ವಕರ್ಮಸು ।
ಅಹಮಾಪತ್ಸು ಚಾಪಿ ತ್ವಾಂ ಮೋಕ್ಷಯಾಮಿ ಪುನಃ ಪುನಃ ॥೨೫॥

ದ್ರೌಪದಿಯೇ, ಎಲ್ಲ ಕಾರ್ಯಗಳಲ್ಲಿ ನಿನಗೆ ನಾನೇ ವಿಶ್ವಾಸಪ್ರದನಾದ ಆಶ್ರಯನಾಗಿದ್ದೇನೆ. ನಿನಗೆ ಬಂದೊದಗಿದ ಆಪತ್ತುಗಳನ್ನು ನಾನೇ ಪುನಃ ಪುನಃ ಬಿಡಿಸುತ್ತಿದ್ದೇನೆ.

ಶೀಘ್ರಮುಕ್ತ್ವಾ ಯಥಾಕಾಮಂ ಯತ್ ತೇ ಕಾರ್ಯಂ ವಿವಕ್ಷಿತಮ್ ।
ಗಚ್ಛ ವೈ ಶಯನಾಯೈವ ಯಾವದನ್ಯೋ ನ ಬುದ್ಧ್ಯತೇ ॥೨೬॥

ನೀನು ಇಲ್ಲಿಗೆ ಬಂದ ಉದ್ದೇಶವನ್ನು ಶೀಘ್ರವಾಗಿ ಹೇಳಿ ಇನ್ನೊಬ್ಬರು ನೋಡುವುದಕ್ಕಿಂತ ಮೊದಲು ನಿನ್ನ ಹಾಸಿಗೆಯನ್ನೇ ಸೇರುವವಳಾಗು.

ವೈಶಂಪಾಯನಃ

ಸಾ ಲಜ್ಜಮಾನಾ ಭೀತಾ ಚ ಅಧೋಮುಖಮುಖೀ ತತಃ ।
ನೋವಾಚ ಕಿಂಚಿದ್ ವಚನಂ ಬಾಷ್ಪದೂಷಿತಲೋಚನಾ ॥೨೭॥

ವೈಶಂಪಾಯನ– ಅವಳು ನಾಚಿಕೆಯಿಂದಲೂ ಭಯದಿಂದಲೂ ಕೂಡಿದವಳಾಗಿ ಮುಖವನ್ನು ಕೆಳಗೆ ಮಾಡಿ ಕಣ್ಣೀರಿನಿಂದ ತುಂಬಿದವಳಾಗಿ ಆಗ ಏನೂ ಮಾತನಾಡಲಿಲ್ಲ.

ಅಥಾಬ್ರವೀದ್ ಭೀಮಪರಾಕ್ರಮೋ ಬಲೀ
ವೃಕೋದರಃ ಪಾಂಡವಮುಖ್ಯಸಮ್ಮತಃ ।
ಪ್ರಬ್ರೂಹಿ ಕಿಂ ತೇ ಕರವಾಣಿ ಸುಂದರಿ
ಪ್ರಿಯಂ ಪ್ರಿಯೇ ವಾರಣಮತ್ತಗಾಮಿನಿ ॥೨೮॥

ಆಗ ಭೀಮಪರಾಕ್ರಮವುಳ್ಳ, ಬಲಿಷ್ಠನಾದ, ಪಾಂಡುಸುತರಲ್ಲಿ ಶ್ರೇಷ್ಠನಾದ ವೃಕೋದರನು ಅವಳನ್ನು ಕುರಿತು ಸುಂದರಿಯೇ, ಪ್ರಿಯೆಯೇ, ಮತ್ತಗಜಗಾಮಿನಿಯೇ, ನಿನಗೆ ಏನು ಪ್ರಿಯವನ್ನು ಉಂಟುಮಾಡಲಿ ಹೇಳು ಎಂದು ಹೇಳಿದನು.

ದ್ರೌಪದೀ

ಅಶೋಚ್ಯತ್ವಂ ಕುತಸ್ತಸ್ಯ ಯಸ್ಯಾ ಭರ್ತಾ ಯುಧಿಷ್ಠಿರಃ ।
ಜಾನನ್ ಸರ್ವಾಣಿ ದುಃಖಾನಿ ಕಿಂ ಮಾಂ ಭೀಮಾನುಪೃಚ್ಛಸಿ ॥೨೯॥

ದ್ರೌಪದೀ– ಯಾರಿಗೆ ಯುಧಿಷ್ಠಿರನು ಪತಿಯಾಗಿದ್ದಾನೆಯೋ ಅವಳು ದುಃಖವನ್ನು ಪಡದಿರಲು ಹೇಗೆ ಸಾಧ್ಯ? ಭೀಮಸೇನನೇ, ನೀನು ನನ್ನ ಎಲ್ಲಾ ದುಃಖಗಳನ್ನು ತಿಳಿದಿದ್ದರೂ ಏತಕ್ಕೆ ನನ್ನನ್ನು ಪ್ರಶ್ನೆ ಮಾಡುತ್ತಿದ್ದೀಯೆ?

ಯನ್ಮಾಂ ದಾಸೀಪ್ರವಾದೇನ ಪ್ರಾತಿಕಾಮೀ ತದಾऽನಯತ್ ।
ಸಭಾಯಾಂ ಪರಿಷನ್ಮಧ್ಯೇ ತನ್ಮೇ ಮರ್ಮಾಣಿ ಕೃಂತತಿ ॥೩೦॥

ಪ್ರಾತಿಕಾಮಿಯು ನನ್ನನ್ನು ದಾಸಿ ಎಂದು ಭಾವಿಸಿ ಸಭೆಯಲ್ಲಿ ಅಷ್ಟು ಜನರ ಮಧ್ಯೆ ಎಳೆದು ತಂದ ಘಟನೆಯು ನನ್ನ ಮರ್ಮಗಳನ್ನು ಭೇದಿಸುತ್ತಿದೆ.

ವಿಕೃಷ್ಯಾ ಹಸ್ತಿನಪುರೇ ಸಭಾಯಾಂ ರಾಜಸಂಸದಿ ।
ದುಃಶಾಸನೇನ ಕೇಶಾಂತೇ ಪರಾಮೃಷ್ಯಾ ರಜಸ್ವಲಾ ॥೩೧॥

ಹಸ್ತಿನಪುರದಲ್ಲಿ ರಾಜರ ಸಮಾವೇಶದಲ್ಲಿ ಸಭೆಯಲ್ಲಿ ಎಳೆದುತರಲ್ಪಟ್ಟು ರಜಸ್ವಲೆಯಾಗಿದ್ದ ನಾನು ದುಃಶಾಸನನಿಂದ ತಲೆಕೂದಲುಗಳಲ್ಲಿ ಹಿಡಿದು ಎಳೆಯಲ್ಪಟ್ಟೆ.

ಕ್ಷತ್ರಿಯೈಸ್ತತ್ರ ಕರ್ಣಾದ್ಯೈರ್ದೃಷ್ಟಾ ದುರ್ಯೋಧನೇನ ಚ ।
ಶ್ವಶುರಾಭ್ಯಾಂ ಚ ಭೀಷ್ಮೇಣ ವಿದುರೇಣ ಚ ಧೀಮತಾ ॥೩೨॥

ದ್ರೋಣೇನ ಚ ಮಹಾಬಾಹೋ ಕೃಪೇಣ ಚ ಪರಂತಪ ॥೩೩॥

ಎಲೈ ಮಹಾಬಾಹುವೇ, ಪರಂತಪನೇ, ಆಗ ಕರ್ಣ ಮೊದಲಾದ ಎಲ್ಲ ಕ್ಷತ್ರಿಯರೂ, ದುರ್ಯೋಧನನೂ, ನನ್ನ ಅತ್ತೆ-ಮಾವಂದಿರೂ, ಭೀಷ್ಮನೂ, ಮೇಧಾವಿಯಾದ ವಿದುರನೂ ಮತ್ತು ದ್ರೋಣರೂ ನನ್ನನ್ನು ನೋಡಿದರು.

ಸಾऽಹಂ ಶ್ವಶುರಯೋರ್ಮಧ್ಯೇ ಭ್ರಾತೃಮಧ್ಯೇ ಚ ಪಾಂಡವ ।
ಕೇಶೇ ಗೃಹ್ಯ ಸಭಾಂ ನೀತಾ ತ್ವಯಿ ಜೀವತಿ ಭಾರತ ॥೩೪॥

ಭಾರತನೇ, ಪಾಂಡವನೇ, ಅಂತಹ ನಾನು ಅತ್ತೆ-ಮಾವಂದಿರ ಮಧ್ಯದಲ್ಲಿ ತನ್ನ ಸಹೋದರರ ಮಧ್ಯದಲ್ಲಿ ತಲೆಯಲ್ಲಿ ಹಿಡಿದು ನೀನು ಬದುಕಿರುವಾಗ ಸಭೆಗೆ ಎಳೆದುತರಲ್ಪಟ್ಟೆ.

ವಿಪ್ರಮುಕ್ತಾ ತತಶ್ಚಾಹಂ ಹೃತರಾಜ್ಯಾ ವನಂ ಗತಾ ।
ಸಾऽಹಂ ವನೇ ದುರ್ವಸತೀರ್ವಸಂತೀ ಚಾಧ್ವಕರ್ಶಿತಾ ॥೩೫॥

ಗಜಸ್ವರಪರಿಕ್ಲೇಶೇ ತತ್ರಾಪಿ ಸುಮಹದ್ ಭಯಮ್ ॥೩೬॥

ಅಲ್ಲಿಂದ ಬಿಡುಗಡೆಯನ್ನು ಹೊಂದಿದ ನಾನು ರಾಜ್ಯವನ್ನು ಕಳೆದುಕೊಂಡು ಕಾಡನ್ನು ಬಂದು ಸೇರಿದೆ. ಅಲ್ಲಿಯೂ ಸಹ ಮಾರ್ಗಾಯಾಸದಿಂದ ಬಳಲಿ ಆನೆಗಳ ಘೀಂಕಾರದಿಂದ ಭಯಂಕರವಾದ ಕಾಡಿನಲ್ಲಿ ಕಷ್ಟಮಯವಾದ ವಾಸವನ್ನು ಮಾಡಿದೆ.

ಪಾರ್ಥಿವಸ್ಯ ಸುತಾ ನಾಮ ಕಾ ನು ಜೀವೇತ ಮಾದೃಶೀ ।
ಅನುಭೂಯ ಭೃಶಂ ದುಃಖಮನ್ಯತ್ರ ದ್ರೌಪದೀಂ ಪ್ರಭೋ ॥೩೭॥

ಪ್ರಭುವೇ, ಇಷ್ಟು ದುಃಖಗಳನ್ನು ಅನುಭವಿಸುತ್ತಿರುವ ದ್ರೌಪದಿಯಾದ ನನ್ನನ್ನು ಬಿಟ್ಟು ಬೇರೆ ಯಾವ ರಾಜಕುಮಾರಿಯು ಬದುಕಿರುತ್ತಾಳೆ?

ವನವಾಸಗತಾಯಾಶ್ಚ ಸೈಂಧವೇನ ದುರಾತ್ಮನಾ ।
ಪರಾಮರ್ಶಂ ದ್ವಿತೀಯಂ ಚ ಸೋಢುಮುತ್ಸಹತೇ ನು ಕಾ ॥೩೮॥

ವನವಾಸದ ಕಾಲದಲ್ಲಿ ದುರಾತ್ಮನಾದ ಸೈಂಧವನು ಎರಡನೆಯ ಬಾರಿಗೆ ನನ್ನನ್ನು ತಲೆಕೂದಲುಗಳಲ್ಲಿ ಹಿಡಿದು ಎಳೆದನು. ಅದನ್ನು ಯಾವಳು ಸಹಿಸುತ್ತಾಳೆ?

ಪದ್ಭ್ಯಾಂ ಪರ್ಯಚರಂ ಚಾಹಂ ದೇಶಾನ್ ವಿಷಮಸಂಸ್ಥಿತಾನ್ ।
ದುರ್ಗಾನ್ ಶ್ವಾಪದಸಂಕೀರ್ಣಾನ್ ತ್ವಯಿ ಜೀವತಿ ಪಾಂಡವ ॥೩೯॥

ಪಾಂಡವನೇ, ನೀನು ಬದುಕಿರುವಾಗ ದುರ್ಗಮವಾದ, ಕ್ರೂರಮೃಗಗಳಿಂದ ತುಂಬಿದ, ಸಮತಟ್ಟಲ್ಲದ ಕಾನನ ಪ್ರದೇಶಗಳಲ್ಲಿ ನಾನು ಕಾಲಿನಿಂದಲೇ ನಡೆದೆ.

ತತೋಽಹಂ ದ್ವಾದಶೇ ವರ್ಷೇ ಕಂದಮೂಲಫಲಾಶನಾ ।
ಇಮಾಂ ಪುರಮನುಪ್ರಾಪ್ತಾ ಸುದೇಷ್ಣಾಪರಿಚಾರಿಕಾ ॥೪೦॥

ಹನ್ನೆರಡು ವರ್ಷಗಳ ಕಾಲ ಕಂದಮೂಲಗಳ ಆಹಾರವನ್ನು ಸೇವಿಸಿ ಅನಂತರ ಈ ಪಟ್ಟಣಕ್ಕೆ ಬಂದು ಸುದೇಷ್ಣೆಯ ದಾಸಿಯಾಗಿದ್ದೇನೆ.

ಪರಸ್ತ್ರಿಯಮುಪಾತಿಷ್ಠೇ ಸತ್ಯಧರ್ಮಪಥೇ ಸ್ಥಿತಾ ।
ಗೋಶೀರ್ಷಕಂ ಪದ್ಮಕಂ ಚ ಹರಿಂ ಪಿಂಕ್ಷೇ ಚ ಚಂದನಮ್ ॥೪೧॥

ನಿತ್ಯಂ ಪಿಂಕ್ಷೇ ವಿರಾಟಸ್ಯ ತ್ವಯಿ ಜೀವತಿ ಪಾಂಡವ ॥೪೨॥

ಸತ್ಯಧರ್ಮದ ಮಾರ್ಗದಲ್ಲಿ ಇರುವ ನಾನು ಇನ್ನೊಬ್ಬನ ಪತ್ನಿಗೆ ಸೇವಕಿಯಾಗಿದ್ದೇನೆ. ಗೋಶೀರ್ಷಕ, ಪದ್ಮಕ, ಹರಿಚಂದನ ಮೊದಲಾದ ಸುಗಂಧ ದ್ರವ್ಯಗಳನ್ನು ನಿತ್ಯವೂ ಅರೆಯುತ್ತೇನೆ. ಪಾಂಡವನೇ, ನೀನು ಬದುಕಿರುವಾಗ ವಿರಾಟರಾಜನಿಗೋಸ್ಕರ ನಿತ್ಯವೂ ಗಂಧವನ್ನು ಅರೆಯುತ್ತಿದ್ದೇನೆ.

ಸಾಽಹಂ ಬಹೂನಿ ದುಃಖಾನಿ ಗಣಯಾಮಿ ಕೃತೇ ನ ತೇ ॥೪೩॥

ವಿಕೃಷ್ಟಾ ಹಸ್ತಿನಪುರೇ ಸಭಾಯಾಂ ರಾಜಸಂಸದಿ ।
ದುಃಶಾಸನೇನ ಕೇಶಾಂತೇ ಪರಾಮೃಷ್ಟಾ ರಜಸ್ವಲಾ ॥೩೧॥

ಹಸ್ತಿನಪುರದಲ್ಲಿ ರಾಜರ ಸಮಾವೇಶದಲ್ಲಿ ಸಭೆಯಲ್ಲಿ ಎಳೆದುತರಲ್ಪಟ್ಟು ರಜಸ್ವಲೆಯಾಗಿದ್ದ ನಾನು ದುಃಶಾಸನನಿಂದ ತಲೆಕೂದಲುಗಳಲ್ಲಿ ಹಿಡಿದು ಎಳೆಯಲ್ಪಟ್ಟೆ.

ಕ್ಷತ್ರಿಯೈಸ್ತತ್ರ ಕರ್ಣಾದ್ಯೈರ್ದೃಷ್ಟಾ ದುರ್ಯೋಧನೇನ ಚ ।
ಶ್ವಶುರಾಭ್ಯಾಂ ಚ ಭೀಷ್ಮೇಣ ವಿದುರೇಣ ಚ ಧೀಮತಾ ॥೩೨॥

ದ್ರೋಣೇನ ಚ ಮಹಾಬಾಹೋ ಕೃಪೇಣ ಚ ಪರಂತಪ ॥೩೩॥

ಎಲೈ ಮಹಾಬಾಹುವೇ, ಪರಂತಪನೇ, ಆಗ ಕರ್ಣ ಮೊದಲಾದ ಎಲ್ಲ ಕ್ಷತ್ರಿಯರೂ, ದುರ್ಯೋಧನನೂ, ನನ್ನ ಅತ್ತೆ-ಮಾವಂದಿರೂ, ಭೀಷ್ಮನೂ, ಮೇಧಾವಿಯಾದ ವಿದುರನೂ ಮತ್ತು ದ್ರೋಣರೂ ನನ್ನನ್ನು ನೋಡಿದರು.

ಸಾऽಹಂ ಶ್ವಶುರಯೋರ್ಮಧ್ಯೇ ಭ್ರಾತೃಮಧ್ಯೇ ಚ ಪಾಂಡವ ।
ಕೇಶೇ ಗೃಹ್ಯ ಸಭಾಂ ನೀತಾ ತ್ವಯಿ ಜೀವತಿ ಭಾರತ ॥೩೪॥

ಭಾರತನೇ, ಪಾಂಡವನೇ, ಅಂತಹ ನಾನು ಅತ್ತೆ-ಮಾವಂದಿರ ಮಧ್ಯದಲ್ಲಿ ತನ್ನ ಸಹೋದರರ ಮಧ್ಯದಲ್ಲಿ ತಲೆಯಲ್ಲಿ ಹಿಡಿದು ನೀನು ಬದುಕಿರುವಾಗ ಸಭೆಗೆ ಎಳೆದುತರಲ್ಪಟ್ಟೆ.

ವಿಪ್ರಮುಕ್ತಾ ತತಶ್ಚಾಹಂ ಹೃತರಾಜ್ಯಾ ವನಂ ಗತಾ ।
ಸಾऽಹಂ ವನೇ ದುರ್ವಸತೀರ್ವಸಂತೀ ಚಾಧ್ವಕರ್ಶಿತಾ ॥೩೫॥

ಗಜಸ್ವರಪರಿಕ್ಲೇಶೇ ತತ್ರಾಪಿ ಸುಮಹದ್ ಭಯಮ್ ॥೩೬॥

ಅಲ್ಲಿಂದ ಬಿಡುಗಡೆಯನ್ನು ಹೊಂದಿದ ನಾನು ರಾಜ್ಯವನ್ನು ಕಳೆದುಕೊಂಡು ಕಾಡನ್ನು ಬಂದು ಸೇರಿದೆ. ಅಲ್ಲಿಯೂ ಸಹ ಮಾರ್ಗಾಯಾಸದಿಂದ ಬಳಲಿ ಆನೆಗಳ ಘೀಂಕಾರದಿಂದ ಭಯಂಕರವಾದ ಕಾಡಿನಲ್ಲಿ ಕಷ್ಟಮಯವಾದ ವಾಸವನ್ನು ಮಾಡಿದೆ.

ಪಾರ್ಥಿವಸ್ಯ ಸುತಾ ನಾಮ ಕಾ ನು ಜೀವೇತ ಮಾದೃಶೀ ।
ಅನುಭೂಯ ಭೃಶಂ ದುಃಖಮನ್ಯತ್ರ ದ್ರೌಪದೀಂ ಪ್ರಭೋ ॥೩೭॥

ಪ್ರಭುವೇ, ಇಷ್ಟು ದುಃಖಗಳನ್ನು ಅನುಭವಿಸುತ್ತಿರುವ ದ್ರೌಪದಿಯಾದ ನನ್ನನ್ನು ಬಿಟ್ಟು ಬೇರೆ ಯಾವ ರಾಜಕುಮಾರಿಯು ಬದುಕಿರುತ್ತಾಳೆ?

ವನವಾಸಗತಾಯಾಶ್ಚ ಸೈಂಧವೇನ ದುರಾತ್ಮನಾ ।
ಪರಾಮರ್ಶಂ ದ್ವಿತೀಯಂ ಚ ಸೋಢುಮುತ್ಸಹತೇ ನು ಕಾ ॥೩೮॥

ವನವಾಸದ ಕಾಲದಲ್ಲಿ ದುರಾತ್ಮನಾದ ಸೈಂಧವನು ಎರಡನೆಯ ಬಾರಿಗೆ ನನ್ನನ್ನು ತಲೆಕೂದಲುಗಳಲ್ಲಿ ಹಿಡಿದು ಎಳೆದನು. ಅದನ್ನು ಯಾವಳು ಸಹಿಸುತ್ತಾಳೆ?

ಪದ್ಭ್ಯಾಂ ಪರ್ಯಚರಂ ಚಾಹಂ ದೇಶಾನ್ ವಿಷಮಸಂಸ್ಥಿತಾನ್ ।
ದುರ್ಗಾನ್ ಶ್ವಾಪದಸಂಕೀರ್ಣಾನ್ ತ್ವಯಿ ಜೀವತಿ ಪಾಂಡವ ॥೩೯॥

ಪಾಂಡವನೇ, ನೀನು ಬದುಕಿರುವಾಗ ದುರ್ಗಮವಾದ, ಕ್ರೂರಮೃಗಗಳಿಂದ ತುಂಬಿದ, ಸಮತಟ್ಟಲ್ಲದ ಕಾನನ ಪ್ರದೇಶಗಳಲ್ಲಿ ನಾನು ಕಾಲಿನಿಂದಲೇ ನಡೆದೆ.

ತತೋಽಹಂ ದ್ವಾದಶೇ ವರ್ಷೇ ಕಂದಮೂಲಫಲಾಶನಾ ।
ಇಮಾಂ ಪುರಮನುಪ್ರಾಪ್ತಾ ಸುದೇಷ್ಣಾಪರಿಚಾರಿಕಾ ॥೪೦॥

ಹನ್ನೆರಡು ವರ್ಷಗಳ ಕಾಲ ಕಂದಮೂಲಗಳ ಆಹಾರವನ್ನು ಸೇವಿಸಿ ಅನಂತರ ಈ ಪಟ್ಟಣಕ್ಕೆ ಬಂದು ಸುದೇಷ್ಣೆಯ ದಾಸಿಯಾಗಿದ್ದೇನೆ.

ಪರಸ್ತ್ರಿಯಮುಪಾತಿಷ್ಠೇ ಸತ್ಯಧರ್ಮಪಥೇ ಸ್ಥಿತಾ ।
ಗೋಶೀರ್ಷಕಂ ಪದ್ಮಕಂ ಚ ಹರಿಂ ಪಿಂಕ್ಷೇ ಚ ಚಂದನಮ್ ॥೪೧॥

ನಿತ್ಯಂ ಪಿಂಕ್ಷೇ ವಿರಾಟಸ್ಯ ತ್ವಯಿ ಜೀವತಿ ಪಾಂಡವ ॥೪೨॥

ಸತ್ಯಧರ್ಮದ ಮಾರ್ಗದಲ್ಲಿ ಇರುವ ನಾನು ಇನ್ನೊಬ್ಬನ ಪತ್ನಿಗೆ ಸೇವಕಿಯಾಗಿದ್ದೇನೆ. ಗೋಶೀರ್ಷಕ, ಪದ್ಮಕ, ಹರಿಚಂದನ ಮೊದಲಾದ ಸುಗಂಧ ದ್ರವ್ಯಗಳನ್ನು ನಿತ್ಯವೂ ಅರೆಯುತ್ತೇನೆ. ಪಾಂಡವನೇ, ನೀನು ಬದುಕಿರುವಾಗ ವಿರಾಟರಾಜನಿಗೋಸ್ಕರ ನಿತ್ಯವೂ ಗಂಧವನ್ನು ಅರೆಯುತ್ತಿದ್ದೇನೆ.

ಸಾಽಹಂ ಬಹೂನಿ ದುಃಖಾನಿ ಗಣಯಾಮಿ ಕೃತೇ ನ ತೇ ॥೪೩॥

ನಾನು ಇನ್ನೂ ಅನೇಕ ದುಃಖಗಳನ್ನು ಅನುಭವಿಸಿದರೂ ಅದನ್ನು ಕೇಳಿದರೆ ನಿನಗೆ ಕ್ಲೇಶವಾಗುವುದೆಂಬ ಕಾರಣದಿಂದ ಅವುಗಳನ್ನು ಗಣನೆಗೇ ತಂದುಕೊಳ್ಳುತ್ತಿಲ್ಲ.

ಮತ್ಸ್ಯರಾಜಸಮಕ್ಷಂ ತು ತಸ್ಯ ಧೂರ್ತಸ್ಯ ಪಶ್ಯತಃ ।
ಕೀಚಕೇನ ಪದಾ ಸ್ಪೃಷ್ಟಾ ಕಾ ನು ಜೀವೇತ ಮಾದೃಶೀ ॥೪೪॥

ಮತ್ಸ್ಯರಾಜನ ಎದುರಿಗೆ ಆ ಧೂರ್ತನು ನೋಡುತ್ತಿರುವಂತೆಯೇ ಕೀಚಕನು ನನ್ನನ್ನು ಕಾಲಿನಿಂದ ಒದ್ದನು. ನನ್ನಂತಹ ಯಾವಳು ಬದುಕಿರುತ್ತಾಳೆ?

ಏವಂ ಬಹುವಿಧೈಃ ಕ್ಲೇಶೈಃ ಕ್ಲಿಶ್ಯಮಾನಾಂ ಚ ಪಾಂಡವ ।
ನ ಮಾಂ ಜಾನಾಸಿ ಕೌಂತೇಯ ಕಿಂ ಫಲಂ ಜೀವಿತೇನ ಮೇ ॥೪೫॥

ಪಾಂಡವನೇ, ಹೀಗೆ ಅನೇಕ ಕ್ಲೇಶಗಳಿಂದ ನಾನು ಬಳಲುತ್ತಿದ್ದರೂ ನೀನು ಅದನ್ನು ತಿಳಿಯುತ್ತಿಲ್ಲ. ಕೌಂತೇಯನೇ, ನಾನು ಬದುಕಿ ಏನು ಪ್ರಯೋಜನ?

ದ್ರುಪದಸ್ಯ ಸುತಾ ಚಾಹಂ ಧೃಷ್ಟದ್ಯುಮ್ನಸ್ಯ ಚಾನುಜಾ ।
ಅಗ್ನಿಕುಂಡಾತ್ ಸಮುದ್ಭೂತಾ ನೋರ್ವ್ಯಾಂ ಜಾತು ಚರಾಮಿ ಭೋ ॥

ಪೂಜ್ಯನೇ, ನಾನು ದ್ರುಪದರಾಜನ ಮಗಳು. ಧೃಷ್ಟದ್ಯುಮ್ನನ ತಂಗಿ. ಅಗ್ನಿಕುಂಡದ ವೇದಿಕೆಯಿಂದ ಎದ್ದುಬಂದವಳು. ಭೂಮಿಯ ಮೇಲೆ ಎಂದೂ ನಡೆದವಳಲ್ಲ.

ಕೀಚಕಂ ಚೇನ್ನ ಹನ್ಯಾಸ್ತ್ವಂ ಗ್ರೀವಾಂ ಬದ್ಧ್ವಾ ಜಲೇ ಮ್ರಿಯೇ ।
ವಿಷಮಾಲೋಡ್ಯ ಪಾಸ್ಯಾಮಿ ಪ್ರವೇಕ್ಷ್ಯಾಮ್ಯಥವಾऽನಲಮ್ ॥೪೭॥

ನೀನು ಕೀಚಕನನ್ನು ಕೊಲ್ಲದಿದ್ದರೆ ನಾನು ಕತ್ತನ್ನು ಬಿಗಿದುಕೊಂಡು ನೀರಿನಲ್ಲಿ ಬಿದ್ದು ಸಾಯುವೆನು. ವಿಷವನ್ನು ಕದಡಿ ಕುಡಿಯುವೆನು ಅಥವಾ ಅಗ್ನಿಯನ್ನು ಪ್ರವೇಶಿಸುವೆನು.

ಆತ್ಮಾನಂ ನಾಶಯಿಷ್ಯಾಮಿ ವೃಕ್ಷಮಾರುಹ್ಯ ವಾ ಪತೇ ।
ಶಸ್ತ್ರೇಣಾಂಗಂ ಚ ಛೇತ್ಸ್ಯಾಮಿ ಕಿಂ ಫಲಂ ಜೀವಿತೇನ ಮೇ ॥೪೮॥

ಅಥವಾ ಮರವನ್ನು ಏರಿ ಕೆಳಗೆ ಧುಮುಕಿ ನನ್ನನ್ನು ನಾಶಮಾಡಿಕೊಳ್ಳುವೆನು. ಅಥವಾ ಶಸ್ತ್ರದಿಂದ ನನ್ನನ್ನೇ ಚುಚ್ಚಿಕೊಳ್ಳುವೆನು. ನಾನು ಬದುಕಿ ಏನು ಪ್ರಯೋಜನ?

ಯೋಽಯಂ ರಾಜ್ಞೋ ವಿರಾಟಸ್ಯ ಕೀಚಕೋ ನಾಮ ಭಾರತ ।
ಸೇನಾನೀಃ ಪುರುಷವ್ಯಾಘ್ರ ಸ್ಯಾಲಃ ಪರಮದುರ್ಮತಿಃ ॥೪೯॥

ಸ ಮಾಂ ಸೈರಂಧ್ರಿವೇಷೇಣ ಚರಂತೀಂ ರಾಜವೇಶ್ಮನಿ ।
ನಿತ್ಯಮೇವಾಹ ದುಷ್ಟಾತ್ಮಾ ಭಾರ್ಯಾ ಭವ ಮಮೇತಿ ವೈ ॥೫೦॥

ಪುರುಷವ್ಯಾಘ್ರನೇ, ವಿರಾಟರಾಜನ ಸೇನಾಧಿಪತಿಯಾದ, ಭಾವಮೈದುನನಾದ, ಪರಮದುರ್ಮತಿಯಾದ, ದುಷ್ಟಸ್ವಭಾವದವನಾದ ಈ ಕೀಚಕನು ಸೈರಂಧ್ರಿಯ ವೇಷದಿಂದ ಅರಮನೆಯಲ್ಲಿ ಚರಿಸುತ್ತಿರುವ ನನ್ನನ್ನು ಕುರಿತು ನಿತ್ಯವೂ ನನ್ನ ಪತ್ನಿಯಾಗು ಎಂದು ಹೇಳುತ್ತಾನೆ.

ತೇನೈವಂ ಚೋದ್ಯಮಾನಾಯಾ ವಧಾರ್ಹೇಣಾರಿಸೂದನ ।
ಕಾಲೇನೇವ ಫಲಂ ಪಕ್ವಂ ಹೃದಯಂ ಮೇ ವಿದೀರ್ಯತೇ ॥೫೧॥

ಶತ್ರುಸೂದನನೇ, ಅವನು ನಿತ್ಯವೂ ಹೀಗೆ ಒತ್ತಾಯ ಮಾಡುತ್ತಿರುವಾಗ ನನ್ನ ಹೃದಯವು ಪಕ್ವವಾದ ಹಣ್ಣು ಬಿರಿದುಹೋಗುವಂತೆ ಬಿರಿದುಹೋಗುತ್ತಿದೆ.

ಸ್ವರೂಪಂ ತವ ಕೌಂತೇಯ ಮಾ ಸ್ಮ ಗಚ್ಛ ಯುಧಿಷ್ಠಿರಮ್ ।
ನಿರುದ್ಯೋಗಂ ನಿರಾಮರ್ಷಂ ನಿರ್ವೀರ್ಯಮರಿತುಷ್ಟಿದಮ್ ॥೫೨॥

ಮಾ ಸ್ಮ ಸೀಮಂತಿನೀ ಕಾಚಿತ್ ಜನಯೇತ್ ಪುತ್ರಮೀದೃಶಮ್ ॥೫೩॥

ಕೌಂತೇಯನೇ, ಯುಧಿಷ್ಠಿರನು ನಿರುದ್ಯಮಿ, ಸಿಟ್ಟಿಲ್ಲದವನು, ನಿರ್ವೀರ್ಯನಾದವನು ಮತ್ತು ಶತ್ರುಗಳಿಗೆ ಸಂತೋಷವನ್ನು ಕೊಡುವವನು. ನಿನ್ನ ಸ್ವಭಾವವು ಅಂತಹದಲ್ಲ. ಯಾವ ಮುತ್ತೈದೆಯೂ ಸಹ ಧರ್ಮರಾಜನಂತಹ ಪುತ್ರನನ್ನು ಪಡೆಯದಿರಲಿ.

ವಿಜಾನಾಮಿ ತವಾಮರ್ಷಂ ಬಲಂ ವೀರ್ಯಂ ಚ ಪಾಂಡವ ।
ತತೋಽಹಂ ಪರಿದೇವಾಮಿ ಚಾಗ್ರತಸ್ತೇ ಮಹಾಬಲ ॥೫೪॥

ಪಾಂಡವನೇ, ನಾನು ನಿನ್ನ ಕೋಪವನ್ನೂ, ಬಲವನ್ನೂ ಮತ್ತು ಪರಾಕ್ರಮವನ್ನೂ ತಿಳಿದಿದ್ದೇನೆ. ಮಹಾಬಲನೇ, ಆದ್ದರಿಂದ ನಿನ್ನ ಮುಂದೆ ಗೋಳಾಡುತ್ತಿದ್ದೇನೆ.

ಯಥಾ ಯೂಥಪತಿರ್ಮತ್ತಃ ಕುಂಜರಃ ಷಷ್ಟಿಹಾಯನಃ ।
ಭೂಮೌ ನಿಪತಿತಂ ಬಿಲ್ವಂ ಪದ್ಭ್ಯಾಮಾಕ್ರಮ್ಯ ಪೀಡಯೇತ್ ॥೫೫॥

ತಥೈವ ಚ ಶಿರಸ್ತಸ್ಯ ನಿಪಾತ್ಯ ಧರಣೀತಲೇ ।
ಗಮನೇ ಪುರುಷವ್ಯಾಘ್ರ ಮರ್ದ ಪಾದೇನ ಪಾಂಡವ ॥೫೬॥

ಪುರುಷವ್ಯಾಘ್ರನೇ, ಪಾಂಡವನೇ, ಮದಿಸಿದ ಅರವತ್ತು ವರ್ಷ ವಯಸ್ಸಿನ ಸಲಗವಾದ ಆನೆಯು ಭೂಮಿಯಲ್ಲಿ ಬಿಲ್ವಫಲವನ್ನು ಬೀಳಿಸಿ ಕಾಲಿನಿಂದ ತುಳಿದು ಪುಡಿಮಾಡುವಂತೆ, ಆ ಕೀಚಕನನ್ನು ನೆಲದ ಮೇಲೆ ದಾರಿಯಲ್ಲಿ ಕೆಡವಿ ಅವನ ತಲೆಯನ್ನು ನಿನ್ನ ಪಾದದಿಂದ ಮರ್ದಿಸುವವನಾಗು.

ಸ ಚೇದುದ್ಯಂತಮಾದಿತ್ಯಂ ಪ್ರಾತರುತ್ಥಾಯ ಪಶ್ಯತಿ ।
ಕೀಚಕಃ ಶರ್ವರೀಂ ವೃಷ್ಣಾಂ ನಾಹಂ ಜೀವಿತುಮುತ್ಸಹೇ ॥೫೭॥

ಒಂದುಪಕ್ಷ ಈ ರಾತ್ರಿಯು ಕಳೆದು ನಾಳೆಯ ಪ್ರಾತಃಕಾಲದಲ್ಲಿ ಕೀಚಕನು ಸೂರ್ಯೋದಯವನ್ನು ನೋಡುವವನಾದರೆ ನಾನು ಬದುಕಲು ಇಷ್ಟಪಡುವುದಿಲ್ಲ.

ಶಾಪಿತೋಽಸಿ ಮಮ ಪ್ರಾಣೈಃ ಸುಕೃತೇನಾರ್ಜುನಸ್ಯ ಚ ।
ಯುಧಿಷ್ಠಿರಸ್ಯ ಪಾದಾಭ್ಯಾಂ ಯಮಯೋರ್ಜೀವಿತೇನ ಚ ।
ಯತ್ ಕೀಚಕವಧಂ ನಾದ್ಯ ಪ್ರತಿಜಾನಾಮಿ ಭಾರತ ॥೫೮॥

ಭಾರತನೇ, ನೀನು ಈ ದಿನ ಕೀಚಕನನ್ನು ಕೊಲ್ಲದಿದ್ದರೆ ನನ್ನ ಪ್ರಾಣದ ಮೇಲೆ ಶಪಥವನ್ನು ಮಾಡುತ್ತಿದ್ದೇನೆ, ಅರ್ಜುನನ ಪುಣ್ಯದ ಮೇಲೆ ಆಣೆಯನ್ನು ಮಾಡುತ್ತಿದ್ದೇನೆ, ಯುಧಿಷ್ಠಿರನ ಪಾದಗಳ ಮೇಲೆ ಆಣೆಯನ್ನು ಮಾಡುತ್ತಿದ್ದೇನೆ, ನಕುಲಸಹದೇವರ ಜೀವದ ಮೇಲೆ ಆಣೆಯನ್ನು ಮಾಡುತ್ತಿದ್ದೇನೆ.

ಭ್ರಾತರಂ ಚ ವಿಗರ್ಹಸ್ವ ಜ್ಯೇಷ್ಠಂ ದುರ್ದ್ಯೂತದೇವಿನಮ್ ।
ಯಸ್ಯಾಸ್ಮಿ ಕರ್ಮಣಾ ಪ್ರಾಪ್ತಾ ದುಃಖಮೇತದನಂತಕಮ್ ॥೫೯॥

ಯಾವ ಕೆಟ್ಟ ಜೂಜಿನಲ್ಲಿ ನಿರತನಾದ ನಿನ್ನ ಅಣ್ಣನ ದುಷ್ಕರ್ಮದಿಂದ ಇಂತಹ ನಿರಂತರವಾದ ದುಃಖವನ್ನು ಹೊಂದಿದ್ದೇನೆಯೋ ಅಂತಹ ಅಣ್ಣನನ್ನು ನಿಂದಿಸುವವನಾಗು.

ಕೋ ಹಿ ರಾಜ್ಯಂ ಪರಿತ್ಯಜ್ಯ ಸಪುತ್ರಪಶುಬಾಂಧವಮ್ ।
ಪ್ರವ್ರಜೇತ ಮಹಾರಣ್ಯಮಜನ್ಯೈಃ ಪರಿವಾರಿತಮ್ ॥೬೦॥

ಯಾವನು ರಾಜ್ಯವನ್ನೂ, ಪಶುಪುತ್ರಬಾಂಧವರನ್ನೂ ತೊರೆದು ಜನರಹಿತವಾದ ಮಹಾರಣ್ಯವನ್ನು ಪ್ರವೇಶಿಸುತ್ತಾನೆ?

ಯದಿ ನಿಷ್ಕಸಹಸ್ರಾಣಿ ಯಚ್ಚಾನ್ಯತ್ ಸಾರವದ್ಧನಮ್ ।
ಸಾಯಂ ಪ್ರಾತರದೇವಿಷ್ಯದಪಿ ಸಂವತ್ಸರಾಯುತಮ್ ॥೬೧॥

ರೂಪ್ಯಂ ಹಿರಣ್ಯಂ ವಾಸಾಂಸಿ ಯಾನಂ ಯುಗ್ಯಮಜಾವಿಕಮ್ ।
ಅಶ್ವಾಶ್ಚ ರಥಸಂಘಾಶ್ಚ ನ ಜಾತು ಕ್ಷಯಮಾವ್ರಜೇತ್ ॥೬೨॥

ಒಂದುಪಕ್ಷ ಸಹಸ್ರನಿಷ್ಕಗಳನ್ನು ಮತ್ತು ಶ್ರೇಷ್ಠವಾದ ಉಳಿದ ಧನವನ್ನು, ಚಿನ್ನಬೆಳ್ಳಿ ವಸ್ತ್ರಗಳು, ರಥ-ಕುದುರೆಗಳು, ಪಲ್ಲಕ್ಕಿಗಳು ಮುಂತಾದ ಯಾನಗಳು, ಆಡು-ಕುರಿ ಮೊದಲಾದ ಸಂಪತ್ತು ಇವುಗಳನ್ನು ಪಣವಾಗಿಟ್ಟು ಹತ್ತುಸಾವಿರ ವರ್ಷಗಳ ಕಾಲ ಹಗಲೂರಾತ್ರಿಯೂ ಜೂಜಾಡಿದ್ದರೂ ಆ ಸಂಪತ್ತು ಕ್ಷಯವನ್ನು ಹೊಂದುತ್ತಿರಲಿಲ್ಲ.

ಸೋಽಯಂ ದ್ಯೂತಪ್ರವಾದೇನ ಶ್ರಿಯಶ್ಚಾಪ್ಯವರೋಪಿತಃ ।
ತೂಷ್ಣೀಮಾಸ್ತೇ ಯಥಾ ಮೂಢಃ ಸ್ವಾನಿ ಕರ್ಮಾಣ್ಯಚಿಂತಯನ್ ॥೬೩॥

ಅಂತಹ ಇವನು ಜೂಜಿನ ನೆಲದಿಂದ ಎಲ್ಲ ಐಶ್ವರ್ಯವನ್ನೂ ಕಳೆದುಕೊಂಡು ತಾನು ಮಾಡಬೇಕಾದ ಕಾರ್ಯವನ್ನು ಚಿಂತಿಸದೆ ಮೂಢನಂತೆ ಸುಮ್ಮನಿದ್ದಾನೆ.

ಪುರಾ ಶತಸಹಸ್ರಾಣಿ ದಂತಿನಾಂ ಹೇಮಮಾಲಿನಾಮ್ ।
ಯಂ ಯಾಂತಮನುಯಾಂತಿ ಸ್ಮ ಸೋಽಯಂ ದ್ಯೂತೇನ ಜೀವತಿ ॥

ಹಿಂದೆ ಯಾವನು ಹೊರಟರೆ ಅವನನ್ನು ಸುವರ್ಣಮಾಲೆಯುಳ್ಳ ಒಂದುಲಕ್ಷ ಆನೆಗಳು ಹಿಂಬಾಲಿಸುತ್ತಿದ್ದವೋ ಅಂತಹ ಅವನು ಈ ದಿನ ದ್ಯೂತದಿಂದ ಜೀವಿಸುತ್ತಿದ್ದಾನೆ.

ತಥಾ ದಶಸಹಸ್ರಾಣಿ ನೃಪಾಣಾಮತಿತೇಜಸಾಮ್ ।
ಉಪಾಸತೇ ಸ್ಮ ರಾಜಾನಮಿಂದ್ರಪ್ರಸ್ಥೇ ಯುಧಿಷ್ಠಿರಮ್ ॥೬೫॥

ಯಥಾ ಯೂಥಪತಿರ್ಮತ್ತಃ ಕುಂಜರಃ ಷಷ್ಟಿಹಾಯನಃ ।
ಭೂಮೌ ನಿಪತಿತಂ ಬಿಲ್ವಂ ಪದ್ಭ್ಯಾಮಾಕ್ರಮ್ಯ ಪೀಡಯೇತ್ ॥೫೫॥

ತಥೈವ ಚ ಶಿರಸ್ತಸ್ಯ ನಿಪಾತ್ಯ ಧರಣೀತಲೇ ।
ಗಮನೇ ಪುರುಷವ್ಯಾಘ್ರ ಮರ್ದ ಪಾದೇನ ಪಾಂಡವ ॥೫೬॥

ಪುರುಷವ್ಯಾಘ್ರನೇ, ಪಾಂಡವನೇ, ಮದಿಸಿದ ಆರವತ್ತು ವರ್ಷ ವಯಸ್ಸಿನ ಸಲಗವಾದ ಆನೆಯು ಭೂಮಿಯಲ್ಲಿ ಬಿಲ್ವಫಲವನ್ನು ಬೀಳಿಸಿ ಕಾಲಿನಿಂದ ತುಳಿದು ಪುಡಿಮಾಡುವಂತೆ, ಆ ಕೀಚಕನನ್ನು ನೆಲದ ಮೇಲೆ ದಾರಿಯಲ್ಲಿ ಕೆಡವಿ ಅವನ ತಲೆಯನ್ನು ನಿನ್ನ ಪಾದದಿಂದ ಮರ್ದಿಸುವವನಾಗು.

ಸ ಚೇದುದ್ಯಂತಮಾದಿತ್ಯಂ ಪ್ರಾತರುತ್ಥಾಯ ಪಶ್ಯತಿ ।
ಕೀಚಕಃ ಶರ್ವರೀಂ ವ್ಯುಷ್ಟಾಂ ನಾಹಂ ಜೀವಿತುಮುತ್ಸಹೇ ॥೫೭॥

ಒಂದುಪಕ್ಷ ಈ ರಾತ್ರಿಯು ಕಳೆದು ನಾಳೆಯ ಪ್ರಾತಃಕಾಲದಲ್ಲಿ ಕೀಚಕನು ಸೂರ್ಯೋದಯವನ್ನು ನೋಡುವವನಾದರೆ ನಾನು ಬದುಕಲು ಇಷ್ಟಪಡುವುದಿಲ್ಲ.

ಶಾಪಿತೋಽಸಿ ಮಮ ಪ್ರಾಣೈಃ ಸುಕೃತೇನಾರ್ಜುನಸ್ಯ ಚ ।
ಯುಧಿಷ್ಠಿರಸ್ಯ ಪಾದಾಭ್ಯಾಂ ಯಮಯೋರ್ಜೀವಿತೇನ ಚ ।
ಯತ್ ಕೀಚಕವಧಂ ನಾದ್ಯ ಪ್ರತಿಜಾನಾಮಿ ಭಾರತ ॥೫೮॥

ಭಾರತನೇ, ನೀನು ಈ ದಿನ ಕೀಚಕನನ್ನು ಕೊಲ್ಲದಿದ್ದರೆ ನನ್ನ ಪ್ರಾಣದ ಮೇಲೆ ಶಪಥವನ್ನು ಮಾಡುತ್ತಿದ್ದೇನೆ, ಅರ್ಜುನನ ಪುಣ್ಯದ ಮೇಲೆ ಆಣೆಯನ್ನು ಮಾಡುತ್ತಿದ್ದೇನೆ, ಯುಧಿಷ್ಠಿರನ ಪಾದಗಳ ಮೇಲೆ ಆಣೆಯನ್ನು ಮಾಡುತ್ತಿದ್ದೇನೆ, ನಕುಲಸಹದೇವರ ಜೀವದ ಮೇಲೆ ಆಣೆಯನ್ನು ಮಾಡುತ್ತಿದ್ದೇನೆ.

ಭ್ರಾತರಂ ಚ ವಿಗರ್ಹಸ್ವ ಜ್ಯೇಷ್ಠಂ ದುರ್ದ್ಯೂತದೇವಿನಮ್ ।
ಯಸ್ಯಾಸ್ಮಿ ಕರ್ಮಣಾ ಪ್ರಾಪ್ತಾ ದುಃಖಮೇತದನಂತಕಮ್ ॥೫೯॥

ಯಾವ ಕೆಟ್ಟ ಜೂಜಿನಲ್ಲಿ ನಿರತನಾದ ನಿನ್ನ ಅಣ್ಣನ ದುಷ್ಕರ್ಮದಿಂದ ಇಂತಹ ನಿರಂತರವಾದ ದುಃಖವನ್ನು ಹೊಂದಿದ್ದೇನೆಯೋ ಅಂತಹ ಅಣ್ಣನನ್ನು ನಿಂದಿಸುವವನಾಗು.

ಕೋ ಹಿ ರಾಜ್ಯಂ ಪರಿತ್ಯಜ್ಯ ಸಪುತ್ರಪಶುಬಾಂಧವಮ್ ।
ಪ್ರವ್ರಜೇತ ಮಹಾರಣ್ಯಮಜನ್ಯೈಃ ಪರಿವಾರಿತಮ್ ॥೬೦॥

ಯಾವನು ರಾಜ್ಯವನ್ನೂ, ಪಶುಪುತ್ರಬಾಂಧವರನ್ನೂ ತೊರೆದು ಜನರಹಿತವಾದ ಮಹಾರಣ್ಯವನ್ನು ಪ್ರವೇಶಿಸುತ್ತಾನೆ?

ಯದಿ ನಿಷ್ಕಸಹಸ್ರಾಣಿ ಯಚ್ಚಾನ್ಯತ್ ಸಾರವದ್ಧನಮ್ ।
ಸಾಯಂ ಪ್ರಾತರದೇವಿಷ್ಯದಪಿ ಸಂವತ್ಸರಾಯುತಮ್ ॥೬೧॥

ರೂಪ್ಯಂ ಹಿರಣ್ಯಂ ವಾಸಾಂಸಿ ಯಾನಂ ಯುಗ್ಯಮಜಾವಿಕಮ್ ।
ಅಶ್ವಾಶ್ಚ ರಥಸಂಘಾಶ್ಚ ನ ಜಾತು ಕ್ಷಯಮಾವ್ರಜೇತ್ ॥೬೨॥

ಒಂದುಪಕ್ಷ ಸಹಸ್ರನಿಷ್ಕಗಳನ್ನು ಮತ್ತು ಶ್ರೇಷ್ಠವಾದ ಉಳಿದ ಧನವನ್ನು, ಚಿನ್ನಬೆಳ್ಳಿ ವಸ್ತ್ರಗಳು, ರಥ-ಕುದುರೆಗಳು, ಪಲ್ಲಕ್ಕಿಗಳು ಮುಂತಾದ ಯಾನಗಳು, ಆಡು-ಕುರಿ ಮೊದಲಾದ ಸಂಪತ್ತು ಇವುಗಳನ್ನು ಪಣವಾಗಿಟ್ಟು ಹತ್ತುಸಾವಿರ ವರ್ಷಗಳ ಕಾಲ ಹಗಲೂರಾತ್ರಿಯೂ ಜೂಜಾಡಿದ್ದರೂ ಆ ಸಂಪತ್ತು ಕ್ಷಯವನ್ನು ಹೊಂದುತ್ತಿರಲಿಲ್ಲ.

ಸೋಽಯಂ ದ್ಯೂತಪ್ರವಾದೇನ ಶ್ರಿಯಶ್ಚಾಪ್ಯವರೋಪಿತಃ ।
ತೂಷ್ಣೀಮಾಸ್ತೇ ಯಥಾ ಮೂಢಃ ಸ್ವಾನಿ ಕರ್ಮಾಣ್ಯಚಿಂತಯನ್ ॥೬೩॥

ಅಂತಹ ಇವನು ಜೂಜಿನ ನೆಲದಿಂದ ಎಲ್ಲ ಐಶ್ವರ್ಯವನ್ನೂ ಕಳೆದುಕೊಂಡು ತಾನು ಮಾಡಬೇಕಾದ ಕಾರ್ಯವನ್ನು ಚಿಂತಿಸದೆ ಮೂಢನಂತೆ ಸುಮ್ಮನಿದ್ದಾನೆ.

ಪುರಾ ಶತಸಹಸ್ರಾಣಿ ದಂತಿನಾಂ ಹೇಮಮಾಲಿನಾಮ್ ।
ಯಂ ಯಾಂತಮನುಯಾಂತಿ ಸ್ಮ ಸೋಽಯಂ ದ್ಯೂತೇನ ಜೀವತಿ ॥

ಹಿಂದೆ ಯಾವನು ಹೊರಟರೆ ಅವನನ್ನು ಸುವರ್ಣಮಾಲೆಯುಳ್ಳ ಒಂದುಲಕ್ಷ ಆನೆಗಳು ಹಿಂಬಾಲಿಸುತ್ತಿದ್ದವೋ ಅಂತಹ ಅವನು ಈ ದಿನ ದ್ಯೂತದಿಂದ ಜೀವಿಸುತ್ತಿದ್ದಾನೆ.

ತಥಾ ದಶಸಹಸ್ರಾಣಿ ನೃಪಾಣಾಮತಿತೇಜಸಾಮ್ ।
ಉಪಾಸತೇ ಸ್ಮ ರಾಜಾನಮಿಂದ್ರಪ್ರಸ್ಥೇ ಯುಧಿಷ್ಠಿರಮ್ ॥೬೫॥

ಹಾಗೆಯೇ, ಅಮಿತಪರಾಕ್ರಮಿಗಳಾದ ಹತ್ತುಸಹಸ್ರರಾಜರು ಇಂದ್ರಪ್ರಸ್ಥದಲ್ಲಿ ಯುಧಿಷ್ಠಿರನು ರಾಜನಾಗಿದ್ದಾಗ ಅವನ ಸೇವೆಯನ್ನು ಮಾಡುತ್ತಿದ್ದರು.

ಶತಂ ದಾಸೀಸಹಸ್ರಾಣಾಂ ಯಸ್ಯ ನಿತ್ಯಂ ಮಹಾನಸೇ ।
ಪಾತ್ರಹಸ್ತಂ ದಿವಾರಾತ್ರಮತಿಥೀನ್ ಭೋಜಯತ್ಯುತ ॥೬೬॥

ಏಷ ನಿಷ್ಕಸಹಸ್ರಾಣಿ ದತ್ತ್ವಾ ಪ್ರಾತರ್ದಿನೇದಿನೇ ।
ದ್ಯೂತಜೇನ ಹ್ಯನರ್ಥೇನ ಮಹತಾ ಸಮುಪಾಶ್ರಿತಃ ॥೬೭॥

ಯಾವನ ಬಾಣಸದಲ್ಲಿ ಹತ್ತುಸಹಸ್ರ ದಾಸಿಯರು ಹಗಲೂ ಮತ್ತು ರಾತ್ರಿಯೂ ಕೈಯಲ್ಲಿ ಪಾತ್ರೆಗಳನ್ನು ಹಿಡಿದು ಅತಿಥಿಗಳಿಗೆ ಬಡಿಸುತ್ತಿದ್ದರೋ, ಯಾವನು ಪ್ರತಿದಿನವೂ ಪ್ರಾತಃಕಾಲದಲ್ಲಿ ಸಹಸ್ರನಿಷ್ಕಗಳನ್ನು ದಾನಮಾಡುತ್ತಿದ್ದನೋ ಅಂತಹ ಯುಧಿಷ್ಠಿರನು ದ್ಯೂತದಿಂದ ಉಂಟಾದ ದೊಡ್ಡ ಅನರ್ಥದಲ್ಲಿ ಸಿಲುಕಿದ್ದಾನೆ.

ಏನಂ ಸುಸ್ವರಸಂಪನ್ನಾ ಬಹವಃ ಸೂತಮಾಗಧಾಃ ।
ಸುಪ್ತಂ ಪ್ರಾತರುಪಾತಿಷ್ಠನ್ ಸುಮೃಷ್ಟಮಣಿಕುಂಡಲಾಃ ॥೬೮॥

ಹಿಂದೆ ಇವನನ್ನು ಮಧುರವಾದ ಕಂಠವುಳ್ಳ, ಒಳ್ಳೆಯ ಮಣಿಕುಂಡಲಗಳನ್ನು ಧರಿಸಿದ ಅನೇಕ ಮಂದಿ ಸೂತ-ಮಾಗಧರು ಪ್ರಾತಃಕಾಲದಲ್ಲಿ ಸ್ತೋತ್ರವನ್ನು ಮಾಡುತ್ತಿದ್ದರು.

ಸಹಸ್ರಮೃಷಯೋ ಯಸ್ಯ ನಿತ್ಯಮಾಸನ್ ಸಭಾಸದಃ ।
ತಪಃಶ್ರುತೋಪಸಂಪನ್ನಾಃ ಸರ್ವಕಾಮೈರುಪಸ್ಥಿತಾಃ ॥೬೯॥

ತಪಸ್ಸು ಮತ್ತು ವಿದ್ಯೆಗಳಿಂದ ಪೂರ್ಣರಾದ ಸಹಸ್ರ ಋಷಿಗಳು ಅವರ ಎಲ್ಲಾ ಅಭೀಷ್ಟಗಳೂ ನೆರವೇರಿಸಲ್ಪಟ್ಟು ನಿತ್ಯವೂ ಅವನ ಸಭಾಸದರಾಗಿರುತ್ತಿದ್ದರು.

ಅಷ್ಟಾಶೀತಿಸಹಸ್ರಾಣಿ ಸ್ನಾತಕಾ ಗೃಹಮೇಧಿನಃ ।
ತ್ರಿಂಶದ್ದಾಸೀಕ ಏಕೈಕೋ ಯಾನ್ ಬಿಭರ್ತಿ ಯುಧಿಷ್ಠಿರಃ ॥೭೦॥

ಎಂಬತ್ತೆಂಟು ಸಹಸ್ರ ಸ್ನಾತಕರು ಮತ್ತು ಗೃಹಸ್ಥರು ಇವರಲ್ಲಿ ಒಬ್ಬೊಬ್ಬರಿಗೂ ಮೂವತ್ತು ದಾಸಿಯರು - ಇಂತಹವರನ್ನು ಯುಧಿಷ್ಠಿರನು ಪೋಷಿಸುತ್ತಿದ್ದನು.

ಅಪ್ರತಿಗ್ರಾಹಿಣಾಂ ಚೈವ ಯತೀನಾಮೂರ್ಧ್ವರೇತಸಾಮ್ ।
ದಶ ಚಾಪಿ ಸಹಸ್ರಾಣಿ ಸೋಯಮಾಸ್ತೇ ನರೇಶ್ವರಃ ॥೭೧॥

ಪ್ರತಿಗ್ರಹಶೂನ್ಯರಾದ ಊರ್ಧ್ವರೇತಸ್ಕರಾದ ಹತ್ತುಸಾವಿರ ಸಂನ್ಯಾಸಿಗಳನ್ನು ಪೋಷಿಸುತ್ತಿದ್ದ ಈ ನರೇಶ್ವರನು ಈಗ ಸುಮ್ಮನಿದ್ದಾನೆ.

ಆನೃಶಂಸ್ಯಮನುಕ್ರೋಶಃ ಸಂವಿಭಾಗಸ್ತಥೈವ ಚ ।
ಯಸ್ಮಿನ್ನೇತಾನಿ ಸರ್ವಾಣಿ ಸೋಯಮಾಸ್ತೇ ಯುಧಿಷ್ಠಿರಃ ॥೭೨॥

ಮಾರ್ದವ, ದಯೆ, ತನ್ನ ಸಂಪತ್ತನ್ನು ಇನ್ನೊಬ್ಬರಿಗೆ ಹಂಚುವುದು ಮೊದಲಾದ ಎಲ್ಲ ಗುಣಗಳನ್ನೂ ಹೊಂದಿದ್ದ ಯುಧಿಷ್ಠಿರನು ಈಗ ಸುಮ್ಮನಿದ್ದಾನೆ.

ಅಂಧಾನ್ ವೃದ್ಧಾಂಸ್ತಥಾ ದೀನಾನ್ ಸರ್ವರಾಷ್ಟ್ರೇಷು ದುಃಖಿತಾನ್ ।
ಬಿಭರ್ತ್ಯನಾರ್ಥಿನೋ ನಿತ್ಯಮಾನೃಶಂಸ್ಯಾದ್ ಯುಧಿಷ್ಠಿರಃ ॥೭೩॥

ಯುಧಿಷ್ಠಿರನು ಕರುಣೆಯಿಂದ ಅಂಧರನ್ನು, ವೃದ್ಧರನ್ನು, ದೀನರನ್ನು, ಮತ್ತು ತನ್ನ ರಾಷ್ಟ್ರದಲ್ಲಿರುವ ಅನಾರ್ಥಿಗಳಾದ ಎಲ್ಲಾ ದುಃಖಿತರನ್ನು ಪೋಷಿಸುತ್ತಿದ್ದನು.

ಸ ಏಷ ನಿಲಯಂ ಪ್ರಾಪ್ತೋ ಮಾತ್ಸ್ಯಸ್ಯ ಪರಿಚಾರಕಃ ।
ಸಭಾಯಾಂ ವಿದಿತೋ ರಾಜ್ಞಃ ಕಂಕೋ ನಾಮ ಯುಧಿಷ್ಠಿರಃ ॥೭೪॥

ಅಂತಹ ಯುಧಿಷ್ಠಿರನು ಕಂಕ ಎಂಬ ಹೆಸರಿನಿಂದ ವಿರಾಟರಾಜನ ಸಭೆಯಲ್ಲಿ ಪ್ರಸಿದ್ಧನಾಗಿ, ಅವನ ಅರಮನೆಯನ್ನು ತಲುಪಿ ಅವನಿಗೆ ಪರಿಚಾರಕನಾಗಿದ್ದಾನೆ.

ಇಂದ್ರಪ್ರಸ್ಥೇ ನಿವಸತಃ ಸಮಯೇ ಯಸ್ಯ ಪಾರ್ಥಿವಾಃ ।
ಆಸನ್ ಬಲಿಕರಾಃ ಸರ್ವೇ ಸೋಽನ್ಯೇಭ್ಯೋ ಭೂತಿಮಿಚ್ಛತಿ ॥೭೫॥

ಒಂದು ಕಾಲದಲ್ಲಿ ಇಂದ್ರಪ್ರಸ್ಥದಲ್ಲಿ ವಾಸಿಸುತ್ತಿದ್ದ ಯಾವ ಅವನಿಗೆ ಎಲ್ಲ ರಾಜರೂ ಕಪ್ಪವನ್ನು ಒಪ್ಪಿಸುತ್ತಿದ್ದರೋ ಅಂತಹ ಅವನು ಇನ್ನೊಬ್ಬರಿಂದ ತನ್ನ ಸಂಪತ್ತನ್ನು ಬಯಸುತ್ತಿದ್ದಾನೆ.

ಪಾರ್ಥಿವಾಃ ಪೃಥಿವೀಪಾಲಾ ಯಸ್ಯಾಸನ್ ವಶವರ್ತಿನಃ ।
ಸ ವಶೇ ವಿವಶೋ ರಾಜ್ಞಾಂ ಪರೇಷಾಮದ್ಯ ವರ್ತತೇ ॥೭೬॥

ಭೂಮಿಗೆ ಒಡೆಯರಾದ ಅನೇಕ ರಾಜರು ಹಿಂದೆ ಯಾವನಿಗೆ ವಶವರ್ತಿಗಳಾಗಿದ್ದರೋ ಅವನು ಈ ದಿನ ವಿವಶನಾಗಿ ಬೇರೆ ರಾಜರ ವಶವರ್ತಿಯಾಗಿದ್ದಾನೆ.

ಸಂಪ್ರಾಪ್ಯ ಪೃಥಿವೀಂ ಸರ್ವಾಂ ರಶ್ಮಿಮಾನಿವ ತೇಜಸಾ ।
ಸೋಽದ್ಯ ರಾಜ್ಞೋ ವಿರಾಟಸ್ಯ ಸಭಾಸ್ತಾರೋ ಯುಧಿಷ್ಠಿರಃ ॥೭೭॥

ಯಾವನು ತನ್ನ ಸೂರ್ಯನಂತೆ ಬೆಳಗುವ ಪರಾಕ್ರಮದಿಂದ ಸಮಸ್ತವಾದ ಪೃಥಿವಿಯನ್ನು ಪಡೆದಿದ್ದನೋ ಅಂತಹ ಯುಧಿಷ್ಠಿರನು ಈ ದಿನ ವಿರಾಟನ ಸಭಾಸ್ತಾರನಾಗಿ ಕುಳಿತಿದ್ದಾನೆ.

ಯಮುಪಾಸತ ರಾಜಾನಂ ಸಭಾಯಾಮ್ ಋಷಿಸತ್ತಮಾಃ ।
ತಮುಪಾಸಂತಮದ್ಯಾನ್ಯಂ ಪಶ್ಯ ಪಾಂಡವ ಪಾಂಡವಮ್ ॥೭೮॥

ಪಾಂಡವನೇ, ಯಾವ ಧರ್ಮರಾಜನು ಸಭೆಯಲ್ಲಿ ಕುಳಿತಿದ್ದಾಗ ಋಷಿಶ್ರೇಷ್ಠರು ಅವನ ಉಪಾಸೆಯನ್ನು ಮಾಡುತ್ತಿದ್ದರೋ ಅಂತಹ ಯುಧಿಷ್ಠಿರನು ಈ ದಿನ ಇನ್ನೊಬ್ಬರ ಉಪಾಸನೆಯನ್ನು ಮಾಡುತ್ತಿರುವುದನ್ನು ನೋಡು.

ಸಹಸ್ರಂ ವಾಲಖಿಲ್ಯಾನಾಂ ಸಹಸ್ರಮುದವಾಸಿನಾಮ್ ।
ಸಹಸ್ರಮಗ್ನಿಕುಂಡಾನಾಂ ಸಹಸ್ರಂ ವಾಯುಭೋಜಿನಾಮ್ ॥೭೯॥

ಸಹಸ್ರಂ ಮುಕ್ತಪತ್ನೀನಾಂ ಸಹಸ್ರಂ ಬ್ರಹ್ಮಚಾರಿಣಾಮ್ ।
ಸಹಸ್ರಮಾಹಿತಾಗ್ನೀನಾಂ ಸಹಸ್ರಂ ಗೃಹಮೇಧಿನಾಮ್ ॥೮೦॥

ಹಂಸಾಃ ಪರಮಹಂಸಾಶ್ಚ ಯೋಗಿನಶ್ಚ ದ್ವಿಜಾತಯಃ ।
ಕುಟೀಚಕಾ ಪರಿವ್ರಾಜೋ ಯೇ ಚಾನ್ಯೇ ವ್ರತಚಾರಿಣಃ ॥೮೧॥

ಸಂವಿಭಕ್ತಾತ್ಮಕಾಶ್ಚೈವ ಬಹವಶ್ಚೋರ್ಧ್ವರೇತಸಃ ।
ಚತುರ್ವೇದವಿದೋ ವಿಪ್ರಾಃ ಶಿಕ್ಷಾಮೀಮಾಂಸಪಾರಗಾಃ ॥೮೨॥

ಕ್ರಮಪಾಠಾಶ್ಚ ಯೇ ವಿಪ್ರಾಃ ಸಾಮಾಧ್ಯಾಯನಿಕಾಶ್ಚ ಯೇ ।
ಸ ಏಷ ನಿಲಯಂ ಪ್ರಾಪ್ತೋ ಮಾತ್ಸ್ಯಸ್ಯ ಪರಿಚಾರಕಃ ॥೮೩॥

ಸಹಸ್ರ ವಾಲಖಿಲ್ಯರೂ, ಸಹಸ್ರ ಸಂಖ್ಯೆಯ ತ್ರಿಕಾಲಸ್ನಾನವನ್ನು ಮಾಡುವವರೂ, ಸಹಸ್ರ ಸಂಖ್ಯೆಯ ಪಂಚಾಗ್ನಿ ತಪಸ್ವಿಗಳೂ, ಸಹಸ್ರ ಸಂಖ್ಯೆಯ ವಾಯುಭಕ್ಷರೂ, ಸಹಸ್ರ ಸಂಖ್ಯೆಯ ಗೃಹಸ್ಥಾಶ್ರಮವನ್ನು ತೊರೆದ ಸಂನ್ಯಾಸಿಗಳೂ, ಸಹಸ್ರ ಬ್ರಹ್ಮಚಾರಿಗಳೂ, ಸಹಸ್ರ ಆಹಿತಾಗ್ನಿಗಳೂ, ಸಹಸ್ರ ಗೃಹಸ್ಥರೂ ಮತ್ತು ಹಂಸರೂ, ಪರಮಹಂಸರೂ, ಯೋಗಿಗಳೂ, ಕುಟೀಚಕರೂ, ಪರಿವ್ರಾಜಕರೂ, ವ್ರತಚಾರಿಗಳೂ ಆದ ಬ್ರಾಹ್ಮಣರು ತಮ್ಮ ಎಲ್ಲ ಆಸ್ತಿಯನ್ನು ಹಂಚಿ ಊರ್ಧ್ವರೇತಸ್ಕರಾದ ಅನೇಕ ಮಂದಿ ಸಂನ್ಯಾಸಿಗಳೂ, ಚತುರ್ವೇದಗಳನ್ನು ತಿಳಿದು ಶಿಕ್ಷಾಮೀಮಾಂಸಾದಿ ಪಾರಂಗತರಾದ ಅನೇಕ ಬ್ರಾಹ್ಮಣರೂ, ಕ್ರಮಪಾಠಗಳನ್ನು ಬಲ್ಲ ಬ್ರಾಹ್ಮಣರೂ, ಸಾಮಗಾನವನ್ನು ಮಾಡುವವರೂ ಇವರೆಲ್ಲರೂ ಯಾವನನ್ನು ಉಪಾಸನೆ ಮಾಡುತ್ತಿದ್ದರೋ ಅಂತಹ ಇವನು ವಿರಾಟರಾಜನ ಪರಿಚಾರಕನಾಗಿ ಅವನ ಮನೆಯನ್ನು ಸೇರಿದ್ದಾನೆ.

ಅನವದ್ಯಂ ಮಹಾಪ್ರಾಜ್ಞಂ ಜೀವಿತಾರ್ಥೇನ ಸಂವೃತಮ್ ।
ದೃಷ್ಟ್ವಾ ಕಸ್ಯ ನ ದುಃಖಂ ಸ್ಯಾದ್ ಧರ್ಮರಾಜಂ ಯುಧಿಷ್ಠಿರಮ್ ॥

ನಿರ್ದೋಷಿಯೂ ಮಹಾಪ್ರಾಜ್ಞನೂ, ಜೀವನದ ಸಲುವಾಗಿ ಯತಿವೇಷವನ್ನು ಧರಿಸಿದವನೂ ಆದ ಧರ್ಮರಾಜನಾದ ಯುಧಿಷ್ಠಿರನನ್ನು ನೋಡಿ ಯಾರಿಗೆ ದುಃಖವಾಗುವುದಿಲ್ಲ?

ಉಪಾಸ್ತೇ ಸ್ಮ ಸಭಾಯಾಂ ಯಂ ಕೃತ್ಸ್ನಾ ಚೈವ ವಸುಂಧರಾ ।
ತಮುಪಾಸಂತಮದ್ಯಾನ್ಯಂ ಪಶ್ಯ ಭಾರತ ಭಾರತಮ್ ॥೮೫॥

ಯಾವನು ಸಭೆಯಲ್ಲಿ ಕುಳಿತಿದ್ದಾಗ ಸಮಗ್ರವಾದ ಭೂಮಿಯು ಅವನನ್ನು ಉಪಾಸನೆ ಮಾಡುತ್ತಿದ್ದಿತೋ ಎಲೈ ಭಾರತನೇ, ಅಂತಹ ಯುಧಿಷ್ಠಿರನು ಈ ದಿನ ಇನ್ನೊಬ್ಬರ ಉಪಾಸನೆಯನ್ನು ಮಾಡುವುದನ್ನು ನೋಡು.

ಏವಂ ಬಹುವಿಧೈರ್ದುಃಖೈಃ ಪೀಡ್ಯಮಾನಾಮನಾಥವತ್ ।
ಶೋಕಸಾಗರಮಧ್ಯಸ್ಥಾಂ ಕಿಂ ಮಾಂ ಭೀಮ ನ ಪಶ್ಯಸಿ ॥೮೬॥

ಭೀಮಸೇನನೇ, ಹೀಗೆ ನಾನು ಅನಾಥಳಂತೆ ಅನೇಕ ವಿಧವಾದ ದುಃಖಗಳಿಂದ ಪೀಡಿತಳಾಗಿ ಶೋಕಸಾಗರದಲ್ಲಿ ಮುಳುಗಿರುವುದು ನಿನಗೆ ಕಾಣಿಸುವುದಿಲ್ಲವೇ?

ಇದಂ ತು ಮೇ ದುಃಖತರಂ ಯತ್ ತ್ವಾಂ ವಕ್ಷ್ಯಾಮಿ ಭಾರತ ।
ನ ಮೇ ಹ್ಯಸೂಯಾ ಕರ್ತವ್ಯಾ ದುಃಖಾದೇತದ್ ಬ್ರವೀಮ್ಯಹಮ್ ॥

ಭಾರತನೇ, ಇದು ನನಗೆ ಎಲ್ಲದ್ದಕ್ಕಿಂತಲೂ ದುಃಖಕರವಾದುದು. ಇದನ್ನು ದುಃಖದಿಂದ ಹೇಳುತ್ತಿದ್ದೇನೆ. ನನ್ನ ಮೇಲೆ ಅಸೂಯೆಯನ್ನು ಮಾಡಬೇಡ.

ಶಾರ್ದೂಲೈರ್ಮಹಿಷೈರ್ನಾಗೈರಗಾರೇ ಯೋತ್ಸ್ಯಸೇ ಸದಾ ।
ಕೈಕೇಯ್ಯಾಃ ಪ್ರೇಕ್ಷಮಾಣಾಯಾಃ ತದಾ ಮೇ ಕಶ್ಮಲೋಽಭವತ್ ॥೮೮॥

ನೀನು ಕೈಕೇಯಿಯ ಅರಮನೆಯಲ್ಲಿ ಅವಳ ಕಣ್ಣೆದುರಿಗೆ ಹುಲಿಗಳು, ಕಾಡು ಕೋಣಗಳು ಮತ್ತು ಗಜಗಳ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ನನಗೆ ಬಹಳ ದುಃಖವಾಗುತ್ತದೆ.

ಸೂದಕರ್ಮಣಿ ಭೀಮ ತ್ವಮಸಮೇ ಭರತರ್ಷಭ ।
ಬ್ರುವನ್ ವಲ್ಲವಜಾತೀಯಃ ಕಸ್ಯ ಶೋಕಂ ನ ವರ್ಧಯೇಃ ॥೮೯॥

ಭರತರ್ಷಭನೇ, ನಿನಗೆ ಯೋಗ್ಯವಲ್ಲದ ಅಡಿಗೆಯ ಕರ್ಮದಲ್ಲಿ ನಿರತನಾಗಿ ನಾನು ವಲ್ಲವ ಜಾತಿಯವನು ಎಂದು ಹೇಳಿಕೊಳ್ಳುವ ನೀನು ಯಾರಿಗೆ ದುಃಖವನ್ನು ಉಂಟುಮಾಡುವುದಿಲ್ಲ?

ಸೂಪಕಾರಂ ವಿರಾಟಸ್ಯ ವಲ್ಲವಂ ತ್ವಂ ವಿದುರ್ಜನಾಃ ।
ಪ್ರೇಷ್ಯತ್ವಂ ಸಮನುಪ್ರಾಪ್ತಂ ತತೋ ದುಃಖತರಂ ನು ಕಿಮ್ ॥೯೦॥

ನಿನ್ನನ್ನು ಜನರು ವಲ್ಲವನೆಂದೂ, ವಿರಾಟನ ಅಡುಗೆಯವನೆಂದೂ, ಅವನ ಸೇವಕನೆಂದೂ ತಿಳಿಯುತ್ತಾರೆ. ಇದಕ್ಕಿಂತ ದುಃಖಕರವಾದುದು ಏನಿದೆ?

ಯದಾ ಮಹಾನಸೇ ಸಿದ್ಧೇ ವಿರಾಟಮುಪತಿಷ್ಠಸಿ ।
ಬ್ರುವಾಣೋ ವಲ್ಲವಃ ಸೂದಸ್ತದಾ ಸೀದತಿ ಮೇ ಮನಃ ॥೯೧॥

ಬಾಣಸದಲ್ಲಿ ಪಾಕವು ಸಿದ್ಧವಾದಾಗ ನೀನು ವಿರಾಟನ ಬಳಿಗೆ ಬಂದು 'ವಲ್ಲವನಾದ ನಾನು ಹೇಳುತ್ತಿದ್ದೇನೆ, ಅಡುಗೆಯು ಸಿದ್ಧವಾಗಿದೆ' ಎಂದು ಹೇಳುವಾಗ ನನ್ನ ಮನಸ್ಸು ಮುದುಡಿಹೋಗುತ್ತದೆ.

ಯದಾ ಪ್ರಹೃಷ್ಟಃ ಸಮ್ರಾಟ್ ತ್ವಾಂ ಸಂಯೋಧಯತಿ ಕುಂಜರೈಃ ॥೯೨॥

ಹಸಂತ್ಯಂತಃಪುರೇ ನಾರ್ಯೋ ಮಮ ಚೇಷ್ಟಾಂ ನಿರೀಕ್ಷ್ಯ ಚ ॥೯೩॥

ಸಂತೋಷಗೊಂಡ ರಾಜನು ನೀನು ಆನೆಗಳ ಜೊತೆಯಲ್ಲಿ ಯುದ್ಧವನ್ನು ಮಾಡುವಂತೆ ಆಜ್ಞಾಪಿಸಿದಾಗ ಅದನ್ನು ನೋಡಿ ನನ್ನ ಪ್ರತಿಕ್ರಿಯೆಯನ್ನು ನೋಡಿ ಅಂತಃಪುರದಲ್ಲಿರುವ ನಾರಿಯರು ಹಾಸ್ಯಮಾಡುತ್ತಾರೆ.

ತತ ಉತ್ಥಾಯ ಕೈಕೇಯೀ ಸರ್ವಾಸ್ತಾಃ ಪ್ರತ್ಯಭಾಷತ ।
ಪ್ರೇಕ್ಷ್ಯ ಮಾಮನವದ್ಯಾಂಗೀಂ ಕಶ್ಮಲಾಭಿಹತಾಮಿವ ॥೯೪॥

ಸ್ನೇಹಾತ್ ಸಂವಾಸಜಾದೇವ ಸದಾ ವೈ ಚಾರುಹಾಸಿನೀ ।
ಯುಧ್ಯಮಾನಂ ಮಹಾವೀರ್ಯಮಿಮಂ ಸಮನುಶೋಚತಿ ॥೯೫॥

ಆಗ ಸುದೇಷ್ಣೆಯು ಅನವದ್ಯಾಂಗಿಯಾದ ನಾನು ದುಃಖಪಡುತ್ತಿರುವುದನ್ನು ನೋಡಿ ಎದ್ದು ಅವರೆಲ್ಲರನ್ನೂ ಕುರಿತು ಒಂದೇ ಮನೆಯಲ್ಲಿ ವಾಸಮಾಡಿರುವುದರಿಂದ ಉಂಟಾದ ಸ್ನೇಹದಿಂದ ಚಾರುಹಾಸಿನಿಯಾದ ಸೈರಂಧ್ರಿಗೆ ಯುದ್ಧಮಾಡುವ ಮಹಾವೀರ್ಯನಾದ ಈ ವಲಲನನ್ನು ನೋಡಿ ಶೋಕವುಂಟಾಗುತ್ತದೆ ಎಂದು ಹೇಳುತ್ತಾಳೆ.

ಕಲ್ಯಾಣರೂಪಾ ಸೈರಂಧ್ರೀ ವಲಲಶ್ಚಾಪಿ ಸುಂದರಃ ।
ಸ್ತ್ರೀಣಾಂ ಚಿತ್ತಂ ಹಿ ದುರ್ಜ್ಞೇಯಂ ಯುಕ್ತರೂಪೌ ಹಿ ಮೇ ಮತೌ ॥

ಸೈರಂಧ್ರೀ ಪ್ರಿಯಸಂವಾಸಾನ್ನಿತ್ಯಂ ಕರುಣವಾದಿನೀ ।
ಅಸ್ಮಿನ್ ರಾಜಕುಲೇ ಚೇಮೌ ತುಲ್ಯಕಾಲನಿವಾಸಿನೌ ॥೯೭॥

ಇತಿ ಬ್ರುವಾಣಾ ವಾಕ್ಯಾನಿ ಸಾ ಮಾಂ ನಿತ್ಯಮಜೀಜಪತ್ ॥೯೮॥

ಕ್ರುದ್ಧ್ಯಂತೀಂ ಮಾಂ ಚ ಸಂಪ್ರೇಕ್ಷ್ಯ ಪರ್ಯಶಂಕತ ಮಾಂ ತ್ವಯಿ ॥

ಸೈರಂಧ್ರಿಯು ಸುಂದರರೂಪವುಳ್ಳವಳಾಗಿದ್ದಾಳೆ. ವಲಲನೂ ಸುಂದರನಾಗಿದ್ದಾನೆ. ಸ್ತ್ರೀಯರ ಮನಸ್ಸನ್ನು ತಿಳಿಯಲು ಸಾಧ್ಯವಿಲ್ಲ. ಅವರು ಪರಸ್ಪರ ಅನುರೂಪರಾಗಿದ್ದಾರೆ ಎಂದು ನನ್ನ ಅಭಿಪ್ರಾಯ. ಸೈರಂಧ್ರಿಯು ಪ್ರಿಯರ ಜೊತೆಯಲ್ಲೇ ಮಾತನಾಡುತ್ತಾ

ಯಾವಾಗಲೂ ಅವನ ವಿಷಯದಲ್ಲಿ ಕರುಣೆಯಿಂದಲೇ ಮಾತನಾಡುತ್ತಾಳೆ. ಇವರಿಬ್ಬರೂ ಸಹ ಈ ರಾಜಕುಲದಲ್ಲಿ ಸಮಾನವಾದ ಸಮಯದಲ್ಲಿಯೇ ವಾಸಿಸಿದ್ದಾರೆ ಎಂದು ಹೀಗೆ ಹೇಳುತ್ತಾ ಅವಳು ನಿತ್ಯವೂ ನನ್ನನ್ನು ಜಪಿಸುತ್ತಿದ್ದಳು (ಚಿಂತಿಸುತ್ತಿದ್ದಳು). ಕೋಪಗೊಳ್ಳುತ್ತಿರುವ ನನ್ನನ್ನು ನೋಡಿ ಅವಳು ನಿನ್ನಲ್ಲಿ ನನಗೆ ಪ್ರೀತಿ ಇದೆ ಎಂದೂ ಶಂಕಿಸುತ್ತಿದ್ದಳು.

ವೈಶಂಪಾಯನಃ

ತಸ್ಯಾಂ ತಥಾ ಬ್ರುವಂತ್ಯಾಂ ತು ಭೀಮೋ ಭೀಮಪರಾಕ್ರಮಃ ।
ನೋವಾಚ ಕಿಂಚಿದ್ ವಚನಂ ಸಂರಂಭಾತ್ ರಕ್ತಲೋಚನಃ ॥೧೦೦॥

ವೈಶಂಪಾಯನ– ಅವಳು ಹಾಗೆ ಮಾತನಾಡುತ್ತಿರುವಾಗ ಭೀಮಪರಾಕ್ರಮನೂ ಸಿಟ್ಟಿನಿಂದ ಕೆಂಪಾದ ಕಣ್ಣುಳ್ಳವನೂ ಆದ ಭೀಮಸೇನನು ಏನನ್ನೂ ಮಾತನಾಡಲಿಲ್ಲ.

ಜ್ಞಾತ್ವಾ ತು ರುಷಿತಂ ಭೀಮಂ ದ್ರೌಪದೀ ಪುನರಬ್ರವೀತ್ ।
ತ್ವಯ್ಯೇವ ನಿರಯಂ ಪ್ರಾಪ್ತೇ ಭೀಮ ಭೀಮಪರಾಕ್ರಮೇ ॥೧೦೧॥

ಶೋಕೇ ಯೌಧಿಷ್ಠಿರೇ ಮಗ್ನಾ ನಾಹಂ ಜೀವಿತುಮುತ್ಸಹೇ ॥೧೦೨॥

ಭೀಮಸೇನನು ರೋಷಗೊಂಡಿರುವುದನ್ನು ತಿಳಿದು ದ್ರೌಪದಿಯು ಪುನಃ ಅವನನ್ನು ಕುರಿತು ಭೀಮಸೇನನೇ, ಭೀಮಪರಾಕ್ರಮವುಳ್ಳವ ನೀನೇ ಇಂತಹ ದುರ್ಗತಿಯನ್ನು ಹೊಂದಿರುವಾಗ ಯುಧಿಷ್ಠಿರನಿಂದ ಉಂಟಾದ ಶೋಕಸಾಗರದಲ್ಲಿ ಮಗ್ನಳಾದ ನಾನು ಬದುಕಲು ಇಚ್ಛಿಸುವುದಿಲ್ಲ ಎಂದು ಹೇಳಿದಳು.

ಯಃ ಸ ದೇವಾನ್ ಮನುಷ್ಯಾಂಶ್ಚ ಸರ್ವಾನೇಕರಥೋಽಜಯತ್ ।
ಸೋಽಯಂ ರಾಜ್ಞೋ ವಿರಾಟಸ್ಯ ಕನ್ಯಾನರ್ತನಕೋ ಯುವಾ ॥೧೦೩॥

ಯಾವ ಅರ್ಜುನನು ಏಕರಥದಲ್ಲಿ ಕುಳಿತು ಎಲ್ಲಾ ದೇವತೆಗಳನ್ನೂ ಮತ್ತು ಮನುಷ್ಯರನ್ನೂ ಜಯಿಸಿದನೋ ಅಂತಹ ಯುವಕನಾದ ಅವನು ಈ ದಿನ ವಿರಾಟರಾಜನ ಕನ್ಯೆಯರಿಗೆ ನಾಟ್ಯಾಚಾರ್ಯನಾಗಿದ್ದಾನೆ.

ಯೋಽತರ್ಪಯದಮೇಯಾತ್ಮಾ ಖಾಂಡವೇ ಜಾತವೇದಸಮ್ ।
ಸೋಽಂತಃಪುರಗತಃ ಪಾರ್ಥಃ ಕೂಪೇಽಗ್ನಿರಿವ ಸಂವೃತಃ ॥೧೦೪॥

ಯಾವ ಅಪರಿಮಿತವಾದ ಮಹಿಮೆಯುಳ್ಳವನೂ ಖಾಂಡವವನದಲ್ಲಿ ಅಗ್ನಿದೇವನನ್ನು ಸಂತೋಷಪಡಿಸಿದನೂ ಆದ ಪಾರ್ಥನು ಅಂತಃಪುರದಲ್ಲಿ ಕೂಪದಲ್ಲಿರುವ ಅಗ್ನಿಯಂತೆ ಮುಚ್ಚಲ್ಪಟ್ಟಿದ್ದಾನೆ.

ಯಸ್ಮಾದ್ ಭಯಮಮಿತ್ರಾಣಾಂ ಸದೈವ ಪುರುಷರ್ಷಭಾತ್ ।
ಸ ಲೋಕಪರಿಭೂತೇನ ವೇಷೇಣಾಸ್ತೇ ಧನಂಜಯಃ ॥೧೦೫॥

ಯಾವ ಪುರುಷಶ್ರೇಷ್ಠನಿಗೆ ಎಲ್ಲ ಶತ್ರುಗಳು ಯಾವಾಗಲೂ ಹೆದರುತ್ತಿದ್ದರೋ ಅಂತಹ ಧನಂಜಯನು ಲೋಕನಿಂದಿತವಾದ ನಪುಂಸಕವೇಷದಲ್ಲಿದ್ದಾನೆ.

ಯಸ್ಯ ಜ್ಯಾಕ್ಷೇಪಕಠಿನೌ ಬಾಹೂ ಪರಿಘಸನ್ನಿಭೌ ।
ಸ ಶಂಖಪರಿಪೂರ್ಣಾಭ್ಯಾಂ ಶೋಚನಾಸ್ತೇ ಧನಂಜಯಃ ॥೧೦೬॥

ಯಾವನ ಒನಕೆಯಂತಹ ಬಾಹುಗಳು ಹೆದೆಯ ಘರ್ಷಣದಿಂದ ಕಠಿಣವಾಗಿವೆಯೋ ಅಂತಹ ಧನಂಜಯನು ಬಾಹುಗಳಲ್ಲಿ ಶಂಖದಿಂದ ಮಾಡಿದ ಬಳೆಗಳನ್ನು ಪೂರ್ಣವಾಗಿ ಧರಿಸಿ ದುಃಖಪಡುತ್ತಿದ್ದಾನೆ.

ಯಸ್ಯ ಜ್ಯಾತಲನಿರ್ಘೋಷಾತ್ ಸಮಕಂಪಂತ ಶತ್ರವಃ ।
ಷಂಡರೂಪಂ ವಹಂತಂ ತಂ ನೃತ್ಯಗೀತೈಶ್ಚ ಲಂಬಿನಮ್ ॥೧೦೭॥

ಕುರ್ವಂತಮರ್ಜುನಂ ದೃಷ್ಟ್ವಾ ನ ಮೇ ಸ್ವಾಸ್ಥ್ಯಂ ಮನೋ ವ್ರಜೇತ್ ।
ಸ್ತ್ರಿಯೋ ಗೀತಸ್ವನಂ ತಸ್ಯ ಮುದಿತಾಃ ಪರ್ಯುಪಾಸತೇ ॥೧೦೮॥

ಯಾವನ ಹೆದೆಯ ಘೋಷವನ್ನು ಕೇಳಿ ಶತ್ರುಗಳು ನಡುಗುತ್ತಿದ್ದರೋ ಅಂತಹ ಅರ್ಜುನನು ಷಂಡರೂಪವನ್ನು ಧರಿಸಿ ನೃತ್ಯಗೀತಗಳಿಂದ ವಿರಾಟನ ಅರಮನೆಯಲ್ಲಿ ಕುಣಿದಾಡುವುದನ್ನು ನೋಡಿ ನನ್ನ ಮನಸ್ಸಿಗೆ ಸಮಾಧಾನವೇ ಆಗುವುದಿಲ್ಲ. ಸ್ತ್ರೀಯರು ಅವನ ಸಂಗೀತಸ್ವರವನ್ನು ಕೇಳಿ ಸಂತೋಷಗೊಂಡು ಅವನನ್ನು ಸುತ್ತುವರಿಯುತ್ತಾರೆ.

ಕಿರೀಟಂ ಸೂರ್ಯಸಂಕಾಶಂ ಯಸ್ಯ ಮೂರ್ಧ್ನ್ಯಶೋಭತ ।
ವೇಣೀವಿಕೃತಕೇಶಾಂತಃ ಸೋಽಯಮದ್ಯ ಧನಂಜಯಃ ॥೧೦೯॥

ಯಾವನ ತಲೆಯ ಮೇಲೆ ಸೂರ್ಯನಂತಿರುವ ಕಿರೀಟವು ಶೋಭಿಸುತ್ತಿದ್ದಿತೋ ಅಂತಹ ಧನಂಜಯನು ಈ ದಿನ ವಿಕಾರವಾಗಿ ಕಾಣುವ ಜಡೆಗಳನ್ನು ಹಾಕಿಕೊಂಡಿದ್ದಾನೆ.

ಯಸ್ಮಿನ್ನಸ್ತ್ರಾಣಿ ದಿವ್ಯಾನಿ ಸುಬಹೂನಿ ಮಹಾತ್ಮನಿ ।
ಆಧಾರಃ ಸರ್ವವಿದ್ಯಾನಾಂ ಸ ಧಾರಯತಿ ಕುಂಡಲೇ ॥೧೧೦॥

ಯಾವ ಮಹಾತ್ಮನಲ್ಲಿ ದಿವ್ಯವಾದ ಎಲ್ಲಾ ಅಸ್ತ್ರಗಳೂ ಮತ್ತು ಎಲ್ಲಾ ವಿದ್ಯೆಗಳೂ ಆಶ್ರಯವನ್ನು ಪಡೆದಿದ್ದವೋ ಅವನು ಓಲೆಗಳನ್ನು ಧರಿಸಿದ್ದಾನೆ.

ಯಂ ವೈ ರಾಜಸಹಸ್ರಾಣಿ ತೇಜಸಾऽಪ್ರತಿಮಂ ಭುವಿ ।
ಸಮರೇ ನಾತಿವರ್ತಂತೇ ವೇಲಾಮಿವ ಮಹೋರ್ಮಯಃ ॥೧೧೧॥

ಸೋऽಯಂ ರಾಜ್ಞೋ ವಿರಾಟಸ್ಯ ಕನ್ಯಾನರ್ತನಕೋ ಯುವಾ ।
ಆಸ್ತೇ ವೇಷಪ್ರತಿಚ್ಛನ್ನಃ ಕನ್ಯಾನಾಂ ಪರಿಚಾರಕಃ ॥೧೧೨॥

ತೇಜಸ್ಸಿನಲ್ಲಿ ಅಸದೃಶನಾದ ಯಾವನನ್ನು ಯುದ್ಧದಲ್ಲಿ ಭೂಮಿಯ ಮೇಲಿನ ಸಹಸ್ರರಾಜರು ಅಲೆಗಳು ದಡಗಳನ್ನು ದಾಟದಂತೆ ಮೀರುತ್ತಿರಲಿಲ್ಲವೋ ಅಂತಹ ಯುವಕನಾದ ಅರ್ಜುನನು ವಿರಾಟನ ಕನ್ಯಾನರ್ತಕನಾಗಿ ಕನ್ಯೆಯರ ಪರಿಚಾರಿಕೆಯನ್ನು ಮಾಡಿಕೊಂಡು ವೇಷವನ್ನು ಮರೆಸಿಕೊಂಡಿದ್ದಾನೆ.

ಯಸ್ಯ ಸ್ಮ ರಥಘೋಷೇಣ ಸಮಕಂಪತ ಮೇದಿನೀ ।
ಸಪರ್ವತವನಾಕಾಶಾ ಸಹಸ್ಥಾವರಜಂಗಮಾ ॥೧೧೩॥

ಯಸ್ಮಿನ್ ಜಾತೇ ಮಹೇಷ್ವಾಸೇ ಕುಂತ್ಯಾಃ ಪ್ರೀತಿರವರ್ಧತ ।
ಸ ಸಂಶೋಚತಿ ಮಾಮದ್ಯ ಭೀಮಸೇನ ತವಾನುಜಃ ॥೧೧೪॥

ಯಾವನ ರಥಘೋಷದಿಂದ ಪರ್ವತವನಸಹಿತವಾದ ಸ್ಥಾವರಜಂಗಮ ಸಹಿತವಾದ ಭೂಮಿಯು ನಡುಗುತ್ತಿದ್ದಿತೋ, ಯಾವ ಧನುರ್ಧಾರಿಯು ಜನಿಸಿದಾಗ ಕುಂತಿಗೆ ಬಹಳ ಸಂತೋಷವಾಯಿತೋ ಎಲೈ ಭೀಮಸೇನನೇ, ಅಂತಹ ನಿನ್ನ ತಮ್ಮನಾದ ಅರ್ಜುನನು ನನ್ನನ್ನು ಚಿಂತಿಸಿ ಶೋಕಪಡುತ್ತಿದ್ದಾನೆ.

ವಿಭೂಷಿತಮಲಂಕಾರೈಃ ಕುಂಡಲೈಃ ಪರಿಪಾದುಕೈಃ ।
ಕಂಬುಪಾಣಿಮಥಾಯಾಂತಂ ದೃಷ್ಟ್ವಾ ಸೀದತಿ ಮೇ ಮನಃ ॥೧೧೫॥

ಆಭರಣಗಳಿಂದ ಅಲಂಕೃತನಾಗಿ, ಓಲೆಗಳನ್ನು ಮತ್ತು ಕವಿಯ ಬೇರೆಯ ಆಭರಣಗಳನ್ನು ಧರಿಸಿ ಬಾಹುವಿನವರೆಗೂ ಶಂಖದಿಂದ ಮಾಡಿದ ಬಳೆಗಳನ್ನು ಧರಿಸಿ ಬರುವ ಅರ್ಜುನನನ್ನು ನೋಡಿ ನನ್ನ ಮನಸ್ಸು ಮುದುಡಿಹೋಗುತ್ತದೆ.

ವೇಣೀವಿಕೃತಕೇಶಾಂತಂ ಭೀಮಧನ್ವಾನಮರ್ಜುನಮ್ ।
ಕನ್ಯಾಪರಿವೃತಂ ದೃಷ್ಟ್ವಾ ಶೋಕಂ ಗಚ್ಛತಿ ಮೇ ಮನಃ ॥೧೧೬॥

ಭಯಂಕರವಾದ ಧನುಸ್ಸನ್ನು ಹೊಂದಿದ್ದ ಅರ್ಜುನನು ವಿಕಾರವಾದ ಜಡೆಗಳನ್ನು ಹಾಕಿಕೊಂಡು ಕನ್ಯೆಯರಿಂದ ಪರಿವೃತನಾಗಿರುವುದನ್ನು ನೋಡಿ ನನ್ನ ಮನಸ್ಸಿಗೆ ಶೋಕವುಂಟಾಗುತ್ತದೆ.

ಯದಾ ಹ್ಯೇನಂ ಪರಿವೃತಂ ಕನ್ಯಾಭಿರ್ದೇವರೂಪಿಣಮ್ ।
ಪ್ರಭಿನ್ನಮಿವ ಮಾತಂಗಂ ಪರಿಕೀರ್ಣಂ ಕರೇಣುಭಿಃ ॥೧೧೭॥

ಮಾತ್ಸ್ಯಂ ಪಾರ್ಥಂ ಚ ಗಾಯಂತಂ ವಿರಾಟಂ ಸಮುಪಸ್ಥಿತಮ್ ।
ಪಶ್ಯಾಮಿ ತೂರ್ಯಮಧ್ಯಸ್ಥಂ ದೃಷ್ಟ್ವಾ ಮುಹ್ಯತಿ ಮೇ ಮನಃ ॥೧೧೮॥

ದೇವರೂಪವನ್ನು ಹೊಂದಿದ ಇವನು ಮದಿಸಿದ ಆನೆಯು ಕರೇಣುಗಳಿಂದ (ಚಿಕ್ಕವಯಸ್ಸಿನ ಹೆಣ್ಣಾನೆಗಳಿಂದ) ಸುತ್ತುವರಿಯಲ್ಪಟ್ಟಂತೆ ಕನ್ಯೆಯರಿಂದ ಸುತ್ತುವರಿಯಲ್ಪಟ್ಟು ಮತ್ಸ್ಯಪತಿಯಾದ ವಿರಾಟರಾಜನನ್ನು ಸಮೀಪಿಸಿ ವಾದ್ಯಗಳ ಮಧ್ಯದಲ್ಲಿ ಇದ್ದು ಗಾನವನ್ನು ಮಾಡುವುದನ್ನು ಯಾವಾಗ ನೋಡುತ್ತೇನೆಯೋ ಆಗ ನನ್ನ ಮನಸ್ಸಿಗೆ ಮೂರ್ಛೆಯೇ ಉಂಟಾಗುತ್ತದೆ.

ನೂನಮಾರ್ಯಾ ನ ಜಾನಾತಿ ಕೃಚ್ಛ್ರಂ ಪ್ರಾಪ್ತಂ ಧನಂಜಯಮ್ ।
ಅಜಾತಶತ್ರುಂ ರಾಜಾನಂ ಮಗ್ನಂ ದುರ್ಯೂತದೇವನೇ ॥೧೧೯॥

ಖಂಡಿತವಾಗಿ ಪೂಜ್ಯಳಾದ ಕುಂತಿಯು ಧನಂಜಯನಿಗೆ ಒದಗಿರುವ ಈ ಕಷ್ಟವನ್ನಾಗಲೀ, ಕೆಟ್ಟದ್ಯೂತದಲ್ಲಿ ಮುಳುಗಿರುವ ಅಜಾತಶತ್ರುವಾದ ಯುಧಿಷ್ಠಿರನನ್ನಾಗಲೀ ತಿಳಿದಿಲ್ಲ.

ಐಂದ್ರವಾರುಣವಾಯವ್ಯಬ್ರಾಹ್ಮಾಗ್ನೇಯೈಶ್ಚ ವೈಷ್ಣವೈಃ ।
ಅಗ್ನೀನ್ ಸಂತರ್ಪಯನ್ ಪಾರ್ಥಃ ಸರ್ವಾಂಶ್ಚೈಕರಥೋಽಜಯತ್ ॥

ದಿವ್ಯೈರಸ್ತ್ರೈರಚಿಂತ್ಯಾತ್ಮಾ ಸರ್ವಶತ್ರುನಿಬರ್ಹಣಃ ॥೧೨೧॥

ಪಾರ್ಥನು ಐಂದ್ರ, ವಾರುಣ, ವಾಯವ್ಯ, ಬ್ರಾಹ್ಮ, ಆಗ್ನೇಯ, ವೈಷ್ಣವಾಸ್ತ್ರಗಳಿಂದ ಏಕರಥದಲ್ಲಿ ಕುಳಿತು ಎಲ್ಲರನ್ನೂ ಜಯಿಸಿ ಅಗ್ನಿಯನ್ನು ಸಂತೋಷಪಡಿಸಿದನು. ಸರ್ವಶತ್ರುಸಂಹಾರಕನಾದ ಅಚಿಂತ್ಯಶಕ್ತಿಯುಳ್ಳ ಅವನು ದಿವ್ಯಾಸ್ತ್ರಗಳಿಂದ ಹೀಗೆ ಮಾಡಿದನು.

ದಿವ್ಯಂ ಗಾಂಧರ್ವಮಸ್ತ್ರಂ ಚ ವಾಯವ್ಯಮಥ ವೈಷ್ಣವಮ್ ।
ಬ್ರಾಹ್ಮಂ ಪಾಶುಪತಂ ಚೈವ ಸ್ಥೂಣಾಕರ್ಣಂ ಚ ದರ್ಶಯನ್ ॥೧೨೨॥

ಪೌಲೋಮಾನ್ ಕಾಲಕೇಯಾಂಶ್ಚ ಇಂದ್ರಶತ್ರೂನ್ ಮಹಾರಥಾನ್ ।
ನಿವಾತಕವಚೈಃ ಸಾರ್ಧಂ ಘೋರಾನೇಕರಥೋಽಜಯತ್ ॥೧೨೩॥

ಸೋಽಂತಃಪುರಗತಃ ಪಾರ್ಥಃ ಕೂಪೇಽಗ್ನಿರಿವ ಸಂವೃತಃ ॥೧೨೪॥

ದಿವ್ಯವಾದ ಗಾಂಧರ್ವಾಸ್ತ್ರವನ್ನೂ, ವಾಯವ್ಯಾಸ್ತ್ರವನ್ನೂ, ವೈಷ್ಣವಾಸ್ತ್ರವನ್ನೂ, ಬ್ರಹ್ಮಾಸ್ತ್ರವನ್ನೂ, ಪಾಶುಪತಾಸ್ತ್ರವನ್ನೂ, ಸ್ಥೂಣಾಕರ್ಣಾಸ್ತ್ರವನ್ನೂ ಪ್ರದರ್ಶಿಸುತ್ತಾ ಇಂದ್ರಶತ್ರುಗಳೂ, ಮಹಾರಥರೂ ಆದ ಅನೇಕ ಪೌಲೋಮರನ್ನೂ ನಿವಾತಕವಚರಿಂದ ಸಹಿತರಾದ ಕಾಲಕೇಯರನ್ನೂ ಏಕರಥದಲ್ಲಿ ಕುಳಿತು ಜಯಿಸಿದನು. ಅಂತಹ ಅರ್ಜುನನು ಕೂಪದಲ್ಲಿ ಇರುವ ಅಗ್ನಿಯಂತೆ ಈ ದಿನ ಮುಚ್ಚಲ್ಪಟ್ಟಿದ್ದಾನೆ.

ಕನ್ಯಾಪುರಗತಂ ದೃಷ್ಟ್ವಾ ಗೋಷ್ಠೇಷ್ವಿವ ಮಹರ್ಷಭಮ್ ।
ಸ್ತ್ರೀವೇಷವಿಕೃತಂ ಪಾರ್ಥಂ ಕುಂತೀಂ ಗಚ್ಛತಿ ಮೇ ಮನಃ ॥೧೨೫॥

ಗೋಷ್ಠದಲ್ಲಿರುವ ದೊಡ್ಡ ವೃಷಭದಂತೆ ಕನ್ಯೆಯರ ಅಂತಃಪುರದಲ್ಲಿ ವಿಕಾರವಾದ ಸ್ತ್ರೀವೇಷವನ್ನು ಧರಿಸಿ ಇರುವ ಅರ್ಜುನನನ್ನು ನೋಡಿ ನನ್ನ ಮನಸ್ಸು ಕುಂತಿಯನ್ನು ಸ್ಮರಿಸುತ್ತದೆ.

ಯಃ ಸ್ತ್ರೀಭಿರ್ನಿತ್ಯಸಂಪನ್ನೋ ರೂಪೇಣಾಸ್ತ್ರೇಣ ಮೇಧಯಾ ।
ಸೋಽಶ್ವಬಂಧೋ ವಿರಾಟಸ್ಯ ಪಶ್ಯ ಕಾಲಸ್ಯ ಪರ್ಯಯಮ್ ॥೧೨೬॥

ಯಾವ ನಕುಲನು ತನ್ನ ರೂಪದಿಂದಲೂ, ತನ್ನ ಅಸ್ತ್ರಬಲದಿಂದಲೂ ಮತ್ತು ಮೇಧಾಶಕ್ತಿಯಿಂದಲೂ ಯಾವಾಗಲೂ ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟಿರುತ್ತಾನೆಯೋ ಅಂತಹ ಅವನು ವಿರಾಟನ ಅಶ್ವಬಂಧನಾಗಿದ್ದಾನೆ. ಕಾಲದ ವಿಪರ್ಯಯವನ್ನು ನೋಡು.

ರಾಜಕನ್ಯಾಶ್ಚ ವೇಶ್ಯಾಶ್ಚ ವಿಶಾಂ ದುಹಿತರಃ ಸ್ತ್ರಿಯಃ ।
ಸರ್ವಾಃ ಸಾರಯುತಾ ನಾರ್ಯೋ ದಾಮಗ್ರಂಥಿವಶಂ ಗತಾಃ ॥೧೨೭॥

ರಾಜಕನ್ಯೆಯರೂ, ವೇಶ್ಯೆಯರೂ, ವೈಶ್ಯಕುಮಾರಿಯರೂ, ಉಳಿದ ಎಲ್ಲಾ ಸುಂದರಿಯಾದ ಸ್ತ್ರೀಯರೂ ಸಹ ದಾಮಗ್ರಂಥಿಯಾದ ಅವನ ವಶವಾಗಿದ್ದಾರೆ.

ಪ್ರೇಷ್ಯಕರ್ಮಣಿ ತಂ ದೃಷ್ಟ್ವಾ ಶೋಚಾಮಿ ವಿಲಪಾಮಿ ಚ ॥೧೨೮॥

ವಿರಾಟಮುಪತಿಷ್ಠಂತಂ ದರ್ಶಯಂತಂ ಚ ವಾಜಿನಃ ।
ಅಭ್ಯಕೀರ್ಯಂತ ವೃಂದಾನಿ ದಾಮಗ್ರಂಥಿಮುದೀಕ್ಷಿತುಮ್ ॥೧೨೯॥

ವಿನಯಂತಂ ಜವೇನಾಶ್ವಾನ್ ಮಾತ್ಸ್ಯರಾಜಸ್ಯ ಪಶ್ಯತಃ ॥೧೩೦॥

ಸೇವಾಕರ್ಮದಲ್ಲಿ ನಿರತನಾದ ಅವನನ್ನು ನೋಡಿ ನಾನು ದುಃಖಪಟ್ಟು ಗೋಳಾಡುತ್ತೇನೆ. ವಿರಾಟನ ಸಮೀಪದಲ್ಲಿನಿಂತು ಅವನ ಕಣ್ಣೆದುರಿಗೇ ಕುದುರೆಗಳನ್ನು ಪಳಗಿಸುವ ಮತ್ತು ಅಂತಹ ಕುದುರೆಗಳನ್ನು ತೋರಿಸುವ ಆ ದಾಮಗ್ರಂಥಿಯನ್ನು ನೋಡಲು ಸ್ತ್ರೀಯರ ವೃಂದವೇ ಅವನ ಸುತ್ತಲೂ ನೆರೆಯಿತು.

ಕಿಂ ನು ಮಾಂ ಮನ್ಯಸೇ ಪಾರ್ಥ ಸುಖಿತೇತಿ ಪರಂತಪ ।
ತಥಾ ದೃಷ್ಟ್ವಾ ಯವೀಯಾಂಸಂ ಸಹದೇವಂ ಯುಧಾಂಪತಿಮ್ ॥

ಪರಂತಪನೇ, ಅಂತಹ ನಿನ್ನ ತಮ್ಮನಾದ ಯುದ್ಧನಾಯಕನಾದ ಸಹದೇವನನ್ನು ನೋಡಿ ನಾನು ಸುಖವಾಗಿದ್ದೇನೆಂದು ತಿಳಿದೆಯಾ?

ತಂ ದೃಷ್ಟ್ವಾ ಗೋಷು ಗೋಸಂಖ್ಯಂ ವತ್ಸಚರ್ಮಕ್ಷಿತೀಶಯಮ್ ।
ದುಃಖಶೋಕಪರೀತಾಂಗೀ ಪಾಂಡುಭೂತಾऽಸ್ಮಿ ಪಾಂಡವ ॥೧೩೨॥

ಅವನು (ಸಹದೇವನು) ಕರುಗಳ ಚರ್ಮವನ್ನು ಹಾಸಿ ನೆಲದ ಮೇಲೆ ಮಲಗಿ ವಿರಾಟನ ಗೋರಕ್ಷಕನಾಗಿರುವುದನ್ನು ನೋಡಿ ಎಲೈ ಪಾಂಡವನೇ, ನಾನು ದುಃಖಶೋಕಗಳಿಂದ ಕೂಡಿದವಳಾಗಿ ಬಿಳುಚಿಕೊಂಡು ಹೋಗಿದ್ದೇನೆ.

ಸಹದೇವಸ್ಯ ವೃತ್ತಾನಿ ಚಿಂತಯಂತೀ ಪುನಃ ಪುನಃ ।
ನ ನಿದ್ರಾಮಧಿಗಚ್ಛಾಮಿ ಭೀಮಸೇನ ಕುತೋ ರತಿಮ್ ॥೧೩೩॥

ನ ಪಶ್ಯಾಮಿ ಮಹಾಬಾಹೋ ಸಹದೇವಸ್ಯ ದುಷ್ಕೃತಮ್ ॥೧೩೪॥

ಯಸ್ಮಿನ್ನೇವಂವಿಧಂ ಕ್ಲೇಶಂ ಪ್ರಾಪ್ನುಯಾತ್ ಸತ್ಯವಿಕ್ರಮಃ ।
ದೂಯಾಮಿ ಭರತಶ್ರೇಷ್ಠ ದೃಷ್ಟ್ವಾ ತೇ ಭ್ರಾತರಂ ಪ್ರಿಯಮ್ ॥೧೩೫॥

ಭೀಮಸೇನನೇ, ಸಹದೇವನ ನಡತೆಯನ್ನು ನೋಡಿ ಪುನಃ ಪುನಃ ಅದನ್ನು ಚಿಂತಿಸುತ್ತಾ ನನಗೆ ನಿದ್ರೆಯೇ ಬರುತ್ತಿಲ್ಲ. ಇನ್ನು ಸುಖವು ಎಲ್ಲಿಂದ ಬರಬೇಕು? ಮಹಾಬಾಹುವೇ, ಸತ್ಯವಿಕ್ರಮನಾದ ಸಹದೇವನಲ್ಲಿ ಇಂತಹ ಕ್ಲೇಶವುಂಟಾಗುವ ಯಾವ ದೋಷವನ್ನೂ ನಾನು ಕಾಣುವುದಿಲ್ಲ. ಭರತಶ್ರೇಷ್ಠನೇ, ನಿನ್ನ ಪ್ರಿಯನಾದ ತಮ್ಮನನ್ನು ನೋಡಿ ನಾನು ದುಃಖಪಡುತ್ತೇನೆ.

ಗೋಷು ಗೋವೃಷಸಂಕಾಶಂ ಮಾತ್ಸ್ಯೇನಾಭಿಸಮೀಕ್ಷಿತಮ್ ।
ಸಂರಬ್ಧತರರಕ್ತಾಕ್ಷಂ ಗೋಪಾಲಾನಾಂ ಪುರೋಗಮಮ್ ॥೧೩೬॥

ವಿರಾಟಮಭಿನಂದಂತಮಥ ಮೇ ಭವತಿ ಜ್ವರಃ ॥೧೩೭॥

ಗೋವುಗಳ ಮಧ್ಯದಲ್ಲಿ ವೃಷಭದಂತಿರುವ, ಗೋಪಾಲಕರಿಗೆ ನಾಯಕನಾದ ಕೆಂಪಾದ ಕಣ್ಣುಳ್ಳ, ವಿರಾಟರಾಜನ ಕಣ್ಣೆದುರಿಗೆ ಅವನನ್ನು ಅಭಿನಂದಿಸುವ, ಸಹದೇವನನ್ನು ನೋಡಿ ನನಗೆ ಜ್ವರವುಂಟಾಗುತ್ತದೆ.

ಸಹದೇವಂ ಹಿ ಮೇ ನಿತ್ಯಂ ವೀರಮಾರ್ಯಾ ಪ್ರಶಂಸತಿ ।
ಮಹಾಭಿಜನಸಂಪನ್ನೋ ನೀತಿಮಾನ್ ಶೀಲವಾನಪಿ ॥೧೩೮॥

ಹ್ರೀನಿಷೇಧೋ ಹ್ಯನವಮೋ ಧಾರ್ಮಿಕಶ್ಚ ಪ್ರಿಯಶ್ಚ ಮೇ ।
ಸ ತೇಽರಣ್ಯೇಷು ವೋಢವ್ಯಃ ಪಾಂಚಾಲಿ ರಜನೀಷ್ವಪಿ ॥೧೩೯॥

ಸುಕುಮಾರಶ್ಚ ಶೂರಶ್ಚ ರಾಜಾನಂ ಚಾಪ್ಯನುವ್ರತಃ ।
ಜ್ಯೇಷ್ಠಾಪಚಾಯಿನಂ ವೀರಂ ಸ್ವಯಂ ಪಾಂಚಾಲಿ ಭಾಜಯೇಃ ॥

ಇತ್ಯುವಾಚ ಹಿ ಮಾಂ ಕುಂತೀ ರುದತೀ ಪುತ್ರಗೃದ್ಧಿನೀ ।
ಪ್ರವ್ರಜಂತಂ ಮಹಾರಣ್ಯಂ ತಂ ಪರಿಷ್ವಜ್ಯ ತಿಷ್ಠತೀ ॥೧೪೧॥

ಸಹದೇವನ ವಿಷಯದಲ್ಲಿ ವೀರಮಾತೆಯಾದ ಕುಂತಿಯು ಯಾವಾಗಲೂ ಪ್ರಶಂಸೆಯ ಮಾತುಗಳನ್ನೇ ಆಡುತ್ತಿದ್ದಳು. ಅವನು ಒಳ್ಳೆಯ ಜನ್ಮವನ್ನು ಪಡೆದವನು, ನೀತಿವಂತ, ಶೀಲವಂತನು, ದಾಕ್ಷಿಣ್ಯಸ್ವಭಾವದವನು, ಶ್ರೇಷ್ಠನಾದವನು, ಧಾರ್ಮಿಕನಾದವನು ಮತ್ತು ನನಗೆ ಪ್ರಿಯನಾದವನು. ಪಾಂಚಾಲಿಯೇ, ಅರಣ್ಯದಲ್ಲಿ ರಾತ್ರಿಯ ಕಾಲಗಳಲ್ಲಿ ನೀನು ಅವನನ್ನು ನೋಡಿಕೊಳ್ಳಬೇಕು. ಅವನು ಸುಕುಮಾರನೂ, ಶೂರನೂ, ಯಾವಾಗಲೂ ಧರ್ಮರಾಜನನ್ನು ಅನುಸರಿಸಿದವನೂ ಆಗಿದ್ದಾನೆ. ಪಾಂಚಾಲಿಯೇ, ನೀನು ಸ್ವತಃ ಅವನನ್ನು ಧರ್ಮರಾಜನಿಗೆ ಒಪ್ಪಿಸಬೇಕು. ಹೀಗೆ ಹೇಳುತ್ತಾ ನಾವು ಅರಣ್ಯಕ್ಕೆ ಹೊರಟಾಗ ಪುತ್ರವತ್ಸಲೆಯಾದ ಕುಂತಿಯು ಅಳುತ್ತಾ ಅವನನ್ನು ಆಲಂಗಿಸಿ ನಿಂತು (ಹೇಳಿದಳು).

ತಂ ದೃಷ್ಟ್ವಾ ಗೋಷು ಗೋಪಾಲವೇಶಮಾಸ್ಥಾಯ ಧಿಷ್ಠಿತಮ್ ।
ಸಹದೇವಂ ಯುಧಾಂ ಶ್ರೇಷ್ಠಂ ಕಿಂ ನು ಜೀವಾಮಿ ಪಾಂಡವ ॥೧೪೨॥

ಏವಂ ದುಃಖಶತಾವಿಷ್ಟಾ ಯುಧಿಷ್ಠಿರನಿಮಿತ್ತತಃ ॥೧೪೩॥

ಪಾಂಡವನೇ, ಅಂತಹ ಯೋಧರಲ್ಲಿ ಶ್ರೇಷ್ಠನಾದ ಸಹದೇವನು ಗೋಪಾಲವೇಷವನ್ನು ಧರಿಸಿ ನಿಂತಿರುವುದನ್ನು ನೋಡಿ ನಾನು ಏತಕ್ಕೆ ಬದುಕಿದ್ದೇನೆ? ಹೀಗೆ ಯುಧಿಷ್ಠಿರನ ನಿಮಿತ್ತವಾಗಿ ನೂರಾರು ದುಃಖಗಳಿಗೆ ಒಳಗಾಗಿದ್ದೇನೆ.

ಪುನಃ ಪ್ರತಿಪ್ರಶಿಷ್ಟಾನಿ ದುಃಖಾನಿ ಶೃಣು ಭಾರತ ।
ವರ್ತಂತೇ ಮಯಿ ಕೌಂತೇಯ ವಕ್ಷ್ಯಾಮ್ಯನ್ಯಾನಿ ತಾನಿ ತೇ ॥೧೪೪॥

ಭಾರತನೇ, ಇನ್ನೂ ಉಳಿದಿರುವ ದುಃಖಗಳನ್ನು ಹೇಳುತ್ತೇನೆ, ಕೇಳು. ಕೌಂತೇಯನೇ, ನನ್ನಲ್ಲಿ ಇನ್ನೂ ಅನೇಕ ದುಃಖಗಳಿವೆ, ಅವುಗಳನ್ನು ನಿನಗೆ ಹೇಳುತ್ತೇನೆ, ಕೇಳು.

ಯುಷ್ಮಾಸು ಧ್ರಿಯಮಾಣೇಷು ದುಃಖಾನಿ ವಿವಿಧಾನ್ಯುತ ।
ಶೋಷಯಂತಿ ಶರೀರಂ ಮೇ ಕಿಂ ನು ದುಃಖತರಂ ತತಃ ॥೧೪೫॥

ನೀವೆಲ್ಲರೂ ಬದುಕಿರುವಾಗ ಈ ಅನೇಕ ದುಃಖಗಳು ನನ್ನ ಶರೀರವನ್ನು ಹಿಂಡುತ್ತಿವೆ. ನನಗೆ ಇದಕ್ಕಿಂತ ದುಃಖಕರವಾದುದು ಯಾವುದು?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ವಿರಾಟಪರ್ವಣಿ ದ್ವಾವಿಂಶೋಽಧ್ಯಾಯಃ ॥

॥ ಕೀಚಕವಧಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಇಪ್ಪತ್ತಮೂರನೆಯ ಅಧ್ಯಾಯ

ದ್ರೌಪದಿಯಿಂದ ತನ್ನ ಹಿಂದಿನ ವೈಭವವನ್ನು ನೆನೆದು ಶೋಕಪೂರ್ವಕವಾಗಿ ಭೀಮನ ಬಳಿಯಲ್ಲಿ ಕೀಚಕನನ್ನು ಕೊಲ್ಲುವಂತೆ ಒತ್ತಾಯ

ದ್ರೌಪದೀ

ಅಹಂ ಸೈರಂಧ್ರಿವೇಷೇಣ ವಸಂತೀ ರಾಜವೇಶ್ಮನಿ ।
ವಶಗಾಽಸ್ಮಿ ಸುದೇಷ್ಣಾಯಾ ಹ್ಯಕ್ಷಧೂರ್ತಸ್ಯ ಕಾರಣಾತ್ ॥೧॥

ದ್ರೌಪದೀ– ನಾನು ಅಕ್ಷಕ್ರೀಡೆಯಲ್ಲಿ ನಿರತನಾದ ಯುಧಿಷ್ಠಿರನ ನಿಮಿತ್ತದಿಂದ ಸುದೇಷ್ಣೆಗೆ ವಶಳಾಗಿ ಅವಳ ಅರಮನೆಯಲ್ಲಿ ಸೈರಂಧ್ರಿಯ ವೇಷದಿಂದ ವಾಸಿಸುತ್ತಿದ್ದೇನೆ.

ವಿಕ್ರಿಯಾಂ ಪಶ್ಯ ಮೇ ತೀವ್ರಾಂ ರಾಜಪುತ್ರ್ಯಾಃ ಪರಂತಪ ।
ಆಸೇ ಕಾಲಂ ಪರೀಕ್ಷಂತೀ ಸರ್ವದುಃಖಸಹಾ ಪುನಃ ॥೨॥

ಪರಂತಪನೇ, ರಾಜಕುಮಾರಿಯಾದ ನನ್ನ ಶರೀರದಲ್ಲಿ ಉಂಟಾಗಿರುವ ತೀವ್ರವಾದ ವಿಕಾರವನ್ನು ನೋಡು. ನಾನು ಎಲ್ಲ ದುಃಖಗಳನ್ನೂ ತಡೆದುಕೊಂಡು ಪುನಃ ಒಳ್ಳೆಯ ಕಾಲವನ್ನು ನಿರೀಕ್ಷಿಸುತ್ತಾ ಇದ್ದೇನೆ.

ಅನಿತ್ಯಾಃ ಕಿಲ ಮರ್ತ್ಯಾನಾಮರ್ಥಾಶ್ಚ ವ್ಯಸನಾನಿ ಚ ।
ಚಕ್ರವತ್ ಪರಿವರ್ತಂತೇ ಹ್ಯರ್ಥಾಶ್ಚ ವ್ಯಸನಾನಿ ಚ ॥೩॥

ಇತಿ ಮತ್ವಾ ಪ್ರತೀಕ್ಷಾಮಿ ಭರ್ತೃಣಾಮುದಯಂ ಪುನಃ ॥೪॥

ಮನುಷ್ಯರ ಸುಖ-ದುಃಖಗಳು ಅನಿತ್ಯವಾದವುಗಳು. ಅವು ಚಕ್ರದಂತೆ ತಿರುಗುತ್ತಿರುತ್ತವೆ ಎಂದು ತಿಳಿದು ಪುನಃ ಪತಿಗಳ ಭಾಗ್ಯೋದಯವನ್ನು ನಿರೀಕ್ಷಿಸುತ್ತಿದ್ದೇನೆ.

ಯ ಏವ ಹೇತುರ್ಭವತಿ ಪುರುಷಸ್ಯ ಜಯಾವಹಃ ।
ಪರಾಜಯೇ ಚ ಹೇತುಃ ಸ ಇತಿ ಚ ಪ್ರತಿಪಾಲಯೇ ॥೫॥

ಮನುಷ್ಯನಿಗೆ ಯಾವುದು ಜಯಕ್ಕೆ ಕಾರಣವಾಗುತ್ತದೆಯೋ ಅದೇ ಪರಾಜಯಕ್ಕೂ ಕಾರಣವಾಗುತ್ತದೆ ಎಂದು ತಿಳಿದು ಕಾಲವನ್ನು ನಿರೀಕ್ಷಿಸುತ್ತಿದ್ದೇನೆ.

ದತ್ತ್ವಾ ಯಾಚಂತಿ ಪುರುಷಾ ಹತ್ವಾ ವಧ್ಯಂತಿ ಚಾಪರೇ ।
ಮಾನಯಿತ್ವಾ ನ ಮಾನ್ಯಂತೇ ಪರೈರಿತಿ ಚ ಮೇ ಶ್ರುತಮ್ ॥೬॥

ಮನುಷ್ಯರು ದಾನವನ್ನು ಕೊಟ್ಟು ಯಾಚನೆ ಮಾಡುತ್ತಾರೆ. ಇನ್ನು ಕೆಲವರು ಶತ್ರುಗಳನ್ನು ಕೊಂದು ತಾವು ಕೊಲ್ಲಲ್ಪಡುತ್ತಾರೆ. ಇನ್ನೊಬ್ಬರಿಗೆ ಮರ್ಯಾದೆಯನ್ನು ಕೊಟ್ಟು ತಾವು ಅಪಮಾನಕ್ಕೆ ಒಳಗಾಗುತ್ತಾರೆ ಎಂದು ನಾನು ಕೇಳಿದ್ದೇನೆ.

ನ ದೈವಸ್ಯಾತಿಭಾರೋಽಸ್ತಿ ನ ದೈವಸ್ಯಾತಿವರ್ತನಮ್ ।
ಇತಿ ಮತ್ವಾऽऽಗಮಂ ಭೂಯೋ ದೈವಸ್ಯ ಪ್ರತಿಪಾಲಯೇತ್ ॥೭॥

ದೈವಕ್ಕೆ ಯಾವುದೂ ಅಸಾಧ್ಯವಲ್ಲ, ಯಾವುದೂ ಅತಿಯಾದುದೂ ಅಲ್ಲ ಎಂದು ತಿಳಿದು ದೈವದ ಆಗಮನವನ್ನು (ಅನುಕೂಲವಾದ ಅದೃಷ್ಟದ ಆಗಮನವನ್ನು) ನಿರೀಕ್ಷಿಸಬೇಕು.

ಸ್ಥಿತಂ ಪೂರ್ವಂ ಜಲಂ ಯತ್ರ ಪುನಸ್ತತ್ರೈವ ತಿಷ್ಠತಿ ।
ಇತಿ ಪರ್ಯಾಯಮಿಚ್ಛಾಮಿ ಪ್ರತೀಚ್ಛಾಮ್ಯುದಯಂ ಪುನಃ ॥೮॥

ಮೊದಲು ಯಾವ ಜಲಾಶಯದಲ್ಲಿ ನೀರಿದ್ದಿತೋ ಮುಂದಿನ ವರ್ಷಾಕಾಲದಲ್ಲಿಯೂ ಅಲ್ಲಿಯೇ ನೀರು ಬಂದು ಸೇರುತ್ತದೆ ಎಂದು ತಿಳಿದು ಪತಿಗಳ ಅಭ್ಯುದಯವನ್ನು ನಿರೀಕ್ಷಿಸುತ್ತಿದ್ದೇನೆ.

ದೈವೇನ ಕಿಲ ಯಸ್ಯಾರ್ಥಃ ಸುನೀತೋಽಪಿ ವಿಪದ್ಯತೇ ।
ದೈವಸ್ಯೈವಾಗಮೇ ಯತ್ನಃ ತೇನ ಕಾರ್ಯೋ ವಿಜಾನತಾ ॥೯॥

ಯಾವನ ಅರ್ಥವು ಒಳ್ಳೆಯ ಪ್ರಯತ್ನವನ್ನು ಮಾಡಿದ್ದರೂ ಸಹ ದೈವದ ವಿಕೋಪದಿಂದ ನಷ್ಟವಾಗುತ್ತದೆಯೋ ಅಂತಹ ವಿವೇಕಿಯಾದವನು ದೈವದ ಅನುಕೂಲತೆಯನ್ನು ಸಂಪಾದಿಸುವುದಕ್ಕೇ ಪ್ರಯತ್ನವನ್ನು ಮಾಡಬೇಕು.

ಕಿಂ ನು ಮೇ ವಚನಸ್ಯಾದ್ಯ ಕಥಿತಸ್ಯ ಪ್ರಯೋಜನಮ್ ।
ಪೃಚ್ಛ ಮಾಂ ದುಃಖಿತಾಮೇನಾಂ ಪೃಷ್ಟಾ ಚಾತ್ರ ಬ್ರವೀಮಿ ತೇ ॥೧೦॥

ಈ ದಿನ ನಾನು ಮಾತನಾಡಿ ಏನು ಪ್ರಯೋಜನ? ಆದರೂ ದುಃಖಿತಳಾದ ನನ್ನನ್ನು ಕೇಳು. ನೀನು ಕೇಳಿದ ಮೇಲೆ ಎಲ್ಲ ವಿಷಯವನ್ನೂ ನಾನು ನಿನಗೆ ಹೇಳುತ್ತೇನೆ.

ಮಹಿಷೀ ಪಾಂಡುಪುತ್ರಾಣಾಂ ದುಹಿತಾ ದ್ರುಪದಸ್ಯ ಚ ।
ಇಮಾಮವಸ್ಥಾಂ ಸಂಪ್ರಾಪ್ತಾ ಕಾ ಮದನ್ಯಾ ಜಿಜೀವಿಷೇತ್ ॥೧೧॥

ಪಾಂಡವರ ಪಟ್ಟದರಾಣಿಯಾಗಿ, ದ್ರುಪದರಾಜನ ಮಗಳಾಗಿ ನಾನು ಇಂತಹ ದುರವಸ್ಥೆಯನ್ನು ಹೊಂದಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ನನ್ನನ್ನು ಬಿಟ್ಟು ಬೇರೆ ಯಾರು ಬದುಕಿರಲು ಇಷ್ಟಪಡುವರು?

ಕುರೂನ್ ಪರಿಭವೇತ್ ಸರ್ವಾನ್ ಪಾಂಚಾಲಾನಪಿ ಭಾರತ ।
ಪಾಂಡವೇಯಾಂಶ್ಚ ಸಂಪ್ರಾಪ್ತೋ ಮಮ ಕ್ಲೇಶೋ ಹ್ಯರಿಂದಮ ॥೧೨॥

ಎಲೈ ಅರಿಂದಮನೇ, ಭಾರತನೇ, ನನಗೆ ಒದಗಿಬಂದ ಈ ಕ್ಲೇಶವು ಎಲ್ಲ ಕುರುಗಳನ್ನೂ, ಪಾಂಚಾಲರನ್ನೂ ಮತ್ತು ಪಾಂಡವರನ್ನೂ ಅವಮಾನಕ್ಕೆ ಈಡುಮಾಡಿಕೊಡುತ್ತದೆ.

ಭ್ರಾತೃಭಿಃ ಶ್ವಶುರೈಃ ಪುತ್ರೈಃ ಬಹುಭಿಃ ಪರವೀರಹನ್ ।
ಏವಂ ಸಮುದಿತಾ ನಾರೀ ಕಾ ತ್ವೇವಂ ದುಃಖಭಾಗಿನೀ ॥೧೩॥

ಶತ್ರುವೀರರನ್ನು ಕೊಲ್ಲುವವನೇ, ಸಹೋದರರಿಂದ, ಮಾವಂದಿರಿಂದ, ಅನೇಕ ಮಕ್ಕಳಿಂದ ಕೂಡಿದ ಯಾವ ವನಿತೆಯು ಹೀಗೆ ದುಃಖವನ್ನು ಅನುಭವಿಸುತ್ತಾಳೆ?

ನೂನಂ ಬಾಲತಯಾ ಧಾತುರ್ಮಯಾ ವೈ ವಿಪ್ರಿಯಂ ಕೃತಮ್ ।
ಯಸ್ಯ ಪ್ರಭಾವಾದ್ ದುರ್ನೀತಂ ಪ್ರಾಪ್ತಾऽಸ್ಮಿ ಭರತರ್ಷಭ ॥೧೪॥

ನಿಶ್ಚಿತವಾಗಿ ನಾನು ಬಾಲ್ಯದಲ್ಲಿ ವಿಧಿಗೆ ಬಹಳ ಅಪ್ರಿಯವನ್ನು ಮಾಡಿದ್ದೇನೆ. ಎಲೈ ಭರತರ್ಷಭನೇ, ಆ ಕಾರಣದಿಂದಾಗಿ ಈಗ ಈ ದುರವಸ್ಥೆಯನ್ನು ಹೊಂದಿದ್ದೇನೆ.

ವರ್ಣ(ರ್ಣ೦)ವಿಕಾರಮಪಿ ಮೇ ಪಶ್ಯ ಪಾಂಡವ ಪಾಂಡರಮ್ ।
ಈದೃಶೋ ಮೇ ನ ತತ್ರಾಸೀದ್ ದುಃಖೇ ಪರಿಮಿತೇ ಪುರಾ ॥೧೫॥

ಪಾಂಡವನೇ, ನನ್ನ ಬಣ್ಣವು ವಿಕಾರವನ್ನು ಹೊಂದಿ ಬಿಳುಚಿಕೊಂಡಿರುವುದನ್ನು ನೋಡು. ಹಿಂದೆ ಯಾವ ದೊಡ್ಡ ದುಃಖದಲ್ಲಿಯೂ ನನಗೆ ಹೀಗೆ ಆಗಿರಲಿಲ್ಲ.

ತ್ವಮೇವ ಭೀಮ ಜಾನೀಷೇ ಹ್ಯನುಭೂತಂ ಸುಖಂ ಪುರಾ ।
ಸಾऽಹಂ ದಾಸೀತ್ವಮಾಪನ್ನಾ ನ ಶಾಂತಿಂ ಮನಸಾ ಲಭೇ ॥೧೬॥

ಭೀಮಸೇನನೇ, ನಾನು ಹಿಂದೆ ಎಂತಹ ಸುಖವನ್ನು ಅನುಭವಿಸುತ್ತಿದ್ದೆನೆಂದು ನೀನೇ ತಿಳಿದಿದ್ದೀಯೆ. ಅಂತಹ ನಾನು ಈಗ ದಾಸಿಯಾಗಿ ಮನಸ್ಸಿನಲ್ಲಿ ಶಾಂತಿಯನ್ನೇ ಹೊಂದುತ್ತಿಲ್ಲ.

ನ ದೈವಿಕಮಿದಂ ಮನ್ಯೇ ಯತ್ರ ಪಾರ್ಥೋ ಧನಂಜಯಃ ।
ಭೀಮಧನ್ವಾ ಮಹಾರಂಗೇ ಚಾಸ್ತೇ ಶಾಂತ ಇವಾನಲಃ ॥೧೭॥

ಭಯಂಕರ ಧನುಸ್ಸುಳ್ಳವನೂ, ಕುಂತಿಯ ಸುತನೂ ಆದ ಧನಂಜಯನು ಮಹಾರಂಗಭೂಮಿಯಲ್ಲಿ ಶಾಂತವಾದ ಅಗ್ನಿಯಂತೆ ಇರುವಾಗ ಒದಗಿಬಂದ ಈ ಕ್ಲೇಶವು ಕೇವಲ ದೈವಿಕವಲ್ಲ(ಆದರೆ ದ್ಯೂತವ್ಯಸನಿಯಾದ ಯುಧಿಷ್ಠಿರನ ದೋಷದಿಂದ ಉಂಟಾದುದಾಗಿದೆ).

ಅಶಕ್ಯಾ ವೇದಿತುಂ ಪಾರ್ಥ ಪ್ರಾಣಿನಾಂ ವೈ ಗತಿರ್ನರೈಃ ।
ವಿನಿಪಾತಮಿಮಂ ಪಶ್ಯ ಯುಷ್ಮಾಕಮವಿಚಿಂತಿತಮ್ ॥೧೮॥

ಪಾರ್ಥನೇ, ಜೀವರಿಗೆ ಒದಗಿಬರುವ ಗತಿಯನ್ನು ಮನುಷ್ಯರು ತಿಳಿಯಲು ಸಾಧ್ಯವಿಲ್ಲ. ನಿಮಗೆ ಅತರ್ಕಿತವಾಗಿ ಒದಗಿಬಂದ ಈ ವಿನಿಪಾತವನ್ನು ನೋಡು.

ಯಸ್ಯಾ ಮಮ ಮುಖಪ್ರೇಕ್ಷಾ ಯೂಯಮಿಂದ್ರಸಮಾಃ ಸದಾ ।
ಸಾ ಪ್ರೇಕ್ಷೇ ಮುಖಮನ್ಯಾಸಾಮವರಾಣಾಂ ವರಾ ಸತೀ ॥೧೯॥

ಇಂದ್ರನಿಗೆ ಸಮಾನರಾದ ನೀವು ಯಾವಾಗಲೂ ನನ್ನ ಮುಖವನ್ನು ನೋಡಿ ಸುಖಿಸುತ್ತಿದ್ದರೋ ಅಂತಹ ನಾನು ಶ್ರೇಷ್ಠಳಾಗಿದ್ದರೂ ಸಹ ನನಗಿಂತ ಅಧಮರಾದ ಮುಖವನ್ನು ನೋಡಿಕೊಂಡು ಕಾಲಕಳೆಯುತ್ತಿದ್ದೇನೆ.

ಪಶ್ಯ ಪಾಂಡವ ಮೇಽವಸ್ಥಾಂ ಯಥಾ ನಾರ್ಹಾಮಿ ವೈ ತಥಾ ।
ಯುಷ್ಮಾಸು ಧ್ರಿಯಮಾಣೇಷು ಪಾಂಚಾಲೇಷು ಚ ಮಾನದ ॥೨೦॥

ಪಾಂಡವನೇ, ಮಾನದನೇ, ನೀವೂ ಮತ್ತು ಪಾಂಚಾಲರೂ ಬದುಕಿರುವಾಗ ನನಗೆ ಯೋಗ್ಯವಲ್ಲದ ಇಂತಹ ದುರವಸ್ಥೆಯನ್ನು ನಾನು ಹೊಂದಿರುವುದನ್ನು ನೋಡು.

ಯಸ್ಯಾಃ ಸಾಗರಪರ್ಯಂತಾ ಪೃಥಿವೀ ವಶವರ್ತಿನೀ ।
ಆಸೀತ್ ಸಾಽದ್ಯ ಸುದೇಷ್ಣಾಯಾಃ ಭೀತಾಽಹಂ ವಶವರ್ತಿನೀ ॥೨೧॥

ಯಾವ ನನಗೆ ಸಾಗರಪರ್ಯಂತವಾದ ಭೂಮಿಯು ವಶವರ್ತಿಯಾಗಿದ್ದಿತೋ ಅಂತಹ ನಾನು ಈ ದಿನ ಸುದೇಷ್ಣೆಗೆ ಹೆದರಿ ಅವಳ ವಶವರ್ತಿಯಾಗಿದ್ದೇನೆ.

ಯಸ್ಯಾಃ ಪುರಸ್ಸರಾ ಆಸನ್ ಪೃಷ್ಠತಶ್ಚಾನುಗಾಮಿನಃ ।
ಸಾಽಹಮದ್ಯ ಸುದೇಷ್ಣಾಯಾಃ ಪಶ್ಚಾದ್ ಯಾಮಿ ಭಯಾರ್ದಿತಾ॥೨೨॥

ಯಾವ ನನ್ನ ಹಿಂದೆ ಮತ್ತು ಮುಂದೆ ನನ್ನ ಅನುಗಾಮಿಗಳು ಇರುತ್ತಿದ್ದರೋ ಅಂತಹ ನಾನು ಈ ದಿನ ಭಯದಿಂದ ಕೂಡಿದವಳಾಗಿ ಸುದೇಷ್ಣೆಯ ಹಿಂದೆ ಹೋಗುತ್ತೇನೆ.

ಇದಂ ತು ದುಃಖಂ ಕೌಂತೇಯ ಮಮಾಸೀದ್ ಯನ್ನಿಬೋಧ ತತ್ ।
ಯಾ ನ ಜಾತು ಸ್ವಯಂ ಪಿಂಕ್ಷೇ ಗಾತ್ರೋದ್ವರ್ತನಮಾತ್ಮನಃ ॥೨೩॥

ಅನ್ಯತ್ರ ಕುಂತ್ಯಾ ಭದ್ರಂ ತೇ ಸಾಽದ್ಯ ಪಿಂಕ್ಷಾಮಿ ಚಂದನಮ್ ॥೨೪॥

ಕೌಂತೇಯನೇ, ನನಗೆ ಉಂಟಾದ ವಿಶೇಷವಾದ ಈ ದುಃಖವನ್ನು ತಿಳಿ. ಕುಂತಿಯನ್ನು ಬಿಟ್ಟು ಉಳಿದ ಯಾರ ಸಲುವಾಗಿಯೂ ಶರೀರ ಲೇಪನವಾದ ಗಂಧವನ್ನು ಅರೆಯದಿದ್ದ ನಾನು ಈ ದಿನ ಸ್ವತಃ ಹರಿಚಂದನವನ್ನು ಅರೆಯುತ್ತಿದ್ದೇನೆ. ನಿನಗೆ ಮಂಗಳವಾಗಲಿ.

ಪಶ್ಯ ಕೌಂತೇಯ ಮೇ ಪಾಣೇ ನೈವಾಭೂತಾಂ ಹಿ ಯೌ ಪುರಾ ॥೨೫॥

ಇತ್ಯಸ್ಮೈ ದರ್ಶಯಾಮಾಸ ಕಿಣವಂತೌ ಕರಾವುಭೌ ॥೨೬॥

ಕೌಂತೇಯನೇ, ನನ್ನ ಕೈಗಳನ್ನು ನೋಡು. ಇವು ಹಿಂದೆ ಎಂದೂ ಹೀಗಿರಲಿಲ್ಲ ಎಂದು ಹೇಳಿ ಜಡ್ಡುಗಟ್ಟಿದ ತನ್ನ ಎರಡು ಕೈಗಳನ್ನೂ ಭೀಮಸೇನನಿಗೆ ತೋರಿಸಿದಳು.

ಬಿಭೇಮಿ ಕುಂತ್ಯಾ ಯಾ ನಾಽಹಂ ಯುಷ್ಮಾಕಂ ವಾ ಕದಾಚನ ।
ಸಾಽದ್ಯಾಗ್ರತೋ ವಿರಾಟಸ್ಯ ಭೀತಾ ತಿಷ್ಠಾಮಿ ಕಿಂಕರೀ ॥೨೭॥

ಕುಂತಿಗಾಗಲೀ ಅಥವಾ ನಿಮಗಾಗಲೀ ಎಂದೂ ಹೆದರದಿದ್ದ ನಾನು ಈ ದಿನ ವಿರಾಟನಿಗೆ ಹೆದರಿ ಅವನ ಸೇವಕಿಯಾಗಿ ಅವನ ಮುಂದೆ ನಿಲ್ಲುತ್ತೇನೆ.

ಕಿಂ ನು ವಕ್ಷ್ಯತಿ ಸಮ್ರಾಣ್ಮಾಂ ವರ್ಣಕಃ ಸುಕರೋ ನ ವಾ ।
ನಾನ್ಯಪಿಷ್ಟಂ ವಿರಾಟಸ್ಯ ಚಂದನಂ ಕಿಲ ರೋಚತೇ ॥೨೮॥

ರಾಜನು ಈ ದಿನ ಏನು ಹೇಳುತ್ತಾನೆ? ಗಂಧವು ಚೆನ್ನಾಗಿದೆಯೋ ಅಥವಾ ಇಲ್ಲವೆಂದೋ? (ಎಂದು ಯೋಚಿಸುತ್ತೇನೆ) ಬೇರೆಯವರು ಅರೆದ ಗಂಧವು ವಿರಾಟನಿಗೆ ಪ್ರಿಯವಾಗುವುದಿಲ್ಲ ಎಂಬುದು ಪ್ರಸಿದ್ಧವಾಗಿದೆ.

ವೈಶಂಪಾಯನಃ

ಸಾ ಕೀರ್ತಯಂತೀ ದುಃಖಾನಿ ಭೀಮಸೇನಸ್ಯ ಭಾಮಿನೀ ।
ರುರೋದ ಶನಕೈಃ ಕೃಷ್ಣಾ ಭೀಮಸ್ಯೋರಃ ಸಮಾಶ್ರಿತಾ ॥೨೯॥

ವೈಶಂಪಾಯನ– ಕೋಪಗೊಂಡಿದ್ದ ಆ ದ್ರೌಪದಿಯು ಭೀಮಸೇನನಿಗೆ ತನ್ನ ದುಃಖಗಳನ್ನು ಹೇಳಿಕೊಳ್ಳುತ್ತಾ ಅವನ ಎದೆಯನ್ನು ಆಶ್ರಯಿಸಿ ಮೆಲ್ಲನೆ ಅತ್ತಳು.

ಸಾ ಬಾಷ್ಪಕಲಯಾ ವಾಚಾ ನಿಃಶ್ವಸಂತೀ ಪುನಃ ಪುನಃ ।
ಹೃದಯೇ ಭೀಮಸೇನಸ್ಯ ಘಟ್ಟಯಂತೀದಮಬ್ರವೀತ್ ॥೩೦॥

ಅವಳು ಪುನಃ ಪುನಃ ನಿಟ್ಟುಸಿರನ್ನು ಬಿಡುತ್ತಾ ಭೀಮಸೇನನ ಎದೆಗೆ ತನ್ನ ಮುಖವನ್ನು ಘಟ್ಟಿಸುತ್ತಾ ಬಾಷ್ಪಕಲೆಯಿಂದ ಕೂಡಿದ ಮಾತುಗಳಿಂದ ಹೀಗೆ ಹೇಳಿದಳು.

ನಾಲ್ಪಂ ಕೃತಂ ಮಯಾ ಭೀಮ ದೇವಾನಾಂ ಕಿಲ್ಬಿಷಂ ಪುರಾ ।
ಅಭಾಗ್ಯಾ ಯತ್ರ ಜೀವಾಮಿ ಮರ್ತವ್ಯೇ ಸತಿ ಪಾಂಡವ ॥೩೧॥

ಭೀಮಸೇನನೇ, ನಾನು ಹಿಂದೆ ದೇವತೆಗಳಿಗೆ ಅಲ್ಪವಾದ ಅಪರಾಧವನ್ನು ಮಾಡಿಲ್ಲ. ಪಾಂಡವನೇ, ಆ ಕಾರಣದಿಂದ ದುರ್ಭಾಗ್ಯಳಾಗಿ ಮರಣವನ್ನು ಹೊಂದಬೇಕಾದ ನಾನು ಬದುಕಿದ್ದೇನೆ.

ಕೀಚಕಂ ಚೇನ್ನ ಹನ್ಯಾಸ್ತ್ವಮಾತ್ಮಾನಂ ನಾಶಯಾಮ್ಯಹಮ್ ।
ವಿಷಮಾಲೋಡ್ಯ ಪಾಸ್ಯಾಮಿ ಪ್ರವೇಕ್ಷ್ಯಾಮ್ಯಥವಾऽನಲಮ್ ॥೩೨॥

ನೀನು ಕೀಚಕನನ್ನು ಕೊಲ್ಲದಿದ್ದರೆ ನಾನು ಆತ್ಮಘಾತವನ್ನು ಮಾಡಿಕೊಳ್ಳುತ್ತೇನೆ. ವಿಷವನ್ನು ಕದಡಿ ಕುಡಿಯುವೆನು ಅಥವಾ ಅಗ್ನಿಯನ್ನು ಪ್ರವೇಶಿಸುವೆನು.

ಅಭಾಗ್ಯಾऽಹಮಪುಣ್ಯಾऽಹಂ ನಿತ್ಯದುಃಖಾ ಚ ವಿಕ್ಲವಾ ।
ಪಾಪೇ ನಿಪತಿತಾಯಾಶ್ಚ ಕಿಂ ಫಲಂ ಜೀವಿತೇನ ಮೇ ॥೩೩॥

ಇತ್ಯಸ್ಯೈ ದರ್ಶಯಾಮಾಸ ಕಿಣ್ವ(ಣ)ವಂತೌ ಕರಾವುಭೌ ॥೩೪॥

ನಾನು ದೌರ್ಭಾಗ್ಯಶಾಲಿ, ಪುಣ್ಯರಹಿತಳಾದವಳೂ, ನಿತ್ಯದುಃಖಿಳೂ, ಭೀತಳಾದವಳೂ ಆಗಿ ಪಾಪದಲ್ಲಿ ಬಿದ್ದಿದ್ದೇನೆ. ನಾನು ಬದುಕಿ ಏನು ಪ್ರಯೋಜನ ಎಂದು ಹೇಳುತ್ತಾ ಜಡ್ಡುಗಟ್ಟಿದ ತನ್ನ ಎರಡು ಕೈಗಳನ್ನೂ ಅವನಿಗೆ ತೋರಿಸಿದಳು.

ವೈಶಂಪಾಯನಃ

ತತಸ್ತಸ್ಯಾಃ ಕರೌ ಪೀನೌ ಕಿಣಬದ್ಧೌ ವೃಕೋದರಃ ।
ಮುಖಮಾನಾಯ್ಯ ವೇಪಂತ್ಯಾ ರುರೋದ ಪರವೀರಹಾ ॥೩೫॥

ವೈಶಂಪಾಯನ– ಆಗ ಶತ್ರುಸಂಹಾರಕನಾದ ವೃಕೋದರನು ಪುಷ್ಪವಾದ ಜಡ್ಡುಕಟ್ಟಿದ ನಡುಗುತ್ತಿದ್ದ ಅವಳ ಎರಡು ಕೈಗಳನ್ನೂ ಹಿಡಿದು ತನ್ನ ಮುಖಕ್ಕೆ ಒತ್ತಿಕೊಂಡು ಅತ್ತನು.

ತೌ ಗೃಹೀತ್ವಾ ಚ ಕೌಂತೇಯೋ ಬಾಷ್ಪಮುತ್ಸೃಜ್ಯ ವೀರ್ಯವಾನ್ ।
ತತಃ ಪರಮದುಃಖಾರ್ತ ಇದಂ ವಚನಮಬ್ರವೀತ್ ॥೩೬॥

ಕೌಂತೇಯನಾದ ವೀರ್ಯಶಾಲಿಯಾದ ಭೀಮಸೇನನು ಅವಳ ಎರಡು ಕೈಗಳನ್ನೂ ಹಿಡಿದುಕೊಂಡು ಕಣ್ಣೀರನ್ನು ಸುರಿಸುತ್ತಾ ಪರಮದುಃಖದಿಂದ ಪೀಡಿತನಾಗಿ ಈ ಮಾತುಗಳನ್ನು ಆಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ತ್ರಯೋವಿಂಶೋಽಧ್ಯಾಯಃ ॥

॥ ಕೀಚಕವಧಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಇಪ್ಪತ್ತನಾಲ್ಕನೆಯ ಅಧ್ಯಾಯ

ದ್ರೌಪದಿ–ಭೀಮ ಸಂವಾದ. ದ್ರೌಪದಿಯಿಂದ ಕೀಚಕನನ್ನು ಕೊಲ್ಲುವಂತೆ ಭೀಮಸೇನನಿಗೆ ಒತ್ತಾಯ.

ಭೀಮಃ

ಶೃಣು ಭದ್ರೇ ವರಾರೋಹೇ ಕ್ರೋಧಾತ್ ತತ್ರ ತು ಚಿಂತಿತಮ್ ।
ತ್ವಾಂ ವೈ ಸಭಾಗತಾಂ ದೃಷ್ಟ್ವಾ ಮತ್ಸ್ಯಾನಾಂ ಕದನಂ ಮಹತ್ ॥೧॥

ಭೀಮ– ಮಂಗಳಸ್ವರೂಪಳೇ, ಸುಂದರಿಯೇ, ನಾನು ಹೇಳುವುದನ್ನು ಕೇಳು. ನೀನು ವಿರಾಟರಾಜನ ಸಭೆಗೆ ಬಂದುದನ್ನು ನೋಡಿ ನಾನು ಕೋಪದಿಂದ ದೊಡ್ಡ ಕದನವನ್ನು ಮಾಡಲು ಚಿಂತಿಸಿದೆ.

ಕರ್ತುಕಾಮೇನ ಭದ್ರಂ ತೇ ವೃಕ್ಷಶ್ಚಾವೇಕ್ಷಿತೋ ಮಯಾ ॥೨॥

ತತ್ರ ಮಾಂ ಧರ್ಮರಾಜಸ್ತು ಕಟಾಕ್ಷೇಣ ನ್ಯವಾರಯತ್ ॥೩॥

ತಂ ಧ್ಯಾತ್ವಾವಾಙ್ಮುಖಸ್ತೂಷ್ಣೀಮಾಸ್ಥಿತೋಽಸ್ಮಿ ಮಹಾನಸಮ್ ॥೪॥

ಶೃಣುಷ್ವಾನ್ಯತ್ ಪ್ರತಿಜ್ಞಾತಂ ಯದ್ ವದಾಮೀಹ ಭಾಮಿನಿ ॥೫॥

ನಿನಗೆ ಮಂಗಳವಾಗಲಿ. ಕದನವನ್ನು ಮಾಡಲು ಬಯಸಿ ನಾನು ಒಂದು ಮರವನ್ನು ನೋಡಿದೆ. ಧರ್ಮರಾಜನು ತನ್ನ ಕಣ್ಣಿನ ಸನ್ನೆಯಿಂದ ನನ್ನನ್ನು ತಡೆದನು. ಅವನನ್ನು ಕುರಿತು ಚಿಂತಿಸುತ್ತಾ ಮುಖವನ್ನು ಕೆಳಗೆ ಮಾಡಿ ಮಹಾನಸಕ್ಕೆ ಹಿಂದಿರುಗಿದೆ. ಎಲೌ ಕೋಪಗೊಂಡವಳೇ, ನಾನು ಮಾಡಿದ ಇನ್ನೊಂದು ಪ್ರತಿಜ್ಞೆಯನ್ನು ಹೇಳುತ್ತೇನೆ, ಕೇಳು.

ವೈಶಂಪಾಯನಃ

ಆಶ್ವಾಸಯನ್ ಹಿ ಪಾಂಚಾಲೀಂ ಭೀಮಸೇನ ಉವಾಚ ಹ ।
ಧಿಗಸ್ತು ಮೇ ಬಾಹುಬಲಂ ಗಾಂಡೀವಂ ಫಲ್ಗುನಸ್ಯ ಚ ।
ಯತ್ ತೇ ರಕ್ತೌ ಪುರಾಭೂತ್ವಾ ಪಾಣೀ ಕೃತಕಿಣಾವುಭೌ ॥೬॥

ವೈಶಂಪಾಯನ– ದ್ರೌಪದಿಯನ್ನು ಸಮಾಧಾನಪಡಿಸುತ್ತಾ ಭೀಮಸೇನನು ಮಾತನಾಡಿದನು. ನಿನ್ನ ಕೆಂಪಾದ ಹಸ್ತತಳಗಳು ಎರಡೂ ಜಡ್ಡುಕಟ್ಟಿರುವ ಕಾರಣದಿಂದ ನನ್ನ ಬಾಹುಬಲಕ್ಕೆ ಧಿಕ್ಕಾರವಿರಲಿ. ಅರ್ಜುನನ ಗಾಂಡೀವ ಧನುಸ್ಸಿಗೂ ಧಿಕ್ಕಾರವಿರಲಿ.

ತದದ್ಯ ಮಾಂ ಸುತಪತಿ ಯತ್ ಕೃತಂ ನ ಮಯಾ ಪುರಾ ॥೭॥

ಸಭಾಯಾಂ ಸ್ಮ ವಿರಾಟಸ್ಯ ಕರೋಮಿ ಕದನಂ ಮಹತ್ ।
ತತ್ರ ಮಾಂ ಧರ್ಮರಾಜಸ್ತು ಕಟಾಕ್ಷೇಣ ನ್ಯವಾರಯತ್ ॥೮॥

ತದಹಂ ತಸ್ಯ ವಿಜ್ಞಾಯ ಸ್ಥಿತವಾನಸ್ಮಿ ಶಾಸನಮ್ ॥೯॥

ನಾನು ವಿರಾಟನ ಸಭೆಯಲ್ಲಿ ಹಿಂದೆ ಏನನ್ನು ಮಾಡಲಿಲ್ಲವೋ ಅದು ನನ್ನನ್ನು ಬಹಳವಾಗಿ ತಾಪಕ್ಕೆ ಈಡುಮಾಡಿದೆ. ನಾನು ಆಗಲೇ ದೊಡ್ಡ ಯುದ್ಧವನ್ನು ಮಾಡುತ್ತಿದ್ದೆ. ಆದರೆ ಧರ್ಮರಾಜನು ತನ್ನ ಕಣ್ಣಿನ ಸನ್ನೆಯಿಂದ ನನ್ನನ್ನು ತಡೆದನು. ಅವನ ಅಭಿಪ್ರಾಯವನ್ನು ತಿಳಿದ ನಾನು ಅವನ ಶಾಸನಕ್ಕೆ ಅಧೀನನಾಗಿ ಸುಮ್ಮನಾದೆ.

ಯಚ್ಚ ರಾಷ್ಟ್ರಾತ್ ಪ್ರಚ್ಯವನಂ ಕುರೂಣಾಮವಧಶ್ಚ ಯಃ ।
ಸುಯೋಧನಸ್ಯ ಕರ್ಣಸ್ಯ ಶಕುನೇಃ ಸೌಬಲಸ್ಯ ಚ ॥೧೦॥

ದುಃಶಾಸನಸ್ಯ ಪಾಪಸ್ಯ ಯನ್ಮಯಾ ನ ಹೃತಂ ಶಿರಃ ।
ತನ್ಮಾಂ ದಹತಿ ಕಲ್ಯಾಣಿ ಹೃದಿ ಶಲ್ಯಮಿವಾರ್ಪಿತಮ್ ॥೧೧॥

ರಾಜ್ಯಭ್ರಷ್ಟರಾಗಿರುವುದು, ಕುರುಗಳನ್ನು ವಧೆ ಮಾಡದಿರುವುದು, ದುರ್ಯೋಧನ, ಕರ್ಣ, ಸೌಬಲನಾದ ಶಕುನಿ ಮತ್ತು ಪಾಪಿಯಾದ ದುಃಶಾಸನ ಇವರ ಶಿರಸ್ಸನ್ನು ಕತ್ತರಿಸದಿರುವುದು ಎಲೌ ಕಲ್ಯಾಣಿಯೇ, ಇವು ಎದೆಗೆ ನೆಟ್ಟ ಶಲ್ಯದಂತೆ ನನ್ನನ್ನು (ಈಟಿಯಂತೆ) ಸುಡುತ್ತಿವೆ.

ಅಪಿ ಚಾನ್ಯದ್ ವರಾರೋಹೇ ಸ್ಮರಿಷ್ಯಸಿ ವಚೋ ಮಮ ॥೧೨॥

ಪುಣ್ಯೇ ತೀರೇ ಸರಸ್ವತ್ಯಾ ಯತ್ ಪ್ರತಿಷ್ಠಾಮ ಸಂಗತಾಃ ।
ತತ್ರಾಹಮಬ್ರವಂ ಕೃಷ್ಣೇ ಸರ್ವಕ್ಲೇಶಾನನುಸ್ಮರನ್ ॥೧೩॥

ಎಲೌ ಸುಂದರಿಯೇ, ನನ್ನ ಇನ್ನೊಂದು ಮಾತನ್ನು ಸ್ಮರಿಸಿಕೊ. ಎಲೌ ದ್ರೌಪದಿಯೇ, ನಾವು ಸರಸ್ವತೀ ನದಿಯ ಪುಣ್ಯತೀರದಲ್ಲಿ ನಡೆಯುತ್ತಿದ್ದಾಗ ಎಲ್ಲಾ ಕ್ಲೇಶಗಳನ್ನೂ ನೆನೆದುಕೊಂಡು ನಿನಗೆ ಹೇಳಿದೆ.

ನ ಚಾಹಮನುಗಚ್ಛೇಯಂ ಧರ್ಮರಾಜಂ ಯುಧಿಷ್ಠಿರಮ್ ।
ಧನಂಜಯಂ ಚ ಪಾಂಚಾಲಿ ಮಾದ್ರೀಪುತ್ರೌ ಚ ಭ್ರಾತರೌ ॥೧೪॥

ವೃತ್ತೈಷಾಂ ಚ ಮತಿಃ ಕೃಷ್ಣೇ ಯುಧಿಷ್ಠಿರಮಗರ್ಹಯಮ್ ॥೧೫॥

ನಾನು ಧರ್ಮರಾಜನಾದ ಯುಧಿಷ್ಠಿರನನ್ನು ಅನುಸರಿಸುವುದಿಲ್ಲ. ಪಾಂಚಾಲಿಯೇ, ಅರ್ಜುನ ಮತ್ತು ಅಣ್ಣತಮ್ಮಂದಿರಾದ ನಕುಲಸಹದೇವರ

ನಡತೆಯೂ ಧರ್ಮರಾಜನ ನಡತೆಯಂತೆಯೇ ಇದೆ ಎಂದು ಹೇಳಿ ಎಲೌ ದ್ರೌಪದಿಯೇ, ನಾನು ಯುಧಿಷ್ಠಿರನನ್ನು ನಿಂದಿಸಿದೆನು.

ಪರುಷಂ ವಚನಂ ಶ್ರುತ್ವಾ ಮಮ ಧರ್ಮಾತ್ಮಜಸ್ತದಾ ।
ಹ್ರೀಮಾನ್ ವಾಕ್ಯಮಹೀನಾರ್ಥಂ ಬ್ರುವನ್ ರಾಜಾ ಯುಧಿಷ್ಠಿರಃ ॥

ಸರ್ವಾನನ್ವನಯದ್ ಭ್ರಾತ್ಸ್ಸಾನ್ ಮುನೇರ್ಧೌಮ್ಯಸ್ಯ ಶಾಸತಃ ॥೧೭॥

ಧರ್ಮಾತ್ಮಜನಾದ ರಾಜನಾದ ಯುಧಿಷ್ಠಿರನು ನನ್ನ ಒರಟು ಮಾತುಗಳನ್ನು ಕೇಳಿ ನಾಚಿಕೊಂಡು ಉತ್ತಮಾರ್ಥವುಳ್ಳ ಮಾತುಗಳನ್ನು ಆಡುತ್ತಾ ಧೌಮ್ಯರ ಶಾಸನಕ್ಕೆ ಅನುಗುಣವಾಗಿ ತನ್ನ ಎಲ್ಲಾ ತಮ್ಮಂದಿರನ್ನೂ ಸಮಾಧಾನಪಡಿಸಿದನು.

ಮಾ ರೋದೀ ರಾಜ್ಞಿ ಲೋಕಾನಾಂ ಸರ್ವಾಗಮಗುಣಾನ್ವಿತೇ ।
ರಕ್ಷಿತವ್ಯಂ ಸದಾಽಸ್ಮಾಭಿಃ ಸತ್ಯಮಪ್ರತಿಮಂ ಭುವಿ ॥೧೮॥

ಲೋಕದಲ್ಲಿ ಮತ್ತು ವೇದದಲ್ಲಿ ಹೇಳಿದ ಎಲ್ಲ ಗುಣಗಳಿಂದ ಕೂಡಿದ ಎಲೌ ಮಹಾರಾಣಿಯೇ, ಅಳಬೇಡ. ನಾವು ಭೂಮಿಯಲ್ಲಿ ನಮ್ಮ ಸತ್ಯಪ್ರತಿಜ್ಞೆಯನ್ನು ಯಾವಾಗಲೂ ಪಾಲಿಸಬೇಕು.

ಅನುನೀತೇಷು ದಾರೇಷು ಅನುನೀತಾ ತ್ವಮಪ್ಯಸಿ ।
ಮಾಽಧರ್ಮತೋ ವಚಃ ಕೃಷ್ಣೇ ಕ್ರೋಧಜಂ ಸಮುದಾಹರ ॥೧೯॥

ಪತಿಗೆ ಅನುಕೂಲರಾಗಿರುವ ನೀತಿಯನ್ನು ಹೊಂದಿದ ಅರುಂಧತಿ ಮೊದಲಾದ ಸ್ತ್ರೀಯರ ಸಮೂಹದಲ್ಲಿ ನೀನೂ ಒಬ್ಬಳಾಗಿದ್ದೀಯೆ. ದ್ರೌಪದಿಯೇ, ಅಧರ್ಮದಿಂದ ರೋಷದ ಮಾತುಗಳನ್ನು ಆಡಬೇಡ.

ಇಮಂ ಚೋಕ್ತಮುಪಾಲಂಭಂ ತ್ವಯಾ ರಾಜಾ ಯುಧಿಷ್ಠಿರಃ ।
ಶೃಣುಯಾದ್ ಯದಿ ಕಲ್ಯಾಣಿ ಕೃತ್ಸ್ನಂ ಜಹ್ಯಾತ್ ಸ ಜೀವಿತಮ್ ॥

ಧನಂಜಯೋ ವಾ ಸುಶ್ರೋಣಿ ಯಮೌ ಚಾಪಿ ಸುಮಧ್ಯಮೇ ।
ಲೋಕಾಂತರಗತೇಷ್ವೇಷು ನಾಹಂ ಶಕ್ಷ್ಯಾಮಿ ಜೀವಿತುಮ್ ॥೨೧॥

ಕಲ್ಯಾಣಿಯೇ, ನೀನು ಆಡಿದ ಈ ಮಾತುಗಳನ್ನು ರಾಜನಾದ ಯುಧಿಷ್ಠಿರನು ಕೇಳಿದರೆ ಅವನು ತನ್ನ ಜೀವವನ್ನೇ ತೊರೆದಾನು. ಸುಮಧ್ಯಮೆಯೇ, ಸುಶ್ರೋಣಿಯೇ, ಅರ್ಜುನ ಮತ್ತು ನಕುಲಸಹದೇವರು ತಮ್ಮ ಜೀವವನ್ನು ತೊರೆದಾರು. ಇವರು ಲೋಕಾಂತರಕ್ಕೆ ಹೋದರೆ ನಾನು ಬದುಕಿರಲಾರೆ.

ಧರ್ಮಂ ಶೃಣುಷ್ವ ಪಾಂಚಾಲಿ ಯತ್ ತೇ ವಕ್ಷ್ಯಾಮಿ ಭಾಮಿನಿ ॥

ಪಾಂಚಾಲಿಯೇ, ಭಾಮಿನಿಯೇ (ಕೋಪಗೊಂಡವಳೇ) ನಾನು ಹೇಳುವ ಧರ್ಮದ ಮಾತುಗಳನ್ನು ಕೇಳು.

ದುಹಿತಾ ಜನಕಸ್ಯಾಸೀದ್ ವೈದೇಹೀ ಯದಿ ತೇ ಶ್ರುತಾ ।
ಪತಿಮನ್ವಚರತ್ ಸೀತಾ ಮಹಾರಣ್ಯನಿವಾಸಿನಮ್ ॥೨೩॥

ನೀನು ಕೇಳಿದ್ದರೆ ಹಿಂದೆ ಜನಕರಾಜಕುಮಾರಿಯಾದ ವೈದೇಹಿಯು ಇದ್ದಳು. ಆ ಸೀತೆಯು ಮಹಾರಣ್ಯದಲ್ಲಿ ವಾಸಿಸಿದ ತನ್ನ ಪತಿಯನ್ನು ಅನುಸರಿಸಿದಳು.

ವಸಂತೀ ಚ ಮಹಾರಣ್ಯೇ ರಾಮಸ್ಯ ಮಹಿಷೀ ಪ್ರಿಯಾ ।
ರಾವಣೇನ ಹೃತಾ ಸೀತಾ ರಾಕ್ಷಸೀಭಿಶ್ಚ ತರ್ಜಿತಾ ॥೨೪॥

ಸಾ ಕ್ಲಿಶ್ಯಮಾನಾ ಸುಶ್ರೋಣಿ ರಾಮಮೇವಾನ್ವಪದ್ಯತ ॥೨೫॥

ರಾಮನ ಪ್ರಿಯ ಮಹಿಷಿಯಾದ ಸೀತೆಯು ಮಹಾರಣ್ಯದಲ್ಲಿ ವಾಸಮಾಡುತ್ತಿರುವಾಗ ರಾವಣನಿಂದ ಅಪಹರಿಸಲ್ಪಟ್ಟು ರಾಕ್ಷಸಿಯರಿಂದ ಹೆದರಿಸಲ್ಪಟ್ಟಳು. ಸುಂದರಿಯಾದ ಅವಳು ಅಂತಹ ಕ್ಲೇಶಕ್ಕೆ ಒಳಗಾದರೂ ರಾಮನನ್ನೇ ಆಶ್ರಯಿಸಿದಳು.

ಲೋಪಾಮುದ್ರಾ ತು ವೈ ದೇವಿ ಭರ್ತಾರಮೃಷಿಸತ್ತಮಮ್ ।
ಭಗವಂತಮಗಸ್ತ್ಯಂ ಸಾ ವನಾಯೈವಾನ್ವಪದ್ಯತ ॥೨೬॥

ಎಲೌ ದೇವಿಯೇ, ಲೋಪಾಮುದ್ರೆಯಾದರೂ ಋಷಿಶ್ರೇಷ್ಠರೂ, ಪೂಜ್ಯರೂ ಮತ್ತು ತನ್ನ ಪತಿಯೂ ಆದ ಅಗಸ್ತ್ಯರನ್ನೇ ಅನುಸರಿಸಿ ಕಾಡಿಗೇ ಹೋದಳು.

ಸುಕನ್ಯಾ ನಾಮ ಶರ್ಯಾತೇರ್ಭಾರ್ಗವಚ್ಯವನಂ ವನೇ ।
ವಲ್ಮೀಕಭೂತಂ ಶಾಮ್ಯಂ ತಮನ್ವಪದ್ಯತ ಭಾಮಿನೀ ॥೨೭॥

ಭಾಮಿನಿಯಾದ ಸುಕನ್ಯೆ ಎಂಬ ಶರ್ಯಾತಿಕುಮಾರಿಯು ಒಂದು ವಲ್ಮೀಕ ರೂಪದಲ್ಲಿ ಇದ್ದು ತಪಸ್ಸನ್ನು ಮಾಡುತ್ತಿದ್ದ ಭೃಗುಕುಲೋತ್ಪನ್ನರಾದ ಚ್ಯವನರನ್ನೇ ಅನುಸರಿಸಿದಳು.

ನಾಳಾಯನೀ ಚೇಂದ್ರಸೇನಾ ರೂಪೇಣಾಪ್ರತಿಮಾ ಭುವಿ ।
ಪತಿಮನ್ವಚರದ್ ವೃದ್ಧಂ ಪುರಾ ವರ್ಷಸಹಸ್ರಕಮ್ ॥೨೮॥

ನಳನ ಮಗಳಾದ ಇಂದ್ರಸೇನೆಯು ತನ್ನ ರೂಪದಿಂದ ಭೂಮಿಯಲ್ಲಿ ಅಸದೃಶಳಾಗಿದ್ದಳು. ಅವಳು ಒಂದು ಸಹಸ್ರವರ್ಷಗಳ ಕಾಲ ವೃದ್ಧನಾದ ತನ್ನ ಪತಿಯನ್ನು ಅನುಸರಿಸಿದಳು.

ದ್ಯುಮತ್ಸೇನಸುತಂ ವೀರಂ ಸತ್ಯವಂತಮನಿಂದಿತಾ ।
ಸಾವಿತ್ರ್ಯನುಚಚಾರೈಕಾ ಯಮಲೋಕಂ ಮನಸ್ವಿನೀ ॥೨೯॥

ಯಥೈತಾಃ ಕೀರ್ತಿತಾಃ ನಾರ್ಯೋ ರೂಪವತ್ಯಃ ಪತಿವ್ರತಾಃ ॥೩೦॥

ಧೈರ್ಯಶಾಲಿನಿಯಾದ ಅನಿಂದಿತೆಯಾದ ಸಾವಿತ್ರಿಯೂ ಸಹ ದ್ಯುಮತ್ಸೇನ ರಾಜನ ಮಗನಾದ ವೀರನಾದ ಸತ್ಯವಂತನನ್ನು ಯಮಲೋಕದವರೆಗೂ ಒಬ್ಬಳೇ ಹಿಂಬಾಲಿಸಿದಳು. ಈ ಹೇಳಿದ ನಾರಿಯರೆಲ್ಲರೂ ಸುಂದರಿಯರೂ ಮತ್ತು ಪತಿವ್ರತೆಯರೂ ಆಗಿದ್ದರು.

ನಳಂ ರಾಜಾನಮೇವಾಥ ದಮಯಂತೀ ವನಾಂತರೇ ।
ಅನ್ವಗಚ್ಛತ್ ಪುರಾ ಕೃಷ್ಣೇ ಯಥಾ ಭರ್ತ್ಯಾನ್ ತ್ವಮನ್ವಗಾಃ ॥೩೧॥

ಎಲೌ ದ್ರೌಪದಿಯೇ, ನೀನು ನಿನ್ನ ಪತಿಗಳನ್ನು ಹಿಂಬಾಲಿಸಿದಂತೆ ದಮಯಂತಿಯೂ ಸಹ ಹಿಂದೆ ಅರಣ್ಯದಲ್ಲಿ ತನ್ನ ಪತಿಯಾದ ನಳಮಹಾರಾಜನನ್ನು ಹಿಂಬಾಲಿಸಿದಳು.

ತಥಾ ತ್ವಮಪಿ ಕಲ್ಯಾಣಿ ಸರ್ವೈಃ ಸಮುದಿತಾ ಗುಣೈಃ ।
ಮಾ ದೀರ್ಘಂ ಕ್ಷಮ ಕಾಲಂ ತ್ವಂ ತ್ರಿಂಶದ್‌ರಾತ್ರಮನಿಂದಿತೇ ॥೩೨॥

ಎಲೌ ಕಲ್ಯಾಣಿಯೇ, ಆ ಎಲ್ಲರಂತೆ ನೀನೂ ಸಹ ಎಲ್ಲ ಗುಣಗಳಿಂದಲೂ ಕೂಡಿದವಳಾಗಿದ್ದೀಯೆ. ಬಹಳ ಕಾಲದವರೆಗೆ ಈ ದುಃಖವನ್ನು ಸಹಿಸಬೇಕಾಗಿಲ್ಲ. ಅನಿಂದಿತೆಯೇ, ಮೂವತ್ತು ರಾತ್ರಿಗಳ ಕಾಲವನ್ನು ಮಾತ್ರ ಸಹಿಸುವವಳಾಗು.

ಪೂರ್ಣೇ ತ್ರಯೋದಶೇ ವರ್ಷೇ ರಾಜ್ಞಾಂ ರಾಜ್ಞೀ ಭವಿಷ್ಯಸಿ ।
ಸತ್ಯೇನ ತೇ ಶಪೇ ಚಾಹಂ ಭವಿತಾ ನಾನ್ಯಥೇತಿ ಚ ॥೩೩॥

ಹದಿಮೂರನೆಯ ವರ್ಷವು ಕಳೆದ ಮೇಲೆ ನೀನು ಪುನಃ ಐದುಜನರ ರಾಜರ ರಾಣಿಯೇ ಆಗುವಿ. ನಾನು ಸತ್ಯಪ್ರತಿಜ್ಞೆಯನ್ನು ಮಾಡಿ ಇದನ್ನು ಹೇಳುತ್ತಿದ್ದೇನೆ. ಇದೆಂದೂ ಸುಳ್ಳಾಗುವುದಿಲ್ಲ.

ಸರ್ವಾಸಾಂ ಪರಮಸ್ತ್ರೀಣಾಂ ಪ್ರಾಮಾಣ್ಯಂ ಕರ್ತುಮರ್ಹಸಿ ।
ಸರ್ವೇಷಾಂ ಚ ನರೇಂದ್ರಾಣಾಂ ಮೂರ್ಧ್ನಿ ಸ್ಥಾಸ್ಯಸಿ ಭಾಮಿನಿ ॥೩೪॥

ಎಲ್ಲ ಮಹಾಪತಿವ್ರತೆಯರ ನಡತೆಯು ಪರಮಶ್ರೇಷ್ಠವಾದುದು ಎಂದು ನೀನು ತೋರಿಸಿಕೊಡಬೇಕಾಗಿದೆ. ಎಲೌ ಭಾಮಿನಿಯೇ, ನೀನು ಎಲ್ಲ ರಾಜರ ತಲೆಯ ಮೇಲೆ ನಿಲ್ಲುವವಳಾಗುವಿ.

ಪೂರ್ಣಾಯಾಂ ತು ಪ್ರತಿಜ್ಞಾಯಾಂ ಮಹಾಂತಂ ಭೋಗಮಾಪ್ಸ್ಯಯಾಃ ॥
ಗುರುಭರ್ತೃಕೃತಂ ಜ್ಞಾತ್ವಾ ರಾಜ್ಞಾಂ ಮೂರ್ಧ್ನಿ ಸ್ಥಿತಾ ಭವೇಃ ॥೩೬॥

ನಮ್ಮ ಪ್ರತಿಜ್ಞೆಯನ್ನು ಈಡೇರಿಸಿದ ಮೇಲೆ ನೀನು ಮಹಾಭೋಗಗಳನ್ನು ಹೊಂದುವಿ. ಗುರುಗಳು ಮತ್ತು ಪತಿಗಳು ಮಾಡಿದ ಕಾರ್ಯಗಳನ್ನು ತಿಳಿದು ಮತ್ತು ಅದರಂತೆ ನಡೆದುಕೊಂಡು ನೀನು ರಾಜರೆಲ್ಲರ ತಲೆಯ ಮೇಲೆ ನಿಲ್ಲುವಿ.

ದ್ರೌಪದೀ

ಆರ್ತಯೈತತ್ ಕೃತಂ ಭೀಮ ಮಯಾ ಭಾಷಾಪ್ರಬೋಧನಮ್ ॥೩೭॥

ಅಪಾರಯಂತ್ಯಾ ದುಃಖಾನಿ ಭೀಮಸೇನ ಮಹಾಬಲ ।
ಇದಂ ತು ದುಃಖಂ ಕೌಂತೇಯ ಮಮಾಸಹ್ಯಂ ನಿಬೋಧ ತತ್ ॥೩೮॥

ದ್ರೌಪದೀ– ಭೀಮಸೇನನೇ, ಮಹಾಬಲನೇ, ದುಃಖದಿಂದ ಕೂಡಿದ ನಾನು ದುಃಖವನ್ನು ಪರಿಹರಿಸಿಕೊಳ್ಳಲಾಗದೆ ಮಾತನಾಡಿದೆ. ಕೌಂತೇಯನೇ, ಈ ದುಃಖವನ್ನು ಸಹಿಸಲು ನನ್ನಿಂದ ಸಾಧ್ಯವಿಲ್ಲ ಎಂದು ತಿಳಿ.

ಯೋಽಯಂ ರಾಜ್ಞೋ ವಿರಾಟಸ್ಯ ಸೂತಪುತ್ರಃ ಸ ಕೀಚಕಃ ।
ಸ್ಯಾಲೋ ನಾಮ ಪ್ರವಾದೇನ ಭೋಜಸ್ತ್ರೈಗರ್ತದೇಶತಃ ॥೩೯॥

ತ್ಯಕ್ತಧರ್ಮೋ ನೃಶಂಸಶ್ಚ ಸರ್ವಾರ್ಥೇಷು ಚ ವಲ್ಲಭಃ ।
ನಿತ್ಯಮೇವಾಹ ದುಷ್ಪಾತ್ಮಾ ಭಾರ್ಯಾ ಮೇ ಭವ ಶೋಭನೇ ॥೪೦॥

ಅವಿನೀತಃ ಸುದುಷ್ಪಾತ್ಮಾ ಮಾಮನಾಥೇತಿ ಚಿಂತ್ಯ ಸಃ ॥೪೧॥

ವಿರಾಟರಾಜನ ಭಾವಮೈದುನನಾದ ಸೂತಪುತ್ರನಾದ, ಕೀಚಕನು ಯಾವನಿದ್ದಾನೆಯೋ, ತ್ರಿಗರ್ತದೇಶದವನಾದ ಅವನೇ ಜನರ ಮಾತಿನಂತೆ ಇಲ್ಲಿ ರಾಜನಾದವನು. ಅವನು ಧರ್ಮವನ್ನು ತ್ಯಜಿಸಿದವನು. ಕ್ರೂರಿ ಮತ್ತು ಎಲ್ಲಾ ಕಾರ್ಯಗಳನ್ನು ನೆರವೇರಿಸುವವನು. ಅವಿನೀತನೂ, ಬಹಳ ದುಷ್ಟನೂ ಆದ ಅವನು ನನ್ನನ್ನು ಅನಾಥಳೆಂದು ತಿಳಿದು ಸುಂದರಿಯೇ, ನನ್ನ ಪತ್ನಿಯಾಗು ಎಂದು ಯಾವಾಗಲೂ ಹೇಳುತ್ತಾನೆ.

ಕಿಮುಕ್ತೇನ ವ್ಯತೀತೇನ ಭೀಮಸೇನ ಮಹಾಬಲ ।
ಪ್ರತ್ಯುಪಸ್ಥಿತಕಾಲಸ್ಯ ದುಃಖಸ್ಯಾಂತಕರೋ ಭವ ॥೪೨॥

ಭೀಮಸೇನನೇ, ಮಹಾಬಲನೇ, ಹಿಂದೆ ನಡೆದ ಘಟನೆಗಳನ್ನು ಹೇಳಿ ಏನು ಪ್ರಯೋಜನ? ಈಗ ಒದಗಿರುವ (ಕೀಚಕನಿಂದ ಉಂಟಾದ) ದುಃಖವನ್ನು ಪರಿಹಾರ ಮಾಡುವವನಾಗು.

ಮಯ್ಯೇವ ಭೀಮ ಕೈಕೇಯೀ ರೂಪಾದ್ಧಿ ಪರಿಶಂಕಿತಾ ।
ನಿತ್ಯಮುದ್ವಿಜತೇ ರಾಜಾ ಕಥಂ ನೇಯಾದಿಮಾಮಿತಿ ॥೪೩॥

ಭೀಮಸೇನನೇ, ಕೈಕೇಯಿಯಾದ ಸುದೇಷ್ಣೆಯು ನನ್ನ ರೂಪದಿಂದಲೇ ಶಂಕೆಪಡುತ್ತಾಳೆ. ರಾಜನು ಹೇಗೆ ಇವಳ ಸಮೀಪಕ್ಕೆ ಹೋಗದಿರಬಹುದು ಎಂದು ಯಾವಾಗಲೂ ಭಯಗ್ರಸ್ತಳಾಗಿದ್ದಾಳೆ.

ತಸ್ಯಾ ವಿದಿತ್ವಾ ತಂ ಭಾವಂ ಸ್ವಯಂ ಚಾವೃತದರ್ಶನಃ ।
ಕೀಚಕೋಽಪಿ ಹಿ ದುಷ್ಪಾತ್ಮಾ ಪುನಃ ಪ್ರಾರ್ಥಯತೀಹ ಮಾಮ್ ॥೪೪॥

ಅವಳ ಆ ಅಭಿಪ್ರಾಯವನ್ನು ತಿಳಿದ ಮಿಥ್ಯಾಜ್ಞಾನಿಯಾದ ದುಷ್ಟ ಮನಸ್ಸಿನ ಕೀಚಕನು ತಾನೇ ನನ್ನನ್ನು ಪ್ರಾರ್ಥಿಸುತ್ತಿದ್ದಾನೆ.

ತಮಹಂ ಕುಪಿತಾ ಭೀಮ ಪುನಃ ಕೋಪಂ ನಿಯಮ್ಯ ಚ ।
ಅಬ್ರವಂ ಕಾಮಸಮ್ಮೂಢಮಾತ್ಮಾನಂ ರಕ್ಷ ಕೀಚಕ ॥೪೫॥

ಭೀಮಸೇನನೇ, ಅವನ ಮಾತಿನಿಂದ ನನಗೆ ಕೋಪಬಂದರೂ ನನ್ನ ಕೋಪವನ್ನು ನಿಯಂತ್ರಿಸಿ ಕಾಮಮೋಹಿತನಾದ ಅವನನ್ನು ಕುರಿತು ಕೀಚಕನೇ, ನಿನ್ನನ್ನು ನೀನು ನಿಯಂತ್ರಿಸಿಕೊ ಎಂದು ಹೇಳಿದೆನು.

ಗಂಧರ್ವಾಣಾಮಹಂ ಭಾರ್ಯಾ ಪಂಚಾನಾಂ ಮಹಿಷೀ ಪ್ರಿಯಾ ।
ತೇ ತ್ವಾಂ ನಿಹನ್ಯುರ್ದುರ್ಧರ್ಷಾಃ ಶೂರಾಃ ಸಾಹಸಕಾರಿಣಃ ॥೪೬॥

ನಾನು ಐದುಜನ ಗಂಧರ್ವರಿಗೆ ಪ್ರಿಯಳಾದ ಪತ್ನಿ ಮತ್ತು ರಾಣಿ. ಯಾರಿಗೂ ಸೋಲದ ಆ ಶೂರರು ಯಾವುದಕ್ಕೂ ಹಿಂಜರಿಯದವರು ನಿನ್ನನ್ನು ಕೊಂದಾರು.

ಏವಮುಕ್ತಸ್ತು ಪಾಪಾತ್ಮಾ ಕೀಚಕಃ ಪ್ರತ್ಯುವಾಚ ಹ ।
ನಾಹಂ ಬಿಭೇಮಿ ಸೈರಂಧ್ರಿ ಗಂಧರ್ವಾಣಾಂ ಶುಚಿಸ್ಮಿತೇ ॥೪೭॥

ಶತಂ ಸಹಸ್ರಮಪಿ ವಾ ಗಂಧರ್ವಾಣಾಮಹಂ ರಣೇ ।
ಸಮಾಗತಾನ್ ಹನಿಷ್ಯಾಮಿ ತ್ವಂ ಭೀರು ಕುರು ಮೇ ಕ್ಷಣಮ್ ॥೪೮॥

ಹೀಗೆ ಹೇಳಲ್ಪಟ್ಟ ಪಾಪಾತ್ಮನಾದ ಕೀಚಕನು ನನ್ನನ್ನು ಕುರಿತು ಸೈರಂಧ್ರಿಯೇ, ಶುಚಿಸ್ಮಿತೆಯೇ, ನಾನು ಗಂಧರ್ವರಿಗೆ ಹೆದರುವವನಲ್ಲ. ಎಲೌ ಭೀರುವೇ, ನೂರು ಜನ ಅಥವಾ ಸಾವಿರ ಮಂದಿ ಗಂಧರ್ವರು ನನ್ನನ್ನು ಯುದ್ಧದಲ್ಲಿ ಎದುರಿಸಿದರೂ ನಾನು ಅವರನ್ನು ಕೊಲ್ಲುವೆನು. ನೀನು ನನಗೆ ಅನುಕೂಲಳಾಗಿರು.

ಇತ್ಯುಕ್ತ್ವಾ ಚಾಬ್ರವಂ ಸೂತಂ ಕಾಮಾತುರಮಹಂ ಪುನಃ ।
ನ ತ್ವಂ ಪ್ರತಿಬಲಸ್ತೇಷಾಂ ಗಂಧರ್ವಾಣಾಂ ಯಶಸ್ವಿನಾಮ್ ॥೪೯॥

ಹೀಗೆ ಹೇಳಲ್ಪಟ್ಟ ನಾನು ಕಾಮಾತುರನಾದ ಆ ಕೀಚಕನನ್ನು ಕುರಿತು ಕೀರ್ತಿವಂತರಾದ ಆ ಗಂಧರ್ವರಿಗೆ ನೀನು ಪ್ರತಿಬಲನಲ್ಲ ಎಂದು ಹೇಳಿದೆನು.

ಧರ್ಮೇ ಸ್ಥಿತಾಽಸ್ಮಿ ಸತತಂ ಕುಲಶೀಲಸಮನ್ವಿತಾ ।
ನೇಚ್ಛಾಮಿ ಕಿಂಚಿದ್ ವಧ್ಯಂ ತ್ವಾಂ ತಸ್ಮಾಜ್ಜೀವಸಿ ಕೀಚಕ ॥೫೦॥

ಕುಲಶೀಲಸಮನ್ವಿತಳಾದ ನಾನು ಯಾವಾಗಲೂ ಧರ್ಮಮಾರ್ಗದಲ್ಲೇ ಇರುವವಳಾಗಿದ್ದೇನೆ. ಕೀಚಕನೇ, ನಾನು ನಿನ್ನ ವಧೆಯನ್ನು ಬಯಸುವುದಿಲ್ಲ. ಆದ್ದರಿಂದ ಬದುಕಿದ್ದೀಯೆ.

ಏವಮುಕ್ತಸ್ತು ದುಷ್ಟಾತ್ಮಾ ಪ್ರಹಸ್ಯ ಸ್ವನವತ್ ತತಃ ।
ನ ತಿಷ್ಠತಿ ಸ್ಮ ಸನ್ಮಾರ್ಗೇ ನ ಚ ಧರ್ಮಂ ಬುಭೂಷತಿ ॥೫೧॥

ಹೀಗೆ ಹೇಳಲ್ಪಟ್ಟ ದುಷ್ಟಾತ್ಮನಾದ ಅವನು ಗಟ್ಟಿಯಾಗಿ ನಕ್ಕನು. ಅವನು ಸನ್ಮಾರ್ಗದಲ್ಲಿ ನಡೆಯುವುದಿಲ್ಲ, ಧರ್ಮವನ್ನು ಅನುಸರಿಸಲು ಬಯಸುವುದಿಲ್ಲ.

ಅಥ ಮಾಂ ತತ್ರ ಕೈಕೇಯೀ ಪ್ರೇಷಯತ್ ಪ್ರೇಷಣೇನ ತು ।
ತೇನೈವ ಚೋದಿತಾ ಪೂರ್ವಂ ಭ್ರಾತೃಪ್ರಿಯಚಿಕೀರ್ಷಯಾ ।
ಸುರಾಮಾನಯ ಸೈರಂಧ್ರಿ ಕೀಚಕಸ್ಯ ನಿವೇಶನಾತ್ ॥೫೨॥

ಅನಂತರ ಕೈಕೇಯಿಯು ಮೊದಲೇ ಅವನಿಂದ ಪ್ರೇರಿತಳಾಗಿ ತಮ್ಮನಾದ ಅವನಿಗೆ ಹಿತವನ್ನು ಮಾಡಲು ನನ್ನನ್ನು ಕರೆದು ಸೈರಂಧ್ರಿಯೇ, ಕೀಚಕನ ಮನೆಯಿಂದ ಸುರೆಯನ್ನು ತೆಗೆದುಕೊಂಡು ಬಾ ಎಂಬ ಆದೇಶವನ್ನು ನೀಡಿ ಅಲ್ಲಿಗೆ ನನ್ನನ್ನು ಕಳುಹಿಸಿದಳು.

ಸೂತಪುತ್ರಸ್ತು ಮಾಂ ದೃಷ್ಟ್ವಾ ಮಮತ್ವಾಂತ್ವಮವರ್ತಯತ್ ।
ಸಾಂತ್ವೇ ಪ್ರತಿಹತೇ ಕ್ರುದ್ಧಃ ಪರಾಮರ್ಶಮನಾಽಭವತ್ ॥೫೩॥

ಸೂತಪುತ್ರನಾದ ಕೀಚಕನಾದರೂ ನನ್ನನ್ನು ನೋಡಿ ಮಧುರವಾಗಿ ಓಲೈಸಲು ಪ್ರಾರಂಭಿಸಿದನು. ಅವನ ಮಧುರವಾದ ಮಾತುಗಳನ್ನು ನಾನು ತಿರಸ್ಕರಿಸಿದ ಮೇಲೆ ಕೋಪಗೊಂಡ ಅವನು ನನ್ನನ್ನು ಬಲಾತ್ಕಾರ ಮಾಡುವ ಮನಸ್ಸುಳ್ಳವನಾದನು.

ವಿದಿತ್ವಾ ತಸ್ಯ ಸಂಕಲ್ಪಂ ಕೀಚಕಸ್ಯ ದುರಾತ್ಮನಃ ।
ತಥಾಹಂ ರಾಜಶರಣಂ ಜವೇನೈವ ಪ್ರಧಾವಿತಾ ॥೫೪॥

ದುರಾತ್ಮನಾದ ಆ ಕೀಚಕನ ಅಂತಹ ಸಂಕಲ್ಪವನ್ನು ತಿಳಿದು ನಾನು ರಾಜನ ಅರಮನೆಗೆ ವೇಗವಾಗಿ ಓಡಿಬಂದೆನು.

ಸಂದರ್ಶನೇ ತು ಮಾಂ ರಾಜ್ಞಃ ಸೂತಪುತ್ರಃ ಪರಾಮೃಶತ್ ।
ಪಾತಯಿತ್ವಾ ತು ದುಷ್ಟಾತ್ಮಾ ಪದಾऽಹಂ ತೇನ ತಾಡಿತಾ ॥೫೫॥

ರಾಜನ ಕಣ್ಣೆದುರಿಗೇ ಸೂತಪುತ್ರನು ನನ್ನ ತಲೆ ಕೂದಲನ್ನು ಹಿಡಿದು ನೆಲದ ಮೇಲೆ ಕೆಡವಿ ದುಷ್ಟಾತ್ಮನಾದ ಅವನು ನನ್ನನ್ನು ಕಾಲಿನಿಂದ ಒದ್ದನು.

ಪ್ರೇಕ್ಷತೇ ಸ್ಮ ವಿರಾಟಸ್ತು ಕಂಕಶ್ಚ ಬಹವೋ ಜನಾಃ ।
ರಥಿನಃ ಪೀಠಮರ್ದಾಶ್ಚ ಹಸ್ತ್ಯಾರೋಹಾಶ್ಚ ನೈಗಮಾಃ ॥೫೬॥

ವಿರಾಟರಾಜನೂ, ಕಂಕನೂ, ರಥಿಕರೂ, ಪೀಠಮರ್ದರೂ, ಗಜಾರೋಹಿಗಳೂ, ವೇದನಿಷ್ಠರೂ ಮೊದಲಾದ ಅನೇಕ ಜನರು ಅದನ್ನು ನೋಡಿದರು.

ಉಪಾಲಬ್ಧೋ ಮಯಾ ರಾಜಾ ಕಂಕಶ್ಚಾಪಿ ಪುನಃ ಪುನಃ ।
ತತೋ ನ ವಾರಿತೋ ರಾಜ್ಞಾ ನ ತಸ್ಯಾವಿನಯಃ ಕೃತಃ ॥೫೭॥

ನಾನು ವಿರಾಟರಾಜನನ್ನು ಮತ್ತು ಕಂಕನನ್ನು ಮತ್ತೆ ಮತ್ತೆ ನಿಂದಿಸಿದೆನು. ಆದರೂ ರಾಜನು ಅವನನ್ನು ತಡೆಯಲಿಲ್ಲ ಮತ್ತು ಅವನಿಗೆ ಯಾವ ಶಿಕ್ಷೆಯನ್ನೂ ಕೊಡಲಿಲ್ಲ.

ಯೋಯಂ ರಾಜ್ಞೋ ವಿರಾಟಸ್ಯ ಕೀಚಕೋ ನಾಮ ಸಾರಥಿಃ ।
ತ್ಯಕ್ತಧರ್ಮಾ ನೃಶಂಸಶ್ಚ ತರಸ್ವೀ ಸಮ್ಮತಃ ಪ್ರಿಯಃ ॥೫೮॥

ಶೂರೋಭಿಮಾನೀ ಪಾಪಾತ್ಮಾ ಸರ್ವಾರ್ಥೇಷು ಚ ಮುಗ್ಧವಾನ್ ।
ದಾರಾಮರ್ಶೀ ಮಹಾಭಾಗ ಲಭತೇऽರ್ಥಾನ್ ಬಹೂನಪಿ ॥೫೯॥

ಹರೇದಪಿ ಚ ವಿತ್ತಾನಿ ಪರೇಷಾಂ ಕ್ರೋಶತಾಮಪಿ ॥೬೦॥

ವಿರಾಟರಾಜನ ಸಾರಥಿಯಾದ ಈ ಕೀಚಕನು ಧರ್ಮವನ್ನು ಪರಿತ್ಯಾಗ ಮಾಡಿದವನು, ಕ್ರೂರಿ, ವೇಗಶಾಲಿ, ವಿರಾಟನಿಗೆ ಸಮ್ಮತನೂ ಪ್ರಿಯನೂ ಆದವನು. ಶೂರ, ಅಭಿಮಾನಿ, ಪಾಪಾತ್ಮನಾದವನು. ಎಲ್ಲ ವಿಷಯಗಳನ್ನೂ ತಪ್ಪಾಗಿ ತಿಳಿದವನು. ಇನ್ನೊಬ್ಬನ ಪತ್ನಿಯನ್ನು ಬಲಾತ್ಕಾರ ಮಾಡುವವನೂ ಆಗಿದ್ದಾನೆ. ಮಹಾಭಾಗನೇ, ಅವನು ವಿರಾಟರಾಜನಿಂದ ಬಹಳ ಸಂಪತ್ತನ್ನು ಪಡೆಯುತ್ತಾನೆ. ಇನ್ನೊಬ್ಬರು ಗೋಳಾಡುತ್ತಿದ್ದರೂ ಅವರ ಧನವನ್ನು ಅಪಹರಿಸುತ್ತಾನೆ.

ಪಾಪಾತ್ಮಾ ಪಾಪಕಾರೀ ಚ ಕಾಮರಾಗವಶಾನುಗಃ ।
ಅವಿನೀತಶ್ಚ ದುಷ್ಟಾತ್ಮಾ ಪ್ರತ್ಯಾಖ್ಯಾತಃ ಪುನಃ ಪುನಃ ॥೬೧॥

ದರ್ಶನೇ ದರ್ಶನೇ ದುಃಖಂ ತದಾ ಜಹ್ಯಾಂ ಚ ಜೀವಿತಮ್ ॥೬೨॥

ಅವನು ಪಾಪಾತ್ಮನಾದವನು, ಪಾಪಕರ್ಮವನ್ನು ಮಾಡುವವನು, ಕಾಮ ಮತ್ತು ರಾಗಗಳಿಗೆ ವಶನಾಗಿ ಅದರಂತೆ ನಡೆದುಕೊಳ್ಳುವವನು. ಅವಿನೀತನೂ ಮತ್ತು ದುಷ್ಟನೂ ಆಗಿದ್ದಾನೆ. ಅವನನ್ನು ನಾನು ಅನೇಕ ಬಾರಿ ನಿರಾಕರಿಸಿದ್ದೇನೆ. ಅವನನ್ನು ಪ್ರತಿಯೊಂದು ಬಾರಿ ನೋಡಿದಾಗಲೂ ನನಗೆ ದುಃಖವುಂಟಾಗಿ ಜೀವನವನ್ನು ತೊರೆಯಬೇಕೆಂದು ಎನಿಸುತ್ತದೆ.

ಧರ್ಮೇ ಪ್ರಯತಮಾನಾನಾಂ ಮಹಾನ್ ಧರ್ಮೋ ನಶಿಷ್ಯತಿ ।
ಸಮಯಂ ರಕ್ಷಮಾಣಾನಾಂ ದಾರಾಭಾವೋ ಭವಿಷ್ಯತಿ ॥೬೩॥

ಧರ್ಮ ಸಂಪಾದನೆಯಲ್ಲಿ ಪ್ರಯತ್ನಪಡುತ್ತಿರುವ ನಿಮಗೆ ಹೀಗೆಯೇ ಆದರೆ ದೊಡ್ಡ ಧರ್ಮವೇ ನಾಶ ಹೊಂದುವುದು. ನೀವು ನಿಮ್ಮ ಪ್ರತಿಜ್ಞೆಯನ್ನು ರಕ್ಷಣೆ ಮಾಡುತ್ತಿರುವಷ್ಟರಲ್ಲಿ ನಿಮ್ಮ ಪತ್ನಿಯೇ ಇಲ್ಲದಂತಾಗುವಳು.

ಭಾರ್ಯಾಯಾಂ ರಕ್ಷ್ಯಮಾಣಾಯಾಂ ಪ್ರಜಾ ಭವತಿ ರಕ್ಷಿತಾ ।
ಪ್ರಜಾಯಾಂ ರಕ್ಷ್ಯಮಾಣಾಯಾಮಾತ್ಮಾ ಭವತಿ ರಕ್ಷಿತಃ ॥೬೪॥

ಪತ್ನಿಯನ್ನು ರಕ್ಷಿಸಿದರೆ ಪ್ರಜೆಯು ರಕ್ಷಿತವಾಗುತ್ತಾನೆ. ಪ್ರಜೆಯು ರಕ್ಷಿತವಾದರೆ ತಾನೇ ರಕ್ಷಿತನಾಗುತ್ತಾನೆ.

ಆತ್ಮಾ ಹಿ ಜಾಯತೇ ತಸ್ಯಾಂ ತೇನ ಜಾಯಾಂ ವಿದುರ್ಬುಧಾಃ ।
ಭರ್ತಾ ತು ಭಾರ್ಯಯಾ ರಕ್ಷ್ಯಃ ಕಥಂ ಜಾಯಾನ್ಮಮೋದರೇ ॥೬೫॥

ತಾನೇ ಭಾರ್ಯೆಯಲ್ಲಿ ಜನಿಸುವುದರಿಂದ ಪತ್ನಿಯನ್ನು ಜಾಯಾ ಎಂದು ಜ್ಞಾನಿಗಳು ಕರೆಯುತ್ತಾರೆ. ಪತ್ನಿಯೂ ಸಹ ಪತಿಯನ್ನು ರಕ್ಷಿಸಬೇಕು. ಇಲ್ಲದಿದ್ದರೆ ನಿಮಗೆ ಅನುರೂಪವಾದ ಪ್ರಜೆಯು ನನ್ನ ಉದರದಲ್ಲಿ ಹೇಗೆ ಜನಿಸಲು ಸಾಧ್ಯ ?

ವದತಾಂ ವರ್ಣಧರ್ಮಾಂಶ್ಚ ಬ್ರಾಹ್ಮಣಾನಾಮಿತಿ ಶ್ರುತಮ್ ।
ಕ್ಷತ್ರಿಯಸ್ಯ ಸದಾ ಧರ್ಮೋ ನಾನ್ಯೋ ದಸ್ಯುನಿಬರ್ಹಣಾತ್ ॥೬೬॥

ವರ್ಣಧರ್ಮಗಳನ್ನು ಪ್ರವಚನ ಮಾಡುವ ಬ್ರಾಹ್ಮಣರ ಮುಖದಿಂದ ನಾನು ಹೀಗೆ ಕೇಳಿದ್ದೇನೆ. ದುಷ್ಟರನ್ನು ಶಿಕ್ಷಣೆ ಮಾಡುವುದಕ್ಕಿಂತಲೂ ದೊಡ್ಡ ಧರ್ಮವು ಕ್ಷತ್ರಿಯರಿಗೆ ಯಾವುದೂ ಇಲ್ಲ.

ಪಶ್ಯತೋ ಧರ್ಮರಾಜಸ್ಯ ಕೀಚಕೋ ಮಾಂ ಪದಾऽವಧೀತ್ ।
ತವ ಚೈವ ಸಮಕ್ಷಂ ವೈ ಭೀಮಸೇನ ಮಹಾಬಲ ॥೬೭॥

ಮಹಾಬಲನಾದ ಭೀಮಸೇನನೇ, ಧರ್ಮರಾಜನು ನೋಡುತ್ತಿರುವಂತೆಯೇ ಮತ್ತು ನೀನು ನೋಡುತ್ತಿರುವಂತೆಯೇ ಕೀಚಕನು ನನ್ನನ್ನು ಕಾಲಿನಿಂದ ಒದ್ದನು.

ತ್ವಯಾ ಚಾಹಂ ಪರಿತ್ರಾತಾ ತಸ್ಮಾದ್ ಭೀಮ ಜಟಾಸುರಾತ್ ।
ಜಯದ್ರಥಂ ತಥೈವ ತ್ವಮಜೈಷೀಃ ಭ್ರಾತೃಭಿಃ ಸಹ ॥೬೮॥

ಭೀಮನೇ, ನೀನು ಆ ಜಟಾಸುರನಿಂದ ನನ್ನನ್ನು ರಕ್ಷಿಸಿದೆ. ಅದರಂತೆ ಸಹೋದರನಿಂದ ಕೂಡಿ ಜಯದ್ರಥನನ್ನೂ ಜಯಿಸಿದೆ.

ಜಹೀಮಮಪಿ ಪಾಪಿಷ್ಠಂ ಯೋऽಸೌ ಮಾಮವಮನ್ಯತೇ ।
ಕೀಚಕೋ ರಾಜವನ್ನಿತ್ಯಂ ಶೋಕಕೃನ್ಮಮ ಭಾರತ ॥೬೯॥

ಎಲೈ ಭಾರತನೇ, ಧರ್ಮರಾಜನಂತೆ ಈ ಕೀಚಕನೂ ನನಗೆ ನಿತ್ಯವೂ ದುಃಖವನ್ನು ಕೊಡುವವನು. ನನಗೆ ಅವಮಾನವನ್ನು ಮಾಡುವ ಈ ಪಾಪಿಷ್ಠನನ್ನು ಸಂಹಾರ ಮಾಡು.

ಕೀಚಕಂ ಕಾಮಸಂತಪ್ತಂ ಭಿಂಧಿ ಕುಂಭಮಿವಾಶ್ಮನಿ ।
ಯೋ ನಿಮಿತ್ತಮನರ್ಥಾನಾಂ ಬಹೂನಾಂ ಮಮ ಭಾರತ ॥೭೦॥

ಎಲೈ ಭಾರತನೇ, ನನಗೆ ಉಂಟಾಗಿರುವ ಅನೇಕ ಅನರ್ಥಗಳಿಗೆ ಕಾರಣನಾದ ಈ ಕೀಚಕನನ್ನು ಮಣ್ಣಿನ ಮಡಕೆಯನ್ನು ಕಲ್ಲುಬಂಡೆಯ ಮೇಲೆ ಒಡೆಯುವಂತೆ ಪುಡಿಮಾಡು.

ತಂ ಚೇಜ್ಜೀವಂತಮಾದಿತ್ಯಃ ಪ್ರಾತರಭ್ಯುದಯಿಷ್ಯತಿ ।
ವಿಷಮಾಲೋಡ್ಯ ಪಾಸ್ಯಾಮಿ ಕೀಚಕೋ ಮಾಂ ವಶಂ ನಯೇತ್ ॥೭೧॥

ಶ್ರೇಯೋ ಹಿ ಮರಣಂ ಮನ್ಯೇ ಭೀಮಸೇನ ತವಾಗ್ರತಃ ॥೭೨॥

ಅವನು ಜೀವಿಸಿರುವಂತೆಯೇ ನಾಳೆ ಪ್ರಾತಃಕಾಲದಲ್ಲಿ ಸೂರ್ಯನು ಉದಯಿಸಿದರೆ ವಿಷವನ್ನು ಕದಡಿಕುಡಿಯುವೆನು. ಇಲ್ಲದಿದ್ದರೆ ಕೀಚಕನು ನನ್ನನ್ನು ವಶಮಾಡಿಕೊಂಡಾನು. ಭೀಮಸೇನನೇ, ನಿನ್ನ ಎದುರಿಗೆ ಮರಣವನ್ನು ಹೊಂದುವುದೇ ಶ್ರೇಯಸ್ಸೆಂದು ನಾನು ಭಾವಿಸುತ್ತೇನೆ.

ವೈಶಂಪಾಯನಃ

ಇತ್ಯುಕ್ತ್ವಾ ಪ್ರಾರುದತ್ ಕೃಷ್ಣಾ ಭೀಮಸ್ಯೋರಸಿ ಸಂಶ್ರಿತಾ ॥೭೩॥

ಹೀಗೆ ಹೇಳಿ ದ್ರೌಪದಿಯು ಭೀಮಸೇನನ ಎದೆಯನ್ನು ಆಶ್ರಯಿಸಿ ಗಟ್ಟಿಯಾಗಿ ಅತ್ತಳು.

ಭೀಮಶ್ಚ ತಾಂ ಪರಿಷ್ವಜ್ಯ ಮಹತ್ ಸಾಂತ್ವಂ ಪ್ರಯುಜ್ಯ ಚ ।
ಕೀಚಕಂ ಮನಸಾऽಗಚ್ಛತ್ ಸೃಕ್ಕಿಣೀ ಪರಿಸಂಲಿಹನ್ ॥೭೪॥

ಭೀಮನಾದರೂ ಅವಳನ್ನು ಆಲಿಂಗಿಸಿ ಸಮಾಧಾನದ ದೊಡ್ಡ ಮಾತುಗಳನ್ನು ಆಡಿ ತನ್ನ ನಾಲಿಗೆಯಿಂದ ಕಟಬಾಯಿಯನ್ನು ಸವರಿಕೊಳ್ಳುತ್ತಾ ಮನಸ್ಸಿನಲ್ಲಿಯೇ ಕೀಚಕನ ಬಳಿಗೆ ಹೋದನು.

ಆಶ್ವಾಸಯಿತ್ವಾ ಬಹುಶೋ ಭೃಶಮಾರ್ತಾಂ ಸುಮಧ್ಯಮಾಮ್ ।
ಹೇತುತತ್ತ್ವಾರ್ಥಸಂಯುಕ್ತೈರ್ವಚೋಭಿಃ ದ್ರುಪದಾತ್ಮಜಾಮ್ ॥೭೫॥

ಪ್ರಮೃಜ್ಯ ಪಾಣಿನಾ ತಸ್ಯ ವದನಂ ಸುಸಮಾಕುಲಮ್ ।
ಉವಾಚ ಚೈನಾಂ ದುಃಖಾರ್ತಾಂ ಭೀಮಃ ಕ್ರೋಧಸಮನ್ವಿತಃ ॥೭೬॥

ಬಹಳ ದುಃಖಕ್ಕೆ ಈಡಾಗಿದ್ದ ಸುಂದರಿಯಾದ ದ್ರುಪದಕುಮಾರಿಯಾದ ಕೃಷ್ಣೆಯನ್ನು ಅನೇಕ ಹೇತುತತ್ವಸಹಿತವಾದ ಮಾತುಗಳಿಂದ ಸಮಾಧಾನಪಡಿಸಿ ದುಃಖದಿಂದ ಕೂಡಿದ್ದ ಅವಳ ಮುಖವನ್ನು ತನ್ನ ಕೈಯಿಂದ ಸವರಿ ಕ್ರೋಧಸಮನ್ವಿತನಾದ ಅವನು ದುಃಖಾರ್ತಳಾದ ಅವಳನ್ನು ಕುರಿತು ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಚತುರ್ವಿಂಶೋಽಧ್ಯಾಯಃ ॥

॥ ಕೀಚಕವಧಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ತತ್ಕೈನಮಾಸಾದ್ಯ ಚ ಭೀಮಸೇನೋ
ವಿಜಿತ್ಯ ತಂ ಬಾಹುಯುದ್ಧೇ ನಿಹತ್ಯ ।
ಶಿರೋ ಗುದೇ ಪಾಣಿಪಾದೌ ಚ ತಸ್ಯ
ಪ್ರವೇಶಯಾಮಾಸ ವಿಮೃದ್ಯ ವೀರಃ ॥೨೬॥

ನರ್ತನಶಾಲೆಯಲ್ಲಿ ಭೀಮ ಕೀಚಕನನ್ನು ಹಿಡಿದು, ಬಾಹುಯುದ್ಧದಲ್ಲಿ ಗೆದ್ದುಕೊಂದು ಮರ್ದಿಸಿ ತಲೆ-ಕೈ-ಕಾಲುಗಳನ್ನು ಗುದದಲ್ಲಿ ಸೇರಿಸಿ ಮಾಂಸದ ಮುದ್ದೆಯಾಗಿ ಮಾಡಿದ.

★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ನರ್ತನಾಗಾರದಲ್ಲಿ ಕೀಚಕನ ವಧೆ

ಭೀಮಃ

ತಥಾ ಭದ್ರೇ ಕರಿಷ್ಯಾಮಿ ಯಥಾ ತ್ವಂ ಭೀರು ಭಾಷಸೇ ।
ಅದ್ಯೈನಂ ಸೂದಯಿಷ್ಯಾಮಿ ಕೀಚಕಂ ಸಹಬಾಂಧವಮ್ ॥೧॥

ಭೀಮ– ಎಲೌ ಭೀರುವೇ, ಮಂಗಳಸ್ವರೂಪಳೇ, ನೀನು ಹೇಳಿದಂತೆಯೇ ಮಾಡುವೆನು. ಈ ದಿನವೇ ನಾನು ಕೀಚಕನನ್ನು ಅವನ ಬಂಧುಗಳ ಜೊತೆಯಲ್ಲಿ ಕೊಲ್ಲುವೆನು.

ಅಸ್ಯಾಃ ಪ್ರದೋಷೇ ಶರ್ವರ್ಯಾಃ ಕುರುಷ್ವಾನೇನ ಸಂವಿದಮ್ ।
ದುಃಖಂ ಶೋಕಂ ಚ ನಿರ್ಧೂಯ ಯಾಜ್ಞಸೇನಿ ಶುಚಿಸ್ಮಿತೇ ॥೨॥

ಈ ರಾತ್ರಿಗಿಂತ ಮುಂಚೆ ಬರುವ ಪ್ರದೋಷಕಾಲದಲ್ಲಿ ಎಲೌ ಶುಚಿಸ್ಮಿತೆಯೇ, ಯಾಜ್ಞಸೇನಿಯೇ, ದುಃಖಶೋಕಗಳನ್ನು ತೊರೆದು ಅವನ ಜೊತೆಯಲ್ಲಿ ಮಾತನಾಡು.

ಯದೇತನ್ನರ್ತನಾಗಾರಂ ಮತ್ಸ್ಯರಾಜೇನ ಕಾರಿತಮ್ ।
ದಿವಾऽತ್ರ ಕನ್ಯಾ ನೃತ್ಯಂತಿ ರಾತ್ರೌ ಯಾಂತಿ ಸ್ವಕಂ ಗೃಹಮ್ ॥೩॥

ತತ್ರಾಸ್ತಿ ಶಯನಂ ದಿವ್ಯಂ ದೃಢಾಂಗಂ ಸುಪ್ರತಿಷ್ಠಿತಮ್ ।
ತತ್ರೈನಂ ದರ್ಶಯಿಷ್ಯಾಮಿ ಪೂರ್ವಪ್ರೇತಾನ್ ಪಿತಾಮಹಾನ್ ॥೪॥

ಮತ್ಸ್ಯರಾಜನು ಕಟ್ಟಿಸಿದ ಈ ನರ್ತನಾಗಾರವಿದೆಯಷ್ಟೆ. ಅಲ್ಲಿ ಹಗಲಿನ ವೇಳೆಯಲ್ಲಿ ಕನ್ಯೆಯರು ನರ್ತನವನ್ನು ಮಾಡಿ ರಾತ್ರಿಗೆ ತಮ್ಮ ಮನೆಗೆ ಹಿಂದಿರುಗುತ್ತಾರೆ. ಅಲ್ಲಿ ಭದ್ರವಾದ ದಿವ್ಯವಾದ ಒಳ್ಳೆಯ ಆಶ್ರಯವನ್ನು ಹೊಂದಿರುವ ಒಂದು ಶಯನವಿದೆ. ಅಲ್ಲಿ ಅವನಿಗೆ ಅವನಿಗಿಂತಲೂ ಮೊದಲು ಮೃತರಾದ ಅವನ ಪಿತಾಮಹರನ್ನು ತೋರಿಸುವೆನು.

ಸಂಕೇತಂ ಸೂತಪುತ್ರಸ್ಯ ಕಾರಯಸ್ವ ಶುಭಾನನೇ ।
ಯಥಾ ಪರೇ ನ ಪಶ್ಯೇಯುಃ ಕುರ್ವಂತೀಂ ತೇನ ಸಂವಿದಮ್ ॥೫॥

ತಥಾ ಕುರುಷ್ವ ಕಲ್ಯಾಣಿ ಯಥಾ ಸನ್ನಿಹಿತೋ ಭವೇತ್ ॥೬॥

ಶುಭಾನನೆಯೇ, ನೀನು ಅವನ ಜೊತೆಯಲ್ಲಿ ಮಾತನಾಡುವುದನ್ನು ಇನ್ನೊಬ್ಬರು ನೋಡದಂತೆ ನಿರ್ವಾಹ ಮಾಡು. ಎಲೌ ಕಲ್ಯಾಣಿಯೇ, ಅವನು ಅಲ್ಲಿಗೆ ಬರುವಂತೆ ಮಾಡು.

ವೈಶಂಪಾಯನಃ

ತತ್ರ ತೌ ಕಥಯಿತ್ವಾ ತು ಬಾಷ್ಪಮುತ್ಸೃಜ್ಯ ದುಃಖಿತೌ ॥೭॥

ಭೀಮೇನ ಚ ಪ್ರತಿಜ್ಞಾತೇ ಕೀಚಕಸ್ಯ ವಧೇ ತದಾ ।
ದ್ರೌಪದೀ ಚ ಸುದೇಷ್ಣಾಯಾ ಪ್ರವಿವೇಶ ಪುನರ್ಗೃಹಮ್ ॥೮॥

ರಾತ್ರಿಶೇಷಂ ತದವ್ಯಗ್ರಾ ಧಾರಯಾಮಾಸ ವೈ ಹೃದಿ ॥೯॥

ವೈಶಂಪಾಯನ– ಹೀಗೆ ದುಃಖಿತರಾದ ಅವರು ಕಣ್ಣೀರು ಸುರಿಸುವುದನ್ನು ಬಿಟ್ಟು ಪರಸ್ಪರವಾಗಿ ಮಾತನಾಡಿಕೊಂಡರು. ಭೀಮನು ಕೀಚಕನ ವಧೆಯನ್ನು ಪ್ರತಿಜ್ಞೆ ಮಾಡಿದ ಮೇಲೆ ದ್ರೌಪದಿಯು ಪುನಃ ಸುದೇಷ್ಣೆಯ ಮನೆಯನ್ನು ಪ್ರವೇಶಿಸಿ ಅವ್ಯಗ್ರಳಾಗಿ ಆ ಉಳಿದ ರಾತ್ರಿಯನ್ನು ತನ್ನ ಮನಸ್ಸಿನ ಸ್ಥೈರ್ಯದಿಂದಲೇ ಕಳೆದಳು.

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಂ ಪ್ರಾತರುತ್ಥಾಯ ಕೀಚಕಃ ।
ಗತ್ವಾ ರಾಜಕುಲಾಯ್ಯೈವ ದ್ರೌಪದೀಮಿದಮಬ್ರವೀತ್ ॥೧೦॥

ಆ ರಾತ್ರಿಯು ಕಳೆಯುತ್ತಿರಲು ಪ್ರಾತಃಕಾಲದಲ್ಲಿ ಕೀಚಕನು ಎದ್ದು ರಾಜನ ಮನೆಗೆ ಹೋಗಿ ದ್ರೌಪದಿಯನ್ನು ಕುರಿತು ಹೀಗೆ ಮಾತನಾಡಿದನು.

ಯತ್ ಸೋಽಹಂ ಪಶ್ಯತೋ ರಾಜ್ಞೋ ಪಾತಯಿತ್ವಾ ಪದಾಽಹನಮ್ ।
ನ ಕಂಚಿಲ್ಲಭಸೇ ನಾಥಮಭಿಪನ್ನಾ ಬಲೀಯಸಾ ॥೧೧॥

ನಾನು ರಾಜನು ನೋಡುತ್ತಿರುವಂತೆಯೇ ನಿನ್ನನ್ನು ಕೆಡವಿ ಕಾಲಿನಿಂದ ಒದ್ದೆನಷ್ಟೆ! ನನ್ನಂತಹ ಬಲಿಷ್ಠನಿಗೆ ವಶಳಾದ ನೀನು ರಕ್ಷಣೆಯನ್ನು ಮಾಡುವ ಯಾವ ನಾಥನನ್ನೂ ಪಡೆಯುವುದಿಲ್ಲ.

ಪ್ರವಾದೇನೇಹ ಮತ್ಸ್ಯಾನಾಮಯಂ ರಾಜೇತಿ ಚೋಚ್ಯತೇ ।
ಅಹಮೇವ ಹಿ ರಾಜಾ ವೈ ಮತ್ಸ್ಯಾನಾಂ ವಾಹಿನೀಪತಿಃ ॥೧೨॥

ಜನರು ಮಾತನಾಡುವಂತೆ ವಿರಾಟನು ಮತ್ಸ್ಯರಾಜನೆಂದು ಹೇಳಲ್ಪಡುತ್ತಾನೆ. ಆದರೆ ನಿಜವಾಗಿ ಮತ್ಸ್ಯರ ಸೇನಾಧಿಪತಿಯಾದ ನಾನೇ ರಾಜ.

ಸಾ ಸುಖಂ ಪ್ರತಿಪದ್ಯಸ್ವ ದಾಸೋ ಭೀರು ಭವಾಮಿ ತೇ ।
ನ ಹ್ಯಹಂ ತ್ವಾಮೃತೇ ಭೀರು ಚಿರಂ ಜೀವಿತುಮುತ್ಸಹೇ ॥೧೩॥

ಅಂತಹ ನೀನು ನನ್ನನ್ನು ಹೊಂದಿ ಸುಖವನ್ನು ಪಡು. ಎಲೌ ಭೀರುವೇ, ನಾನು ನಿನ್ನ ದಾಸನಾಗುತ್ತೇನೆ. ಭೀರುವೇ, ನಿನ್ನನ್ನು ಬಿಟ್ಟು ನಾನು ಬಹುಕಾಲ ಬದುಕಿರಲು ಇಚ್ಛಿಸುವುದಿಲ್ಲ.

ಅಹ್ನಾಯ ತವ ಸುಶ್ರೋಣಿ ಶತನಿಷ್ಕಂ ದದಾಮಿ ತೇ ।
ದಾಸೀಶತಂ ಚ ತೇ ದದ್ಯಾಂ ದಾಸಾನಾಮಪಿ ಚಾಪರಮ್ ॥೧೪॥

ತಥಾಶ್ವಾಂಶ್ಚ ತ್ವರಾಯುಕ್ತಾನಸ್ತು ನೌ ಭೀರು ಸಂಗಮಃ ॥೧೫॥

ಎಲೌ ಸುಶ್ರೋಣಿಯೇ, ನಾನು ಈಗಲೇ ಶೀಘ್ರವಾಗಿ ನಿನಗೆ ನೂರುಚಿನ್ನದ ನಾಣ್ಯಗಳನ್ನು ಕೊಡುತ್ತೇನೆ. ನೂರು ದಾಸಿಯರನ್ನೂ ಮತ್ತು ದಾಸರ ಇನ್ನೊಂದು ಗುಂಪನ್ನು ಕೊಟ್ಟೇನು. ಅದರಂತೆ ವೇಗವುಳ್ಳ ಅನೇಕ ಅಶ್ವಗಳನ್ನು ಕೊಡುತ್ತೇನೆ. ಎಲೌ ಭೀರುವೇ, ನಮಗೆ ಸಂಗಮವುಂಟಾಗಲಿ.

ಸೈರಂಧ್ರೀ

ಏತನ್ಮೇ ವಚನಂ ಸತ್ಯಂ ಪ್ರತಿಪದ್ಯಸ್ವ ಕೀಚಕ ।
ನ ತೇ ಸಖಾ ವಾ ಭ್ರಾತಾ ವಾ ಜಾನೀಯಾತ್ ಸಂಗಮಂ ಮಯಾ ॥

ಸೈರಂಧ್ರೀ– ಕೀಚಕನೇ, ಈ ನನ್ನ ಮಾತನ್ನು ಕೇಳು. ನಿನ್ನ ಸ್ನೇಹಿತನಾಗಲೀ, ತಮ್ಮನಾಗಲೀ ನನ್ನ ಸಂಗಮವನ್ನು ತಿಳಿಯದಂತೆ ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡಿ ಹೇಳು.

ಅನುಬೋಧಾದನರ್ಥಃ ಸ್ಯಾದ್ ಅಯಶಶ್ಚ ಮಹದ್ ಭವೇತ್ ।
ಅನುಬೋಧಾದ್ಧಿ ಭೀತಾऽಸ್ಮಿ ಗಂಧರ್ವಾಣಾಂ ಯಶಸ್ವಿನಾಮ್ ॥೧೭॥

ಏತನ್ಮೇ ಪ್ರತಿಜಾನೀಹಿ ತತೋऽಹಂ ವಶಗಾ ತವ ॥೧೮॥

ಯಾರಾದರೂ ತಿಳಿದರೆ ದೊಡ್ಡ ಅನರ್ಥವೂ, ಅಪಕೀರ್ತಿಯೂ ಉಂಟಾದೀತು. ಕೀರ್ತಿವಂತರಾದ ಗಂಧರ್ವರಿಗೆ ತಿಳಿಯಬಹುದೆಂದು ನಾನು ಹೆದರಿದ್ದೇನೆ. ಈ ವಿಷಯದಲ್ಲಿ ನನಗೆ ಪ್ರತಿಜ್ಞೆಯನ್ನು ಮಾಡು. ಅನಂತರ ನಾನು ನಿನಗೆ ವಶಳಾಗುತ್ತೇನೆ.

ಕೀಚಕಃ

ಏವಮೇತತ್ ಕರಿಷ್ಯಾಮಿ ಯಥಾ ಸುಶ್ರೋಣಿ ಭಾಷಸೇ ॥೧೯॥

ಏಕೋऽಹಮಾಗಮಿಷ್ಯಾಮಿ ಶೂನ್ಯಮಾವಸಥಂ ತವ ।
ಸಮಾಗಮಾರ್ಥಂ ರಂಭೋರು ತ್ವಯಾ ಮದನಮೋಹಿತಃ ॥೨೦॥

ಯಥಾ ತ್ವಾಂ ನಾವಬುಧ್ಯೇಯುರ್ಗಂಧರ್ವಾಃ ಸೂರ್ಯವರ್ಚಸಃ॥೨೧॥

ಕೀಚಕ– ಸುಶ್ರೋಣಿಯೇ, ನೀನು ಹೇಳಿದಂತೆಯೇ ಇದನ್ನು ಮಾಡುವೆನು. ಎಲೌ ರಂಭೋರುವೇ, ಮದನಮೋಹಿತನಾದ ನಾನು ನಿನ್ನ ಸಮಾಗಮಕ್ಕಾಗಿ ಸೂರ್ಯನ ಕಾಂತಿಯುಳ್ಳ ಗಂಧರ್ವರು ತಿಳಿಯದಂತೆ ಒಬ್ಬನೇ ನಾಟ್ಯಾಗಾರಕ್ಕೆ ಬರುವೆನು.

ಸೈರಂಧ್ರೀ

ಯದಿದಂ ನರ್ತನಾಗಾರಂ ಮತ್ಸ್ಯರಾಜೇನ ಕಾರಿತಮ್ ।
ದಿವಾ ತು ಕನ್ಯಾ ನೃತ್ಯಂತಿ ರಾತ್ರೌ ಯಾಂತಿ ಸ್ವಕಂ ಗೃಹಮ್ ॥೨೨॥

ನಿಶಾಯಾಂ ತತ್ರ ಗಚ್ಛೇಥಾ ಗಂಧರ್ವಾಸ್ತನ್ನ ಜಾನತೇ ।
ತತ್ರ ದೋಷಃ ಪರಿಹೃತೋ ಭವಿಷ್ಯತಿ ನ ಸಂಶಯಃ ॥೨೩॥

ಸೈರಂಧ್ರೀ– ಮತ್ಸ್ಯರಾಜನು ನಿರ್ಮಿಸಿದ ಈ ನರ್ತನಾಗಾರವು ಯಾವುದು ಇದೆಯೋ ಅಲ್ಲಿ ಹಗಲಿನಲ್ಲಿ ಕನ್ಯೆಯರು ನರ್ತನವನ್ನು ಮಾಡುತ್ತಾರೆ. ರಾತ್ರಿಯ ವೇಳೆಗೆ ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ. ನೀನು ರಾತ್ರಿಯ ವೇಳೆಗೆ ಅಲ್ಲಿ ಬರುವವನಾಗು.

ಗಂಧರ್ವರು ಆ ಸ್ಥಳವನ್ನು ತಿಳಿದಿಲ್ಲ. ಹಾಗೆ ಮಾಡಿದರೆ ನಿನ್ನ ದೋಷವು ಪರಿಹಾರವನ್ನು ಹೊಂದುವುದು. ಇದರಲ್ಲಿ ಸಂಶಯವಿಲ್ಲ.

ಏಕಸ್ತ್ವಂ ನರ್ತನಾಗಾರಂ ರಾತ್ರೌ ಸಂಕೇತಮಾವ್ರಜ ।
ತತ್ರಾಹಂ ವಶಗಾ ತುಭ್ಯಂ ಭವಿತಾ ನಾತ್ರ ಸಂಶಯಃ ॥೨೪॥

ನೀನೊಬ್ಬನೇ ರಾತ್ರಿಯಲ್ಲಿ ಸಂಕೇತಸ್ಥಾನವಾದ ನರ್ತನಾಗಾರಕ್ಕೆ ಬಾ. ನಾನು ಅಲ್ಲಿ ನಿನಗೆ ವಶಳಾಗುವೆನು. ಇದರಲ್ಲಿ ಸಂಶಯವಿಲ್ಲ.

ಕೀಚಕಃ

ತಥಾ ಭದ್ರೇ ಕರಿಷ್ಯಾಮಿ ಯಥಾ ತ್ವಂ ಭೀರು ಮನ್ಯಸೇ ॥೨೫॥

ಏಕಃ ಸನ್ ನರ್ತನಾಗಾರಮಾಗಮಿಷ್ಯಾಮಿ ಭಾಮಿನಿ ।
ಸಮಾಗಮಾರ್ಥಂ ಸುಶ್ರೋಣಿ ಶಪೇ ಚ ಸುಕೃತೇನ ಮೇ ॥೨೬॥

ಕೀಚಕ– ಎಲೌ ಭೀರುವೇ, ನಿನ್ನ ಅಭಿಪ್ರಾಯದಂತೆಯೇ ಮಾಡುವೆನು. ಭಾಮಿನಿಯೇ, ಸುಶ್ರೋಣಿಯೇ, ನಿನ್ನ ಸಮಾಗಮಕ್ಕಾಗಿ ನಾನೊಬ್ಬನೇ ನಾಟ್ಯಾಗಾರಕ್ಕೆ ಬರುವೆನು. ನನ್ನ ಪುಣ್ಯದ ಮೇಲೆ ಆಣೆಯನ್ನು ಮಾಡಿ ಹೇಳುತ್ತಿದ್ದೇನೆ.

ಯಥಾ ತ್ವಾಂ ನಾವಬುಧ್ಯಂತೇ ಗಂಧರ್ವಾ ವರವರ್ಣಿನಿ ।
ಸತ್ಯಂ ಮೇ ಪ್ರತಿಜಾನೀಹಿ ಗಂಧರ್ವೇಭ್ಯೋ ನ ತೇ ಭಯಮ್ ॥೨೭॥

ಅಲಂಕರಿಷ್ಯಾಮ್ಯದ್ಯಾಹಂ ತ್ವತ್ಸಮಾಗಮನಾಯ ವೈ ॥೨೮॥

ವರವರ್ಣಿನಿಯೇ (ಸುಂದರಿಯೇ), ಗಂಧರ್ವರು ನಿನ್ನನ್ನು ತಿಳಿಯದಂತೆ ಮಾಡುವೆನು. ನಾನು ಶಪಥವನ್ನು ಮಾಡಿ ಹೇಳುತ್ತಿದ್ದೇನೆ. ನಿನಗೆ ಗಂಧರ್ವರಿಂದ ಭಯವು ಬೇಡ. ನಿನ್ನ ಸಮಾಗಮಕ್ಕೋಸ್ಕರವಾಗಿ ನಾನು ಅಲಂಕಾರವನ್ನು ಮಾಡಿಕೊಳ್ಳುವೆನು.

ವೈಶಂಪಾಯನಃ

ತಮರ್ಥಮಭಿಜಲ್ಪಂತ್ಯಾ ದ್ರೌಪದ್ಯಾಃ ಕೀಚಕಸ್ಯ ವೈ ।
ಕ್ಷಣಮಾತ್ರಂ ತದಭವನ್ನಾಸೇನೇವ ಸಮಂ ನೃಪ ॥೨೯॥

ವೈಶಂಪಾಯನ– ಎಲೈ ರಾಜನೇ, ಈ ವಿಷಯವನ್ನು ದ್ರೌಪದಿಯ ಜೊತೆಯಲ್ಲಿ ಮಾತನಾಡಿದ ಕೀಚಕನಿಗೆ ಅನಂತರ ಒಂದೊಂದು ಕ್ಷಣವೂ ಒಂದು ತಿಂಗಳಿನಂತೆ ಕಂಡಿತು.

ಕೀಚಕೋऽಥ ಗೃಹಂ ಗತ್ವಾ ಭೃಶಂ ಹರ್ಷಪರಿಪ್ಲುತಃ ।
ಸೈರಂಧ್ರೀರೂಪಿಣಂ ಮೂಢೋ ಮೃತ್ಯುಂ ತಾಂ ನಾವಬುದ್ಧವಾನ್ ॥

ಅನಂತರ ಕೀಚಕನು ಮನೆಗೆ ಹೋಗಿ ಹರ್ಷದಿಂದ ಪೂರ್ಣವಾಗಿ ತುಂಬಿದವನಾದನು. ಆ ಮೂಢನು ಸೈರಂಧ್ರೀರೂಪವಾದ ತನ್ನ ಮೃತ್ಯುವನ್ನು ತಿಳಿಯಲಿಲ್ಲ.

ಗಂಧಾಭರಣಮಾಲ್ಯೇಷು ವ್ಯಾಸಕ್ತಃ ಸ ವಿಶೇಷತಃ ।
ಅಲಂಕಾರಂ ಚಕಾರಾಶು ಸತ್ವರಃ ಕಾಲಚೋದಿತಃ ॥೩೧॥

ಗಂಧಾಭರಣಮಾಲೆಗಳಲ್ಲಿ ಆಸಕ್ತನಾದ ಅವನು ಕಾಲಚೋದಿತನಾಗಿ ಶೀಘ್ರವಾಗಿ ತನ್ನನ್ನು ಅಲಂಕಾರ ಮಾಡಿಕೊಂಡನು.

ತಸ್ಯ ತತ್ ಕುರ್ವತಃ ಕರ್ಮ ಕಾಲೋ ದೀರ್ಘ ಇವಾಭವತ್ ।
ಅನುಚಿಂತಯತಶ್ಚಾಪಿ ತಾಮೇವಾಯತಲೋಚನಾಮ್ ॥೩೨॥

ಆ ವಿಶಾಲಾಕ್ಷಿಯನ್ನೇ ಚಿಂತಿಸುತ್ತಾ ಅಲಂಕಾರ ಮಾಡಿಕೊಳ್ಳುತ್ತಿದ್ದ ಅವನಿಗೆ ಆ ಕಾಲವು ದೀರ್ಘವಾಗಿ ಕಂಡಿತು.

ಆಸೀದಭ್ಯಧಿಕಾ ಸಾऽಪಿ ಶ್ರೀಃ ಶ್ರಿಯಂ ಪ್ರಮುಮುಕ್ಷತಃ ।
ನಿರ್ವಾಣಕಾಲೇ ದೀಪಸ್ಯ ವರ್ತೀಮಿವ ದಿಧಕ್ಷತಃ ॥೩೩॥

ದೀಪವು ಆರಿ ಬತ್ತಿಯನ್ನು ಸುಡುವ ಕಾಲಕ್ಕೆ ದೀಪದ ಪ್ರಕಾಶವು ಜಾಸ್ತಿಯಾದಂತೆ ತನ್ನ ಎಲ್ಲಾ ಸಂಪತ್ತನ್ನು ಕಳೆದುಕೊಳ್ಳಲು ಹೊರಟಿದ್ದ ಅವನಿಗೆ ಅಧಿಕವಾದ ಕಾಂತಿಯುಂಟಾಯಿತು.

ಶ್ರುತಸಂಪ್ರತ್ಯಯಸ್ತತ್ರ ಕೀಚಕೋऽಪಿ ಸಮಾಗಮೇ ।
ನಾಜಾನಾತ್ ಪತನಂ ಸ್ವಸ್ಯ ಚಿಂತಯನ್ ಸ ಶುಭಾನನಾಮ್ ॥೩೪॥

ಸಮಾಗಮದ ವಿಷಯದಲ್ಲಿ ದ್ರೌಪದಿಯ ನಂಬಿಕೆಯ ಮಾತುಗಳನ್ನು ಕೇಳಿದ ಆ ಕೀಚಕನು ಆ ಶುಭಾನನೆಯನ್ನೇ ಚಿಂತಿಸುತ್ತಾ ತನಗೆ ಉಂಟಾಗಲಿರುವ ಪತನವನ್ನು ತಿಳಿಯಲಿಲ್ಲ.

ತತಸ್ತು ದ್ರೌಪದೀ ಗತ್ವಾ ಭೀಮಸೇನಂ ಮಹಾನಸೇ ।
ಉಪಾತಿಷ್ಠತ ಕಲ್ಯಾಣೀ ಕೌರವ್ಯಂ ಪತಿಮಂತಿಕಾತ್ ॥೩೫॥

ಅನಂತರ ದ್ರೌಪದಿಯು ಅಡುಗೆ ಮನೆಗೆ ಹೋಗಿ ಕಲ್ಯಾಣಿಯಾದ ಅವಳು ಪತಿಯಾದ ಕೌರವ್ಯನಾದ ಭೀಮಸೇನನನ್ನು ಸಮೀಪದಿಂದ ಎಚ್ಚರಿಸಿದಳು.

ತಮುವಾಚ ಸುಕೇಶಾಂತಾ ಕೀಚಕಸ್ಯ ಕೃತೋ ಮಯಾ ।
ಸಂಕೇತೋ ನರ್ತನಾಗಾರೇ ಯಥಾ ಚೋಕ್ತಂ ನರರ್ಷಭ ॥೩೬॥

ಸುಕೇಶಾಂತಳಾದ ಅವಳು ಅವನನ್ನು ಕುರಿತು ಎಲೈ ನರರ್ಷಭನೇ, ನೀನು ಹೇಳಿದಂತೆ ಕೀಚಕನಿಗೆ ನರ್ತನಾಗಾರಕ್ಕೆ ಬರುವಂತೆ ಸೂಚನೆಯನ್ನು ನೀಡಿದ್ದೇನೆ ಎಂದು ಹೇಳಿದಳು.

ಕಾಲೇನ ನಿಯತಂ ಬದ್ಧಃ ಕಾಮೇನ ಚ ಬಲಾತ್ಕೃತಃ ।
ಶೂನ್ಯಂ ಸ ನರ್ತನಾಗಾರಮಾಗಮಿಷ್ಯತಿ ಸೂತಜಃ ॥೩೭॥

ಮೃತ್ಯುಪಾಶದಿಂದ ಬದ್ಧನಾಗಿ, ಕಾಮದಿಂದಲೂ ಬಲಾತ್ಕೃತನಾಗಿ ಸೂತಪುತ್ರನಾದ ಆ ಕೀಚಕನು ಶೂನ್ಯವಾದ ಆ ನರ್ತನಾಗಾರಕ್ಕೆ ಒಬ್ಬನೇ ಬರುವನು.

ಏಕೋ ನಿಶಿ ಮಹಾಬಾಹೋ ಕೀಚಕಂ ತಂ ನಿಸೂದಯ ॥೩೮॥

ಎಲೈ ಮಹಾಬಾಹುವೇ, ಆ ಕೀಚಕನನ್ನು ರಾತ್ರಿಯಲ್ಲಿ ಸಂಹರಿಸು.

ತಂ ಸೂತಪುತ್ರಂ ಕೌಂತೇಯ ಕೀಚಕಂ ಮದದರ್ಪಿತಮ್ ।
ಗತ್ವಾ ತಂ ನರ್ತನಾಗಾರೇ ವಿಭಿನ್ಧಿ ಕುರು ಪಾಂಡವ ॥೩೯॥

ಎಲೈ ಪಾಂಡವನೇ, ಕೌಂತೇಯನೇ, ನೀನು ನರ್ತನಾಗಾರಕ್ಕೆ ಹೋಗಿ ಮದದರ್ಪಿತನಾದ ಸೂತಪುತ್ರನಾದ ಕೀಚಕನನ್ನು ಭೇದಿಸುವವನಾಗು.

ಗರ್ವಿತಃ ಸೂತಪುತ್ರೋಽಸೌ ಗಂಧರ್ವಾನವಮನ್ಯತೇ ।
ಸ ತ್ವಂ ಪ್ರಹರತಾಂ ಶ್ರೇಷ್ಠ ನಾಲಂ ನಾಗ ಇವಾರುಜ ॥೪೦॥

ಗರ್ವಿತನಾದ ಈ ಸೂತಪುತ್ರನು ಗಂಧರ್ವರಿಗೆ ಅಪಮಾನವನ್ನು ಮಾಡುತ್ತಿದ್ದಾನೆ. ಪ್ರಹಾರ ಮಾಡುವವರಲ್ಲಿ ಶ್ರೇಷ್ಠನಾದ ಭೀಮಸೇನನೇ, ಆನೆಯು ನಾಲವನವನ್ನು ಧ್ವಂಸ ಮಾಡುವಂತೆ ನೀನು ಅವನನ್ನು ಧ್ವಂಸಮಾಡು.

ಅಸ್ರಂ ದುಃಖಾಭಿಭೂತಾಯಾ ಅಪಮಾರ್ಜಸ್ವ ಪಾಂಡವ ॥೪೧॥

ಬಾಹುವೀರ್ಯಾನುರೂಪಂ ಚ ದರ್ಶಯಾದ್ಯ ಪರಾಕ್ರಮಮ್ ।
ಆತ್ಮನಶ್ಚೈವ ಭದ್ರಂ ತೇ ಕುರು ಮಾನಂ ಕುಲಸ್ಯ ಚ ॥೪೨॥

ಪಾಂಡವನೇ, ದುಃಖತಪ್ತಳಾದ ನನ್ನ ಕಣ್ಣೀರನ್ನು ಒರೆಸುವವನಾಗು. ನಿನ್ನ ಬಾಹುವೀರ್ಯಕ್ಕೆ ಅನುರೂಪವಾದ ಪರಾಕ್ರಮವನ್ನು ನೀನು ತೋರಿಸು. ನಿನಗೆ ಮಂಗಳವಾಗಲಿ. ನಿನಗೂ ಮತ್ತು ನಿನ್ನ ಕುಲಕ್ಕೂ ಮಾನವನ್ನು ಉಂಟುಮಾಡುವವನಾಗು (ಎಂದು ಹೇಳಿದಳು).

ಭೀಮಃ

ಸ್ವಾಗತಂ ತೇ ಸುಕೇಶಾಂತೇ ಯನ್ಮಾಂ ವೇದಯಸಿ ಪ್ರಿಯಮ್ ।
ನ ಹ್ಯನ್ಯಂ ಕಂಚಿದಿಚ್ಛಾಮಿ ಸಹಾಯಂ ವರವರ್ಣಿನಿ ॥೪೩॥

ಭೀಮ– ಒಳ್ಳೆಯ ಬೈತಲೆಯುಳ್ಳವಳೇ, ನನಗೆ ಪ್ರಿಯವಾದ ವಿಷಯವನ್ನು ಹೇಳುವುದರಿಂದ ನಿನಗೆ ಸ್ವಾಗತ. ಸುಂದರಿಯೇ, ನಾನು ಈ ವಿಷಯದಲ್ಲಿ ಇನ್ನೊಬ್ಬರ ಸಹಾಯವನ್ನು ಬಯಸುವುದಿಲ್ಲ.

ಸಾ ಮೇ ಪ್ರೀತಿಸ್ತ್ವಯಾऽऽಖ್ಯಾತಾ ಕೀಚಕಸ್ಯ ಸಮಾಗಮೇ ।
ಹತ್ವಾ ಹಿಡಿಂಬಂ ಯಾ ಪ್ರೀತಿಃ ಸಾ ಮಮಾಸೀಚ್ಚುಚಿಸ್ಮಿತೇ ॥೪೪॥

ಶುಚಿಸ್ಮಿತೆಯೇ, ಹಿಡಿಂಬನ ಜೊತೆಯಲ್ಲಿ ಸೆಣೆಸಾಡಿ ಅವನನ್ನು ಕೊಂದಾಗ ಎಂತಹ ಸಂತೋಷವಾಯಿತೋ ಅಂತಹದೇ ಸಂತೋಷವು ಕೀಚಕನನ್ನು ಎದುರಿಸಿಕೊಲ್ಲುವಂತೆ ನೀನು ಹೇಳಿದಾಗ ನನಗೆ ಉಂಟಾಗುತ್ತಿದೆ.

ಸತ್ಯಂ ಭ್ರಾತೄನ್ ಸಪುತ್ರಾಂಶ್ಚ ಪುರಸ್ಕೃತ್ಯ ಶಪಾಮಿ ತೇ ।
ಅಹಂ ಭದ್ರೇ ಹನಿಷ್ಯಾಮಿ ವೃತ್ರಂ ದೇವೇಶ್ವರೋ ಯಥಾ ॥೪೫॥

ಮಂಗಳಸ್ವರೂಪಳೇ, ನನ್ನ ಸಹೋದರರ ಮೇಲೆ ಮತ್ತು ಮಕ್ಕಳ ಮೇಲೆ ಆಣೆಯನ್ನು ಮಾಡಿ ಹೇಳುತ್ತಿದ್ದೇನೆ. ದೇವೇಂದ್ರನು ವೃತ್ರನನ್ನು ಸಂಹರಿಸಿದಂತೆ ನಾನು ಕೀಚಕನನ್ನು ಕೊಲ್ಲುವೆನು.

ಕೀಚಕಂ ನಿಹನಿಷ್ಯಾಮಿ ವೃತ್ರಂ ದೇವಪತಿರ್ಯಥಾ ॥೪೬॥

ದೇವೇಂದ್ರನು ವೃತ್ರನನ್ನು ಸಂಹರಿಸಿದಂತೆ ನಾನು ಕೀಚಕನನ್ನು ಖಂಡಿತವಾಗಿ ಕೊಲ್ಲುವೆನು.

ಪ್ರಸಹ್ಯ ಸೂದಯಿಷ್ಯಾಮಿ ಕೇಶವಃ ಕೇಶಿನಂ ಯಥಾ ।
ರಹಸ್ಯಂ ವಾ ಪ್ರಕಾಶಂ ವಾ ಸೂದಯಿಷ್ಯಾಮಿ ಕೀಚಕಮ್ ॥೪೭॥

ಕೇಶವನು ಕೇಶಿದೈತ್ಯನನ್ನು ಕೊಂದಂತೆ ನನ್ನ ಬಲದಿಂದ ಅವನನ್ನು ವಶಪಡಿಸಿಕೊಂಡು ಕೊಲ್ಲುವೆನು. ರಹಸ್ಯವಾಗಿ ಅಥವಾ ಎಲ್ಲರಿಗೂ ತಿಳಿಯುವಂತೆ ನಾನು ಕೀಚಕನನ್ನು ಕೊಲ್ಲುವೆನು.

ಯಸ್ತಾ ತ್ವಂ ಕಾಮಾಭಿಭೂತಾತ್ಮಾ ದುರ್ಲಭಾಮಭಿಮನ್ಯತೇ ॥೪೮॥

ಏಕೆಂದರೆ ಕಾಮಪೂರ್ಣವಾದ ಮನಸ್ಸುಳ್ಳ ಅವನು ದುರ್ಲಭಳಾದ ನಿನ್ನನ್ನು ಬಯಸುತ್ತಾನೆ.

ಅಥ ಚೇದನುಬುಧ್ಯಂತಿ ಸೂತಪುತ್ರಂ ಮಯಾ ಹತಮ್ ।
ನಿರ್ಮನುಷ್ಯಂ ಕರಿಷ್ಯಾಮಿ ಮತ್ಸ್ಯಾನಾಮಿಮಮಾಲಯಮ್ ॥೪೯॥

ನಾನು ಸೂತಪುತ್ರನಾದ ಕೀಚಕನನ್ನು ಕೊಂದ ವಿಷಯವನ್ನು ಅನಂತರ ಬೇರೆಯವರು ತಿಳಿದರೆ ವಿರಾಟನ ಈ ಅರಮನೆಯನ್ನು ನಿರ್ಮನುಷ್ಯವನ್ನಾಗಿ ಮಾಡುವೆನು.

ಮಯಾ ಹತಾಂಶ್ಚೇನ್ಮಾತ್ಸ್ಯಾಂಸ್ತು ಧಾರ್ತರಾಷ್ಟ್ರೋऽನುಬುಧ್ಯತೇ ॥೫೦॥

ದುರ್ಯೋಧನಂ ತತೋ ಹತ್ವಾ ಸಾನುಬಂಧಂ ಸಬಾಂಧವಮ್ ।
ಕುರೂಣಾಮಖಿಲಂ ರಾಜ್ಯಂ ಪ್ರತಿಪತ್ಸ್ಯಾಮಿ ಭಾಮಿನಿ ॥೫೧॥

ನನ್ನಿಂದ ಮತ್ಸ್ಯಪತಿಯ ಅಮಾತ್ಯಮೊದಲಾದವರೆಲ್ಲರೂ ಕೊಲ್ಲಲ್ಪಡುವುದನ್ನು ದುರ್ಯೋಧನನು ಒಂದುಪಕ್ಷ ತಿಳಿದರೆ ಆಗ ತನ್ನ ಮಿತ್ರ-ಬಾಂಧವರೊಡನೆ ದುರ್ಯೋಧನನ್ನು ಕೊಂದು ಎಲೌ ಭಾಮಿನಿಯೇ, ಕುರುಗಳ ಸಮಗ್ರರಾಜ್ಯವನ್ನು ಪಡೆಯುವೆನು.

ನಾಹಂ ಚೋಪಾಸಿತುಂ ಶಕ್ತಃ ಕುಂತೀಪುತ್ರಂ ಯುಧಿಷ್ಠಿರಮ್ ।
ಕಾಮಂ ಸತ್ಯಮುಪಾಸೀತ ಕುಂತೀಪುತ್ರೋ ಯುಧಿಷ್ಠಿರಃ ॥೫೨॥

ಕಾಮಮನ್ಯೇ ಹ್ಯುಪಾಸಂತು ವಿನೀತಂ ಧರ್ಮಚಾರಿಣಮ್ ।
ತ್ವಾಂ ತು ದುಃಖಮಿದಂ ಪ್ರಾಪ್ತಾಂ ನಾಹಂ ಶಕ್ನೋಮ್ಯುಪೇಕ್ಷಿತುಮ್ ॥
ನಿರ್ವೃತಾ ಭವ ಪಾಂಚಾಲಿ ಕೀಚಕಸ್ಯ ವಧಾತ್ ಪುನಃ ॥೫೪॥

ಕೀಚಕನಿಂದ ಇಂತಹ ವ್ಯಸನವು ಒದಗಿರುವಾಗ ನಾನು ಧರ್ಮರಾಜನ ಸೇವೆಯನ್ನು ಮಾಡಿಕೊಂಡು ಸುಮ್ಮನಿರಲಾರೆ. ಕುಂತೀಪುತ್ರನಾದ ಯುಧಿಷ್ಠಿರನು ತನಗೆ ಇಷ್ಟವಾದಂತೆ ತನ್ನ ಸತ್ಯಪ್ರತಿಜ್ಞೆಯನ್ನು ರಕ್ಷಿಸಿಕೊಂಡಿರಲಿ. ವಿನಯಶಾಲಿಯೂ, ಧರ್ಮಚಾರಿಯೂ ಆದ ಅವನನ್ನು ಅರ್ಜುನಾದಿಗಳು ಸೇವೆ ಮಾಡಿಕೊಂಡು ಇರಲಿ. ನಾನು ಮಾತ್ರ ನಿನಗೆ ಒದಗಿಬಂದ ಈ ದುಃಖವನ್ನು ಉಪೇಕ್ಷೆ ಮಾಡಲಾರೆ. ಪಾಂಚಾಲಿಯೇ, ಕೀಚಕನ ವಧೆಯನ್ನು ಮಾಡಿದ ಮೇಲೆ ನೀನು ಪುನಃ ಸಮಾಧಾನದಿಂದ ಇರುವವಳಾಗು.

ದ್ರೌಪದೀ

ಕೀಚಕಸ್ಯ ವಧಂ ಭೀಮ ಯದಿ ಜಾನಂತಿ ನಾಗರಾಃ ।
ತ್ವಯಾ ಕೃತಂ ಮಹಾಬಾಹೋ ನಾಹಂ ಜೀವಿತುಮುತ್ಸಹೇ ॥೫೫॥

ಕಥಂ ವಧಮುಪಾನೀಯಾಂ ರಾಜಾऽಯಂ ಮತ್ಕೃತೇ ಪ್ರಭೋ ।

ದ್ರೌಪದೀ– ಭೀಮಸೇನನೇ, ಮಹಾಬಾಹುವೇ, ನೀನು ಕೀಚಕನನ್ನು ಕೊಂದ ವಿಷಯವನ್ನು ನಗರದ ಜನರು ತಿಳಿದರೆ ನಾನು ಬದುಕಿರಲಾರೆ. ನಾನು ಧರ್ಮರಾಜನಿಗೆ ಹೇಗೆ ಮರಣವನ್ನುಂಟುಮಾಡಲಿ? ನನ್ನ ನಿಮಿತ್ತದಿಂದಾಗಿ ತನ್ನ ಪ್ರತಿಜ್ಞೆಯು ಪೂರ್ಣವಾಗದಿರುವುದರಿಂದ ಧರ್ಮರಾಜನು ಮರಣಹೊಂದುವನು.

ನಿಗೃಹ್ಣಂಸ್ತಂ ತಥಾ ಭೀಮ ಕೀಚಕಂ ವಿನಿಪಾತಯ ॥೫೬॥

ಯಥಾ ನ ಕಶ್ಚಿಜ್ಜಾನೀತೇ ಸೂತಪುತ್ರಂ ತ್ವಯಾ ಹತಮ್ ।
ತಥಾ ಕುರುಷ್ವ ಕೌರವ್ಯ ಬಲವನ್ನರಿಮರ್ದನ ॥೫೭॥

ಅದೃಶ್ಯಮಾನಸ್ತ್ವಂ ತಸ್ಯ ಭಿಂಧಿ ಪ್ರಾಣಾನರಿಂದಮ ॥೫೮॥

ಭೀಮಸೇನನೇ, ಕೀಚಕನನ್ನು ನಿಗ್ರಹಿಸಿ ಅವನನ್ನು ಕೆಡವು. ನೀನು ಕೀಚಕನನ್ನು ಕೊಂದ ವಿಷಯವು ಯಾರಿಗೂ ತಿಳಿಯದಂತೆ ಆ ಕಾರ್ಯವನ್ನು ಮಾಡಬೇಕು. ಎಲೈ ಕೌರವ್ಯನೇ, ಬಲಿಷ್ಠನೇ, ಶತ್ರುಮರ್ದನನೇ, ಅರಿಂದಮನೇ, ನೀನು ಯಾರಿಗೂ ಕಾಣದಂತೆ ಅವನನ್ನು ಪುಡಿಮಾಡು.

ಭೀಮಃ

ತಥಾ ಭದ್ರೇ ಕರಿಷ್ಯಾಮಿ ಯಥಾ ತ್ವಂ ಭೀರು ಭಾಷಸೇ ।
ಅದೃಶ್ಯಮಾನಸ್ತಸ್ಯಾಹಂ ತಮಿಸ್ರಾಯಾಂ ಸಕುಂಡಲಮ್ ॥೫೯॥

ನಾಗೋ ಬಿಲ್ವಮಿವಾಕ್ರಮ್ಯ ಪೋಥಯಿಷ್ಯಾಮಿ ತಚ್ಛಿರಃ ।
ಅಲಭ್ಯಾಮಿಚ್ಛತಸ್ತಸ್ಯ ಕೀಚಕಸ್ಯ ದುರಾತ್ಮನಃ ॥೬೦॥

ಭೀಮ– ಮಂಗಳಸ್ವರೂಪಳೇ, ನೀನು ಹೇಳಿದಂತೆಯೇ ಮಾಡುವೆನು. ಯಾರಿಗೂ ಕಾಣದಂತೆ ನಾನು ಈ ರಾತ್ರಿಯಲ್ಲಿ ಆನೆಯು ಬಿಲ್ವಫಲವನ್ನು ನೆಲದ ಮೇಲೆ ಹಾಕಿ ತುಳಿದಂತೆ ಅಲಭ್ಯವಾದುದನ್ನು ಬಯಸುವ ದುರಾತ್ಮನಾದ ಕೀಚಕನ ಕರ್ಣಕುಂಡಲಸಹಿತವಾದ ಶಿರಸ್ಸನ್ನು ಆಕ್ರಮಿಸಿ ಪುಡಿಮಾಡುವೆನು.

ವೈಶಂಪಾಯನಃ

ಏವಮುಕ್ತ್ವಾ ಮಹಾಬಾಹುಸ್ತತ್ರ ಪಾಂಡವನಂದನಃ ।
ಅರ್ಧರಾತ್ರೇ ತದೋತ್ಥಾಯ ಸತ್ವವಾನ್ ಭೀಮವಿಕ್ರಮಃ ॥೬೧॥

ಅವದಾತೇನ ಮೃದುನಾ ಪಟೇನಾಚ್ಛಾದಿತಸ್ತಥಾ ।
ದ್ರೌಪದೀಂ ಪೃಷ್ಠತಃ ಕೃತ್ವಾ ಯತ್ರಾಸೀನ್ನರ್ತನಾಲಯಃ ॥೬೨॥

ವೈಶಂಪಾಯನ– ಹೀಗೆ ಹೇಳಿ ಬಲಿಷ್ಠನೂ, ಭಯಂಕರ ಪರಾಕ್ರಮವುಳ್ಳವನೂ, ಮಹಾಬಾಹುವೂ ಆದ ಆ ಪಾಂಡುನಂದನನು ಆಗ ಅರ್ಧರಾತ್ರಿಯಲ್ಲಿ ಎದ್ದು ಮೃದುವಾದ ವಸ್ತ್ರವನ್ನು ಉಟ್ಟು ದ್ರೌಪದಿಯನ್ನು ಹಿಂದೆ ಮಾಡಿಕೊಂಡು ನಾಟ್ಯಾಗಾರದ ಕಡೆಗೆ ಹೊರಟನು.

ಸ ಭೀಮಃ ಪ್ರಥಮಂ ಗತ್ವಾ ತಮಿಸ್ರಾಯಾಮುಪಾವಿಶತ್ ।
ಮೃಗಂ ಸಿಂಹ ಇವಾದೃಶ್ಯಃ ಪ್ರತ್ಯವೇಕ್ಷತ ಕೀಚಕಮ್ ॥೬೩॥

ಭೀಮನು ರಾತ್ರಿಯಲ್ಲಿ ನಾಟ್ಯಾಗಾರವನ್ನು ತಲುಪಿ ಸಿಂಹವು ಅದೃಶ್ಯವಾಗಿ ಜಿಂಕೆಯನ್ನು ನಿರೀಕ್ಷಿಸುವಂತೆ (ಹೊಂಚು ಹಾಕುವಂತೆ) ಕೀಚಕನನ್ನು ನಿರೀಕ್ಷಿಸುತ್ತಾ ಕುಳಿತನು.

ಕೀಚಕಸ್ತು ಶಿರಃಸ್ನಾತೋ ನಿಶಾಯಾಂ ಸಮಲಂಕೃತಃ ।
ಸಂಕೇತಮಗಮತ್ ತೂರ್ಣಂ ಶೂನ್ಯಾಗಾರಮಪಾವೃತಮ್ ॥೬೪॥

ತಮೇವ ನರ್ತನಾಗಾರಂ ಪಾಂಚಾಲೀ ಯಮಭಾಷತ ।

ರಾತ್ರಿಯಲ್ಲಿ ತಲೆಯ ಮೇಲೆ ಸ್ನಾನವನ್ನು ಮಾಡಿ, ಚೆನ್ನಾಗಿ ಅಲಂಕಾರವನ್ನು ಮಾಡಿಕೊಂಡು ಬಾಗಿಲನ್ನು ತೆರೆದಿದ್ದ, ಶೂನ್ಯವಾಗಿದ್ದ, ದ್ರೌಪದಿಯು ಹೇಳಿದ ಸಂಕೇತಸ್ಥಾನವಾಗಿದ್ದ ನಾಟ್ಯಾಗಾರಕ್ಕೆ ಕೀಚಕನು ಶೀಘ್ರವಾಗಿ ಬಂದನು.

ತಾಂ ಮನ್ಯಮಾನಃ ಸಂಕೇತೇ ಸೈರಂಧ್ರೀಂ ಕಾಮಮೋಹಿತಃ ॥೬೫॥

ಪ್ರವಿಶ್ಯ ನರ್ತನಾಗಾರಂ ತತಸ್ತಂ ಪುರುಷಾಧಮಃ ।
ಪೂರ್ವಾಗತಂ ಭೀಮಸೇನಂ ದೃಪ್ತಮಪ್ರತಿಮೌಜಸಮ್ ॥೬೬॥

ಶಯಾನಂ ಶಯನೇ ತಂ ಸ ಮೃತ್ಯುಂ ಮೂಢಃ ಪರಾಮೃಶತ್ ॥೬೭॥

ಕಾಮಮೋಹಿತನಾದ ಕೀಚಕನು ಸೈರಂಧ್ರಿಯು ಸಂಕೇತಸ್ಥಾನವಾದ ನಾಟ್ಯಾಗಾರಕ್ಕೆ ಬಂದಿರುವಳೆಂದು ತಿಳಿದು, ಪುರುಷಾಧಮನಾದ ಅವನು ನರ್ತನಾಗಾರವನ್ನು

ಪ್ರವೇಶಿಸಿ ಮೊದಲೇ ಬಂದು ದರ್ಪದಿಂದ ಕೂಡಿದ್ದ, ಅಸದೃಶಪರಾಕ್ರಮವುಳ್ಳ, ಶಯನದಲ್ಲಿ ಮಲಗಿದ್ದ, ಭೀಮಸೇನನನ್ನು ಮೂಢನಾದ ಅವನು ಮೃತ್ಯುವನ್ನು ತಡಕಿದಂತೆ ತಡಕಿದನು.

ಜಾಜ್ವಲ್ಯಮಾನಂ ಕೋಪೇನ ಕೃಷ್ಣಾಯಾ ಧರ್ಷಣೇನ ಚ ।
ಉಪಸಂಗಮ್ಯ ಚೈವೈನಂ ಕೀಚಕಃ ಕಾಮಮೋಹಿತಃ ॥೬೮॥

ಹರ್ಷೋನ್ಮಥಿತಚಿತ್ತಾತ್ಮಾ ಸ್ಮಯಮಾನೋऽಭ್ಯಭಾಷತ ॥೬೯॥

ಕಾಮಮೋಹಿತನಾದ ಕೀಚಕನು ಸಂತೋಷದಿಂದ ತುಂಬಿಹೋಗಿದ್ದ ತನ್ನ ಮನಸ್ಸಿನಿಂದ ಕೂಡಿದವನಾಗಿ ನಗುತ್ತಾ ತನ್ನ ಕೋಪದಿಂದಲೂ ಮತ್ತು ದ್ರೌಪದಿಯ ಧರ್ಷಣದಿಂದಲೂ ಉರಿಯುತ್ತಿದ್ದ ಭೀಮಸೇನನನ್ನು (ತಿಳಿಯದೆ) ಕುರಿತು ಮಾತನಾಡಿದನು.

ಏಕಾಂತೇ ಭೀಮಮಾಸಾದ್ಯ ಕೀಚಕಃ ಕಾಲಚೋದಿತಃ ।
ಭೀಮಂ ಸಮುಪಸಂಗಮ್ಯ ಚಾಭ್ಯಭಾಷತ ದುರ್ಮತಿಃ ॥೭೦॥

ಕಾಲಚೋದಿತನೂ, ದುರ್ಮತಿಯೂ ಆದ ಕೀಚಕನು ಏಕಾಂತದಲ್ಲಿ ಭೀಮನನ್ನು ಸಮೀಪಿಸಿ ಅವನನ್ನು ಕುರಿತು ಮಾತನಾಡಿದನು.

ಪ್ರಹಿತಂ ತೇ ಮಯಾ ಭದ್ರೇ ಬಹು ವಿತ್ತಂ ಶುಚಿಸ್ಮಿತೇ ।
ತ್ವಯಿ ತಿಷ್ಠತು ತತ್ಸರ್ವಂ ಯಥಾऽಸಿ ಸ್ವಯಮಾಗತಾ ॥೭೧॥

ಯತ್ ಕೃತಂ ಧನರತ್ನಾಢ್ಯಂ ದಾಸೀಶತಪರಿಚ್ಛದಮ್ ।
ರೂಪಲಾವಣ್ಯಸಂಯುಕ್ತಂ ರೂಪವದ್ಭಿರಲಂಕೃತಮ್ ॥೭೨॥

ಗೃಹಂ ಸಾಂತಃಪುರಂ ಸುಭ್ರು ಕ್ರೀಡಾರತಿವಿರಾಜಿತಮ್ ।
ತತ್ ಸರ್ವಂ ತ್ವಾಂ ಸಮುದ್ದಿಶ್ಯ ಸಹಸಾऽಹಮುಪಾಗತಃ ॥೭೩॥

ಮಂಗಳಸ್ವರೂಪಳೇ, ಶುಚಿಸ್ಮಿತೆಯೇ, ನೀನೇ ಸ್ವತಃ ನನ್ನ ಬಳಿಗೆ ಬಂದುದರಿಂದ ನಾನು ನಿನಗೆ ಬಹಳ ವಿತ್ತವನ್ನು ಕಳುಹಿಸಿದ್ದೇನೆ. ಅವೆಲ್ಲವೂ ನಿನ್ನ ಬಳಿಯಲ್ಲಿಯೇ ಇರಲಿ. ನಾನು ಮನೆಯನ್ನು ಧನರತ್ನದಿಂದ ತುಂಬಿದುದನ್ನಾಗಿ ಮಾಡಿ

ರೂಪಲಾವಣ್ಯಗಳುಳ್ಳ ನೂರಾರು ದಾಸಿಯರ ಪರಿವಾರದಿಂದ ಅಲಂಕೃತವನ್ನಾಗಿ ಮಾಡಿ, ಎಲೌ ಸುಂದರಿಯೇ, ಅಂತಃಪುರವನ್ನೂ ಸಹ ಕ್ರೀಡಾರತಿಗಳಿಗೆ ಅನುಕೂಲವನ್ನಾಗಿ ಮಾಡಿ ಎಲ್ಲವನ್ನೂ ನಿನ್ನ ಉದ್ದೇಶದಿಂದ ಮಾಡಿ ಬೇಗ ಬಂದಿದ್ದೇನೆ.

ನಾಕಸ್ಮಾನ್ಮಾಂ ಪ್ರಶಂಸಂತಿ ಸದಾ ಗೃಹಗತಾಃ ಸ್ತ್ರಿಯಃ ।
ಬಲವಾನ್ ದರ್ಶನೀಯಶ್ಚ ನಾನ್ಯೋಽಸ್ತಿ ಸದೃಶಃ ಪುಮಾನ್ ॥೭೪॥

ನನ್ನ ಗೃಹದಲ್ಲಿದ್ದ ಸ್ತ್ರೀಯರು ಕೀಚಕನು ಬಲಿಷ್ಠನೂ, ಸುಂದರನೂ ಆಗಿದ್ದಾನೆ. ಅವನಂತಹ ಪುರುಷನು ಇನ್ನೊಬ್ಬನು ಇಲ್ಲ ಎಂದು ನನ್ನನ್ನು ಯಾವಾಗಲೂ ಪ್ರಶಂಸೆ ಮಾಡುವುದು ನಿಷ್ಕಾರಣವಲ್ಲ.

ಅಹಂ ರೂಪೇಣ ಸಂಪನ್ನಃ ಸ್ನಾತೋ ಭೂಷಣಭೂಷಿತಃ ।
ನಿತ್ಯಮೇವ ಪ್ರಿಯಃ ಸ್ತ್ರೀಣಾಂ ಸೌಭಾಗ್ಯಾತ್ ಪ್ರಿಯದರ್ಶನಃ ॥೭೫॥

ರೂಪಸ್ಯಾಸ್ಯ ಮಯಾ ಪ್ರಾಪ್ತಂ ಫಲಂ ಕಮಲಲೋಚನೇ ॥೭೬॥

ನಾನು ಒಳ್ಳೆಯ ಸೌಂದರ್ಯದಿಂದ ಕೂಡಿದವನು. ಸ್ನಾನವನ್ನು ಮಾಡಿ ಅನೇಕ ಒಡವೆಗಳಿಂದ ಭೂಷಿತನಾಗಿದ್ದೇನೆ. ನನ್ನ ಸೌಂದರ್ಯ ಮತ್ತು ಪ್ರಿಯದರ್ಶನದಿಂದ ಸ್ತ್ರೀಯರಿಗೆ ನಾನು ಯಾವಾಗಲೂ ಪ್ರಿಯನಾದವನು. ಕಮಲಲೋಚನೆಯೇ, ಈ ದಿನ ನನ್ನ ಸೌಂದರ್ಯದ ಫಲವು ನನಗೆ ಪ್ರಾಪ್ತವಾಗಿದೆ.

ಭೀಮಃ

ದಿಷ್ಟ್ಯಾ ತ್ವಂ ದರ್ಶನೀಯೋಽಸಿ ದಿಷ್ಟ್ಯಾSSತ್ಮಾನಂ ಪ್ರಶಂಸಸಿ ॥೭೭॥

ತ್ವಯಾಽಪೀದೃಗ್ಗುಣಾ ನಾರೀ ಶೀಲರೂಪಸಮನ್ವಿತಾ ।
ಅದೃಷ್ಟಪೂರ್ವಾ ಪಶ್ಯೇಮಾಂ ಯತೋ ಜಾನಾಸಿ ಸೂತಜ ॥೭೮॥

ಭೀಮ– ದೇವರ ದಯೆಯಿಂದ ನೀನು ಸುಂದರನಾಗಿದ್ದೀಯೆ. ದೇವರ ದಯೆಯಿಂದ ನಿನ್ನನ್ನೇ ನೀನು ಹೊಗಳಿಕೊಳ್ಳುತ್ತಿದ್ದೀಯೆ. ಸೂತಪುತ್ರನೇ, ನೀನಾದರೂ ಶೀಲರೂಪಸಮನ್ವಿತಳಾದ ಇಂತಹ ಗುಣವುಳ್ಳ ನಾರಿಯನ್ನು ಹಿಂದೆಂದೂ ನೋಡಿಲ್ಲ. ಈಗ ನೋಡು. ನಿನಗೇ ತಿಳಿಯುತ್ತದೆ.

ದ್ರಕ್ಷ್ಯಸೇ ತ್ವಂ ಮುಹೂರ್ತೇನ ಯಥೇಯಂ ಸ್ತ್ರೀ ಗುಣಾನ್ವಿತಾ ।
ಉಪರಂಸ್ಯತಿ ನಾರೀಷು ಶೀಘ್ರಂ ತ್ವಂ ದ್ರಷ್ಟುಮರ್ಹಸಿ ॥೭೯॥

ಏವಮಂಗಸ್ಯ ಸಂಸ್ಪರ್ಶೋ ನ ತೇ ದೃಷ್ಟಃ ಕದಾಚನ ॥೮೦॥

ಇನ್ನು ಒಂದು ಮುಹೂರ್ತದಲ್ಲಿ ಈ ವನಿತೆಯು ಎಂತಹ ಗುಣದಿಂದ ಕೂಡಿದವಳು ಎಂಬುದನ್ನು ನೀನು ನೋಡುವಿ. ಅನಂತರ ನಾರಿಯರಲ್ಲಿ ನಿನ್ನ ಇಚ್ಛೆಯು ಸಮಾಪ್ತಿಗೊಳ್ಳುವುದು. ಆದ್ದರಿಂದ ಬೇಗ ನೋಡು. ಇಂತಹ ಅವಯವದ ಸ್ಪರ್ಶವು ನಿನಗೆ ಹಿಂದೆ ಎಂದೂ ಆಗಿಲ್ಲ.

ಅದ್ಯ ತ್ವಾಂ ಭಗಿನೀ ಪಾಪ ಕೃಷ್ಯಮಾಣಂ ಮಯಾ ಭುವಿ ।
ದ್ರಕ್ಷ್ಯತ್ಯದ್ರಿಪ್ರತೀಕಾಶಂ ಸಿಂಹೇನೇವ ಮಹಾಗಜಮ್ ॥೮೧॥

ಪಾಪಿಯೇ, ಈ ದಿನ ಸಿಂಹವು ಪರ್ವತಾಕಾರದ ಮಹಾಗಜವನ್ನು ನೆಲದ ಮೇಲೆ ಎಳೆದಾಡಿದಂತೆ ನಾನು ನಿನ್ನನ್ನು ಭೂಮಿಯ ಮೇಲೆ ಎಳೆದಾಡುವುದನ್ನು ಈ ದಿನ ನಿನ್ನ ಸಹೋದರಿಯು ನೋಡುವಳು.

ನಿರಾಬಾಧಾ ತ್ವಯಿ ಹತೇ ಸೈರಂಧ್ರೀ ವಿಚರಿಷ್ಯತಿ ।
ಸುಖಮೇವ ಚರಿಷ್ಯಂತಿ ಸೈರಂಧ್ರ್ಯಾಃ ಪತಯಃ ಸದಾ ॥೮೨॥

ನೀನು ಹತನಾದ ಮೇಲೆ ಸೈರಂಧ್ರಿಯು ನಿರಾತಂಕವಾಗಿ ಸಂಚರಿಸುತ್ತಾಳೆ. ಸೈರಂಧ್ರಿಯ ಪತಿಗಳೂ ಸಹ ಯಾವಾಗಲೂ ಸುಖವಾಗಿಯೇ ಇರುತ್ತಾರೆ.

ವೈಶಂಪಾಯನಃ

ಇತ್ಯುಕ್ತ್ವಾ ತಂ ಮಹಾಬಾಹುರ್ಭೀಮೋ ಭೀಮಪರಾಕ್ರಮಃ ।
ಸಮುತ್ಪತ್ಯ ಚ ಕೌಂತೇಯಃ ಪ್ರಹಸ್ಯ ಚ ನರಾಧಮಮ್ ॥೮೩॥

ಭೀಮೋ ಜಗ್ರಾಹ ಕೇಶೇಷು ಮಾಲ್ಯವತ್ಸು ಸುಗಂಧಿಷು ॥೮೪॥

ವೈಶಂಪಾಯನ– ಹೀಗೆ ಮಾತನಾಡಿ ಭೀಮಪರಾಕ್ರಮವುಳ್ಳ ಮಹಾಬಾಹುವಾದ ಕುಂತೀಪುತ್ರನಾದ ಭೀಮಸೇನನು ನಕ್ಕು ತಾನು ಕುಳಿತ ಸ್ಥಳದಿಂದ ಹಾರಿ ನರಾಧಮನಾದ ಆ ಕೀಚಕನನ್ನು ಗಂಧಮಾಲ್ಯಗಳನ್ನು ಧರಿಸಿದ್ದ ಅವನ ಕೇಶಗಳಲ್ಲಿ ಹಿಡಿದನು.

ಗೃಹೀತ್ವಾ ಕೀಚಕಂ ಭೀಮೋ ವಿರರಾಜ ಮಹಾಬಲಃ ।
ಮಹಾವನೇ ಗ್ರಾಸಕಾಮಃ ಸಿಂಹಃ ಕ್ಷುದ್ರಮೃಗಂ ಯಥಾ ॥೮೫॥

ಆಹಾರವನ್ನು ಬಯಸುವ ಸಿಂಹವು ಮಹಾವನದಲ್ಲಿ ಕ್ಷುದ್ರಮೃಗವನ್ನು ಹಿಡಿದಂತೆ ಮಹಾಬಲನಾದ ಭೀಮನು ಕೀಚಕನನ್ನು ಹಿಡಿದು ವಿರಾಜಿಸಿದನು.

ಸ ಕೇಶೇಷು ಪರಾಮೃಷ್ಟೋ ಬಲೇನ ಬಲಿನಾಂ ವರಃ ।
ಆಕ್ಷಿಪ್ಯ ಕೇಶಾನ್ ವೇಗೇನ ಬಾಹ್ವೋರ್ಜಗ್ರಾಹ ಪಾಂಡವಮ್ ॥೮೬॥

ಬಲಿಷ್ಠರಲ್ಲಿ ಶ್ರೇಷ್ಠನಾದ ಕೀಚಕನೂ ಸಹ ಕೇಶಗಳಲ್ಲಿ ಎಳೆಯಲ್ಪಟ್ಟಾಗ ಶೀಘ್ರವಾಗಿ ತನ್ನ ಕೇಶಗಳನ್ನು ಕೊಡವಿ ಬಿಡಿಸಿಕೊಂಡು ಪಾಂಡವನ ಬಾಹುಗಳನ್ನು ಹಿಡಿದನು.

ಬಾಹುಯುದ್ಧಂ ತಯೋರಾಸೀತ್ ಕ್ರುದ್ಧಯೋರ್ನರಸಿಂಹಯೋಃ ।
ವಸಂತೇ ವಾಶಿತಾಹೇತೋರ್ಬಲಿನೋರಿವ ನಾಗಯೋಃ ॥೮೭॥

ಕೀಚಕಾನಾಂ ತು ಮುಖ್ಯಸ್ಯ ನರಾಣಾಮುತ್ತಮಸ್ಯ ಚ ॥೮೮॥

ಕೀಚಕರಲ್ಲಿ ಮುಖ್ಯನಾದ ಅವನಿಗೂ ಮತ್ತು ಮನುಷ್ಯರಲ್ಲಿ ಶ್ರೇಷ್ಠನಾದ ಭೀಮಸೇನನಿಗೂ - ಈ ಇಬ್ಬರು ನರಶ್ರೇಷ್ಠರಿಗೂ ವಸಂತಮಾಸದಲ್ಲಿ ಸಿಕ್ಕ ಹೆಣ್ಣಾನೆಯ ಸಲುವಾಗಿ ಬಲಿಷ್ಠವಾದ ಗಜಗಳಿಗೆ ಉಂಟಾದಂತೆ ಕ್ರೋಧದಿಂದ ಕೂಡಿದ ಅವರಿಗೆ ಬಾಹುಯುದ್ಧವು ಜರುಗಿತು.

ಅನ್ಯೋನ್ಯಮಭಿಸಂರಬ್ಧೌ ಪರಸ್ಪರಜಯೈಷಿಣೌ ।
ವಾಲಿಸುಗ್ರೀವಯೋರ್ಭ್ರಾತ್ರೋಃ ಪುರೇವ ಕಪಿಸಿಂಹಯೋಃ ॥೮೯॥

ಪರಸ್ಪರವಾಗಿ ಕ್ರೋಧದೀಪ್ತರಾಗಿ ಪರಸ್ಪರವಾಗಿ ಜಯವನ್ನು ಬಯಸುವ ಅವರಿಬ್ಬರಿಗೂ ಹಿಂದೆ ಕಪಿಶ್ರೇಷ್ಠರಾದ ಸೋದರರಾದ ವಾಲಿಸುಗ್ರೀವರಿಗೆ ನಡೆದಂತೆ (ಬಾಹುಯುದ್ಧವು) ನಡೆಯಿತು.

ತತಃ ಸಮುತ್ಪತ್ಯ ಭುಜೌ ಪಂಚಶೀರ್ಷಾವಿವೋರಗೌ ।
ನಖದಂಷ್ಟ್ರಾಭಿರನ್ಯೋನ್ಯಂ ಘ್ನತಃ ಕ್ರೋಧವಿಷೋದ್ಧತೌ ॥೯೦॥

ಅನಂತರ ಇಬ್ಬರೂ ಮೇಲಕ್ಕೆ ನೆಗೆದು ಕ್ರೋಧವಿಷದಿಂದ ಉಲ್ಬಣವಾದ ಐದುಹೆಡೆಯ ಸರ್ಪದಂತಿರುವ ತಮ್ಮ ಭುಜಗಳನ್ನು ಮೇಲಕ್ಕೆತ್ತಿ ನಖಗಳಿಂದಲೂ ಮತ್ತು ಕೋರೆಹಲ್ಲುಗಳಿಂದಲೂ ಒಬ್ಬರನ್ನೊಬ್ಬರು ಘಾಸಿಮಾಡಿದರು.

ವೇಗೇನಾಭಿಹತೋ ಭೀಮಃ ಕೀಚಕೇನ ಬಲೀಯಸಾ ।
ಸ್ಥಿರಪ್ರತಿಷ್ಠಃ ಸ ರಣೇ ಪದಾನ್ನ ಚಾಲಿತಃ ಪದಮ್ ॥೯೧॥

ಬಲಿಷ್ಠನಾದ ಕೀಚಕನಿಂದ ವೇಗವಾಗಿ ಅಭಿಹತನಾದ ಭೀಮನು ಯುದ್ಧದಲ್ಲಿ ಸ್ಥಿರವಾಗಿ ನಿಂತನು. ಒಂದು ಹೆಜ್ಜೆಯನ್ನೂ ಅಲುಗಾಡಿಸಲಿಲ್ಲ.

ತಾವನ್ಯೋನ್ಯಂ ಸಮಾಶ್ಲಿಷ್ಯ ಪ್ರಕರ್ಷಂತೌ ಪರಸ್ಪರಮ್ ।
ಉಭಾವಪಿ ಪ್ರಕಾಶೇತೇ ಪ್ರವೃದ್ಧೌ ವೃಷಭಾವಿವ ॥೯೨॥

ಅವರಿಬ್ಬರೂ ಪರಸ್ಪರವಾಗಿ ಆಲಿಂಗಿಸಿ ಒಬ್ಬರನ್ನೊಬ್ಬರು ಎಳೆಯುತ್ತಾ ದೊಡ್ಡ ವೃಷಭಗಳಂತೆ ಪ್ರಕಾಶಿಸಿದರು.

ತಯೋರಾಸೀತ್ ಸುತುಮುಲಃ ಸಂಪ್ರಹಾರಃ ಸುದಾರುಣಃ ।
ನಖದಂತಾಯುಧವತೋಃ ವ್ಯಾಘ್ರ್ಯೋರಿವ ದೃಪ್ತಯೋಃ ॥೯೩॥

ನಖ, ದಂತವೇ ಆಯುಧವಾಗುಳ್ಳ ಅವರಿಗೆ ದರ್ಪಿಷ್ಠವಾದ ವ್ಯಾಘ್ರಗಳಿಗೆ ನಡೆಯುವಂತೆ ಪರಮದಾರುಣವೂ, ಘೋರವೂ ಆದ ಸಂಪ್ರಹಾರವು ಪರಸ್ಪರವಾಗಿ ಉಂಟಾಯಿತು.

ಅಭಿಪತ್ಯಾಥ ಬಾಹುಭ್ಯಾಂ ಪ್ರತ್ಯಗೃಹ್ಣಾದಮರ್ಷಿತಃ ।
ಮಾತಂಗ ಇವ ಮಾತಂಗಂ ಪ್ರಭಿನ್ನಕರಟಾಮುಖಿಮ್ ॥೯೪॥

ಕೋಪಗೊಂಡ ಕೀಚಕನು ಮೇಲಕ್ಕೆ ಹಾರಿ ತನ್ನ ಬಾಹುಗಳಿಂದ ಆನೆಯು ಮದಿಸಿದ ಆನೆಯನ್ನು ಹಿಡಿಯುವಂತೆ ಭೀಮಸೇನನನ್ನು ಹಿಡಿದನು.

ಸ ಚಾಪ್ಯೇನಂ ತದಾ ಭೀಮಃ ಪ್ರತಿಜಗ್ರಾಹ ವೀರ್ಯವಾನ್ ।
ತಮಾಕ್ಷಿಪತ್ ಕೀಚಕೋಽಥ ಬಲೇನ ಬಲಿನಾಂ ವರಃ ॥೯೫॥

ಆಗ ಬಲಶಾಲಿಯಾದ ಭೀಮನೂ ಸಹ ಈ ಕೀಚಕನನ್ನು ಪ್ರತಿಯಾಗಿ ಹಿಡಿದನು. ಬಲಿಷ್ಠರಲ್ಲಿ ಶ್ರೇಷ್ಠನಾದ ಕೀಚಕನು ಅನಂತರ ತನ್ನ ಬಲದಿಂದ ಅವನಿಂದ ಬಿಡಿಸಿಕೊಂಡನು.

ತಯೋರ್ಭುಜವಿನಿಷ್ಪೇಷಾದುಭಯೋರ್ಬಲಿನೋಸ್ತದಾ ।
ಶಬ್ದಃ ಸಮಭವತ್ ಘೋರೋ ವೇಣುಸ್ಫೋಟಸಮೋ ಯುಧಿ ॥೯೬॥

ಬಲಿಷ್ಠರಾದ ಅವರಿಬ್ಬರೂ ತಮ್ಮ ಭುಜಗಳಿಂದ ಪರಸ್ಪರವಾಗಿ ಯುದ್ಧದಲ್ಲಿ ಘಟ್ಟಿಸುವಾಗ ಬಿದಿರು ಸ್ಫೋಟಗೊಂಡಂತೆ ಘೋರವಾದ ಶಬ್ದವುಂಟಾಯಿತು.

ಅಥೈನಮಾಕ್ಷಿಪ್ಯ ಬಲಾದ್ ಗೃಹಮಧ್ಯೇ ವೃಕೋದರಃ ।
ಧೂನಯಾಮಾಸ ವೇಗೇನ ವಾಯುಶ್ಚಂಡ ಇವ ದ್ರುಮಮ್ ॥೯೭॥

ಅನಂತರ ವೃಕೋದರನು ನಾಟ್ಯಾಗಾರದ ಮಧ್ಯದಲ್ಲಿ ತನ್ನ ಬಲದಿಂದ ಅವನನ್ನು ಎತ್ತಿ ಚಂಡವಾಯುವು ತನ್ನ ವೇಗದಿಂದ ವೃಕ್ಷವನ್ನು ತೂಗುವಂತೆ ಕೀಚಕನನ್ನು ತೂಗಾಡಿಸಿದನು.

ಭೀಮೇನ ಚ ಪರಾಮೃಷ್ಟೋ ದುರ್ಬಲೋ ಬಲಿನಾ ರಣೇ ।
ವ್ಯ(ಪ್ರಾ)ಸ್ಪಂದತ ಯಥಾಪ್ರಾಣಂ ವಿಚಕರ್ಷ ಚ ಪಾಂಡವಮ್ ॥೯೮॥

ಯುದ್ಧದಲ್ಲಿ ಬಲಿಷ್ಠನಾದ ಭೀಮನಿಂದ ಹಿಡಿಯಲ್ಪಟ್ಟ ದುರ್ಬಲನಾದ ಕೀಚಕನು ತನ್ನ ಶಕ್ತಿಗೆ ಅನುಗುಣವಾಗಿ ಭೀಮಸೇನನನ್ನು ಎಳೆದಾಡಿದನು.

ಈಷದಾಗಲಿತಂ ಚಾತಿಕ್ರೋಧಾಚ್ಚಲಪದಂ ಸ್ಥಿತಮ್ ।
ಕೀಚಕೋ ಬಲವಾನ್ ಭೀಮಂ ಜಾನುಭ್ಯಾಂ ಪಾತಯದ್ ಭುವಿ॥೯೯॥

ತನ್ನ ಕೋಪದಿಂದ ಸ್ವಲ್ಪ ಶಿಥಿಲವಾಗಿ ನಿಂತು ಪಾದಗಳು ಅಲುಗಾಡುತ್ತಿದ್ದ ಭೀಮಸೇನನನ್ನು ಬಲಿಷ್ಠನಾದ ಕೀಚಕನು ತನ್ನ ಮಂಡಿಗಳಿಂದ ಗುದ್ದಿ ನೆಲದ ಮೇಲೆ ಕೆಡವಿದನು.

ಪಾತಿತೋ ಭೀಮಸೇನಸ್ತು ಕೀಚಕೇನ ಬಲೀಯಸಾ ।
ಉತ್ಪಪಾತಾಥ ವೇಗೇನ ದಂಡಾಹತ ಇವೋರಗಃ ॥೧೦೦॥

ಬಲಿಷ್ಠನಾದ ಕೀಚಕನಿಂದ ಕೆಡವಲ್ಪಟ್ಟ ಭೀಮಸೇನನಾದರೂ ದಂಡದಿಂದ ಹೊಡೆದ ಸರ್ಪದಂತೆ ವೇಗದಿಂದ ಮೇಲಕ್ಕೆದ್ದನು.

ಸ್ಪರ್ಧಯಾ ಚ ಬಲೋನ್ಮತ್ತೌ ತಾವುಭೌ ಭೀಮಕೀಚಕೌ ।
ನಿಃಶಬ್ದಂ ಪರ್ಯಕರ್ಷೇತಾಮನ್ಯೋನ್ಯಸ್ಯ ವಿನಿರ್ಜಯೇ ॥೧೦೧॥

ಬಲೋನ್ಮತ್ತರಾದ ಆ ಭೀಮಕೀಚಕರಿಬ್ಬರೂ ಪರಸ್ಪರ ಜಯವನ್ನು ಬಯಸುವವರಾಗಿ ಸ್ಪರ್ಧೆಯಿಂದ ನಿಶ್ಶಬ್ದವಾಗಿ ಒಬ್ಬರನ್ನೊಬ್ಬರು ಎಳೆದಾಡಿದರು.

ತತಸ್ತದ್ ಭವನಶ್ರೇಷ್ಠಂ ಪ್ರಾಕಂಪತ ತದಾ ಭೃಶಮ್ ।
ತೌ ಕ್ರೋಧವಶಮಾಪನ್ನಾವನ್ಯೋನ್ಯಮಭಿಜಘ್ನತುಃ ॥೧೦೨॥

ಆಗ ಆ ಶ್ರೇಷ್ಠವಾದ ನಾಟ್ಯಾಗಾರವು ಕಂಪಿಸಿತು. ಕ್ರೋಧವಶರಾದ ಅವರಿಬ್ಬರೂ ಪರಸ್ಪರವಾಗಿ ಹೊಡೆದಾಡಿದರು.

ತಳಾಭ್ಯಾಂ ಭೀಮಸೇನೇನ ವಕ್ಷಸ್ಯಭಿಹತೋ ಭೃಶಮ್ ।
ಕೀಚಕೋ ರೋಷತಾಮ್ರಾಕ್ಷೋ ನ ಚಚಾಲ ಪದಾತ್ ಪದಮ್ ॥೧೦೩॥

ತನ್ನ ಹಸ್ತತಳದಿಂದ ಭೀಮಸೇನನಿಂದ ಎದೆಯಲ್ಲಿ ಹೊಡೆಯಲ್ಪಟ್ಟ ರೋಷದಿಂದ ಕೆಂಪಾದ ಕಣ್ಣುಳ್ಳ ಕೀಚಕನು ತನ್ನ ಹೆಜ್ಜೆಯನ್ನೂ ಅಲುಗಾಡಿಸಲಿಲ್ಲ.

ಮುಹೂರ್ತಮಶಕತ್ ಸೋಢುಂ ವೇಗಂ ತಸ್ಯ ಮಹಾತ್ಮನಃ ।
ಕೀಚಕೋ ಭೀಮಸೇನಸ್ಯ ಪಶ್ಚಾತ್ ಪಶ್ಚಾತ್ ತು ಹೀಯತೇ ॥೧೦೪॥

ಕೀಚಕನು ಮಹಾತ್ಮನಾದ ಭೀಮಸೇನನ ವೇಗವನ್ನು ಒಂದು ಮುಹೂರ್ತದ ಕಾಲ ತಡೆದನು. ಅನಂತರ ಆಯಾಸಗೊಳ್ಳಲು ಪ್ರಾರಂಭಿಸಿದನು.

ತಂ ಹೀಯಮಾನಂ ವಿಜ್ಞಾಯ ಭೀಮಸೇನೋ ಮಹಾಬಲೀ ।
ವಕ್ಷಸ್ಯಾನೀಯ ವೇಗೇನ ಪ್ರಮಮಾಥ ವಿಚೇತಸಮ್ ॥೧೦೫॥

ಮಹಾಬಲಿಷ್ಠನಾದ ಭೀಮಸೇನನು ಅವನು ದಣಿಯುತ್ತಿರುವುದನ್ನು ನೋಡಿ ವಿಚೇತನನಾದ ಅವನಿಗೆ ತನ್ನ ಮುಷ್ಟಿಯಿಂದ ವೇಗವಾಗಿ ಎದೆಯಲ್ಲಿ ಹೊಡೆದನು.

ಕ್ರೋಧಾವಿಷ್ಟೋ ವಿನಿಃಶ್ವಸ್ಯ ಪುನಶ್ಚೈನಂ ವೃಕೋದರಃ ।
ಜಗ್ರಾಹ ಜಯತಾಂ ಶ್ರೇಷ್ಠಃ ಕೇಶೇಷ್ವೇವ ಭೃಶಂ ತದಾ ॥೧೦೬॥

ಕ್ರೋಧಾವಿಷ್ಟನಾದ, ಜಯಶಾಲಿಗಳಲ್ಲಿ ಶ್ರೇಷ್ಠನಾದ ವೃಕೋದರನು ನಿಟ್ಟುಸಿರನ್ನು ಬಿಟ್ಟು ಪುನಃ ಅವನನ್ನು ಕೇಶಗಳಲ್ಲಿಯೇ ಗಟ್ಟಿಯಾಗಿ ಹಿಡಿದನು.

ಗೃಹೀತ್ವಾ ಕೀಚಕಂ ಭೀಮೋ ವಿರರಾಜ ಮಹಾಬಲಃ ।
ಆಮಿಷಾರ್ಥೇ ಗೃಹೀತ್ವೇವ ಶಾರ್ದೂಲೋ ಮೃಗಯೂಥಪಮ್ ॥

ಮಹಾಬಲನಾದ ಭೀಮನು ಕೀಚಕನನ್ನು ಹಿಡಿದು ಆಹಾರಾರ್ಥವಾಗಿ ಮೃಗರಾಜನನ್ನು ಹಿಡಿದ ಹುಲಿಯಂತೆ ಶೋಭಿಸಿದನು.

ಪುನಶ್ಚಾತಿಬಲಸ್ತತ್ರ ಕೀಚಕೋ ಬಲದರ್ಪಿತಃ ।
ವ್ಯಾಯಚ್ಛನ್ನೇವ ದುರ್ಧರ್ಷಃ ಪಾಂಡವೇನ ಯಶಸ್ವಿನಾ ॥೧೦೮॥
ಮುಷ್ಟಿನಾ ಭೀಮಸೇನೇನ ಶಿರಸ್ಯಭಿಹತೋ ಭೃಶಮ್ ॥೧೦೯॥

ಅತಿಬಲನೂ, ಬಲದರ್ಪಿತನೂ, ದುರ್ಧರ್ಷನೂ ಆದ ಕೀಚಕನು ಪುನಃ ಬಿಡಿಸಿಕೊಳ್ಳಲು ಪ್ರಯತ್ನಪಡುತ್ತಿರುವಂತೆಯೇ, ಕೀರ್ತಿವಂತನೂ, ಪಾಂಡುಪುತ್ರನೂ ಆದ ಭೀಮಸೇನನು ತನ್ನ ಮುಷ್ಟಿಯಿಂದ ಅವನ ತಲೆಯ ಮೇಲೆ ಬಲವಾಗಿ ಹೊಡೆದನು.

ತತ ಏನಂ ಪರಿಶ್ರಾಂತಮುಪಲಭ್ಯ ವೃಕೋದರಃ ।
ಯೋಕ್ತ್ರಯಾಮಾಸ ಬಾಹುಭ್ಯಾಂ ಪಶುಂ ರಶನಯಾ ಯಥಾ ॥೧೧೦॥

ಅನಂತರ ವೃಕೋದರನು ಅವನು ದಣಿದಿರುವುದನ್ನು ಗಮನಿಸಿ ಪಶುವನ್ನು ಹಗ್ಗದಿಂದ ಕಟ್ಟಿದಂತೆ ತನ್ನ ಬಾಹುಗಳಿಂದ ಅವನನ್ನು ಕಟ್ಟಿದನು (ಪಟ್ಟು ಹಾಕಿದನು).

ನದಂತಂ ಚ ಮಹಾನಾದಂ ಭಿನ್ನಭೇರಿಸಮಸ್ವನಮ್ ।
ಭ್ರಾಮಯಾಮಾಸ ಸುಚಿರಂ ವಿಷ್ಫುರಂತಮಚೇತಸಮ್ ॥೧೧೧॥

ಅನಂತರ ಒಡೆದ ನಗಾರಿಯಂತೆ ಘೋರವಾದ ಶಬ್ದವನ್ನು ಮಾಡುತ್ತಿದ್ದ ಹಾಗೆಯೇ ಒದ್ದಾಡುತ್ತಿದ್ದ ಅಚೇತನನಾದ ಕೀಚಕನನ್ನು ಬಹಳ ಸಮಯದವರೆಗೆ ಎತ್ತಿ ತಿರುಗಿಸಿದನು.

ಪ್ರಗೃಹ್ಯ ತರಸಾ ದೋರ್ಭ್ಯಾಂ ಕಂಠಂ ತಸ್ಯ ವೃಕೋದರಃ ।
ಅಪೀಡಯತ ಕೃಷ್ಣಾಯಾಸ್ತದಾ ಕೋಪೋಪಶಾಂತಯೇ ॥೧೧೨॥

ಅನಂತರ ವೇಗದಿಂದ ಅವನನ್ನು ಹಿಡಿದು ವೃಕೋದರನು ದ್ರೌಪದಿಯ ಕೋಪಶಾಂತಿಗಾಗಿ ಅವನ ಕಂಠವನ್ನು ಬಲವಾಗಿ ಹಿಡಿದು ಪೀಡಿಸಿದನು.

ಅಥ ತಂ ಭಗ್ನಸರ್ವಾಂಗಂ ವ್ಯಾವಿದ್ಧನಯನಾಂಬರಮ್ ।
ಆಕ್ರಮ್ಯ ಚ ಕಟಿದೇಶೇ ಜಾನುನಾ ಕೀಚಕಾಧಮಮ್ ॥೧೧೩॥

ಅಪೀಡಯತ ಬಾಹುಭ್ಯಾಂ ಪಶುಮಾರಮಮಾರಯತ್ ।

ಅನಂತರ ಜರ್ಝರಿತ ಸರ್ವಾಂಗವುಳ್ಳವನಾದ, ಹೊರಗೆ ಬಂದ ಕಣ್ಣುಗಳು ಮತ್ತು ಜಾರಿದ ವಸ್ತ್ರವುಳ್ಳ ಕೀಚಕಾಧಮನನ್ನು ಆಕ್ರಮಿಸಿ, ಅವನ ಸೊಂಟಪ್ರದೇಶದಲ್ಲಿ ತನ್ನ ಮಂಡಿಯನ್ನು ಊರಿ, ಬಾಹುಗಳಿಂದ ಅವನನ್ನು ಹಿಂದಕ್ಕೆ ಬಗ್ಗಿಸಿ ಪೀಡಿಸಿ ಪಶುವನ್ನು ಕೊಲ್ಲುವಂತೆ ಅವನನ್ನು ಕೊಂದನು.

ತಂ ವಿಷೀದಂತಮಾಜ್ಞಾಯ ಕೀಚಕಂ ಪಾಂಡುನಂದನಃ ॥೧೧೪॥

ಭೂತಳೇ ಭ್ರಾಮಯಾಮಾಸ ವಾಕ್ಯಂ ಚೇದಮುವಾಚ ಹ ॥೧೧೫॥

ಪಾಂಡುನಂದನನು, ಕೀಚಕನು ವಿಷಾದವನ್ನು ಹೊಂದುತ್ತಿರುವುದನ್ನು ಗಮನಿಸಿ ಭೂಮಿಯ ಮೇಲೆ ಅವನನ್ನು ತಿರುಗಿಸುತ್ತಾ ಹೀಗೆ ಮಾತನಾಡಿದನು.

ಅದ್ಯಾಹಮನೃಣೋ ಭೂತ್ವಾ ಭ್ರಾತುಭಾರ್ಯಾಪಹಾರಿಣಮ್ ।
ಶಾಂತಿಂ ಲಬ್ಧಾಸ್ಮಿ ಪರಮಾಂ ಹತ್ವಾ ಸೈರಂಧ್ರಿಕಂಟಕಮ್ ॥೧೧೬॥

ಸಹೋದರರಾದ ನಮ್ಮ ಪತ್ನಿಯನ್ನು ಅಪಹಾರ ಮಾಡಿದ, ಸೈರಂಧ್ರಿಯ ಕಂಟಕನಾದ ಕೀಚಕನನ್ನು ಕೊಂದು ಈ ದಿನ ನಾನು ಋಣಮುಕ್ತನಾಗಿದ್ದೇನೆ. ಮನಸ್ಸಿಗೆ ಒಳ್ಳೆಯ ಹರ್ಷ ಮತ್ತು ಸಮಾಧಾನವಾಗಿದೆ.

ಇತ್ಯೇವಮುಕ್ತ್ವಾ ಪುರುಷಪ್ರವೀರಃ
ತಂ ಕೀಚಕಂ ಕ್ರೋಧಸರಾಗನೇತ್ರಃ ।

ಅಸ್ರಸ್ತವಸ್ತ್ರಾಭರಣಂ ಸ್ಫುರಂತಮ್
ಉದ್ಭ್ರಾಂತಚಿತ್ತಂ ವ್ಯಸುಮುತ್ಸಸರ್ಜ ॥೧೧೭॥

ಆ ಪುರುಷಪ್ರವೀರನೂ, ಕ್ರೋಧದಿಂದ ಕೆಂಪಾದ ಕಣ್ಣುಳ್ಳವನೂ ಆದ ಭೀಮಸೇನನು ಹೀಗೆ ಹೇಳಿ ವಸ್ತ್ರಾಭರಣಗಳು ಅಸ್ತವ್ಯಸ್ತವಾಗಿ ಇನ್ನೂ ನೆಲದ ಮೇಲೆ ಒದ್ದಾಡುತ್ತಾ ಉದ್ಭ್ರಾಂತಚಿತ್ತನಾಗಿ ಅಸುವನ್ನು ನೀಗಿದ ಆ ಕೀಚಕನನ್ನು ತ್ಯಜಿಸಿದನು.

ತಸ್ಯ ಪಾದೌ ಚ ಪಾಣೀ ಚ ಶಿರೋಗ್ರೀವಂ ಸಕುಂಡಲಮ್ ।
ಕಾಯೇ ನಿವೇಶಯಾಮಾಸ ಮೃದಿತ್ವಾಽಂಗಾನಿ ಸರ್ವಶಃ ॥೧೧೮॥

ಸ ತಂ ಮಥಿತಸರ್ವಾಂಗಂ ಮಾಂಸಪಿಂಡಮಿವಾಕರೋತ್ ॥೧೧೯॥

ಅವನ ಹಸ್ತಗಳು, ಪಾದಗಳು, ಕತ್ತು , ಕುಂಡಲಸಹಿತವಾದ ಶಿರಸ್ಸು ಎಲ್ಲವನ್ನೂ ಗುದದ್ವಾರದ ಮೂಲಕ ಅವನ ದೇಹದೊಳಗೇ ಸೇರಿಸಿದನು. ಎಲ್ಲಾ ಅವಯವಗಳನ್ನೂ ಮುರಿದು ಅವನನ್ನು ಒಂದು ಮಾಂಸದ ಮುದ್ದೆಯನ್ನಾಗಿ ಮಾಡಿದನು.

ತತ್ರಾಗ್ನಿಂ ಸ್ವಯಮುಜ್ಜ್ವಾಲ್ಯ ದರ್ಶಯಾಮಾಸ ಕೀಚಕಮ್ ।
ಕೃಷ್ಣಾಂ ಪ್ರೋವಾಚ ಭೀಮಸ್ತು ಪಶ್ಯೇಮಂ ಸುಭ್ರು ಕಾಮುಕಮ್ ॥

ಭೀಮಸೇನನು ಅಲ್ಲಿಸ್ಥತಃ ತಾನೇ (ಕೈಗಳನ್ನು ಉಜ್ಜಿ) ಅಗ್ನಿಯನ್ನು ಉತ್ಪಾದನೆಯನ್ನು ಮಾಡಿ ದ್ರೌಪದಿಯನ್ನು ಕರೆದು ಸುಂದರಿಯೇ, ಕಾಮುಕನಾದ ಈ ಕೀಚಕನನ್ನು ನೋಡು ಎಂದು ಕೀಚಕನನ್ನು ತೋರಿಸಿದನು.

ಉವಾಚ ಚ ಮಹಾತೇಜಾ ದ್ರೌಪದೀಂ ಪಾಂಡುನಂದನಃ ॥೧೨೧॥

ಪಶ್ಯೈನಮೇಹಿ ಪಾಂಚಾಲಿ ಕೀಚಕೋಽಯಂ ಯಥಾಕೃತಃ ॥೧೨೨॥

ಮಹಾತೇಜಸ್ವಿಯಾದ ಪಾಂಡುನಂದನನಾದ ಅವನು ದ್ರೌಪದಿಯನ್ನು ಕುರಿತು ಪಾಂಚಾಲಿಯೇ, ಬಾ ಈ ಕೀಚಕನನ್ನು ಹೇಗೆ ಮಾಡಿದ್ದೇನೆ ಎಂದು ನೋಡು ಎಂದು ಹೇಳಿದನು.

ಪ್ರಾರ್ಥಯಂತೇ ಸುಕೇಶಾಂತೇ ಯೇ ತ್ವಾಂ ಶೀಲಗುಣಾನ್ವಿತಾಮ್ ।
ಏವಂ ಸ್ವಪ್ಸ್ಯಂತಿ ತೇ ಭೀರು ಶೇತೇಽಯಂ ಕೀಚಕೋ ಯಥಾ ॥೧೨೩॥

ಸುಂದರಿಯೇ, ಭೀರುವೇ, ಶೀಲಗುಣಾನ್ವಿತಳಾದ ನಿನ್ನನ್ನು ಯಾರು ಬಯಸುತ್ತಾರೆಯೋ ಅವರೆಲ್ಲರೂ ಕೀಚಕನು ಮಲಗಿದಂತೆ ಹೀಗೆಯೇ ಮಲಗುವರು.

ವೈಶಂಪಾಯನಃ

ತಥಾ ಸ ಕೀಚಕಂ ಹತ್ವಾ ಸ್ವಸ್ಯ ರೋಷಸ್ಯ ನಿಷ್ಕೃತಿಮ್ ।
ಆಮಂತ್ರ್ಯ ದ್ರೌಪದೀಂ ಪಶ್ಚಾತ್ ಕ್ಷಿಪ್ರಮಾಯಾನ್ ಮಹಾನಸಮ್ ॥

ವೈಶಂಪಾಯನ– ಭೀಮಸೇನನು ಆ ರೀತಿಯಲ್ಲಿ ಕೀಚಕನನ್ನು ಕೊಂದು ತನ್ನ ರೋಷಕ್ಕೆ ಪ್ರತೀಕಾರವನ್ನು ಮಾಡಿ ದ್ರೌಪದಿಯ ಅನುಮತಿಯನ್ನು ಪಡೆದು ಬೇಗ ಮಹಾನಸಕ್ಕೆ ನಡೆದನು.

ಸ್ನಾತ್ವಾನುಲೇಪನಂ ಕೃತ್ವಾ ಪ್ರಪೂರ್ಯ ಚ ಮನೋರಥಮ್ ।
ಸುಖೋಪವಿಷ್ಟಃ ಶಯನೇ ಭೀಮೋ ಭೀಮಪರಾಕ್ರಮಃ ॥೧೨೫॥

ತನ್ನ ಮನೋರಥವನ್ನು ಪೂರ್ಣಗೊಳಿಸಿ ಸ್ನಾನವನ್ನು ಮಾಡಿ ಗಂಧಾದಿ ಲೇಪನವನ್ನು ಮಾಡಿಕೊಂಡ ಭೀಮಪರಾಕ್ರಮವುಳ್ಳ ಭೀಮಸೇನನು ತನ್ನ ಹಾಸಿಗೆಯಲ್ಲಿ ಸುಖವಾಗಿ ಕುಳಿತನು.

ತತಃ ಕೃಷ್ಣಾ ಯದಾ ಮೇನೇ ಗತಂ ಭೀಮಂ ಮಹಾನಸೇ ।
ಕೀಚಕಂ ಘಾತಯಿತ್ವಾ ಚ ದ್ರೌಪದೀ ಯೋಷಿತಾಂ ವರಾ ॥೧೨೬॥

ಪ್ರಹೃಷ್ಟಾ ಗತಸಂತ್ರಾಸಾ ಸಭಾಪಾಲಾನುವಾಚ ಹ ॥೧೨೭॥

ಕೀಚಕನು ಹತನಾದನು ಮತ್ತು ಭೀಮಸೇನನು ಮಹಾನಸಕ್ಕೆ ಹೋಗಿದ್ದಾನೆ ಎಂದು ತಿಳಿದಮೇಲೆ ಸ್ತ್ರೀಯರಲ್ಲಿ ಶ್ರೇಷ್ಠಳಾದ ಆ ದ್ರೌಪದಿಯು ಕೀಚಕನನ್ನು ಕೊಲ್ಲಿಸಿ ಭಯದಿಂದ ದೂರಳಾಗಿ ಸಂತೋಷಗೊಂಡು ಸಭಾಪಾಲಕರನ್ನು ಕುರಿತು ಹೇಳಿದಳು.

ಕೀಚಕೋಽಯಂ ಹತಃ ಶೇತೇ ಗಂಧರ್ವೈಃ ಪತಿಭಿರ್ಮಮ ।
ಪರಸ್ತ್ರೀಕಾಮಸಂತಪ್ತಂ ತದಾಗಚ್ಛತ ಪಶ್ಯತ ॥೧೨೮॥

ನನ್ನ ಪತಿಗಳಾದ ಗಂಧರ್ವರಿಂದ ಕೊಲ್ಲಲ್ಪಟ್ಟು ಕೀಚಕನು ಮಲಗಿದ್ದಾನೆ. ನೀವೆಲ್ಲರೂ ಬಂದು ಪರಸ್ತ್ರೀಕಾಮತಪ್ತನಾದ ಅವನನ್ನು ನೋಡಿ.

ತಚ್ಛ್ರುತ್ವಾ ಭಾಷಿತಂ ತಸ್ಯಾ ನರ್ತನಾಗಾರರಕ್ಷಿಣಃ ।
ಸಹಸ್ಯೈವ ತದಾ ಜಗ್ಮುರುಲ್ಕಾಮಾದಾಯ ಸರ್ವಶಃ ॥೧೨೯॥

ಅವಳ ಮಾತನ್ನು ಕೇಳಿದ ನಾಟ್ಯಾಗಾರರಕ್ಷಕರು ಶೀಘ್ರವಾಗಿ ಪಂಜುಗಳನ್ನು ತೆಗೆದುಕೊಂಡು ಒಳಗೆ ಬಂದರು.

ತಸ್ಯ ತಂ ನಿನದಂ ಶ್ರುತ್ವಾ ಕೀಚಕಸ್ಯ ಸಹೋದರಾಃ ।
ತತೋ ಗತ್ವಾऽಥ ತದ್ ವೇಶ್ಮ ಕೀಚಕಂ ವಿನಿಪಾತಿತಮ್ ॥೧೩೦॥

ಗತಾಸುಂ ದದೃಶುರ್ಭೂಮೌ ರುಧಿರೇಣ ಸಮುಕ್ಷಿತಮ್ ॥೧೩೧॥

ಪಾಣಿಪಾದಶಿರೋಹೀನಂ ದೃಷ್ಟ್ವಾ ತೇ ವಿಸ್ಮಯಂ ಗತಾಃ ॥೧೩೨॥

ಸಾಯುವ ಮುಂಚೆ ಕೀಚಕನು ಮಾಡಿದ ಘೋರನಾದಗಳನ್ನು ಕೇಳಿದ ಅವನ ಸಹೋದರರು ತಮ್ಮ ಮನೆಯಿಂದ ಹೊರಟು ನಾಟ್ಯಾಗಾರವನ್ನು ತಲುಪಿ ರಕ್ತಸಿಕ್ತನಾಗಿ ಭೂಮಿಯ ಮೇಲೆ ಶವವಾಗಿ ಬಿದ್ದಿದ್ದ ಕೀಚಕನನ್ನು ನೋಡಿದರು. ಹಸ್ತಪಾದ ಶಿರಸ್ಸುಗಳಿಂದ ಹೀನನಾದ ಅವನನ್ನು ನೋಡಿ ಎಲ್ಲರೂ ವಿಸ್ಮಯವನ್ನು ಹೊಂದಿದರು.

ಕ್ವಾಸ್ಯ ಗ್ರೀವಾ ಕ್ವ ಚರಣೌ ಕ್ವ ಪಾಣೇ ಕ್ವ ಶಿರಃ ಕ್ವ ದೃಕ್ ।
ಇತಿ ತಂ ಸುಪರೀಕ್ಷಂತ ಗಂಧರ್ವೇಣ ಹತಂ ತದಾ ॥೧೩೩॥

ಅವನ ಕತ್ತು ಎಲ್ಲಿ? ಅವನ ಪಾದಗಳು ಎಲ್ಲಿ? ಹಸ್ತಗಳು ಎಲ್ಲಿ? ಶಿರಸ್ಸು ಎಲ್ಲಿ? ಕಣ್ಣುಗಳು ಎಲ್ಲಿ? ಎಂದು ಹೇಳುತ್ತಾ ಗಂಧರ್ವರಿಂದ ಹತನಾದ ಅವನನ್ನು ಪರೀಕ್ಷಿಸಿದರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಪಂಚವಿಂಶೋऽಧ್ಯಾಯಃ ॥೨೫॥

॥ ಕೀಚಕವಧಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ಸುಂದರಿಯೇ, ಭೀರುವೇ, ಶೀಲಗುಣಾನ್ವಿತಳಾದ ನಿನ್ನನ್ನು ಯಾರು ಬಯಸುತ್ತಾರೆಯೋ ಅವರೆಲ್ಲರೂ ಕೀಚಕನು ಮಲಗಿದಂತೆ ಹೀಗೆಯೇ ಮಲಗುವರು.

ವೈಶಂಪಾಯನಃ

ತಥಾ ಸ ಕೀಚಕಂ ಹತ್ವಾ ಸ್ವಸ್ಯ ರೋಷಸ್ಯ ನಿಷ್ಕೃತಿಮ್ ।
ಆಮಂತ್ರ್ಯ ದ್ರೌಪದೀಂ ಪಶ್ಚಾತ್ ಕ್ಷಿಪ್ರಮಾಯಾನ್ ಮಹಾನಸಮ್ ॥

ವೈಶಂಪಾಯನ– ಭೀಮಸೇನನು ಆ ರೀತಿಯಲ್ಲಿ ಕೀಚಕನನ್ನು ಕೊಂದು ತನ್ನ ರೋಷಕ್ಕೆ ಪ್ರತೀಕಾರವನ್ನು ಮಾಡಿ ದ್ರೌಪದಿಯ ಅನುಮತಿಯನ್ನು ಪಡೆದು ಬೇಗ ಮಹಾನಸಕ್ಕೆ ನಡೆದನು.

ಸ್ನಾತ್ವಾನುಲೇಪನಂ ಕೃತ್ವಾ ಪ್ರಪೂರ್ಯ ಚ ಮನೋರಥಮ್ ।
ಸುಖೋಪವಿಷ್ಟಃ ಶಯನೇ ಭೀಮೋ ಭೀಮಪರಾಕ್ರಮಃ ॥೧೨೫॥

ತನ್ನ ಮನೋರಥವನ್ನು ಪೂರ್ಣಗೊಳಿಸಿ ಸ್ನಾನವನ್ನು ಮಾಡಿ ಗಂಧಾದಿ ಲೇಪನವನ್ನು ಮಾಡಿಕೊಂಡ ಭೀಮಪರಾಕ್ರಮವುಳ್ಳ ಭೀಮಸೇನನು ತನ್ನ ಹಾಸಿಗೆಯಲ್ಲಿ ಸುಖವಾಗಿ ಕುಳಿತನು.

ತತಃ ಕೃಷ್ಣಾ ಯದಾ ಮೇನೇ ಗತಂ ಭೀಮಂ ಮಹಾನಸೇ ।
ಕೀಚಕಂ ಘಾತಯಿತ್ವಾ ಚ ದ್ರೌಪದೀ ಯೋಷಿತಾಂ ವರಾ ॥೧೨೬॥

ಪ್ರಹೃಷ್ಟಾ ಗತಸಂತ್ರಾಸಾ ಸಭಾಪಾಲಾನುವಾಚ ಹ ॥೧೨೭॥

ಕೀಚಕನು ಹತನಾದನು ಮತ್ತು ಭೀಮಸೇನನು ಮಹಾನಸಕ್ಕೆ ಹೋಗಿದ್ದಾನೆ ಎಂದು ತಿಳಿದಮೇಲೆ ಸ್ತ್ರೀಯರಲ್ಲಿ ಶ್ರೇಷ್ಠಳಾದ ಆ ದ್ರೌಪದಿಯು ಕೀಚಕನನ್ನು ಕೊಲ್ಲಿಸಿ ಭಯದಿಂದ ದೂರಳಾಗಿ ಸಂತೋಷಗೊಂಡು ಸಭಾಪಾಲಕರನ್ನು ಕುರಿತು ಹೇಳಿದಳು.

ಕೀಚಕೋऽಯಂ ಹತಃ ಶೇತೇ ಗಂಧರ್ವೈಃ ಪತಿಭಿರ್ಮಮ ।
ಪರಸ್ತ್ರೀಕಾಮಸಂತಪ್ತಂ ತದಾಗಚ್ಛತ ಪಶ್ಯತ ॥೧೨೮॥

ನನ್ನ ಪತಿಗಳಾದ ಗಂಧರ್ವರಿಂದ ಕೊಲ್ಲಲ್ಪಟ್ಟು ಕೀಚಕನು ಮಲಗಿದ್ದಾನೆ. ನೀವೆಲ್ಲರೂ ಬಂದು ಪರಸ್ತ್ರೀಕಾಮತಪ್ತನಾದ ಅವನನ್ನು ನೋಡಿ.

ತಚ್ಛ್ರುತ್ವಾ ಭಾಷಿತಂ ತಸ್ಯಾ ನರ್ತನಾಗಾರರಕ್ಷಿಣಃ ।
ಸಹಸೈವ ತದಾ ಜಗ್ಮುರುಲ್ಕಾಮಾದಾಯ ಸರ್ವಶಃ ॥೧೨೯॥

ಅವಳ ಮಾತನ್ನು ಕೇಳಿದ ನಾಟ್ಯಾಗಾರರಕ್ಷಕರು ಶೀಘ್ರವಾಗಿ ಪಂಜುಗಳನ್ನು ತೆಗೆದುಕೊಂಡು ಒಳಗೆ ಬಂದರು.

ತಸ್ಯ ತಂ ನಿನದಂ ಶ್ರುತ್ವಾ ಕೀಚಕಸ್ಯ ಸಹೋದರಾಃ ।
ತತೋ ಗತ್ವಾऽಥ ತದ್ ವೇಶ್ಮ ಕೀಚಕಂ ವಿನಿಪಾತಿತಮ್ ॥೧೩೦॥

ಗತಾಸುಂ ದದೃಶುರ್ಭೂಮೌ ರುಧಿರೇಣ ಸಮುಕ್ಷಿತಮ್ ॥೧೩೧॥

ಪಾಣಿಪಾದಶಿರೋಹೀನಂ ದೃಷ್ಟ್ವಾ ತೇ ವಿಸ್ಮಯಂ ಗತಾಃ ॥೧೩೨॥

ಸಾಯುವ ಮುಂಚೆ ಕೀಚಕನು ಮಾಡಿದ ಘೋರನಾದಗಳನ್ನು ಕೇಳಿದ ಅವನ ಸಹೋದರರು ತಮ್ಮ ಮನೆಯಿಂದ ಹೊರಟು ನಾಟ್ಯಾಗಾರವನ್ನು ತಲುಪಿ ರಕ್ತಸಿಕ್ತನಾಗಿ ಭೂಮಿಯ ಮೇಲೆ ಶವವಾಗಿ ಬಿದ್ದಿದ್ದ ಕೀಚಕನನ್ನು ನೋಡಿದರು. ಹಸ್ತಪಾದ ಶಿರಸ್ಸುಗಳಿಂದ ಹೀನನಾದ ಅವನನ್ನು ನೋಡಿ ಎಲ್ಲರೂ ವಿಸ್ಮಯವನ್ನು ಹೊಂದಿದರು.

ಕ್ವಾಸ್ಯ ಗ್ರೀವಾ ಕ್ವ ಚರಣೌ ಕ್ವ ಪಾಣೇ ಕ್ವ ಶಿರಃ ಕ್ವ ದೃಕ್ ।
ಇತಿ ತಂ ಸುಪರೀಕ್ಷಂತ ಗಂಧರ್ವೇಣ ಹತಂ ತದಾ ॥೧೩೩॥

ಅವನ ಕತ್ತು ಎಲ್ಲಿ? ಅವನ ಪಾದಗಳು ಎಲ್ಲಿ? ಹಸ್ತಗಳು ಎಲ್ಲಿ? ಶಿರಸ್ಸು ಎಲ್ಲಿ? ಕಣ್ಣುಗಳು ಎಲ್ಲಿ? ಎಂದು ಹೇಳುತ್ತಾ ಗಂಧರ್ವರಿಂದ ಹತನಾದ ಅವನನ್ನು ಪರೀಕ್ಷಿಸಿದರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಪಂಚವಿಂಶೋऽಧ್ಯಾಯಃ ॥೨೫॥

॥ ಕೀಚಕವಧಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಅವಧ್ಯಂ ತಂ ನಿಹತಂ ವೀಕ್ಷ್ಯ ತಸ್ಯ
ಪಂಚೋತ್ತರಂ ಶತಮೇವಾನುಜಾನಾಮ್ ।
ಸರ್ವಂ ವರಾಚ್ಛಂಕರಸ್ಯ ಹ್ಯವಧ್ಯಂ
ಸಹೈವ ಕೃಷ್ಣಾಂ ತೇನ ದಗ್ಧುಂ ಬಬಂಧ ॥೨೭॥

ಅವಧ್ಯನಾದ ಕೀಚಕ ಹತನಾದುದನ್ನು ಕಂಡು ಶಿವವರದಿಂದ ಅವಧ್ಯರಾದ ಅವನ ನೂರೈದು ಮಂದಿ ತಮ್ಮಂದಿರು ಎಲ್ಲರೂ ಕೀಚಕನೊಂದಿಗೆ ದ್ರೌಪದಿಯನ್ನೂ ಸುಡಲು ಕಟ್ಟಿದರು.

ಸಾ ನೀಯಮಾನಾ ಕೀಚಕೈಃ ಸಂರುರಾವ
ಶ್ರುತ್ವೈವ ತಂ ಭೀಮಸೇನೋ ಮಹಾಂತಮ್ ।
ಉದ್ಧೃತ್ಯ ವೃಕ್ಷಂ ತೇನ ಜಘಾನ ಸರ್ವಾನ್
ಆದಾಯ ಕೃಷ್ಣಾಂ ಪುನರಾಗಾತ್ ಪುರಂ ಚ ॥೨೮॥

ಉಪಕೀಚಕರು ದ್ರೌಪದಿಯನ್ನು ಒಯ್ಯುವಾಗ ಅವಳು ಕೂಗಿಕೊಂಡಳು. ಅದನ್ನು ಕೇಳಿ ಭೀಮ ದೊಡ್ಡ ಮರವನ್ನು ಕಿತ್ತು ಅದರಿಂದಲೇ ಅವರನ್ನು ಕೊಂದು ದ್ರೌಪದಿಯನ್ನು ಕರೆದುಕೊಂಡು ನಗರಕ್ಕೆ ಹಿಂತಿರುಗಿದ.

ಏವಂ ಯತ್ನಾತ್ ತಪಸಾ ತೈರವಾಪ್ತೋ ವರಃ ಶಿವಾದಜಯತ್ವಂ ರಣೇಷು ।
ಅವಧ್ಯತಾ ಚೈವ ಷಡುತ್ತರಾಸ್ತೇ ಶತಂ ಹತಾ ಭೀಮಸೇನೇನ ಸಂಖ್ಯೇ ॥೨೯॥

ಆ ಉಪಕೀಚಕರೂ ಕೂಡ ಪ್ರಯತ್ನ ಮಾಡಿ ತಪಸ್ಸಿನಿಂದ ಶಿವನನ್ನು ಒಲಿಸಿಕೊಂಡು ಯುದ್ಧಗಳಲ್ಲಿ ಅಜೇಯರಾಗುವ ವರ ಪಡೆದಿದ್ದರು. ಹೀಗೆ ನೂರ ಆರು ಮಂದಿ ಕೀಚಕರೆಲ್ಲರೂ ಯುದ್ಧದಲ್ಲಿ ಭೀಮಸೇನನಿಂದ ಹತರಾದರು.

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ಭೀಮಸೇನನಿಂದ ಉಪಕೀಚಕರ ವಧೆ

ವೈಶಂಪಾಯನಃ

ತಸ್ಮಿನ್ ಕಾಲೇ ಸಮಾಗಮ್ಯ ಸರ್ವೇ ತಸ್ಯಾತ್ರ ಬಾಂಧವಾಃ ।
ರುರುದುಃ ಕೀಚಕಂ ದೃಷ್ಟ್ವಾ ಪರಿವಾರ್ಯ ಸಮಂತತಃ ॥೧॥

ವೈಶಂಪಾಯನ– ಆ ಸಮಯದಲ್ಲಿ ಕೀಚಕನ ಬಾಂಧವರೆಲ್ಲರೂ ಅಲ್ಲಿ ಬಂದು ಸೇರಿ ಕೀಚಕನನ್ನು ನೋಡಿ ಸುತ್ತುವರಿದು ರೋದನವನ್ನು ಮಾಡಿದರು.

ಸರ್ವೇ ಸಂಹೃಷ್ಟರೋಮಾಣಃ ಸಂತ್ರಸ್ತಾಃ ಪ್ರೇಕ್ಷ್ಯ ಕೀಚಕಮ್ ।
ತಥಾ ಸರ್ವಾಂಗಸಂಭುಗ್ನಂ ಕೂರ್ಮಂ ಸ್ಥಲ ಇವೋದ್ಧೃತಮ್ ॥೨॥

ಎಲ್ಲ ಅಂಗಗಳೂ ಮುರಿಯಲ್ಪಟ್ಟು ನೆಲದ ಮೇಲಿನಿಂದ ಎತ್ತಿದ ಕೂರ್ಮದಂತೆ ಇರುವ ಕೀಚಕನನ್ನು ನೋಡಿ ಹೆದರಿಕೆಯಿಂದ ಎಲ್ಲರೂ ರೋಮಾಂಚನವನ್ನು ಹೊಂದಿದರು.

ತಂ ಹತಂ ಭೀಮಸೇನೇನ ಮಹೇಂದ್ರೇಣೇವ ದಾನವಮ್ ।
ಕೀಚಕಂ ಬಲಸಮ್ಮತ್ತಂ ದುರ್ಧರ್ಷಂ ಯೇನ ಕೇನಚಿತ್ ॥೩॥

ಗಂಧರ್ವೇಣ ಹತಂ ಶ್ರುತ್ವಾ ಕೀಚಕಂ ಪುರುಷರ್ಷಭಮ್ ।
ಸಂಸ್ಕಾರಯಿತುಮಿಚ್ಛಂತೋ ಬಹಿರ್ನೇತುಂ ಪ್ರಚಕ್ರಮುಃ ॥೪॥

ಬಲಸಮ್ಮತ್ತನಾದ, ಯಾರಿಂದಲೂ ಸೋಲಿಸಲ್ಪಡದ, ಪುರುಷರ್ಷಭನಾದ ಕೀಚಕನು ದೇವೇಂದ್ರನಿಂದ ದಾನವನು ಕೊಲ್ಲಲ್ಪಟ್ಟಂತೆ ಭೀಮಸೇನನಿಂದ (ಗಂಧರ್ವನಿಂದ) ಹತನಾದುದನ್ನು ಕೇಳಿ ಅವನಿಗೆ ಸಂಸ್ಕಾರ ಮಾಡಲು ಬಯಸಿ ಅವನ ಶರೀರವನ್ನು ಹೊರಗೆ ತೆಗೆದುಕೊಂಡು ಹೋಗಲು ಉಪಕ್ರಮಿಸಿದರು.

ಅಪಶ್ಯನ್ನಂತಿಕೇ ಕೃಷ್ಣಾಂ ಸೂತಪುತ್ರಾಃ ಸಮಾಗತಾಃ ।
ಅದೂರಾದನವದ್ಯಾಂಗೀಂ ಸ್ತಂಭಮಾಲಂಬ್ಯ ತಿಷ್ಠತೀಮ್ ॥೫॥

ಅಲ್ಲಿಗೆ ಬಂದ ಆ ಸೂತಪುತ್ರರು ಸಮೀಪದಲ್ಲಿಯೇ ಒಂದು ಸ್ತಂಭವನ್ನು ಒರಗಿಕೊಂಡು ನಿಂತಿದ್ದ ಅನವದ್ಯಾಂಗಿಯಾದ ದ್ರೌಪದಿಯನ್ನು ನೋಡಿದರು.

ಸಮವೇತೇಷು ಸರ್ವೇಷು ತಾನುವಾಚೋಪಕೀಚಕಃ ।
ಹಸನ್ನಿವ ತದಾऽಮರ್ಷಾನ್ನಿರ್ದಹನ್ನಿವ ಚಕ್ಷುಷಾ ॥೬॥

ಎಲ್ಲರೂ ಬಂದು ಸೇರಿದ ಮೇಲೆ ಉಪಕೀಚಕನು ಅವರೆಲ್ಲರನ್ನೂ ಉದ್ದೇಶಿಸಿ ದ್ರೌಪದಿಯನ್ನು ತನ್ನ ದೃಷ್ಟಿಯಿಂದ ಸುಟ್ಟುಬಿಡುವಂತೆ ನೋಡುತ್ತಾ ಕೋಪದಿಂದ ನಗುವವನಂತೆ ಮಾತನಾಡಿದನು.

ಹನ್ಯತಾಂ ಶೀಘ್ರಮಸತೀ ಯತ್ಕೃತೇ ಕೀಚಕೋ ಹತಃ ।
ಅಥವಾ ನೈವ ಹಂತವ್ಯಾ ದಹ್ಯತಾಂ ಕಾಮಿನಾ ಸಹ ॥೭॥

ಯಾವಳ ಸಲುವಾಗಿ ಕೀಚಕನು ಹತನಾದನೋ ಅಂತಹ ಈ ದುಷ್ಟವನಿತೆಯನ್ನು ಕೊಂದುಬಿಡಿ. ಅಥವಾ ಕೊಲ್ಲುವುದು ಬೇಡ. ಕಾಮಿಯಾದ ಕೀಚಕನ ಜೊತೆಯಲ್ಲಿ ಇವಳು ಸುಡಲ್ಪಡಲಿ.

ಮೃತಸ್ಯಾಪಿ ಪ್ರಿಯಂ ಕಾರ್ಯಂ ಸೂತಪುತ್ರಸ್ಯ ಸರ್ವಥಾ ।
ಇಯಂ ಹಿ ದುಷ್ಟಚಾರಿತ್ರಾ ಮಮ ಭ್ರಾತುರಮಿತ್ರಿಣೀ ॥೮॥

ಯತ್ಕೃತೇ ಮರಣಂ ಪ್ರಾಪ್ತೋ ನೇಯಂ ಜೀವಿತುಮರ್ಹತಿ ।
ಸಹೇಯಂ ದಹ್ಯತಾಂ ಸೂತಾ ಆಪೃಚ್ಛ್ಯ ಚ ಜನಾಧಿಪಮ್ ॥೯॥

ಹತಸ್ಯಾಪಿ ಚ ಗಂಧರ್ವೈಃ ಕೀಚಕಸ್ಯ ಪ್ರಿಯಂ ಭವೇತ್ ॥೧೦॥

ಸೂತಪುತ್ರನಾದ ಕೀಚಕನು ಮೃತನಾದರೂ ಅವನಿಗೆ ನಾವು ಪ್ರಿಯವನ್ನು ಮಾಡಬೇಕು. ಇವಳಾದರೂ ನನ್ನ ಅಣ್ಣನ ಶತ್ರುವಾದವಳು ಮತ್ತು ದುಷ್ಟಚರಿತ್ರೆ ಉಳ್ಳವಳು. ಯಾವಳ ಸಲುವಾಗಿ ನನ್ನ ಅಣ್ಣನು ಮೃತನಾದನೋ ಅಂತಹ ಇವಳು ಜೀವಿಸಿರಬಾರದು. ಸೂತರೇ, ರಾಜನ ಅಪ್ಪಣೆಯನ್ನು ಪಡೆದು ಕೀಚಕನ ಜೊತೆಯಲ್ಲಿಯೇ ಇವಳನ್ನು ಸುಟ್ಟುಬಿಡಿ. ಹಾಗೆ ಮಾಡಿದರೆ ಗಂಧರ್ವರಿಂದ ಹತನಾದ ಕೀಚಕನಿಗೂ ಪ್ರಿಯವಾಗುತ್ತದೆ.

ತತೋ ವಿರಾಟಮಾಸಾದ್ಯ ಸೂತಾಃ ಪ್ರಾಂಜಲಯೋಽಬ್ರುವನ್ ॥೧೧॥

ಕೀಚಕೋಽಯಂ ಹತಃ ಶೇತೇ ಗಂಧರ್ವೈಃ ಕಾಮರೂಪಿಭಿಃ ।
ಸೈರಂಧ್ರ್ಯಾ ಸಹಿತಂ ರಾತ್ರೌ ತಂ ದಹೇಮ ಸಹಾನಯಾ ॥೧೨॥

ಮಾನಿತಾಃ ಸ್ಮ ತ್ವಯಾ ರಾಜನ್ ತದನುಜ್ಞಾತುಮರ್ಹಸಿ ॥೧೩॥

ಅನಂತರ ಸೂತರು ವಿರಾಟನನ್ನು ಸಮೀಪಿಸಿ ಕೈಗಳನ್ನು ಮುಗಿದು ಸೈರಂಧ್ರಿಯ ಜೊತೆಯಲ್ಲಿ ಕಾಮರೂಪಿಗಳಾದ ಗಂಧರ್ವರಿಂದ ಈ ಕೀಚಕನು ರಾತ್ರಿಯಲ್ಲಿ ಹತನಾಗಿದ್ದಾನೆ. ಅವಳನ್ನು ಇವನ ಜೊತೆಯಲ್ಲಿಯೇ ಸುಡುತ್ತೇವೆ. ರಾಜನೇ, ನೀನು ಯಾವಾಗಲೂ ನಮಗೆ ಮರ್ಯಾದೆಯನ್ನು ಕೊಟ್ಟಿದ್ದೀಯೆ. ಆದ್ದರಿಂದ ಇದಕ್ಕೆ ಅನುಮತಿಯನ್ನು ಕೊಡು ಎಂದು ಹೇಳಿದರು.

ಪರಾಕ್ರಮಂ ತು ಸೂತಾನಾಂ ಜ್ಞಾತ್ವಾ ರಾಜಾಽನ್ವಮೋದತ ।
ಸೈರಂಧ್ರ್ಯಾಃ ಸೂತಪುತ್ರೇಣ ಸಹ ದಾಹಂ ಜನಾಧಿಪಃ ॥೧೪॥

ಸೂತರ ಪರಾಕ್ರಮವನ್ನು ತಿಳಿದ ಜನಾಧಿಪನಾದ ರಾಜನು ಕೀಚಕನ ಜೊತೆಯಲ್ಲಿ ಸೈರಂಧ್ರಿಯನ್ನು ದಹಿಸುವುದಕ್ಕೆ ಅನುಮತಿಯನ್ನು ನೀಡಿದನು.

ತತಸ್ತೇ ಸಮನುಜ್ಞಾತಾಃ ಸರ್ವೇ ತತ್ರಾಸ್ಯ ಬಾಂಧವಾಃ ।
ರುರುದುಃ ಕೀಚಕಂ ದೃಷ್ಟ್ವಾ ಪರಿವಾರ್ಯಾಭಿತಃ ಸ್ಥಿತಾಃ ॥೧೫॥

ಅನುಮತಿಯನ್ನು ಪಡೆದ ಆ ಬಾಂಧವರೆಲ್ಲರೂ ಅಲ್ಲಿ ಕೀಚಕನನ್ನು ನೋಡಿ ಸುತ್ತುವರಿದು ರೋದನವನ್ನು ಮಾಡಿದರು.

ತಾಂ ಸಮಾಸಾದ್ಯ ವಿತ್ರಸ್ತಾಂ ಕೃಷ್ಣಾಂ ಕಮಲಲೋಚನಾಮ್ ।
ಮೋಮುಹ್ಯಮಾನಾಂ ತೇ ತತ್ರ ಜಗೃಹುಃ ಕೀಚಕಾ ಭೃಶಮ್ ॥೧೬॥

ಕೀಚಕರು ಹೆದರಿ ಮೂರ್ಛೆಹೋಗುವಂತಿದ್ದ ಕಮಲಲೋಚನೆಯಾದ ದ್ರೌಪದಿಯನ್ನು ಸಮೀಪಿಸಿ ಅವಳನ್ನು ಹಿಡಿದರು.

ಆರೋಪ್ಯ ಕೃಷ್ಣಾಮಥ ಕೀಚಕೇನ
ನಿಬಧ್ಯ ಕೇಶೇಷು ಚ ಪಾದಯೋಶ್ಚ ।
ತೇ ಚಾಪಿ ಸೂತಾ ವಚನೈರವೋಚನ್
ಉದ್ದಿಶ್ಯ ಸರ್ವೇ ಹ್ಯಭಿವೀಕ್ಷ್ಯ ಚೈನಾಮ್ ॥೧೭॥

ಅನಂತರ ದ್ರೌಪದಿಯನ್ನು ಕೀಚಕನ ಜೊತೆಯಲ್ಲಿ ಶವವಾಹನದ ಮೇಲೆ ಕಟ್ಟಿ ಅವಳ ಕೇಶಗಳನ್ನೂ ಮತ್ತು ಪಾದಗಳನ್ನೂ ಬಿಗಿದು ಆ ಸೂತರೆಲ್ಲರೂ ಇವಳನ್ನು ನೋಡಿ ಮತ್ತು ಇವಳನ್ನು ಉದ್ದೇಶಿಸಿ ಮಾತನಾಡಿದರು.

ಯಸ್ಯಾಃ ಕೃತೇಽಯಂ ನಿಹತೋ ಮಹಾತ್ಮಾ
ತಸ್ಮಾತ್ ತು ಸಾ ಕೀಚಕಮಾರ್ಗಮೇತು ।
ಅವಾರ್ಯಸತ್ವೇನ ಸಹಾದ್ಯ ಗಂತ್ರೀ
ಗತಾಸುನಾ ಸುಂದರಿ ಕೀಚಕೇನ ॥೧೮॥

ಮಹಾತ್ಮನಾದ ಕೀಚಕನು ಇವಳ ನಿಮಿತ್ತದಿಂದಾಗಿ ಹತನಾದ ಕಾರಣದಿಂದ ಇವಳೂ ಸಹ ಕೀಚಕನ ಮಾರ್ಗದಲ್ಲಿಯೇ ಹೋಗಲಿ. ಸುಂದರಿಯೇ, ನೀನು ಈ ದಿನ ಮಹಾಬಲವುಳ್ಳ ಮೃತನಾದ ಕೀಚಕನ ಜೊತೆಯಲ್ಲಿ ಹೋಗುವವಳಾಗುವಿ.

ಸಾಽಶೇತ ಕೃಷ್ಣಾ ಶಯನೇ ನಿಬದ್ಧಾ
ಮನಸ್ವಿನೀ ಚೈವ ಯಶಸ್ವಿನೀ ಚ ।
ನಿವೇಪಮಾನಾ ವಿವಶಾ ಹಿ ದುಷ್ಟೈಃ
ತಮೇವ ಪರ್ಯಂಕತಳೇ ಶುಭಾಂಗೀ ॥೧೯॥

ತತಸ್ತು ತಾಂ ಸಮಾರೋಪ್ಯ ನಿಬಧ್ಯ ಚ ಸುಮಧ್ಯಮಾಮ್ ।
ಜಗ್ಮುರುದ್ಯಮ್ಯ ತೇ ಸರ್ವೇ ಶ್ಮಶಾನಾಭಿಮುಖಾಸ್ತದಾ ॥೨೦॥

ಶವವಾಹನದ ಮೇಲೆ ಶಯನದಲ್ಲಿ ಕಟ್ಟಲ್ಪಟ್ಟ ಮಾನವತಿಯೂ, ಕೀರ್ತಿವಂತೆಯೂ ಆದ ಆ ದ್ರೌಪದಿಯು ನಡುಗುತ್ತಾ ಆ ದುಷ್ಟರಿಗೆ ವಶಳಾಗಿ ಶುಭಾಂಗಿಯಾದ ಅವಳು ಆ ಪರ್ಯಂಕತಳದಲ್ಲಿ ಇರುತ್ತಿರಲು,

ಹ್ರಿಯಮಾಣಾऽಥ ಸುಶ್ರೋಣೀ ಸೂತಪುತ್ರೈರನಿಂದಿತಾ ।
ಪ್ರಾಕ್ರೋಶನ್ನಾಥಮಿಚ್ಛಂತೀ ಕೃಷ್ಣಾ ನಾಥವತೀ ಸತೀ ॥೨೧॥

ಹಾಗೆಯೇ ಸೂತಪುತ್ರರಿಂದ ಎಳೆದುಕೊಂಡು ಹೋಗಲ್ಪಡುತ್ತಿರಲು ಅನಾಥಳಾದ, ಅನಿಂದಿತಳಾದ ಆ ದ್ರೌಪದಿಯು ನಾಥನನ್ನು ಇಚ್ಛಿಸುತ್ತಾ ಕಿರುಚಿದಳು. ಆಗ ಅವರು ಆ ಸುಮಧ್ಯಮೆಯನ್ನು ಶವವಾಹನದಲ್ಲಿ ಏರಿಸಿ ಬಿಗಿದು ಎಲ್ಲರೂ ಎತ್ತಿಕೊಂಡು ಸ್ಮಶಾನಾಭಿಮುಖವಾಗಿ ಹೊರಟರು.

ಜಯೋ ಜಯೇಶೋ ವಿಜಯೋ ಜಯತ್ಸೇನೋ ಜಯದ್ಬಲಃ ।
ತೇ ಮೇ ವಾಚಂ ವಿಜಾನಂತು ಸೂತಪುತ್ರಾ ನಯಂತಿ ಮಾಮ್ ॥೨೨॥

ಜಯ, ಜಯೇಶ, ವಿಜಯ, ಜಯತ್ಸೇನ, ಜಯದ್ಬಲ ಇವರು ನನ್ನ ಮಾತನ್ನು ಕೇಳಿಸಿಕೊಳ್ಳಿ. ಸೂತಪುತ್ರರು ನನ್ನನ್ನು ಎಳೆದುಕೊಂಡು ಹೋಗುತ್ತಿದ್ದಾರೆ.

ಯೇಷಾಂ ದುಂದುಭಿನಿರ್ಘೋಷೋ ಜ್ಯಾಘೋಷಃ ಶ್ರೂಯತೇ ಮಹಾನ್ ।
ತೇ ಮೇ ವಾಚಂ ವಿಜಾನಂತು ಸೂತಪುತ್ರಾ ನಯಂತಿ ಮಾಮ್ ॥೨೩॥

ಯಾರ ದುಂದುಭಿಘೋಷವು ಮತ್ತು ಜ್ಯಾಘೋಷವು ದೊಡ್ಡದಾಗಿ ಕೇಳಿಬರುತ್ತದೆಯೋ ಅವರು ನನ್ನ ಮಾತನ್ನು ತಿಳಿಯಿರಿ. ಸೂತಪುತ್ರರು ನನ್ನನ್ನು ಎಳೆದುಕೊಂಡು ಹೋಗುತ್ತಿದ್ದಾರೆ.

ಯೇಷಾಂ ಜ್ಯಾತಲನಿರ್ಘೋಷೋ ವಿಸ್ಫೂರ್ಜಿತಮಿವಾಶನೇಃ ।
ಅಶ್ರೂಯತ ಮಹಾನ್ ಯುದ್ಧೇ ಭೀಮಘೋಷಸ್ತರಸ್ವಿನಾಮ್ ॥೨೪॥

ರಥಘೋಷಶ್ಚ ಬಲವಾನ್ ಗಂಧರ್ವಾಣಾಂ ತರಸ್ವಿನಾಮ್ ।
ತೇ ಮೇ ವಾಚಂ ವಿಜಾನಂತು ಸೂತಪುತ್ರಾ ನಯಂತಿ ಮಾಮ್ ॥೨೫॥

ಯಾವ ವೇಗಶಾಲಿಗಳ ಜ್ಯಾಘೋಷ ಮತ್ತು ತಳಘೋಷಗಳು ಸಿಡಿಲು ಬಡಿದಂತೆ ಇದ್ದವೋ ಮತ್ತು ಯುದ್ಧದಲ್ಲಿ ಯಾರ ಭಯಂಕರವಾದ ಘೋಷವು ದೊಡ್ಡದಾಗಿದ್ದಿತೋ, ರಥಘೋಷವೂ ದೊಡ್ಡದಾಗಿದ್ದಿತೋ ಅಂತಹ ಗಂಧರ್ವರು ನನ್ನ ಮಾತನ್ನು ತಿಳಿಯಿರಿ. ಸೂತಪುತ್ರರು ನನ್ನನ್ನು ಎಳೆದೊಯ್ಯುತ್ತಿದ್ದಾರೆ.

ಆರೋಪ್ಯ ಕೃಷ್ಣಾಮಥ ಕೀಚಕೇನ
ನಿಬಧ್ಯ ಕೇಶೇಷು ಚ ಪಾದಯೋಶ್ಚ ।
ತೇ ಚಾಪಿ ಸೂತಾ ವಚನೈರವೋಚನ್
ಉದ್ದಿಶ್ಯ ಸರ್ವೇ ಹ್ಯಭಿವೀಕ್ಷ್ಯ ಚೈನಾಮ್ ॥೧೭॥

ಅನಂತರ ದ್ರೌಪದಿಯನ್ನು ಕೀಚಕನ ಜೊತೆಯಲ್ಲಿ ಶವವಾಹನದ ಮೇಲೆ ಕಟ್ಟಿ ಅವಳ ಕೇಶಗಳನ್ನೂ ಮತ್ತು ಪಾದಗಳನ್ನೂ ಬಿಗಿದು ಆ ಸೂತರೆಲ್ಲರೂ ಇವಳನ್ನು ನೋಡಿ ಮತ್ತು ಇವಳನ್ನು ಉದ್ದೇಶಿಸಿ ಮಾತನಾಡಿದರು.

ಯಸ್ಯಾಃ ಕೃತೇಽಯಂ ನಿಹತೋ ಮಹಾತ್ಮಾ
ತಸ್ಮಾತ್ ತು ಸಾ ಕೀಚಕಮಾರ್ಗಮೇತು ।
ಅವಾರ್ಯಸತ್ವೇನ ಸಹಾದ್ಯ ಗಂತ್ರೀ
ಗತಾಸುನಾ ಸುಂದರಿ ಕೀಚಕೇನ ॥೧೮॥

ಮಹಾತ್ಮನಾದ ಕೀಚಕನು ಇವಳ ನಿಮಿತ್ತದಿಂದಾಗಿ ಹತನಾದ ಕಾರಣದಿಂದ ಇವಳೂ ಸಹ ಕೀಚಕನ ಮಾರ್ಗದಲ್ಲಿಯೇ ಹೋಗಲಿ. ಸುಂದರಿಯೇ, ನೀನು ಈ ದಿನ ಮಹಾಬಲವುಳ್ಳ ಮೃತನಾದ ಕೀಚಕನ ಜೊತೆಯಲ್ಲಿ ಹೋಗುವವಳಾಗುವಿ.

ಸಾಽಶೇತ ಕೃಷ್ಣಾ ಶಯನೇ ನಿಬದ್ಧಾ
ಮನಸ್ವಿನೀ ಚೈವ ಯಶಸ್ವಿನೀ ಚ ।
ನಿವೇಪಮಾನಾ ವಿವಶಾ ಹಿ ದುಷ್ಟೈಃ
ತಮೇವ ಪರ್ಯಂಕತಳೇ ಶುಭಾಂಗೀ ॥೧೯॥

ತತಸ್ತು ತಾಂ ಸಮಾರೋಪ್ಯ ನಿಬಧ್ಯ ಚ ಸುಮಧ್ಯಮಾಮ್ ।
ಜಗ್ಮುರುದ್ಯಮ್ಯ ತೇ ಸರ್ವೇ ಶ್ಮಶಾನಾಭಿಮುಖಾಸ್ತದಾ ॥೨೦॥

ಶವವಾಹನದ ಮೇಲೆ ಶಯನದಲ್ಲಿ ಕಟ್ಟಲ್ಪಟ್ಟ ಮಾನವತಿಯೂ, ಕೀರ್ತಿವಂತೆಯೂ ಆದ ಆ ದ್ರೌಪದಿಯು ನಡುಗುತ್ತಾ ಆ ದುಷ್ಟರಿಗೆ ವಶಳಾಗಿ ಶುಭಾಂಗಿಯಾದ ಅವಳು ಆ ಪರ್ಯಂಕತಳದಲ್ಲಿ ಇರುತ್ತಿರಲು,

ಹ್ರಿಯಮಾಣಾऽಥ ಸುಶ್ರೋಣೀ ಸೂತಪುತ್ರೈರನಿಂದಿತಾ ।
ಪ್ರಾಕ್ರೋಶನ್ನಾಥಮಿಚ್ಛಂತೀ ಕೃಷ್ಣಾ ನಾಥವತೀ ಸತೀ ॥೨೧॥

ಹಾಗೆಯೇ ಸೂತಪುತ್ರರಿಂದ ಎಳೆದುಕೊಂಡು ಹೋಗಲ್ಪಡುತ್ತಿರಲು ಅನಾಥಳಾದ, ಅನಿಂದಿತಳಾದ ಆ ದ್ರೌಪದಿಯು ನಾಥನನ್ನು ಇಚ್ಛಿಸುತ್ತಾ ಕಿರುಚಿದಳು. ಆಗ ಅವರು ಆ ಸುಮಧ್ಯಮೆಯನ್ನು ಶವವಾಹನದಲ್ಲಿ ಏರಿಸಿ ಬಿಗಿದು ಎಲ್ಲರೂ ಎತ್ತಿಕೊಂಡು ಸ್ಮಶಾನಾಭಿಮುಖವಾಗಿ ಹೊರಟರು.

ಜಯೋ ಜಯೇಶೋ ವಿಜಯೋ ಜಯತ್ಸೇನೋ ಜಯದ್ಬಲಃ ।
ತೇ ಮೇ ವಾಚಂ ವಿಜಾನಂತು ಸೂತಪುತ್ರಾ ನಯಂತಿ ಮಾಮ್ ॥೨೨॥

ಜಯ, ಜಯೇಶ, ವಿಜಯ, ಜಯತ್ಸೇನ, ಜಯದ್ಬಲ ಇವರು ನನ್ನ ಮಾತನ್ನು ಕೇಳಿಸಿಕೊಳ್ಳಿ. ಸೂತಪುತ್ರರು ನನ್ನನ್ನು ಎಳೆದುಕೊಂಡು ಹೋಗುತ್ತಿದ್ದಾರೆ.

ಯೇಷಾಂ ದುಂದುಭಿನಿರ್ಘೋಷೋ ಜ್ಯಾಘೋಷಃ ಶ್ರೂಯತೇ ಮಹಾನ್ ।
ತೇ ಮೇ ವಾಚಂ ವಿಜಾನಂತು ಸೂತಪುತ್ರಾ ನಯಂತಿ ಮಾಮ್ ॥೨೩॥

ಯಾರ ದುಂದುಭಿಘೋಷವು ಮತ್ತು ಜ್ಯಾಘೋಷವು ದೊಡ್ಡದಾಗಿ ಕೇಳಿಬರುತ್ತದೆಯೋ ಅವರು ನನ್ನ ಮಾತನ್ನು ತಿಳಿಯಿರಿ. ಸೂತಪುತ್ರರು ನನ್ನನ್ನು ಎಳೆದುಕೊಂಡು ಹೋಗುತ್ತಿದ್ದಾರೆ.

ಯೇಷಾಂ ಜ್ಯಾತಳನಿರ್ಘೋಷೋ ವಿಸ್ಫೂರ್ಜಿತಮಿವಾಶನೇಃ ।
ಅಶ್ರೂಯತ ಮಹಾನ್ ಯುದ್ಧೇ ಭೀಮಘೋಷಸ್ತರಸ್ವಿನಾಮ್ ॥೨೪॥

ರಥಘೋಷಶ್ಚ ಬಲವಾನ್ ಗಂಧರ್ವಾಣಾಂ ತರಸ್ವಿನಾಮ್ ।
ತೇ ಮೇ ವಾಚಂ ವಿಜಾನಂತು ಸೂತಪುತ್ರಾ ನಯಂತಿ ಮಾಮ್ ॥೨೫॥

ಯಾವ ವೇಗಶಾಲಿಗಳ ಜ್ಯಾಘೋಷ ಮತ್ತು ತಳಘೋಷಗಳು ಸಿಡಿಲು ಬಡಿದಂತೆ ಇದ್ದವೋ ಮತ್ತು ಯುದ್ಧದಲ್ಲಿ ಯಾರ ಭಯಂಕರವಾದ ಘೋಷವು ದೊಡ್ಡದಾಗಿದ್ದಿತೋ, ರಥಘೋಷವೂ ದೊಡ್ಡದಾಗಿದ್ದಿತೋ ಅಂತಹ ಗಂಧರ್ವರು ನನ್ನ ಮಾತನ್ನು ತಿಳಿಯಿರಿ. ಸೂತಪುತ್ರರು ನನ್ನನ್ನು ಎಳೆದೊಯ್ಯುತ್ತಿದ್ದಾರೆ.

ಯೇಷಾಂ ವೀರ್ಯಮತುಲ್ಯಂ ತು ಶಕ್ರಸ್ಯೇವ ಬಲಂ ಯಶಃ ।
ರಾಜಸಿಂಹಾ ಇವಾಗ್ರ್ಯಾಸ್ತೇ ಮಾಂ ಜಾನಂತು ಸುದುಃಖಿತಾಮ್ ॥೨೬॥

ಯಾರ ವೀರ್ಯವೂ ಬಲವೂ ಮತ್ತು ಕೀರ್ತಿಯೂ ಇಂದ್ರನ ವೀರ್ಯಾದಿಗಳಂತೆ ಅಸದೃಶವಾಗಿವೆಯೋ ಅಂತಹ ಶ್ರೇಷ್ಠರಾದ ರಾಜಸಿಂಹರು ನಾನು ದುಃಖಿತಳಾಗಿದ್ದೇನೆಂದು ತಿಳಿಯಿರಿ.

ಸ ತಸ್ಯಾಃ ಕೃಪಣಾ ವಾಚಃ ಕೃಷ್ಣಾಯಾಃ ಪರಿದೇವಿತಮ್ ।
ಶ್ರುತ್ವೈವಾಭ್ಯುತ್ಥಿತೋ ಭೀಮಃ ಶಯನಾದವಿಚಾರಯನ್ ॥೨೭॥

ಆ ದ್ರೌಪದಿಯ ಕಾರ್ಪಣ್ಯದಿಂದ ಕೂಡಿದ ಗೋಳಾಟದ ಮಾತುಗಳನ್ನು ಕೇಳಿ ಏನೂ ವಿಚಾರವನ್ನು ಮಾಡದೆ ಭೀಮಸೇನನು ತನ್ನ ಹಾಸಿಗೆಯಿಂದ ಎದ್ದನು.

ಅಹಂ ಸೈರಂಧ್ರಿ ತೇ ವಾಚಃ ಶೃಣೋಮಿ ತವ ಭಾಷಿತಮ್ ।
ತಸ್ಮಾತ್ ತೇ ಸೂತಪುತ್ರೇಭ್ಯೋ ಭಯಂ ಜಾತು ನ ವಿದ್ಯತೇ ॥೨೮॥

ಇತ್ಯುಕ್ತ್ವಾ ಸ ಮಹಾಬಾಹುರ್ವಿಜೃಂಭೇ ಜಿಘಾಂಸಯಾ ॥೨೯॥

ಸೈರಂಧ್ರಿಯೇ, ನೀನು ಆಡಿದ ಮಾತುಗಳನ್ನು ನಾನು ಕೇಳುತ್ತಿದ್ದೇನೆ. ಆದ್ದರಿಂದ ನಿನಗೆ ಸೂತಪುತ್ರರಿಂದ ಯಾವ ಭಯವೂ ಇಲ್ಲ ಎಂದು ಹೇಳಿ ಸೂತಪುತ್ರರನ್ನು ಕೊಲ್ಲುವ ಇಚ್ಛೆಯಿಂದ ಮಹಾಬಾಹುವಾದ ಅವನು ತನ್ನ ಮೈಮುರಿದನು.

ತತಃ ಸ ವ್ಯಾಯತಂ ಬದ್ಧ್ವಾ ವಸ್ತ್ರಂ ಚ ಪರಿವೇಷ್ಟ್ಯ ಚ ।
ಅದ್ವಾರೇಣಾಭ್ಯವಸ್ಕಂದ್ಯ ನಿರ್ಜಗಾಮ ಬಹಿಸ್ತದಾ ॥೩೦॥

ಅನಂತರ ಅವನು ಕೆಳಗೆ ಇಳಿಬಿದ್ದಿದ್ದ ತನ್ನ ವಸ್ತ್ರವನ್ನು ಕಟ್ಟಿ ಸುತ್ತಿಕೊಂಡು ಅದ್ವಾರದಿಂದ ನಿಷ್ಕ್ರಮಿಸಿ ಹೊರಗೆ ಬಂದನು.

ಚಿತಾಸಮೀಪಂ ಗತ್ವಾ ತು ತತ್ರಾಪಶ್ಯನ್ಮಹಾಬಲಃ ।
ತಾಳಮಾತ್ರಂ ಮಹಾಸ್ಕಂಧಂ ಸಂಶುಷ್ಕಂ ವೈ ವನಸ್ಪತಿಮ್ ॥೩೧॥

ಮಹಾಬಲನಾದ ಅವನು ಚಿತಾಸಮೀಪಕ್ಕೆ ಹೋಗಿ ತಾಳೆಯ ಮರದಷ್ಟು ಎತ್ತರವಾದ ದೊಡ್ಡ ಕೊಂಬೆಗಳಿಂದ ಕೂಡಿದ ಚೆನ್ನಾಗಿ ಒಣಗಿದ ಒಂದು ವೃಕ್ಷವನ್ನು ನೋಡಿದನು.

ತಂ ನಾಗವದುಪಕ್ರಮ್ಯ ಬಾಹುಭ್ಯಾಂ ಪರಿರಭ್ಯ ಚ ।
ವೃಕ್ಷಮುತ್ಪಾಟಯಾಮಾಸ ಭೀಮೋ ಭೀಮಪರಾಕ್ರಮಃ ॥೩೨॥

ಭೀಮಪರಾಕ್ರಮವುಳ್ಳ ಭೀಮನು ಗಜದಂತೆ ಆ ವೃಕ್ಷವನ್ನು ಸಮೀಪಿಸಿ ತನ್ನ ಬಾಹುಗಳಿಂದ ಅದನ್ನು ತಬ್ಬಿಕಿತ್ತನು.

ತತೋ ವೃಕ್ಷಂ ದಶವ್ಯಾಮಂ ನಿಷ್ಪತ್ರಮಕರೋತ್ ತದಾ ।
ಸ್ಕಂಧಮಾರೋಪಯಾಮಾಸ ಸಸ್ಕಂಧವಿಟಪಂ ಬಲೀ ॥೩೩॥

ಅನಂತರ ಹತ್ತುಮಾರು ಸುತ್ತಳತೆಯುಳ್ಳ ಆ ವೃಕ್ಷವನ್ನು ಪತ್ರರಹಿತವನ್ನಾಗಿ ಮಾಡಿ ಬಲಿಷ್ಠನಾದ ಅವನು ಕೊಂಬೆರೆಂಬೆಗಳಿಂದ ಕೂಡಿದ ಆ ಮರವನ್ನು ತನ್ನ ಹೆಗಲಿನ ಮೇಲೆ ಏರಿಸಿದನು.

ತಂ ಮಹಾಸಾಲಮುದ್ಯಮ್ಯ ಭ್ರಾಮಯಿತ್ವಾ ಚ ವೇಗತಃ ।
ಪ್ರಗೃಹ್ಯಾಭ್ಯಪತತ್ ಸೂತಾನ್ ದಂಡಪಾಣಿರಿವಾಂತಕಃ ॥೩೪॥

ಆ ಮಹಾಸಾಲವೃಕ್ಷವನ್ನು ಎತ್ತಿ ವೇಗದಿಂದ ತಿರುಗಿಸುತ್ತಾ ದಂಡಪಾಣಿಯಾದ ಯಮನಂತೆ ಸೂತರ ಕಡೆಗೆ ಧಾವಿಸಿದನು.

ಊರುವೇಗೇನ ತಸ್ಯಾಥ ನ್ಯಗ್ರೋಧಾಶ್ವತ್ಥಕಿಂಶುಕಾಃ ।
ಭೂಮೌ ನಿಪತಿತಾ ವೃಕ್ಷಾ ಸಂಘಶಸ್ತತ್ರ ಶೇರತೇ ॥೩೫॥

ಅವನ ತೊಡೆಯ ವೇಗದಿಂದ ತೊಡೆಗೆ ತಾಕಿದ ಆಲ, ಅಶ್ವತ್ಥ, ಮುತ್ತುಗ ಮೊದಲಾದ ಮರಗಳು ಭೂಮಿಯಲ್ಲಿ ಗುಂಪುಗುಂಪಾಗಿ ಬಿದ್ದವು.

ತಂ ಸಿಂಹಮಿವ ಸಂಕ್ರುದ್ಧಂ ಗಂಧರ್ವಂ ಪ್ರೇಕ್ಷ್ಯ ತೇ ತದಾ ।
ವಿತ್ರೇಸುಃ ಸರ್ವತಃ ಸೂತಾ ವಿಷಾದಭಯಪೀಡಿತಾಃ ॥೩೬॥

ಕೋಪಗೊಂಡ ಸಿಂಹದಂತಿರುವ ಆ ಗಂಧರ್ವನನ್ನು ನೋಡಿ ಆಗ ವಿಷಾದ ಪೀಡಿತರಾದ ಸೂತರೆಲ್ಲರೂ ಹೆದರಿದರು.

ತಮಂತಕಮಿವ ಕ್ರುದ್ಧಂ ಗಂಧರ್ವಭಯಶಂಕಿತಾಃ ।
ದಿಧಕ್ಷಂತಸ್ತಥಾ ಜ್ಯೇಷ್ಠಂ ಭ್ರಾತರಂ ಚಾಪಿ ಕೀಚಕಾಃ ॥೩೭॥

ಪರಸ್ಪರಮಥೋಚುಸ್ತೇ ವಿಷಾದಭಯಮೋಹಿತಾಃ ॥೩೮॥

ಕೋಪಗೊಂಡ ಯಮನಂತೆ ಬರುತ್ತಿರುವ ಅವನನ್ನು ಗಂಧರ್ವನೆಂದು ತಿಳಿದು ಭಯದಿಂದ ಕೂಡಿದವರಾಗಿ ಕೀಚಕರು ತಮ್ಮ ಅಣ್ಣನನ್ನು ಸುಡಲು ಬಯಸಿಬಂದವರಾಗಿ ವಿಷಾದ ಭಯ ಮೋಹಿತರಾಗಿ ಪರಸ್ಪರವಾಗಿ ಮಾತನಾಡಿಕೊಂಡರು.

ಗಂಧರ್ವೋ ಬಲವಾನೇತಿ ಕ್ರುದ್ಧ ಉದ್ಯಮ್ಯ ಪಾದಪಮ್ ।
ಪ್ರಬುದ್ಧಾಃ ಸುಮಹಾಭಾಗಾ ಗಂಧರ್ವಾಃ ಸೂರ್ಯವರ್ಚಸಃ ॥೩೯॥

ಸೈರಂಧ್ರೀ ಮುಚ್ಯತಾಂ ಶೀಘ್ರಂ ಭಯಂ ನೋ ಮಹದಾಗತಮ್ ॥೪೦॥

ಕೋಪಗೊಂಡ ಬಲಿಷ್ಠನಾದ ಗಂಧರ್ವನು ಮರವನ್ನು ಎತ್ತಿಕೊಂಡು ಬರುತ್ತಿದ್ದಾನೆ. ಸೂರ್ಯನ ವರ್ಚಸ್ಸುಳ್ಳ ಮಹಾನುಭಾವರಾದ ಗಂಧರ್ವರು ಈಗ ವಿಷಯವನ್ನು ತಿಳಿದಿದ್ದಾರೆ. ಬೇಗ ಸೈರಂಧ್ರಿಯನ್ನು ಬಿಟ್ಟು ಬಿಡಿ. ನಮಗೆ ದೊಡ್ಡ ಭಯವು ಪ್ರಾಪ್ತವಾಗಿದೆ.

ತೇಽಥ ದೃಷ್ಟ್ವಾ ತಮಾವಿದ್ಧಂ ಭೀಮಸೇನೇನ ಪಾದಪಮ್ ।
ವಿಮುಚ್ಯ ದ್ರೌಪದೀಂ ತ್ರಸ್ತಾಃ ಪ್ರಾದ್ರವನ್ ನಗರಂ ಪ್ರತಿ ॥೪೧॥

ಅವರು ಭೀಮಸೇನನು ಆ ವೃಕ್ಷವನ್ನು ಕಿತ್ತುದುದನ್ನು ನೋಡಿ ಹೆದರಿ ದ್ರೌಪದಿಯನ್ನು ಬಿಟ್ಟುನಗರದ ಕಡೆಗೆ ಓಡಿದರು.

ದ್ರವತಸ್ತಾಂಶ್ಚ ಸಂಪ್ರೇಕ್ಷ್ಯ ಸ ವಜ್ರೀ ದಾನವಾನಿವ ।
ಶತಂ ಪಂಚಾಧಿಕಂ ಭೀಮಃ ಪ್ರಾಹಿಣೋದ್ ಯಮಸಾದನಮ್ ॥೪೨॥

ಓಡುತ್ತಿರುವ ಅವರನ್ನು ನೋಡಿ ಭೀಮಸೇನನು ಇಂದ್ರನು ದಾನವರನ್ನು ಸಂಹರಿಸಿದಂತೆ ಆ ನೂರೈದು ಮಂದಿ ಸೂತರನ್ನೂ ಯಮಪಟ್ಟಣಕ್ಕೆ ಅಟ್ಟಿದನು.

ವಾಯುವೇಗಸಮಃ ಶ್ರೀಮಾನ್ ಸರ್ವಾನ್ ಸೂತಾನಶೇಷತಃ ।
ತಾನ್ ನಿಹತ್ಯ ಮಹಾಬಾಹುರ್ಭೀಮಸೇನೋ ಮಹಾಬಲಃ ॥೪೩॥

ಆಶ್ವಾಸಯಂಸ್ತತಃ ಕೃಷ್ಣಾಂ ಪ್ರವಿಮುಚ್ಯ ಚ ಬಂಧನಾತ್ ॥೪೪॥

ಉವಾಚ ಚ ಮಹಾಬಾಹುಃ ಪಾಂಚಾಲೀಂ ಭರತರ್ಷಭಃ ।
ಅಶ್ರುಪೂರ್ಣಮುಖೀಂ ಭೀತಾಮ್ ಉದ್ಧರನ್ ಸ ವೃಕೋದರಃ ॥೪೫॥

ವಾಯುವೇಗಸಮನೂ, ಕಾಂತಿಯುಕ್ತನೂ, ಮಹಾಬಲನೂ, ಮಹಾಬಾಹುವೂ ಆದ ಭೀಮಸೇನನು ಎಲ್ಲಾ ಸೂತರನ್ನೂ ನಿಶ್ಶೇಷವಾಗಿ ಸಂಹರಿಸಿ ದ್ರೌಪದಿಯ ಕಟ್ಟುಗಳನ್ನು ಬಿಡಿಸಿ ಅವಳಿಗೆ ಸಮಾಧಾನವನ್ನು ಮಾಡುತ್ತಾ ಕಣ್ಣೀರಿಂದ ತುಂಬಿದ ಮುಖವುಳ್ಳವಳಾಗಿ ಭೀತಳಾಗಿದ್ದ ಪಾಂಚಾಲಿಯನ್ನು ಎತ್ತುತ್ತಾ ಮಹಾಬಾಹುವೂ, ಭರತರ್ಷಭನೂ ಆದ ವೃಕೋದರನು ಮಾತನಾಡಿದನು.

ಏವಂ ತೇ ಭೀರು ವಧ್ಯಂತೇ ಯೇ ತ್ವಾಂ ಹಿಂಸಂತಿ ಮಾನವಾಃ ।
ಗಚ್ಛ ತ್ವಂ ನಗರಂ ಕೃಷ್ಣೇ ನ ಭಯಂ ವಿದ್ಯತೇ ತವ ॥೪೬॥

ದ್ರೌಪದಿಯೇ, ಭೀರುವೇ, ಯಾರು ನಿನಗೆ ಹಿಂಸೆಯನ್ನು ನೀಡುತ್ತಾರೋ ಅಂತಹ ಮನುಷ್ಯರು ಹೀಗೆಯೇ ಕೊಲ್ಲಲ್ಪಡುತ್ತಾರೆ. ನೀನು ನಗರಕ್ಕೆ ಹಿಂದಿರುಗು. ನಿನಗೆ ಯಾವ ಭಯವೂ ಇಲ್ಲ.

ಅನ್ಯೇನ ತ್ವಂ ಪಥಾ ಗಚ್ಛ ಸುದೇಷ್ಣಾಯಾ ನಿವೇಶನಮ್ ।
ಅನ್ಯೇನಾಹಂ ಗಮಿಷ್ಯಾಮಿ ವಿರಾಟಸ್ಯ ಮಹಾನಸಮ್ ॥೪೭॥

ಯಥಾ ನೌ ನಾವಬುದ್ಧ್ಯೇರನ್ ರಾತ್ರಾವೇವಂ ವ್ಯವಸ್ಥಿತೌ ॥೪೮॥

ನಾವಿಬ್ಬರೂ ರಾತ್ರಿಯಲ್ಲಿ ಹೀಗೆ ಒಟ್ಟಿಗೆ ಇರುವುದನ್ನು ಯಾರೂ ತಿಳಿಯದಂತೆ ನೀನು ಬೇರೆ ಮಾರ್ಗದಿಂದ ಸುದೇಷ್ಣೆಯ ಮನೆಗೆ ಹೋಗು. ನಾನು ಬೇರೆಯ ಮಾರ್ಗದಿಂದ ವಿರಾಟನ ಮಹಾನಸಕ್ಕೆ ಹೋಗುವೆನು (ಎಂದು ಹೇಳಿದನು).

ವೈಶಂಪಾಯನಃ

ಸಾऽಗಚ್ಛನ್ನಗರಂ ಕೃಷ್ಣಾ ಭೀಮೇನಾಶ್ವಾಸಿತಾ ಸತೀ ।
ಕೃತಕೃತ್ಯಾ ಸುದೇಷ್ಣಾಯಾ ಭವನಂ ಶುಭಲಕ್ಷಣಾ ॥೪೯॥

ಶಚೀವ ನಹುಷೇ ಶಪ್ತೇ ಪ್ರವಿವೇಶ ತ್ರಿವಿಷ್ಟಪಮ್ ॥೫೦॥

ವೈಶಂಪಾಯನ– ಭೀಮನಿಂದ ಸಮಾಧಾನಪಡಿಸಲ್ಪಟ್ಟ ಪತಿವ್ರತೆಯಾದ ಶುಭಲಕ್ಷಣಗಳನ್ನು ಹೊಂದಿದ್ದ ದ್ರೌಪದಿಯು ಕೃತಕೃತ್ಯಳಾಗಿ ನಗರವನ್ನು ಪ್ರವೇಶಿಸಿ ನಹುಷನು ಶಾಪವನ್ನು ಹೊಂದಿದ ಮೇಲೆ ಶಚಿಯು ಸ್ವರ್ಗವನ್ನು ಪ್ರವೇಶಿಸಿದಂತೆ ಸುದೇಷ್ಣೆಯ ಮನೆಯನ್ನು ಪ್ರವೇಶಿಸಿದಳು.

ಭೀಮೋऽಪ್ಯಮಿತವೀರ್ಯಸ್ತು ಬಲವಾನರಿಮರ್ದನಃ ।
ಸರ್ವಾಂಸ್ತಾನ್ ಕೀಚಕಾನ್ ಹತ್ವಾ ತತ್ರ ಧರ್ಮಾತ್ಮಜಾನುಜಃ ॥೫೧॥

ನಿಃಶೇಷಂ ಕೀಚಕಾನ್ ಕೃತ್ವಾ ರಾಮೋ ರಾತ್ರಿಚರಾನಿವ ।
ಹತಶತ್ರುರಮೇಯಾತ್ಮಾ ಪ್ರವಿವೇಶ ಪುರಂ ತತಃ ॥೫೨॥

ಬಲಿಷ್ಠನೂ, ಅರಿಮರ್ದನನೂ, ಅಪರಿಮಿತವೀರ್ಯನೂ, ಯುಧಿಷ್ಠಿರನ ತಮ್ಮನೂ ಆದ ಭೀಮಸೇನನು ಆ ಎಲ್ಲ ಕೀಚಕರನ್ನೂ ರಾಮನು ರಾಕ್ಷಸರನ್ನು ಕೊಂದಂತೆ ನಿಶ್ಶೇಷವಾಗಿ ಕೊಂದು ಹತಶತ್ರುವಾಗಿ ಅಮೇಯಾತ್ಮನಾದ ಅವನು ಅನಂತರ ಪಟ್ಟಣವನ್ನು ಪ್ರವೇಶಿಸಿದನು.

ಪಂಚಾಧಿಕಂ ಶತಂ ತತ್ರ ನಿಹತಂ ತೇನ ಭಾರತ ।
ಮಹಾವನಮಿವ ಚ್ಛಿನ್ನಂ ಶಿಶ್ಯೇ ವಿಗಲಿತದ್ರುಮಮ್ ॥೫೩॥

ಎಲೈ ಭಾರತನೇ, ಅವನಿಂದ ಕೊಲ್ಲಲ್ಪಟ್ಟ ನೂರೈದು ಮಂದಿ ಕೀಚಕರು ಕಡಿದು ಉರುಳಿಸಿದ ಎಲ್ಲ ಮರಗಳನ್ನುಳ್ಳ ದೊಡ್ಡ ಕಾಡಿನಂತೆ ಕಾಣುತ್ತಿದ್ದರು.

ಏವಂ ತೇ ನಿಹತಾ ರಾಜನ್ ಶತಂ ಪಂಚೋಪಕೀಚಕಾಃ ।
ಸ ಚ ಸೇನಾಪತಿಃ ಸೂತ ಇತ್ಯೇತತ್ ಸೂತಷಟ್‌ಶತಮ್ ॥೫೪॥

ಎಲೈ ರಾಜನೇ, ಹೀಗೆ ನೂರೈದು ಮಂದಿ ಉಪಕೀಚಕರು ಅವನಿಂದ ಹತರಾದರು. ಸೇನಾಪತಿಯಾದ ಕೀಚಕನೂ ಹತನಾದನು. ಹೀಗೆ ಒಟ್ಟು ನೂರಾರು ಮಂದಿ ಹತರಾದರು.

ನ ಗಂಧರ್ವಭಯಾಚ್ಚೇಕುರ್ವಕ್ತುಂ ಕೀಚಕಬಾಂಧವಾಃ ।
ಅಶಕ್ನುವಂತಸ್ತಾಂ ತತ್ರ ಭಯಾದಪ್ಯಭಿವೀಕ್ಷಿತುಮ್ ॥೫೫॥

ಅನಂತರ ಕೀಚಕನ ಬಾಂಧವರು ಗಂಧರ್ವರ ಭಯದಿಂದ ದ್ರೌಪದಿಯ ಜೊತೆಯಲ್ಲಿ ಮಾತನಾಡುವುದಕ್ಕಾಗಲೀ, ಅವಳನ್ನು ನೋಡುವುದಕ್ಕಾಗಲೀ ಹೆದರಿದರು.

ವಿರಾಟನಗರೇ ಚಾಪಿ ಸರ್ವೇ ಮತ್ಸ್ಯಾಃ ಸಮಾಗತಾಃ ।
ಕಲ್ಯಂ ಪಂಚಶತಂ ಚೈತಾನ್ ಅಪಶ್ಯನ್ ಸಾರಥೀನ್ ಹತಾನ್ ॥೫೬॥

ವಿರಾಟನಗರದಲ್ಲಿ ಪ್ರಾತಃಕಾಲದಲ್ಲಿ ಮತ್ಸ್ಯದೇಶದ ಎಲ್ಲ ಜನರೂ ಬಂದು ಈ ನೂರೈದು ಜನ ಸೂತರು ಹತರಾಗಿರುವುದನ್ನು ನೋಡಿದರು.

ತಾನ್ ದೃಷ್ಟ್ವಾ ಮಹದಾಶ್ಚರ್ಯಂ ನರಾ ನಾರ್ಯಶ್ಚ ನಾಗರಾಃ ।
ವಿಸ್ಮಯಂ ಪರಮಂ ಗತ್ವಾ ನೋಚುಃ ಕಿಂಚನ ಭಾರತ ॥೫೭॥

ಎಲೈ ಭಾರತನೇ, ಈ ದೊಡ್ಡ ಆಶ್ಚರ್ಯಕರವಾದ ದೃಶ್ಯವನ್ನು ನೋಡಿ ನಗರವಾಸಿಗಳಾದ ನರ-ನಾರಿಯರು ಬಹಳ ವಿಸ್ಮಯವನ್ನು ಹೊಂದಿದರು. ಆದರೆ ಯಾರೂ ಏನೂ ಮಾತನಾಡಲಿಲ್ಲ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಷಡ್‌ವಿಂಶೋಽಧ್ಯಾಯಃ ॥೨೬॥

॥ ಕೀಚಕವಧಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಗಂಧರ್ವ ಇತ್ಯೇವ ನಿಹತ್ಯ ಸರ್ವಾನ್
ಮುಮೋದ ಭೀಮೋ ದ್ರೌಪದೀ ಚಾಥ ಕೃಷ್ಣಾಮ್ ।
ಯಾಹೀತ್ಯೂಚೇ ಸುದೇಷ್ಣಾ ಭಯೇನ
ತ್ರಯೋದಶಾಹಂ ಪಾಲಯೇತ್ಯಾಹ ತಾಂ ಸಾ ॥೩೦॥

ಭೀಮ ತನ್ನನ್ನು ಗಂಧರ್ವನೆಂದು ಹೇಳಿಕೊಂಡು ಎಲ್ಲ ಕೀಚಕರನ್ನೂ ಕೊಂದು ಆನಂದಿಸಿದ. ದ್ರೌಪದಿಯೂ ಸಂತೋಷಗೊಂಡಳು. ಬಳಿಕ ಸುದೇಷ್ಣೆ ಭಯದಿಂದ 'ಹೋಗು!' ಎಂದಳು. 'ಹದಿಮೂರು ದಿನಗಳ ಕಾಲ ಮಾತ್ರ ತಾಳು' ಎಂದಳು ದ್ರೌಪದಿ. ಸುದೇಷ್ಣೆ ಭಯದಿಂದ ಆಗಲಿ ಎಂದಳು. ಪಾಂಡವರು ಹೀಗೆ ಪೂರ್ಣ ಒಂದು ವರ್ಷ ವಿರಾಟನಗರದಲ್ಲಿ ಅಜ್ಞಾತವಾಸ ಪೂರೈಸಿದರು.

★ ★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ಸುದೇಷ್ಣೆಯು ನಗರದಿಂದ ಹೊರಗೆ ಹೋಗುವಂತೆ ಹೇಳಿದಾಗ ಹದಿಮೂರು ದಿವಸ ಅವಕಾಶ ಕೊಡುವಂತೆ ದ್ರೌಪದಿಯ ಪ್ರಾರ್ಥನೆ

ವೈಶಂಪಾಯನಃ

ತೇ ದೃಷ್ಟ್ವಾ ನಿಹತಾನ್ ಸೂತಾನ್ ಗತ್ವಾ ರಾಜ್ಞೇ ನ್ಯವೇದಯನ್ ।
ಗಂಧರ್ವೈರ್ನಿಹತಾ ರಾಜನ್ ಸೂತಾಃ ಪಂಚಾಧಿಕಾಃ ಶತಾಃ ॥೧॥

ವೈಶಂಪಾಯನ– ಆ ಪೌರರು ಗಂಧರ್ವರಿಂದ ನಿಹತರಾದ ಸೂತರನ್ನು ನೋಡಿ ರಾಜನನ್ನು ಸಮೀಪಿಸಿ ರಾಜನೇ, ನೂರೈದು ಜನ ಸೂತರು ಗಂಧರ್ವರಿಂದ ನಿಹತರಾಗಿದ್ದಾರೆ ಎಂದು ಹೇಳಿದರು.

ಪೌರಾಃ

ಯಥಾ ವಜ್ರೇಣ ವೈ ಭಿನ್ನಂ ಪರ್ವತಸ್ಯ ಮಹಚ್ಛಿರಃ ।
ವಿನಕೀರ್ಣಾಃ ಪ್ರದೃಶ್ಯಂತೇ ತಥಾ ಸೂತಾ ಮಹೀತಳೇ ॥೨॥

ಪೌರರು– ಹೇಗೆ ಪರ್ವತದ ದೊಡ್ಡ ಶಿಖರವು ವಜ್ರಾಯುಧದಿಂದ ಭಿನ್ನವಾಗಿ ಭೂಮಿಯಲ್ಲಿ ಬೆಲ್ಲಾಡಲ್ಪಡುತ್ತದೆಯೋ ಅದರಂತೆ ಸೂತರು ಭೂಮಿಯ ಮೇಲೆ ಕಾಣುತ್ತಿದ್ದಾರೆ.

ಸೈರಂಧ್ರೀ ಚಾಪಿ ಮುಕ್ತಾ ಸಾ ಪುನರಾಯಾತಿ ತೇ ಗೃಹಮ್ ।
ಸರ್ವಂ ಸಂಶಯಿತಂ ರಾಜನ್ ನಗರಂ ತೇ ಭವಿಷ್ಯತಿ ॥೩॥

ಸೈರಂಧ್ರಿಯೂ ಸಹ ಬಿಡುಗಡೆಯನ್ನು ಹೊಂದಿ ನಿನ್ನ ಮನೆಗೆ ಪುನಃ ಬರುತ್ತಿದ್ದಾಳೆ. ರಾಜನೇ, ನಿನ್ನ ನಗರವೆಲ್ಲವೂ ಸಂಶಯದಿಂದ ಕೂಡಿದುದಾಗಿದೆ.

ತಥಾರೂಪಾ ಚ ಸೈರಂಧ್ರೀ ಗಂಧರ್ವಾಶ್ಚ ಮಹಾಬಲಾಃ ।
ಪುಂಸಾಮಿಷ್ಟಶ್ಚ ವಿಷಯೋ ಮೈಥುನಾಯ ನ ಸಂಶಯಃ ॥೪॥

ಸೈರಂಧ್ರಿಯಾದರೂ ಅಂತಹ ದಿವ್ಯರೂಪವುಳ್ಳವಳು. ಗಂಧರ್ವರೂ ಸಹ ಮಹಾಬಲಿಷ್ಠರಾದವರು. ಮೈಥುನವು ಎಲ್ಲ ಪುರುಷರಿಗೂ ಇಷ್ಟವಾದ ವಿಷಯ. ಇದರಲ್ಲಿ ಸಂಶಯವಿಲ್ಲ.

ಯಥಾ ಸೈರಂಧ್ರಿವೇಷೇಣ ನೇದಂ ರಾಜನ್ ಪುರಂ ತವ ।
ವಿನಾಶಮೇತಿ ವೈ ಕ್ಷಿಪ್ರಂ ತಥಾ ನೀತಿರ್ವಿಧೀಯತಾಮ್ ॥೫॥

ರಾಜನೇ, ಸೈರಂಧ್ರಿಯ ವೇಷದಿಂದ ಈ ನಿನ್ನ ಪಟ್ಟಣವು ನಾಶವಾಗದಂತೆ ಶೀಘ್ರವಾಗಿ ಏನಾದರೂ ನೀತಿಯನ್ನು ರೂಪಿಸು.

ವೈಶಂಪಾಯನಃ

ತೇಷಾಂ ತದ್ವಚನಂ ಶ್ರುತ್ವಾ ವಿರಾಟೋ ವಾಹಿನೀಪತಿಃ ।
ಅಬ್ರವೀತ್ ಕ್ರಿಯತಾಮೇಷಾಂ ಸೂತಾನಾಂ ಚರಮಕ್ರಿಯಾ ॥೬॥

ವೈಶಂಪಾಯನ– ಅವರ ಆ ಮಾತನ್ನು ಕೇಳಿದ ವಿರಾಟರಾಜನು ಈ ಸೂತರಿಗೆ ಉತ್ತರಕ್ರಿಯೆಯನ್ನು ಮಾಡಿ ಎಂದು ಹೇಳಿದನು.

ಏಕಸ್ಮಿನ್ನೇವ ತೇ ಸರ್ವೇ ಸುಸಮಿದ್ಧೇ ಹುತಾಶನೇ ।
ದಹ್ಯಂತಾಂ ಕೀಚಕಾಃ ಸರ್ವೇ ಸರ್ವಗಂಧೈಶ್ಚ ಸರ್ವಶಃ ॥೭॥

ಈ ಎಲ್ಲ ಸೂತರು ಸಮಿದ್ಧವಾದ ಒಂದೇ ಅಗ್ನಿಯಲ್ಲಿ ಎಲ್ಲ ಗಂಧಗಳ ಜೊತೆಯಲ್ಲಿ ದಹಿಸಲ್ಪಡಲಿ (ಎಂದು ಹೇಳಿದನು).

ಸುದೇಷ್ಣಾಂ ಚಾಬ್ರವೀದ್ ರಾಜಾ ಮಹಿಷೀಂ ಜಾತಸಾಧ್ವಸಃ ॥೮॥

ಸೈರಂಧ್ರೀಮಾಗತಾಂ ಬ್ರೂಯಾ ಮಮೈವ ವಚನಾದಿಹ ।
ಗಚ್ಛ ಸೈರಂಧ್ರಿ ಭದ್ರಂ ತೇ ಯಥಾಕಾಮಂ ವರಾನನೇ ॥೯॥

ಬಿಭೇತಿ ರಾಜಾ ಸುಶ್ರೋಣಿ ಗಂಧರ್ವೇಭ್ಯಃ ಪರಾಭವಾತ್ ॥೧೦॥

ಹೆದರಿಕೆ ಉಂಟಾದ ರಾಜನು ರಾಣಿಯಾದ ಸುದೇಷ್ಣೆಯನ್ನು ಕುರಿತು ಸೈರಂಧ್ರಿಯು ಬಂದ ಮೇಲೆ ನನ್ನ ಮಾತಿನಂತೆ ಅವಳಿಗೆ ಸೈರಂಧ್ರಿಯೇ, ಸುಂದರಿಯೇ, ನಿನಗೆ ಇಷ್ಟಬಂದ ಕಡೆಗೆ ಹೋಗು. ಸುಂದರಿಯೇ, ಗಂಧರ್ವರಿಂದ ಎಲ್ಲಿ ತನಗೆ ಪರಾಭವವುಂಟಾಗುವುದೋ ಎಂದು ರಾಜನು ಹೆದರಿದ್ದಾನೆ ಎಂದು ಹೇಳು.

ನ ಹಿ ತಾಮುತ್ಸಹೇ ವಕ್ತುಂ ಸ್ವಯಂ ಗಂಧರ್ವರಕ್ಷಿತಾಮ್ ।
ಸ್ತ್ರಿಯಾಸ್ತ್ವದೋಷಸ್ತಾಂ ವಕ್ತುಮತಸ್ತ್ವಾಂ ಪ್ರಬ್ರವೀಮ್ಯಹಮ್ ॥೧೧॥

ಗಂಧರ್ವರಿಂದ ರಕ್ಷಿತವಾದ ಅವರಿಗೆ ನಾನೇ ಸ್ವತಃ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ನೀನು ಸ್ತ್ರೀಯಾದ್ದರಿಂದ ಮಾತನಾಡಿದರೆ ದೋಷವಿಲ್ಲ. ಆದ್ದರಿಂದ ನಿನಗೆ ನಾನು ಹೇಳುತ್ತಿದ್ದೇನೆ (ಎಂದು ಹೇಳಿದನು).

ಅಥ ಮುಕ್ತಾ ಭಯಾತ್ ಕೃಷ್ಣಾ ಸೂತಪುತ್ರಾನ್ ನಿರಸ್ಯ ತು ।
ಮೋಕ್ಷಿತಾ ಭೀಮಸೇನೇನ ಜಗಾಮ ನಗರಂ ಪ್ರತಿ ॥೧೨॥

ಅತ್ತಕಡೆ ಭಯದಿಂದ ಮುಕ್ತಳಾದ ದ್ರೌಪದಿಯು ಭೀಮಸೇನನಿಂದ ಬಿಡುಗಡೆಯನ್ನು ಹೊಂದಿ ಸೂತಪುತ್ರರನ್ನು ಬಿಟ್ಟು ನಗರಕ್ಕೆ ಬಂದಳು.

ತ್ರಾಸಿತೇವ ಮೃಗೀ ಬಾಲಾ ಶಾರ್ದೂಲೇನ ಮನಸ್ವಿನೀ ।
ಗಾತ್ರಾಣಿ ವಾಸಸೀ ಚೈವ ಪ್ರಕ್ಷಾಲ್ಯ ಪ್ರವಿವೇಶ ಹ ॥೧೩॥

ಮಾನವತಿಯಾದ ಅವಳು ಹುಲಿಗೆ ಹೆದರಿದ ಹೆಣ್ಣುಜಿಂಕೆಯಂತೆ ನಗರವನ್ನು ಪ್ರವೇಶಿಸಿ ತನ್ನ ದೇಹವನ್ನು ಮತ್ತು ವಸ್ತ್ರಗಳನ್ನು ಪ್ರಕ್ಷಾಲನೆ ಮಾಡಿಕೊಂಡಳು.

ತಾಂ ದೃಷ್ಟ್ವಾ ಪುರುಷಾ ರಾಜನ್ ಪ್ರಾದ್ರವಂತಿ ದಿಶೋ ದಶ ।
ಗಂಧರ್ವಾಣಾಂ ಭಯತ್ರಸ್ತಾಃ ಕೇಚಿದ್ ದೃಷ್ಟ್ವೀ ನ್ಯಮೀಲಯನ್ ॥೧೪॥

ಎಲೈ ರಾಜನೇ, ಅವಳನ್ನು ನೋಡಿದ ಪುರುಷರು ಗಂಧರ್ವರ ಭಯದಿಂದ ನಡುಗುತ್ತಾ ದಿಕ್ಕುದಿಕ್ಕುಗಳಿಗೆ ಓಡಿದರು. ಇನ್ನು ಕೆಲವರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು.

ತತೋ ಮಹಾನಸದ್ವಾರೇ ಭೀಮಸೇನಮವಸ್ಥಿತಮ್ ।
ದದರ್ಶ ರಾಜನ್ ಪಾಂಚಾಲೀ ಯಥಾ ಮತ್ತಂ ಮಹಾದ್ವಿಪಮ್ ॥೧೫॥

ಅನಂತರ ಪಾಂಚಾಲಿಯು ಮಹಾನಸದ ದ್ವಾರದಲ್ಲಿ ಮದಿಸಿದ ಮಹಾಗಜದಂತೆ ಇದ್ದ ಭೀಮಸೇನನನ್ನು ನೋಡಿದಳು.

ಸಾಪಹಾಸಂ ತು ಶನಕೈಃ ಸಂಜ್ಞಾಭಿರಿದಮಬ್ರವೀತ್ ॥೧೬॥

ನಮೋ ಗಂಧರ್ವರಾಜಾಯ ಯೇನಾಸ್ಮಿ ಪರಿಮೋಚಿತಾ ।
ಕೀಚಕೇಭ್ಯೋ ವಿನಿರ್ಧೂತಾಮನಾಥಾಂ ವಸತೀಂ ಗೃಹೇ ॥೧೭॥

ಯೋ ಮಾಂ ರಕ್ಷತಿ ಸಂತ್ರಸ್ತಾಂ ಗಂಧರ್ವಾಯ ನಮೋಽಸ್ತು ತೇ ।೧೮॥

ಅವಳು ಸಂತೋಷದಿಂದ ಕೂಡಿದ ಹಾಸ್ಯದಿಂದ ತನ್ನ ಸಂಜ್ಞೆಗಳ ಜೊತೆಯಲ್ಲಿ ಈ ಮಾತನ್ನು ಆಡಿದಳು. ಅನಾಥಳಾಗಿ ನಿರ್ದುಷ್ಟಳಾಗಿ ಮನೆಯಲ್ಲಿ ವಾಸಮಾಡುವ ನನ್ನನ್ನು ಕೀಚಕರಿಂದ ಬಿಡುಗಡೆಗೊಳಿಸಿದ ಗಂಧರ್ವರಾಜನಿಗೆ ನಮಸ್ಕಾರ. ಹೆದರಿದ ನನ್ನನ್ನು ರಕ್ಷಣೆ ಮಾಡುವ ಗಂಧರ್ವನಾದ ನಿನಗೆ ನಮಸ್ಕಾರ (ಎಂದು ಹೇಳಿದಳು).

ಭೀಮಃ

ಯೇ ಪುರಾ ಪುರುಷಾಸ್ತುಭ್ಯಂ ಭವಂತಿ ವಶವರ್ತಿನಃ ।
ತೇಷಾಂ ವಶಗತಾ ನಿತ್ಯಂ ವಿಚರ ತ್ವಂ ಯಥೇಷ್ಟತಃ ॥೧೯॥

ಭೀಮ– ಯಾವ ಪುರುಷರು ನಿನಗೆ ಹಿಂದೆ ವಶವಾಗಿದ್ದರೋ ಅಂತಹ ಪುರುಷರ ವಶಳಾಗಿ ನೀನು ಯಾವಾಗಲೂ ನಿಶ್ಶಂಕೆಯಿಂದ ಸಂಚರಿಸುವವಳಾಗು.

ಯೇ ಯಸ್ಯಾ ವಿಚರಂತೀಹ ಪುರುಷಾ ವಶವರ್ತಿನಃ ।
ತಸ್ಯಾಸ್ತೇ ವಚನಂ ಶ್ರುತ್ವಾ ಹ್ಯನೃಣಾ ವಿಹರಂತ್ಯುತ ॥೨೦॥

ಯಾವ ಪುರುಷರು ಯಾವಳ ವಶವರ್ತಿಗಳಾಗಿ ಸಂಚರಿಸುತ್ತಾರೆಯೋ ಅವರು ಅಂತಹ ನಿನ್ನ ಮಾತನ್ನು ಕೇಳಿ ಋಣಮುಕ್ತರಾಗಿ ವಿಹರಿಸುತ್ತಾರೆ.

ವೈಶಂಪಾಯನಃ

ತಯೋಸ್ತದ್ವಚನಂ ಶ್ರುತ್ವಾ ಜಜ್ಞಿರೇ ನೇತರೇ ಜನಾಃ ।
ತತಃ ಪಾಂಚಾಲರಾಜಸ್ಯ ಸುತಾ ಚಾಪಿ ಜಗಾಮ ಹ ॥೨೧॥

ವೈಶಂಪಾಯನ– ಅವರ ಆ ಮಾತುಗಳನ್ನು ಕೇಳಿದ ಯಾರಿಗೂ ಆ ಮಾತುಗಳು ಅರ್ಥವಾಗಲಿಲ್ಲ. ಅನಂತರ ಪಾಂಚಾಲರಾಜಕುಮಾರಿಯೂ ಸಹ ಅಲ್ಲಿಂದ ಹೊರಟಳು.

ತತಃ ಸಾ ನರ್ತನಾಗಾರೇ ಧನಂಜಯಮಪಶ್ಯತ ।
ರಾಜ್ಞಃ ಕನ್ಯಾ ವಿರಾಟಸ್ಯ ನರ್ತಯಾನಂ ಮಹಾಭುಜಮ್ ॥೨೨॥

ಅನಂತರ ಅವಳು ನರ್ತನಾಗಾರದಲ್ಲಿ ರಾಜಕನ್ಯೆಯರಿಗೆ ನರ್ತನವನ್ನು ಕಲಿಸುತ್ತಿದ್ದ ಮಹಾಭುಜನಾದ ಧನಂಜಯನನ್ನು ನೋಡಿದಳು.

ತತಸ್ತಾಂ ನರ್ತನಾಗಾರಾದ್ ವಿನಿಷ್ಕ್ರಮ್ಯ ಸಭಾಜನಾಃ ।
ಕನ್ಯಾ ದದೃಶುರಾಯಾಂತೀಂ ಕೃಷ್ಣಾಂ ಕ್ಲಿಷ್ಟಾಮನಾಗಸೀಮ್ ॥೨೩॥

ಆಗ ನರ್ತನಾಗಾರದಲ್ಲಿದ್ದ ಕನ್ಯೆಯರು ಅವಳಿಗೆ ಸಂತೋಷವನ್ನುಂಟು ಮಾಡುವವರಾಗಿ ಹೊರಗೆ ಬಂದು ನಿರಪರಾಧಿಯಾದ, ಕ್ಲೇಶಕ್ಕೆ ಒಳಗಾದ ದ್ರೌಪದಿಯು ಬರುತ್ತಿರುವುದನ್ನು ನೋಡಿದರು.

ಕನ್ಯಾಃ

ದಿಷ್ಟ್ಯಾ ಸೈರಂಧ್ರಿ ಮುಕ್ತಾऽಸಿ ದಿಷ್ಟ್ಯಾऽಸಿ ಪುನರಾಗತಾ ।
ದಿಷ್ಟ್ಯಾ ಚ ನಿಹತಾಃ ಸೂತಾ ಯೇ ತ್ವಾಂ ಕ್ಲಿಷ್ಯಂತ್ಯನಾಗಸೀಮ್ ॥೨೪॥

ಕನ್ಯೆಯರು– ಸೈರಂಧ್ರಿಯೇ, ದೇವರ ದಯೆಯಿಂದ ಮುಕ್ತಳಾಗಿದ್ದೀಯೆ. ದೇವರ ದಯದಿಂದಲೇ ಹಿಂದೆ ಬರುತ್ತಿದ್ದೀಯೆ. ದೇವರ ದಯದಿಂದ ನಿರಪರಾಧಿಯಾದ ನಿನಗೆ ಕ್ಲೇಶವನ್ನು ಕೊಡುತ್ತಿದ್ದ ಸೂತರೆಲ್ಲರೂ ಹತರಾಗಿದ್ದಾರೆ.

ಬೃಹನ್ನಳಾ

ಕಥಂ ಸೈರಂಧ್ರಿ ಮುಕ್ತಾऽಸಿ ಕಥಂ ಪಾಪಾಶ್ಚ ತೇ ಹತಾಃ ।
ಇಚ್ಛಾಮಿ ತೇ ಕಥಾಂ ಶ್ರೋತುಂ ಕಥಯಸ್ವ ಯಥಾತಥಮ್ ॥೨೫॥

ಬೃಹನ್ನಳಾ– ಸೈರಂಧ್ರಿಯೇ, ನೀನು ಹೇಗೆ ಮುಕ್ತಳಾದೆ? ಹೇಗೆ ಆ ಪಾಪಿಗಳು ಹತರಾದರು? ನಿನ್ನ ಕಥೆಯನ್ನು ಸರಿಯಾಗಿ ಕೇಳಲು ಬಯಸುತ್ತೇನೆ. ಅದನ್ನು ಹೇಳು.

ಸೈರಂಧ್ರೀ

ಬೃಹನ್ನಳೇ ಕಿಂ ನು ತವ ಸೈರಂಧ್ರ್ಯಾ ಕಾರ್ಯಮದ್ಯ ವೈ ।
ಯಾ ತ್ವಂ ವಸಸಿ ಕಲ್ಯಾಣಿ ಸದಾ ಕನ್ಯಾಪುರೇ ಸುಖಮ್ ॥೨೬॥

ನ ಹಿ ತದ್ ದುಃಖಮಾಪ್ನೋಷಿ ಸೈರಂಧ್ರೀ ಯದ್ ದುಃಖಮಾಪ್ನುತೇ ।
ತೇನ ಮಾಂ ದುಃಖಿತಾಮೇವಂ ಪೃಚ್ಛನೇ ಪ್ರಹಸನ್ನಿವ ॥೨೭॥

ಸೈರಂಧ್ರೀ– ಬೃಹನ್ನಳೆಯೇ, ಕಲ್ಯಾಣಿಯೇ, ಕನ್ಯಾಂತಃಪುರದಲ್ಲಿ ಸುಖವಾಗಿ ವಾಸಿಸುವ ನಿನಗೆ ಈ ದಿನ ಸೈರಂಧ್ರಿಯಿಂದ ಏನು ಆಗಬೇಕಾಗಿದೆ? ಸೈರಂಧ್ರಿಯು ಯಾವ ದುಃಖವನ್ನು ಅನುಭವಿಸುತ್ತಾಳೆಯೋ ಅಂತಹ ದುಃಖವು ನಿನಗೆ ಬರುವುದಿಲ್ಲ. ಆದ್ದರಿಂದ ನೀನು ದುಃಖಿತಳಾದ ನನ್ನನ್ನು ನಗುತ್ತಾ ಹೀಗೆ ಪ್ರಶ್ನೆ ಮಾಡುತ್ತಿದ್ದೀಯೆ.

ಬೃಹನ್ನಳಾ

ಬೃಹನ್ನಳಾऽಪಿ ಕಲ್ಯಾಣೀ ದುಃಖಮಾಪ್ನೋತ್ಯನಂತಕಮ್ ।
ತಿರ್ಯಗ್ಯೋನಿಂ ಗತಾಂ ಬಾಲೇ ನ ಚೈನಾಮವಬುದ್ಧ್ಯಸೇ ॥೨೮॥

ಬೃಹನ್ನಳಾ– ಕಲ್ಯಾಣಿಯೇ, ಬೃಹನ್ನಳೆಯೂ ಕೂಡ ಅಪಾರವಾದ ದುಃಖವನ್ನು ಅನುಭವಿಸುತ್ತಾಳೆ. ನೀಚಯೋನಿಯನ್ನು ಪಡೆದಂತೆ ಇರುವ ಅವಳನ್ನು ಎಲೌ ಬಾಲೆಯೇ, ನೀನು ತಿಳಿಯುತ್ತಿಲ್ಲ.

ವೈಶಂಪಾಯನಃ

ತತಃ ಸಹೈವ ಕನ್ಯಾಭಿರ್ದ್ರೌಪದೀ ರಾಜವೇಶ್ಮ ತತ್ ।
ಪ್ರವಿವೇಶ ಸುದೇಷ್ಣಾಯಾಃ ಸಮೀಪಮುಪಗಾಮಿನೀ ॥೨೯॥

ತಾಮಬ್ರವೀದ್ ರಾಜಪತ್ನೀ ವಿರಾಟವಚನಾದಿದಮ್ ॥೩೦॥

ವೈಶಂಪಾಯನ– ಅನಂತರ ಕನ್ಯೆಯರ ಜೊತೆಯಲ್ಲಿಯೇ ದ್ರೌಪದಿಯು ರಾಜನ ಅರಮನೆಯನ್ನು ಪ್ರವೇಶಿಸಿ ಸುದೇಷ್ಣೆಯ ಸಮೀಪಕ್ಕೆ ಹೋದಳು. ರಾಜಪತ್ನಿಯು ವಿರಾಟನ ವಚನದಂತೆ ಅವಳನ್ನು ಕುರಿತು ಮಾತನಾಡಿದಳು.

ಸೈರಂಧ್ರಿ ಗಮ್ಯತಾಂ ಶೀಘ್ರಂ ಯತ್ರ ಕಾಮಯಸೇ ಗತಿಮ್ ।
ರಾಜಾ ಬಿಭೇತಿ ಸೈರಂಧ್ರಿ ಗಂಧರ್ವೇಭ್ಯಃ ಪರಾಭವಾತ್ ॥೩೧॥

ಸೈರಂಧ್ರಿಯೇ, ಶೀಘ್ರವಾಗಿ ನಿನಗೆ ಇಷ್ಟಬಂದ ಕಡೆಗೆ ಹೊರಟು ಹೋಗು. ಸೈರಂಧ್ರಿಯೇ, ಗಂಧರ್ವರಿಂದ ಎಲ್ಲಿ ಪರಾಭವ ಉಂಟಾಗುವುದೋ ಎಂದು ರಾಜನು ಹೆದರುತ್ತಾನೆ.

ತ್ವಂ ಚಾಪಿ ತರುಣೀ ಸುಭ್ರೂ ರೂಪೇಣಾಪ್ರತಿಮಾ ಭುವಿ ।
ಚಿತ್ತಾನಿ ಚ ನೃಣಾಂ ಶುಭ್ರೇ ರಕ್ತಾನಿ ಸ್ವರ್ಜಿತೇ ಸುಖೇ ॥೩೨॥

ಒಳ್ಳೆಯ ಹುಬ್ಬುಳ್ಳವಳೇ, ನೀನಾದರೂ ತರುಣಿ ಮತ್ತು ಸೌಂದರ್ಯದಿಂದ ಭೂಮಿಯಲ್ಲಿ ಅಸದೃಶಳಾದವಳು. ಶುಭ್ರಳಾದವಳೇ, ಪುರುಷರ ಮನಸ್ಸಾದರೂ ಸ್ವರ್ಗಜನ್ಯಸುಖದಲ್ಲಿ ಆಸಕ್ತವಾಗಿರುತ್ತದೆ.

ತಸ್ಮಾತ್ ತ್ವತ್ತೋ ಭಯಂ ಮಹ್ಯಂ ರಾಷ್ಟ್ರಸ್ಯ ನಗರಸ್ಯ ಚ ।
ಗಚ್ಛಾದ್ಯೈವ ಯಥೇಷ್ಟಂ ತ್ವಂ ನಗರಾದ್ ಯತ್ರ ರಂಸ್ಯಸೇ ॥೩೩॥

ಆದ್ದರಿಂದ ನಿನ್ನಿಂದ ನನಗೂ, ನನ್ನ ನಗರಕ್ಕೂ, ರಾಷ್ಟ್ರಕ್ಕೂ ಭಯವುಂಟಾಗಿದೆ. ಆದ್ದರಿಂದ ಈ ದಿನವೇ ನಿನಗೆ ಸಂತೋಷಬಂದ ಕಡೆಗೆ ನಗರದಿಂದ ಹೊರಟುಹೋಗು.

ತ್ವನ್ನಿಮಿತ್ತೇ ಶುಭೇ ಮಹ್ಯಂ ಸರ್ವೋ ಬಂಧುಜನೋ ಹತಃ ।
ನೃಶಂಸಾ ಖಲು ತೇ ಬುದ್ಧಿರ್ಭರ್ತೄಣಾಂ ಮೇ ಕೃತೋ ವಧಃ ॥೩೪॥

ಶುಭಳಾದವಳೇ, ನಿನ್ನ ನಿಮಿತ್ತದಿಂದಾಗಿ ನನ್ನ ಬಂಧುಗಳು ಹತರಾದರು. ನಿನ್ನ ಬುದ್ಧಿಯು ಕ್ರೂರವಾದುದು. ಅದರಿಂದ ನನ್ನ ಸಹೋದರರಿಗೆ ಮರಣವುಂಟಾಯಿತು.

ತಸ್ಮಾದ್ ಗಂಧರ್ವರಾಜೇಭ್ಯೋ ಭಯಮತ್ರ ಪ್ರವರ್ತತೇ ।
ಯಥೇಷ್ಟಂ ಗಚ್ಛ ಸೈರಂಧ್ರಿ ಇಹ ಸ್ಪಷ್ಟಿ ಯಥಾ ಭವೇತ್ ॥೩೫॥

ಆದ್ದರಿಂದ ಗಂಧರ್ವರಾಜರಿಂದ ಇಲ್ಲಿ ಎಲ್ಲಾ ಕಡೆಯಲ್ಲಿಯೂ ಭಯವು ಹರಡಿದೆ. ಆದ್ದರಿಂದ ಸೈರಂಧ್ರಿಯೇ, ಇಲ್ಲಿ ಕ್ಷೇಮವಾಗುವಂತೆ ನಿನಗೆ ಇಷ್ಟಬಂದಕಡೆಗೆ ಹೊರಟು ಹೋಗು.

ವೈಶಂಪಾಯನಃ

ಸುದೇಷ್ಣಾವಚನಂ ಶ್ರುತ್ವಾ ಸೈರಂಧ್ರೀ ಚೇದಮಬ್ರವೀತ್ ॥೩೬॥

ವೈಶಂಪಾಯನ– ಸುದೇಷ್ಣೆಯ ಮಾತುಗಳನ್ನು ಕೇಳಿ ಸೈರಂಧ್ರಿಯು ಹೀಗೆ ಹೇಳಿದಳು.

ತ್ರಯೋದಶಾಹಮಾತ್ರಂ ತು ರಾಜಾ ಕ್ಷಾಮ್ಯತು ಭಾಮಿನಿ ।
ಕೃತಕೃತ್ಯಾ ಭವಿಷ್ಯಂತಿ ಗಂಧರ್ವಾಸ್ತೇ ನ ಸಂಶಯಃ ॥೩೭॥

ತತೋ ಮಾಮುಪನೇಷ್ಯಂತಿ ಕರಿಷ್ಯಂತಿ ತವ ಪ್ರಿಯಮ್ ।
ಧ್ರುವಂ ಚ ಶ್ರೇಯಸಾ ರಾಜಾ ಯೋಕ್ಷ್ಯತೇ ಸಹ ಬಾಂಧವೈಃ ॥೩೮॥

ಭಾಮಿನಿಯೇ, ಇನ್ನು ಹದಿಮೂರು ದಿವಸಗಳು ಮಾತ್ರ ರಾಜನು ಸಹಿಸಿಕೊಳ್ಳಲಿ. ಆಗ ಗಂಧರ್ವರು ಕೃತಕೃತ್ಯರಾಗುವರು. ಇದರಲ್ಲಿ ಸಂಶಯವಿಲ್ಲ. ಅನಂತರ ಅವರು ನನ್ನನ್ನು ಕರೆದುಕೊಂಡು ಹೋಗುವರು. ನಿನಗೆ ಹಿತವನ್ನೂ ಮಾಡುವರು. ರಾಜನೂ ಮತ್ತು ಬಾಂಧವರು ನಿಶ್ಚಿತವಾಗಿ ಶ್ರೇಯಸ್ಸನ್ನು ಹೊಂದುವರು.

ರಾಜ್ಞಾ ಕೃತೋಪಕಾರಾಸ್ತು ಕೃತಜ್ಞಾಸ್ತು ಸದಾ ಶುಭೇ ।
ಸಾಧವಶ್ಚ ಬಲೋತ್ಸಿಕ್ತಾಃ ಕೃತಪ್ರತಿಕೃತೇಪ್ಸವಃ ॥೩೯॥

ಶುಭಳಾದವಳೇ, ಗಂಧರ್ವರು ಸಾಧುಗಳು, ಬಲದಿಂದ ಹೆಮ್ಮೆ ಪಡುವವರು, ಪಡೆದ ಉಪಕಾರಕ್ಕೆ ಪ್ರತಿಯಾಗಿ ಉಪಕಾರವನ್ನು ಮಾಡುವವರು. ರಾಜನು ಮಾಡಿರುವ ಉಪಕಾರಕ್ಕಾಗಿ ಅವರು ಯಾವಾಗಲೂ ಕೃತಜ್ಞರಾಗಿರುತ್ತಾರೆ.

ಅರ್ಥಿನೀ ಮಾಂ ಬ್ರವೀತ್ಯೇಷಾ ಯದ್ವಾ ತದ್ವೇತಿ ಚಿಂತಯ ।
ಭರಸ್ವ ತದಹರ್ಮಾತ್ರಂ ತತಃ ಶ್ರೇಯೋ ಭವಿಷ್ಯತಿ ॥೪೦॥

ತನ್ನ ಕಾರ್ಯದ ಸಲುವಾಗಿ ನನ್ನನ್ನು ಕುರಿತು ಏನೇನನ್ನೋ ಮಾತನಾಡುತ್ತಿದ್ದಾಳೆ ಎಂದು ಚಿಂತಿಸಬೇಡ. ಅಷ್ಟು ದಿವಸಗಳ ಕಾಲ ಮಾತ್ರ ನನ್ನನ್ನು ಪೋಷಿಸು. ಅನಂತರ ನಿನಗೆ ಶ್ರೇಯಸ್ಸು ಉಂಟಾಗುವುದು.

ವೈಶಂಪಾಯನಃ

ತಸ್ಯಾಸ್ತದ್ವಚನಂ ಶ್ರುತ್ವಾ ಕೈಕೇಯೀ ದುಃಖಮೋಹಿತಾ ।
ಉವಾಚ ದ್ರೌಪದೀಮಾರ್ತಾ ಭ್ರಾತೃವ್ಯಸನಕರ್ಶಿತಾ ॥೪೧॥

ವಸ ಭದ್ರೇ ಯಥೇಷ್ಟಂ ತ್ವಂ ತ್ವಾಮಹಂ ಶರಣಂ ಗತಾ ।
ತ್ರಾಯಸ್ವ ಮಮ ಭರ್ತಾರಂ ಪುತ್ರಾಂಶ್ಚೈವ ವಿಶೇಷತಃ ॥೪೨॥

ವೈಶಂಪಾಯನ– ಅವಳ ಆ ಮಾತುಗಳನ್ನು ಕೇಳಿ ದುಃಖಮೋಹಿತಳೂ, ಸಹೋದರರ ಮರಣದ ಶೋಕದಿಂದ ಕರ್ಶಿತಳೂ ಆದ ಆರ್ತಳಾದ ಸುದೇಷ್ಣೆಯು ದ್ರೌಪದಿಯನ್ನು ಕುರಿತು, ನಿನಗೆ ಇಷ್ಟಬಂದಂತೆ ವಾಸ ಮಾಡು. ನಾನು ನಿನಗೆ ಶರಣಾಗತಳಾಗಿದ್ದೇನೆ. ನನ್ನ ಪತಿಯನ್ನು ಮತ್ತು ವಿಶೇಷವಾಗಿ ಪುತ್ರರನ್ನು ನೀನು ರಕ್ಷಿಸು ಎಂದು ಹೇಳಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಸಪ್ತವಿಂಶೋऽಧ್ಯಾಯಃ ॥

॥ ಕೀಚಕಪರ್ವಣಿ ದ್ವಾದಶೋऽಧ್ಯಾಯಃ ॥

॥ ಸಮಾಪ್ತಂ ಕೀಚಕಪರ್ವ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ಗೋಗ್ರಹಣ ಪರ್ವ

ಮಹಾಭಾರತತಾತ್ಪರ್ಯನಿರ್ಣಯಃ

ಅಸ್ತಿ ತ್ವೇನಾಮಾಹ ಭಯಾತ್ ಸುದೇಷ್ಣಾ
ಯಥಾऽವಸನ್ ಪೂರ್ಣಮಬ್ದಂ ಚ ತೇऽತ್ರ ।
ತದಾ ಪಾರ್ಥಾನ್ ಪ್ರವಿಚಿಂತ್ಯಾಖಿಲಾಯಾಂ
ಪೃಥ್ವ್ಯಾಂ ಧನ್ವಾನ್ ಧಾರ್ತರಾಷ್ಟ್ರಸ್ಯ ದೂತಾಃ ॥೩೧॥

ಆಗ ದುರ್ಯೋಧನನ ಗೂಢಚಾರರು ಮರೆಯಾಗಿದ್ದ ಪಾಂಡವರನ್ನು ಸಮಸ್ತ ಭೂ ಮಂಡಲದಲ್ಲಿ ಹುಡುಕಿ ಕಾಣದೆ ದುರ್ಯೋಧನನ ಬಳಿಗೆ ಬಂದರು. ಒಂದು ಹೆಣ್ಣಿಗಾಗಿ ಕೀಚಕ ಹತನಾದುದನ್ನು ತಿಳಿಸಿದರು.

ಅವಿಜ್ಞಾಯ ಪ್ರಯಯುರ್ಧಾರ್ತರಾಷ್ಟ್ರಮಂ
ಊಚುರ್ಹತಂ ಕೀಚಕಂ ಯೋಷಿದರ್ಥೇ ।
ತೇನಾವದದ್ ದ್ರೌಪದೀಕಾರಣೇನ
ದುರ್ಯೋಧನೋ ನಿಹತಂ ಕೀಚಕಂ ತಮ್ ॥೩೨॥

ಅದರಿಂದ ದುರ್ಯೋಧನನೆಂದ, 'ದ್ರೌಪದೀ ನಿಮಿತ್ತವಾಗಿ ಭೀಮನಿಂದ ಕೀಚಕ ಹತನಾಗಿದ್ದಾನೆ'. ಬಳಿಕ ದುರ್ಯೋಧನ ಮುಂತಾದವರು ಭೀಷ್ಮ ಮುಂತಾದವರೊಡನೆ ಮತ್ತು ಕರ್ಣನೊಡನೆ ವಿರಾಟನಗರಕ್ಕೆ ಹೊರಟರು.

ಇಪ್ಪತ್ತೆಂಟನೆಯ ಅಧ್ಯಾಯ

ಹಸ್ತಿನಪುರಕ್ಕೆ ಓಂದಿರುಗಿದ ಚಾರರಿಂದ ದುರ್ಯೋಧನನಿಗೆ ಕೀಚಕನ ವಧೆಯ ಕಥನ.

ವೈಶಂಪಾಯನಃ

ಕೀಚಕೇ ತು ಹತೇ ರಾಜಾ ವಿರಾಟಃ ಪರವೀರಹಾ ।
ಶೋಕಮಾಹಾರಯತ್ ತೀವ್ರಂ ಸಾಮಾತ್ಯಃ ಸಪುರೋಹಿತಃ ॥೧॥

ವೈಶಂಪಾಯನ– ಕೀಚಕನು ಹತನಾಗುತ್ತಿರಲು ಶತ್ರುಸಂಹಾರಕನಾದ ವಿರಾಟರಾಜನು ಅಮಾತ್ಯರ ಮತ್ತು ಪುರೋಹಿತರ ಜೊತೆಯಲ್ಲಿ ತೀವ್ರವಾದ ಶೋಕಕ್ಕೆ ಒಳಗಾದನು.

ಕೀಚಕಸ್ಯ ವಧಂ ಘೋರಂ ಸಾನುಜಸ್ಯ ವಿಶಾಂಪತೇ ।
ಆತ್ಮಾಹಿತಂ ಚಿಂತಯಿತ್ವಾ ವ್ಯಸ್ಮಯಂತ ಪೃಥಗ್ ಜನಾಃ ॥೨॥

ಎಲೈ ರಾಜನೇ, ಸಾಮಾನ್ಯಜನರು ಮಾತ್ರ ತಮ್ಮಂದಿರಿಂದ ಕೂಡಿದ ಕೀಚಕನ ಘೋರವಾದ ವಧೆಯು ಪರಮಾತ್ಮನಿಂದ ಮಾಡಲ್ಪಟ್ಟಿತು ಎಂದು ಚಿಂತಿಸಿ ಆಶ್ಚರ್ಯಪಟ್ಟರು.

ತಸ್ಮಿನ್ ಪುರೇ ಜನಪದೇ ಜಜಲ್ಬುಶ್ಚಾಪಿ ಸರ್ವಶಃ ॥೩॥

ವೀರ್ಯವಾನ್ ದಯಿತೋ ರಾಜ್ಞೋ ದರ್ಪೋತ್ಕಿಷ್ಟಶ್ಚ ಕೀಚಕಃ ।
ಸಾಂಪರಾಯಾಪರಿಕ್ಲಿಷ್ಟೋ ಬಲವಾನ್ ದುರ್ಜಯೋ ರಣೇ ॥೪॥

ಆಸೀತ್ ಪ್ರಹರ್ತಾ ಶತ್ರೂಣಾಂ ಚಾರುದರ್ಶೀ ಚ ದುರ್ಮತಿಃ ।
ಸ ಹತಃ ಕಿಲ ಗಂಧರ್ವೈಃ ಸೈರಂಧ್ರೀಕಾರಣಾನ್ನಿತಿ ॥೫॥

ಆ ಪಟ್ಟಣದಲ್ಲಿಯೂ ಮತ್ತು ರಾಷ್ಟ್ರದಲ್ಲಿಯೂ ಎಲ್ಲ ಕಡೆಗಳಲ್ಲಿಯೂ ಜನರು ಮಾತನಾಡಿದರು. ಕೀಚಕನು ಪರಾಕ್ರಮಶಾಲಿಯೂ, ರಾಜನಿಗೆ ಪ್ರಿಯನಾದವನೂ ಮತ್ತು ದರ್ಪದಿಂದ ಮತ್ತನಾದವನೂ ಆಗಿದ್ದನು. ಯುದ್ಧದಲ್ಲಿ ಕ್ಲೇಶರಹಿತನೂ, ಶತ್ರುಗಳಿಂದ ದುರ್ಜಯನೂ, ಬಲಿಷ್ಠನೂ, ಶತ್ರುಗಳನ್ನು ಕೊಲ್ಲುವವನೂ ಆಗಿದ್ದನು.

ಸುಂದರನೂ ಮತ್ತು ದುರ್ಮತಿಯೂ ಆದ ಅವನು ಸೈರಂಧ್ರಿಯ ನಿಮಿತ್ತದಿಂದಾಗಿ ರಾತ್ರಿಯ ವೇಳೆಯಲ್ಲಿ ಗಂಧರ್ವರಿಂದ ಹತನಾದನಷ್ಟೆ!

ಇತ್ಯಜಲ್ಪನ್ ಮಹಾರಾಜ ಕೀಚಕಾನಾಂ ಮಹಾವಧಮ್ ।
ದೇಶೇ ದೇಶೇ ಮನುಷ್ಯಾಶ್ಚ ವ್ಯಸ್ಮಯನ್ ಕೀಚಕೇ ಹತೇ ॥೬॥

ಮಹಾರಾಜನೇ, ಕೀಚಕರ ಮಹಾವಧೆಯನ್ನು ಕುರಿತು ಕೀಚಕನು ಹತನಾದಮೇಲೆ ದೇಶದೇಶಗಳಲ್ಲಿ ಜನರು ಹೀಗೆ ಮಾತನಾಡಿಕೊಂಡು ಆಶ್ಚರ್ಯಪಟ್ಟರು.

ಅಥ ತೇ ಧಾರ್ತರಾಷ್ಟ್ರೇಣ ಪ್ರಯುಕ್ತಾ ಬಹವಶ್ಚರಾಃ ।
ಮೃಗಯಿತ್ವಾ ಬಹೂನ್ ದೇಶಾನ್ ಗ್ರಾಮಾಂಶ್ಚ ನಗರಾಣಿ ಚ ॥೭॥

ಸಂವಿಧಾಯ ಯಥಾऽऽದಿಷ್ಟಂ ಯಥಾದೇಶಂ ಸದೇಶಕಾಃ ।
ಕೃತಸಂಕೇತನಾಃ ಸರ್ವೇ ನ್ಯವರ್ತಂತ ಪುರಂ ಪ್ರತಿ ॥೮॥

ಅನಂತರ ದುರ್ಯೋಧನನಿಂದ ನಿಯುಕ್ತರಾದ ಅನೇಕ ಗೂಢಚಾರರು ಅನೇಕ ದೇಶಗಳನ್ನೂ, ಗ್ರಾಮಗಳನ್ನೂ ಮತ್ತು ನಗರಗಳನ್ನೂ ತಿರುಗಿ ಹುಡುಕಿ ಅವರಿಗೆ ಅಪ್ಪಣೆ ಮಾಡಿದ್ದಂತೆ ಆಯಾ ದೇಶಗಳಲ್ಲಿ ಎಲ್ಲಾ ಕೆಲಸವನ್ನೂ ಮಾಡಿ ತಮ್ಮ ಸಂಕೇತಕ್ಕೆ ಅನುಗುಣವಾಗಿ ಎಲ್ಲರೂ ಹಸ್ತಿನಪುರಕ್ಕೆ ಹಿಂದಿರುಗಿದರು.

ಆಗಮ್ಯ ಹಸ್ತಿನಪುರಂ ಧಾರ್ತರಾಷ್ಟ್ರಮರಿಂದಮ ।
ತತ್ರ ದೃಷ್ಟ್ವಾ ತು ರಾಜಾನಂ ಕೌರವ್ಯಂ ಧೃತರಾಷ್ಟ್ರಜಮ್ ॥೯॥

ಪ್ರಣಮ್ಯ ಶಿರಸಾ ಭೂಮೌ ವರ್ಧಯಿತ್ವಾ ಜಯಾಶಿಷಾ ।
ಆಸೀನಂ ಸೂರ್ಯಸಂಕಾಶೇ ಕಾಂಚನೇ ಪರಮಾಸನೇ ॥೧೦॥

ಉಪಾಸ್ಯಮಾನಂ ಸಚಿವೈರ್ಮರುದ್ಭಿರಿವ ವಾಸವಮ್ ।
ದ್ರೋಣಕರ್ಣಕೃಪೈಃ ಸಾರ್ಧಂ ಭೀಷ್ಮೇಣ ಚ ಮಹಾತ್ಮನಾ ॥೧೧॥

ಸಂಗತಂ ಭ್ರಾತೃಭಿಶ್ಚಾಪಿ ತ್ರಿಗರ್ತೈಶ್ಚ ಮಹಾರಥೈಃ ।
ದುರ್ಯೋಧನಂ ಸಭಾಮಧ್ಯೇ ಆಸೀನಮಿದಮಬ್ರುವನ್ ॥೧೨॥

ಅರಿಂದಮನೇ, ಹಸ್ತಿನಪುರಕ್ಕೆ ಹಿಂದಿರುಗಿದ ಅವರು ಅಲ್ಲಿ ಕೌರವ್ಯನಾದ ಧೃತರಾಷ್ಟ್ರಪುತ್ರನಾದ ದುರ್ಯೋಧನನಿಗೆ ಶಿರಸಾ ನಮಸ್ಕಾರವನ್ನು ಮಾಡಿ ಜಯಾಶೀರ್ವಾದಗಳಿಂದ ಅವನ ಅಭಿವೃದ್ಧಿಯನ್ನು ಆಶಂಸಿಸಿ ಸೂರ್ಯನಂತೆ ಹೊಳೆಯುವ ಪರಮಾಸನದಲ್ಲಿ ಕುಳಿತು ಮರುತ್ತುಗಳಿಂದ ಸಹಿತನಾದ ಇಂದ್ರನಂತೆ ಸಚಿವರಿಂದ ಉಪಾಸ್ಯಮಾನನಾದಂತಹ ಮಹಾತ್ಮರಾದ ಭೀಷ್ಮರಿಂದಲೂ ಮತ್ತು ದ್ರೋಣ-ಕರ್ಣ-ಕೃಪರಿಂದಲೂ ಮತ್ತು ಸಹೋದರರಿಂದಲೂ ಮತ್ತು ಮಹಾರಥರಾದ ತ್ರಿಗರ್ತರಿಂದಲೂ ಸಂಗತನಾದ ದುರ್ಯೋಧನನನ್ನು ಕುರಿತು ಸಭೆಯ ಮಧ್ಯದಲ್ಲಿ ಹೀಗೆ ಮಾತನಾಡಿದರು.

ಕೃತೋಽಸ್ಮಾಭಿಃ ಪರೋ ಯತ್ನಸ್ತೇಷಾಮನ್ವೇಷಣೇ ಸದಾ ।
ಪಾಂಡವಾನಾಂ ಮನುಷ್ಯೇಂದ್ರ ತಸ್ಮಿನ್ ಮಹತಿ ಕಾನನೇ ॥೧೩॥

ಮನುಷ್ಯೇಂದ್ರನೇ, ನಾವು ಆ ಪಾಂಡವರ ಅನ್ವೇಷಣೆಗಾಗಿ ದೊಡ್ಡ ಕಾಡಿನಲ್ಲಿ ಮಹಾಪ್ರಯತ್ನವನ್ನು ಮಾಡಿದೆವು.

ನಿರ್ಜನೇ ವ್ಯಾಲಸಂಕೀರ್ಣೇ ನಾನಾದ್ರುಮಲತಾಕುಲೇ ।
ಲತಾಪ್ರತಾನಬಹಳೇ ನಾನಾಗುಲ್ಮಸಮಾಕುಲೇ ॥೧೪॥

ನಿರ್ಜನವಾದ, ಸರ್ಪಾದಿವ್ಯಾಗಗಳಿಂದ ನಿಬಿಡವಾದ, ಅನೇಕ ದ್ರುಮ-ಲತೆಗಳಿಂದಲೂ, ಅನೇಕ ಪೊದೆಗಳಿಂದಲೂ ತುಂಬಿದ (ಮಹಾವನದಲ್ಲಿ ಹುಡುಕಿದೆವು).

ನ ಚ ವಿದ್ಮೋ ಗತಿಂ ತೇಷಾಂ ಪಾಂಡವಾನಾಮರಿಂದಮ ।
ಮಾರ್ಗಮಾಣಾಃ ಪದನ್ಯಾಸಮ್ ಆಶ್ರಮೇಷು ವನೇಷು ಚ ॥೧೫॥

ಗಿರಿಕೂಟೇಷು ದುರ್ಗೇಷು ನಾನಾಜನಪದೇಷು ಚ ।
ಜನಾಕೀರ್ಣೇಷು ಸರ್ವೇಷು ಚತ್ವರೇಷು ಪುರೇಷು ಚ ॥೧೬॥

ನರೇಂದ್ರ ಸಭಯಾನ್ ನಷ್ಟಾನ್ ನ ಚ ವಿದ್ಮಶ್ಚ ಪಾಂಡವಾನ್ ।
ಅತ್ಯಂತಂ ವಾ ಏನಷ್ಟಾಸ್ತೇ ಭದ್ರಂ ತುಭ್ಯಂ ನರರ್ಷಭ ॥೧೭॥

ಅರಿಂದಮನೇ, ಅವರ ಹೆಜ್ಜೆಯ ಗುರುತುಗಳನ್ನು (ಅವರ ವಾಸದ ಚಿಹ್ನೆಗಳನ್ನು) ಆಶ್ರಮದಲ್ಲಿ, ವನಗಳಲ್ಲಿ, ಪರ್ವತದ ಶಿಖರಗಳಲ್ಲಿ, ದುರ್ಗಗಳಲ್ಲಿ, ಅನೇಕ ರಾಜ್ಯಗಳಲ್ಲಿ, ಜನನಿಬಿಡವಾದ ಅನೇಕ ಚತುಷ್ಪಥಗಳಲ್ಲಿ ಮತ್ತು ಪಟ್ಟಣಗಳಲ್ಲಿ ಹುಡುಕಿದೆವು. ನಮಗೆ ಪಾಂಡವರ ಸುದ್ದಿಯು ತಿಳಿಯಲಿಲ್ಲ. ಎಲೈ ನರೇಂದ್ರನೇ, ಭಯದಿಂದ ನಷ್ಟರಾದ ಆ ಪಾಂಡವರ ಗುರುತು ನಮಗೆ ಎಲ್ಲೂ ತಿಳಿಯಲಿಲ್ಲ. ಅಥವಾ ಅವರು ಅತ್ಯಂತ ವಿನಾಶವನ್ನು ಹೊಂದಿದ್ದಾರೆ. ರಾಜನೇ ನಿನಗೆ ಮಂಗಳವಾಗಲಿ.

ಗಿರೀಣಾಂ ಕೂಟಕುಂಜೇಷು ಕಂದರಾಂತರಸಾನುಷು ।
ನದೀಪ್ರಸ್ರವಣೇಷ್ವೇವ ಹ್ರದೇಷು ಚ ಸರಸ್ಸು ಚ ॥೧೮॥

ಗಹ್ವರೇಷು ಚ ದುರ್ಗೇಷು ಗ್ರಾಮೇಷು ಚ ವನೇಷು ಚ ।
ದುರ್ವಿಜ್ಞೇಯಾ ಗತಿಸ್ತೇಷಾಂ ಮೃಗ್ಯತೇऽಸ್ಮಾಭಿರೇವ ಚ ॥೧೯॥

ಪರ್ವತದ ತಪ್ಪಲುಗಳಲ್ಲಿ ಮತ್ತು ಕುಂಜಗಳಲ್ಲಿ, ಗುಹೆಗಳಲ್ಲಿ ಮತ್ತು ಶಿಖರಗಳಲ್ಲಿ, ನದಿಯು ಹರಿಯುವ ಸ್ಥಳಗಳಲ್ಲಿ, ಮಡುಗಳಲ್ಲಿ ಮತ್ತು ಸರೋವರಗಳಲ್ಲಿ, ಗುಹೆಗಳಲ್ಲಿ ಮತ್ತು ದುರ್ಗಗಳಲ್ಲಿ, ಗ್ರಾಮಗಳಲ್ಲಿ ಮತ್ತು ವನಗಳಲ್ಲಿ ನಮ್ಮಿಂದ ಎಲ್ಲೂ ಕಾಣಲ್ಪಡದ ಅವರ ಗತಿಯು ಹುಡುಕಲ್ಪಟ್ಟಿತು.

ಗಜವ್ಯಾಘ್ರಸಮೀಪೇಷು ಸಿಂಹಾಂತೇ ಶರಭಾಂತರೇ ।
ಪದಾನ್ಯನ್ವಿಚ್ಛಮಾನಾಸ್ತು ರಥಾನಾಂ ರಥಿಸತ್ತಮ ॥೨೦॥

ಕಂಚಿತ್ ಕಾಲಂ ಮನುಷ್ಯೇಂದ್ರ ಸೂತಾನನುಗತಾ ವಯಮ್ ॥೨೧॥

ಮೃಗಯಿತ್ವಾ ಯಥಾನ್ಯಾಸಂ ವಿದಿತಾರ್ಥಾಶ್ಚ ತತ್ತ್ವತಃ ।
ಪ್ರಾಪ್ತಾ ದ್ವಾರಾವತೀಂ ಪಾರ್ಥಾನ್ ಋತೇ ಸೂತಾಃ ಪರಂತಪ ॥೨೨॥

ಗಜವ್ಯಾಘ್ರಗಳ ಸಮೀಪದಲ್ಲಿ, ಸಿಂಹ ಶರಭಗಳ ಸಮೀಪದಲ್ಲಿ, ರಥಗಳ ಸಮೀಪದಲ್ಲಿ ಅವರ ಹೆಜ್ಜೆಗಳನ್ನು ಹುಡುಕುತ್ತಾ ಎಲೈ ರಥಿಸತ್ತಮನೇ, ಮನುಷ್ಯೇಂದ್ರನೇ, ನಾವು ಸ್ವಲ್ಪಕಾಲ ಪಾಂಡವರ ಸಾರಥಿಗಳನ್ನು ಹಿಂಬಾಲಿಸಿದೆವು. ಹುಡುಕುವ ರೀತಿಯಲ್ಲಿ ಅವರನ್ನು ಹುಡುಕಿ ಅನಂತರ ಎಲೈ ಪರಂತಪನೇ, ಪಾಂಡವರಿಲ್ಲದೆ ಸೂತರು ದ್ವಾರಾವತಿಗೆ ಹಿಂದಿರುಗಿದ್ದಾರೆಂದು ನಾವು ಸರಿಯಾಗಿ ತಿಳಿದೆವು.

ನ ತತ್ರ ಪಾಂಡವಾ ರಾಜನ್ ನಾಪಿ ಕೃಷ್ಣಾ ಮಹಾವ್ರತಾ ।
ಸರ್ವಥಾ ವಿಪ್ರನಷ್ಟಾಸ್ತೇ ನಮಸ್ತೇ ಭರತರ್ಷಭ ॥೨೩॥

ರಾಜನೇ, ಅಲ್ಲಿ ಪಾಂಡವರಾಗಲೀ ಅಥವಾ ಮಹಾವ್ರತಳಾದ ದ್ರೌಪದಿಯಾಗಲೀ ಇಲ್ಲ. ಅವರು ಸರ್ವಥಾ ನಾಶಹೊಂದಿದ್ದಾರೆ. ಭರತರ್ಷಭನೇ, ನಿನಗೆ ನಮಸ್ಕಾರ.

ನರದೇವ ಯಥಾ ದೃಷ್ಟಂ ನ ಚ ವಿದ್ಮಾತ್ರ ಪಾಂಡವಾನ್ ॥೨೪॥

ನಿರ್ವ್ಯತ್ತೋ ಭವ ನಷ್ಟಾಸ್ತೇ ಸ್ವಸ್ಥೋ ಭವ ಪರಂತಪ ।
ಸರ್ವಥೈವ ಪ್ರಣಷ್ಟಾಸ್ತೇ ನಮಸ್ತೇ ಭರತರ್ಷಭ ॥೨೫॥

ನರದೇವನೇ, ನಾವು ನೋಡಿದಂತೆ ನಮಗೆ ಎಲ್ಲೂ ಪಾಂಡವರು ಕಾಣಲಿಲ್ಲ. ಸಂತೋಷದಿಂದ ಇರುವವನಾಗು. ಅವರು ನಾಶವನ್ನು ಹೊಂದಿದ್ದಾರೆ. ಪರಂತಪನೇ, ಸಮಾಧಾನದಿಂದ ಇರು. ಅವರು ಅತ್ಯಂತ ನಾಶವನ್ನು ಹೊಂದಿದ್ದಾರೆ. ಭರತರ್ಷಭನೇ, ನಿನಗೆ ನಮಸ್ಕಾರ.

ಸರ್ವಾ ಚ ಪೃಥಿವೀ ಕೃತ್ಸ್ನಾ ಸಶೈಲವನಕಾನನಾ ।
ಸರಾಷ್ಟ್ರನಗರಗ್ರಾಮಾ ಪಟ್ಟಣೈಶ್ಚ ಸಮನ್ವಿತಾ ॥೨೬॥

ಅನ್ವೇಷಿತಾ ಚ ಸರ್ವತ್ರ ನ ಚ ಪಶ್ಯಾಮ ಪಾಂಡವಾನ್ ॥೨೭॥

ಎಲ್ಲಾ ಭೂಮಿಯನ್ನೂ, ಪರ್ವತವನಕಾನನಗಳನ್ನೂ, ಗ್ರಾಮನಗರರಾಷ್ಟ್ರಗಳನ್ನೂ, ಪಟ್ಟಣಗಳನ್ನೂ ಹುಡುಕಿದೆವು. ಎಲ್ಲಿಯೂ ಪಾಂಡವರು ಕಾಣಲಿಲ್ಲ.

ಪುನಃ ಶಾಧಿ ಮನುಷ್ಯೇಂದ್ರ ಅತ ಊರ್ಧ್ವಂ ವಿಶಾಂಪತೇ ।
ಅನ್ವೇಷಣೇ ಪಾಂಡವಾನಾಂ ಭೂಯಃ ಕಿಂ ಕರವಾಮಹೇ ॥೨೮॥

ಮನುಷ್ಯೇಂದ್ರನೇ, ಪುನಃ ನಮಗೆ ಆಜ್ಞೆಯನ್ನು ಮಾಡು. ರಾಜನೇ, ಇಲ್ಲಿಂದ ಮುಂದೆ ಪಾಂಡವರ ಅನ್ವೇಷಣೆಯ ವಿಷಯದಲ್ಲಿ ನಾವು ಏನನ್ನು ಮಾಡೋಣ?

ಇಮಾಂ ಚ ನಃ ಪ್ರಿಯಾಮೀಷದ್ ವಾಚಂ ಭದ್ರವತೀಂ ಶೃಣು ॥೨೯॥

ಮತ್ತು ನಮಗೆಲ್ಲರಿಗೂ ಪ್ರಿಯವಾದ ಈ ಒಂದು ಸಣ್ಣ ಮಂಗಳಕರವಾದ ವಾರ್ತೆಯನ್ನು ಕೇಳು.

ಯೇನ ತ್ರಿಗರ್ತಾ ನಿಕೃತಾ ಬಲೇನ ಬಹುಶೋ ನೃಪ ।
ಸೂತೇನ ರಾಜ್ಞೋ ಮತ್ಸ್ಯಸ್ಯ ಕೀಚಕೇನ ಮಹಾತ್ಮನಾ ॥೩೦॥

ಸ ಹತಃ ಪತಿತಃ ಶೇತೇ ಗಂಧರ್ವೈರ್ನಿಶಿ ಭಾರತ ॥೩೧॥

ಎಲೈ ರಾಜನೇ, ಮತ್ಸ್ಯರಾಜನ ಸೂತನಾದ, ಮಹಾತ್ಮನಾದ ಯಾವ ಕೀಚಕನು ತನ್ನ ಬಲದಿಂದ ತ್ರಿಗರ್ತರಿಗೆ ಅನೇಕ ಬಾರಿ ಅವಮಾನವನ್ನು ಮಾಡಿದ್ದನೋ, ಎಲೈ ಭಾರತನೇ, ಅಂತಹ ಕೀಚಕನು ಗಂಧರ್ವರಿಂದ ರಾತ್ರಿಯ ವೇಳೆಯಲ್ಲಿ ಕೊಲ್ಲಲ್ಪಟ್ಟು ಮಲಗಿದ್ದಾನೆ.

ಸ್ಯಾಲೋ ರಾಜ್ಞೋ ವಿರಾಟಸ್ಯ ಸೇನಾಪತಿರುದಾರಧೀಃ ।
ಸುದೇಷ್ಣಾವರಜಃ ಶ್ರೇಷ್ಠಃ ಶೂರೋ ವೀರೋ ಗತವ್ಯಥಃ ॥೩೨॥

ಉತ್ಸಾಹವಾನ್ ಮಹಾವೀರ್ಯೋ ನೀತಿಮಾನ್ ಬಲವಾನಪಿ ।
ಯುದ್ಧಜ್ಞೋ ರಿಪುವೀರಘ್ನಃ ಸಿಂಹತುಲ್ಯಪರಾಕ್ರಮಃ ॥೩೩॥

ಪ್ರಜಾರಕ್ಷಣದಕ್ಷಶ್ಚ ಶತ್ರುಗ್ರಹಣಶಕ್ತಿಮಾನ್ ।
ವಿಜಿತಾರಿರ್ಮಹಾಯುದ್ಧೇ ಪ್ರಚಂಡೋ ಮಾನತತ್ಪರಃ ॥೩೪॥

ನರನಾರೀಮನೋಹ್ಲಾದೀ ವೀರೋ ವಾಗ್ಮೀ ರಣಪ್ರಿಯಃ ।
ಪುಣ್ಯೋ ಧರ್ಮಾऽರ್ಥಕಾಮಾನಾಂ ಭಾಜನಂ ಮನುಜೋತ್ತಮಃ ॥

ಸ ಹತೋ ನಿಶಿ ಗಂಧರ್ವೈಃ ಸ್ತ್ರೀನಿಮಿತ್ತಂ ನರಾಧಿಪ ।
ಅದೃಶ್ಯಮಾನೈರ್ದುಷ್ಟಾತ್ಮಾ ನಿಶೀಥೇ ಸಹ ಸೋದರೈಃ ॥೩೬॥

ವಿರಾಟರಾಜನ ಭಾವಮೈದುನನನೂ, ಉದಾರಮತಿಯೂ, ಸೇನಾಪತಿಯೂ, ಸುದೇಷ್ಣೆಯ ತಮ್ಮನೂ, ಶ್ರೇಷ್ಠನೂ, ಶೂರನೂ, ವೀರನೂ, ಚಿಂತಾರಹಿತನೂ, ಉತ್ಸಾಹಶಾಲಿಯೂ, ಮಹಾವೀರ್ಯನೂ, ನೀತಿವಂತನೂ, ಬಲಿಷ್ಠನಾದವನೂ,

ಯುದ್ಧವನ್ನು ತಿಳಿದವನೂ, ಶತ್ರುಗಳ ವೀರರನ್ನು ಸಂಹರಿಸುವವನೂ, ಸಿಂಹಕ್ಕೆ ಸದೃಶವಾದ ಪರಾಕ್ರಮವುಳ್ಳವನೂ, ಪ್ರಜಾರಕ್ಷಣೆಯಲ್ಲಿ ದಕ್ಷನಾದವನೂ, ಶತ್ರುಗಳನ್ನು ಹಿಡಿಯುವ ಶಕ್ತಿಯುಳ್ಳವನೂ, ಮಹಾಯುದ್ಧದಲ್ಲಿ ಶತ್ರುಗಳನ್ನು ಗೆದ್ದವನೂ, ಪ್ರಚಂಡನಾದವನೂ, ಅಹಂಕಾರಿಯೂ, ಸ್ತ್ರೀಪುರುಷರ ಮನಸ್ಸಂತೋಷಪಡಿಸುವವನೂ, ವೀರನೂ, ವಾಗ್ಮಿಯೂ, ರಣಪ್ರಿಯನೂ, ಪುಣ್ಯವಂತನೂ, ಧರ್ಮಾರ್ಥಕಾಮಗಳನ್ನು ಸಂಪಾದಿಸಿದವನೂ, ಮನುಜೋತ್ತಮನೂ, ದುಷ್ಟನೂ ಆದ ಆ ಕೀಚಕನು ಎಲೈ ನರಾಧಿಪನೇ, ಸ್ತ್ರೀನಿಮಿತ್ತವಾಗಿ ಅದೃಶ್ಯರಾದ ಗಂಧರ್ವರಿಂದ ರಾತ್ರಿಯ ವೇಳೆಯಲ್ಲಿ ತನ್ನ ಸಹೋದರರ ಜೊತೆಯಲ್ಲಿ ಕೊಲ್ಲಲ್ಪಟ್ಟಿದ್ದಾನೆ.

ಸುಹೃದಶ್ಚಾತ್ರ ನಿಹತಾ ಯೋಧಾಶ್ಚ ಪ್ರವರಾ ಹತಾಃ ।
ಇತ್ಯೇವಂ ಶ್ರುತಮಸ್ಮಾಭಿರ್ಗಂಧರ್ವೈರ್ನಿಹತೋಽಭವತ್ ॥೩೭॥

ಬಾಂಧವೈರ್ಬಹುಭಿಃ ಸಾರ್ಧಂ ಕೀಚಕೋ ನಿಹತೋ ನಿಶಿ ॥೩೮॥

ಆ ಸಮಯದಲ್ಲಿ ಅವನ ಅನೇಕ ವಿಶ್ವಾಸಪಾತ್ರರೂ ಮತ್ತು ಶ್ರೇಷ್ಠರಾದ ಯೋಧರೂ ಹತರಾದರೆಂದು ನಾವು ಕೇಳಿದೆವು. ಆ ಕೀಚಕನು ಗಂಧರ್ವರಿಂದ ತನ್ನ ಅನೇಕ ಬಂಧುಗಳ ಜೊತೆಯಲ್ಲಿ ರಾತ್ರಿಯ ವೇಳೆಯಲ್ಲಿ ಹತನಾಗಿದ್ದಾನೆ.

ಅದ್ಯಪ್ರಭೃತಿ ರಾಜೇಂದ್ರ ಪಾಂಡವಾನ್ವೇಷಣಂ ಪ್ರತಿ ।
ಚಾರಾಂಶ್ಚ ಸರ್ವತಃ ಸ ತ್ವಂ ಪ್ರೇಷಯೇತಿ ಮತಿರ್ಹಿ ನಃ ॥೩೯॥

ನಿಹತೋ ನಿಶಿ ಗಂಧರ್ವೈರ್ದುಷ್ಟಾತ್ಮಾ ಭ್ರಾತೃಭಿಃ ಸಹ ॥೪೦॥

ರಾಜೇಂದ್ರನೇ, ಈ ದಿನದಿಂದ ಆರಂಭಿಸಿ ಪಾಂಡವರ ಅನ್ವೇಷಣೆಗಾಗಿ ನೀನು ಎಲ್ಲಕಡೆಯಲ್ಲಿಯೂ ಬೇರೆ ಚಾರರನ್ನು ಕಳುಹಿಸಬೇಕು ಎಂದು ನಮ್ಮ ಅಭಿಪ್ರಾಯ. ದುಷ್ಟಾತ್ಮನಾದ ಕೀಚಕನು ತಮ್ಮಂದಿರ ಜೊತೆಯಲ್ಲಿ ರಾತ್ರಿಯ ವೇಳೆಯಲ್ಲಿ ಹತನಾಗಿದ್ದಾನೆ.

ಪ್ರಿಯಂ ತದುಪಸಂಶ್ರುತ್ಯ ಶತ್ರೂಣಾಂ ತು ಪರಾಭವಮ್ ।
ಕೃತಕೃತ್ಯಸ್ತು ಕೌರವ್ಯ ವಿಧಿವತ್ ಸ್ಯಾದನಂತರಮ್ ॥೪೧॥

ಕೌರವ್ಯನೇ, ಶತ್ರುಗಳ ಪರಾಭವರೂಪವಾದ ಈ ಪ್ರಿಯವಾರ್ತೆಯನ್ನು ಕೇಳಿ ಕೃತಕೃತ್ಯನಾಗಿ ಈಗ ಅನಂತರ ಮಾಡಬೇಕಾದ ವಿಹಿತವಾದ ಕಾರ್ಯವನ್ನು ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ಇಪ್ಪತ್ತೊಂಬತ್ತನೆಯ ಅಧ್ಯಾಯ

ದುರ್ಯೋಧನಾದಿಗಳಿಂದ ಪಾಂಡವರ ಅನ್ವೇಷಣೆಗೆ ಪುನಃ ಮಂತ್ರಾಲೋಚನೆ

ವೈಶಂಪಾಯನಃ

ತತೋ ದುರ್ಯೋಧನೋ ರಾಜಾ ಶ್ರುತ್ವಾ ತೇಷಾಂ ವಚಸ್ತದಾ ।
ಚಿರಮಂತರ್ಮನಾ ಭೂತ್ವಾ ಪ್ರತ್ಯುವಾಚ ಸಭಾಸದಃ ॥೧॥

ವೈಶಂಪಾಯನ– ಆಗ ರಾಜನಾದ ದುರ್ಯೋಧನನು ಅವರ ಮಾತುಗಳನ್ನು ಕೇಳಿ ಬಹಳ ಸಮಯ ಮನಸ್ಸಿನಲ್ಲಿಯೋಚಿಸಿ ಸಭಾಸದರನ್ನು ಕುರಿತು ಮಾತನಾಡಿದನು.

ಅಶಕ್ಯಾ ಖಲು ಕಾರ್ಯಾಣಾಂ ಗತಿರ್ಜ್ಞಾತುಂ ಹಿ ತತ್ತ್ವತಃ ।
ತಸ್ಮಾತ್ ಸರ್ವೇ ಪರೀಕ್ಷಧ್ವಂ ಕ್ವ ನು ಸ್ಯುಃ ಪಾಂಡವಾ ಗತಾಃ ॥೨॥

ಕಾರ್ಯಗಳ ಗತಿಯನ್ನು ಸರಿಯಾಗಿ ತಿಳಿಯುವುದು ಅಶಕ್ಯವಾದುದು. ಆದ್ದರಿಂದ ಪಾಂಡವರು ಎಲ್ಲಿ ಹೋಗಿರಬಹುದು ಎಂದು ಎಲ್ಲರೂ ಸರಿಯಾಗಿ ಪರೀಕ್ಷಿಸಿ.

ಅಲ್ಪಾವಶಿಷ್ಟಃ ಕಾಲಸ್ತು ಗತಭೂಯಿಷ್ಠ ಏವ ಚ ।
ತೇಷಾಮಜ್ಞಾತಚರ್ಯಾಯಾಮಸ್ಮಿನ್ ವರ್ಷೇ ತ್ರಯೋದಶೇ ॥೩॥

ಅವರ ಅಜ್ಞಾತವಾಸದ ಈ ಹದಿಮೂರನೆಯ ವರ್ಷದಲ್ಲಿ ಬಹಳ ಭಾಗವು ಕಳೆದುಹೋಗಿ ಸ್ವಲ್ಪಕಾಲವೇ ಉಳಿದಿದೆ.

ಅಪಿ ವರ್ಷಂ ಚ ಶೇಷಂ ಚೇದ್ ವ್ಯತೀಯುರಿಹ ಪಾಂಡವಾಃ ।
ನಿವೃತ್ತಸಮಯಾಸ್ತೇ ಹಿ ಸತ್ಯವ್ರತಪರಾಯಣಾಃ ॥೪॥

ಕ್ಷರಂತ ಇವ ನಾಗೇಂದ್ರಾಃ ಸರ್ವೇ ಹ್ಯಾಶೀವಿಷೋಪಮಾಃ ।
ದುಃಖಾದ್ ಭವೇಯುಃ ಸಂರಬ್ಧಾಃ ಕೌರವಾನ್ ಪ್ರತಿ ತೇ ಧ್ರುವಮ್ ॥

ಪಾಂಡವರು ತಮ್ಮ ಪ್ರತಿಜ್ಞೆಯನ್ನು ನೆರವೇರಿಸಿ ಉಳಿದ ಕಾಲವನ್ನು ಹೀಗೆಯೇ ಕಳೆದರೆ ಸತ್ಯವ್ರತಪರಾಯಣರಾದ ಅವರು ಮದವನ್ನು ಸುರಿಸುವ ಆನೆಯಂತೆ ವಿಷವನ್ನು ಕಾರುವ ಸರ್ಪಗಳಂತೆ ತಾವು ಅನುಭವಿಸಿದ ದುಃಖದ ಕಾರಣದಿಂದಾಗಿ ಕೌರವರನ್ನು ಕುರಿತು ಕ್ರೋಧಗೊಳ್ಳುವುದರಲ್ಲಿ ಸಂಶಯವಿಲ್ಲ.

ವಿಜ್ಞಾತವ್ಯಾ ಮನುಷ್ಯೇಂದ್ರಾಸ್ತರ್ಕಯಾ ಸುಪ್ರಣೀತಯಾ ।
ನಿಪುಣೈಶ್ಚಾರಪುರುಷೈಃ ಪ್ರಾಜ್ಞೈರ್ದಕ್ಷೈಃ ಸುಸಮ್ಮತೈಃ ॥೬॥

ಚೆನ್ನಾಗಿ ಪ್ರಯೋಗಿಸಲ್ಪಟ್ಟ ಊಹೆಯಿಂದ ಪ್ರಾಜ್ಞರೂ, ದಕ್ಷರೂ, ನಮಗೆ ಸಮ್ಮತರೂ, ನಿಪುಣರೂ ಆದ ಚಾರಪುರುಷರು ಆ ಮನುಷ್ಯೇಂದ್ರರು ಎಲ್ಲಿದ್ದಾರೆ ಎಂದು ತಿಳಿಯಬೇಕು.

ಅಜ್ಞಾತಸಮಯೇ ಜ್ಞಾತಾಃ ಕೃಚ್ಛ್ರರೂಪಧರಾಃ ಪುನಃ ।
ಪ್ರವಿಶೇಯುರ್ಜಿತಕ್ರೋಧಾಃ ತಾವದೇವ ಪುನರ್ವನಮ್ ॥೭॥

ತಸ್ಮಾದಾಶು ಪರೀಕ್ಷಧ್ವಂ ಯಥಾ ಚಾತ್ಯಂತಮವ್ಯಯಮ್ ।
ರಾಜ್ಯಂ ನಿರ್ದ್ವಂದ್ವಮವ್ಯಗ್ರಮಸಪತ್ನಂ ಸ್ಥಿರಂ ಭವೇತ್ ॥೮॥

ಅಜ್ಞಾತವಾಸದ ಸಮಯದಲ್ಲಿ ಅವರು ಗುರುತಿಸಲ್ಪಟ್ಟರೆ ಪುನಃ ದುಃಖರೂಪವನ್ನು ಧರಿಸಿ ಅವರು ಕ್ರೋಧವನ್ನು ನುಂಗಿ (ಜಯಿಸಿ) ಅಷ್ಟೇ ವರ್ಷಗಳ ಕಾಲ ವನವಾಸಕ್ಕೆ ಹೋಗಬೇಕಾದೀತು. ಆದ್ದರಿಂದ ನಮಗೆ ದೊರಕಿರುವ ರಾಜ್ಯವು ಅತ್ಯಂತವಾಗಿ ಶಾಶ್ವತವೂ, ಪ್ರತಿಸ್ಪರ್ಧಿರಹಿತವೂ, ಸ್ಥಿರವೂ, ಶತ್ರುರಹಿತವೂ, ಅವ್ಯಗ್ರವೂ ಆಗುವಂತೆ ಬೇಗ ಪರೀಕ್ಷಿಸಿ.

ತತಃ ಕರ್ಣೋಽಬ್ರವೀದ್ ವಾಕ್ಯಂ ಕ್ಷಿಪ್ರಂ ಗಚ್ಛಂತು ಭಾರತ ।
ಶೀಘ್ರವೃತ್ತಾ ನರಾ ಯೋಗ್ಯಾ ನಿಪುಣಾಶ್ಚನ್ನಚಾರಿಣಃ ॥೯॥

ಚರಂತು ದೇಶಾನ್ ವಿವಿಧಾನ್ ಸ್ಫೀತಾನ್ ಜನಪದಾಕುಲಾನ್ ॥೧೦॥

ಆಗ ಕರ್ಣನು ಎಲೈ ಭಾರತನೇ, ಶೀಘ್ರವಾಗಿ ಚಲಿಸುವ, ಯೋಗ್ಯರೂ, ನಿಪುಣರೂ, ವೇಷಾಂತರವನ್ನು ಧರಿಸಿದವರೂ ಆದ ಚಾರರು ಬೇರೆ ವಿವಿಧವಾದ ಸಮೃದ್ಧವಾದ ಜನಪದಗಳಿಂದ ನಿಬಿಡವಾದ ದೇಶಗಳಿಗೆ ಹೋಗಲಿ.

ತತ್ರ ಗೋಷ್ಠೇಷ್ವರಣ್ಯೇಷು ಸಿದ್ಧಾ ಬ್ರಾಹ್ಮಣರೂಪಿಣಃ ।
ಪರಿವಾಹೇಷು ತೀರ್ಥೇಷು ವಿವಿಧೇಷ್ವಾಕರೇಷು ಚ ॥೧೧॥

ಅನ್ವೇಷ್ಟವ್ಯಾ ಮನುಷ್ಯೇಂದ್ರ ಪಾಂಡವಾಶ್ಚನ್ನಚಾರಿಣಃ ॥೧೨॥

ಅಲ್ಲಿ ಗೋಷ್ಠಗಳಲ್ಲಿಯೂ, ಅರಣ್ಯಗಳಲ್ಲಿಯೂ, ಸಮುದಾಯಗಳಲ್ಲಿಯೂ, ತೀರ್ಥಗಳಲ್ಲಿಯೂ, ಅನೇಕ ವಿಧವಾದ ಗಣಿಗಳಲ್ಲಿಯೂ, ಸಿದ್ಧರೂಪದಿಂದಲಾಗಲೀ, ಬ್ರಾಹ್ಮಣರೂಪದಿಂದಲಾಗಲೀ ಛದ್ಮವೇಷವನ್ನು ಧರಿಸಿದ ಪಾಂಡವರನ್ನು ಹುಡುಕಬೇಕು.

ನದೀಕೂಲೇಷು ತೀರ್ಥೇಷು ಗ್ರಾಮೇಷು ನಗರೇಷು ಚ ।
ಆಶ್ರಮೇಷು ಚ ರಮ್ಯೇಷು ಪರ್ವತೇಷು ವನೇಷು ಚ ॥೧೩॥

ವಿಜ್ಞಾತವ್ಯಾ ಮನುಷ್ಯೇಂದ್ರ ತರ್ಕಯಾ ಸುವಿನೀತಯಾ ।
ವಿವಿಧೈಸ್ತತ್ತರೈಃ ಸಮ್ಯಙ್ ನಿಪುಣೈಸ್ತಚ್ಚ ಸಮ್ಮತೈಃ ॥೧೪॥

ಎಲೈ ಮನುಷ್ಯೇಂದ್ರನೇ, ನದಿತೀರಗಳಲ್ಲಿ, ತೀರ್ಥಗಳಲ್ಲಿ, ಗ್ರಾಮಗಳಲ್ಲಿ, ನಗರಗಳಲ್ಲಿ, ಮನೋಹರವಾದ ಆಶ್ರಮಗಳಲ್ಲಿ, ಪರ್ವತಗಳಲ್ಲಿ, ಕಾಡುಗಳಲ್ಲಿ, ಒಳ್ಳೆಯ ಶಕ್ತಿಯುಳ್ಳ, ನಿಪುಣರಾದ, ನಮಗೆ ಸಮ್ಮತರಾದ, ಬಹುವಿಧರಾದ ಗೂಢಚಾರರಿಂದ ಪಾಂಡವರನ್ನು ಚೆನ್ನಾಗಿ ಗುರುತಿಸಬೇಕು ಎಂದು ಹೇಳಿದನು.

ಅಥಾಗ್ರಜಾದವರಜೋ ಪಾಪಭಾವಃ ಸುದುರ್ಮತಿಃ ।
ಜ್ಯೇಷ್ಠಂ ದುಃಶಾಸನಸ್ತತ್ರ ಭ್ರಾತಾ ಭ್ರಾತರಮಬ್ರವೀತ್ ॥೧೫॥

ಅನಂತರ ಆ ಅಣ್ಣನ ತಮ್ಮನಾದ ಪಾಪದ ಅಭಿಪ್ರಾಯವುಳ್ಳವನೂ, ಬಹಳ ದುಷ್ಟಬುದ್ಧಿಯುಳ್ಳವನೂ ಆದ ದುಶ್ಶಾಸನನು ತನ್ನ ಅಣ್ಣನನ್ನು ಕುರಿತು ಮಾತನಾಡಿದನು.

ಯದಾಹ ಕರ್ಣೋ ರಾಜೇಂದ್ರ ಸರ್ವಮೇತದವೇಕ್ಷ್ಯತಾಮ್ ।
ಯೇಷು ನಃ ಪ್ರತ್ಯಯೋ ರಾಜನ್ ಚಾರೇಷು ಮನುಜಾಧಿಪ ॥೧೬॥

ತೇ ಯಾಂತು ದತ್ತದೇಯಾ ವೈ ಭೂಯಸ್ತಾನ್ ಪರಿಮಾರ್ಗಿತುಮ್ ।
ಯಥೋದ್ದಿಷ್ಟಚರಾಃ ಸರ್ವೇ ಮೃಗಯಂತು ತತಸ್ತತಃ ॥೧೭॥

ರಾಜೇಂದ್ರನೇ, ಕರ್ಣನು ಏನನ್ನು ಹೇಳಿದನೋ ಅದರಂತೆ ಎಲ್ಲವನ್ನೂ ನೋಡಿಕೊಳ್ಳಬೇಕು. ಮನುಜಾಧಿಪನೇ, ಯಾವ ಚಾರರಲ್ಲಿ ನಮಗೆ ವಿಶ್ವಾಸವಿದೆಯೋ ಅವರು ತಮ್ಮ ವೇತನವನ್ನು ಪಡೆದು ಪುನಃ ಪಾಂಡವರನ್ನು ಹುಡುಕಲು ಹೊರಡಲಿ. ನಮ್ಮ ಉದ್ದೇಶಕ್ಕೆ ಅನುಗುಣವಾಗಿ ಸಂಚರಿಸಿ ಅವರು ಎಲ್ಲ ಕಡೆಗಳಲ್ಲಿಯೂ ಪಾಂಡವರನ್ನು ಹುಡುಕಲಿ.

ಘ್ರಾಣೈಃ ಪಶ್ಯಂತಿ ಪಶವೋ ವೇದೈರೇವ ದ್ವಿಜೋತ್ತಮಾಃ ।
ಚಾರೈಃ ಪಶ್ಯಂತಿ ರಾಜಾನಃ ಚಕ್ಷುರ್ಭ್ಯಾಮಿತರೇ ಜನಾಃ ॥೧೮॥

ಪಶುಗಳು ಘ್ರಾಣದಿಂದ ನೋಡುತ್ತವೆ, ಬ್ರಾಹ್ಮಣಶ್ರೇಷ್ಠರು ವೇದದಿಂದ ನೋಡುತ್ತಾರೆ, ರಾಜರು ಚಾರರ ಮೂಲಕ ನೋಡುತ್ತಾರೆ, ಉಳಿದ ಜನರು ಕಣ್ಣಿನಿಂದ ನೋಡುತ್ತಾರೆ.

ಯಥೋಕ್ತಾಶ್ಚಾರಪುರುಷಾಃ ಮೃಗಯಂತು ಪುನಃ ಪುನಃ ।
ಏತಾಂಶ್ಚಾನ್ಯಾಂಶ್ಚ ಸುಬಹೂನ್ ದೇಶಾನ್ ಜನಪದಾಂಸ್ತಥಾ ॥೧೯॥

ನಾವು ಹೇಳಿದ ಗುಣವುಳ್ಳ ಚಾರಪುರುಷರು ನಾವು ಹೇಳಿದಂತೆ ಈ ಪ್ರದೇಶಗಳಲ್ಲಿಯೂ ಮತ್ತು ಇನ್ನೂ ಅನೇಕ ದೇಶ ಮತ್ತು ಜನಪದಗಳಲ್ಲಿಯೂ ಪುನಃ ಪುನಃ ಹುಡುಕಲಿ.

ನ ಚ ತೇಷಾಂ ಗತಿರ್ವಾಸಃ ಪ್ರವೃತ್ತಿರ್ವೋಪಲಕ್ಷ್ಯತೇ ।
ಪ್ರತ್ಯಾಗತಾ ವಾ ಗೂಢಾಸ್ತೇ ಪರಮೂರ್ತಗುಣಾ ಇವ ॥೨೦॥

ಅವರ ಗತಿಯಾಗಲೀ, ವಾಸವಾಗಲೀ, ಪ್ರವೃತ್ತಿಯಾಗಲೀ ಕಾಣಬರುತ್ತಿಲ್ಲ. ಅವರು ಯಾರಿಗಾದರೂ ಜನರಿಗೆ ತಿಳಿದಿರಬಹುದು ಅಥವಾ ಅಮೂರ್ತವಾದ ಆಕಾಶದಂತೆ ಗೂಢರಾಗಿ ನಾಶರಹಿತರಾಗಿಯೂ ಇರಬಹುದು.

ವ್ಯಾಲೈರ್ವಾऽಪಿ ಮಹಾರಣ್ಯೇ ನಿಹತಾಃ ಶೂರಮಾನಿನಃ ।
ದ್ವೀಪಂ ವಾ ಪರಮಂ ಪ್ರಾಪ್ತಾ ಗಿರಿದುರ್ಗವನೇಷ್ವಪಿ ॥೨೧॥

ತಮ್ಮನ್ನು ಶೂರರೆಂದು ತಿಳಿದುಕೊಳ್ಳುವ ಅವರು ಮಹಾರಣ್ಯದಲ್ಲಿ ವಿಷ ಸರ್ಪಗಳಿಂದಲೋ ಅಥವಾ ಮದಗಜಗಳಿಂದಲೋ ಹತರಾಗಿರಬಹುದು. ಅಥವಾ ಯಾವುದಾದರೂ ದ್ವೀಪದಲ್ಲಿ ಅಥವಾ ಗಿರಿದುರ್ಗವನಗಳಲ್ಲಿ ಅಡಗಿಕೊಂಡಿರಬಹುದು.

ಹೀನದರ್ಪಾ ನಿರಾಶಾಸ್ತೇ ಭಕ್ಷಿತಾ ವಾऽಪಿ ರಾಕ್ಷಸೈಃ ।
ಅಥವಾ ವಿಷಮಂ ಪ್ರಾಪ್ಯ ವಿನಷ್ಟಾಃ ಶಾಶ್ವತೀಃ ಸಮಾಃ ॥೨೨॥

ಅಥವಾ ದರ್ಪಹೀನರೂ, ನಿರಾಶರೂ ಆದ ಅವರು ರಾಕ್ಷಸರಿಂದ ಭಕ್ಷಿಸಲ್ಪಟ್ಟಿರಬಹುದು ಅಥವಾ ಬಹಳ ಕಷ್ಟಕ್ಕೆ ಸಿಲುಕಿ ಶಾಶ್ವತವಾಗಿ ನಾಶವನ್ನು ಹೊಂದಿರಬಹುದು.

ಯಥೋದ್ದಿಷ್ಟಾಶ್ಚರಾಃ ಕೇಚಿದ್ ದೇಶಾನ್ ಗಚ್ಛಂತು ಸಂವೃತಾಃ ।
ಏತೇ ಚಾನ್ಯೇ ಚ ಭೂಯೋऽಪಿ ದೇಶಾದ್ ದೇಶಂ ಯಥಾವಿಧಿ ॥೨೩॥

ಇತಿ ತೇಷಾಂ ಗತಿರ್ವಾಸಃ ಪ್ರವೃತ್ತಿಶ್ಚೋಪಲಭ್ಯತೇ ॥೨೪॥

ನಮಗೆ ಅಭಿಪ್ರೇತರಾದ ಗೂಢಚಾರರು ವೇಷವನ್ನು ಮರೆಸಿಕೊಂಡು ಬೇರೆ ದೇಶಗಳಿಗೆ ಹೋಗಲಿ. ಈ ಚಾರರು ಮತ್ತು ಬೇರೆ ಚಾರರೂ ಸಹ ಪುನಃ ಒಂದು ದೇಶದಿಂದ ಒಂದು ದೇಶಕ್ಕೆ ಹೋಗಿ ವಿಧಿಪ್ರಕಾರವಾಗಿ ಅವರನ್ನು ಹುಡುಕಲಿ. ಆಗ ಅವರ ಗತಿಯಾಗಲೀ, ವಾಸವಾಗಲೀ, ಪ್ರವೃತ್ತಿಯಾಗಲೀ ತಿಳಿಯಬಹುದು.

ತಸ್ಮಾನ್ಮಾನಸಮವ್ಯಗ್ರಂ ಕೃತ್ವಾऽऽತ್ಮಾನಂ ನಿಯಮ್ಯ ಚ ।
ಕುರು ಕಾರ್ಯಂ ಯಥೋತ್ಸಾಹಂ ಯನ್ಮನ್ಯಸಿ ನರಾಧಿಪ ॥೨೫॥

ಆದ್ದರಿಂದ ಎಲೈ ನರಾಧಿಪನೇ, ಮನಸ್ಸಿನಲ್ಲಿ ಸಮಾಧಾನವನ್ನು ತಂದುಕೊಂಡು ನಿನ್ನನ್ನು ನೀನು ನಿಯಂತ್ರಿಸಿಕೊಂಡು ನಿನ್ನ ಉತ್ಸಾಹಕ್ಕೆ ಅನುಗುಣವಾಗಿ ಯಾವುದು ಯೋಗ್ಯವೆನಿಸುತ್ತದೆಯೋ ಅಂತಹ ಕಾರ್ಯವನ್ನು ಮಾಡುವವನಾಗು (ಎಂದು ಹೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಏಕೋನತ್ರಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಮೂವತ್ತನೆಯ ಅಧ್ಯಾಯ

ದ್ರೋಣ ಮತ್ತು ಭೀಷ್ಮರಿಂದ ಪಾಂಡವರು ವಾಸಿಸುವ ದೇಶದ ಲಕ್ಷಣಕಥನ

ವೈಶಂಪಾಯನಃ

ಅಥಾಽಬ್ರವೀತ್ ಸಭಾಮಧ್ಯೇ ದ್ರೋಣಃ ಸೂಕ್ಷ್ಮಾರ್ಥದರ್ಶಿವಾನ್ ॥೧॥

ನ ತಾದೃಶಾ ವಿನಶ್ಯಂತಿ ನಾಪಿ ಯಾಂತಿ ಪರಾಭವಮ್ ॥೨॥

ಶೂರಾಃ ಸುಕೃತವಿದ್ಯಾಶ್ಚ ಬುದ್ಧಿಮಂತೋ ಜಿತೇಂದ್ರಿಯಾಃ ।
ಧರ್ಮಜ್ಞಾಃ ಸತ್ಯಸಂಧಾಶ್ಚ ಯುಧಿಷ್ಠಿರಮನುವ್ರತಾಃ ॥೩॥

ವೈಶಂಪಾಯನ– ಅನಂತರ ಸಭೆಯ ಮಧ್ಯದಲ್ಲಿ ಸೂಕ್ಷ್ಮಾರ್ಥದರ್ಶಿಗಳಾದ ದ್ರೋಣರು ಮಾತನಾಡಿದರು. ಶೂರರೂ, ಎಲ್ಲವಿದ್ಯೆಗಳನ್ನೂ ಚೆನ್ನಾಗಿ ಅಭ್ಯಾಸ ಮಾಡಿದವರೂ, ಬುದ್ಧಿವಂತರೂ, ಧರ್ಮಜ್ಞರೂ, ಸತ್ಯಸಂಧರೂ, ಯುಧಿಷ್ಠಿರನ ಆಜ್ಞಾಪಾಲಕರೂ ಆದ ಅಂತಹ ಪಾಂಡವರು ನಾಶವನ್ನು ಹೊಂದುವುದಿಲ್ಲ ಅಥವಾ ಪರಾಭವವನ್ನೂ ಹೊಂದುವುದಿಲ್ಲ.

ನೀತಿಧರ್ಮಾರ್ಥತತ್ತ್ವಜ್ಞಂ ಪಿತೃವಚ್ಚ ಸಮಾಹಿತಮ್ ।
ಧರ್ಮೇ ಸ್ಥಿತಂ ಸತ್ಯಧೃತಿಂ ಜ್ಯೇಷ್ಠಂ ಶ್ರೇಷ್ಠಾಪಚಾಯಿನಮ್ ॥೪॥

ಅನುವ್ರತಾ ಮಹಾತ್ಮಾನೋ ಭ್ರಾತರೋ ಭ್ರಾತರಂ ಪ್ರಿಯಮ್ ।
ಅಜಾತಶತ್ರುಂ ದುರ್ಧರ್ಷಂ ಸ ತಾನಪಿ ತಥಾऽನುಜಾನ್ ॥೫॥

ತಮ್ಮಂದಿರಾದ ಭೀಮಾದಿಗಳು ನೀತಿಶಾಸ್ತ್ರವನ್ನೂ, ಧರ್ಮಶಾಸ್ತ್ರವನ್ನೂ, ಅರ್ಥಶಾಸ್ತ್ರವನ್ನೂ ತಿಳಿದಂತಹ ತಂದೆಯಂತೆ ಸಮಾಧಾನದಿಂದಿರುವ, ಧರ್ಮದಲ್ಲಿಯೇ ವ್ರತನಾದ, ಸತ್ಯದಲ್ಲಿ ಧೈರ್ಯವನ್ನು ಹೊಂದಿರುವ, ಪೂಜ್ಯರನ್ನು ಪೂಜಿಸುವ, ತಮ್ಮ ಪ್ರಿಯನಾದ ಅಣ್ಣನಾದ, ದುರ್ಧರ್ಷನಾದ, ಯಾರಿಗೂ ಸೋಲದಿರುವ, ಅಜಾತಶತ್ರುವಾದ, ಯುಧಿಷ್ಠಿರನನ್ನು ಅನುಸರಿಸಿದ್ದಾರೆ. ಆ ಯುಧಿಷ್ಠಿರನಾದರೂ ತಮ್ಮಂದಿರನ್ನು ಹಾಗೆಯೇ ನೋಡಿಕೊಳ್ಳುತ್ತಾನೆ.

ತೇಷಾಂ ತಥಾ ವಿಧೇಯಾನಾಂ ನಿಭೃತಾನಾಂ ಮಹಾತ್ಮನಾಮ್ ।
ಕಿಮರ್ಥಂ ನೀತಿಮಾನ್ ಪ್ರಾಜ್ಞೋ ನಿಃಶ್ರೇಯೋ ನ ಕರಿಷ್ಯತಿ ॥೬॥

ಹಾಗೆ ವಿಧೇಯರಾಗಿ ಎಚ್ಚರಿಕೆಯಿಂದ ಇರುವ ಮಹಾತ್ಮರಾದ ತಮ್ಮಂದಿರಿಗೆ ನೀತಿಜ್ಞನೂ, ಪ್ರಾಜ್ಞನೂ ಆದ ಯುಧಿಷ್ಠಿರನೂ ಏಕೆ ಶ್ರೇಯಸ್ಸನ್ನು ಮಾಡುವುದಿಲ್ಲ?

ತಸ್ಮಾದ್ ಯತ್ನಾತ್ ಪರೀಕ್ಷಧ್ವಂ ನ ತಾವತ್ ಸಮಯೋ ಗತಃ ।
ನ ತೇ ವಿನಾಶಮೃಚ್ಛೇಯುರಿತಿ ಮೇ ನೈಷ್ಠಿಕೀ ಮತಿಃ ॥೭॥

ಆದ್ದರಿಂದ ಪ್ರಯತ್ನಪೂರ್ವಕವಾಗಿ ಅವರು ಎಲ್ಲಿದ್ದಾರೆಂದು ಪರೀಕ್ಷಿಸಿ. ಸದ್ಯಕ್ಕೆ ಅಜ್ಞಾತವಾಸದ ಸಮಯವು ಮುಗಿದಿಲ್ಲ. ಅವರು ಎಂದೂ ನಾಶಹೊಂದಲಾರರು ಎಂಬುದು ನನ್ನ ದೃಢವಾದ ನಂಬಿಕೆ.

ಚಿಂತ್ಯತಾಂ ಚೈವ ಯತ್ ಕಾರ್ಯಂ ತಚ್ಚ ಕ್ಷಿಪ್ರಮಕಾಲಿಕಮ್ ।
ಕ್ರಿಯತಾಂ ಸಾಧು ನಿಶ್ಚಿತ್ಯ ವಾಸಶ್ಚೈಷಾಂ ವಿಚಿಂತ್ಯತಾಮ್ ॥೮॥

ಏನು ಮಾಡಬೇಕೆಂಬುದನ್ನು ಚಿಂತಿಸಿ. ವಿಳಂಬ ಮಾಡದೆ ಶೀಘ್ರವಾಗಿ ಅದನ್ನು ಮಾಡಿ. ಚೆನ್ನಾಗಿ ಆಲೋಚನೆ ಮಾಡಿ ಅವರು ಎಲ್ಲಿ ವಾಸವಾಗಿದ್ದಾರೆಂಬುದನ್ನು ಚಿಂತಿಸಿ.

ಯಥಾ ಚ ಪಾಂಡುಪುತ್ರಾಣಾಂ ಸರ್ವಾರ್ಥೇಷು ಹಿತಾತ್ಮನಾಮ್ ।
ಪ್ರವೃತ್ತಿರುಪಲಭ್ಯೇತ ತಥಾ ನೀತಿರ್ವಿಧೀಯತಾಮ್ ॥೯॥

ಎಲ್ಲ ವಿಷಯಗಳಲ್ಲಿಯೂ ಹಿತವಾಗಿಯೇ ನಡೆದುಕೊಳ್ಳುವ ಪಾಂಡುಪುತ್ರರ ಸುದ್ದಿಯು ಹೇಗೆ ತಿಳಿಯುತ್ತದೆಯೋ ಹಾಗೆ ನೀತಿಯನ್ನು ರೂಪಿಸಿ.

ಸರ್ವೋಪಾಯೈರ್ಯತಸ್ವ ತ್ವಂ ಯಥಾ ಪಶ್ಯಸಿ ಪಾಂಡವಾನ್ ।
ದುರ್ಜ್ಞೇಯಾಃ ಖಲು ತೇ ವೀರಾ ರಕ್ಷ್ಯಾ ನಿತ್ಯಂ ಚ ದೈವತೈಃ ॥೧೦॥

ಪಾಂಡವರನ್ನು ಕಾಣುವಂತೆ ನೀನು ಎಲ್ಲಾ ಉಪಾಯಗಳಿಂದಲೂ ಪ್ರಯತ್ನವನ್ನು ಮಾಡು. ಯಾವಾಗಲೂ ದೇವತೆಗಳಿಂದ ರಕ್ಷಿಸಲ್ಪಟ್ಟ ಅವರು ಕಾಣಿಸಿಗುವುದು ಬಹಳ ಕಷ್ಟ.

ಶುದ್ಧಾತ್ಮಾ ಜ್ಞಾನವಾನ್ ಪಾರ್ಥಃ ಸತ್ಯವಾನ್ ನೀತಿಮಾನ್ ಶುಚಿಃ ।
ತೇಜೋರಾಶಿಭಿರಾಪೂರ್ಣೋ ದಹೇದಪಿ ಚ ಚಕ್ಷುಷಾ ॥೧೧॥

ಶುದ್ಧ ಮನಸ್ಸುಳ್ಳವನೂ, ಜ್ಞಾನಿಯೂ, ಸತ್ಯವಂತನೂ, ನೀತಿವಂತನೂ, ಶುಚಿಯೂ, ತೇಜೋರಾಶಿಯಿಂದ ಪೂರ್ಣನೂ ಆದ ಯುಧಿಷ್ಠಿರನು ದೃಷ್ಟಿಯಿಂದಲೂ ಸುಟ್ಟಾನು.

ತಸ್ಮಾದ್ ಯತ್ನಶ್ಚ ಕ್ರಿಯತಾಂ ಭೂಯಶ್ಚ ಮೃಗಯಾಮಹೇ ।
ಬ್ರಾಹ್ಮಣೈಶ್ಚಾರಪುರುಷೈಃ ಸಿದ್ಧೈಸ್ತಾಪಸನೈಪುಣೈಃ ॥೧೨॥

ಆದ್ದರಿಂದ ಪ್ರಯತ್ನವನ್ನು ಮಾಡು. ಬ್ರಾಹ್ಮಣರಿಂದಲೂ, ತಪಸ್ಸಿನಲ್ಲಿ ನಿಪುಣರಾದ ಸಿದ್ಧರಿಂದಲೂ, ಚಾರಪುರುಷರಿಂದಲೂ ಪುನಃ ಪಾಂಡವರನ್ನು ಹುಡುಕೋಣ.

ವೈಶಂಪಾಯನಃ

ತತಃ ಶಾಂತನವೋ ಧೀಮಾನ್ ಭಾರತಾನಾಂ ಪಿತಾಮಹಃ ।
ಶ್ರುತವಾನ್ ದೇಶಕಾಲಜ್ಞೋ ನೀತಿಮಾಂಶ್ಚ ಮಹಾಮತಿಃ ॥೧೩॥

ತಸ್ಮಿನ್ನುಪರತೇ ವಾಕ್ಯೇ ಆಚಾರ್ಯಸ್ಯ ಮಹಾತ್ಮನಃ ।
ಅನಂತರಮುವಾಚೇದಂ ವಾಕ್ಯಂ ಹೇತ್ವರ್ಥಸಂಹಿತಮ್ ॥೧೪॥

ವೈಶಂಪಾಯನ– ಅನಂತರ ಮಹಾತ್ಮರಾದ ದ್ರೋಣರ ಮಾತು ಮುಗಿದ ಮೇಲೆ ಮೇಧಾವಿಯೂ, ಭಾರತ ಪಿತಾಮಹರೂ, ಬಹಳ ಶಾಸ್ತ್ರಗಳನ್ನು ಕೇಳಿದವರೂ,

ದೇಶಕಾಲಗಳನ್ನು ತಿಳಿದವರೂ, ನೀತಿವಂತರೂ, ಮಹಾಬುದ್ಧಿಯುಳ್ಳವರೂ ಆದ ಭೀಷ್ಮರು ಯುಕ್ತಿಯುಕ್ತವಾದ ಈ ಮಾತುಗಳನ್ನು ಆಡಿದರು.

ಯುಧಿಷ್ಠಿರೇ ಸಮಾಸಕ್ತಾಂ ಧರ್ಮಜ್ಞೇ ಧರ್ಮಸಂವೃತಾಮ್ ।
ಪಾಂಡವೇ ನಿತ್ಯಮವ್ಯಗ್ರಾಂ ಗಿರಂ ಭೀಷ್ಮಃ ಸಮಾದದೇ ॥೧೫॥

ಭೀಷ್ಮರು ಧರ್ಮಜ್ಞನಾದ ಪಾಂಡುಪುತ್ರನಾದ ಯುಧಿಷ್ಠಿರನ ವಿಷಯದಲ್ಲಿ ಯಾವಾಗಲೂ ಅವರಿಗಿದ್ದ ಧರ್ಮಸಹಿತವಾದ ಅವ್ಯಗ್ರವಾದ ಮಾತುಗಳನ್ನು ಆಡಲು ಪ್ರಾರಂಭಿಸಿದರು.

ಅಸತ್ಸು ದುರ್ಲಭಾಂ ನಿತ್ಯಂ ಸತಾಂ ಚಾಭಿಮತಾಂ ಸದಾ ।
ಭೀಷ್ಮಸ್ತ್ವಬ್ರವದತ್ ತತ್ರ ಗಿರಂ ಸಾಧುಭಿರರ್ಚಿತಾಮ್ ॥೧೬॥

ಭೀಷ್ಮರು ದುಷ್ಟರು ಎಂದೂ ಮಾತನಾಡಲಾರದಂತಹ, ಸಜ್ಜನರಿಗೆ ಅಭಿಮತವಾದ, ಸಜ್ಜನರಿಂದ ಪೂಜಿತವಾದ ಮಾತುಗಳನ್ನು ಅಲ್ಲಿ ಆಡಿದರು.

ಯಥಾ ನೋ ಬ್ರಾಹ್ಮಣೋऽವಾದೀದ್ ಆಚಾರ್ಯಃ ಸರ್ವಧರ್ಮವಿತ್।
ಶ್ರುತಶಾಸ್ತ್ರೋಪಸಂಪನ್ನಾ ನಾಶಂ ನಾಯಾಂತಿ ಪಾಂಡವಾಃ ॥೧೭॥

ಸರ್ವಧರ್ಮಗಳನ್ನೂ ತಿಳಿದ ಬ್ರಾಹ್ಮಣರಾದ ದ್ರೋಣಾಚಾರ್ಯರು ಹೇಳಿದಂತೆ ಶ್ರುತಶಾಸ್ತ್ರಸಂಪನ್ನರಾದ ಪಾಂಡವರು ನಾಶವನ್ನು ಹೊಂದುವುದಿಲ್ಲ.

ಸರ್ವಲಕ್ಷಣಸಂಪನ್ನಾಃ ಸಾಧುವೃತ್ತಸಮನ್ವಿತಾಃ ।
ವೃದ್ಧಾನುಶಾಸನೇ ಯತ್ತಾಃ ಸತ್ಯಧರ್ಮಪರಾಯಣಾಃ ॥೧೮॥

ಅವರು ಸರ್ವಲಕ್ಷಣಸಂಪನ್ನರೂ, ಒಳ್ಳೆಯ ನಡತೆಯಿಂದ ಕೂಡಿದವರೂ, ಸತ್ಯಧರ್ಮಪರಾಯಣರೂ, ಹಿರಿಯರ ಅನುಶಾಸನದಲ್ಲಿ ಪ್ರಯತ್ನಪೂರ್ವಕವಾಗಿ ಇರುವವರೂ ಆಗಿದ್ದಾರೆ.

ಸಮಯಂ ಸಮಯಜ್ಞಾಸ್ತೇ ಪಾಲಯಂತಃ ಶುಭವ್ರತಾಃ ।
ನ ವಿಷೀದಂತಿ ತೇ ಪಾರ್ಥಾ ಉದ್ವಹಂತಃ ಸತಾಂ ಧುರಮ್ ॥೧೯॥

ಶುಭವ್ರತವನ್ನು ಧರಿಸಿ ಸಜ್ಜನರ ಜವಾಬ್ದಾರಿಯನ್ನು ಹೊತ್ತು ತಮ್ಮ ಪ್ರತಿಜ್ಞೆಯನ್ನು ಪಾಲಿಸುವ ಪಾಂಡವರು ವಿಷಾದವನ್ನು (ನಾಶವನ್ನು) ಹೊಂದುವುದಿಲ್ಲ.

ಕ್ಷತ್ರಧರ್ಮರತಾಃ ನಿತ್ಯಂ ಕೇಶವಾನುಗತಾಃ ಸದಾ ।
ಪ್ರವೀರಪುರುಷಾಸ್ತೇ ವೈ ಮಹಾತ್ಮಾನೋ ಮಹಾವ್ರತಾಃ ॥೨೦॥

ಅವರು ಕ್ಷತ್ರಧರ್ಮದಲ್ಲಿ ನಿರತರಾದವರು. ಯಾವಾಗಲೂ ಕೃಷ್ಣನನ್ನು ಅನುಸರಿಸುವವರು. ವೀರಪುರುಷರು, ಮಹಾತ್ಮರು ಮತ್ತು ಮಹಾವ್ರತಗಳನ್ನು ಕೈಗೊಂಡವರು.

ತಪಸಾ ಚೈವ ಗುಪ್ತಾಸ್ತೇ ಸ್ವವೀರ್ಯೇಣ ಚ ಪಾಂಡವಾಃ ।
ನ ನಾಶಮಧಿಗಚ್ಛೇಯುರಿತಿ ಮೇ ನೈಷ್ಠಿಕೀ ಮತಿಃ ॥೨೧॥

ಪಾಂಡವರು ತಮ್ಮ ಪರಾಕ್ರಮದಿಂದಲೂ ಮತ್ತು ತಪಸ್ಸಿನಿಂದಲೂ ರಕ್ಷಿತರಾಗಿದ್ದಾರೆ. ಅವರು ನಾಶವನ್ನು ಹೊಂದಲಾರರು ಎಂಬುದು ನನ್ನ ದೃಢವಾದ ನಿಶ್ಚಯ.

ತತ್ರ ಬುದ್ಧಿಂ ಪ್ರವಕ್ಷ್ಯಾಮಿ ಪಾಂಡವಾನ್ವೇಷಣೇ ಶೃಣು ।
ನ ತು ನೀತಿಃ ಸುನೀತಸ್ಯ ಶಕ್ಯತೇ ವೇದಿತುಂ ಪರೈಃ ॥೨೨॥

ಪಾಂಡವರನ್ನು ಹುಡುಕಲು ಉಪಯುಕ್ತವಾದ ಬುದ್ಧಿಯನ್ನು ಹೇಳುವೆನು. ಅದನ್ನು ಕೇಳು. ಒಳ್ಳೆಯ ನೀತಿ ಇರುವ ಮನುಷ್ಯನ ನೀತಿಯನ್ನು ಶತ್ರುಗಳು ತಿಳಿಯಲು ಸಾಧ್ಯವಿಲ್ಲ.

ಯತ್ತು ಶಕ್ಯಮಿಹಾಸ್ಮಾಭಿಸ್ತಾನ್ ವೈ ಸಂಚಿಂತ್ಯ ಪಾಂಡವಾನ್ ।
ಬುದ್ಧ್ಯಾ ಪ್ರಣೇತುಂ ತದ್ವೋऽಹಂ ಪ್ರವಕ್ಷ್ಯಾಮಿ ನಿಬೋಧತ ॥೨೩॥

ಪಾಂಡವರ ವಿಷಯದಲ್ಲಿ ಯೋಚಿಸಿ ನಾವು ಏನು ಮಾಡಲು ಸಾಧ್ಯವೋ ಅದನ್ನು ನಮ್ಮ ಬುದ್ಧಿಯಿಂದ ನೆರವೇರಿಸಲು ನಾನು ನಿಮಗೆ ಹೇಳುವೆನು. ಅದನ್ನು ತಿಳಿಯಿರಿ.

ನ ತ್ವಿಯಂ ಸಾಧು ವಕ್ತವ್ಯಾ ತಸ್ಯ ನೀತಿಃ ಕಥಂಚನ ।
ವೃದ್ಧಾನುಶಾಸನೇ ತಾತ ತಿಷ್ಠತಃ ಸತ್ಯವಾದಿನಃ ॥೨೪॥

ನಿಜವಾಗಿ ಸತ್ಯವಾದಿಯೂ, ಹಿರಿಯರ ಶಾಸನದಲ್ಲಿ ಇರುವವನೂ ಆದ ಯುಧಿಷ್ಠಿರನ ನೀತಿಯನ್ನು ನಾನು ಹೇಳಬಾರದು.

ಅಯುಕ್ತಂ ತು ಮಯಾ ವಕ್ತುಂ ತುಲ್ಯಾ ಮೇ ಕುರುಪಾಂಡವಾಃ ।
ನಿವಾಸಂ ಪಾಂಡುಪುತ್ರಾಣಾಂ ಸಂಚಿಂತ್ಯ ಚ ವದಾಮ್ಯಹಮ್ ॥೨೫॥

ಬಹುನಾ ಕಿಂ ಪ್ರಲಾಪೇನ ಯತೋ ಧರ್ಮಸ್ತತೋ ಜಯಃ ॥೨೬॥

ನನಗೆ ಕುರುಪಾಂಡವರು ಸಮಾನರಾದವರು. ಆದ್ದರಿಂದ ನಾನು ಯುಧಿಷ್ಠಿರನ ನೀತಿಯನ್ನು ಹೇಳುವುದು (ಭೇದಿಸುವುದು) ಯುಕ್ತವಲ್ಲ. ಪಾಂಡವರ ವಾಸಸ್ಥಾನವನ್ನು ಚಿಂತಿಸಿ ಕೆಲವು ವಿಷಯಗಳನ್ನು ಹೇಳುತ್ತೇನೆ. ಹೆಚ್ಚು ಮಾತನಾಡಿ ಏನು ಪ್ರಯೋಜನ? ಎಲ್ಲಿ ಧರ್ಮ ವಿದೆಯೋ ಅಲ್ಲಿ ಜಯವುಂಟಾಗುತ್ತದೆ.

ಅವಶ್ಯಂ ತು ನಿಯುಕ್ತೇನ ಸಭಾಮಧ್ಯೇ ವಿವಕ್ಷತಾ ।
ಯಥಾಮತಿ ವಿವೇಕ್ತವ್ಯಂ ಸದೃಶಂ ಧರ್ಮಲಿಪ್ಸಯಾ ॥೨೭॥

ತತ್ರ ನಾಹಂ ತಥಾ ಮನ್ಯೇ ಯಥಾಽನ್ಯೇ ಮೇನಿರೇ ಜನಾಃ ॥೨೮॥

ಸಭೆಯ ಮಧ್ಯದಲ್ಲಿ ಮಾತನಾಡಲು ಅವಕಾಶವನ್ನು ನೀಡಿದಾಗ ಧರ್ಮವನ್ನು ಸಂಪಾದಿಸುವ ಇಚ್ಛೆಯುಳ್ಳವನು ತನ್ನ ಬುದ್ಧಿಗೆ ತೋರಿದಷ್ಟು ಗುಣದೋಷಗಳನ್ನು ಚಿಂತಿಸಿ ಯುಕ್ತವಾದುದನ್ನೇ ಮಾತನಾಡಬೇಕು. ಈ ವಿಷಯದಲ್ಲಿ ನಾನು ಉಳಿದವರು ತಿಳಿದಂತೆ (ಪಾಂಡವರು ನಾಶವಾಗಿದ್ದಾರೆಂದು) ಭಾವಿಸುವುದಿಲ್ಲ.

ನಿವಾಸಂ ಪಾಂಡುಪುತ್ರಾಣಾಂ ಶೃಣು ತ್ವಂ ಮನುಜಾಧಿಪ ।
ಪುರೇ ಜನಪದೇ ವಾಽಪಿ ಯತ್ರ ರಾಜಾ ಯುಧಿಷ್ಠಿರಃ ॥೨೯॥

ನಾಸೂಯಕೋ ನಾ ವಾಗ್‌ದುಷ್ಟೋ ನಾಲ್ಪಭೋಗ್ಯೋ ನ ಮತ್ಸರೀ ।
ಭವಿಷ್ಯತಿ ಜನಸ್ತತ್ರ ಸ್ವಯಂ ಧರ್ಮಮನುವ್ರತಃ ॥೩೦॥

ಎಲೈ ಮನುಜಾಧಿಪನೇ, ರಾಜನಾದ ಯುಧಿಷ್ಠಿರನು ಯಾವ ಪಟ್ಟಣದಲ್ಲಿ ಅಥವಾ ರಾಜ್ಯದಲ್ಲಿ ಇರುತ್ತಾನೆಯೋ ಅಲ್ಲಿ ಪಾಂಡುಪುತ್ರರ ನಿವಾಸದೇಶದಲ್ಲಿ ಅಸೂಯೆ ಪಡುವವನಾಗಲೀ, ದುಷ್ಟವಾತುಗಳನ್ನು ಆಡುವವನಾಗಲೀ,

ಅಲ್ಪಭೋಗವುಳ್ಳವನಾಗಲೀ, ಮಾತ್ಸರ್ಯವುಳ್ಳವನಾಗಲೀ ಇರುವುದಿಲ್ಲ. ಅಲ್ಲಿ ಜನರು ಸ್ವತಃ ಧರ್ಮದಲ್ಲಿ ಆಸಕ್ತರಾಗಿರುತ್ತಾರೆ.

ದಾನಶೀಲಃ ಕ್ಷಮಾಯುಕ್ತೋ ನಿರ್ಘೃತೋ ಹ್ರೀನಿಷೇಧನಃ ।
ಪ್ರಿಯವಾಕ್ ಸತ್ಯವಾಕ್ ಶೂರೋ ಧರ್ಮಶೀಲೋ ಜಿತೇಂದ್ರಿಯಃ ॥

ಹೃಷ್ಟಸ್ತುಷ್ಟಃ ಶುಚಿರ್ದಾಂತೋ ಯತ್ರ ರಾಜಾ ಯುಧಿಷ್ಠಿರಃ ।
ಪುರೇ ಜನಪದೇ ಭವ್ಯೋ ಯತ್ರ ರಾಜಾ ಯುಧಿಷ್ಠಿರಃ ॥೩೨॥

ಎಲ್ಲಿ ಭವ್ಯನಾದ ಯುಧಿಷ್ಠಿರ ರಾಜನು ವಾಸಮಾಡುತ್ತಾನೆಯೋ ಅಂತಹ ದೇಶದಲ್ಲಿ ಜನರು ದಾನಶೀಲರೂ, ಕ್ಷಮೆಯಿಂದ ಕೂಡಿದವರೂ, ಸಂತುಷ್ಟರೂ, ದಾಕ್ಷಿಣ್ಯ ಸ್ವಭಾವವುಳ್ಳವರೂ, ಪ್ರಿಯವಾಗಿ ಮಾತನಾಡುವವರೂ, ಸತ್ಯವಾಗಿ ಮಾತನಾಡುವವರೂ, ಧರ್ಮಶೀಲರೂ, ಜಿತೇಂದ್ರಿಯರೂ, ಸಂತೋಷದಿಂದಲೂ ತೃಪ್ತಿಯಿಂದಲೂ ಕೂಡಿದವರೂ, ಶುದ್ಧರೂ, ಇಂದ್ರಿಯನಿಗ್ರಹವುಳ್ಳವರೂ ಆಗಿರುತ್ತಾರೆ.

ಬ್ರಹ್ಮಘೋಷಾಶ್ಚ ಭೂಯಾಂಸಃ ಶಬ್ದಾಃ ಪುಣ್ಯಾಸ್ತಥೈವ ಚ ।
ಕ್ರತವಶ್ಚ ಭವಿಷ್ಯಂತಿ ಭೂಯಾಂಸೋ ಭೂರಿದಕ್ಷಿಣಾಃ ॥೩೩॥

ಅಲ್ಲಿ ಬಹಳವಾದ ವೇದಘೋಷವೂ ಪುಣ್ಯಕರವಾದ ಶಬ್ದಗಳೂ, ಬಹಳ ದಕ್ಷಿಣೆಗಳಿಂದ ಅನೇಕ ಯಾಗಗಳೂ ಉಂಟಾಗುತ್ತವೆ.

ಸದಾ ಚ ತತ್ರ ಪರ್ಜನ್ಯಃ ಸಮ್ಯಗ್ ವರ್ಷೀ ನ ಸಂಶಯಃ ।
ಸಂಪನ್ನಸಸ್ಯಾ ಚ ಮಹೀ ಭವಿಷ್ಯತಿ ನಿರೀತಿಕಾ ॥೩೪॥

ಅಲ್ಲಿ ಯಾವಾಗಲೂ ಪರ್ಜನ್ಯನು ಚೆನ್ನಾಗಿ ಮಳೆಯನ್ನು ಸುರಿಸುತ್ತಾನೆ. ಭೂಮಿಯಲ್ಲಿ ಸಸ್ಯಗಳು ಚೆನ್ನಾಗಿ ಬೆಳೆಯುತ್ತವೆ. ಯಾವ ಈತಿಬಾಧೆಗಳೂ ಇರುವುದಿಲ್ಲ. ಇದರಲ್ಲಿ ಸಂಶಯವಿಲ್ಲ.

ಗುಣವಂತಿ ಚ ಧಾನ್ಯಾನಿ ರಸವಂತಿ ಫಲಾನಿ ಚ ।
ಗಂಧವಂತಿ ಚ ಮಾಲ್ಯಾನಿ ಶುಭಶಬ್ದಾ ಚ ಭಾರತೀ ॥೩೫॥

ಧಾನ್ಯಗಳು ಒಳ್ಳೆಯ ಗುಣದಿಂದ ಕೂಡಿರುತ್ತವೆ. ಫಲಗಳು ಒಳ್ಳೆಯ ರಸದಿಂದಲೂ, ಪುಷ್ಪಗಳು (ಮಾಲೆಗಳು) ಒಳ್ಳೆಯ ಗಂಧದಿಂದಲೂ ಕೂಡಿರುತ್ತವೆ. ಶುಭಶಬ್ದಗಳೇ ಕೇಳಿಬರುತ್ತವೆ.

ವಾಯುಶ್ಚ ಸುಖಸಂಸ್ಪರ್ಶೋ ಯತ್ರ ರಾಜಾ ಯುಧಿಷ್ಠಿರಃ ।
ಭಯಂ ಚ ನಾವಿಶೇತ್ ತತ್ರ ನಿಷ್ಪತೀಪಂ ಚ ದರ್ಶನಮ್ ॥೩೬॥

ರಾಜನಾದ ಯುಧಿಷ್ಠಿರನು ಇರುವಲ್ಲಿ ವಾಯುವು ಸುಖಸಂಸ್ಪರ್ಶವುಳ್ಳದ್ದಾಗಿ ಬೀಸುತ್ತದೆ. ಅಲ್ಲಿ ಯಾರಿಗೂ ಭಯವುಂಟಾಗುವುದಿಲ್ಲ. ಯಾರ ದರ್ಶನವು ಅಶುಭವನ್ನು ಉಂಟುಮಾಡುವುದಿಲ್ಲ.

ನ ರೋಗಾಸ್ತತ್ರ ದೃಶ್ಯಂತೇ ನಾಧಯೋ ವ್ಯಾಧಯೋ ನ ಚ ।
ನ ಚೋರಾ ನಹಿ ಡಂಭಾಶ್ಚ ನ ಚ ಬಾಧಾ ಭವಂತಿ ಚ ॥೩೭॥

ಅಲ್ಲಿ ದೇಹದ ರೋಗಗಳಾಗಲೀ, ಮಾನಸಿಕ ರೋಗಗಳಾಗಲೀ ಇರುವುದಿಲ್ಲ. ಚೋರರಾಗಲೀ, ಡಾಂಭಿಕರಾಗಲೀ ಇರುವುದಿಲ್ಲ. ಅಲ್ಲಿ ಅತಿವೃಷ್ಟಿ ಅನಾವೃಷ್ಟಿ ಮೊದಲಾದ ಪ್ರಕೃತಿ ಬಾಧೆಗಳೂ ಇರುವುದಿಲ್ಲ.

ನಾಶಕ್ತಾ ನ ಚ ದುಷ್ಟಾಶ್ಚ ಯತ್ರ ರಾಜಾ ಯುಧಿಷ್ಠಿರಃ ॥೩೮॥

ಬಹುಕ್ಷೀರದುಘಾ ಗಾವಃ ಸುಪುಷ್ಟಾಶ್ಚ ಸುದರ್ಶನಾಃ ।
ಪಯಾಂಸಿ ದಧಿಸರ್ಪಿಂಷಿ ರಸವಂತಿ ಹಿತಾನಿ ಚ ॥೩೯॥

ಯುಧಿಷ್ಠಿರ ರಾಜನು ಇರುವಲ್ಲಿ ದುರ್ಬಲರಾಗಲೀ, ದುಷ್ಟರಾಗಲೀ ಇರುವುದಿಲ್ಲ. ಗೋವುಗಳು ನೋಡುವುದಕ್ಕೆ ಸುಂದರವಾಗಿಯೂ, ಪುಷ್ಟವಾಗಿಯೂ ಇದ್ದು ಬಹಳ ಹಾಲನ್ನು ಕೊಡುತ್ತವೆ. ಹಾಲು ಮೊಸರು ಮತ್ತು ಘೃತಗಳಲ್ಲಿ ಒಳ್ಳೆಯ ರಸವಿದ್ದು ಹಿತವಾಗಿರುತ್ತವೆ.

ಸಲಿಲಾನಿ ಪ್ರಸನ್ನಾನಿ ಸರ್ವೇ ಭಾವಾಶ್ಚ ಶೋಭನಾಃ ।
ಗುಣವಂತಿ ಚ ಪಾನಾನಿ ಭೋಜ್ಯಾನಿ ವಿವಿಧಾನಿ ಚ ॥೪೦॥

ತತ್ರ ರಾಜನ್ ಭವಿಷ್ಯಂತಿ ಯತ್ರ ರಾಜಾ ಯುಧಿಷ್ಠಿರಃ ॥೪೧॥

ಎಲ್ಲಿ ರಾಜನಾದ ಯುಧಿಷ್ಠಿರನು ಇರುವನೋ ಅಲ್ಲಿ ಜಲವು ಎಲ್ಲಕಡೆಯಲ್ಲಿಯೂ ಪ್ರಸನ್ನವಾಗಿರುತ್ತದೆ. ಎಲ್ಲ ಪದಾರ್ಥಗಳೂ ಸುಂದರವಾಗಿರುತ್ತವೆ. ಅನೇಕ ವಿಧವಾದ ಭೋಜ್ಯವಸ್ತುಗಳು ಮತ್ತು ಪಾನಗಳು ಒಳ್ಳೆಯ ಗುಣದಿಂದ ಕೂಡಿರುತ್ತವೆ.

ರಸಾಃ ಸ್ಪರ್ಶಾಶ್ಚ ಗಂಧಾಶ್ಚ ಶಬ್ದಾಶ್ಚಾಪಿ ಗುಣಾನ್ವಿತಾಃ ।
ದೃಶ್ಯಾನಿ ಚ ಪ್ರಸನ್ನಾನಿ ಯತ್ರ ರಾಜಾ ಯುಧಿಷ್ಠಿರಃ ॥೪೨॥

ಶಬ್ದಸ್ಪರ್ಶ ರಸಗಂಧಗಳು ಒಳ್ಳೆಯ ಗುಣದಿಂದ ಕೂಡಿರುತ್ತವೆ. ಯುಧಿಷ್ಠಿರ ರಾಜನು ಇರುವಲ್ಲಿ ಎಲ್ಲ ದೃಶ್ಯಗಳೂ ಸುಂದರವಾಗಿರುತ್ತವೆ.

ಧರ್ಮಶ್ಚ ತತ್ರ ವೈ ಸಂತಿ ಸೇವಿತಾಶ್ಚ ದ್ವಿಜಾತಿಭಿಃ ॥೪೩॥

ಸ್ವೈಃಸ್ವೈರ್ಗುಣೈಶ್ಚ ಸಂಯುಕ್ತಾಃ ತಸ್ಮಿನ್ ವರ್ಷೇ ತ್ರಯೋದಶೇ ।
ದೇಶೇ ತತ್ರ ಭವಿಷ್ಯಂತಿ ತಾತ ಪಾಂಡವಸಂಶ್ರಿತೇ ॥೪೪॥

ಪಾಂಡವರು ತಮ್ಮ ಹದಿಮೂರನೆಯ ವರ್ಷದ ಅಜ್ಞಾತವಾಸದಲ್ಲಿ ಯಾವ ದೇಶದಲ್ಲಿ ಇರುತ್ತಾರೆಯೋ ಅಲ್ಲಿ ದ್ವಿಜರು ತಮ್ಮ ಧರ್ಮವನ್ನು ಆಚರಿಸುತ್ತಾರೆ. ಜನರು ತಮ್ಮ ತಮ್ಮ ಗುಣಗಳಿಂದ ಕೂಡಿದವರಾಗಿರುತ್ತಾರೆ.

ಸಂಪ್ರೀತಿಮಾನ್ ಜನಸ್ತತ್ರ ಸಂತುಷ್ಟಃ ಶುಚಿರವ್ಯಥಃ ।
ದೇವತಾತಿಥಿಪೂಜಾಸು ಸರ್ವಭೂತಾನುರಾಗವಾನ್ ॥೪೫॥

ಇಷ್ಟದಾನೇ ಮಹೋತ್ಸಾಹಾ ನಿತ್ಯಂ ಧರ್ಮಪರಾಯಣಾಃ ।
ವ್ಯಕ್ತವಾಕ್ಯಾಸ್ತಥಾ ತಾತ ಶುಭಕಲ್ಯಾಣಮಂಗಲಾಃ ॥೪೬॥

ಅಲ್ಲಿ ಜನರು ತೃಪ್ತಿಯಿಂದ ಇದ್ದು, ಸಂತುಷ್ಟರಾಗಿರುತ್ತಾರೆ. ಶುದ್ಧರಾಗಿ ವ್ಯಥೆಯಿಲ್ಲದೆ ಇರುತ್ತಾರೆ. ದೇವತಾತಿಥಿ ಪೂಜೆಗಳಲ್ಲಿ ನಿರತರಾಗಿರುತ್ತಾರೆ. ಸರ್ವಪ್ರಾಣಗಳಲ್ಲಿ ಪ್ರೀತಿಯುಳ್ಳವರಾಗಿರುತ್ತಾರೆ. ಇನ್ನೊಬ್ಬರಿಗೆ ಇಷ್ಟವಾದುದನ್ನು ದಾನಮಾಡುವುದರಲ್ಲಿ ಬಹಳ ಉತ್ಸಾಹವನ್ನು ಹೊಂದಿರುತ್ತಾರೆ. ಯಾವಾಗಲೂ ಧರ್ಮಪರಾಯಣರಾಗಿರುತ್ತಾರೆ.

ಅಶುಭದ್ವಿಟ್ ಶುಭಪ್ರೇಪ್ಸುರಿಷ್ಟಯಜ್ಞಃ ಶುಭವ್ರತಃ ।
ಭವಿಷ್ಯತಿ ಜನಸ್ತತ್ರ ಯತ್ರ ರಾಜಾ ಯುಧಿಷ್ಠಿರಃ ॥೪೭॥

ಎಲ್ಲಿ ರಾಜನಾದ ಯುಧಿಷ್ಠಿರನಿದ್ದಾನೆಯೋ ಅಲ್ಲಿಯ ಜನರು ಅಶುಭವನ್ನು ದ್ವೇಷಿಸುವವರೂ, ಶುಭವನ್ನು ಬಯಸುವವರೂ, ಯಜ್ಞಗಳನ್ನು ಆಚರಿಸುವವರೂ, ಶುಭವ್ರತವನ್ನು ಆಚರಿಸುವವರೂ ಆಗುವರು.

ನಿತ್ಯೋತ್ಸವಪ್ರಮುದಿತೋ ನಿತ್ಯಹೃಷ್ಟಃ ಶ್ರಿಯಾನ್ವಿತಃ ।
ಭವಿಷ್ಯತಿ ನಿವಾಸೋಽಯಂ ಯತ್ರ ರಾಜಾ ಯುಧಿಷ್ಠಿರಃ ॥೪೮॥

ಎಲ್ಲಿ ರಾಜನಾದ ಯುಧಿಷ್ಠಿರನಿದ್ದಾನೆಯೋ ಆ ವಾಸಸ್ಥಾನವು ನಿತ್ಯೋತ್ಸವಗಳಿಂದ ಕೂಡಿ, ಸಂಪತ್ತಿನಿಂದ ಕೂಡಿ ನಿತ್ಯಸಂತೋಷದಿಂದ ಕೂಡಿರುವುದು.

ಧರ್ಮಾತ್ಮಾ ಸ ತು ದುರ್ಜ್ಞೇಯಃ ಸರ್ವಜ್ಞೈಶ್ಚ ದ್ವಿಜಾತಿಭಿಃ ।
ಕಿಂ ಪುನಃ ಪ್ರಾಕೃತೈಃ ಪಾರ್ಥಃ ಶಕ್ಯೋ ಜ್ಞಾತುಂ ವನೇ ವಸನ್ ॥೪೯॥

ಧರ್ಮಾತ್ಮನಾದ ಅವನನ್ನು ಸರ್ವಜ್ಞರಾದ ಬ್ರಾಹ್ಮಣರು ತಿಳಿಯಲು ಸಾಧ್ಯವಿಲ್ಲ. ಇನ್ನು ಕಾಡಿನಲ್ಲಿ ವಾಸಿಸುವ ಅವನನ್ನು ಪ್ರಾಕೃತಜನರು ಹೇಗೆ ತಿಳಿಯಬಹುದು?

ತಸ್ಮಿನ್ ಸತ್ಯಂ ಧೃತಿರ್ದಾಕ್ಷ್ಯಂ ಪರಾ ಶಾಂತಿರ್ಧ್ರುವಾ ಕ್ಷಮಾ ।
ಹ್ರೀಃ ಶ್ರೀಃ ಕೀರ್ತಿಃ ಪರಂ ತೇಜ ಆನೃಶಂಸ್ಯಂ ತಥಾऽऽರ್ಜವಮ್ ॥

ಅವನಲ್ಲಿ ಸತ್ಯ, ಧೈರ್ಯ, ದಕ್ಷತೆ, ಉತ್ತಮವಾದ ಶಾಂತಿ, ನಿತ್ಯವಾದ ಕ್ಷಮೆ, ನಾಚಿಕೆ, ಸಂಪತ್ತು, ಕೀರ್ತಿ, ಉತ್ತಮವಾದ ಪರಾಕ್ರಮ, ದಯೆ, ಆರ್ಜವ ಎಲ್ಲವೂ ನೆಲೆಸಿವೆ.

ತಸ್ಮಾನ್ನಿವಾಸಃ ಪಾರ್ಥಾನಾಂ ಚಿಂತ್ಯತಾಂ ಯದ್ ಬ್ರವೀಮಿ ವಃ ।
ಗತಿರ್ವಾ ಪರಮಾ ತತ್ರ ನೋತ್ಸಹೇ ವಕ್ತುಮನ್ಯಥಾ ॥೫೧॥

ಆದ್ದರಿಂದ ನಾನು ಹೇಳುವಂತೆ ಪಾಂಡವರ ವಾಸಸ್ಥಾನವನ್ನು ವಿಚಾರ ಮಾಡಿ. ಅಂತಹ ಸ್ಥಳಕ್ಕೆ ಹೋಗುವುದು ಶ್ರೇಷ್ಠವಾದುದು. ನಾನು ಬೇರೆಯ ರೀತಿಯಲ್ಲಿ ಮಾತನಾಡಲಾರೆ.

ಏವಮೇವ ತು ಸಂಚಿಂತ್ಯ ಯತ್ ಕೃತ್ಯಂ ಸಾಧು ಮನ್ಯಸೇ ।
ತತ್ ಕ್ಷಿಪ್ರಂ ಕುರು ಕೌರವ್ಯ ಯದ್ಯೇತಚ್ಛ್ರದ್ದಧಾಸಿ ಮೇ ॥೫೨॥

ಕುಲಸ್ಯ ಹಿ ಕ್ಷಮಂ ತಾತ ಯದಹಂ ತದ್ ಬ್ರವೀಮಿ ತೇ ॥೫೩॥

ಎಲೈ ಕೌರವ್ಯನೇ, ನನ್ನ ಮಾತಿನಲ್ಲಿ ನಂಬಿಕೆ ಇರುವುದಾದರೆ ಹೀಗೆಯೇ ಆಲೋಚಿಸಿ ಏನನ್ನು ಮಾಡಿದರೆ ಒಳ್ಳೆಯದು ಎಂದು ಭಾವಿಸುತ್ತೀಯೋ ಅಂತಹ ಕಾರ್ಯವನ್ನು ಕ್ಷಿಪ್ರವಾಗಿ ಮಾಡು. ಎಲೈ ಪ್ರೀತಿಪಾತ್ರನೇ, ನಾನು ನಿನಗೆ ಹೇಳುವಂತೆ ನಮ್ಮ ಕುಲಕ್ಕೆ ಯೋಗ್ಯವಾದ ಕಾರ್ಯವನ್ನು ಮಾಡುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ತ್ರಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಭೀಮೇನಾಗುಸ್ತತ್ರ ದುರ್ಯೋಧನಾದ್ಯಾ
ಭೀಷ್ಮಾದಿಭಿಃ ಸಹ ಕರ್ಣೇನ ಚೈವ ।
ಅಗ್ರೇ ಯಯೌ ತತ್ರ ಯೋದ್ಧುಂ ಸುಶರ್ಮಾ
ಸ ಗಾ ವಿರಾಟಸ್ಯ ಸಮಾಜಹಾರ ॥೩೩॥

ಮೊದಲಿಗೆ ಸುಶರ್ಮ ಯುದ್ಧ ಮಾಡಲು ವಿರಾಟ ನಗರಕ್ಕೆ ತೆರಳಿದ. ವಿರಾಟನ ಗೋವುಗಳನ್ನು ಅಪಹರಿಸಿದ. ಇದನ್ನು ಕೇಳಿ ವಿರಾಟ ಸೈನ್ಯ ಸಮೇತನಾಗಿ ಬಂದು ಸುಶರ್ಮನನ್ನು ಬೆನ್ನಟ್ಟಿದ.

★ ★ ★ ★ ★

ಮೂವತ್ತೊಂದನೆಯ ಅಧ್ಯಾಯ

ಕರ್ಣದುಶ್ಶಾಸನಾದಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ವಿರಾಟನ ಗೋಗ್ರಹಣವನ್ನು ಮಾಡಲು ದುರ್ಯೋಧನನ ನಿರ್ಧಾರ. ಸುಶರ್ಮನಿಂದ ಮೊದಲು ಗೋಗ್ರಹಣ.

ವೈಶಂಪಾಯನಃ

ತತಃ ಶಾರದ್ವತೋ ವಾಕ್ಯಮಿತ್ಯುವಾಚ ಕೃಪಸ್ತದಾ ।
ಯುಕ್ತಂ ಪ್ರಾಪ್ತಂ ಚ ವೃದ್ಧೇನ ಪಾಂಡವಾನ್ ಪ್ರತಿ ಭಾಷಿತಮ್ ॥೧॥

ಧರ್ಮಾರ್ಥಸಹಿತಂ ಶ್ಲಕ್ಷ್ಣಂ ಸರ್ವಂ ತಥ್ಯಂ ಸಹೇತುಕಮ್ ॥೨॥

ತತ್ರಾನುರೂಪಂ ಭೀಷ್ಮಸ್ಯ ಮಮಾಪಿ ವಚನಂ ಶೃಣು ॥೩॥

ವೈಶಂಪಾಯನ– ಅನಂತರ ಶರದ್ವಂತರ ಪುತ್ರರಾದ ಕೃಪಾಚಾರ್ಯರು ಆಗ ಹೀಗೆ ಮಾತನಾಡಿದರು. ವೃದ್ಧರಾದ ಭೀಷ್ಮರು ಪಾಂಡವರ ವಿಷಯದಲ್ಲಿ ಯೋಗ್ಯವಾದುದನ್ನೇ ಮತ್ತು ಸಮಯೋಚಿತವಾದುದನ್ನೇ ಮಾತನಾಡಿದ್ದಾರೆ. ಧರ್ಮಾರ್ಥಸಹಿತವಾದ ಅವರ ಮಧುರವಾದ ಮಾತುಗಳೆಲ್ಲವೂ ಸತ್ಯವೂ ಮತ್ತು ಕಾರಣದಿಂದ ಕೂಡಿರುವೂ ಆಗಿವೆ. ಭೀಷ್ಮರ ಮಾತಿಗೆ ಅನುರೂಪವಾದ ನನ್ನ ಮಾತನ್ನೂ ಕೇಳು.

ತೇಷಾಂ ಚೈವ ಗತಿಸ್ತತ್ರ ನಿವಾಸಶ್ಚಾನುಚಿಂತ್ಯತಾಮ್ ।
ನೀತಿರ್ವಿಧೀಯತಾಂ ಚಾತ್ರ ಸಾಂಪ್ರತಂ ಯಾ ಹಿತಾ ಭವೇತ್ ॥೪॥

ಭೀಷ್ಮರು ಹೇಳಿದಂತಹ ಸ್ಥಳದಲ್ಲಿ ಪಾಂಡವರ ನಿವಾಸವನ್ನು ವಿಚಾರ ಮಾಡಿ. ಸದ್ಯಕ್ಕೆ ಏನು ಮಾಡಿದರೆ ನಮಗೆ ಹಿತವಾಗಬಹುದೋ ಅಂತಹ ನೀತಿಯನ್ನು ಮಾಡುವವರಾಗಿ.

ನಾವಜ್ಞೇಯೋ ರಿಪುಸ್ತಾತ ಪ್ರಾಕೃತೋऽಪಿ ಬುಭೂಷತಾ ।
ಕಿಂ ಪುನಃ ಪಾಂಡವಾಃ ಶೂರಾ ವಿದ್ವಾಂಸೋ ಬಲಿನಸ್ತಥಾ ॥೫॥

ಎಲೈ ಪ್ರೀತಿಪಾತ್ರನೇ, ಸಮೃದ್ಧಿಯನ್ನು ಬಯಸುವವನು ಅಲ್ಪನಾದ ಶತ್ರುವನ್ನೂ ಉಪೇಕ್ಷೆ ಮಾಡಬಾರದು. ಹೀಗಿರುವ ಶೂರರೂ, ವಿದ್ವಾಂಸರೂ, ಬಲಿಷ್ಠರೂ ಆದ ಪಾಂಡವರ ವಿಷಯದಲ್ಲಿ ಹೇಳುವುದೇನು?

ತಸ್ಮಾತ್ ಸತ್ರಂ ಪ್ರವಿಷ್ಟೇಷು ಪಾಂಡವೇಷು ಮಹಾತ್ಮಸು ।
ಗೂಢಭಾವೇಷು ಛನ್ನೇಷು ಕಾಲೇ ಚೋದಯಮಾಗತೇ ॥೬॥

ಸ್ವರಾಷ್ಟ್ರಪರರಾಷ್ಟ್ರೇಷು ಜ್ಞಾತವ್ಯಂ ಬಲಮಾತ್ಮನಃ ।
ಉದಯಃ ಪಾಂಡವಾನಾಂ ಚ ಪ್ರಾಪ್ತಕಾಲೋ ನ ಸಂಶಯಃ ॥೭॥

ಆದ್ದರಿಂದ ಕಾಡಿಗೆ ಹೋದ ಮಹಾತ್ಮರಾದ ಪಾಂಡವರು ಯೋಗ್ಯವಾದ ಹದಿಮೂರನೆಯ ವರ್ಷವು ಪ್ರಾಪ್ತವಾಗಿರುವಾಗ ವೇಷವನ್ನು ಮರೆಸಿಕೊಂಡು ಗೂಢವಾಗಿರುತ್ತಿರಲು ತನ್ನರಾಷ್ಟ್ರಗಳಲ್ಲಿ ಮತ್ತು ಪರರಾಷ್ಟ್ರಗಳಲ್ಲಿ ತನ್ನ ಬಲವನ್ನು ಮೊದಲು ತಿಳಿದುಕೊಳ್ಳಬೇಕು. ಪಾಂಡವರ ಉದಯ ಕಾಲವು ಸನ್ನಿಹಿತವಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ನಿವಾಸಂ ಪಾಂಡುಪುತ್ರಾಣಾಂ ದರ್ಶನೇ ಮೃಗಯಾಮಹೇ ।
ನಿವೃತ್ತಸಮಯಾಃ ಪಾರ್ಥಾಃ ಮಹಾತ್ಮಾನೋ ಮಹಾಬಲಾಃ ॥೮॥

ಮಹೋತ್ಸಾಹಾ ಭವಿಷ್ಯಂತಿ ನಿತ್ಯಂ ಧರ್ಮಪರಾಯಣಾಃ ॥೯॥

ಪಾಂಡುಪುತ್ರರ ನಿವಾಸವನ್ನು ನಾವು ನೋಡಿ ಹುಡುಕೋಣ. ತಮ್ಮ ಪ್ರತಿಜ್ಞೆಯನ್ನು ಪೂರೈಸಿದ ಮಹಾತ್ಮರೂ, ಮಹಾಬಲರೂ, ನಿತ್ಯವೂ ಧರ್ಮಪರಾಯಣರೂ ಆದ ಪಾಂಡವರು ಈಗ ಮಹೋತ್ಸಾಹ ಉಳ್ಳವರಾಗುವರು.

ತಸ್ಮಾದ್ ಬಲಂ ಚ ಕೋಶಂ ಚ ನೀತಿಶ್ಚಾತ್ರ ವಿಧೀಯತಾಮ್ ।
ಯಥಾ ಕಾಲೋದಯೇ ಪ್ರಾಪ್ತೇ ಸಮ್ಯಕ್ ಸಂದಧ್ಮಹೇ ಪರೈಃ ॥೧೦॥

ತ್ವಂ ವೈ ತನ್ಮನಸಾ ಶ್ರೇಯೋ ಬುಧ್ಯಸ್ಯಹಿತಮಾತ್ಮನಃ ॥೧೧॥

ಆದ್ದರಿಂದ ಸೈನ್ಯ ಮತ್ತು ಕೋಶಗಳ ವಿಷಯದಲ್ಲಿ ಯೋಗ್ಯವಾದ ನೀತಿಯನ್ನು ಅನುಸರಿಸು. ಹೇಗೆ ಕಾಲವು ಪ್ರಾಪ್ತವಾದಾಗ ನಾವು ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳಬಹುದೋ ಅಂತಹ ನೀತಿಯನ್ನು ಅನುಸರಿಸು. ಆದರೆ ನೀನು ಮಾತ್ರ ನಾವು ಶ್ರೇಯಸ್ಸೆಂದು ತಿಳಿದುದನ್ನು ನಿನಗೆ ಅಹಿತವೆಂದು ತಿಳಿದಿದ್ದೀಯೆ (ಲಕ್ಷಾಲಂಕಾರ).

ನಿಶ್ಚಯಃ ಸರ್ವಮಿತ್ರೇಷು ಬಲವತ್ಸ್ವಬಲೇಷು ಚ ।
ಸಾರಂ ವಲ್ಗುಫಲಂ ಜ್ಞಾತ್ವಾ ಮಧ್ಯಸ್ಥಂ ಚಾಪಿ ಭಾರತ ॥೧೨॥

ಸ್ವರಾಷ್ಟ್ರಪರರಾಷ್ಟ್ರೇಷು ಜ್ಞಾತವ್ಯಂ ಬಲಮಾತ್ಮನಃ ॥೧೩॥

ಎಲೈ ಭಾರತನೇ, ಸರ್ವಮಿತ್ರರಲ್ಲಿ ಯಾರು ಶ್ರೇಷ್ಠ ಬಲವುಳ್ಳವರು, ಯಾರು ಕನಿಷ್ಠ ಬಲವುಳ್ಳವರು, ಯಾರು ಮಧಮ್ಯಬಲವುಳ್ಳವರು ಎಂದು ತಿಳಿದು, ತನ್ನ ಸೈನ್ಯದಲ್ಲಿಯೂ ಯಾರು ಶ್ರೇಷ್ಠರು, ಯಾರು ಮಧ್ಯಮರು ಮತ್ತು ಯಾರು ಕನಿಷ್ಟರು ಎಂದು ತಿಳಿಯಬೇಕು. ತನ್ನ ರಾಷ್ಟ್ರದಲ್ಲಿ ಮತ್ತು ಪರರ ರಾಷ್ಟ್ರಗಳಲ್ಲಿ ತನ್ನ ಬಲವು ಎಷ್ಟು ಇದೆ ಎಂದು ತಿಳಿಯಬೇಕು.

ಪ್ರಹೃಷ್ಟಮಪ್ರಹೃಷ್ಟಂ ವಾ ತಥಾ ಸಂದಧ್ಮಹೇ ಪರೈಃ ॥೧೪॥

ಸಾಮ್ನಾ ದಾನೇನ ಭೇದೇನ ದಂಡೇನ ಬಲಿಕರ್ಮಣಾ ।
ಯಥಾಕಾಲಂ ಮನುಷ್ಯೇಂದ್ರ ಚಿರಂ ಸುಖಮವಾಪ್ಸ್ಯಸಿ ॥೧೫॥

ನಿನಗೆ ಸಂತೋಷವಿರಲಿ ಇಲ್ಲದಿರಲಿ, ನಾವು ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳೋಣ. ಸಾಮೋಪಾಯದಿಂದಲಾಗಲೀ, ದಾನ ಉಪಾಯದಿಂದಾಗಲೀ, ಭೇದೋಪಾಯದಿಂದಾಗಲೀ, ಯೋಗ್ಯಸೇವಾರೂಪವಾದ ದಂಡೋಪಾಯದಿಂದಲಾಗಲೀ ಎಲೈ ಮನುಷ್ಯೇಂದ್ರನೇ, ನೀನು ಯೋಗ್ಯವಾದ ಕಾಲದಲ್ಲಿ ಶಾಶ್ವತವಾದ ಸುಖವನ್ನು ಹೊಂದುವಿ.

ನ್ಯಾಯೇನಾನನ್ಯಬಲಿನೋ ಬಲಾಚ್ಚಾನನ್ಯದುರ್ಹೃದಃ ।
ಸಾಂತಯಿತ್ವಾ ಚ ಮಿತ್ರಾಣಿ ಹೀನಸ್ವಬಲವಾಹನೈಃ ॥೧೬॥

ಸ್ವಕೋಶಬಲಸಂವೃದ್ಧಃ ಸರ್ವಾಂ ಸಿದ್ಧಿಮವಾಪ್ಸ್ಯಸಿ ॥೧೭॥

ಅತ್ಯಂತ ಬಲಿಷ್ಠರಾದವರನ್ನು ಮತ್ತು ಅತ್ಯಂತ ದುರ್ಬಲರಾದ ಮಿತ್ರರನ್ನು ನ್ಯಾಯ ರೀತಿಯಿಂದ ಸಮಾಧಾನಪಡಿಸಿ, ಅನಂತರ ಸೈನ್ಯವನ್ನು ಕುರಿತು ಸುಖವಾಗಿ ಮಾತನಾಡಬೇಕು. ನಿನ್ನ ಸೈನ್ಯ ಮತ್ತು ಕೋಶಗಳು ಸಮೃದ್ಧವಾದರೆ ನಿನಗೆ ಎಲ್ಲಾ ಸಿದ್ಧಿಗಳೂ ಉಂಟಾಗುವುವು.

ಯೋತ್ಸ್ಯಸೇ ಚಾಪಿ ಬಲಿಭಿರರಿಭಿಃ ಪ್ರತ್ಯುಪಸ್ಥಿತೈಃ ।
ಅನ್ಯೈರ್ವಾ ಪಾಂಡವೈರ್ವಾऽಪಿ ಹೀನೈಃ ಸ್ವಬಲವಾಹನೈಃ ॥೧೮॥

ಏವಂ ಸರ್ವಂ ವಿನಿಶ್ಚಿತ್ಯ ವ್ಯವಹರ್ತಾಸಿ ನ್ಯಾಯತಃ ॥೧೯॥

ಆಗ ಬಲಿಷ್ಠರಾದ ಶತ್ರುಗಳು ಎದುರಾದರೂ, ಬೇರೆಯವರಾಗಲೀ ಅಥವಾ ಬಲ-ವಾಹನಗಳಿಂದ ಹೀನರಾದ ಪಾಂಡವರಾಗಲೀ ಎದುರಾದರೂ ನೀನು ಯುದ್ಧವನ್ನು ಮಾಡುವಿ. ಹೀಗೆ ಎಲ್ಲವನ್ನೂ ನ್ಯಾಯದಿಂದ ನಿಶ್ಚಯಿಸಿ ವ್ಯವಹಾರವನ್ನು ಮಾಡಬೇಕು.

ವೈಶಂಪಾಯನಃ

ತತೋ ದುರ್ಯೋಧನೋ ವಾಕ್ಯಂ ಶ್ರುತ್ವಾ ತೇಷಾಂ ಮಹಾತ್ಮನಾಮ್।
ಮುಹೂರ್ತಮಿವ ಸಂಚಿಂತ್ಯ ಸಚಿವಾನಿದಮಬ್ರವೀತ್ ॥೨೦॥

ವೈಶಂಪಾಯನ– ಆಗ ದುರ್ಯೋಧನನು ಆ ಮಹಾತ್ಮರ ಮಾತುಗಳನ್ನು ಕೇಳಿ ಒಂದು ಮುಹೂರ್ತಕಾಲ ಚೆನ್ನಾಗಿ ಯೋಚಿಸಿ ತನ್ನ ಸಚಿವರನ್ನು ಕುರಿತು ಹೀಗೆ ಮಾತನಾಡಿದನು.

ಶ್ರುತಂ ಹ್ಯೇತನ್ಮಯಾ ಪೂರ್ವಂ ಕಥಾಸು ಜನಸಂಸದಿ ।
ವೀರಾಣಾಂ ಶಾಸ್ತ್ರವಿದುಷಾಂ ಕೃತಿನಾಂ ತತ್ವನಿರ್ಣಯೇ ॥೨೧॥

ಕೃತಿನಾಂ ಸಾರಫಲ್ಗುತ್ವಂ ಜಾನಾಮಿ ನಯಚಕ್ಷುಷಾ ॥೨೨॥

ಜನರ ಸಮೂಹದಲ್ಲಿ ಮಾತುಗಳು ಬಂದಾಗ ನಾನು ಈ ವಿಷಯವನ್ನು ಕೇಳಿದ್ದೇನೆ. ವೀರರೂ, ಶಾಸ್ತ್ರವಿದ್ವಾಂಸರೂ, ಕ್ರಿಯಾಶೀಲರೂ, ತತ್ವನಿರ್ಣಯ ಉಳ್ಳವರೂ, ಕುಶಲರೂ ಆದ ರಾಜರಲ್ಲಿ ಯಾರು ಶ್ರೇಷ್ಠ ಮತ್ತು ಯಾರು ಕನಿಷ್ಠರೆಂದು ನನ್ನ ನೀತಿಯ ಕಣ್ಣಿನಿಂದ ತಿಳಿದಿದ್ದೇನೆ.

ಸತ್ವೇ ಬಾಹುಬಲೇ ಧೈರ್ಯೇ ಪ್ರಾಣೇ ಶಾರೀರಸಂಭವೇ ।
ಸಾಂಪ್ರತಂ ಮಾನುಷೇ ಲೋಕೇ ಸದೈತ್ಯನರರಾಕ್ಷಸೇ ॥೨೩॥

ಚತ್ವಾರಃ ಪ್ರಾಣಿನಾಂ ಶ್ರೇಷ್ಠಾಃ ಸಂಪೂರ್ಣಬಲಪೌರುಷಾಃ ॥೨೪॥

ಈ ಕಾಲದಲ್ಲಿ ದೈತ್ಯರೂ, ರಾಕ್ಷಸರೂ ಮತ್ತು ಮನುಷ್ಯರೂ ಇರುವ ಈ ಮನುಷ್ಯ ಲೋಕದಲ್ಲಿ ಸತ್ವ, ಬಾಹುಬಲ, ಧೈರ್ಯ, ಶರೀರಸಾಮರ್ಥ್ಯ ಇವುಗಳ ವಿಷಯದಲ್ಲಿ ಸಂಪೂರ್ಣ ಬಲ, ಪರಾಕ್ರಮವುಳ್ಳ ನಾಲ್ವರು ಎಲ್ಲರಿಗಿಂತಲೂ ಶ್ರೇಷ್ಠರಾಗಿದ್ದಾರೆ.

ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ ।
ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮಃ ॥೨೫॥

ಭೀಮ, ಬಲರಾಮ, ವೀರ್ಯವಂತನಾದ ಮದ್ರರಾಜ ಮತ್ತು ಅವರಲ್ಲಿ ನಾಲ್ಕನೆಯವನಾದ ಕೀಚಕ. ಐದನೆಯವನು ಯಾವನೂ ಕೇಳಿಬರುವುದಿಲ್ಲ.

ಅನ್ಯೋನ್ಯಾನಂತರಬಲಾಃ ಕ್ರಮಾದೇವ ಪ್ರಕೀರ್ತಿತಾಃ ।
ಬಾಹುಯುದ್ಧಮಭೀಪ್ಸಂತೇ ನಿತ್ಯಂ ಸಂರಬ್ಧಮಾನಸಾಃ ॥೨೬॥

ಭೀಮನಿಂದ ಆರಂಭಿಸಿ ಕೀಚಕನವರೆಗೆ ಕ್ರಮೇಣ ಕಡಿಮೆಯಾಗುವ ಬಲವುಳ್ಳವರೆಂದು ಇವರು ಹೇಳಲ್ಪಡುತ್ತಾರೆ. ಯಾವಾಗಲೂ ಕ್ರೋಧದಿಂದ ಕೂಡಿದ ಮನಸ್ಸುಳ್ಳ ಇವರು ಬಾಹುಯುದ್ಧವನ್ನು ಬಯಸುತ್ತಾರೆ.

ತೇನಾಹಮವಗಚ್ಛಾಮಿ ಪ್ರತ್ಯಯೇನ ವೃಕೋದರಮ್ ।
ಮನಸ್ಯಭಿನಿವಿಷ್ಟಂ ಮೇ ವ್ಯಕ್ತಂ ಜೀವಂತಿ ಪಾಂಡವಾಃ ॥೨೭॥

ಅದರಿಂದ ನಾನು ನನ್ನ ಮನಸ್ಸಿನಲ್ಲಿ ಯಾವಾಗಲೂ ನೆಲೆಗೊಂಡಿರುವ ವೃಕೋದರನು ಮತ್ತು ಪಾಂಡವರು ಜೀವಿಸಿದ್ದಾರೆಂದು ಸ್ಪಷ್ಟವಾಗಿ ತಿಳಿಯುತ್ತೇನೆ.

ತತ್ರಾಹಂ ಕೀಚಕಂ ಮನ್ಯೇ ಭೀಮಸೇನೇನ ಮಾರಿತಮ್ ।
ಸೈರಂಧ್ರೀಂ ದ್ರೌಪದೀಂ ಮನ್ಯೇ ನಾತ್ರ ಕಾರ್ಯಾ ವಿಚಾರಣಾ ॥೨೮॥

ನಾನು ಕೀಚಕನು ಭೀಮಸೇನನಿಂದ ಕೊಲ್ಲಲ್ಪಟ್ಟಿದ್ದಾನೆ ಎಂದು ತಿಳಿಯುತ್ತೇನೆ. ಸೈರಂಧ್ರಿಯೇ ದ್ರೌಪದೀ ಎಂದು ತಿಳಿಯುತ್ತೇನೆ. ಇದರಲ್ಲಿ ಸಂಶಯವಿಲ್ಲ.

ಶಂಕೇ ಕೃಷ್ಣಾನಿಮಿತ್ತೇನ ಭೀಮಸೇನೇನ ಕೀಚಕಃ ।
ಗಂಧರ್ವವ್ಯಪದೇಶೇನ ಹತೋ ನಿಶಿ ಮಹಾಬಲಃ ॥೨೯॥

ಯೋತ್ಸ್ಯಸೇ ಚಾಪಿ ಬಲಿಭಿರರಿಭಿಃ ಪ್ರತ್ಯುಪಸ್ಥಿತೈಃ ।
ಅನ್ಯೈರ್ವಾ ಪಾಂಡವೈರ್ವಾऽಪಿ ಹೀನೈಃ ಸ್ವಬಲವಾಹನೈಃ ॥೧೮॥

ಏವಂ ಸರ್ವಂ ವಿನಿಶ್ಚಿತ್ಯ ವ್ಯವಹರ್ತಾಸಿ ನ್ಯಾಯತಃ ॥೧೯॥

ಆಗ ಬಲಿಷ್ಠರಾದ ಶತ್ರುಗಳು ಎದುರಾದರೂ, ಬೇರೆಯವರಾಗಲೀ ಅಥವಾ ಬಲ-ವಾಹನಗಳಿಂದ ಹೀನರಾದ ಪಾಂಡವರಾಗಲೀ ಎದುರಾದರೂ ನೀನು ಯುದ್ಧವನ್ನು ಮಾಡುವಿ. ಹೀಗೆ ಎಲ್ಲವನ್ನೂ ನ್ಯಾಯದಿಂದ ನಿಶ್ಚಯಿಸಿ ವ್ಯವಹಾರವನ್ನು ಮಾಡಬೇಕು.

ವೈಶಂಪಾಯನಃ

ತತೋ ದುರ್ಯೋಧನೋ ವಾಕ್ಯಂ ಶ್ರುತ್ವಾ ತೇಷಾಂ ಮಹಾತ್ಮನಾಮ್।
ಮುಹೂರ್ತಮಿವ ಸಂಚಿಂತ್ಯ ಸಚಿವಾನಿದಮಬ್ರವೀತ್ ॥೨೦॥

ವೈಶಂಪಾಯನ– ಆಗ ದುರ್ಯೋಧನನು ಆ ಮಹಾತ್ಮರ ಮಾತುಗಳನ್ನು ಕೇಳಿ ಒಂದು ಮುಹೂರ್ತಕಾಲ ಚೆನ್ನಾಗಿ ಯೋಚಿಸಿ ತನ್ನ ಸಚಿವರನ್ನು ಕುರಿತು ಹೀಗೆ ಮಾತನಾಡಿದನು.

ಶ್ರುತಂ ಹ್ಯೇತನ್ಮಯಾ ಪೂರ್ವಂ ಕಥಾಸು ಜನಸಂಸದಿ ।
ವೀರಾಣಾಂ ಶಾಸ್ತ್ರವಿದುಷಾಂ ಕೃತಿನಾಂ ತತ್ವನಿರ್ಣಯೇ ॥೨೧॥

ಕೃತಿನಾಂ ಸಾರಫಲ್ಗುತ್ವಂ ಜಾನಾಮಿ ನಯಚಕ್ಷುಷಾ ॥೨೨॥

ಜನರ ಸಮೂಹದಲ್ಲಿ ಮಾತುಗಳು ಬಂದಾಗ ನಾನು ಈ ವಿಷಯವನ್ನು ಕೇಳಿದ್ದೇನೆ. ವೀರರೂ, ಶಾಸ್ತ್ರವಿದ್ವಾಂಸರೂ, ಕ್ರಿಯಾಶೀಲರೂ, ತತ್ವನಿರ್ಣಯ ಉಳ್ಳವರೂ, ಕುಶಲರೂ ಆದ ರಾಜರಲ್ಲಿ ಯಾರು ಶ್ರೇಷ್ಠ ಮತ್ತು ಯಾರು ಕನಿಷ್ಠರೆಂದು ನನ್ನ ನೀತಿಯ ಕಣ್ಣಿನಿಂದ ತಿಳಿದಿದ್ದೇನೆ.

ಸತ್ವೇ ಬಾಹುಬಲೇ ಧೈರ್ಯೇ ಪ್ರಾಣೇ ಶಾರೀರಸಂಭವೇ ।
ಸಾಂಪ್ರತಂ ಮಾನುಷೇ ಲೋಕೇ ಸದೈತ್ಯನರರಾಕ್ಷಸೇ ॥೨೩॥

ಚತ್ವಾರಃ ಪ್ರಾಣಿನಾಂ ಶ್ರೇಷ್ಠಾಃ ಸಂಪೂರ್ಣಬಲಪೌರುಷಾಃ ॥೨೪॥

ಈ ಕಾಲದಲ್ಲಿ ದೈತ್ಯರೂ, ರಾಕ್ಷಸರೂ ಮತ್ತು ಮನುಷ್ಯರೂ ಇರುವ ಈ ಮನುಷ್ಯ ಲೋಕದಲ್ಲಿ ಸತ್ವ, ಬಾಹುಬಲ, ಧೈರ್ಯ, ಶರೀರಸಾಮರ್ಥ್ಯ ಇವುಗಳ ವಿಷಯದಲ್ಲಿ ಸಂಪೂರ್ಣ ಬಲ, ಪರಾಕ್ರಮವುಳ್ಳ ನಾಲ್ವರು ಎಲ್ಲರಿಗಿಂತಲೂ ಶ್ರೇಷ್ಠರಾಗಿದ್ದಾರೆ.

ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ ।
ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮಃ ॥೨೫॥

ಭೀಮ, ಬಲರಾಮ, ವೀರ್ಯವಂತನಾದ ಮದ್ರರಾಜ ಮತ್ತು ಅವರಲ್ಲಿ ನಾಲ್ಕನೆಯವನಾದ ಕೀಚಕ. ಐದನೆಯವನು ಯಾವನೂ ಕೇಳಿಬರುವುದಿಲ್ಲ.

ಅನ್ಯೋನ್ಯಾನಂತರಬಲಾಃ ಕ್ರಮಾದೇವ ಪ್ರಕೀರ್ತಿತಾಃ ।
ಬಾಹುಯುದ್ಧಮಭೀಪ್ಸಂತೇ ನಿತ್ಯಂ ಸಂರಬ್ಧಮಾನಸಾಃ ॥೨೬॥

ಭೀಮನಿಂದ ಆರಂಭಿಸಿ ಕೀಚಕನವರೆಗೆ ಕ್ರಮೇಣ ಕಡಿಮೆಯಾಗುವ ಬಲವುಳ್ಳವರೆಂದು ಇವರು ಹೇಳಲ್ಪಡುತ್ತಾರೆ. ಯಾವಾಗಲೂ ಕ್ರೋಧದಿಂದ ಕೂಡಿದ ಮನಸ್ಸುಳ್ಳ ಇವರು ಬಾಹುಯುದ್ಧವನ್ನು ಬಯಸುತ್ತಾರೆ.

ತೇನಾಹಮವಗಚ್ಛಾಮಿ ಪ್ರತ್ಯಯೇನ ವೃಕೋದರಮ್ ।
ಮನಸ್ಯಭಿನಿವಿಷ್ಟಂ ಮೇ ವ್ಯಕ್ತಂ ಜೀವಂತಿ ಪಾಂಡವಾಃ ॥೨೭॥

ಆದರಿಂದ ನಾನು ನನ್ನ ಮನಸ್ಸಿನಲ್ಲಿ ಯಾವಾಗಲೂ ನೆಲೆಗೊಂಡಿರುವ ವೃಕೋದರನು ಮತ್ತು ಪಾಂಡವರು ಜೀವಿಸಿದ್ದಾರೆಂದು ಸ್ಪಷ್ಟವಾಗಿ ತಿಳಿಯುತ್ತೇನೆ.

ತತ್ರಾಹಂ ಕೀಚಕಂ ಮನ್ಯೇ ಭೀಮಸೇನೇನ ಮಾರಿತಮ್ ।
ಸೈರಂಧ್ರೀಂ ದ್ರೌಪದೀಂ ಮನ್ಯೇ ನಾತ್ರ ಕಾರ್ಯಾ ವಿಚಾರಣಾ ॥೨೮॥

ನಾನು ಕೀಚಕನು ಭೀಮಸೇನನಿಂದ ಕೊಲ್ಲಲ್ಪಟ್ಟಿದ್ದಾನೆ ಎಂದು ತಿಳಿಯುತ್ತೇನೆ. ಸೈರಂಧ್ರಿಯೇ ದ್ರೌಪದೀ ಎಂದು ತಿಳಿಯುತ್ತೇನೆ. ಇದರಲ್ಲಿ ಸಂಶಯವಿಲ್ಲ.

ಶಂಕೇ ಕೃಷ್ಣಾನಿಮಿತ್ತೇನ ಭೀಮಸೇನೇನ ಕೀಚಕಃ ।
ಗಂಧರ್ವವ್ಯಪದೇಶೇನ ಹತೋ ನಿಶಿ ಮಹಾಬಲಃ ॥೨೯॥

ಮಹಾಬಲನಾದ, ಪ್ರಸಿದ್ಧನಾದ ಕೀಚಕನು ದ್ರೌಪದಿಯ ನಿಮಿತ್ತವಾಗಿ ಭೀಮಸೇನನಿಂದ ರಾತ್ರಿಯ ಕಾಲದಲ್ಲಿ ಗಂಧರ್ವನೆಂಬ ಹೆಸರಿನಿಂದ ಹತನಾಗಿದ್ದಾನೆ ಎಂದು ನಾನು ಶಂಕಿಸುತ್ತೇನೆ.

ಕೋ ಹಿ ಶಕ್ತಃ ಪರೋ ಭೀಮಾತ್ ಕೀಚಕಂ ಹಂತುಮೋಜಸಾ ।
ಶಸ್ತ್ರಂ ವಿನಾ ಬಾಹುವೀರ್ಯಾತ್ ತಥಾ ಸರ್ವಾಂಗಚೂರ್ಣನೇ ॥೩೦॥

ಭೀಮನನ್ನು ಬಿಟ್ಟು ಕೀಚಕನನ್ನು ತನ್ನ ಶಕ್ತಿಯಿಂದ ಕೊಲ್ಲಲು, ಶಸ್ತ್ರವಿಲ್ಲದೆ ತನ್ನ ಬಾಹುಬಲದಿಂದಲೇ ಕೀಚಕನ ಸರ್ವಾಂಗಗಳನ್ನು ಪುಡಿಮಾಡಲು, ಯಾವನು ಸಮರ್ಥನಾಗುತ್ತಾನೆ?

ಮರ್ದಿತುಂ ವಾ ತಥಾ ಶೀಘ್ರಂ ಚರ್ಮಮಾಂಸಾಸ್ಥಿಚೂರ್ಣಿತಮ್ ।
ರೂಪಮನ್ಯತ್ ಸಮಾಸ್ಥಾಯ ಭೀಮಸ್ಯೈತದ್ ವಿಚೇಷ್ಟಿತಮ್ ॥೩೧॥

ಮತ್ತು ಕೀಚಕನ ಸರ್ವಮಾಂಸ, ಅಸ್ಥಿಗಳನ್ನು ಚೂರ್ಣಮಾಡಿ ಅಷ್ಟು ಶೀಘ್ರವಾಗಿ ಮರ್ದಿಸಲು ಯಾವನು ಸಮರ್ಥನಾಗುತ್ತಾನೆ? ಭೀಮನೇ ರೂಪಾಂತರವನ್ನು ಧರಿಸಿ ಈ ಕಾರ್ಯವನ್ನು ಎಸಗಿದ್ದಾನೆ.

ಧ್ರುವಂ ಕೃಷ್ಣಾನಿಮಿತ್ತಂ ತು ಭೀಮಸೇನೇನ ಸೂತಜಾಃ ।
ಗಂಧರ್ವವ್ಯಪದೇಶೇನ ಹತಾ ನಿಶಿ ನ ಸಂಶಯಃ ॥೩೨॥

ಖಂಡಿತವಾಗಿ ಸೂತಪುತ್ರರೆಲ್ಲರೂ ದ್ರೌಪದಿಯ ನಿಮಿತ್ತವಾಗಿ ಗಂಧರ್ವನೆಂದು ಕರೆಸಿಕೊಳ್ಳುವ ಭೀಮಸೇನನಿಂದ ರಾತ್ರಿಯ ಕಾಲದಲ್ಲಿ ಹತರಾಗಿದ್ದಾರೆ. ಇದರಲ್ಲಿ ಸಂಶಯವಿಲ್ಲ.

ಪಿತಾಮಹೇನ ಯೇ ಚೋಕ್ತಾ ದೇಶಸ್ಯ ಚ ಜನಸ್ಯ ಚ ।
ಗುಣಾಸ್ತೇ ಮತ್ಸ್ಯರಾಷ್ಟ್ರಸ್ಯ ಬಹುಶೋಽಪಿ ಮಯಾ ಶ್ರುತಾಃ ॥೩೩॥

ಪಿತಾಮಹರಾದ ಭೀಷ್ಮರು ಹೇಳಿದ ದೇಶದ ಮತ್ತು ಜನರ ಗುಣಗಳು ಮತ್ಸ್ಯರಾಷ್ಟ್ರದಲ್ಲಿ ಇವೆ ಎಂದು ನಾನು ಅನೇಕ ಬಾರಿ ಕೇಳಿದ್ದೇನೆ.

ವಿರಾಟನಗರೇ ಮನ್ಯೇ ಪಾಂಡವಾಶ್ಚನ್ನಚಾರಿಣಃ ।
ನಿವಸಂತಿ ಪುರೇ ರಮ್ಯೇ ತತ್ರ ಯಾತ್ರಾ ವಿಧೀಯತಾಮ್ ॥೩೪॥

ಸುಂದರವಾದ ವಿರಾಟನಗರದಲ್ಲಿ ವೇಷವನ್ನು ಮರೆಸಿಕೊಂಡ ಪಾಂಡವರು ವಾಸಮಾಡುತ್ತಿದ್ದಾರೆಂದು ಭಾವಿಸಿದ್ದೇನೆ. ಅಲ್ಲಿಗೆ ಸೈನ್ಯದ ಯಾತ್ರೆಯು ಉಂಟಾಗಲಿ.

ಮತ್ಸ್ಯರಾಷ್ಟ್ರಂ ಹನಿಷ್ಯಾಮೋ ಗ್ರಹೀಷ್ಯಾಮಶ್ಚ ಗೋಧನಮ್ ।
ಗೃಹೀತೇ ಗೋಧನೇ ನೂನಂ ತೇऽಪಿ ಯೋತ್ಸ್ಯಂತಿ ಪಾಂಡವಾಃ ॥೩೫॥

ಮತ್ಸ್ಯದೇಶವನ್ನು ಘಾಸಿಗೊಳಿಸಿ ರಾಜನ ಗೋಧನವನ್ನು ಹಿಡಿಯುವೆವು. ಗೋಧನವು ಗೃಹೀತವಾಗುತ್ತಿರಲು ಖಂಡಿತವಾಗಿಯೂ ಪಾಂಡವರು ಯುದ್ಧ ಮಾಡುವರು.

ಅಪೂರ್ಣೇ ಸಮಯೇ ಚಾಪಿ ಯದಿ ಪಶ್ಯೇಮ ಪಾಂಡವಾನ್ ।
ದ್ವಾದಶಾನ್ಯಾನಿ ವರ್ಷಾಣಿ ಪ್ರವೇಕ್ಷ್ಯಂತಿ ಪುನರ್ವನಮ್ ॥೩೬॥

ಅಜ್ಞಾತವಾಸದ ಸಮಯವು ಮುಗಿಯುವುದಕ್ಕಿಂತ ಮೊದಲೇ ನಾವು ಪಾಂಡವರನ್ನು ನೋಡಿದರೆ ಅವರು ಪುನಃ ಹನ್ನೆರಡು ವರ್ಷಗಳ ಕಾಲ ವನವನ್ನು ಪ್ರವೇಶಿಸುವರು.

ತಸ್ಮಾದನಂತರೇಣಾಪಿ ಲಾಭೋऽಸ್ಮಾಕಂ ಭವಿಷ್ಯತಿ ।
ಕೋಶವೃದ್ಧಿರಿಹಾಸ್ಮಾಕಂ ಶತ್ರೂಣಾಂ ನಿಧನಂ ಭವೇತ್ ॥೩೭॥

ಆದ್ದರಿಂದ ಗೋಗ್ರಹಣದ ಅನಂತರ ಉಂಟಾಗುವ ಪಾಂಡವರ ದರ್ಶನವು ನಮಗೆ ಲಾಭವೇ ಆಗುವುದು. ಮತ್ತು ನಮ್ಮ ಕೋಶದ ವೃದ್ಧಿ ಮತ್ತು ಶತ್ರುಗಳ ವಧೆಯೂ ಉಂಟಾದೀತು (ಲಕ್ಷಾಲಂಕಾರ).

ಕಥಂ ಸುಯೋಧನಂ ಗಚ್ಛೇತ್ ಯುಧಿಷ್ಠಿರಭೃತಃ ಪುರಾ ।
ಏತಚ್ಚಾಪಿ ವದತ್ಯೇಷ ಮಾತ್ಸ್ಯಃ ಪರಿಭವಾನ್ ಮಯಿ ॥೩೮॥

ವಿರಾಟನು ನನಗೆ ಅವಮಾನ ಮಾಡುವ ದೃಷ್ಟಿಯಿಂದ ಯುಧಿಷ್ಠಿರನನ್ನು ಸಲಹಿರುವ ನಾನು ಯುದ್ಧವಿಲ್ಲದೆ ಏಕೆ ದುರ್ಯೋಧನನಿಗೆ ಶರಣಾಗತನಾಗುತ್ತೇನೆ ಎಂದು ಹೇಳುತ್ತಾನೆ (ಲಕ್ಷಾಲಂಕಾರ).

ತಸ್ಮಾತ್ ಕರ್ತವ್ಯಮೇತದ್ ವೈ ತತ್ರ ಯಾತ್ರಾ ವಿಧೀಯತಾಮ್ ।
ಏತತ್ ಸುನೀತಂ ಮನ್ಯೇಽಹಂ ಸರ್ವೇಷಾಂ ಯದಿ ರೋಚತೇ ॥೩೯॥

ಆದ್ದರಿಂದ ಅಲ್ಲಿಗೆ ಸೈನ್ಯವನ್ನು ತೆಗೆದುಕೊಂಡು ಹೋಗಬೇಕು. ನಿಮ್ಮೆಲ್ಲರಿಗೂ ಇಷ್ಟವಾಗುವುದಾದರೆ ಇದು ಒಳ್ಳೆಯ ನೀತಿ ಎಂದು ಭಾವಿಸುತ್ತೇನೆ.

ವೈಶಂಪಾಯನಃ

ತತೋ ರಾಜಾ ತ್ರಿಗರ್ತಾನಾಂ ಸುಶರ್ಮಾ ರಥಯೂಥಪಃ ।
ಪೂರ್ವಮಾಭಾಷ್ಯ ಕರ್ಣೇನ ತಥಾ ದುಃಶಾಸನೇನ ಚ ॥೪೦॥

ಪ್ರಾಪ್ತಕಾಲಮಿದಂ ವಾಕ್ಯಮುವಾಚ ತ್ವರಿತೋ ಬಲೀ ॥೪೧॥

ಅಸಕೃನ್ನಿಕೃತಃ ಪೂರ್ವಂ ಮಾತ್ಸ್ಯಸಾಲ್ವೇಯಕೈಕಯೈಃ ।
ಸೂತೇನ ಚ ವಿರಾಟಸ್ಯ ಕೀಚಕೇನ ಪುನಃ ಪುನಃ ॥೪೨॥

ವೈಶಂಪಾಯನ– ಅನಂತರ ಹಿಂದೆ ವಿರಾಟ, ಸಾಲ್ವರಾಜ ಮತ್ತು ಕೈಕೆಯರಿಂದ ಅನೇಕ ಬಾರಿ ಅವಮಾನಗೊಂಡಿದ್ದ ಮತ್ತು ವಿರಾಟನ ಸೂತನಾದ ಕೀಚಕನಿಂದಲೂ ಮತ್ತೆ ಮತ್ತೆ ಅವಮಾನವನ್ನು ಅನುಭವಿಸಿದ್ದ ತ್ರಿಗರ್ತದೇಶದ ರಾಜನಾದ ರಥಯೂಥ ಪತಿಯಾದ ಸುಶರ್ಮನು, ಮೊದಲು ಕರ್ಣ ಮತ್ತು ದುಶ್ಶಾಸನನ ಜೊತೆಯಲ್ಲಿ ಮಾತನಾಡಿ ಅನಂತರ ಬಲಿಷ್ಠನಾದ ಅವನು ಶೀಘ್ರವಾಗಿ ಆ ಕಾಲಕ್ಕೆ ಉಚಿತವಾದ ಈ ಮಾತುಗಳನ್ನು ಆಡಿದನು.

ಬಾಧಿತೋ ಬಂಧುಭಿಃ ಸಾರ್ಧಂ ಬಲಾದ್ ಬಲವತಾ ವಿಭೋ ।
ರಾಷ್ಟ್ರಂ ಮಾಮಸಕೃದ್ ರಾಜನ್ ರಾಜ್ಞಾ ಮಾತ್ಸ್ಯೇನ ಬಾಧಿತಮ್ ॥

ಎಲೈ ವಿಭುವೇ, ನನ್ನ ಬಂಧುಗಳ ಜೊತೆಯಲ್ಲಿ ನಾನೂ ಮತ್ತು ನನ್ನ ರಾಷ್ಟ್ರವೂ ಬಲಿಷ್ಠನಾದ ಮತ್ಸ್ಯರಾಜನಿಂದ ಅನೇಕಬಾರಿ ಬಾಧೆಗೆ ಒಳಗಾಗಿದ್ದೇವೆ.

ಪ್ರಣೇತಾ ಕೀಚಕಸ್ತಸ್ಯ ಬಲಮತ್ತೋಽಭವತ್ ಪುರಾ ।
ಅಮರ್ಷೀ ದುರ್ಜಯೋ ಜೇತಾ ಪ್ರಖ್ಯಾತಬಲಪೌರುಷಃ ॥೪೪॥

ಸ ಹತಸ್ತತ್ರ ಗಂಧರ್ವೈಃ ಪಾಪಕರ್ಮಾ ನೃಶಂಸಕೃತ್ ॥೪೫॥

ಅವನಿಗೆ ಸೇನಾನಾಯಕನಾದ ಕೀಚಕನು ಬಲದಿಂದ ಮತ್ತನಾಗಿದ್ದನು. ಅವನು ಕ್ರೋಧಶೀಲನೂ, ಗೆಲ್ಲಲು ಅಸಾಧ್ಯನಾದವನೂ, ಎಲ್ಲರನ್ನೂ ಗೆಲ್ಲುವವನೂ ಮತ್ತು ಪ್ರಖ್ಯಾತ ಬಲಪರಾಕ್ರಮವುಳ್ಳವನೂ ಆಗಿದ್ದನು. ಪಾಪಕರ್ಮವನ್ನು ಮಾಡುವವನೂ ಮತ್ತು ಕ್ರೂರಿಯೂ ಆದ ಅವನು ಗಂಧರ್ವರಿಂದ ಕೊಲ್ಲಲ್ಪಟ್ಟಿದ್ದಾನೆ.

ತಸ್ಮಿನ್ ವಿನಿಹತೇ ರಾಜನ್ ಹೀನದರ್ಪೋ ನಿರಾಶ್ರಯಃ ।
ಭವಿಷ್ಯತಿ ನಿರುತ್ಸಾಹೋ ವಿರಾಟ ಇತಿ ಮೇ ಮತಿಃ ॥೪೬॥

ಎಲೈ ರಾಜನೇ, ಕೀಚಕನು ಮೃತನಾದಮೇಲೆ ವಿರಾಟನು ತನ್ನ ಆಶ್ರಯವನ್ನು ಕಳೆದುಕೊಂಡು, ತನ್ನ ದರ್ಪವನ್ನು ಕಳೆದುಕೊಂಡು ನಿರುತ್ಸಾಹನಾಗುವನು ಎಂದು ನನ್ನ ಅಭಿಪ್ರಾಯ.

ತತ್ರ ಯಾತ್ರಾ ಮಮ ಮತಾ ನಿಹತೇ ಕೀಚಕೋऽನಘ ।
ಕೌರವಾಣಾಂ ಚ ಸರ್ವೇಷಾಂ ಕರ್ಣಸ್ಯ ಚ ಮಹಾತ್ಮನಃ ॥೪೭॥

ಏತತ್ ಕಾರ್ಯಮಹಂ ಮನ್ಯೇ ಪರಮಾತ್ಯಯಿಕಂ ಮಹತ್ ॥೪೮॥

ಎಲೈ ಅನಘನೇ, ಕೀಚಕನು ಹತನಾಗಿರುವಾಗ ಎಲ್ಲಾ ಕೌರವರ ಮತ್ತು ಮಹಾತ್ಮನಾದ ಕರ್ಣನ ವಿರಾಟನಗರ ಯಾತ್ರೆಯು ನನಗೆ ಅಭಿಮತವಾಗಿದೆ. ಇದು ಸದ್ಯದಲ್ಲಿ ಮಾಡಬೇಕಾದ ಶ್ರೇಷ್ಠವಾದ ಕಾರ್ಯವೆಂದು ನಾನು ಭಾವಿಸುತ್ತೇನೆ.

ರಾಷ್ಟ್ರಂ ತಸ್ಯಾಭಿಯಾತ್ವಾ ತು ಧನಧಾನ್ಯಸಮಾಕುಲಮ್ ।
ಆದದಾಮೋ ಹಿ ರತ್ನಾನಿ ವಿವಿಧಾನಿ ವಸೂನಿ ಚ ॥೪೯॥

ಗ್ರಾಮಾನ್ ರಾಷ್ಟ್ರಾಣಿ ವಾ ತಸ್ಯ ಹರಿಷ್ಯಾಮೋ ವಿಭಾಗಶಃ ॥೫೦॥

ಧನಧಾನ್ಯಸಮೃದ್ಧವಾದ ವಿರಾಟನ ರಾಷ್ಟ್ರದ ಮೇಲೆ ದಂಡೆತ್ತಿ ಹೋಗಿ ರತ್ನವನ್ನು ಮತ್ತು ಅನೇಕ ವಿಧವಾದ ದ್ರವ್ಯಗಳನ್ನು ನಾವು ತೆಗೆದುಕೊಳ್ಳೋಣ ಅಥವಾ ಅವನ ಗ್ರಾಮವನ್ನಾಗಲೀ, ರಾಷ್ಟ್ರವನ್ನೇ ಆಗಲಿ ಭಾಗ ಭಾಗಗಳಾಗಿ ಅಪಹರಿಸೋಣ.

ಅಥವಾ ಗೋಸಹಸ್ರಾಣಿ ಬಹೂನಿ ಶುಭದರ್ಶನ ।
ವಿವಿಧಂ ತದ್ಧರಿಷ್ಯಾಮಃ ಪರಿಪೀಡ್ಯ ಪುರಂ ಬಲಾತ್ ॥೫೧॥

ಎಲೈ ಶುಭದರ್ಶನನೇ, ಅಥವಾ ನಾವು ಅವನ ಪಟ್ಟಣವನ್ನು ನಮ್ಮ ಬಲದಿಂದ ಬಹಳವಾಗಿ ಪೀಡಿಸಿ, ಅವನ ವಿಧವಿಧವಾದ ಸಹಸ್ರಾರು ಗೋವುಗಳನ್ನು ಅಪಹರಿಸೋಣ.

ಕೌರವಾಃ ಸಹ ಸಂಹತ್ಯ ತ್ರಿಗರ್ತಾಶ್ಚ ವಿಶಾಂಪತೇ ।
ಗಾಶ್ಚ ತಸ್ಯ ಹರಾಮಾಶು ಸಹ ಸರ್ವೈರ್ಮಹಾರಥೈಃ ॥೫೨॥

ಎಲೈ ರಾಜನೇ, ಕೌರವರೂ ಮತ್ತು ತ್ರಿಗರ್ತರೂ ಸೇರಿ ಜೊತೆಗೆ ಸರ್ವಮಹಾರಥರನ್ನೂ ಕೂಡಿಕೊಂಡು ವಿರಾಟನ ಗೋವುಗಳನ್ನು ಹಿಡಿಯೋಣ.

ಸಂಧಿಂ ವಾ ತೇನ ಕೃತ್ವಾ ತು ನಿಬಧ್ನೀಮೋಽಸ್ಯ ಪೌರುಷಮ್ ।
ಹತ್ವಾ ಚಾಸ್ಯ ಚಮೂಂ ಕೃತ್ಸ್ನಾಂ ವಶಮನ್ವಾನಯಾಮಹೇ ॥೫೩॥

ಅಥವಾ ಅವನ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಂಡು ಅವನ ಪೌರುಷವನ್ನು ಮುರಿಯೋಣ ಅಥವಾ ಅವನ ಸಮಗ್ರವಾದ ಸೈನ್ಯವನ್ನು ಕೊಂದು ಅವನನ್ನು ವಶಪಡಿಸಿಕೊಳ್ಳೋಣ.

ತಂ ವಶೇ ನ್ಯಾಯತಃ ಕೃತ್ವಾ ಸುಖಂ ವತ್ಸ್ಯಾಮಹೇ ವಯಮ್ ।
ಭವತೋ ಬಲವೃದ್ಧಿಶ್ಚ ಭವಿಷ್ಯತಿ ನ ಸಂಶಯಃ ॥೫೪॥

ನ್ಯಾಯದಿಂದ ಅವನನ್ನು ವಶಪಡಿಸಿಕೊಂಡರೆ ನಾವು ಸುಖವಾಗಿ ವಾಸಿಸಬಹುದು. ನಿನ್ನ ಬಲವೂ ಹೆಚ್ಚುತ್ತದೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ವೈಶಂಪಾಯನಃ

ತಚ್ಛ್ರುತ್ವಾ ವಚನಂ ತಸ್ಯ ಕರ್ಣೋ ರಾಜಾನಮಬ್ರವೀತ್ ॥೫೫॥

ಸೂಕ್ತಂ ಸುಶರ್ಮಣಾ ವಾಕ್ಯಂ ಪ್ರಾಪ್ತಕಾಲಮಿದಂ ಹಿ ನಃ ।
ತಸ್ಮಾತ್ ಕ್ಷಿಪ್ರಂ ವಿನಿರ್ಯಾಮೋ ಯೋಜಯಿತ್ವಾ ವರೂಥಿನೀಮ್ ॥

ಯದೇತತ್ ತೇಽಭಿರುಚಿತಂ ಮಮ ಚೈತದ್ಧಿ ರೋಚತೇ ।
ಪ್ರವಿಭಜ್ಯ ಚ ಸೈನ್ಯಾನಿ ಯಥಾ ವಾ ಮನ್ಯಸೇ ಭವಾನ್ ॥೫೭॥

ವೈಶಂಪಾಯನ– ಸುಶರ್ಮನ ಮಾತುಗಳನ್ನು ಕೇಳಿ ಕರ್ಣನು ರಾಜನನ್ನುದ್ದೇಶಿಸಿ, ಸುಶರ್ಮನು ಸರಿಯಾಗಿ ಹೇಳಿದ್ದಾನೆ. ಇದು ನಾವು ಸದ್ಯದಲ್ಲಿ ಮಾಡಬೇಕಾದ ಕಾರ್ಯ. ಆದ್ದರಿಂದ ಸೈನ್ಯವನ್ನು ಸಂಘಟಿಸಿ ಬೇಗ ದಂಡೆತ್ತಿ ಹೋಗೋಣ. ಇದು ನಿನಗೂ ಇಷ್ಟವಾಗುತ್ತದೆ ಮತ್ತು ನನಗೂ ಇಷ್ಟವಾಗುತ್ತದೆ. ನಾವು ಸೈನ್ಯವನ್ನು ಭಾಗ ಮಾಡಿ ದಂಡೆತ್ತಿ ಹೋಗೋಣ ಅಥವಾ ನಿನ್ನ ಅಭಿಪ್ರಾಯವೇನು? (ಎಂದು ಹೇಳಿದನು).

ಪ್ರಜ್ಞಾವಾನ್ ಕುಲವೃದ್ಧಶ್ಚ ಸರ್ವೇಷಾಂ ನಃ ಪಿತಾಮಹಃ ।
ಆಚಾರ್ಯಶ್ಚ ಕೃಪಶ್ಚಾಪಿ ಶಕುನಿಶ್ಚಾಪಿ ಸೌಬಲಃ ॥೫೮॥

ಯಥಾ ತೇ ಮನ್ಯತೇ ಸರ್ವೇ ತಥಾ ಯಾತ್ರಾ ವಿಧೀಯತಾಮ್ ।
ಸಮ್ಮಂತ್ರ್ಯ ಚಾಶು ಗಚ್ಛಾಮಃ ಸಾಧನಾರ್ಥಂ ಮಹೀಪತೇ ॥೫೯॥

ನಮ್ಮೆಲ್ಲರ ಪಿತಾಮಹನಾದ ಭೀಷ್ಮನು ಪ್ರಜ್ಞಾವಂತನೂ, ಕುಲವೃದ್ಧನೂ ಆಗಿದ್ದಾನೆ. ಕೃಪಾಚಾರ್ಯರು ಮತ್ತು ಶಕುನಿಯೂ ಪ್ರಜ್ಞಾವಂತರು. ಅವರು ಯೋಚನೆ ಮಾಡುವಂತೆ ಸೈನ್ಯದ ಯಾತ್ರೆಯನ್ನು ವಿಧಾನಮಾಡು. ಎಲೈ ರಾಜನೇ, ಎಲ್ಲರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ನಮ್ಮ ಕಾರ್ಯಸಿದ್ಧಿಗಾಗಿ ಹೋಗೋಣ.

ಕಿಂ ನು ನಃ ಪಾಂಡವೈಃ ಕಾರ್ಯಂ ಹೀನಾರ್ಥಬಲಪೌರುಷೈಃ ।
ಅತ್ಯರ್ಥಂ ಹಿ ಪ್ರಣಷ್ಟಾಸ್ತೇ ಪ್ರಾಪ್ತಾ ವಾऽಪಿ ಯಮಕ್ಷಯಮ್ ॥೬೦॥

ತಮ್ಮ ಅರ್ಥ, ಬಲ, ಪೌರುಷಗಳನ್ನು ಕಳೆದುಕೊಂಡಿರುವ ಪಾಂಡವರಿಂದ ನಮಗೆ ಏನಾಗಬೇಕಾಗಿದೆ? ಅವರು ಅತ್ಯಂತ ನಾಶವನ್ನು ಹೊಂದಿದ್ದಾರೆ ಅಥವಾ ಯಮಲೋಕವನ್ನೇ ಸೇರಿದ್ದಾರೆ.

ತದ್ ಭವಾಂಶ್ಚತುರಂಗೇಣ ಬಲೇನ ಮಹತಾ ವೃತಃ ।
ವಿರಾಟನಗರಂ ಯಾತು ಸರ್ವಸೈನ್ಯೇನ ಭಾರತ ॥೬೧॥

ಆದಾಸ್ಯಾಮೋ ಹಿ ಗಾಸ್ತಸ್ಯ ವಸೂನಿ ವಿವಿಧಾನಿ ಚ ॥೬೨॥

ಎಲೈ ಭಾರತನೇ, ಆದ್ದರಿಂದ ನೀನು ದೊಡ್ಡ ಚತುರಂಗ ಸೈನ್ಯದಿಂದ ಕೂಡಿದವನಾಗಿ ಎಲ್ಲ ಸೈನ್ಯಗಳಿಂದಲೂ ಸಹಿತನಾಗಿ ವಿರಾಟನಗರಕ್ಕೆ ಹೊರಡು. ವಿರಾಟನ ಗೋವುಗಳನ್ನೂ, ವಿವಿಧವಾದ ಸಂಪತ್ತನ್ನೂ ನಾವು ಹಿಡಿಯುವೆವು.

ವೈಶಂಪಾಯನಃ

ತತೋ ದುರ್ಯೋಧನೋ ರಾಜಾ ವಚಃ ಶ್ರುತ್ವಾ ತು ತಸ್ಯ ತತ್ ।
ವೈಕರ್ತನಸ್ಯ ಕರ್ಣಸ್ಯ ಕ್ಷಿಪ್ರಮಾಜ್ಞಾಪಯತ್ ತತಃ ॥೬೩॥

ಶಾಸನೇ ನಿತ್ಯಯುಕ್ತಂ ತು ದುಃಶಾಸನಮನಂತರಮ್ ॥೬೪॥

ವೈಶಂಪಾಯನ– ಆಗ ರಾಜನಾದ ದುರ್ಯೋಧನನು ವೈಕರ್ತನನಾದ ಕರ್ಣನ ಆ ಮಾತುಗಳನ್ನು ಕೇಳಿ, ಯಾವಾಗಲೂ ಆಜ್ಞಾಧಾರಕನಾಗಿದ್ದ ದುಃಶಾಸನನನ್ನು ಕುರಿತು ಶೀಘ್ರವಾಗಿ ಅಪ್ಪಣೆಯನ್ನು ಮಾಡಿದನು.

ಸಹ ವೃದ್ಧೈಸ್ತು ಸಮ್ಮಂತ್ರ್ಯ ಕ್ಷಿಪ್ರಂ ಯೋಜಯ ವಾಹಿನೀಮ್ ।
ಯಥೋದ್ದೇಶಂ ತು ಗಚ್ಛಾಮಃ ಸಹಿತಾಃ ಸರ್ವಕೌರವೈಃ ॥೬೫॥

ಹಿರಿಯರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ಶೀಘ್ರವಾಗಿ ಸೈನ್ಯವನ್ನು ಹೂಡುವವನಾಗು. ನಮ್ಮ ಉದ್ದೇಶಕ್ಕೆ ಅನುಗುಣವಾಗಿ ಎಲ್ಲ ಕೌರವರ ಜೊತೆಯಲ್ಲಿ ನಾವು ವಿರಾಟನ ನಗರಕ್ಕೆ ಹೋಗೋಣ.

ಸುಶರ್ಮಾ ತು ಯಥೋದ್ದಿಷ್ಟಂ ದೇಶಂ ಯಾತು ಮಹಾರಥಃ ।
ತ್ರಿಗರ್ತೈಃ ಸಹಿತಃ ಸರ್ವೈಃ ಪ್ರಖ್ಯಾತಬಲಪೌರುಷೈಃ ॥೬೬॥

ಪ್ರಾಗೇವ ತು ಸುಸಂಯತ್ತಃ ವಿರಾಟವಿಷಯಂ ಪ್ರತಿ ॥೬೭॥

ನಮ್ಮ ಉದ್ದೇಶದಂತೆ ಮಹಾರಥನಾದ ಸುಶರ್ಮನು ಪ್ರಖ್ಯಾತ ಬಲಪೌರುಷವುಳ್ಳ ಎಲ್ಲಾತ್ರಿಗರ್ತ ಸೈನಿಕರಿಂದ ಸಹಿತನಾಗಿ ಮೊದಲೇ ಸಜ್ಜುಗೊಂಡು ವಿರಾಟನ ದೇಶಕ್ಕೆ ಹೋಗಲಿ.

ಜಘನ್ಯತೋ ವಯಂ ತಸ್ಯ ಯಾಸ್ಯಾಮೋ ದಿವಸಾಂತರಮ್ ।
ವಿಷಯಂ ಮತ್ಸ್ಯರಾಜಸ್ಯ ಸುಸಮೃದ್ಧಂ ಸುಸಂಹಿತಮ್ ॥೬೮॥

ಅನಂತರ ಮರುದಿವಸ ನಾವು ಅತ್ಯಂತ ಸಮೃದ್ಧವಾದ ಮತ್ತು ಒಂದುಗೂಡಿದ ಮತ್ಸ್ಯರಾಜನ ದೇಶಕ್ಕೆ ಹೋಗುವೆವು.

ಸುಶರ್ಮಣಾ ಗೃಹೀತೇ ತು ಮತ್ಸ್ಯರಾಜಸ್ಯ ಗೋಧನೇ ।
ವಿರಾಟಃ ಸೈನ್ಯಮಾದಾಯ ತ್ರಿಗರ್ತೈಃ ಸಹ ಯೋತ್ಸ್ಯತೇ ॥೬೯॥

ಸುಶರ್ಮನು ಮತ್ಸ್ಯರಾಜನ ಗೋಧನವನ್ನು ಹಿಡಿದರೆ ವಿರಾಟನು ಸೈನ್ಯವನ್ನು ತೆಗೆದುಕೊಂಡು ಬಂದು ತ್ರಿಗರ್ತದ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಅಪರಂ ದಿವಸಂ ಗಾಸ್ತು ತತ್ರ ಗೃಹ್ಣಂತು ಕೌರವಾಃ ।
ಗವಾರ್ಥೇ ಪಾಂಡವಾಸ್ತತ್ರ ಯೋತ್ಸ್ಯಂತಿ ಕುರುಭಿಃ ಸಹ ॥೭೦॥

ಕೌರವರು ಮರುದಿವಸ ಗೋಗ್ರಹಣ ಮಾಡಲಿ. ಆಗ ಪಾಂಡವರು ಗೋವುಗಳ ಸಲುವಾಗಿ ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬರುವರು.

ತಥಾ ಗತ್ವಾ ಯಥೋದ್ದೇಶಂ ವಿರಾಟನಗರಾಂತಿಕಮ್ ।
ಕ್ಷಿಪ್ರಂ ಗೋಷ್ಠಂ ಸಮಾಸಾದ್ಯ ಗೃಹ್ಣಂತು ವಿಪುಲಂ ಧನಮ್ ॥೭೧॥

ಆದ್ದರಿಂದ ವಿರಾಟ ನಗರದ ಅಂಚಿಗೆ ಹೋಗಿ ನಮ್ಮ ಉದ್ದೇಶಕ್ಕೆ ಅನುಗುಣವಾಗಿ ಶೀಘ್ರವಾಗಿ ವಿಪುಲವಾದ ಗೋಸಂಪತ್ತನ್ನು ನಮ್ಮ ಸೈನಿಕರು ಗ್ರಹಣ ಮಾಡಲಿ.

ಗವಾಂ ಶತಸಹಸ್ರಾಣಿ ಶ್ರೀಮಂತಿ ಗುಣವಂತಿ ಚ ।
ವಯಮಸ್ಯ ನಿಗೃಹ್ಣೀಮೋ ದ್ವಿಧಾ ಕೃತ್ವಾ ವರೂಥಿನೀಮ್ ॥೭೨॥

ನಾವು ಸೈನ್ಯವನ್ನು ಎರಡು ಭಾಗವನ್ನಾಗಿ ಮಾಡಿ ವಿರಾಟನ ಕಾಂತಿಯುಕ್ತವಾದ ಸದ್ಗುಣದಿಂದ ಕೂಡಿದ ನೂರಾರು ಸಹಸ್ರಾರು ಗೋವುಗಳನ್ನು ಹಿಡಿಯುತ್ತೇವೆ.

ವೈಶಂಪಾಯನಃ

ಸ ತು ಗತ್ವಾ ಯಥೋದ್ದಿಷ್ಟಂ ದೇಶಂ ಮತ್ಸ್ಯಮಹೀಪತೇಃ ।
ಆದತ್ತ ಗಾಃ ಸುಶರ್ಮಾ ವೈ ಕೃಷ್ಣಪಕ್ಷಸ್ಯ ಚಾಷ್ಟಮೀ ॥೭೩॥

ವೈಶಂಪಾಯನ– ಆ ಸುಶರ್ಮನು ಉದ್ದೇಶಕ್ಕೆ ಅನುಗುಣವಾಗಿ ಮತ್ಸ್ಯರಾಜನ ದೇಶಕ್ಕೆ ಹೋಗಿ ಕೃಷ್ಣಪಕ್ಷದ ಅಷ್ಟಮಿಯಂದು ಗೋವುಗಳನ್ನು ಹಿಡಿದನು.

ಅಪರಂ ದಿವಸಂ ಚಾಪಿ ಸಹ ಸಂಭೂಯ ಕೌರವಾಃ ।
ನವಮ್ಯಾಂ ತೇ ನ್ಯಗೃಹ್ಣಂತ ಗೋಕುಲಾನಿ ಸಹಸ್ರಶಃ ॥೭೪॥

ಕೌರವಾಸ್ತು ಮಹಾವೀರ್ಯಾ ಮತ್ಸ್ಯಾನಾಂ ವಿಷಯಾಂತರೇ ॥೭೫॥

ಮರುದಿವಸ ಎಂದರೆ ನವಮಿಯಂದು ಮಹಾಪರಾಕ್ರಮಿಗಳಾದ ಕೌರವರು ಒಟ್ಟು ಸೇರಿ ಮತ್ಸ್ಯರಾಜನ ದೇಶದ ಇನ್ನೊಂದು ಭಾಗದಲ್ಲಿ ಸಹಸ್ರಾರು ಗೋವುಗಳನ್ನು ಹಿಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಏಕತ್ರಿಂಶೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಮೂವತ್ತೆರಡನೆಯ ಅಧ್ಯಾಯ

ಗೋಧನದ ರಕ್ಷಣೆಯನ್ನು ಮಾಡಲು ವಿರಾಟಪುತ್ರರ ಮತ್ತು ಪಾಂಡವರ ಗಮನ

ವೈಶಂಪಾಯನಃ

ತತಸ್ತೇಷಾಂ ತದಾ ರಾಜನ್ ತತ್ಕೈವಾಮಿತತೇಜಸಾಮ್ ।
ಛದ್ಮಲಿಂಗಪ್ರವಿಷ್ಟಾನಾಂ ಪಾಂಡವಾನಾಂ ಮಹಾತ್ಮನಾಮ್ ॥೧॥

ವ್ಯತೀತಃ ಸಮಯಃ ಸಮ್ಯಗ್ ವಿರಾಟನಗರೇ ಸತಾಮ್ ।
ಕುರ್ವತಾಂ ತಸ್ಯ ಕರ್ಮಾಣಿ ವಿರಾಟಸ್ಯ ಮಹೀಪತೇಃ ॥೨॥

ವೈಶಂಪಾಯನ– ಎಲೈ ರಾಜನೇ, ಅಲ್ಲಿ ವಿರಾಟನಗರದಲ್ಲಿ ಛದ್ಮವೇಷದಿಂದ ವಾಸಮಾಡುತ್ತಾ, ವಿರಾಟರಾಜನ ಸೇವೆಯನ್ನು ಮಾಡುತ್ತಿದ್ದ ಪಾಂಡವರಿಗೆ ಅಜ್ಞಾತವಾಸದ ಸಮಯವು ಚೆನ್ನಾಗಿ ಕಳೆಯಿತು.

ತತಸ್ತ್ರಯೋದಶಸ್ಯಾಂತೇ ತಸ್ಯ ವರ್ಷಸ್ಯ ಭಾರತ ।
ಸುಶರ್ಮಣಾ ಗೃಹೀತಂ ತು ಮತ್ಸ್ಯರಾಜಸ್ಯ ಗೋಧನಮ್ ॥೩॥

ಎಲೈ ಭಾರತನೇ, ಅನಂತರ ಆ ಹದಿಮೂರು ವರ್ಷದ ಕೊನೆಯಲ್ಲಿ ಸುಶರ್ಮನು ಮತ್ಸ್ಯರಾಜನ ಗೋಧನವನ್ನು ಹಿಡಿದನು.

ತತಃ ಶಬ್ದೋ ಮಹಾನಾಸೀದ್ ರೇಣುಶ್ಚ ದಿವಮಸ್ಪೃಶತ್ ।
ಶಂಖದುಂದುಭಿಘೋಷಶ್ಚ ಭೇರೀಣಾಂ ಚ ಮಹಾಸ್ವನಃ ॥೪॥

ಗವಾಶ್ವರಥನಾಗಾನಾಂ ನರಾಣಾಂ ಚ ಪದಾತಿನಾಮ್ ॥೫॥

ಆಗ ಮಹಾನಾದ ಉಂಟಾಯಿತು. ಧೂಳು ಆಕಾಶವನ್ನು ಮುಟ್ಟಿತು. ಶಂಖ ದುಂದುಭಿ ಘೋಷಗಳೂ, ಭೇರಿಗಳ ಮಹಾಸ್ವನಗಳೂ ಅಶ್ವರಥ ಗಜಗಳ ಮಹಾಸ್ವನವೂ ಮತ್ತು ಪದಾತಿಗಳಾದ ಮನುಷ್ಯರ ಶಬ್ದವೂ ಉಂಟಾಯಿತು.

ಏವಂ ತೈಸ್ತ್ವಭಿನಿರ್ಯಾಯ ಮತ್ಸ್ಯರಾಜಸ್ಯ ಗೋಧನೇ ।
ತ್ರಿಗರ್ತೈರ್ಗೃಹ್ಯಮಾಣೇ ತು ಗೋಪಾಲಾಃ ಪ್ರತ್ಯಷೇಧಯನ್ ॥೬॥

ಹೀಗೆ ತ್ರಿಗರ್ತರು ತಮ್ಮ ದೇಶದಿಂದ ಹೊರಟು ಮತ್ಸ್ಯರಾಜನ ಗೋಧನವನ್ನು ಹಿಡಿಯುತ್ತಿರಲು ಗೋಪಾಲರು ಪ್ರತಿರೋಧವನ್ನು ಮಾಡಿದರು.

ಅಥ ತ್ರಿಗರ್ತಾ ಬಹವಃ ಪರಿಗೃಹ್ಯ ಧನಂ ಬಹು ।
ಪರಿಕ್ಷಿಪ್ಯ ಹಯೈಃ ಶೀಘ್ರೈ ರಥವ್ರಾತೈಶ್ಚ ಭಾರತ ॥೭॥

ಗೋಪಾಲಾನ್ ಪ್ರತ್ಯಯುಧ್ಯಂತ ರಣೇ ಕೃತ್ವಾ ಜಯೇ ಧೃತಿಮ್ ॥೮॥

ಎಲೈ ಭಾರತನೇ, ಆಗ ಅನೇಕ ತ್ರಿಗರ್ತರು ಗೋಧನವನ್ನು ತೆಗೆದುಕೊಂಡು, ತಮ್ಮ ಶೀಘ್ರವಾದ ಅಶ್ವಗಳಿಂದಲೂ ಮತ್ತು ರಥಸಮೂಹಗಳಿಂದಲೂ ಅವರನ್ನು ಸುತ್ತುಗಟ್ಟಿ ಯುದ್ಧದಲ್ಲಿ ಜಯವನ್ನು ಸಂಪಾದಿಸಲು ನಿರ್ಧರಿಸಿ ಗೋಪಾಲರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತೇ ಹನ್ಯಮಾನಾಃ ರಥಿಭಿಃ ಸಾದಿಭಿಃ ಪ್ರಾಸಧಾರಿಭಿಃ ।
ಗೋಪಾಲಾ ಗೋಕುಲೇ ಭಕ್ತಾ ವಾರಯಾಮಾಸುರೋಜಸಾ ॥೯॥

ರಥಿಕರಿಂದಲೂ ಮತ್ತು ಪ್ರಾಸಧಾರಿಗಳಾದ ಅಶ್ವಾರೋಹಿಗಳಿಂದಲೂ ಪ್ರಹಾರಕ್ಕೆ ಒಳಗಾದ ಗೋಪಾಲರು ಗೋವುಗಳ ಮೇಲಿನ ಭಕ್ತಿಯಿಂದ ತಮ್ಮ ಬಲದಿಂದ ಅವರನ್ನು ತಡೆದರು.

ಪರಶ್ವಧೈಶ್ಚ ಮುಸಲೈಃ ಭಿಂಡಿಪಾಲೈಶ್ಚ ಮುದ್ಗರೈಃ ।
ಗೋಪಾಲಾಃ ಕರ್ಷಣೈಶ್ಚಿತ್ರೈರ್ಜಘ್ನುರಶ್ವಾನ್ ಸಮಂತತಃ ॥೧೦॥

ಗೋಪಾಲರು ಪರಶ್ವಧಗಳಿಂದಲೂ, ಒನಕೆಗಳಿಂದಲೂ, ಭಿಂಡಿಪಾಲಗಳಿಂದಲೂ, ಮುದ್ಗರಗಳಿಂದಲೂ, ವಿಚಿತ್ರವಾದ ಕರ್ಷಣ ಯಂತ್ರಗಳಿಂದಲೂ ಎಲ್ಲಾ ಕಡೆಗಳಲ್ಲಿಯೂ ಅಶ್ವಗಳನ್ನು ಹೊಡೆದರು.

ತೇ ಹನ್ಯಮಾನಾ ಸಂಕ್ರುದ್ಧಾಃ ತ್ರಿಗರ್ತಾ ರಥಯೋಧಿನಃ ।
ವಿಸೃಜ್ಯ ಶರವರ್ಷಾಣಿ ಗೋಪಾಲಾನ್ ದ್ರಾವಯನ್ ರಣೇ ॥೧೧॥

ಗೋಪಾಲರ ಹೊಡೆತಕ್ಕೆ ಸಿಕ್ಕಿದ ತ್ರಿಗರ್ತರ ರಥಯೋಧಿಗಳು ಬಾಣಗಳ ಮಳೆಯನ್ನು ಸುರಿಸಿ ಯುದ್ಧದಲ್ಲಿ ಗೋಪಾಲರನ್ನು ಓಡಿಸಿದರು.

ತತೋ ಯುವಾನಃ ಸಂಭೀತಾಃ ಶ್ವಸಂತೋ ರೇಣುಕುಂಠಿತಾಃ ॥೧೨॥

ಜವೇನ ಮಹತಾ ಚೈವ ಗೋಪಾಲಾಃ ಪುರಮಾವ್ರಜನ್ ॥೧೩॥

ಆಗ ಯುವಕರಾದ ಗೋಪಾಲರು ಭೀತರಾಗಿ ಗಟ್ಟಿಯಾಗಿ ಉಸಿರಾಡುತ್ತಾ ಮೈಯೆಲ್ಲವೂ ಧೂಳಿನಿಂದ ತುಂಬಿ ವೇಗವಾಗಿ ಪಟ್ಟಣಕ್ಕೆ ಬಂದರು.

ವಿರಾಟನಗರಂ ಪ್ರಾಪ್ಯ ನರಾ ರಾಜಾನಮಬ್ರುವನ್ ॥೧೪॥

ಸಭಾಯಾಂ ರಾಜಶಾರ್ದೂಲಮಾಸೀನಂ ಪಾಂಡವೈಃ ಸಹ ।
ಶೂರೈಃ ಪರಿವೃತಂ ಯೋಧೈಃ ಕುಂಡಲಾಂಗದಧಾರಿಭಿಃ ॥೧೫॥

ಸದ್ವಿಶ್ಚ ಪಂಡಿತೈಃ ಸಾರ್ಧಂ ಮಂತ್ರಿಭಿಶ್ಚಾಪಿ ಸಂವೃತಮ್ ।
ದೃಷ್ಟ್ವಾ ಶೀಘ್ರಂ ತು ಗೋಪಾಲಾ ವಿರಾಟಮಿದಮಬ್ರುವನ್ ॥೧೬॥

ವಿರಾಟನಗರವನ್ನು ತಲುಪಿ ಆ ಗೋಪಾಲರು ಪಾಂಡವರ ಜೊತೆಯಲ್ಲಿ ಕುಳಿತು ಕುಂಡಲಗಳನ್ನೂ ಮತ್ತು ಅಂಗದಗಳನ್ನೂ ಧರಿಸಿದ ಶೂರರಾದ ಯೋಧರಿಂದ

ಸುತ್ತುವರಿಯಲ್ಪಟ್ಟು ಸಜ್ಜನರಾದ ಪಂಡಿತರಿಂದಲೂ ಮತ್ತು ಮಂತ್ರಿಗಳಿಂದಲೂ ಕೂಡಿದ ವಿರಾಟರಾಜನನ್ನು ನೋಡಿ ಶೀಘ್ರವಾಗಿ ಈ ಮಾತುಗಳನ್ನು ಆಡಿದರು.

ಅಸ್ಮಾನ್ ಯುಧಿ ವಿನಿರ್ಜಿತ್ಯ ಪರಿಭೂಯ ಸಬಾಂಧವಾನ್ ।
ಷಷ್ಟಿಂ ಗವಾಂ ಸಹಸ್ರಾಣಿ ತ್ರಿಗರ್ತಾಃ ಕಾಲಯಂತಿ ತೇ ॥೧೭॥

ತಾಃ ಪರೀಪ್ಸ ಮಹಾರಾಜ ಮಾ ನೇಶುಃ ಪಶವಸ್ತವ ॥೧೮॥

ಎಲೈ ಮಹಾರಾಜನೇ, ತ್ರಿಗರ್ತರು ಬಾಂಧವ ಸಹಿತರಾದ ನಮ್ಮನ್ನು ಯುದ್ಧದಲ್ಲಿ ಸೋಲಿಸಿ ತಿರಸ್ಕರಿಸಿ ನಿನ್ನ ಆರುಸಾವಿರ ಗೋವುಗಳನ್ನು ಅಟ್ಟಿಸಿಕೊಂಡು ಹೋಗುತ್ತಿದ್ದಾರೆ. ಅವುಗಳನ್ನು ರಕ್ಷಿಸು. ನಿನ್ನ ಗೋವುಗಳು ನಾಶವನ್ನು ಹೊಂದದಿರಲಿ (ಎಂದು ಹೇಳಿದರು).

ಶ್ರುತ್ವಾ ತು ವಚನಂ ತೇಷಾಂ ಗೋಪಾಲಾನಾಮರಿಂದಮಃ ।
ಸ ರಾಜಾ ಮಹತೀಂ ಸೇನಾಂ ಮತ್ಸ್ಯಾನಾಂ ಸಮವಾಹಯತ್ ॥೧೯॥

ರಥನಾಗಾಶ್ವಕಲಿಲಾಂ ಪತ್ತಿಧ್ವಜಸಮಾಕುಲಾಮ್ ॥೨೦॥

ಗೋಪಾಲರ ಮಾತುಗಳನ್ನು ಕೇಳಿ ಅರಿಂದಮನಾದ ಆ ರಾಜನು ರಥ, ಗಜ, ಅಶ್ವಗಳಿಂದ ತುಂಬಿದ ಪದಾತಿ ಮತ್ತು ಧ್ವಜಗಳಿಂದ ನಿಬಿಡವಾದ ದೊಡ್ಡ ಸೈನ್ಯವನ್ನು ಹೊರಡಿಸಿದನು.

ರಾಜಾನೋ ರಾಜಪುತ್ರಾಶ್ಚ ತನುತ್ರಾಣ್ಯನುಭೇಜಿರೇ ।
ಭಾನುಮಂತಿ ನಿವಾತಾನಿ ಸೂಪಸೇವ್ಯಾನಿ ಭಾಗಶಃ ॥೨೧॥

ರಾಜರೂ ಮತ್ತು ರಾಜಪುತ್ರರೂ ಸಹ ಹೊಳೆಯುವ, ಗಾಳಿಯೂ ಒಳಗೆ ಹೋಗಲಾರದ, ಒಂದು ಭಾಗದಿಂದ ಹಾಕಿಕೊಳ್ಳಬಹುದಾದ ಕವಚಗಳನ್ನು ತೊಟ್ಟರು.

ಪೃಥಕ್‌ಕಾಂಚನಸನ್ನಾಹಾನ್ ರಥೇಷ್ವಶ್ವಾನಯೋಜಯನ್ ।
ಉತೃತ್ಯ ಪಾಶಾನ್ ಮೌರ್ವೀಣಾಂ ವೀರಾಶ್ಚಾಪೇಷ್ವಯೋಜಯನ್ ॥

ಸುವರ್ಣದಿಂದ ಅಲಂಕೃತವಾಗಿದ್ದ ಅಶ್ವಗಳನ್ನು ರಥಗಳಿಗೆ ಹೂಡಿದರು. ಹೆದೆಯ ಹಗ್ಗಗಳನ್ನು ಎತ್ತಿ ವೀರರಾದ ಅವರು ಧನುಸ್ಸುಗಳಿಗೆ ಜೋಡಿಸಿದರು.

ದೃಢಮಾಯಸಗರ್ಭಂ ತು ಕವಚಂ ತಪ್ತಕಾಂಚನಮ್ ।
ವಿರಾಟಸ್ಯ ಪ್ರಿಯೋ ಭ್ರಾತಾ ಶತಾನೀಕೋऽಭ್ಯಹಾರಯತ್ ॥೨೩॥

ಗಟ್ಟಿಯಾದ, ಒಳಗೆ ಕಬ್ಬಿಣದ ಪದರವುಳ್ಳ ತಪ್ತಕಾಂಚನಮಯವಾದ ಕವಚವನ್ನು ವಿರಾಟನ ಪ್ರಿಯ ಭ್ರಾತೃವಾದ ಶತಾನೀಕನು ಧರಿಸಿದನು.

ಸರ್ವಭಾರಸಹಂ ವರ್ಮ ಕಲ್ಯಾಣಪಟಲಂ ದೃಢಮ್ ।
ಶತಾನೀಕಾದವರಜೋ ಮದಿರಾಶ್ವೋऽಭ್ಯಹಾರಯತ್ ॥೨೪॥

ಶತಾನೀಕನ ತಮ್ಮನಾದ ಮದಿರಾಶ್ವನು ಎಲ್ಲ ಭಾರವನ್ನೂ ತಡೆಯುವ ಕಲ್ಯಾಣ ಪಟಲವುಳ್ಳ ದೃಢವಾದ ಕವಚವನ್ನು ಧರಿಸಿದನು.

ದೃಢಮಾಯಸಗರ್ಭಂ ತು ಶ್ವೇತಂ ರುಗ್ಮಪರಿಷ್ಕೃತಮ್ ।
ವಿರಾಟಸ್ಯ ಸುತೋ ಜ್ಯೇಷ್ಠೋ ವೀರಃ ಶಂಖೋऽಭ್ಯಹಾರಯತ್ ॥೨೫॥

ವಿರಾಟನ ಜ್ಯೇಷ್ಠಪುತ್ರನಾದ ವೀರನಾದ ಶಂಖನು ಒಳಗೆ ಕಬ್ಬಿಣದ ಪದರವನ್ನು ಹೊಂದಿದ ಸುವರ್ಣಾಲಂಕೃತವಾದ ಶ್ವೇತವರ್ಣದ ಕವಚವನ್ನು ಧರಿಸಿದನು.

ಶತಸೂರ್ಯಂ ಶತಾವರ್ತಂ ಶತಬಿಂದು ಶತಾಕ್ಷಿಮತ್ ।
ಅಭೇದ್ಯಕಲ್ಪಂ ಮತ್ಸ್ಯಾನಾಂ ರಾಜಾ ಕವಚಮಾಹರತ್ ॥೨೬॥

ಮತ್ಸ್ಯರಾಜನಾದ ವಿರಾಟನು ನೂರು ಚಂದ್ರರೂ, ನೂರು ಆವರ್ತಗಳೂ, ನೂರು ಬಿಂದುಗಳೂ ಮತ್ತು ನೂರು ಕಣ್ಣುಗಳೂ ಇರುವ ಅಭೇದ್ಯವಾದ ಕವಚವನ್ನು ಧರಿಸಿದನು.

ತತೋ ನಾನಾತನುತ್ರಾಣಿ ಸ್ವಾನಿ ಸ್ವಾನ್ಯತ್ರ ಕ್ಷತ್ರಿಯಾಃ ।
ಯುಯುತ್ಸವೋऽಭ್ಯಪದ್ಯಂತ ದೇವಕಲ್ಪಾಃ ಪ್ರಹಾರಿಣಃ ॥೨೭॥

ಅನಂತರ ದೇವತೆಗಳಿಗೆ ಸಮಾನರಾದ, ಪ್ರಹಾರಶೀಲರಾದ ಯುದ್ಧವನ್ನು ಮಾಡಲು ಬಯಸುವ ಕ್ಷತ್ರಿಯರು ತಮ್ಮ ತಮ್ಮ ಕವಚಗಳನ್ನು ಧರಿಸಿದರು.

ಸ್ವೋಪಸ್ಕರೇಷು ಶುಭ್ರೇಷು ಮಹತ್ಸು ಸಮಲಂಕೃತಾನ್ ।
ಮಹತ್ಕಾಂಚನಸನ್ನಾಹಾನ್ ರಥೇಷ್ವಶ್ವಾನಯೋಜಯನ್ ॥೨೮॥

ಎಲ್ಲಾ ಉಪಕರಣಗಳಿಂದ ಕೂಡಿದ ಶುಭವಾದ, ಅಲಂಕೃತವಾದ ದೊಡ್ಡ ರಥಗಳಲ್ಲಿ ಸುವರ್ಣಮಯವಾದ ಸನ್ನಾಹಗಳನ್ನು ಹೊಂದಿರುವ ಅಶ್ವಗಳನ್ನು ಹೂಡಿದರು.

ಸೂರ್ಯಚಂದ್ರಪ್ರತೀಕಾಶಂ ಮಣಿಕಾಂಚನಭೂಷಿತಮ್ ।
ಮತ್ಸ್ಯಸ್ಯೋರುಪ್ರಮಾಣಂ ಚ ಧ್ವಜಮುಚ್ಛ್ರಿಯತೇ ರಥೇ ॥೨೯॥

ಸೂರ್ಯಚಂದ್ರರಂತೆ ಪ್ರಕಾಶಿಸುವ, ಮಣಿಕಾಂಚನಗಳಿಂದ ಅಲಂಕೃತವಾದ ಮತ್ಸ್ಯರಾಜನ ದೊಡ್ಡ ಪ್ರಮಾಣದ ಧ್ವಜವು ರಥದಲ್ಲಿ ನಿಲ್ಲಿಸಲ್ಪಟ್ಟಿತು.

ಧ್ವಜಾನ್ ಬಹುವಿಧಾಕಾರಾನ್ ಸೌವರ್ಣಾನ್ ಹೇಮಮಾಲಿನಃ ।
ಯಥಾಸ್ವಂ ಕ್ಷತ್ರಿಯಾಃ ಶೂರಾ ರಥೇಷು ಸಮಯೋಜಯನ್ ॥೩೦॥

ಸುವರ್ಣಾಲಂಕೃತವಾದ, ಸುವರ್ಣಮಾಲೆಗಳಿಂದ ಕೂಡಿದ, ಬಹುವಿಧವಾದ ಆಕಾರವುಳ್ಳ, ತಮ್ಮ ತಮ್ಮ ಅಭಿರುಚಿಗೆ ಅಭಿಮತವಾದ ಧ್ವಜಗಳನ್ನು ಕ್ಷತ್ರಿಯ ಶೂರರು ರಥಗಳಲ್ಲಿ ಸಂಯೋಜಿಸಿದರು.

ರಥೇಷು ಯುಜ್ಯಮಾನೇಷು ಕಂಕೋ ರಾಜಾನಮಬ್ರವೀತ್ ॥೩೧॥

ಮಯಾऽಪ್ಯಸ್ತ್ರಂ ಚತುರ್ಮಾರ್ಗಮವಾಪ್ತಮೃಷಿಸತ್ತಮಾತ್ ।
ದಂಸಿತೋ ರಥಮಾಸ್ಥಾಯ ಪದಂ ನಿರ್ಯಾಮ್ಯಹಂ ಗವಾಮ್ ॥೩೨॥

ರಥಗಳು ಸಿದ್ಧವಾಗುತ್ತಿರಲು ಕಂಕನು ರಾಜನನ್ನು ಕುರಿತು ನಾನೂ ಸಹ ನಾಲ್ಕು ವಿಭಾಗಗಳಿಂದ ಕೂಡಿದ ಅಸ್ತ್ರವಿದ್ಯೆಯನ್ನು ಒಬ್ಬ ಋಷಿಶ್ರೇಷ್ಠನಿಂದ ಪಡೆದಿದ್ದೇನೆ. ನಾನೂ ಸಹ ಕವಚವನ್ನು ಧರಿಸಿ ರಥವನ್ನು ಏರಿ ಗೋವುಗಳ ಮಾರ್ಗವನ್ನು ಅನುಸರಿಸಿ ಹೊರಡುತ್ತೇನೆ.

ಅಯಂ ಚ ಬಲವಾನ್ ಶೂರೋ ವಲಲೋ ದೃಶ್ಯತೇऽನಘ ।
ಗೋಸಂಖ್ಯಮಶ್ವಬಂಧಂ ಚ ಸಂಯೋಜಯ ರಥೇಷು ವೈ ॥೩೩॥

ನೈತೇ ನ ಜಾತು ಯುದ್ಧ್ಯೇಯುರ್ಗವಾರ್ಥಮಿತಿ ಮೇ ಮತಿಃ ॥೩೪॥

ಈ ಬಲಿಷ್ಠನೂ, ಶೂರನೂ ಆದ ವಲಲನು ಕಾಣುತ್ತಿದ್ದಾನೆ. ಎಲೈ ಅನಘನೇ, ನೀನು ಗೋಸಂಖ್ಯವನ್ನು ಮತ್ತು ಅಶ್ವಬಂಧನನನ್ನು ರಥಗಳಲ್ಲಿ ಸಂಯೋಜನೆಯನ್ನು ಮಾಡು. ಗೋವುಗಳ ಸಲುವಾಗಿ ಅವರು ಯುದ್ಧವನ್ನು ಮಾಡುವುದಿಲ್ಲ ಎಂದು ನನಗೆ ತೋರುವುದಿಲ್ಲ.

ವೈಶಂಪಾಯನಃ

ಅಥ ಮಾತ್ಸ್ಯೋಽಬ್ರವೀದ್ ರಾಜಾ ಶತಾನೀಕಂ ಜಘನ್ಯಜಮ್ ॥೩೫॥

ಕಂಕಶ್ಚ ವಲಲಃ ಸೂದೋ ದಾಮಗ್ರಂಥಿಶ್ಚ ವೀರ್ಯವಾನ್ ।
ಶೂರಾಃ ಸುವೀರಾಃ ಪುರುಷಾ ನಾಗರಾಜವರೋಪಮಾಃ ॥೩೬॥

ಯುದ್ಧ್ಯೇಯುರಿತಿ ಮೇ ಬುದ್ಧಿರ್ವರ್ತತೇ ನಾತ್ರ ಸಂಶಯಃ ॥೩೭॥

ವೈಶಂಪಾಯನ– ಆಗ ಮತ್ಸ್ಯರಾಜನು ತನ್ನ ತಮ್ಮನಾದ ಶತಾನೀಕನನ್ನು ಕುರಿತು ಕಂಕ, ಸೂದನಾದ ವಲಲ, ಪರಾಕ್ರಮಶಾಲಿಯಾದ ದಾಮಗ್ರಂಥಿ ಈ ಪುರುಷರೆಲ್ಲರೂ ಶೂರರಾದವರು ಮತ್ತು ಮಹಾವೀರರಾದವರು. ಈ ಪುರುಷರು ಗಜರಾಜನಿಗೆ ಸಮಾನರಾಗಿದ್ದಾರೆ. ಇವರೂ ಯುದ್ಧವನ್ನು ಮಾಡುತ್ತಾರೆ ಎಂದು ನನಗೆ ತೋರುತ್ತದೆ. ಇದರಲ್ಲಿ ಸಂಶಯವಿಲ್ಲ.

ಏತೇಷಾಮಪಿ ದೀಯಂತಾಂ ರಥಾ ಧ್ವಜಪತಾಕಿನಃ ।
ಕವಚಾನಿ ವಿಚಿತ್ರಾಣಿ ಸುದೃಢಾನಿ ಲಘೂನಿ ಚ ॥೩೮॥

ಇವರಿಗೂ ಧ್ವಜಪತಾಕೆಗಳಿಂದ ಕೂಡಿದ ರಥಗಳನ್ನೂ, ಹಗುರವಾಗಿಯೂ ಮತ್ತು ದೃಢವಾಗಿಯೂ ಇರುವ ವಿಚಿತ್ರವಾದ ಕವಚಗಳನ್ನೂ ಕೊಡುವವನಾಗು.

ಪ್ರತಿಮುಂಚಂತು ಗಾತ್ರೇಷು ದೀಯಂತಾಮಾಯುಧಾನಿ ಚ ।
ನೇಮೇ ಜಾತು ನ ಯುದ್ಧ್ಯೇಯುರಿತಿ ಮೇ ಧೀಯತೇ ಮತಿಃ ॥೩೯॥

ವೀರಾಂಗರಾಗಾಃ ಪುರುಷಾ ನಾಗರಾಜಕರೋಪಮಾಃ ॥೪೦॥

ಅವರು ಅದನ್ನು ಮತ್ತು ಆಯುಧಗಳನ್ನು ಶರೀರದಲ್ಲಿ ಧರಿಸಲಿ. ಇವರು ಯುದ್ಧವನ್ನು ಮಾಡುವುದಿಲ್ಲ ಎಂದು ನನಗೆ ಎಂದೂ ತೋರಲಿಲ್ಲ. ಅವರು ವೀರರಿಗೆ ಯೋಗ್ಯವಾದ ಚಂದನಾದಿಗಳನ್ನು ಧರಿಸಿ ಆನೆಯ ಸೊಂಡಿಲನಂತಿರುವ ಬಾಹುಗಳನ್ನು ಧರಿಸಿದ ಪುರುಷರು.

ವೈಶಂಪಾಯನಃ

ತಚ್ಛ್ರುತ್ವಾ ನೃಪತೇರ್ವಾಕ್ಯಂ ಶೀಘ್ರಂ ತ್ವರಿತಮಾನಸಃ ।
ಶತಾನೀಕಃ ಸ ಪಾರ್ಥೇಭ್ಯೋ ರಥಾನ್ ರಾಜಾಜ್ಞಯಾऽऽದಿಶತ್ ॥೪೧॥

ಸಹದೇವಾಯ ರಾಜ್ಞೇ ಚ ಭೀಮಾಯ ನಕುಲಾಯ ಚ ॥೪೨॥

ವೈಶಂಪಾಯನ– ರಾಜನ ಆ ಮಾತನ್ನು ಕೇಳಿ ಶತಾನೀಕನು ಮನಸ್ಸಿನಲ್ಲಿಯೇ ತ್ವರೆ ಉಂಟಾದವನಾಗಿ ಪಾರ್ಥನಿಗೆ ರಾಜಾಜ್ಞೆಯಂತೆ ರಥಗಳನ್ನು ನೀಡಿದನು. ಸಹದೇವನಿಗೂ, ಯುಧಿಷ್ಠಿರನಿಗೂ, ಭೀಮ ಮತ್ತು ನಕುಲರಿಗೂ ರಥಗಳನ್ನು ನೀಡಿದನು.

ತಾನ್ ದೃಷ್ಟ್ವಾ ಸಹಸಾ ಶೂರಾ ರಾಜಭಕ್ತಿಪುರಸ್ಸರಾಃ ।
ನಿರ್ದಿಷ್ಟಾ ನರದೇವೇನ ರಥಾನ್ ಶೀಘ್ರಮಯೋಜಯನ್ ॥೪೩॥

ಅವರನ್ನು ನೋಡಿದ ಶೂರರೂ, ರಾಜನಿಷ್ಠೆಯುಳ್ಳವರೂ ಆದ ಸೇವಕರು ರಾಜನಿಂದ ಆಜ್ಞಾಪಿಸಲ್ಪಟ್ಟವರಾಗಿ ಶೀಘ್ರವಾಗಿ ರಥಗಳಲ್ಲಿ ಅಶ್ವಗಳನ್ನು ಹೂಡಿದರು.

ಕವಚಾನಿ ವಿಚಿತ್ರಾಣಿ ನವಾನಿ ಚ ದೃಢಾನಿ ಚ ।
ವಿರಾಟಃ ಪ್ರಾದಿಶದ್ ರಾಜಾ ತೇಷಾಮಕ್ಲಿಷ್ಟಕಾರಿಣಾಮ್ ॥೪೪॥

ವಿರಾಟರಾಜನು ಅನಾಯಾಸವಾಗಿ ಎಲ್ಲವನ್ನೂ ಮಾಡುವ ಅವರಿಗೆ ಹೊಸದಾದ, ಗಟ್ಟಿಯಾದ ಮತ್ತು ವಿಚಿತ್ರವಾದ ಕವಚಗಳನ್ನು ಕೊಟ್ಟನು.

ತಾನ್ಯಾಮುಚ್ಯ ಶರೀರೇಷು ದಂಸಿತಾಸ್ತೇ ಮಹಾರಥಾಃ ।
ತರಸ್ವಿನಶ್ಚನ್ನರೂಪಾಃ ಸರ್ವಶಸ್ತ್ರವಿಶಾರದಾಃ ॥೪೫॥

ರಥಾನ್ ಹೇಮಪರಿಷ್ಕಾರಾನ್ ಸಮಾಸ್ಥಾಯ ಮಹಾರಥಾಃ ।
ಪಾಂಡವಾ ನಿರ್ಯಯುರ್ಹೃಷ್ಟಾ ದಂಸಿತಾ ರಾಜಸತ್ತಮ ॥೪೬॥

ಎಲೈ ರಾಜಶ್ರೇಷ್ಠನೇ, ಅದನ್ನು ಶರೀರಗಳಲ್ಲಿ ಧರಿಸಿ ಸಿದ್ಧರಾದ ಮಹಾರಥರೂ, ವೇಗವಂತರೂ, ಮಾರುವೇಷದಲ್ಲಿ ಇರುವವರೂ, ಸರ್ವಶಸ್ತ್ರವಿಶಾರದರೂ ಆದ ಮಹಾರಥರಾದ ಆ ಪಾಂಡವರು ಕವಚಾದಿಗಳಿಂದ ಸಿದ್ಧರಾಗಿ ಸುವರ್ಣಾಭರಣಗಳಿಂದ ಅಲಂಕೃತವಾದ ರಥಗಳನ್ನು ಏರಿ ನಗರದ ಹೊರಗೆ ಹೊರಟರು.

ವಿರಾಟಮನ್ವಯುಃ ಪಶ್ಚಾತ್ ಸಹಿತಾಃ ಕುರುಪುಂಗವಾಃ ।
ಚತ್ವಾರೋ ಭ್ರಾತರಃ ಶೂರಾಃ ಪಾಂಡವಾಃ ಸತ್ಯವಿಕ್ರಮಾಃ ॥೪೭॥

ದೀರ್ಘಾನಾಂ ಚ ದೃಢಾನಾಂ ಚ ಧನುಷಾಂ ತೇ ಯಥಾಬಲಮ್ ।
ಉತ್ಕೃತ್ಯ ಪಾಶಾನ್ ಮೌರ್ವೀಣಾಂ ವೀರಾಶ್ಚಾಪೇಷ್ವಯೋಜಯನ್ ॥

ಆ ಕೌರವಶ್ರೇಷ್ಠರು ಒಟ್ಟಿಗೆ ವಿರಾಟನನ್ನು ಹಿಂಬಾಲಿಸಿದರು. ಶೂರರೂ, ಸತ್ಯವಿಕ್ರಮರೂ ಆದ ಸಹೋದರರಾದ ನಾಲ್ವರು ಪಾಂಡವರು ದೀರ್ಘವೂ, ದೃಢವೂ ಆದ ಧನುಸ್ಸನ್ನು ತಮ್ಮ ಶಕ್ತಿ ಇದ್ದಷ್ಟು ಹೆದೆಯ ಪಾಶವನ್ನು ಮೇಲೆತ್ತಿ ಕಟ್ಟಿ ಧನುಸ್ಸುಗಳನ್ನು ಸಂಯೋಜಿಸಿದರು.

ತತಃ ಸುವಾಸಸಃ ಸರ್ವೇ ತೇ ವೀರಾಶ್ಚಂದನೋಕ್ಷಿತಾಃ ।
ಚೋದಿತಾ ನರದೇವೇನ ಕ್ಷಿಪ್ರಮಶ್ವಾನಯೋಜಯನ್ ॥೪೯॥

ಅನಂತರ ಒಳ್ಳೆಯ ವಸ್ತ್ರಗಳನ್ನು ಧರಿಸಿ ಚಂದನಲೇಪಿತರಾಗಿದ್ದ ಆ ಎಲ್ಲ ವೀರರೂ ನರದೇವನಾದ ದುರ್ಯೋಧನನಿಂದ ಆದೇಶಿಸಲ್ಪಟ್ಟವರಾಗಿ ಶೀಘ್ರವಾಗಿ ರಥಗಳಲ್ಲಿ ಅಶ್ವಗಳನ್ನು ಹೂಡಿದರು.

ತೇ ಹಯಾ ಹೇಮಸಂಛನ್ನಾ ಬೃಹಂತಃ ಸಾಧುವಾಹಿನಃ ।
ಚೋದಿತಾಃ ಪ್ರತ್ಯದೃಶ್ಯಂತ ಪತ್ತ್ರಿಣಾಮಿವ ಪಂಕ್ತಯಃ ॥೫೦॥

ರಥಗಳಲ್ಲಿ ಜೋಡಿಸಲ್ಪಟ್ಟ ಸುವರ್ಣಾಭರಣದಿಂದ ತುಂಬಿಹೋದ ಚೆನ್ನಾಗಿ ರಥವನ್ನು ಎಳೆದು ಸಾಗುವ ದೊಡ್ಡ ಕುದುರೆಗಳು ಪಕ್ಷಿಗಳ ಪಂಕ್ತಿಗಳಂತೆ ಕಂಡುಬಂದವು.

ಭೀಮರೂಪಾಶ್ಚ ಮಾತಂಗಾಃ ಪ್ರಭಿನ್ನಕರಟೀಮುಖಾಃ ।
ಸ್ವಾರೂಢಾ ಯುದ್ಧಕುಶಲೈರ್ಮಹಾಮಾತ್ರಾಧಿರೋಹಿತಾಃ ॥೫೧॥

ಭಯಂಕರ ಆಕೃತಿಯನ್ನು ಧರಿಸಿದ, ಕುಂಭಸ್ಥಳದಿಂದ ಮದವನ್ನು ಸುರಿಸುವ ಗಜಗಳು, ಯುದ್ಧಕುಶಲರಾದ ಮಹಾಮಾತ್ರರಿಂದ ಚೆನ್ನಾಗಿ ಏರಲ್ಪಟ್ಟವು.

ಕ್ಷರಂತ ಇವ ಜೀಮೂತಾಃ ಸುದಂತಾಃ ಷಷ್ಟಿಹಾಯನಾಃ ।
ರಾಜಾನಮನ್ವಯುಃ ಪಶ್ಚಾತ್ ಕ್ರಮಂತ ಇವ ಪರ್ವತಾಃ ॥೫೨॥

ಒಳ್ಳೆಯ ದಂತಗಳನ್ನು ಹೊಂದಿದ್ದ ಅರವತ್ತು ವರ್ಷ ವಯಸ್ಸಿನ ಆ ಆನೆಗಳು ಮಳೆಯನ್ನು ಸುರಿಸುವ ಮೋಡಗಳಂತೆ ರಾಜನ ಹಿಂದೆ ಪರ್ವತಗಳಂತೆ ನಿಧಾನವಾಗಿ ಚಲಿಸಿದವು.

ದೃಢಾಯುಧಜನಾಕೀರ್ಣಂ ರಥಾಶ್ವಗಜಸಂಕುಲಮ್ ।
ತದ್ ಬಲಾಗ್ರ್ಯಂ ವಿರಾಟಸ್ಯ ಶಕ್ರಸ್ಯೇವ ತದಾ ಬಭೌ ॥೫೩॥

ದೃಢವಾದ ಆಯುಧಗಳಿಂದಲೂ, ವೀರರಾದ ಯೋಧರಿಂದಲೂ ತುಂಬಿಹೋಗಿದ್ದ ರಥಗಳು, ಅಶ್ವಗಳು ಮತ್ತು ಗಜಗಳಿಂದ ನಿಬಿಡವಾಗಿದ್ದ ವಿರಾಟನ ಶ್ರೇಷ್ಠವಾದ ಆ ಸೈನ್ಯವು ಇಂದ್ರನ ಸೈನ್ಯದಂತೆ ಆಗ ಕಂಗೊಳಿಸಿತು.

ತಂ ಪ್ರಯಾಂತಂ ಚ ರಾಜಾನಂ ನಿನೀಷಂತಂ ಗವಾಂ ಪದಮ್ ॥೫೪॥

ವಿಶಾರದಾನಾಂ ವಶ್ಯಾನಾಂ ಪ್ರಕೃಷ್ಟಾನಾಂ ತದಾ ನೃಪ ।
ವಿಂಶತಿಸ್ತು ಸಹಸ್ರಾಣಿ ನರಾಣಾಮನುಯಾಯಿರೇ ॥೫೫॥

ಗೋವುಗಳ ಸ್ಥಾನಕ್ಕೆ ಹೋಗಿ ಅವುಗಳನ್ನು ಹಿಂದಿರುಗಿಸಲು ಹೊರಟ ಮಹಾರಾಜನನ್ನು ಆಗ ವಿಶಾರದರೂ, ರಾಜನ ಆಜ್ಞೆಯನ್ನು ಪಾಲಿಸುವವರೂ ಮತ್ತು ಶ್ರೇಷ್ಠರೂ ಆದ ಇಪ್ಪತ್ತು ಸಹಸ್ರ ಮನುಷ್ಯರು (ಯೋಧರು) ಹಿಂಬಾಲಿಸಿದರು.

ಅಷ್ಟೌ ರಥಸಹಸ್ರಾಣಿ ದಶ ನಾಗಶತಾನಿ ಚ ।
ವಿಂಶಾಚ್ಚಾಶ್ವಸಹಸ್ರಾಣಿ ಮತ್ಸ್ಯಾನಾಂ ತ್ವರಿತಂ ಯಯುಃ ॥೫೬॥

ಮತ್ಸ್ಯರ ಎಂಟುಸಹಸ್ರ ರಥಗಳೂ, ಒಂದು ಸಹಸ್ರಗಜಗಳೂ, ಇಪ್ಪತ್ತು ಸಹಸ್ರ ಅಶ್ವಗಳೂ ಶೀಘ್ರವಾಗಿ ನಡೆದವು.

ತದನೀಕಂ ವಿರಾಟಸ್ಯ ಶುಶುಭೇಽತೀವ ಭಾರತ ।
ವಸಂತೇ ಬಹುಪುಷ್ಪಾಢ್ಯಂ ಕಾನನಂ ಚಿತ್ರಿತಂ ಯಥಾ ॥೫೭॥

ಎಲೈ ಭಾರತನೇ, ವಸಂತ ಮಾಸದಲ್ಲಿ ಅನೇಕ ವಿಧವಾದ ಪುಷ್ಪಗಳಿಂದ ತುಂಬಿದ ವಿಚಿತ್ರವಾದ ಕಾಡಿನಂತೆ ವಿರಾಟನ ಸೈನ್ಯವು ಬಹಳವಾಗಿ ಶೋಭಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಮೂವತ್ಮೂರನೆಯ ಅಧ್ಯಾಯ

ವಿರಾಟ-ಸುಶರ್ಮರ ಹಾಗೂ ಅವರ ಸೈನ್ಯಗಳ ಯುದ್ಧ

ವೈಶಂಪಾಯನಃ

ನಿರ್ಯಯುರ್ನಗರಾತ್ ಶೂರಾ ವ್ಯೂಢಾನೀಕಾಃ ಪ್ರಹಾರಿಣಃ ।
ತ್ರಿಗರ್ತಾನಸ್ಪೃಶನ್ ಮತ್ಸ್ಯಾಃ ಸೂರ್ಯೇ ಪರಿಣತೇ ಸತಿ ॥೧॥

ವೈಶಂಪಾಯನ– ಮತ್ಸ್ಯದೇಶದ ಶತ್ರುಪ್ರಹಾರಿಗಳಾದ ಶೂರರು ಸೈನ್ಯವನ್ನು ವ್ಯೂಹವನ್ನು ಮಾಡಿಕೊಂಡು ನಗರದಿಂದ ಹೊರಗೆ ಹೊರಟು ಸೂರ್ಯನು ಪಶ್ಚಿಮಾಭಿಮುಖನಾಗುತ್ತಿರಲು ತ್ರಿಗರ್ತರನ್ನು ಸಂಧಿಸಿದರು.

ತೇ ತ್ರಿಗರ್ತಾಶ್ಚ ಮತ್ಸ್ಯಾಶ್ಚ ವ್ಯೂಢಾನೀಕಾಃ ಪ್ರಹಾರಿಣಃ ।
ಅನ್ಯೋನ್ಯಮಭಿವರ್ತಂತೇ ಗೋಷು ಗೃಧ್ರಾ ಮಹಾಬಲಾಃ ॥೨॥

ಮಹಾಬಲರಾದ ಆ ತ್ರಿಗರ್ತರು ಮತ್ತು ಮತ್ಸ್ಯರು ಸೈನ್ಯವನ್ನು ವ್ಯೂಹವನ್ನು ಮಾಡಿ ಗೋಧನದಲ್ಲಿ ಆಸೆಯನ್ನು ಮಾಡುತ್ತಾ ಪರಸ್ಪರ ಪ್ರಹಾರವನ್ನು ಮಾಡುತ್ತಾ ಒಬ್ಬರ ಮೇಲೊಬ್ಬರು ಎರಗಿದರು.

ಭೀಮಾಶ್ಚ ಮತ್ತಮಾತಂಗಾಃ ತೋಮರಾಂಕುಶಚೋದಿತಾಃ ।
ಗ್ರಾಮಣೀಯೈಃ ಸಮಾರೂಢಾಃ ಕುಶಲೈರ್ಹಸ್ತಿಸಾದಿಭಿಃ ॥೩॥

ಭಯಂಕರವಾದ ಮದಗಜಗಳು ತೋಮರಗಳಿಂದ ಮತ್ತು ಅಂಕುಶಗಳಿಂದ ಪ್ರೇರಿತವಾಗಿ ಕುಶಲರಾದ ಮಾವುತರಿಂದಲೂ ಮತ್ತು ವಿರಾಟನ ಗಜಾರೋಹಿಗಳಿಂದಲೂ ಏರಲ್ಪಟ್ಟು ಮುಂದೆನಡೆದವು.

ತೇಷಾಂ ಸಮಾಗಮೋ ಘೋರಸ್ತುಮುಲೋ ರೋಮಹರ್ಷಣಃ ।
ದೇವಾಸುರಸಮೋ ರಾಜನ್ನಾಸೀತ್ ಸೂರ್ಯೇऽವಲಂಬತಿ ॥೪॥

ಎಲೈ ರಾಜನೇ, ಸೂರ್ಯನು ಕೆಳಗೆ ಜಾರುತ್ತಿರಲು ದೇವಾಸುರರ ಯುದ್ಧಕ್ಕೆ ಸಮನಾದ ಆ ಎರಡು ಸೈನ್ಯಗಳ ಯುದ್ಧವು ತೀವ್ರವೂ, ಘೋರವೂ ಮತ್ತು ರೋಮಹರ್ಷಣವೂ ಆಗಿದ್ದಿತು.

ಉದತಿಷ್ಠದ್ ರಜೋ ಭೌಮಂ ನ ಪ್ರಾಜ್ಞಾಯತ ಕಿಂಚನ ।
ಪಕ್ಷಿಣಶ್ಚಾಪತನ್ ಭೂಮೌ ಸೈನ್ಯೇನ ರಜಸಾ ವೃತಾಃ ॥೫॥

ಭೂಮಿಯಿಂದ ಧೂಳು ಮೇಲಕ್ಕೆದ್ದು ಯಾವುದೂ ಕಾಣಲಿಲ್ಲ. ಸೈನ್ಯದಿಂದ ಉಂಟಾದ ಧೂಳಿನಿಂದ ಆವೃತವಾದ ಪಕ್ಷಿಗಳು ಭೂಮಿಯಲ್ಲಿ ಬಿದ್ದವು.

ಇಷುಭಿರ್ವ್ಯತಿಸಂಯದ್ಭಿರಾದಿತ್ಯೋऽಂತರಧೀಯತ ।
ಖದ್ಯೋತೈರಿವ ಸಂಪೃಕ್ತಮಂತರಿಕ್ಷಂ ವ್ಯರಾಜತ ॥೬॥

ಬಾಣಗಳು ಸಂಚಾರ ಮಾಡುತ್ತಿರುವಷ್ಟರಲ್ಲಿ ಸೂರ್ಯನು ಅಂತರ್ಧಾನವನ್ನು ಹೊಂದಿದನು. ಮಿಣುಕುಹುಳುಗಳಂತಿರುವ ಬಾಣಗಳಿಂದ ಸಂಬದ್ಧವಾದ ಅಂತರಿಕ್ಷವು ಶೋಭಿಸಿತು.

ರುಗ್ಮಪೃಷ್ಠಾನಿ ಚಾಪಾನಿ ವಿಚೇರುರ್ವಿದ್ಯುತೋ ಯಥಾ ।
ನರ್ದತಾಂ ಲೋಕವೀರಾಣಾಂ ಸವ್ಯಂ ದಕ್ಷಿಣಮಸ್ಯತಾಮ್ ॥೭॥

ಗರ್ಜಿಸುವ ಮತ್ತು ಎಡಗೈಯಿಂದಲೂ ಮತ್ತು ಬಲಗೈಯಿಂದಲೂ ಬಾಣವನ್ನು ಪ್ರಯೋಗಿಸುವ ಲೋಕವೀರರ ಚಿನ್ನದ ಹಿಡಿಯುಳ್ಳ ಧನುಸ್ಸುಗಳು ಮಿಂಚುಗಳಂತೆ ಸಂಚರಿಸಿದವು.

ರಥಾ ರಥೈಃ ಸಮಾಜಗ್ಮುಃ ಪತ್ತಯಶ್ಚ ಪದಾತಿಭಿಃ ।
ಸಾದಿಭಿಃ ಸಾದಿನೋ ಜಗ್ಮುರ್ಗಜೈಶ್ಚಾಪಿ ಮಹಾಗಜಾಃ ॥೮॥

ರಥಗಳ ಜೊತೆಯಲ್ಲಿ ರಥಗಳು, ಪದಾತಿಗಳ ಜೊತೆಯಲ್ಲಿ ಪದಾತಿಗಳು, ಅಶ್ವಾರೋಹಿಗಳ ಜೊತೆಯಲ್ಲಿ ಅಶ್ವಾರೋಹಿಗಳು, ಗಜಗಳ ಜೊತೆಯಲ್ಲಿ ಮಹಾಗಜಗಳು, ಸಮಾಗಮವನ್ನು ಹೊಂದಿದವು.

ಅಸಿಭಿಃ ಪಟ್ಟಸೈಶ್ಚಾಪಿ ಶಕ್ತಿಭಿಸ್ತೋಮರೈರಪಿ ।
ಸಂರಬ್ಧಾಃ ಸಮರೇ ಯೋಧಾ ನಿಜಘ್ನುರಿತರೇತರಮ್ ॥೯॥

ಯುದ್ಧದಲ್ಲಿ ಕೋಪಗೊಂಡ ಯೋಧರು ಕತ್ತಿಗಳಿಂದಲೂ, ಪಟ್ಟಸಗಳಿಂದಲೂ, ಶಕ್ತಿ ತೋಮರಗಳಿಂದಲೂ ಒಬ್ಬರನ್ನೊಬ್ಬರು ಕೊಂದರು.

ನಿಘ್ನಂತಃ ಸಮರೇऽನ್ಯೋನ್ಯಂ ಹೃಷ್ಟಾಃ ಪರಿಘಬಾಹವಃ ।
ನ ಶೇಕುರತಿಸಂರಬ್ಧಾಃ ಶೂರಾಃ ಕರ್ತುಂ ಪರಾಙ್ಮುಖಮ್ ॥೧೦॥

ಒನಕೆಯಂತಹ ಬಾಹುಗಳುಳ್ಳ ಅವರು ಸಂತೋಷದಿಂದ ಒಬ್ಬರನ್ನೊಬ್ಬರು ಕೊಲ್ಲುತ್ತಾ ಬಹಳ ಕೋಪದಿಂದ ಕೂಡಿದ್ದರೂ ಇನ್ನೊಬ್ಬರನ್ನು ಯುದ್ಧದಿಂದ ವಿಮುಖರನ್ನಾಗಿ ಮಾಡಲು ಸಾಧ್ಯವಾಗಲಿಲ್ಲ.

ರಕ್ತಾಧರೋಷ್ಠಂ ಸುನಸಂ ರಕ್ತಶ್ಮಶ್ರು ಸ್ವಲಂಕೃತಮ್ ।
ಅದೃಶ್ಯತ ಶಿರಚ್ಛಿನ್ನಂ ರಜೋಧ್ವಸ್ತಂ ಸಕುಂಡಲಮ್ ॥೧೧॥

ಕೆಂಪಾದ ತುಟಿಯುಳ್ಳ, ಒಳ್ಳೆಯ ನಾಸಿಕದಿಂದ ಕೂಡಿದ, ಕೆಂಪಾದ ಮೀಸೆಯುಳ್ಳ ಅಲಂಕೃತವಾದ ಕುಂಡಲಸಹಿತವಾದ ಶಿರಸ್ಸು ಧೂಳಿನಲ್ಲಿ ಬಿದ್ದು ನಾಶವನ್ನು ಹೊಂದುವುದು ಕಂಡುಬಂದಿತು.

ದೃಶ್ಯಂತೇ ತತ್ರ ಗಾತ್ರಾಣಿ ವೈರಿಭಿನ್ನಾನಿ ಭಾಗಶಃ ।
ಸಾಲಸ್ಕಂಧನಿಕಾಶಾನಿ ಕ್ಷತ್ರಿಯಾಣಾಂ ಮಹಾಮೃಧೇ ॥೧೨॥

ಆ ಮಹಾಯುದ್ಧದಲ್ಲಿ ವೀರರಿಂದ ಕತ್ತಿರಿಸಲ್ಪಟ್ಟ ಕ್ಷತ್ರಿಯರ ಶರೀರಗಳು ಸಾಲವೃಕ್ಷದ ಸ್ಕಂದದಂತೆ ಅಲ್ಲಲ್ಲಿ ಕಂಡುಬಂದವು.

ನಾಗಭೋಗನಿಕಾಶೈಶ್ಚ ಬಾಹುಭಿಶ್ಚಂದನೋಕ್ಷಿತೈಃ ।
ಆಕೀರ್ಣಾ ವಸುಧಾ ತತ್ರ ಶಿರೋಭಿಶ್ಚ ಸಕುಂಡಲೈಃ ॥೧೩॥

ಯಥಾ ವಾ ವಾಸಸೀ ಶ್ಲಕ್ಷ್ಣೇ ಮಹಾರಜನರಂಜಿತೇ ।
ಬಿಭ್ರತೀ ಯುವತೀ ಶ್ಯಾಮಾ ಭಾತಿ ತದ್ವದ್ ವಸುಂಧರಾ ॥೧೪॥

ಅಲ್ಲಿ ಭೂಮಿಯು ಸರ್ಪಶರೀರದಂತಿರುವ ಚಂದನಲೇಪಿತ ಬಾಹುಗಳಿಂದಲೂ, ಕುಂಡಲಸಹಿತವಾದ ಶಿರಸ್ಸುಗಳಿಂದಲೂ ತುಂಬಿಹೋಯಿತು. ಭೂಮಿಯು ಮಹಾರಜನ (ಕೆಂಪುಬಣ್ಣ) ವನ್ನು ಹಾಕಿದ ಸೂಕ್ಷ್ಮವಾದ ವಸ್ತ್ರಗಳನ್ನು ಧರಿಸಿದ ಸುಂದರಿಯಾದ ಯುವತಿಯಂತೆ ತೋರುತ್ತಿದ್ದಿತು.

ಉಪಶಾಮ್ಯ ರಜೋ ಭೌಮಂ ರುಧಿರೇಣ ಪ್ರವರ್ಷತಾ ।
ಕಶ್ಮಲಂ ಪ್ರಾವಿಶದ್ ಘೋರಂ ನಿರ್ಮರ್ಯಾದಮವರ್ತತ ॥೧೫॥

ಹರಿಯುವ ರಕ್ತದಿಂದ ಭೂಮಿಯ ಧೂಳು ಅಡಗಿ ಎಲ್ಲೆಯನ್ನು ಮೀರಿದ ಘೋರವಾದ ದೃಶ್ಯವು ಉಂಟಾಯಿತು.

ಯುಧಿಷ್ಠಿರೋಽಪಿ ಧರ್ಮಾತ್ಮಾ ಭ್ರಾತೃಭಿಃ ಸಹಿತಸ್ತದಾ ।
ವ್ಯೂಹಂ ಕೃತ್ವಾ ವಿರಾಟಸ್ಯ ಅನ್ವಯುಧ್ಯತ ಪಾಂಡವಃ ॥೧೬॥

ಧರ್ಮಾತ್ಮನಾದ ಭ್ರಾತೃಸಹಿತನಾದ ಪಾಂಡುಪುತ್ರನಾದ ಯುಧಿಷ್ಠಿರನೂ ಸಹ ವಿರಾಟನ ಸೈನ್ಯವನ್ನು ವ್ಯೂಹವನ್ನು ಮಾಡಿಕೊಂಡು ಯುದ್ಧವನ್ನು ಮಾಡಿದನು.

ಆತ್ಮಾನಂ ಶ್ಯೇನವತ್ ಕೃತ್ವಾ ತುಂಡಮಾಸೀತ್ ಯುಧಿಷ್ಠಿರಃ ।
ಪಕ್ಷೌ ಯಮೌ ಚ ಭವತಃ ಪುಚ್ಛಮಾಸೀದ್ ವೃಕೋದರಃ ॥೧೭॥

ಸಹಸ್ರಂ ನ್ಯಹನತ್ ತತ್ರ ಕುಂತೀಪುತ್ರೋ ಯುಧಿಷ್ಠಿರಃ ॥೧೮॥

ತನ್ನನ್ನೇ ಒಂದು ಗಿಡುಗನಂತೆ ಮಾಡಿಕೊಂಡು ಯುಧಿಷ್ಠಿರನು ಕೊಕ್ಕಿನ ಸ್ಥಾನದಲ್ಲಿದ್ದನು. ಎರಡು ರೆಕ್ಕೆಗಳಲ್ಲಿ ನಕುಲ ಸಹದೇವರೂ ಮತ್ತು ಪೃಚ್ಛಸ್ಥಾನದಲ್ಲಿ ವೃಕೋದರನೂ ಇದ್ದರು. ಕುಂತೀಪುತ್ರನಾದ ಯುಧಿಷ್ಠಿರನು ಸಹಸ್ರ ರಥಿಕರನ್ನು ಕೊಂದನು.

ಭೀಮಸೇನಃ ಸುಸಂಕ್ರುದ್ಧಃ ಸರ್ವಶಸ್ತ್ರಭೃತಾಂ ವರಃ ।
ದ್ವಿಸಹಸ್ರಂ ರಥಾನ್ ವೀರಃ ಪರಲೋಕಂ ಪ್ರವೇಶಯತ್ ॥೧೯॥

ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಬಹಳ ಕ್ರೋಧವನ್ನು ಹೊಂದಿದ ವೀರನಾದ ಭೀಮಸೇನನು ಎರಡು ಸಹಸ್ರರಥಗಳನ್ನು ಪರಲೋಕಕ್ಕೆ ಕಳುಹಿಸಿದನು.

ನಕುಲಸ್ತ್ರಿಶತಂ ಜಘ್ನೇ ಸಹದೇವಶ್ಚತುಃಶತಮ್ ।
ಶತಾನೀಕಃ ಶತಂ ಹತ್ವಾ ಮದಿರಾಶ್ವಶ್ಚತುಃಶತಮ್ ॥೨೦॥

ಪ್ರಹೃಷ್ಟಾಂ ಮಹತೀಂ ಸೇನಾಂ ತ್ರಿಗರ್ತಾನಾಂ ಮಹಾರಥೌ ॥೨೧॥

ನಕುಲನು ಮುನ್ನೂರು ರಥಗಳನ್ನೂ, ಸಹದೇವನು ನಾಲ್ನೂರು ರಥಗಳನ್ನೂ ಸಂಹರಿಸಿದರು. ಮಹಾರಥರಾದ ಶತಾನೀಕನು ಮತ್ತು ಮದಿರಾಶ್ವರು ಸಂತೋಷಗೊಂಡ ತ್ರಿಗರ್ತರ ದೊಡ್ಡ ಸೈನ್ಯವನ್ನು ಪ್ರವೇಶಿಸಿ ಅದರಲ್ಲಿ ಶತಾನೀಕನು ಮುನ್ನೂರು ರಥಗಳನ್ನೂ, ಮದಿರಾಶ್ವನು ನಾಲ್ನೂರು ರಥಗಳನ್ನೂ ಕೊಂದರು.

ಆರ್ಚ್ಚತಾಂ ಬಹುಸಾಹಸ್ರಂ ಕೇಶಾಕೇಶಿ ರಥಾರಥಿ ॥೨೨॥

ಅಲ್ಲಿ ಅನೇಕ ಸಹಸ್ರಯೋಧರಿಗೆ ಕೇಶಾಕೇಶಿ ಮತ್ತು ರಥಾರಥಿ ಯುದ್ಧವು ಉಂಟಾಯಿತು.

ಲಕ್ಷಯಿತ್ವಾ ತ್ರಿಗರ್ತಾನಾಂ ತೌ ಪ್ರವಿಷ್ಟೌ ಮಹಾಚಮೂಃ ।
ಜಗ್ಮತುಃ ಸೂರ್ಯದತ್ತಶ್ಚ ಮದಿರಾಶ್ವಶ್ಚ ಪೃಷ್ಠತಃ ॥೨೩॥

ತ್ರಿಗರ್ತರ ಸೈನ್ಯವನ್ನು ಗಮನಿಸಿ ಸೂರ್ಯದತ್ತ ಮತ್ತು ಮದಿರಾಶ್ವ ಇವರಿಬ್ಬರೂ ಹಿಂಭಾಗದಿಂದ ಆ ದೊಡ್ಡ ಸೈನ್ಯವನ್ನು ಪ್ರವೇಶಿಸಿದರು.

ಶಂಖೋ ವಿರಾಟಪುತ್ರಸ್ತು ಮಹೇಷ್ವಾಸೋ ಮಹಾಬಲಃ ।
ವಿನಿಘ್ನನ್ ಸಮರೇ ಶತ್ರೂನ್ ಪ್ರವಿವೇಶ ಮಹಾಚಮೂಮ್ ॥೨೪॥

ಮಹಾಧನುರ್ಧಾರಿಯೂ ಮತ್ತು ಮಹಾಬಲನೂ ಆದ ವಿರಾಟಪುತ್ರನಾದ ಶಂಖನು ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುತ್ತಾ ಆ ದೊಡ್ಡ ಸೈನ್ಯವನ್ನು ಪ್ರವೇಶಿಸಿದನು.

ವಿರಾಟಸ್ತತ್ರ ಸಂಗ್ರಾಮೇ ಹತ್ವಾ ಪಂಚಶತಂ ರಥಾನ್ ।
ಕುಂಜರಾಣಾಂ ಶತಂ ಚೈವ ಸಹಸ್ರಂ ವಾಜಿನಾಮಪಿ ॥೨೫॥

ಚರನ್ ಸ ವಿವಿಧಾನ್ ಮಾರ್ಗಾನ್ ರಥೇನ ರಥಯೂಥಪಃ ।
ತ್ರಿಗರ್ತಾನಾಂ ಸುಶರ್ಮಾಣಮಾರ್ಚ್ಛದ್ ರುಗ್ಮರಥಂ ರಣೇ ॥೨೬॥

ವಿರಾಟರಾಜನು ಆ ಯುದ್ಧದಲ್ಲಿ ಐದುನೂರು ರಥಗಳನ್ನೂ, ನೂರು ಆನೆಗಳನ್ನೂ ಒಂದು ಸಹಸ್ರ ಕುದುರೆಗಳನ್ನೂ ಕೊಂದು ರಥಯೂಥಪನಾದ ಅವನು ರಥದಿಂದ ವಿವಿಧ ಮಾರ್ಗಗಳನ್ನು ಸಂಚರಿಸುತ್ತಾ ತ್ರಿಗರ್ತರ ಅಧಿಪತಿಯಾಗಿದ್ದ, ಸುವರ್ಣಮಯವಾದ ರಥದಲ್ಲಿದ್ದ ಸುಶರ್ಮನನ್ನು ಸಮೀಪಿಸಿದನು.

ತೌ ತು ಪ್ರಾಹರತಾಂ ತತ್ರ ಮಹೇಷ್ವಾಸೌ ಮಹಾಬಲೌ ।
ಅನ್ಯೋನ್ಯಮಭಿನಿಘ್ನಂತೌ ಗೋಷ್ಠೇ ಗೋವೃಷಭಾವಿವ ॥೨೭॥

ಮಹಾಧನುರ್ಧಾರಿಗಳೂ ಮತ್ತು ಮಹಾಬಲರೂ ಆದ ಅವರಿಬ್ಬರೂ ಕೊಟ್ಟಿಗೆಯಲ್ಲಿ ಗೋವೃಷಭಗಳು ಹೋರಾಡಿದಂತೆ ಪರಸ್ಪರಸೈನ್ಯಗಳನ್ನು ಕೊಲ್ಲುತ್ತಾ ಪರಸ್ಪರವಾಗಿ ಪ್ರಹಾರವನ್ನು ಮಾಡಿದರು.

ರಾಜಸಿಂಹೌ ಸುಸಂರಬ್ಧೌ ದಂತಾಭ್ಯಾಮಿವ ಕುಂಜರೌ ।
ಕೃತಾಸ್ತ್ರೌ ನಿಶಿತೈರ್ಬಾಣೈರ್ವಾರಯಾಮಾಸತೂ ರಣೇ ॥೨೮॥

ರಾಜಸಿಂಹರೂ, ಅಸ್ತ್ರವಿದ್ಯೆಯನ್ನು ಬಲ್ಲವರೂ ಮತ್ತು ಬಹಳ ಕೋಪಗೊಂಡವರೂ ಆದ ಅವರು ಆನೆಗಳು ದಂತಗಳಿಂದ ಹೋರಾಡುವಂತೆ ನಿಶಿತವಾದ ಬಾಣಗಳಿಂದ ಯುದ್ಧದಲ್ಲಿ ಒಬ್ಬರನ್ನೊಬ್ಬರು ತಡೆದರು.

ಮಾತ್ಸ್ಯೇ ರಾಜಾ ಸುಶರ್ಮಾಣಂ ವಿವ್ಯಾಧ ನಿಶಿತೈಃ ಶರೈಃ ।
ಪಂಚಭಿಃ ಪಂಚಭಿರ್ಬಾಣೈರ್ವಿವ್ಯಾಧ ಚತುರೋ ಹಯಾನ್ ॥೨೯॥

ದ್ವಾಭ್ಯಾಂ ಸೂತಂ ಚ ವಿವ್ಯಾಧ ಕೇತುಂ ಚ ತ್ರಿಭಿರಾಶುಗೈಃ ॥೩೦॥

ಮತ್ಸ್ಯರಾಜನಾದ ವಿರಾಟನು ಸುಶರ್ಮನ ಮೇಲೆ ಹರಿತವಾದ ಬಾಣಗಳನ್ನು ಪ್ರಯೋಗಿಸಿದನು. ಇಪ್ಪತ್ತೈದು ಬಾಣಗಳಿಂದ ನಾಲ್ಕು ಕುದುರೆಗಳನ್ನೂ, ಎರಡು ಬಾಣಗಳಿಂದ ಸೂತನನ್ನೂ ಮತ್ತು ವೇಗವುಳ್ಳ ಮೂರು ಬಾಣಗಳಿಂದ ಅವರ ರಥದ ಧ್ವಜವನ್ನೂ ಹೊಡೆದು ಉರುಳಿಸಿದನು.

ತಥೈವ ಮತ್ಸ್ಯರಾಜಂ ತು ಸುಶರ್ಮಾ ಯುದ್ಧದುರ್ಮದಃ ।
ಪಂಚಾಶದ್ಭಿಃ ಶಿತೈರ್ಬಾಣೈರ್ವಿವ್ಯಾಧ ಪರಮಾಸ್ತ್ರವಿತ್ ॥೩೧॥

ಅದರಂತೆಯೇ ಯುದ್ಧದುರ್ಮದನಾದ ಪರಮಾಸ್ತ್ರವೇತ್ತನಾದ ಸುಶರ್ಮನೂ ಸಹ ಐವತ್ತು ಹರಿತವಾದ ಬಾಣಗಳಿಂದ ಮತ್ಸ್ಯರಾಜನನ್ನು ಹಿಂಸಿಸಿದನು.

ತಯೋರ್ಬಲಾನಿ ರಾಜೇಂದ್ರ ಸಮಸ್ತಾನಿ ಮಹಾರಣೇ ।
ನಾಜಾನಂತ ತದಾऽನ್ಯೋನ್ಯಂ ಪ್ರದೋಷೇ ರಜಸಾ ವೃತೇ ॥೩೨॥

ಎಲೈ ರಾಜೇಂದ್ರನೇ, ಪ್ರದೋಷಕಾಲವು ಧೂಳಿನಿಂದ ಆವೃತವಾಗುತ್ತಿರಲು ಆ ಮಹಾಯುದ್ಧದಲ್ಲಿ ಅವರಿಬ್ಬರ ಸೈನ್ಯಗಳು ಪರಸ್ಪರವಾಗಿ ಯಾರನ್ನೂ ತಿಳಿಯಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ತ್ರಯಸ್ತ್ರಿಂಶೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಶ್ರುತ್ವಾ ವಿರಾಟೋಽನುಯಯೌ ಸಸೇನಃ
ತಂ ಪಾಂಡವಾಶ್ಚಾನುಯಯುರ್ವಿನಾಽರ್ಜುನಮ್ ।
ವಿಜಿತ್ಯ ಸಂಖೇ ಜಗೃಹೇ ವಿರಾಟಂ
ತದಾ ಸುಶರ್ಮಾ ತಮಯಾದ್ ವೃಕೋದರಃ ॥೩೪॥

ಅರ್ಜುನನ ಹೊರತು ಬೇರೆ ಪಾಂಡವರು ವಿರಾಟನನ್ನು ಹಿಂಬಾಲಿಸಿದರು. ಸುಶರ್ಮ ವಿರಾಟನನ್ನು ಗೆದ್ದು ಸೆರೆಹಿಡಿದ. ಆಗ ಅವನನ್ನು ಇದಿರಿಸಿದ.

ಸ ತಸ್ಯ ಸೇನಾಂ ವಿನಿಹತ್ಯ ಮಾತ್ಸ್ಯಂ
ವಿಮೋಚ್ಯ ಜಗ್ರಾಹ ಸುಶರ್ಮರಾಜಮ್ ।
ಯುಧಿಷ್ಠಿರೋ ಮೋಚಯಾಮಾಸ ತಂ ಚ
ತತೋ ರಾತ್ರೌ ನ್ಯವಸನ್ ಬಾಹ್ಯತಸ್ತೇ ॥೩೫॥

ಅವನ ಸೈನ್ಯವನ್ನು ಸಂಹರಿಸಿ ವಿರಾಟನನ್ನು ಬಿಡುಗಡೆ ಮಾಡಿ ಸುಶರ್ಮರಾಜನನ್ನು ಸೆರೆಹಿಡಿದ. ಧರ್ಮರಾಜ ಸುಶರ್ಮನನ್ನು ಬಿಡುಗಡೆ ಮಾಡಿಸಿದ. ಆ ರಾತ್ರಿಯಲ್ಲಿ ಕೌರವರು ನಗರದ ಹೊರಗೇ ಬೀಡುಬಿಟ್ಟಿದ್ದರು.

★ ★ ★ ★

ಮೂವತ್ನಾಲ್ಕನೆಯ ಅಧ್ಯಾಯ

ಭೀಮಸೇನನಿಂದ ಸುಶರ್ಮಗೃಹೀತನಾದ ವಿರಾಟನ ಬಿಡುಗಡೆ ಮತ್ತು ಅನಂತರ ಧರ್ಮರಾಜನಿಂದ ಭೀಮಸೇನಗೃಹೀತನಾದ ಸುಶರ್ಮನ ಬಿಡುಗಡೆ

ವೈಶಂಪಾಯನಃ

ತಮಸಾಽಭಿಪ್ಲುತೇ ಲೋಕೇ ರಜಸಾ ಚೈವ ಭಾರತ ।
ವ್ಯತಿಷ್ಠಂತ ಮುಹೂರ್ತಂ ತೇ ವ್ಯೂಢಾನೀಕಾಃ ಪ್ರಹಾರಿಣಃ ॥೧॥

ವೈಶಂಪಾಯನ– ಎಲೈ ಭಾರತನೇ, ಲೋಕವೆಲ್ಲವೂ ಕತ್ತಲೆಯಿಂದಲೂ ಮತ್ತು ಧೂಳಿನಿಂದಲೂ ಆವೃತವಾಗುತ್ತಿರಲು ಸೈನ್ಯವನ್ನು ವ್ಯೂಹ ಮಾಡಿ ಪ್ರಹಾರ ಮಾಡುವ ಆ ಯೋಧರೆಲ್ಲರೂ ಒಂದು ಮುಹೂರ್ತದ ಕಾಲ ಸುಮ್ಮನಿದ್ದರು.

ತತೋಽಂಧಕಾರಂ ಪ್ರಣುದನ್ನುದತಿಷ್ಠನ್ನಿಶಾಕರಃ ।
ಕುರ್ವಾಣೋ ವಿಮಲಾಂ ರಾತ್ರಿಂ ನಂದಯನ್ ಕ್ಷತ್ರಿಯಾನ್ ರಣೇ ॥

ಅನಂತರ ಚಂದ್ರನು ಅಂಧಕಾರವನ್ನು ನಾಶಮಾಡುತ್ತಾ ನಿರ್ಮಲವಾದ ರಾತ್ರಿಯನ್ನು ಉಂಟುಮಾಡುತ್ತಾ ಯುದ್ಧದಲ್ಲಿ ಕ್ಷತ್ರಿಯರಿಗೆ ಸಂತೋಷವನ್ನು ಕೊಡುತ್ತಾ ಉದಯಿಸಿದನು.

ತತಃ ಪ್ರಕಾಶಮಾಸಾದ್ಯ ಪುನರ್ಯುದ್ಧಮವರ್ತತ ।
ಘೋರರೂಪಂ ತದಾ ತಸ್ಮಿನ್ನವೈಕ್ಷಂತ ಪರಸ್ಪರಮ್ ॥೩॥

ಅನಂತರ ಚಂದ್ರನ ಬೆಳದಿಂಗಳು ಬರುತ್ತಿರಲು ಪುನಃ ಯುದ್ಧವು ಆರಂಭವಾಯಿತು. ಆಗ ಶತ್ರುಗಳ ಘೋರರೂಪಗಳನ್ನು ಅವರು ಪರಸ್ಪರವಾಗಿ ನಿರೀಕ್ಷಿಸಿದರು.

ತತಃ ಸುಶರ್ಮಾ ತ್ರೈಗರ್ತಃ ಸಹ ಭ್ರಾತ್ರಾ ಸುವರ್ಮಣಾ ।
ಅಭ್ಯದ್ರವನ್ ಮತ್ಸ್ಯರಾಜಂ ಶರವ್ರಾತೇನ ಸರ್ವಶಃ ॥೪॥

ಆಗ ತ್ರಿಗರ್ತಾಧಿಪತಿಯಾದ ಸುಶರ್ಮನು ತನ್ನ ತಮ್ಮನಾದ ಸುವರ್ಮನೊಂದಿಗೆ ಎಲ್ಲಕಡೆಗಳಲ್ಲಿಯೂ ಬಾಣಗಳ ಮಳೆಯನ್ನು ಸೃಷ್ಟಿಸುತ್ತಾ ಮತ್ಸ್ಯರಾಜನ ಕಡೆಗೆ ಓಡಿಬಂದನು.

ತತೋ ರಥಾಭ್ಯಾಂ ಪ್ರಸ್ಕಂದ್ಯ ಭ್ರಾತರೌ ಕ್ಷತ್ರಿಯಾವುಭೌ ।
ಗದಾಪಾಣೀ ಸುಸಂರಬ್ಧೌ ಸಮಭ್ಯದ್ರವತಾಂ ಹಯಾನ್ ॥೫॥

ಅನಂತರ ಸಹೋದರರಾದ ಆ ಕ್ಷತ್ರಿಯರಿಬ್ಬರೂ ರಥಗಳಿಂದ ಧುಮುಕಿ ಗದೆಗಳನ್ನು ಹಿಡಿದು ಬಹಳ ಕೋಪದಿಂದ ಕೂಡಿದವರಾಗಿ ಅಶ್ವಗಳನ್ನು ಓಡಿಸಿದರು.

ತಥೈವ ತೇಷಾಂ ತುಮುಲಾನಿ ತಾನಿ
ಕ್ರುದ್ಧಾನಿ ಚಾನ್ಯೋನ್ಯಮಭಿದ್ರವಂತಿ ।
ಗದಾಸಿಪಟ್ಟೈಶ್ಚ ಪರಶ್ವಧೈಶ್ಚ
ಪ್ರಾಸೈಶ್ಚ ತೀಕ್ಷ್ಣಾಗ್ರಸುರೂಪಧಾರೈಃ ॥೬॥

ಹಾಗೆಯೇ ಅವರ ಕ್ರೋಧಗೊಂಡ ತೀವ್ರವಾದ ಸೈನ್ಯಗಳು ಗದಾ, ಖಡ್ಗ ಮತ್ತು ಪಟ್ಟಿಸಗಳಿಂದಲೂ, ಪರಶ್ವಧಗಳಿಂದಲೂ, ಪ್ರಾಸಗಳಿಂದಲೂ, ತೀಕ್ಷ್ಣವಾದ ತುದಿಯುಳ್ಳ ಮತ್ತು ಸುಂದರವಾದ ಅಲುಗುಗಳುಳ್ಳ ಆಯುಧಗಳಿಂದಲೂ ಪರಸ್ಪರವಾಗಿ ಎರಗಿದವು.

ಬಲಂ ತು ಮತ್ಸ್ಯಸ್ಯ ಬಲೇನ ರಾಜಾ
ಸರ್ವಂ ತ್ರಿಗರ್ತಾಧಿಪತಿಃ ಸುಶರ್ಮಾ ।
ಪ್ರಮಥ್ಯ ಜಿತ್ವಾ ಚ ನಿಪೀಡ್ಯ ಮತ್ಸ್ಯಾನ್
ವಿರಾಟಮೋಜಸ್ವಿನಮಭ್ಯಧಾವತ್ ॥೭॥

ತ್ರಿಗರ್ತಾಧಿಪತಿಯಾದ ಸುಶರ್ಮರಾಜನು ತನ್ನ ಸೈನ್ಯದಿಂದ ಮತ್ಸ್ಯಸೈನ್ಯವನ್ನು ಹಿಂಸಿಸಿ ಅವರನ್ನು ಗೆದ್ದು ಪರಾಕ್ರಮಶಾಲಿಯಾದ ವಿರಾಟನನ್ನು (ಹಿಡಿಯಲು) ಅವನ ಕಡೆಗೆ ಓಡಿದನು.

ಮತ್ತಾವಿವ ವೃಷಾವೇತೌ ಗಜಾವಿವ ಮದೋದ್ಧತೌ ।
ಸಿಂಹಾವಿವ ಗಜಗ್ರಾಹೌ ವೃತ್ರಶಕ್ರಾವಿವೋದ್ಧತೌ ॥೮॥

ಉಭೌ ತುಲ್ಯಬಲೋತ್ಸಾಹಾವುಭೌ ತುಲ್ಯಪರಾಕ್ರಮೌ ।
ಉಭೌ ತುಲ್ಯಾಸ್ತ್ರವಿದುಷಾವುಭೌ ಯುದ್ಧವಿಶಾರದೌ ॥೯॥

ತೌ ನಿಹತ್ಯ ಪೃಥಗ್ರಥ್ಯಾವುಭೌ ತೌ ಪಾರ್ಷ್ಣಿಸಾರಥೀ ।
ಆಸ್ತಾಂ ತುಲ್ಯಧನುರ್ಗ್ರಾಹೌ ವಿಷ್ಣುಕಂಸಾವಿವೋದ್ಧತೌ ॥೧೦॥

ಅವರಿಬ್ಬರೂ ಮದಿಸಿದ ವೃಷಭಗಳಂತೆ ಇರುವವರು. ಮದೋದ್ಧತವಾದ ಗಜಗಳಂತೆ, ಆನೆಗಳನ್ನು ಹಿಡಿಯುವ ಸಿಂಹಗಳಂತೆ, ಶಕ್ರ ಮತ್ತು ವೃತ್ರಾಸುರನಂತೆ ಉದ್ಧತರಾದವರು. ಇಬ್ಬರೂ ಸಮಾನ ಬಲ, ಉತ್ಸಾಹಗಳುಳ್ಳವರು. ಸಮಾನವಾದ ಪರಾಕ್ರಮವುಳ್ಳವರು. ಸಮಾನವಾದ ಅಸ್ತ್ರವಿದ್ಯೆಯುಳ್ಳವರು ಮತ್ತು ಸಮಾನವಾದ ಯುದ್ಧವಿಶಾರದರು. ಅವರಿಬ್ಬರೂ ಪರಸ್ಪರವಾಗಿ ಶತ್ರುವಿನ ರಥದ ಸಾರಥಿಯನ್ನೂ, ಪಕ್ಷಸಾರಥಿಯನ್ನೂ ಕೊಂದು ಸಮಾನವಾದ ಧನುಸ್ಸನ್ನು ಹಿಡಿದವರಾಗಿ ಕೃಷ್ಣಕಂಸರಂತೆ ಉದ್ಧತರಾಗಿ ನಿಂತರು.

ಸುಶರ್ಮಾ ಪರವೀರಘ್ನೋ ಬಲವಾನ್ ವೀರ್ಯವಾನ್ ಗದೀ ।
ವಿರಥಂ ಮತ್ಸ್ಯರಾಜಾನಂ ಜೀವಗ್ರಾಹಮಥಾಗ್ರಹೀತ್ ॥೧೧॥

ಪರವೀರಘ್ನನೂ, ಬಲಿಷ್ಠನೂ, ಪರಾಕ್ರಮಶಾಲಿಯೂ, ಗದೆಯನ್ನು ಧರಿಸಿದವನೂ ಆದ ಸುಶರ್ಮನು ಮತ್ಸ್ಯರಾಜನನ್ನು ವಿರಥನನ್ನಾಗಿ ಮಾಡಿ ಅವನನ್ನು ಜೀವಸಹಿತವಾಗಿ ಹಿಡಿದನು.

ತಮುನ್ಮಥ್ಯ ಸುಶರ್ಮಾ ತು ವಿರಾಟಂ ಭೀಮವಿಕ್ರಮಮ್ ।
ಸ್ಯಂದನಂ ಸ್ವಂ ಸಮಾರೋಪ್ಯ ಪ್ರಯಯೌ ಶೀಘ್ರವಾಹನಃ ॥೧೨॥

ಸುಶರ್ಮನು ಭೀಮಪರಾಕ್ರಮವುಳ್ಳ ವಿರಾಟನನ್ನು ಮರ್ದಿಸಿ ತನ್ನ ರಥದಲ್ಲಿ ಕೂಡಿಸಿಕೊಂಡು ಶೀಘ್ರವಾಹನವುಳ್ಳ ಅವನು ಅಲ್ಲಿಂದ ಹೊರಟನು.

ತಸ್ಮಿನ್ ಗೃಹೀತೇ ನೃಪತೌ ವಿರಾಟೇ ಬಲವತ್ತರೇ ।
ಬಲಂ ಸರ್ವಂ ವಿಭಗ್ನಂ ತನ್ನಿರುತ್ಸಾಹಂ ನಿರಾಶಕಮ್ ॥೧೩॥

ಬಲಿಷ್ಠನಾದ ಆ ವಿರಾಟರಾಜನು ಸೆರೆಸಿಕ್ಕುತ್ತಿರಲು ಅವನ ಸೈನ್ಯವೆಲ್ಲವೂ ಭಗ್ನವಾಗಿ ನಿರಾಶೆಯನ್ನು ಹೊಂದಿ ಉತ್ಸಾಹವನ್ನು ಕಳೆದುಕೊಂಡಿತು.

ಪ್ರಾದ್ರವಂತ ಭಯಾನ್ಮತ್ಸ್ಯಾಃ ತ್ರಿಗರ್ತೈರರ್ದಿತಾ ರಣೇ ।
ವಿದಿಕ್ಷು ದಿಕ್ಷು ಸರ್ವಾಸು ಪಲಾಯಂತಿ ಚ ಯಾಂತಿ ಚ ॥೧೪॥

ಯುದ್ಧದಲ್ಲಿ ತ್ರಿಗರ್ತರಿಂದ ಪೀಡಿತರಾದ ಮತ್ಸ್ಯಸೈನಿಕರು ಭಯದಿಂದ ಎಲ್ಲ ದಿಕ್ಕುಗಳಿಗೂ ವಿದಿಕ್ಕುಗಳಿಗೂ ಓಡಿಹೋದರು. ಯುದ್ಧವನ್ನು ಬಿಟ್ಟು ಪಲಾಯನ ಮಾಡಿದರು.

ತೇಷು ವಿದ್ರಾವ್ಯಮಾಣೇಷು ಕುಂತೀಪುತ್ರೋ ಯುಧಿಷ್ಠಿರಃ ।
ಅಭ್ಯಭಾಷತ ಧರ್ಮಾತ್ಮಾ ಭೀಮಸೇನಮರಿಂದಮಮ್ ॥೧೫॥

ಮತ್ಸ್ಯರಾಜಃ ಪರಾಮೃಷ್ಟಸ್ತ್ರಿಗರ್ತೇನ ಸುಶರ್ಮಣಾ ।
ತಂ ಮೋಕ್ಷಯ ಮಹಾಬಾಹೋ ಮಾ ಗಮದ್ ದ್ವಿಷತಾಂ ವಶಮ್ ॥

ಉಷಿತಾಃ ಸ್ಮ ಸುಖಂ ಸರ್ವೇ ಸರ್ವಕಾಮೈಃ ಸುಪೂಜಿತಾಃ ॥೧೭॥

ವಿರಾಟಸೈನಿಕರು ಹಾಗೆ ಓಡುತ್ತಿರಲು ಧರ್ಮಾತ್ಮನಾದ ಕುಂತೀಪುತ್ರನಾದ ಯುಧಿಷ್ಠಿರನು ಅರಿಂದಮನಾದ ಭೀಮಸೇನನನ್ನು ಕುರಿತು ತ್ರಿಗರ್ತಾಧಿಪತಿಯಾದ ಸುಶರ್ಮನಿಂದ ಮತ್ಸ್ಯರಾಜನಾದ ವಿರಾಟನು ಸೆರೆಹಿಡಿಯಲ್ಪಟ್ಟಿದ್ದಾನೆ. ಎಲೈ ಮಹಾಬಾಹುವೇ, ಅವನನ್ನು ಬಿಡಿಸು. ಅವನು ಶತ್ರುವಶವಾಗುವುದು ಬೇಡ. ನಾವು ಎಲ್ಲ ಕಾಮಗಳಿಂದಲೂ ಸುಪೂಜಿತರಾಗಿ ಅವನ ಮನೆಯಲ್ಲಿ ಸುಖವಾಗಿ ವಾಸಿಸಿದ್ದೇವೆ.

ಭೀಮಸೇನ ಮಹಾಬಾಹೋ ಗೃಹೀತಂ ತು ಸುಶರ್ಮಣಾ ।
ತ್ರಾಯಸ್ವ ಮೋಚಯ ಕ್ಷಿಪ್ರಮಸ್ಮತ್‌ಪ್ರೀತಿಕರಂ ನೃಪಮ್ ॥೧೮॥

ಭೀಮಸೇನ ತ್ವಯಾ ಕಾರ್ಯಾ ತಸ್ಯ ವಾಸಸ್ಯ ನಿಷ್ಕೃತಿಃ ॥೧೯॥

ಎಲೈ ಮಹಾಬಾಹುವಾದ ಭೀಮಸೇನನೇ, ಸುಶರ್ಮನಿಂದ ಗೃಹೀತನಾದ ವಿರಾಟನನ್ನು ರಕ್ಷಿಸಿ ನಮಗೆ ಪ್ರಿಯನಾದ ಆ ರಾಜನನ್ನು ಶೀಘ್ರವಾಗಿ ಬಿಡುಗಡೆಯನ್ನು ಮಾಡು. ಭೀಮಸೇನನೇ, ನಾವು ಅವನ ಮನೆಯಲ್ಲಿ ವಾಸಮಾಡಿದುದಕ್ಕೆ ಪ್ರತ್ಯುಪಕಾರ ರೂಪವಾಗಿ ನೀನು ಈ ಕಾರ್ಯವನ್ನು ಮಾಡಬೇಕು ಎಂದು ಹೇಳಿದನು.

ವೈಶಂಪಾಯನಃ

ತಂ ತಥಾವಾದಿನಂ ತತ್ರ ಭೀಮಸೇನೋ ಮಹಾಬಲಃ ।
ಅಭ್ಯಭಾಷತ ದುರ್ಧರ್ಷೋ ರಣಮಧ್ಯೇ ಯುಧಿಷ್ಠಿರಮ್ ॥೨೦॥

ಅಹಮೇನಂ ಪರಿತ್ರಾಸ್ಯೇ ಶಾಸನಾತ್ ತವ ಪಾರ್ಥಿವ ।
ಪಶ್ಯೇದಂ ಸುಮಹತ್ ಕರ್ಮ ಯುಧ್ಯತೋ ಮಮ ಶತ್ರುಭಿಃ ॥೨೧॥

ಸ್ವಬಾಹುಬಲಮಾಶ್ರಿತ್ಯ ಪರೇಷಾಮಸಮಂ ರಣೇ ।

ವೈಶಂಪಾಯನ– ಹಾಗೆ ಮಾತನಾಡುತ್ತಿದ್ದ ಯುಧಿಷ್ಠಿರನನ್ನು ಕುರಿತು, ಯುದ್ಧದಲ್ಲಿ ಯಾರಿಗೂ ಸೋಲದವನೂ, ಮಹಾಬಲನೂ ಆದ ಭೀಮಸೇನನು ಎಲೈ ರಾಜನೇ, ನಿನ್ನ ಆಜ್ಞೆಯಂತೆ ನಾನು ಇವನನ್ನು ರಕ್ಷಿಸುವೆನು. ಶತ್ರುಗಳಿಗೆ ಸಮನಲ್ಲದ ನಾನು ಯುದ್ಧದಲ್ಲಿ ನನ್ನ ಬಾಹುಬಲವನ್ನು ಆಶ್ರಯಿಸಿ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವ ನನ್ನ ಈ ಮಹಾಕಾರ್ಯವನ್ನು ನೋಡುವವನಾಗು.

ಏಕಾಂತಮಾಶ್ರಿತೋ ರಾಜನ್ ತಿಷ್ಠ ತ್ವಂ ಭ್ರಾತೃಭಿಃ ಸಹ ॥೨೨॥

ಅಯಂ ವೃಕ್ಷೋ ಮಹಾಸಾರೋ ಗಿರಿಮಾತ್ರೋ ವನಸ್ಪತಿಃ ।
ಅಹಮೇನಂ ಸಮಾರುಜ್ಯ ಪೋಥಯಿಷ್ಯಾಮಿ ಶಾತ್ರವಾನ್ ॥೨೩॥

ಎಲೈ ರಾಜನೇ, ನೀನು ಏಕಾಂತದಲ್ಲಿ ಸಹೋದರರ ಜೊತೆಯಲ್ಲಿ ಇರುವವನಾಗು. ಈ ವೃಕ್ಷವು ಪರ್ವತದಂತೆ ಎತ್ತರವೂ ಮತ್ತು ಬಹಳ ಗಟ್ಟಿಯಾದುದ್ದೂ ಆಗಿದೆ. ಈ ವೃಕ್ಷವನ್ನು ಕಿತ್ತು ನಾನು ಶತ್ರುಗಳನ್ನು ಅದರಿಂದ ಬಡಿಯುವೆನು ಎಂದು ಹೇಳಿದನು.

ವೈಶಂಪಾಯನಃ

ತಂ ಮತ್ತಮಿವ ಮಾತಂಗಂ ವೀಕ್ಷಮಾಣಂ ವನಸ್ಪತಿಮ್ ।
ಅಬ್ರವೀದ್ ಭ್ರಾತರಂ ವೀರಂ ಧರ್ಮರಾಜೋ ಯುಧಿಷ್ಠಿರಃ ॥೨೪॥

ವೈಶಂಪಾಯನ– ಮದಿಸಿದ ಗಜದಂತೆ ಆ ವೃಕ್ಷನನ್ನು ನೋಡುತ್ತಿದ್ದ ತನ್ನ ತಮ್ಮನಾದ ವೀರನಾದ ಭೀಮಸೇನನನ್ನು ಕುರಿತು ಧರ್ಮರಾಜನಾದ ಯುಧಿಷ್ಠಿರನು ಹೇಳಿದನು.

ಮಾ ಭೀಮ ಸಾಹಸಂ ಕಾರ್ಷೀಸ್ತಿಷ್ಠತ್ವೇಷ ವನಸ್ಪತಿಃ ॥೨೫॥

ಮಾ ತ್ವಾಂ ವೃಕ್ಷೇಣ ಕರ್ಮಾಣಿ ಕುರ್ವಂತಮತಿಮಾನುಷಮ್ ।
ಜನಾಃ ಸಮವಬುದ್ಧ್ಯೇರನ್ ಭೀಮೋಽಯಮಿತಿ ಭಾರತ ॥೨೬॥

ಭೀಮನೇ, ಸಾಹಸವನ್ನು ಮಾಡಬೇಡ. ಈ ವೃಕ್ಷವು ಹಾಗೆಯೇ ಇರಲಿ. ಎಲೈ ಭಾರತನೇ, ಈ ವೃಕ್ಷದಿಂದ ಮನುಷ್ಯರಿಗೆ ಮೀರಿದ ಕರ್ಮಗಳನ್ನು ಮಾಡುವ ನಿನ್ನನ್ನು ಇವನು ಭೀಮನೆಂದು ಯಾವ ಜನರೂ ತಿಳಿಯದಿರಲಿ.

ಮಾ ಗ್ರಹೀಸ್ತ್ವಮಿಮಂ ವೃಕ್ಷಂ ಸಿಂಹನಾದಂ ಚ ಮಾನದ ।
ವೃಕ್ಷಂ ಚೇತ್ ತ್ವಂ ನಯೇರ್ವೀರ ವಿಜ್ಞಾಸ್ಯತಿ ಜನೋ ಧ್ರುವಮ್ ॥೨೭॥

ಅನ್ಯದೇವಾಯುಧಂ ಗೃಹ್ಯ ಪ್ರತಿಪದ್ಯಸ್ವ ಮಾನುಷಮ್ ।
ಚಾಪಂ ವಾ ಯದಿ ವಾ ಶಕ್ತಿಂ ನಿಸ್ತ್ರಿಂಶಂ ವಾ ಗೃಹಾಣ ಭೋ ॥೨೮॥

ಎಲೈ ಮಾನದನೇ, ನೀನು ಈ ವೃಕ್ಷವನ್ನು ಕೀಳಬೇಡ. ಸಿಂಹನಾದವನ್ನೂ ಮಾಡಬೇಡ. ನೀನು ಈ ವೃಕ್ಷವನ್ನು ಹಿಡಿದುಕೊಂಡು ಹೋದರೆ ಜನರು ಖಂಡಿತವಾಗಿ

ನಿನ್ನನ್ನು ಭೀಮನೆಂದು ತಿಳಿಯುವರು. ಮನುಷ್ಯರು ಉಪಯೋಗಿಸುವ ಬೇರೆ ಯಾವುದಾದರೂ ಆಯುಧವನ್ನು ಹಿಡಿಯುವವನಾಗು. ಧನುಸ್ಸನ್ನಾಗಲೀ, ಶಕ್ತಿಯನ್ನಾಗಲೀ, ಖಡ್ಗವನ್ನಾಗಲೀ ತೆಗೆದುಕೊ.

ಯದೇವ ಮಾನುಷಂ ಭೀಮ ಭವೇದನ್ಯೈರಲಕ್ಷಿತಮ್ ।
ತದೇವಾಯುಧಮಾದಾಯ ಮೋಚಯಾಶು ಮಹೀಪತಿಮ್ ॥೨೯॥

ಎಲೈ ಭೀಮನೇ, ಅನ್ಯರು ಗಮನಿಸದಿರುವ ಯಾವ ಮಾನುಷ ಆಯುಧವಿದೆಯೋ ಆ ಆಯುಧವನ್ನೇ ತೆಗೆದುಕೊಂಡು ರಾಜನನ್ನು ಶೀಘ್ರವಾಗಿ ಬಿಡುಗಡೆಗೊಳಿಸು.

ಯಮೌ ಚ ಪಕ್ಷರಕ್ಷ್ಟೌ ತೇ ಭವಿತಾರೌ ಮಹಾಬಲೌ ।
ವ್ಯಾಯಚ್ಛತಸ್ತೇ ಸಮರೇ ಮತ್ಸ್ಯರಾಜಂ ಪರೀಪ್ಸತಃ ॥೩೦॥

ಮತ್ಸ್ಯರಾಜನನ್ನು ರಕ್ಷಿಸಲು ಯುದ್ಧದಲ್ಲಿ ಉದ್ಯುಕ್ತನಾದ ನಿನಗೆ ಮಹಾಬಲರಾದ ನಕುಲ ಸಹದೇವರು ಉಭಯಪಾರ್ಶ್ವಗಳಲ್ಲಿ ರಕ್ಷಕರಾಗುತ್ತಾರೆ.

ವೈಶಂಪಾಯನಃ

ಇತ್ಯುಕ್ತ್ವಾ ಭೀಮಸೇನಂ ತಂ ಸ್ವಯಮೇವ ಯುಧಿಷ್ಠಿರಃ ।
ಅನ್ವಯಾಜ್ಜವನೈರಶ್ವೈಃ ಪರೀಪ್ಸನ್ ಮತ್ಸ್ಯಸತ್ತಮಮ್ ॥೩೧॥

ವೈಶಂಪಾಯನ– ಭೀಮಸೇನನನ್ನು ಕುರಿತು ಹೀಗೆ ಹೇಳಿ ಯುಧಿಷ್ಠಿರನು ತಾನೇ ಶೀಘ್ರಗಾಮಿಗಳಾದ ಅಶ್ವಗಳಿಂದ ಮತ್ಸ್ಯರಾಜನನ್ನು ರಕ್ಷಿಸಲು ಹೊರಟನು.

ಭ್ರಾತುರ್ವಚನಮಾದಾಯ ಭೀಮೋ ವೃಕ್ಷಂ ವಿಸೃಜ್ಯ ಚ ।
ಚಾಪಮಾದಾಯ ಸಂಪ್ರಾಪ್ತೋ ರಥಮಾರುಹ್ಯ ಪಾಂಡವಃ ॥೩೨॥

ಅಣ್ಣನ ಮಾತುಗಳನ್ನು ಕೇಳಿ ಪಾಂಡುಪುತ್ರನಾದ ಭೀಮಸೇನನು ವೃಕ್ಷವನ್ನು ಬಿಟ್ಟು ಕೈಯಲ್ಲಿ ಧನುಸ್ಸನ್ನು ಹಿಡಿದು ರಥವನ್ನು ಏರಿ ಹೊರಟುಬಂದನು.

ತೇ ಸಂಹತಾಃ ಸರ್ವ ಏವ ಹಯಾನ್ ಪಾರ್ಥಾ ಅಚೋದಯನ್ ।
ದಿವ್ಯಾಸ್ತ್ರಕುಶಲಾಃ ಸರ್ವೇ ನೀತಿಜ್ಞಾಶ್ಚಾಸ್ತ್ರಶನ್ ಪರಾನ್ ॥೩೩॥

ದಿವ್ಯಾಸ್ತ್ರಕುಶಲರಾದ, ರಾಜನೀತಿಯನ್ನು ತಿಳಿದ ಆ ಪಾಂಡವರೆಲ್ಲರೂ ಒಟ್ಟಾಗಿ ತಮ್ಮ ಅಶ್ವಗಳನ್ನು ಪ್ರೇರಿಸಿ ಶತ್ರುಗಳನ್ನು ತಲುಪಿದರು.

ತತಃ ಸಮಸ್ತಾಸ್ತೇ ಸರ್ವೇ ತುರಗಾನಭ್ಯಚೋದಯನ್ ।
ದಿವ್ಯಮಸ್ತ್ರಂ ವಿಕುರ್ವಾಣಾಃ ತ್ರಿಗರ್ತಾಂಶ್ಚಾಪ್ಯುಪಾದ್ರವನ್ ॥೩೪॥

ಅನಂತರ ಅವರೆಲ್ಲರೂ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ತ್ರಿಗರ್ತರ ಕಡೆಗೆ ವೇಗವಾಗಿ ಓಡುವಂತೆ ತಮ್ಮ ಅಶ್ವಗಳನ್ನು ಪ್ರಚೋದಿಸಿದರು.

ತಾನ್ ನಿವೃತ್ತರಥಾನ್ ದೃಷ್ಟ್ವಾ ಪಾಂಡವಾನ್ ಮಹತೀಂ ಚಮೂಮ್।
ವೈರಾಟಿಃ ಪರಮಕ್ರುದ್ಧೋ ಯುಯುಧೇ ಪರಮಾದ್ಭುತಮ್ ॥೩೫॥

ಪಾಂಡವರು ತಮ್ಮ ರಥದಿಂದ ಪುನಃ ಹಿಂದಿರುಗಿದುದನ್ನು ನೋಡಿ ವಿರಾಟಪುತ್ರನು ಪರಮಕ್ರುದ್ಧನಾಗಿ ಶತ್ರುಗಳ ಸೈನ್ಯದ ಜೊತೆಯಲ್ಲಿ ಅದ್ಭುತವಾಗಿ ಯುದ್ಧವನ್ನು ಮಾಡಿದನು.

ತ್ರಿಗರ್ತಾಃ ಸಮತಿಕ್ರಮ್ಯ ಅಯುಧ್ಯಂತ ಜಯೈಷಿಣಃ ॥೩೬॥

ತಾನ್ ಭೀಮಸೇನಃ ಸಂಕ್ರುದ್ಧಃ ಸರ್ವಶಸ್ತ್ರಭೃತಾಂ ವರಃ ।
ದ್ವಿಸಹಸ್ರಂ ರಥಾನ್ ವೀರಃ ಪರಲೋಕಂ ಪ್ರವೇಶಯತ್ ॥೩೭॥

ಜಯವನ್ನು ಬಯಸುವ ತ್ರಿಗರ್ತರು ಅವನನ್ನು ಮೀರಿ ಯುದ್ಧವನ್ನು ಮಾಡಿದರು. ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ವೀರನಾದ ಕ್ರೋಧಗೊಂಡ ಭೀಮಸೇನನು ಅವರಲ್ಲಿ ಎರಡು ಸಹಸ್ರ ರಥಗಳನ್ನು ಪರಲೋಕಕ್ಕೆ ಕಳುಹಿಸಿದನು.

ಸಹಸ್ರಂ ಪ್ರಾಹಿಣೋದ್ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ನಕುಲಶ್ಚಾಪಿ ಸಪ್ತೈವ ಶತಾನಿ ಪ್ರಾಹಿಣೋಚ್ಛರೈಃ ॥೩೮॥

ಕುಂತೀಪುತ್ರನಾದ ಯುಧಿಷ್ಠಿರರಾಜನು ಒಂದು ಸಹಸ್ರರಥಗಳನ್ನೂ ಮತ್ತು ನಕುಲನು ತನ್ನ ಬಾಣಗಳಿಂದ ಏಳನೂರು ರಥಗಳನ್ನು ಪರಲೋಕಕ್ಕೆ ಕಳುಹಿಸಿದನು.

ಶತಾನಿ ತ್ರೀಣಿ ಶೂರಾಣಾಂ ಸಹದೇವಃ ಪ್ರತಾಪವಾನ್ ।
ಯುಧಿಷ್ಠಿರಸಮಾದಿಷ್ಟೋ ನಿಜಘ್ನೇ ಪುರುಷರ್ಷಭಃ ॥೩೯॥

ಯುಧಿಷ್ಠಿರನಿಂದ ಆದೇಶವನ್ನು ಪಡೆದ ಪುರುಷರ್ಷಭನೂ, ಪ್ರತಾಪಶಾಲಿಯೂ ಆದ ಸಹದೇವನು ಮುನ್ನೂರು ಶೂರರನ್ನು ಸಂಹಾರ ಮಾಡಿದನು.

ಪ್ರವಿಶ್ಯ ಮಹತೀಂ ಸೇನಾಂ ತ್ರಿಗರ್ತಾನಾಂ ಮಹಾಬಲಾಃ ।
ಕ್ಷೋಭಯಂತಶ್ಚ ಸೈನ್ಯಾನಿ ಸಿಂಹಾಃ ಕ್ಷುದ್ರಮೃಗಾನಿವ ॥೪೦॥

ಮಹಾಬಲರಾದ ಪಾಂಡವರು ತ್ರಿಗರ್ತರ ದೊಡ್ಡ ಸೈನ್ಯವನ್ನು ಪ್ರವೇಶಿಸಿ, ಸಿಂಹವು ಕ್ಷುದ್ರಮೃಗಗಳನ್ನು ಹಿಡಿದು ಅವುಗಳನ್ನು ಅಲ್ಲೋಲಕಲ್ಲೋಲ ಮಾಡುವಂತೆ ಆ ಸೈನ್ಯವನ್ನು ಕ್ಷೋಭೆಗೊಳಿಸಿದರು.

ತತೋ ಯುಧಿಷ್ಠಿರೋ ರಾಜಾ ತ್ವರಮಾಣೋ ಮಹಾಬಲಃ ।
ಅಭಿದ್ರುತ್ಯ ಸುಶರ್ಮಾಣಂ ಶರೈರಭ್ಯಹನದ್ ಭೃಶಮ್ ॥೪೧॥

ಆಗ ಮಹಾಬಲನಾದ ಯುಧಿಷ್ಠಿರನು ತ್ವರೆಯಿಂದ ಮುಂದೆ ಹೋಗಿ ಸುಶರ್ಮನಿಗೆ ಬಾಣಗಳಿಂದ ಚೆನ್ನಾಗಿ ಹೊಡೆದನು.

ಸುಶರ್ಮಾऽಪಿ ಸುಸಂಕ್ರುದ್ಧಸ್ತ್ವರಮಾಣೋ ಯುಧಿಷ್ಠಿರಮ್ ।
ಅವಿಧ್ಯದ್ ದಶಭಿರ್ಬಾಣೈಶ್ಚತುರ್ಭಿಶ್ಚತುರೋ ಹಯಾನ್ ॥೪೨॥

ಕೋಪಗೊಂಡ ಸುಶರ್ಮನೂ ಕೂಡ ಯುಧಿಷ್ಠಿರನ ಮೇಲೆ ಹತ್ತು ಬಾಣಗಳನ್ನು ಅವನ ನಾಲ್ಕು ಅಶ್ವಗಳ ಮೇಲೆ ನಾಲ್ಕು ಬಾಣಗಳನ್ನು ಪ್ರಯೋಗಿಸಿದನು.

ತತೋ ರಾಜನ್ ಕ್ಷಿಪ್ರಕಾರೀ ಕುಂತೀಪುತ್ರೋ ವೃಕೋದರಃ ।
ಸಮಾಸಾದ್ಯ ಸುಶರ್ಮಾಣಮಶ್ವಾಂಸ್ತಸ್ಯ ನ್ಯಪಾತಯತ್ ॥೪೩॥

ಎಲೈ ರಾಜನೇ, ಆಗ ಶೀಘ್ರಕಾರಿಯಾದ ಕುಂತೀಪುತ್ರನಾದ ವೃಕೋದರನು ಸುಶರ್ಮನನ್ನು ಸಮೀಪಿಸಿ ಅವನ ಅಶ್ವಗಳನ್ನು ಹೊಡೆದು ಉರುಳಿಸಿದನು.

ಪೃಷ್ಠಗೋಪಾಂಸ್ತು ತಸ್ಯಾಥ ಹತ್ವಾ ಪರಮಸಾಯಕೈಃ ।
ಅಥಾಸ್ಯ ಸಾರಥಿಂ ಕ್ರುದ್ಧೋ ರಥೋಪಸ್ಥಾದಪಾತಯತ್ ॥೪೪॥

ಅವನ ಹಿಂದಿದ್ದ ರಕ್ಷಕರನ್ನು ಶ್ರೇಷ್ಠವಾದ ಬಾಣಗಳಿಂದ ಕೊಂದು ಅನಂತರ ಕ್ರುದ್ಧನಾದ ಅವನು ರಥದ ಮುಂಭಾಗದಲ್ಲಿದ್ದ ಅವನ ಸಾರಥಿಯನ್ನು ಕೆಡವಿದನು.

ಚಕ್ರರಕ್ಷಸ್ತು ಶೂರಶ್ಚ ಶೋಣಾಶ್ವೋ ನಾಮ ನಾಮತಃ ।
ಸ ಭಯಾದ್ ವಿರಥಂ ದೃಷ್ಟ್ವಾ ತ್ರಿಗರ್ತಂ ವ್ಯಾಜಹಾತ್ ತದಾ ॥೪೫॥

ತ್ರಿಗರ್ತನ ಚಕ್ರರಕ್ಷಕನಾಗಿದ್ದ ಶೂರನಾದ ಶೋಣಾಶ್ವನೆಂಬುವನು ವಿರಥನಾದ ತ್ರಿಗರ್ತನನ್ನು ನೋಡಿ ಭಯದಿಂದ ರಥವನ್ನು ತ್ಯಜಿಸಿ ಹೊರಟು ಹೋದನು.

ತತೋ ವಿರಾಟಃ ಪ್ರಸ್ಕಂದ್ಯ ರಥಾದಥ ಸುಶರ್ಮಣಃ ।
ಗದಾಮಸ್ಯ ಪರಾಮೃಶ್ಯ ತಮೇವಾಭ್ಯಹನದ್ ಬಲೀ ॥೪೬॥

ಆಗ ವಿರಾಟನು ಸುಶರ್ಮನ ರಥದಿಂದ ತಪ್ಪಿಸಿಕೊಂಡು ಅವನ ಗದೆಯನ್ನು ತೆಗೆದುಕೊಂಡು ಬಲಿಷ್ಠನಾದ ಅವನು ಅವನಿಗೇ ಹೊಡೆದನು.

ಸ ಚಚಾರ ಗದಾಪಾಣಿರ್ವೃದ್ಧೋಽಪಿ ತರುಣೋ ಯಥಾ ॥೪೭॥

ಅವನು ಕೈಯಲ್ಲಿ ಗದೆಯನ್ನು ಹಿಡಿದು ವೃದ್ಧನಾದರೂ ತರುಣನಂತೆ ಸಂಚರಿಸಿದನು.

ಭೀಮಸ್ತು ಭೀಮಸಂಕಾಶೋ ರಥಾತ್ ಪ್ರಸ್ಕಂದ್ಯ ವೀರ್ಯವಾನ್ ।
ತ್ರಿಗರ್ತರಾಜಮಾದತ್ತ ಸಿಂಹಃ ಕ್ಷುದ್ರಮೃಗಂ ಯಥಾ ॥೪೮॥

ಸಂಹಾರಕನಾದ ರುದ್ರನಂತೆ ಕಾಣುತ್ತಿದ್ದ ಪರಾಕ್ರಮಶಾಲಿಯಾದ ಭೀಮನೂ ಸಹ ತನ್ನ ರಥದಿಂದ ನೆಗೆದು ಸಿಂಹವು ಕ್ಷುದ್ರಮೃಗವನ್ನು ಹಿಡಿಯುವಂತೆ ತ್ರಿಗರ್ತರಾಜನನ್ನು ಹಿಡಿದನು.

ತಸ್ಮಿನ್ ವೀರೇ ಗೃಹೀತೇ ತು ತ್ರಿಗರ್ತಾನಾಂ ಮಹಾರಥೇ ।
ಅಭಜ್ಯತ ಬಲಂ ಸರ್ವಂ ತ್ರಿಗರ್ತಾನಾಂ ಭಯಾತುರಮ್ ॥೪೯॥

ವೀರನೂ ಮಹಾರಥನೂ ಆದ ತ್ರಿಗರ್ತಾಧಿಪತಿಯು ಹಿಡಿಯಲ್ಪಡುತ್ತಿರಲು ತ್ರಿಗರ್ತರ ಸೈನ್ಯವೆಲ್ಲವೂ ಭಯದಿಂದ ಕೂಡಿದುದಾಗಿ ಭಗ್ನವಾಯಿತು.

ನಿವರ್ತ್ಯ ಗಾಸ್ತತಃ ಸರ್ವಾಃ ಪಾಂಡುಪುತ್ರಾಃ ಮಹಾಬಲಾಃ ।
ಅವಜಿತ್ಯ ಸುಶರ್ಮಾಣಂ ಧನಂ ಚಾದಾಯ ಸರ್ವಶಃ ॥೫೦॥

ಸ್ವಬಾಹುಬಲಸಂಪನ್ನಾ ಹ್ರೀನಿಷೇಧಾ ಯತವ್ರತಾಃ ।
ವಿರಾಟಸ್ಯ ಮಹಾತ್ಮಾನಃ ಪರಿಕ್ಲೇಶವಿನಾಶನಾಃ ॥೫೧॥

ಸ್ಥಿತಾಃ ಸಮಕ್ಷಂ ತೇ ಸರ್ವೇ ತತ್ರಥ ಭೀಮೋಽಭ್ಯಭಾಷತ ॥೫೨॥

ಮಹಾಬಲರಾದ ಪಾಂಡುಪುತ್ರರು ಸುಶರ್ಮನನ್ನು ಗೆದ್ದು ಎಲ್ಲಾ ಗೋವುಗಳನ್ನು ಹಿಂದಿರುಗಿಸಿ, ಎಲ್ಲಾ ಗೋಧನವನ್ನು ತೆಗೆದುಕೊಂಡು ತಮ್ಮ ಬಾಹುಬಲ ಸಂಪನ್ನರಾಗಿ ದಾಕ್ಷಿಣ್ಯವುಳ್ಳವರಾಗಿ ತಮ್ಮ ರಥದಲ್ಲಿ ತಾವು ಇರುವವರಾಗಿ ವಿರಾಟನ ಕ್ಲೇಶಗಳನ್ನು ಪರಿಹಾರ ಮಾಡಿ ಮಹಾತ್ಮರಾದ ಅವರೆಲ್ಲರೂ ನಿಂತಿರಲು ಆಗ ಭೀಮಸೇನನು ಮಾತನಾಡಿದನು.

ನಾಯಂ ಪಾಪಸಮಾಚಾರೋ ಮತ್ತೋ ಜೀವಿತುಮರ್ಹತಿ ।
ಕಿಂ ನು ಶಕ್ಯಂ ಮಯಾ ಕರ್ತುಂ ಯದ್ ರಾಜಾ ಸತತಂ ಘೃಣೀ ॥೫೩॥

ಈ ಪಾಪಕರ್ಮವನ್ನು ಆಚರಿಸುವ ಸುಶರ್ಮನು ನನ್ನಿಂದ ಬದುಕಲು ಯೋಗ್ಯನಲ್ಲ. ರಾಜನಾದ ಯುಧಿಷ್ಠಿರನು ಯಾವಾಗಲೂ ದಯಾಳುವಾಗಿದ್ದಾನೆ. ನಾನು ಏನು ಮಾಡಲು ಸಾಧ್ಯ ? (ಎಂದು ಹೇಳಿದನು).

ಗಲೇ ಗೃಹೀತ್ವಾ ರಾಜಾನಮಾನೀಯ ವಿವಶಂ ವಶಮ್ ।
ತತ ಏನಂ ವಿಚೇಷ್ಟಂತಂ ಬದ್ಧ್ವಾ ಪಾರ್ಥೋ ವೃಕೋದರಃ ॥೫೪॥

ರಥಮಾರೋಪಯಾಮಾಸ ವಿಸಂಜ್ಞಂ ಪಾಂಸುಕುಂಠಿತಮ್ ॥೫೫॥

ತನ್ನ ವಶನಾಗಿ ವಿವಶನಾಗಿದ್ದ ಸುಶರ್ಮರಾಜನನ್ನು ಕಂಠದಲ್ಲಿ ಹಿಡಿದು ಒದ್ದಾಡುತ್ತಿದ್ದ ಅವನನ್ನು ಬಂಧಿಸಿ ಕುಂತೀಪುತ್ರನಾದ ವೃಕೋದರನು ಸಂಜ್ಞೆಯನ್ನು ಕಳೆದುಕೊಂಡು ಧೂಳುಗಳಿಂದ ಆವೃತನಾಗಿದ್ದ ಅವನನ್ನು ತನ್ನ ರಥದಲ್ಲಿ ಏರಿಸಿದನು.

ಅಭ್ಯೇತ್ಯ ರಣಮಧ್ಯಸ್ಥಮಭ್ಯಾಗಚ್ಛದ್ ಯುಧಿಷ್ಠಿರಮ್ ।
ದರ್ಶಯಾಮಾಸ ಭೀಮಸ್ತು ಸುಶರ್ಮಾಣಂ ನರಾಧಿಪಮ್ ॥೫೬॥

ಪ್ರೋವಾಚ ಪುರುಷವ್ಯಾಘ್ರೋ ಭೀಮಮಾಹವಶೋಭಿನಮ್ ॥೫೭॥

ತಂ ರಾಜಾ ಪ್ರಾಹಸದ್ ದೃಷ್ಟ್ವಾ ಮುಚ್ಯತಾಂ ವೈ ನರಾಧಮಃ ॥೫೮॥

ಅವನು ರಣಮಧ್ಯದಲ್ಲಿದ್ದ ಯುಧಿಷ್ಠಿರನನ್ನು ಸಮೀಪಿಸಿ ಸುಶರ್ಮರಾಜನನ್ನು ಯುಧಿಷ್ಠಿರನಿಗೆ ತೋರಿಸಿದನು. ಪುರುಷವ್ಯಾಘ್ರನಾದ ಧರ್ಮರಾಜನು ಸುಶರ್ಮನನ್ನು ನೋಡಿ ನಕ್ಕು ಭೀಮಸೇನನನ್ನು ಕುರಿತು ಈ ನರಾಧಮನನ್ನು ಬಿಡುಗಡೆ ಮಾಡು ಎಂದು ಹೇಳಿದನು.

ವೈಶಂಪಾಯನಃ

ಏವಮುಕ್ತೋಽಬ್ರವೀದ್ ಭೀಮಃ ಸುಶರ್ಮಾಣಂ ಮಹಾಬಲಮ್ ॥

ಜೀವಿತುಂ ಚೇಚ್ಛಸೇ ಮೂಢ ಹೇತುಂ ಮೇ ಗದತಃ ಶೃಣು ।
ದಾಸೋಽಸ್ಮೀತಿ ತ್ವಯಾ ವಾಚ್ಯಂ ಸಂಸತ್ಸು ಚ ಸಭಾಸು ಚ ॥೬೦॥

ಏವಂ ತೇ ಜೀವಿತಂ ದದ್ಯಾಮೇಷ ಯುದ್ಧಜಿತೋ ವಿಧಿಃ ॥೬೧॥

ಹೀಗೆ ಹೇಳಲ್ಪಟ್ಟ ಭೀಮಸೇನನು ಮಹಾಬಲನಾದ ಸುಶರ್ಮನನ್ನು ಕುರಿತು ಮೂಢನೇ, ನೀನು ಬದುಕಲು ಇಚ್ಛಿಸುತ್ತಿದ್ದೀಯೆ. ಬದುಕಬೇಕಾದರೆ ಷರತ್ತನ್ನು ಹೇಳುತ್ತೇನೆ, ಕೇಳು. ನಾನು ಯುಧಿಷ್ಠಿರನ ದಾಸನಾಗಿದ್ದೇನೆ ಎಂದು ಸಭೆಯಲ್ಲಿಯೂ ಸಂಸತ್ತಿನಲ್ಲಿಯೂ ಹೇಳಬೇಕು. ಹಾಗಾದರೆ ಮಾತ್ರ ನಿನಗೆ ಜೀವವನ್ನು ಕೊಡುತ್ತೇನೆ. ಇದು ಯುದ್ಧದಲ್ಲಿ ಪರಾಜಿತರಾದವರು ಅನುಸರಿಸಬೇಕಾದ ನೀತಿ ಎಂದು ಹೇಳಿದನು.

ವೈಶಂಪಾಯನಃ

ತಮುವಾಚ ತತೋ ಜ್ಯೇಷ್ಠೋ ಭ್ರಾತಾ ಸಪ್ರಣಯಂ ವಚಃ ॥೬೨॥

ಮುಂಚ ಮುಂಚಾಧಮಾಚಾರಂ ಪ್ರಮಾಣಂ ಯದಿ ತೇ ವಯಮ್ ।
ದಾಸಭಾವಂ ಗತೋ ಹ್ಯೇಷ ವಿರಾಟಸ್ಯ ಮಹೀಪತೇಃ ॥೬೩॥

ಅದಾಸೋ ಗಚ್ಛ ಮುಕ್ತೋಽಸಿ ಮೈವಂ ಕಾರ್ಷೀಃ ಕದಾಚನ ॥೬೪॥

ವೈಶಂಪಾಯನ– ಆಗ ಭೀಮಸೇನನ ಅಣ್ಣನಾದ ಯುಧಿಷ್ಠಿರನು ಭೀಮಸೇನನನ್ನು ಕುರಿತು ಪ್ರೀತಿಪೂರ್ವಕವಾಗಿ, ನನ್ನ ಮೇಲೆ ಗೌರವವಿದ್ದರೆ ಈ ಅಧಮಕಾರ್ಯವನ್ನು ಮಾಡುವವನನ್ನು ಬಿಟ್ಟುಬಿಡು, ಬಿಟ್ಟುಬಿಡು. ಇವನು ವಿರಾಟನ ದಾಸನಾಗಿದ್ದಾನೆ. ಎಲೈ ಸುಶರ್ಮನೇ, ನೀನು ದಾಸಭಾವದಿಂದ ಮುಕ್ತನಾಗಿದ್ದೀಯೆ. ಹೋಗು, ಇನ್ನೊಮ್ಮೆ ಇಂತಹ ಕೆಲಸವನ್ನು ಮಾಡಬೇಡ ಎಂದು ಹೇಳಿದನು.

ವೈಶಂಪಾಯನಃ

ಏವಮುಕ್ತೇ ತು ಸವ್ರೀಡಃ ಸುಶರ್ಮಾऽಸೀದಧೋಮುಖಃ ॥೬೫॥

ಮೋಚಯಿತ್ವಾ ವಿರಾಟಂ ತು ಪಾಂಡವಾಸ್ತೇ ಹತದ್ವಿಷಃ ।
ಸ್ವಬಾಹುಬಲಸಂಪನ್ನಾ ಹ್ರೀನಿಷೇಧಾ ಯತವ್ರತಾಃ ॥೬೬॥

ಸಂಗ್ರಾಮಶಿರಸೋ ಮಧ್ಯೇ ತಾಂ ರಾತ್ರಿಂ ಸುಖಿನೋऽವಸನ್ ॥೬೭॥

ವೈಶಂಪಾಯನ– ಯುಧಿಷ್ಠಿರನು ಹೀಗೆ ಹೇಳುತ್ತಿರಲು ಸುಶರ್ಮನು ನಾಚಿಕೆಯಿಂದ ತಲೆ ತಗ್ಗಿಸಿದನು. ತಮ್ಮ ಬಾಹುಬಲದಿಂದ ಸಂಪನ್ನರಾದ ದಾಕ್ಷಿಣ್ಯಸ್ವಭಾವದ ವ್ರತಾಚರಣ ನಿರತರಾದ ಪಾಂಡವರು ಶತ್ರುಗಳ ಸಂಹಾರವನ್ನು ಮಾಡಿ ವಿರಾಟನನ್ನೂ ಬಂಧನದಿಂದ ಬಿಡುಗಡೆಗೊಳಿಸಿ ರಣಾಂಗಣ ಮಧ್ಯದಲ್ಲಿಯೇ ಆ ರಾತ್ರಿಯನ್ನು ಸುಖವಾಗಿ ಕಳೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಚತುಸ್ತ್ರಿಂಶೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ಮೂವತ್ತೈದನೆಯ ಅಧ್ಯಾಯ

ಯುಧಿಷ್ಠಿರನ ಪ್ರೇರಣೆಯಂತೆ ವಿರಾಟನ ದೂತರಿಂದ ನಗರದಲ್ಲಿ ವಿರಾಟನ ಜಯಘೋಷಣೆ

ವೈಶಂಪಾಯನಃ

ತತೋ ವಿರಾಟಃ ಕೌಂತೇಯಾನತಿಮಾನುಷವಿಕ್ರಮಾನ್ ।
ಅರ್ಚಯಾಮಾಸ ವಿತ್ತೇನ ಮಾನೇನ ಚ ಮಹಾರಥಾನ್ ॥೧॥

ವಚಸಾ ಚೈವ ಸಾಂತ್ವೇನ ಸ್ನೇಹೇನ ಚ ಮುದಾऽನ್ವಿತಃ ॥೨॥

ವೈಶಂಪಾಯನ– ಅನಂತರ ವಿರಾಟನು ಮನುಷ್ಯರಿಗೆ ಮೀರಿದ ಪರಾಕ್ರಮವುಳ್ಳ ಮಹಾರಥರಾದ ಕೌಂತೇಯರನ್ನು ಧನದಿಂದಲೂ, ಸನ್ಮಾನದಿಂದಲೂ, ವಿಧವಿಧವಾದ ಮಾತುಗಳಿಂದಲೂ, ಸ್ನೇಹದಿಂದಲೂ, ಸಂತೋಷದಿಂದಲೂ ಕೂಡಿದವನಾಗಿ ಅರ್ಚಿಸಿದನು.

ಯಥೈವ ಮಮ ರತ್ನಾನಿ ಯುಷ್ಮಾಕಂ ತಾನಿ ವೈ ತಥಾ ।
ಕಾರ್ಯಂ ಕುರುತ ತೈಃ ಸರ್ವೈರ್ಯಥಾಕಾಮಂ ಯಥಾಸುಖಮ್ ॥೩॥

ದದಾಮ್ಯಲಂಕೃತಾಃ ಕನ್ಯಾ ವಸೂನಿ ವಿವಿಧಾನಿ ಚ ।
ಮನಸಾ ಚಾಪ್ಯಭಿಪ್ರೇತಂ ಯದ್ ವಃ ಶತ್ರುನಿಬರ್ಹಣಾಃ ॥೪॥

ಯುಷ್ಮಾಕಂ ವಿಕ್ರಮಾದದ್ಯ ಮುಕ್ತೋऽಹಂ ಸ್ಫೀತಮಾನಿತಿ ।
ತಸ್ಮಾದ್ ಭವಂತೋ ಮತ್ಸ್ಯಾನಾಮೀಶ್ವರಾಃ ಸರ್ವ ಏವ ಹಿ ॥೫॥

ಈ ರತ್ನಗಳು ಹೇಗೆ ನನ್ನವೋ, ಅದರಂತೆ ನಿಮ್ಮವೂ ಆಗಿವೆ. ನಿಮಗೆ ಇಷ್ಟಬಂದಂತೆ ನಿಮಗೆ ಸುಖವಾಗುವಂತೆ ಅವುಗಳಿಂದ ಬೇಕಾದ ಕಾರ್ಯಗಳನ್ನು ಮಾಡಿ. ಎಲೈ ಶತ್ರುಸಂಹಾರಕರೇ, ಅಲಂಕೃತರಾದ ಕನ್ಯೆಯರನ್ನೂ, ವಿಧವಿಧವಾದ ಧನವನ್ನೂ ಮತ್ತು ನಿಮ್ಮ ಮನಸ್ಸಿಗೆ ಇಷ್ಟವಾದುದನ್ನೂ ಕೊಡುವೆನು. ಈ ದಿನ ನಿಮ್ಮ ಪರಾಕ್ರಮದಿಂದ ನಾನು ಕ್ಷೇಮದಿಂದ ಬಿಡುಗಡೆಯನ್ನು ಹೊಂದಿದ್ದೇನೆ. ಆದ್ದರಿಂದ ನೀವೆಲ್ಲರೂ ಮತ್ಸ್ಯದೇಶಕ್ಕೆ ಒಡೆಯರಾದವರು.

ವೈಶಂಪಾಯನಃ

ತಂ ತಥಾವಾದಿನಂ ಸರ್ವೇ ಕೌರವೇಯಾಃ ಪೃಥಕ್ ಪೃಥಕ್ ।
ಊಚುಃ ಪ್ರಹೃಷ್ಟಮನಸೋ ಯುಧಿಷ್ಠಿರಪುರೋಗಮಾಃ ॥೬॥

ಪ್ರತಿನಂದಾಮಹೇ ವಾಚಂ ಸರ್ವಥೈವ ವಿಶಾಂಪತೇ ।
ಏತೇನೈವಾದ್ಯ ಪ್ರೀತಾಃ ಸ್ಮೋ ಯತ್ ತ್ವಂ ಮುಕ್ತೋಽಸಿ ಶತ್ರುಭಿಃ ॥೭॥

ಯತ್ ತ್ವಂ ಮುಕ್ತೋಽಸಿ ಶತ್ರುಭ್ಯೋ ಹ್ಯೇತತ್ ಕಾರ್ಯಂ ಹಿತಂ ಹಿ ನಃ ।
ನ ಕಿಂಚಿದ್ ಕಾರ್ಯಮಸ್ಮಾಕಂ ನ ಧನಂ ಮೃಗಯಾಮಹೇ ॥೮॥

ವೈಶಂಪಾಯನ– ಹಾಗೆ ಮಾತನಾಡುತ್ತಿದ್ದ ವಿರಾಟನನ್ನು ಕುರಿತು ಯುಧಿಷ್ಠಿರ ಮೊದಲಾದ ಪಾಂಡವರು ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ಪ್ರತ್ಯೇಕವಾಗಿ ಅವನಿಗೆ ಹೇಳಿದರು– 'ಎಲೈ ರಾಜನೇ, ನಿನ್ನ ಮಾತುಗಳನ್ನು ನಾವು ಎಲ್ಲಾ ರೀತಿಯಿಂದಲೂ ಅಭಿನಂದಿಸುತ್ತೇವೆ. ನೀನು ಶತ್ರುಗಳಿಂದ ಮುಕ್ತನಾಗಿರುವುದರಿಂದಲೇ ನಾವು ಈ ದಿನ ಸಂತೋಷಗೊಂಡಿದ್ದೇವೆ. ನೀನು ಶತ್ರುಗಳಿಂದ ಮುಕ್ತನಾಗಿರುವುದು ನಮಗೆ ಅತ್ಯಂತ ಪ್ರಿಯವಾದ ಕಾರ್ಯ. ನಮಗೆ ಬೇರೆ ಏನೂ ಆಗಬೇಕಾಗಿಲ್ಲ. ನಿನ್ನ ಧನವನ್ನು ನಾವು ಅಪೇಕ್ಷಿಸುವುದಿಲ್ಲ'.

ವೈಶಂಪಾಯನಃ

ಅಥಾಬ್ರವೀತ್ ಪ್ರೀತಮನಾ ಮತ್ಸ್ಯರಾಜೋ ಯುಧಿಷ್ಠಿರಮ್ ।
ಪುನರೇವ ಮಹಾಬಾಹುರ್ವಿರಾಟೋ ರಾಜಸತ್ತಮಃ ॥೯॥

ವೈಶಂಪಾಯನ– ಆಗ ಸಂತೋಷಗೊಂಡ ಮನಸ್ಸಿನಿಂದ ಮಹಾಬಾಹುವೂ, ರಾಜಶ್ರೇಷ್ಠನೂ, ಮತ್ಸ್ಯರಾಜನೂ ಆದ ವಿರಾಟನು ಪುನಃ ಯುಧಿಷ್ಠಿರನನ್ನು ಕುರಿತು ಮಾತನಾಡಿದನು.

ಏಹಿ ತ್ವಾಮಭಿಷೇಕ್ಷ್ಯಾಮಿ ಮತ್ಸ್ಯರಾಜಸ್ತು ನೋ ಭವಾನ್ ॥೧೦॥

ಮನಸಾ ಚಾಪ್ಯಭಿಪ್ರೇತಂ ಯತ್ ತೇ ಶತ್ರುನಿಬರ್ಹಣ ।
ತತ್ ತುಭ್ಯಂ ಸಂಪ್ರದಾಸ್ಯಾಮಿ ಸರ್ವಮರ್ಹತಿ ನೋ ಭವಾನ್ ॥೧೧॥

ಬಾ, ನಾನು ನಿನಗೆ ಅಭಿಷೇಕವನ್ನು ಮಾಡುತ್ತೇನೆ. ನೀನೇ ನಮ್ಮ ಮತ್ಸ್ಯದೇಶದ ಅಧಿಪತಿ. ಎಲೈ ಶತ್ರುಸಂಹಾರಕನೇ, ನಿನ್ನ ಮನಸ್ಸಿಗೆ ಯಾವುದು ಅಭಿಪ್ರೇತವಾಗಿದೆಯೋ ಅದನ್ನು ನಿನಗೆ ಕೊಡುವೆನು. ನೀನು ನಮ್ಮಿಂದ ಎಲ್ಲವನ್ನೂ ಸ್ವೀಕರಿಸುವುದಕ್ಕೆ ಅರ್ಹನಾಗಿದ್ದೀಯೆ.

ರತ್ನಾನಿ ಗಾಃ ಸುವರ್ಣಂ ಚ ಮಣಿಮುಕ್ತಮಥಾಪಿ ಚ ।
ವೈಯಾಘ್ರಪದ್ಯ ವಿಪ್ರೇಂದ್ರ ಸರ್ವತ್ಥೈವ ನಮೋಽಸ್ತು ತೇ ॥೧೨॥

ರತ್ನಗಳು, ಗೋವುಗಳು, ಸುವರ್ಣ, ಮಣಿಗಳು, ಮುತ್ತುಗಳು (ಎಲ್ಲದಕ್ಕೂ ಅರ್ಹನಾಗಿದ್ದೀಯೆ). ಎಲೈ ವೈಯಾಘ್ರಪದ್ಯನಾದ ಬ್ರಾಹ್ಮಣಶ್ರೇಷ್ಠನೇ, ನಿನಗೆ ಸರ್ವರೀತಿಯಿಂದಲೂ ನನ್ನ ನಮಸ್ಕಾರ.

ತ್ವತ್ಪತೇ ಹ್ಯದ್ಯ ಪಶ್ಯಾಮಿ ರಾಜ್ಯಮಾತ್ಮಾನಮೇವ ಚ ।
ಯತಶ್ಚ ಜಾತಃ ಸಂರಂಭಃ ಸ ಚ ಶತ್ರುರ್ವಶಂ ಗತಃ ॥೧೩॥

ನಿನ್ನ ಅನುಗ್ರಹದಿಂದ ನಾನು ಈ ದಿನ ನನ್ನ ರಾಜ್ಯವನ್ನು ಮತ್ತು ನನ್ನನ್ನು ನೋಡುತ್ತಿದ್ದೇನೆ. ಯಾವ ಸುಶರ್ಮನಿಂದ ಕದನ ಉಂಟಾಯಿತೋ ಅಂತಹ ಶತ್ರುವು ವಶನಾಗಿದ್ದಾನೆ.

ವೈಶಂಪಾಯನಃ

ತತೋ ಯುಧಿಷ್ಠಿರೋ ಮಾತ್ಸ್ಯಂ ಪುನರೇವಾಬ್ರವೀದ್ ವಚಃ ॥೧೪॥

ಪ್ರತಿನಂದಾಮಿ ತೇ ವಾಕ್ಯಂ ಮನೋಜ್ಞಂ ಮಾತ್ಸ್ಯ ಭಾಷಿತಮ್ ।
ಆನೃಶಂಸ್ಯಪರೋ ನಿತ್ಯಂ ಸುಮುಖಃ ಸತತಂ ಭವ ॥೧೫॥

ವೈಶಂಪಾಯನ– ಆಗ ಯುಧಿಷ್ಠಿರನು ವಿರಾಟನನ್ನು ಕುರಿತು ಪುನಃ ಎಲೈ ಮತ್ಸ್ಯರಾಜನೇ, ನಿನ್ನ ಮನೋಹರವಾದ ಮಾತುಗಳನ್ನು ನಾನು ಅಭಿನಂದಿಸುತ್ತೇನೆ. ಯಾವಾಗಲೂ ದಯೆಯಿಂದ ಕೂಡಿದವನಾಗಿದ್ದು ಸುಮುಖನಾಗಿರು ಎಂದು ಹೇಳಿದನು.

ವೈಶಂಪಾಯನಃ

ಪುನರೇವ ವಿರಾಟಶ್ಚ ರಾಜಾ ಕಂಕಮಭಾಷತ ॥೧೬॥

ಅಹೋ ಸೂದಸ್ಯ ಕರ್ಮಾಣಿ ವಲಲಸ್ಯ ದ್ವಿಜೋತ್ತಮ ।
ಸೋಽಹಂ ಶೂದ್ರೇಣ ಸಂಗ್ರಾಮೇ ವಲಲೇನಾಭಿರಕ್ಷಿತಃ ॥೧೭॥

ವೈಶಂಪಾಯನ– ಪುನಃ ವಿರಾಟರಾಜನು ಕಂಕನನ್ನು ಕುರಿತು ಮಾತನಾಡಿದನು– 'ಎಲೈ ದ್ವಿಜೋತ್ತಮನೇ, ಸೂದನಾದ ವಲಲನ ಕರ್ಮಗಳು ಎಷ್ಟು ಆಶ್ಚರ್ಯಕರವಾದವು! ಅಂತಹ ನಾನು ಈ ದಿನ ಯುದ್ಧದಲ್ಲಿ ಒಬ್ಬ ಶೂದ್ರನಿಂದ ರಕ್ಷಿಸಲ್ಪಟ್ಟಿದ್ದೇನೆ'.

ತ್ವತ್ಕೃತೇ ಸರ್ವಮೇವೈತದುಪಪನ್ನಂ ಮಮಾನಘ ।
ವರಂ ವೃಣೀಷ್ವ ಭದ್ರಂ ತೇ ಬ್ರೂಹಿ ಕಿಂ ಕರವಾಣಿ ತೇ ॥೧೮॥

ಎಲೈ ಅನಘನೇ, ಇವೆಲ್ಲವೂ ನಿನ್ನ ನಿಮಿತ್ತದಿಂದ ಉಂಟಾಗಿವೆ. ನಿನಗೆ ಮಂಗಳವಾಗಲಿ, ವರವನ್ನು ಕೇಳು. ನಾನು ನಿನಗೆ ಏನನ್ನು ಮಾಡಲಿ ಎಂದು ಹೇಳು.

ದದಾಮಿ ತೇ ಮಹಾಪ್ರೀತ್ಯಾ ರತ್ನಾನ್ಯುಚ್ಚಾವಚಾನಿ ಚ ।
ಶಯನಾಸನಯಾನಾನಿ ಕನ್ಯಾಶ್ಚ ಸಮಲಂಕೃತಾಃ ॥೧೯॥

ನಾನು ನಿನಗೆ ಸಂತೋಷದಿಂದ ಶ್ರೇಷ್ಠವಾದ ಮತ್ತು ಕನಿಷ್ಟವಾದ ರತ್ನಗಳನ್ನೂ, ಶಯನ ಆಸನ ಮತ್ತು ವಾಹನಗಳನ್ನೂ, ಅಲಂಕೃತರಾದ ಕನ್ಯೆಯರನ್ನೂ ಕೊಡುವೆನು.

ಹಸ್ತ್ಯಶ್ವರಥಸಂಘಾಂಶ್ಚ ರಾಷ್ಟ್ರಾಣಿ ವಿವಿಧಾನಿ ಚ ।
ಏತಾನಿ ಚ ಮಮ ಪ್ರೀತ್ಯಾ ಪ್ರತಿಗೃಹ್ಣೀಷ್ವ ಸುವ್ರತ ॥೨೦॥

ಗಜಾಶ್ವರಥ ಸಮೂಹಗಳನ್ನೂ, ಅನೇಕ ಪಟ್ಟಣಗಳನ್ನೂ ಕೊಡುವೆನು. ಎಲೈ ಸುವ್ರತನೇ, ನನ್ನ ಮೇಲಿನ ಪ್ರೀತಿಯಿಂದ ಈ ವಸ್ತುಗಳನ್ನು ಸ್ವೀಕರಿಸುವವನಾಗು.

ವೈಶಂಪಾಯನಃ

ತಂ ತಥಾವಾದಿನಂ ತತ್ರ ಕೌರವ್ಯಃ ಪ್ರತ್ಯಭಾಷತ ॥೨೧॥
ಏಷೈವ ತು ಮಮ ಪ್ರೀತಿರ್ಯತ್ ತ್ವಂ ಮುಕ್ತೋಽಸಿ ಶತ್ರುಭಿಃ ।
ಪ್ರತೀಪಸ್ತೇ ಪುನಸ್ತುಷ್ಟಃ ಪ್ರವೇಕ್ಷ್ಯತಿ ತದಾಽನಘ ॥೨೨॥

ದಾರೈಃ ಪುತ್ರೈಶ್ಚ ಸಂಶ್ಲಿಷ್ಟಃ ಸಾ ಹಿ ಪ್ರೀತಿರ್ಮಮಾತುಲಾ ॥೨೩॥

ಸುಶರ್ಮಾಣಂ ತು ರಾಜೇಂದ್ರ ಸಭೃತ್ಯಬಲವಾಹನಮ್ ।
ವಿಸರ್ಜಯ ನೃಪಶ್ರೇಷ್ಠ ಏತದೇವ ವರಂ ವೃಣೇ ॥೨೪॥

ವೈಶಂಪಾಯನ– ಹಾಗೆ ಹೇಳುತ್ತಿದ್ದ ವಿರಾಟನನ್ನು ಕುರಿತು ಕೌರವ್ಯನಾದ ಯುಧಿಷ್ಠಿರನು ಪುನಃ ಮಾತನಾಡಿದನು– ನೀನು ಶತ್ರುಗಳಿಂದ ಮುಕ್ತನಾಗಿರುವುದೇ ನನಗೆ ದೊಡ್ಡ ಸಂತೋಷದ ವಿಷಯ. ಎಲೈ ಅನಘನೇ, ನಿನಗೆ ಶತ್ರುವಾದವನು ಪುನಃ ಸಂತೋಷದಿಂದ ತನ್ನ ಮನೆಯನ್ನು ಪ್ರವೇಶಿಸಿ ತನ್ನ ಹೆಂಡತಿ ಮಕ್ಕಳೊಡನೆ ಸಮಾಗಮವನ್ನು ಹೊಂದುತ್ತಾನೆ. ಅದೇ ನನಗೆ ಬಹಳ ಸಂತೋಷಕ್ಕೆ ಕಾರಣವಾದುದು. ಎಲೈ ರಾಜೇಂದ್ರನೇ, ನೃಪಶ್ರೇಷ್ಠನೇ, ಭೃತ್ಯಬಲವಾಹನ ಸಹಿತನಾದ ಸುಶರ್ಮನನ್ನು ಬಿಡುಗಡೆ ಮಾಡು. ನಾನು ಇದೇ ವರವನ್ನು ಕೇಳುತ್ತೇನೆ.

ವೈಶಂಪಾಯನಃ

ಏವಮುಕ್ತಸ್ತು ಕಂಕೇನ ವಿರಾಟೋ ರಾಜಸತ್ತಮಃ ।
ಪ್ರತ್ಯುವಾಚ ತತಃ ಕಂಕಂ ಸುಶರ್ಮಾ ಯಾತು ಚೇಷ್ಟತಃ ॥೨೫॥

ವೈಶಂಪಾಯನ– ಹೀಗೆ ಕಂಕನಿಂದ ಹೇಳಲ್ಪಟ್ಟ ರಾಜಶ್ರೇಷ್ಠನಾದ ವಿರಾಟನು ಕಂಕನನ್ನು ಕುರಿತು ಸುಶರ್ಮನು ಇಷ್ಟಬಂದ ಕಡೆಗೆ ಹೋಗಲಿ ಎಂದು ಹೇಳಿದನು.

ಯುಧಿಷ್ಠಿರಃ

ಗಚ್ಛಂತು ದೂತಾಸ್ತ್ವರಿತಾ ನಗರಂ ತವ ಪಾರ್ಥಿವ ।
ಸುಹೃದಾಂ ಪ್ರಿಯಮಾಖ್ಯಾತುಂ ಘೋಷಯಂತು ಚ ತೇ ಜಯಮ್ ॥

ಎಲೈ ರಾಜನೇ, ನಿನ್ನ ದೂತರು ಸುಹೃಜ್ಜನರಿಗೆ ಪ್ರಿಯವನ್ನು ಹೇಳಲು ಶೀಘ್ರವಾಗಿ ನಗರಕ್ಕೆ ಹೋಗಲಿ ಮತ್ತು ನಿನ್ನ ವಿಜಯವನ್ನು ಘೋಷಣೆ ಮಾಡಲಿ.

ವೈಶಂಪಾಯನಃ

ತತಸ್ತದ್ವಚನಾನ್ಮಾತ್ಸ್ಯೋ ದೂತಾನ್ ರಾಜಾ ಸಮಾದಿಶತ್ ॥೨೭॥

ಆಚಕ್ಷಧ್ವಂ ಪುರಂ ಗತ್ವಾ ಸಂಗ್ರಾಮೇ ವಿಜಯಂ ಮಮ ।
ಕುಮಾರ್ಯಃ ಸಮಲಂಕೃತ್ಯ ಪರ್ಯಾಗಚ್ಛಂತು ಮೇ ಪುರಾತ್ ॥೨೮॥

ವಾದಿತ್ರಾಣಿ ಚ ಸರ್ವಾಣಿ ಗಣಿಕಾಶ್ಚ ಸ್ವಲಂಕೃತಾಃ ।
ಪ್ರತ್ಯಾಯಂತು ಚ ಮೇ ಶೀಘ್ರಂ ನಾಗರಾಃ ಸರ್ವ ಏವ ಹಿ ॥೨೯॥

ವೈಶಂಪಾಯನ– ಆಗ ಯುಧಿಷ್ಠಿರನ ಮಾತಿನಂತೆ ಮತ್ಸ್ಯರಾಜನಾದ ವಿರಾಟನು ದೂತರಿಗೆ ಆದೇಶವನ್ನು ನೀಡಿದನು– ನಗರಕ್ಕೆ ಹೋಗಿ ಯುದ್ಧದಲ್ಲಿ ನನ್ನ ವಿಜಯವನ್ನು ಘೋಷಣೆ ಮಾಡಿ. ಕುಮಾರಿಯರು ಅಲಂಕಾರವನ್ನು ಮಾಡಿಕೊಂಡು ನನ್ನನ್ನು ಎದುರುಗೊಳ್ಳಲು ಪಟ್ಟಣದಿಂದ ಹೊರಗೆ ಬರಲಿ. ಎಲ್ಲ ವಾದ್ಯಗಳು, ಅಲಂಕೃತವಾದ ಗಣಿಕೆಯರು ಮತ್ತು ಎಲ್ಲ ನಾಗರಿಕರು ಶೀಘ್ರವಾಗಿ ನನ್ನನ್ನು ಎದುರುಗೊಳ್ಳಲು ಬರಲಿ.

ವೈಶಂಪಾಯನಃ

ಏವಮುಕ್ತಾಸ್ತಥಾ ದೂತಾ ರಾತ್ರೌ ಯಾತ್ವಾ ತು ಕೇವಲಮ್ ।
ತತೋಽಂತರಾ ವೈ ಉಷಿತಾ ದೂತಾ ಶೀಘ್ರಾನುಯಾಯಿನಃ ॥೩೦॥

ನಗರಂ ಪ್ರಾವಿಶಂಸ್ತೇ ವೈ ಸಮ್ಯಗಭ್ಯುದಿತೇ ರವೌ ॥೩೧॥

ವಿರಾಟನಗರಂ ಪ್ರಾಪ್ಯ ಶೀಘ್ರಂ ನಾಂದೀಮಘೋಷಯನ್ ।
ಪತಾಕೋತ್ತರಮಾಲಾಢ್ಯಂ ಪುರಮಪ್ರತಿಮಂ ಯಥಾ ॥೩೨॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಶೀಘ್ರಗಾಮಿಗಳಾದ ದೂತರು ರಾತ್ರಿಯಲ್ಲಿ ಹೊರಟು ಮಧ್ಯದಲ್ಲಿಯೇ ವಾಸ ಮಾಡಿದರು. ಅನಂತರ ಸೂರ್ಯೋದಯವಾಗುತ್ತಿರಲು ಅವರು ನಗರವನ್ನು ಪ್ರವೇಶಿಸಿದರು. ಅವರು ವಿರಾಟನಗರವನ್ನು ಪ್ರವೇಶಿಸಿ ಧ್ವಜಪತಾಕಾದಿಗಳಿಂದ ಪುರವು ಅಪ್ರತಿಮವಾಗಿ ಅಲಂಕರಿಸಲ್ಪಡುವಂತೆ ಸಂತೋಷ ವಾರ್ತೆಯನ್ನು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಪಂಚತ್ರಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ತತೋಽಪರದಿನೇ ಸರ್ವೇ ಭೀಷ್ಮದ್ರೋಣಪುರಸ್ಸರಾಃ ।
ರಹಿತಂ ಕೀಚಕೈರ್ಮಾತ್ಸ್ಯಂ ಶಕ್ಯಂ ಮತ್ವಾಽಭಿನಿರ್ಯಯುಃ ॥೩೬॥

ಮರುದಿನ ಕೀಚಕರ ಬಲವಿಲ್ಲದ ವಿರಾಟರಾಜನನ್ನು ಸುಲಭವಾಗಿ ಸೆರೆ ಹಿಡಿಯಲು ಶಕ್ಯವೆಂದು ಬಗೆದು ಭೀಷ್ಮದ್ರೋಣ ಮುಂತಾದವರೆಲ್ಲರೂ ಹೊರಟರು.

ಕೀಚಕಸ್ಯ ಹಿಡಿಂಬಸ್ಯ ಬಕಕಿರ್ಮೀರಯೋರಪಿ ।
ಜರಾಸಂಧಸ್ಯ ನೃಪತೇಃ ಕಂಸಾದೀನಾಂ ಚ ಸರ್ವಶಃ ॥೩೭॥

ನ ಬಾಧನಾಯ ಭೀಷ್ಮಾದ್ಯಾ ಅಪಿ ಶೇಕುಃ ಕಥಂಚನ ।
ತಸ್ಮಾತ್ತೇ ಕೀಚಕಂ ಶಾಂತಂ ಶ್ರುತ್ವಾ ಮಾತ್ಸ್ಯಂ ಯಯುರ್ಯುಧೇ ॥

ಕೀಚಕ ಹಿಡಿಂಬ ಬಕ ಕಿರ್ಮೀರ ಜರಾಸಂಧ ಕಂಸ ಮುಂತಾದವರನ್ನೆಲ್ಲ ನಿಗ್ರಹಿಸಲು ಭೀಷ್ಮ ಮುಂತಾದವರು ಯಾವ ರೀತಿಯಿಂದಲೂ ಶಕ್ತರಾಗಿರಲಿಲ್ಲ. ಅದರಿಂದ ಕೀಚಕ ಹತನಾದುದನ್ನು ಕೇಳಿ ಅವರು ವಿರಾಟನೊಡನೆ ಯುದ್ಧಕ್ಕೆ ಹೋದರು.

ಯತಿಷ್ಯೇ ರಕ್ಷಿತುಂ ಭೀಮಾದ್ ಧಾರ್ತರಾಷ್ಟ್ರಾನಿತಿ ಸ್ವಕಾಮ್ ।
ಸತ್ಯಾಂ ಕರ್ತುಂ ಪ್ರತಿಜ್ಞಾಂ ತು ಯಯೌ ದ್ರೋಣಃ ಸಪುತ್ರಕಃ ॥೩೯॥

ಕೌರವರನ್ನು ಭೀಮನಿಂದ ರಕ್ಷಿಸಲು ಯತ್ನಿಸುವನೆಂದು ತಾನು ಮಾಡಿದ ಪ್ರತಿಜ್ಞೆಯನ್ನು ಸತ್ಯವಾಗಿಸಲು ದ್ರೋಣ ಪುತ್ರಸಮೇತನಾಗಿ ಯುದ್ಧಕ್ಕೆ ಹೋದ.

ಯದಿ ಯುದ್ಧಾಯ ನಿರ್ಯಾಂತಿ ಜ್ಞಾತಾಃ ಸ್ಯುಃ ಪಾಂಡವಾಸ್ತದಾ ।
ನ ಚೇದ್ವಿರಾಟಮನತಂ ನಮಯಿಷ್ಯಾಮಹೇ ವಯಮ್ ॥೪೦॥

ಇತಿ ಮತ್ವಾ ವಿರಾಟಸ್ಯ ಜಗೃಹುರ್ಗಾಃ ಸಮಂತತಃ ॥೪೧॥

ಪಾಂಡವರು ಯುದ್ಧಕ್ಕೆ ಬಂದರೆ ಅವರ ಪತ್ತೆಯಾಗುವುದು. ಇಲ್ಲದಿದ್ದರೂ ನಮಗೆ ತಲೆಬಾಗದಿದ್ದ ವಿರಾಟನನ್ನು ಬಾಗಿಸುವೆವು ಎಂದು ಬಗೆದು ವಿರಾಟನ ಗೋವುಗಳನ್ನು ಎಲ್ಲೆಡೆಯಿಂದಲೂ ಆಕ್ರಮಿಸಿದರು.

★ ★ ★ ★

ಮೂವತ್ತಾರನೆಯ ಅಧ್ಯಾಯ

ದುರ್ಯೋಧನನಿಂದ ಉತ್ತರ ಗೋಗ್ರಹಣ.
ಗವಾಧ್ಯಕ್ಷನಿಂದ ಉತ್ತರನಿಗೆ ಆ ವಾರ್ತೆಯ ನಿವೇದನ.

ವೈಶಂಪಾಯನಃ

ಯಾತೇ ತ್ರಿಗರ್ತಾನ್ಮಾತ್ಸ್ಯೇ ತು ಪಶೂಂಸ್ತಾನ್ ಸ್ವಾನ್ ಪರೀಪ್ಸತಿ ।
ದುರ್ಯೋಧನಃ ಸಹಾಮಾತ್ಯೋ ವಿರಾಟಪುರಮಭ್ಯಗಾತ್ ॥೧॥

ವೈಶಂಪಾಯನ– ಸುಶರ್ಮನು ತ್ರಿಗರ್ತದೇಶಕ್ಕೆ ಹಿಂದಿರುಗಿ ವಿರಾಟನು ತನ್ನ ಪಶುಗಳನ್ನು ಹೊಂದುತ್ತಿರಲು ಮಂತ್ರಿಗಳಿಂದ ಕೂಡಿದ ದುರ್ಯೋಧನನು ವಿರಾಟನ ಪಟ್ಟಣಕ್ಕೆ ಬಂದನು.

ಭೀಷ್ಮದ್ರೋಣೌ ಚ ಕರ್ಣಶ್ಚ ಕೃಪೋಽಪಿ ಪರಮಾಸ್ತ್ರವಿತ್ ।
ದ್ರೌಣಿಶ್ಚ ಸೌಬಲಶ್ಚೈವ ತಥಾ ದುಃಶಾಸನಃ ಶಲಃ ॥೨॥

ವಿವಿಂಶತಿರ್ವಿಕರ್ಣಶ್ಚ ಚಿತ್ರಸೇನಶ್ಚ ವೀರ್ಯವಾನ್ ।
ದುಃಸಹೋ ದುರ್ಮುಖಶ್ಚೈವ ಏತೇ ಚಾನ್ಯೇ ಮಹಾರಥಾಃ ॥೩॥

ಸರ್ವೇ ಮತ್ಸ್ಯಾನುಪಾಗಮ್ಯ ವಿರಾಟಸ್ಯ ಮಹೀಪತೇಃ ।
ಗೋಪಾನ್ ವಿದ್ರಾವ್ಯ ತರಸಾ ಗೋಧನಂ ಜಹ್ರುರೋಜಸಾ ॥೪॥

ಭೀಷ್ಮದ್ರೋಣರು, ಕರ್ಣ, ಪರಮಾಸ್ತ್ರವೇತ್ತರಾದ ಕೃಪರು, ಅಶ್ವತ್ಥಾಮಾ, ಶಕುನಿ, ದುಃಶಾಸನ, ಶಲ, ವಿವಿಂಶತಿ, ವಿಕರ್ಣ, ಪರಾಕ್ರಮಿಯಾದ ಚಿತ್ರಸೇನ, ದುಃಸಹ, ದುರ್ಮುಖ ಇವರೂ ಮತ್ತು ಇನ್ನೂ ಬೇರೆ ಮಹಾರಥರೂ ಎಲ್ಲರೂ ಮತ್ಸ್ಯದೇಶಕ್ಕೆ ಬಂದು ವಿರಾಟರಾಜನ ಗೋಪಾಲರನ್ನು ಓಡಿಸಿ ತಮ್ಮ ಸಾಮರ್ಥ್ಯದಿಂದ ಶೀಘ್ರವಾಗಿ ವಿರಾಟನ ಗೋಧನವನ್ನು ಹಿಡಿದರು.

ಗವಾಂ ಶತಸಹಸ್ರಾಣಿ ಕುರವಃ ಕಾಲಯಂತಿ ಚ ।
ಮಹತಾ ರಥವಂಶೇನ ಪರಿಗೃಹ್ಯ ಸಮಂತತಃ ॥೫॥

ದೊಡ್ಡ ರಥಸಮೂಹಗಳಿಂದ ಗೋವುಗಳನ್ನು ಸುತ್ತುವರಿದು ಕೌರವರು ವಿರಾಟನ ಹತ್ತಾರು ಸಾವಿರ ಗೋವುಗಳನ್ನು ಅಟ್ಟಾಡಿದರು.

ಗೋಪಾಲಾನಾಂ ತು ರೋಷೇಣ ಹನ್ಯತಾಂ ವೈ ಮಹಾರಥೈಃ ।
ಆರಾವಃ ಸುಮಹಾನಾಸೀತ್ ಸಂಪ್ರಹಾರೇ ಭಯಂಕರೇ ॥೬॥

ಮಹಾರಥದಿಂದ ರೋಷದಿಂದ ಕೊಲ್ಲಲ್ಪಡುವವರ ಆಕ್ರಂದನವು ಆ ಭಯಂಕರವಾದ ಸಂಘರ್ಷದಲ್ಲಿ ಬಹಳ ದೊಡ್ಡದಾಗಿದ್ದಿತು.

ಗವಾಧ್ಯಕ್ಷಸ್ತು ಸಂತ್ರಸ್ತೋ ರಥಮಾಸ್ಥಾಯ ಸತ್ವರಃ ।
ಜಗಾಮ ನಗರಾಯೈವ ಪರಿಕ್ರೋಶಂಸ್ತದಾऽऽರ್ತವತ್ ॥೭॥

ಗವಾಧ್ಯಕ್ಷನಾದರೂ ಹೆದರಿ ಶೀಘ್ರವಾಗಿ ರಥವನ್ನು ಹೂಡಿ ದಾರಿಯಲ್ಲಿ ಆರ್ತನಂತೆ ಕಿರುಚಿಕೊಳ್ಳುತ್ತಾ ನಗರಕ್ಕೇ ಹೊರಟನು.

ಸಂಪ್ರವಿಶ್ಯ ಪುರಂ ರಾಜ್ಞೋ ನೃಪವೇಶ್ಮಾಭ್ಯಯಾತ್ ತತಃ ।
ಅವತೀರ್ಯ ರಥಾತ್ ತೂರ್ಣಮಾಖ್ಯಾತುಂ ಪ್ರವಿವೇಶ ಹ ॥೮॥

ಅವನು ರಾಜಧಾನಿಯನ್ನು ಸೇರಿ ಅಲ್ಲಿಂದ ಅರಮನೆಯ ಕಡೆಗೆ ಹೊರಟನು. ಶೀಘ್ರವಾಗಿ ರಥದಿಂದ ಇಳಿದು ವಿಷಯವನ್ನು ಹೇಳಲು ಅರಮನೆಯನ್ನು ಪ್ರವೇಶಿಸಿದನು.

ದೃಷ್ಟ್ವಾ ಭೂಮಿಂಜಯಂ ನಾಮ ಪುತ್ರಂ ಮಾತ್ಸ್ಯಸ್ಯ ಮಾನಿನಮ್ ।
ತಸ್ಮೈ ತತ್ ಸರ್ವಮಾಚಷ್ಟ ರಾಷ್ಟ್ರಸ್ಯ ಪಶುಕರ್ಷಣಮ್ ॥೯॥

ಮತ್ಸ್ಯರಾಜನ ಪುತ್ರನಾದ ಸಮ್ಮಾನಿತನಾದ ಭೂಮಿಂಜಯನನ್ನು (ಇವನೇ ಉತ್ತರ) ನೋಡಿ ಅವನಿಗೆ ರಾಷ್ಟ್ರದ ಪಶುಗಳ ಅಪಹಾರವೆಲ್ಲವನ್ನೂ ಹೇಳಿದನು.

ಗವಾಂ ಶತಸಹಸ್ರಾಣಿ ಕುರವಃ ಕಾಲಯಂತಿ ತೇ ।
ಪ್ರತಿಜೇತುಂ ಸಮುತ್ತಿಷ್ಠ ಗೋಧನಂ ರಾಷ್ಟ್ರವರ್ಧನಮ್ ॥೧೦॥

ನಿನ್ನ ಹತ್ತಾರುಸಾವಿರ ಗೋವುಗಳನ್ನು ಕುರುಗಳು ಅಟ್ಟಾಡುತ್ತಿದ್ದಾರೆ. ರಾಷ್ಟ್ರವರ್ಧನವಾದ ಗೋಧನವನ್ನು ಜಯಿಸಲು ಎದ್ದೇಳು.

ರಾಜಪುತ್ರ ಹಿತಪ್ರೇಪ್ಸುಃ ಕ್ಷಿಪ್ರಂ ನಿರ್ಯಾಹಿ ವೈ ಸ್ವಯಮ್ ।
ತ್ವಾಂ ಹಿ ಮಾತ್ಸ್ಯೋ ಮಹೀಪಾಲಃ ಶೂನ್ಯಪಾಲಮಿಹಾಕರೋತ್ ॥೧೧॥

ಎಲೈ ರಾಜಪುತ್ರನೇ, ರಾಜ್ಯದ ಹಿತವನ್ನು ಬಯಸಿ ಸ್ವತಃ ನೀನೇ ಬೇಗ ಹೊರಡುವವನಾಗು. ಏಕೆಂದರೆ ವಿರಾಟರಾಜನು ಇಲ್ಲಿ ನಿನ್ನನ್ನು ಶೂನ್ಯಪಾಲನನ್ನಾಗಿ ಮಾಡಿದ್ದಾನೆ (ರಾಜನು ರಾಜಧಾನಿಯಲ್ಲಿಲ್ಲದಿದ್ದಾಗ ರಾಜ್ಯಭಾರವನ್ನು ನೋಡಿಕೊಳ್ಳುವವನು ಶೂನ್ಯಪಾಲನೆಂದು ಕರೆಯಲ್ಪಡುತ್ತಾನೆ).

ತ್ವಾಂ ವೈ ಪರಿಷದೋ ಮನ್ಯೇ ಶ್ಲಾಘತೇ ಹಿ ನರಾಧಿಪಃ ।
ಪುತ್ರೋ ಮಮಾನುರೂಪಶ್ಚ ಶೂರಶ್ಚೇತಿ ಕುಲೋದ್ವಹಃ ॥೧೨॥

ಇಷ್ವಸ್ತ್ರನಿಪುಣೋ ಯೋದ್ಧಾ ಸರ್ವಶಸ್ತ್ರವಿಶಾರದಃ ।
ಸಮರ್ಥಃ ಸಮರೇ ಯೋದ್ಧುಂ ಕೌರವೈಃ ಸಹ ತಾದೃಶೈಃ ॥೧೩॥

ರಾಜನು ಸಭೆಯ ಮಧ್ಯದಲ್ಲಿ ನನ್ನ ಪುತ್ರನು ನನಗೆ ಅನುರೂಪನಾಗಿದ್ದಾನೆ. ಅವನು ಶೂರನೂ ಮತ್ತು ಕುಲೋದ್ವಹನೂ ಆಗಿದ್ದಾನೆ. ಧನುಸ್ಸಿನಲ್ಲಿಯೂ, ಅಸ್ತ್ರಗಳಲ್ಲಿಯೂ ನಿಪುಣನಾಗಿದ್ದಾನೆ. ಒಳ್ಳೆಯ ಯೋಧ. ಸರ್ವಶಸ್ತ್ರವಿಶಾರದ. ಅಂತಹ ಕೌರವರ ಜೊತೆಯಲ್ಲಿಯೂ ಯುದ್ಧವನ್ನು ಮಾಡಲು ಸಮರ್ಥನಾಗಿದ್ದಾನೆ ಎಂದು ನಿನ್ನನ್ನೇ ಹೊಗಳುತ್ತಾನೆ.

ತಸ್ಯ ತತ್ ಸತ್ಯಮೇವಾಸ್ತು ಮನುಷ್ಯೇಂದ್ರಸ್ಯ ಭಾಷಿತಮ್ ।
ಜಯಶ್ಚ ನಿಯತೋ ಯುದ್ಧೇ ಕೌರವಾ ಯಾಂತು ವಿದ್ರುತಾಃ ॥೧೪॥

ಆ ರಾಜನ ಆ ನುಡಿಗಳು ಸತ್ಯವೇ ಆಗಲಿ. ಸತ್ಯವಾದರೆ ಯುದ್ಧದಲ್ಲಿ ನಿನ್ನ ಜಯವು ನಿಶ್ಚಿತವಾದುದು. ಕೌರವರು ಓಡಿ ಹೋಗಲಿ.

ಆವರ್ತಯ ಕುರೂನ್ ಜಿತ್ವಾ ಪಶೂನ್ ಪಶುಪತಿರ್ಯಥಾ ।
ನಿರ್ದಹೈಷಾಮನೀಕಾನಿ ಭೀಮೇನೇಶ್ವರತೇಜಸಾ ॥೧೫॥

ಕುರುಗಳನ್ನು ಗೆದ್ದು ಪಶುಪತಿಯಂತೆ ನಿನ್ನ ಪಶುಗಳನ್ನು ಹಿಂದಿರುಗಿಸು. ಭಯಂಕರವಾದ ನಿನ್ನ ಪ್ರಭುತೇಜಸ್ಸಿನಿಂದ ಅವರ ಆ ಸೈನ್ಯವನ್ನು ಸುಡುವವನಾಗು.

ಧನುಶ್ಚ್ಯುತೈ ರುಗ್ಮಪುಂಖೈಃ ಚಿತ್ರೈಃ ಸನ್ನತಪರ್ವಭಿಃ ।
ದ್ವಿಷತಾಂ ಭಿಂಧ್ಯನೀಕಾನಿ ಗಜಾನಾಮಿವ ಯೂಥಪಃ ॥೧೬॥

ನಿನ್ನ ಧನುಸ್ಸಿನಿಂದ ಹೊರಹೊಮ್ಮಿದ ವಿಚಿತ್ರವಾದ ಪುಂಖಗಳನ್ನುಳ್ಳ ಬಾಗಿದ ಅಲುಗುಗಳನ್ನುಳ್ಳ ಬಾಣಗಳಿಂದ ಸಲಗದಂತೆ ಶತ್ರುಸೈನ್ಯವನ್ನು ಭೇದಿಸುವವನಾಗು.

ಪಾಶೋಪಧಾನಾಂ ಜ್ಯಾತಂತ್ರೀಂ ಪ್ರಾಪ್ಯದಂಡಸಮಸ್ವರಾಮ್ ।
ಪ್ರವಿಶ್ಯ ಮಹತೀಂ ಸೇನಾಂ ಧನುರ್ವಿಕ್ಷಾಂ ಪ್ರವಾದಯ ॥೧೭॥

ಧನುಸ್ಸಿನ ಹಗ್ಗಗಳೇ ಉಪಧಾನವಾಗಿ ಉಳ್ಳ, ಹೆದೆಯೇ ತಂತಿಯಾಗುಳ್ಳ ದಂಡದಿಂದ ಆಹತವಾದ ಗಂಟೆಯಂತೆ ಸ್ವರವನ್ನು ಹೊಂದಿರುವ ದೊಡ್ಡ ಸೈನ್ಯವನ್ನು ಪ್ರವೇಶಿಸಿ ಧನುರ್ವಿಕ್ಷೆಯನ್ನು ನುಡಿಸುವವನಾಗು (ಲಕ್ಷಾಲಂಕಾರ).

ನಿರ್ಯಾಹಿ ನಗರಾತ್ ತೂರ್ಣಂ ರಾಜಪುತ್ರ ಕಿಮಾಸ್ಯತೇ ।
ಶ್ವೇತಾಃ ಕಾಂಚನಸನ್ನಾಹಾ ರಥೇ ಯುಂಜಂತು ತೇ ಹಯಾಃ ॥೧೮॥

ಧ್ವಜಂ ಚ ಸಿಂಹಸೌವರ್ಣಮುಚ್ಛ್ರಯಸ್ವ ರಥೇ ವಿಭೋ ॥೧೯॥

ಎಲೈ ರಾಜಪುತ್ರನೇ, ಬೇಗ ನಗರದಿಂದ ಹೊರಡು. ಏಕೆ ಕುಳಿತಿದ್ದೀಯೆ? ನಿನ್ನ ಸುವರ್ಣಾಲಂಕೃತವಾದ ಶ್ವೇತಾಶ್ವಗಳು ರಥದಲ್ಲಿ ಹೂಡಲ್ಪಡಲಿ. ಎಲೈ ವಿಭುವೇ, ಸುವರ್ಣಮಯವಾದ ಸಿಂಹದಿಂದ ಕೂಡಿದ ನಿನ್ನ ಧ್ವಜವು ರಥದಲ್ಲಿ ಎತ್ತರಕ್ಕೆ ಎತ್ತಲ್ಪಡಲಿ.

ರುಗ್ಮಪುಂಖಾಃ ಪ್ರಸನ್ನಾಗ್ರಾ ಮುಕ್ತಾ ಹಸ್ತವತಾ ತ್ವಯಾ ।
ಛಾದಯಂತು ಶರಾಃ ಸೂರ್ಯಂ ರಾಜ್ಞಾಮಾಯುರ್ನಿರೋಧಕಾಃ॥೨೦॥

ಪ್ರಶಸ್ತರಥವನ್ನುಳ್ಳ ನೀನು ಪ್ರಯೋಗಿಸುವ ಸುವರ್ಣಮಯವಾದ ಪುಂಖಗಳನ್ನುಳ್ಳ ಒಳ್ಳೆಯ ತುದಿಗಳುಳ್ಳ ಶತ್ರುರಾಜರ ಆಯಸ್ಸನ್ನು ನಾಶಮಾಡುವ ಬಾಣಗಳು ಸೂರ್ಯನನ್ನು ಆವರಿಸಲಿ.

ರಣೇ ಜಿತ್ವಾ ಕುರೂನ್ ಸರ್ವಾನ್ ವಜ್ರಪಾಣೇರಿವಾಸುರಾನ್ ।
ಯಶೋ ಮಹದವಾಪ್ಯ ತ್ವಂ ಪ್ರವಿಶೇದಂ ಪುರಂ ಪುನಃ ॥೨೧॥

ವಜ್ರಪಾಣಿಯಾದ ಇಂದ್ರನು ಅಸುರನನ್ನು ಗೆದ್ದಂತೆ ಶೀಘ್ರದಲ್ಲಿ ಎಲ್ಲಾ ಕೌರವರನ್ನೂ ಗೆದ್ದು ದೊಡ್ಡ ಕೀರ್ತಿಯನ್ನು ಸಂಪಾದಿಸಿ ಪುನಃ ಈ ನಗರವನ್ನು ಪ್ರವೇಶಿಸು.

ತ್ವಂ ಹಿ ರಾಷ್ಟ್ರಸ್ಯ ಪರಮಾ ಗತಿರ್ಮತ್ಸ್ಯಪತೇಃ ಸುತ ।
ಗತಿಮಂತೋ ಭವಂತ್ವದ್ಯ ಸರ್ವೇ ವಿಷಯವಾಸಿನಃ ॥೨೨॥

ಎಲೈ ಮತ್ಸ್ಯರಾಜನ ಪುತ್ರನೇ, ನೀನೇ ಈ ರಾಷ್ಟ್ರಕ್ಕೆ ಪರಮಗತಿಯಾದವನು. ನಿನ್ನ ರಾಷ್ಟ್ರದಲ್ಲಿರುವ ಎಲ್ಲರೂ ಈಗ ನಿನ್ನಿಂದ ಅಂತಹ ಗತಿಯನ್ನು ಹೊಂದುವವರಾಗಲಿ (ಎಂದು ಹೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಷಟ್‌ತ್ರಿಂಶೋಽಧ್ಯಾಯಃ ॥

ಗೋಗ್ರಹಣಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ಮೂವತ್ತೇಳನೆಯ ಅಧ್ಯಾಯ

ಉತ್ತರನ ಪೌರುಷ. ಬೃಹನ್ನಳೆಯಿಂದ ಸಾರಥ್ಯ ಸ್ವೀಕಾರ. ಗೋಗ್ರಹಣಕ್ಕಾಗಿ ಗಮನ

ವೈಶಂಪಾಯನಃ

ಸ್ತ್ರೀಮಧ್ಯ ಉಕ್ತಸ್ತೇನಾಸೌ ವಾಕ್ಯಂ ತೇಜಃಪ್ರವರ್ಧನಮ್ ।
ಅಂತಃಪುರೇ ಶ್ಲಾಘಮಾನ ಇದಂ ವಚನಮಬ್ರವೀತ್ ॥೧॥

ವೈಶಂಪಾಯನ– ಅಂತಃಪುರದಲ್ಲಿ ಸ್ತ್ರೀಯರ ಮಧ್ಯದಲ್ಲಿ ಇಂತಹ ತೇಜೋವರ್ಧಕವಾದ ಮಾತುಗಳನ್ನು ಕೇಳಿದ ಉತ್ತರನು ತನ್ನನ್ನು ತಾನೇ ಹೊಗಳಿಕೊಳ್ಳುತ್ತಾ ಹೀಗೆ ಮಾತನಾಡಿದನು.

ಅದ್ಯಾಹಮನುಗಚ್ಛೇಯಂ ದೃಢಧನ್ವಾ ಗವಾಂ ಪದಮ್ ।
ಯದಿ ಮೇ ಸಾರಥಿಃ ಕಶ್ಚಿದ್ ಭವೇದಶ್ವೇಷು ಕೋವಿದಃ ॥೨॥

ನನಗೆ ಅಶ್ವಕೋವಿದನಾದ ಒಬ್ಬ ಸಾರಥಿ ಇದ್ದಿದ್ದರೆ ನಾನು ಈ ದಿನ ದೃಢವಾದ ಧನುಸ್ಸನ್ನು ತೆಗೆದುಕೊಂಡು ಗೋವುಗಳ ಸ್ಥಾನಕ್ಕೆ ಹೋಗುತ್ತಿದ್ದೆ.

ತಮಹಂ ನಾಧಿಗಚ್ಛಾಮಿ ಯೋ ಮೇ ಯಂತಾ ಸಮೋ ಭವೇತ್ ।
ಪಶ್ಯಧ್ವಂ ಸಾರಥಿಂ ಶೀಘ್ರಂ ಮಮ ಯುದ್ಧಂ ಪ್ರದಾಸ್ಯತಃ ॥೩॥

ಆದರೆ ನನಗೆ ಅನುರೂಪವಾದ ಸಾರಥಿಯನ್ನು ನಾನು ಕಾಣುತ್ತಿಲ್ಲ. ಯುದ್ಧವನ್ನು ಮಾಡಲು ಹೊರಡುವ ನನಗೆ ಶೀಘ್ರವಾಗಿ ಒಳ್ಳೆಯ ಸಾರಥಿಯನ್ನು ನೋಡಿ.

ಅಷ್ಟಾವಿಂಶತಿರಾತ್ರಂ ವಾ ಮಾಸಂ ವಾऽಪಿ ಭವೇತ್ ತತಃ ।
ಯತ್ರ ಚಾಸೀನ್ಮಹಾಯುದ್ಧಂ ತತ್ರ ಮೇ ಸಾರಥಿರ್ಹತಃ ॥೪॥

ಹಿಂದೆ ಇಪ್ಪತ್ತೆಂಟು ದಿವಸಗಳೋ ಅಥವಾ ಒಂದು ತಿಂಗಳೋ ನಡೆದ ಮಹಾಯುದ್ಧದಲ್ಲಿ ನನ್ನ ಸಾರಥಿಯು ಹತನಾದನು.

ಯದ್ಯಹಂ ತ್ವಭಿಗಚ್ಛೇಯಂ ಯೋ ಮೇ ಯಂತಾ ಭವೇದ್ ಯುಧಿ ।
ತ್ವರಾವಾನದ್ಯ ಯಾಸ್ಯಾಮಿ ಸಮುಚ್ಛ್ರಿತಮಹಾಧ್ವಜಃ ॥೫॥

ಯುದ್ಧದಲ್ಲಿ ನನ್ನ ರಥವನ್ನು ನಡೆಸುವ ಒಬ್ಬ ಸಾರಥಿಯು ದೊರೆತರೆ ನಾನು ಶೀಘ್ರವಾಗಿ ರಥದಲ್ಲಿ ಧ್ವಜವನ್ನು ಏರಿಸಿ ಯುದ್ಧಕ್ಕೆ ಹೊರಡುವೆನು.

ವಿಗಾಹ್ಯ ತತ್ ಪರಾನೀಕಂ ಗಜವಾಜಿರಥಾಕುಲಮ್ ।
ಶಸ್ತ್ರಪ್ರತಾಪಾನ್ನಿರ್ವೀರ್ಯಾನ್ ಕುರೂನ್ ಜಿತ್ವಾऽऽನಯೇ ಪಶೂನ್ ॥

ಗಜಾಶ್ವರಥಗಳಿಂದ ಕೂಡಿದ ಪರಸೈನ್ಯವನ್ನು ಪ್ರವೇಶಿಸಿ ನನ್ನ ಶಸ್ತ್ರಪ್ರತಾಪದಿಂದ ನಿರ್ವೀರ್ಯರಾದ ಕುರುಗಳನ್ನು ಗೆದ್ದು ಗೋವುಗಳನ್ನು ಹಿಂದೆ ತಂದೇನು.

ದುರ್ಯೋಧನಂ ಶಾಂತನವಂ ಕರ್ಣಂ ವೈಕರ್ತನಂ ಕೃಪಮ್ ।
ದ್ರೋಣಂ ಚ ಸಹ ಪುತ್ರೇಣ ಮಹೇಷ್ವಾಸಾನ್ ಸಮಾಗತಾನ್ ॥೭॥

ವಿತ್ರಾಸಯಿತ್ವಾ ಸಂಗ್ರಾಮೇ ದಾನವಾನ್ ಮಘವಾನಿವ ।
ಅನೇನೈವ ಮುಹೂರ್ತೇನ ಪುನಃ ಪ್ರತ್ಯಾನಯೇ ಪಶೂನ್ ॥೮॥

ದುರ್ಯೋಧನ, ಭೀಷ್ಮ, ವೈಕರ್ತನನಾದ ಕರ್ಣ, ಕೃಪ, ಅಶ್ವತ್ಥಾಮರಿಂದ ಕೂಡಿದ ದ್ರೋಣ- ಯುದ್ಧಕ್ಕೆ ಬಂದ ಈ ಮಹಾಧನುರ್ಧಾರಿಗಳನ್ನೆಲ್ಲಾ ಇಂದ್ರನು ಯುದ್ಧದಲ್ಲಿ ದಾನವರನ್ನು ಹೆದರಿಸಿದಂತೆ ಹೆದರಿಸಿ ಈ ಮುಹೂರ್ತದಲ್ಲಿ ಗೋವುಗಳನ್ನು ಪುನಃ ಹಿಂದಕ್ಕೆ ತರುವೆನು.

ಶೂನ್ಯಮಾಜ್ಞಾಯ ಕುರವಃ ಪ್ರಯಾಂತ್ಯಾದಾಯ ಗೋಧನಮ್ ।
ಕಿಂ ನು ಶಕ್ಯಂ ಚ ತೈಃ ಕರ್ತುಂ ಯದಹಂ ತತ್ರ ನಾಭವಮ್ ॥೯॥

ರಾಜಧಾನಿಯಲ್ಲಿ ರಾಜನಿಲ್ಲದುದನ್ನು ತಿಳಿದು ಕುರುಗಳು ಗೋಧನಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ನಾನು ಅಲ್ಲಿ ಇಲ್ಲದಿದ್ದುದರಿಂದ ನಾನು ಅವರಿಗೆ ಏನು ಮಾಡಲು ಸಾಧ್ಯ ?

ಪಶ್ಯೇಯುರದ್ಯ ಮೇ ವೀರ್ಯಂ ಕುರವಸ್ತೇ ಸಮಾಗತಾಃ ।
ಕಿಂ ನು ಪಾರ್ಥೋ೯ಽರ್ಜುನಃ ಸಾಕ್ಷಾದಿತಿ ಮಂಸ್ಯಂತಿ ಮಾಂ ಪರೇ ॥

ಯುದ್ಧಕ್ಕೆ ಸಮಾಗತರಾದ ಕುರುಗಳು ಈ ದಿನ ನನ್ನ ಪರಾಕ್ರಮವನ್ನು ನೋಡಿಯಾರು. ಶತ್ರುಗಳು ಇವನೇ ಸಾಕ್ಷಾತ್ ಅರ್ಜುನನೋ ಎಂದು ನನ್ನನ್ನು ಭಾವಿಸುವರು.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಸ್ತ್ರೀಷು ಚಾತ್ಮಪ್ರಶಂಸನಮ್ ।
ನಾಮರ್ಷಯತ ಪಾಂಚಾಲೀ ಬೀಭತ್ಸೋಃ ಪರಿಕೀರ್ತನಮ್ ॥೧೧॥

ವೈಶಂಪಾಯನ– ಸ್ತ್ರೀಯರ ಎದುರಿನಲ್ಲಿ ಅವನ ಆತ್ಮಪ್ರಶಂಸೆಯ ಮಾತುಗಳನ್ನು ಕೇಳಿ ಮತ್ತು ಅರ್ಜುನನ ಹೆಸರನ್ನು ಅವನು ತೆಗೆದುಕೊಂಡುದನ್ನು ಕೇಳಿ ಪಾಂಚಾಲಿಯು ಸಹಿಸಲಿಲ್ಲ.

ಶ್ರುತ್ವಾ ತದರ್ಜುನೋ ವಾಕ್ಯಮುತ್ತರೇಣ ಪ್ರಭಾಷಿತಮ್ ॥೧೨॥

ಸ ನೀತಸಮಯೇ ಕಾಲೇ ಪ್ರಿಯಾಂ ಭಾರ್ಯಾಮಭಾಷತ ।
ದ್ರುಪದಸ್ಯ ಸುತಾಂ ರಾಜ್ಞಃ ಪಾಂಚಾಲೀಂ ರೂಪಸಮ್ಮತಾಮ್ ॥೧೩॥

ಉತ್ತರನು ಆಡಿದ ಮಾತುಗಳನ್ನು ಕೇಳಿ ಅರ್ಜುನನು ಅಜ್ಞಾತವಾಸದ ಸಮಯವು ಮುಗಿದುಹೋಗಿರಲು ರೂಪಸಂಪನ್ನಳಾದ ದ್ರುಪದರಾಜಕುಮಾರಿಯಾದ ಪ್ರಿಯ ಪತ್ನಿಯಾದ ಪಾಂಚಾಲಿಯನ್ನು ಕುರಿತು ಮಾತನಾಡಿದನು (ಲಕ್ಷಾಲಂಕಾರ).

ಸತ್ಯಾರ್ಜವಗುಣೋಪೇತಾಂ ಭರ್ತುಃ ಪ್ರಿಯಹಿತೈಷಿಣೀಮ್ ॥೧೪॥

ಉತ್ತರಾಂ ಬ್ರೂಹಿ ಪಾಂಚಾಲಿ ಗತ್ವಾ ಕ್ಷಿಪ್ರಂ ಶುಚಿಸ್ಮಿತೇ ।
ಇಯಂ ಕಿಲ ಪುರಾ ಯುದ್ಧೇ ಖಾಂಡವೇ ಸವ್ಯಸಾಚಿನಃ ॥೧೫॥

ಸಾರಥಿಃ ಪಾಂಡುಪುತ್ರಸ್ಯ ಪಾರ್ಥಸ್ಯ ತು ಬೃಹನ್ನಳಾ ॥೧೬॥

ಮಹಾನ್ ಜಯೋ ಭವೇದ್ ಯುದ್ಧೇ ಸಾ ಚೇದ್ ಯಂತಾ ಬೃಹನ್ನಳಾ ॥

ಪಾಂಚಾಲಿಯೇ, ಶುಚಿಸ್ಮಿತೆಯೇ, ಸತ್ಯಾರ್ಜವಗುಣಗಳಿಂದ ಕೂಡಿದ ರಾಜನ ಹಿತದಲ್ಲಿ ಮತ್ತು ಪ್ರಿಯದಲ್ಲಿ ಆಸಕ್ತಳಾದ ಉತ್ತರೆಯ ಬಳಿಗೆ ಬೇಗ ಹೋಗಿ ಹೀಗೆ ಹೇಳುವವಳಾಗು- 'ಈ ಬೃಹನ್ನಳೆಯು ಹಿಂದೆ ಪಾಂಡುಪುತ್ರನಾದ ಸವ್ಯಸಾಚಿಯಾದ ಅರ್ಜುನನು ಖಾಂಡವವನವನ್ನು ದಹನ ಮಾಡುವಾಗ ನಡೆದ ಯುದ್ಧದಲ್ಲಿ ಸಾರಥಿಯಾಗಿದ್ದಳು. ಆ ಬೃಹನ್ನಳೆಯು ಸಾರಥಿಯಾದರೆ ಯುದ್ಧದಲ್ಲಿ ದೊಡ್ಡ ಜಯವು ಉಂಟಾದೀತು'.

ವೈಶಂಪಾಯನಃ

ಸಾ ಚೋದಿತಾ ತದಾ ತೇನ ಹ್ಯರ್ಜುನೇನ ಶುಚಿಸ್ಮಿತಾ ।
ಪಾಂಚಾಲೀ ಚ ತದಾSSಗಮ್ಯ ಉತ್ತರಾಯಾ ನಿವೇಶನಮ್ ॥೧೮॥

ಜ್ಞಾತ್ವಾ ತು ಸಮಯಾನ್ಮುಕ್ತಂ ಚಂದ್ರಂ ರಾಹುಮುಖಾದಿವ ॥೧೯॥

ಯುಧಿಷ್ಠಿರಂ ಧರ್ಮಪರಂ ಸತ್ಯಾರ್ಜವಪಥೇ ಸ್ಥಿತಮ್ ।
ಅಮರ್ಷಯಂತೀ ಸೈರಂಧ್ರೀ ಕೃಷ್ಣಾ ಕಮಲಲೋಚನಾ ॥೨೦॥

ಉತ್ತರಾಮಾಹ ವಚನಂ ಸಖೀಮಧ್ಯೇ ವಿಲಾಸಿನೀಮ್ ॥೨೧॥

ವೈಶಂಪಾಯನ– ಹೀಗೆ ಅರ್ಜುನನಿಂದ ಪ್ರೇರಿಸಲ್ಪಟ್ಟ ಶುಚಿಸ್ಮಿತೆಯಾದ ಪಾಂಚಾಲಿಯು ಆಗ ರಾಹುವಿನ ಮುಖದಿಂದ ಚಂದ್ರನು ಮುಕ್ತನಾದಂತೆ ತಾವು

ಅಜ್ಞಾತವಾಸದ ಸಮಯದಿಂದ ಮುಕ್ತರಾಗಿದ್ದೇವೆಂದು ತಿಳಿದು, ಆದರೂ ಯತಿವೇಷದಲ್ಲಿದ್ದ ಸತ್ಯ ಮತ್ತು ಆರ್ಜವ ಮಾರ್ಗದಲ್ಲಿ ಸ್ಥಿತನಾದ ಯುಧಿಷ್ಠಿರನನ್ನು ನೋಡಿ ಸಹಿಸದೆ ಉತ್ತರೆಯ ಮನೆಗೆ ಬಂದು ಕಮಲಲೋಚನೆಯಾದ ದ್ರೌಪದಿಯು ಸಖೀ ಮಧ್ಯದಲ್ಲಿ ಇದ್ದ ವಿಲಾಸಿನಿಯಾದ ಉತ್ತರೆಯನ್ನು ಕುರಿತು ಮಾತನಾಡಿದಳು.

ಯೋಽಯಂ ಯುವಾ ವಾರಣಯೂಥಪೋಪಮೋ
ಬೃಹನ್ನಳಾಽಸ್ಮೀತಿ ಜನೋಽಭ್ಯಭಾಷತ ।
ಪುರಾ ಹಿ ಪಾರ್ಥಸ್ಯ ಸ ಸಾರಥಿಃ ಸದಾ
ಧನುರ್ಧರಾಣಾಂ ಪ್ರವರಸ್ಯ ಮನ್ಯೇ ॥೨೨॥

ಸ ದೃಷ್ಟಪೂರ್ವೋಽಹಂ ಮಯಾ ಚರಂತ್ಯಾ ಪಾಂಡವಾಲಯೇ ॥೨೩॥

ಗಜಯೂಥಪತಿಯಂತಿರುವ ತಾನು ಬೃಹನ್ನಳೆ ಎಂದು ಹೇಳುವ ಈ ಯುವಕನು ಯಾವನಿದ್ದಾನೆಯೋ ಅವನು ಹಿಂದೆ ಯಾವಾಗಲೂ ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನ ಸಾರಥಿಯಾಗಿದ್ದನೆಂದು ನಾನು ತಿಳಿದಿದ್ದೇನೆ. ನಾನು ಪಾಂಡವರ ಮನೆಯಲ್ಲಿ ಇರುವ ಕಾಲದಲ್ಲಿ ಹಿಂದೆ ಅವನನ್ನು ನೋಡಿದ್ದೇನೆ.

ಯದಾಽನೇನ ಸಹಾಯೇನ ಖಾಂಡವಂ ಚಾದಹತ್ ಪುರಾ ।
ಅರ್ಜುನಸ್ಯ ತದಾ ತೇನ ಸಂಗೃಹೀತಾ ಹಯೋತ್ತಮಾಃ ॥೨೪॥

ಇವನ ಸಹಾಯದಿಂದ ಅರ್ಜುನನು ಹಿಂದೆ ಖಾಂಡವವನವನ್ನು ದಹನ ಮಾಡಿದಾಗ ಈ ಯುವಕನೇ ಅವನ ಶ್ರೇಷ್ಠವಾದ ಹಯಗಳನ್ನು ನಿಯಂತ್ರಿಸಿದನು.

ತೇನ ಸಾರಥಿನಾ ಪಾರ್ಥಃ ಸರ್ವಭೂತಾನಿ ಸರ್ವಶಃ ।
ಅಜಯತ್ ಖಾಂಡವಪ್ರಸ್ಥೇ ನ ಹಿ ಯಂತಾಽಸ್ತಿ ತಾದೃಶಃ ॥೨೫॥

ಅರ್ಜುನನು ಇವನನ್ನು ಸಾರಥಿಯಾಗಿ ಹೊಂದಿ ಖಾಂಡವಪ್ರಸ್ಥದಲ್ಲಿ ಎಲ್ಲಾ ಪ್ರಾಣಿಗಳನ್ನೂ (ಮತ್ತು ದೇವತೆಗಳನ್ನೂ) ಜಯಿಸಿದನು. ಅವನಂತಹ ಸಾರಥಿಯು ಇನ್ನೊಬ್ಬನಿಲ್ಲ.

ವೈಶಂಪಾಯನಃ

ತತಃ ಸೈರಂಧ್ರಿಸಹಿತಾ ಉತ್ತರಾ ಭ್ರಾತುರಬ್ರವೀತ್ ॥೨೬॥

ಅಭ್ಯರ್ಥಯೇಮಾಂ ಸಾರಥ್ಯೇ ವೀರ ಶೀಘ್ರಂ ಬೃಹನ್ನಳಾಮ್ ॥೨೭॥

ಶಿಕ್ಷಿತೈಷಾ ಹಿ ಸಾರಥ್ಯೇ ನರ್ತನೇ ಗೀತವಾದನೇ ।
ಸೈರಂಧ್ರ್ಯಾಹ ಮಹಾಪ್ರಾಜ್ಞಾ ಸ್ತುವಂತೀ ವೈ ಬೃಹನ್ನಳಾಮ್ ॥೨೮॥

ವೈಶಂಪಾಯನ– ಆಗ ಸೈರಂಧ್ರಿ ಸಹಿತಳಾದ ಉತ್ತರೆಯು ಅಣ್ಣನನ್ನು ಕುರಿತು ಎಲೈ ವೀರನೇ, ಈ ಬೃಹನ್ನಳೆಯನ್ನು ಸಾರಥ್ಯವನ್ನು ಸ್ವೀಕರಿಸುವಂತೆ ಶೀಘ್ರವಾಗಿ ಪ್ರಾರ್ಥಿಸು. ಇವಳು ಸಾರಥ್ಯದಲ್ಲಿಯೂ ನರ್ತನದಲ್ಲಿಯೂ ಸಂಗೀತ ಮತ್ತು ವಾದ್ಯಗಳಲ್ಲಿಯೂ ಪರಿಣತಳಾಗಿದ್ದಾಳೆ. ಬೃಹನ್ನಳೆಯನ್ನು ಪ್ರಶಂಸಿಸುತ್ತಾ ಮಹಾಪ್ರಾಜ್ಞಳಾದ ಸೈರಂಧ್ರಿಯು ನನಗೆ ಹಾಗೆ ಹೇಳಿದಳು ಎಂದು ಹೇಳಿದಳು.

ಉತ್ತರಃ

ಸೈರಂಧ್ರಿ ಜಾನಾಸಿ ಮಮ ವ್ರತಂ ಯಥಾ
ಕ್ಲೀಬಂ ನ ಭಾಷೇ ಪುರುಷಃ ಸ್ವಯಂ ಹಿ ।
ಸೋಽಹಂ ನ ಶಕ್ಷ್ಯಾಮಿ ಬೃಹನ್ನಳಾ ಶುಭೇ
ವಕ್ತುಂ ಸ್ವಯಂ ಯಚ್ಛ ಹಯಾನ್ ಮಮೇತಿ ॥೨೯॥

ಉತ್ತರ– ಎಲೌ ಸೈರಂಧ್ರಿಯೇ, ಪುರುಷನಾದ ನಾನು ನಪುಂಸಕರ ಜೊತೆಯಲ್ಲಿ ಸ್ವತಃ ಮಾತನಾಡುವುದಿಲ್ಲವೆಂಬ ನನ್ನ ವ್ರತವನ್ನು ನೀನು ತಿಳಿದಿದ್ದೀಯೆ. ಆದ್ದರಿಂದ ಶುಭಳಾದವಳೇ, ನಾನು ಬೃಹನ್ನಳೆಯನ್ನು ಕುರಿತು ನನ್ನ ಅಶ್ವಗಳನ್ನು ನಿಯಂತ್ರಿಸು ಎಂದು ಸ್ವತಃ ಹೇಳಲಾರೆ.

ಸೈರಂಧ್ರೀ

ಭಯಕಾಲೇ ತು ಸಂಪ್ರಾಪ್ತೇ ನ ವ್ರತಂ ನಾವ್ರತಂ ಪುನಃ ।
ಯಥಾ ದುಃಖಂ ಪ್ರತರತಿ ತಥಾ ಯುಕ್ತಂ ಚರೇದ್ ಬುಧಃ ॥೩೦॥

ಇತಿ ಧರ್ಮವಿದಃ ಪ್ರಾಹುಸ್ತಸ್ಮಾದ್ ವಾಚ್ಯಾ ಬೃಹನ್ನಳಾ ॥೩೧॥

ಸೈರಂಧ್ರೀ– ಭಯ ಕಾಲವು ಪ್ರಾಪ್ತವಾದಾಗ ವ್ರತವೂ ಇಲ್ಲ, ಅವ್ರತವೂ ಇಲ್ಲ. ಹೇಗೆ ಮಾಡಿದರೆ ದುಃಖವು ಪರಿಹಾರವಾಗುತ್ತದೆಯೋ ವಿವೇಕಿಯಾದವನು ಹಾಗೆ ಮಾಡಬೇಕು ಎಂದು ಧರ್ಮವನ್ನು ತಿಳಿದವರು ಹೇಳುತ್ತಾರೆ. ಆದ್ದರಿಂದ ಬೃಹನ್ನಳೆಯ ಜೊತೆಯಲ್ಲಿ ನೀನು ಮಾತನಾಡು.

ಯೇಯಂ ಕುಮಾರೀ ಸುಶ್ರೋಣೀ ಭಗಿನೀ ತೇ ಕವೀಯಸೀ ।
ಅಸ್ಯಾಸ್ತು ವಚನಂ ವೀರ ಕರಿಷ್ಯತಿ ನ ಸಂಶಯಃ ॥೩೨॥

ಈ ಸುಶ್ರೋಣಿಯೂ, ಕುಮಾರಿಯೂ ಆದ ನಿನ್ನ ತಂಗಿಯ ಮಾತುಗಳನ್ನು ಅವಳು ನಡೆಸುವಳು. ಎಲೈ ವೀರನೇ, ಇದರಲ್ಲಿ ಸಂಶಯವಿಲ್ಲ.

ಯದಿ ತೇ ಸಾರಥಿಃ ಸಾ ಸ್ಯಾತ್ ಕುರೂನ್ ಸರ್ವಾನಸಂಶಯಮ್ ।
ಜಿತ್ವಾ ಗಾಶ್ಚ ಸಮಾದಾಯ ಧ್ರುವಮಾಗಮನಂ ಭವೇತ್ ॥೩೩॥

ಒಂದು ಪಕ್ಷ ನಿನಗೆ ಅವಳು ಸಾರಥಿಯಾದರೆ ನಿಸ್ಸಂಶಯವಾಗಿ ಎಲ್ಲಾ ಕೌರವರನ್ನೂ ಗೆದ್ದು, ಗೋವುಗಳನ್ನು ತೆಗೆದುಕೊಂಡು ಖಂಡಿತವಾಗಿ ಹಿಂದೆ ಬರುವಿ.

ವೈಶಂಪಾಯನಃ

ಏವಮುಕ್ತಃ ಸ ಸೈರಂಧ್ರ್ಯಾ ಭಗಿನೀಂ ಪ್ರತ್ಯಭಾಷತ ॥೩೪॥

ಗಚ್ಛ ತ್ವಮನವದ್ಯಾಂಗಿ ತಾಮಾನಯ ಬೃಹನ್ನಳಾಮ್ ॥೩೫॥

ವೈಶಂಪಾಯನ– ಸೈರಂಧ್ರಿಯಿಂದ ಹೀಗೆ ಹೇಳಲ್ಪಟ್ಟ ಉತ್ತರನು ತನ್ನ ತಂಗಿಯನ್ನು ಕುರಿತು ಅನವದ್ಯಾಂಗಿಯೇ, ಹೋಗಿ ಆ ಬೃಹನ್ನಳೆಯನ್ನು ಕರೆದುಕೊಂಡು ಬಾ ಎಂದು ಹೇಳಿದನು.

ವೈಶಂಪಾಯನಃ

ಸಾ ಪ್ರಾದ್ರವತ್ ಕಾಂಚನಮಾಲ್ಯಧಾರಿಣೀ
ಜ್ಯೇಷ್ಠೇನ ಭ್ರಾತ್ರಾ ಪ್ರಹಿತಾ ಯಶಸ್ವಿನೀ ।
ಭ್ರಾತುರ್ನಿಯೋಗಂ ತು ನಿಶಮ್ಯ ಸುಭ್ರೂಃ
ಶುಭಾನನಾ ಹಾಟಕರತ್ನಭೂಷಿತಾ ॥೩೬॥

ವೈಶಂಪಾಯನ– ಸುವರ್ಣಮಾಲೆಗಳನ್ನು ಧರಿಸಿದ ಯಶಸ್ವಿನಿಯಾದ ಸುಂದರವಾದ ಮುಖವುಳ್ಳ ಸುವರ್ಣರತ್ನಗಳಿಂದ ಭೂಷಿತಳಾದ ಒಳ್ಳೆಯ ಹುಬ್ಬುಗಳನ್ನುಳ್ಳ ಕೀರ್ತಿವಂತಳಾದ ಅವಳು ಅಣ್ಣನ ಆಜ್ಞೆಯನ್ನು ಕೇಳಿ ಅವನಿಂದ ಕಳುಹಿಸಲ್ಪಟ್ಟವಳಾಗಿ ಶೀಘ್ರವಾಗಿ ಅಲ್ಲಿಂದ ಓಡಿದಳು.

ಸಾ ವಜ್ರಮುಕ್ತಾಮಣಿಹೇಮಕುಂಡಲಾ
ಮೃದುಕ್ರಮಾ ಭ್ರಾತೃನಿಯೋಗಚೋದಿತಾ ।
ಪ್ರದಕ್ಷಿಣಾವರ್ತತನುಃ ಶಿಖಂಡಿನೀ
ಪದ್ಮಾನನಾ ಪದ್ಮದಲಾಯತಾಕ್ಷೀ ॥೩೭॥

ವಜ್ರ, ಮುತ್ತು ಮತ್ತು ಮಣಿಗಳಿಂದ ಖಚಿತವಾದ ಸುವರ್ಣಮಯವಾದ ಕರ್ಣಕುಂಡಲಗಳನ್ನು ಧರಿಸಿದ, ಮೃದುವಾದ ನಡಿಗೆ ಉಳ್ಳ, ತಲೆಯ ಮೇಲೆ ಪ್ರದಕ್ಷಿಣಾಕಾರವಾಗಿ ಕೇಶಗಳನ್ನು ಗಂಟು ಹಾಕಿಕೊಂಡ, ಪದ್ಮದಂತೆ ಮುಖವುಳ್ಳ ಪದ್ಮದಳಾಯತಾಕ್ಷಿಯಾದ ಅವಳು (ಶೀಘ್ರವಾಗಿ ಹೊರಟಳು).

ತನ್ವೀ ಸಮಾಂಗೀ ಮೃದುಮಂದ್ರಲೋಚನಾ
ಮಾತ್ಸ್ಯಸ್ಯ ರಾಜ್ಞೋ ದುಹಿತಾ ವಿಲಾಸಿನೀ ।
ಸಾ ನರ್ತನಾಗಾರಮರಾಲಪಕ್ಷ್ಮಾ
ಶತಹ್ರದಾ ಮೇಘಮಿವಾನ್ವಪದ್ಯತ ॥೩೮॥

ಕೃಶಾಂಗಿಯೂ, ಸಮವಾದ ಅವಯವವುಳ್ಳವಳೂ, ಮೃದುವೂ ಮತ್ತು ನಿಧಾನವೂ ಆದ ಲೋಚನಗಳುಳ್ಳವಳೂ, ವಿಲಾಸಿನಿಯೂ, ಸುಂದರವಾದ ಹುಬ್ಬುಳ್ಳವಳೂ ಆದ ವಿರಾಟರಾಜನ ಮಗಳಾದ ಅವಳು, ಮಿಂಚು ಮೇಘವನ್ನು ಸೇರುವಂತೆ ನರ್ತನಾಗಾರಕ್ಕೆ ಬಂದಳು.

ಸಾ ನಾಗನಾಸೋಪಮಸಂಹಿತೋರುಃ
ಅನಿಂದಿತಾ ವೇದಿವಿಲಗ್ನಮಧ್ಯಾ ।
ಆಸಾದ್ಯ ತಸ್ಥೌ ವರಮಾಲ್ಯಧಾರಿಣೀ
ಪಾರ್ಥಂ ಶುಭಾ ನಾಗವಧೂರಿವ ದ್ವಿಪಮ್ ॥೩೯॥

ಆನೆಯ ಸೊಂಡಿಲಿನಂತೆ ದುಂಡಾದ ತೊಡೆಗಳುಳ್ಳ, ಅನಿಂದಿತಳಾದ, ವೇದಿಯಂತೆ ಕೃಶವಾದ ನಡುವನ್ನು ಹೊಂದಿದ, ಶ್ರೇಷ್ಠವಾದ ಮಾಲೆಗಳನ್ನು ಧರಿಸಿದ, ಶುಭಳಾದ ಅವಳು ಹೆಣ್ಣಾನೆಯು ಗಂಡಾನೆಯನ್ನು ಸಮೀಪಿಸುವಂತೆ ಅರ್ಜುನನನ್ನು ಸಮೀಪಿಸಿದಳು.

ತಾಮಾಗತಾಮಾಯತತಾಮ್ರಲೋಚನಾಮ್
ಅವೇಕ್ಷ್ಯ ಪಾರ್ಥಃ ಸಮಯೇऽಭ್ಯಭಾಷತ ॥೪೦॥

ಕಿಮಾಗತಾ ಕಾಂಚನಮಾಲ್ಯಧಾರಿಣಿ
ಸುಗಾತ್ರಿ ಕಿಂಚಿತ್ ತ್ವರಿತಾऽಸಿ ಸುಭ್ರು ।
ಕಿಂ ತೇ ಮುಖಂ ಸುಂದರಿ ನ ಪ್ರಸನ್ನಮ್
ಆಚಕ್ಷ್ವ ಶೀಘ್ರಂ ಮಮ ಚಾರುಹಾಸಿನಿ ॥೪೧॥

ಅಲ್ಲಿಗೆ ಬಂದ ಆ ವಿಶಾಲರಕ್ತನೇತ್ರೆಯನ್ನು ನೋಡಿ ಆ ಸಮಯದಲ್ಲಿ ಅರ್ಜುನನು ಅವಳನ್ನು ಕುರಿತು, ಎಲೌ ಸುವರ್ಣಮಾಲೆಗಳನ್ನು ಧರಿಸಿದ ಸುಂದರಶರೀರವುಳ್ಳವಳೇ, ಸುಂದರಿಯೇ, ಸುಂದರಮುಗುಳ್ನಗೆ ಉಳ್ಳವಳೇ, ಒಳ್ಳೆಯ ಹುಬ್ಬುಳ್ಳವಳೇ, ಏತಕ್ಕೆ ಬಂದೆ? ಏನೋ ತ್ವರೆಯಿಂದ ಕೂಡಿದಂತೆ ಕಾಣುತ್ತಿದೆ. ನಿನ್ನ ಮುಖವು ಪ್ರಸನ್ನವಾಗಿಲ್ಲ. ನನಗೆ ಅದಕ್ಕೆ ಕಾರಣವನ್ನು ಹೇಳು ಎಂದು ಕೇಳಿದನು.

ವೈಶಂಪಾಯನಃ

ಸಾ ವಜ್ರವೈಡೂರ್ಯವಿಕಾರಕುಂಡಲಾ
ವಿನಿದ್ರಪದ್ಮೋತ್ಪಲಪತ್ರಗಂಧಿನೀ ।
ಪ್ರಸನ್ನತಾರಾಧಿಪಸನ್ನಿಭಾನನಾ
ಪಾರ್ಥಂ ಕುಮಾರೀ ವಚನಂ ಬಭಾಷೇ ॥೪೨॥

ವಜ್ರವೈಢೂರ್ಯಗಳಿಂದ ಮೆಟ್ಟಿದ ಕರ್ಣಕುಂಡಲಗಳುಳ್ಳ, ಅರಳಿದ ಪದ್ಮ ಮತ್ತು ಉತ್ಪಲದಗಳಂತೆ ಗಂಧವನ್ನುಳ್ಳ, ಪೂರ್ಣಚಂದಿರನಂತೆ ಮುಖವುಳ್ಳ, ಆ ಕುಮಾರಿಯು ಅರ್ಜುನನನ್ನು ಕುರಿತು ಮಾತನಾಡಿದಳು.

ಹರಂತಿ ವಿತ್ತಂ ಕುರವಃ ಪಿತುರ್ಮೇ
ಶತಂ ಸಹಸ್ರಾಣಿ ಗವಾಂ ಬೃಹನ್ನಳೇ ।
ಸಾ ಭ್ರಾತುರಶ್ವಾನ್ ಮಮ ಸಂಯಮಸ್ವ
ಪುರಾ ಪರೇ ದೂರತರಂ ಹರಂತಿ ಗಾಃ ॥೪೩॥

ಎಲೌ ಬೃಹನ್ನಳೆಯೇ, ಕೌರವರು ನನ್ನ ತಂದೆಯ ಲಕ್ಷಾಂತರ ಗೋಧನವನ್ನು ಅಪಹರಿಸುತ್ತಿದ್ದಾರೆ. ಅವರು ಗೋವುಗಳನ್ನು ತೆಗೆದುಕೊಂಡು ದೂರ ಹೋಗುವುದಕ್ಕಿಂತ ಮೊದಲೇ ಅಂತಹ ನೀನು ನನ್ನ ಅಣ್ಣನ ಅಶ್ವಗಳನ್ನು ನಿಯಂತ್ರಿಸಿ ಸಾರಥಿಯಾಗು.

ಸೈರಂಧ್ರಿರಾಖ್ಯಾತಿ ಬೃಹನ್ನಳೇ ತ್ವಾಂ
ಸುಶಿಕ್ಷಿತಾಂ ಸಂಗ್ರಹಣೇ ರಥಾಶ್ವಯೋಃ ।
ಅಹಂ ಮರಿಷ್ಯಾಮಿ ನ ಮೇಽತ್ರ ಸಂಶಯೋ
ಮಯಾ ವೃತಾ ತತ್ರ ನ ಚೇದ್ ಗಮಿಷ್ಯಸಿ ॥೪೪॥

ಎಲೌ ಬೃಹನ್ನಳೆಯೇ, ಸೈರಂಧ್ರಿಯು ರಥಾಶ್ವಗಳನ್ನು ನಿಯಂತ್ರಿಸುವುದರಲ್ಲಿ ನೀನು ಸುಶಿಕ್ಷಿತಳಾಗಿದ್ದೀಯೆ ಎಂದು ಹೇಳುತ್ತಾಳೆ. ನಾನು ಪ್ರಾರ್ಥಿಸಿದರೂ ನೀನು ಹೋಗದಿದ್ದರೆ ನಾನು ಮರಣವನ್ನು ಹೊಂದುವೆನು. ಇದರಲ್ಲಿ ಸಂಶಯವಿಲ್ಲ.

ವೈಶಂಪಾಯನಃ

ತಥಾ ನಿಯುಕ್ತೋ ನರದೇವಕನ್ಯಯಾ
ನರೋತ್ತಮಃ ಪ್ರೀತಮನಾ ಧನಂಜಯಃ ।
ಉವಾಚ ಪಾರ್ಥಃ ಶುಭಮಂದ್ರಯಾ ಗಿರಾ
ಶುಭಾನನಾಂ ಶುಕ್ಲದತೀಂ ಶುಚಿಸ್ಮಿತಾಮ್ ॥೪೫॥

ವೈಶಂಪಾಯನ– ರಾಜಕುಮಾರಿಯಿಂದ ಹಾಗೆ ಹೇಳಲ್ಪಟ್ಟ ನರೋತ್ತಮನಾದ ಧನಂಜಯನು ಮನದಲ್ಲಿ ಸಂತೋಷಗೊಂಡು ಸುಂದರಮುಖವುಳ್ಳವಳೂ, ಶುಕ್ಲದಂತವುಳ್ಳವಳೂ, ಶುಚಿಸ್ಮಿತೆಯೂ ಆದ ಅವಳನ್ನು ಕುರಿತು ಶುಭವಾದ ಮೆಲುದನಿಯಿಂದ ಮಾತನಾಡಿದನು.

ಗಚ್ಛಾಮಿ ಯತ್ರೇಚ್ಛಸಿ ಚಾರುಹಾಸಿನಿ
ಹುತಾಶನಂ ಪ್ರಜ್ವಲಿತಂ ವಿಶಾಮಿ ವಾ ।
ಇಚ್ಛಾಮಿ ತೇಽಹಂ ವರಗಾತ್ರಿ ಜೀವಿತಂ
ಕರೋಮಿ ಕಿಂ ತೇ ಪ್ರಿಯಮದ್ಯ ಸುಂದರಿ ॥೪೬॥

ನ ಮತ್ಕೃತೇ ದ್ರಕ್ಷ್ಯಸಿ ತತ್ಪುರಂ ಪ್ರಿಯೇ
ವೈವಸ್ವತಂ ಪ್ರೇತಪತೇರ್ಮಹಾಭಯಮ್ ॥೪೭॥

ಎಲೌ ಚಾರುಹಾಸಿನಿಯೇ, ನೀನು ಬಯಸಿದಲ್ಲಿ ನಾನು ಹೋಗುತ್ತೇನೆ. ಬೇಕಾದರೆ ಪ್ರಜ್ವಲಿಸುವ ಅಗ್ನಿಯನ್ನೂ ಪ್ರವೇಶಿಸುತ್ತೇನೆ. ಎಲೌ ಶೋಭನ ಶರೀರವುಳ್ಳವಳೇ, ನೀನು ಬದುಕಿರುವುದನ್ನು ನಾನು ಬಯಸುತ್ತೇನೆ. ಸುಂದರಿಯೇ, ಈ ದಿನ ನಿನಗೆ ಪ್ರಿಯವಾದ ಏನನ್ನು ಮಾಡಲಿ? ಎಲೌ ಪ್ರಿಯೆಯೇ, ನನ್ನಸಲುವಾಗಿ ನೀನು ಮಹಾಭಯಂಕರವಾದ ಪ್ರೇತಪತಿಯಾದ ಯಮನ ಪಟ್ಟಣವನ್ನು ನೋಡುವುದು ಬೇಡ.

ವೈಶಂಪಾಯನಃ

ಸ ಏವಮುಕ್ತ್ವಾ ಕುರುವೀರಪುಂಗವೋ
ವಿಲಾಸಿನಿಂ ಶುಕ್ಲದತೀಂ ಶುಚಿಸ್ಮಿತಾಮ್ ।
ಬೃಹನ್ನಳಾರೂಪವಿಭೂಷಿತಾನನೋ
ವಿರಾಟಪುತ್ರಸ್ಯ ಸಮೀಪಮಾವ್ರಜತ್ ॥೪೮॥

ವೈಶಂಪಾಯನ– ವಿಲಾಸಿನಿಯೂ, ಶುಕ್ಲದಂತಳೂ, ಶುಚಿಸ್ಮಿತೆಯೂ ಆದ ಅವಳನ್ನು ಕುರಿತು ಬೃಹನ್ನಳೆಯ ರೂಪದಿಂದ ವೇಷವನ್ನು ಮಾಡಿಕೊಂಡಿದ್ದ ಕುರುವೀರ ಶ್ರೇಷ್ಠನು ವಿರಾಟನ ಪುತ್ರನಾದ ಉತ್ತರನ ಬಳಿಗೆ ಶೀಘ್ರವಾಗಿ ಬಂದನು.

ತಂ ಸಾ ವ್ರಜಂತಂ ತ್ವರಿತಂ ಪ್ರಭಿನ್ನಮಿವ ಕುಂಜರಮ್ ।
ಅನ್ವಗಚ್ಛದ್ ವಿಶಾಲಾಕ್ಷೀ ಗಜಂ ಗಜವಧೂರಿವ ॥೪೯॥

ಮದಿಸಿದ ಆನೆಯಂತೆ ಶೀಘ್ರವಾಗಿ ಹೋಗುತ್ತಿದ್ದ ಅವನನ್ನು ವಿಶಾಲಾಕ್ಷಿಯಾದ ಉತ್ತರೆಯು ಗಜವನ್ನು ಹೆಣ್ಣಾನೆಯು ಅನುಸರಿಸಿದಂತೆ ಅನುಸರಿಸಿ ಹಿಂದೆ ಬಂದಳು.

ದೂರಾದೇವ ತು ಸಂಪ್ರೇಕ್ಷ್ಯ ರಾಜಪುತ್ರೋಽಭ್ಯಭಾಷತ ॥೫೦॥

ತ್ವಯಾ ಸಾರಥಿನಾ ಪಾರ್ಥಃ ಖಾಂಡವೇಽಗ್ನಿಮತರ್ಪಯತ್ ।
ಪೃಥಿವೀಂ ಚಾಜಯತ್ ಕೃತ್ಸ್ನಾಂ ಕುಂತೀಪುತ್ರೋ ಧನಂಜಯಃ ॥೫೧॥

ಸೈರಂಧ್ರೀ ತ್ವಾಂ ಮಮಾಚಷ್ಟ ಸಾ ಹಿ ಜಾನಾತಿ ಪಾಂಡವಾನ್ ॥೫೨॥

ದೂರದಿಂದಲೇ ಅವಳನ್ನು ನೋಡಿದ ರಾಜಪುತ್ರನು ಅವಳನ್ನು ಕುರಿತು ಖಾಂಡವವನದಲ್ಲಿ ಅರ್ಜುನನು ನಿನ್ನ ಸಾರಥ್ಯದಿಂದ ಅಗ್ನಿಯನ್ನು ಸಂತೋಷ ಪಡಿಸಿದನು ಮತ್ತು ಕುಂತೀಪುತ್ರನಾದ ಧನಂಜಯನು ನಿನ್ನ ಸಹಾಯದಿಂದ ಭೂಮಿಯನ್ನು ಜಯಿಸಿದನು ಎಂದು ಸೈರಂಧ್ರಿಯು ಹೇಳಿದಳು. ಏಕೆಂದರೆ ಅವಳು ಪಾಂಡವರನ್ನು ಚೆನ್ನಾಗಿ ತಿಳಿದಿದ್ದಾಳೆ.

ದೇವೇಂದ್ರಸಾರಥಿರ್ವೀರೋ ಮಾತಲಿಃ ಖ್ಯಾತವಿಕ್ರಮಃ ।
ಸುಹೋತ್ರೋ ಜಾಮದಗ್ನ್ಯಶ್ಚ ಏಷ್ಣೋರ್ಯಂತಾ ಚ ದಾರುಕಃ ॥೫೩॥

ಅರುಣಃ ಸೂರ್ಯಯಂತಾ ಚ ಸುಮಂತ್ರೋ ದಶರಥಸ್ಯ ಚ ।
ಸರ್ವೇ ಸಾರಥಯಃ ಖ್ಯಾತಾ ನ ಬೃಹನ್ನಳಯಾ ಸಮಾಃ ॥೫೪॥

ಇತ್ಯುಕ್ತೋಽಹಂ ಚ ಸೈರಂಧ್ರ್ಯಾ ತೇನ ತ್ವಾಮಾಹ್ವಯಾಮಿ ವೈ ॥೫೫॥

ದೇವೇಂದ್ರನ ಸಾರಥಿಯಾದ ಪ್ರಸಿದ್ಧ ಪರಾಕ್ರಮವುಳ್ಳ ವೀರನಾದ ಮಾತಲಿ, ಪರಶುರಾಮನ ಸಾರಥಿಯಾದ ಸುಹೋತ್ರ, ಕೃಷ್ಣನ ಸಾರಥಿಯಾದ ದಾರುಕ, ಸೂರ್ಯನ ಸಾರಥಿಯಾದ ಅರುಣ, ದಶರಥನ ಸಾರಥಿಯಾದ ಸುಮಂತ ಮತ್ತು ಪ್ರಸಿದ್ಧರಾದ ಎಲ್ಲಾ ಸಾರಥಿಗಳೂ ಬೃಹನ್ನಳೆಗೆ ಸಮನಾದವರಲ್ಲ ಎಂದು ಸೈರಂಧ್ರಿಯು ನನಗೆ ಹೇಳಿದಳು. ಆದ್ದರಿಂದ ನಿನ್ನನ್ನು ಕರೆಯುತ್ತಿದ್ದೇನೆ.

ಆಹೂತಾ ತ್ವಂ ಮಯಾ ಸಾರ್ಧಂ ಯೋದ್ಧುಂ ಯಾಹಿ ಬೃಹನ್ನಳೇ ।
ದೂರಾದ್ ದೂರತರಂ ಗಾವೋ ಭವಂತಿ ಕುರುಭಿರ್ಹೃತಾಃ ॥೫೬॥

ಎಲೌ ಬೃಹನ್ನಳೆಯೇ, ನನ್ನಿಂದ ಆಹ್ವಾನ ಮಾಡಲ್ಪಟ್ಟ ನೀನು ನನ್ನ ಜೊತೆಯಲ್ಲಿ ಯುದ್ಧಕ್ಕೆ ಹೊರಡುವವಳಾಗು. ಕೌರವರು ನಮ್ಮ ಗೋವುಗಳನ್ನು ಬಹಳ ದೂರ ಕರೆದುಕೊಂಡು ಹೋಗುತ್ತಿದ್ದಾರೆ.

ವೈಶಂಪಾಯನಃ

ತಥೋಕ್ತಾ ಪ್ರತ್ಯುವಾಚೈನಂ ರಾಜಪುತ್ರಂ ಬೃಹನ್ನಳಾ ॥೫೭॥

ಕಾ ಶಕ್ತಿರ್ಮಮ ಸಾರಥ್ಯಂ ಕರ್ತುಂ ಸಂಗ್ರಾಮಮೂರ್ಧನಿ ॥೫೮॥

ನೃತ್ತಂ ವಾ ಯದಿವಾ ಗೀತಂ ವಾದಿತ್ರಂ ವಾ ಪೃಥಗ್ವಿಧಮ್ ।
ತತ್ ಕರಿಷ್ಯಾಮಿ ಭದ್ರಂ ತೇ ಸಾರಥ್ಯಂ ತು ಕುತೋ ಮಮ ॥೫೯॥

ಹಾಗೆ ಹೇಳಲ್ಪಟ್ಟ ಬೃಹನ್ನಳೆಯು ರಾಜಪುತ್ರನನ್ನು ಕುರಿತು ದೊಡ್ಡ ಯುದ್ಧದಲ್ಲಿ ಸಾರಥ್ಯವನ್ನು ಮಾಡಲು ನನಗೆಲ್ಲಿ ಶಕ್ತಿ ಇದೆ? ನೃತ್ಯವನ್ನಾಗಲೀ, ಗೀತವನ್ನಾಗಲೀ, ವಿಧವಿಧವಾದ ವಾದ್ಯವನ್ನಾಗಲೀ ಹೇಳು. ನಾನು ಅವುಗಳನ್ನು ಮಾಡುವೆನು. ನಿನಗೆ ಮಂಗಳವಾಗಲಿ. ನನಗೆ ಸಾರಥ್ಯವು ಎಲ್ಲಿಂದ ಬರಬೇಕು ಎಂದು ಹೇಳಿದಳು.

ಉತ್ತರಃ

ತ್ವಂ ನರ್ತನೋ ವಾ ಯದಿ ವಾಽಪಿ ಗಾಯಕಃ
ಕ್ಷಿಪ್ರಂ ತನುತ್ರಂ ಪರಿಧತ್ಸ್ವ ಭಾನುಮತ್ ।
ಅಭೀಕ್ಷ್ಣಮಾಹುಸ್ತವ ಕರ್ಮ ಪೌರುಷಂ
ಸ್ತ್ರಿಯಃ ಪ್ರಶಂಸಂತಿ ಮಮಾದ್ಯ ಚಾಂತಿಕೇ ॥೬೦॥

ಉತ್ತರ– ನೀನು ನರ್ತಕಿಯಾಗಿರು ಅಥವಾ ಗಾಯಕಿಯಾಗಿರು. ಆದರೆ ಬೇಗ ಪ್ರಕಾಶಮಾನವಾದ ಕವಚವನ್ನು ಧರಿಸು. ನನ್ನ ಸಮೀಪದಲ್ಲಿ ಸ್ತ್ರೀಯರು ನಿನ್ನ ಪೌರುಷಯುಕ್ತವಾದ ಕರ್ಮಗಳನ್ನು ಯಾವಾಗಲೂ ಪ್ರಶಂಸೆ ಮಾಡುತ್ತಾರೆ.

ವೈಶಂಪಾಯನಃ

ಇತ್ಯೇವಮುಕ್ತ್ವಾ ನೃಪಸೂನುಸತ್ತಮಃ
ತದಾ ಸ್ಮಯಿತ್ವಾಽರ್ಜುನಮಭ್ಯನಂದತ್ ।
ಅಥೋತ್ತರಃ ಪಾರಶವಂ ಶತಾಕ್ಷಿಮ್
ಸುವರ್ಣಚಿತ್ರಂ ಪರಿಗೃಹ್ಯ ಭಾನುಮತ್ ॥೬೧॥

ಬೃಹನ್ನಳಾಯೈ ಪ್ರದದೌ ಸ್ವಯಂ ತದಾ
ವಿರಾಟಪುತ್ರಃ ಪರವೀರಘಾತಿನೇ ।

ತದಾಜ್ಞಯಾ ಮಾತ್ಸ್ಯಸುತಸ್ಯ ವೀರ್ಯವಾನ್
ಸಾ ಕರ್ತುಕಾಮೇವ ಸಮಾದದೇ ತದಾ ॥೬೨॥

ವೈಶಂಪಾಯನ– ಹೀಗೆ ಹೇಳಿ ಶ್ರೇಷ್ಠನಾದ ರಾಜಕುಮಾರನು ನಕ್ಕು ಅರ್ಜುನನನ್ನು ಅಭಿನಂದಿಸಿದನು. ಅನಂತರ ಉತ್ತರನು ಕಬ್ಬಿಣದಿಂದ ಮಾಡಿದ ಸುವರ್ಣದಿಂದ ಅಲಂಕರಿಸಿದ ನೂರು ಕಣ್ಣುಗಳುಳ್ಳ ಪ್ರಕಾಶಮಾನವಾದ ಕವಚವನ್ನು ಸ್ವತಃ ತಾನೇ ಬೃಹನ್ನಳೆಗೆ ಕೊಟ್ಟನು. ವಿರಾಟಪುತ್ರನಾದ ಉತ್ತರನು ಪರವೀರಘಾತಕನಾದ ಅರ್ಜುನನಿಗೆ ಕವಚವನ್ನು ಕೊಡುತ್ತಿರಲು ಪರಾಕ್ರಮಶಾಲಿಯಾದ ವಿರಾಟ ರಾಜಕುಮಾರನ ಆಜ್ಞೆಯನ್ನು ನೆರವೇರಿಸುವವನಂತೆ ಅರ್ಜುನನು ಆಗ ಆ ಕವಚವನ್ನು ಸ್ವೀಕರಿಸಿದನು.

ಬೃಹನ್ನಳಾ

ಯದ್ಯಸ್ತಿ ಚ ರಣೇ ಶೌರ್ಯಂ ಶಕ್ಯಂ ಚೇದ್ ದ್ವಿಷತಾಂ ವಧಃ ।
ಅಹಂ ತ್ವಾಮಭಿಗಚ್ಛಾಮಿ ಯತ್ರ ತ್ವಂ ಯಾಸಿ ತತ್ರ ಭೋ ॥೬೩॥

ಬೃಹನ್ನಳಾ– ಎಲೈ ರಾಜಕುಮಾರನೇ, ನನಗೆ ರಣದಲ್ಲಿ ಪರಾಕ್ರಮವಿದ್ದರೆ, ಶತ್ರುಗಳ ವಧೆಯನ್ನು ಮಾಡಲು ಸಾಧ್ಯವಾದರೆ ನೀನು ಎಲ್ಲಿ ಹೋಗುವೆಯೋ ನಾನು ಅಲ್ಲಿಗೆ ನಿನ್ನನ್ನು ಹಿಂಬಾಲಿಸುತ್ತೇನೆ.

ವೈಶಂಪಾಯನಃ

ಸ ತತ್ರ ನರ್ಮಸಂಯುಕ್ತಮಕರೋತ್ ಪಾಂಡವೋ ಬಹು ।
ಉತ್ತರಾಯಾಃ ಪ್ರಮುಖತಃ ಸರ್ವಂ ಜಾನನ್ನರಿಂದಮಃ ॥೬೪॥

ಅಲ್ಲಿ ಪಾಂಡವನೂ, ಅರಿಂದಮನೂ ಆದ ಅರ್ಜುನನು ಎಲ್ಲವನ್ನೂ ತಿಳಿದಿದ್ದರೂ ಉತ್ತರೆಯ ಎದುರಿನಲ್ಲಿ ಬಹಳ ವಿನೋದಯುಕ್ತ ಚೇಷ್ಟೆಗಳನ್ನು ಮಾಡಿದನು.

ತಮಾದದಾನಂ ಪ್ರಮದಾ ಜಹಾಸಿರೇ
ಹ್ಯಧೋಮುಖಂ ವೀರವರೋऽಭ್ಯಹಾರಯತ್ ।
ತತಃ ಶಿರಃಖಂ ನಿಕೃತಃ ಸಪತ್ನಹಾ
ಹ್ಯಧೋಮುಖಂ ಕವಚಮಥಾಭ್ಯಕರ್ಷತ ॥೬೫॥

ತಲೆಕೆಳಗಾಗಿ ಕವಚವನ್ನು ಸ್ವೀಕರಿಸಿದ ಅವನನ್ನು ನೋಡಿ ಸ್ತ್ರೀಯರು ಹಾಸ್ಯವನ್ನು ಮಾಡಿದರು. ಕವಚವನ್ನು ಧರಿಸಲು ಹೊರಟ ಶತ್ರುಸಂಹಾರಕನಾದ ವೀರಶ್ರೇಷ್ಠನು ಕಪಟವನ್ನು ಮಾಡುತ್ತಾ ತಲೆಯನ್ನು ತೂರಿಸಬೇಕಾದ ಸ್ಥಳವನ್ನು ಕೆಳಮುಖವನ್ನಾಗಿ ಮಾಡಿಕೊಂಡು ಕವಚವನ್ನು ಎಳೆದನು.

ಸಮ್ಯಕ್ ಪ್ರಜಾನನ್ನಪಿ ಸತ್ಯವಿಕ್ರಮೋ
ಹ್ಯಜ್ಞಾತವತ್ ಸರ್ವಕುರುಪ್ರವೀರಃ ।
ಊರ್ಧ್ವಂ ಕ್ಷಿಪನ್ ವೀರವರೋऽಭ್ಯಹಾರಯತ್
ಪುನಶ್ಚ ಯತ್ನಾತ್ ಕವಚಂ ಧನಂಜಯಃ ॥೬೬॥

ಸತ್ಯವಿಕ್ರಮನಾದ ಸರ್ವಕುರುಶ್ರೇಷ್ಠನಾದ ಅವನು ಸರಿಯಾಗಿ ತಿಳಿದಿದ್ದರೂ ಸಹ ಏನೂ ತಿಳಿಯದವನಂತೆ ಪುನಃ ಪ್ರಯತ್ನಪೂರ್ವಕವಾಗಿ ಕವಚವನ್ನು ಮೇಲ್ಮುಖವಾಗಿ ಮಾಡಿ ಧರಿಸಲು ಪ್ರಯತ್ನಿಸಿದನು.

ಏವಂಪ್ರಕಾರಾಣಿ ಬಹೂನಿ ಕುರ್ವತಿ
ತಸ್ಮಿನ್ ಕುಮಾರ್ಯಃ ಪ್ರಮದಾ ಜಹಾಸಿರೇ ।
ತಥಾऽಪಿ ಕುರ್ವಂತಮಮಿತ್ರಕರ್ಶನಂ
ನ ಚೋತ್ತರಃ ಪರ್ಯಭವದ್ ಧನಂಜಯಮ್ ॥೬೭॥

ಹೀಗೆ ಅವನು ಅನೇಕ ವಿಧವಾಗಿ ಮಾಡುತ್ತಿರಲು ಕುಮಾರಿಯರು ಮತ್ತು ಹೆಂಗಸರು ಹಾಸ್ಯವನ್ನು ಮಾಡಿದರು. ಆದರೂ ಹಾಗೆ ಮಾಡುತ್ತಿದ್ದ ಶತ್ರುಕರ್ಶನನಾದ ಅರ್ಜುನನನ್ನು ನೋಡಿ ಉತ್ತರನು ಅವಮಾನ ಮಾಡಲಿಲ್ಲ.

ತಂ ರಾಜಪುತ್ರಃ ಸಮನಹ್ಯಯತ್ ಸ್ವಯಂ
ಜಾಂಬೂನದಾಂತೇನ ದೃಢೇನ ವರ್ಮಣಾ ।
ಕೃಶಾನುತಪ್ತಪ್ರತಿಮೇನ ಭಾಸ್ವತಾ
ಜಾಜ್ವಲ್ಯಮಾನೇನ ಸಹಸ್ರರಾಜಿನಾ(ರಶ್ಮಿನಾ) ॥೬೮॥

ಆ ರಾಜಕುಮಾರನು ಚಿನ್ನದ ಅಂಚನ್ನು ಹೊಂದಿದ, ತಪ್ತ ಚಿನ್ನದಂತೆ ಹೊಳೆಯುವ, ಜಾಜ್ವಲ್ಯಮಾನವಾಗಿ ಪ್ರಕಾಶಿಸುವ ಸಹಸ್ರರಶ್ಮಿಗಳುಳ್ಳ, ಆ ದೃಢವಾದ ಕವಚವನ್ನು ತಾನೇ ತೊಡಿಸಿದನು.

ಅಥಾಸ್ಯ ಶೀಘ್ರಂ ಪ್ರಸಮೀಕ್ಷ್ಯ ಯೋಜಯದ್
ರಥೇ ಹಯಾನ್ ಕಾಂಚನಜಾಲಸಂವೃತಾನ್ ।
ಸುವರ್ಣಜಾಲಾಂತರಯೋಕ್ತ್ರಭೂಷಣಂ
ಸಿಂಹಂ ಚ ಸೌವರ್ಣಮುಪಾಶ್ರಯದ್ ರಥೇ ॥೬೯॥

ಅನಂತರ ಅರ್ಜುನನು ಸುವರ್ಣಮಯವಾದ ಜಾಲಗಳಿಂದ ಹೊದ್ದಿಸಲ್ಪಟ್ಟ ಅಶ್ವಗಳನ್ನು ರಥದಲ್ಲಿ ಹೂಡಿದನು. ಸುವರ್ಣಜಾಲಗಳ ಮಧ್ಯದಲ್ಲಿ ಭೂಷಣಗಳುಳ್ಳ ಸುವರ್ಣಮಯವಾದ ಸಿಂಹವನ್ನೂ ಸಹ ರಥದಲ್ಲಿ ಏರಿಸಿದನು.

ಧನೂಂಷಿ ಚ ವಿಚಿತ್ರಾಣಿ ಬಾಣಾಂಶ್ಚ ರುಚಿರಾನ್ ಬಹೂನ್ ।
ಆಯುಧಾನಿ ಚ ತತ್ರೈವ ರಥೋಪಸ್ಥೇ ನ್ಯಯೋಜಯತ್ ॥೭೦॥

ವಿಚಿತ್ರವಾದ ಧನುಸ್ಸುಗಳನ್ನು ಮನೋಹರವಾದ ಅನೇಕ ಬಾಣಗಳನ್ನೂ ಮತ್ತು ಆಯುಧಗಳನ್ನು ಅಲ್ಲಿಯೇ ರಥದಲ್ಲಿ ಜೋಡಿಸಿದನು.

ಆರುಹ್ಯ ಪ್ರಯಯೌ ವೀರಃ ಸಬೃಹನ್ನಳಸಾರಥಿಃ ।
ಅಥೋತ್ತರಾ ಚ ಕನ್ಯಾಶ್ಚ ಸಖ್ಯಶ್ಚೈವಾಬ್ರುವಂಸ್ತದಾ ॥೭೧॥

ಬೃಹನ್ನಳೇ ಆನಯೇಥಾ ವಾಸಾಂಸಿ ರುಚಿರಾಣಿ ನಃ ।
ಪಾಲಿತಾರ್ಥಾನಿ ಸೂಕ್ಷ್ಮಾಣಿ ರತ್ನಾನಿ ವಿವಿಧಾನಿ ಚ ॥೭೨॥

ವಿಜಿತ್ಯ ಸಂಗ್ರಾಮಗತಾನ್ ಭೀಷ್ಮದ್ರೋಣಮುಖಾನ್ ಕುರೂನ್ ॥೭೩॥

ವೀರನಾದ ಉತ್ತರನು ಬೃಹನ್ನಳೆಯನ್ನು ಸಾರಥಿಯನ್ನಾಗಿ ಮಾಡಿಕೊಂಡು ರಥವನ್ನೇರಿ ಹೊರಟನು. ಆಗ ಉತ್ತರೆಯೂ ಅವಳ ಸಖಿಯರಾದ ಕನ್ಯೆಯರೂ ಬೃಹನ್ನಳೆಯನ್ನು ಕುರಿತು, ಬೃಹನ್ನಳೆಯೇ, ನಮಗೆ ಸುಂದರವಾದ ವಸ್ತ್ರಗಳನ್ನು ತೆಗೆದುಕೊಂಡು ಬಾ. ಬೆಲೆಬಾಳುವ ಸೂಕ್ಷ್ಮವಾದ ವಸ್ತುಗಳನ್ನು, ವಿವಿಧವಾದ ರತ್ನಗಳನ್ನು ತೆಗೆದುಕೊಂಡು ಬಾ. ಯುದ್ಧಕ್ಕೆ ಬಂದ ಭೀಷ್ಮದ್ರೋಣ ಮೊದಲಾದ ಕೌರವರನ್ನು (ಗೆದ್ದು ವಸ್ತ್ರಮತ್ತು ರತ್ನಗಳನ್ನು ತೆಗೆದುಕೊಂಡು ಬಾ) ಎಂದು ಹೇಳಿದರು.

ಅಥಾನುಬ್ರುವತೀಃ ಕನ್ಯಾಃ ಸಹಿತಾಃ ಪಾಂಡುನಂದನಃ ।
ಪ್ರತ್ಯುವಾಚ ಹಸನ್ ಪಾರ್ಥೋ ಮೇಘದುಂದುಭಿನಿಸ್ವನಃ ॥೭೪॥

ಯದ್ಯುತ್ತರೋಽಯಂ ಸಂಗ್ರಾಮೇ ವಿಜೇಷ್ಯತಿ ಮಹಾರಥಾನ್ ।
ಅಥಾಹರಿಷ್ಯೇ ವಾಸಾಂಸಿ ಸೂಕ್ಷ್ಮಾಣ್ಯಾಭರಣಾನಿ ಚ ॥೭೫॥

ಹಾಗೆ ಒಟ್ಟಿಗೆ ಮಾತನಾಡುವ ಕನ್ಯೆಯರನ್ನು ಕುರಿತು, ಮೇಘದುಂದುಭಿ ಸ್ವನವುಳ್ಳ ಪಾಂಡುನಂದನನಾದ ಅರ್ಜುನನು ನಗುತ್ತಾ, ಈ ಉತ್ತರನು ಯುದ್ಧದಲ್ಲಿ ಮಹಾರಥರನ್ನು ಸೋಲಿಸಿದರೆ ಆಗ ನಾನು ಸೂಕ್ಷ್ಮವಾದ ವಸ್ತ್ರಗಳನ್ನೂ ಮತ್ತು ಆಭರಣಗಳನ್ನೂ ತರುವೆನು ಎಂದು ಹೇಳಿದನು.

ಅಥೋತ್ತರೋ ವರ್ಮ ಮಹಾಪ್ರಭಾವವತ್
ಸುವರ್ಣವೈಡೂರ್ಯಪರಿಷ್ಕೃತಂ ದೃಢಮ್ ।
ಆಮುಚ್ಯ ವೀರಃ ಪ್ರಯಯೌ ರಥೋತ್ತಮಂ
ಧನಂಜಯಂ ಸಾರಥಿನಂ ಪ್ರಗೃಹ್ಯ ॥೭೬॥

ಅನಂತರ ಉತ್ತರನು ಮಹಾಸಾಮರ್ಥ್ಯವುಳ್ಳ ಸುವರ್ಣವೈಡೂರ್ಯಗಳಿಂದ ಅಲಂಕೃತವಾಗಿ ದೃಢವಾಗಿದ್ದ ಕವಚವನ್ನು ಧರಿಸಿ ವೀರನಾದ ಅವನು ಶ್ರೇಷ್ಠವಾದ ರಥವನ್ನು ಏರಿ ಅರ್ಜುನನನ್ನು ಸಾರಥಿಯನ್ನಾಗಿ ಮಾಡಿಕೊಂಡು ಹೊರಟನು.

ತಮುತ್ತರಂ ಪ್ರೇಕ್ಷ್ಯ ರಥೋತ್ತಮೇ ಸ್ಥಿತಂ
ಬೃಹನ್ನಳಾಂ ಚೈವ ಮಹಾಜನಸ್ತದಾ ।
ಸ್ತ್ರಿಯಶ್ಚ ಕನ್ಯಾಶ್ಚ ದ್ವಿಜಾಶ್ಚ ಸುವ್ರತಾಃ
ಪ್ರದಕ್ಷಿಣಂ ಮಂಗಲಿನೋಽಭ್ಯಪೂಜಯನ್ ॥೭೭॥

ಶ್ರೇಷ್ಠವಾದ ರಥದಲ್ಲಿ ಕುಳಿತ ಉತ್ತರನನ್ನೂ ಮತ್ತು ಸಾರಥಿಯಾದ ಬೃಹನ್ನಳೆಯನ್ನೂ ನೋಡಿದ ಮಹಾಜನರೂ, ಸ್ತ್ರೀಯರೂ, ಕನ್ಯೆಯರೂ ಮತ್ತು ವ್ರತಶೀಲರಾದ ಬ್ರಾಹ್ಮಣರೂ ಸಹ ಅವನಿಗೆ ಮಂಗಳಪದಾರ್ಥಗಳನ್ನು ಕೈಯಲ್ಲಿಹಿಡಿದು ಪ್ರದಕ್ಷಿಣೆಯನ್ನು ಮಾಡಿ ಅವರನ್ನು ಪೂಜಿಸಿದರು.

ಪೌರಾಃ

ಯದರ್ಜುನಸ್ಯರ್ಷಭತುಲ್ಯಗಾಮಿನಃ
ಪುರಾಽಭವತ್ ಖಾಂಡವದಾಹಮಂಗಲಮ್ ।

ಕುರೂನ್ ಸಮಾಸಾದ್ಯ ರಣೇ ಬೃಹನ್ನಳೇ
ಸಹೋತ್ತರೇಣಾಸ್ತು ತವಾದ್ಯ ಮಂಗಲಮ್ ॥೭೮॥

ಎಲೌ ಬೃಹನ್ನಳೆಯೇ, ಹಿಂದೆ ವೃಷಭದ ನಡಿಗೆಯುಳ್ಳ ಪಾಂಡವನಾದ ಅರ್ಜುನನು ಖಾಂಡವವನವನ್ನು ದಹಿಸಿದಾಗ ಎಂತಹ ಮಂಗಳವಾಯಿತೋ ಈ ದಿನ ಕುರುಗಳನ್ನು ಎದುರಿಸಿ ಯುದ್ಧವನ್ನು ಮಾಡುವ ನಿನಗೆ ಉತ್ತರನ ಜೊತೆಯಲ್ಲಿ ಅಂತಹದೇ ಮಂಗಳ ಉಂಟಾಗಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥

ಗೋಗ್ರಹಣಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ಮೂವತ್ತೆಂಟನೆಯ ಅಧ್ಯಾಯ

ಕುರುಸೈನ್ಯವನ್ನು ನೋಡಿ ಭಯದಿಂದ ಪಲಾಯನ ಮಾಡುವ ಉತ್ತರನನ್ನು ಹಿಡಿದು ಅರ್ಜುನನ ಶಮೀವೃಕ್ಷದ ಸಮೀಪಗಮನ

ವೈಶಂಪಾಯನಃ

ಸ ರಾಜಧಾನ್ಯಾ ನಿರ್ಯಾಯ ವೈರಾಟಿಃ ಪೃಥಿವೀಂಜಯಃ ।
ಪ್ರಯಾಹೀತ್ಯಬ್ರವೀತ್ ಸೂತಂ ಯತ್ರ ತೇ ಕುರವೋ ಗತಾಃ ॥೧॥

ಸಮವೇತಾನ್ ಕುರೂನ್ ಯಾವದ್ ಜಿಗೀಷೂನವಜಿತ್ಯ ಚ ।
ಗಾಶ್ಚೈತಾಃ ಕ್ಷಿಪ್ರಮಾದಾಯ ಪುನರಾಯಾಮಿ ಮತ್ಪುರಮ್ ॥೨॥

ವೈಶಂಪಾಯನ– ರಾಜಧಾನಿಯಿಂದ ಹೊರಟ ವಿರಾಟಪುತ್ರನಾದ ಭೂಮಿಂಜಯನು (ಉತ್ತರನು) ಸೂತನಾದ ಬೃಹನ್ನಳೆಯನ್ನು ಕುರಿತು ಕುರುಗಳು ಇದ್ದಲ್ಲಿಗೆ ರಥವನ್ನು ನಡೆಸು. ಜಯವನ್ನು ಬಯಸುವ ಇಚ್ಛೆಯಿಂದ ಸೇರಿರುವ ಕೌರವರನ್ನು ಗೆದ್ದು ಈ ನನ್ನ ಗೋವುಗಳನ್ನು ಕ್ಷಿಪ್ರವಾಗಿ ತೆಗೆದುಕೊಂಡು ಪುನಃ ನನ್ನ ಪಟ್ಟಣಕ್ಕೆ ಬರುತ್ತೇನೆ ಎಂದು ಹೇಳಿದನು.

ತತಸ್ತಾಂಶ್ಚೋದಯಾಮಾಸ ಸದಶ್ವಾನ್ ಪಾಂಡುನಂದನಃ ॥೩॥

ತೇ ಹಯಾ ನರಸಿಂಹೇನ ಚೋದಿತಾಃ ಶೀಘ್ರಗಾಮಿನಃ ।
ಆಲಿಖಂತ ಇವಾಕಾಶಮೂಹುಃ ಕಾಂಚನಮಾಲಿನಃ ॥೪॥

ಆ ಪಾಂಡುನಂದನನಾದ ಅರ್ಜುನನು ಆ ಅಶ್ವಗಳನ್ನು ಪ್ರಚೋದಿಸಿದನು. ಶೀಘ್ರಗಾಮಿಗಳಾದ ನರಶ್ರೇಷ್ಠನಾದ ಅರ್ಜುನನಿಂದ ಪ್ರೇರಿಸಲ್ಪಟ್ಟ ಸುವರ್ಣ ಮಾಲೆಗಳನ್ನು ಧರಿಸಿದ ಆ ಅಶ್ವಗಳು ಆಕಾಶವನ್ನು ಬರೆಯುವಂತೆ ಅವರನ್ನು ಹೊತ್ತು ಸಾಗಿದವು.

ನಾತಿದೂರಮಥೋ ಯಾತ್ವಾ ಮಾತ್ಸ್ಯಪುತ್ರಧನಂಜಯೌ ।
ಅವೈಕ್ಷೇತಾಮವಿತ್ರಸ್ತೌ ಕುರೂಣಾಮುತ್ತಮಂ ಬಲಮ್ ॥೫॥

ಸ್ವಲ್ಪ ದೂರವೇ ಪ್ರಯಾಣವನ್ನು ಮಾಡಿ ಉತ್ತರ ಮತ್ತು ಧನಂಜಯರು ನಿರ್ಭಯರಾಗಿ ಕುರುಗಳ ಶ್ರೇಷ್ಠವಾದ ಸೈನ್ಯವನ್ನು ನೋಡಿದರು.

ಶ್ಮಶಾನಮಭಿತೋ ಗತ್ವಾ ಶೂರೌ ದದೃಶತುಃ ಕುರೂನ್ ॥೬॥

ತದನೀಕಂ ಮಹತ್ ತೇಷಾಂ ವಿಬಭೌ ಸಾಗರಸ್ವನಮ್ ॥೭॥

ಸಂಸರ್ಪಮಾಣಮಾಕಾಶೇ ವನಂ ಬಹುಲಪಾದಪಮ್ ॥೮॥

ಸ್ಮಶಾನದ ಸಮೀಪಕ್ಕೆ ಹೋಗಿ ಶೂರರಾದ ಅವರಿಬ್ಬರೂ ಕುರುಗಳನ್ನು ನೋಡಿದರು. ಸಮುದ್ರದಂತೆ ಘೋಷವುಳ್ಳ ಆ ದೊಡ್ಡ ಸೈನ್ಯವು ಅವರಿಗೆ ಆಕಾಶದಲ್ಲಿ ಸಂಚರಿಸುವ ಅನೇಕ ವೃಕ್ಷಗಳಿರುವ ಕಾಡಿನಂತೆ ಕಂಡಿತು.

ದದೃಶೇ ಪಾರ್ಥಿವೋ ರೇಣುರ್ಜನಿತಸ್ತೇನ ಸರ್ವತಃ ।
ದೃಷ್ಟಿಪ್ರಣಾಶೋ ಭೂತಾನಾಂ ದಿವಃಸ್ಪೃಕ್ ನರಸತ್ತಮ ॥೯॥

ಎಲೈ ನರಶ್ರೇಷ್ಠನೇ, ಆ ಸೈನ್ಯದ ಚಲನದಿಂದ ಭೂಮಿಯ ಧೂಳು ಎದ್ದು ಆಕಾಶದವರೆಗೆ ಹಬ್ಬಿ ಜನರ ಮತ್ತು ಪ್ರಾಣಿಗಳ ದೃಷ್ಟಿಯನ್ನು ಹಾಳು ಮಾಡಿತು.

ತದನೀಕಮಥ ಪ್ರೇಕ್ಷ್ಯ ಗಜಾಶ್ವರಥಸಂಕುಲಮ್ ।
ಕರ್ಣದುರ್ಯೋಧನಕೃಪೈರ್ಗುಪ್ತಂ ಶಾಂತನವೇನ ಚ ॥೧೦॥

ದ್ರೋಣೇನ ಚ ಸಪುತ್ರೇಣ ಮಹೇಷ್ವಾಸೇನ ಧೀಮತಾ ।
ಹೃಷ್ಟರೋಮಾ ಭಯೋದ್ವಿಗ್ನಃ ಪಾರ್ಥಂ ವೈರಾಟಿರಬ್ರವೀತ್ ॥೧೧॥

ಕರ್ಣ, ದುರ್ಯೋಧನ, ಕೃಪ, ಭೀಷ್ಮ ಮೊದಲಾದವರಿಂದಲೂ ದ್ರೋಣರಿಂದಲೂ, ಮೇಧಾವಿಯಾದ ಮಹಾಧನುರ್ಧಾರಿಯಾದ ಅಶ್ವತ್ಥಾಮರಿಂದಲೂ ರಕ್ಷಿತವಾದ, ಗಜಾಶ್ವರಥಗಳಿಂದ ನಿಬಿಡವಾದ, ಆ ಸೈನ್ಯವನ್ನು ನೋಡಿ ಭಯೋದ್ವಿಗ್ನನಾಗಿ ರೋಮಾಂಚನಗೊಂಡ ಉತ್ತರನು ಅರ್ಜುನನನ್ನು ಕುರಿತು ಹೇಳಿದನು.

ನೋತ್ಸಹೇ ಕುರುಭಿರ್ಯೋದ್ಧುಂ ರೋಮಹರ್ಷಂ ಚ ಪಶ್ಯ ಮೇ॥೧೨॥

ಬಹುಪ್ರವೀರಮತ್ಯುಗ್ರಂ ದೇವೈರಪಿ ದುರಾಸದಮ್ ।
ಪ್ರತಿಯೋದ್ಧುಂ ನ ಶಕ್ನೋಮಿ ಕುರುಸೈನ್ಯಂ ಭಯಾನಕಮ್ ॥೧೩॥

ನಾನು ಕೌರವರ ಜೊತೆ ಯುದ್ಧವನ್ನು ಮಾಡಲಾರೆ. ನನ್ನ ರೋಮಾಂಚನವನ್ನು ನೋಡು. ಅನೇಕ ವೀರರನ್ನು ಹೊಂದಿ, ಉಗ್ರರಾಗಿರುವ ದೇವತೆಗಳಿಂದಲೂ ಜಯಿಸಲು ಅಸಾಧ್ಯವಾದ, ಭಯಂಕರವಾದ ಕುರುಸೈನ್ಯದ ಜೊತೆಯಲ್ಲಿ ಯುದ್ಧ ಮಾಡಲು ನಾನು ಸಮರ್ಥನಲ್ಲ.

ನಾಶಂಸೇ ಭಾರತೀಂ ಸೇನಾಂ ಪ್ರವೇಷ್ಟುಂ ಭೀಮಕಾರ್ಮುಕಮ್ ।
ದೇವೈರಪಿ ಸಹೇಂದ್ರೇಣ ನ ಶಕ್ಯಂ ಕಿಂಪುನರ್ನರೈಃ ॥೧೪॥

ಭಯಂಕರವಾದ ಧನುಸ್ಸುಗಳನ್ನು ಹೊಂದಿದ ಭರತರ ಸೈನ್ಯವನ್ನು ಪ್ರವೇಶಿಸಲು ನಾನು ಇಷ್ಟಪಡುವುದಿಲ್ಲ. ಇಂದ್ರನಿಂದ ಸಹಿತರಾದ ದೇವತೆಗಳಿಂದಲೂ ಆ ಸೈನ್ಯವನ್ನು ಪ್ರವೇಶಿಸಲು ಸಾಧ್ಯವಿಲ್ಲ. ಇನ್ನು ಮನುಷ್ಯರು ಹೇಗೆ ಪ್ರವೇಶಿಸಲು ಸಾಧ್ಯ ?

ರಥನಾಗಾಶ್ವಕಲಿಲಂ ಪತ್ತಿಧ್ವಜಸಮಾಕುಲಮ್ ।
ದೃಷ್ಟ್ವೈವ ಹಿ ಪರಾನೀಕಂ ಮನಃ ಪ್ರವ್ಯಥತೀವ ಮೇ ॥೧೫॥

ರಥಾಶ್ವಗಜಗಳಿಂದ ತುಂಬಿಹೋಗಿರುವ, ಪದಾತಿ ಮತ್ತು ಧ್ವಜಗಳಿಂದ ನಿಬಿಡವಾದ ಶತ್ರುಸೈನ್ಯವನ್ನು ನೋಡಿಯೇ ನನ್ನ ಮನಸ್ಸಿಗೆ ಬಹಳ ವ್ಯಥೆಯಾಗುತ್ತಿದೆ.

ಯತ್ರ ಭೀಷ್ಮಶ್ಚ ದ್ರೋಣಶ್ಚ ಕೃಪಃ ಕರ್ಣೋ ವಿವಿಂಶತಿಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೋಮದತ್ತಶ್ಚ ಬಾಹ್ಲಿಕಃ ॥೧೬॥

ದುರ್ಯೋಧನಸ್ತಥಾ ರಾಜಾ ವೀರೋ ದುರ್ಮರ್ಷಣಃ ಪಟುಃ ॥೧೭॥

ಧೃತಿಮಂತೋ ಮಹೇಷ್ವಾಸಾ ಸರ್ವೇ ಯುದ್ಧವಿಶಾರದಾಃ ।
ಮತ್ತಾ ಇವ ಮಹಾನಾಗಾ ಯುಕ್ತಧ್ವಜಪತಾಕಿನಃ ॥೧೮॥

ನೀತಿಮಂತೋ ಮಹೇಷ್ವಾಸಾ ಸರ್ವಾಸ್ತ್ರಕೃತನಿಶ್ಚಯಾಃ ।
ದುರ್ಜಯಾಃ ಸರ್ವಸೈನ್ಯಾನಾಂ ದೇವೈರಪಿ ಸವಾಸವೈಃ ॥೧೯॥

ಪತಾಕಿನಶ್ಚ ಮಾತಂಗಾಃ ಸಧ್ವಜಾಶ್ಚ ಮಹಾರಥಾಃ ।
ವಿಪ್ರಕೀರ್ಣಾಃ ಕೃತೋದ್ಯೋಗಾ ವಾಜಿನಶ್ಚಿತ್ರಭೂಷಿತಾಃ ॥೨೦॥

ತಾನ್ ಜೇತುಂ ಸಮರೇ ಶೂರಾನ್ ದುರ್ಬುದ್ಧಿರಹಮಾಗತಃ ॥೨೧॥

ಎಲ್ಲಿ ಭೀಷ್ಮ, ದ್ರೋಣ, ಕೃಪ, ಕರ್ಣ, ವಿವಿಂಶತಿ, ಅಶ್ವತ್ಥಾಮ, ವಿಕರ್ಣ, ಸೋಮದತ್ತ, ಬಾಹ್ಲಿಕ, ರಾಜನಾದ ದುರ್ಯೋಧನ, ವೀರನಾದ ನಿಪುಣನಾದ ದುರ್ಮರ್ಷಣ- ಇವರೆಲ್ಲರೂ ಧೈರ್ಯಶಾಲಿಗಳು, ಮಹಾಧನುರ್ಧಾರಿಗಳು, ಯುದ್ಧವಿಶಾರದರು, ಮದಿಸಿದ ಮಹಾಗಜಗಳಂತೆ ಇರುವವರು, ರಥಗಳಲ್ಲಿ ಧ್ವಜಪತಾಕೆಗಳನ್ನು ಏರಿಸಿದವರು, ರಾಜನೀತಿಗಳನ್ನು ತಿಳಿದವರು, ಸರ್ವಾಸ್ತ್ರಗಳನ್ನು ಹೊಂದಿದವರು, ಇಂದ್ರನಿಂದ ಕೂಡಿದ ದೇವತೆಗಳ ಸಮಗ್ರ ಸೈನ್ಯದಿಂದಲೂ ದುರ್ಜಯರಾದವರು. ಆನೆಗಳು ಪತಾಕೆಗಳನ್ನು ಹೊಂದಿವೆ. ಮಹಾರಥಗಳು ಧ್ವಜಗಳಿಂದ ಕೂಡಿವೆ. ವಿಚಿತ್ರವಾಗಿ ಅಲಂಕೃತವಾದ ಅಶ್ವಗಳು ಪ್ರಯತ್ನಶೀಲವಾಗಿ ಎಲ್ಲಕಡೆಗಳಲ್ಲಿಯೂ ಹರಡಿವೆ. ಆ ಶೂರರನ್ನು ಯುದ್ಧದಲ್ಲಿ ಗೆಲ್ಲಲು ದುರ್ಬುದ್ಧಿಯುಳ್ಳ ನಾನು ಇಲ್ಲಿಗೆ ಬಂದೆನು.

ದೃಷ್ಟ್ವೈವ ಹಿ ಕುರೂನ್ ಸರ್ವಾನ್ ವ್ಯೂಢಾನೀಕಾನ್ ಪ್ರಹಾರಿಣಃ ।
ಹೃಷಿತಾನಿ ಚ ರೋಮಾಣಿ ಕಶ್ಮಲಂ ಚಾಗಮನ್ಮಹತ್ ॥೨೨॥

ಸೈನ್ಯವನ್ನು ವ್ಯೂಹಮಾಡಿ ಪ್ರಹಾರ ಮಾಡಲು ಸಿದ್ಧರಾದ ಎಲ್ಲಾ ಕೌರವರನ್ನೂ ನೋಡಿಯೇ ನನಗೆ ರೋಮಾಂಚವಾಗಿದೆ. ಬಹಳ ವಿಷಾದವೂ ಆಗುತ್ತಿದೆ.

ವೈಶಂಪಾಯನಃ

ದೃಷ್ಟ್ವಾ ಚ ಮಹತೀಂ ಸೇನಾಂ ಕುರೂಣಾಂ ದೃಢಧನ್ವಿನಾಮ್ ।
ಪರಿದೇವಯತೇ ಮಂದಃ ಸಕಾಶೇ ಸವ್ಯಸಾಚಿನಃ ॥೨೩॥

ವೈಶಂಪಾಯನ– ದೃಢ ಧನುಸ್ಸುಳ್ಳ ಕೌರವರ ಮಹಾಸೈನ್ಯವನ್ನು ನೋಡಿ ಮಂದನಾದ ಉತ್ತರನು ಅರ್ಜುನನ ಸಮೀಪದಲ್ಲಿ ಗೋಳಾಡಿದನು.

ತ್ರಿಗರ್ತಾನ್ ಮೇ ಪಿತಾ ಯಾತಃ ಶೂನ್ಯೇ ವೈ ಪ್ರಣಿಧಾಯ ಮಾಮ್ ।
ಸರ್ವಾಂ ಸೇನಾಂ ಸಮಾದಾಯ ನ ಮೇ ಸಂತೀಹ ಸೈನಿಕಾಃ ॥೨೪॥

ಅಹಮೇಕೋ ಬಹೂನ್ ಬಾಲಃ ಕೃತಾಸ್ತ್ರಾನಕೃತಶ್ರಮಃ ।
ಪ್ರತಿಯೋದ್ಧುಂ ನ ಶಕ್ನೋಮಿ ನಿವರ್ತಯ ಬೃಹನ್ನಳೇ ॥೨೫॥

ನನ್ನನ್ನು ಶೂನ್ಯಪಾಲನನ್ನಾಗಿ ಮಾಡಿ ನನ್ನ ತಂದೆಯು ಎಲ್ಲಾ ಸೈನ್ಯವನ್ನೂ ತೆಗೆದುಕೊಂಡು ತ್ರಿಗರ್ತರ ಜೊತೆಯಲ್ಲಿ ಯುದ್ಧ ಮಾಡಲು ಹೋದನು. ಇಲ್ಲಿ ನನಗೆ ಸೈನಿಕರೇ ಇಲ್ಲ. ಬಾಲಕನಾದ ಪರಿಶ್ರಮವಿಲ್ಲದ ನಾನೊಬ್ಬನೇ ಅಸ್ತ್ರಜ್ಞರಾದ ಅವರ ಜೊತೆಯಲ್ಲಿ ಯುದ್ಧ ಮಾಡಲು ಸಮರ್ಥನಲ್ಲ. ಬೃಹನ್ನಳೆಯೇ, ರಥವನ್ನು ಹಿಂದಿರುಗಿಸು.

ವೈಶಂಪಾಯನಃ

ತಂ ತಥಾವಾದಿನಂ ತತ್ರ ಬೀಭತ್ಸುಃ ಪ್ರತ್ಯಭಾಷತ ।
ಸಂಪ್ರಹಸ್ಯ ಪುನಸ್ತಂ ವೈ ಸರ್ವಲೋಕಮಹಾರಥಃ ॥೨೬॥

ವೈಶಂಪಾಯನ– ಹಾಗೆ ಮಾತನಾಡುತ್ತಿದ್ದ ಉತ್ತರನನ್ನು ನೋಡಿ ನಕ್ಕು ಸರ್ವಲೋಕ ಮಹಾರಥನಾದ ಅರ್ಜುನನು ಅವನನ್ನು ಕುರಿತು ಪುನಃ ಮಾತನಾಡಿದನು.

ಭಯಾದುದೀರ್ಣರೂಪೋಽಸಿ ದ್ವಿಷತಾಂ ಹರ್ಷವರ್ಧನಃ ।
ನ ಚ ತಾವತ್ ಕೃತಂ ಕಿಂಚಿತ್ ಪರೈಃ ಕರ್ಮ ರಣಾಜಿರೇ ॥೨೭॥

ಭಯದಿಂದ ವ್ಯಗ್ರವಾದ ರೂಪವನ್ನು ಹೊಂದಿ ಶತ್ರುಗಳಿಗೆ ಸಂತೋಷವನ್ನುಂಟು ಮಾಡುತ್ತಿದ್ದೀಯೆ. ಶತ್ರುಗಳು ರಣರಂಗದಲ್ಲಿ ಇನ್ನೂ ಯಾವ ಕಾರ್ಯವನ್ನೂ ಮಾಡಿಲ್ಲ.

ಸ್ವಯಮೇವ ಚ ಮಾಮಾತ್ಥ ವಹ ಮಾಂ ಕೌರವಾನ್ ಪ್ರತಿ ।
ಸೋಽಹಂ ತ್ವಾಂ ತತ್ರ ನೇಷ್ಯಾಮಿ ಯತ್ರೈತೇ ಬಹುಲಾ ಧ್ವಜಾಃ ॥೨೮॥

ನನ್ನನ್ನು ಕೌರವರ ಬಳಿಗೆ ಕರೆದುಕೊಂಡು ಹೋಗು ಎಂದು ನೀನೇ ನನ್ನನ್ನು ಕುರಿತು ಹೇಳಿದೆ. ಆದ್ದರಿಂದ ಈ ಅನೇಕ ಧ್ವಜಗಳು ಎಲ್ಲಿ ಕಂಡುಬರುತ್ತವೆಯೋ ಅಲ್ಲಿಗೆ ನಿನ್ನನ್ನು ಕೊಂಡೊಯ್ಯುವೆನು.

ಮಧ್ಯಮಾಮಿಷಗೃಧ್ನಾಣಾಂ ಕುರೂಣಾಮಾತತಾಯಿನಾಮ್ ।
ನೇಷ್ಯಾಮಿ ತ್ವಾಂ ಮಹಾಬಾಹೋ ಮಾ ತ್ವಂ ಹಿ ವಿಮನಾ ಭವ ॥೨೯॥
ಸಮುದ್ರಮಿವ ಗಂಭೀರಂ ಕುರುಸೈನ್ಯಮರಿಂದಮ ॥೩೦॥

ಎಲೈ ಮಹಾಬಾಹುವೇ, ಶತ್ರುಗಳ ಮಾಂಸದಲ್ಲಿ ಆಸೆಯನ್ನು ಹೊಂದಿರುವ ಶಸ್ತ್ರಧಾರಿಗಳಾದ ಕೌರವರ, ಸಮುದ್ರದಂತೆ ಅಗಾಧವಾದ ಸೈನ್ಯವೆಲ್ಲಿದೆಯೋ ಅಂತಹ ಕುರುಸೈನ್ಯದ ಬಳಿಗೆ ನಿನ್ನನ್ನು ಕರೆದುಕೊಂಡು ಹೋಗುವೆನು. ಎಲೈ ಅರಿಂದಮನೇ, ನೀನು ವಿಷಾದವನ್ನು ಹೊಂದಬೇಡ.

ಸ್ತ್ರೀಸಕಾಶೇ ಪ್ರತಿಜ್ಞಾಯ ಪುರುಷಾಣಾಂ ಹಿ ಶೃಣ್ವತಾಮ್ ।
ವಿಕತ್ಥಮಾನೋ ನಿರ್ಯಾತ್ವಾ ಬ್ರೂಷಿ ಕಿಂ ನಾತ್ರ ಯುದ್ಧ್ಯಸೇ ॥೩೧॥

ಸ್ತ್ರೀಯರ ಎದುರಿಗೆ ಪುರುಷರು ಕೇಳುತ್ತಿರುವಂತೆ ನಿನ್ನನ್ನೇ ನೀನು ಶ್ಲಾಘಿಸಿಕೊಂಡು ಪ್ರತಿಜ್ಞೆಯನ್ನು ಮಾಡಿ ಹೊರಗೆ ಬಂದು ಈಗ ಏಕೆ ಯುದ್ಧವನ್ನು ಮಾಡುವುದಿಲ್ಲ ಎಂದು ಹೇಳುತ್ತಿದ್ದೀಯೆ?

ತಥಾ ಸ್ತ್ರೀಷು ಪ್ರತಿಶ್ರುತ್ಯ ಪೌರುಷಂ ಪುರುಷೇಷು ಚ ।
ರಥಮಾರುಹ್ಯ ನಿರ್ಯಾಯ ಕಿಮರ್ಥಂ ನ ಚ ಯೋತ್ಸ್ಯಸೇ ॥೩೨॥

ಸ್ತ್ರೀಯರ ಸಮೀಪದಲ್ಲಿ ಮತ್ತು ಪುರುಷರ ಸಮೀಪದಲ್ಲಿ ನಿನ್ನ ಪೌರುಷವನ್ನು ಆ ರೀತಿಯಲ್ಲಿ ಪ್ರತಿಜ್ಞೆ ಮಾಡಿ ರಥವನ್ನೇರಿ ಹೊರಗೆ ಬಂದು ಈಗ ಏಕೆ ಯುದ್ಧವನ್ನು ಮಾಡುವುದಿಲ್ಲ?

ನ ಚೇದ್ ವಿಜಿತ್ಯ ಗಾಸ್ತ್ವಂ ಹಿ ನಗರಂ ಪ್ರತಿಯಾಸ್ಯಸಿ ।
ಪ್ರಹಸಿಷ್ಯಂತಿ ಧೀರಾಸ್ತ್ವಾಂ ನರಾ ನಾರ್ಯಶ್ಚ ಸಂಗತಾಃ ॥೩೩॥

ಗೋವುಗಳನ್ನು ಗೆಲ್ಲದೆ ನೀನು ನಗರಕ್ಕೆ ಹಿಂದಿರುಗಿದರೆ ಧೀರರಾದ ಪುರುಷರು ಮತ್ತು ಸ್ತ್ರೀಯರು ಒಟ್ಟಿಗೆ ಸೇರಿ ನಿನ್ನನ್ನು ಹಾಸ್ಯಮಾಡುವರು.

ಅಹಮಪ್ಯಸ್ಮಿ ಸೈರಂಧ್ರ್ಯಾ ಸ್ತುತಃ ಸಾರಥ್ಯಕರ್ಮಣಿ ।
ನಾಹಂ ಶಕ್ನೋಮ್ಯನಿರ್ಜಿತ್ಯ ಗಾಃ ಪ್ರಯಾತುಂ ಪುರಂ ಪ್ರತಿ ॥೩೪॥

ಸೈರಂಧ್ರಿಯು ನನ್ನನ್ನೂ ಕೂಡ ಸಾರಥ್ಯಕರ್ಮದ ವಿಷಯದಲ್ಲಿ ಹೊಗಳಿದ್ದಾಳೆ. ಗೋವುಗಳನ್ನು ಗೆಲ್ಲದೆ ನಾನು ಪುನಃ ಪಟ್ಟಣಕ್ಕೆ ಹೋಗಲಾರೆ.

ಸ್ತೋತ್ರೇಣ ಚೈವ ಸೈರಂಧ್ರ್ಯಾಸ್ತವ ವಾಕ್ಯೇನ ಚೋದಿತಃ ।
ಕಥಂ ನ ಯುದ್ಧ್ಯೇಯಮಹಂ ಕುರೂನೇತಾನ್ ಸ್ಥಿರೋ ಭವ ॥೩೫॥

ಸೈರಂಧ್ರಿಯ ಪ್ರಶಂಸೆಯ ಮಾತುಗಳಿಂದಲೂ ಮತ್ತು ನಿನ್ನ ಮಾತುಗಳಿಂದಲೂ ಪ್ರೇರಿಸಲ್ಪಟ್ಟ ನಾನು ಈ ಕೌರವರ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡದೆ ಇದ್ದೇನು? ನೀನು ಧೈರ್ಯದಿಂದಿರು.

ಉತ್ತರಃ

ಕಾಮಂ ಹರಂತು ಮಾತ್ಸ್ಯಾನಾಂ ಭೂಯಾಂಸಃ ಕುರವೋ ಧನಮ್ ।
ಪ್ರಹಸಂತು ಚ ಮಾಂ ನಾರ್ಯೋ ನರಾಶ್ಚಾಪಿ ಬೃಹನ್ನಳೇ ॥೩೬॥

ಸಂಗ್ರಾಮೇಣ ನ ಮೇ ಕಾರ್ಯಂ ಗಾವೋ ಗಚ್ಛಂತು ಚಾಪಿ ಮೇ ।
ನಗರಂ ಚ ಪ್ರವೇಕ್ಷ್ಯಾಮಿ ಪಶ್ಯತಸ್ತೇ ಬೃಹನ್ನಳೇ ॥೩೭॥

ಉತ್ತರ– ಬಹುಸಂಖ್ಯೆಯಲ್ಲಿರುವ ಕೌರವರು ನಮ್ಮ ಗೋಧನವನ್ನು ತೆಗೆದುಕೊಂಡು ಹೋಗಲಿ. ಬೃಹನ್ನಳೆಯೇ, ಸ್ತ್ರೀಯರು ಮತ್ತು ಪುರುಷರು ನನ್ನನ್ನು ಹಾಸ್ಯವನ್ನು ಮಾಡಲಿ.

ಯುದ್ಧದಿಂದ ನನಗೆ ಏನೂ ಆಗಬೇಕಾಗಿಲ್ಲ. ಗೋವುಗಳು ಹೋಗಲಿ. ಎಲೌ ಬೃಹನ್ನಳೆಯೇ, ನೀನು ನೋಡುತ್ತಿರುವಂತೆಯೇ ನಾನು ನಗರಕ್ಕೆ ಹೋಗುವೆನು.

ವೈಶಂಪಾಯನಃ

ಇತ್ಯುಕ್ತ್ವಾ ಪ್ರಾದ್ರವತ್ ಭೀತೋ ರಥಾತ್ ಪ್ರಸ್ಕಂದ್ಯ ಕುಂಡಲೀ ।
ತ್ಯಕ್ತ್ವಾ ಮಾನಂ ಸುಸಂತ್ರಸ್ತೋ ವಿಸೃಜ್ಯ ಸಶರಂ ಧನುಃ ॥೩೮॥

ವೈಶಂಪಾಯನ– ಹೀಗೆ ಹೇಳಿ ಕರ್ಣಕುಂಡಲಗಳನ್ನು ಧರಿಸಿದ ಉತ್ತರನು ಬಹಳ ಹೆದರಿ ಮಾನವನ್ನು ಬಿಟ್ಟು ಬಿಲ್ಲು ಬಾಣಗಳನ್ನು ತ್ಯಜಿಸಿ ರಥದಿಂದ ಧುಮುಕಿ ಓಡಲು ಪ್ರಾರಂಭಿಸಿದನು.

ನೈಷ ಶೂರೈಃ ಸ್ಮೃತೋ ಧರ್ಮಃ ಕ್ಷತ್ರಿಯಸ್ಯ ಪಲಾಯನಮ್ ।
ಶ್ರೇಯೋ ಹಿ ಮರಣಂ ಯುದ್ಧೇ ಕ್ಷತ್ರಿಯಸ್ಯ ಪಲಾಯನಾತ್ ॥೩೯॥

ಇತಿ ಚೋಕ್ತ್ವಾ ತು ಕೌಂತೇಯೋ ರಥಾದವತತಾರ ಹ ।
ದೀರ್ಘಾಂ ವೇಣೀಂ ವಿಧೂನ್ವಾನಃ ಸಾಧು ರಕ್ತೇ ಚ ವಾಸಸೀ ॥೪೦॥

ಅನ್ವಧಾವನ್ಮಹಾಬಾಹೂ ರಾಜಪುತ್ರಂ ಧನಂಜಯಃ ॥೪೧॥

ಕ್ಷತ್ರಿಯನಾದವನು ಪಲಾಯನ ಮಾಡುವುದು ಧರ್ಮವೆಂದು ಯಾವ ಶೂರರೂ ಹೇಳುವುದಿಲ್ಲ. ಪಲಾಯನ ಮಾಡುವುದಕ್ಕಿಂತ ಯುದ್ಧದಲ್ಲಿ ಮರಣವೇ ಕ್ಷತ್ರಿಯನಿಗೆ ಶ್ರೇಷ್ಠವಾದುದು ಎಂದು ಹೇಳುತ್ತಾ ಅರ್ಜುನನು ರಥದಿಂದ ಇಳಿದನು. ಉದ್ದವಾದ ಕೇಶವನ್ನು ಮತ್ತು ಧರಿಸಿದ ರಕ್ತವಸ್ತ್ರಗಳನ್ನು ಕೊಡವಿಕೊಳ್ಳುತ್ತಾ ಮಹಾಬಾಹುವಾದ ಅರ್ಜುನನು ರಾಜಪುತ್ರನಾದ ಉತ್ತರನ ಹಿಂದೆ ಓಡಿದನು.

ವಿಕ್ರಮಂತಂ ಪದನ್ಯಾಸೈಃ ಕಂಪಯಂತಂ ಚ ಮೇದಿನೀಮ್ ।
ವಿಧೂಯ ವೇಣೀಂ ಧಾವಂತಮಜಾನಂತೋಽರ್ಜುನಂ ತದಾ ॥೪೨॥

ಸೈನಿಕಾಃ ಪ್ರಾಹಸನ್ ಕೇಚಿತ್ ತಸ್ಯ ರೂಪಮವೇಕ್ಷ್ಯ ಚ ॥೪೩॥

ತನ್ನ ಪದನ್ಯಾಸದಿಂದ ಭೂಮಿಯನ್ನು ನಡುಗಿಸುತ್ತಾ ಪರಾಕ್ರಮವನ್ನು ತೋರಿಸುತ್ತಿದ್ದ, ತಲೆಕೂದಲುಗಳನ್ನು ಕೊಡವಿಕೊಂಡು ಓಡುತ್ತಿದ್ದಂತಹ ಅರ್ಜುನನನ್ನು

ತಿಳಿಯದೇ ಆಗ ಕೆಲವು ಕೌರವ ಸೈನಿಕರು ಅವನ ರೂಪವನ್ನು ನೋಡಿ ಹಾಸ್ಯವನ್ನು ಮಾಡಿದರು.

ತಂ ಚ ಶೀಘ್ರಂ ಪ್ರಧಾವಂತಂ ಸಂಪ್ರೇಕ್ಷ್ಯ ಕುರವೋಽಬ್ರುವನ್ ॥೪೪॥

ಕೋಽಯಂ ಧಾವತ್ಯಸಂಗೇನ ಪೂರ್ವಂ ಮುಕ್ತ್ವಾ ರಥೋತ್ತಮಮ್ ।
ಕ ಏಷ ವೇಷಪ್ರಚ್ಛನ್ನೋ ಭಸ್ಮಚ್ಛನ್ನ ಇವಾನಲಃ ॥೪೫॥

ಕಿಂಚಿತ್ ತಸ್ಯ ತಥಾ ಪುಂಸಃ ಕಿಂಚಿತ್ ತಸ್ಯ ಯಥಾ ಸ್ತ್ರಿಯಃ ॥೪೬॥

ಶೀಘ್ರವಾಗಿ ಓಡುತ್ತಿದ್ದ ಅವನನ್ನು ನೋಡಿ ಅವರು ಯುದ್ಧದ ಪ್ರಸಂಗವಿಲ್ಲದೆಯೇ ಮೊದಲೇ ಶ್ರೇಷ್ಠವಾದ ರಥದಿಂದ ಇಳಿದು ಓಡುತ್ತಿರುವ ಇವನು ಯಾವನು? ಬೂದಿ ಮುಚ್ಚಿದ ಕೆಂಡದಂತೆ ಇರುವ, ವೇಷದಿಂದ ಪ್ರಚ್ಛನ್ನನಾದ ಇನ್ನೊಬ್ಬನು ಯಾವನು? ಅವನ ಸ್ವಲ್ಪ ಅಂಶವು (ಆಕಾರವು) ಸ್ತ್ರೀಯಂತೆಯೂ, ಸ್ವಲ್ಪ ಅಂಶವು (ಶೀಲವು) ಪುರುಷನಂತೆಯೂ ಇದೆ ಎಂದು ಮಾತನಾಡಿಕೊಂಡರು.

ವೈಶಂಪಾಯನಃ

ಇತ್ಯೇವಂ ಸೈನಿಕಾಃ ಪ್ರಾಹುರ್ದ್ರೋಣಸ್ತಾನಿದಮಬ್ರವೀತ್ ।
ಆಚಾರ್ಯಃ ಕುರುಪಾಂಡೂನಾಂ ಮತೌ ಶುಕ್ರಾಂಗಿರೋಪಮಃ ॥೪೭॥

ವೈಶಂಪಾಯನ– ಸೈನಿಕರು ಹೀಗೆ ಮಾತನಾಡುತ್ತಿದ್ದಾಗ ಕುರುಪಾಂಡವರ ಆಚಾರ್ಯರಾದ ಬುದ್ಧಿಯಲ್ಲಿ ಶುಕ್ರ ಬೃಹಸ್ಪತಿಗೆ ಹೋಲುವವರೂ ಆದ ದ್ರೋಣರು ಆ ಸೈನಿಕರನ್ನು ಕುರಿತು ಹೀಗೆ ಮಾತನಾಡಿದರು.

ಕಿಂ ವಿಚಾರಣಯಾ ಕಾರ್ಯಮೇತೇನಾನುಸೃತೇನ ವೈ ॥೪೮॥

ಧಾವಂತಮನುಧಾವಂತಶ್ಚ ನಿರ್ಭಯೋ ಭಯವಿಪ್ಲುತಮ್ ।
ವೇಣೀಕಲಾಪಂ ನಿರ್ಧೂಯ ಪ್ರತಿಭಾತಿ ನರರ್ಷಭಃ ॥೪೯॥

ಮುಂದೆ ಓಡುತ್ತಿರುವ ಮತ್ತು ಅವನ ಹಿಂದೆ ಓಡುತ್ತಿರುವ ಇವರು ಯಾರು ಎಂದು ವಿಚಾರವನ್ನು ಮಾಡಿ ಏನು ಪ್ರಯೋಜನ? ಭಯಗ್ರಸ್ತನಾಗಿ ಮುಂದೆ ಓಡುತ್ತಿರುವ ಆ ವ್ಯಕ್ತಿಯನ್ನು ನಿರ್ಭಯನಾಗಿ ತನ್ನ ಕೇಶಕಲಾಪವನ್ನು ಕೊಡವಿಕೊಳ್ಳುತ್ತಾ ನರಶ್ರೇಷ್ಠನಾದ ಅರ್ಜುನನು ಹಿಂಬಾಲಿಸಿ ಓಡುತ್ತಿದ್ದಾನೆ ಎಂದು ನನಗೆ ತೋರುತ್ತದೆ.

ಆಕಾರಮರ್ಜುನಸ್ಯೈತತ್ ಕ್ಲೀಬರೂಪಂ ಬಿಭರ್ತಿ ಚ ।
ರೂಪೇಣ ಪಾರ್ಥಸದೃಶಃ ಸ್ತ್ರೀವೇಷಸಮಲಂಕೃತಃ ॥೫೦॥

ಈ ಆಕಾರವು ಅರ್ಜುನನದ್ದು. ನಪುಂಸಕರ ರೂಪವನ್ನು ಧರಿಸಿದ್ದಾನೆ. ಈ ವ್ಯಕ್ತಿಯು ಆಕಾರದಿಂದ ಅರ್ಜುನನಿಗೆ ಸದೃಶನೂ, ಸ್ತ್ರೀವೇಷದಿಂದ ಅಲಂಕೃತನೂ ಆಗಿದ್ದಾನೆ.

ನಟೇ ವೈತಚ್ಛಿರೋಗ್ರೀವಂ ತೌ ಬಾಹೂ ಪರಿಘೋಪಮೌ ।
ತತ್ತದೇವಾಸ್ಯ ವಿಕ್ರಾಂತಂ ನಾಯಮನ್ಯೋ ಧನಂಜಯಾತ್ ॥೫೧॥

ಈತನ ಶಿರಸ್ಸು ಮತ್ತು ಕತ್ತುಗಳು ನಟನ ಶಿರಸ್ಸು ಮತ್ತು ಕತ್ತುಗಳಂತಿವೆ. ಆ ಬಾಹುಗಳು ಒನಕೆಯಂತಿವೆ. ಅದೇ ವಿಕ್ರಮದ ನಡಿಗೆ ಇವನಿಗಿದೆ. ಇವನು ಅರ್ಜುನನನ್ನು ಬಿಟ್ಟು ಬೇರೆ ಯಾರೂ ಆಗಲಾರ.

ಅಮರೇಷ್ವಿವ ದೇವೇಂದ್ರೋ ಮಾನುಷೇಷು ಧನಂಜಯಃ ।
ಏಕೋಽಸ್ಮಾನನುಯಾತ್ಯೇಷ ನಾಯಮನ್ಯೋ ಧನಂಜಯಾತ್ ॥೫೨॥

ದೇವತೆಗಳಲ್ಲಿ ದೇವೇಂದ್ರನಂತೆ ಮನುಷ್ಯರಲ್ಲಿ ಧನಂಜಯನೊಬ್ಬನೇ ನಮಗೆ ಪ್ರತಿಯಾಗಿ ಯುದ್ಧವನ್ನು ಮಾಡಲು ಬರುತ್ತಿದ್ದಾನೆ. ಇವನು ಅರ್ಜುನನನ್ನು ಬಿಟ್ಟು ಬೇರೆ ಯಾರೂ ಅಲ್ಲ.

ವೈಶಂಪಾಯನಃ

ದ್ರೋಣೇನ ಚೈವಮುಕ್ತಸ್ತು ಕರ್ಣಃ ಪ್ರೋವಾಚ ಬುದ್ಧಿಮಾನ್ ॥೫೩॥

ವೈಶಂಪಾಯನ– ದ್ರೋಣರಿಂದ ಹೀಗೆ ಹೇಳಲ್ಪಟ್ಟ ಮೇಧಾವಿಯಾದ ಕರ್ಣನು ಮಾತನಾಡಿದನು.

ಏಕಃ ಪುತ್ರೋ ವಿರಾಟಸ್ಯ ಶೂನ್ಯೇ ಸನ್ನಿಹಿತಃ ಪುರೇ ।
ಸ ಏಷ ಕಿಲ ನಿರ್ಯಾತೋ ಬಾಲಭಾವಾನ್ನ ಪೌರುಷಾತ್ ॥೫೪॥

ಕ್ಲೀಬಂ ವೈ ಸಾರಥಿಂ ಕೃತ್ವಾ ನಿರ್ಯಾತೋ ನಗರಾದ್ ಬಹಿಃ ॥೫೫॥

ಧನ್ವಂ ಗಾತ್ರೇಣ ವಾ ನೂನಂ ಜಾನೀಧ್ವಂ ಯಾಂತಮರ್ಜುನಮ್ ।
ತೇ ಹಿ ನಃ ಪ್ರತಿಸಂಯಾತುಂ ಸಂಗ್ರಾಮೇ ನ ಹಿ ಶಕ್ನುಯುಃ ॥೫೬॥

ಕಥಮೇಕತರಸ್ತೇಷಾಂ ಸಮಸ್ತಾನ್ ಯೋಧಯೇತ್ ಕುರೂನ್ ॥೫೭॥

ವಿರಾಟನ ಒಬ್ಬ ಪುತ್ರನು ರಾಜಧಾನಿಯಲ್ಲಿ ಶೂನ್ಯಪಾಲನಾಗಿದ್ದನು. ಅಂತಹ ಅವನೇ ಬಾಲಭಾವದಿಂದ ಯುದ್ಧಕ್ಕೆ ಬಂದಿದ್ದಾನೆ. ಪೌರುಷದಿಂದಲ್ಲ. ನಪುಂಸಕನನ್ನು ಸಾರಥಿಯನ್ನಾಗಿ ಮಾಡಿಕೊಂಡು ನಗರದಿಂದ ಹೊರಗೆ ಬಂದಿದ್ದಾನೆ. ಈ ಹಿಂಬಾಲಿಸುವವನನ್ನು ವೇಷವನ್ನು ಮರೆಸಿಕೊಂಡ ಅರ್ಜುನನೆಂದು ಸ್ಪಷ್ಟವಾಗಿ ತಿಳಿಯಿರಿ. ಮತ್ಸ್ಯರು ಯುದ್ಧದಲ್ಲಿ ನಮ್ಮನ್ನು ಎದುರಿಸಲು ಖಂಡಿತವಾಗಿಯೂ ಸಮರ್ಥರಲ್ಲ. ಅವರಲ್ಲಿ ಒಬ್ಬನು ಹೇಗೆ ಸಮಸ್ತ ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡಿಯಾನು?

ಉತ್ತರಃ ಸಾರಥಿಂ ಕೃತ್ವಾ ನಿರ್ಯಾತೋ ನಗರಾದ್ ಬಹಿಃ ।
ಸ ನೋ ಮನೋ ಧ್ವಜಾನ್ ದೃಷ್ಟ್ವಾ ಭೀತ ಏಷ ಪಲಾಯತೇ ॥೫೮॥

ಉತ್ತರನು ಅವನನ್ನು ಸಾರಥಿಯನ್ನಾಗಿ ಮಾಡಿಕೊಂಡು ನಗರದಿಂದ ಹೊರಗೆ ಬಂದಿದ್ದಾನೆ. ಈ ಉತ್ತರನಾದರೂ ನಮ್ಮ ಧೈರ್ಯಯುಕ್ತವಾದ ಮನಸ್ಸನ್ನು ಮತ್ತು ಧ್ವಜಗಳನ್ನು ನೋಡಿ ಪಲಾಯನ ಮಾಡುತ್ತಿದ್ದಾನೆ.

ಕೃಪಃ

ನೂನಂ ತಮೇವ ಧಾವಂತಂ ಜಿಘೃಕ್ಷತಿ ಧನಂಜಯಃ ।
ಉತ್ತರಂ ಸಾರಥಿಂ ಕೃತ್ವಾ ಸ್ವಯಂ ಯೋದ್ಧುಮಿಹೇಚ್ಛತಿ ॥೫೯॥

ಕೃಪ– ನಿಶ್ಚಿತವಾಗಿ ಆ ಓಡುತ್ತಿರುವವನನ್ನು ಅರ್ಜುನನು ಹಿಂಬಾಲಿಸಿ ಹಿಡಿಯಲು ಬಯಸುತ್ತಿದ್ದಾನೆ. ಉತ್ತರನನ್ನು ಸಾರಥಿಯನ್ನಾಗಿ ಮಾಡಿಕೊಂಡು ತಾನೇ ಯುದ್ಧವನ್ನು ಮಾಡಲು ಅರ್ಜುನನು ಅಪೇಕ್ಷಿಸುತ್ತಾನೆ.

ವೈಶಂಪಾಯನಃ

ಇತಿ ಸ್ಮ ಕುರವಃ ಸರ್ವೇ ವಿಮೃಶಂತಃ ಪುನಃ ಪುನಃ ।
ನ ಚ ವ್ಯವಸಿತುಂ ವೀರಾ ಅರ್ಜುನಂ ಶಕ್ನುವಂತಿ ತೇ ॥೬೦॥

ವೈಶಂಪಾಯನ– ಹೀಗೆ ವೀರರಾದ ಕೌರವರೆಲ್ಲರೂ ಪುನಃ ಪುನಃ ವಿಮರ್ಶೆ ಮಾಡಿದರೂ ಇವನು ಅರ್ಜುನನೆಂದು ನಿರ್ಣಯಿಸಲು ಸಮರ್ಥರಾಗಲಿಲ್ಲ.

ದುರ್ಯೋಧನ ಉವಾಚೇದಂ ಸೈನಿಕಾನ್ ರಥಸತ್ತಮಾನ್ ॥೬೧॥

ಅರ್ಜುನೋ ವಾಸುದೇವೋ ವಾ ರಾಮಃ ಪ್ರದ್ಯುಮ್ನ ಏವ ವಾ ।
ತೇ ಹಿ ನಃ ಪ್ರತಿಸಂಯಾತುಂ ಸಂಗ್ರಾಮೇ ನ ಚ ಶಕ್ನುಯುಃ ॥೬೨॥

ಆಗ ದುರ್ಯೋಧನನು ರಥಶ್ರೇಷ್ಠರಾದ ಸೈನಿಕರನ್ನು ಕುರಿತು ಅರ್ಜುನನಾಗಲೀ, ಕೃಷ್ಣನಾಗಲೀ, ರಾಮನಾಗಲೀ ಅಥವಾ ಪ್ರದ್ಯುಮ್ನನೇ ಆಗಲಿ, ಅವರು ಯುದ್ಧದಲ್ಲಿ ನಮ್ಮನ್ನು ಎದುರಿಸಲು ಸಮರ್ಥರಲ್ಲ.

ಅನ್ಯೋ ವಾ ಕ್ಲೀಬರೂಪೇಣ ಯದ್ಯಾಗಚ್ಛೇದ್ ಗವಾಂ ಪದಮ್ ।
ಅರ್ಪಯಿತ್ವಾ ಶರೈಸ್ತೀಕ್ಷ್ಣೈಃ ಪಾತಯಿಷ್ಯಾಮಿ ಭೂತಳೇ ॥೬೩॥

ಕಥಮೇಕತರಸ್ತೇಷಾಂ ಸಮಸ್ತಾನ್ ಯೋಧಯೇತ್ ಕುರೂನ್ ॥೬೪॥

ನಪುಂಸಕ ವೇಷದಿಂದ ಬೇರೆ ಯಾವನಾದರೂ ಗೋವುಗಳ ಸಮೀಪಕ್ಕೆ ಬಂದರೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಅವನನ್ನು ಭೂಮಿಯ ಮೇಲೆ ಕೆಡವುವೆನು. ಅವರಲ್ಲಿ ಒಬ್ಬನು ಹೇಗೆ ಎಲ್ಲಾ ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡಿಯಾನು?

ವೈಶಂಪಾಯನಃ

ಛನ್ನಂ ತಥಾಗತಂ ಸರ್ವೇ ಪಾಂಡವಂ ಪ್ರೇಕ್ಷ್ಯ ಸೈನಿಕಾಃ ।
ಅರ್ಜುನೋ ನೇತಿ ಚೇತ್ಯೇನಂ ನ ವ್ಯವಸ್ಯಂತಿ ತೇ ಪುನಃ ॥೬೫॥

ವೈಶಂಪಾಯನ– ಆ ರೀತಿಯಲ್ಲಿ ವೇಷಚ್ಛನ್ನನಾದ ಅರ್ಜುನನನ್ನು ನೋಡಿ ಎಲ್ಲಾ ಸೈನಿಕರು ಇವನು ಅರ್ಜುನ ಅಥವಾ ಅಲ್ಲ ಎಂದು ನಿರ್ಧರಿಸಲು ಸಾಧ್ಯವಾಗಲಿಲ್ಲ.

ಇತಿ ಸ್ಮ ಕುರವಃ ಸರ್ವೇ ಮಂತ್ರಯಂತೋ ಮಹಾರಥಾಃ ॥೬೬॥

ದೃಢವೇಧೀ ಮಹಾಸತ್ತ್ವಃ ಶಕ್ರತುಲ್ಯಪರಾಕ್ರಮಃ ।
ಅದ್ಯಾಗಚ್ಛತಿ ಚೇದ್ ಯೋದ್ಧುಂ ಸರ್ವಂ ಸಂಶಯಿತಂ ಬಲಮ್ ॥೬೭॥

ನ ಚಾಪ್ಯನ್ಯಂ ನರಂ ತತ್ರ ವ್ಯವಸ್ಯಂತಿ ಧನಂಜಯಾತ್ ॥೬೮॥

ದೃಢವೇದಿಯೂ ಮಹಾಬಲಶಾಲಿಯೂ ಇಂದ್ರನಿಗೆ ಸಮನಾದ ಪರಾಕ್ರಮವುಳ್ಳವನೂ ಆದ ಅರ್ಜುನನು ಈ ದಿನ ಯುದ್ಧಕ್ಕೆ ಬಂದರೆ ನಮ್ಮ ಸೈನ್ಯವೆಲ್ಲಾ ಸಂಶಯಗ್ರಸ್ತವಾಗುತ್ತದೆ ಎಂದು ಮಹಾರಥರಾದ ಎಲ್ಲಾ ಕೌರವರು ಪರಸ್ಪರವಾಗಿ ಮಾತನಾಡಿಕೊಂಡರು. ಇವನು ಅರ್ಜುನನಲ್ಲದೆ ಬೇರೆಯವನು ಎಂದೂ ಅವರಿಗೆ ನಿರ್ಧರಿಸಲು ಸಾಧ್ಯವಾಗಲಿಲ್ಲ.

ಉತ್ತರಂ ತು ಪ್ರಧಾವಂತಮನುದ್ಯತ್ಯ ಧನಂಜಯಃ ।
ಗತ್ವಾ ಶತಪದಂ ತೂರ್ಣಂ ಕೇಶಪಕ್ಷೇ ಪರಾಮೃಶತ್ ॥೬೯॥

ವಿರಾಟಪುತ್ರಂ ಬೀಭತ್ಸುರ್ಬಲವಾನರಿಮರ್ದನಃ ॥೭೦॥

ಓಡುತ್ತಿದ್ದ ಉತ್ತರನನ್ನು ಹಿಂಬಾಲಿಸಿ ಬಲಿಷ್ಠನೂ, ಶತ್ರುಮರ್ದನನೂ ಆದ ಅರ್ಜುನನು ನೂರು ಹೆಜ್ಜೆಗಳನ್ನು ಹೋಗಿ ಶೀಘ್ರವಾಗಿ ವಿರಾಟಪುತ್ರನನ್ನು ಅವನ ತಲೆ ಕೂದಲುಗಳನ್ನು ಹಿಡಿದನು.

ಮಾ ಮಾ ಗೃಹಾಣ ಭದ್ರಂ ತೇ ದಾಸೋಽಹಂ ತೇ ಬೃಹನ್ನಳೇ ।
ಇತಿ ವಾದಿನಮೇವಾಶು ಧಾವಂತಂ ತರಸಾಽಗ್ರಹೀತ್ ॥೭೧॥

ನನ್ನನ್ನು ಹಿಡಿಯಬೇಡ. ನಿನಗೆ ಮಂಗಳವಾಗಲಿ. ಬೃಹನ್ನಳೆಯೇ, ನಾನು ನಿನಗೆ ದಾಸನಾಗಿದ್ದೇನೆ ಎಂದು ಹೇಳುತ್ತಾ ಓಡುತ್ತಿದ್ದ ಉತ್ತರನನ್ನು ಅರ್ಜುನನು ಶೀಘ್ರವಾಗಿ ಹಿಡಿದನು.

ಸೋಽರ್ಜುನೇನ ಪರಾಮೃಷ್ಟಃ ಪರ್ಯದೇವಯದಾರ್ತವತ್ ।
ಬಹುಲಂ ಕೃಪಣಂ ಚೈವ ವಿತ್ತಂ ಪ್ರಾವೇದಯದ್ ಬಹು ॥೭೨॥

ಅರ್ಜುನನಿಂದ ಹಿಡಿಯಲ್ಪಟ್ಟ ಉತ್ತರನು ದೈನ್ಯದಿಂದ ಕೂಡಿ ಆರ್ತನಾಗಿ ಬಹಳವಾಗಿ ಗೋಳಾಡಿದನು. ತನ್ನನ್ನು ಬಿಟ್ಟರೆ ಬಹಳ ಧನವನ್ನು ಕೊಡುವುದಾಗಿಯೂ ಹೇಳಿದನು.

ಮಾ ಮಾ ಮಾರಯ ಭದ್ರಂ ತೇ ಮುಂಚ ಮಾಮೇವ ಮೇ ಗೃಹಮ್।
ಮುಂಚ ಮಾಂ ಮುಂಚ ಮುಂಚೇತಿ ತತ್ಪಾದಾವಗ್ರಹೀತ್ ಬ್ರುವನ್ ॥

ನನ್ನನ್ನು ಕೊಲ್ಲಬೇಡ. ನಿನಗೆ ಮಂಗಳವಾಗಲಿ. ನನ್ನನ್ನು ಮನೆಗೆ ಹೋಗಲು ಬಿಟ್ಟುಬಿಡು. ನನ್ನನ್ನು ಬಿಡು. ನನ್ನನ್ನು ಬಿಡು ಎಂದು ಹೇಳುತ್ತಾ ಅರ್ಜುನನ ಪಾದಗಳನ್ನು ಹಿಡಿದುಕೊಂಡನು.

ಸುವರ್ಣಮಣಿಮುಕ್ತಾನಾಂ ಯದ್ಯದಿಚ್ಛಸಿ ದದ್ಮಿ ತೇ ।
ಹಸ್ತಿನೋಽಶ್ವಾನ್ ರಥಾನ್ ಗಾವಃ ಸ್ತ್ರಿಯಶ್ಚ ಸಮಲಂಕೃತಾಃ ॥೭೪॥

ಶಾತಕುಂಭಸ್ಯ ಶುದ್ಧಸ್ಯ ಶ್ರೇಷ್ಠಸ್ಯ ರಜತಸ್ಯ ಚ ।
ದದಾಮಿ ಶತನಿಷ್ಕಂ ತೇ ಮುಂಚ ಮಾಂ ತ್ವಂ ಬೃಹನ್ನಳೇ ॥೭೫॥

ಸುವರ್ಣ, ಮಣಿಗಳು ಮತ್ತು ಮುತ್ತುಗಳನ್ನು ಮತ್ತು ನೀನು ಏನೇನು ಬಯಸುತ್ತೀಯೋ - ಗಜಗಳು, ಅಶ್ವಗಳು, ರಥಗಳು, ಗೋವುಗಳು, ಅಲಂಕೃತರಾದ ಸ್ತ್ರೀಯರು - ಅವೆಲ್ಲವನ್ನೂ ಕೊಡುವೆನು. ಶುದ್ಧವಾದ ಸುವರ್ಣಮಯವಾದ ನೂರು ನಿಷ್ಕಗಳನ್ನು, ಒಳ್ಳೆಯ ರಜತಮಯವಾದ ನೂರುನಿಷ್ಕಗಳನ್ನು ನಿನಗೆ ಕೊಡುವೆನು. ಬೃಹನ್ನಳೆಯೇ, ನೀನು ನನ್ನನ್ನು ಬಿಟ್ಟುಬಿಡು.

ಮಣೀನಷ್ಟೌ ಚ ವೈಡೂರ್ಯಾನ್ ಹೇಮಬದ್ಧಾನ್ ಮಹಾಪ್ರಭಾನ್ ।
ಹೇಮದಂಡಪ್ರತಿಚ್ಛನ್ನಂ ರಥಂ ಯುಕ್ತಂ ತು ವಾಜಿಭಿಃ ॥೭೬॥

ಮತ್ತಾಂಶ್ಚ ದಶ ಮಾತಂಗಾನ್ ಮುಂಚ ಮಾಂ ತ್ವಂ ಬೃಹನ್ನಳೇ ॥೭೭॥

ಚಿನ್ನದಲ್ಲಿ ಖಚಿತವಾದ ಮಹಾಪ್ರಭೆಯುಳ್ಳ ಎಂಟುಮಣಿಗಳನ್ನೂ, ವೈಡೂರ್ಯಗಳನ್ನೂ, ಹೇಮದಂಡದಿಂದ ಕೂಡಿದ ಅಶ್ವಯುಕ್ತವಾದ ರಥವನ್ನೂ ಕೊಡುವೆನು, ಹತ್ತು ಮದಗಜಗಳನ್ನು ಕೊಡುವೆನು. ಬೃಹನ್ನಳೆಯೇ, ನನ್ನನ್ನು ಬಿಟ್ಟು ಬಿಡು.

ಷಷ್ಟಿಂ ಸ್ವಲಂಕೃತಾಃ ಕನ್ಯಾ ಗ್ರಾಮಮೇಕಂ ದದಾಮಿ ತೇ ॥೭೮॥

ಮುಂಚ ಮಾಂ ತ್ವಂ ಭೃಶಂ ದೀನಂ ವಿಹ್ವಲಂ ಭಯಕಂಪಿತಮ್ ।
ಗಮಿಷ್ಯಾಮಿ ಪುರಂ ಶೀಘ್ರಂ ದ್ರಷ್ಟುಂ ಮಾತರಮರ್ದಿತಾಮ್ ॥೭೯॥

ದೃಢವೇದಿಯೂ ಮಹಾಬಲಶಾಲಿಯೂ ಇಂದ್ರನಿಗೆ ಸಮನಾದ ಪರಾಕ್ರಮವುಳ್ಳವನೂ ಆದ ಅರ್ಜುನನು ಈ ದಿನ ಯುದ್ಧಕ್ಕೆ ಬಂದರೆ ನಮ್ಮ ಸೈನ್ಯವೆಲ್ಲಾ ಸಂಶಯಗ್ರಸ್ತವಾಗುತ್ತದೆ ಎಂದು ಮಹಾರಥರಾದ ಎಲ್ಲಾ ಕೌರವರು ಪರಸ್ಪರವಾಗಿ ಮಾತನಾಡಿಕೊಂಡರು. ಇವನು ಅರ್ಜುನನಲ್ಲದೆ ಬೇರೆಯವನು ಎಂದೂ ಅವರಿಗೆ ನಿರ್ಧರಿಸಲು ಸಾಧ್ಯವಾಗಲಿಲ್ಲ.

ಉತ್ತರಂ ತು ಪ್ರಧಾವಂತಮನುದ್ರುತ್ಯ ಧನಂಜಯಃ ।
ಗತ್ವಾ ಶತಪದಂ ತೂರ್ಣಂ ಕೇಶಪಕ್ಷೇ ಪರಾಮೃಶತ್ ॥೬೯॥

ವಿರಾಟಪುತ್ರಂ ಬೀಭತ್ಸುರ್ಬಲವಾನರಿಮರ್ದನಃ ॥೭೦॥

ಓಡುತ್ತಿದ್ದ ಉತ್ತರನನ್ನು ಹಿಂಬಾಲಿಸಿ ಬಲಿಷ್ಠನೂ, ಶತ್ರುಮರ್ದನನೂ ಆದ ಅರ್ಜುನನು ನೂರು ಹೆಜ್ಜೆಗಳನ್ನು ಹೋಗಿ ಶೀಘ್ರವಾಗಿ ವಿರಾಟಪುತ್ರನನ್ನು ಅವನ ತಲೆ ಕೂದಲುಗಳನ್ನು ಹಿಡಿದನು.

ಮಾ ಮಾ ಗೃಹಾಣ ಭದ್ರಂ ತೇ ದಾಸೋಽಹಂ ತೇ ಬೃಹನ್ನಳೇ ।
ಇತಿ ವಾದಿನಮೇವಾಶು ಧಾವಂತಂ ತರಸಾಽಗ್ರಹೀತ್ ॥೭೧॥

ನನ್ನನ್ನು ಹಿಡಿಯಬೇಡ. ನಿನಗೆ ಮಂಗಳವಾಗಲಿ. ಬೃಹನ್ನಳೆಯೇ, ನಾನು ನಿನಗೆ ದಾಸನಾಗಿದ್ದೇನೆ ಎಂದು ಹೇಳುತ್ತಾ ಓಡುತ್ತಿದ್ದ ಉತ್ತರನನ್ನು ಅರ್ಜುನನು ಶೀಘ್ರವಾಗಿ ಹಿಡಿದನು.

ಸೋಽರ್ಜುನೇನ ಪರಾಮೃಷ್ಟಃ ಪರ್ಯದೇವಯದಾರ್ತವತ್ ।
ಬಹುಲಂ ಕೃಪಣಂ ಚೈವ ವಿತ್ತಂ ಪ್ರಾವೇದಯದ್ ಬಹು ॥೭೨॥

ಅರ್ಜುನನಿಂದ ಹಿಡಿಯಲ್ಪಟ್ಟ ಉತ್ತರನು ದೈನ್ಯದಿಂದ ಕೂಡಿ ಆರ್ತನಾಗಿ ಬಹಳವಾಗಿ ಗೋಳಾಡಿದನು. ತನ್ನನ್ನು ಬಿಟ್ಟರೆ ಬಹಳ ಧನವನ್ನು ಕೊಡುವುದಾಗಿಯೂ ಹೇಳಿದನು.

ಮಾ ಮಾ ಮಾರಯ ಭದ್ರಂ ತೇ ಮುಂಚ ಮಾಮೇವ ಮೇ ಗೃಹಮ್।
ಮುಂಚ ಮಾಂ ಮುಂಚ ಮುಂಚೇತಿ ತತ್ಪಾದಾವಗ್ರಹೀತ್ ಬ್ರುವನ್ ॥

ನನ್ನನ್ನು ಕೊಲ್ಲಬೇಡ. ನಿನಗೆ ಮಂಗಳವಾಗಲಿ. ನನ್ನನ್ನು ಮನೆಗೆ ಹೋಗಲು ಬಿಟ್ಟುಬಿಡು. ನನ್ನನ್ನು ಬಿಡು. ನನ್ನನ್ನು ಬಿಡು ಎಂದು ಹೇಳುತ್ತಾ ಅರ್ಜುನನ ಪಾದಗಳನ್ನು ಹಿಡಿದುಕೊಂಡನು.

ಸುವರ್ಣಮಣಿಮುಕ್ತಾನಾಂ ಯದ್ಯದಿಚ್ಛಸಿ ದದ್ಮಿ ತೇ ।
ಹಸ್ತಿನೋಽಶ್ವಾನ್ ರಥಾನ್ ಗಾವಃ ಸ್ತ್ರಿಯಶ್ಚ ಸಮಲಂಕೃತಾಃ ॥೭೪॥

ಶಾತಕುಂಭಸ್ಯ ಶುದ್ಧಸ್ಯ ಶ್ರೇಷ್ಠಸ್ಯ ರಜತಸ್ಯ ಚ ।
ದದಾಮಿ ಶತನಿಷ್ಕಂ ತೇ ಮುಂಚ ಮಾಂ ತ್ವಂ ಬೃಹನ್ನಳೇ ॥೭೫॥

ಸುವರ್ಣ, ಮಣಿಗಳು ಮತ್ತು ಮುತ್ತುಗಳನ್ನು ಮತ್ತು ನೀನು ಏನೇನು ಬಯಸುತ್ತೀಯೋ - ಗಜಗಳು, ಅಶ್ವಗಳು, ರಥಗಳು, ಗೋವುಗಳು, ಅಲಂಕೃತರಾದ ಸ್ತ್ರೀಯರು - ಅವೆಲ್ಲವನ್ನೂ ಕೊಡುವೆನು. ಶುದ್ಧವಾದ ಸುವರ್ಣಮಯವಾದ ನೂರು ನಿಷ್ಕಗಳನ್ನು, ಒಳ್ಳೆಯ ರಜತಮಯವಾದ ನೂರುನಿಷ್ಕಗಳನ್ನು ನಿನಗೆ ಕೊಡುವೆನು. ಬೃಹನ್ನಳೆಯೇ, ನೀನು ನನ್ನನ್ನು ಬಿಟ್ಟುಬಿಡು.

ಮಣೀನಷ್ಟೌ ಚ ವೈಡೂರ್ಯಾನ್ ಹೇಮಬದ್ಧಾನ್ ಮಹಾಪ್ರಭಾನ್ ।
ಹೇಮದಂಡಪ್ರತಿಚ್ಛನ್ನಂ ರಥಂ ಯುಕ್ತಂ ತು ವಾಜಿಭಿಃ ॥೭೬॥

ಮತ್ತಾಂಶ್ಚ ದಶ ಮಾತಂಗಾನ್ ಮುಂಚ ಮಾಂ ತ್ವಂ ಬೃಹನ್ನಳೇ ॥೭೭॥

ಚಿನ್ನದಲ್ಲಿ ಖಚಿತವಾದ ಮಹಾಪ್ರಭೆಯುಳ್ಳ ಎಂಟುಮಣಿಗಳನ್ನೂ, ವೈಡೂರ್ಯಗಳನ್ನೂ, ಹೇಮದಂಡದಿಂದ ಕೂಡಿದ ಅಶ್ವಯುಕ್ತವಾದ ರಥವನ್ನೂ ಕೊಡುವೆನು, ಹತ್ತು ಮದಗಜಗಳನ್ನು ಕೊಡುವೆನು. ಬೃಹನ್ನಳೆಯೇ, ನನ್ನನ್ನು ಬಿಟ್ಟು ಬಿಡು.

ಷಷ್ಟಿಂ ಸ್ವಲಂಕೃತಾಃ ಕನ್ಯಾ ಗ್ರಾಮಮೇಕಂ ದದಾಮಿ ತೇ ॥೭೮॥

ಮುಂಚ ಮಾಂ ತ್ವಂ ಭೃಶಂ ದೀನಂ ವಿಹ್ವಲಂ ಭಯಕಂಪಿತಮ್ ।
ಗಮಿಷ್ಯಾಮಿ ಪುರಂ ಶೀಘ್ರಂ ದ್ರಷ್ಟುಂ ಮಾತರಮರ್ದಿತಾಮ್ ॥೭೯॥

ಅರವತ್ತು ಅಲಂಕೃತರಾದ ಕನ್ಯೆಯರನ್ನು ಕೊಡುವೆನು. ಒಂದು ಗ್ರಾಮವನ್ನು ಕೊಡುವೆನು. ಬಹಳ ದೀನನೂ, ವಿಹ್ವಲನೂ, ಭಯದಿಂದ ನಡುಗುತ್ತಿರುವವನೂ ಆದ ನನ್ನನ್ನು ಬಿಟ್ಟುಬಿಡು. ನಾನು ದುಃಖಿತಳಾದ ನನ್ನ ತಾಯಿಯನ್ನು ನೋಡಲು ಶೀಘ್ರವಾಗಿ ನಗರಕ್ಕೆ ಹೋಗುವೆನು (ಎಂದು ಗೋಳಾಡಿದನು).

ವೈಶಂಪಾಯನಃ

ಏವಮಾದೀನಿ ವಾಕ್ಯಾನಿ ವಿಲಪಂತಮ್ ಅಚೇತನಮ್ ।
ಪ್ರಹಸ್ಯ ಪುರುಷವ್ಯಾಘ್ರೋ ರಥಸ್ಯಾಂತಿಕಮಾನಯತ್ ॥೮೦॥

ವೈಶಂಪಾಯನ– ಹೀಗೆಲ್ಲಾ ಮಾತನಾಡಿ ಅಚೇತನನಾಗಿ ಗೋಳಾಡುತ್ತಿದ್ದ ಅವನನ್ನು ನಗುತ್ತಾ ಪುರುಷವ್ಯಾಘ್ರನಾದ ಅರ್ಜುನನು ರಥದ ಸಮೀಪಕ್ಕೆ ಕರೆತಂದನು.

ಅಥೈನಮಬ್ರವೀತ್ ಪಾರ್ಥೋ ಭಯಾರ್ತಂ ನಷ್ಟಚೇತಸಮ್ ॥೮೧॥

ಸಂಗಚ್ಛಾಮಿ ಪದಾನ್ಯಸ್ಯ ನ ಸ ಭೀತಃ ಪಲಾಯತಿ ॥೮೨॥

ಆಗ ಅರ್ಜುನನು ಭೀತನಾಗಿ ತನ್ನ ಬುದ್ಧಿಯನ್ನು ಕಳೆದುಕೊಂಡಿದ್ದ ಉತ್ತರನನ್ನು ಯೋಚಿಸಿ ನಾನು ಇವನ ಮಾರ್ಗವನ್ನು ಅನುಸರಿಸುವುದಿಲ್ಲ. ಇವನಾದರೂ ಭೀತನಾಗಿ ಪಲಾಯನ ಮಾಡುತ್ತಿದ್ದಾನೆ ಎಂದು ಹೇಳಿದನು.

ಯದಿ ನೋತ್ಸಹಸೇ ಯೋದ್ಧುಂ ಶತ್ರುಭಿಃ ಶತ್ರುಕರ್ಶನ ।
ಏಹಿ ಮೇ ತ್ವಂ ಹಯಾನ್ ಯಚ್ಛ ಯುದ್ಧ್ಯಮಾನಸ್ಯ ಶತ್ರುಭಿಃ ॥೮೩॥

ಮತ್ತು ಉತ್ತರನನ್ನು ಕುರಿತು ಎಲೈ ಶತ್ರುಕರ್ಶನನೇ, ಶತ್ರುಗಳ ಜೊತೆ ನೀನು ಯುದ್ಧವನ್ನು ಮಾಡಲು ಬಯಸದಿದ್ದರೆ, ಶತ್ರುಗಳ ಜೊತೆ ಯುದ್ಧವನ್ನು ಮಾಡುವ ನನ್ನ ಅಶ್ವಗಳನ್ನು ಬಂದು ನಿಯಂತ್ರಿಸುವವನಾಗು.

ಪ್ರಯಾಹ್ಯೇತದ್ ರಥಾನೀಕಂ ಮದ್ಬಾಹುಪರಿರಕ್ಷಿತಃ ।
ಅಪ್ರಧೃಷ್ಯತಮಂ ಘೋರಂ ಗುಪ್ತಂ ಘೋರೈರ್ಮಹಾರಥೈಃ ॥೮೪॥

ನನ್ನ ಭುಜಗಳಿಂದ ಚೆನ್ನಾಗಿ ರಕ್ಷಿತನಾಗಿ, ಸೋಲಿಸಲು ಅಸಾಧ್ಯವಾದ, ಘೋರರಾದ ಮಹಾರಥರಿಂದ ರಕ್ಷಿತವಾದ, ಈ ಶತ್ರುಸೈನ್ಯವನ್ನು ಪ್ರವೇಶಿಸುವವನಾಗು.

ಮಾ ಭೈಸ್ತ್ವಂ ರಾಜಪುತ್ರಾಗ್ರ್ಯ ಕ್ಷತ್ರಿಯೋಽಸಿ ಪರಂತಪ ।
ಅಹಂ ತೈಃ ಕುರುಭಿರ್ಯೋತ್ಸ್ಯೇ ಪ್ರತ್ಯಾನೇಷ್ಯಾಮಿ ತೇ ಪಶೂನ್ ॥೮೫॥

ಎಲೈ ಶ್ರೇಷ್ಠನಾದ ರಾಜಪುತ್ರನೇ, ಹೆದರಬೇಡ. ನೀನು ಕ್ಷತ್ರಿಯನಾಗಿದ್ದೀಯೆ. ನಾನು ಆ ಕೌರವರ ಜೊತೆ ಯುದ್ಧವನ್ನು ಮಾಡುವೆನು. ನಿನ್ನ ಗೋಧನವನ್ನು ಹಿಂದಕ್ಕೆ ತರುವೆನು.

ಪ್ರವಿಶೈತದ್ ರಥಾನೀಕಮಪ್ರಧೃಷ್ಯಂ ದುರಾಸದಮ್ ।
ಯಂತಾ ಭೂಸ್ತ್ವಂ ನರಶ್ರೇಷ್ಠ ಯೋತ್ಸ್ಯೇಽಹಂ ಕುರುಭಿಃ ಸಹ ॥೮೬॥

ಶೂರಾನ್ ಸಮರಚಂಡಾಂಶ್ಚ ನೇಷ್ಯಾಮಿ ಯಮಸಾದನಮ್ ॥೮೭॥

ಸೋಲಿಸಲು ಅಸಾಧ್ಯವಾದ, ಸಮೀಪಕ್ಕೆ ಹೋಗಲು ಅಸಾಧ್ಯವಾದ, ಈ ರಥಸಮೂಹವನ್ನು ಪ್ರವೇಶಿಸು. ಎಲೈ ನರಶ್ರೇಷ್ಠನೇ, ನೀನು ನನ್ನ ಸಾರಥಿಯಾಗು. ನಾನು ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ಸಮರಚಂಡರಾದ ಶೂರರನ್ನು ಯಮಲೋಕಕ್ಕೆ ಕಳುಹಿಸುವೆನು.

ವೈಶಂಪಾಯನಃ

ಏವಂ ಬ್ರುವಾಣೋ ಬೀಭತ್ಸುರ್ವೈರಾಟಿಮಪರಾಜಿತಃ ।
ಸಮಾಶ್ವಾಸ್ಯ ಭಯಾರ್ತಂ ತಮುತ್ತರಂ ಭರತರ್ಷಭ ॥೮೮॥

ತತ ಏನಂ ವಿಚೇಷ್ಟಂತಮಕಾಮಂ ಭಯಪೀಡಿತಮ್ ।
ರಥಮಾರೋಪಯಾಮಾಸ ಪಾರ್ಥಃ ಪರಪುರಂಜಯಃ ॥೮೯॥

ವೈಶಂಪಾಯನ– ಎಲೈ ಭರತರ್ಷಭನೇ, ಅಪರಾಜಿತನಾದ ಅರ್ಜುನನು ಹೀಗೆ ಮಾತನಾಡುತ್ತಾ ಭಯಾರ್ತನಾದ ಉತ್ತರನನ್ನು ಸಮಾಧಾನ ಮಾಡಿ ಆದರೂ ಭಯಪೀಡಿತನಾಗಿ ಯುದ್ಧವನ್ನು ಮಾಡಲು ಇಷ್ಟವಿಲ್ಲದೆ ಒದ್ದಾಡುತ್ತಿದ್ದ ಉತ್ತರನನ್ನು ಪರಪುರಂಜಯನಾದ ಅವನು ರಥವನ್ನು ಏರಿಸಿದನು.

ತಮಾರೋಪ್ಯ ರಥೋಪಸ್ಥೇ ವಿಲಪಂತಂ ಧನಂಜಯಃ ।
ಗಾಂಡೀವಂ ಪುನರಾದಾತುಂ ಸಮಾಯಾತಾಂ ಶಮೀಂ ಪ್ರತಿ ॥೯೦॥

ಉತ್ತರಂ ಸ ಸಮಾಶ್ವಾಸ್ಯ ಕೃತ್ವಾ ಸಾರಥಿಮರ್ಜುನಃ ॥೯೧॥

ಧನಂಜಯನು ಇನ್ನೂ ಗೋಳಾಡುತ್ತಿದ್ದ ಉತ್ತರನನ್ನು ಸಮಾಧಾನಪಡಿಸಿ ಅವನನ್ನು ಸಾರಥಿಯನ್ನಾಗಿ ಮಾಡಿಕೊಂಡು ಗಾಂಡೀವವನ್ನು ಪುನಃ ತೆಗೆದುಕೊಳ್ಳಲು ಶಮೀವೃಕ್ಷದ ಸಮೀಪಕ್ಕೆ ಹೋದನು (ಇಬ್ಬರೂ ಶಮೀವೃಕ್ಷದ ಸಮೀಪಕ್ಕೆ ಹೋದರು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಅಷ್ಟತ್ರಿಂಶೋಽಧ್ಯಾಯಃ ॥

ಗೋಗ್ರಹಣಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ಮೂವತ್ತೊಂಬತ್ತನೆಯ ಅಧ್ಯಾಯ

ಅರ್ಜುನನ ಆದೇಶದಂತೆ ಉತ್ತರನಿಂದ ಶಮೀವೃಕ್ಷವನ್ನು
ಏರಿ ಆಯುಧಗಳ ಆನಯನ

ವೈಶಂಪಾಯನಃ

ತಂ ದೃಷ್ಟ್ವಾ ಕ್ಲೀಬರೂಪೇಣ ರಥಸ್ಥಂ ರಥಿಪುಂಗವಮ್ ।
ಶಮೀಮಭಿಮುಖಂ ಯಾಂತಂ ರಥಮಾರೋಪ್ಯ ಚೋತ್ತರಮ್ ॥೧॥

ದ್ರೋಣಭೀಷ್ಮಾದಯಃ ಶೂರಾಃ ಕುರೂಣಾಂ ರಥಿಸತ್ತಮಾಃ ।
ವಿತ್ರಸ್ತಮನಸಶ್ಚಾಸನ್ ಧನಂಜಯಕೃತಾದ್ ಭಯಾತ್ ॥೨॥

ವೈಶಂಪಾಯನ– ನಪುಂಸಕರೂಪದಿಂದ ರಥದಲ್ಲಿ ಕುಳಿತಿದ್ದ ರಥಪುಂಗವನು ಉತ್ತರನನ್ನು ರಥದಲ್ಲಿ ಕೂಡಿಸಿಕೊಂಡು ಶಮೀವೃಕ್ಷದ ಬಳಿಗೆ ಹೋಗುವುದನ್ನು ನೋಡಿದ ಕೌರವರ ರಥಿಶ್ರೇಷ್ಠರಾದ ಶೂರರಾದ ದ್ರೋಣಭೀಷ್ಮಾದಿಗಳು ಅರ್ಜುನನ ಭಯದಿಂದ ಮನಸ್ಸಿನಲ್ಲಿ ವಿತ್ರಸ್ತರಾದರು.

ತಾನವೇಕ್ಷ್ಯ ಮಹೋತ್ಪಾತಾನ್ ಉತ್ಪಾತಾನಪಿ ಚಾದ್ಭುತಾನ್ ।
ಗುರುಃ ಶಸ್ತ್ರಭೃತಾಂ ಶ್ರೇಷ್ಠೋ ಭಾರದ್ವಾಜೋಽಭ್ಯಭಾಷತ ॥೩॥

ಆಗ ಉಂಟಾದ ಅದ್ಭುತವಾದ ಉಲ್ಕಾಪಾತಾದಿ ಮಹೋತ್ಪಾತಗಳನ್ನೂ ಮತ್ತು ನರಿಗಳ ರೋದನ ಮುಂತಾದ ಉತ್ಪಾತಗಳನ್ನೂ ನೋಡಿದ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ಎಲ್ಲರಿಗೂ ಗುರುಗಳಾದ ದ್ರೋಣರು ಮಾತನಾಡಿದರು.

ಖರಾಶ್ಚ ವಾತಾಃ ಸಂವಾಂತಿ ರೂಕ್ಷಾಃ ಪರುಷನಿಸ್ವನಾಃ ।
ಭಸ್ಮವರ್ಷಪ್ರಕಾಶೇನ ತಮಸಾ ಸಂವೃತಂ ನಭಃ ॥೪॥

ರೂಕ್ಷವರ್ಣಾಶ್ಚ ಜಲದಾ ದೃಶ್ಯಂತೇऽದ್ಭುತದರ್ಶನಾಃ ।
ನಿಃಸರಂತಿ ಚ ಕೋಶೇಭ್ಯಃ ಶಸ್ತ್ರಾಣಿ ವಿವಿಧಾನಿ ಚ ॥೫॥

ವಾಯುವು ಒರಟಾಗಿ ಬೀಸುತ್ತಿದೆ. ಕ್ರೂರವಾದ ಮತ್ತು ಒರಟಾದ ಶಬ್ದಗಳು ಕೇಳಿ ಬರುತ್ತಿವೆ. ಭಸ್ಮದ ಮಳೆಯಿಂದ ಉಂಟಾದ ಕತ್ತಲೆಯಿಂದ ಆಕಾಶವು ಆವೃತವಾಗಿದೆ. ಮೋಡಗಳು ಕ್ರೂರವರ್ಣದಿಂದ ಕೂಡಿ ಅದ್ಭುತವಾಗಿ ಕಾಣುತ್ತಿವೆ. ವಿಧವಿಧವಾದ ಶಸ್ತ್ರಗಳು ಕೋಶಗಳಿಂದ ತಾವಾಗಿಯೇ ಹೊರಗೆ ಬರುತ್ತಿವೆ.

ಶಿವಾಶ್ಚ ವಿನದಂತ್ಯೇತಾ ದೀಪ್ತಾಯಾಂ ದಿಶಿ ದಕ್ಷಿಣಾಃ ।
ಹಯಾಶ್ಚಾಶ್ರೂಣಿ ಮುಂಚಂತಿ ಧ್ವಜಾಃ ಕಂಪಂತ್ಯಕಂಪಿತಾಃ ॥೬॥

ಜ್ವಲಿಸುತ್ತಿರುವ ದಕ್ಷಿಣದಿಕ್ಕಿನಲ್ಲಿ ಹೆಣ್ಣು ನರಿಗಳು ರೋದನ ಮಾಡುತ್ತಿವೆ. ಕುದುರೆಗಳು ಕಣ್ಣೀರನ್ನು ಸುರಿಸುತ್ತಿವೆ. ಅಲ್ಲಾಡಿಸದಿದ್ದರೂ ಧ್ವಜಗಳು ಕಂಪಿಸುತ್ತಿವೆ.

ಯಾದೃಶಾನೀಹ ದೃಶ್ಯಂತೇ ರೂಪಾಣಿ ವಿವಿಧಾನಿ ಚ ।
ಏಕೈಕಮೇಷಾಂ ಪರ್ಯಾಪ್ತಮಖಿಲಕ್ಷಯಕಾರಣಮ್ ॥೭॥

ಇಲ್ಲಿ ವಿಧವಿಧವಾದ ಎಂತಹ ಶಕುನಗಳು ಕಂಡುಬರುತ್ತಿವೆಯೋ ಅವುಗಳಲ್ಲಿ ಒಂದೊಂದೂ ಲೋಕನಾಶವನ್ನು ಸೂಚಿಸಲು ಸಮರ್ಥವಾಗಿವೆ.

ಏತೇ ಭಯಂ ಚ ತಿಷ್ಠಂತಿ ಯುದ್ಧಂ ಸ್ಯಾತ್ ಸಮುಪಸ್ಥಿತಮ್ ।
ರಕ್ಷಧ್ವಮಪಿ ಚಾತ್ಮಾನಂ ವ್ಯೂಹಧ್ವಂ ವಾಹಿನೀಮಪಿ ॥೮॥

ವೈಶಸಂ ಚ ಪ್ರತೀಕ್ಷಧ್ವಂ ರಕ್ಷಧ್ವಂ ಚಾಪಿ ಗೋಧನಮ್ ॥೯॥

ಇವುಗಳು ನಮಗೆ ಭಯವುಂಟಾಗುವಂತೆ ಸೂಚನೆಯನ್ನು ನೀಡುತ್ತಿವೆ. ಯುದ್ಧವು ಉಪಸ್ಥಿತವಾಗುತ್ತಿದೆ ಎಂದು ತೋರುತ್ತಿದೆ. ನಿಮ್ಮನ್ನು ನೀವು ರಕ್ಷಿಸಿಕೊಂಡು ಸೈನ್ಯವನ್ನು ವ್ಯೂಹವಾಗಿ ರಚಿಸಿ. ದೊಡ್ಡ ಹಿಂಸೆಯನ್ನು ನಿರೀಕ್ಷಿಸಿ ಮತ್ತು ಗೋಧನವನ್ನೂ ರಕ್ಷಿಸುವವರಾಗಿ.

ವೈಶಂಪಾಯನಃ

ಏತಾವದುಕ್ತ್ವಾ ವಚನಂ ಭೀಷ್ಮಮಾಲೋಕ್ಯ ಚಾಬ್ರವೀತ್ ॥೧೦॥

ನದೀಜ ಲಂಕೇಶವನಾರಿಕೇತುಃ
ನಗಾಹ್ವಯೋ ನಾಮ ನಗಾರಿಸೂನುಃ ।
ಗತ್ಯಾ ಸುರೇಶಃ ಕ್ವಚಿದಂಗನೇವ
ಗುರುರ್ಬಭಾಷೇ ವಚನಂ ತದಾನೀಮ್ ॥೧೧॥

ವೈಶಂಪಾಯನ– ಇಷ್ಟನ್ನು ಹೇಳಿ ಭೀಷ್ಮರನ್ನು ಕುರಿತು ಮಾತನಾಡಿದರು. ನದೀಜ= ಎಲೈ ಗಂಗಾಪುತ್ರನಾದ ಭೀಷ್ಮನೇ, ಲಂಕೇಶವನಾರಿಕೇತುಃ= ಲಂಕೇಶನಾದ ರಾವಣನ ವನ= ಅಶೋಕವನಕ್ಕೆ, ಅರಿ= ಶತ್ರುವಾದ ಹನುಮಂತನನ್ನು, ಕೇತುಃ= ಧ್ವಜವಾಗಿ ಉಳ್ಳ, ನಗಾರಿಸೂನುಃ; ನಗಾರಿ= ಪರ್ವತಗಳಿಗೆ ಶತ್ರುವಾದ ಇಂದ್ರನ, ಸೂನುಃ= ಮಗನಾದ; ನಗಾಹ್ವಯೋ ನಾಮ= ಅರ್ಜುನನೆಂಬ ವೃಕ್ಷದ ಹೆಸರುಳ್ಳ ಅರ್ಜುನನು; ಗತ್ಯಾ= ತನ್ನ ನಡಿಗೆಯಲ್ಲಿ; ಸುರೇಶಃ= ಇಂದ್ರನಂತಿದ್ದಾನೆ; ಕ್ವಚಿತ್= ಕತ್ತಿನ ಮೇಲ್ಭಾಗದಲ್ಲಿ; ಅಂಗನೇವ= ಸ್ತ್ರೀಯಂತೆ ಇದ್ದಾನೆ ಎಂದು ದ್ರೋಣಾಚಾರ್ಯರು ಆಗ ಮಾತನಾಡಿದರು.

ಇತ್ಯುಕ್ತ್ವಾ ಸಂಜ್ಞಯಾ ದ್ರೋಣಃ ತೂಷ್ಣೀಮಾಸೀದ್ ವಿಶಾಂಪತೇ ।
ಭಾರದ್ವಾಜವಚಃ ಶ್ರುತ್ವಾ ಗಾಂಗೇಯಃ ಸಂಜ್ಞಯಾಽಬ್ರವೀತ್ ॥೧೨॥

ಎಲೈ ರಾಜನೇ, ದ್ರೋಣರು ಸಂಕೇತಭಾಷೆಯಿಂದ ಇಷ್ಟನ್ನು ಹೇಳಿ ಸುಮ್ಮನಾದರು. ದ್ರೋಣರ ಮಾತನ್ನು ಕೇಳಿ ಭೀಷ್ಮರೂ ಸಂಕೇತದಿಂದಲೇ ಮಾತನಾಡಿದರು.

ಭೀಷ್ಮಃ

ಅತೀತಂ ಚಕ್ರಮಸ್ಮಾಕಂ ವಿಷಯಾಂತರಮಾಗತಾಃ ।
ಅತೀತಃ ಸಮಯಶ್ಚೋಕ್ತೋ ಹ್ಯಸ್ಮಾಭಿರ್ಯತ್ ಸಭಾತಳೇ ॥೧೩॥

ನ ಭಯಂ ಶತ್ರುತಃ ಕಾರ್ಯಂ ಶಂಕಾಂ ತ್ಯಜ ನರರ್ಷಭ ॥೧೪॥

ನಮ್ಮ ರಾಜ್ಯದ ಎಲ್ಲೆಯು ಮುಗಿದಿದೆ. ನಾವು ಬೇರೆ ದೇಶಕ್ಕೆ ಬಂದಿದ್ದೇವೆ. ನಾವು ಸಭೆಯಲ್ಲಿ ಹೇಳಿದ ಸಮಯವು ಮೀರಿಹೋಗಿದೆ. ಶತ್ರುವಿಗೆ ಹೆದರಬಾರದು. ಎಲೈ ನರಶ್ರೇಷ್ಠನೇ, ಶಂಕೆಯನ್ನು ಬಿಡು (ಚಕ್ರದಂತೆ ಪುನಃ ಪುನಃ ವನವಾಸಕ್ಕೆ ಹೋಗಬೇಕಾಗುತ್ತದೆ ಎಂಬ ನಮ್ಮ ನಿಶ್ಚಯವು ಹೊರಟುಹೋಯಿತು. ಹದಿಮೂರನೆಯ ವರ್ಷರೂಪವಾದ ಕಾಲವೂ ಹೊರಟುಹೋಯಿತು. ನಮ್ಮ ಪಾಂಡವರು ಅಜ್ಞಾತವಾಸವನ್ನು ಬಿಟ್ಟು ಜ್ಞಾತವಾಸವೆಂಬ ಬೇರೆಯ ಸ್ಥಿತಿಗೆ ಬಂದಿದ್ದಾರೆ. ಶತ್ರುತಃ ಎಂದರೆ ಪಾಂಡವಶತ್ರುವಾದ ದುರ್ಯೋಧನನ ನಿಮಿತ್ತವಾಗಿ; ನ ಭಯಂ= ಭಯವಿಲ್ಲ= ಪುನಃ ವನವಾಸಕ್ಕೆ ಹೋಗಬೇಕಾಗುತ್ತದೆ ಎಂಬ ಭಯವಿಲ್ಲ. ಎಲೈ ನರಶ್ರೇಷ್ಠನೇ, ಎಲ್ಲವೂ ಸ್ಪಷ್ಟವಾಗಿದೆ. ಯಾವುದರಲ್ಲೂ ಸಂಶಯವನ್ನು ಪಡುವ ಅಗತ್ಯವಿಲ್ಲ-ಲಕ್ಷಾಲಂಕಾರ).

ವೈಶಂಪಾಯನಃ

ದೇವವ್ರತೇನೈವಮುಕ್ತೇ ವಚನೇ ಹಿತಕಾರಿಣಾ ।
ದುರ್ಯೋಧನಮಥಾಲೋಕ್ಯ ಸಂಜ್ಞಯಾ ದ್ರೋಣ ಅಬ್ರವೀತ್ ॥೧೫॥

ವೈಶಂಪಾಯನ– ಹಿತಕಾರಿಗಳಾದ ದೇವವ್ರತರಾದ ಭೀಷ್ಮರು ದುರ್ಯೋಧನನನ್ನು ನೋಡುತ್ತಾ ಸಂಜ್ಞೆಯಿಂದ ಈ ಮಾತನ್ನು ಹೇಳುತ್ತಿರಲು ದ್ರೋಣರು ಮಾತನಾಡಿದರು.

ಏಷ ವೀರೋ ಮಹೇಷ್ವಾಸಃ ಸರ್ವಶಸ್ತ್ರಭೃತಾಂ ವರಃ ।
ಆಗತಃ ಕ್ಲೀಬರೂಪೇಣ ಪಾರ್ಥೋ ನಾಸ್ಯತ್ರ ಸಂಶಯಃ ॥೧೬॥

ನಪುಂಸಕರೂಪದಿಂದ ಬಂದಿರುವ ಈ ವೀರನು ಮಹಾಧನುರ್ಧಾರಿಯೂ ಮತ್ತು ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ ಆದ ಅರ್ಜುನನೇ. ಈ ವಿಷಯದಲ್ಲಿ ಸಂಶಯವಿಲ್ಲ.

ಏಷ ಪಾರ್ಥೋ ಹಿ ವಿಕ್ರಾಂತಃ ಸವ್ಯಸಾಚೀ ಪರಂತಪಃ ।
ನಾಜಿತ್ವಾ ವಿನಿವರ್ತೇತ ಸರ್ವಾನಪಿ ಮರುದ್ಗಣಾನ್ ॥೧೭॥

ಪರಂತಪನೂ, ಸವ್ಯಸಾಚಿಯೂ, ಪರಾಕ್ರಮಶಾಲಿಯೂ ಆದ ಈ ಅರ್ಜುನನು ಎಲ್ಲಾ ಮರುದ್ಗಣಗಳನ್ನು ಗೆಲ್ಲದೇ ಹಿಂದಿರುಗುವವನಲ್ಲ.

ಕ್ಲೇಶಿತಶ್ಚ ವನೇ ಶೂರೋ ವಾಸವೇನ ಚ ಶಿಕ್ಷಿತಃ ।
ಅಮರ್ಷವಶಮಾಪನ್ನೋ ಯೋತ್ಸ್ಯತೇ ನಾತ್ರ ಸಂಶಯಃ ॥೧೮॥

ಶೂರನಾದ ಅವನು ಕಾಡಿನಲ್ಲಿ ಕ್ಲೇಶವನ್ನು ಪಟ್ಟಿದ್ದಾನೆ. ಇಂದ್ರನಿಂದ ಅಸ್ತ್ರವಿದ್ಯೆಯಲ್ಲಿ ಶಿಕ್ಷಿತನಾಗಿದ್ದಾನೆ. ಕ್ರೋಧವಶನಾದ ಅವನು ಯುದ್ಧವನ್ನು ಮಾಡುವನು. ಇದರಲ್ಲಿ ಸಂಶಯವಿಲ್ಲ.

ನ ಹ್ಯಸ್ಯ ಪ್ರತಿಯೋದ್ಧಾರಮನ್ಯಂ ಪಶ್ಯಾಮಿ ಕೌರವಮ್ ॥೧೯॥

ಮಹಾದೇವೋಪಿ ಪಾರ್ಥೇನ ಶ್ರೂಯತೇ ಯುದ್ಧತೋಷಿತಃ ॥೨೦॥

ಇವನಿಗೆ ಎದುರಾಗಿ ನಿಂತು ಯುದ್ಧವನ್ನು ಮಾಡುವ ಒಬ್ಬ ಕೌರವನನ್ನು ನಾನು ಕಾಣುತ್ತಿಲ್ಲ. ರುದ್ರದೇವರೂ ಸಹ ಅರ್ಜುನನಿಂದ ಯುದ್ಧದಲ್ಲಿ ಸಂತೋಷ ಪಡಿಸಲ್ಪಟ್ಟರು ಎಂದು ನಾವು ಕೇಳಿದ್ದೇವೆ.

ವೈಶಂಪಾಯನಃ

ಇತ್ಯೇವಂವಾದಿನಂ ದ್ರೋಣಂ ಕರ್ಣಃ ಕ್ರುದ್ಧೋಽಭ್ಯಭಾಷತ ॥೨೧॥

ಸದಾ ಭವಾನರ್ಜುನಸ್ಯ ಗುಣಾನಸ್ಮಾಸು ಕತ್ಥತೇ ।
ನ ಚಾರ್ಜುನಃ ಕಿಲಾಪೂರ್ಣೋ ಮಮ ದುರ್ಯೋಧನಸ್ಯ ಚ ॥೨೨॥

ವೈಶಂಪಾಯನ– ಹೀಗೆ ಮಾತನಾಡುತ್ತಿದ್ದ ದ್ರೋಣರನ್ನು ಕುರಿತು ಕ್ರೋಧಗೊಂಡ ಕರ್ಣನು ನೀನು ಯಾವಾಗಲೂ ನಮ್ಮ ಎದುರಿಗೆ ಅರ್ಜುನನ ಗುಣಗಳನ್ನೇ ವರ್ಣಿಸುತ್ತೀಯೆ. ಅರ್ಜುನನು ನನಗೆ ಮತ್ತು ದುರ್ಯೋಧನನಿಗೆ ಅಪೂರ್ಣನಲ್ಲವಷ್ಟೆ? (ನಾನಾಗಲೀ ಅಥವಾ ದುರ್ಯೋಧನನಾಗಲೀ ಅಥವಾ ನಾವಿಬ್ಬರೂ ಸೇರಿಯಾಗಲಿ ಅವನನ್ನು ಎದುರಿಸಲು ಸಮರ್ಥರಾಗಿದ್ದೇವೆ).

ದುರ್ಯೋಧನಃ

ಯದ್ಯೇಷ ಪಾರ್ಥೋ ರಾಧೇಯ ಕೃತಂ ಕಾರ್ಯಂ ಮಹನ್ಮಮ ।
ಜ್ಞಾತಾಃ ಪುನಶ್ಚರಿಷ್ಯಂತಿ ದ್ವಾದಶಾನ್ಯಾಂಶ್ಚ ವತ್ಸರಾನ್ ॥೨೩॥

ಅಥೈಷ ಕಶ್ಚಿದೇವಾನ್ಯಃ ಕ್ಲೀಬರೂಪೇಣ ದೇವರಾಟ್ ।
ಶರೈರೇನಂ ಸುನಿಶಿತೈಃ ಪಾತಯಿಷ್ಯಾಮಿ ಭೂತಳೇ ॥೨೪॥

ದುರ್ಯೋಧನ– ಎಲೈ ಕರ್ಣನೇ, ಇವನು ಒಂದು ಪಕ್ಷ ಅರ್ಜುನನೇ ಆದರೆ ನಾವು ದೊಡ್ಡ ಕಾರ್ಯವನ್ನು ಮಾಡಿದಂತಾಯಿತು. ನಮ್ಮಿಂದ ನೋಡಲ್ಪಟ್ಟ ಪಾಂಡವರು ಪುನಃ ಹನ್ನೆರಡು ವರ್ಷಗಳ ಕಾಲ ವನವಾಸವನ್ನು ಮಾಡುವರು. ಹಾಗಲ್ಲದೇ ಇವನು ಬೇರೆ ಯಾರಾದರೂ ಆಗಿದ್ದರೆ, ದೇವೇಂದ್ರನೇ ನಪುಂಸಕ ರೂಪದಿಂದ ಬಂದಿದ್ದರೂ, ಬಹಳ ತೀಕ್ಷ್ಣವಾದ ನನ್ನ ಬಾಣಗಳಿಂದ ಹೊಡೆದು ಅವನನ್ನು ಭೂಮಿಯ ಮೇಲೆ ಉರುಳಿಸುವೆನು.

ವೈಶಂಪಾಯನಃ

ತಸ್ಮಿನ್ ವದತಿ ತಾಂ ವಾಚಂ ಧಾರ್ತರಾಷ್ಟ್ರೇ ಪರಂತಪೇ ।
ಭೀಷ್ಮೋ ದ್ರೋಣಃ ಕೃಪೋ ದ್ರೌಣಿಃ ಪೌರುಷಂ ತದವಮರ್ಶತಾಮ್ ॥

ವೈಶಂಪಾಯನ– ಪರಂತಪನಾದ ದುರ್ಯೋಧನನು ಆ ಮಾತುಗಳನ್ನು ಆಡುತ್ತಿರಲು ಭೀಷ್ಮದ್ರೋಣರು ಅಶ್ವತ್ಥಾಮ ಕೃಪರೂ ಅವನ ಪೌರುಷವನ್ನು ವಿಮರ್ಶೆ ಮಾಡಿದರು.

ತಾಂ ಶಮೀಮಭಿಸಂಗಮ್ಯ ಪಾರ್ಥೋ ವೈರಾಟಿಮಬ್ರವೀತ್ ।
ಸುಖಸಂವರ್ಧಿತಂ ಪಿತ್ರಾ ಸಮರಾಣಾಮಕೋವಿದಮ್ ॥೨೬॥

ತಂದೆಯಿಂದ ಸುಖವಾಗಿ ಬೆಳೆಸಲ್ಪಟ್ಟಿದ್ದ, ಯುದ್ಧದಲ್ಲಿ ಕುಶಲನಲ್ಲದ, ಆ ಉತ್ತರನನ್ನು ಕರೆದುಕೊಂಡು ಶಮೀವೃಕ್ಷದ ಬಳಿಗೆ ಹೋಗಿ ಅರ್ಜುನನು ಹೇಳಿದನು.

ಏಹಿ ಭೂಮಿಂಜಯಾರುಹ್ಯ ವೈರಾಟೇ ಮಹತೀಂ ಶಮೀಮ್ ।
ಸಮಾದಿಷ್ಟೋ ಮಯಾ ಕ್ಷಿಪ್ರಂ ಧನುರ್ಗಾಂಡೀವಮಾನಯ ॥೨೭॥

ಎಲೈ ಭೂಮಿಂಜಯನೇ ಬಾ. ನನ್ನ ಆದೇಶದಂತೆ ಈ ದೊಡ್ಡ ಶಮೀವೃಕ್ಷವನ್ನು ಹತ್ತಿ ಶೀಘ್ರವಾಗಿ ಗಾಂಡೀವ ಧನುಸ್ಸನ್ನು ತೆಗೆದುಕೊಂಡು ಬಾ.

ಅನೇನ ಧನುಷಾ ಚೇಹ ಸೋಢುಂ ಶಕ್ಷ್ಯಂತಿ ಮೇ ಬಲಮ್ ।
ನಾಲಂ ಭಾರಂ ಗುರುಂ ಭರ್ತುಂ ಕುಂಜರಂ ವಾ ಪ್ರಮರ್ದಿತುಮ್ ॥

ಈ ನಿನ್ನ ಧನುಸ್ಸಿನಿಂದ (ನಾನು ಯುದ್ಧಮಾಡಿದರೆ) ಶತ್ರುಗಳು ನನ್ನ ಬಲವನ್ನು ಸಹಿಸಲು ಸಮರ್ಥರಾಗುತ್ತಾರೆ. ಇದರಿಂದ ದೊಡ್ಡ ಸೇನಾಭಾರವನ್ನು ಎದುರಿಸಲು ಅಥವಾ ಆನೆಗಳನ್ನು ಮರ್ದಿಸಲು ಸಾಧ್ಯವಿಲ್ಲ.

ಮಮ ವಾ ಬಾಹುವಿಕ್ಷೇಪಂ ಶತ್ರೂನಿಹ ವಿಜೇಷ್ಯತಃ ।
ನೈಭಿಃ ಕಾಮಮಲಂ ಕರ್ತುಂ ಕರ್ಮ ವೈಜಯಿಕಂ ತ್ವಿಹ ॥೨೯॥

ಶತ್ರುಗಳನ್ನು ಗೆಲ್ಲಲು ಬಯಸುವ ನನ್ನ ಬಾಹುವಿಕ್ಷೇಪವನ್ನು ಈ ನಿನ್ನ ಆಯುಧಗಳು ಸಹಿಸಲಾರವು. ಈ ನಿನ್ನ ಆಯುಧಗಳಿಂದ ವಿಜಯಸಾಧಕವಾದ ಕರ್ಮವನ್ನು ಮಾಡಲಾಗುವುದಿಲ್ಲ.

ಅತಿಸೂಕ್ಷ್ಮಾಣಿ ಹ್ರಸ್ವಾನಿ ಸರ್ವಾಣಿ ಚ ಮೃದೂನಿ ಚ ।
ಆಯುಧಾನಿ ಮಹಾಬಾಹೋ ತವೈತಾನಿ ಪರಂತಪ ॥೩೦॥

ತಸ್ಮಾದ್ ಭೂಮಿಂಜಯಾರೋಹ ಶಮೀಮೇನಾಂ ಪಲಾಶಿನೀಮ್ ॥

ಎಲೈ ಮಹಾಬಾಹುವೇ, ಪರಂತಪನೇ, ಈ ನಿನ್ನ ಆಯುಧಗಳು ಬಹಳ ಚಿಕ್ಕವು, ಮತ್ತು ಬಹಳ ಸೂಕ್ಷ್ಮವೂ ಮತ್ತು ಮೃದುವೂ ಆಗಿವೆ. ಆದ್ದರಿಂದ ಎಲೈ ಭೂಮಿಂಜಯನೇ, ಬಹಳ ಪತ್ರಗಳಿರುವ ಈ ಶಮೀವೃಕ್ಷವನ್ನು ಏರುವವನಾಗು.

ಅಸ್ಮಾಭಿಃ ಪಾಂಡುಪುತ್ರಾಣಾಂ ಧನೂಂಷಿ ನಿಹತಾನ್ಯುತ ।
ಯುಧಿಷ್ಠಿರಸ್ಯ ಭೀಮಸ್ಯ ಬೀಭತ್ಸೋರ್ಯಮಯೋಸ್ತಥಾ ॥೩೨॥

ಧ್ವಜಾಃ ಶರಾಶ್ಚ ಶೂರಾಣಾಂ ದಿವ್ಯಾನಿ ಕವಚಾನಿ ಚ ॥೩೩॥

ನಾವು ಇಲ್ಲಿ ಪಾಂಡುಪುತ್ರರಾದ ಯುಧಿಷ್ಠಿರ ಭೀಮ ಅರ್ಜುನ ಮತ್ತು ನಕುಲ ಸಹದೇವರ ಧನುಸ್ಸುಗಳನ್ನೂ ಮತ್ತು ಆ ಶೂರರ ದಿವ್ಯವಾದ ಕವಚಗಳನ್ನೂ ಮತ್ತು ಧ್ವಜಗಳನ್ನೂ ಮತ್ತು ಬಾಣಗಳನ್ನೂ ಇಟ್ಟಿದ್ದೇವೆ.

ಅತ್ರ ಚೈವ ಮಹಾವೀರ್ಯಂ ಧನುಃ ಪಾರ್ಥಸ್ಯ ಗಾಂಡಿವಮ್ ।
ಏಕಂ ಶತಸಹಸ್ರೇಣ ಸಮ್ಮಿತಂ ರಾಷ್ಟ್ರವರ್ಧನಮ್ ॥೩೪॥

ವ್ಯಾಯಾಮಸಹಮತ್ಯರ್ಥಂ ತೃಣರಾಜಸಮಂ ಮಹತ್ ।
ಸರ್ವಾಯುಧಮಹಾಮಾತ್ರಂ ಸರ್ವಾರಿಕ್ಷಯಕಾರಣಮ್ ॥೩೫॥

ಸುವರ್ಣವಿಕೃತಂ ದಿವ್ಯಂ ಶ್ಲಕ್ಷ್ಣಮಾಯಾತಮವ್ರಣಮ್ ।
ಅಲಂ ಭಾರಂ ಗುರು ಚೈತದ್ ವಾರುಣಂ ಚಾರುದರ್ಶನಮ್ ॥೩೬॥

ಇಲ್ಲಿಯೇ ಪರಾಕ್ರಮವನ್ನು ಹೊಂದಿದ ಒಂದೇ ನೂರು ಸಹಸ್ರ ಆಯುಧಗಳಿಗೆ ಸಮನಾದ ರಾಷ್ಟ್ರವರ್ಧಕವಾದ ಅರ್ಜುನನ ಗಾಂಡೀವ ಧನುಸ್ಸಿದೆ. ಅದನ್ನು ಎಷ್ಟು ಎಳೆದರೂ ಸಹಿಸುವಂತಹದು. ಅದು ಬಿದಿರಿಗೆ ಸಮವಾಗಿ ಶ್ರೇಷ್ಠವಾಗಿದೆ. ಅದು ಎಲ್ಲಾ ಆಯುಧಗಳಿಗೆ ಮಹಾಮಾತ್ರರೂಪದಲ್ಲಿದ್ದು ಪ್ರಧಾನವಾಗಿದೆ. ಎಲ್ಲಾ ಶತ್ರುಗಳ ಕ್ಷಯಕ್ಕೆ ಅದು ಕಾರಣವಾಗಿದೆ. ವರುಣಸಂಬಂಧಿಯೂ ಸುಂದರವೂ ಆಗಿರುವ ಈ ಧನುಸ್ಸು ದಿವ್ಯವೂ, ಸುವರ್ಣಾಲಂಕೃತವೂ, ಮೃದುಸ್ಪರ್ಶವುಳ್ಳದ್ದೂ, ದೀರ್ಘವಾದದ್ದೂ ಮತ್ತು ಯಾವ ಗಾಯವೂ ಇಲ್ಲದ್ದೂ ಆಗಿದೆ. ಅದನ್ನು ತರುವುದು ದೊಡ್ಡ ಕೆಲಸ. ಆದರೂ ಅದು ಯುದ್ಧದ ಭಾರವನ್ನು ಹೊರಲು ಸಮರ್ಥವಾಗಿದೆ.

ತಾದೃಶಾನ್ಯೇವ ಸರ್ವಾಣಿ ದರ್ಶನಾನಿ ದೃಢಾನಿ ಚ ।
ಪ್ರಧಾನಾನಿ ನಿವಿಷ್ಟಾನಿ ದುರ್ದರ್ಶಾನಿ ಭವಂತಿ ಚ ॥೩೭॥

ಇನ್ನು ಉಳಿದ ಆಯುಧಗಳೂ ಸಹ ಹಾಗೆಯೇ ನೋಡಲು ಸುಂದರವಾಗಿಯೂ ಮತ್ತು ದೃಢವಾಗಿಯೂ ಇವೆ. ಅವು ಶ್ರೇಷ್ಠವಾಗಿಯೂ ಮತ್ತು ನೋಡಲು ಭಯಂಕರವಾಗಿಯೂ ಇವೆ. ಅಂತಹ ಆಯುಧಗಳು ಇಲ್ಲಿ ಇಡಲ್ಪಟ್ಟಿವೆ.

ಉತ್ತರಃ

ಶರೀರಮಿವ ಚಾಸಕ್ತಂ ಶಮ್ಯಾಂ ಶುಷ್ಕಂ ಪುರಾತನಮ್ ।
ತದಹಂ ರಾಜಪುತ್ರಃ ಸನ್ ಸ್ಪೃಶೇಯಂ ಪಾಣಿನಾ ಕಥಮ್ ॥೩೮॥

ನ ಮಾಮೇವಂವಿಧಂ ಕರ್ಮ ಕಾರಯಸ್ವ ಬೃಹನ್ನಳೇ ।
ಕಥಂ ವಾ ಶಕ್ಯತೇ ಕರ್ತುಂ ಬುದ್ಧ್ಯಾ ತ್ವಂ ಮನ್ಯಸೇ ಕಥಮ್ ॥೩೯॥

ಉತ್ತರ– ಈ ಶಮೀವೃಕ್ಷದಲ್ಲಿ ಒಣಗಿಹೋದ ಒಂದು ಹಳೆಯ ಶರೀರದಂತಿರುವುದು ಕಾಣುತ್ತಿದೆ. ರಾಜಪುತ್ರನಾದ ನಾನು ಅದನ್ನು ಕೈಯಿಂದ ಹೇಗೆ

ಮುಟ್ಟಲಿ? ಎಲೌ ಬೃಹನ್ನಳೆಯೇ, ನನ್ನಿಂದ ಇಂತಹ ಕೆಲಸಗಳನ್ನು ಮಾಡಿಸಬೇಡ. ನಾನು ಅದನ್ನು ಹೇಗೆ ಮಾಡಲು ಸಾಧ್ಯ ? ನೀನಾದರೂ ನಿನ್ನ ಮನಸ್ಸಿನಲ್ಲಿ ಹೇಗೆ ಭಾವಿಸುತ್ತೀಯೆ?

ವೈಶಂಪಾಯನಃ

ತಮುವಾಚ ತತಃ ಶೂರಃ ಪಾರ್ಥಃ ಪರಪುರಂಜಯಃ ।
ದಾಯಾದಂ ಸರ್ವಮತ್ಸ್ಯಾನಾಂ ಕುಲೇ ಜಾತಂ ವಿಶಾರದಮ್ ॥೪೦॥

ವೈಶಂಪಾಯನ– ಆಗ ಶೂರನೂ, ಪರಪುರಂಜಯನೂ ಆದ ಅರ್ಜುನನು ಮತ್ಸ್ಯಕುಲದಲ್ಲಿ ಜನಿಸಿದ ಮತ್ಸ್ಯರಾಜನ ದಾಯಾದಿಯಾದ ವಿಶಾರದನಾದ ಅವನನ್ನು ಕುರಿತು ಮಾತನಾಡಿದನು.

ಜಾನಾಮಿ ತ್ವಾಂ ಮಹಾಪ್ರಾಜ್ಞ ಕುಲೇ ಜಾತಂ ಮನಸ್ವಿನಮ್ ।
ಕಥಂ ನು ಪಾಪಕಂ ಕರ್ಮ ಬ್ರೂಯಾಂ ಚಾಹಂ ಪರಂತಪ ॥೪೧॥

ಎಲೈ ಮಹಾಪ್ರಾಜ್ಞನೇ, ನೀನು ದೊಡ್ಡ ಕುಲದಲ್ಲಿ ಜನಿಸಿದ ಧೈರ್ಯಶಾಲಿ ಎಂದು ನಾನು ತಿಳಿದಿದ್ದೇನೆ. ಎಲೈ ಪರಂತಪನೇ, ನಾನು ನಿನಗೆ ಹೇಗೆ ಒಂದು ಪಾಪಕಾರ್ಯವನ್ನು ಹೇಳಿಯೇನು?

ವ್ಯವಹಾರ್ಯಶ್ಚ ರಾಜೇಂದ್ರ ಶುದ್ಧಶ್ಚೈವ ಭವಿಷ್ಯಸಿ ।
ಧನೂಂಷ್ಯೇತಾನಿ ಮಾ ಭೈಸ್ತ್ವಂ ಶರೀರಂ ನಾತ್ರ ವಿದ್ಯತೇ ॥೪೨॥

ಎಲೈ ರಾಜೇಂದ್ರನೇ, ನೀನು ಶುದ್ಧನೂ ಮತ್ತು ವ್ಯವಹಾರಕ್ಕೆ ಯೋಗ್ಯನೂ ಆಗುವಿ. ಇವು ಧನುಸ್ಸುಗಳು. ನೀನು ಹೆದರಬೇಡ. ಇಲ್ಲಿ ಯಾವ ಶರೀರವೂ ಇಲ್ಲ.

ದಾಯಾದಂ ಮತ್ಸ್ಯರಾಜಸ್ಯ ಕುಲೇ ಜಾತಂ ಮನಸ್ವಿನಮ್ ।
ಕಥಂ ವಾ ನಿಂದಿತಂ ಕರ್ಮ ಕಾರಯೇ ತ್ವಾಂ ನೃಪಾತ್ಮಜ ॥೪೩॥

ಎಲೈ ರಾಜಕುಮಾರನೇ, ಮತ್ಸ್ಯರಾಜನ ಕುಲದಲ್ಲಿ ದಾಯಾದಿಯಾಗಿ ಜನಿಸಿದ ಧೈರ್ಯಶಾಲಿಯಾದ ನಿನ್ನಿಂದ ನಾನು ಹೇಗೆ ನಿಂದಿತಕರ್ಮವನ್ನು ಮಾಡಿಸಲಿ?

ಏವಮುಕ್ತಃ ಸ ಪಾರ್ಥೇನ ರಥಾತ್ ಪ್ರಸ್ಕಂದ್ಯ ಕುಂಡಲೀ ।
ಆರುರೋಹ ಶಮೀವೃಕ್ಷಂ ವೈರಾಟಿರವಶಸ್ತದಾ ॥೪೪॥

ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಕುಂಡಲಧಾರಿಯಾದ ಉತ್ತರನು ಅವಶನಾಗಿ (ಬೇರೆ ಮಾತನಾಡಲು ಸಾಧ್ಯವಾಗದೆ) ರಥದಿಂದ ಧುಮುಕಿ ಶಮೀವೃಕ್ಷವನ್ನು ಏರಿದನು.

ತಮನ್ವಶಾಸಚ್ಛತ್ರುಘ್ನೋ ರಥೇ ತಿಷ್ಠನ್ ಧನಂಜಯಃ ॥೪೫॥
ಪರಿವೇಷ್ಟನಮೇತೇಷಾಂ ಸರ್ವಂ ಮುಂಚಸ್ವ ಮಾ ಚಿರಮ್ ॥೪೬॥

ಶತ್ರುಸಂಹಾರಕನಾದ ಧನಂಜಯನು ರಥದಲ್ಲೇ ಕುಳಿತು ಅವನನ್ನು ಕುರಿತು ಅವುಗಳಿಗೆ ಸುತ್ತಿರುವ ಆವರಣವೆಲ್ಲವನ್ನೂ ಶೀಘ್ರವಾಗಿ ಬಿಡಿಸು ಎಂದು ಆದೇಶವನ್ನು ನೀಡಿದನು.

ತೇಷಾಂ ಸನ್ನಹನೀಯಾನಿ ವಿಪ್ರಮುಚ್ಯ ಪರಂತಪಃ ।
ಅಪಶ್ಯತ್ ತತ್ರ ಗಾಂಡೀವಂ ಚತುರ್ಭಿರಪರೈಃ ಸಹ ॥೪೭॥

ಅವುಗಳ ಕಟ್ಟುಗಳನ್ನು ಬಿಡಿಸಿದ ಪರಂತಪನಾದ ಉತ್ತರನು ಬೇರೆ ನಾಲ್ಕು ಧನುಸ್ಸುಗಳ ಜೊತೆಯಲ್ಲಿದ್ದ ಗಾಂಡೀವ ಧನುಸ್ಸನ್ನು ಅಲ್ಲಿ ನೋಡಿದನು.

ತೇಷಾಂ ವಿಮುಚ್ಯಮಾನಾನಾಂ ಧನುಷಾಮರ್ಕವರ್ಚಸಾಮ್ ।
ವಿನಿಶ್ಚೇರುಃ ಪ್ರಭಾ ದಿವ್ಯಾ ಗ್ರಹಾಣಾಮುದಯೇಷ್ವಿವ ॥೪೮॥

ಸೂರ್ಯನ ಕಾಂತಿಯನ್ನು ಹೊಂದಿದ್ದ ಆ ಧನುಸ್ಸುಗಳನ್ನು ಬಿಡಿಸುತ್ತಿದ್ದಂತೆ ಅವುಗಳಿಂದ ಉದಯಿಸುವ ಗ್ರಹಗಳ ಪ್ರಭೆಯಂತೆ ದಿವ್ಯವಾದ ಪ್ರಭೆಯು ಹೊರಹೊಮ್ಮಿತು.

ಸ ತೇಷಾಂ ರೂಪಮಾಲೋಕ್ಯ ಭೋಗಿನಾಮಿವ ಜೃಂಭತಾಮ್ ।
ಹೃಷ್ಟರೋಮಾ ಭಯೋದ್ವಿಗ್ನಃ ಪ್ರವೇಪಿತತನುಸ್ತದಾ ॥೪೯॥
ಅರ್ಜುನೇನ ಸಮಾಶ್ವಸ್ತಃ ಕಿಂಚಿದ್ ಧೃಷ್ಟೋ ನೃಪಾತ್ಮಜಃ ॥೫೦॥

ಅವನು ಮೈಮುರಿಯುವ ಸರ್ಪಗಳಂತಿರುವ ಧನುಸ್ಸುಗಳ ಆ ಆಕಾರವನ್ನು ನೋಡಿ ರೋಮಾಂಚಗೊಂಡು ಭಯೋದ್ವಿಗ್ನನಾಗಿ ಶರೀರದಲ್ಲಿ ನಡುಕವನ್ನು ಹೊಂದಿದನು. ಅರ್ಜುನನಿಂದ ಸಮಾಧಾನಪಡಿಸಲ್ಪಟ್ಟ ಮೇಲೆ ರಾಜಕುಮಾರನು ಸ್ವಲ್ಪ ಧೈರ್ಯವನ್ನು ತಂದುಕೊಂಡನು.

ಆಮೀಲ್ಯ ಪುನರುನ್ಮೀಲ್ಯ ಸ್ಪೃಷ್ಟ್ವಾ ಸ್ಪೃಷ್ಟ್ವಾ ಚಕಾರ ಸಃ ॥೫೧॥

ಸಮ್ಯಗ್ ಧೃಷ್ಟಸ್ತದಾऽऽಶ್ವಸ್ತಃ ಕ್ಷಣೇನ ಸಮಪದ್ಯತ ॥೫೨॥

ಕಣ್ಣುಗಳನ್ನು ಮುಚ್ಚಿ ತೆರೆದು ಕೈಗಳಿಂದ ಮತ್ತೆ ಮತ್ತೆ ಮುಟ್ಟಿ ಚೆನ್ನಾಗಿ ಧೈರ್ಯವನ್ನು ತೆಗೆದುಕೊಂಡು ಅವನು ಒಂದು ಕ್ಷಣದಲ್ಲಿ ಸಮಾಧಾನವನ್ನು ಹೊಂದಿದನು.

ಸಂಸ್ಪೃಶ್ಯ ತಾನಿ ಚಾಪಾನಿ ಭಾನುಮಂತಿ ಬೃಹಂತಿ ಚ ।
ವೈರಾಟಿರರ್ಜುನಂ ರಾಜನ್ನಿದಂ ವಚನಮಬ್ರವೀತ್ ॥೫೩॥

ಎಲೈ ರಾಜನೇ, ಪ್ರಕಾಶಮಾನವಾದ ದೊಡ್ಡದಾದ ಆ ಧನುಸ್ಸುಗಳನ್ನು ಮುಟ್ಟಿ ವಿರಾಟಪುತ್ರನಾದ ಉತ್ತರನು ಅರ್ಜುನನನ್ನು ಕುರಿತು ಹೀಗೆ ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಏಕೋನಚತ್ವಾರಿಂಶೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆಮಹಾಭಾರತದ ವಿರಾಟಪರ್ವದಲ್ಲಿಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತನೆಯ ಅಧ್ಯಾಯ

ವಿವಿಧ ಆಯುಧಗಳನ್ನು ನೋಡಿ ಉತ್ತರನ ಪ್ರಶ್ನೆ

ಉತ್ತರಃ

ಸಾರಥೇ ಕಿಮಿದಂ ದಿವ್ಯಂ ನಾಗೋ ವಾ ಯದಿ ವಾ ಧನುಃ ।
ಸೌವರ್ಣಾನ್ಯತ್ರ ಪದ್ಮಾನಿ ಶತಪತ್ರಾಣಿ ಭಾಗಶಃ ॥೧॥

ಕುಶಾಗ್ನಿಪ್ರತಿತಪ್ತಾನಿ ಭಾನುಮಂತಿ ಬೃಹಂತಿ ಚ ॥೨॥

ಉತ್ತರ– ಎಲೈ ಸಾರಥಿಯೇ, ಇದೇನು ಸರ್ಪವೇ ಅಥವಾ ಧನುಸ್ಸೇ ? ಇಲ್ಲಿ ಒಂದು ಭಾಗದಲ್ಲಿ ಕುಶಾಗ್ನಿಯಿಂದ ತಪ್ತವಾದ ಪ್ರಕಾಶಮಾನವಾದ ದೊಡ್ಡದಾದ ನೂರುದಳಗಳಿಂದ ಕೂಡಿದ ಸುವರ್ಣಮಯವಾದ ಪದ್ಮಗಳಿವೆ.

ಬಿಂದವಶ್ಚಾತ್ರ ಸೌವರ್ಣಾ ಮಣಿಪ್ರೋತಾಃ ಸಮಂತತಃ ।
ಶಶಿಸೂರ್ಯಪ್ರಭಾಃ ಪೃಷ್ಠೇ ಭಾಂತಿ ರುಗ್ಮವಿಭೂಷಿತಾಃ ॥೩॥

ಪುಷ್ಪಾಣ್ಯತ್ರ ಸುವರ್ಣಸ್ಯ ಶತಪತ್ರಾಣಿ ಭಾಗಶಃ ॥೪॥

ಇಲ್ಲಿ ಮಣಿಗಳನ್ನು ಮಧ್ಯದಲ್ಲಿಟ್ಟಿರುವ ಸುವರ್ಣಬಿಂದುಗಳು ಸೂರ್ಯಚಂದ್ರರ ಕಾಂತಿಯುಳ್ಳವುಗಳಾಗಿ ಸುವರ್ಣವಿಭೂಷಿತವಾಗಿ ಹಿಂಭಾಗದಲ್ಲಿ ಎಲ್ಲ ಕಡೆಗಳಲ್ಲಿಯೂ ಇವೆ ಮತ್ತು ಕೆಲವು ಭಾಗದಲ್ಲಿ ನೂರುದಳವುಳ್ಳ ಸುವರ್ಣಪುಷ್ಪಗಳಿವೆ.

ವಿಸ್ಮಾಪನೀಯರೂಪಂ ಚ ಭೀಮಂ ಭೀಮಪ್ರದರ್ಶನಮ್ ।
ನೀಲೋತ್ಪಲನಿಭಂ ಕಸ್ಯ ಶಾತಕುಂಭಪರಿಷ್ಕೃತಮ್ ॥೫॥

ಆಶ್ಚರ್ಯಕರವಾಗಿರುವ ನೋಡುವುದಕ್ಕೇ ಭಯಂಕರವಾಗಿರುವ ನೀಲೋತ್ಪಲದಂತೆ ತೋರುವ ಸುವರ್ಣಾಲಂಕೃತವಾದ ಈ ಧನುಸ್ಸು ಯಾರದು?

ಋಷಭಾ ಯಸ್ಯ ಸೌವರ್ಣಾಃ ಪೃಷ್ಠೇ ತಿಷ್ಠಂತಿ ಶೃಂಗಿಣಃ ।
ತಾಳಪ್ರಮಾಣಂ ಕಸ್ಯೇದಂ ಮಣಿರುಗ್ಮವಿಭೂಷಿತಮ್ ॥೬॥

ಯಾವ ಧನುಸ್ಸಿನ ಹಿಂಭಾಗದಲ್ಲಿ ಸುವರ್ಣಮಯವಾದ ಕೊಂಬುಗಳುಳ್ಳ ವೃಷಭಗಳಿವೆಯೋ ಅಂತಹ ತಾಳವೃಕ್ಷಪ್ರಮಾಣದ ಮಣಿಸ್ವರ್ಣಗಳಿಂದ ವಿಭೂಷಿತವಾದ ಈ ಧನುಸ್ಸು ಯಾರದು?

ಹಾಟಕಸ್ಯ ಸುವರ್ಣಸ್ಯ ಯಸ್ಮಿನ್ ಶಾಖಾಮೃಗಾ ದಶ ।
ದುರಾನಮಂ ಮಹಾದೀರ್ಘಂ ಸುರೂಪಂ ದುಷ್ಪ್ರಧರ್ಷಣಮ್ ॥೭॥

ಕಸ್ಯೇದಮೀದೃಶಂ ಚಿತ್ರಂ ಧನುಃ ಸರ್ವೇ ಚ ದಂಸಿತಾಃ ॥೮॥

ಶ್ರೇಷ್ಠಜಾತಿಯ ಸುವರ್ಣದ ಎಲ್ಲವೂ ಕವಚಾದಿಗಳಿಂದ ಕೂಡಿರುವ ಹತ್ತು ಶಾಖಾಮೃಗವಿರುವ ಬಗ್ಗಿಸಲು ಅಸಾಧ್ಯವಾದ ಬಹಳ ದೀರ್ಘವಾಗಿರುವ

ಸುಂದರವಾದ ಸೋಲಿಸಲು ಅಸಾಧ್ಯವಾದ ಇಂತಹ ವಿಚಿತ್ರವಾದ ಧನುಸ್ಸು ಯಾರದು?

ಚಂದ್ರಾರ್ಕವಿಮಲಾಭಾಸಾಃ ಸುರೂಪಾಃ ಸುಪ್ರದರ್ಶನಾಃ ।
ಹಂಸಾ ಪೃಷ್ಠಾಶ್ರಿತಾ ಯಸ್ಯ ಕುಶಾಗ್ನಿಪ್ರತಿಮಾರ್ಚಿಷಃ ॥೯॥

ಶಾರ್ಙ್ಗಗಾಂಡೀವಸದೃಶಂ ಕಸ್ಯೇದಂ ಸಾರಥೇ ಧನುಃ ॥೧೦॥

ಎಲೈ ಸಾರಥಿಯೇ, ಸೂರ್ಯಚಂದ್ರರಂತೆ ಸ್ಪಷ್ಟವಾದ ಕಾಂತಿಯನ್ನು ಹೊಂದಿರುವ, ಒಳ್ಳೆಯ ಆಕಾರವನ್ನು ಹೊಂದಿರುವ, ನೋಡಲು ಸುಂದರವಾಗಿರುವ, ಕುಶಾಗ್ನಿಯಂತೆ ಕಿರಣಗಳನ್ನು ಸೂಸುವ, ಹಂಸಗಳನ್ನು ಹಿಂಭಾಗದಲ್ಲಿ ಹೊಂದಿರುವ, ಶಾರ್ಙ್ಗ ಮತ್ತು ಗಾಂಡೀವವನ್ನು ಹೋಲುವ ಈ ಧನುಸ್ಸು ಯಾರದು? ಇಲ್ಲಿ ಎಲ್ಲಾ ಕಪಿಗಳೂ ಕವಚಗಳನ್ನು ಹೊಂದಿವೆ.

ಚತುರ್ಥಂ ಕಾಂಚನವಪುರ್ಭಾತಿ ವಿದ್ಯುದ್ಗಣೋಪಮಮ್ ।
ನೀಲೋಪಲಿಪ್ತಮಚ್ಛಿದ್ರಂ ಜಾತರೂಪಮಯಂ ಧನುಃ ॥೧೧॥

ಈ ನಾಲ್ಕನೆಯ ಧನುಸ್ಸು ಮಿಂಚಿನ ಸಮೂಹಗಳನ್ನು ಹೋಲುವ ಸುವರ್ಣಮಯ ಶರೀರವುಳ್ಳದ್ದಾಗಿ ನೀಲ ಮಣಿಗಳಿಂದ ಖಚಿತವಾಗಿ ಯಾವ ವ್ರಣವೂ ಇಲ್ಲದೆ ಶೋಭಿಸುತ್ತಿದೆ.

ಮತ್ಸ್ಯಾಶ್ಚಾಸ್ಯ ಹಿರಣ್ಯಸ್ಯ ಪೃಷ್ಠೇ ತಿಷ್ಠಂತಿ ದಂಸಿತಾಃ ।
ಶಕ್ರಚಾಪೋಪಮಂ ದಿವ್ಯಂ ಕಸ್ಯೇದಂ ಸಾರಥೇ ಧನುಃ ॥೧೨॥

ಇದರ ಹಿಂಭಾಗದಲ್ಲಿ ಯುದ್ಧಸನ್ನದ್ಧವಾದಂತಹ ಸುವರ್ಣಮಯವಾದ ಮತ್ಸ್ಯಗಳು ಇವೆ. ಸಾರಥಿಯೇ, ಇಂದ್ರನ ಧನುಸ್ಸಿನಂತಿರುವ ಈ ದಿವ್ಯವಾದ ಧನುಸ್ಸು ಯಾರದು?

ಉಚ್ಚ್ರಿತಂ ಫಣಿವದ್ ದೀರ್ಘಂ ಸಾರವತ್ತ್ವಾತ್ ದುರಾನಮಮ್ ॥೧೩॥

ಸಹಸ್ರಗೋಧಾಃ ಸೌವರ್ಣಾ ದ್ವೀಪಿನಶ್ಚ ಚತುರ್ದಶ ।
ಬರ್ಹಿಣಾಶ್ಚಾತ್ರ ಸೌವರ್ಣಾಃ ಶತಚಂದ್ರವಿಭೂಷಿತಾಃ ॥೧೪॥

ಜಾಂಬೂನದವಿಚಿತ್ರಾಂಗಂ ಕಸ್ಯೇದಂ ಪಂಚಮಂ ಧನುಃ ॥೧೫॥

ಸರ್ಪದಂತೆ ಎದ್ದಿರುವ ದೀರ್ಘವೂ, ಬಲಿಷ್ಠವೂ ಮತ್ತು ಬಗ್ಗಿಸಲು ಅಸಾಧ್ಯವೂ ಆದ ಸುವರ್ಣಮಯವಾದ ಸಹಸ್ರಗೋಧಗಳನ್ನು (ಉಡಗಳನ್ನು) ಮತ್ತು ಹದಿನಾಲ್ಕು ಹುಲಿಗಳನ್ನು ಹೊಂದಿರುವ; ಸುವರ್ಣಮಯವಾದ ಶತಚಂದ್ರವಿಭೂಷಿತವಾದ ನವಿಲುಗಳನ್ನು ಹೊಂದಿರುವ; ಸುವರ್ಣ ಅಲಂಕಾರದಿಂದ ವಿಚಿತ್ರವಾಗಿ ಕಾಣುವ ಈ ಐದನೆಯ ಧನುಸ್ಸು ಯಾರದು?

ಕಸ್ಯೇಮೇ ಕ್ಷುರನಾರಾಚಾಃ ಸಹಸ್ರಂ ಲೋಮವಾಹಿನಃ ।
ಪ್ರತ್ಯಕ್ತಾಸ್ತೀಕ್ಷ್ಣತುಂಡಾಗ್ರಾ ಉಪಾಸಂಗೇ ಹಿರಣ್ಮಯೇ ॥೧೬॥

ಪ್ರತ್ಯೇಕವಾಗಿ ತೈಲದಲ್ಲಿ ಸಾಣೆಯನ್ನು ಹಿಡಿದಿರುವ ತೀಕ್ಷ್ಣವಾದ ತುದಿ ಮತ್ತು ಅಲುಗುಗಳನ್ನು ಹೊಂದಿರುವ ಸುವರ್ಣಮಯವಾದ ಬತ್ತಳಿಕೆಯಲ್ಲಿರುವ ಕೂದಲುಗಳನ್ನು ಕತ್ತರಿಸಲು ಸಮರ್ಥವಾದ ಸಹಸ್ರಸಂಖ್ಯೆಯಲ್ಲಿರುವ ಕ್ಷುರ (ಚಾಕುವಿನಂತಹ ಸಣ್ಣ ಬಾಣಗಳು) ಮತ್ತು ನಾರಾಚಗಳು ಯಾರವು?

ಹರಿದ್ರವರ್ಣಾಃ ಕಸ್ಯೇಮೇ ಶಿತಾಃ ಪಂಚಶತಂ ಶರಾಃ ।
ಆಶೀವಿಷಸಮಸ್ಪರ್ಶಾಃ ಶಿತಾಶ್ಚಾಜಿಹ್ಮಗಾ ದೃಢಾಃ ॥೧೭॥

ಸರ್ಪದ ಸ್ಪರ್ಶವನ್ನು ಹೋಲುವ ಹರಿತವಾದ, ನೇರವಾದ ಮತ್ತು ದೃಢವಾದ ಹಳದಿಯ ಬಣ್ಣದಿಂದ ಕೂಡಿದ ಈ ಐದುನೂರು ಬಾಣಗಳು ಯಾರವು?

ವಿಪಾಠಾಃ ಪೃಥವಃ ಕಸ್ಯ ಗೃಧ್ರಪತ್ರಾರ್ಧವಾಜಿತಾಃ ।
ವರಾಹಕರ್ಣಾಸ್ತೀಕ್ಷ್ಣಾಗ್ರಾ ಕಸ್ಯೇಮೇ ರುಚಿರಾಃ ಸಮಾಃ ॥೧೮॥

ಅರ್ಧದವರೆಗೂ ಹದ್ದಿನ ಗರಿಗಳನ್ನು ಹೊಂದಿರುವ ಈ ಅಗಲವಾದ ವಿಪಾಠಗಳು ಯಾರವು? ಸಮವೂ, ಮನೋಹರವೂ, ತೀಕ್ಷ್ಣವಾದ ತುದಿಯನ್ನು ಹೊಂದಿರುವವೂ ಆದ ಈ ವರಾಹಕರ್ಣಗಳು ಯಾರವು?

ವಜ್ರಾಶನಿಸಮಸ್ಪರ್ಶಾ ವೈಶ್ವಾನರಶಿಖೋಪಮಾಃ ।
ಸುವರ್ಣಪುಂಖಾಸ್ತೀಕ್ಷ್ಣಾಗ್ರಾಃ ಕಸ್ಯ ಸಪ್ತಶತಂ ಶರಾಃ ॥೧೯॥

ವಜ್ರಾಯುಧ ಮತ್ತು ಸಿಡಿಲಿನ ಸ್ಪರ್ಶವುಳ್ಳ, ಅಗ್ನಿಯ ಜ್ವಾಲೆಯನ್ನು ಹೋಲುವ, ಸುವರ್ಣಮಯವಾದ ಪುಂಖವನ್ನೂ, ತೀಕ್ಷ್ಣವಾದ ತುದಿಯನ್ನೂ ಹೊಂದಿರುವ ಈ ಏಳುನೂರು ಬಾಣಗಳು ಯಾರವು?

ಕಸ್ಯಾಯಂ ಸಾಯಕೋ ದೀಘೋ೯ ಗವ್ಯೇ ಕೋಶೇ ಚ ದಂಸಿತಃ ।
ಕಸ್ಯ ದಂಡೋ ದೃಢಃ ಶ್ಲಕ್ಷ್ಣೋ ರುಚಿರೋಽಯಂ ಪ್ರಕಾಶತೇ ॥೨೦॥

ವೈಯಾಘ್ರಕೋಶಃ ಕಸ್ಯಾಯಂ ದಿವ್ಯಶಾಖೋ ಮಹಾಪ್ರಭಃ ।
ಕಸ್ಯಾಯಮಸಿರಾವಾಸಃ ಪಂಚಶಾರ್ದೂಲಲಕ್ಷಣಃ ॥೨೧॥

ಗೋಚರ್ಮದ ಕೋಶದಲ್ಲಿರುವ ಸಿದ್ಧವಾದ ಈ ದೀರ್ಘವಾದ ಬಾಣವು ಯಾರದು? ವ್ಯಾಘ್ರಚರ್ಮದ ಕೋಶದಲ್ಲಿರುವ ಸುಂದರವಾದ ನಯವಾದ ಈ ದಿವ್ಯಶಾಖೆಯ ರೂಪದಲ್ಲಿರುವ ದೃಢವಾದ ದಂಡವು ಯಾರದು? ಒರೆಯಲ್ಲಿರುವ ಐದುಹುಲಿಗಳ ಲಕ್ಷಣವನ್ನು ಹೊಂದಿರುವ ಈ ಖಡ್ಗವು ಯಾರದು?

ಕಸ್ಯಾಯಂ ನಿರ್ಮಲಃ ಖಡ್ಗೋ ದ್ವೀಪಿಚರ್ಮನಿವಾಸಿತಃ ।
ನೀಲೋತ್ಪಲಸವರ್ಣೋ೯ಽಯಂ ಕಸ್ಯ ಖಡ್ಗಃ ಪೃಥುರ್ಮಹಾನ್ ॥೨೨॥

ವ್ಯಾಘ್ರಚರ್ಮದಲ್ಲಿ ಇಟ್ಟಿರುವ ನಿರ್ಮಲವಾದ ಈ ಖಡ್ಗವು ಯಾರದು? ದೀರ್ಘವು ಮತ್ತು ಅಗಲವೂ ಆಗಿರುವ ನೀಲೋತ್ಪಲ ಸಮಾನವರ್ಣವುಳ್ಳ ಖಡ್ಗವು ಯಾರದು?

ಮೃಗೇಂದ್ರಚರ್ಮಾವಸಿತಸ್ತೀಕ್ಷ್ಣಧಾರಃ ಸುನಿರ್ಮಲಃ ।
ಋಷಭಾಜಿನಕೋಶಸ್ತು ಕಸ್ಯ ಖಡ್ಗೋ ಮಹಾನಯಮ್ ॥೨೩॥

ಸಿಂಹಚರ್ಮದಲ್ಲಿ ಇಡಲ್ಪಟ್ಟ ಹರಿತವಾದ ಅಲಗನ್ನುಳ್ಳ ನಿರ್ಮಲವಾದ ಈ ಖಡ್ಗವು ಯಾರದು? ವೃಷಭಚರ್ಮದ ಕೋಶದಲ್ಲಿ ಇರುವ ಈ ದೊಡ್ಡ ಖಡ್ಗವು ಯಾರದು?

ಯಸ್ಯಾಪಿಧಾನೇ ದೃಶ್ಯಂತೇ ಸೂರ್ಯಾಃ ಪಂಚ ಪರಿಷ್ಕೃತಾಃ ।
ಕಸ್ಯಾಯಂ ವಿಪುಲಃ ಖಡ್ಗಃ ಶೃಂಗತ್ಸರುಮನೋಹರಃ ॥೨೪॥

ಯಾವ ಒರೆಯಲ್ಲಿ ಅಲಂಕೃತವಾದ ಸೂರ್ಯನ ಐದುಚಿಹ್ನೆಗಳಿವೆಯೋ ಅಂತಹ ವಿಪುಲವಾದ ಮನೋಹರವಾದ ಶೃಂಗದ ಹಿಡಿಯುಳ್ಳ ಈ ಖಡ್ಗವು ಯಾರದು?

ನಿಹಿತಃ ಪಾರ್ಷತೇ ಕೋಶೇ ತೈಲಧೌತಃ ಸಮಾಹಿತಃ ।
ಪ್ರಮಾಣವರ್ಣಯುಕ್ತಶ್ಚ ಕಸ್ಯ ಖಡ್ಗೋ ಮಹಾನಯಮ್ ॥೨೫॥

ಜಿಂಕೆಯ ಚರ್ಮದ ಕೋಶದಲ್ಲಿರುವ, ಎಣ್ಣೆಯಲ್ಲಿ ಸಾಣೆಯನ್ನು ಹಿಡಿದ, ಸರಿಯಾದ ಉದ್ದ ಮತ್ತು ಅಗಲ ಮತ್ತು ಬಣ್ಣಗಳಿಂದ ಕೂಡಿದ ಈ ದೊಡ್ಡ ಖಡ್ಗವು ಯಾರದು?

ಏತೇನ ಪ್ರತಿವಿದ್ಧಃ ಸನ್ ಜೀವೇತ್ ಕಶ್ಚನ ಕುಂಜರಃ ।
ನಿರ್ದಿಶಸ್ವ ಯಥಾಮಾರ್ಗಂ ಮಯಾ ಪೃಷ್ಠಾ ಬೃಹನ್ನಳೇ ।
ವಿಸ್ಮಯೋ ಮೇ ಪರೋ ಜಾತೋ ದೃಷ್ಟ್ವಾ ಸರ್ವಮಿದಂ ಮಹತ್ ॥

ಈ ಖಡ್ಗಗಳಿಂದ ಹೊಡೆಯಲ್ಪಟ್ಟರೆ ಯಾವ ಆನೆಯೂ ಸಹ ಜೀವಿಸಲಾರದು. ಎಲೈ ಬೃಹನ್ನಳೆಯೇ, ನಾನು ಕೇಳಿದ ಪ್ರಶ್ನೆಗಳಿಗೆ ಅನುಗುಣವಾಗಿ ಈ ಆಯುಧಗಳನ್ನು ನಿರ್ದೇಶಿಸುವವಳಾಗು. ಈ ದೊಡ್ಡ ಆಯುಧಗಳನ್ನೆಲ್ಲಾ ನೋಡಿ ನನಗೆ ಬಹಳ ವಿಸ್ಮಯವುಂಟಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಚತ್ವಾರಿಂಶೋಽಧ್ಯಾಯಃ ॥
॥ ಗೋಗ್ರಹಣಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತೊಂದನೆಯ ಅಧ್ಯಾಯ

ಅರ್ಜುನನಿಂದ ಉತ್ತರನಿಗೆ ಪಾಂಡವರ ಆಯುಧಗಳ ಪರಿಚಯ

ವೈಶಂಪಾಯನಃ

ಉತ್ತರೇಣೈವಮುಕ್ತಸ್ತು ಪಾರ್ಥೋ ವೈರಾಟಿಮಬ್ರವೀತ್ ।
ಮೃದ್ವ್ಯಾ ಪ್ರತ್ಯಾಯಯನ್ ವಾಚಾ ಭೀತಂ ಶಂಕಾವಶಂ ಗತಮ್॥೧॥

ವೈಶಂಪಾಯನ– ಉತ್ತರನಿಂದ ಹೀಗೆ ಕೇಳಲ್ಪಟ್ಟ ಅರ್ಜುನನು ಭೀತನೂ, ಸಂಶಯಗ್ರಸ್ಥನೂ ಆದ ಅವನನ್ನು ಕುರಿತು ಮೃದುವಾದ ಮಾತುಗಳಿಂದ ವಿಶ್ವಾಸವನ್ನು ಮೂಡಿಸುತ್ತಾ ಮಾತನಾಡಿದನು.

ಯತ್ ತ್ವಯಾ ಪ್ರಥಮಂ ಪೃಷ್ಟಂ ಶತ್ರುಸೇನಾಂಗಮರ್ದನಮ್ ।
ಪಾರ್ಥಸ್ಯೇದಂ ಧನುರ್ದಿವ್ಯಂ ಗಾಂಡೀವಮಿತಿ ವಿಶ್ರುತಮ್ ॥೨॥

ನೀನು ಮೊದಲು ಕೇಳಿದ ಶತ್ರುಸೇನೆಯನ್ನು ಮರ್ದಿಸುವ ದಿವ್ಯವಾದ ಧನುಸ್ಸು ಏನಿದೆಯೋ ಇದು ಗಾಂಡೀವವೆಂದು ಪ್ರಖ್ಯಾತವಾದ ಅರ್ಜುನನ ಧನುಸ್ಸು.

ಅಭೇದ್ಯಮಭಯಂ ಶ್ರೀಮದ್ ದಿವ್ಯಮಚ್ಛೇದ್ಯಮವ್ರಣಮ್ ।
ಸರ್ವಾಯುಧಮಹಾಮಾತ್ರಂ ಶಾತಕುಂಭಮಯಂ ಧನುಃ ॥೩॥

ಈ ಧನುಸ್ಸು ಅಭೇದ್ಯವಾದುದು. ಅಭಯವನ್ನು ಕೊಡುವಂತಹುದು. ಕಾಂತಿಯುಕ್ತವಾದುದು. ದಿವ್ಯವೂ ಅಚ್ಛೇದ್ಯವೂ ಆಗಿ ಯಾವ ವ್ರಣಗಳೂ ಇಲ್ಲದಿರುವುದು. ಎಲ್ಲಾ ಆಯುಧಗಳಲ್ಲಿ ಪ್ರಧಾನವಾದ ಈ ಧನುಸ್ಸು ಸುವರ್ಣಮಯವಾಗಿದೆ.

ಏತಚ್ಛತಸಹಸ್ರೇಣ ಸಮ್ಮಿತಂ ರಾಷ್ಟ್ರವರ್ಧನಮ್ ।
ದೇವದಾನವಗಂಧರ್ವೈಃ ಪೂಜಿತಂ ಶಾಶ್ವತೀಃ ಸಮಾಃ ॥೪॥

ಯೇನ ದೇವಾಸುರಾನ್ ಪಾರ್ಥಃ ಸರ್ವಾನ್ ವಿಷಹತೇ ರಣೇ ।

ಇದು ಒಂದುಲಕ್ಷ ಆಯುಧಗಳಿಗೆ ಸಮಾನವಾದುದು. ರಾಷ್ಟ್ರಕ್ಕೆ ಅಭಿವೃದ್ಧಿಯನ್ನು ಕೊಡುವಂತಹದು. ದೇವದಾನವಗಂಧರ್ವರಿಂದ ಬಹುಕಾಲದಿಂದ ಪೂಜಿಸಲ್ಪಡುವುದು. ಈ ಧನುಸ್ಸಿನ ಬಲದಿಂದಲೇ ಅರ್ಜುನನು ಯುದ್ಧದಲ್ಲಿ ಎಲ್ಲಾ ದೇವತೆಗಳನ್ನು ಮತ್ತು ಅಸುರರನ್ನು ಎದುರಿಸುತ್ತಾನೆ.

ಏತದ್ ವರ್ಷಸಹಸ್ರಂ ತು ಬ್ರಹ್ಮಾ ಪೂರ್ವಮಧಾರಯತ್ ॥೫॥

ತತೋಽನಂತರಮೇವಾಥ ಪ್ರಜಾಪತಿರಧಾರಯತ್ ।
ಸೋಮಃ ಪಂಚಸಹಸ್ರಾಣಿ ತಥಾ ಚ ವರುಣಃ ಶತಮ್ ॥೬॥

ತಸ್ಮಾಚ್ಚ ವರುಣಾದಗ್ನಿಃ ಪ್ರೇಮ್ಣಾ ಪ್ರಾಹೃತ್ಯ ತಚ್ಚುಭಮ್ ।
ಅಗ್ನಿನಾ ಪ್ರಾತಿಭಾವ್ಯೇನ ದತ್ತಂ ಪಾರ್ಥಾಯ ಗಾಂಡಿವಮ್ ।
ಪಂಚಪಷ್ಟಿ ಚ ವರ್ಷಾಣಿ ಕೌಂತೇಯೋ ಧಾರಯಿಷ್ಯತಿ ॥೭॥

ಹಿಂದೆ ಬ್ರಹ್ಮದೇವರು ಇದನ್ನು ಒಂದುಸಹಸ್ರವರ್ಷಗಳ ಕಾಲ ಧರಿಸಿದ್ದರು. ಅನಂತರ ಈ ಧನುಸ್ಸನ್ನು ಸ್ವಾಯಂಭುವ ಮನುವು ಧರಿಸಿದನು. ಅನಂತರ ಚಂದ್ರನು ಐದುಸಹಸ್ರವರ್ಷಗಳೂ, ವರುಣನು ನೂರುವರ್ಷವೂ ಧರಿಸಿದರು. ಅಗ್ನಿಯು ವರುಣನಿಂದ ಪ್ರೀತಿಪೂರ್ವಕವಾಗಿ ಆ ಧನುಸ್ಸನ್ನು ತೆಗೆದುಕೊಂಡನು. ಪ್ರಾತಿಭಾವ್ಯನಾಮಕನಾದ ಅಗ್ನಿಯು ಅರ್ಜುನನಿಗೆ ಗಾಂಡೀವವನ್ನು ತಂದುಕೊಟ್ಟನು. ಅರ್ಜುನನು ಅರವತ್ತೈದು ವರ್ಷಗಳ ಕಾಲ ಗಾಂಡೀವ ಧನುಸ್ಸನ್ನು ಧರಿಸುವನು.

ಏವಂ ವೀರ್ಯಂ ಮಹಾವೇಗಮೇತಚ್ಚ ಧನುರುತ್ತಮಮ್ ॥೮॥

ಈ ಮಹಾವೇಗವುಳ್ಳ ಶ್ರೇಷ್ಠವಾದ ಧನುಸ್ಸು ಇಂತಹ ಪರಾಕ್ರಮವುಳ್ಳದ್ದು.

ನೀಲೋತ್ಪಲಸಮಂ ರಾಜ್ಞಃ ಕೌರವ್ಯಸ್ಯ ಮಹಾತ್ಮನಃ ।
ಬಿಂದವಶ್ಚಾತ್ರ ಸೌವರ್ಣಾಃ ಪೃಷ್ಠೇ ಸಾಧುನಿಯೋಜಿತಾಃ ॥೯॥

ನೀಲೋತ್ಪಲ ಸದೃಶವಾದ ಧನುಸ್ಸು ಮಹಾತ್ಮನಾದ ಯುಧಿಷ್ಠಿರನದು. ಆ ಧನುಸ್ಸಿನ ಹಿಂಭಾಗದಲ್ಲಿ ಸುವರ್ಣಮಯವಾದ ಬಿಂದುಗಳು ಚೆನ್ನಾಗಿ ಇಡಲ್ಪಟ್ಟಿವೆ.

ವಿಶ್ರುತಂ ಭೀಮಸೇನಸ್ಯ ಜಾತರೂಪಮಯಂ ದೃಢಮ್ ॥೧೦॥

ಸಹಸ್ರಯೋಧಾಃ ಸೌವರ್ಣಾ ದ್ವೀಪಿನಶ್ಚ ಚತುರ್ದಶ ।
ಋಷಭಾ ಯತ್ರ ಸೌವರ್ಣಾಃ ಪೃಷ್ಠೇ ತಿಷ್ಠಂತಿ ಶೃಂಗಿಣಃ ॥೧೧॥

ಸುವರ್ಣಮಯವಾದ ಈ ಇನ್ನೊಂದು ಪ್ರಖ್ಯಾತವಾದ ಧನುಸ್ಸು ಭೀಮಸೇನನದು. ಅದರಲ್ಲಿ ಸುವರ್ಣಮಯವಾದ ಸಹಸ್ರಯೋಧರು, ಹದಿನಾಲ್ಕು ವ್ಯಾಘ್ರಗಳು ಮತ್ತು ಹಿಂಭಾಗದಲ್ಲಿ ಶೃಂಗಗಳಿಂದ ಕೂಡಿದ ಸುವರ್ಣಮಯವಾದ ವೃಷಭಗಳೂ ಇವೆ.

ಯೇನ ಭೀಮೋऽಜಯತ್ ಕೃತ್ಸ್ನಾಂ ದಿಶಂ ಪ್ರಾಚೀಂ ಪರಂತಪಃ ।
ಪೃಷ್ಠೇ ವಿಭಕ್ತಾಃ ಶೋಭಂತೇ ಕುಶಾಗ್ನಿಪ್ರತಿದೀಪಿತಾಃ ॥೧೨॥

ಪೂಜಿತಂ ಸುರಮರ್ತ್ಯೈಷು ಪ್ರಥಿತಂ ಧನುರುತ್ತಮಮ್ ।
ತಾಲಪ್ರಮಾಣಂ ಭೀಮಸ್ಯ ರತ್ನರುಗ್ಮವಿಭೂಷಿತಮ್ ॥೧೩॥

ಪರಂತಪನಾದ ಭೀಮಸೇನನು ಅದರಿಂದ ಸಮಗ್ರವಾದ ಪೂರ್ವದಿಕ್ಕನ್ನು ಜಯಿಸಿದನು. ಹಿಂಭಾಗದಲ್ಲಿ ಇರುವ ವೃಷಭಗಳು ಕುಶಾಗ್ನಿಯಿಂದ ಕಾಯಿಸಲ್ಪಟ್ಟು ಬಿಡಿಬಿಡಿಯಾಗಿ ಕಾಣುತ್ತವೆ. ಒಂದು ತಾಳ ಪ್ರಮಾಣದ ಸುವರ್ಣರತ್ನ ಭೂಷಿತವಾದ ಭೀಮಸೇನನ ಈ ಶ್ರೇಷ್ಠವಾದ ಧನುಸ್ಸು ದೇವತೆಗಳಿಂದಲೂ ಮತ್ತು ಮನುಷ್ಯರಿಂದಲೂ ಪೂಜಿತವಾಗಿದೆ.

ದುರಾನಮಂ ಮಹದ್ ದೀರ್ಘಂ ಸುರೂಪಂ ದುಷ್ಪ್ರದರ್ಷಣಮ್ ।
ಬರ್ಹಿಣಶ್ಚಾತ್ರ ಸೌವರ್ಣಾಃ ಶತಚಂದ್ರಕಭೂಷಣಾಃ ॥೧೪॥

ನಕುಲಸ್ಯ ಧನುಸ್ತ್ವೇತದ್ ಮಾದ್ರೀಪುತ್ರಸ್ಯ ಧೀಮತಃ ।
ಏತೇನ ಸದೃಶಂ ಚಿತ್ರಂ ಧನುರೇತದ್ ಯವೀಯಸಃ ॥೧೫॥

ಬಗ್ಗಿಸಲು ಅಸಾಧ್ಯವಾದ, ಒಳ್ಳೆಯ ರೂಪವನ್ನು ಹೊಂದಿದ, ಸೋಲಿಸಲು ಅಸಾಧ್ಯವಾದ ದೀರ್ಘವಾದ ಈ ದೊಡ್ಡ ಧನುಸ್ಸು ಮಾದ್ರಿಪುತ್ರನಾದ ಮೇಧಾವಿಯಾದ ನಕುಲನದು. ಈ ಧನುಸ್ಸಿನಲ್ಲಿ ಸುವರ್ಣಮಯವಾದ ನವಿಲುಗಳೂ ಮತ್ತು ನೂರು ಚಂದ್ರಪ್ರತಿಮೆಗಳೂ ಇವೆ. ಇದಕ್ಕೆ ಸದೃಶವಾದ ಇನ್ನೊಂದು ಧನುಸ್ಸು ತಮ್ಮನಾದ ಸಹದೇವನದು.

ಹಾರಿದ್ರವರ್ಣಾ ರಾಜ್ಞಸ್ತು ಕೌರವ್ಯಸ್ಯ ಮಹಾತ್ಮನಃ ।
ವಿಪತ್ತ್ರಾ ಭೀಮಸೇನಸ್ಯ ಗಿರೀಣಾಮಪಿ ದಾರಣಾಃ ॥೧೬॥

ಸುಪ್ರಭಾಃ ಸುಮಹಾಕಾಯಾಸ್ತೀಕ್ಷ್ಣಾಗ್ರಾಃ ಸುತರಾಂ ದೃಢಾಃ ।
ಭೀಮೇನ ಪ್ರಹಿತಾ ಹ್ಯೇತೇ ವಾರಣಾನಾಂ ನಿವಾರಣಾಃ ॥೧೭॥

ಹರಿದ್ರವರ್ಣದ ಬಾಣಗಳು ಮಹಾತ್ಮನಾದ ಯುಧಿಷ್ಠಿರನವು. ವಿಪತ್ತಿನಿಂದ ರಕ್ಷಣೆ ಮಾಡುವ ಈ ಬಾಣಗಳು ಭೀಮಸೇನನವು, ಅವು ಪರ್ವತವನ್ನೂ ಭೇದಿಸುತ್ತವೆ.

ಒಳ್ಳೆಯ ಕಾಂತಿಯುಕ್ತವಾದ ಹರಿತವಾದ ತುದಿಯನ್ನುಳ್ಳ ದೊಡ್ಡ ಪರಿಮಾಣವನ್ನುಳ್ಳ ಅತ್ಯಂತ ದೃಢವಾದ ಈ ಬಾಣಗಳು ಭೀಮನಿಂದ ಪ್ರಯೋಗಿಸಲ್ಪಟ್ಟು ಆನೆಗಳನ್ನೂ ಸಂಹರಿಸುತ್ತವೆ.

ಸುವರ್ಣದಂಡರುಚಿರಾಃ ಕಾಲದಂಡೋಪಮಾಃ ಶಿತಾಃ ।
ನಕುಲಸ್ಯ ಶರಾ ಹ್ಯೇತೇ ವಜ್ರಾಶನಿಸಮಪ್ರಭಾಃ ॥೧೮॥

ಯಮದಂಡದಂತಿರುವ ಶ್ವೇತವರ್ಣದ ಸುವರ್ಣದಂಡದಿಂದ ಕೂಡಿರುವ ಈ ಬಾಣಗಳು ನಕುಲನವು. ಇವು ವಜ್ರಾಯುಧದ ಮತ್ತು ಸಿಡಿಲಿನ ಸಮಾನ ಕಾಂತಿಯನ್ನು ಹೊಂದಿವೆ.

ಯಾಂಶ್ಚ ತ್ವಂ ಪೃಚ್ಛಸೇ ದೀಪ್ತಾನ್ ಸಮಧಾರಾನ್ ಸಮಾಹಿತಾನ್ ।
ವರಾಹಕರ್ಣಾಸ್ತೀಕ್ಷ್ಣಾಗ್ರಾಃ ಸಹದೇವಸ್ಯ ತೇ ಶರಾಃ ॥೧೯॥

ನೀನು ನೇರವಾದ ಅಲಗುಳ್ಳ ಒಂದು ಕಡೆ ಜೋಡಿಸಿರುವ ಕಾಂತಿಯಿಂದ ಬೆಳಗುವ ಯಾವ ಬಾಣಗಳನ್ನು ಕೇಳುತ್ತಿದ್ದೀಯೋ ಅವು ಸಹದೇವನ ವರಾಹಕರ್ಣವೆಂದು ಕರೆಯಲ್ಪಡುವ ತೀಕ್ಷ್ಣವಾದ ತುದಿಯುಳ್ಳ ಬಾಣಗಳು.

ಯಸ್ತ್ವಯಂ ಸಾಯಕೋ ದೀರ್ಘೋ ಗವ್ಯೇ ಕೋಶೇ ಚ ದಂಸಿತಃ ।
ಪಾರ್ಥಸ್ಯಾಯಂ ಮಹಾಘೋರಃ ಸರ್ವಭಾರಸಹೋ ಮಹಾನ್ ॥೨೦॥

ಗೋಚರ್ಮದ ಕೋಶದಲ್ಲಿ ಸಿದ್ಧಮಾಡಿಟ್ಟಿರುವ ಮಹಾಘೋರವಾದ ಎಲ್ಲ ಭಾರಗಳನ್ನು ತಡೆಯುವ ಈ ದೊಡ್ಡ ಬಾಣವೇನಿದೆಯೋ ಅದು ಅರ್ಜುನನದು.

ಯಸ್ತ್ವಯಂ ನಿರ್ಮಲಃ ಖಡ್ಗೋ ದ್ವೀಪಿಚರ್ಮಣಿ ದಂಸಿತಃ ।
ರಾಜ್ಞೋ ಯುಧಿಷ್ಠಿರಸ್ಯಾಯಂ ಕುಂತೀಪುತ್ರಸ್ಯ ಧೀಮತಃ ॥೨೧॥

ವ್ಯಾಘ್ರಚರ್ಮದಲ್ಲಿ ಇಟ್ಟಿರುವ ನಿರ್ಮಲವಾದ ಖಡ್ಗವು ಕುಂತೀಪುತ್ರನಾದ ಮೇಧಾವಿಯಾದ ಯುಧಿಷ್ಠಿರ ರಾಜನದು.

ವೈಯಾಘ್ರಕೋಶೋ ಭೀಮಸ್ಯ ಪಂಚಶಾರ್ದೂಲಲಕ್ಷಣಃ ।
ವಾರಣಾನಾಂ ಸುದೃಪ್ತಾನಾಂ ಶಿಕ್ಷಿತಃ ಸ್ಕಂಧಶಾತನೇ ॥೨೨॥

ಐದು ವ್ಯಾಘ್ರಗಳ ಚಿಹ್ನೆಗಳನ್ನು ಹೊಂದಿರುವ ವ್ಯಾಘ್ರಚರ್ಮದ ಕೋಶದಲ್ಲಿರುವ ಈ ಖಡ್ಗವು ಭೀಮಸೇನನದು. ಅದು ಮದಿಸಿದ ಆನೆಗಳ ಭುಜವನ್ನು ಕತ್ತರಿಸುವುದರಲ್ಲಿ ಪಳಗಿದೆ.

ನೀಲೋತ್ಪಲಸವರ್ಣೋಽಯಂ ಖಡ್ಗಃ ಪಾರ್ಥಸ್ಯ ಧೀಮತಃ ।
ಮೃಗೇಂದ್ರಚರ್ಮಪಿಹಿತಸ್ತೀಕ್ಷ್ಣಧಾರಃ ಸುನಿರ್ಮಲಃ ॥೨೩॥

ದರ್ಶನೀಯಃ ಸುತೀಕ್ಷ್ಣಾಗ್ರಃ ಕುಂತೀಪುತ್ರಸ್ಯ ಧೀಮತಃ ।
ಅರ್ಜುನಸ್ಯೈವ ನಿಸ್ತ್ರಿಂಶಃ ಪರಸೈನ್ಯಪ್ರದೂಷಣಃ ॥೨೪॥

ಸಿಂಹ ಚರ್ಮದಲ್ಲಿ ಇಡಲ್ಪಟ್ಟ ತೀಕ್ಷ್ಣವಾದ ಅಲುಗುಳ್ಳ, ಶುಭ್ರವಾದ ನೀಲೋತ್ಪಲಕ್ಕೆ ಸಮಾನವಾದ ಕಾಂತಿಯನ್ನು ಹೊಂದಿರುವ, ಈ ಖಡ್ಗವು ಅರ್ಜುನನದು. ಸುಂದರವೂ, ತೀಕ್ಷ್ಣವಾದ ತುದಿಯುಳ್ಳದ್ದೂ, ಶತ್ರುಸೈನ್ಯವನ್ನು ವಿನಾಶಮಾಡುವಂತಹದೂ ಆದ ಈ (ಇನ್ನೊಂದು) ಖಡ್ಗವೂ ಕುಂತೀಪುತ್ರನಾದ ಮೇಧಾವಿಯಾದ ಅರ್ಜುನನದೇ.

ಯಸ್ತ್ವಯಂ ಪಾರ್ಷತೇ ಕೋಶೇ ನಿಕ್ಷಿಪ್ತಃ ರುಚಿರತ್ಸರುಃ ।
ನಕುಲಸ್ಯೈಷ ನಿಸ್ತ್ರಿಂಶೋ ವೈಶ್ವಾನರಸಮಪ್ರಭಃ ॥೨೫॥

ಜಿಂಕೆಯ ಚರ್ಮದ ಕೋಶದಲ್ಲಿರುವ ಮನೋಹರವಾದ ಹಿಡಿಯನ್ನು ಹೊಂದಿರುವ ಅಗ್ನಿಯ ಕಾಂತಿಯನ್ನು ಹೊಂದಿರುವ ಈ ಖಡ್ಗವು ನಕುಲನದು.

ಯಸ್ತ್ವಯಂ ಪಿಂಗಲಃ ಖಡ್ಗಶ್ಚಿತ್ರೋ ಮಣಿಮಯತ್ಸರುಃ ।
ಸಹದೇವಸ್ಯ ಖಡ್ಗೋಽಯಂ ಭಾರಸಾಹೋಽತಿದಂಸಿತಃ ।
ಭೀಮಸ್ಯಾಯಂ ಮಹಾದಂಡಃ ಸರ್ವಾಮಿತ್ರವಿನಾಶನಃ ॥೨೬॥

ಮಣಿಮಯವಾದ ಹಿಡಿಯುಳ್ಳ ವಿಚಿತ್ರವಾದ ಪಿಂಗಲವರ್ಣದ ಈ ಖಡ್ಗವು ಎದುರಾಳಿಯ ಎಲ್ಲ ಭಾರವನ್ನೂ ಸಹಿಸುವ ಅತ್ಯಂತ ಸನ್ನದ್ಧವಾದ ಸಹದೇವನ ಖಡ್ಗ. ಇದು ಎಲ್ಲ ಶತ್ರುಗಳನ್ನೂ ವಿನಾಶಗೊಳಿಸುವ ಭೀಮಸೇನನ ಮಹಾದಂಡ.

ವೈಶಂಪಾಯನಃ

ಭೇದತೋ ಹ್ಯರ್ಜುನಸ್ತೂರ್ಣಂ ಕಥಯಾಮಾಸ ತತ್ತ್ವತಃ ।
ಆಯುಧಾನಿ ಕಲಾಪಾನಿ ನಿಸ್ತ್ರಿಂಶಾಂಶ್ಚಾತುಲಪ್ರಭಾನ್ ॥೨೭॥

ವೈಶಂಪಾಯನ– ಹೀಗೆ ಅರ್ಜುನನು ಶೀಘ್ರವಾಗಿ ಅಸದೃಶ ಕಾಂತಿಯುಳ್ಳ ಖಡ್ಗಗಳನ್ನು, ಆಯುಧಗಳನ್ನು, ಬತ್ತಳಿಕೆಗಳನ್ನು ಶೀಘ್ರವಾಗಿ ಅವುಗಳ ಲಕ್ಷಣ ವ್ಯತ್ಯಾಸದಿಂದ ಉತ್ತರನಿಗೆ ನಿರೂಪಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಏಕಚತ್ವಾರಿಂಶೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತೆರಡನೆಯ ಅಧ್ಯಾಯ

ಅರ್ಜುನನಿಂದ ಉತ್ತರನಿಗೆ ತಾವು ಪಾಂಡವರೆಂದು ಕಥನ.

ವೈಶಂಪಾಯನಃ

ಏತಸ್ಮಿನ್ನಂತರೇ ಪಾರ್ಥಂ ನ ಮೂಢಾತ್ಮಾ ವ್ಯಜಾನತ ।
ವಿರಾಟಪುತ್ರಃ ಪ್ರಮುಖೇ ಪಪ್ರಚ್ಛ ಪುನರೇವ ತು ॥೧॥

ವೈಶಂಪಾಯನ– ಈ ಮಧ್ಯದಲ್ಲಿ ಮೂಢಾತ್ಮನಾದ ವಿರಾಟಪುತ್ರನು ಅರ್ಜುನನನ್ನು ಎದುರಿಗಿದ್ದರೂ ಗುರುತಿಸಲಿಲ್ಲ. ಮತ್ತು ಪುನಃ ಪ್ರಶ್ನೆಯನ್ನು ಮಾಡಿದನು.

ಸುವರ್ಣರುಚಿರಾಣ್ಯೇಷಾಮಾಯುಧಾನಿ ಮಹಾತ್ಮನಾಮ್ ।
ರುಚಿರಾಣಿ ಪ್ರಕಾಶಂತೇ ಪಾರ್ಥಾನಾಮಾಶುಕಾರಿಣಾಮ್ ॥೨॥

ಮಹಾತ್ಮರಾದ ಶೀಘ್ರಕಾರಿಗಳಾದ ಪಾಂಡವರ ಸುವರ್ಣಾಲಂಕೃತವಾದ ಈ ಮನೋಹರವಾದ ಆಯುಧಗಳು ಶೋಭಿಸುತ್ತಿವೆ.

ಕ್ವ ನು ತೇ ಪಾಂಡವಾಃ ಶೂರಾಃ ಸಂಗ್ರಾಮೇಷ್ವಪರಾಜಿತಾಃ ।
ಯೇಷಾಮಿಮಾನಿ ದಿವ್ಯಾನಿ ಶ್ರಿಯಾ ದೀಪ್ಯಂತಿ ಭಾಂತಿ ಚ ॥೩॥

ದೀರ್ಘವಾದ, ದಿವ್ಯವಾದ ಕಾಂತಿಯಿಂದ ಬೆಳಗುವ ಈ ಆಯುಧಗಳು ಯಾವ ಪಾಂಡವರಿಗೆ ಸೇರಿದವೋ ಅಂತಹ ಯುದ್ಧದಲ್ಲಿ ಎಂದೂ ಸೋಲದ ಶೂರರಾದ ಪಾಂಡವರು ಎಲ್ಲಿದ್ದಾರೆ?

ಐದು ವ್ಯಾಘ್ರಗಳ ಚಿಹ್ನೆಗಳನ್ನು ಹೊಂದಿರುವ ವ್ಯಾಘ್ರಚರ್ಮದ ಕೋಶದಲ್ಲಿರುವ ಈ ಖಡ್ಗವು ಭೀಮಸೇನನದು. ಅದು ಮದಿಸಿದ ಆನೆಗಳ ಭುಜವನ್ನು ಕತ್ತರಿಸುವುದರಲ್ಲಿ ಪಳಗಿದೆ.

ನೀಲೋತ್ಪಲಸವರ್ಣೋಽಯಂ ಖಡ್ಗಃ ಪಾರ್ಥಸ್ಯ ಧೀಮತಃ ।
ಮೃಗೇಂದ್ರಚರ್ಮಪಿಹಿತಸ್ತೀಕ್ಷ್ಣಧಾರಃ ಸುನಿರ್ಮಲಃ ॥೨೩॥

ದರ್ಶನೀಯಃ ಸುತೀಕ್ಷ್ಣಾಗ್ರಃ ಕುಂತೀಪುತ್ರಸ್ಯ ಧೀಮತಃ ।
ಅರ್ಜುನಸ್ಯೈವ ನಿಸ್ತ್ರಿಂಶಃ ಪರಸೈನ್ಯಪ್ರದೂಷಣಃ ॥೨೪॥

ಸಿಂಹ ಚರ್ಮದಲ್ಲಿ ಇಡಲ್ಪಟ್ಟ ತೀಕ್ಷ್ಣವಾದ ಅಲುಗುಳ್ಳ ಶುಭ್ರವಾದ ನೀಲೋತ್ಪಲಕ್ಕೆ ಸಮಾನವಾದ ಕಾಂತಿಯನ್ನು ಹೊಂದಿರುವ, ಈ ಖಡ್ಗವು ಅರ್ಜುನನದು. ಸುಂದರವೂ, ತೀಕ್ಷ್ಣವಾದ ತುದಿಯುಳ್ಳದ್ದೂ, ಶತ್ರುಸೈನ್ಯವನ್ನು ವಿನಾಶಮಾಡುವಂತಹದೂ ಆದ ಈ (ಇನ್ನೊಂದು) ಖಡ್ಗವೂ ಕುಂತೀಪುತ್ರನಾದ ಮೇಧಾವಿಯಾದ ಅರ್ಜುನನದೇ.

ಯಸ್ತ್ವಯಂ ಪಾರ್ಷತೇ ಕೋಶೇ ನಿಕ್ಷಿಪ್ತಃ ರುಚಿರತ್ಸರುಃ ।
ನಕುಲಸ್ಯೈಷ ನಿಸ್ತ್ರಿಂಶೋ ವೈಶ್ವಾನರಸಮಪ್ರಭಃ ॥೨೫॥

ಜಿಂಕೆಯ ಚರ್ಮದ ಕೋಶದಲ್ಲಿರುವ ಮನೋಹರವಾದ ಹಿಡಿಯನ್ನು ಹೊಂದಿರುವ ಅಗ್ನಿಯ ಕಾಂತಿಯನ್ನು ಹೊಂದಿರುವ ಈ ಖಡ್ಗವು ನಕುಲನದು.

ಯಸ್ತ್ವಯಂ ಪಿಂಗಲಃ ಖಡ್ಗಶ್ಚಿತ್ರೋ ಮಣಿಮಯತ್ಸರುಃ ।
ಸಹದೇವಸ್ಯ ಖಡ್ಗೋಽಯಂ ಭಾರಸಾಹೋಽತಿದಂಸಿತಃ ।
ಭೀಮಸ್ಯಾಯಂ ಮಹಾದಂಡಃ ಸರ್ವಾಮಿತ್ರವಿನಾಶನಃ ॥೨೬॥

ಮಣಿಮಯವಾದ ಹಿಡಿಯುಳ್ಳ ವಿಚಿತ್ರವಾದ ಪಿಂಗಲವರ್ಣದ ಈ ಖಡ್ಗವು ಎದುರಾಳಿಯ ಎಲ್ಲ ಭಾರವನ್ನೂ ಸಹಿಸುವ ಅತ್ಯಂತ ಸನ್ನದ್ಧವಾದ ಸಹದೇವನ ಖಡ್ಗ. ಇದು ಎಲ್ಲ ಶತ್ರುಗಳನ್ನೂ ವಿನಾಶಗೊಳಿಸುವ ಭೀಮಸೇನನ ಮಹಾದಂಡ.

ವೈಶಂಪಾಯನಃ

ಭೇದತೋ ಹ್ಯರ್ಜುನಸ್ತೂರ್ಣಂ ಕಥಯಾಮಾಸ ತತ್ತ್ವತಃ ।
ಆಯುಧಾನಿ ಕಲಾಪಾನಿ ನಿಸ್ತ್ರಿಂಶಾಂಶ್ಚಾತುಲಪ್ರಭಾನ್ ॥೨೭॥

ವೈಶಂಪಾಯನ– ಹೀಗೆ ಅರ್ಜುನನು ಶೀಘ್ರವಾಗಿ ಅಸದೃಶ ಕಾಂತಿಯುಳ್ಳ ಖಡ್ಗಗಳನ್ನು, ಆಯುಧಗಳನ್ನು, ಬತ್ತಳಿಕೆಗಳನ್ನು ಶೀಘ್ರವಾಗಿ ಅವುಗಳ ಲಕ್ಷಣ ವ್ಯತ್ಯಾಸದಿಂದ ಉತ್ತರನಿಗೆ ನಿರೂಪಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಏಕಚತ್ವಾರಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತೆರಡನೆಯ ಅಧ್ಯಾಯ

ಅರ್ಜುನನಿಂದ ಉತ್ತರನಿಗೆ ತಾವು ಪಾಂಡವರೆಂದು ಕಥನ.

ವೈಶಂಪಾಯನಃ

ಏತಸ್ಮಿನ್ನಂತರೇ ಪಾರ್ಥಂ ನ ಮೂಢಾತ್ಮಾ ವ್ಯಜಾನತ ।
ವಿರಾಟಪುತ್ರಃ ಪ್ರಮುಖೇ ಪಪ್ರಚ್ಛ ಪುನರೇವ ತು ॥೧॥

ವೈಶಂಪಾಯನ– ಈ ಮಧ್ಯದಲ್ಲಿ ಮೂಢಾತ್ಮನಾದ ವಿರಾಟಪುತ್ರನು ಅರ್ಜುನನನ್ನು ಎದುರಿಗಿದ್ದರೂ ಗುರುತಿಸಲಿಲ್ಲ. ಮತ್ತು ಪುನಃ ಪ್ರಶ್ನೆಯನ್ನು ಮಾಡಿದನು.

ಸುವರ್ಣರುಚಿರಾಣ್ಯೇಷಾಮಾಯುಧಾನಿ ಮಹಾತ್ಮನಾಮ್ ।
ರುಚಿರಾಣಿ ಪ್ರಕಾಶಂತೇ ಪಾರ್ಥಾನಾಮಾಶುಕಾರಿಣಾಮ್ ॥೨॥

ಮಹಾತ್ಮರಾದ ಶೀಘ್ರಕಾರಿಗಳಾದ ಪಾಂಡವರ ಸುವರ್ಣಾಲಂಕೃತವಾದ ಈ ಮನೋಹರವಾದ ಆಯುಧಗಳು ಶೋಭಿಸುತ್ತಿವೆ.

ಕ್ವ ನು ತೇ ಪಾಂಡವಾಃ ಶೂರಾಃ ಸಂಗ್ರಾಮೇಷ್ವಪರಾಜಿತಾಃ ।
ಯೇಷಾಮಿಮಾನಿ ದಿವ್ಯಾನಿ ಶ್ರಿಯಾ ದೀಪ್ಯಂತಿ ಭಾಂತಿ ಚ ॥೩॥

ದೀರ್ಘವಾದ, ದಿವ್ಯವಾದ ಕಾಂತಿಯಿಂದ ಬೆಳಗುವ ಈ ಆಯುಧಗಳು ಯಾವ ಪಾಂಡವರಿಗೆ ಸೇರಿದವೋ ಅಂತಹ ಯುದ್ಧದಲ್ಲಿ ಎಂದೂ ಸೋಲದ ಶೂರರಾದ ಪಾಂಡವರು ಎಲ್ಲಿದ್ದಾರೆ?

ಕಸ್ಮಿನ್ ವಸಂತಿ ತೇ ದೇಶೇ ಧರ್ಮಜ್ಞಾ ಬಂಧುವತ್ಸಲಾಃ ।
ಕ್ವ ಧರ್ಮರಾಜಃ ಕೌರವ್ಯೋ ಧರ್ಮಪುತ್ರೋ ಯುಧಿಷ್ಠಿರಃ ॥೪॥

ಭೀಮಸೇನಾರ್ಜುನೌ ಚಾಪಿ ಸರ್ವೇ ತೇ ಮಮ ಮಾತುಲಾಃ ।
ನಕುಲಃ ಸಹದೇವೋ ವಾ ಸರ್ವಾಸ್ತ್ರಕುಶಲೋ ರಣೇ ॥೫॥

ಧರ್ಮಜ್ಞರೂ, ಬಂಧುವತ್ಸಲರೂ ಆದ ಅವರು ಯಾವ ದೇಶದಲ್ಲಿ ವಾಸ ಮಾಡುತ್ತಿದ್ದಾರೆ? ಕೌರವ್ಯನೂ, ಧರ್ಮಪುತ್ರನೂ, ಧರ್ಮರಾಜನೂ ಆದ ಯುಧಿಷ್ಠಿರನು ಎಲ್ಲಿದ್ದಾನೆ? ಯುದ್ಧದಲ್ಲಿ ಸರ್ವಾಸ್ತ್ರ ಕುಶಲರಾದ ಭೀಮಸೇನಾರ್ಜುನರು, ನಕುಲ ಸಹದೇವರು ಎಲ್ಲಿದ್ದಾರೆ? ಅವರೆಲ್ಲರೂ ನನ್ನ ಸೋದರ ಮಾವಂದಿರು.

ಸರ್ವ ಏವ ಮಹಾತ್ಮಾನಃ ಸರ್ವಾಮಿತ್ರವಿನಾಶನಾಃ ।
ರಾಜ್ಯಮಕ್ಷೈಃ ಪರಿತ್ಯಜ್ಯ ನಃ ಶ್ರೂಯಂತೇ ವನಂ ಗತಾಃ ॥೬॥

ಮಹಾತ್ಮರೂ ಮತ್ತು ಸರ್ವಶತ್ರುಸಂಹಾರಕರೂ ಆದ ಅವರು ಅಕ್ಷದ್ಯೂತದಲ್ಲಿ ರಾಜ್ಯವನ್ನು ಕಳೆದುಕೊಂಡು ಕಾಡಿಗೆ ಹೋದರೆಂದು ನಾವು ಕೇಳಿದ್ದೇವೆ.

ದ್ರೌಪದೀ ಚಾಪಿ ಪಾಂಚಾಲೀ ಸ್ತ್ರೀರತ್ನಮಿತಿ ವಿಶ್ರುತಾ ।
ಜಿತಾ ಚಾಕ್ಷೈಸ್ತದಾ ಕೃಷ್ಣಾ ತಾನೇವಾನ್ವಗಮದ್ ವನೇ ॥೭॥

ದ್ರುಪದರಾಜಕುಮಾರಿಯಾದ ಪಾಂಚಾಲಿಯಾದ ಕೃಷ್ಣೆಯು ಸ್ತ್ರೀರತ್ನವೆಂದು ಪ್ರಖ್ಯಾತಳಾಗಿದ್ದಾಳೆ. ಅಕ್ಷಕ್ರೀಡೆಯಲ್ಲಿ ಪಣಕ್ಕಿಟ್ಟು ಕಳೆದುಕೊಳ್ಳಲ್ಪಟ್ಟ ಅವಳು ಕಾಡಿನಲ್ಲಿ ಆ ಪಾಂಡವರನ್ನೇ ಹಿಂಬಾಲಿಸಿದಳು.

ಉತ್ಸೃಜ್ಯ ಧರ್ಮ್ಯಂ ರಾಜ್ಯಂ ತೇ ನಃ ಶ್ರೂಯಂತೇ ವನಂ ಗತಾಃ ॥೮॥

ಪಾಂಡವರು ಧರ್ಮದಿಂದ ಬಂದ ರಾಜ್ಯವನ್ನು ತ್ಯಜಿಸಿ ಕಾಡಿಗೆ ಹೋದರೆಂದು ನಾವು ಕೇಳಿದ್ದೇವೆ.

ಪಾಂಡವಾನ್ ಯದಿ ಜಾನೀಷೇ ಕ್ವ ನು ತೇ ಧರ್ಮಚಾರಿಣಃ ।
ಕ್ವ ಚಾದ್ಯ ನಿವಸಂತೀತಿ ಸತ್ಯಂ ಬ್ರೂಹಿ ಬೃಹನ್ನಳೇ ॥೯॥

ಪಾಂಡವರನ್ನು ನೀನು ತಿಳಿದಿದ್ದರೆ ಆ ಧರ್ಮಚಾರಿಗಳು ಎಲ್ಲಿದ್ದಾರೆ? ಎಲೈ ಬೃಹನ್ನಳೆಯೇ, ಅವರು ಈ ದಿನ ಎಲ್ಲಿ ವಾಸಮಾಡುತ್ತಿದ್ದಾರೆಂದು ನನಗೆ ಸತ್ಯವನ್ನು ಹೇಳು.

ವೈಶಂಪಾಯನಃ

ತತಃ ಪ್ರಹಸ್ಯ ಬೀಭತ್ಸುಃ ಕೌಂತೇಯಃ ಶ್ವೇತವಾಹನಃ ।
ಉವಾಚ ರಾಜಪುತ್ರಂ ತಮುತ್ತರಂ ಶೃಣು ಮೇ ವಚಃ ॥೧೦॥

ವೈಶಂಪಾಯನ– ಆಗ ಕುಂತೀಪುತ್ರನೂ, ಶ್ವೇತವಾಹನನೂ ಆದ ಅರ್ಜುನನು ನಕ್ಕು ಆ ರಾಜಪುತ್ರನಾದ ಉತ್ತರನನ್ನು ಕುರಿತು ನನ್ನ ಮಾತನ್ನು ಕೇಳು ಎಂದು ಹೇಳಿದನು.

ಅಹಮಸ್ಮ್ಯರ್ಜುನೋ ನಾಮ್ನಾ ಕಂಕೋ ನಾಮ ಯುಧಿಷ್ಠಿರಃ ।
ಭೀಮಸೇನಸ್ತು ವಲಲಃ ಪಿತುಸ್ತೇ ಪರಿಚಾರಕಃ ॥೧೧॥

ನಾನೇ ಅರ್ಜುನನೆಂಬುವನು. ಕಂಕನು ಯುಧಿಷ್ಠಿರ. ನಿನ್ನ ತಂದೆಯ ಪರಿಚಾರಕನಾದ ವಲಲನು ಭೀಮಸೇನ.

ಅಶ್ವಬಂಧಸ್ತು ನಕುಲಃ ಸಹದೇವಸ್ತು ಗೋಪತಿಃ ।
ಸೈರಂಧ್ರೀಂ ದ್ರೌಪದೀಂ ವಿದ್ಧಿ ಯದರ್ಥೇ ಕೀಚಕೋ ಹತಃ ॥೧೨॥

ಭೀಮಸೇನೇನ ದುರ್ವೃತ್ತಃ ಸಹ ಭ್ರಾತೃಭಿರಾಹವೇ ॥೧೩॥

ಅಶ್ವಬಂಧನಾದವನು ನಕುಲ, ಗೋಪತಿಯಾದವನು ಸಹದೇವ. ಯಾವಳ ಸಲುವಾಗಿ ದುರ್ನಡತೆಯುಳ್ಳ ಕೀಚಕನು ತಮ್ಮಂದಿರ ಸಹಿತವಾಗಿ ಯುದ್ಧದಲ್ಲಿ ಭೀಮನಿಂದ ಮೃತನಾದನೋ ಆ ಸೈರಂಧ್ರಿಯು ದ್ರೌಪದಿ ಎಂದು ತಿಳಿ.

ಉತ್ತರಃ

ದಶ ಪಾರ್ಥಸ್ಯ ನಾಮಾನಿ ಶ್ರೂಯಂತೇ ಮೇ ಕಥಾಸು ಚ ।
ಬ್ರೂಹಿ ತ್ವಂ ಯದಿ ಜಾನೀಷೇ ಶ್ರದ್ದಧೇಯಂ ವಚಸ್ತವ ॥೧೪॥

ಉತ್ತರ– ನಾನು ಕಥೆಗಳಲ್ಲಿ ಅರ್ಜುನನಿಗೆ ಹತ್ತು ನಾಮಗಳಿವೆ ಎಂದು ಕೇಳಿದ್ದೇನೆ. ಅದನ್ನು ತಿಳಿದಿದ್ದರೆ ನನಗೆ ಹೇಳು. ಆಗ ನಿನ್ನ ಮಾತನ್ನು ನಂಬುವೆನು.

ಅರ್ಜುನಃ

ಹಂತ ತರ್ಹಿ ತವಾಚಕ್ಷೇ ದಶ ನಾಮಾನಿ ಯಾನಿ ಮೇ ।
ಈಶಾನೋ ವಿದಧೇ ದೇವಸ್ತ್ರಿದಿವಸ್ಯೇಶ್ವರೋ ದಿವಃ ॥೧೫॥

ಅರ್ಜುನ– ಸಂತೋಷ. ಅಂತರಿಕ್ಷಾಧಿಪತಿಯಾದ ಶಿವನು ನನಗೆ ಯಾವ ಹೆಸರುಗಳನ್ನು ಇಟ್ಟನೋ ಅಂತಹ ಹತ್ತು ನಾಮಗಳನ್ನು ನಿನಗೆ ನಾನು ಹೇಳುತ್ತೇನೆ.

ಅರ್ಜುನಃ ಫಲ್ಗುನೋ ಜಿಷ್ಣುಃ ಕಿರೀಟೀ ಶ್ವೇತವಾಹನಃ ।
ಬೀಭತ್ಸುರ್ವಿಜಯಃ ಪಾರ್ಥಃ ಸವ್ಯಸಾಚೀ ಧನಂಜಯಃ ॥೧೬॥

ಏತಾನಿ ಮಮ ನಾಮಾನಿ ಸ್ಥಾಪಿತಾನಿ ಸುರೋತ್ತಮೈಃ ॥೧೭॥

ಅರ್ಜುನ, ಫಲ್ಗುನ, ಜಿಷ್ಣು, ಕಿರೀಟೀ, ಶ್ವೇತವಾಹನ, ಬೀಭತ್ಸು, ವಿಜಯ, ಪಾರ್ಥ, ಸವ್ಯಸಾಚೀ, ಧನಂಜಯ ಇವೇ ನನಗೆ ಶ್ರೇಷ್ಠರಾದ ದೇವತೆಗಳು ಇಟ್ಟ ಹತ್ತು ನಾಮಗಳು.

ಉತ್ತರಃ

ಗುಣತೋ ದಶ ನಾಮಾನಿ ಸಮವೇತಾನಿ ಪಾಂಡವೇ ।
ಚರಂತಿ ಲೋಕೇ ಖ್ಯಾತಾನಿ ವಿದಿತಾನಿ ಮಮಾನಘ ॥೧೮॥

ಉತ್ತರ– ಎಲೈ ಅನಘನೇ, ಪಾಂಡವನಾದ ಅರ್ಜುನನಲ್ಲಿ ಹತ್ತು ಹೆಸರುಗಳು ಅನ್ವರ್ಥವಾಗಿ ಲೋಕದಲ್ಲಿ ಪ್ರಸಿದ್ಧಿಯನ್ನು ಹೊಂದಿವೆ ಎಂದು ನಾನು ತಿಳಿದಿದ್ದೇನೆ.

ಕೇನಾಸಿ ವಿಜಯೋ ನಾಮ ಕೇನಾಸಿ ಶ್ವೇತವಾಹನಃ ।
ಸವ್ಯಸಾಚೀತಿ ಕೇನಾಸಿ ಜಿಷ್ಣುರ್ಬೀಭತ್ಸುರೇವ ಚ ॥೧೯॥

ನೀನು ಯಾವ ಕಾರಣದಿಂದ ವಿಜಯನೆಂಬ ನಾಮವನ್ನು ಹೊಂದಿದ್ದೀಯೆ? ಯಾವ ಕಾರಣದಿಂದ ಶ್ವೇತವಾಹನನೆಂಬ ನಾಮವನ್ನು ಹೊಂದಿದ್ದೀಯೆ? ಯಾವ ಕಾರಣದಿಂದ ಸವ್ಯಸಾಚೀ, ಜಿಷ್ಣು ಮತ್ತು ಬೀಭತ್ಸು ಎಂಬ ನಾಮಗಳನ್ನು ಹೊಂದಿದ್ದೀಯೆ?

ಅರ್ಜುನಃ ಫಲ್ಗುನಃ ಪಾರ್ಥಃ ಕಿರೀಟೀ ಶ್ವೇತವಾಹನಃ ।
ಧನಂಜಯಶ್ಚ ಕೇನಾಸಿ ಶೀಘ್ರಂ ವದ ಬೃಹನ್ನಳೇ ॥೨೦॥

ಎಲೌ ಬೃಹನ್ನಳೆಯೇ, ಯಾವ ಕಾರಣದಿಂದ ಅರ್ಜುನ, ಫಲ್ಗುನ, ಪಾರ್ಥ, ಕಿರೀಟಿ, ಶ್ವೇತವಾಹನ, ಧನಂಜಯ ಎಂಬ ನಾಮಗಳನ್ನು ಹೊಂದಿದ್ದೀಯೆ? ಶೀಘ್ರವಾಗಿ ಹೇಳು.

ಶ್ರುತಾ ಮೇ ತಸ್ಯ ವೀರಸ್ಯ ಕೇವಲಾ ನಾಮಹೇತವಃ ॥೨೧॥

ತತ್ಸರ್ವಂ ಯದಿ ಮೇ ಬ್ರೂಯಾಃ ಶ್ರದ್ದಧ್ಯಾಂ ಸರ್ವಮೇವ ತೇ ॥೨೨॥

ನಾನು ಆ ವೀರನ ಎಲ್ಲಾ ನಾಮಗಳಿಗೂ ಕಾರಣಗಳಿವೆ ಎಂದು ಮಾತ್ರ ಕೇಳಿದ್ದೇನೆ. ನೀನು ಅದೆಲ್ಲವನ್ನೂ ನನಗೆ ಹೇಳಿದರೆ ನಿನ್ನನ್ನು ಪೂರ್ಣವಾಗಿ ನಂಬುವೆನು.

ಅರ್ಜುನಃ

ಸರ್ವಾನ್ ಜನಪದಾನ್ ಜಿತ್ವಾ ಧನಾನ್ಯಾಚ್ಛಿದ್ಯ ಸರ್ವಶಃ ।
ಮಧ್ಯೇ ಧನಸ್ಯ ತಿಷ್ಠಂತಂ ತೇನಾಹುರ್ಮಾಂ ಧನಂಜಯಮ್ ॥೨೩॥

ಅರ್ಜುನ– ಎಲ್ಲ ದೇಶಗಳನ್ನು ಗೆದ್ದು ಎಲ್ಲ ಕಡೆಗಳಲ್ಲಿಯೂ ಧನಗಳನ್ನು ಸಂಪಾದಿಸಿ ಧನದ ಮಧ್ಯೆ ಇರುವ ಕಾರಣದಿಂದ ನನ್ನನ್ನು ಧನಂಜಯನೆಂದು ಕರೆಯುತ್ತಾರೆ.

ಅಭಿಪ್ರಯಾಮಿ ಸಂಗ್ರಾಮೇ ಯದಾऽಹಂ ಯುದ್ಧದುರ್ಮದಾನ್ ।
ಅಜಿತ್ವಾ ನ ನಿವರ್ತೇಯಂ ತೇನ ಮಾಂ ವಿಜಯಂ ವಿದುಃ ॥೨೪॥

ಯುದ್ಧದುರ್ಮದರಾದವರನ್ನು ಯುದ್ಧದಲ್ಲಿ ಎದುರಿಸಲು ನಾನು ಯಾವಾಗ ಹೊರಡುತ್ತೇನೆಯೋ ಆಗ ಅವರನ್ನು ಗೆಲ್ಲದೆ ಹಿಂದಿರುಗುವುದಿಲ್ಲ. ಆದ್ದರಿಂದ ನನ್ನನ್ನು ವಿಜಯನೆಂದು ಕರೆಯುತ್ತಾರೆ.

ಶ್ವೇತಾಃ ಕಾಂಚನಸನ್ನಾಹಾ ರಥೇ ಯುಂಜಂತಿ ಮೇ ಹಯಾಃ ।
ಶತ್ರುಭಿರ್ಯುದ್ಧಮಾನಸ್ಯ ತೇನಾಹಂ ಶ್ವೇತವಾಹನಃ ॥೨೫॥

ನಾನು ಶತ್ರುಗಳ ಜೊತೆ ಯುದ್ಧವನ್ನು ಮಾಡುವಾಗ ಸುವರ್ಣಾಲಂಕೃತವಾದ ಶ್ವೇತವರ್ಣದ ಅಶ್ವಗಳು ನನ್ನ ರಥದಲ್ಲಿ ಹೂಡಲ್ಪಡುತ್ತವೆ. ಆದ್ದರಿಂದ ಶ್ವೇತವಾಹನನಾಗಿದ್ದೇನೆ.

ಕಿರೀಟಂ ಸೂರ್ಯಸಂಕಾಶಂ ಭ್ರಾಜತೇ ಮೇ ಶಿರೋಗತಮ್ ।
ರಣಮಧ್ಯೇ ರಥಸ್ಥಸ್ಯ ಸೂರ್ಯಪಾವಕಸನ್ನಿಭಮ್ ॥೨೬॥

ಅಚ್ಛೇದ್ಯಂ ರುಚಿರಂ ಚಿತ್ರಂ ಜಾಂಬೂನದಪರಿಷ್ಕೃತಮ್ ।
ಇಂದ್ರದತ್ತಮನಾಹಾರ್ಯಂ ತೇನಾಹುರ್ಮಾಂ ಕಿರೀಟಿನಮ್ ॥೨೭॥

ರಣಮಧ್ಯದಲ್ಲಿ ರಥದಲ್ಲಿ ಇರುವ ನನಗೆ ಸೂರ್ಯಾಗ್ನಿಗಳ ಪ್ರಭೆಯನ್ನುಳ್ಳ ಸೂರ್ಯನಂತೆ ಹೊಳೆಯುವ ಕಿರೀಟವು ಶಿರಸ್ಸಿನಲ್ಲಿ ರಾರಾಜಿಸುತ್ತದೆ. ಇಂದ್ರದತ್ತವಾದ ಆ ಕಿರೀಟವು ಅಚ್ಛೇದ್ಯವಾದುದು, ಮನೋಹರವಾದುದು, ಆಶ್ಚರ್ಯಕರವಾದುದು, ಸುವರ್ಣಾಲಂಕೃತವಾದುದು ಮತ್ತು ಯಾರಿಂದಲೂ ಕದಿಯಲು ಸಾಧ್ಯವಿಲ್ಲದುದು. ಆದ್ದರಿಂದ ನನ್ನನ್ನು ಕಿರೀಟೀ ಎಂದು ಹೇಳುತ್ತಾರೆ.

ನ ಕುರ್ಯಾಂ ಕರ್ಮ ಬೀಭತ್ಸಂ ಯುಧ್ಯಮಾನಃ ಕಥಂಚನ ।
ತೇನ ದೇವಮನುಷ್ಯೇಷು ಬೀಭತ್ಸುರಿತಿ ಮಾಂ ವಿದುಃ ॥೨೮॥

ಯುದ್ಧವನ್ನು ಮಾಡುವಾಗ ನಾನು ಯಾವ ಬೀಭತ್ಸವಾದ ಕಾರ್ಯವನ್ನೂ ಮಾಡುವುದಿಲ್ಲ. ಆದ್ದರಿಂದ ದೇವತೆಗಳೂ ಮತ್ತು ಮನುಷ್ಯರೂ ನನ್ನನ್ನು ಬೀಭತ್ಸು ಎಂದು ತಿಳಿಯುತ್ತಾರೆ. (ಬೀಭತ್ಸವಾದ ಕರ್ಮಗಳಿಗೇ ಬೀಭತ್ಸ ಎಂದರೆ ಜುಗುಪ್ಸೆಯನ್ನು ಉಂಟುಮಾಡುವುದರಿಂದ ನನ್ನನ್ನು ಬೀಭತ್ಸು ಎಂದು ಕರೆಯುತ್ತಾರೆ-ಲಕ್ಷಾಲಂಕಾರ).

ಉಭೌ ಮೇ ತುಲ್ಯಕರ್ಮಾಣೌ ಗಾಂಡೀವಸ್ಯ ವಿಕರ್ಷಣೇ ।
ಭುಜೌ ಮೇ ಭವತಃ ಸಂಖೇ ಪರಸೈನ್ಯವಿನಾಶನೌ ॥೨೯॥

ತಯೋಃ ಸವ್ಯೋಽಧಿಕಸ್ತಸ್ಮಾತ್ ಸವ್ಯಸಾಚೀತಿ ಮಾಂ ವಿದುಃ ॥೩೦॥

ಗಾಂಡೀವವನ್ನು ಎಳೆಯುವುದರಲ್ಲಿ ಮತ್ತು ಪರಸೈನ್ಯವನ್ನು ವಿನಾಶ ಮಾಡುವುದರಲ್ಲಿ ಯುದ್ಧದಲ್ಲಿ ನನ್ನ ಎರಡು ಭುಜಗಳೂ ಸಮಾನವಾದ ಕಾರ್ಯವನ್ನು

ಮಾಡುತ್ತವೆ. ಅದರಲ್ಲಿಯೂ ಎಡಭುಜವು ಅಧಿಕವಾಗಿದೆ. ಆದ್ದರಿಂದ ನನ್ನನ್ನು ಸವ್ಯಸಾಚೀ ಎಂದು ಕರೆಯುತ್ತಾರೆ.

ಪೃಥಿವ್ಯಾಂ ಸಾಗರಾಂತಾಯಾಂ ವರ್ಣೋ ಮೇ ದುರ್ಲಭಃ ಸಮಃ ।
ಶುದ್ಧತ್ವಾದ್ರೂಪವದ್ಭಾಚ್ಚ ತೇನ ಮಾಮರ್ಜುನಂ ವಿದುಃ ॥೩೧॥

ಸಾಗರಾಂತವಾದ ಭೂಮಿಯಲ್ಲಿ ನನ್ನ ಶರೀರವರ್ಣಕ್ಕೆ ಸಮಾನವಾದ ವರ್ಣವು ದುರ್ಲಭವಾದುದು. ಶುದ್ಧವಾದ ಅಂತಹ ರೂಪವನ್ನು ಹೊಂದಿರುವುದರಿಂದ ನನ್ನನ್ನು ಅರ್ಜುನನೆಂದು ಕರೆಯುತ್ತಾರೆ.

ಉತ್ತರಾಭ್ಯಾಂ ತು ಪೂರ್ವಾಭ್ಯಾಂ ಫಲ್ಗುನೀಭ್ಯಾಮಹಂ ದಿವಾ ।
ಜಾತೋ ಹಿಮವತಃ ಪೃಷ್ಠೇ ತೇನ ಮಾಂ ಫಲ್ಗುನಂ ವಿದುಃ ॥೩೨॥

ಹಗಲಿನಲ್ಲಿ ಪೂರ್ವಫಲ್ಗುಣಿಯೂ, ರಾತ್ರಿಯಲ್ಲಿ ಉತ್ತರಫಲ್ಗುಣಿಯೂ ಇರುವ ದಿವಸ ಹಗಲಿನ ಕೊನೆಯ ಭಾಗದಲ್ಲಿ ನಾನು ಹಿಮಾಲಯದ ತಪ್ಪಲಿನಲ್ಲಿ ಜನಿಸಿದೆ. ಆದ್ದರಿಂದ ನನ್ನನ್ನು ಫಲ್ಗುನ ಎಂದು ಕರೆಯುತ್ತಾರೆ (ಲಕ್ಷಾಲಂಕಾರ).

ಯೋ ಮಮಾಂಗೇ ವ್ರಣಂ ಕುರ್ಯಾದ್ ಭ್ರಾತುರ್ಜ್ಯೇಷ್ಠಸ್ಯ ಪಶ್ಯತಃ ।
ಯುಧಿಷ್ಠಿರಸ್ಯ ರುಧಿರಂ ದರ್ಶಯೇದ್ ವಾ ಕದಾಚನ ॥೩೩॥

ಪರಾಜಯಮಹಂ ತಸ್ಯ ಕುಲೇ ಕುರ್ಯಾಂ ನ ಸಂಶಯಃ ॥೩೪॥

ಯಾಸ್ಯಾಮಿ ತೈರಹಂ ಸರ್ವೈರ್ನ ಮೇ ತೇಭ್ಯಃ ಪರಾಭವಃ ।
ತೇನ ದೇವಮನುಷ್ಯೇಷು ಜಿಷ್ಣುರ್ನಾಮಾऽಸ್ಮಿ ವಿಶ್ರುತಃ ॥೩೫॥

ಯಾವನು ನಾನು ನೋಡುತ್ತಿರುವಂತೆ ನನ್ನ ಅಣ್ಣನಾದ ಯುಧಿಷ್ಠಿರನ ದೇಹದಲ್ಲಿ ಯಾವಾಗಲಾದರೂ ಗಾಯವನ್ನು ಮಾಡಿ ರಕ್ತವನ್ನು ಸೋರಿಸುತ್ತಾನೆಯೋ ನಾನು ಅವನ ಕುಲವನ್ನು ಪರಾಭವಗೊಳಿಸುತ್ತೇನೆ. ಇದರಲ್ಲಿ ಸಂಶಯವಿಲ್ಲ. ನಾನು ಅವರೆಲ್ಲರ ಜೊತೆಯಲ್ಲಿ ಯುದ್ಧಕ್ಕೆ ಹೊರಡುತ್ತೇನೆ. ನನಗೆ ಎಂದೂ ಸೋಲು ಇರುವುದಿಲ್ಲ. ಆದ್ದರಿಂದ ದೇವತೆಗಳಲ್ಲಿ ಮತ್ತು ಮನುಷ್ಯರಲ್ಲಿ ನಾನು ಜಿಷ್ಣು ಎಂದರೆ ಜಯಶೀಲ ಎಂದು ಪ್ರಖ್ಯಾತನಾಗಿದ್ದೇನೆ.

ಮಾತಾ ಮಮ ಪೃಥಾ ನಾಮ ತೇನ ಮಾಂ ಪಾರ್ಥಮಬ್ರುವನ್॥೩೬॥

ನನ್ನ ತಾಯಿಯ ಹೆಸರು ಪೃಥಾ ಎಂದು. ಪೃಥೆಯ ಪುತ್ರನಾದುದರಿಂದ ನನ್ನನ್ನು ಪಾರ್ಥನೆಂದು ಕರೆದರು.

ದೇವದಾನವಗಂಧರ್ವಪಿಶಾಚೋರಗರಾಕ್ಷಸಾನ್ ।
ಅಹಂ ಪುರಾ ರಣೇ ಜಿತ್ವಾ ಖಾಂಡವೇऽಗ್ನಿಮತರ್ಪಯಮ್ ॥೩೭॥

ನಾನು ಹಿಂದೆ ಖಾಂಡವವನದಲ್ಲಿ ದೇವತೆಗಳನ್ನು, ದಾನವರನ್ನು, ಗಂಧರ್ವರನ್ನು, ಪಿಶಾಚಿಉರಗರಾಕ್ಷಸರನ್ನು ಗೆದ್ದು ಅಗ್ನಿಯನ್ನು ತೃಪ್ತಿಪಡಿಸಿದೆ.

ಹುತಾಶನಂ ತರ್ಪಯಿತ್ವಾ ಸಹಿತಃ ಶಾರ್ಙ್ಗಧನ್ವನಾ ।
ತ್ರಿವಿಷ್ಟಪಗತೌ ದೃಷ್ಟ್ವಾ ಪಿತಾಮಹಮಹೇಶ್ವರೌ ॥೩೮॥

ಮೂರ್ಚ್ಛಯಾ ಪತಿತಂ ಭೂಮೌ ಸಾಗರೋಪಮಸತ್ತಮೌ ।
ದೃಷ್ಟ್ವಾ ತೌ ವರದೌ ದೇವೌ ಸಂಜ್ಞಾಂ ಲಬ್ಧ್ವೋತ್ಥಿತಃ ಪುನಃ ॥೩೯॥

ಮೂರ್ಧ್ನಾऽಭಿಪ್ರಣತಂ ಭೂಮೌ ತೌ ತದಾ ವರದೌ ವರೌ ।
ಕೃಷ್ಣೇತ್ಯೇಕಾದಶಂ ನಾಮ ಪ್ರೀತ್ಯಾ ಮೇ ತತ್ರ ಚಕ್ರತುಃ ॥೪೦॥

ಅಗ್ನಿಯನ್ನು ತೃಪ್ತಿಪಡಿಸಿ ಕೃಷ್ಣನ ಜೊತೆಯಲ್ಲಿ ಸ್ವರ್ಗಕ್ಕೆ ಹೋಗಿ ಬ್ರಹ್ಮದೇವರನ್ನೂ ಮತ್ತು ರುದ್ರದೇವರನ್ನು ನೋಡಿ ಮೂರ್ಛೆಯಿಂದ ಭೂಮಿಯ ಮೇಲೆ ಬಿದ್ದ ನನ್ನನ್ನು ಸಮುದ್ರದಂತಹ ಗುಣವುಳ್ಳವರೂ, ಸಜ್ಜನರಲ್ಲಿ ಶ್ರೇಷ್ಠರೂ ಮತ್ತು ವರಪ್ರದರೂ ಆದ ಆ ಇಬ್ಬರು ದೇವತೆಗಳ ಕೃಪಾದೃಷ್ಟಿಯಿಂದ ನಾನು ಪುನಃ ಜ್ಞಾನವನ್ನು ಪಡೆದು ಎದ್ದೆ. ಭೂಮಿಯ ಮೇಲೆ ಶಿರಸಾನಮಸ್ಕಾರವನ್ನು ಮಾಡಿದ ನನ್ನನ್ನು ಕುರಿತು ವರಪ್ರದರಾದ ಶ್ರೇಷ್ಠರಾದ ದೇವತೆಗಳು ಪ್ರೀತಿಯಿಂದ ಕೃಷ್ಣ ಎಂಬ ಹನ್ನೊಂದನೆಯ ನಾಮವನ್ನು ಕೊಟ್ಟರು.

ತುಷ್ಟೌ ಚ ಮಮ ವೀರ್ಯೇಣ ಕರ್ಮಣಾ ಚಾಭಿರಾಧಿತೌ ।
ಸರ್ವದೇವೈಃ ಪರಿವೃತೌ ಭೂಯೋ ಮಾಂ ಸ್ವಯಮೂಚತುಃ ॥೪೧॥

ವರಂ ತಾತ ವೃಣೀಷ್ವೇತಿ ಯಂ ಪ್ರಾರ್ಥಯಸಿ ಪಾಂಡವ ॥೪೨॥

ನನ್ನ ಪರಾಕ್ರಮದಿಂದ ಸಂತುಷ್ಟರಾದ ಮತ್ತು ನನ್ನ ಕರ್ಮದಿಂದ ಪೂಜಿಸಲ್ಪಟ್ಟ ಸರ್ವದೇವತೆಗಳಿಂದ ಪರಿವೃತರಾದ ಆ ಇಬ್ಬರು ದೇವತೆಗಳು ಪುನಃ ನನ್ನನ್ನು ಕುರಿತು ತಾವಾಗಿಯೇ ಎಲೈ ಪಾಂಡವನೇ, ಪ್ರೀತಿಪಾತ್ರನೇ, ಯಾವ ವರವನ್ನು ಬಯಸುತ್ತೀಯೋ ಅಂತಹ ವರವನ್ನು ಕೇಳು ಎಂದು ಹೇಳಿದರು.

ತತೋऽಹಮಸ್ತ್ರ್ಯಲಭಂ ದಿವ್ಯಾನಿ ಚ ದೃಢಾನಿ ಚ ।
ಬ್ರಾಹ್ಮಂ ಪಾಶುಪತಂ ಚೈವ ಸ್ಥೂಣಾಕರ್ಣಂ ಚ ದುರ್ಜಯಮ್ ॥೪೩॥

ಐಂದ್ರಂ ವಾರುಣಮಾಗ್ನೇಯಂ ವಾಯವ್ಯಮಥ ವೈಷ್ಣವಮ್ ॥೪೪॥

ಆಗ ನಾನು ದಿವ್ಯವೂ, ದೃಢವೂ ಆದ ಬ್ರಾಹ್ಮ, ಪಾಶುಪತ, ದುರ್ಜಯವಾದ ಸ್ಥೂಣಾಕರ್ಣ, ಐಂದ್ರ, ವಾರುಣ, ಆಗ್ನೇಯ, ವಾಯವ್ಯ ಮತ್ತು ವೈಷ್ಣವ ಮೊದಲಾದ ಅಸ್ತ್ರಗಳನ್ನು ಪಡೆದೆನು.

ತತೋऽಹಮಜಯಂ ಭೂಯೋ ರಥೇನೈಂದ್ರೇಣ ದುರ್ಜಯಾನ್ ।
ಮಾತಲಿಂ ಸಾರಥಿಂ ಕೃತ್ವಾ ನಿವಾತಕವಚಾನ್ ರಣೇ ॥೪೫॥

ಅವಧ್ಯಕವಚಾನ್ ದೇವೈರ್ವರದತ್ತಾನ್ ಮಹಾಸುರಾನ್ ॥೪೬॥

ಅನಂತರ ನಾನು ಇಂದ್ರನ ರಥದಲ್ಲಿ ಕುಳಿತು ಮಾತಲಿಯನ್ನು ಸಾರಥಿಯನ್ನಾಗಿ ಮಾಡಿಕೊಂಡು ಜಯಿಸಲು ಅಸಾಧ್ಯರಾದ ನಿವಾತಕವಚರನ್ನು ಯುದ್ಧದಲ್ಲಿ ಸೋಲಿಸಿದೆನು. ಅವರು ದೇವತೆಗಳಿಂದ ವರವನ್ನು ಪಡೆದ ಅವಧ್ಯಕವಚರಾದ ದೊಡ್ಡ ಅಸುರರಾಗಿದ್ದರು.

ತಿಸ್ರಃ ಕೋಟೀರ್ದಾನವಾನಾಂ ಸಂಯುಗೇಷ್ವನಿವರ್ತಿನಾಮ್ ।
ಏಕೋ ನಿರ್ಜಿತ್ಯ ಸಂಗ್ರಾಮೇ ಭೂಯೋ ದೇವಾನತೋಷಯಮ್ ॥

ಯುದ್ಧದಿಂದ ಎಂದೂ ಹಿಮ್ಮೆಟ್ಟದಿರುವ ನೂರುಕೋಟಿ ದಾನವರ ಸೈನ್ಯವನ್ನು ಯುದ್ಧದಲ್ಲಿ ಒಬ್ಬನೇ ಸೋಲಿಸಿ ಪುನಃ ದೇವತೆಗಳನ್ನು ಸಂತೋಷಪಡಿಸಿದೆನು.

ತತೋ ಮೇ ಭಗವಾನಿಂದ್ರಃ ಕಿರೀಟಮದದಾತ್ ಸ್ವಯಮ್ ।
ದೇವಾಶ್ಚ ಶಂಖಮದದುಃ ಶತ್ರುಸೈನ್ಯನಿವಾರಣಮ್ ॥೪೮॥

ಆಗ ಪೂಜ್ಯನಾದ ಇಂದ್ರನು ಸಂತೋಷಗೊಂಡು ಸ್ವಯಂ ನನಗೆ ಕಿರೀಟವನ್ನು ಕೊಟ್ಟನು. ದೇವತೆಗಳೂ ಸಹ ಶತ್ರುಸೈನ್ಯವನ್ನು ಓಡಿಸುವ ಶಂಖವನ್ನು ಕೊಟ್ಟರು.

ಅಹಂ ಪಾರೇ ಸಮುದ್ರಸ್ಯ ಹಿರಣ್ಯಪುರವಾಸಿನಾಮ್ ।
ಹತ್ವಾ ಷಷ್ಟಿಸಹಸ್ರಾಣಿ ಜಯಂ ಸಂಪ್ರಾಪ್ತವಾನಪಿ ॥೪೯॥

ನಾನು ಸಮುದ್ರದ ದಡದಲ್ಲಿ ಇದ್ದ ಹಿರಣ್ಯಪುರ ನಿವಾಸಿಗಳಾದ ಅರವತ್ತು ಸಹಸ್ರ ದೈತ್ಯರನ್ನು ಕೊಂದು ಜಯವನ್ನು ಪಡೆದೆನು.

ಅಸಂಭ್ರಾಂತೋ ರಥೇ ತಿಷ್ಠನ್ ಸಹಸ್ರೇಷು ಶತೇಷು ಚ ।
ಶತ್ರುಮಧ್ಯೇ ದುರಾಧರ್ಷೋ ನ ಚ ಮುಹ್ಯೇ ಕಥಂಚನ ॥೫೦॥

ನೂರು ಸಂಖ್ಯೆಯಲ್ಲಿರುವ ಅಥವಾ ಸಾವಿರ ಸಂಖ್ಯೆಯಲ್ಲಿರುವ ಶತ್ರುಗಳ ಮಧ್ಯದಲ್ಲಿ ರಥದಲ್ಲಿ ಕುಳಿತರೂ ಯಾವ ಗಾಬರಿಯೂ ಇಲ್ಲದೆ ಸೋಲಿಸಲು ಅಸಾಧ್ಯನಾಗಿ ನಾನು ಯಾವ ಭ್ರಾಂತಿಗೂ ಒಳಗಾಗುವುದಿಲ್ಲ.

ಅಹಂ ಗಂಧರ್ವರಾಜೇನ ಹ್ರಿಯಮಾಣಂ ಸುಯೋಧನಮ್ ।
ಭ್ರಾತೃಭಿಃ ಸಹಿತಂ ತಾತ ಗಂಧರ್ವೈಃ ಸಮರೇ ಜಿತಮ್ ॥೫೧॥

ಚತುರ್ದಶ ಸಹಸ್ರಾಣಿ ಹತ್ವಾ ಚೈನಮಮೋಚಯಮ್ ॥೫೨॥

ಎಲೈ ಪ್ರೀತಿಪಾತ್ರನೇ, ಗಂಧರ್ವರಾಜನಾದ ಚಿತ್ರಸೇನನು ತಮ್ಮಂದಿರ ಸಹಿತವಾಗಿ ಸುಯೋಧನನನ್ನು ಎಳೆದುಕೊಂಡು ಹೋಗುತ್ತಿರಲು ನಾನು ಹದಿನಾಲ್ಕು ಸಾವಿರ ಗಂಧರ್ವರನ್ನು ಯುದ್ಧದಲ್ಲಿ ಗೆದ್ದು ಈ ಸುಯೋಧನನನ್ನು ಬಿಡಿಸಿದೆನು.

ಅದ್ಯ ಪಶ್ಯ ಮಹಾಬಾಹೋ ಮಮ ವೀರ್ಯಂ ಸುದುಃಸಹಮ್ ।
ಮಾ ಭೈಷೀರ್ಗತಸಂತ್ರಾಸಃ ಕುರೂನೇತಾನ್ ಸಮಾಗತಾನ್ ॥೫೩॥

ಸುಯೋಧನಸ್ಯ ಮಿಷತಃ ಕರ್ಣಸ್ಯ ಚ ಕೃಪಸ್ಯ ಚ ।
ಪಿತಾಮಹಸ್ಯ ಭೀಷ್ಮಸ್ಯ ದ್ರೌಣೇರ್ದ್ರೋಣಸ್ಯ ಚ ಸ್ವಯಮ್ ॥೫೪॥

ಸರ್ವಾನೇವ ಕುರೂನ್ ಜಿತ್ವಾ ಪ್ರತ್ಯಾನೇಷ್ಯಾಮಿ ತೇ ಪಶೂನ್ ॥೫೫॥

ಎಲೈ ಮಹಾಬಾಹುವೇ, ಈ ದಿನ ಅತ್ಯಂತ ದುಸ್ತರವಾದ ನನ್ನ ಪರಾಕ್ರಮವನ್ನು ನೋಡು. ಹೆದರಬೇಡ. ನಾನು ಯಾವ ಭಯವೂ ಇಲ್ಲದೆ ಸುಯೋಧನನೂ, ಕರ್ಣನೂ, ಕೃಪರೂ, ಪಿತಾಮಹರಾದ ಭೀಷ್ಮರೂ, ದ್ರೋಣರೂ, ಅಶ್ವತ್ಥಾಮರೂ ನೋಡುತ್ತಿರುವಂತೆಯೇ ಯುದ್ಧಕ್ಕೆ ಬಂದ ಈ ಕುರುಗಳೆಲ್ಲರನ್ನೂ ಗೆದ್ದು ನಿನ್ನ ಗೋಧನವನ್ನು ಹಿಂದಕ್ಕೆ ತರುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ದ್ವಿಚತ್ವಾರಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಪಂಚಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ಮೂರನೆಯ ಅಧ್ಯಾಯ

ಉತ್ತರನಿಂದ ಅರ್ಜುನನ ಕ್ಷಮಾಯಾಚನೆ ಮತ್ತು ಸಾರಥಿತ್ವ ಸ್ವೀಕಾರ.

ವೈಶಂಪಾಯನಃ

ತತಃ ಪಾರ್ಥಂ ಚ ವೈರಾಟಿಃ ಪ್ರಾಂಜಲಿಸ್ತ್ವಭ್ಯವಾದಯತ್ ॥೧॥

ಅಹಂ ಭೂಮಿಂಜಯೋ ನಾಮ್ನಾ ಪ್ರಣತೋಽಸ್ಮಿ ಧನಂಜಯ ॥೨॥

ದಿಷ್ಟ್ಯಾ ತ್ವಾಂ ಪಾರ್ಥ ಪಶ್ಯಾಮಿ ಸ್ವಾಗತಂ ತೇ ಧನಂಜಯ ।
ಲೋಹಿತಾಕ್ಷ ಮಹಾಬಾಹೋ ನಾಗರಾಜವರೋಪಮ ॥೩॥

ವೈಶಂಪಾಯನ– ಆಗ ವಿರಾಟಪುತ್ರನಾದ ಉತ್ತರನು ಅರ್ಜುನನಿಗೆ ಕೈಗಳನ್ನು ಮುಗಿದು ನಮಸ್ಕಾರವನ್ನು ಮಾಡಿದನು. ಎಲೈ ಧನಂಜಯನೇ, ಭೂಮಿಂಜಯನೆಂಬ ನಾನು ನಮಸ್ಕಾರವನ್ನು ಮಾಡುತ್ತಿದ್ದೇನೆ. ಅರ್ಜುನನೇ, ನನ್ನ ಅದೃಷ್ಟವಿಶೇಷದಿಂದ ನಿನ್ನನ್ನು ನೋಡುತ್ತಿದ್ದೇನೆ. ಲೋಹಿತಾಕ್ಷನೇ, ಮಹಾಬಾಹುವೇ, ಶ್ರೇಷ್ಠನಾದ ಗಜರಾಜನಂತಿರುವವನೇ, ಅರ್ಜುನನೇ, ನಿನಗೆ ಸ್ವಾಗತ.

ಯದಜ್ಞಾನಾದವೋಚಂ ತ್ವಾಂ ಪ್ರಮಾದೇನ ನರೋತ್ತಮ ।
ಅಕೃತ್ವಾ ಹೃದಯೇ ಸರ್ವಂ ಕ್ಷಂತುಮರ್ಹಸಿ ತನ್ಮಮ ॥೪॥

ಎಲೈ ನರೋತ್ತಮನೇ, ನಾನು ಅಜ್ಞಾನದಿಂದ ಮತ್ತು ಪ್ರಮಾದದಿಂದ ಏನನ್ನು ಮಾತನಾಡಿದೆನೋ ಅದಾವುದನ್ನೂ ಮನಸ್ಸಿಗೆ ತಂದುಕೊಳ್ಳದೆ ಎಲ್ಲವನ್ನೂ ಕ್ಷಮಿಸಬೇಕು.

ಯತ್ತು ತ್ವಯಾ ಕೃತಂ ಕರ್ಮ ವಿಚಿತ್ರಂ ವೈ ಸುದುಷ್ಕರಮ್ ।
ಅತೋ ಭಯಂ ವ್ಯಪೇತಂ ಮೇ ಪ್ರೀತಿಶ್ಚ ಪರಮಾ ತ್ವಯಿ ॥೫॥

ದಾಸೋಽಹಂ ತೇ ಭವಿಷ್ಯಾಮಿ ಪಶ್ಯ ಮಾಮನುಕಂಪಯಾ ॥೬॥

ನೀನು ಮಾಡಿದ ದುಷ್ಕರವಾದ ಮತ್ತು ವಿಚಿತ್ರವಾದ ಕರ್ಮಗಳನ್ನು ಗಮನಿಸಿ ನನ್ನ ಭಯವು ಹೊರಟುಹೋಯಿತು ಮತ್ತು ನಿನ್ನಲ್ಲಿ ಬಹಳ ಪ್ರೀತಿಯುಂಟಾಗಿದೆ. ನಾನು ನಿನ್ನ ದಾಸನಾಗುವೆನು. ನನ್ನನ್ನು ಕೃಪಾದೃಷ್ಟಿಯಿಂದ ನೋಡು.

ಯಾ ಪ್ರತಿಜ್ಞಾ ಕೃತಾ ಪೂರ್ವಂ ತವ ಸಾರಥ್ಯಕರ್ಮಣಿ ।
ಮನಃಸ್ವಾಸ್ಥ್ಯಂ ಚ ಮೇ ಜಾತಂ ಜಾತಂ ಭಾಗ್ಯಂ ಚ ಮೇ ಮಹತ್ ॥

ನಾನು ನಿನ್ನ ಸಾರಥ್ಯದ ವಿಷಯದಲ್ಲಿ ಹಿಂದೆ ಯಾವ ಪ್ರತಿಜ್ಞೆಯನ್ನು ಮಾಡಿದ್ದೆನೋ ಆ ವಿಷಯದಲ್ಲಿ ಮನಸ್ಸಮಾಧಾನವನ್ನು ಹೊಂದಿದ್ದೇನೆ. ನನಗೆ ದೊಡ್ಡ ಭಾಗ್ಯವು ಪ್ರಾಪ್ತವಾಗಿದೆ.

ಆಸ್ಥಾಯ ವಿಪುಲಂ ವೀರ ರಥಂ ಸಾರಥಿನಾ ಮಯಾ ।
ದುರ್ಯೋಧನಂ ಚ ಜಿತ್ವಾऽऽಜೌ ನಿವರ್ತಯ ಪಶೂನ್ ಮಮ ॥೮॥

ಎಲೈ ವೀರನೇ, ಈ ವಿಸ್ತಾರವಾದ ರಥವನ್ನು ಏರಿ ನನ್ನನ್ನು ಸಾರಥಿಯನ್ನಾಗಿ ಮಾಡಿಕೊಂಡು ಯುದ್ಧದಲ್ಲಿ ದುರ್ಯೋಧನನನ್ನು ಗೆದ್ದು ನನ್ನ ಪಶುಗಳನ್ನು ಹಿಂದಿರುಗಿಸು.

ಅರ್ಜುನಃ

ಪ್ರೀತೋಽಸ್ಮಿ ರಾಜಪುತ್ರಾದ್ಯ ನ ಭಯಂ ವಿದ್ಯತೇ ತವ ।
ಸರ್ವಾನ್ ನುದಾಮಿ ತೇ ಶತ್ರೂನ್ ರಣೇ ರಣಕೃತಾಂ ವರ ॥೯॥

ಅರ್ಜುನ– ಎಲೈ ರಾಜಪುತ್ರನೇ, ನಾನು ಪ್ರಸನ್ನನಾಗಿದ್ದೇನೆ. ನಿನಗೆ ಯಾವ ಭಯವೂ ಇಲ್ಲ. ಎಲೈ ಯುದ್ಧ ಮಾಡುವವರಲ್ಲಿ ಶ್ರೇಷ್ಠನೇ, ನಾನು ಯುದ್ಧದಲ್ಲಿ ಎಲ್ಲಾ ಶತ್ರುಗಳನ್ನೂ ಓಡಿಸುತ್ತೇನೆ.

ಸ್ವಸ್ಥೋ ಭವ ಮಹಾಬುದ್ಧೇ ಪಶ್ಯ ಮಾಂ ಶತ್ರುಭಿಃ ಸಹ ।
ಯುಧ್ಯಮಾನಂ ವಿಮರ್ದೇऽಸ್ಮಿನ್ ಕುರ್ವಾಣಂ ಭೈರವಂ ಸ್ವನಮ್ ॥

ಮಹಾಬುದ್ಧಿಯುಳ್ಳವನೇ ಸಮಾಧಾನದಿಂದಿರು. ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವ ನನ್ನನ್ನು ನೋಡು. ಈ ಸಂಘರ್ಷದಲ್ಲಿ ನಾನು ಮಾಡುವ ಭೈರವನಾದಗಳನ್ನೂ ಕೇಳು.

ಗಾಂಡೀವಂ ದೇವದತ್ತಂ ಚ ಶರಾನ್ ಕನಕಭೂಷಿತಾನ್ ।
ಏತಾನ್ ಸರ್ವಾನುಪಾಸಂಗಾನ್ ಕ್ಷಿಪ್ರಂ ಬಧ್ನೀಹಿ ಮೇ ರಥೇ ॥೧೧॥

ಏತಂ ಚಾಹರ ನಿಸ್ತ್ರಿಂಶಂ ಜಾತರೂಪಪರಿಷ್ಕೃತಮ್ ॥೧೨॥

ಗಾಂಡೀವ ಧನುಸ್ಸು, ದೇವದತ್ತ ಶಂಖ, ಸ್ವರ್ಣಾಲಂಕೃತವಾದ ಬಾಣಗಳು, ಬತ್ತಳಿಕೆಗಳು ಇವೆಲ್ಲವನ್ನೂ ನನ್ನ ರಥದಲ್ಲಿ ಕಟ್ಟುವವನಾಗು. ಸುವರ್ಣಾಲಂಕೃತವಾದ ಈ ಖಡ್ಗವನ್ನೂ ತೆಗೆದುಕೊಂಡು ಬಾ.

ಅಹಂ ವೈ ಕುರುಭಿರ್ಯೋತ್ಸ್ಯೇ ಮೋಕ್ಷಯಿಷ್ಯಾಮಿ ತೇ ಪಶೂನ್ ।
ತೋಷಯಿಷ್ಯಾಮಿ ರಾಜಾನಂ ಪ್ರವೇಕ್ಷ್ಯಾಮಿ ಪುರಂ ಪುನಃ ॥೧೩॥

ನಾನು ಕುರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ನಿನ್ನ ಪಶುಗಳನ್ನು ಬಿಡಿಸುವೆನು. ಪುನಃ ನಗರವನ್ನು ಪ್ರವೇಶಿಸಿ ರಾಜನನ್ನು ಸಂತೋಷಗೊಳಿಸುವೆನು.

ಸಂಕಲ್ಪಗಾಢಪರಿಖಂ ಬಾಹುಪ್ರಾಕಾರತೋರಣಮ್ ।
ತ್ರಿದಂಡತೂಣಸಂಬಾಧಂ ನೈಕಧ್ವಜಸಮಾಕುಲಮ್ ॥೧೪॥

ಜ್ಯಾಕ್ಷೇಪನಿನದಾರಾವಂ ನೇಮೀನಿನದದುಂದುಭಿ ।
ಶರಜಾಲವಿತಾನಾಢ್ಯಮಾಕ್ಷ್ವೇಲಿತಮಹಾಸ್ವನಮ್ ॥೧೫॥

ನಗರಂ ತೇ ಮಯಾ ಗುಪ್ತಂ ರಥೋಪಸ್ಥಂ ಭವಿಷ್ಯತಿ ॥೧೬॥

ಸರಿಯಾಗಿ ಮಾಡಿದ ವ್ಯೂಹವೇ ಪರಿಖೆಯಾಗುಳ್ಳ (ಕಂದುಕ), ಮೂರು ದಂಡಗಳೆಂಬ ಬತ್ತಳಿಕೆಗಳಿಂದ ನಿಬಿಡವಾಗಿರುವ, ಬಾಹುಗಳೆಂಬ ಪ್ರಾಕಾರ

ತೋರಣಗಳಿಂದ ಕೂಡಿರುವ, ಅನೇಕ ಧ್ವಜಗಳಿಂದ ಪೂರ್ಣವಾಗಿ ತುಂಬಿದ, ಹೆದೆಯನ್ನು ಎಳೆಯುವುದರಿಂದ ಉಂಟಾದ ಘೋರಶಬ್ದವುಳ್ಳ, ದುಂದುಭಿಯ ಜೊತೆಯಲ್ಲಿ ಸೇರಿದ ರಥನೇಮಿ ಶಬ್ದಗಳಿಂದ ಕೂಡಿದ, ಬಾಣಗಳ ಸಮೂಹವೆಂಬ ಮಂಟಪದ ಛಾವಣಿಗಳಿಂದ ಕೂಡಿದ, ಯೋಧರ ಸಿಂಹನಾದರೂಪ ಮಹಾಸ್ವನವುಳ್ಳ ನನ್ನಿಂದ ಗುಪ್ತವಾದ, ರಥದ ಮಧ್ಯಭಾಗವೇ ನನಗೆ ನಗರವಾಗುವುದು.

ಅಧಿಷ್ಠಿತೋ ಮಯಾ ಸಂಖೇ ರಥೋ ಗಾಂಡೀವಧನ್ವನಾ ।
ಅಜಯ್ಯಃ ಶತ್ರುಸೈನ್ಯಾನಾಂ ವೈರಾಟ ವ್ಯೇತು ತೇ ಭಯಮ್ ॥೧೭॥

ಗಾಂಡೀವ ಧನುರ್ಧಾರಿಯಾದ ನನ್ನಿಂದ ಅಧಿಷ್ಠಿತವಾದ ರಥವು ಯುದ್ಧದಲ್ಲಿ ಶತ್ರುಸೈನ್ಯಗಳಿಗೆ ಅಜೇಯವಾಗುವುದು. ಎಲೈ ವಿರಾಟಪುತ್ರನೇ, ನಿನ್ನ ಭಯವು ದೂರವಾಗಲಿ.

ಉತ್ತರಃ

ಬಿಭೇಮಿ ನಾಹಮೇತೇಭ್ಯೋ ಜಾನಾಮಿ ತ್ವಾಂ ಸ್ಥಿರಂ ಯುಧಿ ।
ಕೇಶವೇನಾಪಿ ಸಂಗ್ರಾಮೇ ಸಾಕ್ಷಾದಿಂದ್ರೇಣ ವಾ ಸಮಮ್ ॥೧೮॥

ಉತ್ತರ– ನಾನು ಈ ಯಾವುದಕ್ಕೂ ಹೆದರುವುದಿಲ್ಲ. ನೀನು ಯುದ್ಧದಲ್ಲಿ ಕೃಷ್ಣನಿಗೆ ಅಥವಾ ಸಾಕ್ಷಾತ್ ಇಂದ್ರನಿಗೆ ಸಮನಾದವನು ಎಂದು ನಾನು ತಿಳಿದಿದ್ದೇನೆ.

ಇದಂ ತು ಚಿಂತಯನ್ನೇವ ಪರಿಮುಹ್ಯಾಮಿ ಕೇವಲಮ್ ।
ನಿಶ್ಚಯಂ ನಾಧಿಗಚ್ಛಾಮಿ ನಾವಗಚ್ಛಾಮಿ ಕಿಂಚನ ॥೧೯॥

ಆದರೆ ಇದೊಂದು ವಿಷಯವನ್ನು ಯೋಚಿಸುತ್ತಾ ಮೋಹಕ್ಕೆ ಒಳಗಾಗಿದ್ದೇನೆ. ಯಾವ ನಿಶ್ಚಯವನ್ನೂ ಮಾಡಲು ಸಾಧ್ಯವಾಗುತ್ತಿಲ್ಲ. ಏನೂ ತಿಳಿಯುತ್ತಿಲ್ಲ.

ಏವಂ ವೀರಾಂಗರೂಪಸ್ಯ ಲಕ್ಷಣೈರುದಿತಸ್ಯ ತೇ ।
ಕೇನ ಕರ್ಮವಿಪಾಕೇನ ಕ್ಲೀಬತ್ವಂ ಸಮುಪಾಗತಮ್ ॥೨೦॥

ಇಂತಹ ವೀರನಿಗೆ ಉಚಿತವಾದ ಅಂಗಗಳನ್ನುಳ್ಳ, ಲಕ್ಷಣಗಳಿಂದ ಕೂಡಿದ, ನಿನಗೆ ಯಾವ ಕರ್ಮವಿಪಾಕದಿಂದ ನಪುಂಸಕತ್ವವು ಉಂಟಾಯಿತು?

ಮನ್ಯೇ ತ್ವಾಂ ಕ್ಲೀಬವೇಷೇಣ ಚರಂತಂ ಶೂಲಪಾಣಿನಮ್ ।
ಗಂಧರ್ವರಾಜಪ್ರತಿಮಂ ದೇವಂ ವಾऽಪಿ ಶತಕ್ರತುಮ್ ॥೨೧॥

ನೀನು ನಪುಂಸಕ ವೇಷದಿಂದ ಸಂಚರಿಸುತ್ತಿರುವ ರುದ್ರದೇವನೆಂದು ನಿನ್ನನ್ನು ತಿಳಿಯುತ್ತೇನೆ. ಅಥವಾ ಗಂಧರ್ವರಾಜ ಸದೃಶನಾದ ನೀನು ದೇವೇಂದ್ರನೆಂದು ಭಾವಿಸುತ್ತೇನೆ.

ಅರ್ಜುನಃ

ಭ್ರಾತುರ್ನಿಯೋಗಾಜ್ಜ್ಯೇಷ್ಠಸ್ಯ ಸಂವತ್ಸರಮಿದಂ ವ್ರತಮ್ ।
ಚರಾಮಿ ಬ್ರಹ್ಮಚರ್ಯಂ ವೈ ಸತ್ಯಮೇತದ್ ಬ್ರವೀಮಿ ತೇ ॥೨೨॥

ಅರ್ಜುನ– ಅಣ್ಣನ ಅಪ್ಪಣೆಯಂತೆ ಒಂದು ವರ್ಷದ ಕಾಲ ಈ ಬ್ರಹ್ಮಚರ್ಯವ್ರತವನ್ನು ಆಚರಿಸುತ್ತಿದ್ದೇನೆ. ಇದನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ನಾಸ್ಮಿ ಕ್ಲೀಬೋ ಮಹಾಬಾಹೋ ಪರವಾನ್ ಧರ್ಮಸಂಯುತಃ ।
ಊರ್ವಶೀಶಾಪವಶತಃ ಕ್ಲೈಬ್ಯಂ ಮಾಂ ಸಮುಪಸ್ಥಿತಮ್ ॥೨೩॥

ಎಲೈ ಮಹಾಬಾಹುವೇ, ನಾನು ನಪುಂಸಕನಲ್ಲ. ಧರ್ಮಕ್ಕೆ ಅನುಗುಣವಾಗಿ ನಾನು ಅಣ್ಣನ ಅಧೀನನಾಗಿದ್ದೇನೆ. ಊರ್ವಶಿಯ ಶಾಪದಿಂದ ನನಗೆ ನಪುಂಸಕತ್ವವು ಉಂಟಾಯಿತು.

ಪುರಾऽಹಮಾಜ್ಞಯಾ ಭ್ರಾತುಜ್ಯೇಷ್ಠಸ್ಯಾಪಿ ಸುರಾಲಯಮ್ ।
ಪ್ರಾಪ್ತವಾನೂರ್ವಶೀ ದೃಷ್ಟಾ ಸುಧರ್ಮಾಯಾಂ ಮಯಾ ತದಾ ॥೨೪॥

ನಾನು ಹಿಂದೆ ಅಣ್ಣನ ಆಜ್ಞೆಯಂತೆ ದೇವಲೋಕಕ್ಕೆ ಹೋಗಿ ಸುಧರ್ಮಾ ಸಭೆಯಲ್ಲಿ ಊರ್ವಶಿಯನ್ನು ನೋಡಿದೆ.

ನೃತ್ಯಂತೀಂ ಪರಮಂ ರೂಪಂ ಬಿಭ್ರತೀಂ ವಜ್ರಿಸನ್ನಿಧೌ ।
ಅಪಶ್ಯಂ ತಾಮನಿಮಿಷಂ ಕೂಟಸ್ಥಾಮನ್ವಯಸ್ಯ ಮೇ ॥೨೫॥

ದಿವ್ಯವಾದ ರೂಪವನ್ನು ಧರಿಸಿ ಇಂದ್ರನ ಸನ್ನಿಧಿಯಲ್ಲಿ ನರ್ತನವನ್ನು ಮಾಡುತ್ತಿದ್ದಂತಹ, ನಮ್ಮ ಕುಲದ ಮೂಲಮಾತೆಯಾದ ಅವಳನ್ನು ರೆಪ್ಪೆಯನ್ನು ಮುಚ್ಚದೆ ನೋಡಿದೆನು.

ರಾತ್ರೌ ಸಮಾಗತಾ ಮಹ್ಯಂ ಶಯಾನಂ ರಂತುಮಿಚ್ಛಯಾ ।
ಅಹಂ ತಾಮಭಿವಾದ್ಯೈವ ಮಾತೃಸತ್ಕಾರಮಾಚರಮ್ ॥೨೬॥

ಅವಳು ರಾತ್ರಿಯಲ್ಲಿ ನನ್ನ ಜೊತೆಯಲ್ಲಿ ರಮಿಸಲು ಬಯಸಿ ಮಲಗಿದ್ದ ನನ್ನ ಬಳಿಗೆ ಬಂದಳು. ನಾನು ಅವಳಿಗೆ ನಮಸ್ಕಾರವನ್ನು ಮಾಡಿ ತಾಯಿಗೆ ಯೋಗ್ಯವಾದ ಪೂಜೆಯನ್ನು ಮಾಡಿದೆನು.

ಸಾ ಚ ಮಾಮಶಪತ್ ಕ್ರುದ್ಧಾ ಶಿಖಂಡೀ ತ್ವಂ ಭವೇರಿತಿ ।
ಶ್ರುತ್ವಾ ತಮಿಂದ್ರೋ ಮಾಮಾಹ ಮಾ ಭೈಸ್ತ್ವಂ ಪಾರ್ಥ ಷಂಡತಾ ॥

ಉಪಕಾರೋ ಭವೇತ್ ತುಭ್ಯಮಜ್ಞಾತವಸತೌ ಪುರಾ ।
ಇತೀಂದ್ರೋ ಮಾಮನುಗ್ರಾಹ್ಯ ತತಃ ಪ್ರೇಷಿತವಾನ್ ವೃಷಾ ॥೨೮॥

ಅವಳು ಕೋಪಗೊಂಡು ನೀನು ನಪುಂಸಕನಾಗು ಎಂದು ನನಗೆ ಶಾಪವನ್ನು ಕೊಟ್ಟಳು. ಆ ಶಾಪವನ್ನು ಕೇಳಿದ ಇಂದ್ರನು ನನ್ನನ್ನು ಕುರಿತು ಅರ್ಜುನನೇ ಹೆದರಬೇಡ. ನಿನಗೆ ಅಜ್ಞಾತವಾಸದ ಸಮಯದಲ್ಲಿ ಈ ನಪುಂಸಕತ್ವವು ಉಪಕಾರವೇ ಆಗುತ್ತದೆ ಎಂದು ಹೇಳಿ ನನ್ನನ್ನು ಅನುಗ್ರಹಿಸಿ ಶ್ರೇಷ್ಠನಾದ ಅವನು ನನ್ನನ್ನು ಹಿಂದಕ್ಕೆ ಕಳುಹಿಸಿದನು.

ತದಿದಂ ಸಮನುಪ್ರಾಪ್ತಂ ವ್ರತಂ ತೀರ್ಣಂ ಮಯಾऽನಘ ।
ಸಮಾಪ್ತವ್ರತಮುತ್ತೀರ್ಣಂ ವಿದ್ಧಿ ಮಾಂ ತ್ವಂ ನೃಪಾತ್ಮಜ ॥೨೯॥

ಎಲೈ ಅನಘನೇ, ನಪುಂಸಕತ್ವವು ಹೀಗೆ ಉಂಟಾಯಿತು. ಈ ವ್ರತವನ್ನೂ ನಾನು ಆಚರಿಸಿ ಮುಗಿಸಿದ್ದೇನೆ. ಎಲೈ ರಾಜಕುಮಾರನೇ, ನಾನು ವ್ರತವನ್ನು ಯಶಸ್ವಿಯಾಗಿ ಮುಗಿಸಿರುವವನು ಎಂದು ನನ್ನನ್ನು ತಿಳಿ.

ಉತ್ತರಃ

ಪರಮೋऽನುಗ್ರಹೋ ಮೇऽದ್ಯ ಯತ್ ಪ್ರತರ್ಕೋ ನ ಮೇ ವೃಥಾ ।
ನ ಹೀದೃಶಾಃ ಕ್ಲೀಬರೂಪಾ ಭವಂತೀಹ ನರೋತ್ತಮಾಃ ॥೩೦॥

ಉತ್ತರ– ನೀನು ನನಗೆ ಪರಮಾನುಗ್ರಹವನ್ನು ಮಾಡಿದೆ. ಏಕೆಂದರೆ ನನ್ನ ಊಹೆಯು ಸುಳ್ಳಾಗಲಿಲ್ಲ. ಇಂತಹ ನರಶ್ರೇಷ್ಠರು ಎಂದೂ ನಪುಂಸಕರಾಗಿರುವುದಿಲ್ಲ.

ಸಹಾಯವಾನಸ್ಮಿ ರಣೇ ಯುದ್ಧ್ಯೇಯಮಮರೈರಪಿ ।
ಸಾಧ್ವಸಂ ತತ್ ಪ್ರಣಷ್ಟಂ ಮೇ ಕಿಂ ಕರೋಮಿ ಪ್ರಶಾಧಿ ಮಾಮ್॥೩೧॥

ನಾನು ಈಗ ಸಹಾಯವುಳ್ಳವನಾಗಿದ್ದೇನೆ. ದೇವತೆಗಳ ಜೊತೆಯಲ್ಲಿ ಬೇಕಾದರೂ ಯುದ್ಧವನ್ನು ಮಾಡಿಯೇನು. ನನ್ನ ಭಯವು ನಾಶ ಹೊಂದಿತು. ನಾನು ಏನು ಮಾಡಲಿ ಎಂದು ನನಗೆ ಆಜ್ಞೆಯನ್ನು ಮಾಡು.

ಅಹಂ ತೇ ಸಂಗ್ರಹೀಷ್ಯಾಮಿ ಹಯಾನ್ ಶತ್ರೂನಥಾರುಜ ।
ಶಿಕ್ಷಿತೋ ಹ್ಯಸ್ಮಿ ಸಾರಥ್ಯೇ ನಿಷ್ಠಿತಃ ಪುರುಷರ್ಷಭ ॥೩೨॥

ಎಲೈ ಪುರುಷರ್ಷಭನೇ, ನಾನು ನಿನ್ನ ಕುದುರೆಗಳನ್ನು ನಿಯಂತ್ರಿಸುವೆನು. ಅನಂತರ ಶತ್ರುಗಳನ್ನು ಮರ್ದಿಸುವವನಾಗು. ನಾನು ಸಾರಥ್ಯದಲ್ಲಿ ಶಿಕ್ಷಿತನಾಗಿ ನಿಷ್ಠೆಯನ್ನು ಪಡೆದಿದ್ದೇನೆ.

ದಾರುಕೋ ವಾಸುದೇವಸ್ಯ ಯಥಾ ಶಕ್ರಸ್ಯ ಮಾತಲಿಃ ।
ತಥಾ ಮಾಂ ವಿದ್ಧಿ ಸಾರಥ್ಯೇ ಶಿಕ್ಷಿತಂ ನರಪುಂಗವ ॥೩೩॥

ಕೃಷ್ಣನಿಗೆ ಹೇಗೆ ದಾರುಕನೋ, ಇಂದ್ರನಿಗೆ ಹೇಗೆ ಮಾತಲಿಯೋ, ಎಲೈ ನರಶ್ರೇಷ್ಠನೇ, ಅದರಂತೆ ನಾನು ಸಾರಥ್ಯದಲ್ಲಿ ಶಿಕ್ಷಿತನಾದವನು ಎಂದು ನನ್ನನ್ನು ತಿಳಿ.

ಅಶ್ವಾ ಹ್ಯೇತೇ ಮಹಾಬಾಹೋ ತವೈವಾಹವದುರ್ಜಯಾಃ ।
ಯೋಗ್ಯಾ ರಥವರೇ ಯುಕ್ತಾಃ ಪ್ರಾಣವಂತೋ ಜಿತಶ್ರಮಾಃ ॥೩೪॥

ಎಲೈ ಮಹಾಬಾಹುವೇ, ರಥದಲ್ಲಿ ಹೂಡಿದ ಈ ಅಶ್ವಗಳು ಪ್ರಾಣಶಕ್ತಿಯಿಂದ ಕೂಡಿ ಶ್ರಮರಹಿತವಾಗಿವೆ. ಯುದ್ಧದಲ್ಲಿ ಸೋಲನ್ನು ಅನುಭವಿಸದಿರುವ ಅವು ನಿನ್ನ ಶ್ರೇಷ್ಠವಾದ ರಥಕ್ಕೇ ಯೋಗ್ಯವಾಗಿವೆ.

ಯಸ್ಯ ಯಾತೋ ನ ಪಶ್ಯಂತಿ ಭೂಮೌ ಪ್ರಾಪ್ತಂ ಪದಂ ಪದಮ್ ।
ದಕ್ಷಿಣಾಂ ಯೋ ಧುರಂ ವೋಢಾ ಸುಗ್ರೀವೇಣ ಸಮೋ ಹಯಃ ॥೩೫॥

ಯಾವ ಕುದುರೆಯು ಹೋಗುವಾಗ ಅದರ ಪಾದವನ್ನು ಭೂಮಿಯ ಮೇಲೆ ಇಡುವುದನ್ನು ಯಾರೂ ನೋಡಲಾರರೋ ಅಂತಹ ಸುಗ್ರೀವಾಶ್ವಕ್ಕೆ ಸಮವಾದ ಈ ಕುದುರೆಯು ಬಲಭಾಗದಲ್ಲಿ ನೊಗವನ್ನು ಹೊರುತ್ತದೆ.

ಯೋಽಯಂ ಧುರಂ ಧುರ್ಯವರೋ ವಾಮಾಂ ವಹತಿ ಶೋಭನಃ ।
ತಂ ಮನ್ಯೇ ಮೇಘಪುಷ್ಪಸ್ಯ ಜವೇನ ಸದೃಶಂ ಹಯಮ್ ॥೩೬॥

ಭಾರವನ್ನು ಹೊರುವುದರಲ್ಲಿ ಶ್ರೇಷ್ಠವಾದ ಯಾವ ಈ ಸುಂದರವಾದ ಕುದುರೆಯು ವಾಮಭಾಗದಲ್ಲಿ ನೊಗವನ್ನು ಹೊರುತ್ತದೆಯೋ ಅದನ್ನು ವೇಗದಲ್ಲಿ ಮೇಘಪುಷ್ಪಕ್ಕೆ ಸಮವಾದ ಅಶ್ವವೆಂದು ನಾನು ತಿಳಿಯುತ್ತೇನೆ.

ಯೋಽಯಂ ವಹತಿ ವೈ ಪಾರ್ಷ್ಣಿಂ ದಕ್ಷಿಣಾಮಂಚಿತೋದ್ಯಮಃ ।
ಬಲಾಹಕಾದಪಿ ಮತಸ್ತೇಜಸಾ ವೀರ್ಯವತ್ತರಃ ॥೩೭॥

ನನ್ನ ರಥದ ಬಲಭಾಗವನ್ನು ಹೊರುವ ಪೂಜ್ಯವಾದ ಪ್ರಯತ್ನವುಳ್ಳ ವೀರವತ್ತಾದ ಈ ಅಶ್ವವು ತೇಜಸ್ಸಿನಲ್ಲಿ ಬಲಾಹಕಕ್ಕಿಂತಲೂ ಮಿಗಿಲಾಗಿದೆ.

ಯೋಽಯಂ ಕಾಂಚನಸನ್ನಾಹೋ ವಾಮಂ ವಹತಿ ಶೋಭನಃ ।
ಧುರ್ಯಂ ಸೈನ್ಯಸ್ಯ ತಂ ಮನ್ಯೇ ಜವೇನ ಬಲವತ್ತರಮ್ ॥೩೮॥

ಯಾವ ಸುವರ್ಣಾಲಂಕೃತವಾದ ಸುಂದರವಾದ ಕುದುರೆಯು ಸೈನ್ಯದ ಭಾರವನ್ನು ಹೊತ್ತು ರಥದ ವಾಮಭಾಗವನ್ನು ಹೊರುತ್ತದೆಯೋ ಅದನ್ನು ವೇಗದಲ್ಲಿ ಸೈನ್ಯಕ್ಕಿಂತಲೂ ಅಧಿಕವಾದುದು ಎಂದು ತಿಳಿಯುತ್ತೇನೆ (ಸೈನ್ಯ, ಸುಗ್ರೀವ, ಮೇಘಪುಷ್ಪ ಮತ್ತು ಬಲಾಹಕ - ಇವು ಕೃಷ್ಣನ ರಥದ ನಾಲ್ಕು ಕುದುರೆಗಳ ಹೆಸರುಗಳು).

ತ್ವಾಮೇವಾಯಂ ರಥೋ ವೋಢುಂ ಸಂಗ್ರಾಮೇಽರ್ಹತಿ ಧನ್ವಿನಮ್ ।
ತ್ವಂ ಚೇಮಂ ರಥಮಾಸ್ಥಾಯ ಯೋದ್ಧುಮಹೋ ಮತೋ ಮಮ ॥
ಸರ್ವಶತ್ರುಭಿರಾಯಾತೈರ್ದೇವರಾಜ ಇವಾಸುರೈಃ ॥೪೦॥

ಈ ರಥವು ಯುದ್ಧದಲ್ಲಿ ಧನುರ್ಧಾರಿಯಾದ ನಿನ್ನನ್ನೇ ಕರೆದುಕೊಂಡು ಹೋಗಲು ಯೋಗ್ಯವಾಗಿದೆ. ನೀನಾದರೋ ಈ ರಥವನ್ನು ಏರಿ ದೇವರಾಜನಾದ ಇಂದ್ರನು ಯುದ್ಧಕ್ಕೆ ಬಂದ ಸರ್ವಶತ್ರುಗಳಾದ ಅಸುರರ ಜೊತೆಯಲ್ಲಿ ಯುದ್ಧವನ್ನು ಮಾಡಿದಂತೆ ಯುದ್ಧ ಮಾಡಲು ಸಮರ್ಥನಾಗಿದ್ದೀಯೆ ಎಂದು ನನ್ನ ಅಭಿಪ್ರಾಯ.

ವೈಶಂಪಾಯನಃ

ತತೋ ರಥಾದವಸ್ಕಂದ್ಯ ವೀರ್ಯವಾನರಿಮರ್ದನಃ ।
ಪ್ರಣಮ್ಯ ದೇವಾನ್ ಗಾಂಡೀವಮಾದಾಯ ರುರುಚೇ ಶ್ರಿಯಾ ॥೪೧॥

ವೈಶಂಪಾಯನ– ಆಗ ಅರಿಮರ್ದನನೂ, ಶೂರನೂ ಆದ ಅರ್ಜುನನು ರಥದಿಂದ ಕೆಳಗಿಳಿದು ದೇವತೆಗಳಿಗೆ ನಮಸ್ಕರಿಸಿ ಗಾಂಡೀವವನ್ನು ತೆಗೆದುಕೊಂಡು ಕಾಂತಿಯಿಂದ ಬೆಳಗಿದನು.

ತತೋ ವಿಮುಚ್ಯ ಬಾಹುಭ್ಯಾಂ ಶಂಖಚೂಳಾನಿ ಪಾಂಡವಃ ।
ತೌ ಚ ದುಂದುಭಿಸನ್ನಾದೌ ಪ್ರತಿಬದ್ಧ್ಯ ತಳಾವುಭೌ ॥೪೨॥

ಇಂದ್ರದತ್ತೇ ಚ ತೇ ದಿವ್ಯೇ ಉದ್ಧೃತ್ಯಾಮುಚ್ಯ ಕುಂಡಲೇ ।
ಶ್ಲಕ್ಷ್ಣಾನ್ ಕೇಶಾನ್ ಮೃದೂನ್ ಸ್ನಿಗ್ಧಾನ್ ಶ್ವೇತೇನೋದ್ಗ್ರಥ್ಯ ವಾಸಸಾ ॥
ಅಧಿಜ್ಯಂ ತರಸಾ ಕೃತ್ವಾ ಗಾಂಡೀವಂ ವ್ಯಾಕ್ಷಿಪದ್ ಧನುಃ ॥೪೪॥

ಅನಂತರ ತನ್ನ ಬಾಹುಗಳಿಂದ ಶವಾಕಾರದಲ್ಲಿದ್ದ ಚರ್ಮದ ಗಂಟುಗಳನ್ನು ಬಿಚ್ಚಿ ಶಂಖಚೂಡಗಳನ್ನು ತೆಗೆದು ಅರ್ಜುನನು ದುಂದುಭಿಯಂತೆ ನಾದವನ್ನು ಮಾಡುವ ಹಸ್ತತಳ ರಕ್ಷೆಗಳನ್ನು ಧರಿಸಿ ಇಂದ್ರನಿಂದ ಕೊಡಲ್ಪಟ್ಟ ದಿವ್ಯವಾದ ಕುಂಡಲಗಳನ್ನು ಎತ್ತಿ ಧರಿಸಿ ಸುಂದರವಾದ ಮೃದುವಾದ ಒತ್ತಾದ ಕೇಶಗಳನ್ನು ಒಂದು ಬಿಳಿಯ ವಸ್ತ್ರದಿಂದ ಕಟ್ಟಿ ಗಾಂಡೀವವನ್ನು ಹೆದೆ ಏರಿಸಿ ಧನುಸ್ಸನ್ನು ಒಮ್ಮೆ ಮಿಡಿದನು.

ತಸ್ಯ ವಿಕ್ಷಿಪ್ಯಮಾಣಸ್ಯ ಧನುಷೋऽಭೂನ್ಮಹಾಸ್ವನಃ ।
ಯಥಾ ಶೈಲಸ್ಯ ಮಹತಃ ಶೈಲಾನಪ್ಯಭಿಜಘ್ನತಃ ॥೪೫॥

ಹಾಗೆ ಧನುಸ್ಸಿನ ಹೆದೆಯನ್ನು ಮೀಟಿದಾಗ ಆ ಧನುಸ್ಸಿನಿಂದ ಒಂದು ಬೆಟ್ಟದಿಂದ ದೊಡ್ಡದಾದ ಇನ್ನೊಂದು ಬೆಟ್ಟವನ್ನು ಹೊಡೆದರೆ ಹೇಗೋ ಹಾಗೆ ದೊಡ್ಡ ಶಬ್ದವು ಹೊರಬಂದಿತು.

ಸನಿರ್ಘಾತಾऽಭವದ್ ಭೂಮಿರ್ದಿಕ್ಷು ವಾಯುರ್ವವೌ ಭೃಶಮ್ ।
ಭ್ರಾಂತದ್ವಿಜಂ ಖಮಭವತ್ ಪ್ರಾಕಂಪಿತಮಹಾದ್ರುಮಮ್ ॥೪೬॥

ಭೂಮಿಯಲ್ಲಿ ಸಿಡಿಲುಗಳು ತುಂಬಿದವು. ದಿಕ್ಕುಗಳಲ್ಲಿ ವಾಯುವು ಪ್ರಬಲವಾಗಿ ಬೀಸಿತು. ಆಕಾಶದಲ್ಲಿದ್ದ ಪಕ್ಷಿಗಳು ಭ್ರಾಂತಿಗೊಂಡವು. ಮಹಾವೃಕ್ಷಗಳು ನಡುಗಿದವು.

ತಂ ಶಬ್ದಂ ಕುರವೋ ರಾಜನ್ ವಿಸ್ಫೋಟಮಶನೇರಿವ ।
ತಾರ್ಕ್ಷ್ಯಶಬ್ದಮಿವ ಶ್ರುತ್ವಾ ವಿತ್ರೇಸುರ್ದೀನಮಾನಸಾಃ ॥೪೭॥

ಎಲೈ ರಾಜನೇ, ಸಿಡಿಲಿನ ಸ್ಫೋಟದಂತಿದ್ದ, ಗರುಡನ ಶಬ್ದದಂತಿದ್ದ ಆ ಶಬ್ದವನ್ನು ಕೇಳಿ ಕೌರವರು ಹೆದರಿ ದೀನಮಾನಸರಾದರು.

ಯಥೇಂದ್ರೋ ವ್ಯಾಕ್ಷಿಪದ್ ಭೀಮಂ ವಿಸ್ಫೋಟಮಶನೇಃ ಪ್ರಭುಃ ।
ತಥಾऽರ್ಜುನೋ ಧನುಃಶ್ರೇಷ್ಠಂ ಬಾಹುಭ್ಯಾಮಾಕ್ಷಿಪದ್ ರಥೇ ॥೪೮॥

ಪ್ರಭುವಾದ ಇಂದ್ರನು ಭಯಂಕರವಾದ ಸಿಡಿಲಿನ ಶಬ್ದಗಳನ್ನು ಮಾಡಿದಂತೆ ಅರ್ಜುನನು ರಥದಲ್ಲಿ ಕುಳಿತು ತನ್ನ ಬಾಹುಗಳಿಂದ ಆ ಶ್ರೇಷ್ಠವಾದ ಧನುಸ್ಸನ್ನು ಬಗ್ಗಿಸಿ ಶಬ್ದವನ್ನು ಮಾಡಿದನು.

ಮಹಾಶನಿಮಹಾಶಬ್ದಸದೃಶೋ ಜ್ಯಾಸ್ವನೋ ಮಹಾನ್ ।
ಶತ್ರೂನ್ ವೀರಾಂಶ್ಚ ಸಂತರ್ಜ್ಯ ನಿಗ್ರಹಸ್ಥೋ ರಥೇ ಸ್ಥಿತಃ ॥೪೯॥

ದೊಡ್ಡ ಸಿಡಿಲಿನ ಮಹಾಶಬ್ದಕ್ಕೆ ಸದೃಶವಾದ ಹೆದೆಯ ಆ ದೊಡ್ಡ ದನಿಯು ಶತ್ರುಗಳಿಗೂ ಮತ್ತು ವೀರರಿಗೂ ಭಯವನ್ನು ಉಂಟು ಮಾಡಿ ರಥದಲ್ಲಿ ಮೂಡಿಬಂದಿತು.

ಅಥಾಸೌ ಪ್ರಾಙ್ಮುಖೌ ಭೂತ್ವಾ ಶುಚಿಃ ಪ್ರಯತಮಾನಸಃ ।
ಅಭಿದಧ್ಯೌ ಮಹಾಬಾಹುಃ ಸರ್ವಾಸ್ತ್ರಾಣಿ ರಥೋತ್ತಮೇ ॥೫೦॥

ಅನಂತರ ಮಹಾಬಾಹುವಾದ ಅರ್ಜುನನು ಶುಚಿಯಾಗಿ, ಮನೋನಿಗ್ರಹವನ್ನು ಹೊಂದಿದವನಾಗಿ ಶ್ರೇಷ್ಠವಾದ ರಥದಲ್ಲಿ ಪೂರ್ವಾಭಿಮುಖವಾಗಿ ಕುಳಿತು ಎಲ್ಲಾ ಅಸ್ತ್ರಗಳನ್ನೂ ಧ್ಯಾನ ಮಾಡಿದನು.

ಊಚುಶ್ಚ ಪಾರ್ಥಂ ಸರ್ವಾಣಿ ಪ್ರಾಂಜಲೀನಿ ನೃಪಾತ್ಮಜಮ್ ।
ಇಮೇ ಸ್ಮ ಪರಮೋದಾರ ಕಿಂಕರಾಃ ಪಾಂಡುನಂದನ ॥೫೧॥

ಆ ಎಲ್ಲಾ ಅಸ್ತ್ರದೇವತೆಗಳು ರಾಜಪುತ್ರನಾದ ಪಾಂಡುನಂದನನಾದ ಅರ್ಜುನನಿಗೆ ಕೈಗಳನ್ನು ಮುಗಿದು ಪರಮೋದಾರನೇ ಈ ನಾವು ನಿನ್ನ ಕಿಂಕರರಾಗಿದ್ದೇವೆ ಎಂದು ಹೇಳಿದರು.

ಪ್ರಣಿಪತ್ಯ ತತಃ ಪಾರ್ಥಃ ಸಮಾಲಭ್ಯ ಚ ಪಾಣಿನಾ ।
ಸರ್ವಾಣಿ ಮಾನಸಾನೀಹ ಭವತೇತ್ಯಭ್ಯಭಾಷತ ॥೫೨॥

ಪ್ರತಿಗೃಹ್ಯ ತತೋऽಸ್ತ್ರಾಣಿ ಪ್ರಹೃಷ್ಟವದನೋऽಭವತ್ ॥೫೩॥

ಅರ್ಜುನನು ಆ ಅಸ್ತ್ರಗಳಿಗೆ ನಮಸ್ಕರಿಸಿ, ಹಸ್ತದಿಂದ ಸ್ಪರ್ಶಮಾಡಿ ನೀವೆಲ್ಲರೂ ನನ್ನ ಮನಸ್ಸಿನಲ್ಲಿ ಯಾವಾಗಲೂ ಸನ್ನಿಹಿತರಾಗಿರಬೇಕು ಎಂದು ಹೇಳಿದನು. ಅನಂತರ ಅಸ್ತ್ರಗಳನ್ನು ತೆಗೆದುಕೊಂಡು ಸಂತೋಷವುಳ್ಳ ಮುಖವುಳ್ಳವನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ತ್ರಿಚತ್ವಾರಿಂಶೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತನಾಲ್ಕನೆಯ ಅಧ್ಯಾಯ

ರಥವನ್ನು ಸಿದ್ಧಪಡಿಸಿ ಅರ್ಜುನನಿಂದ ಯುದ್ಧಭೂಮಿಗೆ ಗಮನ.

ವೈಶಂಪಾಯನಃ

ಉತ್ತರಂ ಸಾರಥಿಂ ಕೃತ್ವಾ ಶಮೀಂ ಕೃತ್ವಾ ಪ್ರದಕ್ಷಿಣಮ್ ।
ಆಯುಧಂ ಸರ್ವಮಾದಾಯ ತತಃ ಪ್ರಾಯಾದ್ ಧನಂಜಯಃ ॥೧॥

ವೈಶಂಪಾಯನ– ಅರ್ಜುನನು ಉತ್ತರನನ್ನು ಸಾರಥಿಯನ್ನಾಗಿ ಮಾಡಿಕೊಂಡು ಶಮೀವೃಕ್ಷಕ್ಕೆ ಪ್ರದಕ್ಷಿಣೆಯನ್ನು ಮಾಡಿ ಎಲ್ಲಾ ಆಯುಧಗಳನ್ನು ತೆಗೆದುಕೊಂಡು ಅಲ್ಲಿಂದ ಹೊರಟನು.

ಧ್ವಜಂ ಚ ಸಿಂಹಂ ಮಾತ್ಸ್ಯಸ್ಯ ಭ್ರಾತೄಣಾಮಾಯುಧಾನಿ ಚ ।
ಪ್ರಣಿಧಾಯ ಶಮೀಮಧ್ಯೇ ಪ್ರಯಾತುಮುಪಚಕ್ರಮೇ ॥೨॥

ವಿರಾಟನ ಧ್ವಜವನ್ನೂ, ಸಿಂಹವನ್ನೂ, ತನ್ನ ಸಹೋದರರ ಆಯುಧಗಳನ್ನೂ ಶಮಿಯ ಮಧ್ಯದಲ್ಲಿಯೇ ಇಟ್ಟು ಹೊರಡಲು ಉಪಕ್ರಮಿಸಿದನು.

ತತಃ ಕಾಂಚನಲಾಂಗೂಲಂ ಧ್ವಜಂ ವಾನರಲಕ್ಷಣಮ್ ।
ದಿವ್ಯಂ ಮಾಯಾಮಯಂ ಯುಕ್ತಂ ವಿಹಿತಂ ವಿಶ್ವಕರ್ಮಣಾ ॥೩॥

ಅನಂತರ ಸುವರ್ಣಮಯವಾದ ಲಾಂಗೂಲವಿದ್ದ, ವಾನರಚಿಹ್ನೆಯನ್ನು ಹೊಂದಿದ್ದ ವಿಶ್ವಕರ್ಮನಿರ್ಮಿತವಾದ ದಿವ್ಯವಾದ ಮಾಯಾಮಯವಾದ ಧ್ವಜವನ್ನು ಸ್ಮರಿಸಿದನು.

ಮನಸಾ ಚಿಂತಯಾಮಾಸ ಪ್ರಸಾದಂ ಪಾವಕಸ್ಯ ಚ ॥೪॥

ಹಾಗೆಯೇ ಅಗ್ನಿದೇವನ ಪ್ರಸಾದವನ್ನೂ ಮನಸ್ಸಿನಲ್ಲಿ ಚಿಂತಿಸಿದನು.

ಸ ಚ ತಚ್ಚಿಂತಿತಂ ಜ್ಞಾತ್ವಾ ಧ್ವಜೇ ಭೂತಾನ್ಯಚೋದಯತ್ ।
ರಥೇ ವಾನರಮುಚ್ಚ್ರಿತ್ಯ ಗಾಂಡೀವಂ ವಿಕ್ಷಪದ್ ಧನುಃ ॥೫॥

ಅಗ್ನಿಯು ಅವನು ಚಿಂತಿಸುತ್ತಿರುವುದನ್ನು ತಿಳಿದು ಧ್ವಜದಲ್ಲಿ ಭೂತಗಳನ್ನು ಸಂಯೋಜಿಸಿದನು. ಅರ್ಜುನನು ರಥದಲ್ಲಿ ವಾನರಧ್ವಜವನ್ನು ಎತ್ತಿಕಟ್ಟಿ ಗಾಂಡೀವ ಧನುಸ್ಸನ್ನು ಹೆದೆ ಏರಿಸಿ ಎಳೆದನು.

ಸಪತಾಕಂ ವಿಚಿತ್ರಾಂಗಂ ಸೋಪಾಸಂಗಂ ಮಹಾಬಲಮ್ ।
ರಥಮಾಸ್ಥಾಯ ಬೀಭತ್ಸುಃ ಕೌಂತೇಯಃ ಶ್ವೇತವಾಹನಃ ॥೬॥

ಬದ್ಧಾಸಿಃ ಸತಳತ್ರಾಣಃ ಪ್ರಗೃಹೀತಶರಾಸನಃ ।
ತತಃ ಪ್ರಾಯಾದುದೀಚೀಂ ಸ ಕಪಿಪ್ರವರಕೇತನಃ ॥೭॥

ಕುಂತೀಪುತ್ರನಾದ ಶ್ವೇತವಾಹನನಾದ ಅರ್ಜುನನು ಸೊಂಟದಲ್ಲಿ ಕತ್ತಿಯನ್ನು ಕಟ್ಟಿಕೊಂಡು ಕೈಗಳಿಗೆ ಚರ್ಮದ ರಕ್ಷಣೆಯನ್ನು ಹಾಕಿಕೊಂಡು ಧನುಸ್ಸನ್ನು ಹಿಡಿದು ವಿಚಿತ್ರವಾದ ಆಯುಧಗಳಿಂದಲೂ ಮತ್ತು ಬತ್ತಳಿಕೆಗಳಿಂದಲೂ ಕೂಡಿದ ಮಹಾಬಲಿಷ್ಠವಾದ ರಥವನ್ನು ಏರಿ ಕಪಿಶ್ರೇಷ್ಠ ಧ್ವಜವುಳ್ಳ ಅವನು ಅಲ್ಲಿಂದ ಉತ್ತರ ದಿಕ್ಕಿಗೆ ಹೊರಟನು.

ಸ್ವನವಂತಂ ಮಹಾಶಂಖಂ ದೇವದತ್ತಂ ಧನಂಜಯಃ ।
ಶಶಾಂಕರೂಪಂ ಬೀಭತ್ಸುಃ ಪ್ರಾಧ್ಮಾಪಯದರಿಂದಮಃ ॥೮॥

ಶಂಖಶಬ್ದೋಽಸ್ಯ ಸೋಽತ್ಯರ್ಥಂ ಶ್ರೂಯತೇ ಕಾಲಮೇಘವತ್ ॥೯॥

ಅರಿಂದಮನೂ ಬೀಭತ್ಸುವೂ ಆದ ಧನಂಜಯನು ಒಳ್ಳೆಯ ನಾದದಿಂದ ಕೂಡಿದ ಮತ್ತು ಚಂದ್ರನನ್ನು ಹೋಲುವ ದೇವದತ್ತ ಶಂಖವನ್ನು ಊದಿದನು. ಅವನ ಶಂಖದ ಶಬ್ದವು ಪ್ರಳಯಕಾಲದ ಮೇಘದ ಗರ್ಜನೆಯಂತೆ ಕೇಳಿಬರುತ್ತಿದ್ದಿತು.

ತಸ್ಯ ಶಂಖಸ್ಯ ಶಬ್ದೇನ ಧನುಷೋಽಭಿಸ್ವನೇನ ಚ ।
ವಾನರಸ್ಯ ಚ ನಾದೇನ ರಥನೇಮಿಸ್ವನೇನ ಚ ॥೧೦॥

ಜಂಗಮಸ್ಯ ಭಯಂ ಘೋರಮಕರೋತ್ ಪಾಕಶಾಸನಿಃ ॥೧೧॥

ಪಾಕಶಾಸನಪುತ್ರನಾದ ಅರ್ಜುನನು ತನ್ನ ಶಂಖದ ನಾದದಿಂದ, ಧನುಸ್ಸಿನ ಠೇಂಕಾರ ಸ್ವರದಿಂದ ಮತ್ತು ಧ್ವಜದಲ್ಲಿದ್ದ ಕಪಿಯ ನಾದದಿಂದ, ಚಲಿಸುವ ಎಲ್ಲಾ ಪ್ರಾಣಿಗಳಿಗೂ ಘೋರವಾದ ಭಯವನ್ನು ಉಂಟುಮಾಡಿದನು.

ಶಂಖಶಬ್ದೇನ ಪಾರ್ಥಸ್ಯ ಮುಖೇನಾಶ್ವಾಸಯನ್ ಕ್ಷಿತೌ ।
ತತಸ್ತೇ ಜವನಾ ಯುಗ್ಯಾ ಜಾನುಭ್ಯಾಮಗಮನ್ ಮಹೀಮ್ ॥೧೨॥

ಅರ್ಜುನನ ಶಂಖ ಶಬ್ದವನ್ನು ಕೇಳಿ ಬಳಲಿದ ವೇಗಶಾಲಿಗಳಾದ ರಥಕ್ಕೆ ಹೂಡಿದ ಅಶ್ವಗಳು ಮುಖದಿಂದ ದೀರ್ಘಶ್ವಾಸವನ್ನು ಮಾಡುತ್ತಾ ಮಂಡಿಗಳ ಮೇಲೆ ಭೂಮಿಯ ಮೇಲೆ ಕುಸಿದವು.

ಉತ್ತರಶ್ಚಾಪಿ ಸಂತ್ರಸ್ತೋ ರಥೋಪಸ್ಥ ಉಪಾವಿಶತ್ ॥೧೩॥

ಉತ್ತರನೂ ಸಹ ಬಹಳ ಹೆದರಿ ರಥದ ಮಧ್ಯಭಾಗದಲ್ಲಿ ಕುಳಿತನು.

ಅಥಾಶ್ವಾನ್ ರಶ್ಮಿಭಿಃ ಪಾರ್ಥಃ ಸಮುದ್ಯಮ್ಯ ಪರಂತಪಃ ।
ವ್ಯಭ್ರಾಜತ ರಥೋಪಸ್ಥೇ ಭಾನುರ್ಮೇರಾವಿವೋತ್ತರೇ ॥೧೪॥

ಆಗ ಪರಂತಪನಾದ ಅರ್ಜುನನು ಕಡಿವಾಣಗಳಿಂದ ಅಶ್ವಗಳನ್ನು ಹಿಡಿದು ರಥದ ಮಧ್ಯದಲ್ಲಿನಿಂತು ಸೂರ್ಯನು ಉತ್ತರ ಮೇರುವಿನಲ್ಲಿ ಶೋಭಿಸಿದಂತೆ ಶೋಭಿಸಿದನು.

ಶಂಖಶಬ್ದೇನ ವಿತ್ರಸ್ತಂ ಜ್ಯಾಸ್ವನೇನ ಚ ಮೂರ್ಛಿತಮ್ ।
ಉತ್ತರಂ ಸಂಪರಿಷ್ವಜ್ಯ ಸಮಾಶ್ವಾಸಯದರ್ಜುನಃ ॥೧೫॥

ಅರ್ಜುನನು ಶಂಖಶಬ್ದದಿಂದ ಹೆದರಿದ, ಹೆದೆಯ ಶಬ್ದದಿಂದ ಮೂರ್ಛಿತನಾದ, ಉತ್ತರನನ್ನು ಆಲಿಂಗಿಸಿ ಸಮಾಧಾನ ಮಾಡಿದನು.

ಮಾ ಭೈಸ್ತ್ವಂ ರಾಜಪುತ್ರಾಗ್ರ್ಯ ಕ್ಷತ್ರಿಯೋಽಸಿ ಪರಂತಪ ।
ಕಥಂ ಪುರುಷಶಾರ್ದೂಲ ಶತ್ರುಮಧ್ಯೇ ವಿಷೀದಸಿ ॥೧೬॥

ಶ್ರುತಾಸ್ತೇ ಶಂಖಶಬ್ದಾಶ್ಚ ಭೇರೀಶಬ್ದಾಶ್ಚ ಸರ್ವಶಃ ।
ಕುಂಜರಾಣಾಂ ಚ ನದತಾಂ ವ್ಯೂಢಾನೀಕೇಷು ತಿಷ್ಠತಾಮ್ ॥೧೭॥

ಎಲೈ ರಾಜಪುತ್ರ ಶ್ರೇಷ್ಠನೇ, ಹೆದರಬೇಡ. ಪರಂತಪನೇ, ನೀನು ಕ್ಷತ್ರಿಯನಾಗಿದ್ದೀಯೆ. ಪುರುಷಶಾರ್ದೂಲನೇ, ಶತ್ರುಗಳ ಮಧ್ಯದಲ್ಲಿ ಹೇಗೆ ವಿಷಾದವನ್ನು ಹೊಂದುತ್ತಿದ್ದೀಯೆ? ನೀನು ವ್ಯೂಹವನ್ನು ರಚಿಸಿದ ಸೈನ್ಯಗಳಲ್ಲಿ ಶಂಖ ಶಬ್ದಗಳನ್ನೂ, ಭೇರೀ ಶಬ್ದಗಳನ್ನೂ ಮತ್ತು ಆನೆಗಳ ನಾದವನ್ನು ಎಲ್ಲ ಕಡೆಗಳಲ್ಲಿಯೂ ಕೇಳಿದ್ದೀಯೆ.

ಸ ತ್ವಂ ಕಥಮಿವಾನೇನ ಶಂಖಶಬ್ದೇನ ಭೀಷಿತಃ ।
ವಿಷಣ್ಣರೂಪೋ ವಿತ್ರಸ್ತಃ ಪುರುಷಃ ಪ್ರಾಕೃತೋ ಯಥಾ ॥೧೮॥

ಅಂತಹ ನೀನು ಹೀಗೆ ಈ ಶಂಖಶಬ್ದಕ್ಕೆ ಹೆದರಿ ವಿಷಾದವನ್ನು ಹೊಂದಿ ಸಾಧಾರಣ ಮನುಷ್ಯನಂತೆ ಏಕೆ ಭಯಪಡುತ್ತಿದ್ದೀಯೆ?

ಉತ್ತರಃ

ಶ್ರುತಾ ಮೇ ಶಂಖಶಬ್ದಾಶ್ಚ ಭೇರೀನಾದಾಶ್ಚ ಸರ್ವಶಃ ।
ಕುಂಜರಾಣಾಂ ಚ ನಿನದಾ ವ್ಯೂಢಾನೀಕೇಷು ತಿಷ್ಠತಾಮ್ ॥೧೯॥

ನೈವಂವಿಧಾಃ ಶಂಖಶಬ್ದಾಃ ಪುರಾ ಜಾತು ಮಯಾ ಶ್ರುತಾಃ ।
ಧ್ವಜಸ್ಯ ಚಾಪಿ ರೂಪಂ ಮೇ ದೃಷ್ಟಪೂರ್ವಂ ನ ಹೀದೃಶಮ್ ॥೨೦॥

ಧನುಷಶ್ಚೈವ ಘೋಷೋ ಯಃ ಶ್ರುತಪೂರ್ವೋ ನ ಮೇ ಕ್ವಚಿತ್ ॥೨೧॥

ಉತ್ತರ– ನಾನು ಹಿಂದೆ ಶಂಖಶಬ್ದಗಳನ್ನೂ ಮತ್ತು ಬೇರೆಯ ನಾದಗಳನ್ನೂ ಮತ್ತು ವ್ಯೂಹಗೊಂಡ ಸೈನ್ಯದಲ್ಲಿನಿಂತ ಕುಂಜರಗಳ ನಾದಗಳನ್ನೂ ಅನೇಕ ಬಾರಿ ಕೇಳಿದ್ದೇನೆ. ಆದರೆ ಇಂತಹ ಶಬ್ದಗಳನ್ನು ನಾನು ಹಿಂದೆ ಎಂದೂ ಕೇಳಲಿಲ್ಲ ಮತ್ತು ಇಂತಹ ಧ್ವಜರೂಪವನ್ನಾದರೂ ಸಹ ಹಿಂದೆ ಎಂದೂ ನೋಡಲಿಲ್ಲ. ಹಾಗೆಯೇ ಈ ಧನುಸ್ಸಿನ ಘೋಷದಂತಹ ಘೋಷವನ್ನೂ ಸಹ ಯಾವಾಗಲೂ ಕೇಳಲಿಲ್ಲ.

ಅಸ್ಯ ಶಂಖಸ್ಯ ಶಬ್ದೇನ ಧನುಷೋ ನಿಸ್ವನೇನ ಚ ।
ಅಮಾನುಷಾಣಾಂ ಶಬ್ದೇನ ಭೂತಾನಾಂ ಧ್ವಜವಾಸಿನಾಮ್ ॥೨೨॥

ರಥನೇಮಿಪ್ರಣಾದೇನ ಮನೋ ಮೇ ಮುಹ್ಯತೇ ಭೃಶಮ್ ॥೨೩॥

ಈ ಶಂಖಶಬ್ದದಿಂದಲೂ, ಧನುಸ್ಸಿನ ಶಬ್ದದಿಂದಲೂ, ಧ್ವಜದಲ್ಲಿ ಇರುವ ಅಮಾನುಷರಾದ ಭೂತಗಳ ಶಬ್ದದಿಂದಲೂ ಮತ್ತು ರಥದ ಚಕ್ರದ ದೊಡ್ಡ ನಾದದಿಂದಲೂ ನನ್ನ ಮನಸ್ಸು ಬಹಳ ಮೋಹಕ್ಕೆ ಒಳಗಾಗಿದೆ.

ವ್ಯಾಕುಲಾಶ್ಚ ದಿಶಃ ಸರ್ವಾ ಹೃದಯಂ ವ್ಯಥತೀವ ಚ ।
ಧ್ವಜೇನ ಪಿಹಿತಾಃ ಸರ್ವಾ ದಿಶೋ ನ ಪ್ರತಿಭಾಂತಿ ಮೇ ॥೨೪॥

ಗಾಂಡೀವಸ್ಯ ಚ ಶಬ್ದೇನ ಕರ್ಣೌ ಮೇ ಬಧಿರೀಕೃತೌ ॥೨೫॥

ನನಗೆ ದಿಕ್ಕುಗಳು ವ್ಯತ್ಯಾಸಗೊಂಡಂತೆ ಕಾಣುತ್ತಿವೆ. ಮನಸ್ಸು ವ್ಯಥೆಯಿಂದ ಕೂಡಿದೆ. ಧ್ವಜವು ಎಲ್ಲ ದಿಕ್ಕುಗಳಲ್ಲಿಯೂ ಆವರಿಸಿರುವುದರಿಂದ ನನಗೆ ಯಾವ ದಿಕ್ಕೂ ತೋರುತ್ತಿಲ್ಲ. ಗಾಂಡೀವ ಶಬ್ದದಿಂದ ನನ್ನ ಎರಡೂ ಕಿವಿಗಳು ಕಿವುಡಾಗಿವೆ.

ವೈಶಂಪಾಯನಃ

ಪುನರ್ಧ್ವಜಂ ಪುನಃಶಂಖಂ ಧನುಶ್ಚೈವ ಪುನಃ ಪುನಃ ।
ಸಮ್ಮೂಢಚೇತಾ ವೈರಾಟಿರರ್ಜುನಂ ಸಮುದೈಕ್ಷತ ॥೨೬॥

ವೈಶಂಪಾಯನ– ವಿರಾಟಪುತ್ರನಾದ ಉತ್ತರನು ಮೋಹಕ್ಕೆ ಒಳಗಾಗಿ ಪುನಃ ಪುನಃ ಧ್ವಜವನ್ನೂ, ಶಂಖವನ್ನೂ, ಧನುಸ್ಸನ್ನೂ ಮತ್ತು ಅರ್ಜುನನನ್ನೂ ನೋಡಿದನು.

ತತೋಽರ್ಜುನೋಽಬ್ರವೀದ್ ವಾಕ್ಯಂ ರಾಜಪುತ್ರಂ ಪರಂತಪಃ ॥೨೭॥

ಸ್ಥಿರೋ ಭವ ಮಹಾಬಾಹೋ ಸಂಜ್ಞಾಂ ಚಾತ್ಮಾನಮಾನಯ ।
ಏಕಾಂತೇ ರಥಮಾಸ್ಥಾಯ ಪದ್ಭ್ಯಾಂ ತ್ವಮವಪೀಡ್ಯ ಚ ॥೨೮॥

ದೃಢಂ ರಶ್ಮೀಂಶ್ಚ ಸಂಯಚ್ಛ ಶಂಖಂ ಧ್ಮಾಸ್ಯಾಮ್ಯಹಂ ಪುನಃ ॥೨೯॥

ಆಗ ಪರಂತಪನಾದ ಅರ್ಜುನನು ರಾಜಪುತ್ರನನ್ನು ಕುರಿತು ಮಹಾಬಾಹುವೇ, ಸ್ಥೈರ್ಯವನ್ನು ಹೊಂದು. ಮನಸ್ಸಿಗೆ ಸರಿಯಾದ ಎಚ್ಚರವನ್ನು ತಂದುಕೋ. ರಥದ ಒಂದು ಮೂಲೆಯಲ್ಲಿ ನಿಂತು ಪಾದಗಳನ್ನು ಗಟ್ಟಿಯಾಗಿ ಊರಿ, ಕಡಿವಾಣವನ್ನು ಗಟ್ಟಿಯಾಗಿ ಹಿಡಿದು ಕುದುರೆಗಳನ್ನು ನಿಯಂತ್ರಿಸು. ನಾನು ಪುನಃ ಶಂಖವನ್ನು ಊದುವೆನು ಎಂದು ಹೇಳಿದನು.

ವೈಶಂಪಾಯನಃ

ತತಃ ಸ ಪುನರೇವಾಥ ತಂ ಶಂಖಂ ಪೂರಯದ್ ಬಲೀ ।
ದ್ವಿಷತಾಂ ದುಃಖಜನನಂ ಸುಹೃದಾಂ ಹರ್ಷವರ್ಧನಮ್ ॥೩೦॥

ವೈಶಂಪಾಯನ– ಅನಂತರ ಬಲಿಷ್ಠನಾದ ಅರ್ಜುನನು ಶತ್ರುಗಳಿಗೆ ದುಃಖವನ್ನು ಉಂಟುಮಾಡುವ ಮತ್ತು ಸುಹೃಜ್ಜನರಿಗೆ ಸಂತೋಷವನ್ನು ಉಂಟುಮಾಡುವ ಆ ಶಂಖವನ್ನು ಪುನಃ ಊದಿದನು.

ತತಃ ಶಂಖಮುಪಾಧ್ಮಾಸೀದ್ ದಾರಯನ್ನಿವ ಪರ್ವತಾನ್ ।
ಗುಹಾ ಗಿರೀಣಾಂ ಚ ತಥಾ ದಿಶಃ ಶೈಲಾಂಸ್ತಥೈವ ಚ ॥೩೧॥

ಉತ್ತರಶ್ಚಾಪಿ ಸಂಲೀನೋ ರಥೋಪಸ್ಥ ಉಪಾವಿಶತ್ ॥೩೨॥

ಅನಂತರ ಪರ್ವತಗಳನ್ನು ಸೀಳುವವನಂತೆ, ಹಾಗೆಯೇ ಪರ್ವತದ ಗುಹೆಗಳನ್ನೂ ಮತ್ತು ದಿಕ್ಕುಗಳನ್ನೂ ಪರ್ವತಗಳನ್ನು ಸೀಳುವಂತೆ ಶಂಖವನ್ನು ಊದಿದನು. ಉತ್ತರನಾದರೂ ರಥದ ಮಧ್ಯದಲ್ಲಿ ಅಡಗಿಕೊಂಡು ಕುಳಿತನು.

ತಸ್ಯ ಶಂಖಸ್ಯ ಶಬ್ದೇನ ರಥನೇಮಿಸ್ವನೇನ ಚ ।
ಗಾಂಡೀವಸ್ಯ ಚ ಶಬ್ದೇನ ಪೃಥಿವೀ ಸಮಕಂಪತ ॥೩೩॥

ಆ ಶಂಖಶಬ್ದದಿಂದಲೂ, ರಥದ ಚಕ್ರದ ಶಬ್ದದಿಂದಲೂ ಮತ್ತು ಗಾಂಡೀವದ ಶಬ್ದದಿಂದಲೂ ಭೂಮಿಯು ನಡುಗಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಚತುಶ್ಚತ್ವಾರಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತೈದನೆಯ ಅಧ್ಯಾಯ

ಅರ್ಜುನನನ್ನು ಗುರುತಿಸಿ ದ್ರೋಣರಿಂದ ದುರ್ಯೋಧನನಿಗೆ ನಿವೇದನೆ ಮತ್ತು ತಮ್ಮ ಸೈನ್ಯದಲ್ಲಿ ಸೋಲಿನ ಶಕುನಗಳ ನಿರೂಪಣೆ

ವೈಶಂಪಾಯನಃ

ಭಾರದ್ವಾಜಸ್ತತೋ ದ್ರೋಣಃ ಸರ್ವಶಸ್ತ್ರಭೃತಾಂ ವರಃ ।
ರಾಜಾನಂ ಚಾಹ ಸಂಪ್ರೇಕ್ಷ್ಯ ದುರ್ಯೋಧನಮರಿಂದಮ ॥೧॥

ವೈಶಂಪಾಯನ– ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ, ಅರಿಂದಮರೂ, ಭರದ್ವಾಜ ಪುತ್ರರೂ ಆದ ದ್ರೋಣರು ರಾಜನಾದ ದುರ್ಯೋಧನನನ್ನು ನೋಡಿ ಮಾತನಾಡಿದರು.

ಯಥಾ ರಥಸ್ಯ ನಿಘೋರ್ಷೋ ಯಥಾ ಶಂಖ ಉದೀರ್ಯತೇ ।
ಕಂಪತೇ ಚ ಯಥಾ ಭೂಮಿಃ ನೈಷೋಽನ್ಯಃ ಸವ್ಯಸಾಚಿನಃ ॥೨॥

ರಥನಿರ್ಘೋಷವನ್ನೂ, ಶಂಖದ ಧ್ವನಿಯನ್ನೂ ಮತ್ತು ಭೂಮಿಯು ಕಂಪಿಸುವುದನ್ನೂ ಗಮನಿಸಿದರೆ ಇವನು ಅರ್ಜುನನನ್ನು ಬಿಟ್ಟು ಬೇರೆ ಯಾವನೂ ಅಲ್ಲ.

ಔತ್ಪತ್ತಿಕಮಿದಂ ರಾಜನ್ ನಿಮಿತ್ತಂ ಭವತೀಹ ನಃ ।
ನ ಹಿ ಪಶ್ಯಾಮಿ ವಿಜಯಂ ಸೈನ್ಯೇಽಸ್ಮಾಕಂ ಪರಂತಪ ॥೩॥

ಎಲೈ ರಾಜನೇ, ನಮ್ಮ ಸೈನ್ಯದಲ್ಲಿ ಸ್ವಾಭಾವಿಕವಾದ ಅಪಶಕುನಗಳಾಗುತ್ತಿವೆ. ಎಲೈ ಪರಂತಪನೇ, ನಮ್ಮ ಸೈನ್ಯಕ್ಕೆ ವಿಜಯ ಉಂಟಾಗುವುದು ಕಾಣುತ್ತಿಲ್ಲ.

ಶಸ್ತ್ರಾಣಿ ನ ಪ್ರಕಾಶಂತೇ ನ ಪ್ರಹೃಷ್ಯಂತಿ ವಾಹನಾಃ ।
ಅಗ್ನಯಶ್ಚ ನ ಭಾಸಂತೇ ಸುಸಮಿದ್ಧಾಶ್ಚ ಶೋಭನಾಃ ॥೪॥

ಶಸ್ತ್ರಗಳು ಮಂಕಾಗಿವೆ. ಗಜಾಶ್ವಗಳಿಗೆ ಸಂತೋಷವಿಲ್ಲ. ಶೋಭನವಾದ ಅಗ್ನಿಗಳನ್ನು ಎಷ್ಟು ಉದ್ದೀಪನಗೊಳಿಸಿದರೂ ಅವು ಪ್ರಕಾಶಿಸುತ್ತಿಲ್ಲ.

ಪ್ರತ್ಯಾದಿತ್ಯಂ ಚ ನಃ ಸರ್ವೇ ಮೃಗಾ ಘೋರಾ ನದಂತಿ ಚ ।
ಶಕುನಾಶ್ಚಾಪಸವ್ಯಾಶ್ಚ ವೇದಯಂತಿ ಮಹದ್ಭಯಮ್ ॥೫॥

ಸೂರ್ಯನ ಎದುರಾಗಿ ನಿಂತು ಎಲ್ಲಾ ಘೋರಮೃಗಗಳೂ ಗರ್ಜಿಸುತ್ತಿವೆ. ಅಪಸವ್ಯದಲ್ಲಿ ಬರುತ್ತಿರುವ ಪಕ್ಷಿಗಳು ಮಹಾಭಯವನ್ನು ಸೂಚಿಸುತ್ತಿವೆ.

ಗೋಮಾಯುರೇಷ ಸೇನಾಯಾಂ ರುವನ್ ಮಧ್ಯೇऽನುಧಾವತಿ ।
ಚಾಷಾ ನದಂತಿ ಚಾಕಾಶೇ ವೇದಯಂತೋ ಮಹದ್ಭಯಮ್ ॥೬॥

ಈ ನರಿಯು ಅಳುತ್ತಾ ಸೈನ್ಯದ ಮಧ್ಯದಲ್ಲಿ ಓಡಾಡುತ್ತಿದೆ. ಅಂಗನ ಹಕ್ಕಿಗಳು ಆಕಾಶದಲ್ಲಿ ಗರ್ಜಿಸುತ್ತಾ ದೊಡ್ಡ ಭಯವನ್ನು ಸೂಚಿಸುತ್ತಿವೆ.

ಭವತಾಂ ಚೈವ ರೋಮಾಣಿ ಸಂಪ್ರಹೃಷ್ಟಾನಿ ಲಕ್ಷಯೇ ।
ಅನುಷ್ಣಾಂಗಾಶ್ಚ ಸಂಸ್ವಿನ್ನಾ ಜೃಂಭಂತೇ ಚಾಪ್ಯಭೀಕ್ಷ್ಣಶಃ ॥೭॥

ನೀವೆಲ್ಲಾ ರೋಮಾಂಚಗೊಂಡಿರುವುದನ್ನು ಗಮನಿಸುತ್ತಿದ್ದೇನೆ. ಯೋಧರು ಉಷ್ಣವಿಲ್ಲದಿದ್ದರೂ ಬೆವರಿ ಪುನಃ ಪುನಃ ಆಕಳಿಸುತ್ತಿದ್ದಾರೆ.

ವಿಷ್ಟಂಭಂತೀವ ಮಾತಂಗಾ ಮುಂಚಂತ್ಯಶ್ರೂಣಿ ವಾಜಿನಃ ।
ಸದಾ ಮೂತ್ರಂ ಪುರೀಷಂ ಚ ಉತ್ಸೃಜಂತಿ ಪುನಃ ಪುನಃ ॥೮॥

ಆನೆಗಳು ಮುಗ್ಗರಿಸುವಂತೆ ನಡೆಯುತ್ತಿವೆ. ಅಶ್ವಗಳು ಕಣ್ಣೀರನ್ನು ಸುರಿಸುತ್ತಿವೆ. ಅವು ಪುನಃ ಪುನಃ ಮಲಮೂತ್ರಗಳನ್ನು ವಿಸರ್ಜಿಸುತ್ತಿವೆ.

ಲೋಹಿತಾರ್ದ್ರಾ ಚ ಪೃಥಿವೀ ದಿಶಃ ಸರ್ವಾಃ ಪ್ರಧೂಪಿತಾಃ ।
ನ ಚ ಸೂರ್ಯಃ ಪ್ರತಪತಿ ಮಹದ್ ವೇದಯತೇ ಭಯಮ್ ॥೯॥

ಭೂಮಿಯು ಕೆಂಪು ಬಣ್ಣದಿಂದ ಕೂಡಿ ಒದ್ದೆಯಾಗಿ ಕಾಣುತ್ತಿದೆ. ಎಲ್ಲ ದಿಕ್ಕುಗಳಲ್ಲಿಯೂ ಹೊಗೆಯು ತುಂಬಿಕೊಂಡಿದೆ. ಸೂರ್ಯನು ಪ್ರಕಾಶಿಸುತ್ತಿಲ್ಲ. ಇದು ದೊಡ್ಡ ಭಯವನ್ನು ಸೂಚಿಸುತ್ತದೆ.

ಹಸ್ತಿನಶ್ಚಾಪಿ ವಿತ್ರಸ್ತಾ ಯೋಧಾಶ್ಚಾಪಿ ವಿತತ್ರಸುಃ ।
ಪರಾಭೂತಾ ಚ ನಃ ಸೇನಾ ನ ಕಶ್ಚಿದ್ ಯೋದ್ಧುಮಿಚ್ಛತಿ ॥೧೦॥

ಆನೆಗಳು ಹೆದರಿವೆ. ಯೋಧರೂ ಹೆದರಿದ್ದಾರೆ. ನಮ್ಮ ಸೈನ್ಯವು ಆಗಲೇ ಸೋತಂತಿದೆ. ಯುದ್ಧವನ್ನು ಮಾಡಲು ಯಾರಿಗೂ ಇಷ್ಟವಿಲ್ಲ.

ವಿಷಣ್ಣಮುಖಭೂಯಿಷ್ಠಾಃ ಸರ್ವೇ ಯೋಧಾ ವಿಚೇತಸಃ ।
ದಿಶಂ ತೇ ದಕ್ಷಿಣಾಂ ಸರ್ವೇ ವಿಪ್ರೇಕ್ಷಂತೇ ಪುನಃ ಪುನಃ ॥೧೧॥

ಯೋಧರೆಲ್ಲರೂ ಬಹಳ ವಿಷಾದದಿಂದ ಕೂಡಿದ ಮುಖವುಳ್ಳವರಾಗಿ ಪ್ರಜ್ಞಾಹೀನರಾಗಿದ್ದಾರೆ. ಅವರೆಲ್ಲರೂ ಪುನಃ ಪುನಃ ದಕ್ಷಿಣದಿಕ್ಕನ್ನು ನೋಡುತ್ತಿದ್ದಾರೆ.

ಮೃಗಾಶ್ಚ ಪಕ್ಷಿಣಶ್ಚೈವ ಸವ್ಯಮೇವ ಪತಂತಿ ನಃ ।
ವಾದಿತ್ರೋದ್ಘುಷ್ಟಘೋಷಾಶ್ಚ ನ ಚ ಗಾಢಂ ಸ್ವನಂತಿ ನಃ ॥೧೨॥

ಧ್ವಜಾಗ್ರೇಷು ನಿಲೀಯಂತೇ ವಾಯಸಾಸ್ತನ್ನ ಶೋಭನಮ್ ॥೧೩॥

ಮೃಗಪಕ್ಷಿಗಳು ನಮ್ಮ ಎಡಭಾಗಕ್ಕೇ ಬರುತ್ತಿವೆ. ವಾದ್ಯಗಳನ್ನು ಬಾರಿಸಿದರೂ ಗಾಢವಾದ ಶಬ್ದವು ಬರುತ್ತಿಲ್ಲ. ಧ್ವಜದ ತುದಿಗಳಲ್ಲಿ ಕಾಗೆಗಳು ಅಡಗಿಕುಳಿತಿವೆ. ಇದು ಒಳ್ಳೆಯದಲ್ಲ.

ಜ್ಯೋತೀಂಷಿ ನ ಪ್ರಕಾಶಂತೇ ದಾರುಣಾ ಮೃಗಪಕ್ಷಿಣಃ ।
ಉತ್ಪಾತಾ ವಿವಿಧಾ ಘೋರಾ ದೃಶ್ಯಂತೇ ಚಾತ್ರ ನಾಶನಾಃ ॥೧೪॥

ಆಕಾಶದಲ್ಲಿ ಜ್ಯೋತಿಸ್ಸುಗಳು ಪ್ರಕಾಶಿಸುತ್ತಿಲ್ಲ. ಮೃಗಪಕ್ಷಿಗಳು ಘೋರವಾಗಿವೆ. ಅನೇಕವಿಧವಾದ ಘೋರವಾದ ನಮ್ಮ ನಾಶವನ್ನು ಸೂಚಿಸುವ ಅಪಶಕುನಗಳು ಕಂಡುಬರುತ್ತಿವೆ.

ವಿಶೇಷತ ಇಹಾಸ್ಮಾಕಂ ನಿಮಿತ್ತಾನಿ ವಿನಾಶನೇ ।
ಉಲ್ಕಾಭಿಶ್ಚ ಪ್ರದೀಪ್ತಾಭಿರ್ವಧ್ಯತೇ ಪೃತನಾ ತವ ॥೧೫॥

ವಿಶೇಷವಾಗಿ ನಮ್ಮ ಸೈನ್ಯದಲ್ಲಿಯೇ ವಿನಾಶದ ಶಕುನಗಳು ಕಂಡುಬರುತ್ತಿವೆ. ಉರಿಯುತ್ತಿರುವ ಉಲ್ಕೆಗಳು ನಮ್ಮ ಸೈನ್ಯದ ಮೇಲೆ ಬೀಳುತ್ತಿವೆ.

ವಾಹನಾನ್ಯಪ್ರಹೃಷ್ಟಾನಿ ರುದಂತೀವ ವಿಶಾಂಪತೇ ।
ಉಪಾಸತೇ ಚ ಸೈನ್ಯಾನಿ ಗೃಧ್ರಾಸ್ತವ ಸಮಂತತಃ ॥೧೬॥

ಅಶ್ವಗಜ ಮೊದಲಾದ ವಾಹನಗಳು ಸಂತೋಷದಿಂದಿಲ್ಲ. ರೋದನ ಮಾಡುವಂತೆ ತೋರುತ್ತಿವೆ. ಎಲ್ಲ ಕಡೆಗಳಿಂದಲೂ ಸೈನ್ಯದ ಮೇಲೆ ಹದ್ದುಗಳು ಓಡಾಡುತ್ತಿವೆ.

ಯಥಾ ಮೇಘಸ್ಯ ನಿನದೋ ಗಂಭೀರಃ ಸ್ಥೂಣಮಾಯತಃ ।
ಶ್ರೂಯತೇ ರಥನಿರ್ಘೋಷೋ ನಾಯಮನ್ಯೋ ಧನಂಜಯಾತ್ ।೧೭॥

ಮೇಘದ ನಿನಾದವು ಗಂಭೀರವೂ ಮತ್ತು ವಿಸ್ತಾರವೂ ಆಗಿರುವಂತೆ ಇವನ ರಥದ ನಿರ್ಘೋಷವು ಕೇಳಿಬರುತ್ತಿದೆ. ಇವನು ಧನಂಜಯನಲ್ಲದೇ ಬೇರೊಬ್ಬನಲ್ಲ.

ಅಶ್ವಾನಾಂ ಸ್ವನತಾಂ ಶಬ್ದೋ ವಹತಾಂ ಪಾಕಶಾಸನಿಮ್ ।
ವಾನರಶ್ಚ ಧ್ವಜೋ ದಿವ್ಯೋ ನಿಃಸಂಗಂ ಧೂಯತೇ ಮಹಾನ್ ॥೧೮॥

ಅರ್ಜುನನನ್ನು ರಥದಲ್ಲಿ ಒಯ್ಯುವ ಅಶ್ವಗಳ ಕೆನೆಯುವ ಶಬ್ದವು ದೊಡ್ಡದಾಗಿದೆ. ಯಾವುದಕ್ಕೂ ಸಿಲುಕದ ದಿವ್ಯವಾದ ಅವನ ವಾನರ ಧ್ವಜವು ಬಹಳವಾಗಿ ಓಲಾಡುತ್ತಿದೆ.

ಶಂಖಶಬ್ದೇನ ಪಾರ್ಥಸ್ಯ ಕರ್ಣೌ ಮೇ ಬಧಿರೀಕೃತೌ ।
ಸರ್ವಸೈನ್ಯಂ ಚ ವಿತ್ರಸ್ತಂ ನಾಯಮನ್ಯೋ ಧನಂಜಯಾತ್ ॥೧೯॥

ಅರ್ಜುನನ ಶಂಖಶಬ್ದದಿಂದ ನನ್ನ ಕಿವಿಗಳು ಕಿವುಡಾಗಿವೆ. ಎಲ್ಲ ಸೈನ್ಯವೂ ಹೆದರಿದೆ. ಇವನು ಧನಂಜಯನನ್ನು ಬಿಟ್ಟು ಬೇರೆ ಯಾವನೂ ಅಲ್ಲ.

ರಾಜಾನಮಗ್ರತಃ ಕೃತ್ವಾ ದುರ್ಯೋಧನಮರಿಂದಮಮ್ ।
ಗಾಃ ಪ್ರಸ್ಥಾಪ್ಯ ಚ ತಿಷ್ಠಾಮೋ ವ್ಯೂಢಾನೀಕಾಃ ಪ್ರಹಾರಿಣಃ ॥೨೦॥

ಅರಿಂದಮನಾದ ದುರ್ಯೋಧನ ರಾಜನನ್ನು ಮುಂದೆ ಮಾಡಿಕೊಂಡು ಗೋವುಗಳನ್ನು ಕಳುಹಿಸಿ ಸೈನ್ಯವ್ಯೂಹವನ್ನು ರಚಿಸಿ ಶತ್ರುಗಳ ಮೇಲೆ ಎರಗಲು ಸಿದ್ಧರಾಗಿ ನಿಲ್ಲೋಣ.

ಪ್ರವಿಭಜ್ಯ ತ್ರಿಧಾ ಸೇನಾಂ ಸಮುಚ್ಛ್ರಿತ್ಯ ಧ್ವಜಾನಪಿ ।
ದಿಕ್ಷು ಗುಲ್ಮಾ ನಿವೇಶ್ಯಂತಾಂ ಯತ್ತಾ ಯೋತ್ಸ್ಯಾಮಹೇऽರ್ಜುನಮ್ ॥

ಸೈನ್ಯವನ್ನು ಮೂರುಭಾಗವನ್ನಾಗಿ ಮಾಡಿ ಧ್ವಜಗಳನ್ನು ಮೇಲಕ್ಕೆತ್ತಿ ಬೇರೆ ಬೇರೆ ದಿಕ್ಕುಗಳಲ್ಲಿ ಸೈನ್ಯದ ಭಾಗಗಳನ್ನು ಸ್ಥಾಪಿಸಿ. ನಾವು ಎಚ್ಚರಿಕೆಯಿಂದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವೆವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಪಂಚಚತ್ವಾರಿಂಶೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತಾರನೆಯ ಅಧ್ಯಾಯ

ದ್ರೋಣರ ಮಾತನ್ನು ಕೇಳಿ ಸೈನ್ಯದ ಮೌನ.
ದುರ್ಯೋಧನನ ಪ್ರೋತ್ಸಾಹವಚನಗಳು. ಕರ್ಣನ ಆಕ್ಷೇಪ.

ವೈಶಂಪಾಯನಃ

ತತೋ ದುರ್ಯೋಧನೋ ರಾಜಾ ಸಮರೇ ಭೀಷ್ಮಮಬ್ರವೀತ್ ।
ದ್ರೋಣಂ ಚ ರಥಶಾರ್ದೂಲಂ ಕೃಪಂ ಚ ಸುಮಹಾರಥಮ್ ॥೧॥

ವೈಶಂಪಾಯನ– ಆಗ ರಾಜನಾದ ದುರ್ಯೋಧನನು ಯುದ್ಧದಲ್ಲಿ ಸುಮಹಾರಥರಾದ ಭೀಷ್ಮರನ್ನೂ ದ್ರೋಣರನ್ನೂ ಮತ್ತು ಕೃಪರನ್ನೂ ಕುರಿತು ಮಾತನಾಡಿದನು.

ಉಕ್ತೋಽಯಮರ್ಥ ಆಚಾರ್ಯ ಮಯಾ ಕರ್ಣೇನ ಚಾಸಕೃತ್ ।
ಪುನರೇವ ಚ ವಕ್ಷ್ಯಾಮಿ ನ ಹಿ ತೃಪ್ಯಾಮಿ ತಂ ಬ್ರುವನ್ ॥೨॥

ಆಚಾರ್ಯರೇ, ಈ ವಿಷಯವನ್ನು ನಾನೂ ಮತ್ತು ಕರ್ಣನೂ ಸಹ ಅನೇಕ ಬಾರಿ ಹೇಳಿದ್ದೇವೆ. ಅದನ್ನು ಪುನಃ ಹೇಳುವೆನು. ಏಕೆಂದರೆ ಅದನ್ನು ಎಷ್ಟುಬಾರಿ ಹೇಳಿದರೂ ನನಗೆ ತೃಪ್ತಿ ಇಲ್ಲ.

ಪರಾಜಿತೈರ್ವಿವಸ್ತವ್ಯಂ ತೈಶ್ಚ ದ್ವಾದಶವತ್ಸರಾನ್ ।
ವನೇ ಜನಪದೇಽಜ್ಞಾತೈರೇಕ ಏಷ ಪಣೋ ಹಿ ನಃ ॥೩॥

ದ್ಯೂತದಲ್ಲಿ ಪರಾಜಿತರಾದರೆ ಹನ್ನೆರಡು ವರ್ಷಗಳ ಕಾಲ ವನವಾಸವನ್ನು ಮತ್ತು ಒಂದು ವರ್ಷದ ಕಾಲದ ಅಜ್ಞಾತವಾಸವನ್ನು ಮಾಡಬೇಕೆಂದು ಇದೊಂದೇ ನಮ್ಮ ಪಣವಾಗಿದ್ದಿತು.

ಏಷಾಂ ನ ತಾವನ್ನಿರ್ವೃತ್ತೋ ವತ್ಸರಸ್ತು ತ್ರಯೋದಶಃ ।
ಅಜ್ಞಾತವಾಸೇ ಬೀಭತ್ಸುರಥಾಸ್ಮಾಭಿಃ ಪರಿಶ್ರುತಃ ॥೪॥

ಈ ಪಾಂಡವರಿಗೆ ಹದಿಮೂರನೆಯ ವರ್ಷವು ಇನ್ನೂ ಕಳೆದಿಲ್ಲ. ಅಜ್ಞಾತವಾಸದ ಸಮಯದಲ್ಲಿಯೇ ಅರ್ಜುನನನ್ನು ನಾವು ನೋಡಿದ್ದೇವೆ.

ಅನಿರ್ವೃತ್ತೇ ತು ನಿರ್ವಾಸೇ ಯದಿ ಬೀಭತ್ಸುರಾಗತಃ ।
ಪುನರ್ದ್ವಾದಶವರ್ಷಾಣಿ ವನೇ ವತ್ಸ್ಯಂತಿ ಪಾಂಡವಾಃ ॥೫॥

ಅಜ್ಞಾತವಾಸವು ಮುಗಿಯುವುದಕ್ಕೆ ಮೊದಲೇ ಅರ್ಜುನನು ಬಂದರೆ ಪಾಂಡವರು ಪುನಃ ಹನ್ನೆರಡು ವರ್ಷಗಳ ಕಾಲ ವನವಾಸವನ್ನು ಮಾಡಬೇಕಾಗುವುದು.

ಲೋಭಾದ್ ವಾ ತೇ ನ ಜಾನೀಯುರಸ್ಮಾನ್ ವಾ ಮೋಹ ಆವಿಶತ್ ।
ಹೀನಾತಿರಿಕ್ತಮೇತೇಷಾಂ ಭೀಷ್ಮೋ ವೇದಿತುಮರ್ಹತಿ ॥೬॥

ಒಂದು ಪಕ್ಷ ರಾಜ್ಯದ ಮೇಲಿನ ಲೋಭದಿಂದ ಅವರಿಗೆ ಇದು ತಿಳಿಯದಿದ್ದರೆ ಅಥವಾ ನಮಗಾದರೂ ಮೋಹವುಂಟಾದರೆ ಅಜ್ಞಾತವಾಸದ ಸಮಯವು ನ್ಯೂನವಾಗಿದೆಯೇ ಅಥವಾ ಕಳೆದಿದೆಯೇ ಎಂದು ಭೀಷ್ಮರು ತಿಳಿದಿರುತ್ತಾರೆ.

ಅರ್ಥಾನಾಂ ಹಿ ಪುನರ್ದ್ವೈಧೇ ನಿತ್ಯಂ ಭವತಿ ಸಂಶಯಃ ।
ಅನ್ಯಥಾ ಚಿಂತಿತೋ ಹ್ಯರ್ಥಃ ಪುನರ್ಭವತಿ ಚಾನ್ಯಥಾ ॥೭॥

ಒಂದು ವಿಷಯವು ಎರಡು ರೀತಿಯಲ್ಲಿ ಪರ್ಯವಸಾನವನ್ನು ಹೊಂದಬಹುದಾದಾಗ ಯಾವಾಗಲೂ ಸಂಶಯವುಂಟಾಗುತ್ತದೆ. ಒಂದು ರೀತಿಯಲ್ಲಿ ಚಿಂತಿಸಿದ ಅರ್ಥವು ಇನ್ನೊಂದು ರೀತಿಯಾಗುತ್ತದೆ.

ಉತ್ತರಂ ಮಾರ್ಗಮಾಣಾನಾಂ ಮತ್ಸ್ಯಸೇನಾಂ ಯುಯುತ್ಸತಾಮ್ ।
ಯದಿ ಬೀಭತ್ಸುರಾಯಾತಃ ಕಿಂ ನಃ ಕೃತ್ಯಮತಃ ಪರಮ್ ॥೮॥

ಉತ್ತರಕುಮಾರನನ್ನು ಹುಡುಕುತ್ತಾ ಮತ್ಸ್ಯರ ಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡಲು ಇಚ್ಛಿಸುವ ನಮಗೆ ಒಂದು ಪಕ್ಷ ಅರ್ಜುನನು ಎದುರಿಗೆ ಬಂದರೆ ಅದಕ್ಕಿಂತ ದೊಡ್ಡ ಪ್ರಯೋಜನವು ಯಾವುದು?

ತ್ರಿಗರ್ತಾನಾಮಿದಂ ಕಾರ್ಯಂ ಪಾಂಡವಾನಾಂ ಚ ಮಾರ್ಗಣಮ್ ।
ವಿಪ್ರಕಾರೈರ್ಹಿ ಮಾತ್ಸ್ಯೇನ ಸುಶರ್ಮಾ ಬಾಧಿತಃ ಪುರಾ ॥೯॥

ಪಾಂಡವರ ಈ ಅನ್ವೇಷಣೆಯನ್ನು ತ್ರಿಗರ್ತರೂ ಮಾಡಬೇಕಾಗಿದೆ. ಏಕೆಂದರೆ ಮತ್ಸ್ಯರಾಜನಾದ ವಿರಾಟನು ಅನೇಕ ಕಪಟಗಳನ್ನು ಮಾಡಿ ಹಿಂದೆ ಸುಶರ್ಮನನ್ನು ಬಾಧಿಸಿದ್ದಾನೆ.

ತೇಷಾಂ ಭಯಾಭಿಪನ್ನಾನಾಂ ತ್ರಸ್ತಾನಾಂ ತ್ರಾಣಮಿಚ್ಛತಾಮ್ ।
ಅಭಯಂ ಯಾಚಮಾನಾನಾಂ ತದಾऽಸ್ಮಾಭಿಃ ಪರಿಶ್ರುತಮ್ ॥೧೦॥

ಭಯಗ್ರಸ್ತರಾಗಿ ನಮ್ಮಿಂದ ರಕ್ಷಣೆಯನ್ನು ಬಯಸಿ ಅಭಯವನ್ನು ಬೇಡುವ ತ್ರಿಗರ್ತರಿಗೆ ನಾವು ರಕ್ಷಣೆಯನ್ನೂ ವಾಗ್ದಾನವನ್ನು ಮಾಡಿದ್ದೇವೆ.

ಪ್ರಥಮಂ ತೈರ್ಗ್ರಹೀತವ್ಯಂ ಮತ್ಸ್ಯಾನಾಂ ಗೋಧನಂ ಮಹತ್ ।
ಅಷ್ಟಮ್ಯಾಂ ಚಾಪರಾಹ್ಣೇ ತು ಇತಿ ನಸ್ತೈಃ ಸಮಾಹಿತಮ್ ॥೧೧॥

ಮೊದಲು ಅವರು ಮತ್ಸ್ಯರ ದೊಡ್ಡ ಗೋಧನವನ್ನು ಅಷ್ಟಮಿಯ ಮಧ್ಯಾಹ್ನದಲ್ಲಿ ಹಿಡಿಯಬೇಕೆಂದು ನಾವು ಅವರ ಜೊತೆಯಲ್ಲಿ ಒಪ್ಪಂದಕ್ಕೆ ಬಂದಿದ್ದೇವೆ.

ನವಮ್ಯಾಂ ಪುನರಸ್ಮಾಭಿಃ ಸೂರ್ಯಸ್ಯೋದಯನಂ ಪ್ರತಿ ।
ಇಮಾ ಗಾವೋ ಗೃಹೀತವ್ಯಾ ಯಾತೇ ಮಾತ್ಸ್ಯೇ ಗವಾಂ ಪದಮ್ ॥

ಪುನಃ ನವಮಿಯ ಪ್ರಾತಃಕಾಲದಲ್ಲಿ ಸೂರ್ಯೋದಯದ ಸಮಯದಲ್ಲಿ ವಿರಾಟನು ತ್ರಿಗರ್ತರ ಜೊತೆಯಲ್ಲಿ ಯುದ್ಧವನ್ನು ಮಾಡಲು ಹೋಗಿರುವಾಗ ನಾವು ಈ ಗೋವುಗಳನ್ನು ಹಿಡಿಯಬೇಕು.

ಇತ್ಯೇಷ ನಿಶ್ಚಯೋಽಸ್ಮಾಕಂ ಮಂತ್ರೋಽಭೂನ್ನಾಗಸಾಹ್ವಯೇ ।
ಪಾಂಡವಾನಾಂ ಪರಿಜ್ಞಾನೇ ಸರ್ವೇಷಾಂ ನಃ ಪರಸ್ಪರಮ್ ॥೧೩॥

ಪಾಂಡವರನ್ನು ಗುರುತಿಸುವ ವಿಷಯದಲ್ಲಿ ನಾವೆಲ್ಲರೂ ಪರಸ್ಪರವಾಗಿ ಮಂತ್ರಾಲೋಚನೆಯನ್ನು ಮಾಡಿ ಹಸ್ತಿನಪುರದಲ್ಲಿ ಹೀಗೆ ನಿಶ್ಚಯಿಸಿದ್ದೆವು.

ತೇ ವಾ ಗಾವ ನಯಿಷ್ಯಂತಿ ಯದಿ ವಾ ಸ್ಯುಃ ಪರಾಜಿತಾಃ ।
ಅಸ್ಮಾನ್ ವಾಽಪ್ಯತಿಸಂಧಾಯ ಕುರ್ಯುರ್ಮಾತ್ಸ್ಯೇನ ಸಂಗಮಮ್ ॥

ಪಾಂಡವರಾದರೂ ಗೋವುಗಳನ್ನು ತೆಗೆದುಕೊಂಡು ಹೋಗುತ್ತಾರೆ ಅಥವಾ ಅವರು ಪರಾಜಿತರಾದರೆ ನಮ್ಮನ್ನು ಬಿಟ್ಟು ಅವರು ವಿರಾಟನ ಜೊತೆಯಲ್ಲಿ ಸಮಾಗಮವನ್ನು ಹೊಂದುತ್ತಾರೆ.

ಅಥವಾ ತಾನುಪಾದಾಯ ಮಾತ್ಸ್ಯೋ ಜಾನಪದೈಃ ಸಹ ।
ಸರ್ವಥಾ ಸೇನಯಾ ಸಾರ್ಧಮಸ್ಮಾನೇವ ಯುಯುತ್ಸತಿ ॥೧೫॥

ಅಥವಾ ವಿರಾಟನೇ ಅವರನ್ನು ಮತ್ತು ತನ್ನ ಸೈನ್ಯವನ್ನು ತೆಗೆದುಕೊಂಡು ನಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಬರುತ್ತಾನೆ (ಎಂದು ನಿಶ್ಚಯ ಮಾಡಿದ್ದೇವೆ).

ತೇಷಾಮೇಕೋ ಮಹಾವೀರ್ಯಃ ಕಶ್ಚಿದೇವ ಪುರಸ್ಸರಃ ।
ಅಸ್ಮಾನ್ ಜೇತುಮಿಹಾಯಾತೋ ಮಾತ್ಸ್ಯೋ ವಾऽಪಿ ಸ್ವಯಂ ಭವೇತ್

ಅವರಲ್ಲಿ ಮಹಾಪರಾಕ್ರಮಿಯಾದ ಒಬ್ಬನು ನಮ್ಮನ್ನು ಜಯಿಸಲು ಮುಂದೆ ಬರುತ್ತಿದ್ದಾನೆ. ಅಥವಾ ಇವನು ಸ್ವಯಂ ವಿರಾಟನೇ ಇರಬಹುದು.

ಯದ್ಯೇಷ ರಾಜಾ ಮತ್ಸ್ಯಾನಾಂ ಯದಿ ಬೀಭತ್ಸುರಾಗತಃ ।
ಸರ್ವೈರ್ಯೋದ್ಧವ್ಯಮಸ್ಮಾಭಿರಿತಿ ನಃ ಸಮಯಃ ಕೃತಃ ॥೧೭॥

ಇವನು ಮತ್ಸ್ಯರಾಜನಾಗಲಿ ಅಥವಾ ಅರ್ಜುನನಾಗಲಿ ನಾವೆಲ್ಲರೂ ಒಟ್ಟಿಗೆ ಯುದ್ಧವನ್ನು ಮಾಡಬೇಕೆಂದು ನಿಶ್ಚಯವನ್ನು ಮಾಡಿದ್ದೆವು.

ಅಥ ಕಸ್ಮಾತ್ ಸ್ಥಿತಾ ಹ್ಯೇತೇ ರಥೇಷು ರಥಿಸತ್ತಮಾಃ ।
ಭೀಷ್ಮೋ ದ್ರೋಣಃ ಕೃಪಃ ಕರ್ಣೋ ವಿಕರ್ಣೋ ದ್ರೌಣಿರೇವ ಚ ॥

ಹೀಗಿರುವಾಗ ಭೀಷ್ಮ, ದ್ರೋಣ, ಕೃಪ, ಕರ್ಣ, ವಿಕರ್ಣ, ಅಶ್ವತ್ಥಾಮ ಈ ರಥಿಶ್ರೇಷ್ಠರೆಲ್ಲರೂ ತಮ್ಮ ರಥಗಳಲ್ಲಿ ಏಕೆ ಸುಮ್ಮನೆ ಕುಳಿತಿದ್ದಾರೆ?

ಸಂಭ್ರಾಂತಮನಸಃ ಸರ್ವೇ ಪ್ರಾಪ್ತೇ ಹ್ಯಸ್ಮಿನ್ ಧನಂಜಯೇ ।
ನಾನ್ಯತ್ರ ಯುದ್ಧಾತ್ ಶ್ರೇಯೋऽಸ್ತಿ ತಥಾऽऽತ್ಮಾ ಪ್ರಣಿಧೀಯತಾಮ್॥

ಈ ಅರ್ಜುನನು ಪ್ರಾಪ್ತನಾದಾಗ ಎಲ್ಲರ ಮನಸ್ಸೂ ಸಂಭ್ರಾಂತವಾಗಿದೆ. ಯುದ್ಧವನ್ನು ಬಿಟ್ಟು ಬೇರೆ ಶ್ರೇಯೋಮಾರ್ಗವಿಲ್ಲ ಎಂದು ಎಲ್ಲರೂ ಮನಸ್ಸಿನಲ್ಲಿ ಗಟ್ಟಿಮಾಡಿಕೊಳ್ಳಿ.

ದುರ್ಯೋಧನವಚಃ ಶ್ರುತ್ವಾ ರಾಧೇಯಸ್ತ್ವಬ್ರವೀದ್ ವಚಃ ॥೨೦॥

ಸರ್ವಲೋಕೇನ ವಾ ಯುದ್ಧಂ ದೇವೈರ್ವಾऽಸ್ತು ಸವಾಸವೈಃ ।
ಅನಾಚ್ಛಿನ್ನೇ ಪುನರ್ದ್ಯೂತೇ ಕೋ ಹಸ್ತಿನಪುರಂ ವ್ರಜೇತ್ ॥೨೧॥

ದುರ್ಯೋಧನನ ಮಾತುಗಳನ್ನು ಕೇಳಿ ಕರ್ಣನು ಮಾತನಾಡಿದನು– ಸರ್ವಲೋಕದ ಜೊತೆ ಯುದ್ಧವಾಗಲಿ, ಅಥವಾ ಇಂದ್ರನಿಂದ ಕೂಡಿದ

ದೇವತೆಗಳಿಂದಲೇ ಯುದ್ಧವಾಗಲಿ, ಗೋಧನವನ್ನು ಅಪಹರಿಸದೆ ಹಸ್ತಿನಪುರಕ್ಕೆ ಯಾರು ಹೋಗುತ್ತಾರೆ?

ಶರೈರಪಿ ಪ್ರಣುನ್ನಾನಾಂ ಭಗ್ನಾನಾಂ ಗಹನೇ ವನೇ ।
ಕೋ ಹಿ ಜೀವೇತ್ ಪದಾತೀನಾಂ ಭವೇದಶ್ವೇಷು ಸಂಶಯಃ ॥೨೨॥

ನನ್ನ ಬಾಣಗಳಿಂದ ಪೀಡಿತರಾಗಿ ದಟ್ಟವಾದ ಕಾಡಿನಲ್ಲಿ ಚದುರಿಹೋಗುವ ಪದಾತಿಗಳಲ್ಲಿ ಯಾವನು ಉಳಿಯುತ್ತಾನೆ? ಅಶ್ವಗಳ ವಿಷಯದಲ್ಲಿ ಸಂಶಯವಿರಬಹುದು.

ಆಚಾರ್ಯಂ ಪೃಷ್ಠತಃ ಕೃತ್ವಾ ತಥಾ ನೀತಿರ್ವಿಧೀಯತಾಮ್ ।
ಜಾನಾಮಿ ವಿಜಿತಂ ತೇಷಾಮತಸ್ತ್ರಸಯತೀವ ನಃ ॥೨೩॥

ದ್ರೋಣರ ಮಾತುಗಳನ್ನು ತಿರಸ್ಕರಿಸಿ ಯುದ್ಧದ ನೀತಿಯನ್ನು ರೂಪಿಸುವವರಾಗಿ. ನಾನು ಭೀಷ್ಮಾದಿಗಳ ವಿಜಯವನ್ನು ತಿಳಿದಿದ್ದೇನೆ. ಆದ್ದರಿಂದ ದ್ರೋಣರು ನಮ್ಮನ್ನು ಹೆದರಿಸುತ್ತಿದ್ದಾರೆ.

ಅರ್ಜುನೇ ಚಾಪಿ ಸಂಪ್ರೀತಿಮಧಿಕಾಮುಪಲಕ್ಷಯೇ ।
ತಥಾ ದೃಷ್ಟ್ವಾ ಹಿ ಬೀಭತ್ಸುಮುಪಾಯಾಂತಂ ಪ್ರಶಂಸತಿ ॥೨೪॥
ಯಥಾ ಸೇನಾ ನ ಭಜ್ಯೇತ ತಥಾ ನೀತಿರ್ವಿಧೀಯತಾಮ್ ॥೨೫॥

ಆಚಾರ್ಯರಿಗೆ ಅರ್ಜುನನಲ್ಲಿ ಬಹಳ ಪ್ರೀತಿ ಇದೆ ಎಂದು ನಾನು ಗಮನಿಸುತ್ತಿದ್ದೇನೆ. ಆದ್ದರಿಂದ ಯುದ್ಧಕ್ಕೆ ಬರುವ ಅರ್ಜುನನನ್ನು ಅವರು ಪ್ರಶಂಸೆ ಮಾಡುತ್ತಿದ್ದಾರೆ. ನಮ್ಮ ಸೈನ್ಯವು ಭಗ್ನವಾಗದಂತೆ ನೀತಿಯನ್ನು ರೂಪಿಸಿ.

ಅಶ್ವಾನಾಂ ಹೇಷಿತಂ ಶ್ರುತ್ವಾ ಕಾ ಪ್ರಶಂಸಾ ಭವೇತ್ ಪರೇ ।
ಸ್ಥಾನೇ ವಾऽಪಿ ವ್ರಜಂತೋ ವಾ ಸದಾ ಹೇಷಂತಿ ವಾಜಿನಃ ॥೨೬॥

ಕುದುರೆಗಳು ಕೆನೆಯುವ ಶಬ್ದಗಳನ್ನು ಕೇಳಿ ಯಾವನು ಶತ್ರುವನ್ನು ಪ್ರಶಂಸಿಸುತ್ತಾನೆ? ಕುದುರೆಗಳು ನಿಂತಿರುವಾಗಲೂ ಅಥವಾ ನಡೆಯುವಾಗಲೂ ಯಾವಾಗಲೂ ಕೆನೆಯುತ್ತವೆ.

ಸದಾ ಚ ವಾಯವೋ ಯಾಂತಿ ನಿತ್ಯಂ ವರ್ಷತಿ ವಾಸವಃ ।
ಸ್ತನಯಿತ್ನೋಶ್ಚ ನಿಘೋರ್ಷಃ ಶ್ರೂಯತೇ ಬಹುಶಸ್ತಥಾ ॥೨೭॥

ವಾಯುವು ಸದಾ ಬೀಸುತ್ತದೆ. ಇಂದ್ರನು ಯಾವಾಗಲೂ ಮಳೆಯನ್ನು ಸುರಿಸುತ್ತಾನೆ. ಹಾಗೆಯೇ ಗುಡುಗುಗಳ ಆರ್ಭಟವು ಅನೇಕಬಾರಿ ಕೇಳಿಬರುತ್ತದೆ.

ಭೀಷಯನ್ ಪಾಂಡವೇಯೇಭ್ಯೋ ಭವಾನ್ ಸರ್ವಾನಿಮಾನ್ ಜನಾನ್ ।
ಪ್ರಮುಖೇ ಸರ್ವಸೈನ್ಯಾನಾಮಬದ್ಧಂ ಬಹು ಭಾಷತೇ ॥೨೮॥

ಎಲೈ ದ್ರೋಣರೇ, ನೀವು ನಮ್ಮ ಸೈನ್ಯದ ಎದುರಿನಲ್ಲಿ ನಿಂತು ಈ ಎಲ್ಲಾ ಯೋಧರನ್ನೂ ಪಾಂಡವರ ನಿಮಿತ್ತದಿಂದಾಗಿ ಹೆದರಿಸಿ ಅಬದ್ಧವಾಗಿ ಬಹಳ ಮಾತನಾಡುತ್ತಿದ್ದೀರಿ.

ಯಥೈವಾಶ್ವಾನ್ ಮಾರ್ಗಮಾಣಾಸ್ತಾನೇವಾಭಿಪರೀಪ್ಸವಃ ।
ಹೇಷಿತಾನ್ಯೇವ ಶೃಣ್ವಂತಿ ಸ್ಯಾದಿದಂ ಭವತಸ್ತಥಾ ॥೨೯॥

ಅಶ್ವಗಳನ್ನು ಕರೆದುಕೊಂಡು ಹೋಗಲು ಬಯಸಿ ಅವುಗಳನ್ನು ಹುಡುಕುವವರು ಹೇಗೆ ಅವುಗಳ ಕೆನೆಯುವ ಶಬ್ದವನ್ನೇ ಅರಸುತ್ತಾರೋ ಅದರಂತೆ ನಿಮ್ಮ ಪ್ರವೃತ್ತಿಯಾಗಿದೆ.

ಕಿಮತ್ರ ಕಾರ್ಯಂ ಪಾರ್ಥಸ್ಯ ಕಥಂ ವಾ ಸಂಪ್ರಶಸ್ಯತೇ ।
ಅನ್ಯತ್ರ ಕಾಮಾದ್ ದ್ವೇಷಾದ್ವಾ ರೋಷಾದ್ವಾಽಸ್ಮಾಸು ಕೇವಲಮ್ ॥

ಇದರಲ್ಲಿ ಅರ್ಜುನನ ಕಾರ್ಯವು ಎಲ್ಲಿದೆ? ಅರ್ಜುನನ ಮೇಲಿನ ಪ್ರೀತಿಯನ್ನು ಬಿಟ್ಟು ಅಥವಾ ನಮ್ಮ ಮೇಲಿನ ದ್ವೇಷರೋಷಗಳನ್ನು ಬಿಟ್ಟು ಅರ್ಜುನನನ್ನು ಹೊಗಳುವುದಕ್ಕೆ ಏನು ಕಾರಣವಿದೆ?

ಆಚಾರ್ಯಾ ವೈ ಕಾರುಣಿಕಾಃ ಪ್ರಾಜ್ಞಾಶ್ಚಾಪಾಯದರ್ಶಿನಃ ।
ನೈತೇ ಮಹಾಹವೇ ಘೋರೇ ಸಂಪ್ರಷ್ಟವ್ಯಾಃ ಕಥಂಚನ ॥೩೧॥

ಆಚಾರ್ಯರು ಕರುಣಾಪೂರ್ಣರು, ಪ್ರಾಜ್ಞರು ಮತ್ತು ಮುಂದೆ ಒದಗುವ ಅಪಾಯವನ್ನು ಗಮನಿಸುವವರು. ಘೋರವಾದ ಯುದ್ಧವು ಒದಗಿದಾಗ ಎಂದೂ ಅವರ ಸಲಹೆಯನ್ನು ಕೇಳಬಾರದು.

ಪ್ರಾಸಾದೇಷು ವಿಚಿತ್ರೇಷು ಗೋಷ್ಠೀಪಾನಾಶನೇಷು ಚ ।
ಕಥಾ ವಿಚಿತ್ರಾಃ ಕುರ್ವಾಣಾಃ ಪಂಡಿತಾಸ್ತತ್ರ ಶೋಭನಾಃ ॥೩೨॥

ವಿಚಿತ್ರವಾದ ಉಪ್ಪರಿಗೆಗಳಲ್ಲಿ, ಅನ್ನಪಾನದ ಗೋಷ್ಠಿಗಳಲ್ಲಿ, ವಿಚಿತ್ರವಾಗಿ ಮಾತನಾಡುವ ಪಂಡಿತರು ಅಲ್ಲಿ ಶೋಭಿಸುತ್ತಾರೆ.

ಬಹೂನ್ಯಾಶ್ಚರ್ಯರೂಪಾಣಿ ಕುರ್ವತೇ ಜನಸಂಸದಿ ।
ಇಷ್ವಾಸ್ತೇ ಚಾಪಸಂಧಾನೇ ಪಂಡಿತಾಸ್ತತ್ರ ಶೋಭನಾಃ ॥೩೩॥

ಜನರ ಎದುರಿನಲ್ಲಿ ಆಶ್ಚರ್ಯಕರವಾದ ಅನೇಕ ಕಾರ್ಯಗಳನ್ನು ಮಾಡುತ್ತಾರೆ. ಅಂತಹ ಪಂಡಿತರು ಧನುರ್ವಿದ್ಯಾಭ್ಯಾಸಕಾಲದಲ್ಲಿ ಮಾತ್ರ ಶೋಭಿಸುವವರು (ಯುದ್ಧಕಾಲದಲ್ಲಲ್ಲ).

ಪರೇಷಾಂ ವಿವರಜ್ಞಾನೇ ಮನುಷ್ಯಾಚರಿತೇಷು ಚ ।
ಅನ್ನಸಂಸ್ಕಾರದೋಷೇ ಚ ಪಂಡಿತಾಸ್ತತ್ರ ಶೋಭನಾಃ ॥೩೪॥

ಇನ್ನೊಬ್ಬರ ದೋಷಗಳನ್ನು ಹುಡುಕುವುದರಲ್ಲಿ, ಮನುಷ್ಯ ನಡತೆಗಳನ್ನು ಪರೀಕ್ಷಿಸುವಲ್ಲಿ, ಮತ್ತು ಪಾಕದ ಗುಣದೋಷಗಳನ್ನೂ ಹೇಳುವ ವಿಷಯದಲ್ಲಿ ಮಾತ್ರ ಪಂಡಿತರು ಶೋಭಿಸುತ್ತಾರೆ.

ಪಂಡಿತಾನ್ ಪೃಷ್ಠತಃ ಕೃತ್ವಾ ಪರೇಷಾಂ ಗುಣವಾದಿನಃ ।
ವಿಧೀಯತಾಂ ತಥಾ ನೀತಿರ್ಯಥಾ ವಧ್ಯೇತ ವೈ ಪರಃ ॥೩೫॥

ಶತ್ರುಗಳ ಗುಣವನ್ನು ಪ್ರಶಂಸಿಸುವ ಪಂಡಿತರನ್ನು ಹಿಂದೆ ಹಾಕಿ ಶತ್ರುವು ನಾಶವನ್ನು ಹೊಂದುವಂತೆ ನೀತಿಯನ್ನು ಮಾಡುವವರಾಗಿ.

ಗಾಶ್ಚೈತಾಃ ಪ್ರತಿರಕ್ಷಂತು ಸೇನಾಂ ವ್ಯೂಹಂತು ಮಾ ಚಿರಮ್ ।
ಸಂರಕ್ಷಾಶ್ಚ ವಿಧೀಯಂತಾಂ ಯತ್ರ ಯೋತ್ಸ್ಯಾಮಹೇ ಪರೈಃ ॥೩೬॥

ತ(ಯ)ಥಾऽಸ್ಮಾಕಂ ಜಯೋ ವೀರ ಚಿಂತನೀಯಸ್ತಥಾ ತ್ವಯಾ ॥

ಈ ಗೋವುಗಳನ್ನು ರಕ್ಷಿಸಿ ಶೀಘ್ರವಾಗಿ ಸೈನ್ಯವನ್ನು ವ್ಯೂಹವನ್ನಾಗಿ ಮಾಡಿ. ನಾವು ಶತ್ರುಗಳ ಜೊತೆಯಲ್ಲಿ ಯುದ್ಧಮಾಡುವ ಕಡೆಯಲ್ಲಿ ಒಳ್ಳೆಯ ರಕ್ಷಣೆಯನ್ನು

ಮಾಡುವವರಾಗಿ. ಎಲೈ ವೀರನಾದ ದುರ್ಯೋಧನನೇ, ನಮ್ಮ ಜಯವನ್ನು ಚಿಂತಿಸಿ ಅದರಂತೆ ನೀನು ಎಲ್ಲವನ್ನೂ ಮಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಷಟ್‌ಚತ್ವಾರಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತೇಳನೆಯ ಅಧ್ಯಾಯ

ಕರ್ಣನ ಆತ್ಮಶ್ಲಾಘನೆ ಮತ್ತು ಅರ್ಜುನನನ್ನು ಕೊಲ್ಲುವ ಮಿಥ್ಯಾಪ್ರತಿಜ್ಞೆ

ಕರ್ಣಃ

ಸರ್ವಾನಾಯುಷ್ಮತೋ ಭೀತಾನ್ ಸಂತ್ರಸ್ತಾನಿವ ಲಕ್ಷಯೇ ।
ಅಯುದ್ಧಮನಸಶ್ಚೈವ ಸರ್ವಾನೇತಾನವಸ್ಥಿತಾನ್ ॥೧॥

ಕರ್ಣ– ಆಯುಷ್ಮಂತರಾದ ನೀವೆಲ್ಲರೂ ಭೀತರೂ ಸಂತ್ರಸ್ತರೂ ಆಗಿರುವುದನ್ನು ಗಮನಿಸುತ್ತಿದ್ದೇನೆ. ಎಲ್ಲರೂ ಯುದ್ಧ ಮಾಡಲು ಮನಸ್ಸಿಲ್ಲದೆ ಕುಳಿತಿದ್ದೀರಿ.

ಯದ್ಯೇಷ ಜಾಮದಗ್ನ್ಯೋ ವಾ ಯದಿ ವೇಂದ್ರಃ ಪುರಂದರಃ ।
ವಾಸುದೇವನ ಸಹಿತೋ ಯದಿ ಬೀಭತ್ಸುರಾಗತಃ ॥೨॥

ಅಹಮೇನಂ ನಿರೋತ್ಸ್ಯಾಮಿ ವೇಲೇವ ವರುಣಾಲಯಮ್ ॥೩॥

ಇವನು ಪರಶುರಾಮನೇ ಆಗಲಿ ಅಥವಾ ಪುರಂದರನಾದ ಇಂದ್ರನೇ ಆಗಲಿ ಅಥವಾ ಕೃಷ್ಣನಿಂದ ಸಹಿತನಾದ ಅರ್ಜುನನೇ ಆಗಲಿ, ತೀರವು ಸಮುದ್ರವನ್ನು ತಡೆದಂತೆ ನಾನು ಇವನನ್ನು ತಡೆಯುವೆನು.

ರುಗ್ಮಪುಂಖಾಃ ಪ್ರಸನ್ನಾಗ್ರಾ ಮುಕ್ತಾ ಹಸ್ತವತಾ ಮಯಾ ।
ಛಾದಯಂತು ಶರಾಃ ಸೂರ್ಯಂ ಪಾರ್ಥಸ್ಯಾಯುರ್ನಿರೋಧಕಾಃ ॥೪॥

ಪ್ರಶಸ್ತವಾದ ಹಸ್ತವುಳ್ಳ ನಾನು ಪ್ರಯೋಗಿಸುವ ಸುವರ್ಣಮಯವಾದ ಪುಂಖವನ್ನು ಹೊಂದಿರುವ, ಒಳ್ಳೆಯ ಅಗ್ರಭಾಗವನ್ನು ಹೊಂದಿರುವ ಅರ್ಜುನನ ಆಯುಃಕ್ಷಯಕಾರಕವಾದ ಬಾಣಗಳು ಸೂರ್ಯನನ್ನು ಮುಚ್ಚಲಿ.

ಮಮ ಚಾಪಪ್ರಯುಕ್ತಾನಾಂ ಶರಾಣಾಂ ನತಪರ್ವಣಾಮ್ ।
ನಿರ್ಮತಿರ್ಗಚ್ಛತಾಂ ನಾಸ್ತಿ ಸರ್ಪಾಣಾಂ ಶ್ವಸತಾಮಿವ ॥೫॥

ನನ್ನ ಬಿಲ್ಲಿನಿಂದ ಹೊರಹೊಮ್ಮಿದ ಬಾಗಿದ ತುದಿಯುಳ್ಳ ಬಾಣಗಳಿಗೆ ಭುಸುಗುಟ್ಟುವ ಸರ್ಪಗಳಂತೆ ಉದ್ದೇಶವನ್ನು ಸಾಧಿಸದೆ ಸಮಾಧಾನವೇ ಇರುವುದಿಲ್ಲ.

ಶರಾಣಾಂ ಪುಂಖಸಕ್ತಾನಾಂ ಮೌರ್ವ್ಯಾSಭಿಹತಯೋರ್ಭೃಶಮ್ ।
ಶ್ರೂಯತೇ ತಳಯೋಃ ಶಬ್ದೋ ಭೇರ್ಯೋರಾಹತಯೋರಿವ ॥೬॥

ಹೆದೆಯಿಂದ ಚಿಮ್ಮಿದ ಪುಂಖಗಳಿಂದ ಕೂಡಿದ ಬಾಣದ ಮತ್ತು ಹಸ್ತತಳಗಳ ಶಬ್ದವು ಹೊಡೆಯುವ ನಗಾರಿಯ ಶಬ್ದದಂತೆ ಕೇಳಿಬರುತ್ತದೆ.

ಏಕೋ ದ್ವೌ ಚತುರಃ ಪಂಚ ಕ್ವಚಿತ್ ಷಷ್ಟಿಂ ಕ್ವಚಿಚ್ಛತಮ್ ।
ಹತಾನ್ ಪಶ್ಯತ ಮಾತಂಗಾನ್ ಕೀರ್ಣಾನೇಕೇಷುಣಾ ಮಯಾ ॥೭॥

ನಾನು ಒಂದೇ ಬಾಣದಿಂದ ಒಂದು, ಎರಡು, ನಾಲ್ಕು, ಐದು, ಕೆಲವು ಸಲ ಅರವತ್ತು, ಕೆಲವು ಸಲ ನೂರು ಗಜಗಳನ್ನು ಹೊಡೆದು ರಣಭೂಮಿಯಲ್ಲಿ ಚೆಲ್ಲಾಡುವುದನ್ನು ನೋಡಿ.

ಮಯಾ ಪಶ್ಯತ ಮತ್ಸ್ಯಾನಾಮಿಷುಭಿರ್ನಿಹತಾನ್ ರಥಾನ್ ।
ಏಕಂ ದ್ವೌ ಚತುರಃ ಪಂಚ ಕ್ವಚಿತ್ ಷಷ್ಟಿಂ ಕ್ವಚಿಚ್ಛತಮ್ ॥೮॥

ನಾನು ಬಾಣಗಳಿಂದ ಹೊಡೆದು ಉರುಳಿಸುವ ಒಂದು, ಎರಡು, ನಾಲ್ಕು, ಐದು, ಕೆಲವೊಮ್ಮೆ ಅರವತ್ತು, ಕೆಲವೊಮ್ಮೆ ನೂರು ಮತ್ಸ್ಯರ ರಥಗಳನ್ನು ನೋಡಿ.

ಮದ್ಬಾಹುಮುಕ್ತೈರಿಷುಭಿಸ್ಸೈಲಧೌತೈಶ್ಚ ಪತ್ತ್ರಿಭಿಃ ।
ಖದ್ಯೋತೈರಿವ ಸಂಪೃಕ್ತಮಂತರಿಕ್ಷಂ ವಿರಾಜತಾಮ್ ॥೯॥

ನನ್ನ ಬಾಹುಗಳಿಂದ ಮುಕ್ತವಾದ ತೈಲದಲ್ಲಿ ಸಾಣೆಯನ್ನು ಹಿಡಿದ ಪತ್ರಗಳಿಂದ ಕೂಡಿದ ಬಾಣಗಳಿಂದ ಸಂಪರ್ಕವನ್ನು ಹೊಂದಿದ ಅಂತರಿಕ್ಷವು ಮಿಣುಕು ಹುಳಗಳಿಂದಲೋ ಎಂಬಂತೆ ವಿರಾಜಿಸಲಿ.

ಧ್ವಜಾಗ್ರಾದ್ ವಾನರಸ್ತಸ್ಯ ಭಲ್ಲೇನಾಪಹತೋ ಮಯಾ ।
ಅದ್ಯೈವ ಪತತಾಂ ಭೂಮೌ ವಿನದನ್ ಭೈರವಾನ್ ರವಾನ್ ॥೧೦॥

ನನ್ನಿಂದ ಭಲ್ಲದಿಂದ ಹೊಡೆಯಲ್ಪಟ್ಟ ಅವನ ಧ್ವಜದ ಅಗ್ರಭಾಗದಿಂದ ಕಪಿಯು ಭೈರವನಾದಗಳನ್ನು ಮಾಡುತ್ತಾ ಇಂದೇ ಭೂಮಿಯಲ್ಲಿ ಬೀಳಲಿ.

ಶತ್ರೋರ್ಮಯಾऽಭಿಪನ್ನಾನಾಂ ಭೂತಾನಾಂ ಧ್ವಜವಾಸಿನಾಮ್ ।
ದಿಶಃ ಪ್ರತಿಪ್ಲವಮಾನಾನಾಮಸ್ತು ಶಬ್ದೋ ದಿವಂ ಗತಃ ॥೧೧॥

ನನ್ನ ಆಕ್ರಮಣಕ್ಕೆ ಗುರಿಯಾದ ಶತ್ರುವಿನ ಧ್ವಜದಲ್ಲಿ ವಾಸಿಸುವ ದಿಕ್ಕು ದಿಕ್ಕುಗಳಿಗೆ ಓಡುವ ಭೂತಗಳ ಧ್ವನಿಯು ಆಕಾಶವನ್ನು ಮುಟ್ಟಲಿ.

ಕ್ರುದ್ಧೇನಾಸ್ತ್ರಂ ಮಯಾ ಮುಕ್ತಂ ನಿರ್ದಹೇತ್ ಪೃಥಿವೀಮಿಮಾಮ್ ।
ಸ್ಥಿತಂ ಸಂಗ್ರಾಮಶಿರಸಿ ಪಾರ್ಥಮೇಕಾಕಿನಂ ಕಿಮು ॥೧೨॥

ಕ್ರುದ್ಧನಾದ ನಾನು ಪ್ರಯೋಗಿಸಿದ ಅಸ್ತ್ರವು ಈ ಭೂಮಿಯನ್ನೇ ಸುಟ್ಟೀತು. ಇನ್ನು ರಣರಂಗದಲ್ಲಿರುವ ಏಕಾಕಿಯಾದ ಅರ್ಜುನನನ್ನು ಸುಡುವುದು ಯಾವ ದೊಡ್ಡ ವಿಷಯ?

ಸಮಾಹಿತಶ್ಚ ಬೀಭತ್ಸುರ್ವರ್ಷಾಣ್ಯಷ್ಟೌ ಚ ಪಂಚ ಚ ।
ಜಾತಸ್ನೇಹಶ್ಚ ಯುದ್ಧಸ್ಯ ಮಯಿ ಸಂದರ್ಶಯಿಷ್ಯತಿ ॥೧೩॥

ಹದಿಮೂರು ವರ್ಷಗಳ ಕಾಲ ಸಮಾಧಾನದಿಂದಿದ್ದ ಅರ್ಜುನನು ಯುದ್ಧದಲ್ಲಿ ಸ್ನೇಹವನ್ನು ಹೊಂದಿದವನಾಗಿ ನನಗೆ ತನ್ನ ಕೌಶಲವನ್ನು ತೋರಿಸುವನು.

ಪಾತ್ರೀಭೂತಸ್ತು ಕೌಂತೇಯೋ ಬ್ರಾಹ್ಮಣೋ ಗುಣವಾನಿವ ।
ಶರಮಾಲಾಂ ಪ್ರಗೃಹ್ಣಾತು ಮತ್‌ಪ್ರವೃಷ್ಟಾಂ ಸ್ವಧಾಮಿವ ॥೧೪॥

ಶ್ರಾದ್ಧಾನ್ನ ಭೋಜನಕ್ಕೆ ಗುಣವಂತನಾದ ಬ್ರಾಹ್ಮಣನು ಪಾತ್ರನಾದಂತೆ ಅರ್ಜುನನು ನನ್ನ ಶರಗಳ ಮಾಲೆಗಳಿಗೆ ಯೋಗ್ಯನಾದ ಅವನು ಶರಮಾಲೆಯನ್ನು ಸ್ವೀಕರಿಸಲಿ.

ಏಷ ಚಾಪಿ ಮಹೇಷ್ವಾಸಸ್ತ್ರಿಷು ಲೋಕೇಷು ವಿಶ್ರುತಃ ।
ಅಹಂ ಚಾಪಿ ಕುರುಶ್ರೇಷ್ಠಾದರ್ಜುನಾನ್ನವಮಃ ಕ್ವಚಿತ್ ॥೧೫॥

ಈ ಅರ್ಜುನನೂ ಸಹ ಮೂರುಲೋಕಗಳಲ್ಲಿಯೂ ಪ್ರಖ್ಯಾತನಾದ ಮಹಾಧನುರ್ಧಾರಿಯಾದವನು. ನಾನಾದರೂ ಕುರುಶ್ರೇಷ್ಠನಾದ ಅರ್ಜುನನಿಗಿಂತ ಯಾವ ರೀತಿಯಲ್ಲೂ ಕಡಿಮೆಯಲ್ಲ.

ಮಮ ಹಸ್ತಪ್ರಮುಕ್ತಾನಾಂ ಶರಾಣಾಂ ನತಪರ್ವಣಾಮ್ ॥೧೬॥

ತುಮುಲಃ ಶ್ರೂಯತೇ ಶಬ್ದಃ ಷಟ್‌ಪದಾಂ ಗಾಯತಾಮಿವ ।
ಇತಶ್ಚೇತಶ್ಚ ಮುಕ್ತಾನಾಂ ಶರಾಣಾಂ ನತಪರ್ವಣಾಮ್ ॥೧೭॥

ಅಂತರಾ ಸಂಪತದ್ಭಿಸ್ತು ಗೃಧ್ರಪಕ್ಷೈಃ ಶಿತೈಃ ಶರೈಃ ।
ಶಲಭಾನಾಮಿವಾಕಾಶೇ ಚ್ಛಾಯಾ ಸಂಪ್ರತಿ ದೃಶ್ಯತಾಮ್ ॥೧೮॥

ನನ್ನ ಹಸ್ತದಿಂದ ನಿರ್ಮುಕ್ತವಾದ ಬಾಗಿದ ತುದಿಯುಳ್ಳ ಬಾಣಗಳ ತೀವ್ರವಾದ ಶಬ್ದವು ಭೃಂಗಗಳ ಗಾನದಂತೆ ಕೇಳಿಬರುತ್ತದೆ. ನಾನು ಅಲ್ಲಲ್ಲಿ ಪ್ರಯೋಗಿಸುವ ಬಾಗಿದ ತುದಿಯುಳ್ಳ ಬಾಣಗಳ ಮತ್ತು ಮಧ್ಯದಲ್ಲಿ ಸಂಚರಿಸುವ ಗೃಧ್ರಪಕ್ಷಗಳನ್ನು ಹೊಂದಿದ ನಿಶಿತವಾದ ಬಾಣಗಳ ಛಾಯೆಯು ಆಕಾಶದಲ್ಲಿ ಹಾರುವ ಪತಂಗಗಳ ಛಾಯೆಯಂತೆ ಈ ದಿನ ಕಂಡುಬರಲಿ.

ಅದ್ಯ ಮತ್ಕರ್ಮುಕೋತ್ಸೃಷ್ಟಾಃ ಶರಾಃ ಪಾರ್ಥಸ್ಯ ಮರ್ಮಗಾಃ ।
ಶರೀರಮತಿಸರ್ಪಂತು ವಲ್ಮೀಕಮಿವ ಪನ್ನಗಾಃ ॥೧೯॥

ಈ ದಿನ ನನ್ನ ಬಿಲ್ಲಿನಿಂದ ಹೊರಹೊಮ್ಮಿದ ಬಾಣಗಳು ಅರ್ಜುನನ ಮರ್ಮಗಳನ್ನು ಭೇದಿಸಿ ಸರ್ಪಗಳು ಹುತ್ತವನ್ನು ಹತ್ತುವಂತೆ ಅವನ ಶರೀರವನ್ನು ಹತ್ತಲಿ.

ಬರ್ಹಿಬರ್ಹಿಣರಾಜಾನಾಂ ಬರ್ಹಿಣಾಂ ಬರ್ಹಿಣಾಮಿವ ।
ಪತತಾಂ ಪತತಾಂ ಘೋಷಃ ಪತತಾಂ ಪತತಾಮಿವ ॥೨೦॥

ಒಂದರ ಹಿಂದೆ ಒಂದು ಹೋಗುವ ನವಿಲುಗಳಂತೆ, ಒಂದರ ಹಿಂದೆ ಒಂದು ಹೋಗುವ ನವಿಲುಗರಿಯ ಪುಂಖವನ್ನು ಹೊಂದಿದ ನನ್ನ ಬಾಣಗಳ ಶಬ್ದವು, ಆಕಾಶದಲ್ಲಿ ಒಂದರ ಹಿಂದೆ ಒಂದರಂತೆ ಹೋಗುವ ಪಕ್ಷಿಗಳ ಮಾಲೆಯ ಶಬ್ದದಂತೆ ಎಲ್ಲರಿಂದಲೂ ಕೇಳಲ್ಪಡಲಿ.

ಅದ್ಯ ತ್ವಹಮೃಣಾನ್ಮೋಕ್ಷ್ಯೇ ಯನ್ಮಯಾ ತತ್ ಪ್ರತಿಶ್ರುತಮ್ ।
ಧಾರ್ತರಾಷ್ಟ್ರಸ್ಯ ತತ್ಕಾಲೇ ನಿಹತ್ಯ ಸಮರೇSರ್ಜುನಮ್ ॥೨೧॥

ಈ ದಿನ ಯುದ್ಧದಲ್ಲಿ ಅರ್ಜುನನನ್ನು ಕೊಂದು ನಾನು ಹಿಂದೆ ಆ ಕಾಲದಲ್ಲಿ ದುರ್ಯೋಧನನಿಗೆ ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿ ನನ್ನನ್ನು ಋಣಮುಕ್ತನನ್ನಾಗಿ ಮಾಡಿಕೊಳ್ಳುವೆನು.

ಇಂದ್ರಾಶನಿಸಮಸ್ಪರ್ಶಂ ಮಹೇಂದ್ರಸಮವಿಕ್ರಮಮ್ ।
ಅರ್ದಯಿಷ್ಯಾಮ್ಯಹಂ ಪಾರ್ಥಮುಲ್ಕಾಭಿರಿವ ಕುಂಜರಮ್ ॥೨೨॥

ಇಂದ್ರನ ವಜ್ರಾಯುಧಕ್ಕೆ ಸಮನಾದ ಸ್ಪರ್ಶವುಳ್ಳ, ಮಹೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಅರ್ಜುನನನ್ನು ಉಲ್ಕೆಗಳಿಂದ ಆನೆಯನ್ನು ಹಿಂಸಿಸಿದಂತೆ ನಾನು ಹಿಂಸಿಸುವೆನು.

ಶರಜಾಲಮಹಾಜ್ವಾಲಮಸಿಶಕ್ತಿಗದೇಂಧನಮ್ ।
ನಿರ್ದಹಂತಮನೀಕಾನಿ ಶಮಯಿಷ್ಯೇSರ್ಜುನಾನಲಮ್ ॥೨೩॥

ಬಾಣಸಮೂಹಗಳೆಂಬ ಮಹಾಜ್ವಾಲೆಗಳುಳ್ಳ ಖಡ್ಗ, ಶಕ್ತಿ ಮತ್ತು ಗದಾ ಎಂಬ ಇಂಧನಗಳುಳ್ಳ, ಶತ್ರುಸೈನ್ಯವನ್ನು ದಹಿಸುವ ಅರ್ಜುನನೆಂಬ ಅಗ್ನಿಯನ್ನು ನಾನು ಶಾಂತಗೊಳಿಸುವೆನು.

ಪಾಂಡವಾಗ್ನಿಮಹಂ ದೀಪ್ತಂ ಪ್ರದಹಂತಮಿವಾಹಿತಮ್ ।
ಅಶ್ವವೇಗಪುರೋವಾತೋ ರಥೌಘಸ್ತನಯಿತ್ನುಮಾನ್ ।
ಶರಧಾರೋ ಮಹಾಮೇಘಃ ಶಮಯಿಷ್ಯಾಮಿ ಪಾಂಡವಮ್ ॥೨೪॥

ಶ್ರಾದ್ಧಾನ್ನ ಭೋಜನಕ್ಕೆ ಗುಣವಂತನಾದ ಬ್ರಾಹ್ಮಣನು ಪಾತ್ರನಾದಂತೆ ಅರ್ಜುನನು ನನ್ನ ಶರಗಳ ಮಾಲೆಗಳಿಗೆ ಯೋಗ್ಯನಾದ ಅವನು ಶರಮಾಲೆಯನ್ನು ಸ್ವೀಕರಿಸಲಿ.

ಏಷ ಚಾಪಿ ಮಹೇಷ್ವಾಸಸ್ತ್ರಿಷು ಲೋಕೇಷು ವಿಶ್ರುತಃ ।
ಅಹಂ ಚಾಪಿ ಕುರುಶ್ರೇಷ್ಠಾದರ್ಜುನಾನ್ನವಮಃ ಕ್ವಚಿತ್ ॥೧೫॥

ಈ ಅರ್ಜುನನೂ ಸಹ ಮೂರುಲೋಕಗಳಲ್ಲಿಯೂ ಪ್ರಖ್ಯಾತನಾದ ಮಹಾಧನುರ್ಧಾರಿಯಾದವನು. ನಾನಾದರೂ ಕುರುಶ್ರೇಷ್ಠನಾದ ಅರ್ಜುನನಿಗಿಂತ ಯಾವ ರೀತಿಯಲ್ಲೂ ಕಡಿಮೆಯಲ್ಲ.

ಮಮ ಹಸ್ತಪ್ರಮುಕ್ತಾನಾಂ ಶರಾಣಾಂ ನತಪರ್ವಣಾಮ್ ॥೧೬॥

ತುಮುಲಃ ಶ್ರೂಯತೇ ಶಬ್ದಃ ಷಟ್‌ಪದಾಂ ಗಾಯತಾಮಿವ ।
ಇತಶ್ಚೇತಶ್ಚ ಮುಕ್ತಾನಾಂ ಶರಾಣಾಂ ನತಪರ್ವಣಾಮ್ ॥೧೭॥

ಅಂತರಾ ಸಂಪತದ್ಭಿಸ್ತು ಗೃಧ್ರಪಕ್ಷೈಃ ಶಿತೈಃ ಶರೈಃ ।
ಶಲಭಾನಾಮಿವಾಕಾಶೇ ಚ್ಛಾಯಾ ಸಂಪ್ರತಿ ದೃಶ್ಯತಾಮ್ ॥೧೮॥

ನನ್ನ ಹಸ್ತದಿಂದ ನಿರ್ಮುಕ್ತವಾದ ಬಾಗಿದ ತುದಿಯುಳ್ಳ ಬಾಣಗಳ ತೀವ್ರವಾದ ಶಬ್ದವು ಭೃಂಗಗಳ ಗಾನದಂತೆ ಕೇಳಿಬರುತ್ತದೆ. ನಾನು ಅಲ್ಲಲ್ಲಿ ಪ್ರಯೋಗಿಸುವ ಬಾಗಿದ ತುದಿಯುಳ್ಳ ಬಾಣಗಳ ಮತ್ತು ಮಧ್ಯದಲ್ಲಿ ಸಂಚರಿಸುವ ಗೃಧ್ರಪಕ್ಷಗಳನ್ನು ಹೊಂದಿದ ನಿಶಿತವಾದ ಬಾಣಗಳ ಛಾಯೆಯು ಆಕಾಶದಲ್ಲಿ ಹಾರುವ ಪತಂಗಗಳ ಛಾಯೆಯಂತೆ ಈ ದಿನ ಕಂಡುಬರಲಿ.

ಅದ್ಯ ಮತ್ಕರ್ಮುಕೋತ್ಸೃಷ್ಟಾಃ ಶರಾಃ ಪಾರ್ಥಸ್ಯ ಮರ್ಮಗಾಃ ।
ಶರೀರಮತಿಸರ್ಪಂತು ವಲ್ಮೀಕಮಿವ ಪನ್ನಗಾಃ ॥೧೯॥

ಈ ದಿನ ನನ್ನ ಬಿಲ್ಲಿನಿಂದ ಹೊರಹೊಮ್ಮಿದ ಬಾಣಗಳು ಅರ್ಜುನನ ಮರ್ಮಗಳನ್ನು ಭೇದಿಸಿ ಸರ್ಪಗಳು ಹುತ್ತವನ್ನು ಹತ್ತುವಂತೆ ಅವನ ಶರೀರವನ್ನು ಹತ್ತಲಿ.

ಬರ್ಹಿಬರ್ಹಿಣರಾಜಾನಾಂ ಬರ್ಹಿಣಾಂ ಬರ್ಹಿಣಾಮಿವ ।
ಪತತಾಂ ಪತತಾಂ ಘೋಷಃ ಪತತಾಂ ಪತತಾಮಿವ ॥೨೦॥

ಒಂದರ ಹಿಂದೆ ಒಂದು ಹೋಗುವ ನವಿಲುಗಳಂತೆ, ಒಂದರ ಹಿಂದೆ ಒಂದು ಹೋಗುವ ನವಿಲುಗರಿಯ ಪುಂಖವನ್ನು ಹೊಂದಿದ ನನ್ನ ಬಾಣಗಳ ಶಬ್ದವು, ಆಕಾಶದಲ್ಲಿ ಒಂದರ ಹಿಂದೆ ಒಂದರಂತೆ ಹೋಗುವ ಪಕ್ಷಿಗಳ ಮಾಲೆಯ ಶಬ್ದದಂತೆ ಎಲ್ಲರಿಂದಲೂ ಕೇಳಲ್ಪಡಲಿ.

ಅದ್ಯ ತ್ವಹಮ್ಯರ್ಜುನಾನ್ಮೋಕ್ಷ್ಯೇ ಯನ್ಮಯಾ ತತ್ ಪ್ರತಿಶ್ರುತಮ್ ।
ಧಾರ್ತರಾಷ್ಟ್ರಸ್ಯ ತತ್ಕಾಲೇ ನಿಹತ್ಯ ಸಮರೇऽರ್ಜುನಮ್ ॥೨೧॥

ಈ ದಿನ ಯುದ್ಧದಲ್ಲಿ ಅರ್ಜುನನನ್ನು ಕೊಂದು ನಾನು ಹಿಂದೆ ಆ ಕಾಲದಲ್ಲಿ ದುರ್ಯೋಧನನಿಗೆ ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿ ನನ್ನನ್ನು ಋಣಮುಕ್ತನನ್ನಾಗಿ ಮಾಡಿಕೊಳ್ಳುವೆನು.

ಇಂದ್ರಾಶನಿಸಮಸ್ಪರ್ಶಂ ಮಹೇಂದ್ರಸಮವಿಕ್ರಮಮ್ ।
ಅರ್ದಯಿಷ್ಯಾಮ್ಯಹಂ ಪಾರ್ಥಮುಲ್ಕಾಭಿರಿವ ಕುಂಜರಮ್ ॥೨೨॥

ಇಂದ್ರನ ವಜ್ರಾಯುಧಕ್ಕೆ ಸಮನಾದ ಸ್ಪರ್ಶವುಳ್ಳ, ಮಹೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಅರ್ಜುನನನ್ನು ಉಲ್ಕೆಗಳಿಂದ ಆನೆಯನ್ನು ಹಿಂಸಿಸಿದಂತೆ ನಾನು ಹಿಂಸಿಸುವೆನು.

ಶರಜಾಲಮಹಾಜ್ವಾಲಮಸಿಶಕ್ತಿಗದೇಂಧನಮ್ ।
ನಿರ್ದಹಂತಮನೀಕಾನಿ ಶಮಯಿಷ್ಯೇऽರ್ಜುನಾನಲಮ್ ॥೨೩॥

ಬಾಣಸಮೂಹಗಳೆಂಬ ಮಹಾಜ್ವಾಲೆಗಳುಳ್ಳ ಖಡ್ಗ, ಶಕ್ತಿ ಮತ್ತು ಗದಾ ಎಂಬ ಇಂಧನಗಳುಳ್ಳ, ಶತ್ರುಸೈನ್ಯವನ್ನು ದಹಿಸುವ ಅರ್ಜುನನೆಂಬ ಅಗ್ನಿಯನ್ನು ನಾನು ಶಾಂತಗೊಳಿಸುವೆನು.

ಪಾಂಡವಾಗ್ನಿಮಹಂ ದೀಪ್ತಂ ಪ್ರದಹಂತಮಿವಾಹಿತಮ್ ।
ಅಶ್ವವೇಗಪುರೋವಾತೋ ರಥೌಘಸ್ತನಯಿತ್ನುಮಾನ್ ।
ಶರಧಾರೋ ಮಹಾಮೇಘಃ ಶಮಯಿಷ್ಯಾಮಿ ಪಾಂಡವಮ್ ॥೨೪॥

ಶತ್ರುಗಳನ್ನು ಸುಡುವ ಅಹಿತಕರವಾದ ಪಾಂಡವಾಗ್ನಿ ಎಂಬ ಜ್ವಲಿಸುವ ಅಗ್ನಿಯನ್ನು ಮಹಾಮೇಘನಾದ ನಾನು ಅಶ್ವಗಳ ವೇಗ ಎಂಬ ಮಳೆಯ ಮೊದಲಿನ ಗಾಳಿಯನ್ನು ಹೊಂದಿದವನಾಗಿ, ರಥಸಮೂಹಗಳ ಗುಡುಗುಗಳನ್ನು ಹೊಂದಿದವನಾಗಿ, ಬಾಣಗಳೆಂಬ ಮಳೆಯ ಧಾರೆಗಳನ್ನು ಹೊಂದಿದವನಾಗಿ, ಈ ದಿನ ಶಾಂತಗೊಳಿಸುವೆನು.

ರಥಾದತಿರಥಂ ಲೋಕೇ ಸರ್ವಶಸ್ತ್ರಭೃತಾಂ ವರಮ್ ।
ವಿವಶಂ ಪಾರ್ಥಮಾದಾಸ್ಯೇ ಗರುತ್ಮಾನಿವ ಪನ್ನಗಮ್ ॥೨೫॥

ಲೋಕದಲ್ಲಿ ಎಲ್ಲ ರಥರಿಗಿಂತಲೂ ಶ್ರೇಷ್ಠರಥನಾದವನೂ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ ಆದ ಅರ್ಜುನನನ್ನು ನಾನು ಈ ದಿನ ಗರುಡನು ಸರ್ಪವನ್ನು ನುಂಗಿದಂತೆ ವಿವಶನಾದ ಅವನನ್ನು ನುಂಗಿಬಿಡುವೆನು.

ಸುತೇಜನೈಃ ರುಗ್ಮಪುಂಖೈಃ ಸುಧೌತೈರ್ನತಪರ್ವಭಿಃ ।
ಆಚಿತಂ ಪಶ್ಯ ಕೌಂತೇಯಂ ಕರ್ಣಿಕಾರೈರಿವಾಚಿತಮ್ ॥೨೬॥

ಬಹಳ ತೀಕ್ಷ್ಣವಾದ ರುಗ್ಮಪುಂಖವನ್ನು ಹೊಂದಿದ ಚೆನ್ನಾಗಿ ಸಾಣೆಯನ್ನು ಹಿಡಿದ ಬಾಗಿದ ತುದಿಗಳುಳ್ಳ ನನ್ನ ಬಾಣಗಳಿಂದ ಅರ್ಜುನನು ಕರ್ಣಿಕಾರ ಪುಷ್ಪಗಳಿಂದ ತುಂಬಲ್ಪಡುವಂತೆ ತುಂಬಲ್ಪಡುವುದನ್ನು ಈ ದಿನ ನೋಡುವವನಾಗು.

ಕ್ಷುರಪ್ರೈರ್ನಿಶಿತೈರ್ಭಲ್ಲೈರ್ನಿಪತದ್ಭಿಶ್ಚ ಮಾಮಕೈಃ ।
ಸಮ್ಮೂಢಚೇತಾಃ ಕೌಂತೇಯಃ ಕರ್ತವ್ಯಂ ನಾಭಿಪತ್ಸ್ಯತೇ ॥೨೭॥

ನನ್ನ ಹರಿತವಾದ ಕ್ಷುರಪ್ರಗಳಿಂದಲೂ, ಮೇಲೆರಗುವ ಭಲ್ಲಗಳಿಂದಲೂ ದಿಗ್ಭ್ರಾಂತನಾದ ಅರ್ಜುನನು ಈ ದಿನ ಏನು ಮಾಡಬೇಕೆಂದು ತಿಳಿಯುವುದಿಲ್ಲ.

ಅದ್ಯ ದುರ್ಯೋಧನಸ್ಯಾಹಂ ಶೋಕಂ ಹೃದಿ ಚಿರಂ ಸ್ಥಿತಮ್ ।
ಸಮೂಲಮಪನೇಷ್ಯಾಮಿ ಹರನ್ ಪಾರ್ಥಶಿರಃ ಶರೈಃ ॥೨೮॥

ಈ ದಿನ ಅರ್ಜುನನ ಶಿರಸ್ಸನ್ನು ಬಾಣಗಳಿಂದ ತೆಗೆದು ದುರ್ಯೋಧನನ ಹೃದಯದಲ್ಲಿ ಬಹಳ ಕಾಲದಿಂದ ಇರುವ ಶೋಕವನ್ನು ಮೂಲ ಸಹಿತವಾಗಿ ನಾಶಮಾಡುವೆನು.

ಹತಾಶ್ವಂ ವಿರಥಂ ಪಾರ್ಥಂ ಪೌರುಷೇ ಪರ್ಯವಸ್ಥಿತಮ್ ।
ನಿಃಶ್ವಸಂತಂ ಯಥಾ ನಾಗಮದ್ಯ ಪಶ್ಯಂತು ಕೌರವಾಃ ॥೨೯॥

ತನ್ನ ಅಶ್ವಗಳನ್ನೂ ಮತ್ತು ರಥಗಳನ್ನೂ ಕಳೆದುಕೊಂಡು ಆದರೂ ಪೌರುಷವನ್ನು ಆಶ್ರಯಿಸಿ ಸರ್ಪದಂತೆ ಉಸಿರುಬಿಡುವ ಅರ್ಜುನನನ್ನು ಈ ದಿನ ಕೌರವರು ನೋಡಲಿ.

ಜಾಮದಗ್ನ್ಯಾನ್ಮಯಾ ಲಬ್ಧಂ ದಿವ್ಯಾಸ್ತ್ರಮೃಷಿಸತ್ತಮಾತ್ ।
ತದುಪಾಶ್ರಿತ್ಯ ವೀರ್ಯಂ ಚ ಯುಧ್ಯೇಯಮಪಿ ವಾಸವಮ್ ॥೩೦॥

ಋಷಿಶ್ರೇಷ್ಠರಾದ ಪರಶುರಾಮರಿಂದ ಲಬ್ಧವಾದ ದಿವ್ಯಾಸ್ತ್ರವನ್ನು ಅವಲಂಬಿಸಿ ಮತ್ತು ನನ್ನ ಪರಾಕ್ರಮವನ್ನು ಅವಲಂಬಿಸಿ ನಾನು ಇಂದ್ರನ ಜೊತೆಯಲ್ಲಿ ಬೇಕಾದರೂ ಯುದ್ಧವನ್ನು ಮಾಡಿಯೇನು.

ಕಾಮಂ ಗಚ್ಛಂತು ಕುರವಃ ಗಾ ಪ್ರಗೃಹ್ಯ ಪರಂತಪಾಃ ।
ರಥೇಷು ವಾऽವತಿಷ್ಠಂತೋ ಯುದ್ಧಂ ಪಶ್ಯತು ಮಾಮಕಮ್ ॥೩೧॥

ಪರಂತಪರಾದ ಕುರುಗಳು ಗೋವುಗಳನ್ನು ತೆಗೆದುಕೊಂಡು ತಮ್ಮ ಇಚ್ಛೆ ಬಂದಂತೆ ಹೊರಟುಹೋಗಲಿ ಅಥವಾ ರಥಗಳಲ್ಲಿಯೇ ಕುಳಿತು ನಾನು ಮಾಡುವ ಯುದ್ಧವನ್ನು ನೋಡಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಸಪ್ತಚತ್ವಾರಿಂಶೋऽಧ್ಯಾಯಃ॥

॥ ಗೋಗ್ರಹಣಪರ್ವಣಿ ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತೆಂಟನೆಯ ಅಧ್ಯಾಯ

ಅರ್ಜುನನ ದುರ್ಜಯತ್ವವನ್ನು ಹೇಳಿ ಕೃಪಾಚಾರ್ಯರಿಂದ ಕರ್ಣನ ನಿಂದೆ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ನೀತಿಶಾಸ್ತ್ರವಿಶಾರದಃ ।
ಆಚಾರ್ಯಃ ಕುರುವೀರಾಣಾಂ ಕೃಪಃ ಶಾರದ್ವತೋಽಬ್ರವೀತ್ ॥೧॥

ವೈಶಂಪಾಯನ– ಅವನ (ಕರ್ಣನ) ಆ ಮಾತುಗಳನ್ನು ಕೇಳಿ ಕುರುವೀರರ ಆಚಾರ್ಯರಾದ, ಶರದ್ವಂತನ ಪುತ್ರರಾದ, ನೀತಿಶಾಸ್ತ್ರವಿಶಾರದರಾದ ಕೃಪಾಚಾರ್ಯರು ಮಾತನಾಡಿದರು.

ಸದೈವ ತವ ರಾಧೇಯ ಯುದ್ಧೇ ಕ್ರೂರತರಾ ಮತಿಃ ।
ನಾರ್ಥಾನಾಂ ಪ್ರಕೃತಿಂ ವೇತ್ಸಿ ನಾನುಬಂಧಮವೇಕ್ಷಸೇ ॥೨॥

ಎಲೈ ಕರ್ಣನೇ, ನಿನಗೆ ಯಾವಾಗಲೂ ಯುದ್ಧದ ವಿಷಯದಲ್ಲಿ ಬಹಳ ಕ್ರೂರವಾದ ಬುದ್ಧಿಯಿದೆ. ವಸ್ತುಗಳ ಸ್ವಭಾವವನ್ನು ನೀನು ತಿಳಿದಿಲ್ಲ. ಯುದ್ಧಕ್ಕೆ ಅನುಕೂಲವಾದ ಕಾಲವನ್ನೂ ನೀನು ತಿಳಿದಿಲ್ಲ.

ನಯಾ ಹಿ ಬಹವಃ ಸಂತಿ ಶಾಸ್ತ್ರಾಣ್ಯಾಶ್ರಿತ್ಯ ಚಿಂತಿತಾಃ ।
ತೇಷಾಂ ಯುದ್ಧಂ ಸುಪಾಪಿಷ್ಠಂ ವೇದಯಂತಿ ಪುರಾವಿದಃ ॥೩॥

ಶಾಸ್ತ್ರವನ್ನು ಆಧರಿಸಿ ಚಿಂತನೆ ಮಾಡಿರುವ ನೀತಿಗಳು ಸಾಮ, ದಾನ ಮೊದಲಾದ ಅನೇಕ ವಿಧವಾಗಿವೆ. ಅವುಗಳಲ್ಲಿ ಯುದ್ಧವು ಅತ್ಯಂತ ಪಾಪಿಷ್ಠವಾದುದೆಂದು ಪ್ರಾಚೀನರು ಹೇಳುತ್ತಾರೆ.

ದೇಶಕಾಲೇನ ಸಂಯುಕ್ತಂ ಯುದ್ಧಂ ವಿಜಯದಂ ಭವೇತ್ ।
ಹೀನಕಾಲಂ ತದೇವೇಹ ಅನರ್ಥಾಯೋಪಕಲ್ಪತೇ ॥೪॥

ಯೋಗ್ಯವಾದ ದೇಶಕಾಲಗಳಿಂದ ಕೂಡಿದ ಯುದ್ಧವು ಜಯವನ್ನು ತಂದುಕೊಡುತ್ತದೆ. ಅನುಚಿತಕಾಲದಲ್ಲಿ ಮಾಡಿದ ಅದೇ ಯುದ್ಧವು ಅನರ್ಥಕ್ಕೆ ಕಾರಣವಾಗುತ್ತದೆ.

ದೇಶಕಾಲೇನ ವಿಕ್ರಾಂತಂ ಕಲ್ಯಾಣಾಯ ವಿಧೀಯತೇ ।
ಅನುಕೂಲ್ಯೇನ ಕಾರ್ಯಾಣಾಮುತ್ತರಂ ತು ವಿಧೀಯತೇ ॥೫॥

ಕಾರ್ಯಗಳಿಗೆ ಅನುಕೂಲವಾದ ದೇಶಕಾಲಗಳನ್ನು ಅನುಸರಿಸಿ ಮಾಡಿದ ಪರಾಕ್ರಮವು ಕಲ್ಯಾಣವನ್ನು ಉಂಟುಮಾಡುತ್ತದೆ. ಅದಕ್ಕೆ ಯೋಗ್ಯವಾದ ಫಲವು ದೊರಕುತ್ತದೆ.

ಭಾರಂ ಹಿ ರಥಕಾರಸ್ಯ ನ ವ್ಯವಸ್ಯಂತಿ ಪಂಡಿತಾಃ ।
ಪರಿಚಿಂತ್ಯ ತು ಪಾರ್ಥೇನ ಸನ್ನಿಪಾತೋ ನ ನಃ ಕ್ಷಮಃ ॥೬॥

ಬಡಗಿಗೆ ಇರುವ ಕಾರ್ಯದ ಭಾರವನ್ನು ಪಂಡಿತನು ತಿಳಿಯುವುದಿಲ್ಲ. ವಿಮರ್ಶೆ ಮಾಡಿ ನೋಡಿದರೆ ಅರ್ಜುನನ ಮೇಲೆ ಎರಗುವುದು ನಮ್ಮಿಂದ ಸಾಧ್ಯವಿಲ್ಲ.

ಏಕೋ ಹಿ ಶತ್ರೂನ್ ಸಮರೇ ಸಮರ್ಥಃ ಪ್ರತಿಬಾಧಿತುಮ್ ।
ಏಕಃ ಕುರೂನಭ್ಯಗಮದ್ ಏಕಶ್ಚಾಗ್ನಿಮತರ್ಪಯತ್ ॥೭॥

ಅವನೊಬ್ಬನೇ ಯುದ್ಧದಲ್ಲಿ ಶತ್ರುವನ್ನು ಬಾಧಿಸಲು ಸಮರ್ಥನಾಗಿದ್ದಾನೆ. ದಿಗ್ವಿಜಯ ಕಾಲದಲ್ಲಿ ಉತ್ತರ ಕುರುಗಳನ್ನು ಅವನೊಬ್ಬನೇ ಗೆದ್ದನು ಮತ್ತು ಏಕಾಕಿಯಾಗಿಯೇ ಅಗ್ನಿಯನ್ನು ತೃಪ್ತಿಪಡಿಸಿದನು (ಲಕ್ಷಾಲಂಕಾರ).

ಏಕಶ್ಚ ಪಂಚವರ್ಷಾಣಿ ಬ್ರಹ್ಮಚರ್ಯಮಧಾರಯತ್ ।
ಏಕಃ ಸುಭದ್ರಾಮಾರೋಪ್ಯ ದ್ವೈರಥೇ ಕೃಷ್ಣಮಾಹ್ವಯತ್ ॥೮॥

ಒಬ್ಬನೇ ಐದುವರ್ಷಗಳ ಕಾಲ ಬ್ರಹ್ಮಚರ್ಯವ್ರತವನ್ನು ಧರಿಸಿದನು. ಒಬ್ಬನೇ ಸುಭದ್ರೆಯನ್ನು ರಥದಲ್ಲಿ ಕೂಡಿಸಿಕೊಂಡು ದ್ವೈರಥ ಯುದ್ಧದಲ್ಲಿ ಕೃಷ್ಣನನ್ನು ಆಹ್ವಾನ ಮಾಡಿದನು.

ಸೈಂಧವಂ ವನವಾಸೇ ತು ಜಿತ್ವಾ ಕೃಷ್ಣಾಮಥಾನಯತ್ ।
ಏಕಶ್ಚ ಪಂಚ ವರ್ಷಾಣಿ ಶಕ್ರಾದಸ್ತ್ರ್ಯಾಣ್ಯಶಿಕ್ಷಯತ್ ॥೯॥

ಏಕಃ ಸಂಯಮಿನೀಂ ಜಿತ್ವಾ ಕುರೂಣಾಮಕರೋದ್ ಯಶಃ ॥೧೦॥

ಅವನು ವನವಾಸ ಕಾಲದಲ್ಲಿ ಸೈಂಧವನನ್ನು ಒಬ್ಬನೇ ಗೆದ್ದು ದ್ರೌಪದಿಯನ್ನು ಹಿಂದಕ್ಕೆ ಕರೆದುಕೊಂಡು ಬಂದನು. ಐದುವರ್ಷಗಳ ಕಾಲ ಇಂದ್ರನಿಂದ ಒಬ್ಬನೇ ಅಸ್ತ್ರಗಳನ್ನು ಕಲಿತನು. ಒಬ್ಬನೇ ಯಮಪಟ್ಟಣವಾದ ಸಂಯಮಿನಿಗೆಹೋಗಿ ಗೆದ್ದು ಕುರುಗಳಿಗೆ ಕೀರ್ತಿಯನ್ನು ಉಂಟುಮಾಡಿದನು.

ಏಕೋ ಗಂಧರ್ವರಾಜಾನಂ ಚಿತ್ರಸೇನಮರಿಂದಮಃ ।
ವಿಜಿಗ್ಯೇ ತರಸಾ ಸಂಖ್ಯೇ ಸೇನಾಂ ಚಾಸ್ಯ ಸುದುರ್ಜಯಾಮ್ ॥೧೧॥

ಅರಿಂದಮನಾದ ಅವನು ಒಬ್ಬನೇ ಗಂಧರ್ವರಾಜನಾದ ಚಿತ್ರಸೇನನನ್ನು ಮತ್ತು ದುರ್ಜಯವಾದ ಅವನ ಸೈನ್ಯವನ್ನು ಯುದ್ಧದಲ್ಲಿ ಶೀಘ್ರವಾಗಿ ಗೆದ್ದನು.

ಪಾಂಚಾಲೀ ಶ್ರೀಮತೀ ಪ್ರಾಪ್ತಾ ಕ್ಷತ್ರಂ ಜಿತ್ವಾ ಸ್ವಯಂವರೇ ।
ಆದಾಯ ಗತವಾನ್ ಪಾರ್ಥೋ ಭವಾನ್ ಕ್ವ ನು ಗತಸ್ತದಾ ॥೧೨॥

ಸ್ವಯಂವರದಲ್ಲಿ ಕ್ಷತ್ರಿಯರನ್ನು ಗೆದ್ದು ಕಾಂತಿಯುಕ್ತಳಾದ ಪಾಂಚಾಲಿಯನ್ನು ಪಡೆದು, ಅರ್ಜುನನು ಅವಳನ್ನು ಕರೆದುಕೊಂಡು ಹೋಗುವಾಗ ನೀನು ಎಲ್ಲಿಗೆ ಹೋಗಿದ್ದೆ?

ತಥಾ ನಿವಾತಕವಚಾಃ ಕಾಲಕೇಯಾಶ್ಚ ದಾನವಾಃ ।
ದೈವತೈರಪ್ಯವಧ್ಯಾಸ್ತೇ ಏಕೇನ ಯುಧಿ ಪಾತಿತಾಃ ॥೧೩॥

ಏಕಃ ಕಿರಾತರೂಪೇಣ ಸ್ಥಿತಂ ರುದ್ರಮಯೋಧಯತ್ ॥೧೪॥

ಅದರಂತೆ ದೇವತೆಗಳಿಗೂ ಅವಧ್ಯರಾದ ನಿವಾತಕವಚರು ಮತ್ತು ಕಾಲಕೇಯರೆಂಬ ದಾನವರನ್ನು ಅವನೊಬ್ಬನೇ ಯುದ್ಧದಲ್ಲಿ ಸೋಲಿಸಿದನು. ಒಬ್ಬನೇ ಕಿರಾತರೂಪದಲ್ಲಿದ್ದ ರುದ್ರದೇವರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಏಕೇನ ಹಿ ತ್ವಯಾ ಕರ್ಣ ಕಿಂ ನಾಮೇಹ ಕೃತಂ ಪುರಾ ।
ಏಕೈಕೇನ ಯಥಾ ತೇಷಾಂ ಭೂಮಿಪಾಲಾ ವಶೇ ಕೃತಾಃ ॥೧೫॥

ಎಲೈ ಕರ್ಣನೇ, ಅವರಲ್ಲಿ ಒಬ್ಬೊಬ್ಬರೂ ಏಕಾಕಿಯಾಗಿ ಅನೇಕ ರಾಜರನ್ನು ಗೆದ್ದಂತೆ ನೀನು ಒಬ್ಬನೇ ಹಿಂದೆ ಯಾವ ಕಾರ್ಯವನ್ನು ಮಾಡಿದ್ದೀಯೆ?

ಇಂದ್ರೋಽಪಿ ಹಿ ನ ಪಾರ್ಥೇನ ಸಂಯುಗೇ ಯೋದ್ಧುಮರ್ಹತಿ ।
ಯಸ್ತೇನಾಶಂಸತೇ ಯೋದ್ಧುಂ ಕರ್ತವ್ಯಂ ತಸ್ಯ ಭೈಷಜಮ್ ॥೧೬॥

ಇಂದ್ರನೂ ಸಹ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಸಾಧ್ಯವಾಗುವುದಿಲ್ಲ. ಯಾವನು ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವೆನೆಂದು ಆಶಿಸುತ್ತಾನೆಯೋ ಅವನಿಗೆ ಚಿಕಿತ್ಸೆಯನ್ನು ಮಾಡಬೇಕಾಗುತ್ತದೆ.

ಆಶೀವಿಷಸ್ಯ ಕ್ರುದ್ಧಸ್ಯ ಪಾಣಿಮುದ್ಯಮ್ಯ ದಕ್ಷಿಣಮ್ ।
ಅವಮೃಜ್ಯ ಪ್ರದೇಶಿನ್ಯಾ ದಂಷ್ಟ್ರಾಮಾದಾತುಮಿಚ್ಛತಿ ॥೧೭॥

ಕ್ರೋಧಗೊಂಡ ಮಹಾವಿಷವುಳ್ಳ ಸರ್ಪದ ತಲೆಯನ್ನು ಬಲಗೈಯಿಂದ ನೇವರಿಸಿ ನಿನ್ನ ತೋರುಬೆರಳಿನಿಂದ ಅದರ ಕೋರೆಯ ಹಲ್ಲನ್ನು ಕೀಳಲು ಬಯಸುತ್ತಿದ್ದೀಯೆ.

ಅಥವಾ ಕುಂಜರಂ ಮತ್ತಮೇಕಮೇಕಚರಂ ವನೇ ।
ಅನಂಕುಶಂ ಸಮಾರುಹ್ಯ ನಗರಂ ಯಾತುಮಿಚ್ಛಸಿ ॥೧೮॥

ಅಥವಾ ಕಾಡಿನಲ್ಲಿ ಮದದಿಂದ ಕೂಡಿ ಒಂಟಿಯಾಗಿ ಸಂಚರಿಸುವ, ಅಂಕುಶರಹಿತವಾದ ಆನೆಯನ್ನು ಏರಿ ನಗರಕ್ಕೆ ಬರಲು ಇಚ್ಛಿಸುತ್ತಿದ್ದೀಯೆ.

ಸಮಿದ್ಧಂ ಪಾವಕಂ ಚಾಪಿ ಘೃತಮೇದೋವಸಾಹುತಮ್ ।
ಘೃತಾಕ್ತಶ್ಚೀರವಾಸಾಸ್ತ್ವಂ ಮಧ್ಯೇನೋತ್ತರ್ತುಮಿಚ್ಛಸಿ ॥೧೯॥

ಅಥವಾ ಘೃತ, ಮೇಧಸ್ಸು ಮತ್ತು ವಸೆಗಳಿಂದ ಹೋಮವನ್ನು ಮಾಡಿದ ಜ್ವಲಿಸುತ್ತಿರುವ ಅಗ್ನಿಯನ್ನು ನೀನು ಘೃತದಲ್ಲಿ ಅದ್ದಿದ ನಾರುಮಡಿಯನ್ನು ಉಟ್ಟು ಅದರ ಮಧ್ಯದಲ್ಲಿ ದಾಟಲು ಇಚ್ಛಿಸುತ್ತಿದ್ದೀಯೆ.

ಆತ್ಮಾನಂ ಯಃ ಸಮಾಬದ್ಧ್ಯ ಕಂಠೇ ಬದ್ಧ್ವಾ ತಥಾ ಶಿಲಾಮ್ ।
ಸಮುದ್ರಂ ಪ್ರತರನ್ ದೋರ್ಭ್ಯಾಂ ತತ್ರ ಕಿಂ ಕರ್ಣ ಪೌರುಷಮ್ ॥

ತನ್ನ ಕೈಕಾಲುಗಳನ್ನೂ ಕಟ್ಟಿಕೊಂಡು, ಕಂಠದಲ್ಲಿ ದೊಡ್ಡ ಶಿಲೆಯನ್ನೂ ಕಟ್ಟಿಕೊಂಡು ತನ್ನ ಬಾಹುಗಳಿಂದ ಸಮುದ್ರವನ್ನು ದಾಟುವವನಂತೆ ಇದ್ದೀಯೆ. ಕರ್ಣನೇ, ನಿನ್ನಲ್ಲಿ ಯಾವ ಪೌರುಷವಿದೆ?

ಅಕೃತಾಸ್ತ್ರಃ ಕೃತಾಸ್ತ್ರಂ ವೈ ಬಲವಂತಂ ಸುದುರ್ಬಲಃ ।
ತಾದೃಶಂ ಕರ್ಣ ಯಃ ಪಾರ್ಥಂ ಯೋದ್ಧುಮಿಚ್ಛೇತ್ ಸ ದುರ್ಮತಿಃ ॥

ಎಲೈ ಕರ್ಣನೇ, ಯಾವನು ಅಂತಹ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತಾನೆಯೋ ಅವನು ಅಸ್ತ್ರಜ್ಞಾನವಿಲ್ಲದವನು ಅಸ್ತ್ರಜ್ಞಾನಿಯ ಜೊತೆಯಲ್ಲಿ, ಅತ್ಯಂತ ದುರ್ಬಲನಾದವನು ಬಲಿಷ್ಠನ ಜೊತೆಯಲ್ಲಿ ಯುದ್ಧವನ್ನು ಮಾಡಲು ಇಚ್ಛಿಸಿದಂತೆ ದುರ್ಮತಿಯುಳ್ಳವನಾಗಿರುತ್ತಾನೆ.

ಅಸ್ಮಾಭಿರೇವ(ರೇಷ) ನಿಕೃತೋ ವರ್ಷಾಣೀಹ ತ್ರಯೋದಶ ।
ಸಿಂಹಃ ಪಾಶಾದ್ ವಿಮುಕ್ತೋ ವಾ ನ ಶೇಷಂ ಕರ್ತುಮರ್ಹತಿ ॥೨೨॥

ನಾವು ಅವನನ್ನು ಕಪಟದಿಂದ ಜಯಿಸಿ ಹದಿಮೂರು ವರ್ಷಗಳ ಅವಮಾನಗೊಳಿಸಿದ್ದೇವೆ. ಬಂಧನದಿಂದ ಬಿಡಿಸಿಕೊಂಡ ಸಿಂಹದಂತೆ ಅವನು ಯಾರನ್ನೂ ಉಳಿಸುವುದಿಲ್ಲ.

ಏಕಾಂತೇ ಪಾರ್ಥಮಾಸೀನಂ ಕೂಪೇऽಗ್ನಿಮಿವ ಸಂವೃತಮ್ ।
ಅಜ್ಞಾನಾದಭ್ಯವಸ್ಕಂದ್ಯ ಪ್ರಾಪ್ತಾಃ ಸ್ಮೋ ಭಯಮುತ್ತಮಮ್ ॥೨೩॥

ಕೂಪದಲ್ಲಿರುವ ಅಗ್ನಿಯಂತೆ ಏಕಾಂತದಲ್ಲಿ ಯಾರಿಗೂ ಕಾಣದಂತೆ ಕುಳಿತಿದ್ದ ಅರ್ಜುನನನ್ನು ಅಜ್ಞಾನದಿಂದ ಮೆಟ್ಟಿ ನಾವು ದೊಡ್ಡ ಭಯಕ್ಕೆ ತುತ್ತಾಗಿದ್ದೇವೆ.

ಉತ್ಸೃಷ್ಟಂ ತೂಲರಾಶೌ ತು ಏಕೋऽಗ್ನಿಂ ಶಮಯೇತ್ ಕಥಮ್ ।
ಸಹ ಯುದ್ಧ್ಯಾಮಹೇ ಪಾರ್ಥಮಾಗತಂ ಯುದ್ಧದುರ್ಮದಮ್ ॥೨೪॥

ಹತ್ತಿಯ ರಾಶಿಯಲ್ಲಿ ಬಿಡಲ್ಪಟ್ಟ ಅಗ್ನಿಯನ್ನು ಒಬ್ಬನೇ ನಂದಿಸುವುದು ಹೇಗೆ? ಆದ್ದರಿಂದ ನಾವು ಯುದ್ಧದುರ್ಮದನಾದ ಅರ್ಜುನನ ಜೊತೆಯಲ್ಲಿ ಎಲ್ಲರೂ ಸೇರಿಕೊಂಡು ಯುದ್ಧವನ್ನು ಮಾಡುತ್ತೇವೆ.

ಯತ್ತಸೇನಾಃ ಪರಾಕ್ರಾಂತಾ ವ್ಯೂಢಾನೀಕಾಃ ಪ್ರಹಾರಿಣಃ ।
ಯುದ್ಧಾಯಾವಸ್ಥಿತಂ ಪಾರ್ಥಮಾಗತಂ ಪಾಕಶಾಸನಿಮ್ ॥೨೫॥

ಯತ್ತಾಃ ಸರ್ವೇ ರಥಶ್ರೇಷ್ಠಂ ಪರಿವಾರ್ಯ ಸಮಂತತಃ ।
ಷಡ್ರಥಾಃ ಪರಿಕೀರ್ಯಂತಾಂ ವಜ್ರಪಾಣಿಮಿವಾಸುರಾಃ ॥೨೬॥

ಆದ್ದರಿಂದ ಎಲ್ಲರೂ ಸೈನ್ಯವನ್ನು ವ್ಯೂಹಮಾಡಿ, ಎಚ್ಚರಿಕೆಯಿಂದ ನಿಮ್ಮ ಸೈನ್ಯವನ್ನು ನೋಡಿಕೊಂಡು, ಪರಾಕ್ರಮವನ್ನು ಆಶ್ರಯಿಸಿ ಶತ್ರುಪೀಡೆಯನ್ನು ಮಾಡುವವರಾಗಿ. ಯುದ್ಧಕ್ಕಾಗಿ ಬಂದು ನಿಂತಿರುವ ಇಂದ್ರನ ಮಗನಾದ ರಥಶ್ರೇಷ್ಠನಾದ ಅರ್ಜುನನನ್ನು ಎಲ್ಲಕಡೆಯಿಂದಲೂ ಸುತ್ತುವರಿದು ಆರು ಮಹಾರಥರು ಅಸುರರು ವಜ್ರಪಾಣಿಯಾದ ಇಂದ್ರನ ಮೇಲೆ ಬಾಣಗಳನ್ನು ಸುರಿಸಿದಂತೆ ಅವನ ಮೇಲೆ ಬಾಣಗಳನ್ನು ಸುರಿಸಿ.

ದ್ರೋಣೋ ದುರ್ಯೋಧನೋ ಭೀಷ್ಮೋ
ಭವಾನ್ ದ್ರೌಣಿಸ್ತಥಾ ವಯಮ್ ।
ಸರ್ವೇ ಯುದ್ಧ್ಯಾಮಹೇ ಪಾರ್ಥಂ
ಕರ್ಣ ಮಾ ಸಾಹಸಂ ಕೃಥಾಃ ॥೨೭॥

ನಹ್ಯಸಂವ್ಯೂಹ್ಯ ಸಮರೇ ಪಾರ್ಥಂ ಜೇಷ್ಯಾಮಹೇ ವಯಮ್ ॥೨೮॥

ದ್ರೋಣ, ಕರ್ಣ, ದುರ್ಯೋಧನ, ಭೀಷ್ಮ, ನೀನು, ಅಶ್ವತ್ಥಾಮ, ನಾನು ಎಲ್ಲರೂ ಒಟ್ಟಿಗೆ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತೇವೆ. ಕರ್ಣನೇ, ಸಾಹಸವನ್ನು ಮಾಡಬೇಡ. ಸೈನ್ಯವನ್ನು ವ್ಯೂಹ ಮಾಡದೆ ನಾವು ಯುದ್ಧದಲ್ಲಿ ಅರ್ಜುನನನ್ನು ಗೆಲ್ಲಲಾರೆವು.

ಯುದ್ಧೇ ವ್ಯವಸ್ಥಿತಂ ಪಾರ್ಥಂ ವಜ್ರಪಾಣಿಮಿವೋದ್ಯತಮ್ ।
ಷಡ್ರಥಾಃ ಪ್ರತಿಯುಧ್ಯೇಮ ತಿಷ್ಠಾಮಶ್ಚೇಹ ಸಂಹತಾಃ ॥೨೯॥

ಯುದ್ಧದಲ್ಲಿ ವಜ್ರಪಾಣಿಯಾದ ಇಂದ್ರನಂತೆ ಸನ್ನದ್ಧನಾಗಿ ನಿಂತಿರುವ ಅರ್ಜುನನ ಜೊತೆಯಲ್ಲಿ ಷಡ್ರಥರಾದ ನಾವು ಒಟ್ಟಿಗೆ ಸೇರಿ ಪ್ರತಿಯುದ್ಧವನ್ನು ಮಾಡೋಣ.

ವ್ಯೂಢಾನೀಕಾನಿ ಸೈನ್ಯಾನಿ ಯತ್ತಾಃ ಪರಮಧನ್ವಿನಃ ।
ಯುಧ್ಯಾಮಹೇऽರ್ಜುನಂ ಸಂಖ್ಯೇ ದಾನವಾ ಇವ ವಾಸವಮ್ ॥೩೦॥

ಶ್ರೇಷ್ಠವಾದ ಧನುಸ್ಸನ್ನು ಹೊಂದಿದ ನಾವು ಸೈನ್ಯವನ್ನು ವ್ಯೂಹವನ್ನಾಗಿ ರಚಿಸಿ ಪರಮಜಾಗರೂಕತೆಯಿಂದ ದಾನವರು ಇಂದ್ರನ ಜೊತೆ ಯುದ್ಧವನ್ನು ಮಾಡಿದಂತೆ ರಣರಂಗದಲ್ಲಿ ಅರ್ಜುನನ ಜೊತೆ ಯುದ್ಧವನ್ನು ಮಾಡೋಣ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಅಷ್ಟಚತ್ವಾರಿಂಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ನಲವತ್ತೊಂಬತ್ತನೆಯ ಅಧ್ಯಾಯ

ಕರ್ಣನಿಂದ ಕೃಪರ ಮತ್ತು ಅಶ್ವತ್ಥಾಮರಿಂದ ಕರ್ಣ-ದುರ್ಯೋಧನರ ನಿಂದನೆ

ವೈಶಂಪಾಯನಃ

ಕೃಪಸ್ಯ ತು ವಚಃ ಶ್ರುತ್ವಾ ಕರ್ಣೋ ರಾಜನ್ ಯುಧಾಂಪತಿಃ ।
ಪುನಃ ಪ್ರೋವಾಚ ಸಂರಬ್ಧೋ ಗರ್ಹಯನ್ ಬ್ರಾಹ್ಮಣಂ ಕೃಪಮ್ ॥೧॥

ವೈಶಂಪಾಯನ– ಎಲೈ ರಾಜನೇ, ಕೃಪಾಚಾರ್ಯರ ವಚನಗಳನ್ನು ಕೇಳಿ ಯುಧಾಂಪತಿಯಾದ ಕರ್ಣನು ಸಿಟ್ಟಿನಿಂದ ಕೂಡಿದವನಾಗಿ ಬ್ರಾಹ್ಮಣರಾದ ಕೃಪಾಚಾರ್ಯರನ್ನು ನಿಂದಿಸುತ್ತಾ ಪುನಃ ಮಾತನಾಡಿದನು.

ಲಕ್ಷಯಾಮ್ಯಹಮಾಚಾರ್ಯಂ ಭಯಾದ್ ಭಕ್ತಿಂ ಗತಂ ರಿಪೌ ।
ಭೀತೇನ ಹಿ ನ ಯೋದ್ಧವ್ಯಮಹಂ ಯೋತ್ಸ್ಯೇ ಧನಂಜಯಮ್ ॥೨॥

ಆಚಾರ್ಯರು ಭಯದಿಂದ ಶತ್ರುವಿನಲ್ಲಿ ಭಕ್ತಿಯನ್ನು ಹೊಂದುತ್ತಿರುವುದನ್ನು ನಾನು ಗಮನಿಸುತ್ತಿದ್ದೇನೆ. ಹೆದರಿದವನು ಯುದ್ಧವನ್ನು ಮಾಡಬಾರದು. ಅರ್ಜುನನ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುವೆನು.

ನನು ವಾರುಣಮಾಗ್ನೇಯಂ ಯಾಮ್ಯಂ ವಾಯವ್ಯಮೇವ ಚ ।
ಅಸ್ತ್ರಂ ಬ್ರಾಹ್ಮಂ ಶಿವಂ ಚೈವ ಸತ್ವಹೀನಸ್ಯ ತೇ ವೃಥಾ ॥೩॥

ವಾರುಣ, ಆಗ್ನೇಯ, ಯಾಮ್ಯ, ವಾಯವ್ಯ, ಬ್ರಾಹ್ಮ, ಶೈವ ಅಸ್ತ್ರಗಳೆಲ್ಲವೂ ಧೈರ್ಯವಿಲ್ಲದ ನಿಮಗೆ ವ್ಯರ್ಥವಷ್ಟೆ!

ಮಿತ್ರಕಾರ್ಯಂ ಕೃತಮಿದಂ ಪಿತಾಪುತ್ರೈರ್ಮಹಾರಥೈಃ ।
ಭರ್ತೃಪಿಂಡಶ್ಚ ನಿರ್ವಿಷ್ಟೋ ಯಥೇಷ್ಟಂ ಗಂತುಮರ್ಹಥ ॥೪॥

ಮಹಾರಥರಾದ ತಂದೆ ಮತ್ತು ಮಕ್ಕಳಿಂದ ಮಿತ್ರಕಾರ್ಯವು ಚೆನ್ನಾಗಿ ಮಾಡಲ್ಪಟ್ಟಿತು. ಭರ್ತೃಪಿಂಡದ ಋಣವನ್ನೂ ತೀರಿಸಿದ್ದಾಯಿತು! ನಿಮಗೆ ಇಷ್ಟವಾದಂತೆ ಹೋಗಬಹುದು.

ಭಿಕ್ಷಾಂ ಹರಸ್ವ ತ್ವಂ ನಿತ್ಯಂ ಯಜ್ಞಾನನುಚರಸ್ವ ಹ ।
ಆಮಂತ್ರಣಾನಿ ಭುಂಕ್ಷ್ವಾದ್ಯ ಮಾಽಸ್ಮಾನ್ ಯುದ್ಧೇನ ಭೀಷಯ ॥೫॥

ನೀವು ನಿತ್ಯವೂ ಭಿಕ್ಷೆಯನ್ನು ಬೇಡಿ. ಯಜ್ಞಗಳಿಗೆ ಹೋಗಿ. ಆಮಂತ್ರಣಗಳನ್ನು ಸ್ವೀಕರಿಸಿ ಭೋಜನವನ್ನು ಮಾಡಿ. ನಮ್ಮನ್ನು ಯುದ್ಧದ ಮಾತಿನಿಂದ ಹೆದರಿಸಬೇಡಿ.

ಭಾರ್ಗವಾಸ್ತ್ರಂ ಮಯಾ ಯುಕ್ತಂ ನಿರ್ದಹೇತ್ ಪೃಥಿವೀಮಿಮಾಮ್ ।
ಕಿಂ ಪುನಃ ಪಾಂಡುಪುತ್ರಾಣಾಮೇಕಮರ್ಜುನಮಾಹವೇ ॥೬॥

ನಾನು ಪ್ರಯೋಗಿಸುವ ಭಾರ್ಗವಾಸ್ತ್ರವು ಈ ಪೃಥಿವಿಯನ್ನು ಸುಟ್ಟೀತು! ಇನ್ನು ಯುದ್ಧದಲ್ಲಿ ಪಾಂಡುಪುತ್ರರಲ್ಲಿ ಒಬ್ಬನಾದ ಅರ್ಜುನನನ್ನು ಸುಡುವುದು ಯಾವ ದೊಡ್ಡ ವಿಷಯ?

ಆಗಮಿಷ್ಯಂತಿ ಪದವೀಂ ಮತ್ಸ್ಯಾಃ ಪಾಂಡವಸಂಶ್ರಿತಾಃ ।
ತಾನಹಂ ನಿಹನಿಷ್ಯಾಮಿ ಭವದ್ಭಿರ್ಗಮ್ಯತಾಂ ಗೃಹಮ್ ॥೭॥

ಪಾಂಡವರಿಂದ ಯುಕ್ತರಾದ ಮತ್ಸ್ಯರು ಗೋವುಗಳ ಮಾರ್ಗವನ್ನು ಅನುಸರಿಸಿ ಬರುವರು. ನಾನು ಅವರನ್ನು ಕೊಲ್ಲುವೆನು. ನೀವು ಮನೆಗೆ ಹೋಗಿ.

ತಸ್ಯ ತದ್ವಚನಂ ಶ್ರುತ್ವಾ ಅಶ್ವತ್ಥಾಮಾ ಪ್ರತಾಪವಾನ್ ।
ಉವಾಚ ವದತಾಂ ಶ್ರೇಷ್ಠೋ ದುರ್ಯೋಧನಮವೇಕ್ಷ್ಯ ಚ ॥೮॥

ಅವನ ಆ ಮಾತುಗಳನ್ನು ಕೇಳಿ ಪ್ರತಾಪಶಾಲಿಯಾದ ಮತ್ತು ಮಾತನಾಡುವುದರಲ್ಲಿ ಶ್ರೇಷ್ಠನಾದ ಅಶ್ವತ್ಥಾಮನು ದುರ್ಯೋಧನನನ್ನು ನೋಡುತ್ತಾ ಮಾತನಾಡಿದನು.

ನ ಚ ತಾವಜ್ಜಿತಾ ಗಾವೋ ನ ಚ ಸೀಮಾಂತರಂ ಗತಾಃ ।
ನ ಹಸ್ತಿನಪುರಂ ಪ್ರಾಪ್ತಾಸ್ತ್ವಂ ಚ ಕರ್ಣ ವಿಕತ್ಥಸೇ ॥೯॥

ಇನ್ನೂ ಗೋವುಗಳನ್ನು ಗೆಲ್ಲಲಿಲ್ಲ, ಗಡಿಯನ್ನೂ ದಾಟಲಿಲ್ಲ, ಹಸ್ತಿನಪುರವನ್ನು ಪ್ರವೇಶಿಸಲಿಲ್ಲ. ಎಲೈ ಕರ್ಣನೇ, ನೀನು ಮಾತ್ರ ಬಡಬಡಿಸುತ್ತಿದ್ದೀಯೆ.

ಬಹೂನಿ ಧರ್ಮಶಾಸ್ತ್ರಾಣಿ ಪಠಂತಿ ದ್ವಿಜಸತ್ತಮಾಃ ।
ತೇಷು ಕಿಂಸ್ವಿದಿದಂ ದೃಷ್ಟಂ ದ್ಯೂತೇ ಜೇಯೇತ ಯನ್ನೃಪಃ ॥೧೦॥

ಶ್ರೇಷ್ಠರಾದ ಬ್ರಾಹ್ಮಣರು ಅನೇಕ ಧರ್ಮಶಾಸ್ತ್ರಗಳನ್ನು ಪಠಿಸುತ್ತಾರೆ. ಅದರಲ್ಲಿ ರಾಜನು ದ್ಯೂತದಿಂದ ಗೆಲ್ಲಬೇಕೆಂದು ಯಾವ ಧರ್ಮಶಾಸ್ತ್ರದಲ್ಲಿ ಪಠಿತವಾಗಿದೆ?

ಸಂಗ್ರಾಮಾನ್ ವಿಪುಲಾನ್ ಜಿತ್ವಾ ಲಬ್ಧ್ವಾ ಚ ವಿಪುಲಂ ಧನಮ್ ।
ವಿಜಿತ್ಯ ಚ ಮಹೀಂ ಕೃತ್ಸ್ನಾಂ ನ ವಿಕತ್ಥೇತ ಪಂಡಿತಃ ॥೧೧॥

ದೊಡ್ಡ ಯುದ್ಧಗಳನ್ನು ಗೆದ್ದು, ಬಹಳ ಧನವನ್ನು ಸಂಪಾದಿಸಿ ಸಮಗ್ರವಾದ ಭೂಮಿಯನ್ನು ಗೆದ್ದರೂ ಪಂಡಿತನಾದವನು ತನ್ನನ್ನು ಹೊಗಳಿಕೊಳ್ಳಬಾರದು.

ದಹತ್ಯಗ್ನಿರವಾಕ್ಯಸ್ತು ತೂಷ್ಣೀಂ ಭಾತಿ ದಿವಾಕರಃ ।
ತೂಷ್ಣೀಂ ಧಾರಯತೇ ಲೋಕಾನ್ ವಸುಧಾ ಚ ಚರಾಚರಾನ್ ॥೧೨॥

ಮಾತನಾಡದೆ ಅಗ್ನಿಯು ಸುಡುತ್ತಾನೆ. ಮಾತನಾಡದೆಯೇ ಸೂರ್ಯನು ಪ್ರಕಾಶಿಸುತ್ತಾನೆ. ಮಾತನಾಡದೆಯೇ ಭೂಮಿಯು ಸ್ಥಾವರಜಂಗಮಪ್ರಾಣಿಗಳನ್ನು ಧರಿಸುತ್ತಾಳೆ.

ಚಾತುರ್ವರ್ಣ್ಯಸ್ಯ ಕರ್ಮಾಣಿ ವಿಹಿತಾನಿ ಸ್ವಯಂಭುವಾ ।
ಧನಂ ಯೈರಧಿಗಂತವ್ಯಂ ಯಚ್ಚ ಕುರ್ವನ್ ನ ದುಷ್ಯತಿ ॥೧೩॥

ಯಾರು ಧನವನ್ನು ಗಳಿಸಬೇಕು ಮತ್ತು ಯಾವುದನ್ನು ಮಾಡಿದರೆ ದೋಷವಾಗುವುದಿಲ್ಲ ಎಂದು ಚಾತುರ್ವರ್ಣದ ಕರ್ಮಗಳು ಬ್ರಹ್ಮದೇವರಿಂದ ಹೇಳಲ್ಪಟ್ಟಿವೆ.

ಅಧೀತ್ಯ ಬ್ರಾಹ್ಮಣೋ ವೇದಾನ್ ಯಾಜಯೇತ ಯಜೇತ ವಾ ।
ಕ್ಷತ್ರಿಯೋ ಧನಮಾಹೃತ್ಯ ಯಜೇತೈವ ನ ಯಾಜಯೇತ್ ॥೧೪॥

ಬ್ರಾಹ್ಮಣನು ವೇದಾಧ್ಯಯನವನ್ನು ಮಾಡಿ ಯಾಗವನ್ನು ಮಾಡಬೇಕು ಅಥವಾ ಮಾಡಿಸಬೇಕು. ಕ್ಷತ್ರಿಯನು ಧನವನ್ನು ಸಂಪಾದಿಸಿ ಯಾಗವನ್ನು ಮಾಡಬೇಕೇ ಹೊರತು ಮಾಡಿಸಬಾರದು.

ವೈಶ್ಯೋಽಧಿಗಮ್ಯ ದ್ರವ್ಯಾಣಿ ವಾರ್ತಾಕರ್ಮಾಣಿ ಕಾರಯೇತ್ ।
ಶೂದ್ರಃ ಶಿಶ್ರೂಷಣಂ ಕುರ್ಯಾತ್ ತ್ರಿಷು ವರ್ಣೇಷು ನಿತ್ಯಶಃ ॥೧೫॥

ವೈಶ್ಯನು ದ್ರವ್ಯವನ್ನು ಸಂಪಾದಿಸಿ ವಾಣಿಜ್ಯಕರ್ಮಗಳನ್ನು ಮಾಡಬೇಕು. ಶೂದ್ರನು ಯಾವಾಗಲೂ ಮೂರುವರ್ಣದವರ ಸೇವೆಯನ್ನು ಮಾಡಬೇಕು.

ವರ್ತಮಾನಾ ಯಥಾಶಾಸ್ತ್ರಂ ಪ್ರಾಪ್ಯ ಚಾಪಿ ಮಹೀಮಿಮಾಮ್ ।
ಪ್ರಕುರ್ವಂತಿ ಮಹಾಭಾಗಾಃ ಯಜ್ಞಾನ್ ಸುವಿಪುಲಾನಪಿ ॥೧೬॥

ಶಾಸ್ತ್ರಕ್ಕೆ ಅನುಸಾರವಾಗಿ ನಡೆದುಕೊಳ್ಳುವವರು ಈ ಭೂಮಿಯನ್ನೇ ಗೆದ್ದರೂ ಮಹಾನುಭಾವರಾದ ಅವರು ದೊಡ್ಡ ಯಜ್ಞಗಳನ್ನು ಆಚರಿಸುತ್ತಾರೆ.

ವೈಶಂಪಾಯನಃ

ದುರ್ಯೋಧನಮಭಿಪ್ರೇಕ್ಷ್ಯ ಕರ್ಣಂ ಚ ಕುರುಸಂಸದಿ ।
ಅಶ್ವತ್ಥಾಮಾ ಭೃಶಂ ಕ್ರುದ್ಧೋ ದುರ್ಯೋಧನಮತರ್ಜಯತ್ ॥೧೭॥

ವೈಶಂಪಾಯನ– ಕುರುಗಳ ಸಮ್ಮುಖದಲ್ಲಿ ಅಶ್ವತ್ಥಾಮರು ದುರ್ಯೋಧನ ಮತ್ತು ಕರ್ಣರನ್ನು ನೋಡುತ್ತಾ ಬಹಳ ಕ್ರುದ್ಧರಾಗಿ ದುರ್ಯೋಧನನನ್ನು ಹೆದರಿಸಿದರು.

ಪ್ರಾಪ್ಯ ದ್ಯೂತೇನ ಕೋ ರಾಜ್ಯಂ ಕ್ಷತ್ರಿಯೋ ಭೋಕ್ತುಮರ್ಹತಿ ।
ಯಥಾವೃತ್ತಂ ಸರೂಪೇಣ ಯದನ್ಯಃ ಪ್ರಾಕೃತೋ ಜನಃ ॥೧೮॥

ಯಾವ ಕ್ಷತ್ರಿಯನು ದ್ಯೂತದಿಂದ ರಾಜ್ಯವನ್ನು ಸಂಪಾದಿಸಿ ಭೋಗಿಸಲು ಅರ್ಹನಾಗುತ್ತಾನೆ? ಸಾಮಾನ್ಯವಾದ ಲೋಭಿಜನರು ತಮ್ಮ ನೀಚಸ್ವಭಾವಕ್ಕೆ ಅನುಗುಣವಾಗಿ ಧನವನ್ನು ಹೇಗೆ ಬಯಸುತ್ತಾರೆಯೋ ಅದರಂತೆ ನೀನೂ ನಡೆದುಕೊಂಡಿದ್ದಾಯಿತು.

ಬುದ್ಧಿಮಾನ್ ನೀತಿಮಾನ್ ರಾಜಾ ಕ್ಷತ್ರಿಯೋ ಯದಿ ವೇತರಃ ।
ನ ಚಾನೃತೇ ಯೋಗವಿಧಿಂ ಚರೇದ್ ವೈತಂಡಿಕೋ ಯಥಾ ॥೧೯॥

ಬುದ್ಧಿವಂತನೂ ನೀತಿವಂತನೂ ಆದ ಕ್ಷತ್ರಿಯರಾಜನಾಗಲೀ ಅಥವಾ ಇನ್ನೊಬ್ಬನಾಗಲೀ ವಿತಂಡವಾದಿಯಂತೆ ಮೋಸವನ್ನು, ಇದು ಒಳ್ಳೆಯ ಉಪಾಯವೆಂದು ಅನುಷ್ಠಾನ ಮಾಡಬಾರದು.

ಇಂದ್ರಪ್ರಸ್ಥಂ ತ್ವಯಾ ಕಸ್ಮಿನ್ ಸಂಗ್ರಾಮೇ ನಿರ್ಜಿತಂ ಪುರಾ ।
ಯುಧಿಷ್ಠಿರಶ್ಚ ಭೀಮಶ್ಚ ಕಸ್ಮಿನ್ ಯುದ್ಧೇ ತ್ವಯಾ ಜಿತೌ ॥೨೦॥

ನೀನು ಹಿಂದೆ ಇಂದ್ರಪ್ರಸ್ಥವನ್ನು ಯಾವ ಯುದ್ಧದಲ್ಲಿ ಗೆದ್ದೆ? ಯುಧಿಷ್ಠಿರ ಮತ್ತು ಭೀಮಸೇನ ಇವರನ್ನು ಯಾವ ಯುದ್ಧದಲ್ಲಿ ಗೆದ್ದೆ?

ಕತಮೇ ದ್ವೈರಥೇ ರಾಜನ್ ತ್ವಮಜೈಷೀರ್ಧನಂಜಯಮ್ ।
ನಕುಲಂ ಸಹದೇವಂ ಚ ಧನಂ ಯೇಷಾಂ ತ್ವಯಾ ಹೃತಮ್ ॥೨೧॥

ಎಲೈ ರಾಜನೇ, ಯಾವ ದ್ವೈರಥದಲ್ಲಿ ನೀನು ಧನಂಜಯನನ್ನು ಗೆದ್ದಿದ್ದೀಯೆ? ಯಾರ ಧನವನ್ನು ನೀನು ಅಪಹರಿಸಿದೆಯೋ ಅಂತಹ ನಕುಲ ಅಥವಾ ಸಹದೇವನನ್ನಾದರೂ ಯಾವ ಯುದ್ಧದಲ್ಲಿ ಗೆದ್ದಿದ್ದೀಯೆ?

ಭೂಯಶ್ಚ ಕತಮೇ ಯುದ್ಧೇ ಯತ್ರ ಕೃಷ್ಣಾ ತ್ವಯಾ ಜಿತಾ ।
ಏಕವಸ್ತ್ರಾ ಸಭಾಂ ನೀತಾ ಕ್ಷುದ್ರಕರ್ಮನ್ ರಜಸ್ವಲಾ ॥೨೨॥

ಮತ್ತು ಒಂದೇ ವಸ್ತ್ರವನ್ನು ಉಟ್ಟ ರಜಸ್ವಲೆಯಾದ ದ್ರೌಪದಿಯು ಎಲೈ ಕ್ಷುದ್ರಕರ್ಮನೇ, ಸಭೆಗೆ ಕರೆತರಲ್ಪಟ್ಟಳು. ಆ ದ್ರೌಪದಿಯನ್ನು ನೀನು ಯಾವ ಯುದ್ಧದಲ್ಲಿ ಗೆದ್ದೆ?

ಕುಲಮೇಷಾಂ ಮಹತ್ ಕೃತ್ತಂ ಸಾರಾರ್ಥೀ ಚಂದನಂ ಯಥಾ ।
ಕ್ಷುದ್ರಂ ಕರ್ಮ ಸಮಾಸ್ಥಾಯ ತತ್ರ ಕಿಂ ವಿದುರೋಽಬ್ರವೀತ್ ॥೨೩॥

ಶ್ರೇಷ್ಠವಾದ ಗಂಧವನ್ನು ಬಯಸುವವನು ಚಂದನವೃಕ್ಷವನ್ನು ಕಡಿದಂತೆ ಕ್ಷುದ್ರಕರ್ಮವನ್ನು ಮಾಡಿ ಕೌರವರ ದೊಡ್ಡ ಕುಲವನ್ನೇ ನಾಶ ಮಾಡಿದೆ. ಆಗ ವಿದುರನು ಏನು ಹೇಳಿದನು?

ಯಥಾಶಕ್ತಿ ಮನುಷ್ಯಾಣಾಮಮರ್ಷಂ ಲಕ್ಷಯಾಮಹೇ ।
ಅನ್ಯೇಷಾಮಪಿ ಸತ್ವಾನಾಮಪಿ ಕೀಟಪಿಪೀಲಿಕೈಃ ॥೨೪॥

ಮನುಷ್ಯರಿಗೆ ಯಥಾಶಕ್ತಿಯಾಗಿ ರೋಷವಿರುವುದನ್ನು ನಾವು ಗಮನಿಸುತ್ತೇವೆ. ಕೀಟ, ಇರುವೆ ಮೊದಲಾದ ಇತರ ಪ್ರಾಣಿಗಳಿಗೂ ರೋಷವಿರುವುದನ್ನು ಲಕ್ಷಿಸುತ್ತೇವೆ.

ದ್ರೌಪದ್ಯಾಶ್ಚ ಪರಿಕ್ಲೇಶಂ ನ ಕ್ಷಂತುಂ ಪಾಂಡವೋಽರ್ಹತಿ ।
ದುಃಖಾಯ ಧಾರ್ತರಾಷ್ಟ್ರಾಣಾಂ ಪ್ರಾದುರ್ಭೂತೋ ಧನಂಜಯಃ ॥

ಆದರೆ ದ್ರೌಪದಿಯ ಪರಿಕ್ಲೇಶವನ್ನು ಪಾಂಡವನು ಕ್ಷಮಿಸುವುದಿಲ್ಲ. ಧೃತರಾಷ್ಟ್ರನ ಪುತ್ರರ ದುಃಖಕ್ಕಾಗಿ ಅರ್ಜುನನು ಪ್ರಾದುರ್ಭವಿಸಿದ್ದಾನೆ.

ತ್ವಂ ಪುನಃ ಪಂಡಿತೋ ಭೂತ್ವಾ ಹ್ಯಾಚಾರ್ಯಂ ಕ್ಷೇಪ್ತುಮಿಚ್ಛಸಿ ।
ವೈರಾಂತಕರಣೋ ಜಿಷ್ಣುರ್ನಿಃಶೇಷಂ ಕರ್ತುಮರ್ಹತಿ ॥೨೬॥

ನೀನು ಪುನಃ ಪಂಡಿತನಾಗಿ ಆಚಾರ್ಯರನ್ನು ನಿಂದಿಸಲು ಇಚ್ಛಿಸುತ್ತೀಯೆ. ವೈರದ ಕೊನೆಯನ್ನು ತಲುಪುವ ಅರ್ಜುನನು ಯಾರನ್ನೂ ಉಳಿಸುವುದಿಲ್ಲ.

ನೈವ ದೇವಾ ನ ಗಂಧರ್ವಾ ನಾಸುರಾ ನ ಚ ರಾಕ್ಷಸಾಃ ।
ಭಯಾದಿಹ ಚ ಯುದ್ಧ್ಯೇರನ್ ಕುಂತೀಪುತ್ರೇಣ ಧೀಮತಾ ॥೨೭॥

ದೇವತೆಗಳಾಗಲೀ, ಗಂಧರ್ವರಾಗಲೀ, ಅಸುರರಾಗಲೀ, ರಾಕ್ಷಸರಾಗಲೀ ಮೇಧಾವಿಯಾದ ಅರ್ಜುನನ ಜೊತೆಯಲ್ಲಿ ಇಲ್ಲಿ ಭಯದಿಂದ ಯುದ್ಧವನ್ನು ಮಾಡಲಾರರು.

ಯಂ ಯಮೇಕೋಽಭಿಸಂಕ್ರುದ್ಧಃ ಸಂಗ್ರಾಮೇಽಭಿಭವಿಷ್ಯತಿ ।
ವೃಕ್ಷಂ ಗರುಡವೇಗೋ ವಾ ವಿನಿಹತ್ಯಾಂತಮೇಷ್ಯತಿ ॥೨೮॥

ಯಾವ ಯಾವನು ಒಬ್ಬನೇ ಯುದ್ಧದಲ್ಲಿ ಅರ್ಜುನನನ್ನು ಎದುರಿಸುವನೋ ಆಯಾ ವ್ಯಕ್ತಿಯನ್ನು ಗರುಡನ ವೇಗವು ವೃಕ್ಷವನ್ನು ನಾಶಮಾಡಿದಂತೆ ಅರ್ಜುನನು ಕೊಂದು ಅಂತ್ಯವನ್ನು ಮಾಡುತ್ತಾನೆ.

ತ್ವತ್ತೋ ವಿಶಿಷ್ಟಂ ವೀರ್ಯೇಣ ಧನುಷ್ಯಮರರಾಟ್‌ಸಮಮ್ ।
ವಾಸುದೇವಸಮಂ ಯುದ್ಧೇ ತಂ ಪಾರ್ಥಂ ಕೋ ನ ಪೂಜಯೇತ್ ॥

ಪರಾಕ್ರಮದಲ್ಲಿ ನಿನಗಿಂತಲೂ ಅಧಿಕನಾದ, ಧನುರ್ವಿದ್ಯೆಯಲ್ಲಿ ದೇವೇಂದ್ರನಿಗೆ ಸಮನಾದ, ಯುದ್ಧದಲ್ಲಿ ಕೃಷ್ಣನಿಗೆ ಸಮನಾದ, ಆ ಅರ್ಜುನನನ್ನು ಯಾವನು ಗೌರವಿಸುವುದಿಲ್ಲ?

ದೈವಂ ದೈವೇನ ಯುದ್ಧ್ಯೇತ ಮಾನುಷೇಣ ಚ ಮಾನುಷಮ್ ।
ಅಸ್ತ್ರಂ ಚಾಸ್ತ್ರೇಣ ಯೋ ಹನ್ಯಾದ್ ಅರ್ಜುನೇನಾಧಿಕಃ ಪುಮಾನ್ ॥೩೦॥

ಯಾವನಾದರೂ ಅರ್ಜುನನಿಗಿಂತಲೂ ಶ್ರೇಷ್ಠನಾದ ಪುರುಷನಿದ್ದರೆ ಅವನು ದೈವವನ್ನು ದೈವದಿಂದಲೂ, ಮಾನುಷವನ್ನು ಮಾನುಷದಿಂದಲೂ, ಅಸ್ತ್ರವನ್ನು ಅಸ್ತ್ರದಿಂದಲೂ ಪ್ರತಿಯಾಗಿ ಯುದ್ಧವನ್ನು ಮಾಡಿಯಾನು.

ಪುತ್ರಾದನವಮಃ ಶಿಷ್ಯ ಇತಿ ಧರ್ಮವಿದೋ ವಿದುಃ ।
ಏತೇನಾಪಿ ನಿಮಿತ್ತೇನ ಪ್ರಿಯೋ ದ್ರೋಣಸ್ಯ ಪಾಂಡವಃ ॥೩೧॥

ಪುತ್ರನಿಗಿಂತ ಶಿಷ್ಯನು ಕಡಿಮೆಯವನಲ್ಲ ಎಂದು ಧರ್ಮವನ್ನು ತಿಳಿದವರು ಹೇಳುತ್ತಾರೆ. ಈ ನಿಮಿತ್ತದಿಂದಲೂ ಕೂಡ ದ್ರೋಣರಿಗೆ ಅರ್ಜುನನು ಪ್ರಿಯನಾದವನು.

ಯಥಾ ತ್ವಮಕರೋದ್ಯುತಮಿಂದ್ರಪ್ರಸ್ಥಂ ಯಥಾಽಹರಃ ।
ಸಭಾಂ ಕೃಷ್ಣಾಂ ಯಥಾಽನೈಷೀಸ್ತಥಾ ಯುಧ್ಯಸ್ವ ಪಾಂಡವಮ್ ॥೩೨॥

ನೀನು ಹೇಗೆ ದ್ಯೂತವನ್ನು ಆಡಿದೆಯೋ, ಹೇಗೆ ಇಂದ್ರಪ್ರಸ್ಥವನ್ನು ಸಂಪಾದಿಸಿದೆಯೋ, ಹೇಗೆ ಸಭೆಗೆ ದ್ರೌಪದಿಯನ್ನು ಎಳೆತಂದೆಯೋ ಹಾಗೆಯೇ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡು.

ಅಯಂ ತೇ ಮಾತುಲಃ ಪ್ರಾಜ್ಞಃ ಕ್ಷತ್ರಧರ್ಮಸ್ಯ ಕೋವಿದಃ ।
ದುರ್ದ್ಯೂತವೇದೀ ಗಾಂಧಾರಿಃ ಶಕುನಿರ್ಯುಧ್ಯತಾಮಿಹ ॥೩೩॥

ಪ್ರಾಜ್ಞನೂ, ಕ್ಷತ್ರಧರ್ಮದಲ್ಲಿ ಕೋವಿದನೂ, ಕೆಟ್ಟದ್ಯೂತವನ್ನು ಆಡಲು ತಿಳಿದವನೂ, ಗಾಂಧಾರದೇಶದವನೂ ಆದ ಈ ನಿನ್ನ ಸೋದರ ಮಾವ ಶಕುನಿಯು ಇಲ್ಲಿ ಯುದ್ಧವನ್ನು ಮಾಡಲಿ.

ನಾಕ್ಷಾನ್ ಕ್ಷಿಪತಿ ಗಾಂಡೀವೀ ನ ಕೃತಂ ದ್ವಾಪರಂ ನ ಚ ।
ಜ್ವಲಿತಾಗ್ನಿಶಿಖಾನ್ ಬಾಣಾನ್ ತೀಕ್ಷ್ಣಾನ್ ಕ್ಷಿಪತಿ ಗಾಂಡಿವಃ ॥೩೪॥

ಗಾಂಡೀವಧನುರ್ಧಾರಿಯಾದ ಅರ್ಜುನನು ದಾಳಗಳನ್ನಾಗಲೀ, ಕೃತದ್ವಾಪರ ಗರಗಳನ್ನಾಗಲೀ ಎಸೆಯುವುದಿಲ್ಲ. ಗಾಂಡೀವಿಯಾದ ಅವನು ಜ್ವಲಿಸುವ ಅಗ್ನಿಯ ಜ್ವಾಲೆಗಳಂತಿರುವ ತೀಕ್ಷ್ಣವಾದ ಬಾಣಗಳನ್ನು ಎಸೆಯುತ್ತಾನೆ.

ನ ಹಿ ಗಾಂಡೀವನಿರ್ಮುಕ್ತಾ ಗೃಧ್ರಪತ್ರಾಃ ಶಿಲಾಶಿತಾಃ ।
ಅಂತರೇಷ್ವವತಿಷ್ಠಂತೇ ಗಿರೀಣಾಮಪಿ ದಾರಣಾಃ ॥೩೫॥

ಗಾಂಡೀವದಿಂದ ಹೊರಹೊಮ್ಮಿದ, ರುದ್ರಪತ್ರಗಳನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ಪರ್ವತಗಳನ್ನೂ ಭೇದಿಸುವ ಬಾಣಗಳು ಮಧ್ಯದಲ್ಲಿಯೇ ನಿಂತುಬಿಡುವುದಿಲ್ಲ

ಅಂತಕಃ ಪವನೋ ಮೃತ್ಯುಃ ತಥಾಽಗ್ನಿರ್ಬಡವಾಮುಖಃ ।
ಕ್ಷುರಧಾರಾ ವಿಷಂ ಸರ್ಪೋ ವಜ್ರೀ ಚೈವ ಪರಂತಪಃ ॥೩೬॥

ಕುರ್ಯುರೇತೇ ಕ್ವಚಿಚ್ಛೇಷಂ ನ ತು ಕ್ರುದ್ಧೋ ಧನಂಜಯಃ ॥೩೭॥

ಯಮ, ವಾಯು, ಮೃತ್ಯು ಹಾಗೆಯೇ ವಡವಾಗ್ನಿ, ಕತ್ತಿಯ ಅಲುಗು, ವಿಷ, ಸರ್ಪ, ಪರಂತಪನಾದ ಇಂದ್ರ ಇವರು ಸ್ವಲ್ಪ ಶೇಷವನ್ನು ಉಳಿಸಬಹುದು. ಆದರೆ ಕ್ರುದ್ಧನಾದ ಧನಂಜಯನು ಯಾರನ್ನೂ ಉಳಿಸುವುದಿಲ್ಲ.

ಯಥಾ ಸಭಾಯಾಂ ದ್ಯೂತಂ ತ್ವಂ ಮಾತುಲೇನ ಸಹಾಕರೋಃ ।
ತಥಾ ಯುದ್ಧ್ಯಸ್ವ ಸಂಗ್ರಾಮೇ ಸೌಬಲೇನ ಸುರಕ್ಷಿತಃ ॥೩೮॥

ಹೇಗೆ ನೀನು ಸಭೆಯಲ್ಲಿ ಸೋದರಮಾವನ ಜೊತೆಯಲ್ಲಿ ದ್ಯೂತವನ್ನು ಆಡಿದೆಯೋ ಹಾಗೆಯೇ ಆ ಶಕುನಿಯಿಂದ ಸುರಕ್ಷಿತನಾಗಿ ಯುದ್ಧವನ್ನು ಮಾಡುವವನಾಗು.

ಯುದ್ಧ್ಯತಾಂ ಕಾಮಮಾಚಾರ್ಯೋ
ನಾಹಂ ಯೋತ್ಸ್ಯೇ ಧನಂಜಯಮ್ ।
ಮಾತ್ಸ್ಯಸ್ತ್ವಂ ಸ್ಮಾಭಿರಾಯೋಧ್ಯೋ
ಯದ್ಯಾಗಚ್ಛೇದ್ ಗವಾಂ ಪದಮ್ ॥೩೯॥

ಆಚಾರ್ಯರು ಬೇಕಾದರೆ ಯುದ್ಧವನ್ನು ಮಾಡಲಿ. ನಾನು ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವುದಿಲ್ಲ. ಗೋವುಗಳನ್ನು ಹುಡುಕಿಕೊಂಡು ಬಂದರೆ ನಾವು ವಿರಾಟನ ಜೊತೆಯಲ್ಲಿ ಮಾತ್ರ ಯುದ್ಧವನ್ನು ಮಾಡಬೇಕಾದವರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಏಕೋನಪಂಚಾಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಐವತ್ತನೆಯ ಅಧ್ಯಾಯ

ಭೀಷ್ಮರ ಸಾಂತ್ವನ. ದುರ್ಯೋಧನ ಮತ್ತು ಕರ್ಣರಿಂದ ಕ್ಷಮಾಯಾಚನೆ.

ವೈಶಂಪಾಯನಃ

ತತಃ ಶಾಂತನವಸ್ತತ್ರ ಧರ್ಮಾರ್ಥಕುಶಲಂ ಹಿತಮ್ ।
ದುರ್ಯೋಧನಮಿದಂ ವಾಕ್ಯಮಬ್ರವೀತ್ ಕುರುಸನ್ನಿಧೌ ॥೧॥

ವೈಶಂಪಾಯನ– ಆಗ ಶಂತನು ಪುತ್ರರಾದ ಭೀಷ್ಮರು ಅಲ್ಲಿ ಕುರುಸನ್ನಿಧಿಯಲ್ಲಿ ದುರ್ಯೋಧನನನ್ನು ಕುರಿತು ಧರ್ಮಾರ್ಥಕೌಶಲದಿಂದ ಕೂಡಿದ ಹಿತವಾದ ಈ ಮಾತುಗಳನ್ನು ಆಡಿದರು.

ಸಾಧು ಪಶ್ಯತಿ ವೈ ದ್ರೋಣಃ ಕೃಪಃ ಸಾಧ್ವನುಪಶ್ಯತಿ ।
ಆಚಾರ್ಯಪುತ್ರಃ ಸಹಜಂ ನಿಶ್ಚಿತಂ ಸಾಧು ಭಾಷತೇ ॥೨॥

ದ್ರೋಣರು ಎಲ್ಲವನ್ನು ಸರಿಯಾಗಿಯೇ ನೋಡುತ್ತಿದ್ದಾರೆ. ಕೃಪಾಚಾರ್ಯರೂ ಸರಿಯಾಗಿಯೇ ನೋಡಿ ಮಾತನಾಡುತ್ತಿದ್ದಾರೆ. ಆಚಾರ್ಯ ಪುತ್ರರಾದ ಅಶ್ವತ್ಥಾಮರೂ ಸ್ವಾಭಾವಿಕವಾಗಿ ನಿಶ್ಚಿತವಾದುದನ್ನೇ ಚೆನ್ನಾಗಿ ಹೇಳುತ್ತಿದ್ದಾರೆ.

ಕರ್ಣಸ್ತು ಕ್ಷತ್ರಧರ್ಮೇಣ ಕೇವಲಂ ಯೋದ್ಧುಮಿಚ್ಛತಿ ।
ಆಚಾರ್ಯೋ ನಾವಮಂತವ್ಯಃ ಪುರುಷೇಣ ವಿಜಾನತಾ ॥೩॥

ದೇಶಕಾಲೌ ತು ಸಂಪ್ರೇಕ್ಷ್ಯ ಯೋದ್ಧವ್ಯಮಿತಿ ಮೇ ಮತಿಃ ॥೪॥

ಕರ್ಣನು ಕೇವಲ ಕ್ಷತ್ರಧರ್ಮವನ್ನು ಅನುಸರಿಸಿ ಯುದ್ಧವನ್ನು ಮಾಡಲು ಬಯಸುತ್ತಾನೆ. ವಿವೇಕವಿದ್ದ ಪುರುಷನು ಎಂದೂ ಆಚಾರ್ಯರಿಗೆ ಅವಮಾನ ಮಾಡಬಾರದು. ದೇಶಕಾಲಗಳನ್ನು ಗಮನಿಸಿ ಯುದ್ಧವನ್ನು ಮಾಡಬೇಕೆಂದು ನನ್ನ ಅಭಿಪ್ರಾಯ.

ಯಸ್ಯ ಸೂರ್ಯಸಮಾಃ ಪಂಚ ಸಪತ್ನಾಃ ಸ್ಯುಃ ಪ್ರಹಾರಿಣಃ ।
ಕಥಮಭ್ಯುದಯೇ ತೇಷಾಂ ನ ಪ್ರಮುಹ್ಯೇತ ಪಂಡಿತಃ ॥೫॥

ಯಾವನಿಗೆ ಸೂರ್ಯನಿಗೆ ಸಮನಾದ, ಪ್ರಹಾರವನ್ನು ಮಾಡುವ, ಐದು ಜನ ಶತ್ರುಗಳು ಇರುತ್ತಾರೆಯೋ ಅಂತಹವನು ಪಂಡಿತನಾದರೂ ಶತ್ರುಗಳ ಅಭ್ಯುದಯವನ್ನು ನೋಡುವಾಗ ಹೇಗೆ ಮೋಹಕ್ಕೆ ಒಳಗಾಗಲಾರನು?

ಸ್ವಾರ್ಥೇ ಹಿ ಸರ್ವೇ ಮುಹ್ಯಂತಿ ಯೇಽಪಿ ಧರ್ಮವಿದೋ ಜನಾಃ ।
ತಸ್ಮಾತ್ ತತ್ವಂ ನ ಜಾನಾತಿ ಯತ್ತು ಕಾರ್ಯಂ ನರಾಧಿಪಃ ॥೬॥

ಧರ್ಮವನ್ನು ತಿಳಿದ ಜನರೆಲ್ಲರೂ ಸಹ ತಮ್ಮ ಸ್ವಾರ್ಥದ ವಿಷಯದಲ್ಲಿ ಮೋಹಕ್ಕೆ ಒಳಗಾಗುತ್ತಾರೆ. ಆದ್ದರಿಂದ ರಾಜನಾದ ದುರ್ಯೋಧನನು ಏನು ಮಾಡಬೇಕೆಂದು ತಿಳಿಯುತ್ತಿಲ್ಲ.

ಧಾರ್ತರಾಷ್ಟ್ರೋಽಪಿ ದುರ್ಬುದ್ಧಿಃ ಪಶ್ಯನ್ನಪಿ ಧನಂಜಯಮ್ ।
ನೈವ ಪಶ್ಯತಿ ನಾಘ್ರಾತಿ ಮಂದಃ ಕ್ರೋಧವಶಂ ಗತಃ ॥೭॥

ದುರ್ಬುದ್ಧಿಯುಳ್ಳ ದುರ್ಯೋಧನನೂ ಕೂಡ ಅರ್ಜುನನನ್ನು ನೋಡಿದರೂ ಮಂದನೂ, ಕ್ರೋಧವಶನೂ ಆಗಿ ಅವನ ಕೀರ್ತಿಸೌರಭವನ್ನು ಆಘ್ರಾಣಿಸುತ್ತಿಲ್ಲ.

ಏವಮುಕ್ತ್ವಾ ತು ರಾಜಾನಂ ಪುನರ್ದ್ರೋಣಮಥಾಬ್ರವೀತ್ ।
ಪ್ರಾಂಜಲಿರ್ಭರತಶ್ರೇಷ್ಠಃ ಸಾಮ್ನಾ ಬುದ್ಧಿಮತಾಂ ವರಃ ॥೮॥

ರಾಜನನ್ನು ಕುರಿತು ಹೀಗೆ ಮಾತನಾಡಿ ಬುದ್ಧಿವಂತರಲ್ಲಿ ಶ್ರೇಷ್ಠರಾದ ಭರತಶ್ರೇಷ್ಠರಾದ ಭೀಷ್ಮರು ಕೈಗಳನ್ನು ಮುಗಿದು ಪುನಃ ಅಶ್ವತ್ಥಾಮರನ್ನು ಕುರಿತು ಮಾತನಾಡಿದರು.

ಕರ್ಣೋ ಯದ್ಯದವೋಚದ್ಧಿ ತೇಜಃಸಂಜನನಾಯ ನಃ ।
ಆಚಾರ್ಯಪುತ್ರಃ ಕ್ಷಮತಾಂ ಮಹತ್ ಕಾರ್ಯಮುಪಸ್ಥಿತಮ್ ॥೯॥

ಕರ್ಣನು ಏನು ಹೇಳಿದನೋ ಅದೆಲ್ಲವೂ ನಮ್ಮ ತೇಜಸ್ಸನ್ನು ವರ್ಧಿಸುವುದಕ್ಕಾಗಿ. ಆಚಾರ್ಯಪುತ್ರರು ಕ್ಷಮಿಸಬೇಕು. ದೊಡ್ಡ ಕಾರ್ಯವು ಸನ್ನಿಹಿತವಾಗಿದೆ.

ನಾಯಂ ಕಾಲೋ ವಿರೋಧಸ್ಯ ಕೌಂತೇಯೇ ಸಮುಪಸ್ಥಿತೇ ।
ಕ್ಷಂತವ್ಯಂ ಭವತಾ ಸರ್ವಮಾಚಾರ್ಯೇಣ ಕೃಪೇಣ ಚ ॥೧೦॥

ಅರ್ಜುನನು ಎದುರಿಗಿರುವಾಗ ಇದು ವಿರೋಧದ ಕಾಲವಲ್ಲ. ಆದ್ದರಿಂದ ನೀವೂ, ಆಚಾರ್ಯರಾದ ದ್ರೋಣರೂ ಮತ್ತು ಕೃಪರೂ ಕ್ಷಮಿಸಬೇಕು.

ಬಲಸ್ಯ ವ್ಯಸನಾನ್ಯಾಹುರ್ಯಾನಿ ವೀರಾ ಮನೀಷಿಣಃ ।
ಮುಖ್ಯಂ ಭೇದಂ ತು ತೇಷಾಂ ಚ ಪಾಪಿಷ್ಠಂ ವಿದುಷಾಂ ಮತಮ್ ॥

ವಿವೇಕಿಗಳಾದ ವೀರರು ಸೈನ್ಯದ ವ್ಯಸನಗಳನ್ನು ಏನೆಂದು ಹೇಳುತ್ತಾರೆಯೋ ಅವುಗಳಲ್ಲಿ ಮುಖ್ಯವಾದುದು ಮತ್ತು ಅತಿ ಕೆಟ್ಟದಾದುದು ತಮ್ಮಲ್ಲಿ ಪರಸ್ಪರ ವಿರೋಧವೆಂದು ಜ್ಞಾನಿಗಳ ಅಭಿಪ್ರಾಯ.

ಭವತ್ಸು ಹಿ ಕೃತಾಸ್ತ್ರತ್ವಂ ಯಥಾऽऽದಿತ್ಯೇ ಪ್ರಭಾ ತಥಾ ।
ಯಥಾ ಚಂದ್ರಮಸೋ ಲಕ್ಷ್ಮೀಃ ಸರ್ವಥಾ ನಾಪಕೃಷ್ಯತೇ ॥೧೨॥

ಆದಿತ್ಯನಿಂದ ಪ್ರಭೆಯು ಎಂದೂ ಹೋಗದಿರುವಂತೆ ಚಂದ್ರನಿಂದ ಕಾಂತಿಯು ಎಂದೂ ಹೋಗದಿರುವಂತೆ ನಿಮ್ಮ ಅಸ್ತ್ರವಿದ್ಯೆಯು ನಿಮ್ಮನ್ನು ಎಂದೂ ಬಿಟ್ಟು ಹೋಗುವುದಿಲ್ಲ.

ಏವಂ ಭವತ್ಸು ಬ್ರಹ್ಮಾಸ್ತ್ರಂ ಬ್ರಹ್ಮ ಚೈವ ಪ್ರತಿಷ್ಠಿತಮ್ ।
ಏಕತ್ರ ಚತುರೋ ವೇದಾಃ ಕ್ಷಾತ್ರಮೇಕತ್ರ ದೃಶ್ಯತೇ ॥೧೩॥

ನೈತತ್ ಸಮಸ್ತಮುಭಯಂ ಕಸ್ಮಿಂಶ್ಚಿದನುಶುಶ್ರುಮ ।
ಅನ್ಯತ್ರ ಭಾರತಾಚಾರ್ಯಾತ್ ಸಪುತ್ರಾದಿತಿ ಮೇ ಮತಿಃ ॥೧೪॥

ಬ್ರಹ್ಮಾಸ್ತ್ರಂ ಚೈವ ವೇದಾಶ್ಚ ನೈತದನ್ಯತ್ರ ದೃಶ್ಯತೇ ॥೧೫॥

ಹೀಗೆ ವೇದವೂ ಮತ್ತು ಬ್ರಹ್ಮಾಸ್ತ್ರವೂ ನಿಮ್ಮಲ್ಲಿ ಪ್ರತಿಷ್ಠಿತವಾಗಿದೆ. ಭಾರತಾಚಾರ್ಯರಾದ ದ್ರೋಣರನ್ನು ಮತ್ತು ಅವರ ಪುತ್ರರನ್ನು ಬಿಟ್ಟು ಒಂದೇ ಕಡೆ ನಾಲ್ಕು ವೇದಗಳು ಮತ್ತು ಕ್ಷಾತ್ರತೇಜಸ್ಸು ಇವೆರಡೂ ಸಮಸ್ತವಾಗಿ ಎಲ್ಲಿಯೂ ಇಲ್ಲವೆಂದು ನಾವು ಕೇಳಿದ್ದೇವೆ. ಬ್ರಹ್ಮಾಸ್ತ್ರ ಮತ್ತು ವೇದಗಳು ಒಂದೇ ಕಡೆ ಬೇರೆ ಎಲ್ಲೂ ಕಂಡುಬರುವುದಿಲ್ಲ ಎಂದು ನನ್ನ ಅಭಿಪ್ರಾಯ.

ವೇದಾಂತಾಶ್ಚ ಪುರಾಣಾನಿ ಇತಿಹಾಸಂ ಪುರಾತನಮ್ ।
ಜಾಮದಗ್ನ್ಯಾದ್ ಋತೇ ರಾಮಾತ್ ಕೋ ದ್ರೋಣಾದಧಿಕೋ ಭವೇತ್ ॥

ವೇದಾಂತಗಳು, ಪುರಾಣ ಮತ್ತು ಪ್ರಾಚೀನ ಇತಿಹಾಸಗಳು ಇವುಗಳಲ್ಲಿ ಪರಶುರಾಮರನ್ನು ಬಿಟ್ಟರೆ ದ್ರೋಣರಿಗಿಂತ ಅಧಿಕರಾದವರು ಯಾರಿದ್ದಾರೆ?

ಆಚಾರ್ಯಪುತ್ರಃ ಕ್ಷಮತಾಂ ನಾಯಂ ಕಾಲೋ ವಿಭೇದನೇ ।
ಸರ್ವೇ ಸಂಗತ್ಯ ಯುದ್ಧ್ಯಾಮಃ ಪಾಕಶಾಸನಿಮಾಗತಮ್ ॥೧೭॥

ಆಚಾರ್ಯ ಪುತ್ರರು ಕ್ಷಮಿಸಬೇಕು. ಇದು ವಿರೋಧದ ಕಾಲವಲ್ಲ. ಯುದ್ಧಕ್ಕೆ ಬಂದ ಅರ್ಜುನನ ಜೊತೆಯಲ್ಲಿ ಎಲ್ಲರೂ ಸೇರಿ ಯುದ್ಧವನ್ನು ಮಾಡೋಣ.

ಬಲಸ್ಯ ವ್ಯಸನಾನೀಹ ಯಾನ್ಯುಕ್ತಾನಿ ಮನೀಷಿಭಿಃ ।
ಮುಖ್ಯೋ ಭೇದೋ ಹಿ ತೇಷಾಂ ವೈ ಪಾಪಿಷ್ಠೋ ವಿದುಷಾಂ ಮತಃ ॥

ವಿವೇಕಿಗಳಾದವರು ಸೈನ್ಯದ ವ್ಯಸನಗಳನ್ನೇನು ಹೇಳುತ್ತಾರೆಯೋ ಅವುಗಳಲ್ಲಿ ವಿರೋಧವು ಮುಖ್ಯವಾದದು ಮತ್ತು ಅತ್ಯಂತ ಕೆಟ್ಟದ್ದು ಎಂದು ಜ್ಞಾನಿಗಳ ಅಭಿಪ್ರಾಯ.

ಅಶ್ವತ್ಥಾಮಾ

ನೈವ ನ್ಯಾಯ್ಯಮಿದಂ ವಾಚ್ಯಮಸ್ಮಾಕಂ ಪುರುಷರ್ಷಭ ।
ಕಿಂತು ರೋಷಪರೀತೇನ ಗುರುಣಾ ಭಾಷಿತಾ ಗುಣಾಃ ॥೧೯॥

ಅಶ್ವತ್ಥಾಮಾ– ಎಲೈ ಪುರುಷರ್ಷಭನೇ, ಜ್ಞಾನಯುಕ್ತವಾದ ಈ ಮಾತುಗಳನ್ನು ನಮಗೆ ಹೇಳಬೇಕಾದ ಅವಶ್ಯಕತೆಯಿಲ್ಲ. ಆದರೆ ರೋಷಕ್ಕೆ ಸಿಲುಕಿದ ಗುರುಗಳು ಶಿಷ್ಯನ ಗುಣಗಳನ್ನು ಹೇಳಿದರು.

ಶತ್ರೋರಪಿ ಗುಣಾ ಗ್ರಾಹ್ಯಾ ದೋಷಾ ವಾಚ್ಯಾ ಗುರೋರಪಿ ।
ಸರ್ವಥಾ ಸರ್ವಯತ್ನೇನ ಪುತ್ರೇ ಶಿಷ್ಯೇ ಹಿತಂ ವದೇತ್ ॥೨೦॥

ಶತ್ರುಗಳ ಗುಣಗಳನ್ನೂ ಗ್ರಹಿಸಬೇಕು, ಗುರುಗಳ ದೋಷಗಳನ್ನೂ ಹೇಳಬೇಕು. ಪುತ್ರನಲ್ಲಿಯೂ ಮತ್ತು ಶಿಷ್ಯನಲ್ಲಿಯೂ ಎಲ್ಲರೀತಿಯಿಂದಲೂ ಮತ್ತು ಎಲ್ಲಾ ಪ್ರಯತ್ನಗಳಿಂದಲೂ ಹಿತವನ್ನೇ ನುಡಿಯಬೇಕು.

ಆಚಾರ್ಯ ಏವ ಕ್ಷಮತಾಂ ಶಾಂತಿರತ್ರ ವಿಧೀಯತಾಮ್ ।
ಪಶ್ಯತೋ ಹಿ ಗುರೋರ್ಮಾತ್ಸ್ಯಾನ್ ನಿವೃತ್ತಂ ಕೋಪಕಾರಿತಮ್ ॥೨೧॥

ಆಚಾರ್ಯರೇ ಕ್ಷಮಿಸಲಿ. ಇಲ್ಲಿ ಶಾಂತಿಯುಂಟಾಗಲಿ. ಮತ್ಸ್ಯದೇಶದ ಸೈನಿಕರನ್ನು ನೋಡಿದಾಗಲೇ ದ್ರೋಣರಿಗೆ ಕರ್ಣನ ರೋಷಕಾರಕ ವಚನಗಳು ಮರೆತುಹೋಗಿವೆ.

ವೈಶಂಪಾಯನಃ

ತತೋ ದುರ್ಯೋಧನೋ ದ್ರೋಣಂ ಕ್ಷಮಯಾಮಾಸ ಭಾರತ ।
ಸಹ ಕರ್ಣೇನ ಭೀಷ್ಮೇಣ ಕೃಪಂ ಚ ಸುಮಹಾಬಲಮ್ ॥೨೨॥

ವೈಶಂಪಾಯನ– ಎಲೈ ಭಾರತನೇ, ಆಗ ಕರ್ಣ ಮತ್ತು ಭೀಷ್ಮರಿಂದ ಸಹಿತನಾದ ದುರ್ಯೋಧನನು ದ್ರೋಣರನ್ನೂ ಮತ್ತು ಮಹಾಬಲಿಷ್ಠರಾದ ಕೃಪರನ್ನೂ ಕ್ಷಮೆಯನ್ನು ಯಾಚಿಸಿದನು.

ದ್ರೋಣಃ

ಯದೈವ ಪ್ರಥಮಂ ವಾಕ್ಯಂ ಭೀಷ್ಮಃ ಶಾಂತನವೋಽಬ್ರವೀತ್ ।
ತದೈವಾವಾಂ ಪ್ರಸನ್ನೌ ವೈ ಪರಮತ್ರ ವಿಧೀಯತಾಮ್ ॥೨೩॥

ದ್ರೋಣ– ಶಂತನು ಪುತ್ರರಾದ ಭೀಷ್ಮರು ಮೊದಲನೆಯ ವಾಕ್ಯವನ್ನು ಹೇಳಿದಾಗಲೇ ನಮ್ಮಿಬ್ಬರ ಕೋಪವು ಹೊರಟುಹೋಯಿತು. ನಾವು ಪ್ರಸನ್ನರಾಗಿದ್ದೇವೆ. ಮುಂದೆ ಮಾಡಬೇಕಾದ ಕಾರ್ಯವನ್ನು ಮಾಡಿ.

ಯಥಾ ದುರ್ಯೋಧನೋ ರಾಜಾ ನ ಗಚ್ಛೇತ್ ಕಾಂಚಿದಾಪದಮ್ ।
ಸಾಹಸಾದ್ ಯದಿ ವಾ ಮೋಹಾತ್ ತಥಾ ನೀತಿರ್ವಿಧೀಯತಾಮ್ ॥

ಸಾಹಸದಿಂದಾಗಲೀ ಅಥವಾ ಮೋಹದಿಂದಾಗಲೀ ರಾಜನಾದ ದುರ್ಯೋಧನನಿಗೆ ಆಪತ್ತು ಒದಗದಂತೆ ನೀತಿಯನ್ನು ರೂಪಿಸಿ.

ವನವಾಸೇ ತು ನಿವೃತ್ತೇ ದೃಶ್ಯತೇ ತು ಧನಂಜಯಃ ।
ಧನಂ ಚಾಲಭಮಾನೋಽತ್ರ ನಾದ್ಯ ನಃ ಕ್ಷಂತುಮರ್ಹತಿ ॥೨೫॥

ವನವಾಸ ಮತ್ತು ಅಜ್ಞಾತವಾಸಗಳು ಮುಗಿದಿರುವುದರಿಂದ ಅರ್ಜುನನು ಕಾಣಿಸಿಗುತ್ತಾನೆ. ದೊರೆಯಬೇಕಾದ ರಾಜ್ಯಧನವನ್ನು ಪಡೆಯದೆ ಅವನು ಈ ದಿನ ನಮ್ಮನ್ನು ಕ್ಷಮಿಸುವುದಿಲ್ಲ.

ಯಥಾ ನಾಯಶಸಾ ಯುಂಜ್ಯಾತ್ ಧಾರ್ತರಾಷ್ಟ್ರಃ ಕಥಂಚನ ।
ಯಥಾ ನ ನಃ ಪರಾಜೈಷೀದರ್ಜುನಸ್ತದ್ ವಿಧೀಯತಾಮ್ ॥೨೬॥

ಹೇಗೆ ಮಾಡಿದರೆ ದುರ್ಯೋಧನನಿಗೆ ಅಪಕೀರ್ತಿ ಉಂಟಾಗಲಾರದೋ ಮತ್ತು ಅರ್ಜುನನು ನಮ್ಮನ್ನು ಜಯಿಸಲಾರನೋ ಹಾಗೆ ಮಾಡಿ.

ಉಕ್ತಂ ದುರ್ಯೋಧನೇನಾಪಿ ಪುರಸ್ತಾದ್ ವಾಕ್ಯಮೀದೃಶಮ್ ।
ತದನುಸ್ಮೃತ್ಯ ಗಾಂಗೇಯ ಯಥಾವದ್ ವಕ್ತುಮರ್ಹತಿ ॥೨೭॥

ದುರ್ಯೋಧನನು ಇದಕ್ಕೆ ಮುಂಚೆಯೂ ಪಾಂಡವರ ಅಜ್ಞಾತವಾಸವು ಮುಗಿದಿಲ್ಲ ಎಂಬ ಮಾತುಗಳನ್ನು ಆಡಿದ್ದಾನೆ. ಎಲೈ ಭೀಷ್ಮರೇ, ಅದನ್ನು ಚಿಂತಿಸಿ ನೀವು ಸರಿಯಾಗಿ ಹೇಳಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಪಂಚಾಶೋಽಧ್ಯಾಯಃ ॥

ಗೋಗ್ರಹಣಪರ್ವಣಿ ತ್ರಯೋಽವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಐವತ್ತೊಂದನೆಯ ಅಧ್ಯಾಯ

ಭೀಷ್ಮರಿಂದ ಅಜ್ಞಾತವಾಸದ ಸಮಯವು ಮುಗಿದಿದೆ ಎಂದು ಹೇಳಿ ಯುದ್ಧಕ್ಕಾಗಿ ಅಭಿಯಾನ.

ಭೀಷ್ಮಃ

ಕಲಾಶ್ಚ ತತ್ರ ಯುಜ್ಯಂತೇ ಮುಹೂರ್ತಾಶ್ಚ ದಿನಾನಿ ಚ ।
ಅರ್ಧಮಾಸಾಶ್ಚ ಮಾಸಾಶ್ಚ ನಕ್ಷತ್ರಾಣಿ ಗ್ರಹಾಸ್ತಥಾ ॥೧॥

ಋತವಶ್ಚಾಪಿ ದೃಶ್ಯಂತೇ ತಥಾ ಸಂವತ್ಸರಾ ಅಪಿ ।
ಏವಂ ಕಾಲವಿಭಾಗೇನ ಕಾಲಚಕ್ರಂ ಪ್ರವರ್ತತೇ ॥೨॥

ಭೀಷ್ಮ- ಕಾಲಚಕ್ರದಲ್ಲಿ ಕಲೆಗಳು, ಮುಹೂರ್ತಗಳು, ದಿನಗಳು, ಅರ್ಧಮಾಸಗಳು, ಮಾಸಗಳು, ನಕ್ಷತ್ರಗಳು, ಗ್ರಹಗಳು, ಋತುಗಳು ಮತ್ತು ಸಂವತ್ಸರಗಳೂ ಕಾಲವಿಭಾಗಗಳಲ್ಲಿ ಸೇರಿಕೊಂಡಿವೆ. ಹೀಗೆ ಕಾಲಚಕ್ರವೂ ತಿರುಗುತ್ತದೆ.

ತೇಷಾಂ ಕಾಲಾತಿರೇಕೇಣ ಜ್ಯೋತಿಷಾಂ ಚ ವ್ಯತಿಕ್ರಮಾತ್ ।
ಪಂಚಮೇ ಪಂಚಮೇ ವರ್ಷೇ ದ್ವೌ ಮಾಸಾವಧಿಮಾಸಕೌ ॥೩॥

ತೇಷಾಮಪ್ಯಧಿಕಾ ಮಾಸಾಃ ಪಂಚ ದ್ವಾದಶ ಚ ಕ್ಷಪಾಃ ।
ತ್ರಯೋದಶಾನಾಂ ವರ್ಷಾಣಾಮಿತಿ ಮೇ ನಿಶ್ಚಿತಾ ಮತಿಃ ॥೪॥

ಆ ಸೂರ್ಯಾದಿ ಜ್ಯೋತಿಸ್ಸುಗಳು ಒಂದು ರಾಶಿಯಲ್ಲಿ ಮೂವತ್ತು ದಿವಸ ಇರುವುದು ಇತ್ಯಾದಿ ಕಾಲನಿಯಮವನ್ನು ಮೀರಿ ಮೂವತ್ತೆರಡು ದಿವಸ ಇದ್ದಾಗ ರಾಶಿಯಲ್ಲಿರುವ ಕಾಲಸಮಯವು ಮೀರಿ ವರ್ಷಗಳನ್ನು ಗಣನೆ ಮಾಡುವಾಗ ಐದೈದು ವರ್ಷಗಳಿಗೆ ಎರಡು ಅಧಿಕ ಮಾಸಗಳು ಬರುತ್ತದೆ. ಹದಿಮೂರು ವರ್ಷಗಳಿಗೆ ಐದು ಅಧಿಕ ಮಾಸಗಳು ಮತ್ತು ಹನ್ನೆರಡು ರಾತ್ರಿಗಳು (ಆರು ದಿನಗಳು) ಅಧಿಕವಾಗಿ ಬರುತ್ತವೆ ಎಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ಸೂರ್ಯಾದಿ ಜ್ಯೋತಿಸ್ಸುಗಳು ಒಂದು ರಾಶಿಯಲ್ಲಿ ಮೂವತ್ತು ದಿವಸಗಳು ಇತ್ಯಾದಿ ನಿಯಮಗಳ ಬದಲು ಒಂದು ರಾಶಿಯಲ್ಲಿ ಮೂವತ್ತೆರಡು ದಿವಸಗಳು ಇತ್ಯಾದಿಯಾಗಿ ಇರುತ್ತವೆ. ಹೀಗೆ ಎಣಿಸುವಾಗ ಎರಡೂವರೆ ವರ್ಷಗಳಿಗೆ ಒಂದು ಮಾಸವು ಅಧಿಕವಾಗುತ್ತದೆ. ಹೀಗೆ ಹನ್ನೆರಡು ವರ್ಷಗಳಿಗೆ ಐದು ಮಾಸಗಳು ಅಧಿಕವಾಗುತ್ತವೆ. ಹದಿಮೂರು ವರ್ಷದಲ್ಲಿ ಉಳಿದ ಆರು ತಿಂಗಳಿಗೆ ಹನ್ನೆರಡು ರಾತ್ರಿಗಳು ಎಂದರೆ ಆರು ದಿನಗಳು ಅಧಿಕವಾಗುತ್ತವೆ. ಆದ್ದರಿಂದ ಒಟ್ಟು ಹದಿಮೂರು ವರ್ಷದಲ್ಲಿ ಐದು ತಿಂಗಳು ಮತ್ತು ಆರು ದಿನಗಳು ಅಧಿಕವಾಗಿವೆ. ಮೇಲ್ನೋಟಕ್ಕೆ ಹದಿಮೂರು ವರ್ಷಕ್ಕೆ ಐದು ದಿವಸಗಳು ಮತ್ತು ಆರು ದಿವಸ ನ್ಯೂನವಾಗಿದೆ ಎಂದು ಕಂಡರೂ ದೇವಪಿತೃಕಾರ್ಯಗಳಿಗಾಗಿ ಅಧಿಕಮಾಸ ಸಹಿತವಾದ ವತ್ಸರಗಳನ್ನೇ ಒಂದುವರ್ಷವೆಂದು ಪರಿಗಣಿಸಿದರೂ ಪಾಂಡವರು ತಾವು ಮಾಡಿದ ಪ್ರತಿಜ್ಞೆಯ ರಕ್ಷಣೆಗಾಗಿ ಪೌರ್ಣಮಾಸದಿಂದ ಪೌರ್ಣಮಾಸದವರೆಗೆ ಒಂದು ತಿಂಗಳು ಎಂದು ಎಣಿಸುವುದರಿಂದ ಈ ಗಣನೆಯಲ್ಲಿ ಹದಿಮೂರು ವರ್ಷಗಳು ಪೂರ್ಣವಾಗಿ ಕಳೆದಿವೆ. ವರ್ಷ ಮತ್ತು ಮಾಸಗಳ ಗಣನೆ ಮಾಡುವಾಗ ಪೌರ್ಣಮಾಸದಿಂದ ಪೌರ್ಣಮಾಸದವರೆಗೆ ಒಂದು ಮಾಸವೆಂದು ಗಣನೆ ಮಾಡಬೇಕೆಂದಿರುವುದರಿಂದ ಪಾಂಡವರ ಗಣನೆಯಲ್ಲಿ ಯಾವ ದೋಷವೂ ಇಲ್ಲ (ಲಕ್ಷಾಲಂಕಾರ).

ಪೂರ್ವೇದ್ಯುರೇವ ನಿರ್ವೃತ್ತಸ್ತತೋ ಬೀಭತ್ಸುರಾಗತಃ ॥೫॥

ಸರ್ವಂ ಯಥಾವಚ್ಚರಿತಂ ಯದ್ಯದೇಭಿಃ ಪ್ರತಿಶ್ರುತಮ್ ।
ಏವಮೇತದ್ ಧ್ರುವಂ ಜ್ಞಾತ್ವಾ ತತೋ ಬೀಭತ್ಸುರಾಗತಃ ॥೬॥

ಅಜ್ಞಾತವಾಸದ ಕಾಲವು ನಿನ್ನೆಯೇ ಮುಗಿದು ಹೋಗಿದೆ. ಆದ್ದರಿಂದ ಅರ್ಜುನನು ಬಂದಿದ್ದಾನೆ. ಪಾಂಡವರು ಪ್ರತಿಜ್ಞೆ ಮಾಡಿದಂತೆಯೇ ಎಲ್ಲವನ್ನೂ ಸರಿಯಾಗಿ ಮಾಡಿದ್ದಾರೆ. ಇದನ್ನು ಸರಿಯಾಗಿ ತಿಳಿದೇ ಅರ್ಜುನನು ಬಂದಿದ್ದಾನೆ.

ಸರ್ವೇ ಪಂಚ ಮಹಾತ್ಮಾನಃ ಸರ್ವೇ ಧರ್ಮಾರ್ಥಕೋವಿದಾಃ ।
ಯೇಷಾಂ ಯುಧಿಷ್ಠಿರೋ ರಾಜಾ ಕಸ್ಮಾದ್ ಧರ್ಮೇ ಪರಾಯಯುಃ ॥

ಎಲ್ಲರೂ ಮಹಾತ್ಮರು. ಎಲ್ಲರೂ ಧರ್ಮಾರ್ಥಕೋವಿದರು. ಯಾರಿಗೆ ಯುಧಿಷ್ಠಿರನು ರಾಜನೋ ಅವರು ಧರ್ಮವನ್ನು ಏಕೆ ತ್ಯಜಿಸಿಯಾರು?

ಅಲುಬ್ಧಾಶ್ಚೈವ ಕೌಂತೇಯಾಃ ಕೃತವಂತಶ್ಚ ದುಷ್ಕರಮ್ ।
ನ ಚಾಪಿ ಕೇವಲಂ ರಾಜ್ಯಮಿಚ್ಛೇಯುಸ್ತೇऽನುಪಾಯತಃ ॥೮॥

ಪಾಂಡವರು ಲೋಭಿಗಳಲ್ಲ. ದುಷ್ಕರವಾದ ಕಾರ್ಯಗಳನ್ನು ಮಾಡಿದ್ದಾರೆ. ಧರ್ಮಾನುಸಾರಿಯಾದ ಉಪಾಯದಿಂದಲ್ಲದೆ ಬೇರೆ ರೀತಿಯಾಗಿ ಅವರು ರಾಜ್ಯವನ್ನು ಬಯಸಲಾರರು.

ತದೈವ ತೇ ಹಿ ವಿಕ್ರಾಂತಮೀಶುಃ ಪಾಂಡವನಂದನಾಃ ।
ಧರ್ಮಪಾಶನಿಬದ್ಧಾಸ್ತು ನ ಚೇಲುಃ ಕ್ಷತ್ರಿಯವ್ರತಾತ್ ॥೯॥

ಪಾಂಡವರು ಆ ದ್ಯೂತದ ಕಾಲದಲ್ಲಿಯೇ ಪರಾಕ್ರಮವನ್ನು ತೋರಿಸಲು ಸಮರ್ಥರಾಗಿದ್ದರು. ಆದರೆ ಧರ್ಮಪಾಶನಿಬದ್ಧರಾದ ಅವರು ಕ್ಷತ್ರಿಯ ವ್ರತದಿಂದ ಅಲುಗಾಡಲಿಲ್ಲ.

ಯಶ್ಚಾನೃತ ಇತಿ ಖ್ಯಾಯೇದ್ ಯಶ್ಚ ಗಚ್ಛೇತ್ ಪರಾಂ ಗತಿಮ್ ।
ವೃಣೀಯುರ್ಮರಣಂ ಪಾರ್ಥಾ ನಾನೃತತ್ವಂ ಕಥಂಚನ ॥೧೦॥

ಯಾವುದು ಅನೃತವೆಂದು ತೋರುತ್ತದೆಯೋ ಮತ್ತು ಯಾವುದು ಶ್ರೇಷ್ಠವಾದ ಗತಿಯನ್ನು ಕೊಡುವುದೋ ಅವೆರಡೂ ಲೋಕದಲ್ಲಿವೆ. ಪಾಂಡವರು ಮರಣವನ್ನಾದರೂ ಸ್ವೀಕರಿಸಿಯಾರು. ಅನೃತವನ್ನು ಎಂದೂ ಸ್ವೀಕರಿಸುವವರಲ್ಲ.

ಪ್ರಾಪ್ತೇ ತು ಕಾಲೇ ಸ್ವಾನರ್ಥಾನ್ ನೋತ್ಸೃಜೇಯುರ್ನರರ್ಷಭಾಃ ।
ಅಪಿ ವಜ್ರಭೃತಾ ಗುಪ್ತಾನ್ ತಥಾವೀರ್ಯಾ ಹಿ ಪಾಂಡವಾಃ ॥೧೧॥

ಪ್ರತಿಯುದ್ಧ್ಯೇಮ ಸಮರೇ ಸರ್ವಶಸ್ತ್ರಭೃತಾಂ ವರಮ್ ॥೧೨॥

ನರಶ್ರೇಷ್ಠರಾದ ಪಾಂಡವರು ಯೋಗ್ಯವಾದ ಕಾಲದಲ್ಲಿ ತಮಗೆ ಸಲ್ಲಬೇಕಾದ ಅರ್ಥವನ್ನು ಅದು ಇಂದ್ರನಿಂದಲೇ ರಕ್ಷಿತವಾಗಿದ್ದರೂ ಸಹ ಬಿಡಲಾರರು. ಪಾಂಡವರು ಅಂತಹ ಸಾಮರ್ಥ್ಯವುಳ್ಳವರು. ನಾವು ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನಿಗೆ ಪ್ರತಿಯಾಗಿ ಯುದ್ಧವನ್ನು ಮಾಡೋಣ.

ತಸ್ಮಾದ್ ಯದತ್ರ ಕಲ್ಯಾಣಂ ಲೋಕೇ ಸದ್ಭಿರನುಷ್ಠಿತಮ್ ।
ತತ್ ಸಂವಿಧೀಯತಾಂ ಕ್ಷಿಪ್ರಂ ಮಾ ನೋ ಹ್ಯರ್ಥೋऽತಿಗಾತ್ ಪರಾನ್ ॥

ಆದ್ದರಿಂದ ಲೋಕದಲ್ಲಿ ಸಜ್ಜನರು ಅನುಷ್ಠಾನ ಮಾಡಿದ ಕಲ್ಯಾಣಮಯವಾದ ಕಾರ್ಯವನ್ನು ಶೀಘ್ರವಾಗಿ ಮಾಡೋಣ. ನಮ್ಮ ಸಂಪತ್ತು ಪರರನ್ನು ಸೇರುವುದು ಬೇಡ.

ನ ಹಿ ಪಶ್ಯಾಮಿ ಸಂಗ್ರಾಮೇ ಕದಾಚಿದಪಿ ಕೌರವ ।
ಏಕಾಂತಸಿದ್ಧಿಂ ರಾಜೇಂದ್ರ ಸಂಪ್ರಾಪ್ತಶ್ಚ ಧನಂಜಯಃ ॥೧೪॥

ಎಲೈ ಕೌರವನೇ, ರಾಜೇಂದ್ರನೇ, ಯುದ್ಧದಲ್ಲಿ ನಿಯಮೇನ ಜಯ ಎಂಬುದು ಯಾರಿಗೂ ಇಲ್ಲ. ಅರ್ಜುನನಾದರೂ ಪ್ರಾಪ್ತನಾಗಿದ್ದಾನೆ.

ಸಂಪ್ರವೃತ್ತೇ ಚ ಸಂಗ್ರಾಮೇ ಭಾವಾಭಾವೌ ಜಯಾಜಯೌ ।
ಅವಶ್ಯಮೇಕಂ ಸ್ಪೃಶತೋ ದೃಷ್ಟಮೇತದಸಂಶಯಮ್ ॥೧೫॥

ಯುದ್ಧವು ಪ್ರವೃತ್ತವಾದರೆ ಒಬ್ಬನಿಗೆ ಜಯ, ಇನ್ನೊಬ್ಬನಿಗೆ ಅಪಜಯ; ಒಬ್ಬನಿಗೆ ಸಮೃದ್ಧಿ, ಇನ್ನೊಬ್ಬನಿಗೆ ಕ್ಷಯ; ಇವು ಅವಶ್ಯವಾಗಿ ಉಂಟಾಗುತ್ತವೆ. ಇದು ನಿಸ್ಸಂಶಯವಾಗಿ ನೋಡಲ್ಪಟ್ಟಿದೆ.

ತಸ್ಮಾದ್ ಯದ್ ದಾನಚರಿತಂ ಕರ್ಮ ವಾ ಧರ್ಮಸಂಹಿತಮ್ ।
ಕ್ರಿಯತಾಮಾಶು ರಾಜೇಂದ್ರ ಸಂಪ್ರಾಪ್ತಶ್ಚ ಧನಂಜಯಃ ॥೧೬॥

ಆದ್ದರಿಂದ ಎಲೈ ರಾಜೇಂದ್ರನೇ, ಧರ್ಮಕ್ಕೆ ಅನುಗುಣವಾದ ಅರ್ಧರಾಜ್ಯ ದಾನವೆಂಬ ಯಾವ ಕರ್ಮವಿದೆಯೋ ಅದನ್ನು ಬೇಗ ಮಾಡುವವನಾಗು. ಅರ್ಜುನನು ಬಂದಿದ್ದಾನೆ.

ಏಕೋಽಪಿ ಸಮರೇ ಪಾರ್ಥಃ ಪೃಥಿವೀಂ ನಿರ್ದಹೇತ್ ಶರೈಃ ।
ಭ್ರಾತೃಭಿಃ ಸಹಿತೋ ವೀರೈಃ ಕಿಂ ಪುನಃ ಕೌರವಾನ್ ರಣೇ ॥೧೭॥

ತಸ್ಮಾತ್ ಸಂಧಿಂ ಕುರುಶ್ರೇಷ್ಠ ಕುರುಷ್ವ ಯದಿ ಮನ್ಯಸೇ ॥೧೮॥

ಅರ್ಜುನನೊಬ್ಬನೇ ಯುದ್ಧದಲ್ಲಿ ತನ್ನ ಬಾಣಗಳಿಂದ ಪೃಥಿವಿಯನ್ನೇ ದಹಿಸಿಯಾನು. ವೀರರಾದ ಸಹೋದರರಿಂದ ಸಹಿತನಾದ ಅವನು ಯುದ್ಧದಲ್ಲಿ ಕೌರವರನ್ನು ಜಯಿಸುವ ವಿಷಯದಲ್ಲಿ ಹೇಳತಕ್ಕದ್ದೇನಿದೆ? ಆದ್ದರಿಂದ ಎಲೈ ಕುರುಶ್ರೇಷ್ಠನೇ, ನಿನ್ನ ಅಭಿಪ್ರಾಯವಿದ್ದರೆ ಸಂಧಿಯನ್ನು ಮಾಡಿಕೊ.

ದುರ್ಯೋಧನಃ

ನಾಹಂ ರಾಜ್ಯಂ ಪ್ರದಾಸ್ಯಾಮಿ ಪಾಂಡವಾನಾಂ ಪಿತಾಮಹ ।
ಗ್ರಾಮಂ ಸೇನಾಂ ಚ ದಾಸೀಶ್ಚ ದ್ರವ್ಯಂ ಸ್ವಲ್ಪಮಪಿ ಪ್ರಭೋ ॥೧೯॥

ಯುದ್ಧೋಪಚಾರಿಕಂ ಯತ್ತು ತತ್ ಶೀಘ್ರಂ ಸಂವಿಧೀಯತಾಮ್ ॥೨೦॥

ದುರ್ಯೋಧನ– ಎಲೈ ಪಿತಾಮಹನೇ, ನಾನು ಪಾಂಡವರಿಗೆ ಸ್ವಲ್ಪ ರಾಜ್ಯವನ್ನಾಗಲೀ, ಗ್ರಾಮವನ್ನಾಗಲೀ, ದಾಸಿಯರನ್ನಾಗಲೀ, ಸೈನ್ಯವನ್ನಾಗಲೀ, ದ್ರವ್ಯವನ್ನಾಗಲೀ ಕೊಡುವುದಿಲ್ಲ. ಪ್ರಭುವೇ, ಯುದ್ಧಕ್ಕೆ ಅನುಗುಣವಾದ ಯಾವ ಕಾರ್ಯವನ್ನು ಮಾಡಬೇಕೋ ಅದನ್ನು ಶೀಘ್ರವಾಗಿ ಮಾಡುವವನಾಗು.

ಭೀಷ್ಮಃ

ತಾತಾತ್ರ ಮಾಮಿಕಾ ಬುದ್ಧಿಃ ಶ್ರೂಯತಾಂ ಯದಿ ರೋಚತೇ ।
ಸರ್ವಥಾ ಹಿ ಮಯಾ ಶ್ರೇಯೋ ವಕ್ತವ್ಯಂ ಕುರುನಂದನ ॥೨೧॥

ಕ್ಷಿಪ್ರಂ ಬಲಂ ಚತುರ್ಭಾಗಂ ಗೃಹ್ಯಾಗಚ್ಛ ಪುರಂ ಪ್ರತಿ ॥೨೨॥

ಭೀಷ್ಮ– ಪ್ರೀತಿಪಾತ್ರನೇ, ನಿನಗೆ ಇಷ್ಟವಾದರೆ ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಕೇಳು. ಕುರುನಂದನನೇ, ನಾನು ಸರ್ವಥಾ ನಿನಗೆ ಶ್ರೇಯಸ್ಸನ್ನು ಹೇಳಬೇಕು. ಶೀಘ್ರವಾಗಿ ಸೈನ್ಯದ ಚತುರ್ಭಾಗವನ್ನು ತೆಗೆದುಕೊಂಡು ನೀನು ಹಸ್ತಿನಪುರಕ್ಕೆ ಹೋಗುವವನಾಗು.

ವೈಶಂಪಾಯನಃ

ಭೀಷ್ಮಸ್ಯೋಪರತೇ ವಾಕ್ಯೇ ತಥಾ ದುರ್ಯೋಧನಸ್ಯ ಚ ।
ಪ್ರಾಪ್ತಮರ್ಥ್ಯಂ ಚ ಯದ್ ವಾಕ್ಯಂ ದ್ರೋಣಶ್ಚಾಹ ದ್ವಿಜೋತ್ತಮಃ॥

ವೈಶಂಪಾಯನ– ಭೀಷ್ಮರ ಮತ್ತು ದುರ್ಯೋಧನನ ಮಾತುಗಳು ಮುಗಿಯುತ್ತಿರಲು ಯೋಗ್ಯವಾದ ಮತ್ತು ಪ್ರಾಜ್ಞವಾದ ಮಾತುಗಳನ್ನು ದ್ವಿಜಶ್ರೇಷ್ಠರಾದ ದ್ರೋಣರು ಆಡಿದರು.

ಯತ್ತು ಯುದ್ಧಾಯಾಚರಿತಂ ಭವೇದ್ವಾ ಧರ್ಮಸಂಹಿತಮ್ ।
ಕಸ್ತ್ವಯಾ ಸದೃಶೋ ಲೋಕೇ ಯದಿ ತತ್ ಕರ್ತುಮರ್ಹತಿ ॥೨೪॥

ಇಯಂ ಚ ಮಾಮಿಕಾ ಪ್ರಜ್ಞಾ ಶ್ರೂಯತಾಂ ಯದಿ ರೋಚತೇ ॥೨೫॥

ಯುದ್ಧದ ಪ್ರಯತ್ನ ಮತ್ತು ಧರ್ಮಯುಕ್ತವಾದ ಸಂಧಿ ಇವೆರಡರಲ್ಲಿ ನಿನ್ನಂತಹ ಯಾವನು ಲೋಕದಲ್ಲಿ ಯುದ್ಧವನ್ನು ಮಾಡಲು ಬಯಸುತ್ತಾನೆ? ನಿನಗೆ ಇಷ್ಟವಾದರೆ ಈ ನನ್ನ ಅಭಿಪ್ರಾಯವನ್ನು ಕೇಳು.

ರಾಜಾ ಬಲಚತುರ್ಭಾಗಂ ಕ್ಷಿಪ್ರಮಾದಾಯ ಗಚ್ಛತು ।
ತತೋಽಪರಶ್ಚತುರ್ಭಾಗೋ ಗಾಃ ಸಮಾದಾಯ ಗಚ್ಛತು ॥೨೬॥

ವಯಮರ್ಧೇನ ಸೈನ್ಯಸ್ಯ ಪ್ರತಿಯೋತ್ಸ್ಯಾಮಹೇಽರ್ಜುನಮ್ ॥೨೭॥

ರಾಜನು ಸೈನ್ಯದ ನಾಲ್ಕನೆಯ ಒಂದು ಭಾಗವನ್ನು ತೆಗೆದುಕೊಂಡು ಕ್ಷಿಪ್ರವಾಗಿ ಹಸ್ತಿನಪುರಕ್ಕೆ ಹೋಗಲಿ. ಸೈನ್ಯದ ನಾಲ್ಕನೆಯ ಇನ್ನೊಂದು ಭಾಗವು ಗೋವುಗಳನ್ನು ತೆಗೆದುಕೊಂಡು ಹೊರಡಲಿ. ಉಳಿದ ಅರ್ಧಸೈನ್ಯದ ಜೊತೆಯಲ್ಲಿ ನಾವು ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವೆವು.

ಅಹಂ ದ್ರೋಣಶ್ಚ ಕರ್ಣಶ್ಚ ಅಶ್ವತ್ಥಾಮಾ ಕೃಪಸ್ತಥಾ ।
ಪ್ರತಿಯೋತ್ಸ್ಯಮ ಬೀಭತ್ಸುಮಾಗತಂ ಕೃತನಿಶ್ಚಯಮ್ ॥೨೮॥

ಏವಂ ರಾಜಾ ಸುಗುಪ್ತಃ ಸ್ಯಾನ್ನ ಕ್ಲೈಬ್ಯಂ ಗಂತುಮರ್ಹತಿ ॥೨೯॥

ದ್ರೋಣನಾದ ನಾನು, ಕರ್ಣ, ಅಶ್ವತ್ಥಾಮ ಮತ್ತು ಕೃಪ ಇವರು ಯುದ್ಧವನ್ನು ಮಾಡಲು ನಿಶ್ಚಯಿಸಿ ಬಂದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವೆವು. ಹೀಗೆ ಮಾಡಿದರೆ ರಾಜನು ಸುರಕ್ಷಿತನಾಗಿರುತ್ತಾನೆ. ಅವನು ಕ್ಲೈಬ್ಯವನ್ನು ಹೊಂದುವ ಕಾರಣವಿಲ್ಲ.

ಮಾತ್ಸ್ಯಂ ವಾ ಪುನರಾಯಾಂತಮಥವಾऽಪಿ ಶತಕ್ರತುಮ್ ।
ಅಹಮಾವಾರಯಿಷ್ಯಾಮಿ ವೇಲೇವ ಮಕರಾಲಯಮ್ ॥೩೦॥

ಯೋತ್ಸ್ಯಮಃ ಸಹ ಸಂಹತ್ಯ ಪಾಕಶಾಸನಿಮಾಗತಮ್ ॥೩೧॥

ವಿರಾಟನು ಯುದ್ಧವನ್ನು ಮಾಡಲು ಬಂದರೂ ಅಥವಾ ಇಂದ್ರನೇ ಯುದ್ಧವನ್ನು ಮಾಡಲು ಬಂದರೂ ನಾನು ತೀರವು ಸಮುದ್ರವನ್ನು ತಡೆದಂತೆ ನಾನು ಅವರನ್ನು ತಡೆಯುವೆನು. ನಾವೆಲ್ಲರೂ ಸೇರಿ ಯುದ್ಧಕ್ಕೆ ಬಂದ ಅರ್ಜುನನನ್ನು ಎದುರಿಸಿ ಯುದ್ಧವನ್ನು ಮಾಡುವೆವು.

ವೈಶಂಪಾಯನಃ

ತದಾವ್ಯಕ್ಂ ನ ಕೃತಂ ತೇನ ದ್ರೋಣೇನೋಕ್ತಂ ಮಹಾತ್ಮನಾ ।
ತಥಾ ಹಿ ಕೃತವಾನ್ ರಾಜಾ ಕೌರವಾಣಾಮನಂತರಮ್ ॥೩೨॥

ವೈಶಂಪಾಯನ– ಮಹಾತ್ಮರಾದ ದ್ರೋಣರು ಸಂಧಿಯನ್ನು ಮಾಡಿಕೊ ಎಂದು ಹೇಳಿದ ಮೊದಲಿನ ವಾಕ್ಯವನ್ನು ದುರ್ಯೋಧನನು ನಡೆಸಲಿಲ್ಲ. ಅನಂತರ ಹೇಳಿದ ಯುದ್ಧವನ್ನು ಮಾಡು ಎಂಬ ವಾಕ್ಯವನ್ನು ಮಾತ್ರ ದುರ್ಯೋಧನನು ನಡೆಸಿದನು (ಲಕ್ಷಾಲಂಕಾರ).

ಭೀಷ್ಮಃ ಪ್ರಸ್ಥಾಪ್ಯ ರಾಜಾನಂ ಗೋಧನಂ ತದನಂತರಮ್ ।
ಸೇನಾಮುಖ್ಯಾನ್ ವ್ಯವಸ್ಥಾಪ್ಯ ವ್ಯೂಹಿತುಂ ಸಂಪ್ರಚಕ್ರಮೇ ॥೩೩॥

ಭೀಷ್ಮರು ರಾಜನನ್ನು ಮತ್ತು ಅನಂತರ ಗೋಧನವನ್ನು ಹಸ್ತಿನಪುರಕ್ಕೆ ಕಳುಹಿಸಿ ಸೇನೆಯಲ್ಲಿ ಪ್ರಧಾನರಾದವರನ್ನು ಮುಂದಿಟ್ಟು ವ್ಯೂಹವನ್ನು ರಚಿಸಲು ಪ್ರಾರಂಭಿಸಿದರು.

ದ್ರೋಣಸ್ಯೋಪರತೇ ವಾಕ್ಯೇ ಭೀಷ್ಮಃ ಪ್ರೋವಾಚ ಬುದ್ಧಿಮಾನ್ ॥೩೪॥

ಆಚಾರ್ಯೋ ಮಧ್ಯತಸ್ತಿಷ್ಠೇತ್ ಅಶ್ವತ್ಥಾಮಾ ತು ಸವ್ಯತಃ ।
ಕೃಪಃ ಶಾರದ್ವತೋ ಧೀಮಾನ್ ಪಾರ್ಶ್ವಂ ರಕ್ಷತು ದಕ್ಷಿಣಮ್ ॥೩೫॥

ದ್ರೋಣರ ಮಾತು ಮುಗಿಯುತ್ತಿರಲು ಮೇಧಾವಿಗಳಾದ ಭೀಷ್ಮರು ಮಾತನಾಡಿದರು– ಆಚಾರ್ಯರಾದ ದ್ರೋಣರು ಮಧ್ಯದಲ್ಲಿ ಇರಲಿ. ಅಶ್ವತ್ಥಾಮರು ಎಡಭಾಗದಲ್ಲಿರಲಿ, ಮೇಧಾವಿಗಳಾದ ಕೃಪಾಚಾರ್ಯರು ಬಲಭಾಗವನ್ನು ರಕ್ಷಿಸಲಿ.

ವಿಕರ್ಣಶ್ಚ ಮಹಾವೀರ್ಯೋ ದುರ್ಮುಖಶ್ಚ ಪರಂತಪಃ ।
ಶಕುನಿಃ ಸೌಬಲಶ್ಚೈವ ದುಃಸಹಶ್ಚ ಮಹಾಬಲಃ ॥೩೬॥

ದ್ರೋಣಶ್ಚ ಪಾರ್ಶ್ವಮಜಿತಾಃ ಪಾಲಯಂತು ಮಹಾಬಲಾಃ ॥೩೭॥

ಮಹಾಪರಾಕ್ರಮಿಯಾದ ವಿಕರ್ಣನೂ ಪರಂತಪನಾದ ದುರ್ಮುಖನೂ, ಸೌಬಲನಾದ ಶಕುನಿಯೂ, ಮಹಾಬಲನಾದ ದುಃಸಹನೂ ಪರಾಜಿತರಾಗದ ಮಹಾಬಲರಾದ ಅವರು ದ್ರೋಣರ ಪಾರ್ಶ್ವಗಳನ್ನು ರಕ್ಷಿಸಲಿ.

ಅಗ್ರತಃ ಸೂತಪುತ್ರಸ್ತು ಕರ್ಣಸ್ತಿಷ್ಠತು ದಂಸಿತಃ ।
ಅಹಂ ಸರ್ವಸ್ಯ ಸೈನ್ಯಸ್ಯ ಪಶ್ಚಾತ್ ಸ್ಥಾಸ್ಯಾಮಿ ಪಾಲಯನ್ ॥೩೮॥

ಮುಂಭಾಗದಲ್ಲಿ ಕವಚವನ್ನು ಧರಿಸಿದ ಸೂತಪುತ್ರನಾದ ಕರ್ಣನು ಇರಲಿ. ನಾನು ಎಲ್ಲ ಸೈನ್ಯದ ಹಿಂಭಾಗದಲ್ಲಿ ಎಲ್ಲರನ್ನೂ ರಕ್ಷಿಸುತ್ತಾ ನಿಲ್ಲುವೆನು.

ಸರ್ವೇ ಮಹಾರಥಾಃ ಶೂರಾ ಮಹೇಷ್ವಾಸಾ ಮಹಾಬಲಾಃ ।
ಯುದ್ಧ್ಯಂತು ಪಾಂಡವಶ್ರೇಷ್ಠಮಾಗತಂ ಯತ್ನತೋ ಯುಧಿ ॥೩೯॥

ಎಲ್ಲಾ ಮಹಾರಥರೂ, ಶೂರರೂ, ಮಹಾಧನುರ್ಧರರೂ ಮತ್ತು ಮಹಾಬಲರೂ ಯುದ್ಧಕ್ಕೆ ಬಂದ ಪಾಂಡವಶ್ರೇಷ್ಠನಾದ ಅರ್ಜುನನನ್ನು ಪ್ರಯತ್ನಪೂರ್ವಕವಾಗಿ ಯುದ್ಧದಲ್ಲಿ ಎದುರಿಸಲಿ - ಎಂದು ಹೇಳಿದರು.

ವೈಶಂಪಾಯನಃ

ಅಭೇದ್ಯಂ ಸರ್ವಸೈನ್ಯಾನಾಂ ವ್ಯೂಹ್ಯ ವ್ಯೂಹಂ ಕುರೂತ್ತಮಃ ।
ವಜ್ರಗರ್ಭಂ ವ್ರೀಹಿಮುಖಂ ಅರ್ಧಚಕ್ರಾಂತಮಂಡಲಮ್ ॥೪೦॥

ತಸ್ಯ ವ್ಯೂಹಸ್ಯ ಪಶ್ಚಾರ್ಧೇ ಭೀಷ್ಮಶ್ಚಾಥೋದ್ಯತಾಯುಧಃ ।
ಸೌವರ್ಣಂ ತಾಳಮುಚ್ಛ್ರಿತ್ಯ ರಥೇ ತಿಷ್ಠನ್ನಶೋಭತ ॥೪೧॥

ವೈಶಂಪಾಯನ– ಕುರುಶ್ರೇಷ್ಠರಾದ ಭೀಷ್ಮರು ಮಧ್ಯದಲ್ಲಿ ವಜ್ರದಂತಿದ್ದ ತುದಿಯಭಾಗದಲ್ಲಿ ವ್ರೀಹಿಯಂತಿದ್ದ ಅರ್ಧಚಕ್ರಾಕಾರದ ಮಂಡಲವನ್ನು ಹೋಲುವ ಸರ್ವಸೈನ್ಯಗಳ ಅಭೇದ್ಯವಾದ ವ್ಯೂಹವನ್ನು ರಚಿಸಿ ಆ ಸೈನ್ಯದ ಹಿಂಭಾಗದಲ್ಲಿ ಆಯುಧವನ್ನು ಎತ್ತಿಹಿಡಿದು ರಥದಲ್ಲಿ ಸುವರ್ಣಮಯವಾದ ತಾಳಗಳನ್ನು ಏರಿಸಿ ನಿಂತು ಶೋಭಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಏಕಪಂಚಾಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಐವತ್ತೆರಡನೆಯ ಅಧ್ಯಾಯ

ಯುದ್ಧವನ್ನು ನೋಡಲು ಆಕಾಶದಲ್ಲಿ ಇಂದ್ರಾದಿಗಳ ಆಗಮನ.

ವೈಶಂಪಾಯನಃ

ತತಃ ಸುದರ್ಶನಂ ನಾಮ ಪ್ರಾಸಾದಂ ಹರಿವಾಹನಃ ।
ಸರ್ವಾನ್ ದೇವಾನ್ ಸಮಾರೋಪ್ಯ ಪ್ರಯಯೌ ಯತ್ರ ಪಾಂಡವಃ ॥

ವೈಶಂಪಾಯನ– ಆಗ ಇಂದ್ರನು ಸುದರ್ಶನವೆಂಬ ಪ್ರಾಸಾದದಲ್ಲಿ ಎಲ್ಲಾ ದೇವತೆಗಳನ್ನೂ ಕೂಡಿಸಿಕೊಂಡು ಅರ್ಜುನನಿದ್ದಲ್ಲಿಗೆ ಹೊರಟನು.

ಸ್ಥೂಣಾ ರಾಜನ್ ಸಹಸ್ರಂ ತು ಯತ್ರ ಮಧ್ಯೇ ಪ್ರತಿಷ್ಠಿತಮ್ ।
ತತ್ರ ಸೂರ್ಯಪಥೇಽತಿಷ್ಠದ್ ವಿಮಲಾ ವಾಸವೀ ಸಭಾ ॥೨॥

ಎಲೈ ರಾಜನೇ, ಸೂರ್ಯಪಥದ ಮಧ್ಯದಲ್ಲಿ ಸಹಸ್ರ ಸ್ತಂಭಗಳಿರುವ ಸಭೆಯಲ್ಲಿ ಆ ಇಂದ್ರನ ಪರಿಶುದ್ಧವಾದ ಸಭೆಯು ನಿಂತಿತು.

ಆದಿತ್ಯಾ ವಸವೋ ರುದ್ರಾ ಅಶ್ವಿನೌ ಚ ಮರುದ್ಗಣಾಃ ।
ತತ್ರ ಶ್ವೇತಾನಿ ಚ್ಛತ್ರಾಣಿ ಕಾಂಚನಸ್ಫಟಿಕಾನಿ ಚ ॥೩॥

ತಥಾ ಚಿತ್ರಾಣಿ ಚ್ಛತ್ರಾಣಿ ದಿವ್ಯರೂಪಾಣಿ ಭಾರತ ।
ಮಣಿರತ್ನವಿಚಿತ್ರಾಣಿ ನಾನಾರೂಪಾಣಿ ಭಾಗಶಃ ॥೪॥

ಆಕಾಶೇ ಸಮದೃಶ್ಯಂತ ಭಾನುಮಂತಿ ಶುಭಾನಿ ಚ ॥೫॥

ಆದಿತ್ಯರೂ, ವಸುಗಳೂ, ರುದ್ರರೂ, ಅಶ್ವಿನಿಗಳೂ, ಮರುದ್ಗಣಗಳೂ (ಆಕಾಶದಲ್ಲಿ ಕಂಡುಬಂದರು). ಸುವರ್ಣ ಮತ್ತು ಸ್ಫಟಿಕಗಳಿಂದ ಅಲಂಕೃತವಾದ ಶ್ವೇತಚ್ಛತ್ರಗಳು, ವಿಚಿತ್ರವಾದ ದಿವ್ಯರೂಪವನ್ನು ಹೊಂದಿದ, ಮಣಿರತ್ನಗಳಿಂದ ವಿಚಿತ್ರವಾಗಿ ಕಾಣುವ, ನಾನಾರೂಪಗಳನ್ನು ಹೊಂದಿದ, ಶುಭವಾದ ಪ್ರಕಾಶಮಾನವಾದ ಛತ್ರಗಳು ಎಲ್ಲವೂ ಆಕಾಶದಲ್ಲಿ ಕಂಡುಬಂದವು.

ಅಗ್ನೇರಿಂದ್ರಸ್ಯ ಸೋಮಸ್ಯ ಯಮಸ್ಯ ವರುಣಸ್ಯ ಚ ।
ತಥಾ ಧಾತುರ್ವಿಧಾತುಶ್ಚ ಮಿತ್ರಸ್ಯ ಧನದಸ್ಯ ಚ ॥೬॥

ರುದ್ರಸ್ಯ ವಿಷ್ಣೋಃ ಸವಿತುಸ್ತ್ರಿದಶಾನಾಂ ತಥೈವ ಚ ॥೭॥

ಕಾಂಚನಾನಿ ಚ ದಾಮಾನಿ ವಿವಿಧಾಶ್ಚೋತ್ತಮಸ್ರಜಃ ।
ದಿವ್ಯಪುಷ್ಪಾಭಿಸಂವೀತಾಸ್ತತ್ರ ಚ್ಛತ್ರಾಣಿ ಭೇಜಿರೇ ॥೮॥

ಅಗ್ನಿಯ, ಇಂದ್ರನ, ಚಂದ್ರನ, ಯಮನ, ವರುಣನ, ಬ್ರಹ್ಮನ, ವಿಧಾತೃವಿನ, ಮಿತ್ರನ, ಕುಬೇರನ, ರುದ್ರನ, ವಿಷ್ಣುವಿನ, ಸವಿತೃವಿನ ಮತ್ತು ಅನೇಕ ದೇವತೆಗಳ ಸುವರ್ಣಮಯವಾದ ದಾಮಗಳಿಂದ ಕೂಡಿದ ಉತ್ತಮವಾದ ಮಾಲೆಗಳಿಂದ ಕೂಡಿದ ದಿವ್ಯಪುಷ್ಪಗಳಿಂದ ಅಲಂಕೃತವಾದ ಅನೇಕ ವಿಧವಾದ ಛತ್ರಗಳು ಅಲ್ಲಿ ಕಂಡುಬಂದವು.

ತಸ್ಮಿಂಶ್ಚ ರಾಜನ್ ಪ್ರಾಸಾದೇ ದಿವ್ಯರತ್ನವಿಭೂಷಿತೇ ।
ದಿವ್ಯಗಂಧಸಮಾವಿಷ್ಟಾಃ ಸ್ರಜೋ ದಿವ್ಯಾಶ್ಚಕಾಶಿರೇ ॥೯॥

ಎಲೈ ರಾಜನೇ, ದಿವ್ಯರತ್ನವಿಭೂಷಿತವಾದ ಆ ಪ್ರಾಸಾದದಲ್ಲಿ ದಿವ್ಯಗಂಧಗಳಿಂದ ಕೂಡಿದ ದಿವ್ಯವಾದ ಹೂಮಾಲೆಗಳು ಶೋಭಿಸಿದವು.

ದಿವ್ಯಶ್ಚ ವಾಯುಃ ಪ್ರವವೌ ಗಂಧಮಾದಾಯ ಸರ್ವಶಃ ।
ಋತವಃ ಪುಷ್ಪಮಾದಾಯ ಸಮತಿಷ್ಠಂತ ಭಾರತ ॥೧೦॥

ದಿವ್ಯವಾದ ವಾಯುವು ಒಳ್ಳೆಯ ಗಂಧವನ್ನು ತೆಗೆದುಕೊಂಡು ಎಲ್ಲ ಕಡೆಯಲ್ಲಿಯೂ ಬೀಸಿತು. ಎಲೈ ಭಾರತನೇ, ಋತುಗಳು ತಮ್ಮ ಪುಷ್ಪವನ್ನು ತೆಗೆದುಕೊಂಡು ಅಲ್ಲಿಗೆ ಬಂದವು.

ಪ್ರಜಾನಾಂ ಪತಯಃ ಸಪ್ತ ಸಪ್ತ ಚೈವ ಮಹರ್ಷಯಃ ।
ತತ್ರ ದೇವರ್ಷಯಶ್ಚೈವ ತೇ ಚ ರೇಜುರ್ದಿವೌಕಸಃ ॥೧೧॥

ಇಂದ್ರೇಣ ಸಹಿತಾಃ ಸರ್ವೇ ತ್ರಿದಶಾಶ್ಚ ವ್ಯವಸ್ಥಿತಾಃ ॥೧೨॥

ಸಪ್ತಪ್ರಜಾಪತಿಗಳು ಮತ್ತು ಸಪ್ತಮಹರ್ಷಿಗಳು ಅಲ್ಲಿ ಇದ್ದರು. ಅಲ್ಲಿ ದೇವರ್ಷಿಗಳು ಮತ್ತು ಆ ದೇವತೆಗಳು ಕಂಗೊಳಿಸಿದರು. ಇಂದ್ರನಿಂದ ಸಹಿತರಾದ ಎಲ್ಲಾ ದೇವತೆಗಳೂ ಆ ಪ್ರಾಸಾದದಲ್ಲಿ ಇದ್ದರು.

ನ ಪಂಕೋ ನ ರಜಸ್ತತ್ರ ಪ್ರವಿವೇಶ ಕಥಂಚನ ।
ಆದಿತ್ಯಶ್ಚಾಪಿ ರೂಕ್ಷೋಽತ್ರ ನಾತಿವೇಲಮಿವಾತಪತ್ ॥೧೩॥

ಅಲ್ಲಿ ಕೆಸರಾಗಲೀ ಅಥವಾ ಧೂಳಾಗಲೀ ಪ್ರವೇಶಿಸುವಂತಿರಲಿಲ್ಲ. ಸೂರ್ಯನೂ ಸಹ ಬಹಳ ಪ್ರಖರವಾಗಿ ತಾಪವನ್ನು ಉಂಟುಮಾಡುತ್ತಿರಲಿಲ್ಲ.

ದಿವ್ಯಗಂಧಂ ಸಮಾದಾಯ ವಾಯುಸ್ತತ್ರಾಭಿಗಚ್ಛತಿ ।
ಪ್ರಕಾಶಂ ತ್ರಿದಿವಃ ಸರ್ವಾದರ್ಶನೀಯಮದೃಶ್ಯತ ॥೧೪॥

ವಾಯುವು ದಿವ್ಯಗಂಧವನ್ನು ತೆಗೆದುಕೊಂಡು ಎಲ್ಲ ಕಡೆಗಳಲ್ಲಿಯೂ ಬೀಸುತ್ತಿತ್ತು. ಯಾರಿಗೂ ಕಾಣದ ಸ್ವರ್ಗಲೋಕದ ವೈಭವಗಳೆಲ್ಲವೂ ಅಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದವು. (ಲಕ್ಷಾಲಂಕಾರ).

ತತ್ರ ದೇವಾಃ ಸಮಾರುಹ್ಯ ತಂ ದಿವ್ಯಂ ಸರ್ವತಃಪ್ರಭಾಮ್ ।
ಅಂಬರೇ ವಿಮಲೇऽಗಚ್ಛನ್ ಪ್ರಾಸಾದಂ ಗಾಮಗಾಮಿನೀಮ್ ॥೧೫॥

ದೇವತೆಗಳು ತಾವು ಹೋದಲೆಲ್ಲಾ ಹೋಗುವ ಆ ಪ್ರಕಾಶಮಾನವಾದ ಶುದ್ಧವಾದ ದಿವ್ಯವಾದ ಪ್ರಾಸಾದವನ್ನು ಏರಿ ಆಕಾಶದಲ್ಲಿ ಸಂಚರಿಸಿದರು (ಲಕ್ಷಾಲಂಕಾರ).

ತತ್ರ ರಾಜರ್ಷಯಶ್ಚೈವ ಸಮಾರೂಢಾ ದಿವೌಕಸಃ ।
ಶ್ವೇತೋ ರಾಜಾ ವಸುಮನಾಸ್ತಥಾ ಭದ್ರಃ ಪ್ರತರ್ದನಃ ॥೧೬॥

ನೃಗೋ ಯಯಾತಿರ್ನಹುಷೋ ಮಾಂಧಾತಾ ಭರತಃ ಪುರುಃ ।
ಅಷ್ಟಕಶ್ಚ ಶಿಬಿಶ್ಚೌಭೌ ಸ ಚ ರಾಜಾ ಪುರೂರವಾಃ ॥೧೭॥

ಡಂಬೋದ್ಭವಃ ಕಾರ್ತವೀರ್ಯೋ ಹ್ಯರ್ಜುನಃ ಸಗರಸ್ತಥಾ ।
ದಿಲೀಪಃ ಕೇರಳಃ ಪೂರುಃ ಶರ್ಯಾತಿಃ ಸೋಮಕಸ್ತಥಾ ॥೧೮॥

ಹರಿಶ್ಚಂದ್ರಶ್ಚ ತೇಜಸ್ವೀ ರಘುರ್ದಶರಥಸ್ತಥಾ ।
ಭಗೀರಥಶ್ಚ ರಾಜರ್ಷಿಃ ಸರ್ವೇ ಚ ಜನಮೇಜಯ ॥೧೯॥

ಪಾಂಡುಶ್ಚೈವ ಮಹಾಬಾಹುಶ್ಚಾಮರವ್ಯಜನೈರ್ಯುತಃ ।
ಛತ್ರೇಣ ಧ್ರಿಯಮಾಣೇನ ರಾಜಸೂಯಶ್ರಿಯಾ ವೃತಃ ॥೨೦॥

ಅಲ್ಲಿ ದೇವತೆಗಳು ಮತ್ತು ರಾಜರ್ಷಿಗಳು ಸಮಾರೂಢರಾಗಿದ್ದರು. ಶ್ವೇತರಾಜ, ವಸುಮನ, ಭದ್ರ, ಪ್ರತರ್ದನ, ನೃಗ, ಯಯಾತಿ, ನಹುಷ, ಮಾಂಧಾತಾ, ಭರತ, ಪುರು, ಅಷ್ಟಕ, ಶಿಬಿ, ಪುರೂರವ, ಡಂಬೋದ್ಭವ, ಕಾರ್ತವೀರ್ಯಾರ್ಜುನ, ಸಗರ, ದಿಲೀಪ, ಕೇರಳ, ಪೂರು, ಶರ್ಯಾತಿ, ಸೋಮಕ, ಹರಿಶ್ಚಂದ್ರ, ತೇಜಸ್ವಿಯಾದ ರಘು, ದಶರಥ, ರಾಜರ್ಷಿಯಾದ ಭಗೀರಥ ಎಲ್ಲರೂ ಇದ್ದರು. ಎಲೈ ಜನಮೇಜಯನೇ, ಮಹಾಬಾಹುವಾದ ಪಾಂಡುವು ಅಲ್ಲಿ ಛತ್ರಚಾಮರ ವ್ಯಜನಗಳಿಂದ ಸೇವಿತನಾಗಿ ರಾಜಸೂಯಯಾಗದ ಕಾಂತಿಯಿಂದ ಬೆಳಗುತ್ತಿದ್ದನು.

ಏತೇ ಚಾನ್ಯೇ ಚ ಬಹವಃ ಸತ್ಯಶೀಲಾಃ ಶುಚಿವ್ರತಾಃ ।
ಕೀರ್ತಿಮಂತೋ ಮಹಾವೀರ್ಯಾಸ್ತತ್ರೈವಾಸನ್ ದಿವಿ ಸ್ಥಿತಾಃ ॥೨೧॥

ಇವರೂ ಮತ್ತು ಸತ್ಯಶೀಲರೂ ಶುಚಿವ್ರತರೂ, ಕೀರ್ತಿಶಾಲಿಗಳೂ, ಮಹಾಪರಾಕ್ರಮಿಗಳೂ ಆದ ಇನ್ನೂ ಅನೇಕ ರಾಜರೂ ಅಲ್ಲಿ ಆಕಾಶದಲ್ಲಿ ನಿಂತರು.

ಗಣಾಶ್ಚಾಪ್ಸರಸಾಂ ಸರ್ವೇ ಗಂಧರ್ವಾಶ್ಚಾಪಿ ಸರ್ವಶಃ ।
ದೈತ್ಯರಾಕ್ಷಸಯಕ್ಷಾಶ್ಚ ಸುಪರ್ಣಾಃ ಪನ್ನಗಾಸ್ತಥಾ ॥೨೨॥

ವಾಸವಪ್ರಮುಖಾ ಸರ್ವೇ ದೇವಾಶ್ಚ ಸಗಣೇಶ್ವರಾಃ ।
ಆಸಂಸ್ತತ್ರ ಸಮಾರೂಢಾಃ ಸಂಗ್ರಾಮಂ ತಂ ದಿದೃಕ್ಷವಃ ॥೨೩॥

ಹಾಗೆಯೇ ಎಲ್ಲಾ ಅಪ್ಸರೆಯರ ಗಣಗಳೂ, ಎಲ್ಲ ಗಂಧರ್ವರೂ, ದೈತ್ಯರಾಕ್ಷಸ ಯಕ್ಷರೂ, ಸುಪರ್ಣಗಳೂ, ಅದರಂತೆ ಸರ್ಪಗಳೂ, ಇಂದ್ರ ಮೊದಲಾದ ದೇವತೆಗಳೂ, ಗಣನಾಯಕರೂ ಯುದ್ಧವನ್ನು ನೋಡಲು ಬಯಸಿ ಆ ಪ್ರಾಸಾದವನ್ನು ಏರಿ ಕುಳಿತಿದ್ದರು.

ಇತ್ಯಂಬರೇ ವ್ಯವಸ್ಥಾಯ ಪ್ರಾಸಾದಸ್ಥಾ ದಿವೌಕಸಃ ।
ಏಕಸ್ಯ ಚ ಬಹೂನಾಂ ಚ ದ್ರಷ್ಟುಂ ಯುದ್ಧಂ ವ್ಯವಸ್ಥಿತಾಃ ॥೨೪॥

ಪ್ರಾಸಾದದಲ್ಲಿದ್ದ ದೇವತೆಗಳು ಆಕಾಶದಲ್ಲಿ ಆ ಪ್ರಾಸಾದವನ್ನು ನಿಲ್ಲಿಸಿ ಒಬ್ಬನಿಗೂ ಮತ್ತು ಅನೇಕರಿಗೂ ನಡೆಯುವ ಆ ಯುದ್ಧವನ್ನು ನೋಡಲು ನಿಶ್ಚಯಿಸಿ ನಿಂತರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ದ್ವಿಪಂಚಾಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಐವತ್ಮೂರನೆಯ ಅಧ್ಯಾಯ

ಯುದ್ಧಾರಂಭ. ಅರ್ಜುನನಿಂದ ಬಾಣಗಳ ಮೂಲಕ ಭೀಷ್ಮಾದಿಗಳ ಅಭಿವಂದನೆ ಮತ್ತು ಕುಶಲಪ್ರಶ್ನೆ.

ವೈಶಂಪಾಯನಃ

ತಥಾ ವ್ಯೂಢೇಷ್ವನೀಕೇಷು ಕೌರವೇಯೈರ್ಮಹಾರಥೈಃ ।
ಉಪಾಯಾದರ್ಜುನಸ್ತೂರ್ಣಂ ರಥಘೋಷೇಣ ನಾದಯನ್ ॥೧॥

ವೈಶಂಪಾಯನ– ಮಹಾರಥರಾದ ಕೌರವರು ತಮ್ಮ ಸೈನ್ಯವ್ಯೂಹವನ್ನು ರಚಿಸುತ್ತಿರಲು ತನ್ನ ರಥಘೋಷದಿಂದ ಎಲ್ಲಕಡೆಯಲ್ಲಿಯೂ ಪ್ರತಿಧ್ವನಿಸುತ್ತಾ ಅರ್ಜುನನು ಶೀಘ್ರವಾಗಿ ಬಂದನು.

ದದೃಶುಸ್ತದ್ ಧ್ವಜಾಗ್ರಂ ತೇ ಶುಶ್ರುವುಶ್ಚ ರಥಸ್ವನಮ್ ।
ದೋಧೂಯಮಾನಸ್ಯ ಭೃಶಂ ಗಾಂಡೀವಸ್ಯ ಚ ನಿಸ್ವನಮ್ ॥೨॥

ಕೌರವರು ಅವನ ಧ್ವಜದ ಅಗ್ರಭಾಗವನ್ನು ನೋಡಿದರು. ರಥದ ಸ್ವನವನ್ನೂ ಕೇಳಿದರು. ಬಹಳವಾಗಿ ಕಂಪನವನ್ನು ಮಾಡುತ್ತಿದ್ದ ಗಾಂಡೀವದ ಘೋಷವನ್ನೂ ಕೇಳಿದರು.

ತ್ರಿಕ್ರೋಶಮಾತ್ರಂ ಗತ್ವಾ ತು ಪಾಂಡವಃ ಶ್ವೇತವಾಹನಃ ।
ಸೇನಾಮುಖಮಭಿಪ್ರೇಕ್ಷ್ಯ ಪಾರ್ಥೋ ವೈರಾಟಿಮಬ್ರವೀತ್ ॥೩॥

ಶ್ವೇತವಾಹನನಾದ ಅರ್ಜುನನು ಮೂರುಕ್ರೋಶದಷ್ಟು ದೂರವನ್ನು ಪ್ರಯಾಣ ಮಾಡಿ ಸೇನೆಯ ಮುಂಭಾಗವನ್ನು ನಿರೀಕ್ಷಿಸಿ ಉತ್ತರನನ್ನು ಕುರಿತು ಹೇಳಿದನು.

ರಾಜಾನಂ ನಾತ್ರ ಪಶ್ಯಾಮಿ ರಥಾನೀಕೇ ವ್ಯವಸ್ಥಿತಮ್ ।
ದಕ್ಷಿಣಂ ಪಕ್ಷಮಾಸ್ಥಾಯ ಕುರವೋ ಯಾಂತ್ಯುದಙ್ಮುಖಾಃ ॥೪॥

ಸೇನೆಯ ಮುಂಭಾಗದಲ್ಲಿ ಇರಬೇಕಾದ ರಾಜನಾದ ದುರ್ಯೋಧನನ್ನು ನಾನು ಇಲ್ಲಿ ಕಾಣುತ್ತಿಲ್ಲ. ಬಲಭಾಗವನ್ನು ಆಶ್ರಯಿಸಿ ಹೊರಟ ಕುರುಗಳು ಉತ್ತರಾಭಿಮುಖವಾಗಿ ಹೋಗುತ್ತಿದ್ದಾರೆ.

ಉತ್ಸೃಜ್ಯೈತದ್ ರಥಾನೀಕಂ ಮಹೇಷ್ವಾಸಾಭಿರಕ್ಷಿತಮ್ ।
ಗವಾಗ್ರಮಭಿತೋ ಯಾಹಿ ಯಾವತ್ ಪಶ್ಯಾಮಿ ವೈ ರಿಪುಮ್ ॥೫॥

ಗವಾಗ್ರಮಭಿತೋ ಗತ್ವಾ ಗಾಶ್ಚಾಪ್ಯಾಶು ನಿವರ್ತಯ ॥೬॥

ಮಹಾಧನುರ್ಧಾರಿಗಳಿಂದ ರಕ್ಷಿತವಾದ ರಥಗಳ ಈ ಸಮೂಹವನ್ನು ಬಿಟ್ಟು ಬಳಸಿಕೊಂಡು ಗೋವುಗಳ ಮುಂಭಾಗಕ್ಕೆ ಹೋಗು. ನಾನು ಅಲ್ಲಿ ನನ್ನ ಶತ್ರುವನ್ನು ನೋಡುತ್ತೇನೆ. ಬಳಸಿಕೊಂಡು ಗೋವುಗಳ ಮುಂದೆ ಹೋಗಿ ಶೀಘ್ರವಾಗಿ ಗೋವುಗಳನ್ನು ಹಿಂದಕ್ಕೆ ತಿರುಗಿಸು.

ಯಾವದೇತೇ ನಿವರ್ತಂತೇ ಕುರವೋ ಜವಮಾಸ್ಥಿತಾಃ ।
ತಾವದೇವ ಪಶೂನ್ ಸರ್ವಾನ್ ನಿವರ್ತಿಷ್ಯೇ ತಥಾ ಹಿ ಭೋ ॥೭॥

ವೇಗವನ್ನು ಹೊಂದಿ ಹೋಗುತ್ತಿರುವ ಕುರುಗಳು (ಹಸ್ತಿನಪುರಕ್ಕೆ) ಹಿಂದಿರುಗುವುದಕ್ಕಿಂತ ಮೊದಲೇ ನಾನು ಎಲ್ಲಾ ಗೋವುಗಳನ್ನೂ ಹಾಗೆಯೇ ಹಿಂದಕ್ಕೆ ತಿರುಗಿಸುವೆನು.

ಇತ್ಯುಕ್ತ್ವಾ ಸಮರೇ ಪಾರ್ಥೋ ವೈರಾಟಿಮಪರಾಜಿತಃ ।
ಸವ್ಯಂ ಪಕ್ಷಮನುಪ್ರಾಪ್ಯ ಜವೇನಾಶ್ವಾನಚೋದಯತ್ ॥೮॥

ಯುದ್ಧದಲ್ಲಿ ಅಪರಾಜಿತನಾದ ಅರ್ಜುನನು ಉತ್ತರನನ್ನು ಕುರಿತು ಹೀಗೆ ಹೇಳಿ ಎಡಭಾಗವನ್ನು ಹಿಡಿದು ಶೀಘ್ರವಾಗಿ ಅಶ್ವಗಳನ್ನು ಪ್ರಚೋದಿಸಿದನು.

ತತಸ್ತತ್ ಸರ್ವಮಾಲೋಕ್ಯ ದ್ರೋಣೋ ವಚನಮಬ್ರವೀತ್ ।
ಮಹಾರಥಮನುಪ್ರಾಪ್ತಂ ದೃಷ್ಟ್ವಾ ಗಾಂಡೀವಧನ್ವಿನಮ್ ॥೯॥

ಆಗ ಅವೆಲ್ಲವನ್ನೂ ನೋಡಿ ಮಹಾರಥನೂ, ಗಾಂಡೀವಧನುರ್ಧಾರಿಯೂ ಆದ ಅರ್ಜುನನು ಬಂದಿರುವುದನ್ನು ನೋಡಿ ದ್ರೋಣರು ಮಾತನಾಡಿದರು.

ಏತದ್ ಧ್ವಜಾಗ್ರಂ ಪಾರ್ಥಸ್ಯ ದೂರತಃ ಪರಿದೃಶ್ಯತೇ ।
ಮೇಘಃ ಸವಿದ್ಯುತ್‌ಸ್ತನಿತೋ ರೋರವೀತಿ ಚ ವಾನರಃ ॥೧೦॥

ಅವಸ್ಥಾಯ ರಥಂ ಯಾತಿ ಗಾಂಡೀವಂ ವಿಕ್ಷಿಪನ್ ಧನುಃ ॥೧೧॥

ಅರ್ಜುನನ ಧ್ವಜದ ಈ ಅಗ್ರಭಾಗವು ದೂರದಿಂದಲೇ ಕಾಣುತ್ತಿದೆ. ಮಿಂಚಿನಿಂದ ಕೂಡಿದ ಮೋಡದ ಧ್ವನಿಯಂತೆ ಧ್ವಜದಲ್ಲಿರುವ ವಾನರನು ಗರ್ಜಿಸುತ್ತಿದ್ದಾನೆ. ಅರ್ಜುನನು ರಥವನ್ನು ಏರಿ, ಗಾಂಡೀವಧನುಸ್ಸನ್ನು ಎಳೆದು ಶಬ್ದವನ್ನು ಮಾಡುತ್ತಾ ಹೋಗುತ್ತಿದ್ದಾನೆ.

ಅಶ್ವಾನಾಂ ಸ್ತನತಾಂ ಶಬ್ದೋ ವಹತಾಂ ಪಾಕಶಾಸನಿಮ್ ।
ರಥಸ್ಥಾಂಬುಧರಸ್ಯೇವ ಶ್ರೂಯತೇ ಭೃಶದಾರುಣಃ ॥೧೨॥

ರಥದಲ್ಲಿ ಅರ್ಜುನನನ್ನು ಕೂಡಿಸಿಕೊಂಡು ಹೋಗುವ ಅಶ್ವಗಳ ಕೆನೆಯುವ ಶಬ್ದವು ರಥದಲ್ಲಿಯೇ ಮೋಡಗಳು ಭಯಂಕರ ಶಬ್ದವನ್ನು ಮಾಡಿದಂತೆ ಕೇಳಿಬರುತ್ತಿದೆ.

ದಾರಯನ್ನಿವ ತೇಜಸ್ವೀ ವಸುಧಾಂ ವಾಸವಾತ್ಮಜಃ ।
ಏಷ ತಿಷ್ಠನ್ ರಥಶ್ರೇಷ್ಠೋ ರಥೇ ರಥವರಪ್ರಣುತ್ ॥೧೩॥

ಏಷ ದೃಷ್ಟ್ವಾ ರಥಾನೀಕಮಸ್ಮಾಕಮರಿಮರ್ದನಃ ।
ಹ್ರೀಮಾನ್ ವದಾನ್ಯೋ ಧೃತಿಮಾನ್ ಸತ್ಕರೋತಿ ಚ ಪಾಂಡವಃ ॥೧೪॥

ಶ್ರೇಷ್ಠರಥರನ್ನು ಸಂಹರಿಸುವ ರಥಶ್ರೇಷ್ಠನಾದ ಇಂದ್ರಪುತ್ರನಾದ ತೇಜಸ್ವಿಯಾದ ಅರ್ಜುನನು ರಥದಲ್ಲಿನಿಂತು ಭೂಮಿಯನ್ನು ಸೀಳುವವನಂತೆ ಹೋಗುತ್ತಿದ್ದಾನೆ. ನಮ್ಮ ರಥಗಳ ಸಮೂಹವನ್ನು ನೋಡಿ ಶತ್ರುಮರ್ದನನೂ, ನಾಚಿಕೆಸ್ವಭಾವದವನೂ, ಉದಾರಿಯೂ, ಧೈರ್ಯಶಾಲಿಯೂ ಆದ ಪಾಂಡುಪುತ್ರನಾದ ಅರ್ಜುನನು ನಮಗೆ ಸತ್ಕಾರವನ್ನು ಮಾಡುತ್ತಿದ್ದಾನೆ (ಏಕೆಂದರೆ ತನ್ನ ಎಡಭಾಗದಿಂದ ಹೊರಟು ನಮಗೆ ಪ್ರದಕ್ಷಿಣೆಯನ್ನು ಮಾಡುವವನಂತೆ ಹೋಗುತ್ತಿದ್ದಾನೆ).

ತತೋಽಭ್ಯವಾದಯತ್ ಪಾರ್ಥೋ ಭೀಷ್ಮಂ ಶಾಂತನವಂ ಕೃಪಮ್ ।
ದ್ವಾಭ್ಯಾಂ ದ್ವಾಭ್ಯಾಂ ತಥಾಽಽಚಾರ್ಯಂ ದ್ರೋಣಂ ಚ ನಿಶಿತೈಃ ಶರೈಃ ॥

ಅನಂತರ ಅರ್ಜುನನು ಎರಡೆರಡು ಬಾಣಗಳನ್ನು ಪ್ರಯೋಗ ಮಾಡಿ ಶಂತನು ಪುತ್ರರಾದ ಭೀಷ್ಮರನ್ನೂ, ಕೃಪರನ್ನೂ ಮತ್ತು ಆಚಾರ್ಯರಾದ ದ್ರೋಣರನ್ನೂ ಆ ನಿಶಿತವಾದ ಬಾಣಗಳಿಂದ ನಮಸ್ಕರಿಸಿದನು.

ಭೀಷ್ಮಃ

ಇಮೌ ಬಾಣಾವನುಪ್ರಾಪ್ತೌ ಪಾದಯೋಃ ಪ್ರತ್ಯುಪಸ್ಥಿತೌ ।
ಬಂಧುರಾಗ್ರನಿಪಾತೌ ಮೇ ಚಿತ್ರಪುಂಖಾವಜಿಹ್ಮಗೌ ॥೧೬॥

ಭೀಷ್ಮ– ಸ್ನೇಹಬಂಧನವನ್ನು ಸೂಚಿಸುವ, ಚಿತ್ರಪುಂಖಿಗಳನ್ನು ಹೊಂದಿರುವ, ನೇರವಾಗಿ ಸಂಚರಿಸುವ, ಮುಂಭಾಗದಲ್ಲಿ ಬೀಳುವವನ್ನು ಈ ಎರಡು ಬಾಣಗಳು ನನ್ನ ಪಾದಗಳ ಸಮೀಪ ತಲುಪಿವೆ.

ಇಮೌ ಚಾಪ್ಯಪರೌ ಬಾಣಾವಭಿತಃ ಕರ್ಣಮೂಲಯೋಃ ।
ಸಂಸ್ಪೃಶಂತಾವತಿಕ್ರಾಂತೌ ಪೃಷ್ಟ್ವೇವಾನಾಮಯಂ ಭೃಶಮ್ ॥೧೭॥

ಈ ಇನ್ನೆರಡು ಬಾಣಗಳು ನನ್ನ ಕಿವಿಯನ್ನು ಸ್ಪರ್ಶಿಸುವಂತೆ ದಾಟಿಕೊಂಡು ಹೋಗುತ್ತಾ ಚೆನ್ನಾಗಿ ಕುಶಲಪ್ರಶ್ನೆಯನ್ನು ಮಾಡುವಂತೆ ಹೋಗುತ್ತಿವೆ.

ಚಿರದೃಷ್ಟೋऽಯಮಸ್ಮಾಭಿರ್ಧರ್ಮಜ್ಞೋ ಬಾಂಧವಪ್ರಿಯಃ ।
ಅತೀವ ಜ್ವಲತೇ ಲಕ್ಷ್ಮ್ಯಾ ಪಾಂಡುಪುತ್ರಃ ಪ್ರತಾಪವಾನ್ ॥೧೮॥

ನಾವು ಅರ್ಜುನನನ್ನು ನೋಡಿ ಬಹಳ ಸಮಯವಾಯಿತು. ಧರ್ಮಜ್ಞನೂ, ಬಂಧುಪ್ರಿಯನೂ, ಪ್ರತಾಪಶಾಲಿಯೂ ಆದ ಈ ಪಾಂಡುಪುತ್ರನು ಕಾಂತಿಯಿಂದ ಬಹಳವಾಗಿ ಬೆಳಗುತ್ತಿದ್ದಾನೆ.

ನಿರುಷ್ಯ ಚ ವನೇ ವಾಸಂ ಕೃತ್ವಾ ಕರ್ಮ ಸುದುಷ್ಕರಮ್ ।
ಅಭಿವಾದಯತೇ ಪಾರ್ಥಃ ಪೂಜಯನ್ ಮಾಮರಿಂದಮಃ ॥೧೯॥

ವನವಾಸವನ್ನು ಮುಗಿಸಿ ದುಷ್ಕರವಾದ ಕರ್ಮವನ್ನು ಮಾಡಿ ಅರಿಂದಮನಾದ ಅರ್ಜುನನು ನನ್ನನ್ನು ಪೂಜಿಸುತ್ತಾ ಪಾದಗಳಿಗೆ ನಮಸ್ಕರಿಸುತ್ತಿದ್ದಾನೆ.

ಅಮರ್ಷೇಣ ಹಿ ಸಂಪೂರ್ಣೋ ದುಃಖೇನ ಪ್ರತಿಬೋಧಿತಃ ।
ಅದ್ಯೇಮಾಂ ಭಾರತೀಂ ಸೇನಾಮೇಕೋ ನಾಶಯತೇ ಧ್ರುವಮ್ ॥೨೦॥

ದುಃಖದಿಂದ ಉದ್ಬುದ್ಧನಾಗಿ ಕ್ರೋಧದಿಂದ ತುಂಬಿರುವ ಅರ್ಜುನನು ಒಬ್ಬನೇ ಈ ದಿನ ಕೌರವರ ಈ ಸೈನ್ಯವನ್ನು ಖಂಡಿತವಾಗಿ ನಾಶಮಾಡುತ್ತಾನೆ.

ದ್ವ್ಯಧಿಕಂ ದಶಮುಷ್ಯ ವತ್ಸರಾಣಾಂ
ಸ್ವಜನೇನಾವಿದಿತಸ್ತ್ರಯೋದಶಂ ಚ ।
ಜ್ವಲತೇ ರಥಮಾಸ್ಥಿತಃ ಕಿರೀಟೀ
ತಮ ಇವ ರಾತ್ರಿಜಮಭ್ಯುದಸ್ಯ ಸೂರ್ಯಃ ॥೨೧॥

ಹನ್ನೆರಡು ವರ್ಷಗಳ ಕಾಲ ವನವಾಸವನ್ನು ಮಾಡಿ ಒಂದು ವರ್ಷದ ಕಾಲ ಸ್ವಜನರಿಗೆ ತಿಳಿಯದಂತೆ ಅಜ್ಞಾತವಾಸವನ್ನು ಮಾಡಿ, ರಥವನ್ನು ಏರಿದ ಅರ್ಜುನನು ರಾತ್ರಿಯ ಕತ್ತಲನ್ನು ನಿವಾರಿಸಿ ಬೆಳಗುವ ಸೂರ್ಯನಂತೆ ಜ್ವಲಿಸುತ್ತಿದ್ದಾನೆ.

ರಥೀ ಶರೀ ಚಾರುಮಾಲೀ ನಿಷಂಗೀ
ಶಂಖೀ ಪತಾಕೀ ಕವಚೀ ಕಿರೀಟೀ ।
ಖಡ್ಗೀ ಚ ಧನ್ವೀ ಚ ವಿರಾಜತೇಽಸೌ
ಶಿಖೀವ ಯಜ್ಞೇಷು ಘೃತೇನ ಸಿಕ್ತಃ ॥೨೨॥

ರಥ, ಬಾಣಗಳು, ಸುಂದರವಾದ ಮಾಲೆ, ಬತ್ತಳಿಕೆ, ಶಂಖ, ಪತಾಕೆಗಳು, ಕವಚ, ಕಿರೀಟ, ಖಡ್ಗ, ಧನುಸ್ಸು ಇವುಗಳನ್ನು ಹೊಂದಿದ ಇವನು ಯಜ್ಞದಲ್ಲಿ ಘೃತದಿಂದ ಸಿಕ್ತವಾದ ಅಗ್ನಿಯಂತೆ ವಿರಾಜಿಸುತ್ತಿದ್ದಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ತ್ರಿಪಂಚಾಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಷಡ್‌ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಐವತ್ತನಾಲ್ಕನೆಯ ಅಧ್ಯಾಯ

ದುರ್ಯೋಧನನನ್ನು ಹುಡುಕುತ್ತಾ ಅರ್ಜುನನಿಂದ ಗೋವುಗಳ ಪ್ರತಿನಿವರ್ತನ

ವೈಶಂಪಾಯನಃ

ತಮದೂರಮುಪಾಯಾಂತಂ ದೃಷ್ಟ್ವಾ ಪಾಂಡವಮರ್ಜುನಮ್ ।
ನಾರಯಃ ಪ್ರೇಕ್ಷಿತುಂ ಶೇಕುಸ್ತಪಂತಂ ಹಿ ಯಥಾ ರವಿಮ್ ॥೧॥

ವೈಶಂಪಾಯನ– ಸಮೀಪದಲ್ಲಿ ಬಂದ ಪಾಂಡುಪುತ್ರನಾದ ಅರ್ಜುನನನ್ನು ನೋಡಿ ಉರಿಯುವ ಸೂರ್ಯನಂತಿರುವ ಅವನನ್ನು ನೋಡಲು ಸಮರ್ಥರಾಗಲಿಲ್ಲ.

ತಂ ದೃಷ್ಟ್ವಾ ತು ರಥಾನೀಕಂ ಪಾರ್ಥಃ ಸಾರಥಿಮಬ್ರವೀತ್ ॥೨॥

ಇಷುಪಾತಮಾತ್ರೇ ಸೇನಾಯಾಃ ಸ್ಥಾಪಯಾಶ್ವಾನರಿಂದಮ ।
ಯಾವತ್ ಸಮೀಕ್ಷೇ ಸೈನ್ಯೇಽಸ್ಮಿನ್ ಮಮ ಶತ್ರುಂ ಸುಯೋಧನಮ್ ॥

ಆ ರಥಸಮೂಹವನ್ನು ನೋಡಿ ಅರ್ಜುನನು ಉತ್ತರನನ್ನು ಕುರಿತು ಎಲೈ ಅರಿಂದಮನೇ, ಕೌರವ ಸೇನೆಯಿಂದ ಒಂದು ಬಾಣಬೀಳುವಷ್ಟು ದೂರದಲ್ಲಿ ಮಾತ್ರ ಕುದುರೆಗಳನ್ನು ನಿಲ್ಲಿಸು. ಅಷ್ಟರಲ್ಲಿ ನಾನು ನನ್ನ ಶತ್ರುವಾದ ಸುಯೋಧನನನ್ನು ನೋಡುವೆನು.

ರತ್ನವೈಡೂರ್ಯವಿಕೃತಂ ಮಣಿಪ್ರವರಭೂಷಿತಮ್ ।
ಪರಿಜಾನಾಮ್ಯಹಂ ತಸ್ಯ ಧ್ವಜಂ ದೂರಾತ್ ಸಮುಚ್ಛ್ರಿತಮ್ ॥೪॥

ರತ್ನವೈಡೂರ್ಯಗಳಿಂದ ಅಲಂಕೃತವಾದ, ಶ್ರೇಷ್ಠವಾದ ಮಣಿಗಳಿಂದ ಭೂಷಿತವಾದ ಎತ್ತರವಾದ ಅವನ ಧ್ವಜವನ್ನು ನಾನು ದೂರದಿಂದಲೇ ಬಲ್ಲೆ.

ಯದ್ಯೇನಮಿಹ ಪಶ್ಯಾಮಿ ದುರ್ಬುದ್ಧಿಮತಿಮಾನಿನಮ್ ।
ಯಮಾಯ ಪ್ರೇಷಯಿಷ್ಯಾಮಿ ಸಹಾಯಃ ಸ್ಯಾದ್ ಯದೀಶ್ವರಃ ॥೫॥

ದುರ್ಬುದ್ಧಿಯಾದ ಶಸ್ತ್ರಧಾರಿಯಾದ ಅವನನ್ನು ಇಲ್ಲಿ ನೋಡಿದರೆ ದೇವರ ಸಹಾಯವಿದ್ದರೆ ನಾನು ಅವನನ್ನು ಯಮನ ಬಳಿಗೆ ಕಳುಹಿಸುವೆನು.

ಸರ್ವಾನನ್ಯಾನನಾದೃತ್ಯ ದೃಷ್ಟ್ವಾ ತಮತಿಮಾನಿನಮ್ ।
ಸಿಂಹಃ ಕ್ಷುದ್ರಮೃಗಸ್ಯೇವ ಪತಿಷ್ಯೇ ತಸ್ಯ ಮೂರ್ಧನಿ ॥೬॥

ಉಳಿದ ಎಲ್ಲರನ್ನೂ ಉಪೇಕ್ಷಿಸಿ ಮಹಾದುರಹಂಕಾರಿಯಾದ ಅವನನ್ನು ನೋಡಿ ಸಿಂಹವು ಕ್ಷುದ್ರಮೃಗದ ಮೇಲೆ ಎರಗಿದಂತೆ ಅವನ ತಲೆಯ ಮೇಲೆ ಎರಗುವೆನು.

ಹನಿಷ್ಯೇದ್ಯ ತದೈವಾಶು ಶರೈರ್ಗಾಂಡೀವನಿಃಸೃತೈಃ ।
ತಸ್ಮಿನ್ ಹತೇ ಭವಿಷ್ಯಂತಿ ಸರ್ವ ಏವ ಪರಾಜಿತಾಃ ॥೭॥

ಈ ದಿನ ಅವನನ್ನು ನೋಡಿದಾಗಲೇ ಗಾಂಡೀವದಿಂದ ಹೊಮ್ಮಿದ ಬಾಣಗಳಿಂದ ಅವನನ್ನು ಶೀಘ್ರವಾಗಿ ಕೊಲ್ಲುವೆನು. ಅವನು ಮೃತನಾದರೆ ಎಲ್ಲ ಕೌರವರೂ ಪರಾಜಿತರಾಗುವರು.

ಶರೈಃ ಸಮರ್ಪಯಿಷ್ಯಾಮಿ ಧಾರ್ತರಾಷ್ಟ್ರಂ ಸುಯೋಧನಮ್ ।
ಅಸಭ್ಯಾನಾಂ ಚ ಭರ್ತಾರಂ ಕುರೂಣಾಂ ಕಿಲ ಕಿಲ್ಬಿಷಮ್ ॥೮॥

ಅಸಭ್ಯಜನರ ಪೋಷಕನಾದ, ಕುರುವಂಶದಲ್ಲಿ ಕಿಲ್ಬಿಷನಾದ ಧೃತರಾಷ್ಟ್ರಪುತ್ರನಾದ ಸುಯೋಧನನನ್ನು ಬಾಣಗಳಿಂದ ತುಂಬುವೆನು.

ರಾಜಾನಂ ನೇಹ ಪಶ್ಯಾಮಿ ನಿರಾಮಿಷಮಿದಂ ಬಲಮ್ ।
ಅಭಿದ್ರವೇಽಹಂ ರಾಜಾನಂ ವ್ಯಕ್ತಂ ತತ್ರ ಹಿ ನಿರ್ಭಯಮ್ ॥೯॥

ರಾಜನನ್ನು ಇಲ್ಲಿ ನಾನು ಕಾಣುತ್ತಿಲ್ಲ. ಈ ಸೈನ್ಯವು ನನಗೆ ಬೇಕಾದ ಆಹಾರವಿಲ್ಲದುದು. ರಾಜನು ಇರುವಲ್ಲಿಗೆ ನಾನು ನಿರ್ಭಯವಾಗಿ ಧಾವಿಸುವೆನು.

ಆಸ್ಥಿತೋ ಮಧ್ಯಮಾಚಾರ್ಯೋ ಹ್ಯಶ್ವತ್ಥಾಮಾ ಹ್ಯನಂತರಮ್ ।
ಕೃಪಕರ್ಣೌ ಪುರಸ್ತಾತ್ ತು ಮಹೇಷ್ವಾಸೌ ವ್ಯವಸ್ಥಿತೌ ॥೧೦॥

ದ್ರೋಣಾಚಾರ್ಯರು ಇಲ್ಲೇ ಸೈನ್ಯದ ಮಧ್ಯದಲ್ಲಿದ್ದಾರೆ. ಅವರ ಹಿಂದೆ ಅಶ್ವತ್ಥಾಮರಿದ್ದಾರೆ. ಮಹಾಧನುರ್ಧಾರಿಗಳಾದ ಕೃಪಾಚಾರ್ಯರು ಮತ್ತು ಕರ್ಣನು ಮುಂಭಾಗದಲ್ಲಿದ್ದಾರೆ.

ಭೂರಿಶ್ರವಾಃ ಸೋಮದತ್ತೋ ಬಾಹ್ಲಿಕಶ್ಚ ಜಯದ್ರಥಃ ।
ದಕ್ಷಿಣಂ ಪಕ್ಷಮಾಶ್ರಿತ್ಯ ಸ್ಥಿತಾ ಯುದ್ಧಾರ್ಥಿನಃ ಸದಾ ॥೧೧॥

ಭೂರಿಶ್ರವ, ಸೋಮದತ್ತ, ಬಾಹ್ಲಿಕ ಮತ್ತು ಜಯದ್ರಥರು ಸೈನ್ಯದ ಬಲಭಾಗವನ್ನು ಆಶ್ರಯಿಸಿ ಯುದ್ಧವನ್ನು ಮಾಡಲು ಬಯಸುತ್ತಿದ್ದಾರೆ.

ಸಾಲ್ವರಾಜೋ ದ್ಯುಮತ್ಸೇನೋ ವೃಷಸೇನಶ್ಚ ಸೌಬಲಃ ।
ದಶಾರ್ಣಶ್ಚೈವ ಕಾಳಿಂಗೋ ವಾಮಂ ಪಕ್ಷಂ ಸಮಾಶ್ರಿತಾಃ ॥೧೨॥

ಸಾಲ್ವರಾಜನಾದ ದ್ಯುಮತ್ಸೇನ, ಸೌಬಲರಾಜನಾದ ವೃಷಸೇನ, ಕಳಿಂಗಾಧಿಪತಿಯಾದ ದಶಾರ್ಣ ಇವರು ಎಡಭಾಗದಲ್ಲಿದ್ದಾರೆ.

ಪೃಷ್ಠತಃ ಕುರುಮುಖ್ಯಸ್ತು ಭೀಷ್ಮಸ್ತಿಷ್ಠತಿ ದಂಸಿತಃ ।
ಸೋಽರ್ಧಸೈನ್ಯೇನ ಬಲವಾನ್ ಸರ್ವೇಷಾಂ ನಃ ಪಿತಾಮಹಃ ॥೧೩॥

ಹಿಂಭಾಗದಲ್ಲಿ ನಮ್ಮೆಲ್ಲರ ಪಿತಾಮಹರಾದ ಬಲಿಷ್ಠರಾದ ಭೀಷ್ಮರು ಕವಚವನ್ನು ಧರಿಸಿ ಅರ್ಧಸೈನ್ಯದ ಜೊತೆಯಲ್ಲಿ ಇದ್ದಾರೆ.

ದುರ್ಯೋದನಂ ನ ಪಶ್ಯಾಮಿ ಕ್ವ ನು ರಾಜಾ ಸ ಗಚ್ಛತಿ ।
ಉತ್ಸೃಜ್ಯೈತದ್ ರಥಾನೀಕಂ ಯಾಹಿ ಯತ್ರ ಸುಯೋಧನಃ ॥೧೪॥

ಆದರೆ ದುರ್ಯೋಧನನು ಕಾಣುತ್ತಿಲ್ಲ. ಅವನು ಎಲ್ಲಿಗೆ ಹೋಗಿರಬಹುದು? ಈ ರಥವ್ಯೂಹವನ್ನು ಬಿಟ್ಟು ದುರ್ಯೋಧನನು ಇರುವ ಕಡೆಗೆ ಹೋಗುವವನಾಗು.

ತಂ ಹತ್ವಾ ತು ನಿವರ್ತಿಷ್ಯೇ ಗಾಃ ಸ ಆದಾಯ ಗಚ್ಛತಿ ।
ಗವಾಗ್ರಮಭಿತೋ ಯಾಹಿ ಯತ್ರ ರಾಜಾ ಭವಿಷ್ಯತಿ ॥೧೫॥

ಅವನನ್ನು ಕೊಂದು ಹಿಂದಿರುಗುವೆನು. ಅವನು ಗೋವುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾನೆ. ಸೈನ್ಯವನ್ನು ಬಳಸಿಕೊಂಡು ಗೋವುಗಳ ಮುಂಭಾಗದಲ್ಲಿ ಹೋಗು. ಅಲ್ಲಿ ರಾಜನು ಇರುವನು.

ಇತ್ಯುಕ್ತ್ವಾ ಸಮರೇ ಪಾರ್ಥೋ ವೈರಾಟಿಮಪರಾಜಿತಃ ।
ಸಂಸ್ಪೃಶಾನೋ ಧನುರ್ದಿವ್ಯಂ ತ್ವರಮಾಣೋಽಗಮತ್ ತದಾ ॥೧೬॥

ಅಪರಾಜಿತನಾದ ಅರ್ಜುನನು ಯುದ್ಧದಲ್ಲಿ ಉತ್ತರನನ್ನು ಕುರಿತು ಹೀಗೆ ಹೇಳಿ ತನ್ನ ದಿವ್ಯವಾದ ಧನುಸ್ಸನ್ನು ನೇವರಿಸುತ್ತಾ ಶೀಘ್ರವಾಗಿ ಸಾಗಿದನು.

ತತೋ ಭೀಷ್ಮೋಽಬ್ರವೀದ್ ವಾಕ್ಯಂ ಕುರುಮಧ್ಯೇ ಪರಂತಪಃ ॥೧೭॥

ಚಿರಂ ದೃಷ್ಟೋಽಯಮಸ್ಮಾಭಿರ್ಧರ್ಮಜ್ಞೋ ಬಾಂಧವಪ್ರಿಯಃ ।
ಅತೀವ ಜ್ವಲತೇ ಲಕ್ಷ್ಮ್ಯಾ ಪಾಕಶಾಸನಿರಚ್ಯುತಃ ॥೧೮॥

ಆಗ ಪರಂತಪರಾದ ಭೀಷ್ಮರು ಕುರುಗಳ ಮಧ್ಯದಲ್ಲಿ ಹೀಗೆ ಮಾತನಾಡಿದರು- ನಾವು ಧರ್ಮಜ್ಞನೂ ಮತ್ತು ಬಂಧುಪ್ರಿಯನೂ ಆದ ಅರ್ಜುನನನ್ನು ಬಹಳ ಸಮಯದ ಮೇಲೆ ನೋಡುತ್ತಿದ್ದೇವೆ. ಪಾಕಶಾಸನಪುತ್ರನಾದ ಅವನು ತನ್ನ ಪರಾಕ್ರಮದಿಂದ ಚ್ಯುತನಾಗದೆ ಕಾಂತಿಯಿಂದ ಜ್ವಲಿಸುತ್ತಿದ್ದಾನೆ.

ಏಷ ದುರ್ಯೋಧನಂ ಪಾರ್ಥೋ ಮಾರ್ಗತಿ ನಿಕೃತೀಃ ಸ್ಮರನ್ ।
ಸೇನಾಪತಿಂ ಸಮಾಲೋಕ್ಯ ತ್ವರತೇ ಗ್ರಹಣೇಽಸ್ಯ ಚ ॥೧೯॥

ಈ ಅರ್ಜುನನು ಹಿಂದೆ ದುರ್ಯೋಧನನು ಮಾಡಿದ ಮೋಸಗಳನ್ನೆಲ್ಲಾ ಸ್ಮರಿಸುತ್ತಾ ದುರ್ಯೋಧನನನ್ನು ಹುಡುಕುತ್ತಿದ್ದಾನೆ. ಸೇನಾಪತಿಯಾದ ಅವನನ್ನು ನೋಡಿ ಅವನನ್ನು ಹಿಡಿಯುವುದಕ್ಕೆ ತ್ವರೆ ಮಾಡುತ್ತಿದ್ದಾನೆ.

ಮೃಗಂ ಸಿಂಹ ಇವಾದಾತುಮೀಕ್ಷತೇ ಪಾಕಶಾಸನಿಃ ॥೨೦॥

ಉತ್ಸೃಜ್ಯ ರಥವೃಂದಂ ತು ಪ್ರಯಾತಃ ಶ್ವೇತವಾಹನಃ ॥೨೧॥

ಅರ್ಜುನನು ಸಿಂಹವು ಜಿಂಕೆಯನ್ನು ಹಿಡಿದಂತೆ ಅವನನ್ನು ಹಿಡಿಯಲು ನೋಡುತ್ತಿದ್ದಾನೆ. ನಮ್ಮ ಈ ರಥವ್ಯೂಹವನ್ನು ಬಿಟ್ಟು ಅವನು ಹೋಗುತ್ತಿದ್ದಾನೆ.

ನೈಷೋಽಂತರೇಣ ರಾಜಾನಂ ಬೀಭತ್ಸುಃ ಸ್ಥಾತುಮರ್ಹತಿ ।
ತಸ್ಯ ಪಾರ್ಷ್ಣಿಂ ಗ್ರಹೀಷ್ಯಾಮೋ ಜವೇನಾಭಿಪ್ರಯಾಸ್ಯತಃ ॥೨೨॥

ಈ ಅರ್ಜುನನು ದುರ್ಯೋಧನನನ್ನು ಕಾಣದೆ ನಿಲ್ಲಲಾರ. ವೇಗವಾಗಿ ಹೋಗುತ್ತಿರುವ ಅವನ ಪಕ್ಕಗಳನ್ನು ನಾವು ಹಿಡಿಯೋಣ.

ನ ಹ್ಯೇನಮಿಹ ಸಂಕ್ರುದ್ಧಮೇಕೋ ಯುದ್ಧ್ಯೇತ ಸಂಯುಗೇ ।
ಅನ್ಯೋ ದೇವಾನ್ ಮಹಾದೇವಾತ್ ಕೃಷ್ಣಾದ್ವಾ ದೇವಕೀಸುತಾತ್ ॥

ಆಚಾರ್ಯಾಚ್ಚ ಸಪುತ್ರಾದ್ವಾ ಭಾರದ್ವಾಜಾನ್ಮಹಾರಥಾತ್ ॥೨೪॥

ಕ್ರೋಧಗೊಂಡ ಅವನನ್ನು ಎದುರಿಸಿ ರುದ್ರದೇವರಿಂದ ಭಿನ್ನನಾದ, ದೇವಕೀ ಪುತ್ರನಾದ ಕೃಷ್ಣನಿಂದ ಭಿನ್ನನಾದ, ಮಹಾರಥರೂ ಪುತ್ರಸಹಿತರೂ ಆದ ದ್ರೋಣಾಚಾರ್ಯರಿಂದ ಭಿನ್ನನಾದ ಯಾವನೇ ಒಬ್ಬನು ಎದುರಿಸಲಾರನು.

ಕಿಂ ನೋ ಗಾವಃ ಕರಿಷ್ಯತಿ ಧನಂ ವಾ ವಿಪುಲಂ ತಥಾ ।
ದುರ್ಯೋಧನಃ ಪಾರ್ಥಮಗಾತ್ ಪುರಾ ಪ್ರಾಣಾನ್ ವಿಮುಂಚತಿ ॥

ನಮಗೆ ಗೋವುಗಳಿಂದ ಏನಾಗಬೇಕಾಗಿದೆ? ಅಥವಾ ವಿಪುಲವಾದ ಧನದಿಂದಲಾದರೂ ಏನು? ದುರ್ಯೋಧನನು ಅರ್ಜುನನ ಕೈ ಸೇರಿದರೆ ಮೊದಲು ಪ್ರಾಣಗಳನ್ನು ಬಿಡುತ್ತಾನೆ.

ವೈಶಂಪಾಯನಃ

ಇತ್ಯುಕ್ತ್ವಾ ಸಮರೇ ಭೀಷ್ಮಃ ಸೇನಾಯಾಃ ಸಹ ಕೌರವಃ ।
ಅನ್ವಧಾವತ್ ತದಾ ಪಾರ್ಥಂ ಧಾರ್ತರಾಷ್ಟ್ರಂ ಹಿ ರಕ್ಷಿತುಮ್ ॥೨೬॥

ವೈಶಂಪಾಯನ– ಕೌರವರಾದ ಭೀಷ್ಮರು ಯುದ್ಧಭೂಮಿಯಲ್ಲಿ ಹೀಗೆ ಹೇಳಿ ದುರ್ಯೋಧನನನ್ನು ರಕ್ಷಿಸಲು ಆಗ ಅರ್ಜುನನ ಹಿಂದೆ ಧಾವಿಸಿದರು.

ತ್ರಿಕ್ರೋಶಮಾತ್ರಂ ಯಾತ್ವಾ ತು ಪಾರ್ಥೋ ವೈರಾಟಿಮಬ್ರವೀತ್ ॥

ಇಷುಪಾತಮಾತ್ರೇ ಸೇನಾಯಾಃ ಸ್ಥಾಪಯಾಶ್ವಾನರಿಂದಮ ।
ಏತದಗ್ರಂ ಗವಾಂ ದೃಷ್ಟಂ ಮಂದಂ ವಾಹಯ ಸಾರಥೇ ॥೨೮॥

ಮೂರು ಕ್ರೋಶಗಳಷ್ಟು ದೂರ ಹೋಗಿ ಅರ್ಜುನನು ಉತ್ತರನನ್ನು ಕುರಿತು ಹೇಳಿದನು- ಅರಿಂದಮನೇ, ಒಂದು ಬಾಣವು ಬೀಳುವಷ್ಟು ದೂರದಲ್ಲಿ ಸೈನ್ಯದ ಮುಂದೆ ಕುದುರೆಗಳನ್ನು ನಿಲ್ಲಿಸು. ಗೋವುಗಳ ಮುಂಭಾಗವನ್ನು ನೋಡುತ್ತಿದ್ದೇನೆ. ಸಾರಥಿಯೇ, ನಿಧಾನವಾಗಿ ರಥವನ್ನು ಹೊಡೆ.

ಯಾಹ್ಯುತ್ತರೇಣ ಸೇನಾಯಾ ಗಾಶ್ಚೈವ ಪ್ರವಿಭಜ್ಯ ಚ ।
ಪರಿಕ್ಷಿಪ್ಯ ಗವಾಂ ಯೂಥಮತ್ರ ಯೋತ್ಸ್ಯೇ ಸುಯೋಧನಮ್ ॥೨೯॥

ಗೋವುಗಳ ಮಧ್ಯೆ ಜಾಗವನ್ನು ಮಾಡಿಕೊಂಡು ಸೈನ್ಯದ ಉತ್ತರಭಾಗದಿಂದ ಹೋಗು. ನಾನು ಗೋವುಗಳನ್ನು ಶತ್ರುಗಳ ಕೈಯಿಂದ ಬಿಡಿಸಿ ಸುಯೋಧನನ ಜೊತೆಯಲ್ಲಿ ಯುದ್ಧವನ್ನು ಮಾಡುವೆನು.

ಗಚ್ಛಂತಿ ಸತ್ವರಂ ಗಾವಃ ಸಗೋಪಾಃ ಪರಿಮೋಚಯ ॥೩೦॥

ತತ್ರ ಗತ್ವಾ ಪಶೂನ್ ವೀರ ಸಗೋಪಾನ್ ಪರಿಮೋಚಯ ।
ಅಂತರೇಣ ಚ ಸೇನಾಯಾಃ ಪ್ರಾಙ್ಮುಖೋ ಗಚ್ಛ ಚೋತ್ತರ ॥೩೧॥

ಗೋವುಗಳು ಮತ್ತು ಗೋಪಾಲಕರು ಶೀಘ್ರವಾಗಿ ಹೋಗುತ್ತಿದ್ದಾರೆ. ಅವರನ್ನು ಬಿಡಿಸು. ಎಲೈ ಉತ್ತರನೇ, ಸೈನ್ಯವನ್ನು ಬಳಸಿ ಪೂರ್ವಾಭಿಮುಖವಾಗಿ ಹೋಗು. ಎಲೈ ವೀರನೇ, ಅಲ್ಲಿ ಹೋಗಿ ಗೋವುಗಳನ್ನೂ ಮತ್ತು ಗೋಪಾಲಕರನ್ನೂ ಹಿಂದಿರುಗಿಸು.

ಇಮೇ ತ್ವತಿರಥಾಃ ಸರ್ವೇ ಮಮ ವೀರ್ಯಪರಾಕ್ರಮಮ್ ।
ಪಶ್ಯಂತು ಕುರವೋ ಯುದ್ಧೇ ಮಹೇಂದ್ರಸ್ಯೇವ ದಾನವಾಃ ॥೩೨॥

ಅತಿರಥರಾದ ಈ ಕೌರವರೆಲ್ಲರೂ ದಾನವರು ಮಹೇಂದ್ರನ ಪರಾಕ್ರಮವನ್ನು ನೋಡಿದಂತೆ ಯುದ್ಧದಲ್ಲಿ ನನ್ನ ಸಾಮರ್ಥ್ಯ ಮತ್ತು ಪರಾಕ್ರಮಗಳನ್ನು ನೋಡಲಿ (ಎಂದು ಹೇಳಿದನು).

ವೈಶಂಪಾಯನಃ

ತತಃ ಸ ರಥಿನಾಂ ಶ್ರೇಷ್ಠೋ ನಾಮ ವಿಶ್ರಾವ್ಯ ಚಾತ್ಮನಃ ।
ನಿಶಿತಾಗ್ರಾನ್ ಶರಾಂಸ್ತೀಕ್ಷ್ಣಾನ್ ಮುಮೋಚಾಂತಕಸನ್ನಿಭಾನ್ ॥೩೩॥

ವೈಶಂಪಾಯನ– ಅನಂತರ ಆ ರಥಿಶ್ರೇಷ್ಠನಾದ ಅರ್ಜುನನು ತನ್ನ ಹೆಸರನ್ನು ಘೋಷಿಸುತ್ತಾ ಹರಿತವಾದ ಅಲಗುಳ್ಳ, ತೀಕ್ಷ್ಣವಾದ ತುದಿಯುಳ್ಳ, ಮೃತ್ಯುವಿನಂತಿರುವ ಬಾಣಗಳನ್ನು ಪ್ರಯೋಗಿಸಿದನು.

ಶಲಭೈರಿವ ಚಾಕಾಶಂ ಧಾರಾಭಿರಿವ ಪರ್ವತಮ್ ।
ನಿರಾವಕಾಶಮಭವತ್ ಶರೈಃ ಕ್ಷಿಪ್ರಂ ಕಿರೀಟಿನಾ ॥೩೪॥

ಪತಂಗಗಳಿಂದ ಆಕಾಶವನ್ನು ಮುಚ್ಚಿದಂತೆ, ಮಳೆಯ ಧಾರೆಗಳಿಂದ ಪರ್ವತವನ್ನು ಮುಚ್ಚಿದಂತೆ ಅರ್ಜುನನು ಶೀಘ್ರವಾಗಿ ಬಾಣಗಳಿಂದ ಆ ಸೈನ್ಯವನ್ನು ಮುಚ್ಚಿದನು.

ವಿದೀರ್ಯಮಾಣಾಸ್ತು ಶರೈಸ್ತೇ ಯೋಧಾಃ ಧಾರ್ತರಾಷ್ಟ್ರಕಾಃ ।
ಗಾಶ್ಚೈವ ಹಿ ನ ಪಶ್ಯಂತಿ ಪಾರ್ಥಮುಕ್ತೈರಜಿಹ್ಮಗೈಃ ॥೩೫॥

ಅರ್ಜುನನಿಂದ ಪ್ರಯುಕ್ತವಾದ ನೇರವಾಗಿ ಸಾಗುವ ಆ ಬಾಣಗಳಿಂದ ಸೀಳಿಹೋಗುತ್ತಿದ್ದ ದುರ್ಯೋಧನ ಸೈನಿಕರು ಗೋವುಗಳನ್ನೇ ಕಾಣಲಿಲ್ಲ.

ಸಾ ಚಾಪಿ ಬಹುಲಾ ಸೇನಾ ಪಾರ್ಥಬಾಣಾಭಿಪೀಡಿತಾ ।
ನಾಪಶ್ಯದ್ ವಿವೃತಾಂ ಭೂಮಿಂ ನಾಂತರಿಕ್ಷಂ ದಿಶೋಽಪಿ ವಾ ॥೩೬॥
ಗಾಶ್ಚೈವ ತೇ ನ ಪಶ್ಯಂತಿ ಪಾರ್ಥಮುಕ್ತೈರಜಿಹ್ಮಗೈಃ ॥೩೭॥

ಪಾರ್ಥಬಾಣಗಳಿಂದ ಪೀಡಿತವಾದ ಆ ದೊಡ್ಡ ಸೈನ್ಯವು ಭೂಮಿಯಲ್ಲಿ ಮುಂದೆ ಹಳ್ಳವಿರುವುದನ್ನಾಗಲೀ, ಅಂತರಿಕ್ಷವನ್ನಾಗಲೀ ಅಥವಾ ದಿಕ್ಕುಗಳನ್ನಾಗಲೀ ಕಾಣಲಿಲ್ಲ. ಪಾರ್ಥನು ಪ್ರಯೋಗಿಸಿದ ನೇರವಾಗಿ ಸಾಗುವ ಬಾಣಗಳ ಪ್ರಹಾರದಿಂದಾಗಿ ಅವರು ಗೋವುಗಳನ್ನೂ ಕಾಣಲಿಲ್ಲ.

ಅರ್ಜುನಸ್ತು ತದಾ ಹೃಷ್ಟೋ ದರ್ಶಯನ್ ವೀರ್ಯಮಾತ್ಮನಃ ।
ಪೀಡಯಾಮಾಸ ಸೈನ್ಯಾನಿ ಗಾಂಡೀವಪ್ರಸೃತೈಃ ಶರೈಃ ॥೩೮॥

ಆಗ ಅರ್ಜುನನು ಸಂತೋಷಗೊಂಡು ತನ್ನ ಪರಾಕ್ರಮವನ್ನು ತೋರಿಸುತ್ತಾ ಗಾಂಡೀವ ಮುಕ್ತವಾದ ಬಾಣಗಳಿಂದ ಕೌರವಸೈನ್ಯವನ್ನು ಪೀಡಿಸಿದನು.

ತೇಷಾಂ ನೈವಾಭಿಯಾನೇ ಚ ನಾಭಿಯಾನೇಽಭವನ್ಮತಿಃ ।
ಶೀಘ್ರತಾಮೇವ ಪಾರ್ಥಸ್ಯ ಪೂಜಯಂತಿ ಸ್ಮ ವಿಸ್ಮಿತಾಃ ॥೩೯॥

ಅವರಿಗೆ ಅರ್ಜುನನ ಕಡೆಗೆ ಬರುವುದಕ್ಕಾಗಲೀ ಅಥವಾ ಅರ್ಜುನನಿಂದ ತಿರುಗಿ ಬೇರೆ ಕಡೆಗೆ ಹೋಗುವುದಕ್ಕಾಗಲೀ ಬುದ್ಧಿಯುಂಟಾಗಲಿಲ್ಲ. ಅರ್ಜುನನ ವೇಗವನ್ನು ನೋಡಿ ವಿಸ್ಮಿತರಾಗಿ ಅವನನ್ನು ಪೂಜಿಸಿದರು.

ಚಂದ್ರಾವದಾತಂ ಸಾಮುದ್ರಂ ಕುರುಸೈನ್ಯಭಯಂಕರಮ್ ।
ತತಃ ಶಂಖಮುಪಾಧ್ಮಾಸೀದ್ ದ್ವಿಷತಾಂ ರೋಮಹರ್ಷಣಮ್ ॥೪೦॥

ಅನಂತರ ಅರ್ಜುನನು ಸಮುದ್ರದಿಂದ ಉತ್ಪನ್ನವಾದ, ಕುರುಸೈನ್ಯಕ್ಕೆ ಭಯಂಕರವಾದ, ಶತ್ರುಗಳಿಗೆ ರೋಮ ಹರ್ಷವನ್ನು ಉಂಟುಮಾಡುವ, ಚಂದ್ರನಂತೆ ಶ್ವೇತವರ್ಣದಿಂದ ಕೂಡಿದ, ತನ್ನ ಶಂಖವನ್ನು ಊದಿದನು.

ವಿಷ್ಫಾರ್ಯ ಚ ಧನುಃಶ್ರೇಷ್ಠಂ ಧ್ವಜೇ ಭೂತಾನ್ಯಚೋದಯತ್ ॥೪೧॥

ಜ್ಯಾಘೋಷಂ ತಳಘೋಷಂ ಚ ಕೃತ್ವಾ ಭೂತಾನ್ಯಮೋಹಯತ್ ॥೪೨॥

ತನ್ನ ಶ್ರೇಷ್ಠವಾದ ಧನುಸ್ಸನ್ನು ಬಗ್ಗಿಸಿ ಧ್ವಜದಲ್ಲಿದ್ದ ಭೂತಗಳನ್ನು ಪ್ರಚೋದಿಸಿದನು. ಜ್ಯಾಘೋಷವನ್ನೂ ತಳಘೋಷವನ್ನೂ ಮಾಡಿ ಎಲ್ಲ ಪ್ರಾಣಿಗಳಿಗೂ ಮೋಹವನ್ನು ಉಂಟುಮಾಡಿದನು.

ತಸ್ಯ ಶಂಖಸ್ಯ ಶಬ್ದೇನ ಧನುಷೋ ನಿಸ್ವನೇನ ಚ ।
ಶಬ್ದೇನಾಮಾನುಷಾಣಾಂ ಚ ಭೂತಾನಾಂ ಧ್ವಜವಾಸಿನಾಮ್ ॥೪೩॥

ಖಯದ್ಗತಾನಾಂ ದೇವಾನಾಂ ರಾಕ್ಷಸಾನಾಂ ರವೇಣ ಚ ।
ಊರ್ಧ್ವಂ ಪುಚ್ಛಂ ವಿಧೂನ್ವಾನಾ ರೇಭಮಾಣಾಃ ಸಮಂತತಃ ॥೪೪॥

ಗಾವಃ ಸವತ್ಸಾಃ ಸಂತ್ರಸ್ತಾ ನಿವೃತಾ ದಕ್ಷಿಣಾಂ ದಿಶಮ್ ॥೪೫॥

ಅವನ ಶಂಖಶಬ್ದವನ್ನೂ, ಧನುಸ್ಸಿನ ಶಬ್ದವನ್ನೂ ಮತ್ತು ಧ್ವಜನಿವಾಸಿಗಳಾದ ಭೂತಗಳ ಅಮಾನುಷ ಶಬ್ದಗಳನ್ನೂ ಹಾಗೆಯೇ ಆಕಾಶದಲ್ಲಿನಿಂತ ದೇವತೆಗಳ ಮತ್ತು ರಾಕ್ಷಸರ ಶಬ್ದಗಳನ್ನೂ ಕೇಳಿದ, ಕರುಗಳಿಂದ ಸಹಿತವಾದ ಗೋವುಗಳು ಬಾಲವನ್ನು ಎತ್ತಿ ಕಂಪಿಸುತ್ತಾ ಎಲ್ಲ ಕಡೆಗಳಲ್ಲಿಯೂ ಅರಚಿಕೊಳ್ಳುತ್ತಾ ಹೆದರಿ ದಕ್ಷಿಣದಿಕ್ಕಿನಲ್ಲಿ ಹಿಂದೆ ಸರಿದವು.

ತತಃ ಸಮರೇ ಶೂರೋ ಬೀಭತ್ಸುಃ ಶತ್ರುಪೂಗಹಾ ।
ಗೋಪಾಲಾಂಶ್ಚೋದಯಾಮಾಸ ಗಾವಶ್ಚೋದಯತೇತಿ ಚ ॥೪೬॥

ಆಗ ಸಮರಶೂರನೂ, ಶತ್ರುವ್ಯೂಹವನ್ನು ಹನನ ಮಾಡುವವನೂ ಆದ ಅರ್ಜುನನು ಗೋಪಾಲರನ್ನು ಕುರಿತು ಗೋವುಗಳನ್ನು ಬೇಗ ಹೊಡೆದುಕೊಂಡು ಹೋಗಿ ಎಂದು ಪ್ರೇರಿಸಿದನು.

ಉತ್ತರಂ ಚಾಹ ಬೀಭತ್ಸುರ್ಹರ್ಷಯನ್ ಪಾಂಡುನಂದನಃ ॥೪೭॥

ಗವಾಮಗ್ರಂ ಸಮೀಕ್ಷಸ್ವ ಗಾಶ್ಚೈವಾಶು ನಿವರ್ತಯ ।
ಯಾವದೇತೇ ನಿವರ್ತಂತೇ ಕುರವೋ ಜವಮಾಸ್ಥಿತಾಃ ॥೪೮॥

ಪಾಂಡುನಂದನನಾದ ಅರ್ಜುನನು ಉತ್ತರನನ್ನು ಸಂತೋಷಪಡಿಸುತ್ತಾ ಅವನನ್ನು ಕುರಿತು ಕೌರವರು ಶೀಘ್ರವಾಗಿ ಹಿಂದಿರುಗುವಷ್ಟರಲ್ಲಿ ಗೋವುಗಳ ಮುಂಭಾಗವನ್ನು ನೋಡಿಕೊಂಡು ಅವುಗಳನ್ನು ಶೀಘ್ರವಾಗಿ ಹಿಂದಿರುಗಿಸು ಎಂದು ಹೇಳಿದನು.

ಯಾಹ್ಯುತ್ತರೇಣ ಗಾಶ್ಚೈತಾಃ ಸೈನ್ಯಾನಾಂ ಚ ನೃಪಾತ್ಮಜ ।
ಪಶ್ಯಂತು ಕುರವಃ ಸರ್ವೇ ಮಮ ವೀರ್ಯಪರಾಕ್ರಮಮ್ ॥೪೯॥

ಎಲೈ ರಾಜಕುಮಾರನೇ, ಈ ಸೈನ್ಯದ ಮತ್ತು ಗೋವುಗಳ ಉತ್ತರಭಾಗದಲ್ಲಿ ಹೋಗುವವನಾಗು. ಕುರುಗಳೆಲ್ಲರೂ ನನ್ನ ವೀರ್ಯಪರಾಕ್ರಮವನ್ನು ನೋಡಲಿ (ಎಂದು ಹೇಳಿದನು)

ವೈಶಂಪಾಯನಃ

ತೇ ಲಾಭಮಿವ ಮನ್ವಾನಾಃ ಕುರವೋಽರ್ಜುನಮಾಹವೇ ।
ದೃಷ್ಟ್ವಾ ಯಾಂತಮದೂರಸ್ಥಂ ಕ್ಷಿಪ್ರಮಭ್ಯಪತನ್ ರಥೈಃ ॥೫೦॥

ವೈಶಂಪಾಯನ– ಕೌರವರು ಯುದ್ಧದಲ್ಲಿ ಅರ್ಜುನನು ಸಮೀಪದಲ್ಲಿ ಹೋಗುವುದನ್ನು ನೋಡಿ ಅವನ ದರ್ಶನವನ್ನೇ ದೊಡ್ಡ ಲಾಭವೆಂದು ತಿಳಿದು ರಥಗಳಿಂದ ಶೀಘ್ರವಾಗಿ ಮುಂದೆ ಬಂದರು.

ಹಸ್ತ್ಯಶ್ವಪರಿವಾರೇಣ ಮಹತಾऽಭಿವಿರಾಜತಾ ।
ಯೋಧೈಃ ಪ್ರಾಸಾಸಿಹಸ್ತೈಶ್ಚ ಚಾಪಬಾಣೋದ್ಯತಾಯುಧೈಃ ॥೫೧॥

ತಾನ್ಯನೀಕಾನ್ಯಶೋಭಂತ ಕುರೂಣಾಮಾತತಾಯಿನಾಮ್ ।
ಸಂಸರ್ಪಂತ ಇವಾಕಾಶೇ ವಿದ್ಯುತ್ವಂತೋ ಬಲಾಹಕಾಃ ॥೫೨॥

ಬಹಳವಾಗಿ ಶೋಭಿಸುವ ಗಜಾಶ್ವಗಳ ದೊಡ್ಡ ಪರಿವಾರದಿಂದ ಕೂಡಿದ ಬಿಲ್ಲು, ಬಾಣ ಮೊದಲಾದ ಆಯುಧಗಳನ್ನು ಕೈಯಲ್ಲಿ ಎತ್ತಿಹಿಡಿದ, ಪ್ರಾಸ, ಅಸಿ ಮೊದಲಾದ ಆಯುಧಗಳನ್ನು ಹಿಡಿದ ಯೋಧರಿಂದ ಕೂಡಿದ ಶಸ್ತ್ರಧಾರಿಗಳಾದ ಕೌರವರ ಸೈನ್ಯವು ಆಕಾಶದಲ್ಲಿ ಚಲಿಸುವ ಮಿಂಚಿನಿಂದ ಸಹಿತವಾದ ಮೋಡಗಳಂತೆ ಶೋಭಿಸಿತು.

ತಾನಿ ದೃಷ್ಟ್ವಾऽಪ್ಯನೀಕಾನಿ ನಿವೃತ್ತಾನಿ ಮಹಾಮನಾಃ ।
ಪಾರ್ಥೋऽಪಿ ವಾಯುವದ್ ಘೋರಂ ಸೈನ್ಯಾಗ್ರಂ ವ್ಯಧುನೋಚ್ಛರೈಃ ॥

ಆ ಸೈನ್ಯಗಳು ಹಿಂದಿರುಗುವುದನ್ನು ನೋಡಿದ ಧೈರ್ಯಶಾಲಿಯಾದ ಅರ್ಜುನನೂ ಸಹ ಘೋರವಾದ ಸೈನ್ಯದ ಮುಂಭಾಗವನ್ನು ಬಿರುಗಾಳಿಯಂತೆ ತನ್ನ ಬಾಣಗಳಿಂದ ಚದುರಿಸಿದನು.

ತಾಂ ಶತ್ರುಸೇನಾಂ ತರಸಾ ಪ್ರಣುದ್ಯ
ಗಾಶ್ಚಾಪಿ ಜಿತ್ವಾऽಥ ಧನುರ್ಧರಾಗ್ರ್ಯಃ ।
ದುರ್ಯೋಧನಾಯಾಭಿಮುಖಂ ಪ್ರಯಾಂತಂ
ಕುರುಪ್ರವೀರಾಃ ಸಹಸಾऽಭ್ಯಗಚ್ಛನ್ ॥೫೪॥

ಆ ಶತ್ರುಸೈನ್ಯವನ್ನು ತನ್ನ ಬಲದಿಂದ ಹಿಂಸಿಸಿ, ಗೋವುಗಳನ್ನು ಜಯಿಸಿ ಧರ್ನುಧರರಲ್ಲಿ ಶ್ರೇಷ್ಠನಾದ ಅರ್ಜುನನು ದುರ್ಯೋಧನನಿಗೆ ಅಭಿಮುಖವಾಗಿ ಹೋಗುವಷ್ಟರಲ್ಲಿ ಕುರುಪ್ರವೀರರು ತಕ್ಷಣ ಅವನನ್ನು ಸಮೀಪಿಸಿದರು.

ಗೋಷು ಪ್ರಯಾತಾಸು ಜವೇನ ಮತ್ಸ್ಯಃ
ಕಿರೀಟಿನಂ ಪ್ರೀತಿಯುತಂ ಚ ದೃಷ್ಟ್ವಾ ।
ಪಶೂನ್ ಸಮಾದಾಯ ತತೋ ನಿವೃತ್ತಾ
ಗೋಪಾಲಕಾಃ ಸಂಪ್ರಯಯುಶ್ಚ ರಾಷ್ಟ್ರಮ್ ॥೫೫॥

ಗೋವುಗಳು ಶೀಘ್ರವಾಗಿ ಹಿಂದಿರುಗುತ್ತಿರಲು ಮತ್ಸ್ಯದೇಶದ ಗೋಪಾಲಕರು ಅರ್ಜುನನು ಸಂತೋಷದಲ್ಲಿರುವುದನ್ನು ನೋಡಿ ಪಶುಗಳನ್ನು ತೆಗೆದುಕೊಂಡು ಹಿಂದಿರುಗಿ ತಮ್ಮ ಪಟ್ಟಣಕ್ಕೆ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಚತುಃಪಂಚಾಶೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಸಪ್ತವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ತನಾಲ್ಕನೆಯಅಧ್ಯಾಯ ಮುಗಿಯಿತು.

★ ★ ★ ★

ಐವತ್ತೈದನೆಯ ಅಧ್ಯಾಯ

ಅರ್ಜುನನಿಂದ ಉತ್ತರನಿಗೆ ದ್ರೋಣಾದಿಗಳ ರಥಗಳ ಪರಿಚಯ

ವೈಶಂಪಾಯನಃ

ತತಸ್ತ್ರೀಣಿ ಸಹಸ್ರಾಣಿ ರಥಾನಾಂ ಚ ಧನುಷ್ಮತಾಮ್ ।
ಘೋರಾಣಿ ಕುರುವೀರಾಣಾಂ ಪರ್ಯಕೀರ್ಯಂತ ಭಾರತ ॥೧॥

ವೈಶಂಪಾಯನ– ಎಲೈ ಭಾರತನೇ, ಆಗ ಕೌರವವೀರರ ಮೂರುಸಹಸ್ರ ಸಂಖ್ಯೆಯ ಧನುರ್ಧಾರಿಗಳಾದ ರಥಿಕರ ಘೋರವಾದ ಸೈನ್ಯವು ಅರ್ಜುನನನ್ನು ಸಮೀಪಿಸಿತು.

ಕರ್ಣೋ ರಥಸಹಸ್ರೇಣ ಪ್ರತ್ಯತಿಷ್ಠದ್ ಧನಂಜಯಮ್ ।
ಭೀಷ್ಮಃ ಶಾಂತನವೋ ಧೀಮಾನ್ ಸಹಸ್ರೇಣ ಪುರಸ್ಕೃತಃ ॥೨॥

ತಥಾ ರಥಸಹಸ್ರೇಣ ಭ್ರಾತೃಭಿಃ ಪರಿವಾರಿತಃ ।
ಪಶ್ಚಾದ್ ದುರ್ಯೋಧನೋऽತಿಷ್ಠದ್ ಹಸ್ತಾವಾಪ್ತಶ್ರಿಯಾ ಜ್ವಲನ್ ॥೩॥

ಕರ್ಣನು ಒಂದು ಸಹಸ್ರ ರಥಗಳ ಜೊತೆಯಲ್ಲಿ ಅರ್ಜುನನನ್ನು ಎದುರಿಸಿದನು. ಶಂತನು ಪುತ್ರರೂ, ಮೇಧಾವಿಯೂ ಆದ ಭೀಷ್ಮರು ಒಂದು ಸಹಸ್ರ ರಥಗಳ ಜೊತೆಯಲ್ಲಿ ಎದುರಾದರು. ಹಾಗೆಯೇ ತಮ್ಮಂದಿರ ಪರಿವಾರದಿಂದ ಕೂಡಿದ ದುರ್ಯೋಧನನು ತನ್ನ ಕೈಗೆ ಪ್ರಾಪ್ತವಾದ ಸಂಪತ್ತಿನಿಂದ ಜ್ವಲಿಸುತ್ತಾ ಒಂದು ಸಹಸ್ರ ರಥಗಳ ಜೊತೆಯಲ್ಲಿ ಹಿಂಭಾಗದಲ್ಲಿದ್ದನು.

ಅತಿಷ್ಠನ್ನವಕಾಶೇ ತು ಪದಾತಾಃ ಸಹ ವಾಜಿಭಿಃ ।
ಭೀಮರೂಪಾಶ್ಚ ಮಾತಂಗಾಃ ತೋಮರಾಂಕುಶಚೋದಿತಾಃ ॥೪॥

ಮಧ್ಯದ ಸ್ಥಳಗಳಲ್ಲಿ ಪದಾತಿಗಳೂ, ಅಶ್ವಗಳೂ ಮತ್ತು ತೋಮರ, ಅಂಕುಶಗಳಿಂದ ಪ್ರೇರಿತವಾದ ಭಯಂಕರರೂಪದ ಗಜಗಳೂ ಇದ್ದವು.

ತಾನಿ ದೃಷ್ಟ್ವಾ ಹ್ಯನೀಕಾನಿ ವಿತತಾನಿ ಮಹಾತ್ಮನಾಮ್ ।
ವೈರಾಟಿಮುತ್ತರಂ ತಂ ತು ಪ್ರತ್ಯಭಾಷತ ಪಾಂಡವಃ ॥೫॥

ವಿಸ್ತಾರವಾಗಿ ಹರಡಿದ್ದ ಮಹಾತ್ಮರ ಆ ಸೈನ್ಯವನ್ನು ನೋಡಿ ಅರ್ಜುನನು ವಿರಾಟ ಪುತ್ರನಾದ ಉತ್ತರನನ್ನು ಕುರಿತು ಹೀಗೆ ಹೇಳಿದನು.

ಜಾಂಬೂನದಮಯೀ ವೇದಿರ್ಧ್ವಜಾಗ್ರೇ ಯಸ್ಯ ದೃಶ್ಯತೇ ।
ಶೋಣಾಶ್ಚಾಶ್ವಾ ರಥೇ ಯುಕ್ತಾ ದ್ರೋಣ ಏಷ ಪ್ರಕಾಶತೇ ॥೬॥

ಯಾರ ರಥದ ಧ್ವಜದಲ್ಲಿ ಸುವರ್ಣಮಯವಾದ ವೇದಿಯು ಕಾಣುತ್ತದೆಯೋ, ಕೆಂಪು ಬಣ್ಣದ ಅಶ್ವಗಳಿಂದ ಕೂಡಿದ ಆ ರಥವು ದ್ರೋಣಾಚಾರ್ಯರದು.

ಆಚಾರ್ಯೋ ನಿಪುಣೋ ಧೀಮಾನ್ ಬ್ರಹ್ಮವಿಚ್ಛೂರಸಮ್ಮತಃ ।
ಲಾಘವೇ ಚಾಪ್ರತಿದ್ವಂದ್ವೀ ದೂರಪಾತೀ ಮಹಾರಥಃ ॥೭॥

ಆಚಾರ್ಯರು ನಿಪುಣರೂ, ಮೇಧಾವಿಗಳೂ, ವೇದವನ್ನು ತಿಳಿದವರೂ ಮತ್ತು ಶೂರರೂ ಎಂದು ಎಲ್ಲರಿಗೂ ಸಮ್ಮತರಾದವರು. ಅಸದೃಶವಾದ ಶೀಘ್ರಗತಿ ಉಳ್ಳವರು. ದೂರದಲ್ಲಿರುವ ಲಕ್ಷ್ಯವನ್ನು ಭೇದಿಸುವವರು ಮತ್ತು ಮಹಾರಥರು.

ಸುಪ್ರಸನ್ನೋ ಮಹಾವೀರಃ ಕುರುಷ್ವೈನಂ ಪ್ರದಕ್ಷಿಣಮ್ ।
ಅತ್ರೈವ ಚಾವಿರೋಧೇನ ಏಷ ಧರ್ಮಃ ಸನಾತನಃ ॥೮॥

ಸುಪ್ರಸನ್ನರೂ ಮಹಾವೀರರೂ ಆದ ಅವರನ್ನು ವಿರೋಧ ಮಾಡದಂತೆ ಪ್ರದಕ್ಷಿಣೆಯನ್ನು ಮಾಡು. ಇದು ಸನಾತನವಾದ ಧರ್ಮ.

ಯದಿ ಮೇ ಪ್ರಹರೇದ್ ದ್ರೋಣಃ ಶರೀರೇ ಪ್ರಹರಿಷ್ಯತಃ ।
ತತೋಽಸ್ಮಿನ್ ಪ್ರಹರಿಷ್ಯಾಮಿ ನಾನ್ಯಥಾ ಯುದ್ಧಮಸ್ತಿ ಮೇ ॥೯॥

ಅವರು ನನ್ನ ಮೇಲೆ ಬಾಣಪ್ರಯೋಗವನ್ನು ಮಾಡಿದರೆ ಮಾತ್ರ ನಾನು ಅವರ ಮೇಲೆ ಬಾಣ ಪ್ರಯೋಗವನ್ನು ಮಾಡುವೆನು. ಇಲ್ಲದಿದ್ದರೆ ನನಗೆ ಅವರ ಜೊತೆಯಲ್ಲಿ ಯುದ್ಧವಿಲ್ಲ.

ಭಾರತಾಚಾರ್ಯಮುಖ್ಯೇನ ಬ್ರಾಹ್ಮಣೇನ ಮಹಾತ್ಮನಾ ।
ತೇನ ಮೇ ಯುಧ್ಯಮಾನಸ್ಯ ಮಂದಂ ವಾಹಯ ಸಾರಥೇ ॥೧೦॥

ಎಲೈ ಸಾರಥಿಯೇ, ಭಾರತಾಚಾರ್ಯರಲ್ಲಿ ಪ್ರಧಾನರಾದವರೂ, ಬ್ರಾಹ್ಮಣರೂ ಮತ್ತು ಮಹಾತ್ಮರೂ ಆದ ಅವರ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುವಾಗ ರಥವನ್ನು ನಿಧಾನವಾಗಿ ಚಲಿಸು.

ಧ್ವಜಾಗ್ರೇ ಸಿಂಹಲಾಂಗೂಲೋ ದಿಕ್ಷು ಸರ್ವಾಸು ಶೋಭತೇ ।
ಭಾರತಾಚಾರ್ಯಪುತ್ರಸ್ತು ಸೋಽಶ್ವತ್ಥಾಮಾ ವಿರಾಜತೇ ॥೧೧॥

ಯಾರ ರಥದ ಧ್ವಜದಲ್ಲಿ ಸಿಂಹಲಾಂಗೂಲವು ಎಲ್ಲ ದಿಕ್ಕುಗಳಲ್ಲಿಯೂ ಶೋಭಿಸುತ್ತದೆಯೋ ಅವರು ಭಾರತಾಚಾರ್ಯ ಪುತ್ರರಾದ ವಿರಾಜಮಾನರಾದ ಅಶ್ವತ್ಥಾಮಾಚಾರ್ಯರು.

ಧ್ವಜಾಗ್ರೇ ಯಸ್ಯ ದೃಶ್ಯಂತೇ ಬಾಲಸೂರ್ಯಸಮಪ್ರಭಾಃ ।
ದುರ್ಜಯಃ ಸರ್ವಸೈನ್ಯಾನಾಂ ದೇವೈರಪಿ ಸವಾಸವೈಃ ॥೧೨॥

ತೇನ ಮೇ ಯುಧ್ಯಮಾನಸ್ಯ ಮಂದಂ ವಾಹಯ ಸಾರಥೇ ॥೧೩॥

ಯಾರ ಧ್ವಜಾಗ್ರದಲ್ಲಿ ಸಿಂಹಬಾಲದ ಕಾಂತಿಯು ಸೂರ್ಯನ ಕಾಂತಿಗೆ ಸಮವಾಗಿ ಕಾಣುತ್ತದೆಯೋ ಅಂತಹ ಅವರು (ಅಶ್ವತ್ಥಾಮರು) ಇಂದ್ರನಿಂದ ಸಹಿತರಾದ ದೇವತೆಗಳಿಂದಲೂ ಮತ್ತು ಸರ್ವಸೈನ್ಯಗಳಿಂದಲೂ ಜಯಿಸಲು ಅಸಾಧ್ಯರಾದವರು. ಎಲೈ ಸಾರಥಿಯೇ, ಅವರ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುವಾಗ ರಥವನ್ನು ನಿಧಾನವಾಗಿ ಹೊಡೆ.

ಧ್ವಜಾಗ್ರೇ ಗೋವೃಷೋ ಯಸ್ಯ ಕಾಂಚನೋಽಭಿವಿರಾಜತೇ ।
ಆಚಾರ್ಯವರಮುಖ್ಯಸ್ತು ಕೃಪ ಏಷ ಮಹಾರಥಃ ॥೧೪॥

ಯಾರ ರಥದ ಧ್ವಜಾಗ್ರದಲ್ಲಿ ಸುವರ್ಣಮಯವಾದ ಗೋವೃಷಭವು ಕಾಣುತ್ತದೆಯೋ ಅವರು ಆಚಾರ್ಯಶ್ರೇಷ್ಠರಲ್ಲಿ ಪ್ರಧಾನರಾದ ಮಹಾರಥರಾದ ಕೃಪಾಚಾರ್ಯರು.

ದ್ರೋಣೇನ ಚ ಸಮೋ ವೀರ್ಯೇ ಪಿತುರ್ಮೇ ಪರಮಃ ಸಖಾ ।
ತೇನ ಮೇ ಯುಧ್ಯಮಾನಸ್ಯ ಮಂದಂ ವಾಹಯ ಸಾರಥೇ ॥೧೫॥

ಅವರು ಪರಾಕ್ರಮದಲ್ಲಿ ದ್ರೋಣರಿಗೆ ಸಮರಾದವರು. ನನ್ನ ತಂದೆಯ ಪರಮಸ್ನೇಹಿತರು. ಎಲೈ ಸಾರಥಿಯೇ, ಅವರ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುವಾಗ ರಥವನ್ನು ನಿಧಾನವಾಗಿ ಹೊಡೆಯುವವನಾಗು.

ಯಸ್ಯ ಕಾಂಚನಕಂಬೂಭಿಃ ಹಸ್ತಿಕಕ್ಷ್ಯಾಪರಿಷ್ಕೃತಃ ।
ಧ್ವಜಃ ಪ್ರಕಾಶತೇ ದೂರಾದ್ ರಥೇ ವಿದ್ಯುದ್ಗಣೋಪಮಃ ॥೧೬॥

ಏಷ ವೈಕರ್ತನಃ ಕರ್ಣಃ ಪ್ರತಿಮಾನಂ ಧನುಷ್ಮತಾಮ್ ।
ಏಷ ವೈ ಸ್ಪರ್ಧತೇ ನಿತ್ಯಂ ಮಯಾ ಸಹ ಸುದುರ್ಜಯಃ ॥೧೭॥

ಜಾಮದಗ್ನ್ಯಸ್ಯ ರಾಮಸ್ಯ ಶಿಷ್ಯೋ ಹ್ಯೇಷ ಮಹಾರಥಃ ॥೧೮॥

ಯಾರ ರಥದ ಧ್ವಜವು ಸುವರ್ಣಮಯವಾದ ಶಂಖಗಳಿಂದಲೂ ಮತ್ತು ಆನೆಯ ಸರಪಳಿಗಳಿಂದಲೂ, ಮಿಂಚಿನ ಗೊಂಚಲುಗಳ ಸಮೂಹದಂತೆ ದೂರದಿಂದಲೇ ಶೋಭಿಸುತ್ತದೆಯೋ ಅವನು ವೈಕರ್ತನನಾದ ಕರ್ಣ. ಅವನು ಎಲ್ಲ ಧನುರ್ಧಾರಿಗಳಿಗೆ ಆದರ್ಶನಾದವನು. ಗೆಲ್ಲಲು ಬಹಳ ಕಷ್ಟಸಾಧ್ಯ. ಅವನು ಯಾವಾಗಲೂ ನನ್ನ ಜೊತೆಯಲ್ಲಿ ಸ್ಪರ್ಧಿಸುತ್ತಾನೆ. ಮಹಾರಥನಾದ ಅವನು ಪರಶುರಾಮರ ಶಿಷ್ಯನಾದವನು.

ಸರ್ವಾಸ್ತ್ರಕುಶಲಃ ಕರ್ಣಃ ಸರ್ವಶಸ್ತ್ರಭೃತಾಂ ವರಃ ।
ಯುದ್ಧೇಽಪ್ರತಿಮವೀರ್ಯಶ್ಚ ದೃಢಧನ್ವೀ ಪರಾಕ್ರಮೀ ॥೧೯॥

ಕರ್ಣನು ಸರ್ವಾಸ್ತ್ರಕುಶಲನಾದವನು. ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದವನು. ಯುದ್ಧದಲ್ಲಿ ಅಪ್ರತಿಮಸಾಮರ್ಥ್ಯವುಳ್ಳವನು. ದೃಢವಾದ ಧನುಸ್ಸನ್ನು ಹೊಂದಿದವನು ಮತ್ತು ಪರಾಕ್ರಮಶಾಲಿ.

ಅದ್ಯಾಹಂ ಯುದ್ಧಮೇತೇನ ಕರಿಷ್ಯೇ ಸೂತಬಂಧುನಾ ।
ಯುದ್ಧಮೇತತ್ತು ದ್ರಷ್ಟಾಸಿ ಬಲಿವಾಸವಯೋರಿವ ॥೨೦॥

ಈ ದಿನ ನಾನು ಈ ಸೂತಪುತ್ರನ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ಬಲಿ ಮತ್ತು ಇಂದ್ರನಿಗೆ ನಡೆಯುವ ಯುದ್ಧದಂತಿರುವ ಈ ಯುದ್ಧವನ್ನು ನೀನು ನೋಡುವಿ.

ಮಹಾರಥೇನ ಶೂರೇಣ ಸೂತಪುತ್ರೇಣ ಧನ್ವಿನಾ ।
ತೇನ ಮೇ ಯುಧ್ಯಮಾನಸ್ಯ ಶೀಘ್ರಂ ವಾಹಯ ಸಾರಥೇ ॥೨೧॥

ಎಲೈ ಸಾರಥಿಯೇ, ಮಹಾರಥನಾದ ಶೂರನಾದ ಧನುರ್ಧಾರಿಯಾದ ಸೂತಪುತ್ರನ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುವಾಗ ನನ್ನ ರಥವನ್ನು ಶೀಘ್ರವಾಗಿ ನಡೆಸುವವನಾಗು.

ಯಸ್ಯ ಚೈವ ರಥೋಪಸ್ಥೇ ನಾಗೋ ಮಣಿಮಯೋ ಧ್ವಜೇ ।
ಏಷ ದುರ್ಯೋಧನಸ್ತತ್ರ ಕೌರವ್ಯೋ ಯಶಸಾ ವೃತಃ ॥೨೨॥

ಲಬ್ಧಲಕ್ಷ್ಯೋ ದೃಢಂ ವೇಧೀ ಲಘುಹಸ್ತಃ ಪ್ರತಾಪವಾನ್ ।
ತೇನ ಮೇ ಯುಧ್ಯಮಾನಸ್ಯ ಶೀಘ್ರಂ ವಾಹಯ ಸಾರಥೇ ॥೨೩॥

ಯಾರ ರಥದ ಮಧ್ಯದಲ್ಲಿರುವ ಧ್ವಜದಲ್ಲಿ ಮಣಿಮಯವಾದ ಸರ್ಪವು ವಿರಾಜಿಸುತ್ತದೆಯೋ ಅವನು ಕೀರ್ತಿವಂತನಾದ ಕೌರವನಾದ ದುರ್ಯೋಧನ. ಅವನು ಲಕ್ಷ್ಯವನ್ನು ತಪ್ಪದವನು. ದೃಢವಾಗಿ ಮತ್ತು ಶೀಘ್ರವಾಗಿ ಹೊಡೆಯುವವನು ಮತ್ತು ಪ್ರತಾಪಶಾಲಿ. ಎಲೈ ಸಾರಥಿಯೇ, ಅವನ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುವಾಗ ರಥವನ್ನು ಶೀಘ್ರವಾಗಿ ನಡೆಸುವವನಾಗು.

ಯಸ್ತು ಶ್ವೇತಾವದಾತೇನ ಪಂಚತಾಳೇನ ಕೇತುನಾ ।
ವೈಡೂರ್ಯದಂಡೇನ ತಥಾ ತಾಳವೃಕ್ಷೇಣ ರಾಜತೇ ॥೨೪॥

ಹಸ್ತವಾಂಶ್ಚ ಬೃಹದ್ಧನ್ವಾ ಸೇನಾಂ ತಿಷ್ಠತಿ ಹರ್ಷಯನ್ ।
ರಾಮೇಣ ಜಾಮದಗ್ನ್ಯೇನ ದ್ವೈರಥೇ ನ ಜಿತಃ ಪುರಾ ॥೨೫॥

ಶೀಘ್ರಶ್ಚ ಲಘುವೇಧೀ ಚ ಲಘುಹಸ್ತಃ ಪ್ರತಾಪವಾನ್ ।
ಏಷ ಶಾಂತನವೋ ಭೀಷ್ಮಃ ಸರ್ವೇಷಾಂ ನಃ ಪಿತಾಮಹಃ ॥೨೬॥

ಯಾರ ರಥವು ಪರಿಶುಭ್ರವಾದ ಶ್ವೇತವರ್ಣದ ಪಂಚತಾಳ ಪ್ರಮಾಣದ ವೈಡೂರ್ಯದಂಡವುಳ್ಳ ತಾಳವೃಕ್ಷದಿಂದ ಕೂಡಿದ ಧ್ವಜದಿಂದ ಶೋಭಿಸುತ್ತದೆಯೋ ಅವರು ಪ್ರಶಸ್ತವಾದ ಹಸ್ತವುಳ್ಳ ದೊಡ್ಡ ಧನುಸ್ಸು ಹೊಂದಿದ ಎಲ್ಲ ಸೈನ್ಯವನ್ನೂ ಹರ್ಷಗಳಿಸುವ ಹಿಂದೆ ಪರಶುರಾಮರ ಜೊತೆಯಲ್ಲಿ ದ್ವೈರಥದಲ್ಲಿ ಪರಾಜಯವನ್ನು ಹೊಂದದ ಶೀಘ್ರಕಾರಿಗಳೂ, ಶೀಘ್ರಹಸ್ತರೂ, ಶೀಘ್ರವೇಧಿಯೂ, ಪ್ರತಾಪಶಾಲಿಗಳೂ, ನಮ್ಮೆಲ್ಲರ ಪಿತಾಮಹರೂ ಆದ ಭೀಷ್ಮರು.

ಕಕುದಃ ಸರ್ವಸೈನ್ಯಾನಾಂ ಸರ್ವಶಸ್ತ್ರಭೃತಾಂ ವರಃ ।
ರಾಜಶ್ರಿಯಾऽಪವಿದ್ಧಸ್ತು ಸುಯೋಧನವಶಾನುಗಃ ॥೨೭॥

ಪಶ್ಚಾದೇಷ ಪ್ರಯಾತವ್ಯೋ ನ ಮೇ ವಿಘ್ನಕರೋ ಭವೇತ್ ॥೨೮॥

ಅವರು ಎಲ್ಲ ಸೈನ್ಯಗಳಿಗೂ ಶಿಖರಪ್ರಾಯರಾದವರು. ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದವರು. ರಾಜಲಕ್ಷ್ಮಿಯನ್ನು ತಿರಸ್ಕರಿಸಿದ್ದರೂ ಸುಯೋಧನನ ವಶವರ್ತಿಯಾಗಿರುವವರು. ಅವರು ನನಗೆ ವಿಘ್ನವನ್ನು ಮಾಡದಂತೆ ಅವರ ಹಿಂದುಗಡೆಯಿಂದ ನೀನು ಹೋಗಬೇಕು.

ಇತ್ಯೇತಾನ್ ತ್ವರಿತಃ ಪಾರ್ಥಃ ಕಥಯಿತ್ವಾ ತದೋತ್ತರಮ್ ।
ರೂಪತಶ್ಚಿಹ್ನತಶ್ಚೈವ ಯುದ್ಧಾಯ ತ್ವರತೇ ಪುನಃ ॥೨೯॥

ವಿಮೃಶ್ಯ ಗಾಂಡಿವಂ ತತ್ರ ಯುದ್ಧಾಯೈವ ವ್ಯವಸ್ಥಿತಃ ॥೩೦॥

ವೈಶಂಪಾಯನ– ಹೀಗೆ ಅರ್ಜುನನು ಅವರ ಧ್ವಜಗಳ ರೂಪಚಿಹ್ನೆಗಳಿಂದ ಉತ್ತರನಿಗೆ ಅವರನ್ನು ಪರಿಚಯ ಮಾಡಿ ಯುದ್ಧಕ್ಕಾಗಿ ತ್ವರೆ ಮಾಡುವವನಾಗಿ ಗಾಂಡೀವ ಧನುಸ್ಸನ್ನು ಕೈಯಲ್ಲಿ ಸವರುತ್ತಾ ಯುದ್ಧ ಮಾಡುವುದಕ್ಕಾಗಿಯೇ ನಿಂತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಪಂಚಪಂಚಾಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ಐವತ್ತಾರನೆಯ ಅಧ್ಯಾಯ

ಭೀಷ್ಮಾದಿಗಳ ಜೊತೆಯಲ್ಲಿ ಅರ್ಜುನನ ಯುದ್ಧ ಮತ್ತು ಕರ್ಣನ ಪರಾಭವ

ವೈಶಂಪಾಯನಃ

ಅಶ್ವತ್ಥಾಮಾ ತತಸ್ತತ್ರ ಕರ್ಣಂ ಸಂಪ್ರೇಕ್ಷ್ಯ ವೀರ್ಯವಾನ್ ।
ಉವಾಚ ಸ್ಮಯಮಾನಸ್ತು ಸೂತಪುತ್ರಮರಿಂದಮಮ್ ॥೧॥

ವೈಶಂಪಾಯನ– ಆಗ ಪರಾಕ್ರಮಶಾಲಿಯಾದ ಅಶ್ವತ್ಥಾಮರು ಕರ್ಣನನ್ನು ನೋಡಿ ನಗುತ್ತಾ ಸೂತಪುತ್ರನೂ, ಅರಿಂದಮನೂ ಆದ ಅವನನ್ನು ಕುರಿತು ಮಾತನಾಡಿದರು.

ಕರ್ಣ ಯತ್ ತತ್ ಸಭಾಮಧ್ಯೇ ಬಹ್ವಬದ್ಧಂ ವಿಕತ್ಥಸೇ ।
ನ ಮೇ ಯುಧಿ ಸಮೋಽಸ್ತೀತಿ ತದಿದಂ ಪ್ರತ್ಯುಪಸ್ಥಿತಮ್ ॥೨॥

ಎಲೈ ಕರ್ಣನೇ, ನೀನು ಸಭೆಯ ಮಧ್ಯದಲ್ಲಿ ಯುದ್ಧದಲ್ಲಿ ನನ್ನ ಸಮಾನರಾದವರು ಇಲ್ಲವೆಂದು ಬಹಳ ಅಬದ್ಧವಾಗಿ ಹೊಗಳಿಕೊಳ್ಳುತ್ತಿದ್ದೆಯಷ್ಟೆ? ಅದರ ಪರೀಕ್ಷೆಯ ಕಾಲವು ಬಂದೊದಗಿದೆ.

ಏಷೋಽಂತಕ ಇವ ಕ್ರುದ್ಧಃ ಸರ್ವಭೂತಾವಮರ್ದನಃ ।
ಸಂಗ್ರಾಮಶಿರಸೋ ಮಧ್ಯೇ ಜೃಂಭತೇ ಕೇಸರೀ ಯಥಾ ॥೩॥

ಶೂರೋಽಸಿ ಯದಿ ಸಂಗ್ರಾಮೇ ದರ್ಶಯಸ್ವ ಸಭಾಂ ವಿನಾ ॥೪॥

ಈ ಅರ್ಜುನನು ಯಮನಂತೆ ಕ್ರುದ್ಧನಾಗಿ ಸರ್ವಪ್ರಾಣಿಗಳನ್ನೂ ಸಂಹಾರ ಮಾಡುತ್ತಾ ರಣರಂಗದ ಮಧ್ಯದಲ್ಲಿ ಸಿಂಹದಂತೆ ಅಭಿವೃದ್ಧಿಯನ್ನು ಹೊಂದುತ್ತಿದ್ದಾನೆ. ನೀನು ಯುದ್ಧದಲ್ಲಿ ಶೂರನಾದರೆ ಸಭೆಯಲ್ಲಿ ಮಾತನಾಡುವುದನ್ನು ಬಿಟ್ಟು ನಿನ್ನ ಶೌರ್ಯವನ್ನು ತೋರಿಸು.

ಯದ್ಯಶಕ್ತೋಽಸಿ ವೀರೇಣ ಪಾರ್ಥೇನಾದ್ಭುತಕರ್ಮಣಾ ।
ಪುನರೇವ ಸಭಾಂ ಗತ್ವಾ ಧಾರ್ತರಾಷ್ಟ್ರೇಣ ಧೀಮತಾ ॥೫॥

ಮಾತುಲಂ ಪರಿಗೃಹ್ಯಾಶು ಮಂತ್ರಯಸ್ವ ಯಥಾಯಥಮ್ ॥೬॥

ವೀರನೂ, ಅದ್ಭುತಕರ್ಮವುಳ್ಳವನೂ ಆದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವ ಶಕ್ತಿ ಇಲ್ಲದಿದ್ದರೆ ಪುನಃ ಸಭೆಗೆ ಹೋಗಿ ಮೇಧಾವಿಯಾದ ದುರ್ಯೋಧನನನ್ನೂ ಅವನ ಸೋದರಮಾವನನ್ನೂ ಕೂಡಿಕೊಂಡು ನಿನಗೆ ಇಷ್ಟಬಂದಂತೆ ಮಂತ್ರಾಲೋಚನೆಯನ್ನು ಮಾಡು.

ಏವಮುಕ್ತಸ್ತದಾ ಕರ್ಣಃ ಕ್ರೋಧಾದುದ್ವೃತ್ತಲೋಚನಃ ।
ದ್ರೋಣಪುತ್ರಮಿದಂ ವಾಕ್ಯಮುವಾಚ ಕುರುಸನ್ನಿಧೌ ॥೭॥

ಹೀಗೆ ಹೇಳಲ್ಪಟ್ಟ ಕರ್ಣನು ಆಗ ಕೋಪದಿಂದ ಅರಳಿದ ಕಣ್ಣುಳ್ಳವನಾಗಿ ಕೌರವರ ಸನ್ನಿಧಿಯಲ್ಲಿ ದ್ರೋಣಪುತ್ರರಾದ ಅಶ್ವತ್ಥಾಮರನ್ನು ಕುರಿತು ಹೀಗೆ ಮಾತನಾಡಿದನು.

ನಾಹಂ ಬಿಭೇಮಿ ಬೀಭತ್ಸೋರ್ನ ಕೃಷ್ಣಾದ್ ದೇವಕೀಸುತಾತ್ ।
ಪಾಂಡವೇಭ್ಯೋಽಪಿ ಸರ್ವೇಭ್ಯಃ ಕ್ಷತ್ರಧರ್ಮಮನುವ್ರತಃ ॥೮॥

ಕ್ಷತ್ರಿಯಧರ್ಮದಲ್ಲಿ ನಿರತನಾದ ನಾನು ಅರ್ಜುನನಿಗೆ ಹೆದರುವುದಿಲ್ಲ. ದೇವಕಿ ಪುತ್ರನಾದ ಕೃಷ್ಣನಿಗೂ ಹೆದರುವುದಿಲ್ಲ. ಎಲ್ಲಪಾಂಡವರಿಗೂ ಹೆದರುವುದಿಲ್ಲ.

ಸತ್ತ್ವಾಧಿಕಾನಾಂ ಪುಂಸಾಂ ಹಿ ಧನುರ್ವೇದೋಪಜೀವಿನಾಮ್ ।
ಗರ್ಜನಾತ್ ಜಾಯತೇ ದರ್ಪಃ ಸ್ವರಶ್ಚ ನ ವಿಷೀದತಿ ॥೯॥

ಧನುರ್ವಿದ್ಯೆಯಿಂದ ಜೀವಿಸುವ ಬಲಶಾಲಿಗಳಾದ ಪುರುಷರಿಗೆ ಶತ್ರುಗಳ ಗರ್ಜನೆಯಿಂದ ದರ್ಪವೇ ಉಂಟಾಗುತ್ತದೆ. ಸ್ವರವು ಉಡುಗಿಹೋಗುವುದಿಲ್ಲ.

ಪಶ್ಯತ್ವಾಚಾರ್ಯಪುತ್ರೋ ಮಾಮರ್ಜುನೇನಾಪರಂ ಸಹ ।
ಯುಧ್ಯಮಾನಂ ಸುಸಂಯುಕ್ತಂ ಜಯೋ ವೈ ಮಯ್ಯವಸ್ಥಿತಃ ॥೧೦॥

ಆಚಾರ್ಯಪುತ್ರರಾದ ನೀವು ಅರ್ಜುನನಿಗಿಂತ ಭಿನ್ನನಾದ ನಾನು ಅರ್ಜುನನ ಜೊತೆಯಲ್ಲಿ ಚೆನ್ನಾಗಿ ಸಂಯುಕ್ತನಾಗಿ ಯುದ್ಧಮಾಡುವುದನ್ನು ನೋಡಿ. ಜಯವು ನನ್ನಲ್ಲಿಯೇ ಪ್ರತಿಷ್ಠಿತವಾಗಿದೆ (ಎಂದು ಹೇಳಿದನು).

ವೈಶಂಪಾಯನಃ

ತತಃ ಪ್ರಸಹ್ಯ ಬೀಭತ್ಸುಃ ಕೌಂತೇಯಃ ಶ್ವೇತವಾಹನಃ ।
ದಿವ್ಯಮಸ್ತ್ರಂ ವಿಕುರ್ವಾಣಃ ಪ್ರತ್ಯಯಾದ್ ರಥಸತ್ತಮಾನ್ ॥೧೧॥

ವೈಶಂಪಾಯನ– ಆಗ ಶ್ವೇತವಾಹನನೂ, ಕುಂತೀಪುತ್ರನೂ ಆದ ಅರ್ಜುನನು ನಕ್ಕು ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ರಥಶ್ರೇಷ್ಠರಾದ ಶತ್ರುಗಳನ್ನು ಕುರಿತು ಸಾಗಿದನು.

ಮಹಾಮನಾ ಮಂದಬುದ್ಧಿಃ ನಿಃಶ್ವಸನ್ ಧೃತರಾಷ್ಟ್ರಜಃ ।
ಉವಾಚ ಸ ಮಹಾಬಾಹುಂ ಕರ್ಣಂ ದುರ್ಯೋಧನಸ್ತದಾ ॥೧೨॥

ದುರಹಂಕಾರಿಯೂ ಮತ್ತು ಮಂದಬುದ್ಧಿಯುಳ್ಳವನೂ ಆದ ಧೃತರಾಷ್ಟ್ರಪುತ್ರನಾದ ದುರ್ಯೋಧನನು ನಿಟ್ಟುಸಿರನ್ನು ಬಿಡುತ್ತಾ ಆಗ ಮಹಾಬಾಹುವಾದ ಕರ್ಣನನ್ನು ಕುರಿತು ಹೀಗೆ ಹೇಳಿದನು.

ನ ವಿದ್ಮ ಹ್ಯರ್ಜುನಂ ತತ್ರ ವಸಂತಂ ಮಾತ್ಸ್ಯವೇಶ್ಮನಿ ।
ತೇನೇದಂ ಕರ್ಣ ಮತ್ಸ್ಯಾನಾಮಗ್ರಹೀಷ್ಮ ಧನಂ ಬಹು ॥೧೩॥

ವಿರಾಟನ ಅರಮನೆಯಲ್ಲಿ ಅರ್ಜುನನು ವಾಸಮಾಡುತ್ತಿರುವ ವಿಷಯವು ನಮಗೆ ತಿಳಿದಿರಲಿಲ್ಲ. ಎಲೈ ಕರ್ಣನೇ, ಆದ್ದರಿಂದ ಮತ್ಸ್ಯರ ಈ ದೊಡ್ಡದಾದ ಗೋಧನವನ್ನು ಹಿಡಿದೆವು.

ಇತಃ ಪರಂ ಚೇದ್ ಗಚ್ಛಾಮೋ ವಿಸೃಜಂತೋ ಧನಂ ಬಹು ।
ಅಯಶೋ ನಾತಿವರ್ತೇತ ಲೋಕಯೋರುಭಯರೋರಪಿ ॥೧೪॥

ಈಗ ಇನ್ನು ಮುಂದೆ ನಾವು ಈ ಬಹಳವಾದ ಗೋಧನವನ್ನು ಬಿಟ್ಟು ಇಲ್ಲಿಂದ ಹೊರಟುಹೋದರೆ ಎರಡು ಲೋಕಗಳಲ್ಲಿಯೂ ಅಪಕೀರ್ತಿಯು ನಮ್ಮನ್ನು ಬಿಡುವುದಿಲ್ಲ.

ನ ಚ ಯುದ್ಧಾತ್ ಪರಂ ನಾಸ್ತಿ ಕ್ಷತ್ರಿಯಾಣಾಂ ಸುಖಾವಹಮ್ ।
ತಸ್ಮಾತ್ ಪಾರ್ಥೇನ ಸಂಗ್ರಾಮಂ ಕುರ್ಮಹೇ ನ ಪಲಾಯನಮ್ ॥

ಏತಾವದುಕ್ತ್ವಾ ರಾಜಾ ವೈ ಹ್ಯಭಿಯಾನಮಿಯೇಷ ಸಃ ॥೧೬॥

ಕ್ಷತ್ರಿಯರಿಗೆ ಯುದ್ಧಕ್ಕಿಂತ ಹೆಚ್ಚು ಸುಖವನ್ನು ಕೊಡುವಂತಹದು ಯಾವುದೂ ಇಲ್ಲ. ಆದ್ದರಿಂದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡೋಣ. ಪಲಾಯನವನ್ನು ಮಾಡುವುದು ಬೇಡ. ಹೀಗೆ ಹೇಳಿ ರಾಜನು ಅರ್ಜುನನ ಮೇಲೆ ಎರಗಲು ಬಯಸಿದನು.

ತಾನಿ ಪಂಚಸಹಸ್ರಾಣಿ ವೀರಾಣಾಂ ಹಿ ಧನುಷ್ಮತಾಮ್ ।
ಅಭ್ಯದ್ರವಂಸ್ತದಾ ಪಾರ್ಥಂ ಶಲಭಾ ಇವ ಪಾವಕಮ್ ॥೧೭॥

ಆಗ ಧನುರ್ಧಾರಿಗಳಾದ ಐದುಸಹಸ್ರ ವೀರರಿಂದ ಕೂಡಿದ ಆ ಸೈನ್ಯವು ಅಗ್ನಿಯನ್ನು ಪತಂಗಗಳು ಮುತ್ತುವಂತೆ ಅರ್ಜುನನನ್ನು ಮುತ್ತಿದವು.

ವರ್ಮಿತಾ ವಾಜಿನಸ್ತತ್ರ ಸಂವೃತಾಶ್ಚ ಪದಾತಿಭಿಃ ।
ಭೀಮರೂಪಾಶ್ಚ ಮಾತಂಗಾಸ್ತೋಮರಾಂಕುಶಪಾಣಿಭಿಃ ॥೧೮॥

ಅಧಿಷ್ಠಿತಾಃ ಸುಸಯತ್ತೈರ್ಹಸ್ತಿಶಿಕ್ಷಾವಿಶಾರದೈಃ ।
ಅಭ್ಯದ್ರವಂತ ಸಂಕ್ರುದ್ಧಾಃ ಚಾಪಹಸ್ತೋದ್ಯತಾಯುಧೈಃ ॥೧೯॥

ಪದಾತಿಗಳಿಂದ ಸುತ್ತಲೂ ಪರಿವೃತರಾದ, ಕವಚವನ್ನು ಧರಿಸಿದ ಅಶ್ವಾರೋಹಿಗಳೂ, ತೋಮರಾಂಕುಶಗಳನ್ನು ಕೈಯಲ್ಲಿ ಹಿಡಿದ ಹಸ್ತಿಶಿಕ್ಷಾ ವಿಶಾರದರಾದ, ಬಹಳ ಎಚ್ಚರಿಕೆಯಿಂದ ಕೂಡಿದ, ಕೈಯಲ್ಲಿ ಬಿಲ್ಲುಗಳನ್ನೂ ಆಯುಧಗಳನ್ನೂ ಹಿಡಿದ, ಮಹಾಮಾತ್ರರಿಂದ ರಕ್ಷಿತರಾದ, ಭಯಂಕರವಾದ ಬಹಳ ಕ್ರುದ್ಧವಾದ ಗಜಗಳೂ ಸಹ ಅರ್ಜುನನನ್ನು ಕುರಿತು ಓಡಿದವು.

ಪಂಚ ಚೈನಂ ರಥೋದಗ್ರಾಃ ಸಹಿತಾಃ ಪರ್ಯವಾರಯನ್ ।
ದ್ರೋಣೋ ಭೀಷ್ಮಶ್ಚ ಕರ್ಣಶ್ಚ ಕುರುರಾಜಶ್ಚ ವೀರ್ಯವಾನ್ ॥೨೦॥

ಅಶ್ವತ್ಥಾಮಾ ಮಹಾಬಾಹುರ್ಧನುರ್ವೇದಪರಾಯಣಃ ॥೨೧॥

ದ್ರೋಣ, ಭೀಷ್ಮ, ಕರ್ಣ, ವೀರ್ಯವಂತನಾದ ದುರ್ಯೋಧನ, ಧನುರ್ವೇದ ಪರಾಯಣರಾದ ಮಹಾಮೇಧಾವಿಗಳಾದ ಅಶ್ವತ್ಥಾಮರು ಈ ಐವರು ಶ್ರೇಷ್ಠರಥರು ಅರ್ಜುನನನ್ನು ಸುತ್ತುವರಿದರು.

ಕೃಪಪ್ರಭೃತಯಶ್ಚಾನ್ಯೇ ಶಕುನಿರ್ಧೃತರಾಷ್ಟ್ರಜಾಃ ।
ಇಷೂಂಶ್ಚ ಸಮ್ಯಗಸ್ಯಂತೋ ಜೀಮೂತಾ ಇವ ವಾರ್ಷಿಕಾಃ ॥೨೨॥

ತೇ ಲಾಭಮಿವ ಮನ್ವಾನಾಃ ಪ್ರತ್ಯಗೃಹ್ಣನ್ ಧನಂಜಯಮ್ ।
ಶರೌಘಾನಭಿವರ್ಷಂತೋ ನಾದಯಂತೋ ದಿಶೋ ದಶ ॥೨೩॥

ಕೃಪ ಮೊದಲಾದವರು ಮತ್ತು ಇನ್ನುಳಿದ ಶಕುನಿ, ಧೃತರಾಷ್ಟ್ರಪುತ್ರರು ಮಳೆಗಾಲದ ಮೋಡಗಳಂತೆ ಬಾಣಗಳನ್ನು ಚೆನ್ನಾಗಿ ಪ್ರಯೋಗಿಸುತ್ತಾ ಅರ್ಜುನನ ದರ್ಶನವೇ ತಮಗೆ ಲಾಭವೆಂದು ತಿಳಿದು ಬಾಣಗಳ ಮಳೆಯನ್ನು ಸುರಿಸುತ್ತಾ ಹತ್ತು ದಿಕ್ಕುಗಳೂ ಪ್ರತಿಧ್ವನಿಸುವಂತೆ ಗರ್ಜಿಸುತ್ತಾ ಅರ್ಜುನನನ್ನು ಎದುರಿಸಿದರು.

ತತಃ ಪ್ರಹಸ್ಯ ಬೀಭತ್ಸುಃ ಕೌಂತೇಯಃ ಶ್ವೇತವಾಹನಃ ।
ದಿವ್ಯಮಸ್ತ್ರಂ ವಿಕುರ್ವಾಣಃ ಪ್ರತ್ಯಯಾದ್ ರಥಸತ್ತಮಾನ್ ॥೨೪॥

ಆಗ ಕುಂತೀಪುತ್ರನೂ, ಶ್ವೇತವಾಹನನೂ ಆದ ಅರ್ಜುನನು ನಕ್ಕು ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ಆ ರಥಶ್ರೇಷ್ಠರ ಮೇಲೆ ಎರಗಿದನು.

ಯಥಾ ರಶ್ಮಿಭಿರಾದಿತ್ಯಃ ಪ್ರಚ್ಛಾದಯತಿ ಮೇದಿನೀಮ್ ।
ತಥಾ ಗಾಂಡೀವವಿನಿರ್ಮುಕ್ತಾಶ್ಛಾದಯಂತಿ ಶರಾ ದಿಶಃ ॥೨೫॥

ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಮುಚ್ಚಿದಂತೆ ಗಾಂಡೀವದಿಂದ ಹೊರಹೊಮ್ಮಿದ ಬಾಣಗಳು ಎಲ್ಲ ದಿಕ್ಕುಗಳನ್ನೂ ಮುಚ್ಚಿದವು.

ನ ರಥಾನಾಂ ನ ಚಾಶ್ವಾನಾಂ ನ ಧ್ವಜಾನಾಂ ನ ಹಸ್ತಿನಾಮ್ ।
ಅತಿವಿದ್ಧ್ವಃ ಶಿತೈರ್ಬಾಣೈರಾಸೀದ್ ವಿದ್ಧಮನಂತರಮ್ ॥೨೬॥

ಬಹಳ ಪ್ರಹಾರಕ್ಕೆ ಒಳಗಾದ ರಥಗಳ ಮೇಲೆ, ಅಶ್ವಗಳ ಮೇಲೆ, ಧ್ವಜಗಳ ಮೇಲೆ, ಗಜಗಳ ಮೇಲೆ ನಿಶಿತವಾದ ಬಾಣಗಳು ಒಂದಾದರ ನಂತರ ಒಂದರಂತೆ ಬೀಳುತ್ತಿರಲಿಲ್ಲ. ಒಂದೇ ಕ್ಷಣದಲ್ಲಿ ಬೀಳುತ್ತಿದ್ದವು (ಲಕ್ಷಾಲಂಕಾರ).

ದೈವಯೋಗಾದ್ಧಿ ಪಾರ್ಥಸ್ಯ ಹಯಾನಾಮುತ್ತರಸ್ಯ ಚ ।
ಶಿಕ್ಷಾಬಲೋಪಪನ್ನತ್ವಾದಸ್ತ್ರಾಣಾಂ ವೈ ಪರಾಕ್ರಮಾತ್ ॥೨೭॥

ಧ್ವಜಗಾಂಡೀವಯೋಶ್ಚಾಪಿ ದೈವೀಮಾಯಾಕೃತೇತಿ ಚ ।
ಇತಸ್ತತಶ್ಚ ಸಂಯಾನೇ ದೂರೇ ವಾऽಪ್ಯಥವಾऽಂತಿಕೇ ॥೨೮॥

ದುರ್ಗೇ ವಿಷಮಜಾತೇ ವಾ ಸ್ಥಲೇ ನಿಮ್ನೇ ತಥಾ ಕ್ಷಿತೌ ।
ನ ಚ ರುದ್ಧ್ಯೇತ್ ಗತಿಸ್ತಸ್ಯ ರಥಸ್ಯ ಮನಸೋ ಯಥಾ ॥೨೯॥

ಭಗವದನುಗ್ರಹದಿಂದಲೂ, ಉತ್ತರನ ಹಯಶಿಕ್ಷಾಬಲದಿಂದಲೂ ಅರ್ಜುನನ ಅಸ್ತ್ರಗಳ ಪರಾಕ್ರಮದಿಂದಲೂ, ಅರ್ಜುನನ ಧ್ವಜ ಮತ್ತು ಬಾಣಗಳು ದೈವೀಶಕ್ತಿಯಿಂದ ಕೂಡಿದುದರಿಂದಲೂ, ರಥವು ಹತ್ತಿರದಲ್ಲೇ ಸಂಚಾರ ಮಾಡಿದರೂ ಅಥವಾ ದೂರದಲ್ಲಿ ಸಂಚಾರ ಮಾಡಿದರೂ, ವಿಷಮಪ್ರದೇಶದಲ್ಲಿ ಅಥವಾ ಹಳ್ಳವಿದ್ದಲ್ಲಿ ಸಂಚಾರ ಮಾಡಿದರೂ ಆ ರಥದ ಗತಿಯು ಮನಸ್ಸಿನ ಗತಿಯಂತೆ ಪ್ರತಿಬದ್ಧವಾಗುತ್ತಿರಲಿಲ್ಲ.

ಸಮರೇಷು ತು ವಿದ್ವಾಂಸಸ್ತಸ್ಯ ತಾಂಸ್ತಾನ್ ಪರಾಕ್ರಮಾನ್ ।
ವೀರ್ಯಮದ್ಭುತತಮಂ ದೃಷ್ಟ್ವಾ ತಥಾ ಪಾರ್ಥಸ್ಯ ತದ್ಬಲಮ್ ॥೩೦॥

ತ್ರೇಸುರೇವ ಪರೇ ಭೀತಾಃ ಪರಾಙ್ಮುಖರಥಾ ಅಪಿ ॥೩೧॥

ಯುದ್ಧದಲ್ಲಿ ಪರಿಣತರಾದವರು ಅರ್ಜುನನ ಆಯಾ ಪರಾಕ್ರಮವನ್ನೂ, ಅದ್ಭುತತಮವಾದ ವೀರ್ಯವನ್ನೂ, ಹಾಗೆಯೇ ಅವನ ಬಲವನ್ನೂ ನೋಡಿ ಭೀತರಾಗಿ ಹೆದರಿಹೋದರು ಮತ್ತು ತಮ್ಮ ರಥಗಳನ್ನು ಹಿಂದಿರುಗಿಸಿದರು.

ಪಂಚ ಚೈನಂ ರಥೋದಗ್ರಾಃ ಸಹಿತಾಃ ಪರ್ಯವಾರಯನ್ ।
ದ್ರೋಣೋ ಭೀಷ್ಮಶ್ಚ ಕರ್ಣಶ್ಚ ಕುರುರಾಜಶ್ಚ ವೀರ್ಯವಾನ್ ॥೨೦॥

ಅಶ್ವತ್ಥಾಮಾ ಮಹಾಬಾಹುರ್ಧನುರ್ವೇದಪರಾಯಣಃ ॥೨೧॥

ದ್ರೋಣ, ಭೀಷ್ಮ, ಕರ್ಣ, ವೀರ್ಯವಂತನಾದ ದುರ್ಯೋಧನ, ಧನುರ್ವೇದ ಪರಾಯಣರಾದ ಮಹಾಮೇಧಾವಿಗಳಾದ ಅಶ್ವತ್ಥಾಮರು ಈ ಐವರು ಶ್ರೇಷ್ಠರಥರು ಅರ್ಜುನನನ್ನು ಸುತ್ತುವರಿದರು.

ಕೃಪಪ್ರಭೃತಯಶ್ಚಾನ್ಯೇ ಶಕುನಿರ್ಧೃತರಾಷ್ಟ್ರಜಾಃ ।
ಇಷೂಂಶ್ಚ ಸಮ್ಯಗಸ್ಯಂತೋ ಜೀಮೂತಾ ಇವ ವಾರ್ಷಿಕಾಃ ॥೨೨॥

ತೇ ಲಾಭಮಿವ ಮನ್ವಾನಾಃ ಪ್ರತ್ಯಗೃಹ್ಣನ್ ಧನಂಜಯಮ್ ।
ಶರೌಘಾನಭಿವರ್ಷಂತೋ ನಾದಯಂತೋ ದಿಶೋ ದಶ ॥೨೩॥

ಕೃಪ ಮೊದಲಾದವರು ಮತ್ತು ಇನ್ನುಳಿದ ಶಕುನಿ, ಧೃತರಾಷ್ಟ್ರಪುತ್ರರು ಮಳೆಗಾಲದ ಮೋಡಗಳಂತೆ ಬಾಣಗಳನ್ನು ಚೆನ್ನಾಗಿ ಪ್ರಯೋಗಿಸುತ್ತಾ ಅರ್ಜುನನ ದರ್ಶನವೇ ತಮಗೆ ಲಾಭವೆಂದು ತಿಳಿದು ಬಾಣಗಳ ಮಳೆಯನ್ನು ಸುರಿಸುತ್ತಾ ಹತ್ತು ದಿಕ್ಕುಗಳೂ ಪ್ರತಿಧ್ವನಿಸುವಂತೆ ಗರ್ಜಿಸುತ್ತಾ ಅರ್ಜುನನನ್ನು ಎದುರಿಸಿದರು.

ತತಃ ಪ್ರಹಸ್ಯ ಬೀಭತ್ಸುಃ ಕೌಂತೇಯಃ ಶ್ವೇತವಾಹನಃ ।
ದಿವ್ಯಮಸ್ತ್ರಂ ವಿಕುರ್ವಾಣಃ ಪ್ರತ್ಯಯಾದ್ ರಥಸತ್ತಮಾನ್ ॥೨೪॥

ಆಗ ಕುಂತೀಪುತ್ರನೂ, ಶ್ವೇತವಾಹನನೂ ಆದ ಅರ್ಜುನನು ನಕ್ಕು ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ಆ ರಥಶ್ರೇಷ್ಠರ ಮೇಲೆ ಎರಗಿದನು.

ಯಥಾ ರಶ್ಮಿಭಿರಾದಿತ್ಯಃ ಪ್ರಚ್ಛಾದಯತಿ ಮೇದಿನೀಮ್ ।
ತಥಾ ಗಾಂಡೀವವಿನಿರ್ಮುಕ್ತಾಶ್ಛಾದಯಂತಿ ಶರಾ ದಿಶಃ ॥೨೫॥

ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಮುಚ್ಚಿದಂತೆ ಗಾಂಡೀವದಿಂದ ಹೊರಹೊಮ್ಮಿದ ಬಾಣಗಳು ಎಲ್ಲ ದಿಕ್ಕುಗಳನ್ನೂ ಮುಚ್ಚಿದವು.

ನ ರಥಾನಾಂ ನ ಚಾಶ್ವಾನಾಂ ನ ಧ್ವಜಾನಾಂ ನ ಹಸ್ತಿನಾಮ್ ।
ಅತಿವಿದ್ಧ್ವಃ ಶಿತೈರ್ಬಾಣೈರಾಸೀದ್ ವಿದ್ಧಮನಂತರಮ್ ॥೨೬॥

ಬಹಳ ಪ್ರಹಾರಕ್ಕೆ ಒಳಗಾದ ರಥಗಳ ಮೇಲೆ, ಅಶ್ವಗಳ ಮೇಲೆ, ಧ್ವಜಗಳ ಮೇಲೆ, ಗಜಗಳ ಮೇಲೆ ನಿಶಿತವಾದ ಬಾಣಗಳು ಒಂದಾದರ ನಂತರ ಒಂದರಂತೆ ಬೀಳುತ್ತಿರಲಿಲ್ಲ. ಒಂದೇ ಕ್ಷಣದಲ್ಲಿ ಬೀಳುತ್ತಿದ್ದವು (ಲಕ್ಷಾಲಂಕಾರ).

ದೈವಯೋಗಾದ್ಧಿ ಪಾರ್ಥಸ್ಯ ಹಯಾನಾಮುತ್ತರಸ್ಯ ಚ ।
ಶಿಕ್ಷಾಬಲೋಪಪನ್ನತ್ವಾದಸ್ತ್ರಾಣಾಂ ವೈ ಪರಾಕ್ರಮಾತ್ ॥೨೭॥

ಧ್ವಜಗಾಂಡೀವಯೋಶ್ಚಾಪಿ ದೈವೀಮಾಯಾಕೃತೇತಿ ಚ ।
ಇತಸ್ತತಶ್ಚ ಸಂಯಾನೇ ದೂರೇ ವಾऽಪ್ಯಥವಾऽಂತಿಕೇ ॥೨೮॥

ದುರ್ಗೇ ವಿಷಮಜಾತೇ ವಾ ಸ್ಥಲೇ ನಿಮ್ನೇ ತಥಾ ಕ್ಷಿತೌ ।
ನ ಚ ರುದ್ಧ್ಯೇತ್ ಗತಿಸ್ತಸ್ಯ ರಥಸ್ಯ ಮನಸೋ ಯಥಾ ॥೨೯॥

ಭಗವದನುಗ್ರಹದಿಂದಲೂ, ಉತ್ತರನ ಹಯಶಿಕ್ಷಾಬಲದಿಂದಲೂ ಅರ್ಜುನನ ಅಸ್ತ್ರಗಳ ಪರಾಕ್ರಮದಿಂದಲೂ, ಅರ್ಜುನನ ಧ್ವಜ ಮತ್ತು ಬಾಣಗಳು ದೈವೀಶಕ್ತಿಯಿಂದ ಕೂಡಿದುದರಿಂದಲೂ, ರಥವು ಹತ್ತಿರದಲ್ಲೇ ಸಂಚಾರ ಮಾಡಿದರೂ ಅಥವಾ ದೂರದಲ್ಲಿ ಸಂಚಾರ ಮಾಡಿದರೂ, ವಿಷಮಪ್ರದೇಶದಲ್ಲಿ ಅಥವಾ ಹಳ್ಳವಿದ್ದಲ್ಲಿ ಸಂಚಾರ ಮಾಡಿದರೂ ಆ ರಥದ ಗತಿಯು ಮನಸ್ಸಿನ ಗತಿಯಂತೆ ಪ್ರತಿಬದ್ಧವಾಗುತ್ತಿರಲಿಲ್ಲ.

ಸಮರೇಷು ತು ವಿದ್ವಾಂಸಸ್ತಸ್ಯ ತಾಂಸ್ತಾನ್ ಪರಾಕ್ರಮಾನ್ ।
ವೀರ್ಯಮದ್ಭುತತಮಂ ದೃಷ್ಟ್ವಾ ತಥಾ ಪಾರ್ಥಸ್ಯ ತದ್ಬಲಮ್ ॥೩೦॥

ತ್ರೇಸುರೇವ ಪರೇ ಭೀತಾಃ ಪರಾಙ್ಮುಖರಥಾ ಅಪಿ ॥೩೧॥

ಯುದ್ಧದಲ್ಲಿ ಪರಿಣತರಾದವರು ಅರ್ಜುನನ ಆಯಾ ಪರಾಕ್ರಮವನ್ನೂ, ಅದ್ಭುತತಮವಾದ ವೀರ್ಯವನ್ನೂ, ಹಾಗೆಯೇ ಅವನ ಬಲವನ್ನೂ ನೋಡಿ ಭೀತರಾಗಿ ಹೆದರಿಹೋದರು ಮತ್ತು ತಮ್ಮ ರಥಗಳನ್ನು ಹಿಂದಿರುಗಿಸಿದರು.

ಕಾಲಾಗ್ನಿಮಿವ ಬೀಭತ್ಸುಂ ನಿರ್ದಹಂತಮಿವ ಪ್ರಜಾಃ ।
ನಾರಯಃ ಪ್ರೇಕ್ಷಿತುಂ ಶೇಕುರ್ದ್ದಲಂತಮಿವ ಪಾವಕಮ್ ॥೩೨॥

ಕಾಲಾಗ್ನಿಯಂತೆ ಪ್ರಜೆಗಳನ್ನು ನಿರ್ದಹಿಸುತ್ತಿರುವ ಮತ್ತು ಜ್ವಲಿಸುವ ಅಗ್ನಿಯಂತಿರುವ ಅರ್ಜುನನನ್ನು ನೋಡಲು ಶತ್ರುಗಳಿಗೆ ಸಾಧ್ಯವಾಗಲಿಲ್ಲ.

ತಾನಿ ಭಿನ್ನಾನ್ಯನೀಕಾನಿ ರೇಜುರರ್ಜುನಮಾರ್ಗಣೈಃ ।
ತಿಗ್ಮಾಂಶೋಶ್ಚ ವನಾಗ್ರಾಣಿ ವ್ಯಾಪ್ತಾನೀವ ಗಭಸ್ತಿಭಿಃ ॥೩೩॥

ಸೂರ್ಯನ ಕಿರಣಗಳಿಂದ ಕಾಡಿನ ಮೇಲ್ಭಾಗವು ವ್ಯಾಪ್ತವಾದಂತೆ ಅರ್ಜುನನ ಬಾಣಗಳಿಂದ ಭಿನ್ನವಾದ ಆ ಸೈನ್ಯಗಳು ಶೋಭಿಸಿದವು.

ಅಶೋಕಾನಾಂ ವನಾನೀವ ಸಂಚಿತೈಃ ಕುಸುಮೈಃ ಶುಭೈಃ ।
ಪಾರ್ಥಃ ಸಂರಂಜಯಾಮಾಸ ರುಧಿರೇಣಾಕುಲಂ ಬಲಮ್ ॥೩೪॥

ಶುಭವಾದ ಅಶೋಕ ಪುಷ್ಪಗಳಿಂದ ರಂಜಿತವಾದ ಕಾಡುಗಳಂತೆ ಪಾರ್ಥನು ಶತ್ರುಸೈನ್ಯವನ್ನು ರಕ್ತದಿಂದ ಕೂಡಿದುದಾಗಿ ಕೆಂಪಾಗಿಸಿದನು.

ಸಹಸ್ರಶೋऽರ್ಜುನಶರೈಃ ಛಿನ್ನಾನ್ಯುಚ್ಚಾವಚಾನಿ ಚ ।
ಛತ್ರಾಣಿ ಚ ಪತಾಕಾಶ್ಚ ಖೇऽಭ್ಯುವಾಹ ಸದಾಗತಿಃ ॥೩೫॥

ಅರ್ಜುನನು ತನ್ನ ಬಾಣದಿಂದ ಕತ್ತರಿಸಿದ ಉಚ್ಚವಾದ ಮತ್ತು ನೀಚವಾದ ಅನೇಕ ಛತ್ರಗಳನ್ನೂ ಮತ್ತು ಪತಾಕೆಗಳನ್ನೂ ವಾಯುವು ಅಂತರಿಕ್ಷದಲ್ಲಿ ಹಾರಿಸಿತು.

ಯೇ ಹ್ಯರ್ಜುನಬಲತ್ರಸ್ತಾಃ ಪರಿಪೇತುರ್ದಿಶೋ ದಶ ।
ರಥಾಂಗದೇಶಮುತ್ಸೃಜ್ಯ ಪಾರ್ಥಚ್ಛಿನ್ನಯುಗಾ ಹಯಾಃ ॥೩೬॥

ನಿಕೃತ್ತಪೂರ್ವಚರಣಾಸ್ತೇ ನಿಪೇತುಃ ಶಿತೈಃ ಶರೈಃ ।
ಶಿರೋಭಿಃ ಪ್ರಥಮಂ ಜಗ್ಮುರ್ಮೇದಿನೀಂ ಜಘನೈಃ ಪುನಃ ॥೩೭॥

ಅರ್ಜುನನ ಬಲಕ್ಕೆ ಹೆದರಿ ಅರ್ಜುನನಿಂದ ನೊಗಗಳು ಕತ್ತರಿಸಲ್ಪಟ್ಟು ರಥದ ಚಕ್ರ ಪ್ರದೇಶವನ್ನು ಬಿಟ್ಟು ದಿಕ್ಕುದಿಕ್ಕುಗಳಿಗೆ ಓಡಿದ ಅಶ್ವಗಳು ಅರ್ಜುನನ ನಿಶಿತವಾದ

(ಹರಿತವಾದ) ಬಾಣಗಳಿಂದ ಮುಂದಿನ ಕಾಲುಗಳು ಕತ್ತರಿಸಲ್ಪಟ್ಟು ಮೊದಲು ತಲೆಗಳಿಂದಲೂ ಅನಂತರ ಜಘನಗಳಿಂದಲೂ ಭೂಮಿಯ ಮೇಲೆ ಬಿದ್ದವು.

ಮುಖನಖವಿಷಾಣೇಷು ದಂತವೇಷ್ಟೇಷು ಚ ದ್ವಿಪಾನ್ ।
ಮರ್ಮಸ್ವನ್ಯೇಷು ಚಾಹತ್ಯ ತಥಾ ಜಘ್ನೇ ಗಜೋತ್ತಮಾನ್ ॥೩೮॥

ಅರ್ಜುನನು ಶ್ರೇಷ್ಠವಾದ ಗಜಗಳ ಮುಖ, ನಖ ಮತ್ತು ದಂತವೇಷ್ಟನಗಳಲ್ಲಿಯೂ, ಮರ್ಮಸ್ಥಾನಗಳಲ್ಲಿಯೂ ಹೊಡೆದು ಅವುಗಳನ್ನು ಕೊಂದನು.

ಚಕ್ಷುರ್ನಸವಿಷಾಣೇಷು ಪಾದೇಷೂರುಸು ಚ ದ್ವಿಪಾನ್ ।
ಮರ್ಮಸ್ವನ್ಯೇಷು ಚಾಹತ್ಯ ಪಾತಯಾಮಾಸ ಭೂತಳೇ ॥೩೯॥

ಚಕ್ಷುಸ್ಸು, ಸೊಂಡಿಲು, ದಂತಗಳು, ಪಾದಗಳು, ವಕ್ಷಸ್ಸ್ಥಲಗಳು ಮತ್ತು ಇತರ ಮರ್ಮಸ್ಥಾನಗಳಲ್ಲಿ ಹೊಡೆದು ಆನೆಗಳನ್ನು ಭೂಮಿಯ ಮೇಲೆ ಕೆಡವಿದನು.

ಕೌರವಾಣಾಂ ಗಜಾನಾಂ ಚ ಶರೀರೈರ್ಗತಚೇತಸಾಮ್ ।
ಕ್ಷಣೇನ ಸಂವೃತಾ ಭೂಮಿರ್ಮೇಘೈರಿವ ನಭಃಸ್ಥಲಮ್ ॥೪೦॥

ಯುದ್ಧಭೂಮಿಯು ಮರಣವನ್ನು ಹೊಂದಿದ ಕೌರವರ ಗಜಗಳ ಶರೀರಗಳಿಂದ ಒಂದು ಕ್ಷಣದಲ್ಲಿ ಆಕಾಶವು ಮೋಡಗಳಿಂದ ಆವೃತವಾಗುವಂತೆ ಆವೃತವಾಯಿತು.

ಅಸ್ತ್ರೈರ್ದಿವ್ಯೈರ್ಮಹಾಬಾಹುರರ್ಜುನಃ ಪ್ರದಹನ್ನಿವ ।
ಬಡವಾಮುಖಸಂಭೂತಃ ಕಾಲಾಗ್ನಿರಿವ ಸರ್ವತಃ ॥೪೧॥

ವಡವಾಮುಖದಿಂದ ಎದ್ದ ಕಾಲಾಗ್ನಿಯಂತೆ ದಿವ್ಯಾಸ್ತ್ರಗಳಿಂದ ಸಂಪನ್ನನಾದ ಮಹಾಬಾಹುವಾದ ಅರ್ಜುನನು ಎಲ್ಲ ಕಡೆಗಳಲ್ಲಿಯೂ ದಹಿಸುವವನಂತೆ ಇದ್ದನು.

ಯಥಾ ಯುಗಾಂತಸಮಯೇ ಸರ್ವಂ ಸ್ಥಾವರಜಂಗಮಮ್ ।
ಕಾಲಪಕ್ವಮಶೇಷೇಣ ಧಕ್ಷ್ಯತ್ಯುಗ್ರಶಿಖಃ ಶಿಖೀ ॥೪೨॥

ತದ್ವತ್ ಪಾರ್ಥೋಽಸ್ತ್ರತೇಜೋಭಿರ್ಧನುಷೋ ನಿಸ್ವನೇನ ಚ ।
ದೈವಾದ್ ವೀರ್ಯಾಚ್ಚ ಬೀಭತ್ಸುಸ್ತಸ್ಮಿನ್ ದೌರ್ಯೋಧನೇ ಬಲೇ॥೪೩॥

ಹೇಗೆ ಯುಗಾಂತ ಸಮಯದಲ್ಲಿ ಕಾಲದಿಂದ ಪಕ್ವವಾದ ಎಲ್ಲಾ ಸ್ಥಾವರ ಜಂಗಮಗಳನ್ನೂ ಉಗ್ರಜ್ವಾಲೆಗಳಿಂದ ಕೂಡಿದ ಅಗ್ನಿಯು ದಹಿಸುವನೋ ಅದರಂತೆ ಅರ್ಜುನನು ಅಸ್ತ್ರತೇಜಸ್ಸಿನಿಂದಲೂ, ಧನುಸ್ಸಿನ ನಾದಗಳಿಂದಲೂ, ದೈವದತ್ತವಾದ ಸಾಮರ್ಥ್ಯದಿಂದಲೂ ಆ ದುರ್ಯೋಧನನ ಸೈನ್ಯದಲ್ಲಿ ಎಲ್ಲವನ್ನೂ ಸುಟ್ಟನು.

ರಣಶಕ್ತಿಮಮಿತ್ರಾಣಾಂ ಪ್ರಾಯೇಣೋಪನಿನಾಯ ಸಃ ।
ಚೇಷ್ಟಾಂ ಪ್ರಾಯೇಣ ಭೂತಾನಾಂ ರಾತ್ರಿಃ ಪ್ರಾಣಭೃತಾಮಿವ ॥೪೪॥

ಸೋಽತ್ಯಯಾತ್ ಸಹಸಾ ಶತ್ರೂನ್ ಸಮರೇ ವಾಸವೋಪಮಃ ॥೪೫॥

ರಾತ್ರಿಯು ಪ್ರಾಣಿಗಳ ಕ್ರಿಯಾಶಕ್ತಿಯನ್ನು ಪ್ರಾಯಃ ನಾಶಮಾಡುವಂತೆ ಅರ್ಜುನನು ಶತ್ರುಗಳ ಯುದ್ಧಶಕ್ತಿಯನ್ನು ಪ್ರಾಯಶಃ ನಾಶಮಾಡಿದನು. ಯುದ್ಧದಲ್ಲಿ ಇಂದ್ರನಿಗೆ ಸಮಾನನಾದ ಅವನು ತನ್ನ ಬಲದಿಂದ ಶತ್ರುಗಳನ್ನು ಮೀರಿದನು.

ಶೀಘ್ರಂ ದೂರಂ ದೃಢಾಮೋಘಮಸ್ತ್ರಮಸ್ಯಾತಿಮಾನುಷಮ್ ।
ದೃಷ್ಟ್ವಾ ತೇ ಕೌರವಾ ಭೀತಾ ಅತಿಮಾನುಷವಿಕ್ರಮಮ್ ॥೪೬॥

ಅವನ ಶೀಘ್ರವಾದ, ದೂರದಲ್ಲಿ ಬೀಳುವ, ದೃಢವಾದ, ಅಮೋಘವಾದ ಮನುಷ್ಯರನ್ನು ಮೀರಿದ ಅಸ್ತ್ರಗಳನ್ನೂ ಮತ್ತು ಮನುಷ್ಯರಿಗೆ ಮೀರಿದ ಅವನ ಪರಾಕ್ರಮವನ್ನೂ ನೋಡಿ ಆ ಕೌರವರು ಭೀತರಾಗಿದ್ದಾರೆ.

ಖಗಯಾನಾಭಿಸಂವೀತೈಃ ಸಂವಿಷ್ಟೈಃ ಖಗಮ್ಯೈರಿವ ।
ಅರ್ಜುನೇನ ಸಮಾವವ್ರೇ ಲೋಹಿತಪ್ರಾವಣೈಃ ಖಗೈಃ ॥೪೭॥

ಪಕ್ಷಿಗಳ ಗರಿಗಳಿಂದ ಕೂಡಿದ, ಪಕ್ಷಿಗಳು ಕಾಡನ್ನು ಪ್ರವೇಶಿಸುವಂತೆ ಇದ್ದ ಶತ್ರು ರಕ್ತಪಿಪಾಸುಗಳಾದ ಅರ್ಜುನನು ಪ್ರಯೋಗಿಸಿದ ಬಾಣಗಳಿಂದ ಶತ್ರುಸೈನ್ಯವೆಲ್ಲವೂ ಆವೃತವಾಯಿತು.

ಅರ್ಜುನಸ್ಯ ವಿನಿರ್ಮುಕ್ತಾಃ ಶರಾ ಗಾಂಡೀವಧನ್ವನಃ ।
ತಾರ್ಕ್ಷ್ಯವೇಗಾ ಇವಾಕಾಶೇ ನ ಸಸಜ್ಜುಃ ಪರಾತ್ಮಸು ॥೪೮॥

ಗಾಂಡೀವ ಧನುರ್ಧಾರಿಯಾದ ಅರ್ಜುನನಿಂದ ಪ್ರಯೋಗಿಸಲ್ಪಟ್ಟ ಬಾಣಗಳು ಆಕಾಶದಲ್ಲಿ ಗರುಡನ ವೇಗದಂತೆ ಶತ್ರುಶರೀರಗಳಲ್ಲಿ ನಾಟುತ್ತಿರಲಿಲ್ಲ (ಶತ್ರು ಶರೀರಗಳನ್ನು ಭೇದಿಸಿಕೊಂಡು ಮುಂದೆ ಸಾಗುತ್ತಿದ್ದವು).

ವರ್ಮಾಣಿ ಸಾರಥೀಂಶ್ಚೈವ ಹೇಮಜಾಲಾನಿ ವಾಜಿನಾಮ್ ।
ಕಿರೀಟಂ ಸೂರ್ಯಸಂಕಾಶಂ ವೈಯಾಘ್ರಮಥ ಚರ್ಮ ಚ ॥೪೯॥

ತಥಾ ಸರ್ವಾಣಿ ಗಾತ್ರಾಣಿ ರಥಸ್ಯ ದ್ವಿಷತಾಂ ಶರೈಃ ।
ನೀಹಾರೇಣೇವ ಭೂತಾನಿ ಧನಾನ್ಯಥ ಚಕಾಶಿರೇ ॥೫೦॥

ಕವಚಗಳೂ, ಸಾರಥಿಗಳೂ, ಕುದುರೆಗಳ ಸುವರ್ಣಜಾಲಗಳೂ, ಸೂರ್ಯನ ಪ್ರಕಾಶವನ್ನು ಹೊಂದಿದ ಕಿರೀಟ, ವ್ಯಾಘ್ರಚರ್ಮ ಮತ್ತು ಶತ್ರುಗಳ ಸರ್ವಶರೀರಗಳೂ ಸಹ, ಮಂಜಿನಿಂದ ಎಲ್ಲವೂ ಆವರಿಸಲ್ಪಟ್ಟಂತೆ ಅರ್ಜುನನ ಬಾಣಗಳಿಂದ ಎಲ್ಲವೂ ಆವರಿಸಲ್ಪಟ್ಟು ಪ್ರಕಾಶಿಸಿದವು.

ಸಕೃತೇऽವಕೃತಂ ಶೇಕೂ ರಥಮಭ್ಯಸಿತುಂ ಪರೇ ।
ಅನಭ್ಯಸ್ತಃ ಪುನಸ್ತೈರ್ಹಿ ರಥಃ ಸೋऽಭಿಪಪಾತ ತಾನ್ ॥೫೧॥

ಯುದ್ಧಕರ್ಮದಿಂದ ಸಹಿತನಾದ ಅರ್ಜುನನ, ತಮಗಿಂತಲೂ ಕೆಳಭಾಗದಲ್ಲಿದ್ದ ರಥವನ್ನು ನಿರಾಸ ಮಾಡಲು ಅವರಿಗೆ ಸಾಧ್ಯವಾಗಲಿಲ್ಲ. ಯಾರಿಂದಲೂ ಬಾಣಪ್ರಯೋಗದಿಂದ ತಡೆಯಲ್ಪಡದ ಅರ್ಜುನನ ಆ ರಥವು ಶತ್ರುಗಳ ಸೈನ್ಯದ ಮೇಲೆ ಎರಗಿತು.

ತಚ್ಛರಾ ದ್ವಿಃ ಶರೀರೇಷು ಯಥಾ ಚ ನ ಸಸಜ್ಜಿರೇ ।
ದ್ವಿರ್ನಾನೀಕೇಷು ಬೀಭತ್ಸೋರ್ನ ಸಸಜ್ಜ ರಥಸ್ತಥಾ ॥೫೨॥

ಅರ್ಜುನನು ಪ್ರಯೋಗಿಸಿದ ಬಾಣಗಳು ಹೇಗೆ ಶತ್ರುಶರೀರದಲ್ಲಿ ಎರಡು ಬಾರಿ ಪ್ರವೇಶಿಸಲಿಲ್ಲವೋ ಅದರಂತೆ ಅರ್ಜುನನ ರಥವೂ ಕೂಡ ಎರಡು ಬಾರಿ ಪ್ರವೇಶಿಸಲಿಲ್ಲ (ಅರ್ಜುನನು ಪ್ರಯೋಗಿಸಿದ ಬಾಣಗಳು ಒಂದೇ ಬಾರಿ ಶತ್ರುಗಳ ಶರೀರವನ್ನು ಭೇದಿಸಿಕೊಂಡು ಮುಂದೆ ಹೋಗುತ್ತಿದ್ದವು. ಪುನಃ ಎರಡನೇ ಬಾರಿ

ಹಿಂದಕ್ಕೆ ಬಂದು ಶತ್ರುಗಳ ಶರೀರವನ್ನು ಭೇದಿಸುತ್ತಿರಲಿಲ್ಲ. ಅದರಂತೆ ರಥವೂ ಕೂಡ ಹಿಂದಿರುಗದೆ ಮುಂದೆ ಮುಂದೆಯೇ ಸಾಗಿತು ಎಂದು ಅಭಿಪ್ರಾಯ- ವಾದಿರಾಜರು).

ಸ ತದ್ವತ್ ಕ್ಷೋಭಯಾಮಾಸ ವಿಗಾಹ್ಯಾರಿಬಲಂ ರಥೀ ।
ಅನಂತವೇಗೋ ಭುಜಗಃ ಕ್ರೀಡನ್ನಿವ ಮಹಾರ್ಣವೇ ॥೫೩॥

ಅವನು ಅದರಂತೆ ಅನಂತವೇಗವುಳ್ಳ ಸರ್ಪವು ಸಮುದ್ರದಲ್ಲಿ ಆಟವಾಡಿದಂತೆ ಶತ್ರುಗಳ ಸೈನ್ಯವನ್ನು ಪ್ರವೇಶಿಸಿ ತಲ್ಲಣಗೊಳಿಸಿದನು.

ಅಸ್ಯತೋ ನಿತ್ಯಮತ್ಯರ್ಥಂ ಸರ್ವಘೋಷಾತಿಗಸ್ತಥಾ ।
ಸನಾದಃ ಶ್ರೂಯತೇ ಭೂತೈರ್ಧನುಷಶ್ಚ ಕಿರೀಟಿನಃ ॥೫೪॥

ಸತತವಾಗಿ ಬಾಣಪ್ರಯೋಗವನ್ನು ಮಾಡುವ ಕಿರೀಟಿಯಾದ ಅವನ ಧನುಸ್ಸಿನ ನಾದವು ಉಳಿದ ಎಲ್ಲಾ ಘೋಷಗಳನ್ನು ಮೀರಿ ಧ್ವಜದಲ್ಲಿದ್ದ ಭೂತಗಳ ನಾದಗಳೊಂದಿಗೆ ಸೇರಿ ಕೇಳಿಬರುತ್ತಿದ್ದಿತು.

ಸಂಛಿನ್ನಾಸ್ತತ್ರ ಮಾತಂಗಾ ಬಾಣೈರಲ್ಪಾಂತರಾಂತರೇ ।
ಸಂಸ್ಯೂತಾಸ್ತತ್ರ ದೃಶ್ಯಂತೇ ಮೇಘಾ ಇವ ಗಭಸ್ತಿಭಿಃ ॥೫೫॥

ಸ್ವಲ್ಪ ಸ್ವಲ್ಪ ದೂರದಲ್ಲಿಯೇ ಬಾಣಗಳಿಂದ ಕತ್ತರಿಸಲ್ಪಟ್ಟು ಬಿದ್ದಿದ್ದ ಆನೆಗಳು ಮೇಘಗಳು ಸೂರ್ಯಕಿರಣಗಳಿಂದ ಪೋಣಿಸಲ್ಪಟ್ಟಂತೆ ಕಾಣಿಸಿದವು.

ದಿಶೋಽನುಭ್ರಮತಃ ಸರ್ವಾಃ ಸವ್ಯಂ ದಕ್ಷಿಣಮಸ್ಯತಃ ।
ಸತತಂ ದೃಶ್ಯತೇ ಯುದ್ಧೇ ಸಾಯಕಾಸನಮಂಡಲಮ್ ॥೫೬॥

ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುವ ದಕ್ಷಿಣಹಸ್ತಗಳಿಂದಲೂ ಮತ್ತು ಸವ್ಯ ಹಸ್ತಗಳಿಂದಲೂ ಬಾಣಗಳನ್ನು ಪ್ರಯೋಗಿಸುವ ಅವನ ಧನುಸ್ಸು ಯುದ್ಧದಲ್ಲಿ ಸತತವಾಗಿ ಮಂಡಲಾಕಾರವಾಗಿ ಕಾಣುತ್ತಿದ್ದಿತು.

ಪತಂತ್ಯರೂಪೇಷು ಯಥಾ ಚಕ್ಷೂಂಷಿ ನ ಕದಾಚನ ।
ನಾಲಕ್ಷ್ಯೇಷು ಶರಾಃ ಪೇತುಸ್ತಥಾ ಗಾಂಡೀವಧನ್ವನಃ ॥೫೭॥

ರೂಪರಹಿತ ವಸ್ತುಗಳಲ್ಲಿ ಹೇಗೆ ಕಣ್ಣಿನ ದೃಷ್ಟಿಯು ಎಂದೂ ಬೀಳುವುದಿಲ್ಲವೋ ಅದರಂತೆ ಗಾಂಡೀವಧನ್ವಿಯಾದ ಅರ್ಜುನನ ಬಾಣಗಳು ಲಕ್ಷ್ಯವಲ್ಲದವುಗಳಲ್ಲಿ ಬೀಳುತ್ತಿರಲಿಲ್ಲ.

ಮಾರ್ಗೋ ಗಜಸಹಸ್ರಸ್ಯ ಯುಗಪನ್ಮರ್ದತೋ ವನಮ್ ।
ಕೌಂತೇಯರಥಮಾರ್ಗಸ್ತು ರಣೇ ಘೋರತರೋऽಭವತ್ ॥೫೮॥

ಒಟ್ಟಿಗೆ ಸೇರಿ ವನವನ್ನು ಮರ್ದಿಸುವ ಸಹಸ್ರ ಆನೆಗಳ ಮಾರ್ಗಕ್ಕಿಂತಲೂ ಯುದ್ಧದಲ್ಲಿ ಅರ್ಜುನನ ರಥಮಾರ್ಗವು ಇನ್ನೂ ಘೋರತರವಾಗಿದ್ದಿತು.

ನೂನಂ ಪಾರ್ಥಜಯೈಷಿತ್ವಾತ್ ಶಕ್ರಃ ಸರ್ವಾಮರೇಶ್ವರಃ ।
ಹಂತ್ಯಸ್ಮಾನಿತಿ ಮನ್ಯಂತೇ ಪಾರ್ಥೇನೈವಾರ್ದಿತಾಃ ಪರೇ ॥೫೯॥

ದೇವೇಂದ್ರನು ಅರ್ಜುನನ ಜಯವನ್ನು ಬಯಸುವುದರಿಂದ ಅವನೇ ನಮ್ಮನ್ನು ಕೊಲ್ಲುತ್ತಿದ್ದಾನೆ ಎಂದು ಅರ್ಜುನನಿಂದ ಪೀಡಿತರಾದ ಶತ್ರುಗಳು ಭಾವಿಸಿದರು.

ಘ್ನಂತಮತ್ಯರ್ಥಭೀತಾಸ್ತೇ ಮೇನಿರೇ ಸವ್ಯಸಾಚಿನಮ್ ।
ಕಾಲಮರ್ಜುನರೂಪೇಣ ಗ್ರಸಂತಮಿವ ಚ ಪ್ರಜಾಃ ॥೬೦॥

ಎಲ್ಲರನ್ನೂ ಕೊಲ್ಲುತ್ತಿರುವ ಅರ್ಜುನನನ್ನು ನೋಡಿ ಅವರು ಬಹಳ ಭೀತರಾಗಿ ಅವನನ್ನು ಅರ್ಜುನನ ರೂಪದಿಂದ ಪ್ರಜೆಗಳನ್ನು ಸಂಹಾರ ಮಾಡುವ ಯಮನೆಂದು ಭಾವಿಸಿದರು.

ಕುರುಸೇನಾಶರೀರಾಣಿ ಪಾರ್ಥೇನಾನಾಹತಾನ್ಯಪಿ ।
ಪೇತುಃ ಪಾರ್ಥಹತಾನೀವ ಪಾರ್ಥಕರ್ಮಾನುದರ್ಶನಾತ್ ॥೬೧॥

ಅರ್ಜುನನ ಕರ್ಮವನ್ನು ಕೇವಲ ನೋಡುವುದರಿಂದಲೇ ಕುರುಸೈನ್ಯದ ಶರೀರಗಳು ಅರ್ಜುನನಿಂದ ಹೊಡೆಯಲ್ಪಡದಿದ್ದರೂ ಅರ್ಜುನನಿಂದ ಹೊಡೆಯಲ್ಪಟ್ಟ ಶರೀರಗಳಂತೆ ಭೂಮಿಯ ಮೇಲೆ ಉರುಳಿದವು.

ಓಷಧೀನಾಂ ಶಿರಾಂಸೀವ ಕಾಲಪಂಕ್ತಿಸಮನ್ವಯಾತ್ ।
ಅವನೇಮುಃ ಕುರೂಣಾಂ ಹಿ ವೀರ್ಯಾಣ್ಯರ್ಜುನಜಾದ್ ಭಯಾದ್ ॥

ಬಹುಕಾಲ ಇರುವುದರಿಂದ ಪರಿಪಕ್ವವಾದ ಓಷಧಿಗಳ ಅಗ್ರಭಾಗಗಳಂತೆ ಅರ್ಜುನನಿಂದ ಉಂಟಾದ ಭಯದಿಂದ ಕೌರವರ ಸಾಮರ್ಥ್ಯವು ಬಾಗಿತು.

ಬಾಹ್ವೋ ರಥಾನ್ ಸ್ಫೋಟಯತೇ ಪ್ರಧ್ಮಾತೇ ಶಂಖಮರ್ಜುನಃ ।
ಚಕಾರ ಚಾರ್ಜುನೀಕತ್ವಂ ದ್ವಿಮುಖಾನ್ ರುಷಿತಾನಪಿ ॥೬೩॥

ತನ್ನ ಎರಡು ಬಾಹುಗಳಿಂದ ರಥಗಳನ್ನು ಸ್ಫೋಟಿಸುತ್ತಾನೆ ಮತ್ತು ಹಾಗೆಯೇ ಅರ್ಜುನನು ಶಂಖವನ್ನು ಊದುತ್ತಾನೆ. ಹೀಗೆ ಅರ್ಜುನನು ಪರಸೈನ್ಯವನ್ನೆಲ್ಲಾ ಅರ್ಜುನಮಯವನ್ನಾಗಿ ಮಾಡಿ ಕ್ರೋಧಗೊಂಡ ಅವರು ಎರಡು ಕಡೆಗಳಲ್ಲಿ (ಹಿಂದೆ ಮತ್ತು ಮುಂದೆ, ಬಲಗಡೆ ಮತ್ತು ಎಡಗಡೆ) ತನ್ನನ್ನು ನಿರೀಕ್ಷಿಸುವಂತೆ ಮಾಡಿದನು.

ಅರ್ಜುನೇನಾಸ್ತ್ರಭಿನ್ನಾನಿ ಬಲಾಗ್ರಾಣಿ ಪುನಃ ಕ್ವಚಿತ್ ।
ಚಕ್ರುರ್ಲೋಹಿತಧಾರಾಭಿರ್ಧರಣೀಂ ಲೋಹಿತೋತ್ತರಾಮ್ ॥೬೪॥

ಅರ್ಜುನನ ಅಸ್ತ್ರದಿಂದ ಕತ್ತರಿಸಲ್ಪಟ್ಟ ಸೈನ್ಯದ ಭಾಗಗಳು ತಮ್ಮಿಂದ ಹರಿಯುವ ರಕ್ತದ ಧಾರೆಗಳಿಂದ ಭೂಮಿಯನ್ನು ಕೆಂಪುವರ್ಣದಿಂದ ಕೂಡಿದುದನ್ನಾಗಿ ಮಾಡಿದವು.

ಲೋಹಿತೈರ್ವಾಪಿ ಸಂಪೃಕ್ತೈಃ ಪಾಂಸುಭಿಃ ಪವನೋದ್ಧತೈಃ ।
ತೇನೈವ ಚ ಸಮುದ್ಧೂತೈಃ ಸೂಕ್ಷ್ಮೈರ್ಲೋಹಿತಬಿಂದುಭಿಃ ॥೬೫॥

ಲೋಹಿತಾರ್ದ್ರೈಃ ಪ್ರಹರಣೈರ್ನಿಮಗ್ನಾ ಲೋಹಿತೋಕ್ಷಿತಾಃ ।
ಲೋಹಿತೇಷು ನಿಮಗ್ನಾಸ್ತೇ ನಿಹತಾಶ್ಚ ಕಿರೀಟಿನಾ ॥೬೬॥

ಗಾಳಿಯಿಂದ ಎದ್ದ ರಕ್ತವರ್ಣೋಪೇತವಾದ ಧೂಳುಗಳಿಂದ ಕೂಡಿ, ಮತ್ತು ವಾಯುವಿನಿಂದಲೇ ಮೇಲೆದ್ದ ಸಣ್ಣರಕ್ತಬಿಂದುಗಳಿಂದ ಕೂಡಿ, ಅರ್ಜುನನ ರಕ್ತದಿಂದ ಒದ್ದೆಯಾದ ಆಯುಧಗಳಿಂದ ಪ್ರಹಾರವನ್ನು ಹೊಂದಿ, ರಕ್ತದ ಅಭಿಷೇಕವನ್ನು ಹೊಂದಿದ ಕೌರವರು ರಕ್ತಮಯವಾದ ಭೂಮಿಯಲ್ಲಿ ಮುಳುಗಿದರು.

ಬಭೂವುರ್ಲೋಹಿತಾಸ್ತತ್ರ ಭೃಶಮಾದಿತ್ಯರಶ್ಮಯಃ ।
ಸಾರ್ಕಂ ನಭಃ ಕ್ಷಣೇನಾಸೀತ್ ಸಂಧ್ಯಾಭ್ರಮಿವ ಲೋಹಿತಮ್ ॥೬೭॥

ಆದಿತ್ಯನ ಕಿರಣಗಳೂ ಸಹ ಅಲ್ಲಿ ಕೆಂಪಾದವು. ಸೂರ್ಯನಿಂದ ಕೂಡಿದ ಆಕಾಶವು ಒಂದುಕ್ಷಣದಲ್ಲಿಸಂಧ್ಯಾಕಾಲದ ಮೋಡದಂತೆ ಕೆಂಪಾಯಿತು.

ಅಪ್ಯಸ್ತಂ ಪ್ರಾಪ್ಯ ಚಾದಿತ್ಯೋ ನಿವರ್ತೇತ ನ ಪಾಂಡವಃ ।
ನಿವರ್ತೇತ ನ ಜಿತ್ವಾರೀನ್ ಇತ್ಯಜಲ್ಪನ್ ವಿಚಕ್ಷಣಾಃ ॥೬೮॥

ಒಮ್ಮೆ ಮುಳುಗಿದ ಸೂರ್ಯನು ಹಿಂದಕ್ಕೆ ಬರಬಹುದು. ಆದರೆ ಅರ್ಜುನನು ಶತ್ರುಗಳನ್ನು ಗೆಲ್ಲದೇ ಹಿಂದೆ ಬರಲಾರ ಎಂದು ಮೇಧಾವಿಗಳು ಅಲ್ಲಿ ಮಾತನಾಡಿಕೊಂಡರು.

ತಾನ್ ಸರ್ವಾನ್ ಸಮರೇ ಶೂರಾನ್ ಪೌರುಷೇ ಪರ್ಯವಸ್ಥಿತಾನ್ ।
ದಿವ್ಯೈರಸ್ತ್ರೈರಮೇಯಾತ್ಮಾ ಸರ್ವಾನಾರ್ಚ್ಛದ್ ಧನುರ್ಧರಾನ್ ॥೬೯॥

ತಿಳಿಯಲು ಅಸಾಧ್ಯವಾದ ಮಹಿಮೆಯುಳ್ಳ ಅರ್ಜುನನು ಪೌರುಷವನ್ನು ಆಶ್ರಯಿಸಿ ಯುದ್ಧದಲ್ಲಿ ನಿಂತ ಎಲ್ಲಾ ಶೂರರಾದ ಧನುರ್ಧಾರಿಗಳನ್ನೂ ತನ್ನ ದಿವ್ಯಾಸ್ತ್ರಗಳಿಂದ ಹಿಂಸಿಸಿದನು.

ಸ ತು ದ್ರೋಣಂ ತ್ರಿಸಪ್ತತ್ಯಾ ನಾರಾಚಾನಾಂ ಸಮರ್ಪಯತ್ ।
ಅರ್ಜುನೋ ನಿಶಿತೈರ್ಬಾಣೈರ್ದ್ರೋಣಮರ್ಚನ್ ಮಹಾಬಲಃ ॥೭೦॥

ಮಹಾಬಲನಾದ ಅರ್ಜುನನು ಹರಿತವಾದ ಬಾಣಗಳಿಂದ ದ್ರೋಣರನ್ನು ಪೂಜಿಸುತ್ತಾ ಅವರ ಮೇಲೆ ಎಪ್ಪತ್ತಮೂರು ಬಾಣಗಳನ್ನು ಪ್ರಯೋಗಿಸಿದನು.

ಅಶೀತ್ಯಾ ಶಕುನಿಂ ಚೈವ ದ್ರೌಣಿಮಪ್ಯಾಶು ಸಪ್ತಭಿಃ ।
ದುಃಸಹಂ ದಶಭಿರ್ಬಾಣೈರರ್ಜುನಃ ಸಮವಿಧ್ಯತ ॥೭೧॥

ಶಕುನಿಯನ್ನು ಎಂಬತ್ತು ಬಾಣಗಳಿಂದಲೂ, ಅಶ್ವತ್ಥಾಮರನ್ನು ನಿಶಿತವಾದ ಏಳು ಬಾಣಗಳಿಂದಲೂ, ದುಃಸಹನನ್ನು ಹತ್ತುಬಾಣಗಳಿಂದಲೂ ಅರ್ಜುನನು ಹೊಡೆದನು.

ದುಃಶಾಸನಂ ದ್ವಾದಶಭಿಃ ಕೃಪಂ ಶಾರದ್ವತಂ ತ್ರಿಭಿಃ ।
ಭೀಷ್ಮಂ ಶಾಂತನವಂ ಷಷ್ಟ್ಯಾ ಪ್ರತ್ಯವಿಧ್ಯತ್ ಸ್ತನಾಂತರೇ ॥೭೨॥

ದುಃಶಾಸನನನ್ನು ಹನ್ನೆರಡು ಬಾಣಗಳಿಂದಲೂ, ಶಾರದ್ವತರಾದ ಕೃಪರನ್ನು ಮೂರು ಬಾಣಗಳಿಂದಲೂ ಮತ್ತು ಶಂತನು ಪುತ್ರರಾದ ಭೀಷ್ಮರನ್ನು ಸ್ತನಗಳ ಮಧ್ಯದಲ್ಲಿ ಅರವತ್ತು ಬಾಣಗಳಿಂದಲೂ ಹೊಡೆದನು.

ಸ ಕರ್ಣಂ ಕರ್ಣಿನಾऽವಿಧ್ಯತ್ ಸ್ಫೀತೇನ ನಿಶಿತೇನ ಚ ।
ವಾಸವಿರ್ದ್ವಿಷತಾಂ ಮಧ್ಯೇ ವಿವ್ಯಾಧ ಪರಮೇಷುಣಾ ॥೭೩॥

ಅವನು ಕರ್ಣನನ್ನು ಪರಿಶುದ್ಧವಾದ ಮತ್ತು ಹರಿತವಾದ ಕರ್ಣಿ ಎಂಬ ಬಾಣದಿಂದ ಹೊಡೆದು ಅನಂತರ ಶತ್ರುಗಳ ಮಧ್ಯದಲ್ಲಿ ಅವನನ್ನು ಶ್ರೇಷ್ಠವಾದ ಬಾಣಗಳಿಂದ ಹೊಡೆದನು.

ತತ್ ಪ್ರಭಿನ್ನಂ ಬಲಂ ಸರ್ವಂ ಕೃತ್ವಾ ವಾಸವನಂದನಃ ।
ಸ ಕರ್ಣಂ ಕರ್ಣಿನಾऽವಿಧ್ಯತ್ ಸ್ಫೀತೇನ ನಿಶಿತೇನ ಚ ॥೭೪॥

ವಾಸವನಂದನನಾದ ಅರ್ಜುನನು ಶತ್ರುಸೈನ್ಯವನ್ನೆಲ್ಲಾ ಭಗ್ನಗೊಳಿಸಿ ಕರ್ಣನನ್ನು ಪರಿಶುದ್ಧವಾದ ಮತ್ತು ಹರಿತವಾದ ಕರ್ಣಿಯಿಂದ ಹೊಡೆದನು.

ಸ ಕರ್ಣಂ ಸತನುತ್ರಾಣಂ ನಿರ್ಭಿದ್ಯ ನಿಶಿತಃ ಶರಃ ।
ಅಗಚ್ಛದ್ ದಾರಯನ್ ಭೂಮಿಂ ಚೋದಿತೋ ದೃಢಧನ್ವಿನಾ ॥೭೫॥

ದೃಢ ಧನುಸ್ಸನ್ನು ಹೊಂದಿದ ಅರ್ಜುನನಿಂದ ಪ್ರಯೋಗಿಸಲ್ಪಟ್ಟ ಆ ನಿಶಿತವಾದ ಬಾಣವು ಕವಚಸಹಿತನಾಗಿದ್ದ ಕರ್ಣನನ್ನು ಭೇದಿಸಿ ಭೂಮಿಯನ್ನು ಸೀಳುತ್ತಾ ಭೂಮಿಯನ್ನು ಪ್ರವೇಶಿಸಿತು.

ತತೋऽಸ್ಯ ವಾಹಾನ್ ವ್ಯಹನತ್ ಚತುರ್ಭಿಶ್ಚ ಕ್ಷುರೇಣ ತು ।
ಸಾರಥೇಶ್ಚ ಶಿರಃ ಕಾಯಾದಪಾಹರದರಿಂದಮಃ ॥೭೬॥

ಅನಂತರ ಅರ್ಜುನನು ಕರ್ಣನ ನಾಲ್ಕು ಅಶ್ವಗಳನ್ನು ನಾಲ್ಕು ಕ್ಷುರ (ಸಣ್ಣ ಬಾಣ) ಗಳಿಂದ ಕೊಂದು ಅರಿಂದಮನಾದ ಅವನು ಸಾರಥಿಯ ಶಿರಸ್ಸನ್ನು ದೇಹದಿಂದ ಬೇರ್ಪಡಿಸಿದನು ಮತ್ತು ಕರ್ಣನ ಕೈಯಲ್ಲಿದ್ದ ಧನುಸ್ಸನ್ನು ಅರ್ಧಚಂದ್ರದಿಂದ ಕತ್ತರಿಸಿದನು.

ತಸ್ಮಿನ್ ವಿದ್ಧೇ ಮಹಾಭಾಗ ಕರ್ಣೇ ಸರ್ವಾಸ್ತ್ರಪಾರಗೇ ।
ಹತಾಶ್ವಸೂತೇ ವಿರಥೇ ತತೋಽನೀಕಮಭಜ್ಯತ ॥೭೭॥

ಎಲೈ ಮಹಾಭಾಗನೇ ಸರ್ವಾಸ್ತ್ರಪಾರಂಗತನಾದ ಆ ಕರ್ಣನು ಹಾಗೆ ಪ್ರಹಾರಕ್ಕೆ ಒಳಗಾಗಿ ಅಶ್ವಗಳನ್ನೂ, ಸೂತನನ್ನೂ ಮತ್ತು ರಥವನ್ನೂ ಕಳೆದುಕೊಳ್ಳುತ್ತಿರಲು ಆ ಸೈನ್ಯವು ಭಗ್ನವಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಷಟ್‌ಪಂಚಾಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಏಕೋನಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಆದಾಯ ಗಾಂಡೀವಮಥ ಧ್ವಜಂ ಚ
ಹನೂಮದಂಕಂ ಸದರೋಽಗ್ರತೋ ಗಾಃ ।
ನಿವರ್ತ್ಯ ಯುದ್ಧಾಯ ಯಯೌ ಕುರೂಂಸ್ತಾನ್
ಜಿಗ್ಯೇ ಸರ್ವಾನ್ ದ್ವೈರಥೇನೈವ ಸಕ್ತಾನ್ ॥೪೩॥

ಅರ್ಜುನ ತನ್ನ ದಿವ್ಯರಥವನ್ನೇರಿ ಹನುಮಂತನ ಚಿಹ್ನೆ ಉಳ್ಳ ಧ್ವಜವನ್ನೂ ಗಾಂಡೀವವನ್ನೂ ಸ್ವೀಕರಿಸಿ ಶಂಖವನ್ನು ಹಿಡಿದು ಮೊದಲಿಗೆ ಗೋವುಗಳನ್ನು ಹಿಂದೆ ಕಳಿಸಿ ದ್ವಂದ್ವರಥಯುದ್ಧದಲ್ಲಿ ತೊಡಗಿದ ಕೌರವರನ್ನೆಲ್ಲ ಪರಾಭವಗೊಳಿಸಿದನು.

★ ★ ★ ★

ಐವತ್ತೇಳನೆಯ ಅಧ್ಯಾಯ

ಅರ್ಜುನನಿಂದ ಪರಾಜಿತನಾದ ಕರ್ಣನ ಪಲಾಯನ.

ವೈಶಂಪಾಯನಃ

ತತ್ ಪ್ರಭಗ್ನಂ ಬಲಂ ಸರ್ವಂ ವಿಪುಲೌಘಬಲಂ ತಥಾ ।
ಭೀಷ್ಮಮಾಸಾದ್ಯ ಸಂತಸ್ಥೌ ವೇಲಾಮಿವ ಮಹೋದಧಿಃ ॥೧॥

ವೈಶಂಪಾಯನ– ವಿಪುಲವಾದ ಸಾಮೂಹಿಕ ಬಲವಿದ್ದರೂ ಚದುರಿ ಹೋದ ಆ ಎಲ್ಲಾ ಸೈನ್ಯವು ಭೀಷ್ಮರನ್ನು ಸಮೀಪಿಸಿ ತೀರವನ್ನು ಸಮೀಪಿಸಿ ಸಮುದ್ರವು ನಿಂತಂತೆ ನಿಂತುಕೊಂಡಿತು.

ತಾನಿ ಸರ್ವಾಣಿ ಗಾಂಗೇಯಃ ಸಮಾಶ್ವಾಸ್ಯ ಪರಂತಪಃ ।
ತತೋ ವ್ಯೂಹ್ಯ ಮಹಾಬಾಹುಃ ಸಮರೇಷ್ವಪರಾಜಿತಃ ॥೨॥

ರಥನಾಗಾಶ್ವಕಲಿಲಂ ಯುಯುಧೇ ಯುದ್ಧಕೋವಿದಃ ।
ಅಭೇದ್ಯಂ ಪರಸೈನ್ಯಾನಾಂ ಶೂರೈರಭಿಸಮೀಕ್ಷಿತಮ್ ॥೩॥

ಪರಂತಪರೂ, ಮಹಾಬಾಹುವೂ, ಯುದ್ಧದಲ್ಲಿ ಅಪರಾಜಿತರೂ ಆದ ಭೀಷ್ಮರು ಅವರನ್ನೆಲ್ಲಾ ಸಮಾಧಾನಪಡಿಸಿ ವ್ಯೂಹವನ್ನು ರಚಿಸಿ ರಥಗಜಾಶ್ವಗಳಿಂದ ತುಂಬಿದ್ದ ಪರಸೈನ್ಯಗಳಿಂದ ಅಭೇದ್ಯವಾದ, ಶೂರರಿಂದ ಚೆನ್ನಾಗಿ ನೋಡಿಕೊಳ್ಳಲ್ಪಟ್ಟ ತಮ್ಮ ಸೈನ್ಯವನ್ನು (ಯುದ್ಧಕ್ಕೆ ಅಣಿಮಾಡಿ) ಯುದ್ಧ ಕೋವಿದರಾದ ಅವರು ಯುದ್ಧವನ್ನು ಮಾಡಿದರು.

ಆಚಾರ್ಯದುರ್ಯೋಧನಸೂತಪುತ್ರೈಃ
ಕೃಪೇಣ ಭೀಷ್ಮೇಣ ಚ ಪಾಲಿತಾನಿ ।
ಅವಧ್ಯಕಲ್ಪಾನಿ ದುರಾಸದಾನಿ
ನರಾಶ್ವಮಾತಂಗರಥಾಕುಲಾನಿ ॥೪॥

ತೇಷಾಮನೀಕಾನಿ ಕಿರೀಟಮಾಲೀ
ವ್ಯೂಢಾನಿ ದೃಷ್ಟ್ವಾ ವಿಪುಲಧ್ವಜಾನಿ ।

ಗಾಂಡೀವಧನ್ವಾ ದ್ವಿಷತಾಂ ನಿಹಂತಾ
ವೈರಾಟಿಮಾಮಂತ್ರ್ಯ ತದಾऽಭ್ಯುವಾಚ ॥೫॥

ದ್ರೋಣ, ಭೀಷ್ಮ, ಕರ್ಣಪುತ್ರರು, ಕೃಪ ಮತ್ತು ದುರ್ಯೋಧನನಿಂದ ರಕ್ಷಿತವಾದ, ಸಮೀಪಿಸಲೂ ಕಷ್ಟಸಾಧ್ಯವಾದ ಅವಧ್ಯ ಪ್ರಾಯವಾದ ಪದಾತಿಗಳೂ, ಅಶ್ವಗಳೂ, ಗಜಗಳೂ ಮತ್ತು ರಥಗಳಿಂದ ತುಂಬಿದ ವ್ಯೂಹವಾಗಿ ರಚಿಸಲ್ಪಟ್ಟ ವಿಪುಲಧ್ವಜಗಳಿಂದ ಕೂಡಿದ ಆ ಸೈನ್ಯವನ್ನು ನೋಡಿ ಕಿರೀಟಮಾಲಿಯೂ, ಗಾಂಡೀವಧನುರ್ಧಾರಿಯೂ, ಶತ್ರುಗಳ ಹಂತಕನೂ ಆದ ಅರ್ಜುನನು ಉತ್ತರನನ್ನು ಆಮಂತ್ರಿಸಿ ಆಗ ಮಾತನಾಡಿದನು.

ಸುಸಂಗೃಹೀತೈರಥ ರಶ್ಮಿಭಿಸ್ತ್ವಂ
ಹಯಾನ್ ನಿಯಮ್ಯ ಪ್ರಸಮೀಕ್ಷ್ಯ ಯಾತ್ನಾತ್ ।
ಸಂಪ್ರೇಷಯಾಶು ಪ್ರತಿವೀರಮೇನಂ
ವೈಕರ್ತನಂ ಯೋಧಯಿತುಂ ವೃಣೋಮಿ ॥೬॥

ಅಶ್ವಗಳ ಕಡಿವಾಣಗಳನ್ನು ಚೆನ್ನಾಗಿ ಹಿಡಿದು ಅಶ್ವಗಳನ್ನು ನಿಯಂತ್ರಿಸಿ ಮುಂದಿನ ಮಾರ್ಗವನ್ನು ಪ್ರಯತ್ನಪೂರ್ವಕವಾಗಿ ನೋಡಿ ಪ್ರತಿವೀರನಾದ ಕರ್ಣನ ಬಳಿಗೆ ಶೀಘ್ರವಾಗಿ ರಥವನ್ನು ತೆಗೆದುಕೊಂಡು ಹೋಗು. ಯುದ್ಧವನ್ನು ಮಾಡಲು ಕರ್ಣನನ್ನು ಪ್ರತಿಯೋಧನಾಗಿ ಆರಿಸುತ್ತೇನೆ.

ಯಾಂ ಹಸ್ತಿಕಕ್ಷಾಂ ಬಹುಧಾ ವಿಚಿತ್ರಾಂ
ಸ್ತಂಭೇ ರಥೇ ಪಶ್ಯಸಿ ದರ್ಶನೀಯಾಮ್ ।
ವಿವರ್ಧಮಾನಜ್ವಲನಪ್ರಕಾಶಂ
ವೈಕರ್ತನಸ್ಯೈತದನೀಕಮಗ್ರ್ಯಮ್ ॥೭॥

ಯಾವ ರಥದ ಧ್ವಜದಲ್ಲಿ ವಿಚಿತ್ರವಾದ ಮತ್ತು ಸುಂದರವಾದ ಮತ್ತು ಅನೇಕ ಆಕಾರಗಳನ್ನು ತಳೆದ ಗಜದ ಕಕ್ಷೆಗಳನ್ನು ನೋಡುತ್ತೀಯೋ ಅಂತಹ ಅಭಿವೃದ್ಧಿಗೊಳ್ಳುವ ಅಗ್ನಿಯಂತೆ ಪ್ರಕಾಶಿಸುವ ಈ ಶ್ರೇಷ್ಠವಾದ ಸೈನ್ಯವು ಕರ್ಣನಿಗೆ ಸೇರಿದುದು.

ಏತೇನ ಶೀಘ್ರಂ ಪ್ರತಿಪಾದಯೇಮಾನ್
ಶ್ವೇತಾನ್ ಹಯಾನ್ ಕಾಂಚನಜಾಲಕಕ್ಷ್ಯಾನ್ ।
ಸರ್ವಂ ಜವಂ ತತ್ರ ನಿದರ್ಶಯ ತ್ವಮ್
ಆಸಾದಯೈತದ್ ರಥವೀರವೃಂದಮ್ ॥೮॥

ಈ ನನ್ನ ಸುವರ್ಣಮಯವಾದ ಕಕ್ಷಗಳಿಂದ ಮತ್ತು ಜಾಲಗಳಿಂದ ಅಲಂಕೃತವಾದ ಶ್ವೇತಾಶ್ವಗಳನ್ನು ಶೀಘ್ರವಾಗಿ ಆ ಕರ್ಣನ ಜೊತೆಯಲ್ಲಿ ಸೇರಿಸು. ನಿನ್ನ ಎಲ್ಲಾ ವೇಗವನ್ನೂ ಅಲ್ಲಿ ತೋರಿಸುವವನಾಗು. ಈ ರಥವೀರರ ಸಮೂಹವನ್ನು ತಲುಪುವವನಾಗು.

ಗಜೋ ಗಜೇನೇವ ಹಿ ಯೋದ್ಧುಕಾಮೋ
ಮಯಾ ಸದಾ ಕಾಂಕ್ಷತಿ ಸೂತಪುತ್ರಃ ।
ತಮೇವ ಮಾಂ ಪ್ರಾಪಯ ರಾಜಪುತ್ರ
ದುರ್ಯೋಧನಾಪಾಶ್ರಯಜಾತದರ್ಪಮ್ ॥೯॥

ತಂ ಪಾತಯಿಷ್ಯಾಮಿ ರಥಸ್ಯ ಮಧ್ಯೇ
ಸಹಸ್ರನೇತ್ರೋಽಶನಿನೇವ ವೃತ್ರಮ್ ॥೧೦॥

ಗಜವು ಗಜದ ಜೊತೆ ಯುದ್ಧವನ್ನು ಮಾಡಲು ಬಯಸಿದಂತೆ, ಸೂತಪುತ್ರನು ನನ್ನ ಜೊತೆ ಯುದ್ಧವನ್ನು ಮಾಡಲು ಸದಾ ಬಯಸುತ್ತಾನೆ. ಎಲೈ ರಾಜಪುತ್ರನೇ, ದುರ್ಯೋಧನನನ್ನು ಆಶ್ರಯಿಸಿರುವುದರಿಂದ ದರ್ಪಿಷ್ಠನಾದ ಅವನ ಬಳಿಗೇ ನನ್ನ ರಥವನ್ನು ತೆಗೆದುಕೊಂಡು ಹೋಗು. ಸಹಸ್ರನೇತ್ರನಾದ ಇಂದ್ರನು ವಜ್ರಾಯುಧದಿಂದ ವೃತ್ರನನ್ನು ಕೆಡವಿದಂತೆ ರಥಮಧ್ಯದಲ್ಲಿ ಕರ್ಣನನ್ನು ನಾನು ಕೆಡವುವೆನು.

ವೈಶಂಪಾಯನಃ

ಸ ತೈರ್ಹಯೈರ್ಜಾತಜವೈರ್ಬೃಹದ್ಭಿಃ
ಪುತ್ರೋ ವಿರಾಟಸ್ಯ ಹಿರಣ್ಯಕಕ್ಷ್ಯೈಃ ।
ವಿಧ್ವಂಸಯಂಸ್ತದ್ರಥಿನಾಮನೀಕಂ
ತತೋಽವಹತ್ ಪಾಂಡವಮಾಜಿಮಧ್ಯೇ ॥೧೧॥

ವೈಶಂಪಾಯನ– ವಿರಾಟನ ಪುತ್ರನಾದ ಉತ್ತರನು ಹಿರಣ್ಯಕಕ್ಷಗಳಿಂದ ಕೂಡಿದ, ವೇಗವನ್ನು ಸಂಪಾದಿಸಿದ, ದೊಡ್ಡದಾದ ಅಶ್ವಗಳಿಂದ ಕೂಡಿದ ಆ ರಥವನ್ನು ಶತ್ರುಪಕ್ಷದ ರಥಿಕರ ಸೈನ್ಯವನ್ನು ನಾಶಗೊಳಿಸುತ್ತಾ ಮುಂದೆ ನಡೆಸಿ ರಣರಂಗದ ಮಧ್ಯದಲ್ಲಿ ಅರ್ಜುನನನ್ನು ಕರೆದುಕೊಂಡು ಹೋದನು.

ತಮಾಪತಂತಂ ಪರಮೇಣ ತೇಜಸಾ
ಸಮೀಕ್ಷ್ಯ ವೈಕರ್ತನಮಭ್ಯರಕ್ಷನ್ ।
ಅಭ್ಯದ್ರವಂತೋ ರಥವೀರವೃಂದಾ
ವ್ಯಾಘ್ರೇಣ ಚಾಕ್ರಾಂತಮಿವರ್ಷಭಂ ರಣೇ ॥೧೨॥

ತೀವ್ರವಾದ ತೇಜಸ್ಸಿನಿಂದ ಮುಂದೆ ಬರುತ್ತಿರುವ ಅರ್ಜುನನನ್ನು ನೋಡಿ ವ್ಯಾಘ್ರದಿಂದ ಆಕ್ರಮಿಸಲ್ಪಟ್ಟ ವೃಷಭದಂತೆ (ಇರುವ ಕರ್ಣನನ್ನು ನೋಡಿ) ಆ ರಥವೀರರ ಸಮೂಹಗಳು ಯುದ್ಧದಲ್ಲಿ ಕರ್ಣನ ಬಳಿಗೆ ಓಡಿಬಂದವು.

ಚಿತ್ರಾಂಗದಶ್ಚಿತ್ರರಥಶ್ಚ ವೀರಃ
ಸಂಗ್ರಾಮಜಿದ್ ದುಃಸಹಚಿತ್ರಸೇನೌ ।
ವಿವಿಂಶತಿರ್ದುರ್ಮುಖದುರ್ಜಯೌ ಚ
ವಿಕರ್ಣದುಃಶಾಸನಸೌಬಲಾಶ್ಚ ॥೧೩॥

ಶೋಣೋ ನಿಷಾದಶ್ಚ ಸಮನ್ವಯುಸ್ತೇ
ವೈಕರ್ತನಂ ಪಾರ್ಥಗತಂ ಸಮೀಕ್ಷ್ಯ ॥೧೪॥

ಕರ್ಣನು ಪಾರ್ಥನ ಕೈಗೆ ಸಿಲುಕುತ್ತಿರುವುದನ್ನು ನೋಡಿ ಚಿತ್ರಾಂಗದ, ವೀರನಾದ ಚಿತ್ರರಥ, ಸಂಗ್ರಾಮಜಿದ್, ದುಃಸಹ, ಚಿತ್ರಸೇನ, ವಿವಿಂಶತಿ, ದುರ್ಮುಖ, ದುರ್ಜಯ, ವಿಕರ್ಣ, ದುಃಶಾಸನ, ಶಕುನಿ, ಶೋಣ, ಏಕಲವ್ಯ ಎಲ್ಲರೂ ಕರ್ಣನ ಸಮೀಪಕ್ಕೆ ಬಂದರು.

ಪುತ್ರಾ ಯಯುಸ್ತೇ ಸಹ ಸೋದರಾಶ್ಚ
ವೈಕರ್ತನಂ ಪಾರ್ಥಗತಂ ಸಮೀಕ್ಷ್ಯ ।
ಪ್ರಗೃಹ್ಯ ಚಾಪಾನಿ ಮಹಾಬಲಾ ರಣೇ
ಧನಂಜಯಂ ಪರ್ಯಕಿರನ್ ಶರಾರ್ಚಿಭಿಃ ॥೧೫॥

ಕರ್ಣನು ಪಾರ್ಥನಿಗೆ ಸಮೀಪವಾಗುತ್ತಿರುವುದನ್ನು ನೋಡಿ ಮಹಾಬಲರಾದ ಕರ್ಣನ ಪುತ್ರರೂ ಮತ್ತು ಸಹೋದರರು ಧನುಸ್ಸುಗಳನ್ನು ಹಿಡಿದು ಯುದ್ಧದಲ್ಲಿ ಶರಜ್ವಾಲೆಗಳಿಂದ ಅರ್ಜುನನ ಮೇಲೆ ಮಳೆಗರೆದರು.

ತೇಷಾಂ ಧನುರ್ಜ್ಯಾಕೃತನೈಕತಂತ್ರೀಂ
ಪ್ರಾಸೋಪವೀಣಾಂ ಶರಸಂಘಕೋಣಾಮ್ ।
ಕರಾಗ್ರಯಂತ್ರಾಂ ಸ್ಥಿರಚಾಪದಂಡಾಂ
ವೀಣಾಮುಪಾವಾದಯದಾಶು ಪಾರ್ಥಃ ॥೧೬॥

ಧನುಸ್ಸಿನ ಹೆದೆಗಳೇ ಅನೇಕ ತಂತಿಗಳಾಗಿ ಉಳ್ಳ, ಪ್ರಾಸಗಳೇ ಉಪವೀಣೆಯಾಗಿರುವ, ಶರಸಂಘಗಳೇ ವೀಣಾವಾದಕ ದಂಡಗಳಾಗಿ ಹೊಂದಿರುವ, ಹಸ್ತಾಗ್ರಗಳೇ ಯಂತ್ರಗಳಾಗಿರುವ, ದೃಢವಾದ ಬಿಲ್ಲುಗಳೇ ದಂಡವಾಗಿರುವ, ಶತ್ರುಗಳ ವೀಣೆಯನ್ನು ಅರ್ಜುನನು ಶೀಘ್ರವಾಗಿ ನುಡಿಸಿದನು.

ತಸ್ಮಿಂಸ್ತು ಯುದ್ಧೇ ತುಮುಲೇ ಪ್ರವೃತ್ತೇ
ಪಾರ್ಥಂ ವಿಕರ್ಣೋಽತಿರಥಂ ರಥೇನ ।
ವಿಪಾಠವರ್ಷೇಣ ಕುರುಪ್ರವೀರೋ
ಭೀಮೇನ ಭೀಮಾನುಜಮಾಸಸಾದ ॥೧೭॥

ತೀವ್ರವಾದ ಆ ಯುದ್ಧವು ಜರುಗುತ್ತಿರಲು ಕುರುಪ್ರವೀರನಾದ ವಿಕರ್ಣನು ರಥದಲ್ಲಿ ಕುಳಿತು ಭಯಂಕರವಾಗಿ ವಿಪಾಠವರ್ಷಗಳಿಂದ ಭೀಮನ ತಮ್ಮನಾದ ಅರ್ಜುನನನ್ನು ಸಮೀಪಿಸಿದನು.

ತತೋ ವಿಕರ್ಣಸ್ಯ ಧನುರ್ನಿಕೃತ್ಯ
ಜಾಂಬೂನದೇನೋಪಹಿತಂ ದೃಢಜ್ಯಮ್ ।
ನ್ಯಪಾತಯತ್ ತದ್ ಧ್ವಜಮಸ್ಯ ವಿದ್ಧ್ವಾ
ಭಿನ್ನಧ್ವಜಃ ಸೋಽಪ್ಯಪಯಾಜ್ಜವೇನ ॥೧೮॥

ಆಗ ಅರ್ಜುನನು ಸುವರ್ಣದಿಂದ ಪರಿವೃತವಾದ ದೃಢವಾದ ಹೆದೆಯನ್ನು ಹೊಂದಿದ್ದ ವಿಕರ್ಣನ ಧನುಸ್ಸನ್ನು ಕತ್ತರಿಸಿ ಕೆಡವಿದನು. ಅವನ ರಥದ ಧ್ವಜವನ್ನೂ

ಹೊಡೆದು ಉರುಳಿಸಿದನು. ಧ್ವಜವನ್ನು ಕಳೆದುಕೊಂಡ ವಿಕರ್ಣನು ಶೀಘ್ರವಾಗಿ ಯುದ್ಧದಿಂದ ಅಪಯಾನವನ್ನು ಮಾಡಿದನು.

ತಂ ಶಾತ್ರವಾಣಾಂ ವೈರಮಮೃಷ್ಯಮಾಣಃ
ಸಮರ್ದಯತ್ ಶರವರ್ಷೇಣ ಪಾರ್ಥಮ್ ।
ಸ ತೇನ ರಾಜ್ಞಾತಿರಥೇನ ವಿದ್ಧೋ
ವಿಗಾಹಮಾನೋ ಧ್ವಜಿನೀಂ ಪರೇಷಾಮ್ ॥೧೯॥

(ಅವನು ಪುನಃ ಚೇತರಿಸಿಕೊಂಡು) ಶತ್ರುಗಳ ವೈರವನ್ನು ಸಹಿಸದೆ ಅರ್ಜುನನನ್ನು ಬಾಣಗಳ ಮಳೆಯಿಂದ ಹಿಂಸಿಸಿದನು. ಶತ್ರುಸೈನ್ಯವನ್ನು ಪ್ರವೇಶಿಸುತ್ತಿದ್ದ ಅವನು ಅತಿರಥನಾದ ಶೋಭಿಸುತ್ತಿದ್ದ ಅರ್ಜುನನಿಂದ ಹೊಡೆಯಲ್ಪಟ್ಟನು.

ತತಃ ಸ ವಿದ್ಧೋ ಭರತರ್ಷಭೇಣ
ಬಾಣೇನ ಕಾಯಾವರಣಾತಿಗೇನ ।
ಗತಾಸುರಾಜೌ ನಿಪಪಾತ ರಾಜನ್
ನಗೋ ನಗಾಗ್ರಾದಿವ ವಾತವೃಕ್ಷಃ ॥೨೦॥

ಎಲೈ ರಾಜನೇ, ಆಗ ಭರತರ್ಷಭನಾದ ಅರ್ಜುನನಿಂದ ಕವಚವನ್ನು ಭೇದಿಸುವ ಬಾಣದಿಂದ ಹೊಡೆಯಲ್ಪಟ್ಟ ಅವನು ಮೂರ್ಛೆಯನ್ನು ಹೊಂದಿ ಪರ್ವತದ ಮೇಲಿನಿಂದ ಬಿರುಗಾಳಿಗೆ ಸಿಕ್ಕಿ ಬೀಳುವ ವೃಕ್ಷದಂತೆ ಬಿದ್ದನು.

ರಥರ್ಷಭಾಸ್ತೇ ತು ರಥರ್ಷಭೇಣ
ವೀರಾ ರಣೇ ವೀರತರೇಣ ಭಗ್ನಾಃ ।
ಚಕಂಪಿರೇ ವಾತವಶೇನ ಕಾಲೇ
ಪ್ರಕಂಪಿತಾನೀವ ಮಹಾವನಾನಿ ॥೨೧॥

ಕೌರವರ ರಥಶ್ರೇಷ್ಠರೆಲ್ಲರೂ ಅವರಿಗಿಂತಲೂ ವೀರನಾದ ರಥಶ್ರೇಷ್ಠನಾದ ಅರ್ಜುನನಿಂದ ಯುದ್ಧದಲ್ಲಿ ಭಗ್ನರಾಗಿ ಬಿರುಗಾಳಿಗೆ ಸಿಕ್ಕಿದ ಮಹಾವನಗಳಂತೆ ನಡುಗಿ ಹೋದರು.

ಹತಾಶ್ಚ ಪಾರ್ಥೇನ ನರಪ್ರವೀರಾ
ಭೂಮೌ ಯುವಾನಃ ಸುಷುಪುಃ ಸುವೇಷಾಃ ।
ವಸುಪ್ರದಾ ವಾಸವತುಲ್ಯವೀರ್ಯಾಃ
ಪರಾಜಿತಾ ವಾಸವಜೇನ ಸಂಖೇ ॥೨೨॥

ಸುವರ್ಣಕಾರ್ಷ್ಣಾಯಸವರ್ಮನದ್ಧಾ
ನಾಗಾ ಯಥಾ ಹೈಮವತಾ ಪ್ರವೃದ್ಧಾಃ ॥೨೩॥

ಅರ್ಜುನನಿಂದ ಬಾಣಗಳಿಂದ ಹೊಡೆಯಲ್ಪಟ್ಟ ಯುವಕರು, ಒಳ್ಳೆಯ ವೇಷವನ್ನು ಧರಿಸಿದವರು, ವಸುಪ್ರದರು, ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವರು ಆದ ನರಶ್ರೇಷ್ಠರು ಯುದ್ಧದಲ್ಲಿ ಪರಾಜಿತರಾಗಿ, ಸುವರ್ಣಮಯವಾದ ಮತ್ತು ಅಯೋಮಯವಾದ ಕವಚಗಳನ್ನು ಧರಿಸಿದ್ದ ಆ ನರಶ್ರೇಷ್ಠರು ಹಿಮಾಲಯದಲ್ಲಿ ಪುಷ್ಪವಾಗಿ ಬೆಳೆದ ಗಜದಂತೆ ಭೂಮಿಯ ಮೇಲೆ ಮಲಗಿದರು.

ತಥಾ ಸಪತ್ನಾನ್ ಸಮರೇ ವಿನಿಘ್ನನ್
ಗಾಂಡೀವಧನ್ವಾ ಪುರುಷಪ್ರವೀರಃ ।
ಚಚಾರ ಸಂಖೇ ವಿದಿಶೋ ದಿಶಶ್ಚ
ದಹನ್ನಿವಾಗ್ನಿರ್ವನಮಾತಪಾಂತೇ ॥೨೪॥

ಆ ರೀತಿಯಲ್ಲಿ ಶತ್ರುಗಳನ್ನು ಯುದ್ಧದಲ್ಲಿ ಸಂಹರಿಸುತ್ತಾ ಪುರುಷಪ್ರವೀರನಾದ ಅರ್ಜುನನು ಬೇಸಿಗೆಯ ಕೊನೆಯಲ್ಲಿ ವನವನ್ನು ಸುಡುವ ಅಗ್ನಿಯಂತೆ ದಿಕ್ಕು ದಿಕ್ಕುಗಳಲ್ಲಿ ರಣಭೂಮಿಯಲ್ಲಿ ಸಂಚರಿಸಿದನು.

ಸುಜೀರ್ಣಪರ್ಣಾನಿ ಯಥಾ ವಸಂತೇ
ವಿಶಾತಯಿತ್ವಾ ಪವನೋऽಂಬುದಾನ್ ಖೇ ।
ತಥಾ ಸಪತ್ನಾನ್ ವಿಕಿರನ್ ಕಿರೀಟೀ
ಚಚಾರ ಸಂಖೇऽತಿರಥೋ ರಥೇನ ॥೨೫॥

ವಸಂತ ಮಾಸದಲ್ಲಿ ವಾಯುವು ಆಕಾಶದಲ್ಲಿ ಮೋಡಗಳನ್ನು ನಾಶಮಾಡಿದಂತೆ ಅಥವಾ ಒಣಗಿದ ಎಲೆಗಳನ್ನು ನಾಶಮಾಡುವಂತೆ ಶತ್ರುಗಳನ್ನು ನಾಶ ಮಾಡುತ್ತಾ

ಅತಿರಥನಾದ ಅರ್ಜುನನು ಬಾಣಗಳ ಮಳೆಯನ್ನು ಸುರಿಸುತ್ತಾ ತನ್ನ ರಥದಲ್ಲಿ ರಣರಂಗದಲ್ಲಿ ಸಂಚರಿಸಿದನು.

ಶೋಣಾಶ್ವವಾಹಸ್ಯ ಹಯಾನ್ ನಿಹತ್ಯ
ವೈಕರ್ತನಭ್ರಾತುರದೀನಸತ್ವಃ ।
ಏಕೇನ ಸಂಗ್ರಾಮಜಿತಃ ಶರೇಣ
ಶಿರೋ ಜಹಾರಾಥ ಕಿರೀಟಮಾಲೀ ॥೨೬॥

ಅದೀನ ಪರಾಕ್ರಮಿಯಾದ, ಕಿರೀಟಮಾಲಿಯಾದ ಅರ್ಜುನನು ಕರ್ಣನ ತಮ್ಮನಾದ ಶೋಣಾಶ್ವವಾಹನ ಅಶ್ವಗಳನ್ನು ಸಂಹರಿಸಿ ಒಂದು ಬಾಣದಿಂದ ಸಂಗ್ರಾಮಜಿತನ ಶಿರಸ್ಸನ್ನು ಅಪಹರಿಸಿದನು.

ತಸ್ಮಿನ್ ಹತೇ ಭ್ರಾತರಿ ಸೂತಪುತ್ರೋ
ವೈಕರ್ತನೋ ವೀರ್ಯಮದಪ್ರತಾಪೀ ।
ಪ್ರಗೃಹ್ಯ ದಂತಾವಿವ ನಾಗರಾಜೋ
ಮಹಾಬಲಂ ಸಿಂಹಮಿವಾಜಗಾಮ ॥೨೭॥

ತನ್ನ ತಮ್ಮನಾದ ಶೋಣಾಶ್ವವಾಹನು ಮರಣವನ್ನು ಹೊಂದುತ್ತಿರಲು ವೀರ್ಯ ಮತ್ತು ಮದದಿಂದ ಪ್ರತಾಪಶಾಲಿಯಾಗಿದ್ದ ಕರ್ಣನು ಗಜರಾಜನು ತಮ್ಮ ದಂತವನ್ನು ಎತ್ತಿಕೊಂಡು ಮಹಾಬಲಿಷ್ಠವಾದ ಸಿಂಹದ ಕಡೆ ಬರುವಂತೆ ಅರ್ಜುನನ ಕಡೆಗೆ ಬಂದನು.

ಸ ಪಾಂಡವಂ ದ್ವಾದಶಭಿಃ ಪೃಷತ್ಕೈಃ
ವೈಕರ್ತನಃ ಶೀಘ್ರಮುಪಾಜಗಾಮ ।
ವಿವ್ಯಾಧ ಗಾತ್ರೇಷು ಹಯಾಂಶ್ಚ ಸರ್ವಾನ್
ವಿರಾಟಪುತ್ರಂ ಚ ಶರೈರ್ನಿಜಘ್ನೇ ॥೨೮॥

ಆ ಕರ್ಣನು ಅರ್ಜುನನ ಮೇಲೆ ಹನ್ನೆರಡು ಬಾಣಗಳನ್ನು ಪ್ರಯೋಗಿಸುತ್ತಾ ಶೀಘ್ರವಾಗಿ ಮುಂದೆ ಬಂದನು. ಅವನು ಅರ್ಜುನನ ಕುದುರೆಗಳ ಸರ್ವ ಶರೀರದಲ್ಲಿಯೂ ಮತ್ತು ವಿರಾಟನ ಪುತ್ರನ ಮೇಲೆಯೂ ಬಾಣಗಳನ್ನು ಪ್ರಯೋಗಿಸಿದನು.

ತಮಾಪತಂತಂ ಸಮರೇ ಕಿರೀಟೀ
ವೈಕರ್ತನಂ ಸರ್ವಸಮೃದ್ಧತೇಜಾಃ ।
ಪ್ರಾಚ್ಛಾದಯಾಮಾಸ ಮಹಾಧನುಷ್ಮಾನ್
ಅವೇಧಯಚ್ಚತ್ರುಗಣಾಂಶ್ಚ ವೀರಃ ॥೨೯॥

ತನ್ನ ಮೇಲೆ ಯುದ್ಧದಲ್ಲಿ ಎರಗಿಬರುತ್ತಿರುವ ಕರ್ಣನನ್ನು ನೋಡಿ ಸಂಪೂರ್ಣನಾದ ತೇಜಸ್ಸನ್ನು ಪಡೆದಿದ್ದ ವೀರನಾದ, ಮಹಾಧನುರ್ಧಾರಿಯಾದ ಅರ್ಜುನನು ಕರ್ಣನನ್ನೂ ಮತ್ತು ಶತ್ರುಸಮೂಹಗಳನ್ನೂ ಬಾಣಗಳ ಮಳೆಯಿಂದ ಮುಚ್ಚಿದನು.

ನಿಹತ್ಯ ಕರ್ಣಸ್ಯ ತಥಾ ಕಿರೀಟೀ
ಪುರಸ್ಸರಾಂಶ್ಚಾಪಿ ಚ ಪೃಷ್ಠಗೋಪಾನ್ ।
ಪ್ರತೀಪಮಭ್ಯಾಗಮದಪ್ರಮೇಯೋ
ವಿತತ್ಯ ಪಕ್ಷೌ ಗರುಡೋ ಯಥಾಹಿಮ್ ॥೩೦॥

ಅರ್ಜುನನು ಕರ್ಣನ ಮುಂದೆ ಇರುವ ಯೋಧರನ್ನೂ ಮತ್ತು ಹಿಂದೆ ಇದ್ದ ರಕ್ಷಕ ಯೋಧರನ್ನೂ ಕೊಂದು ಗರುಡನು ಪಕ್ಷಗಳನ್ನು ಹರಡಿ ಸರ್ಪವನ್ನು ಕೊಲ್ಲುವಂತೆ ಅಪ್ರಮೇಯನಾದ ಅವನು ಕರ್ಣನಿಗೆ ಪ್ರತೀಕಾರವನ್ನು ಮಾಡಿದನು.

ತಾವುತ್ತಮೌ ಸರ್ವಧನುರ್ಧರಾಣಾಂ
ಮಹಾಬಲೌ ಸರ್ವಸಪತ್ನಸಾಹೌ ।
ಕರ್ಣಂ ಚ ಪಾರ್ಥಂ ಚ ನಿಶಾಮ್ಯ ಯುದ್ಧಂ
ದಿದೃಕ್ಷಮಾಣಾಃ ಕುರವೋಽಭಿತಸ್ಥುಃ ॥೩೧॥

ಸರ್ವಧನುರ್ಧಾರಿಗಳಲ್ಲಿ ಶ್ರೇಷ್ಠರಾದ ಮಹಾಬಲರಾದ ಶತ್ರುಗಳ ಸರ್ವವೇಗವನ್ನೂ ಸಹಿಸುವ ಕರ್ಣನನ್ನೂ, ಅರ್ಜುನನನ್ನೂ ಮತ್ತು ಅವರ ಯುದ್ಧವನ್ನೂ ನೋಡಲು ಬಯಸಿ ಕೌರವರು ಸುಮ್ಮನೆ ನಿಂತರು.

ತಂ ಪಾಂಡವಃ ಸ್ಪಷ್ಟಮುದೀರ್ಣಕೋಪಃ
ಕೃತಾಗಸಂ ಕರ್ಣಮುದೀಕ್ಷ್ಯ ಕೋಪಾತ್ ।
ಕ್ಷಣೇನ ಸಾಶ್ವಂ ಸರಥಂ ಸಸೂತಮ್
ಅಂತರ್ದಧೇ ಮೇಘ ಇವಾಂಬುವೃಷ್ಟ್ಯಾ ॥೩೨॥

ಸ್ಪಷ್ಟವಾಗಿ ವ್ಯಕ್ತವಾದ ಕೋಪವುಳ್ಳ ಅರ್ಜುನನು ಅಪರಾಧವನ್ನು ಮಾಡಿದ ಕರ್ಣನನ್ನು ನೋಡಿ ಕೋಪದಿಂದ ಒಂದು ಕ್ಷಣದಲ್ಲಿ ಅವನ ಅಶ್ವಗಳನ್ನೂ, ರಥವನ್ನೂ ಮತ್ತು ಸೂತನನ್ನೂ ಮೋಡವು ಮಳೆಯಿಂದ ಎಲ್ಲವನ್ನೂ ಮುಚ್ಚುವಂತೆ ಎಲ್ಲರನ್ನೂ ಮುಚ್ಚಿದನು.

ತತಃ ಸಯುಗ್ಯಾಃ ಸರಥಾಃ ಸನಾಗಾ
ಯೋಧಾ ವಿನೇದುರ್ಭರತರ್ಷಭಾಣಾಮ್ ।
ಅಂತರ್ಹಿತಂ ಭೀಷ್ಮಮುಖಾಃ ಸಮೀಕ್ಷ್ಯ
ಕಿರೀಟಿನಾ ಕರ್ಣರಥಂ ಪೃಷತ್ಕೈಃ ॥೩೩॥

ಅರ್ಜುನನ ಬಾಣಗಳಿಂದ ಕರ್ಣನ ರಥವು ಅಂತರ್ಧಾನ ಹೊಂದಿದುದನ್ನು (ಮರೆಯಾದುದನ್ನು) ಭೀಷ್ಮ ಮೊದಲಾದವರೆಲ್ಲರೂ ನೋಡಿ ಅಶ್ವಗಳನ್ನು ಹೂಡಿದ ರಥಗಳಿಂದ ಸಹಿತರಾದ, ಗಜಗಳಿಂದ ಸಹಿತರಾದ, ಕೌರವಯೋಧರೆಲ್ಲರೂ ಮಹಾನಾದವನ್ನು ಮಾಡಿದರು.

ಸ ಚಾಪಿ ತಾನರ್ಜುನಚಾಪಮುಕ್ತಾನ್
ಶರಾನ್ ಶರೌಘೈಃ ಪ್ರತಿಹತ್ಯ ತೂರ್ಣಮ್ ।
ಬಭೌ ಮಹಾತ್ಮಾ ಸಧನುಃ ಸಬಾಣಃ
ಸವಿಷ್ಫುಲಿಂಗೋಽಗ್ನಿರಿವಾಥ ಕರ್ಣಃ ॥೩೪॥

ಆ ಮಹಾತ್ಮನಾದ ಕರ್ಣನೂ ಸಹ ಅರ್ಜುನನ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳನ್ನು ಶೀಘ್ರವಾಗಿ ತನ್ನ ಬಾಣಗಳ ಪ್ರವಾಹದಿಂದ ಸಂಹರಿಸಿ ಧನುಸ್ಸು ಮತ್ತು ಬಾಣಗಳನ್ನು ಹಿಡಿದು ಕಿಡಿಗಳಿಂದ ಸಹಿತನಾದ ಅಗ್ನಿಯಂತೆ ಶೋಭಿಸಿದನು.

ತತಸ್ತು ಜಜ್ಞೇ ತಳತಾಳಘೋಷಃ
ಸಶಂಖಭೇರೀಪಣವಾಕುಲಶ್ಚ ।
ಪ್ರಕ್ಷ್ವೇಲಿತಾಸ್ಫೋಟಿತಸಿಂಹನಾದ್ಯೈಃ
ವೈಕರ್ತನಂ ಪೂಜಯತಾಂ ಕುರೂಣಾಮ್ ॥೩೫॥

ಆಗ ಕರ್ಣನನ್ನು ಪೂಜಿಸುವ ಕೌರವರಿಂದ ಚಪ್ಪಾಳೆಗಳೂ, ತಾಳಗಳ ಘೋಷವೂ, ಶಂಖಭೇರೀಪಣವಗಳ ಘೋಷಗಳೂ, ಸಿಂಹನಾದಗಳೂ, ಅಟ್ಟಹಾಸಗಳೂ, ಆಸ್ಫೋಟಗಳೂ ಉಂಟಾದವು.

ಆಧೂತಲಾಂಗೂಲಮಹಾಪತಾಕಂ
ರಥೋತ್ತಮಂ ಶ್ರೇಷ್ಠತಮಂ ಕುರೂಣಾಮ್ ।
ಗಾಂಡೀವನಿರ್ಹ್ರಾದಕೃತಪ್ರಣಾದಂ
ಕಿರೀಟಿನಂ ಪ್ರೇಕ್ಷ್ಯ ನನಾದ ಕರ್ಣಃ ॥೩೬॥

ಚಲಿಸುವ ಲಾಂಗೂಲವೆಂಬ ಮಹಾಪತಾಕೆಯುಳ್ಳ, ಗಾಂಡೀವ ಘೋಷದಿಂದ ಮಹಾನಾದಗಳನ್ನು ಮಾಡುತ್ತಿದ್ದ ಕಪಿಯಿಂದ ಕೂಡಿದ ಧ್ವಜವುಳ್ಳ ರಥವನ್ನು ಹೊಂದಿದ್ದ ಪಾಂಡವರಲ್ಲಿ ಶ್ರೇಷ್ಠತಮನಾದ, ರಥೋತ್ತಮನಾದ ಅರ್ಜುನನನ್ನು ನೋಡಿ ಕರ್ಣನು ನಾದವನ್ನು ಮಾಡಿದನು (ಗರ್ಜಿಸಿದನು).

ಪಾರ್ಥೋಽಪಿ ವೈಕರ್ತನಮರ್ದಯಿತ್ವಾ
ಸಾಶ್ವಂ ಸಸೂತಂ ಸರಥಂ ಸಕೇತುಮ್ ।
ನನಾದ ಹರ್ಷಾತ್ ಸಹಸಾ ಕಿರೀಟೀ
ಪಿತಾಮಹಂ ದ್ರೋಣಕೃಪೌ ಚ ದೃಷ್ಟ್ವಾ ॥೩೭॥

ಅರ್ಜುನನೂ ಸಹ ಅಶ್ವ, ರಥ, ಸೂತ, ಧ್ವಜಗಳಿಂದ ಸಹಿತನಾದ ಕರ್ಣನನ್ನು ಮರ್ದಿಸಿ ಭೀಷ್ಮರನ್ನೂ, ದ್ರೋಣಕೃಪರನ್ನೂ ನೋಡಿ ಸಂತೋಷದಿಂದ ಅವನೂ ಸಹ ನಾದವನ್ನು ಮಾಡಿದನು (ಕೇಕೆ ಹಾಕಿದನು).

ಸಿಷೇಚ ಪಾರ್ಥಂ ಬಹುಭಿಃ ಶರೌಘೈಃ
ವೈಕರ್ತನಃ ಸಂಯತಿ ತೀಕ್ಷ್ಣವೇಗೈಃ ।
ವೈಕರ್ತನಂ ಚಾಪಿ ಕಿರೀಟಮಾಲೀ
ಪ್ರಚ್ಛಾದಯಾಮಾಸ ಶಿತೈಃ ಶರೌಘೈಃ ॥೩೮॥

ಕರ್ಣನು ಯುದ್ಧದಲ್ಲಿ ತೀಕ್ಷ್ಣವೇಗವುಳ್ಳ ಅನೇಕ ಬಾಣಗಳ ಸಮೂಹದಿಂದ ಅರ್ಜುನನಿಗೆ ಅಭಿಷೇಕ ಮಾಡಿದನು. ಕಿರೀಟಮಾಲಿಯಾದ ಅರ್ಜುನನೂ ಸಹ ಕರ್ಣನನ್ನು ನಿಶಿತವಾದ ಬಾಣಗಳ ಸಮೂಹದಿಂದ ಮುಚ್ಚಿಹಾಕಿದನು.

ತಯೋರಮೋಘಾನ್ ಸಹತೋಃ ಶರೌಘಾನ್
ಅಸಜ್ಜತೋರಾಸ ಮಹಾನ್ ವಿಮರ್ದಃ ।
ರಾಹುಪ್ರಮುಕ್ತಾವಿವ ಚಂದ್ರಸೂರ್ಯೌ
ಕ್ಷಣಾಂತರೇಣಾನುದದರ್ಶ ಲೋಕಃ ॥೫೯॥

ಪರಸ್ಪರ ಬಾಣಸಮೂಹಗಳನ್ನು ಸಹಿಸುವ ಅಸಜ್ಜರಾದ ಅವರಿಬ್ಬರಿಗೆ ದೊಡ್ಡ ಸಂಘರ್ಷವು ಉಂಟಾಯಿತು. ಎಲ್ಲ ಯೋಧರೂ ಒಂದು ಕ್ಷಣದಲ್ಲಿ ರಾಹುವಿನ ಮುಖದಿಂದ ಮುಕ್ತರಾದ ಚಂದ್ರ-ಸೂರ್ಯರಂತಿರುವ ಅವರನ್ನು ನೋಡಿದರು.

ಹತಾಸ್ತು ಪಾರ್ಥೇನ ನರಪ್ರವೀರಾ
ಭೂಮೌ ಶಯಾನಾಃ ಸುಮುಖಾಃ ಸುಕೇಶಾಃ ।
ಸುವರ್ಣಲೋಹಾಯಸವರ್ಮಗಾತ್ರಾ
ವೃಕ್ಣಾ ಯಥಾ ಹೈಮವತಾ ನಿಕೃತ್ತಾಃ ॥೬೦॥

ಅರ್ಜುನನಿಂದ ಹೊಡೆಯಲ್ಪಟ್ಟ ಒಳ್ಳೆಯ ಮುಖ ಮತ್ತು ಕೇಶಗಳುಳ್ಳ ಸುವರ್ಣ ಕವಚಗಳಿಂದಲೂ, ಲೋಹಕವಚಗಳಿಂದಲೂ ಆವೃತವಾದ ಶರೀರವುಳ್ಳ ನರಶ್ರೇಷ್ಠರು ಹಿಮಾಲಯದ ಬಿರುಗಾಳಿಯಿಂದ ಉರುಳಿದ ಮರಗಳಂತೆ ಭೂಮಿಯಲ್ಲಿ ಮಲಗಿದರು.

ತಥಾ ಸ ಶತ್ರೂನ್ ಸಮರೇ ವಿನಿಘ್ನನ್
ಗಾಂಡೀವಧನ್ವಾ ವ್ಯಧಮತ್ ಸಪತ್ನಾನ್ ।
ಚಚಾರ ಸಂಖೇ ವಿದಿಶೋ ದಿಶಶ್ಚ
ದಹನ್ನಿವಾಗ್ನಿರ್ವನಮಾತಪಾಂತೇ ॥೬೧॥

ಗಾಂಡೀವ ಧನುರ್ಧಾರಿಯಾದ ಅರ್ಜುನನು ಆ ರೀತಿಯಲ್ಲಿ ಯುದ್ಧದಲ್ಲಿ ಶತ್ರುಗಳನ್ನು ವಧೆಮಾಡುತ್ತಾ ಶತ್ರುಸೈನ್ಯವನ್ನು ಚದುರಿಸಿದನು. ಬೇಸಿಗೆಯ ಕೊನೆಯಲ್ಲಿ ಅಗ್ನಿಯು ವನವನ್ನು ಸುಡುವಂತೆ ಅವನು ರಣರಂಗದಲ್ಲಿ ದಿಕ್ಕುವಿದಿಕ್ಕುಗಳಲ್ಲಿ ಎಲ್ಲ ಕಡೆಗಳಲ್ಲಿಯೂ ಸಂಚರಿಸಿದನು.

ಪ್ರಕೀರ್ಣಪರ್ಣಾನಿ ಯಥಾ ವಸಂತೇ
ವಿಧೂನಯನ್ ವಾಯುರಿವಾಲ್ಪಸಾರಾನ್ ।
ತಥಾ ಸಪತ್ನಾನ್ ವ್ಯಧಮತ್ ಕಿರೀಟೀ
ಚಚಾರ ಸಂಖೇಽತಿರಥೋ ರಥೇನ ॥೪೨॥

ವಸಂತ ಮಾಸದಲ್ಲಿ ವಾಯುವು ಅಲ್ಪಬಲವುಳ್ಳ, ನೆಲದ ಮೇಲೆ ಬಿದ್ದ ಎಲೆಗಳನ್ನು ಹಾರಿಸುವಂತೆ ಅತಿರಥನಾದ ಅರ್ಜುನನು ರಥದಿಂದ ಸಂಚರಿಸುತ್ತಾ ಶತ್ರುಗಳನ್ನು ಚದುರಿಸಿದನು.

ಶತ್ರೂನಿವೇಂದ್ರಃ ಸಮರೇ ಕಿರೀಟೀ
ವಿದ್ರಾವಯಂಸ್ತದ್ ರಥಸಿಂಹವೃಂದಮ್ ।
ಪ್ರಾಚ್ಛಾದಯತ್ ಸರ್ವಮಧಿಜ್ಯಧನ್ವಾ
ವರೇಷುಭಿಃ ಶತ್ರುಗಣಾನನೇಕಾನ್ ॥೪೩॥

ಉವಾಚ ಕರ್ಣಂ ಸ ಕಿರೀಟಮಾಲೀ
ಶೂರಃ ಕುರೂಣಾಂ ಪ್ರವರೋಽಭಿಗರ್ಜನ್ ॥೪೪॥

ಇಂದ್ರನು ಯುದ್ಧದಲ್ಲಿ ಶತ್ರುಗಳನ್ನು ಓಡಿಸಿದಂತೆ ಅರ್ಜುನನು ಆ ರಥಸಿಂಹರ ಸಮೂಹಗಳನ್ನು ಓಡಿಸುತ್ತಾ ಹೆದೆ ಏರಿಸಿದ ಧನುಸ್ಸನ್ನು ಹಿಡಿದ ಅವನು ಶ್ರೇಷ್ಠವಾದ ಬಾಣಗಳಿಂದ ಶತ್ರುಸಮೂಹಗಳೆಲ್ಲವನ್ನೂ ಮುಚ್ಚಿಹಾಕಿದನು ಮತ್ತು ಕಿರೀಟಮಾಲಿಯೂ ಶೂರನೂ, ಕೌರವರಲ್ಲಿ ಶ್ರೇಷ್ಠನೂ ಆದ ಅವನು ಗರ್ಜನೆ ಮಾಡುತ್ತಾ ಕರ್ಣನನ್ನು ಕುರಿತು ಮಾತನಾಡಿದನು.

ಕರ್ಣ ಯತ್ ತ್ವಂ ಸಭಾಮಧ್ಯೇ ಬಹ್ವಬದ್ಧಂ ವಿಕತ್ಥಸೇ ।
ನ ಮೇ ಯುಧಿ ಸಮೋಸ್ತೀತಿ ತದಿದಂ ಪ್ರತ್ಯುಪಸ್ಥಿತಮ್ ॥೪೫॥

ಸಭೆಯ ಮಧ್ಯದಲ್ಲಿ ನೀನು ಯುದ್ಧದಲ್ಲಿ ನನಗೆ ಸಮಾನನಾದವನು ಇಲ್ಲವೆಂದು ಬಹಳ ಅಬದ್ಧವಾಗಿ ಹೊಗಳಿಕೊಳ್ಳುವಿಯಷ್ಟೆ! ಅದರ ಪರೀಕ್ಷೆಯ ಕಾಲವು ಬಂದೊದಗಿದೆ.

ಸಭಾಯಾಂ ಪೌರುಷಂ ಪ್ರೋಚ್ಯ ಧರ್ಮಮುತ್ಸೃಜ್ಯ ಕೇವಲಮ್ ।
ಕರ್ತುಮರ್ಹತಿ ಯತ್ ಕರ್ಮ ತನ್ಮನ್ಯೇ ದುಷ್ಕರಂ ತ್ವಯಾ ॥೪೬॥

ಧರ್ಮವನ್ನು ತ್ಯಜಿಸಿ ಸಭೆಯಲ್ಲಿ ಪೌರುಷದ ಮಾತುಗಳನ್ನು ಆಡುವ ನೀನು ಅಂತಹ ಕರ್ಮವನ್ನು ಈಗ ಮಾಡಬೇಕಾಗಿದೆ. ಅದು ನಿನ್ನಿಂದ ಅಸಾಧ್ಯವಾದುದು ಎಂದು ನನ್ನ ಅಭಿಪ್ರಾಯ.

ಯತ್ ತ್ವಯಾ ಕಥಿತಂ ಪೂರ್ವಂ ನಾಸ್ತಿ ಮತ್ಸಮ ಇತ್ಯಪಿ ।
ತತ್ ಸತ್ಯಂ ಕುರು ರಾಧೇಯ ಕುರುಮಧ್ಯೇ ಮಯಾ ಸಹ ॥೪೭॥

ಎಲೈ ಕರ್ಣನೇ, ನೀನು ಹಿಂದೆ ನನಗೆ ಸಮನಾದವರು ಇಲ್ಲವೆಂದು ಹೇಳಿದ್ದಿಯಷ್ಟೆ! ಅದನ್ನು ಕುರುಗಳ ಮಧ್ಯದಲ್ಲಿ ನನ್ನ ಜೊತೆಯಲ್ಲಿ ಸತ್ಯವನ್ನಾಗಿ ಮಾಡು.

ಯತ್ ಸಭಾಯಾಂ ಸ್ಮ ಪಾಂಚಾಲೀಂ ಕ್ಲಿಶ್ಯಮಾನಾಂ ತಥಾ ತ್ವಯಾ ।
ದೃಷ್ಟವಾನಸ್ಮಿ ತಸ್ಯಾದ್ಯ ಫಲಮಶ್ನುಹಿ ದುರ್ಮತೇ ॥೪೮॥

ಸಭೆಯಲ್ಲಿ ದ್ರೌಪದಿಯು ಕ್ಲೇಶವನ್ನು ಪಡುತ್ತಿರುವಾಗ ನೀನು ಆಡಿದ ಮಾತುಗಳನ್ನು ಕೇಳಿದ್ದೆನಷ್ಟೆ! ಎಲೈ ದುರ್ಮತಿಯೇ, ಅದರ ಫಲವನ್ನು ಈ ದಿನ ಅನುಭವಿಸುವವನಾಗು.

ಧರ್ಮಪಾಶನಿಬದ್ಧೇನ ಯನ್ಮಯಾ ಮರ್ಷಿತಂ ತವ ।
ತಸ್ಯ ಪಾಪಸ್ಯ ರಾಧೇಯ ಫಲಂ ಪ್ರಾಪ್ನುಹಿ ದುರ್ಮತೇ ॥೪೯॥

ಎಲೈ ರಾಧಾಪುತ್ರನೇ, ಧರ್ಮಪಾಶನಿಬದ್ಧನಾದ ನಾನು ನಿನ್ನ ದುರ್ನಡತೆಯನ್ನು ಸಹಿಸಿದೆನು. ಎಲೈ ದುರ್ಮತಿಯೇ, ಆ ಪಾಪದ ಫಲವನ್ನು ಈಗ ಅನುಭವಿಸು.

ಏಹಿ ಕರ್ಣ ಮಯಾ ಸಾರ್ಧಮಿಹಾದ್ಯ ಕುರು ವೈಶಸಮ್ ।
ಪ್ರೇಕ್ಷಕಾಃ ಕುರವಃ ಸಂತು ಸರ್ವೇ ತೇ ಸಹಸೈನಿಕಾಃ ॥೫೦॥

ಎಲೈ ಕರ್ಣನೇ, ಬಾ. ಈಗ ಇಲ್ಲಿ ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡು. ಕೌರವರು ಮತ್ತು ಎಲ್ಲ ಸೈನಿಕರೂ ಪ್ರೇಕ್ಷಕರಾಗಲಿ.

ಇದಾನೀಮೇವ ತಾವತ್ ತ್ವಮಪಯಾತೋ ರಣಾನ್ಮಮ ।
ಕಸ್ಮಾಜ್ಜೀವಸಿ ರಾಧೇಯ ನಿಹತಸ್ಯ ನುಜಸ್ತವ ॥೫೧॥

ಈಗ ತಾನೇ ನೀನು ನನ್ನನ್ನು ಬಿಟ್ಟು ಯುದ್ಧಭೂಮಿಯಿಂದ ಓಡಿಹೋಗಿದ್ದೆ. ಎಲೈ ಕರ್ಣನೇ, ಏಕೆ ಬದುಕಿದ್ದೀಯೆ? ನಿನ್ನ ತಮ್ಮನನ್ನು (ನಿನ್ನೆದುರಿಗೇ) ಕೊಂದಿದ್ದೇನೆ.

ಯೋ ಭ್ರಾತರಂ ಪಾತಯಿತ್ವಾ ಕಸ್ಯಕ್ತ್ವಾ ಚ ರಣಾಜಿರಮ್ ।
ತ್ವದನ್ಯಃ ಪುರುಷಃ ಸತ್ಸು ಬ್ರೂಯಾದೇವಂ ವ್ಯವಸ್ಥಿತಃ ॥೫೨॥

ನಿನ್ನನ್ನು ಬಿಟ್ಟು ಯಾವನು ತಾನೇ ತಮ್ಮನನ್ನು ಯುದ್ಧದಲ್ಲಿ ಕೆಡವಿಸಿ ರಣರಂಗವನ್ನು ಬಿಟ್ಟು ಓಡಿಹೋಗಿ ಸಜ್ಜನರಲ್ಲಿ ಈ ರೀತಿಯಲ್ಲಿ ಮಾತನಾಡಲು ಸಿದ್ಧನಾಗಿರುತ್ತಾನೆ?

ಕರ್ಣಃ

ಬ್ರವೀಷಿ ವಾಚಾ ಯತ್ ಪಾರ್ಥ ಕರ್ಮಣಾ ತತ್ ಸಮಾಚರ ।
ವಿಶೇಷಿತೋ ಹಿ ತ್ವಂ ವಾಚಾ ನ ಕರ್ಮಾಪ್ರತಿಮಂ ಭುವಿ ॥೫೩॥

ಕರ್ಣ– ಎಲೈ ಅರ್ಜುನನೇ, ಮಾತಿನಿಂದ ಏನನ್ನು ಆಡುತ್ತಿದ್ದೀಯೋ ಅದನ್ನು ಕಾರ್ಯದಿಂದ ಮಾಡು. ನೀನು ಮಾತಿನಿಂದ ಮಾತ್ರ ಅತಿಶಯವನ್ನು ಹೊಂದಿದವನಾಗಿದ್ದೀಯೆ. ಭೂಮಿಯಲ್ಲಿ ನಿನ್ನ ಅಸದೃಶವಾದ ಕರ್ಮವು ಯಾವುದೂ ಇಲ್ಲ.

ಯತ್ ತ್ವಯಾ ಮರ್ಷಿತಂ ಪೂರ್ವಂ ತದಶಕ್ತೇನ ಮರ್ಷಿತಮ್ ।
ಇತಿ ಗೃಹ್ಣೀಮ ತೇ ಪಾರ್ಥ ತಮದೃಷ್ಟ್ವಾ ಪರಾಕ್ರಮಮ್ ॥೫೪॥

ಎಲೈ ಪಾರ್ಥನೇ, ನಿನ್ನ ಪರಾಕ್ರಮವನ್ನು ನಾವು ನೋಡದಿರುವುದರಿಂದ ನೀನು ಹಿಂದೆ ಏನು ಸಹಿಸಿಕೊಂಡಿದ್ದಿಯೋ ಅದು ಅಶಕ್ತಿಯಿಂದ ಸಹಿಸಿಕೊಂಡದ್ದು ಎಂದು ನಾವು ಭಾವಿಸುತ್ತೇವೆ.

ಧರ್ಮಪಾಶನಿಬದ್ಧೇನ ಯತ್ ತ್ವಯಾ ಮರ್ಷಿತಂ ಪುರಾ ।
ತಥೈವ ಬದ್ಧಮಾತ್ಮಾನಮಬದ್ಧ ಇತಿ ಮನ್ಯಸೇ ॥೫೫॥

ಧರ್ಮಪಾಶದ ನಿಬದ್ಧನಾಗಿ ನೀನು ಹೇಗೆ ಹಿಂದೆ ಸಹಿಸಿದೆಯೋ ಅದೇ ಧರ್ಮಪಾಶಬದ್ಧನಾಗಿದ್ದರೂ ಈ ದಿನ ನೀನು ಬದ್ಧನಲ್ಲವೆಂದು ತಿಳಿದಿದ್ದೀಯೆ.

ನ ಹಿ ತಾವದ್ ವನೇ ವಾಸೋ ಯಥೋಕ್ತಂ ಚರಿತಸ್ತ್ವಯಾ ।
ಕ್ಲಿಷ್ಟಸ್ತ್ವಮರ್ಥಲೋಭಾದ್ಧಿ ಸಮಯಂ ಛೇತ್ತುಮರ್ಹಸಿ ॥೫೬॥

ಏಕೆಂದರೆ ನೀವು ಪ್ರತಿಜ್ಞೆ ಮಾಡಿದಂತೆ ಕ್ಲೇಶಕರವಾದ ವನವಾಸವು ನಿಮ್ಮಿಂದ ಆಚರಿಸಲ್ಪಟ್ಟಿಲ್ಲ. ರಾಜ್ಯಲೋಭದಿಂದ ನೀನು ಮಾಡಿದ ಪ್ರತಿಜ್ಞೆಯನ್ನು ಮುರಿಯಲು ಬಯಸುತ್ತಿದ್ದೀಯೆ.

ಯದಿ ಚೇಂದ್ರಃ ಸ್ವಯಂ ಪಾರ್ಥ ತವ ಯುದ್ಧ್ಯೇತ ಕಾರಣಾತ್ ।
ತಥಾऽಪಿ ನ ವ್ಯಥಾ ಕಾಚಿನ್ಮಮ ಸ್ಯಾದ್ ವಿಕ್ರಮಿಷ್ಯತಃ ॥೫೭॥

ಎಲೈ ಪಾರ್ಥನೇ, ನಿನ್ನ ಸಲುವಾಗಿ ಇಂದ್ರನೇ ಸ್ವಯಂ ಯುದ್ಧವನ್ನು ಮಾಡಿದರೂ ಪರಾಕ್ರಮವನ್ನು ತೋರಿಸುವ ನನಗೆ ಯಾವ ವ್ಯಥೆಯೂ ಇಲ್ಲ.

ಅಯಂ ಕೌಂತೇಯ ಕಾಮಸ್ತೇ ನಚಿರಾತ್ ಸಮುಪಸ್ಥಿತಃ ।
ಯೋತ್ಸ್ಯಸೇ ಹಿ ಮಯಾ ಸಾರ್ಧಮನುಪಶ್ಯಸಿ ಮೇ ಬಲಮ್ ॥೫೮॥

ಎಲೈ ಕೌಂತೇಯನೇ, ನೀನು ಬಹಳ ಕಾಲದಿಂದ ಹೊಂದಿದ್ದ ಆಸೆಯು ಇಂದು ನೆರವೇರಿದೆ. ನೀನು ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡುವಿ ಮತ್ತು ನೀನು ನನ್ನ ಸಾಮರ್ಥ್ಯವನ್ನು ನೋಡುವಿ.

ವೈಶಂಪಾಯನಃ

ಇತಿ ಕರ್ಣೋ ಬ್ರುವನ್ನೇವ ಬೀಭತ್ಸುರಪರಾಜಿತಮ್ ।
ಅಭ್ಯಯಾದ್ ವಿಸೃಜನ್ ಬಾಣಾನ್ ಕಾಯಾವರಣಭೇದಿನಃ ॥೫೯॥

ಪ್ರತಿಜಗ್ರಾಹ ತಂ ಪಾರ್ಥಃ ಪ್ರೀಯಮಾಣೋ ಮಹಾರಥಃ ॥೬೦॥

ವೈಶಂಪಾಯನ– ಹೀಗೆ ಮಾತನಾಡುತ್ತಲೇ ಕರ್ಣನು ಅಪರಾಜಿತನಾದ ಅರ್ಜುನನ ಕಡೆಗೆ ದೇಹಾವರಣವಾದ ಕವಚಗಳನ್ನು ಭೇದಿಸುವ ಬಾಣಗಳನ್ನು

ಪ್ರಯೋಗಿಸುತ್ತಾ ಮುನ್ನುಗ್ಗಿದನು. ಸಂತೋಷದಿಂದ ಕೂಡಿದ ಮಹಾರಥನಾದ ಅರ್ಜುನನು ಅವನ ಆಹ್ವಾನವನ್ನು ಸ್ವೀಕರಿಸಿದನು.

ಶರವರ್ಷೇಣ ಮಹತಾ ಪರ್ಜನ್ಯ ಇವ ವೃಷ್ಟಿಮಾನ್ ।
ಅಭೀಯಾಯ ತು ಬೀಭತ್ಸುರ್ಗಾಂಡೀವಂ ವಿಕ್ಷಿಪನ್ ಧನುಃ ॥೬೧॥

ಪರ್ಜನ್ಯನು ಮಳೆಯನ್ನು ಸುರಿಸಿದಂತೆ ಅರ್ಜುನನು ದೊಡ್ಡ ಶರವರ್ಷವನ್ನು ಸುರಿಸುತ್ತಾ, ಗಾಂಡೀವ ಧನುಸ್ಸನ್ನು ಮೀಟುತ್ತಾ ಕರ್ಣನ ಎದುರಾಗಿ ಬಂದನು.

ಜಿಘಾಂಸುಃ ಸಮರೇ ಕರ್ಣಂ ವಿಸಸರ್ಜ ಶರಾನ್ ಬಹೂನ್ ।
ತಂ ಕರ್ಣಃ ಪ್ರತಿಜಗ್ರಾಹ ವಾಯುವೇಗಮಿವಾನಲಃ ॥೬೨॥

ಅರ್ಜುನನು ಯುದ್ಧದಲ್ಲಿ ಕರ್ಣನನ್ನು ಕೊಲ್ಲಲು ಬಯಸಿ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಪರ್ವತವು ವಾಯುವೇಗವನ್ನು ತಡೆದಂತೆ ಕರ್ಣನು ಅವುಗಳನ್ನು ತಡೆದನು.

ತಯೋರ್ದೇವಾಸುರಸಮಃ ಸನ್ನಿಪಾತೋऽಭವನ್ಮಹಾನ್ ।
ಕಿರತೋ ಶರಜಾಲಾನಿ ನಿರಂತರಮನಂತರಮ್ ॥೬೩॥

ನಿರಂತರವಾಗಿ ಒಬ್ಬರ ನಂತರ ಒಬ್ಬರು ಶರಸಮೂಹಗಳನ್ನು ಪ್ರಯೋಗಿಸುವ, ಅವರಿಬ್ಬರಿಗೂ ದೇವಾಸುರ ಸಂಗ್ರಾಮಕ್ಕೆ ಸಮವಾದ, ಮಹಾಸಂಘರ್ಷವು ಉಂಟಾಯಿತು.

ಉತ್ಪೇತುರ್ಮೇಘಜಾಲಾನಿ ಘೋರರೂಪಾಣಿ ಸರ್ವಶಃ ।
ವವರ್ಷ ಚ ರಜೋ ಭೌಮಂ ಕರ್ಣಪಾರ್ಥಸಮಾಗಮೇ ॥೬೪॥

ಯುದ್ಧದಲ್ಲಿ ಕರ್ಣ-ಪಾರ್ಥರ ಸಮಾಗಮದ ಸಮಯದಲ್ಲಿ ಘೋರವಾದ ಆಕಾರವನ್ನು ತಾಳಿದ ಮೋಡಗಳು ಎಲ್ಲ ಕಡೆಗಳಲ್ಲಿಯೂ ಮೇಲೆ ಬಂದವು. ಧೂಳಿನ ಮಳೆಯು ಸುರಿಯಿತು.

ನ ಸ್ಮ ಸೂರ್ಯಃ ಪ್ರತಪತಿ ನ ಚ ವಾತಿ ಸಮೀರಣಃ ।
ಶರಪ್ರಚ್ಛಾದಿತಂ ವ್ಯೋಮ ಛಾಯಾಭೂತಮಿವಾಭವತ್ ॥೬೫॥

ಸೂರ್ಯನು ಪ್ರಕಾಶಿಸಲಿಲ್ಲ. ವಾಯುವು ಬೀಸಲಿಲ್ಲ. ಬಾಣಗಳಿಂದ ಆಚ್ಛಾದಿತವಾದ ಆಕಾಶವು ನೆರಳಿನಂತೆ ಆಯಿತು.

ಗಾಂಡೀವಸ್ಯ ಚ ನಿಘೋರ್ಷಃ ಕರ್ಣಸ್ಯ ಧನುಷಸ್ತದಾ ।
ದಹ್ಯತಾಮಿವ ವೇಣೂನಾಮಾಸೀತ್ ಪರಮದಾರುಣಃ ॥೬೬॥

ಗಾಂಡೀವ ಧನುಸ್ಸಿನ ನಿಘೋರ್ಷ ಮತ್ತು ಕರ್ಣನ ಧನುಸ್ಸಿನ ನಿಘೋರ್ಷಗಳು ಉರಿಯುವ ಬಿದಿರುಗಳ ಶಬ್ದದಂತೆ ಪರಮದಾರುಣವಾಗಿದ್ದಿತು.

ಅರ್ಜುನಸ್ತು ಹಯಾನ್ ನಾಗಾನ್ ರಥಾಂಶ್ಚ ವಿನಿಪಾತಯನ್ ।
ಕ್ಷೋಭಯಾಮಾಸ ತತ್ ಸೈನ್ಯಂ ಕರ್ಣಂ ವಿವ್ಯಾಧ ಚಾಸಕೃತ್ ॥೬೭॥

ಅರ್ಜುನನು ಕರ್ಣನ ಅಶ್ವಗಳನ್ನೂ, ಗಜಗಳನ್ನೂ, ರಥಗಳನ್ನೂ ಹೊಡೆದುರುಳಿಸುತ್ತಾ ಕರ್ಣನ ಸೈನ್ಯವನ್ನು ತಡಕಾಡಿದನು. ಕರ್ಣನನ್ನೂ ಸಹ ಅನೇಕ ಬಾರಿ ಬಾಣಗಳಿಂದ ಹೊಡೆದನು.

ತತಃ ಪಾರ್ಥೋ ಮಹಾಬಾಹುಃ ಕರ್ಣಸ್ಯ ಧನುರಚ್ಛಿನತ್ ।
ಛಿನ್ನಧನ್ವಾ ತತಃ ಕರ್ಣಃ ಶಕ್ತಿಂ ಚಿಕ್ಷೇಪ ವೀರ್ಯವಾನ್ ॥೬೮॥

ಅನಂತರ ಮಹಾಬಾಹುವಾದ ಅರ್ಜುನನು ಕರ್ಣನ ಧನುಸ್ಸನ್ನು ಕತ್ತರಿಸಿದನು. ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ವೀರ್ಯವಂತನಾದ ಕರ್ಣನು ಅರ್ಜುನನ ಮೇಲೆ ಶಕ್ತಿಯನ್ನು ಎಸೆದನು.

ತಾಂ ಶಕ್ತಿಂ ಸಮರೇ ಪಾರ್ಥಃ ಚಿಚ್ಛೇದ ನಿಶಿತೈಃ ಶರೈಃ ॥೬೯॥

ಯುದ್ಧಭೂಮಿಯಲ್ಲಿ ಅರ್ಜುನನು ಆ ಶಕ್ತಿಯನ್ನು ಹರಿತವಾದ ಬಾಣಗಳಿಂದ ಕತ್ತರಿಸಿದನು.

ತತೋಽಭಿಪೇತುರ್ಬಹವೋ ರಾಧೇಯಸ್ಯ ಪದಾನುಗಾಃ ।
ತಾಂಶ್ಚ ಗಾಂಡೀವನಿರ್ಮುಕ್ತೈಃ ಪ್ರಾಹಿಣೋದ್ ಯಮಸಾದನಮ್ ॥

ಅನಂತರ ಕರ್ಣನ ಅನುಚರರಾದ ಅನೇಕರು ಅರ್ಜುನನ ಮೇಲೆ ಬಿದ್ದರು. ಅರ್ಜುನನು ಅವರನ್ನೂ ಸಹ ಗಾಂಡೀವ ನಿರ್ಮುಕ್ತವಾದ ಬಾಣಗಳಿಂದ ಯಮಲೋಕಕ್ಕೆ ಕಳುಹಿಸಿದನು.

ಅಶೇರತಾವೃತ್ಯ ಮಹೀಂ ಸಮಗ್ರಾಂ
ಪಾರ್ಥೇಷು ಮಾರ್ಗೇಷು ಮಹಾದ್ವಿಪೇಂದ್ರಾಃ ।
ಹಿರಣ್ಯಕಕ್ಷಾಃ ಶರಜಾಲಬದ್ಧಾ
ಯಥಾऽಚಲಾಃ ಪಾವಕಜಾಲನದ್ಧಾಃ ॥೭೧॥

ಅಗ್ನಿಗಳ ಸಮೂಹದಿಂದ ಕಟ್ಟಲ್ಪಟ್ಟ ಪರ್ವತಗಳಂತೆ ಅರ್ಜುನನ ಬಾಣ ಮಾರ್ಗಗಳಲ್ಲಿ ಹಿರಣ್ಯಕಕ್ಷಗಳನ್ನು ಹೊಂದಿದ್ದ ಶರಜಾಲಗಳಿಂದ ಬದ್ಧವಾದ ದೊಡ್ಡ ಆನೆಗಳು ಸಮಗ್ರವಾದ ಭೂಮಿಯನ್ನು ಆವರಿಸಿ ಮಲಗಿದವು.

ತಂ ಶತ್ರುಸೇನಾಂಗನಿಬರ್ಹಣಾನಿ
ಕರ್ಮಾಣಿ ಕುರ್ವಂತಮಮಾನುಷಾಣಿ ।
ವೈಕರ್ತನಃ ಪೂರ್ವಮಮೃಷ್ಯಮಾಣಃ
ಸಮರ್ಪಯಲ್ಲಕ್ಷ್ಯಮಿವಾಶು ದೂರಾತ್ ॥೭೨॥

ಶತ್ರುಸೇನೆಗಳ ಅಂಗಗಳನ್ನು ನಾಶಮಾಡುವ ಅಮಾನುಷ ಕರ್ಮಗಳನ್ನು ಮಾಡುವ ಅರ್ಜುನನ ಕರ್ಮಗಳನ್ನು ನೋಡಿ ತಾನು ಮೊದಲು ಅನುಭವಿಸಿದ ಸೋಲನ್ನು ಸಹಿಸದೆ ಕರ್ಣನು ದೂರದಿಂದಲೇ ಲಕ್ಷ್ಯನಾದ ಅರ್ಜುನನ ಮೇಲೆ ಶೀಘ್ರವಾಗಿ ಬಾಣಗಳನ್ನು ಪ್ರಯೋಗಿಸಿದನು.

ತತಶ್ಚತುರ್ಭಿಸ್ತುರಗಾನ್ ವಿಕೃಷ್ಯ
ವಿವ್ಯಾಧ ಕರ್ಣೋऽಥ ಧನಂಜಯಸ್ಯ ।
ಷಡ್ಭಿಶ್ಚ ಸೂತಂ ದಶಭೀ ರಥಂ ಚ
ಷಷ್ಟ್ಯಾ ಚ ಪಾರ್ಥಂ ತ್ರಿಭಿರಸ್ಯ ಕೇತುಮ್ ॥೭೩॥

ಆಗ ಕರ್ಣನು ಅರ್ಜುನನ ಕುದುರೆಗಳನ್ನು ನಾಲ್ಕು ಬಾಣಗಳಿಂದ ಹಿಂಸಿಸಿ ಆರು ಬಾಣಗಳಿಂದ ಸೂತನನ್ನೂ, ಹತ್ತುಬಾಣಗಳಿಂದ ರಥವನ್ನೂ, ಅರವತ್ತು ಬಾಣಗಳಿಂದ ಅರ್ಜುನನನ್ನೂ ಮತ್ತು ಮೂರು ಬಾಣಗಳಿಂದ ರಥದ ಧ್ವಜವನ್ನೂ ಹೊಡೆದನು.

ಸ ವಿಷ್ಫುಲಿಂಗೋಜ್ಜ್ವಲಭೀಮಘೋಷಃ
ಕೋಪೇಂಧನಃ ಕೇತುಶಿಖಿಃ ಶರಾರ್ಚಿಃ ।
ಕರ್ಣಾಗ್ನಿರಸ್ತ್ರಾನಿಲಭೀಮವೇಗೋ
ಬಭೌ ದಿಧಕ್ಷನ್ನಿವ ಪಾರ್ಥಕಕ್ಷಮ್ ॥೭೪॥

ಭಯಂಕರವಾದ ಘೋಷವೆಂಬ ಉಜ್ವಲವಾದ ಕಿಡಿಗಳನ್ನು ಹೊಂದಿದ, ಕೋಪವೆಂಬ ಇಂಧನವನ್ನು ಹೊಂದಿದ, ಪತಾಕೆಗಳೆಂಬ ಜ್ವಾಲೆಗಳನ್ನು ಹೊಂದಿದ, ಬಾಣಗಳೆಂಬ ಸಣ್ಣ ಜ್ವಾಲೆಗಳನ್ನು ಹೊಂದಿದ, ಅಸ್ತ್ರಗಳೆಂಬ ಭಯಂಕರ ವೇಗದಿಂದ ಕೂಡಿದ, ಕರ್ಣನೆಂಬ ಅಗ್ನಿಯು ಅರ್ಜುನನೆಂಬ ಹುಲ್ಲುಗಾವಲನ್ನು ಸುಡುವಂತೆ ಶೋಭಿಸುತ್ತಿದ್ದಿತು.

ಸ್ವನೇಮಿಶಂಖಿಸ್ವನಭೀಮಘೋಷಃ
ಚಲತ್‌ಪತಾಕೋಜ್ಜ್ವಲಭೀಮವಿದ್ಯುತ್ ।
ಪಾರ್ಥಾಂಬುದಃ ಶಾಸ್ತ್ರಶರಾಂಬುಧಾರಃ
ಕರ್ಣಾನಲಂ ಸಂಶಮಯಾಂಚಕಾರ ॥೭೫॥

ತನ್ನ ರಥನೇಮಿ, ಶಂಖಿಸ್ವನ ಮೊದಲಾದ ಭಯಂಕರ ಗುಡುಗನ್ನು ಹೊಂದಿದ, ಚಲಿಸುವ ಪತಾಕೆಗಳೆಂಬ ಉಜ್ವಲವಾದ ಭಯಂಕರವಾದ ಮಿಂಚುಗಳನ್ನು ಹೊಂದಿದ, ಶಸ್ತ್ರಮತ್ತು ಶರಗಳೆಂಬ ನೀರಿನ ಧಾರೆಗಳನ್ನು ಹೊಂದಿದ, ಪಾರ್ಥನೆಂಬ ಮೇಘವು ಕರ್ಣನೆಂಬ ಅಗ್ನಿಯನ್ನು ಶಾಂತಗೊಳಿಸಿತು.

ತೇನಾತಿವಿದ್ಧಃ ಸಮರೇ ಕಿರೀಟೀ
ಪ್ರಬೋಧಿತಃ ಸಿಂಹ ಇವ ಪ್ರಸುಪ್ತಃ ।
ಗಾಂಡೀವಧನ್ವಾ ಪ್ರವರಃ ಕುರೂಣಾಂ
ಪ್ರತತ್ವರೇ ಕರ್ಣವಧಾಯ ಜಿಷ್ಣುಃ ॥೭೬॥

ಯುದ್ಧದಲ್ಲಿ ಕರ್ಣನಿಂದ ಬಹಳವಾಗಿ ವಿದ್ಧನಾದ ಅರ್ಜುನನು ಮಲಗಿದ್ದ ಸಿಂಹವನ್ನು ಎಬ್ಬಿಸಿದಂತೆ ಕುರುಗಳ ಪ್ರವರನಾದ ಅವನು ಗಾಂಡೀವ ಧನುಸ್ಸನ್ನು ಹಿಡಿದು ಕರ್ಣನನ್ನು ವಧಿಸಲು ತ್ವರೆಮಾಡಿದನು.

ಸ ಬ್ರಾಹ್ಮಮಸ್ತ್ರಂ ಯುಧಿ ಸವ್ಯಸಾಚೀ
ಪ್ರಾದುಶ್ಚಕಾರಾದ್ಭುತವೀರ್ಯಕರ್ಮಾ ।
ಸಂತಾಪಯನ್ ಕರ್ಣರಥಂ ಶರೌಘೈಃ
ಲೋಕಾನಿಮಾನ್ ಸೂರ್ಯ ಇವಾಂಶುಮಾಲೀ ॥೭೭॥

ಯುದ್ಧದಲ್ಲಿ ಸವ್ಯಸಾಚಿಯಾದ, ಅದ್ಭುತ ಪರಾಕ್ರಮ ಮತ್ತು ಕರ್ಮಗಳನ್ನುಳ್ಳ ಅರ್ಜುನನು ಅಂಶುಮಾಲಿಯಾದ ಸೂರ್ಯನು ಈ ಲೋಕವನ್ನು ಸಂತಾಪ ಪಡಿಸುವಂತೆ ಕರ್ಣನ ರಥವನ್ನು ಬಾಣಗಳ ಸಮೂಹದಿಂದ ಸಂತಾಪಪಡಿಸುತ್ತಾ ಬ್ರಹ್ಮಾಸ್ತ್ರಗಳನ್ನು ಪ್ರಾದುರ್ಭಾವಗೊಳಿಸಿದನು.

ಸ ಹಸ್ತಿನೇವಾಭಿಹತೋ ಗಜೇಂದ್ರಃ
ಪ್ರಗೃಹ್ಯ ಭಲ್ಲಾನ್ ನಿಶಿತಾನ್ ನಿಷಂಗಾನ್ ।
ಆಕರ್ಣಪೂರ್ಣಂ ತು ಧನುರ್ವಿಕೃಷ್ಯ
ವಿವ್ಯಾಧ ಬಾಣೈರಥ ಸೂತಪುತ್ರಮ್ ॥೭೮॥

ಅವನು ಪ್ರತಿಗಜದಿಂದ ಅಭಿಹತವಾದ ಗಜೇಂದ್ರನಂತೆ ಹರಿತವಾದ ಭಲ್ಲಗಳನ್ನು ಬತ್ತಳಿಕೆಯಿಂದ ತೆಗೆದು ಕಿವಿಗಳವರೆಗೂ ಧನುಸ್ಸನ್ನು ಎಳೆದು ಸೂತಪುತ್ರನಾದ ಕರ್ಣನನ್ನು ಬಾಣಗಳಿಂದ ಹಿಂಸಿಸಿದನು (ಕರ್ಣನ ಮೇಲೆ ಬಾಣ ಪ್ರಯೋಗವನ್ನು ಮಾಡಿದನು).

ಅಥಾಸ್ಯ ಬಾಹೂ ಸಶಿರೋ ಲಲಾಟಂ
ಗ್ರೀವಾಮುರಃಸ್ಕಂಧಭುಜಾಂತರಂ ಚ ।
ಕರ್ಣಸ್ಯ ಪಾರ್ಥೋ ಯುಧಿ ನಿರ್ಬಿಭೇದ
ವಜ್ರೀವಾದ್ರಿಂ ಭಗವಾನ್ ಮಹೇಂದ್ರಃ ॥೭೯॥

ಅನಂತರ ಅರ್ಜುನನು ಪೂಜ್ಯನಾದ ಮಹೇಂದ್ರನು ವಜ್ರಾಯುಧದಿಂದ ಪರ್ವತವನ್ನು ಭೇದಿಸಿದಂತೆ ಕರ್ಣನ ಬಾಹುಗಳನ್ನೂ, ಶಿರಸ್ಸನ್ನೂ, ಲಲಾಟವನ್ನೂ, ವಕ್ಷಸ್ಥಲ, ಭುಜ ಮತ್ತು ಭುಜದ ಮಧ್ಯಪ್ರದೇಶಗಳನ್ನೂ ಭೇದಿಸಿದನು.

ಸ ಪಾರ್ಥಮುಕ್ತಾನವಿಷಹ್ಯ ಬಾಣಾನ್
ಗಜೋ ಗಜೇನೇವ ಜಿತಸ್ತರಸ್ವೀ ।

ವಿಹಾಯ ಸಂಗ್ರಾಮಶಿರೋಽಪಯಾತೋ
ವೈಕರ್ತನಃ ಪಾರ್ಥಶರಾಭಿತಪ್ತಃ ॥೮೦॥

ಕರ್ಣನು ಅರ್ಜುನನು ಪ್ರಯೋಗಿಸಿದ ಬಾಣಗಳನ್ನು ತಡೆಯಲಾಗದೆ ಶೀಘ್ರಗಾಮಿಯಾದ ಅವನು ಪ್ರತಿಗಜದಿಂದ ಸೋಲಿಸಲ್ಪಟ್ಟ ಗಜದಂತೆ ಯುದ್ಧ ಭೂಮಿಯನ್ನು ಬಿಟ್ಟು ಅರ್ಜುನನ ಬಾಣಗಳಿಂದ ಪೀಡಿತನಾಗಿ ಪಲಾಯನವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಸಪ್ತಪಂಚಾಶೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ಐವತ್ತೆಂಟನೆಯ ಅಧ್ಯಾಯ

ದ್ರೋಣಾರ್ಜುನರ ಯುದ್ಧ. ಅಶ್ವತ್ಥಾಮರ ಆಗಮನಾನಂತರದಲ್ಲಿ
ದ್ರೋಣರ ಅಪಯಾನ.

ವೈಶಂಪಾಯನಃ

ಜಿತಂ ವೈಕರ್ತನಂ ದೃಷ್ಟ್ವಾ ಪಾರ್ಥೋ ವೈರಾಟಿಮಬ್ರವೀತ್ ॥೧॥

ಸ್ಥಿರೋ ಭವ ತ್ವಂ ಸಂಗ್ರಾಮೇ ಜಯೋಽಸ್ಮಾಕಂ ನೃಪಾತ್ಮಜ ।
ಜಯಾಚ್ಛಂಖಮುಪಾಧ್ಮಾಸ್ಯೇ ದ್ವಿಷತಾಂ ಲೋಮಹರ್ಷಣಮ್ ॥೨॥

ಅವಿಕ್ಲಬ(ವ)ಮಸಂಭ್ರಾಂತಮವ್ಯಗ್ರಹೃದಯೇಕ್ಷಣಮ್ ।
ಯಾಹಿ ಶೀಘ್ರಂ ಯತೋ ದ್ರೋಣೋ ಮಮಾಚಾರ್ಯೋ ಮಹಾರಥಃ ॥

ವೈಶಂಪಾಯನ– ಕರ್ಣನು ಜಿತನಾದುದನ್ನು ನೋಡಿ ಅರ್ಜುನನು ಉತ್ತರನನ್ನು ಕುರಿತು ರಾಜಕುಮಾರನೇ, ನೀನು ಧೈರ್ಯದಿಂದಿರು. ಯುದ್ಧದಲ್ಲಿ ನಮಗೇ ಜಯವುಂಟಾಗುವುದು. ಜಯದಿಂದಾಗಿ ರೋಮಹರ್ಷಕರವಾದ ಶಂಖವನ್ನು

ಊದುವೆನು. ಗಾಬರಿಗೊಳ್ಳದೆ, ಮನಸ್ಸಿನಲ್ಲಿ ಸಂಭ್ರಾಂತನಾಗದೆ ಮನಸ್ಸು ಮತ್ತು ದೃಷ್ಟಿಯನ್ನು ಸರಿಯಾಗಿ ಇಟ್ಟುಕೊಂಡು ನನ್ನ ಗುರುಗಳಾದ ಮಹಾರಥರಾದ ದ್ರೋಣರು ಎಲ್ಲಿದ್ದಾರೆಯೋ ಅಲ್ಲಿಗೆ ಶೀಘ್ರವಾಗಿ ಹೋಗು ಎಂದು ಹೇಳಿದನು.

ತಥಾ ಸಂಕ್ರೀಡಮಾನಸ್ಯ ಹ್ಯರ್ಜುನಸ್ಯ ರಣಾಜಿರೇ ।
ಬಲಂ ಸತ್ವಂ ಚ ತೇಜಶ್ಚ ಲಾಘವಂ ಚಾಭ್ಯವರ್ಧತ ॥೪॥

ತಚ್ಚಾದ್ಭುತಮಭಿಪ್ರೇಕ್ಷ್ಯ ಭಯಮುತ್ತರಮಾವಿಶತ್ ॥೫॥

ಯುದ್ಧರಂಗದಲ್ಲಿ ಹಾಗೆ ಆಟವಾಡುತ್ತಿದ್ದ ಅರ್ಜುನನ ಬಲವೂ, ಧೈರ್ಯವೂ, ತೇಜಸ್ಸೂ ಮತ್ತು ವೇಗವೂ ಹೆಚ್ಚಿದವು. ಆ ಅದ್ಭುತವನ್ನು ನೋಡಿ ಉತ್ತರನಿಗೆ ಭಯವುಂಟಾಯಿತು.

ಉತ್ತರಃ

ಅಸ್ತ್ರಾಣಾಂ ತವ ದಿವ್ಯಾನಾಂ ಶರೌಘಾನ್ ಕ್ಷಿಪತಶ್ಚ ತೇ ।
ಮನೋ ಮೇ ಮುಹ್ಯತೇಽತ್ಯರ್ಥಂ ತವ ದೃಷ್ಟ್ವಾ ಪರಾಕ್ರಮಮ್ ॥

ಉತ್ತರ– ದಿವ್ಯಾಸ್ತ್ರಗಳನ್ನೂ ಮತ್ತು ಬಾಣಗಳನ್ನೂ ನೀನು ಪ್ರಯೋಗಿಸುವಾಗ ನಿನ್ನ ಪರಾಕ್ರಮವನ್ನು ನೋಡಿ ನನ್ನ ಮನಸ್ಸಿಗೆ ಬಹಳವಾಗಿ ಮೋಹವುಂಟಾಗುತ್ತಿದೆ.

ದ್ವೈಧೀಭೂತಂ ಮನೋ ಮಹ್ಯಂ ಭಯಾದ್ ಭರತಸತ್ತಮ ।
ಅದೃಷ್ಟಪೂರ್ವಂ ಪಶ್ಯಾಮಿ ತವ ಗಾಂಡೀವನಿಸ್ವನಮ್ ॥೭॥

ಭರತಸತ್ತಮನೇ, ಭಯದಿಂದ ನನ್ನ ಮನಸ್ಸು ಎರಡು ಹೋಳಾಗಿದೆ. ನಾನು ಹಿಂದೆ ಎಂದೂ ಕೇಳದಿದ್ದ ನಿನ್ನ ಗಾಂಡೀವ ಧನುಸ್ಸಿನ ಘೋಷವನ್ನು ಕೇಳುತ್ತಿದ್ದೇನೆ.

ತವ ಬಾಹುಬಲಂ ಚೈವ ಧನುಃ ಪ್ರಾಕರ್ಷತೋ ಬಹು ।
ತವ ತೇಜೋ ದುರಾಧರ್ಷಂ ಯಥಾ ವಿಷ್ಣೋಸ್ತ್ರಿವಿಕ್ರಮೇ ॥೮॥

ಧನುಸ್ಸನ್ನು ಬಹಳವಾಗಿ ಎಳೆಯುತ್ತಿರುವ ನಿನ್ನ ಬಾಹುಬಲವನ್ನೂ, ತ್ರಿವಿಕ್ರಮನ ಅವತಾರದಲ್ಲಿ ವಿಷ್ಣುವಿನ ಸೋಲಿಸಲು ಅಸಾಧ್ಯವಾದ ತೇಜಸ್ಸಿನಂತೆ ಇರುವ ನಿನ್ನ ತೇಜಸ್ಸನ್ನೂ ನೋಡುತ್ತಿದ್ದೇನೆ.

ವೈಶಂಪಾಯನಃ

ತಮುತ್ತರಶ್ಚಿತ್ರಮವೇಕ್ಷ್ಯ ಗಾಂಡಿವಂ
ಶರಾಂಶ್ಚ ಮುಕ್ತಾನ್ ಸಹಸಾ ಕಿರೀಟಿನಾ ।
ಭೀತೋऽಬ್ರವೀದರ್ಜುನಮಾಜಿಮಧ್ಯೇ
ನಾಹಂ ತವಾಶ್ವಾನ್ ವಿಷಹೇ ನಿಯಂತುಮ್ ॥೯॥

ವೈಶಂಪಾಯನ– ಉತ್ತರನು ವಿಚಿತ್ರವಾದ ಗಾಂಡೀವ ಧನುಸ್ಸನ್ನೂ ಅದರಿಂದ ವೇಗವಾಗಿ ಹೊರಹೊಮ್ಮುತ್ತಿದ್ದ ಬಾಣಗಳನ್ನೂ ನೋಡಿ ರಣರಂಗ ಮಧ್ಯದಲ್ಲಿ ಭೀತನಾಗಿ ಅರ್ಜುನನನ್ನು ಕುರಿತು ನಿನ್ನ ಅಶ್ವಗಳನ್ನು ನಿಯಂತ್ರಿಸಲು ನನಗೆ ಸಾಧ್ಯವಾಗುತ್ತಿಲ್ಲ ಎಂದು ಹೇಳಿದನು.

ತಮಬ್ರವೀದೀಷದಿವ ಪ್ರಹಸ್ಯ
ಗಾಂಡೀವಧನ್ವಾ ದ್ವಿಷತಾಂ ನಿಹಂತಾ ॥೧೦॥

ಮಯಾ ಸಹಾಯೇನ ಕುತೋऽಸ್ತಿ ತೇ ಭಯಂ
ಪ್ರೇಹ್ಯುತ್ತರಾಶ್ವಾನುಪಮಂತ್ರ್ಯ ಸಾರಥೇ ॥೧೧॥

ಗಾಂಡೀವಧನ್ವನೂ, ಶತ್ರುನಿಷೂದನನೂ ಆದ ಅರ್ಜುನನು ಸ್ವಲ್ಪನಕ್ಕು ಅವನನ್ನು ಕುರಿತು ಸಾರಥಿಯೇ, ನಾನು ಸಹಾಯನಾಗಿರುವಾಗ ನಿನಗೆ ಏತಕ್ಕೆ ಭಯ? ಉತ್ತರನೇ, ಅಶ್ವಗಳನ್ನು ಸಮಾಧಾನಪಡಿಸಿ ಮುಂದೆ ಹೋಗು ಎಂದು ಹೇಳಿದನು.

ಆಶ್ವಾಸಿತಸ್ತೇನ ಧನಂಜಯೇನ
ವೈರಾಟಿರಶ್ವಾನ್ ಪ್ರತುತೋದ ಶೀಘ್ರಮ್ ।
ಧನಂಜಯಶ್ಚಾಪಿ ವಿಕೃಷ್ಯ ಚಾಪಂ
ವಿಷ್ಫಾರಯಾಮಾಸ ಮಹೇಂದ್ರಕಲ್ಪಃ ॥೧೨॥

ಅರ್ಜುನನಿಂದ ಸಮಾಧಾನಗೊಳಿಸಲ್ಪಟ್ಟ ಉತ್ತರನು ಅಶ್ವಗಳನ್ನು ಶೀಘ್ರವಾಗಿ ಮುಂದೆ ನಡೆಸಿದನು. ಮಹೇಂದ್ರಕಲ್ಪನಾದ ಧನಂಜಯನೂ ಸಹ ಧನುಸ್ಸಿನ ಹೆದೆಯನ್ನು ಹಿಡಿದು ಧನುಸ್ಸಿನ ಶಬ್ದವನ್ನು ಮಾಡಿದನು.

ಉತ್ತರಂ ಚೈವ ಬೀಭತ್ಸುರಬ್ರವೀತ್ ಪುನರೇವ ಹಿ ॥೧೩॥

ನ ಭೇತವ್ಯಂ ಮಯಾ ಸಾರ್ಧಂ ತಾತ ಸಂಗ್ರಾಮಮೂರ್ಧನಿ ॥೧೪॥

ರಾಜಪುತ್ರೋಽಸಿ ಭದ್ರಂ ತೇ ಕುಲೇ ಮಹತಿ ಮಾತ್ಸ್ಯಕೇ ।
ಜಾತಸ್ತ್ವಂ ಕ್ಷತ್ರಿಯಕುಲೇ ನ ವಿಷೀದಿತುಮರ್ಹಸಿ ॥೧೫॥

ಅರ್ಜುನನು ಪುನಃ ಉತ್ತರನನ್ನು ಕುರಿತು ಪ್ರೀತಿಪಾತ್ರನೇ, ಉನ್ನತವಾದ ಯುದ್ಧದಲ್ಲಿ ನಾನು ಇರುವಾಗ ನೀನು ಹೆದರಬಾರದು. ರಾಜಪುತ್ರನಾಗಿದ್ದೀಯೆ. ನಿನಗೆ ಮಂಗಳವಾಗಲಿ. ಶ್ರೇಷ್ಠವಾದ ಮಾತ್ಸ್ಯರ ಕುಲದಲ್ಲಿ ಜನಿಸಿದ್ದೀಯೆ. ಕ್ಷತ್ರಿಯ ಕುಲದಲ್ಲಿ ಜನಿಸಿದ ನೀನು ವಿಷಾದವನ್ನು ಪಡಬಾರದು.

ಧೃತಿಂ ಕೃತ್ವಾ ಸುವಿಪುಲಾಂ ರಾಜಪುತ್ರ ರಥಂ ಮಮ ।
ಯುಧ್ಯಮಾನಸ್ಯ ಸಮರೇ ಶತ್ರುಭಿಃ ಸಹ ವಾಹಯ ॥೧೬॥

ರಾಜಪುತ್ರನೇ, ಬಹಳವಾದ ಧೈರ್ಯವನ್ನು ಅವಲಂಬಿಸಿ ಯುದ್ಧದಲ್ಲಿ ಶತ್ರುಗಳ ಜೊತೆಯಲ್ಲಿ ಯುದ್ಧ ಮಾಡುವ ನನ್ನ ರಥವನ್ನು ಮುಂದೆ ನಡೆಸು ಎಂದು ಹೇಳಿದನು.

ಉಕ್ತ್ವಾ ತಮೇವಂ ಬೀಭತ್ಸುರರ್ಜುನಃ ಪುನರಬ್ರವೀತ್ ।
ಪಾಂಡವೋ ರಥಿನಾಂ ಶ್ರೇಷ್ಠೋ ಭಾರದ್ವಾಜಂ ಸಮೀಕ್ಷ್ಯ ತು ॥೧೭॥

ಅವನಿಗೆ ಈ ರೀತಿ ಹೇಳಿ ರಥಿಕರಲ್ಲಿ ಶ್ರೇಷ್ಠನಾದ ಪಾಂಡುಪುತ್ರನಾದ, ಬೀಭತ್ಸುವಾದ ಅರ್ಜುನನು ದ್ರೋಣರನ್ನು ನೋಡಿ ಹೀಗೆ ಹೇಳಿದನು.

ಯತ್ರೈಷಾ ಕಾಂಚನೀ ವೇದಿರ್ದೃಶ್ಯತೇಽಗ್ನಿಶಿಖೋಪಮಾ ।
ಉಚ್ಛ್ರಿತಾ ಕಾಂಚನೇ ದಂಡೇ ಪತಾಕಾಭಿರಲಂಕೃತಾ ॥೧೮॥

ತತ್ರ ಮಾಂ ನಯ ಭದ್ರಂ ತೇ ದ್ರೋಣಂ ಯೋತ್ಸ್ಯಾಮಿ ಸತ್ತಮಮ್ ।
ಭಾರದ್ವಾಜೇನ ಯೋತ್ಸ್ಯೇಽಹಮಾಚಾರ್ಯೇಣ ಮಹಾತ್ಮನಾ ॥೧೯॥

ಅಗ್ನಿಯ ಜ್ವಾಲೆಯಂತಿರುವ ಸುವರ್ಣಮಯವಾದ ವೇದಿಕೆಯು ಪತಾಕೆಗಳಿಂದ ಅಲಂಕೃತವಾದ ಯಾವ ಸುವರ್ಣಮಯವಾದ ಧ್ವಜದಲ್ಲಿ ಎತ್ತರದಲ್ಲಿ ಕಾಣುತ್ತಿದೆಯೋ ಅಲ್ಲಿಗೆ ನನ್ನ ರಥವನ್ನು ನಡೆಸು. ನಿನಗೆ ಮಂಗಳವಾಗಲಿ. ಸಜ್ಜನರಲ್ಲಿ ಶ್ರೇಷ್ಠರಾದ

ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ಮಹಾತ್ಮರೂ, ಭರದ್ವಾಜ ಕುಲೋತ್ಪನ್ನರೂ ಆದ ಆಚಾರ್ಯರ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುವೆನು.

ಅಮೀ ಶೋಣಾಃ ಪ್ರಕಾಶಂತೇ ತುರಗಾಃ ಸಾಧುವಾಹಿನಃ ।
ಯುಕ್ತಾ ರಥವರೇ ಯಸ್ಯ ಸರ್ವಶಿಕ್ಷಾವಿಶಾರದಾಃ ॥೨೦॥

ಚೆನ್ನಾಗಿ ರಥವನ್ನು ಎಳೆದುಕೊಂಡು ಹೋಗುವ ಈ ಕೆಂಪು ಕುದುರೆಗಳು ಶ್ರೇಷ್ಠವಾದ ರಥದಲ್ಲಿ ಹೂಡಲ್ಪಟ್ಟು ಶೋಭಿಸುತ್ತಿವೆ. ಇವು ದ್ರೋಣರ ಸರ್ವಶಿಕ್ಷೆಯಲ್ಲೂ ಪಳಗಿದ ಅಶ್ವಗಳು.

ತತೋ ರಥವರಃ ಶೂರಃ ಸರ್ವಶಸ್ತ್ರಭೃತಾಂ ವರಃ ।
ಸ್ನಿಗ್ಧವೈಡೂರ್ಯಸಂಕಾಶಸ್ತಾಮ್ರಾಕ್ಷಃ ಪ್ರಿಯದರ್ಶನಃ ॥೨೧॥

ಪೀನದೀರ್ಘಭುಜಃ ಶ್ರೀಮಾನ್ ಬಲವೀರ್ಯಸಮನ್ವಿತಃ ।
ಸರ್ವಲೋಕಧನುಃಶ್ರೇಷ್ಠಃ ಸರ್ವಲೋಕೇಷು ಪೂಜಿತಃ ॥೨೨॥

ಅಂಗಿರೋಶನಸೋಸ್ತುಲ್ಯೋ ನಯೇ ಬುದ್ಧಿಮತಾಂ ವರಃ ॥೨೩॥

ಅನಂತರ ಶ್ರೇಷ್ಠವಾದ ರಥದಲ್ಲಿ ಶೂರರೂ, ಎಲ್ಲ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ, ಕಡುವೈಡೂರ್ಯವರ್ಣವನ್ನು ಹೊಂದಿದವರೂ, ಕೆಂಪು ಕಣ್ಣುಳ್ಳವರೂ, ನೋಡಲು ಪ್ರಿಯರಾದವರೂ, ಪುಷ್ಟವಾದ ದೀರ್ಘಭುಜವುಳ್ಳವರೂ, ಕಾಂತಿಯುಕ್ತರಾದವರೂ, ಬಲದಲ್ಲಿ ಸಮನ್ವಿತರಾದವರೂ, ಸರ್ವಲೋಕಧನುರ್ಧಾರಿಗಳಲ್ಲಿ ಶ್ರೇಷ್ಠರೂ, ಸರ್ವಲೋಕಗಳಲ್ಲಿಯೂ ಪೂಜಿತರೂ, ರಾಜನೀತಿಯ ವಿಷಯದಲ್ಲಿ ಶುಕ್ರ ಬೃಹಸ್ಪತಿಗಳ ಸಮರಾದವರೂ, ಮೇಧಾವಿಗಳಲ್ಲಿ ಶ್ರೇಷ್ಠರೂ (ಆದ ದ್ರೋಣರು ಇದ್ದಾರೆ).

ಚತ್ವಾರೋ ನಿಖಿಲಾ ವೇದಾಃ ಸಾಂಗೋಪಾಂಗಾಃ ಸಲಕ್ಷಣಾಃ ।
ಧನುರ್ವೇದಶ್ಚ ಕಾತ್ಸ್ನ್ಯೇನ ಬ್ರಾಹ್ಮಂ ಚಾಸ್ತ್ರಂ ಪ್ರತಿಷ್ಠಿತಮ್ ॥೨೪॥

ಲಕ್ಷಣಸಹಿತವಾದ ಸಾಂಗೋಪಾಂಗ ಸಹಿತವಾದ ಸಮಗ್ರವಾದ ನಾಲ್ಕೂ ವೇದಗಳೂ, ಸಂಪೂರ್ಣವಾದ ಧನುರ್ವೇದ ಮತ್ತು ಬ್ರಹ್ಮಾಸ್ತ್ರಗಳು ಅವರಲ್ಲಿ ಪ್ರತಿಷ್ಠಿತವಾಗಿದೆ.

ಪುರಾಣಮಿತಿಹಾಸಶ್ಚ ಹ್ಯರ್ಥವಿದ್ಯಾ ಚ ಮಾನವೀ ।
ಭಾರದ್ವಾಜೇ ಸಮಸ್ತಾನಿ ಸರ್ವಾಣ್ಯೇತಾನಿ ಸಾಂಪ್ರತಮ್ ॥೨೫॥

ದ್ರೋಣರಲ್ಲಿ ಪುರಾಣ, ಇತಿಹಾಸ, ಮನುವಿನ ಅರ್ಥಶಾಸ್ತ್ರ ಈ ಎಲ್ಲವೂ ಸಮಗ್ರವಾಗಿ ಈಗ ಆಶ್ರಯವನ್ನು ಪಡೆದಿವೆ.

ಕ್ಷಮಾ ದಯಾ ಚ ಸತ್ಯಂ ಚ ತೇಜೋ ಮಾರ್ದವಮಾರ್ಜವಮ್ ।
ಪ್ರತಿಷ್ಠಿತಾ ಗುಣಾ ಯಸ್ಮಿನ್ ಬಹವೋ ದ್ವಿಜಸತ್ತಮೇ ॥೨೬॥

ಕ್ಷಮೆ, ದಯೆ, ಸತ್ಯ, ತೇಜಸ್ಸು, ಮಾರ್ದವ, ಆರ್ಜವ ಮುಂತಾದ ಅನೇಕ ಶ್ರೇಷ್ಠವಾದ ಗುಣಗಳು ಬ್ರಾಹ್ಮಣ ಶ್ರೇಷ್ಠರಾದ ಅವರಲ್ಲಿ ಪ್ರತಿಷ್ಠಿತವಾಗಿವೆ.

ಯಸ್ಯಾಹಮಿಷ್ಟಃ ಸತತಂ ಮಮ ಚೇಷ್ಟಃ ಸದಾ ಚ ಯಃ ।
ಕ್ಷತ್ರಧರ್ಮಂ ಪುರಸ್ಕೃತ್ಯ ತೇನ ಯೋತ್ಸ್ಯಾಮಿ ಸಂಯುಗೇ ॥೨೭॥

ಅವರಿಗೆ ನಾನು ಯಾವಾಗಲೂ ಇಷ್ಟನಾದವನು. ನನಗೂ ಅವರು ಯಾವಾಗಲೂ ಇಷ್ಟರಾದವರು. ಕ್ಷತ್ರಿಯ ಧರ್ಮವನ್ನು ಮುಂದೆ ಮಾಡಿಕೊಂಡು ಅವರ ಜೊತೆಯಲ್ಲಿ ರಣರಂಗದಲ್ಲಿ ಯುದ್ಧವನ್ನು ಮಾಡುವೆನು.

ಆಚಾರ್ಯಂ ಪ್ರಾಪಯೇದಾನೀಂ ಮಮೋತ್ತರ ಮಹಾರಥಮ್ ।
ಅಪರಂ ಪಶ್ಯ ಸಂಗ್ರಾಮಮದ್ಭುತಂ ಮಮ ಪಶ್ಯ ಚ ॥೨೮॥

ಉತ್ತರನೇ, ಮಹಾರಥರಾದ ಆಚಾರ್ಯರ ಬಳಿಗೆ ಈಗ ಹೋಗು. ಇನ್ನೊಂದು ಅದ್ಭುತವಾದ ಸಂಗ್ರಾಮವನ್ನೂ ಮತ್ತು ನನ್ನ ಪರಾಕ್ರಮವನ್ನು ನೋಡುವವನಾಗು (ಎಂದು ಹೇಳಿದನು).

ಉತ್ತರಸ್ತ್ವೇವಮುಕ್ತೋಽಶ್ವಾನ್ ಚೋದಯಾಮಾಸ ತಂ ಪ್ರತಿ ।
ಆಜಗಾಮಾರ್ಜುನರಥೋ ಭಾರದ್ವಾಜರಥಂ ಪ್ರತಿ ॥೨೯॥

ಹೀಗೆ ಹೇಳಲ್ಪಟ್ಟ ಉತ್ತರನು ಕುದುರೆಗಳನ್ನು ದ್ರೋಣರ ರಥದ ಕಡೆಗೆ ಪ್ರೇರಿಸಿದನು. ಅರ್ಜುನ ರಥವು ದ್ರೋಣರ ರಥದ ಸಮೀಪಕ್ಕೆ ಬಂದಿತು.

ತಮಾಪತಂತಂ ವೇಗೇನ ಪಾಂಡವಂ ಸರಥಂ ರಣೇ ।
ದ್ರೋಣೋಽಪ್ಯಭ್ಯದ್ರವತ್ ಪಾರ್ಥಂ ಮತ್ತೋ ಮತ್ತಮಿವ ದ್ವಿಪಮ್ ॥

ಪಾಂಡುಪುತ್ರನಾದ ಅರ್ಜುನನು ಯುದ್ಧದಲ್ಲಿ ತನ್ನ ಕಡೆಗೆ ರಥದಲ್ಲಿ ವೇಗದಿಂದ ಬರುತ್ತಿರುವುದನ್ನು ನೋಡಿ ಒಂದು ಮದಿಸಿದ ಗಜವು ಇನ್ನೊಂದು ಮದ್ದಾನೆಯ ಕಡೆಗೆ ಬಂದಂತೆ ದ್ರೋಣರೂ ಪಾರ್ಥನ ಕಡೆಗೆ ವೇಗವಾಗಿ ಬಂದರು.

ಸ ತು ರುಗ್ಮರಥಂ ದೃಷ್ಟ್ವಾ ಕೌಂತೇಯಃ ಸಮಭಿದ್ರುತಮ್ ।
ಆಚಾರ್ಯಂ ತಂ ಮಹಾಬಾಹುಃ ಪ್ರಾಂಜಲಿರ್ವಾಕ್ಯಮಬ್ರವೀತ್ ॥೩೧॥

ದ್ರೋಣರ ಸುವರ್ಣಮಯವಾದ ರಥವು ತನ್ನ ಕಡೆಗೆ ಶೀಘ್ರವಾಗಿ ಬರುತ್ತಿರುವುದನ್ನು ನೋಡಿದ ಮಹಾಬಾಹುವಾದ ಕುಂತೀಪುತ್ರನಾದ ಅರ್ಜುನನು ಕೈಗಳನ್ನು ಮುಗಿದು ಆಚಾರ್ಯರನ್ನು ಕುರಿತು ಹೀಗೆ ಮಾತನಾಡಿದನು.

ಉಷಿತಾಃ ಸ್ಮೋ ವನೇ ವಾಸಂ ಪ್ರತಿಕರ್ಮ ಚಿಕೀರ್ಷವಃ ।
ಕೋಪಂ ನಾರ್ಹತಿ ನಃ ಕರ್ತುಂ ಸದಾ ಸಮರದುರ್ಮದ ॥೩೨॥

ಯುದ್ಧದಲ್ಲಿ ದುರ್ಜಯರಾದ (ದುರ್ಮದರಾದ) ಆಚಾರ್ಯರೇ, ನಾವು ವನವಾಸವನ್ನು ಮಾಡಿ ಅದಕ್ಕೆ ಪ್ರತೀಕಾರವನ್ನು ಮಾಡಲು ಬರುತ್ತಿದ್ದೇವೆ. ನಮ್ಮ ಮೇಲೆ ಕೋಪವನ್ನು ಮಾಡಬಾರದು.

ಅಹಂ ತು ತಾಡಿತಃ ಪೂರ್ವಂ ಪ್ರಹರೇಯಂ ತ್ವಯಾಽನಘ ।
ಇತಿ ಮೇ ವರ್ತತೇ ಬುದ್ಧಿಸ್ತದ್ ಭವಾನ್ ಕ್ಷಂತುಮರ್ಹತಿ ॥೩೩॥

ಅನಘರೇ, ನೀವು ಮೊದಲು ನನ್ನ ಮೇಲೆ ಪ್ರಹಾರ ಮಾಡಿದರೆ ನಾನು ಅನಂತರ ಪ್ರಹಾರ ಮಾಡುತ್ತೇನೆ ಎಂದು ನನ್ನ ಅಭಿಪ್ರಾಯವಿದೆ. ಅದನ್ನು ತಾವು ಕ್ಷಮಿಸಬೇಕು ಎಂದು ಹೇಳಿದನು.

ವೈಶಂಪಾಯನಃ

ತತಃ ಪ್ರಾಧ್ಮಾಪಯಚ್ಛಂಖಂ ಭೇರೀಪಣವನಾದಿತಮ್ ।
ವ್ಯಕ್ಷೋಭತ ಬಲಂ ಸರ್ವಮುದ್ಧೂತ ಇವ ಸಾಗರಃ ॥೩೪॥

ವೈಶಂಪಾಯನ– ಅನಂತರ ಭೇರೀಪಣವನಾದದೊಡನೆ ಅರ್ಜುನನು ತನ್ನ ಶಂಖವನ್ನು ಊದಿದನು. ಸೈನ್ಯವೆಲ್ಲವೂ ಕ್ಷೋಭೆಗೊಂಡ ಸಾಗರದಂತೆ ಆ ಶಬ್ದವನ್ನು ಕೇಳಿ ಕ್ಷೋಭೆಗೊಂಡಿತು.

ತತಸ್ತು ಪ್ರಾಹಿಣೋದ್ ದ್ರೋಣಃ ಶರಾಣಾಮೇಕವಿಂಶತಿಮ್ ।
ಅಪ್ರಾಪ್ತಾನೇವ ತಾನ್ ಪಾರ್ಥಃ ಚಿಚ್ಛೇದ ಕೃತಹಸ್ತವಾನ್ ॥೩೫॥

ಅನಂತರ ದ್ರೋಣರು ಇಪ್ಪತ್ತೊಂದು ಬಾಣಗಳನ್ನು ಅರ್ಜುನನ ಕಡೆಗೆ ಕಳುಹಿಸಿದರು. ಒಳ್ಳೆಯ ಹಸ್ತಶಿಕ್ಷೆಯಿದ್ದ ಅರ್ಜುನನು ಆ ಬಾಣಗಳು ತನ್ನನ್ನು ತಲುಪುವುದಕ್ಕಿಂತ ಮುಂಚೆಯೇ ಅವುಗಳನ್ನು ಕತ್ತರಿಸಿದನು.

ತತಃ ಶರಸಹಸ್ರೇಣ ರಥಂ ಪಾರ್ಥಸ್ಯ ವೀರ್ಯವಾನ್ ।
ಅವಾಕಿರತ್ ತತೋ ದ್ರೋಣಃ ಶೀಘ್ರಹಸ್ತಂ ಪ್ರದರ್ಶಯನ್ ॥೩೬॥

ಏವಂ ಪ್ರವವೃಧೇ ಯುದ್ಧಂ ಭಾರದ್ವಾಜಕಿರೀಟಿನೋಃ ॥೩೭॥

ಅನಂತರ ಪರಾಕ್ರಮಶಾಲಿಗಳಾದ ದ್ರೋಣರು ಅರ್ಜುನನ ರಥದ ಮೇಲೆ ಸಹಸ್ರ ಬಾಣಗಳ ಮಳೆಯನ್ನು ಕರೆದರು. ಹೀಗೆ ದ್ರೋಣ ಮತ್ತು ಅರ್ಜುನರಿಗೆ ಯುದ್ಧವು ಬೆಳೆಯಿತು.

ಅಶ್ವಾನ್ ಶೋಣಾನ್ ಮಹಾವೇಗಾನ್ ಹಂಸವರ್ಣ್ಯೈಸ್ತು ವಾಜಿಭಿಃ ।
ಮಿಶ್ರಿತಾನ್ ಸಮರೇ ದೃಷ್ಟ್ವಾ ವ್ಯಸ್ಮಯಂತ ಪೃಥಗ್ ಜನಾಃ ॥೩೮॥

ಮಹಾವೇಗವುಳ್ಳ ಕೆಂಪುಬಣ್ಣದ ಕುದುರೆಗಳು ಅರ್ಜುನನ ಬಿಳಿಯ ಬಣ್ಣದ ಕುದುರೆಗಳಿಂದ ರಣರಂಗದಲ್ಲಿ ಮಿಶ್ರಿತವಾದುದನ್ನು ನೋಡಿ ಉಳಿದ ಜನರು ಆಶ್ಚರ್ಯಪಟ್ಟರು.

ರಥಂ ರಥೇನ ಪಾರ್ಥಸ್ಯ ಸಮಾಪತ್ಯ ಪರಂತಪಃ ।
ಹರ್ಷಯುಕ್ತಸ್ತದಾSSಚಾರ್ಯಃ ಪ್ರತ್ಯಗೃಹ್ಣತ ಪಾಂಡವಮ್ ॥೩೯॥

ಪರಂತಪರಾದ ಆಚಾರ್ಯರು ತಮ್ಮ ರಥದಿಂದ ಅರ್ಜುನನ ರಥಕ್ಕೆ ಡಿಕ್ಕಿಯನ್ನು ಹೊಡೆದು ಅರ್ಜುನನನ್ನು ಯುದ್ಧದಲ್ಲಿ ಸ್ವೀಕರಿಸಿದರು.

ಸಮಾಶ್ಲಿಷ್ಟಾವಿವಾನ್ಯೋನ್ಯಂ ದ್ರೋಣಪಾಂಡವಯೋರ್ಧ್ವಜೌ ।
ದೃಷ್ಟ್ವಾ ಪ್ರಾಕಂಪತ ಮುಹುರ್ಭರತಾನಾಂ ಮಹಾಚಮೂಃ ॥೪೦॥

ಪರಸ್ಪರವಾಗಿ ಆಲಿಂಗಿಸಿದಂತಿರುವ ದ್ರೋಣ ಮತ್ತು ಅರ್ಜುನರ ಧ್ವಜಗಳನ್ನು ನೋಡಿ ಭಾರತರ ಮಹಾಸೈನ್ಯವು ಮತ್ತೆ ಮತ್ತೆ ನಡುಗಿತು.

ತತ್ತು ಯುದ್ಧಂ ಪ್ರವವೃತೇ ಆಚಾರ್ಯಸ್ಯಾರ್ಜುನಸ್ಯ ಚ ।
ವಿಮುಂಚತೋಃ ಶರಾನುಗ್ರಾನ್ ವಿಶಿಖಾನ್ ದೀಪ್ತತೇಜಸಃ ॥೪೧॥

ಉಗ್ರವಾದ ದೀಪ್ತವಾದ ಸಾಮರ್ಥ್ಯವುಳ್ಳ ಬಾಣಗಳನ್ನು ಪ್ರಯೋಗಿಸುವ ಆಚಾರ್ಯರ ಮತ್ತು ಅರ್ಜುನನ ಯುದ್ಧವು ಹೀಗೆ ನಡೆಯಿತು.

ತೌ ವೀರೌ ವೀರ್ಯಸಂಪನ್ನೌ ದೃಷ್ಟ್ವಾ ಸಂಗ್ರಾಮಮೂರ್ಧನಿ ।
ಆಚಾರ್ಯಶಿಷ್ಯೌ ರಥಿನೌ ಕೃತವೀರ್ಯೌ ತರಸ್ವಿನೌ ॥೪೨॥

ಉಭೌ ವಿಶ್ರುತಕರ್ಮಾಣಾವುಭೌ ವೀರೌ ತರಸ್ವಿನೌ ।
ಉಭಾವತಿರಥೌ ಲೋಕೇ ಹ್ಯುಭೌ ಪರಪುರಂಜಯೌ ॥೪೩॥

ಕ್ಷಿಪಂತೌ ಶರಜಾಲಾನಿ ಕ್ಷತ್ರಿಯಾನ್ ಮೋಹ ಆವಿಶತ್ ॥೪೪॥

ಉನ್ನತವಾದ ಸಂಗ್ರಾಮದಲ್ಲಿ ರಥಿಕರಾದ, ವೀರ್ಯಸಂಪನ್ನರಾದ, ವೀರರಾದ, ಪರಾಕ್ರಮವನ್ನು ಪ್ರದರ್ಶಿಸಿದ, ಧೈರ್ಯಶಾಲಿಗಳಾದ, ಪ್ರಖ್ಯಾತ ಕರ್ಮಗಳುಳ್ಳ, ಅತಿರಥರಾದ, ವೇಗಶಾಲಿಗಳಾದ ಶತ್ರುಪುರಂಜಯರಾದ ಬಾಣದ ಸಮೂಹಗಳನ್ನು ಪ್ರಯೋಗಿಸುವ ಆಚಾರ್ಯರನ್ನು ಮತ್ತು ಶಿಷ್ಯನನ್ನು ನೋಡಿ ಕ್ಷತ್ರಿಯರಿಗೆ ಮೋಹ ಉಂಟಾಯಿತು.

ವ್ಯಸ್ಮಯಂತ ಜನಾಃ ಸರ್ವೇ ದ್ರೋಣಾರ್ಜುನಸಮಾಗಮೇ ।
ನರಾಣಾಂ ಬ್ರುವತಾಂ ವಾಕ್ಯಂ ಶ್ರೂಯತೇ ಸುಮಹಾಸ್ವನಃ ॥೪೫॥

ದ್ರೋಣಾರ್ಜುನ ಸಮಾಗಮ ಕಾಲದಲ್ಲಿ ಎಲ್ಲ ಜನರೂ ಆಶ್ಚರ್ಯಪಟ್ಟರು. ಗಟ್ಟಿಯಾಗಿ ಮಾತನಾಡುವ ಜನರ ವಾಕ್ಯಗಳು ಕೇಳಿಬರುತ್ತಿದ್ದವು.

ದ್ರೋಣಂ ಹಿ ಸಮರೇ ಕೋಽನ್ಯೋ ಯೋದ್ಧುಮರ್ಹತ್ಯಥಾರ್ಜುನಾತ್।
ರೌದ್ರಃ ಕ್ಷತ್ರಿಯಧರ್ಮೋಽಯಂ ಗುರುಂ ವೈ ಯದಯೋಧಯತ್ ॥

ಇತ್ಯಬ್ರುವನ್ ಜನಾಸ್ತತ್ರ ಸಂಗ್ರಾಮಶಿರಸಿ ಸ್ಥಿತಾಃ ।
ತೌ ಸಮೀಕ್ಷ್ಯ ತು ಸಂರಬ್ಧೌ ಸನ್ನಿಕೃಷ್ಟೌ ಮಹಾರಥೌ ॥೪೭॥

ಕೋಪಗೊಂಡು ಪರಸ್ಪರ ಸಮೀಪಕ್ಕೆ ಬಂದ ಮಹಾರಥರಾದ ಅವರಿಬ್ಬರನ್ನೂ ನೋಡಿ ಯುದ್ಧದಲ್ಲಿ ಅರ್ಜುನನನ್ನು ಬಿಟ್ಟು ಬೇರೆ ಯಾವನು ದ್ರೋಣರ ಜೊತೆಯಲ್ಲಿ ಯುದ್ಧ ಮಾಡಲು ಸಾಧ್ಯ ? ಕ್ಷತ್ರಿಯ ಧರ್ಮವು ಕಠೋರವಾದುದು. ಏಕೆಂದರೆ ಶಿಷ್ಯನಾದ ಅರ್ಜುನನು ಗುರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದಾನೆ ಎಂದು ಆ ಉನ್ನತವಾದ ಯುದ್ಧವನ್ನು ನೋಡಿದ ಅಲ್ಲಿದ್ದ ಜನರು ಮಾತನಾಡಿದರು.

ಛಾದಯೇತಾಂ ಶರೌಘೈಸ್ತಾವನ್ಯೋನ್ಯಮಪರಾಜಿತೌ ।
ಸಂಯುಗೇ ಸಂಚಕಾಶೇತಾಂ ಕಾಲಸೂರ್ಯಾವಿವೋದಿತೌ ॥೪೮॥

ಅಪರಾಜಿತರಾದ ಅವರಿಬ್ಬರೂ ಪರಸ್ಪರವಾಗಿ ಬಾಣದ ಮಳೆಗಳಿಂದ ಒಬ್ಬರನ್ನೊಬ್ಬರು ಮುಚ್ಚಿದರು. ಯುದ್ಧದಲ್ಲಿ ಅವರಿಬ್ಬರೂ ಪ್ರಳಯಕಾಲದಲ್ಲಿ ಉದಯಿಸಿದ ಸೂರ್ಯನಂತೆ ಶೋಭಿಸಿದರು.

ವಿಷ್ಫಾರ್ಯ ಚ ಮಹಾಚಾಪಂ ಹೇಮಪೃಷ್ಠಂ ದುರಾನಮಮ್ ।
ಸಂರಬ್ಧಸ್ತು ತದಾ ದ್ರೋಣಃ ಪ್ರತ್ಯಯುಧ್ಯತ ಫಲ್ಗುನಮ್ ॥೪೯॥

ಆಗ ದ್ರೋಣರು ಚಿನ್ನದ ಹಿಡಿಯಿರುವ, ಬಗ್ಗಿಸಲು ಕಷ್ಟಸಾಧ್ಯವಾದ ತಮ್ಮ ದೊಡ್ಡ ಧನುಸ್ಸನ್ನು ಬಗ್ಗಿಸಿ ಕೋಪಗೊಂಡು ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಸ ಸಾಯಕಮಯೈರ್ಜಾಲೈರರ್ಜುನಸ್ಯ ರಥಂ ಪ್ರತಿ ।
ಭಾನುಮದ್ಭಿಃ ಶಿಲಾಧೌತೈರ್ಬಾಣೈಃ ಪ್ರಾಚ್ಛಾದಯದ್ ದಿಶಃ ॥೫೦॥

ಅವರು ಅರ್ಜುನನ ರಥದ ಸುತ್ತಲೂ ಕಿರಣಗಳನ್ನು ಹೊರಸೂಸುವ, ಕಲ್ಲಿನ ಮೇಲೆ ಸಾಣೆಯನ್ನು ಹಿಡಿದ, ಬಾಣಗಳಿಂದ ಎಲ್ಲ ದಿಕ್ಕುಗಳಲ್ಲಿಯೂ ಒಂದು ಜಾಲ (ಬಲೆ) ವನ್ನು ಮಾಡಿದರು.

ಅರ್ಜುನಸ್ತು ತದಾ ದ್ರೋಣಂ ಮಹಾವೇಗೈರ್ಮಹಾರಥಃ ।
ವಿವ್ಯಾಧ ಶತಶೋ ಬಾಣೈರ್ಧಾರಾಭಿರಿವ ಪರ್ವತಮ್ ॥೫೧॥

ಕಾಳಮೇಘ ಇವೋಷ್ಣಾಂತೇ ಫಲ್ಗುನಃ ಸಮವಾಕಿರತ್ ॥೫೨॥

ಆಗ ಮಹಾರಥನಾದ ಅರ್ಜುನನು ಮಹಾವೇಗವುಳ್ಳ ನೂರಾರು ಬಾಣಗಳಿಂದ, ಮಳೆಯ ಧಾರೆಗಳಿಂದ ಪರ್ವತವು ಮುಚ್ಚಿದಂತೆ ಯುದ್ಧವನ್ನು ಮಾಡಿ, ಬೇಸಿಗೆಯ ನಂತರ ಬರುವ ಕಪ್ಪು ಮೋಡದಂತೆ ಅವನು ಬಾಣಗಳ ಮಳೆಯನ್ನು ಸುರಿಸಿದನು.

ತಸ್ಯ ಜಾಂಬೂನದಮಯೈಃ ಶಿತೈಶ್ಚಾಪಚ್ಯುತೈಃ ಶರೈಃ ।
ಪ್ರಾಚ್ಛಾದಯದ್ ರಥಶ್ರೇಷ್ಠಂ ಭಾರದ್ವಾಜೋಽರ್ಜುನಸ್ಯ ವೈ ॥೫೩॥

ದ್ರೋಣರು ತಮ್ಮ ಸುವರ್ಣಮಯವಾದ ಮತ್ತು ಧನುಸ್ಸಿನಿಂದ ಮುಕ್ತವಾದ ಹರಿತವಾದ ಬಾಣಗಳಿಂದ ಅರ್ಜುನನ ಶ್ರೇಷ್ಠವಾದ ರಥವನ್ನು ಮುಚ್ಚಿದರು.

ತಥೈವ ದಿವ್ಯಂ ಗಾಂಡೀವಂ ಧನುರಾಯಮ್ಯ ಚಾರ್ಜುನಃ ।
ಶತ್ರುಘ್ನಂ ವೇಗವತ್ ಸೃಷ್ಟಂ ಭಾರಸಾಧನಮುತ್ತಮಮ್ ॥೫೪॥

ಶೋಭತೇ ಸ್ಮ ಮಹಾಬಾಹೋರ್ಗಾಂಡೀವಂ ವಿಕ್ಷಿಪದ್ ಧನುಃ ॥೫೫॥

ಅದರಂತೆಯೇ ಅರ್ಜುನನೂ ಶತ್ರುಗಳನ್ನು ಕೊಲ್ಲುವ ವೇಗವನ್ನುಳ್ಳ ಭಾರವಾದ ದೃಢವಾದ ತನ್ನ ದಿವ್ಯವಾದ ಗಾಂಡೀವ ಧನುಸ್ಸನ್ನು ಎಳೆದು (ಬಾಣ ಪ್ರಯೋಗವನ್ನು ಮಾಡಿದನು). ಆ ಮಹಾಬಾಹುವಿನ ಗಾಂಡೀವ ಧನುಸ್ಸು ಶೋಭಿಸುತ್ತಿದ್ದಿತು.

ಶರಾಂಶ್ಚ ವಿಸೃಜಂಶ್ಚಿತ್ರಾನ್ ಸುವರ್ಣವಿಕೃತಾನ್ ಬಹೂನ್ ।
ಪ್ರಾಚ್ಛಾದಯದಮೇಯಾತ್ಮಾ ಭಾರದ್ವಾಜರಥಂ ಪ್ರತಿ ॥೫೬॥

ದ್ರೋಣಚಾಪವಿನಿರ್ಮುಕ್ತಾನ್ ಬಾಣೈರ್ಬಾಣಾನವಾರಯತ್ ॥೫೭॥

ಅಂತಹ ಧನುಸ್ಸಿನಿಂದ ಸುವರ್ಣಮಯವಾದ ವಿಚಿತ್ರವಾದ ಬಾಣಗಳನ್ನು ಪ್ರಯೋಗಿಸುತ್ತಾ ಅಮೇಯ ಸಾಮರ್ಥ್ಯವುಳ್ಳ ಅವನು ದ್ರೋಣರ ರಥವನ್ನು ಹಾಗೆಯೇ ಮುಚ್ಚಿದನು. ಮತ್ತು ದ್ರೋಣರ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳನ್ನು ತನ್ನ ಬಾಣಗಳಿಂದ ನಿವಾರಿಸಿದನು.

ಸರಥೋऽಪ್ಯಚರತ್ ಪಾರ್ಥಃ ಪ್ರೇಕ್ಷಣೀಯೋ ಮಹಾರಥಃ ।
ಯುಗಪದ್ ದಿಕ್ಷು ಸರ್ವಾಸು ಸರ್ವತೋऽಸ್ತ್ರಾಣ್ಯವಾಸೃಜತ್ ॥೫೮॥

ರಥದಲ್ಲಿ ಕುಳಿತಿದ್ದರೂ ಮಹಾರಥನಾದ ಪಾರ್ಥನು ಒಂದೇ ಸಮಯದಲ್ಲಿ ಎಲ್ಲ ದಿಕ್ಕುಗಳಲ್ಲೂ, ಎಲ್ಲ ಕಡೆಗಳಿಗೂ ಶಸ್ತ್ರವನ್ನು ಪ್ರಯೋಗಿಸುತ್ತಾ ಸುಂದರನಾಗಿ ಕಂಡನು.

ಆದದಾನಂ ಶರಾನ್ ಘೋರಾನ್ ಸಂದಧಾನಂ ಚ ಪಾಂಡವಮ್ ।
ವಿಸೃಜಂತಂ ಚ ಕೌಂತೇಯಂ ನ ಸ್ಮ ಪಶ್ಯಂತಿ ಲಾಘವಾತ್ ॥೫೯॥

ಅರ್ಜುನನು ಬತ್ತಳಿಕೆಯಿಂದ ಬಾಣವನ್ನು ತೆಗೆದುಕೊಳ್ಳುವುದನ್ನೂ, ಬಿಲ್ಲಿನಲ್ಲಿ ಬಾಣವನ್ನು ಹೂಡುವುದನ್ನೂ ಮತ್ತು ಹೆದೆಯನ್ನು ಎಳೆದುಬಿಡುವುದನ್ನೂ ಆ ಕ್ಷಿಪ್ರತೆಯಿಂದ (ವೇಗ) ಜನರು ಕಾಣುತ್ತಿರಲಿಲ್ಲ.

ಏಕಚ್ಛಾಯಮಿವಾಕಾಶಂ ಬಾಣೈಶ್ಚಕ್ರೇ ಸಮಂತತಃ ।
ನಾದೃಶ್ಯತ ತದಾ ದ್ರೋಣೋ ನೀಹಾರೇಣೇವ ಸರ್ವತಃ ॥೬೦॥

ತನ್ನ ಬಾಣಗಳಿಂದ ಆಕಾಶದಲ್ಲೆಲ್ಲಾ ಅರ್ಜುನನು ಒಂದೇ ಛಾಯೆಯನ್ನು ಮೂಡಿಸಿದನು. ಆಗ ದ್ರೋಣರು ಮಂಜಿನಿಂದ ಮುಚ್ಚಿಕೊಂಡವರಂತೆ ಯಾರಿಗೂ ಕಾಣಲಿಲ್ಲ.

ಮರೀಚಿವಿಕಚಸ್ಯೇವ ರಾಜನ್ ಭಾನುಮತೋ ವಪುಃ ।
ಆಸೀತ್ ಪಾರ್ಥಸ್ಯ ಸುಮಹದ್ ವಪುಃ ಶರಶತಾರ್ಪಿತಮ್ ॥೬೧॥

ಎಲೈ ರಾಜನೇ, ದ್ರೋಣರ ಬಾಣಗಳು ಅರ್ಜುನನ ಶರೀರದಲ್ಲಿ ನೆಟ್ಟು ಅರ್ಜುನನ ದೊಡ್ಡ ಶರೀರವು ಆ ಹೊಳೆಯುವ ಬಾಣಗಳಿಂದ ಕೂಡಿ ಕಿರಣಗಳು ಹೊರಹೊಮ್ಮುವ ಸೂರ್ಯನಂತೆ ಕಾಣುತ್ತಿದ್ದಿತು.

ಕ್ಷಿಪತಃ ಶರಜಾಲಾನಿ ಕೌಂತೇಯಸ್ಯ ಮಹಾತ್ಮನಃ ।
ತಾನ್ ವಿಧೂಯ ಶರಾನ್ ಘೋರಾನ್ ದ್ರೋಣೋऽಪಿ ಸಮಿತಿಂಜಯಃ ॥
ಬಭಾಸೇ ತಿಮಿರಂ ವ್ಯೋಮ್ನಿ ವಿಧೂಯ ಸವಿತಾ ಯಥಾ ॥೬೩॥

ಮಹಾತ್ಮನಾದ ಕೌಂತೇಯನು ಬಾಣದ ಬಲೆಯನ್ನು ಸೃಷ್ಟಿಸುವಾಗ ಸಮಿತಿಂಜಯರಾದ ದ್ರೋಣರೂ ಸಹ ಆ ಘೋರವಾದ ಬಾಣಗಳನ್ನು ನಿವಾರಿಸಿ ಕತ್ತಲೆಯನ್ನು ನಿವಾರಿಸಿದ ಸೂರ್ಯನು ಆಕಾಶದಲ್ಲಿ ಶೋಭಿಸುವಂತೆ ಶೋಭಿಸಿದರು.

ಅಗ್ನಿಚಕ್ರೋಪಮಂ ಘೋರಂ ಮಂಡಲೀಕೃತಮಾಹವೇ ।
ವಿಕೃಷ್ಯ ಸುಮಹಚ್ಚಾಪಂ ಮೇಘಸ್ತನಿತನಿಸ್ವನಮ್ ॥೬೪॥

ಅಸಕ್ತಂ ಮುಂಚತೋ ಬಾಣಾನ್ ದದೃಶುಃ ಕುರವೋ ಯುಧಿ ॥೬೫॥

ಅಗ್ನಿಚಕ್ರದಂತಿರುವ, ಘೋರವಾದ, ಮಂಡಲಾಕಾರವಾದ, ಮೇಘ ಗರ್ಜನೆಯಂತೆ ನಾದವನ್ನು ಮಾಡುತ್ತಿದ್ದಂತಹ, ದೊಡ್ಡ ಚಾಪವನ್ನು ಎಳೆದು ಒಂದು ಬಾಣಕ್ಕೆ ಒಂದು ಬಾಣವು ತಾಕದಂತೆ ಅರ್ಜುನನು ಯುದ್ಧದಲ್ಲಿ ಬಾಣಗಳನ್ನು ಪ್ರಯೋಗಿಸುವುದನ್ನು ಕುರುಗಳು ನೋಡಿದರು.

ದಿಕ್ಷು ಸರ್ವಾಸು ವಿಪುಲಃ ಶುಶ್ರುವೇऽಥ ಜನೈಸ್ತಥಾ ॥೬೬॥

ದ್ರೋಣಸ್ಯಾಪಿ ಧನುಘೋರ್ಷೋ ವಿದ್ಯುತ್‌ಸ್ತನಿತನಿಸ್ವನಃ ।
ಅಭವದ್ ವಿಸ್ಮಯಕರಃ ಸೈನ್ಯಾನಾಂ ಭರತರ್ಷಭ ॥೬೭॥

ಸಿಡಿಲು-ಮಿಂಚುಗಳಂತಿದ್ದ ದ್ರೋಣರ ವಿಪುಲವಾದ ಧನುಘೋರ್ಷವೂ ಆಗ ಎಲ್ಲ ದಿಕ್ಕುಗಳಲ್ಲಿಯೂ ಜನರಿಂದ ಕೇಳಲ್ಪಟ್ಟಿತು. ಎಲೈ ಭರತರ್ಷಭನೇ, ಅದು ಸೈನ್ಯಗಳಿಗೆ ವಿಸ್ಮಯವನ್ನು ಉಂಟು ಮಾಡಿತು.

ತಸ್ಯ ಜಾಂಬೂನದಮಯೈರ್ದೀಪ್ತೈರಗ್ನಿಸಮೈಃ ಶರೈಃ ।
ಪ್ರಾಚ್ಛಾದಯದಮೇಯಾತ್ಮಾ ದಿಶಃ ಸೂರ್ಯಸ್ಯ ಚ ಪ್ರಭಾಮ್ ॥೬೮॥

ಅನಂತರ ಸುವರ್ಣಮಯವಾದ, ಜ್ವಲಿಸುವ ಅಗ್ನಿಗೆ ಸಮಾನವಾದ ಶರಗಳಿಂದ ಅಪ್ರಮೇಯಾತ್ಮರಾದ ದ್ರೋಣರು ಎಲ್ಲ ದಿಕ್ಕುಗಳನ್ನೂ ಮತ್ತು ಸೂರ್ಯನ ಬೆಳಕನ್ನೂ ಮುಚ್ಚಿದರು.

ತತಃ ಕನಕಪುಂಖಾನಾಂ ಶರಾಣಾಂ ನತಪರ್ವಣಾಮ್ ।
ವಿಯದ್ಗತಾನಾಂ ಚರತಾಂ ದೃಶ್ಯಂತೇ ಬಹವೋ ಪ್ರಜಾಃ ॥೬೯॥

ಆಗ ಸುವರ್ಣಪುಂಖ (ಬಾಣಗಳ ಹಿಂಭಾಗ) ವುಳ್ಳ, ಮುಂಭಾಗವು ಬಾಗಿದ ಆಕಾಶದಲ್ಲಿ ಸಂಚರಿಸುವ, ಬಾಣಗಳ ಅನೇಕ ಸಮೂಹಗಳು ಕಂಡುಬಂದವು.

ಶರಾಸನಾತ್ ತು ದ್ರೋಣಸ್ಯ ಪ್ರಭವಂತಿ ಸ್ಮ ಸಾಯಕಾಃ ।
ಏಕೋ ದೀರ್ಘ ಇವಾಪಾಂಗಾತ್ ಪ್ರದೃಶ್ಯಂತೇ ಮಹಾಶರಾಃ ॥೭೦॥

ಆಕಾಶೇ ಸಮದೃಶ್ಯಂತ ಹಂಸಾನಾಮಿವ ಪಂಕ್ತಯಃ ॥೭೧॥

ದ್ರೋಣರ ಧನುಸ್ಸಿನಿಂದ ಹೊರಹೊಮ್ಮಿ ದ್ರೋಣರ ಕಟಾಕ್ಷದಿಂದ ಪ್ರಾರಂಭಿಸಿ ಒಂದರ ಹಿಂದೆ ಒಂದು ಹೋಗುವ ಮಹಾಬಾಣಗಳು ಆಕಾಶದಲ್ಲಿ ಹೋಗುವ ಹಂಸಗಳ ಪಂಕ್ತಿಯಂತೆ ಕಂಡುಬಂದವು.

ಏವಂ ಸುವರ್ಣವಿಕೃತಾನ್ ವಿಮುಂಚಂತೌ ಬಹೂನ್ ಶರಾನ್ ।
ಆಕಾಶಂ ಸಂವೃತಂ ವೀರಾವುಲ್ಕಾಭಿರಿವ ಚಕ್ರತುಃ ॥೭೨॥

ಹೀಗೆ ಇಬ್ಬರೂ ಸುವರ್ಣಮಯವಾದ ಅನೇಕ ಬಾಣಗಳನ್ನು ಪ್ರಯೋಗಿಸುತ್ತಾ ವೀರರಾದ ಅವರಿಬ್ಬರೂ ಆಕಾಶವನ್ನು ಉಲ್ಕೆಗಳಿಂದಲೋ ಎಂಬಂತೆ ತುಂಬಿದರು.

ತಯೋಃ ಶರಾಶ್ಚ ವಿಬಭುಃ ಕಂಕಬರ್ಹಿಣವಾಸಸಃ ।
ಪಂಕ್ತಯಃ ಶರದಿ ಮತ್ತಾನಾಂ ಸಾರಸಾನಾಮಿವಾಂಬರೇ ॥೭೩॥

ಅವರಿಬ್ಬರ ಬಾಣಗಳು ಕಂಕ ಪಕ್ಷಿಯ ಗರಿಗಳಿಂದ ಭೂಷಿತವಾಗಿ ಶರತ್ಕಾಲದಲ್ಲಿ ಆಕಾಶದಲ್ಲಿ ಸಂಚರಿಸುವ ಮದಿಸಿದ ಸಾರಸಗಳ ಪಕ್ಷಿಸಾಲಿನಂತೆ ಶೋಭಿಸಿದವು.

ತತ್ತು ಯುದ್ಧಂ ಮಹದ್ಘೋರಂ ತಯೋಃ ಸಂರಬ್ಧಯೋರಭೂತ್ ।
ಅತ್ಯದ್ಭುತಮಚಿಂತ್ಯಂ ಚ ವೃತ್ರವಾಸವಯೋರ್ಯಥಾ ॥೭೪॥

ಕೋಪಗೊಂಡ ಅವರಿಬ್ಬರಿಗೆ ನಡೆದ ಆ ಯುದ್ಧವು ವೃತ್ರವಾಸವರ ಯುದ್ಧದಂತೆ ಮಹಾಘೋರವೂ, ಅತ್ಯದ್ಭುತವೂ ಮತ್ತು ಅಚಿಂತ್ಯವೂ ಆಗಿದ್ದಿತು.

ಮಹಾಗಜಾವಿವಾಸಾದ್ಯ ವಿಷಾಣಾಗ್ರೈಃ ಪರಸ್ಪರಮ್ ।
ಶರೈಃ ಪೂರ್ಣಾಯತೋತ್ಸೃಷ್ಟೈರನ್ಯೋನ್ಯಮಭಿಜಗ್ಮತುಃ ॥೭೫॥

ಬಾಣಗಳನ್ನು ಪೂರ್ಣವಾಗಿ ಹಿಂದಕ್ಕೆ ಎಳೆದು ಪ್ರಯೋಗಿಸಿ ಪರಸ್ಪರವಾಗಿ ಅವರು ತಮ್ಮ ದಂತಗಳಿಂದ ಹೊಡೆದಾಡುವ ಮಹಾಗಜಗಳಂತೆ ಹೊಡೆದಾಡಿದರು.

ಅಥ ತ್ವಾಚಾರ್ಯಮುಖ್ಯೇನ ಶರಾನ್ ಸೃಷ್ಟಾನ್ ಶಿಲಾಶಿತಾನ್ ।
ಅವಾರಯಚ್ಛಿತೈರ್ಬಾಣೈರರ್ಜುನೋ ಜಯತಾಂ ವರಃ ॥೭೬॥

ಅನಂತರ ಜಯಶಾಲಿಗಳಲ್ಲಿ ಶ್ರೇಷ್ಠನಾದ ಅರ್ಜುನನು ಶ್ರೇಷ್ಠರಾದ ಆಚಾರ್ಯರು ಪ್ರಯೋಗಿಸಿದ ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳನ್ನು ತನ್ನ ಹರಿತವಾದ ಬಾಣಗಳಿಂದ ನಿವಾರಿಸಿದನು.

ದರ್ಶಯನ್ನೈಂದ್ರಿರಾತ್ಮಾನಮುಗ್ರಮುಗ್ರಪರಾಕ್ರಮಃ ।
ಇಷುಭಿಸ್ತೂರ್ಣಮಾಕಾಶಂ ಬಹುಭಿಶ್ಚ ಸಮಾವೃಣೋತ್ ॥೭೭॥

ಇಂದ್ರಪುತ್ರನಾದ ಅರ್ಜುನನು ತನ್ನನ್ನು ಉಗ್ರನು ಮತ್ತು ಉಗ್ರಪರಾಕ್ರಮ ಉಳ್ಳವನು ಎಂದು ತೋರಿಸುತ್ತಾ ಶೀಘ್ರವಾಗಿ ಅನೇಕ ಬಾಣಗಳಿಂದ ಆಕಾಶವನ್ನು ಮುಚ್ಚಿದನು.

ಜಿಘಾಂಸಂತಂ ನರವ್ಯಾಘ್ರಮರ್ಜುನಂ ಭೀಮತೇಜಸಮ್ ।
ವಿವ್ಯಾಧ ನಿಶಿತೈರ್ದ್ರೋಣಃ ಶರೈಃ ಸನ್ನತಪರ್ವಭಿಃ ॥೭೮॥

ತನ್ನನ್ನು ಪ್ರಹಾರ ಮಾಡಲು ಬರುತ್ತಿದ್ದ ಭಯಂಕರ ತೇಜಸ್ಸುಳ್ಳ ನರವ್ಯಾಘ್ರನಾದ ಅರ್ಜುನನನ್ನು ಬಾಗಿದ ತುದಿಗಳುಳ್ಳ ಹರಿತವಾದ ಬಾಣಗಳಿಂದ ದ್ರೋಣರು ಚದುರಿಸಿ ಯುದ್ಧವನ್ನು ಮಾಡಿದರು.

ಹೃಷ್ಟಃ ಸಮಭವದ್ ದ್ರೋಣೋ ರಣೇ ಶೌಂಡಃ ಪ್ರತಾಪವಾನ್ ।
ಅರ್ಜುನೇನ ಸಮಂ ಕ್ರೀಡನ್ ಶರೈಃ ಸನ್ನತಪರ್ವಭಿಃ ॥೭೯॥

ಪ್ರತಾಪಶಾಲಿಗಳೂ, ಮಹಾನಿಪುಣರೂ ಆದ ದ್ರೋಣರು ಯುದ್ಧದಲ್ಲಿ ಬಾಗಿದ ತುದಿಯುಳ್ಳ ಬಾಣಗಳಿಂದ ಅರ್ಜುನನ ಜೊತೆಯಲ್ಲಿ ಕ್ರೀಡೆಯನ್ನು ಮಾಡುತ್ತಾ ಸಂತೋಷಗೊಂಡರು.

ತೌ ವ್ಯದಾರಯತಾಂ ಶೂರೌ ಸಂರಬ್ಧೌ ರಣಮೂರ್ಧನಿ ।
ಉದೀರಯಂತೌ ದಿವ್ಯಾನಿ ಬ್ರಹ್ಮಾದ್ಯಸ್ತ್ರಾಣಿ ಸರ್ವಶಃ ॥೮೦॥

ಆ ಇಬ್ಬರು ಶೂರರೂ ಕೋಪಗೊಂಡವರಾಗಿ ಉನ್ನತ ರಣದಲ್ಲಿ ದಿವ್ಯವಾದ ಬ್ರಹ್ಮಾಸ್ತ್ರಮೊದಲಾದವುಗಳನ್ನು ಪ್ರಯೋಗಿಸುತ್ತಾ ಎಲ್ಲವನ್ನೂ ಭೇದಿಸಿದರು.

ಪಾರ್ಥಃ ಸ ಸಮರೇ ಶೂರೋ ದರ್ಶಯನ್ ವೀರ್ಯಮಾತ್ಮನಃ ।
ಸುಮಹಾಸ್ತ್ರೈರ್ಮಹಾತ್ಮಾನಂ ದ್ರೋಣಂ ಪ್ರಾಚ್ಛಾದಯಚ್ಛರೈಃ ॥೮೧॥

ಅಸ್ತ್ರೈರಸ್ತ್ರಾಣಿ ಸಂವಾರ್ಯ ಪಾರ್ಥೋ ದ್ರೋಣಮವಾರಯತ್ ॥೮೨॥

ಅರ್ಜುನನು ಯುದ್ಧದಲ್ಲಿ ತನ್ನ ಪರಾಕ್ರಮವನ್ನು ತೋರಿಸುವವನಾಗಿ ಮಹಾತ್ಮರಾದ ದ್ರೋಣರನ್ನು ತನ್ನ ಮಹಾಸ್ತ್ರಗಳಿಂದಲೂ ಮತ್ತು ಬಾಣಗಳಿಂದಲೂ ಮುಚ್ಚಿದನು. ಅರ್ಜುನನು ತನ್ನ ಅಸ್ತ್ರಗಳಿಂದ ದ್ರೋಣರ ಅಸ್ತ್ರಗಳನ್ನು ನಿವಾರಿಸಿ ದ್ರೋಣರನ್ನು ಮುಚ್ಚಿದನು.

ತಯೋರಾಸೀತ್ ಸಂಪ್ರಹಾರಃ ಕ್ರುದ್ಧಯೋರ್ನರಸಿಂಹಯೋಃ ।
ಅಮೃಷ್ಯಮಾಣಯೋಃ ಸಂಖೇ ಬಲಿವಾಸವಯೋರಿವ ॥೮೩॥

ದರ್ಶಯೇತಾಂ ಮಹಾಸ್ತ್ರಾಣಿ ಭಾರದ್ವಾಜಾರ್ಜುನಾವುಭೌ ॥೮೪॥

ಕ್ರುದ್ಧರಾದ ಯುದ್ಧದಲ್ಲಿ ಪರಸ್ಪರವಾಗಿ ಸಹಿಸದಿರುವ ಆ ಇಬ್ಬರು ನರಶ್ರೇಷ್ಠರಿಗೆ ಉಂಟಾದ ಆ ಸಂಪ್ರಹಾರವು ಬಲಿ ಮತ್ತು ಇಂದ್ರರಿಗೆ ಉಂಟಾದ ಸಂಪ್ರಹಾರದಂತೆ ಇದ್ದಿತು. ದ್ರೋಣ ಮತ್ತು ಅರ್ಜುನರಿಬ್ಬರೂ ತಮ್ಮ ಮಹಾಸ್ತ್ರಗಳನ್ನು ಪ್ರದರ್ಶಿಸಿದರು.

ಐಂದ್ರಂ ವಾಯವ್ಯಮಾಗ್ನೇಯಮಸ್ತ್ರಮಸ್ತ್ರೇಣ ಪಾಂಡವಃ ।
ಮುಕ್ತಂ ಮುಕ್ತಂ ದ್ರೋಣಚಾಪಾದ್ ಗ್ರಸತೇ ಸ್ಮ ಪುನಃ ಪುನಃ ॥೮೫॥

ದ್ರೋಣ ಚಾಪದಿಂದ ಹೊರಹೊಮ್ಮಿದ ಐಂದ್ರಾಸ್ತ್ರ, ವಾಯವ್ಯಾಸ್ತ್ರ, ಆಗ್ನೇಯಾಸ್ತ್ರ ಮೊದಲಾದವುಗಳನ್ನು ಅವರು ಅಸ್ತ್ರಪ್ರಯೋಗವನ್ನು ಮಾಡಿದಂತೆ ಮಾಡಿದಂತೆ ಪುನಃ ಪುನಃ ಅರ್ಜುನನು ಎಲ್ಲವನ್ನೂ ನುಂಗಿದನು (ನಾಶ ಮಾಡಿದನು).

ಏವಂ ಶೂರೌ ಮಹೇಷ್ವಾಸೌ ವಿಸೃಜಂತೌ ಶರಾನ್ ಶಿತಾನ್ ।
ಏಕಚ್ಛಾಯಮಕುರ್ವಾತಾಂ ಗಗನಂ ಶರವೃಷ್ಟಿಭಿಃ ॥೮೬॥

ಹೀಗೆ ಮಹಾಧನುರ್ಧಾರಿಗಳೂ, ಶೂರರೂ ಆದ ಅವರು ಹರಿತವಾದ ಬಾಣಗಳಿಂದ ಉಂಟಾದ ಬಾಣಗಳ ಮಳೆಯಿಂದ ಆಕಾಶದಲ್ಲಿ ಒಂದೇ ಛಾಯೆಯನ್ನು ಮೂಡಿಸಿದರು.

ತತೋಽರ್ಜುನೇ ನ ಮುಕ್ತಾನಾಂ ಪತತಾಂ ಚ ಶರೀರಿಷು ।
ಪರ್ವತೇಷ್ವಿವ ವಜ್ರಾಣಾಂ ಶರಾಣಾಂ ಶ್ರೂಯತೇ ಸ್ವನಃ ॥೮೭॥

ಆಗ ಅರ್ಜುನನಿಂದ ಮುಕ್ತವಾದ, ಸೈನಿಕರ ಶರೀರದಲ್ಲಿ ಬೀಳುವ ಬಾಣಗಳ ಶಬ್ದವು ಪರ್ವತದ ಮೇಲೆ ಪ್ರಯೋಗಿಸಲ್ಪಟ್ಟ ವಜ್ರಾಯುಧದ ಶಬ್ದದಂತೆ ಕೇಳಿಬರುತ್ತಿದ್ದಿತು.

ತತೋ ನಾಗಾ ರಥಾಶ್ಚಾಶ್ವಾ ಸಾದಿನಶ್ಚ ವಿಶಾಂಪತೇ ।
ಶೋಣಿತಾಕ್ತಾಶ್ಚ ದೃಶ್ಯಂತೇ ಪುಷ್ಪಿತಾ ಇವ ಕಿಂಶುಕಾಃ ॥೮೮॥

ಆಗ ಗಜಗಳೂ, ರಥಗಳೂ, ಅಶ್ವಗಳೂ, ಅಶ್ವಸವಾರರೂ, ಎಲ್ಲರೂ ರಕ್ತದಲ್ಲಿ ಅದ್ದಲ್ಪಟ್ಟು ಹೂ ಅರಳಿದ ಮುತ್ತುಗದ ಮರದಂತೆ ಕಂಡುಬಂದರು.

ಬಾಹುಭಿಶ್ಚ ಸಕೇಯೂರೈರ್ನಿಕೃತ್ತೈಶ್ಚ ಮಹಾರಥೈಃ ।
ಸುವರ್ಣಚಿತ್ರೈಃ ಕವಚೈರ್ಧ್ವಜೈಶ್ಚ ವಿನಿಪಾತಿತೈಃ ॥೮೯॥

ಯೋಧೈಶ್ಚ ನಿಹತೈಸ್ತತ್ರ ಪಾರ್ಥಬಾಣಾಭಿಪೀಡಿತೈಃ ।
ಬಲಮಾಸೀತ್ ಸಮುದ್ಭ್ರಾಂತಂ ದ್ರೋಣಾರ್ಜುನಸಮಾಗಮೇ ॥೯೦॥

ದ್ರೋಣಾರ್ಜುನ ಸಮಾಗಮ ಉಂಟಾದಾಗ ಕತ್ತರಿಸಲ್ಪಟ್ಟ ಕೇಯೂರಸಹಿತವಾದ ಬಾಹುಗಳು, ಉರಿದು ಬಿದ್ದ ಮಹಾರಥಗಳು, ಸುವರ್ಣಾಲಂಕೃತವಾದ ಕವಚಗಳು, ಕೆಳಗೆ ಬಿದ್ದ ಧ್ವಜಗಳು, ಅರ್ಜುನನ ಬಾಣದಿಂದ ಪೀಡಿತರಾಗಿ ಮೃತರಾದ ಯೋಧರು ಇವುಗಳನ್ನು ರಣರಂಗದಲ್ಲಿ ನೋಡಿದ ಸೈನ್ಯವು ಉದ್ಭ್ರಾಂತವಾಯಿತು.

ವಿಧೂನ್ವಾನೌ ತು ತೌ ವೀರೌ ಧನುಷೀ ಭಾರಸಾಧನೇ ।
ಪ್ರಾಚ್ಛಾದಯೇತಾಮನ್ಯೋನ್ಯಂ ದಿಧಕ್ಷಂತೌ ಮಹೇಷುಭಿಃ ॥೯೧॥

ವೀರರಾದ ಅವರಿಬ್ಬರೂ ತಮ್ಮಿಬ್ಬರ ಭಾರಸಾಧನವಾದ ಧನುಸ್ಸುಗಳನ್ನು ತೂಗಾಡಿಸುತ್ತಾ ದೊಡ್ಡ ಬಾಣಗಳಿಂದ ಪರಸ್ಪರವಾಗಿ ಸುಡಲು ಇಚ್ಛಿಸುತ್ತಾ ಪರಸ್ಪರವಾಗಿ ಮುಚ್ಚಿದರು.

ಅಥಾಂತರಿಕ್ಷೇ ನಾದೋಽಭೂದ್ ದ್ರೋಣಂ ತತ್ರ ಪ್ರಶಂಸತಾಮ್ ॥

ದುಷ್ಕರಂ ಕೃತವಾನ್ ದ್ರೋಣೋ ಯದರ್ಜುನಮಯೋಧಯತ್ ।
ಪ್ರಮಾಥಿನಂ ಮಹಾವೀರ್ಯಂ ದೃಢಮುಷ್ಟಿಂ ದುರಾಸದಮ್ ॥೯೩॥

ಜೇತಾರಂ ಸರ್ವಸೈನ್ಯಾನಾಂ ಸರ್ವೇಷಾಂ ಚ ಮಹಾರಥಮ್ ॥೯೪॥

ಅನಂತರ ಆಕಾಶದಲ್ಲಿ ದ್ರೋಣರನ್ನು ಹೀಗೆ ಪ್ರಶಂಸಿಸುವರ ಮಹಾನಾದವು ಉಂಟಾಯಿತು. ಶತ್ರುಗಳನ್ನು ಕಲಕುವವನೂ, ಮಹಾವೀರ್ಯನೂ, ದೃಢಮುಷ್ಟಿಯೂ, ಸಮೀಪಕ್ಕೆ ಹೋಗಲು ಅಸಾಧ್ಯನಾದವನೂ, ಎಲ್ಲಸೈನ್ಯವನ್ನೂ ಜಯಿಸುವವನೂ ಮತ್ತು ಎಲ್ಲಾ ರಥಿಕರಲ್ಲೂ ಮಹಾರಥನಾದವನೂ ಆದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿ ದ್ರೋಣರು ದುಷ್ಕರವಾದ ಮಹಾಕಾರ್ಯವನ್ನು ಮಾಡಿದರು (ಎಂದು ಕೇಳಿಬಂದಿತು).

ಅವಿಭ್ರಮಂ ಚ ಶಿಕ್ಷಾಂ ಚ ಲಾಘವಂ ದೂರಪಾತನಮ್ ।
ಪಾರ್ಥಸ್ಯ ಸಮರೇ ದೃಷ್ಟ್ವಾ ದ್ರೋಣಸ್ಯಾಸೀತ್ ಸುವಿಸ್ಮಯಃ ॥೯೫॥

ಯುದ್ಧದಲ್ಲಿ ಅರ್ಜುನನ ಸಮಾಧಾನವನ್ನೂ, ಅಭ್ಯಾಸವನ್ನೂ, ವೇಗವನ್ನೂ, ದೂರಪಾತವನ್ನೂ ನೋಡಿ ದ್ರೋಣರಿಗೆ ಬಹಳ ಆಶ್ಚರ್ಯವಾಯಿತು.

ತತ್ ಪ್ರವೃತ್ತಂ ಚಿರಂ ಘೋರಂ ತಯೋರ್ಯುದ್ಧಂ ಮಹಾತ್ಮನೋಃ ।
ಅವರ್ತತ ಮಹಾರೌದ್ರಂ ಲೋಕಸಂಕ್ಷೋಭಕಾರಕಮ್ ॥೯೬॥

ಆ ಇಬ್ಬರು ಮಹಾತ್ಮರಿಗೆ ಬಹಳ ಕಾಲದವರೆಗೆ ಘೋರವೂ, ಮಹಾಭಯಂಕರವೂ, ಲೋಕಸಂಕ್ಷೋಭಕಾರಕವೂ ಆದ ಯುದ್ಧವು ನಡೆಯಿತು.

ಅಥ ಗಾಂಡೀವಮುದ್ಯಮ್ಯ ದಿವ್ಯಂ ಧನುರಮರ್ಷಣಃ ।
ವಿಚಕರ್ಷ ರಣೇ ಪಾರ್ಥೋ ಬಾಹುಭ್ಯಾಂ ಭರತರ್ಷಭಃ ॥೯೭॥

ಅನಂತರ ಭರತರ್ಷಭನಾದ ಅರ್ಜುನನು ಸಿಟ್ಟುಗೊಂಡು ಯುದ್ಧದಲ್ಲಿ ತನ್ನ ಬಾಹುಗಳಿಂದ ದಿವ್ಯವಾದ ಗಾಂಡೀವ ಧನುಸ್ಸನ್ನು ಎತ್ತಿ ಹೆದೆಯನ್ನು ಎಳೆದನು.

ತಸ್ಯ ಬಾಣಮಯಂ ವರ್ಷಂ ಶಲಭಾನಾಮಿವಾಭವತ್ ।
ನ ಚ ಬಾಣಾಂತರೇ ತಸ್ಯ ವಾಯುಃ ಶಕ್ನೋತಿ ಸರ್ಪಿತುಮ್ ॥೯೮॥

ಪತಂಗಗಳ ಪಂಕ್ತಿಯಂತೆ ಇರುವ ಬಾಣಗಳ ಮಳೆಯನ್ನು ಸೃಷ್ಟಿಸಿದನು. ಆ ಬಾಣಗಳ ಮಧ್ಯದಲ್ಲಿ ವಾಯುವೂ ನುಸುಳಲು ಸಾಧ್ಯವಿರಲಿಲ್ಲ.

ಅಭೀಕ್ಷ್ಣಂ ಸಂದಧಾನಸ್ಯ ಬಾಣಾನುತ್ಸೃಜತಸ್ತದಾ ।
ದದೃಶೇ ನಾಂತರಂ ಕಿಂಚಿತ್ ಪಾರ್ಥಸ್ಯ ಪತತೋಽಪಿ ಚ ॥೯೯॥

ಸತತವಾಗಿ ಬಾಣಗಳನ್ನು ಹೂಡುವ, ಅವುಗಳನ್ನು ಎಳೆದು ಪ್ರಯೋಗಿಸುವ, ಮತ್ತು ಎಲ್ಲಾ ದಿಕ್ಕುಗಳಲ್ಲಿಯೂ ಸಂಚರಿಸುವ, ಅರ್ಜುನನಲ್ಲಿ ಮಧ್ಯೆ ಯಾವ ಅಂತರವೂ ಕಾಣಲಿಲ್ಲ.

ಯುದ್ಧೇ ತು ಕೃತಶೀಘ್ರಾಸ್ತ್ರೇ ವರ್ತಮಾನೇಽತಿದಾರುಣೇ ।
ಶೀಘ್ರಾಚ್ಛೀಘ್ರತರಂ ಪಾರ್ಥಃ ಶರಾನನ್ಯಾನುದೈರಯತ್ ॥೧೦೦॥

ತತಃ ಶತಸಹಸ್ರಾಣಿ ಶರಾಣಾಂ ನತಪರ್ವಣಾಮ್ ।
ಯುಗಪತ್ ಪ್ರಾಪತಂಸ್ತತ್ರ ದ್ರೋಣಸ್ಯ ರಥಮಂತಿಕಾತ್ ॥೧೦೧॥

ಶೀಘ್ರಾಸ್ತ್ರವನ್ನು ಹೊಂದಿದ ಅರ್ಜುನನು ಅತಿದಾರುಣವಾಗಿ ಯುದ್ಧವನ್ನು ಮಾಡುತ್ತಿರುವಾಗ ಶೀಘ್ರಗಳಿಗಿಂತ ಶೀಘ್ರಗಳಾದ ಬಾಣಗಳನ್ನು ಸೃಷ್ಟಿಸಿದನು. ಅನಂತರ ಬಾಗಿದ ತುದಿಯುಳ್ಳ ಒಂದು ಲಕ್ಷ ಬಾಣಗಳನ್ನು ಅರ್ಜುನನು ದ್ರೋಣರ ರಥದ ಸಮೀಪದಲ್ಲಿ ಬೀಳುವಂತೆ ಸೃಷ್ಟಿಸಿದನು.

ವಿಕೀರ್ಯಮಾಣೇ ದ್ರೋಣೇ ತು ಶರೈರ್ಗಾಂಡೀವಧನ್ವನಾ ।
ಹಾಹಾಕಾರೋ ಮಹಾನಾಸೀತ್ ಸೈನ್ಯಾನಾಂ ಭರತರ್ಷಭ ॥೧೦೨॥

ಎಲೈ ಭರತರ್ಷಭನೇ, ದ್ರೋಣರಿಗೆ ಹೀಗೆ ಗಾಂಡೀವ ಮುಕ್ತವಾದ ಶರಗಳಿಂದ ಸೈನ್ಯಗಳಲ್ಲಿ ದೊಡ್ಡ ಹಾಹಾಕಾರ ಉಂಟಾಯಿತು.

ಪಾಂಡವಸ್ಯ ಚ ಶೀಘ್ರಾಸ್ತ್ರಂ ಮಘವಾನ್ ಸಮಪೂಜಯತ್ ।
ಗಂಧರ್ವಾಪ್ಸರಸಶ್ಚೈವ ಯೇ ಚ ತತ್ರ ಸಮಾಗತಾಃ ॥೧೦೩॥

ಪಾಂಡವನಾದ ಅರ್ಜುನನ ಅಸ್ತ್ರಗಳ ಶೀಘ್ರತೆಯನ್ನು ನೋಡಿ ಇಂದ್ರನೂ, ಅಲ್ಲಿಗೆ ಬಂದಿದ್ದ ಗಂಧರ್ವಾಪ್ಸರಸರೂ ಪೂಜಿಸಿದರು.

ದ್ರೋಣಂ ಯುದ್ಧಾರ್ಣವೇ ಮಗ್ನಂ ದೃಷ್ಟ್ವಾ ಪುತ್ರಃ ಪ್ರತಾಪವಾನ್ ।
ತತೋ ವೃಂದೇನ ಮಹತಾ ರಥಿನಾಂ ರಥಯೂಥಪಃ ॥೧೦೪॥

ಆಚಾರ್ಯಪುತ್ರಸ್ತು ಶರೈಃ ಪಾಂಡವಂ ಪ್ರತ್ಯವಾರಯತ್ ॥೧೦೫॥

ದ್ರೋಣರು ಹೀಗೆ ಯುದ್ಧಸಾಗರದಲ್ಲಿ ಮುಳುಗಿದುದನ್ನು ನೋಡಿ ಪ್ರತಾಪಶಾಲಿಯೂ, ಮಹಾರಥರ ಯೂಥಗಳಿಗೆ (ಸಮೂಹ) ಒಡೆಯನೂ ಆದ ಆಚಾರ್ಯಪುತ್ರನಾದ ಅಶ್ವತ್ಥಾಮನು ರಥದ ಸಮೂಹದಿಂದ ಅರ್ಜುನನ ಸಮೀಪಕ್ಕೆ ಬಂದು ಅವನನ್ನು ತಡೆದನು.

ಅಶ್ವತ್ಥಾಮಾ ತು ತತ್ಕರ್ಮ ಹೃದಯೇನ ಮಹಾತ್ಮನಃ ।
ಪೂಜಯಾಮಾಸ ಪಾರ್ಥಸ್ಯ ಕೋಪಂ ಚಾಸ್ಯ ತದಾऽಕರೋತ್ ॥೧೦೬॥

ಅಶ್ವತ್ಥಾಮನು ಮಹಾತ್ಮನಾದ ಅರ್ಜುನನ ಆ ಸಾಹಸಕರ್ಮವನ್ನು ಮನಸ್ಸಿನಲ್ಲಿಯೇ ಪೂಜಿಸಿ ಆಗ ಅವನ ಮೇಲೆ ಕೋಪವನ್ನು ಮಾಡಿದನು.

ಸ ಮನ್ಯುವಶಮಾಪನ್ನಃ ಪಾರ್ಥಮಭ್ಯದ್ರವದ್ ರಣೇ ।
ಕಿರನ್ ಶತಸಹಸ್ರಾಣಿ ಪರ್ಜನ್ಯ ಇವ ವೃಷ್ಟಿಮಾನ್ ॥೧೦೭॥

ಅವನು ಕೋಪಕ್ಕೆ ವಶನಾಗಿ ಮಳೆಯನ್ನು ಸುರಿಸುವ ಪರ್ಜನ್ಯನಂತೆ ಸಹಸ್ರಾರು ಶರಗಳನ್ನು ಸೃಷ್ಟಿಸುತ್ತಾ ಯುದ್ಧದಲ್ಲಿ ಅರ್ಜುನನ ಕಡೆಗೆ ಧಾವಿಸಿದನು.

ಆವೃತ್ಯ ಸ ಮಹಾಬಾಹುರ್ಯತೋ ದ್ರೌಣಿಸ್ತತೋ ಹಯಾನ್ ।
ಅಂತರಂ ಪ್ರದದೌ ಪಾರ್ಥೋ ದ್ರೋಣಸ್ಯ ವ್ಯಪಸರ್ಪಿತುಮ್ ॥೧೦೮॥

ಮಹಾಬಾಹುವಾದ ಅರ್ಜುನನು ತನ್ನ ರಥವನ್ನು ಅಶ್ವತ್ಥಾಮರಿದ್ದ ಕಡೆಗೆ ತಿರುಗಿಸಿ ದ್ರೋಣರಿಗೆ ಹಿಂದೆ ಸರಿಯಲು ಅವಕಾಶವನ್ನು ಮಾಡಿಕೊಟ್ಟನು.

ಸ ತು ಲಬ್ಧಾಂತರಸ್ತೂರ್ಣಮಪಯಾಜ್ಜವನೈರ್ಹಯೈಃ ।
ಛಿನ್ನವರ್ಮಧ್ವಜರಥೋ ನಿಕೃತ್ತಃ ಪರಮೇಷುಭಿಃ ॥೧೦೯॥

ಅವಕಾಶವನ್ನು ಪಡೆದ ದ್ರೋಣರು ತಮ್ಮ ಕವಚ ಧ್ವಜರಥಗಳೆಲ್ಲವೂ ಛಿನ್ನವಾಗಿ ಅರ್ಜುನನ ಶ್ರೇಷ್ಠವಾದ ಬಾಣಗಳಿಂದ ದೇಹದಲ್ಲಿ ಗಾಯವಾಗಿರಲು ಶೀಘ್ರವಾಗಿ ಹೋಗುವ ಅಶ್ವಗಳಿಂದ ರಣಭೂಮಿಯಿಂದ ಹೊರಟುಹೋದರು.

ಪರಾಜಿತೇ ರಣೇ ದ್ರೋಣೇ ದ್ರೋಣಪುತ್ರಃ ಸಮಾಗತಃ ।
ಸದಂಡ ಇವ ರಕ್ತಾಕ್ಷಃ ಕೃತಾಂತಃ ಸಮರೇ ಸ್ಥಿತಃ ॥೧೧೦॥

ದ್ರೋಣರು ಯುದ್ಧದಲ್ಲಿ ಪರಾಜಿತರಾಗುತ್ತಿರಲು ದ್ರೋಣಪುತ್ರರಾದ ಅಶ್ವತ್ಥಾಮರು ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ ದಂಡವನ್ನು ಹಿಡಿದ ಯಮನಂತೆ ಯುದ್ಧದಲ್ಲಿ ಉಪಸ್ಥಿತರಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಅಷ್ಟಪಂಚಾಶೋऽಧ್ಯಾಯಃ ॥

ಗೋಗ್ರಹಣಪರ್ವಣಿ ದ್ವಾತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ಐವತ್ತೊಂಬತ್ತನೆಯ ಅಧ್ಯಾಯ

ಅಶ್ವತ್ಥಾಮನ ಪರಾಜಯ

ವೈಶಂಪಾಯನಃ

ತಂ ಪಾರ್ಥಃ ಪ್ರತಿಜಗ್ರಾಹ ವಾಯುವೇಗಮಿವೋದ್ಧತಃ ।
ಶರಜಾಲೇನ ಮಹತಾ ವರ್ಷಮಾಣ ಇವಾಂಬುದಃ ॥೧॥

ವೈಶಂಪಾಯನ– ವಾಯುವೇಗದಂತೆ ಬಂದ ಅಶ್ವತ್ಥಾಮರನ್ನು ಉದ್ಧತವಾದ ಮೋಡವು ಮಳೆಯನ್ನು ಸುರಿಸುವಂತೆ ದೊಡ್ಡ ಬಾಣಗಳ ಜಾಲದ ಮಳೆಯನ್ನು ಸುರಿಸುತ್ತಾ ಅರ್ಜುನನು ಎದುರಿಸಿದನು.

ತಯೋರ್ದೇವಾಸುರಸಮಃ ಸನ್ನಿಪಾತೋ ಮಹಾನಭೂತ್ ।
ಕಿರತೋಃ ಶರಜಾಲಾನಿ ವೃತ್ರವಾಸವಯೋರಿವ ॥೨॥

ಶರಜಾಲಗಳನ್ನು ಎಸೆಯುತ್ತಾ ವೃತ್ರ ಮತ್ತು ಇಂದ್ರನಂತೆ ಯುದ್ಧವನ್ನು ಮಾಡುತ್ತಿದ್ದ ಅವರ ದೊಡ್ಡ ಹೋರಾಟವು ದೇವಾಸುರರ ಹೋರಾಟಕ್ಕೆ ಸಮನಾಗಿದ್ದಿತು.

ನ ಸ್ಮ ಸೂರ್ಯಸ್ತದಾ ಭಾತಿ ನ ಚ ವಾತಿ ಸಮೀರಣಃ ।
ಶರಜಾಲೇ ಕೃತೇ ವ್ಯೋಮ್ನಿ ಛಾಯಾಭೂತಮಿವಾಭವತ್ ॥೩॥

ಆಗ ಸೂರ್ಯನೂ ಪ್ರಕಾಶಿಸಲಿಲ್ಲ. ವಾಯುವೂ ಬೀಸಲಿಲ್ಲ. ಶರಜಾಲವು ಆಕಾಶದಲ್ಲಿ ಹರಡಿದಾಗ ಎಲ್ಲ ಕಡೆಯಲ್ಲಿಯೂ ನೆರಳು ಉಂಟಾದಂತೆ ಆಯಿತು.

ಮಹಾಂಶ್ಚಟಾಚಟಾಶಬ್ದೋ ಯೋಧಯೋರ್ಯುಧ್ಯಮಾನಯೋಃ ।
ದಹ್ಯತಾಮಿವ ವೇಣೂನಾಮಾಸೀತ್ ಪರಮದಾರುಣಃ ॥೪॥

ಯುದ್ಧ ಮಾಡುವ ಅವರಿಂದ ಉಂಟಾದ ಚಟಚಟಾಶಬ್ದವು ಉರಿಯುವ ಬಿದಿರುಗಳ ಶಬ್ದದಂತೆ ಪರಮ ದಾರುಣವಾಗಿದ್ದಿತು.

ಹಯಾಂಸ್ತಸ್ಯಾರ್ಜುನಃ ಸಂಖ್ಯೇ ಕೃತವಾನಲ್ಪಚೇತಸಃ ।
ತೇ ರಾಜನ್ನ ಪ್ರಜಾನಂತಿ ದಿಶಂ ಕಾಂಚನ ಮೋಹಿತಾಃ ॥೫॥

ಅಶ್ವತ್ಥಾಮರ ಅಶ್ವಗಳನ್ನು ಅರ್ಜುನನು ಯುದ್ಧದಲ್ಲಿ ಮೂಢಚೇತನಗಳನ್ನಾಗಿ ಮಾಡಿದನು. ಮೋಹಿತವಾದ ಆ ಅಶ್ವಗಳು ಎಲ್ಲೆ ರಾಜನೇ ಯಾವ ದಿಕ್ಕೂ ತಿಳಿಯಲಿಲ್ಲ.

ತತೋ ದ್ರೌಣಿರ್ಮಹಾವೀರ್ಯಃ ಪಾರ್ಥಸ್ಯ ವಿಚರಿಷ್ಯತಃ ।
ವಿವರಂ ಸೂಕ್ಷ್ಮಮಾಲೋಕ್ಯ ಜ್ಯಾಂ ನುನೋದ ಕ್ಷುರೇಣ ಚ ॥೬॥

ಆಗ ಮಹಾಪರಾಕ್ರಮಶಾಲಿಗಳಾದ ಅಶ್ವತ್ಥಾಮರು ಯುದ್ಧದಲ್ಲಿ ಸಂಚರಿಸುವ ಅರ್ಜುನನ ಒಂದು ಸೂಕ್ಷ್ಮ ಅವಕಾಶವನ್ನು ನೋಡಿ ಅವನ ಧನುಸ್ಸಿನ ಹೆದೆಯನ್ನು ಕ್ಷುರದಿಂದ ಕತ್ತರಿಸಿದರು.

ತದಸ್ಯಾಪೂಜಯನ್ ದೇವಾಃ ಕರ್ಮ ದೃಷ್ಟ್ವಾತಿಮಾನುಷಮ್ ।
ನ ಶಕ್ತೋಽನ್ಯಃ ಪುಮಾನ್ ಸ್ಥಾತುಮ್ ಋತೇ ದ್ರೌಣೇರ್ಧನಂಜಯಮ್॥

ಅವರ ಈ ಅತಿಮಾನುಷ ಕರ್ಮವನ್ನು ನೋಡಿ ದೇವತೆಗಳು ಅಶ್ವತ್ಥಾಮರನ್ನು ಬಿಟ್ಟು ಅರ್ಜುನನ ಎದುರಿಗೆ ಇನ್ನೊಬ್ಬ ಪುರುಷನು ನಿಲ್ಲಲಾರ ಎಂದು ಹೇಳಿ ಅವರ ಆ ಕರ್ಮವನ್ನು ಪೂಜಿಸಿದರು.

ತತೋ ದ್ರೌಣಿರ್ಧನೂಂಷ್ಯಷ್ಟೌ ವ್ಯತಿಕ್ರಮ್ಯ ನರರ್ಷಭಃ ।
ಪುನರಭ್ಯಹನತ್ ಪಾರ್ಥಂ ಹೃದಯೇ ಕಂಕಪತ್ರಿಭಿಃ ॥೮॥

ಅನಂತರ ನರರ್ಷಭರಾದ ಅಶ್ವತ್ಥಾಮರು ಎಂಟು ಧನುರ್ಧಾರಿಗಳನ್ನು ದಾಟಿ ಪುನಃ ಪಾರ್ಥನ ಹೃದಯಕ್ಕೆ ಕಂಕಪತ್ರಗಳನ್ನುಳ್ಳ ಬಾಣಗಳಿಂದ ಹೊಡೆದರು.

ತತಃ ಪಾಥೋ೯ ಮಹಾಬಾಹುಃ ಪ್ರಹಸನ್ ಸ್ವನವತ್ ತದಾ ।
ಯೋಜಯಾಮಾಸ ಚ ತದಾ ಮೌರ್ವ್ಯಾ ಗಾಂಡೀವಮೋಜಸಾ ॥೯॥

ಆಗ ಮಹಾಬಾಹುವಾದ ಅರ್ಜುನನು ಗಟ್ಟಿಯಾಗಿ ನಗುತ್ತಾ ಗಾಂಡೀವ ಧನುಸ್ಸಿಗೆ ಹೆದೆಯನ್ನು ಪುನಃ ಜೋಡಿಸಿದನು (ಗಾಂಡೀವ ಧನುಸ್ಸಿನ ಹೆದೆಯನ್ನು ಕತ್ತರಿಸಿದರೆ ಅದುತಾನೇ ಬೆಳೆದು ಮೊದಲಿನಂತೆ ಆಗುತ್ತದೆ. ಅದನ್ನು ತೆಗೆದು ಬೇರೆ ಹೆದೆಯನ್ನು ಕಟ್ಟುವ ಪ್ರಸಂಗವಿಲ್ಲ-ವಾದಿರಾಜರು).

ತಂ ದೃಷ್ಟ್ವಾ ಕ್ರುದ್ಧಮಾಯಾಂತಂ ಪ್ರಭಿನ್ನಮಿವ ಕುಂಜರಮ್ ।
ಕ್ರುದ್ಧಃ ಸಮಾಹ್ವಯಾಮಾಸ ದ್ರೌಣಿರ್ಯುದ್ಧಾಯ ಭಾರತ ॥೧೦॥

ಎಲೈ ಭಾರತನೇ, ಮದಿಸಿದ ಆನೆಯಂತೆ ನುಗ್ಗಿಬರುತ್ತಿದ್ದ ಅರ್ಜುನನನ್ನು ನೋಡಿ ಕೋಪಗೊಂಡ ಅಶ್ವತ್ಥಾಮರು ಅವನನ್ನು ಯುದ್ಧಕ್ಕೆ ಆಹ್ವಾನ ಮಾಡಿದರು.

ತತೋಽರ್ಧಚಂದ್ರಮಾಹೃತ್ಯ ತೇನ ಪಾರ್ಥಃ ಸಮಾಹತಃ ।
ವಾರಣೇನೇವ ಮತ್ತೇನ ಮತ್ತೋ ವಾರಣಯೂಥಪಃ ॥೧೧॥

ಅನಂತರ ಅಶ್ವತ್ಥಾಮರು ಅರ್ಧಚಂದ್ರವನ್ನು ತೆಗೆದುಕೊಂಡು ಒಂದು ಮದಗಜವು ಇನ್ನೊಂದು ಸಲಗನಾದ ಮದಗಜವನ್ನು ಎದುರಿಸಿದಂತೆ ಅರ್ಜುನನಿಗೆ ಪ್ರಹಾರ ಮಾಡಿದರು.

ತತಃ ಪ್ರವವೃತೇ ಯುದ್ಧಂ ಪೃಥಿವ್ಯಾಮೇಕವೀರಯೋಃ ।
ರಣಮಧ್ಯೇ ತಯೋರಾಸೀತ್ ಸುಮಹದ್ರೋಮಹರ್ಷಣಮ್ ॥೧೨॥

ಅನಂತರ ಭೂಮಿಯಲ್ಲಿ ಏಕವೀರರಾದ ಅವರಿಬ್ಬರಿಗೆ ರಣರಂಗದಲ್ಲಿ ರೋಮಾಂಚನಕಾರಿಯಾದ ದೊಡ್ಡ ಯುದ್ಧವು ನಡೆಯಿತು.

ತೌ ವೀರೌ ಕುರವಃ ಸರ್ವೇ ದದೃಶುರ್ವಿಸ್ಮಯಾನ್ವಿತಾಃ ।
ಯುಧ್ಯಮಾನೌ ಮಹಾತ್ಮಾನೌ ದ್ವಿರದಾವಿವ ಸಂಗತೌ ॥೧೩॥

ಎರಡು ಮಹಾಗಜಗಳಂತೆ ಯುದ್ಧಮಾಡುತ್ತಿರುವ ಆ ಮಹಾನುಭಾವರಿಬ್ಬರನ್ನೂ ವಿಸ್ಮಯಾವಿಷ್ಟರಾಗಿ ಎಲ್ಲ ಕುರುಗಳೂ ನೋಡಿದರು.

ತೌ ಸಮಾಜಘ್ನತುರ್ವೀರೌ ಪರಸ್ಪರಮಮರ್ಷಣೌ ।
ಶರೈರಾಶೀವಿಷಾಕಾರೈರ್ಜ್ವಲದ್ಭಿರಿವ ಪಾವಕೈಃ ॥೧೪॥

ಆ ಇಬ್ಬರು ವೀರರು ಸರ್ಪಗಳ ಆಕಾರವನ್ನು ಹೊಂದಿದ, ಜ್ವಲಿಸುವ ಅಗ್ನಿಯಂತಿರುವ ಬಾಣಗಳಿಂದ ಪರಸ್ಪರ ಕ್ರೋಧವನ್ನು ಉಳ್ಳವರಾಗಿ ಒಬ್ಬರನ್ನೊಬ್ಬರು ಹೊಡೆದರು.

ಅಕ್ಷಯ್ಯಾವಿಷುಧೀ ದಿವ್ಯೌ ಪಾಂಡವಸ್ಯ ಮಹಾತ್ಮನಃ ।
ತೇನ ಪಾರ್ಥೋ ರಣೇ ಶೂರಸ್ತಸ್ಥೌ ಗಿರಿರಿವಾಚಲಃ ॥೧೫॥

ಮಹಾತ್ಮನಾದ ಅರ್ಜುನನಿಗೆ ದಿವ್ಯವಾದ ಅಕ್ಷಯಬತ್ತಳಿಕೆ ಇದ್ದಿತು. ಆ ನಿಮಿತ್ತದಿಂದಾಗಿ ಶೂರನಾದ ಅರ್ಜುನನು ಪರ್ವತದಂತೆ ಅಚಲನಾಗಿ ನಿಂತನು.

ಅಶ್ವತ್ಥಾಮ್ನಃ ಪುನರ್ಬಾಣಾಃ ಕ್ಷಿಪ್ರಮಭ್ಯಸ್ಯತೋ ರಣೇ ।
ಜಗ್ಮುಃ ಪರಿಕ್ಷಯಂ ಶೀಘ್ರಮಭೂತ್ ತೇನಾಧಿಕೋऽರ್ಜುನಃ ॥೧೬॥

ಆದರೆ ಶೀಘ್ರವಾಗಿ ಪ್ರಯೋಗಿಸುತ್ತಿದ್ದ ಅಶ್ವತ್ಥಾಮರ ಬಾಣಗಳು ಬೇಗ ಬರಿದಾದವು. ಅದರಿಂದ ಅರ್ಜುನನು ಅಧಿಕನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಏಕೋನಷಷ್ಟಿತಮೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ದ್ವಾತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಅರವತ್ತನೆಯ ಅಧ್ಯಾಯ

ಅರ್ಜುನನಿಂದ ಒಟ್ಟಿಗೆ ದ್ರೋಣಾದಿಗಳ ಜೊತೆಯಲ್ಲಿ ಯುದ್ಧ

ವೈಶಂಪಾಯನಃ

ಏತಸ್ಮಿನ್ನಂತರೇ ತತ್ರ ಮಹಾವೀರ್ಯಪರಾಕ್ರಮಃ ।
ಆಜಗಾಮ ಮಹಾವೀರ್ಯಃ ಕೃಪಃ ಶಸ್ತ್ರಭೃತಾಂ ವರಃ ॥೧॥

ಅರ್ಜುನಂ ಪ್ರತಿಯೋದ್ಧುಂ ವೈ ಯುದ್ಧಕಾಮೀ ಮಹಾರಥಃ ॥೨॥

ವೈಶಂಪಾಯನ– ಈ ಮಧ್ಯದಲ್ಲಿ ಮಹಾವೀರ್ಯಪರಾಕ್ರಮರೂ, ಮಹಾವೀರ್ಯರೂ, ಮಹಾರಥರೂ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ ಆದ ಕೃಪಾಚಾರ್ಯರು ಯುದ್ಧಕಾಮನೆಯುಳ್ಳವರಾಗಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಅಲ್ಲಿಗೆ ಬಂದರು.

ಅಥ ದ್ರೌಣೇ ರಥಂ ತ್ಯಕ್ತ್ವಾ ಕೃಪಸ್ಯ ರಥಮುತ್ತಮಮ್ ।
ಆಜಗಾಮಾರ್ಜುನಸ್ತೂರ್ಣಂ ಸೂರ್ಯವೈಶ್ವಾನರಪ್ರಭಮ್ ॥೩॥

ಆಗ ಅರ್ಜುನನು ಅಶ್ವತ್ಥಾಮರ ರಥವನ್ನು ಬಿಟ್ಟು ಶೀಘ್ರವಾಗಿ ಸೂರ್ಯಾಗ್ನಿಗಳ ಕಾಂತಿಯನ್ನು ಹೊಂದಿದ್ದ ಕೃಪರ ಉತ್ತಮವಾದ ರಥದ ಕಡೆಗೆ ಬಂದನು.

ತೌ ವೀರೌ ಸೂರ್ಯಸಂಕಾಶೌ ಯೋತ್ಸ್ಯಮಾನೌ ಮಹಾರಥೌ ।
ವಾರ್ಷಿಕಾವಿವ ಜೀಮೂತೌ ವ್ಯರೋಚೇತಾಂ ವ್ಯವಸ್ಥಿತೌ ॥೪॥

ಸೂರ್ಯನ ಕಾಂತಿಯುಳ್ಳ ಮಹಾರಥರಾದ ಆ ವೀರರಿಬ್ಬರೂ ಯುದ್ಧವನ್ನು ಮಾಡುತ್ತಾ ನಿಂತವರಾಗಿ ಮಳೆಗಾಲದ ಮೋಡಗಳಂತೆ ಶೋಭಿಸಿದರು.

ಪ್ರಗೃಹ್ಯ ಗಾಂಡಿವಂ ಲೋಕೇ ವಿಶ್ರುತಂ ಪುನರರ್ಜುನಃ ।
ಅಭ್ಯಯಾದ್ ಭರತಶ್ರೇಷ್ಠೋ ವಿನಿಘ್ನನ್ ಶರಮಾಲಯಾ ॥೫॥

ಕೃಪಶ್ಚ ಧನುರಾದಾಯ ತಥೈವಾರ್ಜುನಮಭ್ಯಯಾತ್ ॥೬॥

ಭರತಶ್ರೇಷ್ಠನಾದ ಅರ್ಜುನನು ಲೋಕವಿಶ್ರುತವಾದ ಗಾಂಡೀವ ಧನುಸ್ಸನ್ನು ಎತ್ತಿಕೊಂಡು ಶರಸಮೂಹಗಳಿಂದ ಶತ್ರುಗಳನ್ನು ಸಂಹರಿಸುತ್ತಾ ಮುಂದೆ ಬಂದನು. ಕೃಪರೂ ಸಹ ಧನುಸ್ಸನ್ನು ತೆಗೆದುಕೊಂಡು ಹಾಗೆಯೇ ಅರ್ಜುನನ ಕಡೆಗೆ ಧಾವಿಸಿದರು.

ಪ್ರಗೃಹ್ಯ ಬಲವಚ್ಚಾಪಂ ನಾರಾಚಾನ್ ರಕ್ತಭೋಜನಾನ್ ।
ಕೃಪಶ್ಚಿಕ್ಷೇಪ ಪಾರ್ಥಾಯ ಶತಶೋಽಥ ಸಹಸ್ರಶಃ ॥೭॥

ಕೃಪರು ದೃಢವಾದ ಧನುಸ್ಸನ್ನು ತೆಗೆದುಕೊಂಡು ರಕ್ತಭೋಜನವನ್ನು ಮಾಡುವ ನೂರಾರು ಸಾವಿರಾರು ಬಾಣಗಳನ್ನು ಅರ್ಜುನನ ಮೇಲೆ ಎಸೆದರು.

ಜೀಮೂತ ಇವ ಘರ್ಮಾಂತೇ ಶರವರ್ಷಮಮುಂಚತ ।
ನಂದಯನ್ ಸುಹೃದಃ ಸರ್ವಾನ್ ಪ್ರತ್ಯಯುಧ್ಯತ ಫಲ್ಗುನಮ್ ॥೮॥

ಬೇಸಿಗೆ ಕಾಲದ ನಂತರ ಬರುವ ಮೋಡದಂತೆ ಬಾಣಗಳ ಮಳೆಯನ್ನು ಸುರಿಸಿದರು. ತಮ್ಮ ಸುಹೃದರನ್ನೆಲ್ಲಾ ಸಂತೋಷಪಡಿಸುತ್ತಾ ಅರ್ಜುನನಿಗೆ ಎದುರಾಗಿ ಯುದ್ಧವನ್ನು ಮಾಡಿದರು.

ವಿಕೃಷ್ಯ ಸಶರಂ ಚಾಪಂ ಪಾಂಡವೋಽಮಿತವಿಕ್ರಮಃ ।
ಚಚಾರ ಸಮರೇ ಪಾರ್ಥಃ ಚಿತ್ರಾನ್ ಮಾರ್ಗಾನ್ ವಿದರ್ಶಯನ್ ॥

ಅಮಿತವಿಕ್ರಮನಾದ ಪಾಂಡುಪುತ್ರನಾದ ಅರ್ಜುನನೂ ಬಾಣಸಹಿತವಾದ ಬಿಲ್ಲನ್ನು ಎಳೆದು ಯುದ್ಧದಲ್ಲಿ ವಿಚಿತ್ರವಾದ ಮಾರ್ಗಗಳನ್ನು ತೋರಿಸುತ್ತಾ ಸಂಚರಿಸಿದನು.

ಸರ್ವಾಶ್ಚೈವ ದಿಶೋ ಬಾಣೈಃ ಪ್ರದಿಶಶ್ಚ ಮಹಾರಥಃ ।
ವಿಚಚ್ಛಾಯಾಮಿವಾಕಾಶಂ ಸರ್ವತಃ ಕೃತವಾನ್ ಪ್ರಭುಃ ॥೧೦॥

ಪ್ರಭುವೂ, ಮಹಾರಥನೂ ಆದ ಅವನು ಬಾಣಗಳಿಂದ ಎಲ್ಲಾ ದಿಕ್ಕುವಿದಿಕ್ಕುಗಳನ್ನು ಆಚ್ಛಾದಿಸಿ ಆಕಾಶವನ್ನೇ ಒಂದು ದೊಡ್ಡ ನೆರಳಿನಂತೆ ಮಾಡಿದನು.

ಪ್ರಾಚ್ಛಾದಯದಮೇಯಾತ್ಮಾ ಪಾರ್ಥಃ ಶರಶತೈಃ ಕೃಪಮ್ ।
ಉದ್ಗತಃ ಸಮಯೇ ಮೇಘೋ ಧಾರಾಭಿರಿವ ಪರ್ವತಮ್ ॥೧೧॥

ಮಳೆಗಾಲದಲ್ಲಿ ಎದ್ದ ಮೋಡವು ತನ್ನ ಧಾರೆಗಳಿಂದ ಪರ್ವತವನ್ನು ಮುಚ್ಚಿದಂತೆ ಅಮೇಯಾತ್ಮನಾದ ಪಾರ್ಥನು ನೂರಾರು ಬಾಣಗಳಿಂದ ಕೃಪಾಚಾರ್ಯರನ್ನು ಮುಚ್ಚಿದನು.

ಸ ಶರೈರರ್ಪಿತಃ ಕ್ರುದ್ಧಃ ಶಿತೈರಗ್ನಿಶಿಖೋಪಮೈಃ ।
ಕೃಪೋ ಬಭೂವ ಸಮರೇ ವಿಧೂಮೋಽಗ್ನಿರಿವ ಜ್ವಲನ್ ॥೧೨॥

ಅಗ್ನಿಯ ಶಿಖೆಗಳಂತಿದ್ದ ಹರಿತವಾದ ಬಾಣಗಳಿಂದ ತಾಡಿತರಾದ ಕೃಪರು ಯುದ್ಧದಲ್ಲಿ ಧೂಮವಿಲ್ಲದ ಅಗ್ನಿಯಂತೆ ಜ್ವಲಿಸಿದರು.

ತತಃ ಶರಸಹಸ್ರೇಣ ಪಾರ್ಥಮಪ್ರತಿಮೌಜಸಮ್ ।
ಅರ್ದಯಿತ್ವಾ ಮಹಾನಾದಮಕರೋತ್ ಸಮರೇ ಕೃಪಃ ॥೧೩॥

ಆಗ ಕೃಪಾಚಾರ್ಯರು ಯುದ್ಧದಲ್ಲಿ ಅಪ್ರತಿಮ ಪರಾಕ್ರಮಿಯಾದ ಅರ್ಜುನನ ಮೇಲೆ ಸಹಸ್ರ ಬಾಣಗಳನ್ನು ಪ್ರಯೋಗ ಮಾಡಿ ದೊಡ್ಡ ನಾದವನ್ನು ಮಾಡಿದರು.

ತತಃ ಕನಕಪುಂಖೇನ ಶರೇಣ ನತಪರ್ವಣಾ ।
ಬಿಭೇದ ಸಮರೇ ಪಾರ್ಥಃ ಕೃಪಸ್ಯ ಧ್ವಜಮುತ್ತಮಮ್ ॥೧೪॥

ಅನಂತರ ಸುವರ್ಣಪುಂಖಗಳಿರುವ, ಬಾಗಿದ ತುದಿಯುಳ್ಳ ಬಾಣದಿಂದ ಅರ್ಜುನನು ಕೃಪರ ಶ್ರೇಷ್ಠವಾದ ಧ್ವಜವನ್ನು ಕತ್ತರಿಸಿದನು.

ತತಃ ಪಶ್ಚಾನ್ಮಹಾತೇಜಾ ನಾರಾಚಾನ್ ಸೂರ್ಯಸನ್ನಿಭಾನ್ ।
ಜಗ್ರಾಹ ಸಮರೇ ಪಾರ್ಥೋ ಭೂಯೋ ಬಹುಶಿಲೀಮುಖಾನ್ ॥೧೫॥

ಅನಂತರ ಮಹಾತೇಜಸ್ವಿಯಾದ ಪಾರ್ಥನು ಸೂರ್ಯನಂತೆ ಪ್ರಕಾಶಿಸುವ ಚೆನ್ನಾಗಿ ಸಾಣೆ ಹಿಡಿದ ಬಾಣಗಳನ್ನು ಪುನಃ ಕೈಗೆ ತೆಗೆದುಕೊಂಡನು.

ತೈಸ್ತದಾನೀಂ ಮಹಾಬಾಹುಃ ಕೃಪಸ್ಯ ರಥರಕ್ಷಿಣಃ ।
ಜಘಾನ ಕ್ಷತ್ರಿಯಶ್ರೇಷ್ಠಾನ್ ಯುಧ್ಯಮಾನಾನ್ ಮಹಾರಥಾನ್ ॥೧೬॥

ಮಹಾಬಾಹುವಾದ ಅವನು ಕೃಪರ ರಕ್ಷಣೆಯಲ್ಲಿದ್ದ ಮಹಾರಥರಾದ ಯುದ್ಧವನ್ನು ಮಾಡುತ್ತಿದ್ದ ಶ್ರೇಷ್ಠ ಕ್ಷತ್ರಿಯರನ್ನು ಸಂಹರಿಸಿದನು.

ಚಂದ್ರಕೇತುಃ ಸುಕೇತುಶ್ಚ ಚಿತ್ರಾಶ್ವೋ ಮಣಿಮಾಂಸ್ತಥಾ ।
ಮುಂಜಮೌಲಿಶ್ಚ ವಿಕ್ರಾಂತೋ ಹೇಮವರ್ಮಾ ಮಹಾರಥಃ ॥೧೭॥

ಸುರಥೋಽತಿರಥಶ್ಚೈವ ಸುಷೇಣೋಽರಿಷ್ಟ ಏವ ಚ ।
ನೃಕೇತುಶ್ಚ ಸಹಾನೀಕಾಸ್ತೇ ನಿಪೇತುರ್ಗತಾಸವಃ ॥೧೮॥

ಚಂದ್ರಕೇತು, ಸುಕೇತು, ಚಿತ್ರಾಶ್ವ, ಮಣಿಮಾನ್, ಮುಂಜಮೌಲಿ, ವಿಕ್ರಾಂತ, ಮಹಾರಥನಾದ ಹೇಮವರ್ಮ, ಸುರಥ, ಅತಿರಥ, ಸುಷೇಣ, ಅರಿಷ್ಟ, ನೃಕೇತು ಅವರೆಲ್ಲರೂ ತಮ್ಮ ಸೈನ್ಯದ ಜೊತೆಯಲ್ಲಿ ಮೃತರಾಗಿ ಉರುಳಿದರು.

ತಾನ್ ನಿಹತ್ಯ ತತಃ ಪಾರ್ಥೋ ನಿಮೇಷಾದಿವ ಭಾರತ ।
ಪುನರನ್ಯಾನ್ ಸಮಾದತ್ತ ತ್ರಯೋದಶ ಶಿಲೀಮುಖಾನ್ ॥೧೯॥

ಎಲೈ ಭಾರತನೇ, ಅರ್ಜುನನು ಒಂದೇ ನಿಮಿಷದಲ್ಲೋ ಎಂಬಂತೆ ಅವರನ್ನು ಸಂಹರಿಸಿ ಪುನಃ ನಿಶಿತವಾದ ಹದಿಮೂರು ಬಾಣಗಳನ್ನು ತೆಗೆದುಕೊಂಡನು.

ಅಥಾಸ್ಯ ಯುಗಮೇಕೇನ ಚತುರ್ಭಿಶ್ಚತುರೋ ಹಯಾನ್ ।
ಷಷ್ಠೇನ ತು ಶಿರಃ ಸಂಖೇ ಶರೇಣ ಕೃಪಸಾರಥೇಃ ॥೨೦॥

ತ್ರಿಭಿಸ್ತ್ರಿವೇಣುಂ ಬಲವಾನ್ ದ್ವಾಭ್ಯಾಮಕ್ಷಂ ಮಹಾಬಲಃ ।
ದ್ವಾದಶೇನ ತು ಭಲ್ಲೇನ ಕೃಪಸ್ಯ ಸಶರಂ ಧನುಃ ॥೨೧॥

ಛಿತ್ತ್ವಾ ವಜ್ರನಿಕಾಶೇನ ಫಲ್ಗುನಃ ಪ್ರಹಸನ್ನಿವ ।
ತ್ರಯೋದಶೇನೇಂದ್ರಸಮಃ ಪ್ರತ್ಯವಿಧ್ಯತ್ ಸ್ತನಾಂತರೇ ॥೨೨॥

ಅನಂತರ ಕೃಪಾಚಾರ್ಯರ ರಥದ ನೊಗವನ್ನು ಒಂದು ಬಾಣದಿಂದಲೂ, ನಾಲ್ಕು ಕುದುರೆಗಳನ್ನು ನಾಲ್ಕು ಬಾಣಗಳಿಂದಲೂ ಮತ್ತು ಆರನೆಯ ಬಾಣದಿಂದ ಕೃಪರ ಸಾರಥಿಯ ಶಿರಸ್ಸನ್ನು ಯುದ್ಧದಲ್ಲಿ ಕತ್ತರಿಸಿದನು. ಬಲಿಷ್ಠನಾದ ಅರ್ಜುನನು ಮೂರು ಬಾಣಗಳಿಂದ ರಥದ ತ್ರಿವೇಣುವನ್ನೂ, ಎರಡು ಬಾಣಗಳಿಂದ ರಥದ ಅಕ್ಷವನ್ನೂ, ಹನ್ನೆರಡನೆಯ ಬಾಣದಿಂದ ಭಲ್ಲರೂಪವಾದ ಕೃಪರ ಧನುರ್ಬಾಣಗಳನ್ನೂ ಕತ್ತರಿಸಿ ವಜ್ರಾಯುಧದಂತಿದ್ದ ಹದಿಮೂರನೆಯ ಬಾಣದಿಂದ ಇಂದ್ರನಿಗೆ ಸಮನಾದ ಅವನು ಕೃಪರಿಗೆ ಸ್ತನಗಳ ಮಧ್ಯದಲ್ಲಿ ಹೊಡೆದನು.

ಸ ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ॥೨೩॥

ಅಥ ಶಕ್ತಿಂ ಪರಾಮೃಶ್ಯ ಸೂರ್ಯವೈಶ್ವಾನರಪ್ರಭಾಮ್ ।
ಚಿಕ್ಷೇಪ ಸಹಸಾ ಕ್ರುದ್ಧಃ ಪಾರ್ಥಾಯಾದ್ಭುತಕರ್ಮಣೇ ॥೨೪॥

ತಮ್ಮ ಧನುಸ್ಸು ಕತ್ತರಿಸಲ್ಪಟ್ಟು ರಥಗಳನ್ನೂ, ಅಶ್ವಗಳನ್ನೂ ಮತ್ತು ಸಾರಥಿಯನ್ನೂ ಕಳೆದುಕೊಂಡ ಕೃಪರು ಅದ್ಭುತ ಕರ್ಮವನ್ನು ಮಾಡುವ ಪಾರ್ಥನ ಮೇಲೆ ಕ್ರುದ್ಧರಾಗಿ ಸೂರ್ಯಾಗ್ನಿಗಳಂತೆ ಪ್ರಕಾಶಿಸುತ್ತಿದ್ದ ಶಕ್ತ್ಯಾಯುಧವನ್ನು ಕೈಗೆ ತೆಗೆದುಕೊಂಡು ಅದನ್ನು ಅರ್ಜುನನ ಮೇಲೆ ಎಸೆದರು.

ತಾಮರ್ಜುನಸ್ತಥಾರೂಪಾಂ ಶಕ್ತಿಂ ಹೇಮಪರಿಷ್ಕೃತಾಮ್ ।
ಆಪತಂತೀಂ ಮಹೋಲ್ಕಾಭಾಂ ಚಿಚ್ಛೇದ ದಶಭಿಃ ಶರೈಃ ॥೨೫॥

ಸಾऽಪತದ್ ದಶಧಾ ಭೂಮೌ ಪಾರ್ಥೇನ ನಿಹತಾ ಶರೈಃ ॥೨೬॥

ಅಂತಹ ಸುವರ್ಣಾಲಂಕೃತವಾದ, ದೊಡ್ಡ ಉಲ್ಕೆಯ ಕಾಂತಿಯನ್ನು ಹೊಂದಿದ್ದ ತನ್ನೆಡೆಗೆ ಬರುತ್ತಿದ್ದ ಆ ಶಕ್ತಿಯನ್ನು ಅರ್ಜುನನು ಹತ್ತುಬಾಣಗಳಿಂದ ಕತ್ತರಿಸಿದನು. ಪಾರ್ಥನಿಂದ ಬಾಣಗಳಿಂದ ಹೊಡೆಯಲ್ಪಟ್ಟ ಆ ಶಕ್ತಿಯು ಹತ್ತು ಭಾಗಗಳಾಗಿ ಭೂಮಿಯ ಮೇಲೆ ಬಿದ್ದಿತು.

ಶಕ್ತ್ಯಾಂ ತು ವಿನಿಕೃತ್ತಾಯಾಂ ವಿರಥಃ ಶರಪೀಡಿತಃ ।
ಗದಾಪಾಣಿರವಪ್ಲುತ್ಯ ರಥಾತ್ ತೂರ್ಣಮಮಿತ್ರಹಾ ॥೨೭॥

ಗದಾಂ ಚಿಕ್ಷೇಪ ಸಹಸಾ ಪಾಂಡವಾಯಾಮಿತೌಜಸೇ ॥೨೮॥

ಶಕ್ತಿಯು ನಾಶವನ್ನು ಹೊಂದುತ್ತಿರಲು ರಥವನ್ನು ಕಳೆದುಕೊಂಡು ಶರಪೀಡಿತರಾದ ಶತ್ರುಸಂಹಾರಕರಾದ ಕೃಪರು ಬೇಗ ರಥದಿಂದ ಕೆಳಗೆ ನೆಗೆದು ಕೈಯಲ್ಲಿ ಗದೆಯನ್ನು ಹಿಡಿದು ಅಮಿತಪರಾಕ್ರಮಿಯಾದ ಅರ್ಜುನನ ಮೇಲೆ ಗದೆಯನ್ನು ಎಸೆದರು.

ಸಾ ತು ಮುಕ್ತಾ ಗದಾ ಗುರ್ವೀ ಕೃಪೇಣ ಸುಪರಿಷ್ಕೃತಾ ।
ಅರ್ಜುನಸ್ಯ ಶರೈರ್ಮುಕ್ತಾ ಪ್ರತಿಮಾರ್ಗಂ ಜಗಾಮ ಸಾ ॥೨೯॥

ಕೃಪರಿಂದ ಎಸೆಯಲ್ಪಟ್ಟ ಚೆನ್ನಾಗಿ ಅಲಂಕೃತವಾದ ಭಾರವಾದ ಆ ಗದೆಯು ಅರ್ಜುನನ ಬಾಣಗಳ ಹೊಡೆತಕ್ಕೆ ಸಿಕ್ಕಿ ಬಂದ ಮಾರ್ಗದಲ್ಲಿಯೇ ಹಿಂದೆ ಹೋಯಿತು.

ಅಥ ಖಡ್ಗಂ ಸಮುದ್ಧೃತ್ಯ ಶತಚಂದ್ರಂ ಚ ಭಾನುಮತ್ ।
ಇಯೇಷ ಪಾಂಡವಂ ಹಂತುಂ ಕೃಪೋ ಲಘುಪರಾಕ್ರಮಃ ॥೩೦॥

ಅನಂತರ ಪ್ರಕಾಶಮಾನವಾದ ಶತಚಂದ್ರಗಳಿದ್ದ ಖಡ್ಗವನ್ನು ತೆಗೆದುಕೊಂಡು ಲಘುಪರಾಕ್ರಮವುಳ್ಳ ಕೃಪಾಚಾರ್ಯರು ಅರ್ಜುನನನ್ನು ಕೊಲ್ಲಲು ಬಯಸಿದರು.

ಸ ಶರದ್ವತ್ಸುತಸ್ತೂರ್ಣಂ ಮಹಾಚಾರ್ಯಸುಶಿಕ್ಷಿತಃ ।
ಚಚಾರ ಖೇಚರ ಇವ ಕ್ರಮಾಚ್ಚರ್ಮಾಸಿಧೃಗ್ ಭುವಿ ॥೩೧॥

ಸುಶಿಕ್ಷಿತರಾದ ಮಹಾಚಾರ್ಯರಾದ ಶರದ್ವಂತಋಷಿಗಳ ಪುತ್ರರಾದ ಕೃಪಾಚಾರ್ಯರು ಆಕಾಶದಲ್ಲಿ ಖೇಚರರು ಸಂಚರಿಸಿದಂತೆ ಭೂಮಿಯಲ್ಲಿ ಚರ್ಮಾಸಿಗಳನ್ನು ಹಿಡಿದು ಶೀಘ್ರವಾಗಿ ಸಂಚರಿಸಿದರು.

ತತಃ ಕ್ಷುರಾಗ್ರೈಃ ಕೌಂತೇಯೋ ದಶಭಿಃ ಖಡ್ಗಚರ್ಮಣೀ ।
ನಿಮೇಷಾದಿವ ಚಿಚ್ಛೇದ ತದದ್ಭುತಮಿವಾಭವತ್ ॥೩೨॥

ಆಗ ಅರ್ಜುನನು ತನ್ನ ಶ್ರೇಷ್ಠವಾದ ಹತ್ತು ಶರಗಳಿಂದ ಅವರ ಖಡ್ಗಚರ್ಮಗಳನ್ನು ಒಂದೇ ನಿಮಿಷದಲ್ಲಿಯೋ ಎಂಬಂತೆ ಕತ್ತರಿಸಿದನು. ಅದು ಅದ್ಭುತವಾಗಿದ್ದಿತು.

ವಿಷಣ್ಣವದನಸ್ತತ್ರ ಯುದ್ಧಾದಪಗತೋದ್ಯಮಃ ।
ಅಶ್ವತ್ಥಾಮ್ನಸ್ತು ಸ ರಥಂ ಕೃಪಃ ಸಮಭಿಪುಪ್ಲುವೇ ॥೩೩॥

ಸ್ವಸ್ರೀಯಸ್ಯ ಮಹಾತೇಜಾ ಜಗ್ರಾಹ ಚ ಧನುಃ ಪುನಃ ॥೩೪॥

ಯುದ್ಧದಲ್ಲಿ ತಮ್ಮ ಪ್ರಯತ್ನಗಳು ಭಗ್ನವಾಗುತ್ತಿರಲು ಮಹಾತೇಜಸ್ವಿಗಳಾದ ಕೃಪರು ವಿಷಣ್ಣವದನರಾಗಿ ತಮ್ಮ ತಂಗಿಯ ಪುತ್ರನಾದ ಅಶ್ವತ್ಥಾಮರ ರಥಕ್ಕೆ ಹಾರಿ ಪುನಃ ಕೈಯಲ್ಲಿ ಧನುಸ್ಸನ್ನು ಹಿಡಿದರು.

ಏತಸ್ಮಿನ್ನಂತರೇ ಕ್ರುದ್ಧೋ ಭೀಷ್ಮೋ ದ್ರೋಣಮಥಾಬ್ರವೀತ್ ।
ದೃಷ್ಟ್ವಾ ಕೃಪಂ ಫಲ್ಗುನೇನ ಪೀಡಿತಂ ಚೋರ್ಜಿತಂ ಚ ತಮ್ ॥೩೫॥

ಈ ಸಂದರ್ಭದಲ್ಲಿ ಕ್ರುದ್ಧರಾದ ಭೀಷ್ಮರು ಕೃಪರು ಅರ್ಜುನನಿಂದ ಪೀಡಿತರಾದುದನ್ನೂ, ಅರ್ಜುನನು ಬಲದಲ್ಲಿ ಅಭಿವೃದ್ಧಿಯನ್ನು ಹೊಂದುತ್ತಿರುವುದನ್ನೂ ನೋಡಿ ದ್ರೋಣಾಚಾರ್ಯರನ್ನು ಕುರಿತು ಹೀಗೆ ಹೇಳಿದರು.

ಏಕೈಕಮಸ್ಮಾನ್ ಸಂಗ್ರಾಮೇ ಪರಾಜಯತಿ ಫಲ್ಗುನಃ ॥೩೬॥

ಅಹಂ ದ್ರೋಣಶ್ಚ ಕರ್ಣಶ್ಚ ದ್ರೌಣಿರ್ಗೌತಮ ಏವ ಚ ।
ಅನ್ಯೇ ಚ ಬಹವಃ ಶೂರಾಃ ವಯಂ ಜೇಷ್ಯಾಮ ವಾಸವಿಮ್ ॥೩೭॥

ಅರ್ಜುನನು ನಮ್ಮಲ್ಲಿ ಒಬ್ಬೊಬ್ಬರನ್ನೂ ಯುದ್ಧದಲ್ಲಿ ಸೋಲಿಸುತ್ತಿದ್ದಾನೆ. ನಾನು, ದ್ರೋಣರು, ಕರ್ಣ, ಅಶ್ವತ್ಥಾಮ, ಕೃಪರು ಇನ್ನೂ ಅನೇಕ ಶೂರರು ಎಲ್ಲರೂ ಸೇರಿ ಅರ್ಜುನನನ್ನು ಜಯಿಸೋಣ.

ವೈಶಂಪಾಯನಃ

ಸಮಾಗಮ್ಯ ತು ತೇ ಸರ್ವೇ ಭೀಷ್ಮದ್ರೋಣಮುಖಾ ರಥಾಃ ।
ಅರ್ಜುನಂ ಸಹಿತಾ ಯತ್ತಾಃ ಪ್ರತ್ಯಯುಧ್ಯಂತ ಭಾರತ ॥೩೮॥

ವೈಶಂಪಾಯನ– ಎಲೈ ಭಾರತನೇ, ಭೀಷ್ಮ ದ್ರೋಣ ಮೊದಲಾದ ಎಲ್ಲಾ ರಥಿಕರೂ ಒಟ್ಟಿಗೆ ಬಂದು ಎಚ್ಚರಿಕೆಯಿಂದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಸ ಸಾಯಕಮಯೈರ್ಜಾಲೈಃ ಸರ್ವತಸ್ತಾನ್ ಮಹಾರಥಾನ್ ।
ಪ್ರಾಚ್ಛಾದಯಚ್ಛರೌಘೈಸ್ತಾನ್ ನೀಹಾರ ಇವ ಪರ್ವತಾನ್ ॥೩೯॥

ಅರ್ಜುನನು ಮಂಜು ಪರ್ವತವನ್ನು ಮುಚ್ಚುವಂತೆ ತನ್ನ ಶರಮಯವಾದ ಜಾಲದಿಂದ ಆ ಎಲ್ಲಾ ಮಹಾರಥರನ್ನೂ ಬಾಣಗಳ ಸಮೂಹದಿಂದ ಎಲ್ಲ ಕಡೆಗಳಲ್ಲಿಯೂ ಮುಚ್ಚಿದನು.

ನದದ್ಭಿಶ್ಚ ಮಹಾನಾಗೈರ್ಹೇಷಮಾಣೈಶ್ಚ ವಾಜಿಭಿಃ ।
ಭೇರೀಶಂಖನಿನಾದೈಶ್ಚ ಸ ಶಬ್ದಸ್ತುಮುಲೋಽಭವತ್ ॥೪೦॥

ಗರ್ಜಿಸುವ ಗಜಗಳು, ಹೇಷಣವನ್ನು ಮಾಡುವ ಅಶ್ವಗಳು ಮತ್ತು ಭೇರೀ ಶಂಖಗಳ ನಿನಾದ ಇವುಗಳಿಂದ ತೀವ್ರವಾದ ಶಬ್ದವು ಉಂಟಾಯಿತು.

ನರಾಶ್ವಕಾಯಾನ್ ನಿರ್ಭಿದ್ಯ ಲೌಹಾನಿ ಕವಚಾನಿ ಚ ।
ಛಿದ್ಯಮಾನಾಸ್ತತಸ್ತೇನ ನ್ಯಪತನ್ ಶತಶಃ ಕ್ಷಿತೌ ॥೪೧॥

ಅರ್ಜುನನು ಪ್ರಯೋಗಿಸಿದ ನರಾಶ್ವಶರೀರವನ್ನು ಭೇದಿಸುವ, ಲೋಹಮಯವಾದ ಕವಚಗಳನ್ನು ಛೇದಿಸುವ ಬಾಣಗಳಿಂದ ನೂರಾರು ಸಂಖ್ಯೆಯಲ್ಲಿ ಭೂಮಿಯ ಮೇಲೆ ಯೋಧರು ಉರುಳಿದರು.

ತ್ವರಮಾಣಃ ಶರಾನಸ್ಯನ್ ಪಾಂಡವಃ ಸ್ಮ ಪ್ರಕಾಶತೇ ।
ಮಧ್ಯಂದಿನಗತೋಽರ್ಚಿಷ್ಮಾನ್ ಶರದೀವ ದಿವಾಕರಃ ॥೪೨॥

ಶೀಘ್ರವಾಗಿ ಬಾಣಗಳನ್ನು ಪ್ರಯೋಗಿಸುವ ಅರ್ಜುನನು ಶರತ್ಕಾಲದಲ್ಲಿ ಮಧ್ಯಾಹ್ನದಲ್ಲಿ ಕಿರಣಗಳಿಂದ ಕೂಡಿದ ಸೂರ್ಯನಂತೆ ಶೋಭಿಸಿದನು.

ಅವಿಷಹ್ಯ ಶರಾನ್ ಸರ್ವೇ ಪಾರ್ಥಚಾಪಚ್ಯುತಾನ್ ರಣೇ ।
ಉದಕ್ಪ್ರಯಾಂತಿ ವಿತ್ರಸ್ತಾ ರಥೇಭ್ಯೋ ರಥಿನಸ್ತಥಾ ॥೪೩॥

ಸಾದಿನಶ್ಚಾಶ್ವಪೃಷ್ಠೇಭ್ಯೋ ಭೂಮೌ ಚಾಪಿ ಪದಾತಯಃ ॥೪೪॥

ಪಾರ್ಥನು ಯುದ್ಧದಲ್ಲಿ ಪ್ರಯೋಗಿಸಿದ ಬಾಣಗಳನ್ನು ಸಹಿಸಿಕೊಳ್ಳಲಾರದೆ ರಥಿಕರು ಹೆದರಿ ತಮ್ಮ ರಥಗಳಿಂದ ಉತ್ತರದಿಕ್ಕಿಗೆ ಹೊರಟರು. ಅಶ್ವಾರೋಹಿಗಳು ಅಶ್ವಗಳ ಮೇಲೆಯೂ ಪದಾತಿಗಳು ಭೂಮಿಯ ಮೇಲೆಯೂ ವಿತ್ತಸ್ತರಾಗಿ (ಹೆದರಿ) ಉತ್ತರದಿಕ್ಕಿಗೆ ಹೊರಟರು.

ಶರೈಸ್ತು ತಾಡ್ಯಮಾನಾನಾಂ ಕವಚಾನಾಂ ಮಹಾತ್ಮನಾಮ್ ।
ತಾಮ್ರರಾಜತಲೋಹಾನಾಂ ಸಮಪದ್ಯಂತ ರಾಶಯಃ ॥೪೫॥

ಶರಗಳಿಂದ ತಾಡಿತರಾದ ಮಹಾತ್ಮರಾದ ಯೋಧರ ತಾಮ್ರ, ರಜತ ಮತ್ತು ಕಬ್ಬಿಣದ ಕವಚಗಳು ರಾಶಿಯಾಗಿ ಭೂಮಿಯ ಮೇಲೆ ಬಿದ್ದವು.

ಛನ್ನಮಾಯೋಧನಂ ಜಜ್ಞೇ ಶರೀರೈರ್ಗತಚೇತಸಾಮ್ ।
ಶ್ರಾಂತ್ಯಾ ಗಲಿತಶಸ್ತ್ರಾಣಾಂ ಪತತಾಮಶ್ವಸಾದಿನಾಮ್ ॥೪೬॥

ಆ ಯುದ್ಧಭೂಮಿಯು ಮೃತರ ಶರೀರಗಳಿಂದಲೂ, ಬಳಲಿ ಕೆಳಗೆ ಹಾಕಿದ ಶಸ್ತ್ರಗಳಿಂದಲೂ, ಕೆಳಗೆ ಉರುಳುವ ಅಶ್ವಾರೋಹಿಗಳಿಂದಲೂ ಮುಚ್ಚಿಹೋಯಿತು.

ಶೂನ್ಯಾನ್ ಕುರ್ವನ್ ರಥೋಪಸ್ಥಾನ್ ಮಾನವೈರಾಸ್ತೃಣೋನ್ಮಹೀಮ್ ॥

ಅರ್ಜುನನು ರಥದ ಅಚ್ಚುಪೀಠವನ್ನು ಶೂನ್ಯವನ್ನಾಗಿ ಮಾಡುತ್ತಾ ಭೂಮಿಯನ್ನು ಮನುಷ್ಯರ ಶರೀರಗಳಿಂದ ಮುಚ್ಚಿದನು.

ಪ್ರನೃತ್ಯನ್ನಿವ ಸಂಗ್ರಾಮೇ ಚಾಪಹಸ್ತೋ ಧನಂಜಯಃ ।
ಶಿರಾಂಸ್ಯಪಾತಯತ್ ಸಂಖೇ ಕ್ಷತ್ರಿಯಾಣಾಂ ನರರ್ಷಭ ॥೪೮॥

ಕೈಯಲ್ಲಿ ಧನುಸ್ಸನ್ನು ಹಿಡಿದು ಯುದ್ಧದಲ್ಲಿ ನೃತ್ಯವನ್ನು ಮಾಡುವವನಂತೆ ನರರ್ಷಭನಾದ ಅವನು ಕ್ಷತ್ರಿಯರ ಶಿರಗಳನ್ನು ನೆಲಕ್ಕೆ ಉರುಳಿಸಿದನು.

ಶ್ರುತ್ವಾ ಗಾಂಡೀವನಿರ್ಘೋಷಂ ವಿಸೃಜ್ಯಂತಮಿವಾಶನೇಃ ।
ತ್ರಸ್ತಾನಿ ಸರ್ವಸೈನ್ಯಾನಿ ವ್ಯಚಲೀಯಂತ ಭಾಗಶಃ ॥೪೯॥

ಸಿಡಿಲಿನ ಧ್ವನಿಯಂತಿರುವ ಗಾಂಡೀವದ ಘೋಷಗಳನ್ನು ಕೇಳಿ ಹೆದರಿದ ಎಲ್ಲ ಸೈನ್ಯಗಳೂ ಭಾಗಭಾಗವಾಗಿ ಕಣ್ಮರೆಯಾದವು.

ಕುಂಡಲೋಷ್ಣೀಷಧಾರೀಣಿ ಜಾತರೂಪಸ್ರಜಾನಿ ಚ ।
ಪತಿತಾನಿ ಸ್ಮ ದೃಶ್ಯಂತೇ ಶಿರಾಂಸಿ ರಣಮೂರ್ಧನಿ ॥೫೦॥

ಕರ್ಣಕುಂಡಲ ಮತ್ತು ಪೇಟಗಳನ್ನು ಧರಿಸಿದ, ಸುವರ್ಣಮಯವಾದ ಮಾಲೆಯನ್ನು ಧರಿಸಿದ ಶಿರಸ್ಸುಗಳು ಉನ್ನತವಾದ ರಣದಲ್ಲಿ ಭೂಮಿಯ ಮೇಲೆ ಬಿದ್ದಿರುವುದು ಕಂಡುಬರುತ್ತಿದ್ದಿತು.

ವಿಶಿಖೋನ್ಮಥಿತೈರ್ಗಾತ್ರೈರ್ಬಾಹುಭಿಶ್ಚ ಸಕಾರ್ಮುಕೈಃ ।
ಸಹಯೈರ್ವಾರಣೈಶ್ಚಿನ್ನೈಃ ಪ್ರಚ್ಛನ್ನಾ ಭಾತಿ ಮೇದಿನೀ ॥೫೧॥

ಬಾಣಗಳಿಂದ ಕತ್ತರಿಸಲ್ಪಟ್ಟ ದೇಹಗಳ, ಧನುಸ್ಸನ್ನು ಹಿಡಿದ ಬಾಹುಗಳು, ಕತ್ತರಿಸಲ್ಪಟ್ಟ ಆನೆ ಮತ್ತು ಕುದುರೆಗಳು, ಇವುಗಳಿಂದ ಆವರಿಸಲ್ಪಟ್ಟ ಭೂಮಿಯು ಕಂಗೊಳಿಸಿತು.

ಶಿರಸಾಂ ಪಾತ್ಯಮಾನಾನಾಂ ಸಮರೇ ನಿಶಿತೈಃ ಶರೈಃ ।
ಅಶ್ಮವೃಷ್ಟಿರಿವಾಕಾಶಾದ್ ಅಭವದ್ ಭರತರ್ಷಭ ॥೫೨॥

ಎಲೈ ಭರತರ್ಷಭನೇ, ಯುದ್ಧದಲ್ಲಿ ನಿಶಿತವಾದ ಶರಗಳಿಂದ ಬೀಳಿಸಲ್ಪಟ್ಟ ಶಿರಸ್ಸುಗಳು ಆಕಾಶದಿಂದ ಬೀಳುವ ಕಲ್ಲಿನ ಮಳೆಯಂತೆ ತೋರುತ್ತಿದ್ದಿತು.

ದರ್ಶಯಿತ್ವಾ ತಥಾऽऽತ್ಮಾನಂ ರೌದ್ರಮುಗ್ರಪರಾಕ್ರಮಃ ।
ಜಘಾನ ಸಮರೇ ಯೋಧಾನ್ ಶತಶೋऽಥ ಸಹಸ್ರಶಃ ॥೫೩॥

ಉಗ್ರಪರಾಕ್ರಮನಾದ ಅರ್ಜುನನು ಹಾಗೆ ತನ್ನ ಪರಾಕ್ರಮವನ್ನು ತೋರಿಸಿಕೊಳ್ಳುತ್ತಾ ಯುದ್ಧದಲ್ಲಿ ಯೋಧರನ್ನು ಶತಸಂಖ್ಯೆಯಲ್ಲಿ ಮತ್ತು ಸಹಸ್ರಸಂಖ್ಯೆಯಲ್ಲಿ ಸಂಹರಿಸಿದನು.

ತಥಾऽವರುದ್ಧಶ್ಚಾರಣ್ಯೇ ದಶ ವರ್ಷಾಣಿ ತ್ರೀಣಿ ಚ ।
ಕ್ರೋಧಾಗ್ನಿಮುತ್ಸರ್ಜಾಜೌ ಧಾರ್ತರಾಷ್ಟ್ರೇಷು ಪಾಂಡವಃ ॥೫೪॥

ಹದಿಮೂರು ವರ್ಷಗಳ ಕಾಲ ಕಾಡಿನಲ್ಲಿ ತಡೆಹಿಡಿಯಲ್ಪಟ್ಟಿದ್ದ ಅರ್ಜುನನು ಯುದ್ಧದಲ್ಲಿ ಧೃತರಾಷ್ಟ್ರ ಪುತ್ರರ ಮೇಲೆ ತನ್ನ ಕ್ರೋಧಾಗ್ನಿಯನ್ನು ಆ ರೀತಿಯಲ್ಲಿ ಚೆಲ್ಲಿದನು.

ತಸ್ಯ ತದ್ ದಹತಃ ಸೈನ್ಯಂ ದೃಷ್ಟ್ವಾ ಚಾಸ್ಯ ಪರಾಕ್ರಮಮ್ ।
ಸರ್ವೇ ಶಾಂತಿಪರಾ ಯೋಧಾ ಧಾರ್ತರಾಷ್ಟ್ರಸ್ಯ ಭಾರತ ॥೫೫॥

ಎಲೈ ಭಾರತನೇ, ಅವನು ಸೈನ್ಯವನ್ನು ಹಾಗೆ ಜಯಿಸುತ್ತಿರಲು ಅವನ ಪರಾಕ್ರಮವನ್ನು ನೋಡಿ ಕೌರವರ ಯೋಧರೆಲ್ಲರೂ ಶಾಂತಿಪರರಾದರು.

ಯಥಾ ನಲವನಂ ನಾಗಃ ಪ್ರಭಿನ್ನಃ ಷಷ್ಟಿಹಾಯನಃ ।
ಏವಂ ಸರ್ವಾನಪಾಮೃದ್ನಾದರ್ಜುನಃ ಶಸ್ತ್ರತೇಜಸಾ ॥೫೬॥

ಅರವತ್ತು ವರ್ಷದ ಮದಿಸಿದ ಆನೆಯು ನಳವನವನ್ನು ಪ್ರವೇಶಿಸಿ ಕಲಕುವಂತೆ ಅರ್ಜುನನು ತನ್ನ ಶಸ್ತ್ರತೇಜಸ್ಸಿನಿಂದ ಎಲ್ಲರನ್ನೂ ನಾಶಪಡಿಸಿದನು.

ವಿದ್ರಾವ್ಯ ಪತಿತಂ ಸೈನ್ಯಂ ತ್ರಾಸಯಿತ್ವಾ ಮಹಾರಥಾನ್ ।
ಅರ್ಜುನೋ ಜಯತಾಂ ಶ್ರೇಷ್ಠಃ ಪರ್ಯಾವರ್ತತ ಭಾರತ ॥೫೭॥

ತನ್ನ ಮೇಲೆ ಎರಗಿದ ಸೈನ್ಯವನ್ನು ಓಡಿಸಿ ,ಮಹಾರಥರನ್ನು ಹೆದರಿಸಿ, ಎಲೈ ಭಾರತನೇ, ಜಯಶಾಲಿಗಳಲ್ಲಿ ಶ್ರೇಷ್ಠನಾದ ಅರ್ಜುನನು ಹಿಂದಿರುಗಿದನು.

ತಸ್ಯ ಮಾರ್ಗಾನ್ ವಿಚರತೋ ನಿಘ್ನತಶ್ಚ ರಣಾಜಿರೇ ।
ಪ್ರಾವರ್ತತ ನದೀ ಘೋರಾ ಶೋಣಿತಾಂತ್ರತರಂಗಿಣೀ ॥೫೮॥

ಅಸ್ಥಿಶೈವಾಲಸಂಬಾಧಾ ಸಂಗ್ರಾಮೇ ಪಾರ್ಥನಿರ್ಮಿತಾ ।
ಶರಚಾಪಪ್ಲವಾ ಘೋರಾ ಮಾಂಸಶೋಣಿತಕರ್ದಮಾ ॥೫೯॥

ಯುದ್ಧಭೂಮಿಯಲ್ಲಿ ಮಾರ್ಗಗಳಲ್ಲಿ ಸಂಚರಿಸುತ್ತಾ ಶತ್ರುಗಳನ್ನು ಸಂಹರಿಸುವ ಅವನಿಂದ ರಕ್ತ ಮತ್ತು ಕರುಳುಗಳ ತರಂಗವುಳ್ಳ ಘೋರವಾದ ನದಿಯು ಹರಿಯಿತು. ಯುದ್ಧದಲ್ಲಿ ಅರ್ಜುನ ನಿರ್ಮಿತವಾದ ಆ ನದಿಯು ಅಸ್ಥಿಯ ಪಾಚಿಗಳಿಂದ ನಿಬಿಡವಾಗಿದ್ದಿತು. ಅದು ಶರಚಾಪರೂಪವಾದ ಪ್ಲವಗಳಿಂದಲೂ ಮತ್ತು ಮಾಂಸ ರಕ್ತ ರೂಪವಾದ ಕೆಸರಿನಿಂದಲೂ ಕೂಡಿ ಘೋರವಾಗಿದ್ದಿತು.

ಕರವಾಲವಿಪಾಠೀನಾ ಚಾಮರೋಷ್ಣೀಷಫೇನಿಲಾ ॥೬೦॥

ಅಶ್ವಗ್ರೀವಾಮಹಾವರ್ತಾ ಕಬಂಧಜಲಮಾನುಷಾ ।
ಕಾಕಕಂಕರುತಾ ತೀವ್ರಾ ಸಾರಸಕ್ರೌಂಚನಾದಿನಾ ॥೬೧॥

ಶಕ್ತಿಗಳೆಂಬ ವಿಪಾಠಗಳಿಂದಲೂ, ಚಾಮರ ಮತ್ತು ಪೇಟಗಳೆಂಬ ನೊರೆಗಳಿಂದಲೂ, ಕುದುರೆಗಳ ಕತ್ತುಗಳೆಂಬ ದೊಡ್ಡ ಸುಳಿಗಳಿಂದಲೂ, ಕಬಂಧವೆಂಬ ಜಲಪುರುಷರಿಂದಲೂ ತುಂಬಿದುದಾಗಿ ಕಾಕಕಂಕಪಕ್ಷಿಗಳ ಕಿರುಚಾಟದಿಂದ ಮತ್ತು ಸಾರಸ, ಕ್ರೌಂಚ ಪಕ್ಷಿಗಳ ನಾದದಿಂದ ಘೋರವಾಗಿದ್ದಿತು.

ಸಿಂಹನಾದಮಹಾನಾದಾ ಶಂಖಿಕಂಬುಕಸಂಕುಲಾ ।
ವೀರೋತ್ತಮಾಂಗಪದ್ಮಾಢ್ಯಾ ಶರಚಾಪಮಹಾನಲಾ ॥೬೨॥

ಪದಾತಿಮತ್ಸ್ಯಕಲುಷಾ ಗಜಶೀರ್ಷಕಕಚ್ಛಪಾ ।
ಗೋಮಾಯುವೃಕಸಂಘುಷ್ಟಾ ಮಾಂಸಮಜ್ಜಾಸ್ಥಿವಾಲುಕಾ ॥೬೩॥

ಸಿಂಹನಾದರೂಪವಾದ ಮಹಾನಾದದಿಂದಲೂ ಕೂಡಿ ಶಂಖ, ಕಂಬುಗಳಿಂದ ನಿಬಿಡವಾಗಿ, ವೀರರ ಶಿರಸ್ಸೆಂಬ ಪದ್ಮಗಳಿಂದ ಕೂಡಿ, ಬಿಲ್ಲುಬಾಣಗಳೆಂಬ ಮಹಾಗ್ನಿಯಿಂದ ಕೂಡಿ, ಪದಾತಿಯೆಂಬ ಮೀನುಗಳಿಂದ ಕಲುಷಿತವಾಗಿ, ಗಜಶೀರ್ಷಗಳೆಂಬ ಕೂರ್ಮಗಳಿಂದ ಸಹಿತವಾಗಿ, ಮಾಂಸ, ಮಜ್ಜ ಮತ್ತು ಅಸ್ಥಿಗಳೆಂಬ ಮರಳುಗಳಿಂದ ಕೂಡಿದ್ದಾಗಿ, ತೋಳ ಮತ್ತು ನರಿಗಳ ಘೋಷದಿಂದ ಕೂಡಿ, ಬಹಳ ಘೋರವಾಗಿದ್ದಿತು.

ಪ್ರಾವರ್ತಯನ್ ನದೀಂ ಘೋರಾಂ ಪಿಶಾಚಗಣಸೇವಿತಾಮ್ ॥೬೪॥

ಅಪಾರಾಮನವಾರಾಂ ಚ ರಕ್ತೋದಾಂ ಸರ್ವತೋ ವೃತಾಮ್ ।
ಅಭೀಕ್ಷ್ಣಮಕರೋತ್ ಪಾರ್ಥೋ ನದೀಮುತ್ತಮಶೋಣಿತಾಮ್ ॥೬೫॥

ಅರ್ಜುನನು ಪಿಶಾಚಗಣಸೇವಿತವಾದ ತೀರಗಳಿಲ್ಲದ ರಕ್ತೋದಕವುಳ್ಳ ಎಲ್ಲ ಕಡೆಗಳಲ್ಲಿಯೂ ಹರಿಯುವ ಶ್ರೇಷ್ಠವಾದ ರಕ್ತಗಳ ಘೋರವಾದ ನದಿಯನ್ನು ಸತತವಾಗಿ ಹರಿಸಿದನು.

ಅಸ್ಯಾದದನಾಸ್ಯ ಶರಾನ್ ಸಂಧಾಯ ಚ ವಿಮುಂಚತಃ ।
ವಿಕರ್ಷತಶ್ಚ ಗಾಂಡೀವಂ ನ ಕಿಂಚಿದ್ ದದೃಶೇಽಂತರಮ್ ॥೬೬॥

ಅವನು ಬತ್ತಳಿಕೆಯಿಂದ ಬಾಣವನ್ನು ತೆಗೆದುಕೊಳ್ಳುವುದಕ್ಕೂ, ಅದನ್ನು ಬಿಲ್ಲಿನಲ್ಲಿ ಜೋಡಿಸಿ ಗಾಂಡೀವ ಧನುಸ್ಸಿನ ಹೆದೆಯನ್ನು ಹಿಂದಕ್ಕೆ ಎಳೆಯುವುದಕ್ಕೂ ಮತ್ತು ಬಾಣವನ್ನು ಪ್ರಯೋಗಿಸುವುದಕ್ಕೂ ಮಧ್ಯೆ ಅವಕಾಶವೇ ಕಾಣುತ್ತಿರಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಷಷ್ಟಿತಮೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ತ್ರಯಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಅರವತ್ತೊಂದನೆಯ ಅಧ್ಯಾಯ

ಭೀಷ್ಮಾರ್ಜುನರು ಯುದ್ಧಕ್ಕೆ ಸಿದ್ಧರಾಗುತ್ತಿರಲು ದೇವತೆಗಳಿಂದ ಅವರ ಪ್ರಶಂಸೆ

ವೈಶಂಪಾಯನಃ

ಏವಂ ವಿದ್ರಾವ್ಯ ತತ್ಸೈನ್ಯಂ ಪಾರ್ಥೋ ಭೀಷ್ಮಮುಪಾದ್ರವತ್ ।
ತ್ರಸ್ತೇಷು ಸರ್ವಸೈನ್ಯೇಷು ಕೌರವ್ಯಸ್ಯ ಮಹಾತ್ಮನಃ ॥೧॥

ನರಸಿಂಹಮುಪಾಯಾಂತಂ ಜಿಗೀಷಂತಂ ಪರಾನ್ ರಣೇ ।
ವೃಷಸೇನೋಽಭ್ಯಯಾತ್ ತೂರ್ಣಂ ಯೋದ್ಧುಕಾಮೋ ಧನಂಜಯಮ್ ॥

ಮಹಾಪ್ರಯತ್ನಶಾಲಿಯಾದ ದುರ್ಯೋಧನನ ಎಲ್ಲಸೈನ್ಯವೂ ಹೆದರಿ ಹೋದ ಮೇಲೆ ಅರ್ಜುನನು ಆ ಸೈನ್ಯವನ್ನು ಚದುರಿಸಿ ಭೀಷ್ಮರ ಕಡೆಗೆ ಸಾಗಿದನು. ನರಸಿಂಹರಾದ, ಶತ್ರುಗಳನ್ನು ಜಯಿಸುವ ಭೀಷ್ಮರ ಕಡೆಗೆ ಅರ್ಜುನನು ಬರುವುದನ್ನು ನೋಡಿ ವೃಷಸೇನನು ಅವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಶೀಘ್ರವಾಗಿ ಅವನ ಕಡೆಗೆ ಬಂದನು.

ತಸ್ಯ ಪಾರ್ಥಸ್ತದಾ ಕ್ಷಿಪ್ರಂ ಕ್ಷುರಧಾರೇಣ ಕಾರ್ಮುಕಮ್ ।
ನ್ಯಕೃಂತದ್ ಗೃಧ್ರಪತ್ರೇಣ ಜಾಂಬೂನದಪರಿಷ್ಕೃತಮ್ ॥೩॥

ಆಗ ಅರ್ಜುನನು ಗೃಧ್ರಪತ್ರವುಳ್ಳ, ನಿಶಿತವಾದ ಅಲಗುಳ್ಳ ಒಂದು ಬಾಣದಿಂದ ಸುವರ್ಣಾಲಂಕೃತವಾದ ಅವನ ಧನುಸ್ಸನ್ನು ಕತ್ತರಿಸಿದನು.

ಅಥೈನಂ ಪಂಚಭಿರ್ಬಾಯಃ ಪ್ರತ್ಯವಿಧ್ಯತ್ ಸ್ತನಾಂತರೇ ।
ಸ ಪಾರ್ಥಬಾಣಾಭಿಹತೋ ರಥಾತ್ ಪ್ರಸ್ಕಂದ್ಯ ಚಾದ್ರವತ್ ॥೪॥

ಅನಂತರ ಪುನಃ ಐದು ಬಾಣಗಳನ್ನು ಪ್ರಯೋಗಿಸಿ ಅವನ ಎದೆಯ ಮಧ್ಯದಲ್ಲಿ ಹೊಡೆದನು. ಅರ್ಜುನನ ಬಾಣಗಳಿಂದ ತಾಡಿತನಾದ ಅವನು ರಥದಿಂದ ಧುಮುಕಿ ಓಡಿ ಹೋದನು.

ದುಃಶಾಸನೋ ವಿಕರ್ಣಶ್ಚ ಶಕುನಿಶ್ಚ ವಿವಿಂಶತಿಃ ।
ಆಯಾಂತಂ ಭೀಮಧನ್ವಾನಂ ಪರ್ಯಕೀರ್ಯಂತ ಪಾಂಡವಮ್ ॥೫॥

ದುಃಶಾಸನ, ವಿಕರ್ಣ, ಶಕುನಿ ಮತ್ತು ವಿವಿಂಶತಿ ಇವರು ಘೋರವಾದ ಧನುಸ್ಸನ್ನು ಹೊಂದಿ ಮುಂದೆ ಬರುತ್ತಿದ್ದ ಅರ್ಜುನನನ್ನು ಸುತ್ತುವರಿದು ಬಾಣಗಳನ್ನು ಪ್ರಯೋಗಿಸಿದರು.

ತೇಷಾಂ ಪಾರ್ಥೋ ರಣೇ ಕ್ರುದ್ಧಃ ಶರೈಃ ಸನ್ನತಪರ್ವಭಿಃ ।
ಯುಗಂ ಧ್ವಜಮಥೇಷಾಂ ಚ ಚಿಚ್ಛೇದ ತರಸಾ ರಣೇ ॥೬॥

ಕೋಪಗೊಂಡ ಅರ್ಜುನನು ಯುದ್ಧದಲ್ಲಿ ಬಾಗಿದ ತುದಿಗಳುಳ್ಳ ಬಾಣಗಳಿಂದ ಅವರ ರಥದ ನೊಗ, ಧ್ವಜ ಮತ್ತು ಮೂಕಿಗಳನ್ನು ಶೀಘ್ರವಾಗಿ ಕತ್ತರಿಸಿದನು.

ತೇ ನಿಕೃತ್ತಧ್ವಜಾಃ ಸರ್ವೇ ಛಿನ್ನಕಾರ್ಮುಕವೇಷ್ಟನಾಃ ।
ರಣಮಧ್ಯಾದಪಯಯುಃ ಪಾರ್ಥಬಾಣಾಭಿಪೀಡಿತಾಃ ॥೭॥

ತಮ್ಮ ಧ್ವಜಗಳು ಕತ್ತರಿಸಲ್ಪಟ್ಟು ಬಿಲ್ಲು ಮೊದಲಾದವುಗಳೂ ಕತ್ತರಿಸಲ್ಪಟ್ಟ ಅವರೆಲ್ಲರೂ ಅರ್ಜುನನ ಬಾಣಗಳಿಂದ ಪೀಡಿತರಾಗಿ ಯುದ್ಧದಿಂದ ಹಿಂದೆ ಸರಿದರು.

ತತಃ ಪ್ರಹಸ್ಯ ಬೀಭತ್ಸುರ್ವೈರಾಟಿಮಿದಮಬ್ರವೀತ್ ॥೮॥

ಏತಂ ಮೇ ಪ್ರಾಪಯೇದಾನೀಂ ತಾಳಂ ಸೌವರ್ಣಮುಚ್ಛ್ರಿತಮ್ ।
ಮೇಘಮಧ್ಯೇ ಯಥಾ ವಿದ್ಯುಚ್ಚರತೀವ ಪುನಃ ಪುನಃ ॥೯॥

ಅಸೌ ಶಾಂತನವೋ ಭೀಷ್ಮಸ್ತತ್ರ ಯಾಹಿ ಪರಂತಪ ॥೧೦॥

ಆಗ ಅರ್ಜುನನು ನಕ್ಕು ಉತ್ತರನನ್ನು ಕುರಿತು, ಮೋಡಗಳ ಮಧ್ಯೆ ಮಿಂಚಿನಂತೆ ಸಂಚರಿಸುವ, ಎತ್ತರವಾದ ಸುವರ್ಣಮಯವಾದ ತಾಳಧ್ವಜವನ್ನುಳ್ಳ ರಥದ ಕಡೆಗೆ ನನ್ನನ್ನು ಕರೆದುಕೊಂಡು ಹೋಗು. ಅವರು ಶಂತನು ಪುತ್ರರಾದ ಭೀಷ್ಮ. ಅಲ್ಲಿಗೆ ರಥವನ್ನು ನಡೆಸು ಎಂದು ಹೇಳಿದನು.

ಅಸ್ತ್ರಾಣಿ ತಸ್ಯ ದಿವ್ಯಾನಿ ದರ್ಶಯಿಷ್ಯಾಮಿ ಸಂಯುಗೇ ।
ಘೋರರೂಪಾಣಿ ಚಿತ್ರಾಣಿ ಲಘೂನಿ ಚ ಗುರೂಣಿ ಚ ॥೧೧॥

ಯುದ್ಧದಲ್ಲಿ ನನ್ನ ದಿವ್ಯವಾದ, ಭಯಂಕರವಾದ, ವಿಚಿತ್ರವಾದ ಮತ್ತು ದೊಡ್ಡ ಮತ್ತು ಸಣ್ಣ ಅಸ್ತ್ರಗಳನ್ನು ತೋರಿಸುವೆನು (ಎಂದು ಹೇಳಿದನು).

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ವೈರಾಟಿಃ ಪಾರ್ಥಸಾರಥಿಃ ।
ವಾಹಯಚ್ಚೋದಿತಸ್ತೇನ ರಥಂ ಭೀಷ್ಮರಥಂ ಪ್ರತಿ ॥೧೨॥

ವೈಶಂಪಾಯನ– ಅವನ ಮಾತನ್ನು ಕೇಳಿ ಪಾರ್ಥನ ಸಾರಥಿಯಾದ ಉತ್ತರನು ಅರ್ಜುನನಿಂದ ಪ್ರೇರಿಸಲ್ಪಟ್ಟು ಭೀಷ್ಮರ ರಥದ ಕಡೆಗೆ ತನ್ನ ರಥವನ್ನು ನಡೆಸಿದನು.

ತಂ ತಥಾ ಚೋದಿತಂ ದೃಷ್ಟ್ವಾ ಫಲ್ಗುನಸ್ಯ ರಥೋತ್ತಮಮ್ ।
ವಾಯುನೇವ ಮಹಾಮೇಘಂ ಸಹಸಾऽಭಿಸಮೀರಿತಮ್ ॥೧೩॥

ತಂ ಪ್ರತ್ಯಗಾಚ್ಚ ಗಾಂಗೇಯೋ ರಥೇನಾದಿತ್ಯವರ್ಚಸಾ ॥೧೪॥

ಅರ್ಜುನನ ಶ್ರೇಷ್ಠವಾದ ರಥವು ವಾಯುವಿನಿಂದ ಪ್ರೇರಿತವಾದ ಮಹಾಮೇಘದಂತೆ ಮುಂದೆ ಬರುತ್ತಿರುವುದನ್ನು ನೋಡಿದ ಗಂಗಾಪುತ್ರನಾದ ಭೀಷ್ಮರು ಸೂರ್ಯನ ಕಾಂತಿಯನ್ನು ಹೊಂದಿದ್ದ ರಥದಿಂದ ಅವನಿಗೆ ಎದುರಾಗಿ ಬಂದರು.

ಆಯಾಂತಮರ್ಜುನಂ ದೃಷ್ಟ್ವಾ ಭೀಷ್ಮಃ ಪರಪುರಂಜಯಃ ।
ಪ್ರತ್ಯುದ್ಜಗಾಮ ಯುದ್ಧಾರ್ಥೀ ಮಹರ್ಷಭ ಇವರ್ಷಭಮ್ ॥೧೫॥

ಪರಪುರಂಜಯರಾದ ಭೀಷ್ಮರು ಎದುರಿಗೆ ಬರುತ್ತಿದ್ದ ಅರ್ಜುನನನ್ನು ನೋಡಿ ಯುದ್ಧಾರ್ಥಿಯಾಗಿ ಒಂದು ಗೂಳಿಯು ಇನ್ನೊಂದು ಗೂಳಿಯ ಎದುರಿಗೆ ಬಂದಂತೆ ಅವನಿಗೆ ಎದುರಾಗಿ ಬಂದರು.

ತಥಾಭಿಗುಪ್ತಯೇ ಸ್ವೇಷಾಂ ದುರಾಧರ್ಷಃ ಪಿತಾಮಹಃ ।
ಹನ್ಯಮಾನೇಷು ಯೋಧೇಷು ಧನಂಜಯಮುಪಾದ್ರವತ್ ॥೧೬॥

ಪಿತಾಮಹರೂ, ಸೋಲಿಸಲು ಅಸಾಧ್ಯರೂ ಆದ ಭೀಷ್ಮರು ತಮ್ಮ ಯೋಧರು ಹತರಾಗುತ್ತಿರಲು ಅವರನ್ನು ರಕ್ಷಿಸಲು ಅರ್ಜುನನ ಕಡೆಗೆ ಬಂದರು.

ಪ್ರಗೃಹ್ಯ ಕಾರ್ಮುಕಶ್ರೇಷ್ಠಂ ಜಾತರೂಪಪರಿಷ್ಕೃತಮ್ ।
ಶರಾನಾದಾಯ ತೀಕ್ಷ್ಣಾಗ್ರಾನ್ ಮರ್ಮದೇಹಪ್ರಮಾಥಿನಃ ॥೧೭॥

ಪಾಂಡರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ಶುಶುಭೇ ಸ ನರವ್ಯಾಘ್ರೋ ಗಿರಿಃ ಸೂರ್ಯೋತ್ತರೋ ಯಥಾ ॥೧೮॥

ಸುವರ್ಣಾಲಂಕೃತವಾದ ಶ್ರೇಷ್ಠವಾದ ಬಿಲ್ಲನ್ನು ಕೈಯಲ್ಲಿ ಹಿಡಿದು ಹರಿತವಾದ ತುದಿಯುಳ್ಳ ಶತ್ರುಮರ್ಮಗಳನ್ನು ಭೇದಿಸುವ ಬಾಣಗಳನ್ನು ತೆಗೆದುಕೊಂಡು ತಲೆಯ ಮೇಲೆ ಶ್ವೇತಚ್ಛತ್ರವನ್ನು ಹೊಂದಿದವರಾಗಿ ಆ ನರವ್ಯಾಘ್ರರು ಮೇಲೆ ಸೂರ್ಯನಿರುವ ಒಂದು ಪರ್ವತದಂತೆ ಶೋಭಿಸಿದರು.

ಪ್ರಾಧ್ಮಾಯ ಶಂಖಂ ಗಾಂಗೇಯೋ ಧಾರ್ತರಾಷ್ಟ್ರಂ ಪ್ರಹರ್ಷಯನ್ ।
ಪ್ರದಕ್ಷಿಣಮುಪಾವೃತ್ಯ ಬೀಭತ್ಸುಂ ಸಮವಾರಯತ್ ॥೧೯॥

ಭೀಷ್ಮರು ಶಂಖವನ್ನು ಊದಿ ದುರ್ಯೋಧನನಿಗೆ ಸಂತೋಷವನ್ನುಂಟು ಮಾಡುತ್ತಾ ಪ್ರದಕ್ಷಿಣೆಯಾಗಿ ಬಂದು ಅರ್ಜುನನನ್ನು ತಡೆದರು.

ಸಮವೇಕ್ಷ್ಯ ತಮಾಯಾಂತಂ ಕೌಂತೇಯಃ ಪರವೀರಹಾ ।
ದೇವದತ್ತಂ ಮಹಾಶಂಖಂ ಪ್ರದಧ್ಮೌ ಯುಧಿ ವೀರ್ಯವಾನ್ ॥೨೦॥

ಪರವೀರಘಾತಿಯಾದ, ವೀರ್ಯಶಾಲಿಯಾದ ಅರ್ಜುನನು ಅವರು ಬರುತ್ತಿರುವುದನ್ನು ನೋಡಿ ಯುದ್ಧದಲ್ಲಿ ತನ್ನ ದೇವದತ್ತ ಮಹಾಶಂಖವನ್ನು ಊದಿದನು.

ತೌ ಶಂಖನಾದಾವತ್ಯರ್ಥಂ ಭೀಷ್ಮಪಾಂಡವಯೋಸ್ತದಾ ।
ನಾದಯಾಮಾಸತುಸ್ತತ್ರ ಖಂ ಚ ಭೂಮಿಂ ಚ ಸರ್ವಶಃ ॥೨೧॥

ಭೀಷ್ಮ ಮತ್ತು ಅರ್ಜುನರ ಆ ತೀವ್ರವಾದ ಶಂಖನಾದವು ಭೂಮಿಯನ್ನು, ಅಂತರಿಕ್ಷವನ್ನು ಆವರಿಸಿ ಅಲ್ಲಿ ಪ್ರತಿಧ್ವನಿಸಿತು.

ಸ ಹಿ ದೃಷ್ಟ್ವಾ ತಥಾऽऽಯಾಂತಂ ಕೌಂತೇಯಂ ಪರವೀರಹಾ ॥೨೨॥

ಪ್ರತ್ಯಗೃಹ್ಣಾದಮೇಯಾತ್ಮಾ ಪ್ರಿಯಾತಿಥಿಮಿವಾಗತಮ್ ।

ಪರವೀರಘಾತಿಯಾದ ಭೀಷ್ಮರು ಹಾಗೆ ಬರುತ್ತಿರುವ ಅರ್ಜುನನನ್ನು ನೋಡಿ ಪ್ರಿಯನಾದ ಅತಿಥಿಯನ್ನು ಸ್ವೀಕರಿಸುವಂತೆ ಅಮೇಯಾತ್ಮರಾದ ಅವರು ಅವನನ್ನು ಸ್ವೀಕರಿಸಿದರು.

ಅಂತರಿಕ್ಷೇ ಪ್ರಜಲ್ಪಂತಿ ಸರ್ವೇ ದೇವಾಃ ಸವಾಸವಾಃ ॥೨೩॥

ಯದರ್ಜುನಃ ಕುರೂನ್ ಸರ್ವಾನ್ ಪ್ರಾಕೃಂತಚ್ಛಸ್ತ್ರತೇಜಸಾ ।

ಅರ್ಜುನನು ಎಲ್ಲಾ ಕುರುಶ್ರೇಷ್ಠರನ್ನು ತನ್ನ ಶಸ್ತ್ರತೇಜಸ್ಸಿನಿಂದ ಕತ್ತರಿಸಿದಾಗ ಅಂತರಿಕ್ಷದಲ್ಲಿ ಇಂದ್ರಾದಿ ಸಕಲ ದೇವತೆಗಳೂ ಮಾತನಾಡಿಕೊಂಡರು.

ಕುರುಶ್ರೇಷ್ಠಾವಿಮೌ ವೀರೌ ರಣೇ ಭೀಷ್ಮಧನಂಜಯೌ ॥೨೪॥

ಸರ್ವಾಸ್ತ್ರಕುಶಲೌ ಲೋಕೇ ಏತಾವತಿರಥಾವುಭೌ ।
ಉಭೌ ದೇವಮನುಷ್ಯೇಷು ವಿಶ್ರುತೌ ಸ್ವಪರಾಕ್ರಮೈಃ ॥೨೫॥

ಉಭೌ ಪರಮಸಂರಬ್ಧಾವುಭೌ ದೀಪ್ತಧನುರ್ಧರೌ ॥೨೬॥

ಭೀಷ್ಮಧನಂಜಯರಿಬ್ಬರೂ ಯುದ್ಧದಲ್ಲಿ ವೀರರು ಮತ್ತು ಕುರುಶ್ರೇಷ್ಠರು. ಇವರಿಬ್ಬರೂ ಸರ್ವಾಸ್ತ್ರಕುಶಲರು. ಇಬ್ಬರೂ ಅತಿರಥರು, ತಮ್ಮ ಪರಾಕ್ರಮಗಳಿಂದ ದೇವತೆಗಳಲ್ಲಿಯೂ ಮತ್ತು ಮನುಷ್ಯರಲ್ಲಿಯೂ ಪ್ರಖ್ಯಾತರಾದವರು. ಇಬ್ಬರೂ ಬಹಳ ಕೋಪಗೊಂಡಿರುವವರು ಮತ್ತು ತೇಜಸ್ಸಿನಿಂದ ಬೆಳಗುವ ಧನುಸ್ಸನ್ನು ಧರಿಸಿದವರು.

ಸಮಾಗತೌ ನರವ್ಯಾಘ್ರೌ ವ್ಯಾಘ್ರಾವಿವ ತರಸ್ವಿನೌ ।
ಉಭೌ ಸದೃಶಕರ್ಮಾಣೌ ಸೂರ್ಯಸ್ಯಾಗ್ನೇಶ್ಚ ಭಾರತೌ ॥೨೭॥

ವಾಸುದೇವಸ್ಯ ಸದೃಶೌ ಕಾರ್ತವೀರ್ಯಸಮಾವುಭೌ ।
ಉಭೌ ವಿಶ್ರುತಕರ್ಮಾಣಾವುಭೌ ಶೂರೌ ಮಹಾಬಲೌ ॥೨೮॥

ಸರ್ವಾಸ್ತ್ರವಿದುಷಾಂ ಶ್ರೇಷ್ಠೌ ಸರ್ವಶಸ್ತ್ರಭೃತಾಂ ವರೌ ॥೨೯॥

ವೇಗಶಾಲಿಗಳಾದ ವ್ಯಾಘ್ರಗಳಂತೆ ಇಬ್ಬರೂ ಒಟ್ಟಾಗಿದ್ದಾರೆ. ಇಬ್ಬರೂ ಭರತವಂಶದವರು ಮತ್ತು ಸೂರ್ಯನಿಗೆ ಮತ್ತು ಅಗ್ನಿಗೆ ಸಮಾನವಾದ ಕಾರ್ಯವನ್ನು ಮಾಡುವವರು. ಇಬ್ಬರೂ ಕೃಷ್ಣನಿಗೆ ಸದೃಶರಾದವರು. ಕಾರ್ತವೀರ್ಯಾರ್ಜುನನಿಗೆ ಸಮಾನರಾದವರು. ಇಬ್ಬರೂ ತಮ್ಮ ಕರ್ಮಗಳಿಂದ ಪ್ರಖ್ಯಾತರಾದವರು. ಇಬ್ಬರೂ ಶೂರರು ಮತ್ತು ಮಹಾಬಲವುಳ್ಳವರು. ಎಲ್ಲಾ ಅಸ್ತ್ರಜ್ಞರಲ್ಲಿ ಶ್ರೇಷ್ಠರು ಮತ್ತು ಎಲ್ಲಾ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದವರು.

ಅಗ್ನೇರಿಂದ್ರಸ್ಯ ಸೋಮಸ್ಯ ಯಮಸ್ಯ ಧನದಸ್ಯ ಚ ।
ಅನಯೋಃ ಸದೃಶಂ ವೀರ್ಯಂ ಮಿತ್ರಸ್ಯ ವರುಣಸ್ಯ ಚ ॥೩೦॥

ಇವರ ಪರಾಕ್ರಮವು ಅಗ್ನಿಯ, ಇಂದ್ರನ, ಚಂದ್ರನ, ಯಮನ, ಕುಬೇರನ, ಮಿತ್ರನ, ವರುಣನ ಪರಾಕ್ರಮಕ್ಕೆ ಸದೃಶವಾಗಿರುವಂತಹದು.

ಕೋ ವಾ ಕುಂತೀಸುತಂ ಯುದ್ಧೇ ದ್ವೈರಥೇನೋಪಯಾಸ್ಯತಿ ।
ಋತೇ ಶಾಂತನವಾದನ್ಯಃ ಕ್ಷತ್ರಿಯೋ ಭುವಿ ವಿದ್ಯತೇ ॥೩೧॥

ಶಂತನು ಪುತ್ರರಾದ ಭೀಷ್ಮರನ್ನು ಬಿಟ್ಟು ದ್ವೈರಥ ಯುದ್ಧದಲ್ಲಿ ಅರ್ಜುನನನ್ನು ಎದುರಿಸುವ ಕ್ಷತ್ರಿಯನು ಭೂಮಿಯಲ್ಲಿ ಯಾವನಿದ್ದಾನೆ?

ವೈಶಂಪಾಯನಃ

ಇತಿ ಸಂಪೂಜಯಾಮಾಸುರ್ಭೀಷ್ಮಂ ದೃಷ್ಟ್ವಾ ತ್ವರ್ಜುನಂ ಗತಮ್ ।
ರಣೇ ಸಂಪ್ರಹರಿಷ್ಯಂತಂ ದೃಷ್ಟ್ವಾ ದೇವಾಃ ಸವಾಸವಾಃ ॥೩೨॥

ವೈಶಂಪಾಯನ– ಹೀಗೆ ಅರ್ಜುನನಿಗೆ ಅಭಿಮುಖವಾಗಿ ಹೋಗಿ ಯುದ್ಧದಲ್ಲಿ ಬಾಣಪ್ರಯೋಗವನ್ನು ಮಾಡುವ ಭೀಷ್ಮರನ್ನು ನೋಡಿ ಇಂದ್ರಾದಿ ದೇವತೆಗಳು ಅವರನ್ನು ಪ್ರಶಂಸಿಸಿದರು.

ಅಥ ಬಹುವಿಧಶಂಖತೂರ್ಯಘೋಷೈಃ
ವಿವಿಧರವೈಃ ಸಹ ಸಿಂಹನಾದಮಿಶ್ರೈಃ ।
ಕುರುವೃಷಭಮಮಪೂಜಯತ್ ಕುರೂಣಾಂ
ಬಲಮಮರಾಧಿಪಸೈನ್ಯಸಪ್ರಭಂ ತತ್ ॥೩೩॥

ಅನಂತರ ಬಹುವಿಧವಾದ ಶಂಖತೂರ್ಯಘೋಷಗಳಿಂದಲೂ, ಸಿಂಹನಾದ ಮಿಶ್ರಿತವಾದ ವಿವಿಧ ಶಬ್ದಗಳಿಂದಲೂ, ದೇವಸೈನ್ಯಕ್ಕೆ ಸದೃಶವಾದ ಆ ಕುರುಸೈನ್ಯವು ಕುರುಶ್ರೇಷ್ಠರಾದ ಭೀಷ್ಮರನ್ನು ಪೂಜಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಏಕಷಷ್ಟಿತಮೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಚತುಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಅರವತ್ತೆರಡನೆಯ ಅಧ್ಯಾಯ

ಭೀಷ್ಮಾರ್ಜುನರ ಯುದ್ಧ. ಭೀಷ್ಮರ ಪರಾಭವ.

ವೈಶಂಪಾಯನಃ

ತತೋ ಭೀಷ್ಮಃ ಶಾಂತನವೋ ವೀರ್ಯವಾನ್ ಸಾಯಕಾನ್ ಬಹೂನ್।
ಸಮರ್ಪಯನ್ ಮಹಾವೇಗಾನ್ ಶ್ವಸತಃ ಪನ್ನಗಾನಿವ ॥೧॥

ವೈಶಂಪಾಯನ– ಅನಂತರ ಶಂತನು ಪುತ್ರರೂ ವೀರ್ಯಶಾಲಿಗಳೂ ಆದ ಭೀಷ್ಮರು ಭುಸುಗುಟ್ಟುವ ಸರ್ಪದಂತಿದ್ದ ಅನೇಕ ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದರು.

ತೇ ಧ್ವಜಂ ಪಾಂಡುಪುತ್ರಸ್ಯ ಸಮಾಸಾದ್ಯ ಪತತ್ರಿಣಃ ।
ಜ್ವಲಂತಂ ಕಪಿಮಾಜಘ್ನುರ್ಧ್ವಜಾಗ್ರನಿಲಯಂ ಚ ತಮ್ ॥೨॥

ಆ ಬಾಣಗಳು ಅರ್ಜುನನ ರಥದ ಸಮೀಪಕ್ಕೆ ಬಂದು ಪ್ರಕಾಶಮಾನವಾದ ಆ ರಥದ ಧ್ವಜವನ್ನೂ ಮತ್ತು ಧ್ವಜನಿವಾಸಿಯಾದ ಕಪಿಯನ್ನೂ ಹೊಡೆದವು.

ಸಾರಥಿಂ ಚ ಹಯಾಂಶ್ಚಾಪಿ ವಿವ್ಯಾಧ ನಿಶಿತೈಃ ಶರೈಃ ।
ಉರಸ್ಯತಾಡಯತ್ ಪಾರ್ಥಂ ತ್ರಿಭಿರೇವಾಯಸೈಃ ಶರೈಃ ॥೩॥

ಭೀಷ್ಮರು ಅರ್ಜುನನ ಸಾರಥಿಯನ್ನು ಮತ್ತು ಅಶ್ವಗಳನ್ನು ನಿಶಿತವಾದ ಬಾಣಗಳಿಂದ ಹೊಡೆದು ಮೂರುಲೋಹಮಯವಾದ ಬಾಣಗಳಿಂದ ಅರ್ಜುನನ ವಕ್ಷಸ್ಥಲಕ್ಕೆ ಹೊಡೆದರು.

ತದಾऽರ್ಜುನಃ ಶರೈಸ್ತೀಕ್ಷ್ಣೈಃ ವಿದ್ಧ್ವಾ ಕುರುಪಿತಾಮಹಮ್ ।
ಧ್ವಜಂ ಚ ಸಾರಥಿಂ ಚಾಪಿ ವಿವ್ಯಾಧ ದಶಭಿಃ ಶರೈಃ ॥೪॥

ಆಗ ಅರ್ಜುನನು ಕುರುಪಿತಾಮಹರನ್ನು ತೀಕ್ಷ್ಣವಾದ ಬಾಣಗಳಿಂದ ಹೊಡೆದು ಅವರ ಧ್ವಜ ಮತ್ತು ಸಾರಥಿಗಳಿಗೆ ಹತ್ತುಬಾಣಗಳನ್ನು ಪ್ರಯೋಗಿಸಿದನು.

ತದ್ಯುದ್ಧಮಭವದ್ ಘೋರಂ ಲೋಮಹರ್ಷಣಮದ್ಭುತಮ್ ।
ಭೀಷ್ಮಸ್ಯ ಸಹ ಪಾರ್ಥೇನ ಬಲಿವಾಸವಯೋರಿವ ॥೫॥

ಭೀಷ್ಮರಿಗೂ ಮತ್ತು ಅರ್ಜುನನಿಗೂ ನಡೆದ ಆ ಯುದ್ಧವು ಬಲಿ ಮತ್ತು ಇಂದ್ರನಿಗೆ ನಡೆದ ಯುದ್ಧದಂತೆ ಘೋರವೂ, ಅದ್ಭುತವೂ ಮತ್ತು ರೋಮಾಂಚಕವೂ ಆಗಿದ್ದಿತು.

ಸಂತತಂ ಶರಮಾಲಾಭಿರಾಕಾಶಂ ಸಮಪದ್ಯತ ।
ಅಂಬುದೈರಿವ ಧಾರಾಭಿಸ್ತಯೋಃ ಕಾರ್ಮುಕನಿಃಸೃತೈಃ ॥೬॥

ಅವರಿಬ್ಬರ ಬಿಲ್ಲುಗಳಿಂದ ಹೊರಹೊಮ್ಮಿದ ಬಾಣಗಳ ಮಾಲೆಗಳಿಂದ ಆಕಾಶವು ತುಂಬಿಹೋಯಿತು.

ಭಲ್ಲೈರ್ಭಲ್ಲಾಃ ಸಮಾಹತ್ಯ ಭೀಷ್ಮಪಾಂಡವಯೋ ರಣೇ ।
ಅಂತರಿಕ್ಷೇ ವ್ಯರಾಜಂತ ಖದ್ಯೋತಾಃ ಪ್ರಾವೃಷೀವ ಹಿ ॥೭॥

ಯುದ್ಧದಲ್ಲಿ ಭೀಷ್ಮಾರ್ಜುನರ ಭಲ್ಲಗಳು ಒಂದಕ್ಕೆ ಒಂದು ಹೊಡೆದು ಅಂತರಿಕ್ಷದಲ್ಲಿ ಮಳೆಗಾಲದಲ್ಲಿ ಕಾಣುವ ಮಿಣುಕುಹುಳದಂತೆ ರಾರಾಜಿಸಿದವು.

ಅಗ್ನಿಚಕ್ರೋಪಮಂ ಘೋರಂ ಮಂಡಲೀಕೃತಮಾಹವೇ ।
ಗಾಂಡೀವಮಭವಜ್ಜಿಷ್ಣೋಃ ಸವ್ಯಂ ದಕ್ಷಿಣಮಸ್ಯತಃ ॥೮॥

ಬಲಭಾಗದಿಂದ ಮತ್ತು ಎಡಭಾಗದಿಂದ ಬಾಣಪ್ರಯೋಗ ಮಾಡುವ ಅರ್ಜುನನ ಗಾಂಡೀವವು ಯುದ್ಧದಲ್ಲಿ ಅಗ್ನಿಚಕ್ರದಂತೆ ಘೋರವೂ ಮತ್ತು ಮಂಡಲಾಕಾರವನ್ನು ಹೊಂದಿದುದೂ ಆಗಿದ್ದಿತು.

ಪರ್ವತಂ ವಾರಿಧಾರಾಭಿಃ ಘಾದಯನ್ನಿವ ತೋಯದಃ ।
ಅರ್ಜುನಃ ಘಾದಯದ್ ಭೀಷ್ಮಂ ಶರವರ್ಷೈರನೇಕಶಃ ॥೯॥

ಮೇಘವು ಪರ್ವತವನ್ನು ಮಳೆಯ ನೀರಿನ ಧಾರೆಗಳಿಂದ ಮುಚ್ಚುವಂತೆ ಅರ್ಜುನನು ಭೀಷ್ಮರನ್ನು ಅನೇಕ ಶರವರ್ಷಗಳಿಂದ ಮುಚ್ಚಿದನು.

ತಾಂ ಸಮುದ್ರಮಿವೋದ್ಧೂತಾಂ ಶರವೃಷ್ಟಿಂ ಸಮುದ್ಯತಾಮ್ ।
ವ್ಯಧಮತ್ ಶನಕೈರ್ಭೀಷ್ಮೋ ಹ್ಯರ್ಜುನಂ ಸನ್ನ್ಯವಾರಯತ್ ॥೧೦॥

ಸಮುದ್ರದಂತೆ ಉಕ್ಕಿಬರುತ್ತಿದ್ದ ಆ ಶರವೃಷ್ಟಿಯನ್ನು ಭೀಷ್ಮರು ನಿಧಾನವಾಗಿ ನಿವಾರಿಸಿ ಅರ್ಜುನನನ್ನು ತಡೆದರು.

ತತಸ್ತಾನಿ ವಿಸೃಷ್ಟಾನಿ ಶರಜಾಲಾನಿ ಸಂಘಶಃ ।
ಆಹತಾನಿ ವ್ಯಕೀರ್ಯಂತ ಅರ್ಜುನಸ್ಯ ರಥಂ ಪ್ರತಿ ॥೧೧॥

ಆಗ ಅರ್ಜುನನಿಂದ ಪ್ರಯೋಗಿಸಲ್ಪಟ್ಟ ಆ ಶರಜಾಲಗಳು ಭೀಷ್ಮರಿಂದ ಹೊಡೆಯಲ್ಪಟ್ಟು ಅರ್ಜುನನ ರಥದ ಕಡೆಗೆ ಸಾಗಿ ನಾಶವನ್ನು ಹೊಂದಿದವು.

ತತಃ ಕನಕಪುಂಖಾಗ್ರೈಃ ಶರೈಃ ಸನ್ನತಪರ್ವಭಿಃ ।
ಪತದ್ಭಿಃ ಖಗವಾಜೈಶ್ಚ ದ್ಯೌರಾಸೀತ್ ಸಂವೃತಾ ಶರೈಃ ॥೧೨॥

ಅನಂತರ ಕನಕಪುಂಖಗಳನ್ನು ಹೊಂದಿದ ಬಾಗಿದ ತುದಿಯುಳ್ಳ ಪಕ್ಷಿಗಳ ಗರಿಗಳಿಂದ ಕೂಡಿದ ಬಾಣಗಳಿಂದ ಅಂತರಿಕ್ಷವು ಮುಚ್ಚಿಹೋಯಿತು.

ತತಃ ಪ್ರಾಸೃಜದುಗ್ರಾಣಿ ಶರಜಾಲಾನಿ ಪಾಂಡವಃ ।
ತಾವಂತಿ ಶರಜಾಲಾನಿ ಭೀಷ್ಮಃ ಪಾರ್ಥಾಯ ಪ್ರಾಹಿಣೋತ್ ॥೧೩॥

ಅನಂತರ ಅರ್ಜುನನು ಉಗ್ರವಾದ ಶರಜಾಲಗಳನ್ನು ಸೃಷ್ಟಿಸಿದನು. ಭೀಷ್ಮರೂ ಸಹ ಅಷ್ಟೇ ಶರಜಾಲಗಳನ್ನು ಸೃಷ್ಟಿಸಿ ಅರ್ಜುನನ ಕಡೆಗೆ ಕಳುಹಿಸಿದರು.

ಸಾಶ್ವಂ ಸಸೂತಂ ಸರಥಂ ಸ ಪಾರ್ಥಂ
ಸಮಾಹಿನೋದ್ ಭಾರತ ವತ್ಸದಂತೈಃ ।
ಪ್ರಚ್ಛಾದಯಾಮಾಸ ದಿಶಶ್ಚ ಸರ್ವಾ
ನಭಶ್ಚ ಬಾಣೈಸ್ತಪನೀಯಪುಂಖೈಃ ॥೧೪॥

ಎಲೈ ಭಾರತನೇ, ಭೀಷ್ಮರು ವತ್ಸದಂತಗಳಿಂದ (ಬಾಣವಿಶೇಷಗಳಿಂದ) ಅಶ್ವ, ಸೂತ, ರಥಸಹಿತನಾದ ಅರ್ಜುನನನ್ನು ಮುಚ್ಚಿ ತಮ್ಮ ಪ್ರಕಾಶಿಸುವ ಪುಂಖವುಳ್ಳ ಬಾಣಗಳಿಂದ ಎಲ್ಲಾ ದಿಕ್ಕುಗಳನ್ನೂ ಮತ್ತು ಆಕಾಶವನ್ನೂ ಮುಚ್ಚಿದರು.

ತತೋ ದೇವರ್ಷಿಗಂಧರ್ವಾಃ ಸಾಧುಸಾಧ್ವಿತ್ಯಪೂಜಯನ್ ।
ದುಷ್ಕರಂ ಕುರುತೇ ಭೀಷ್ಮೋ ಯದರ್ಜುನಮಯೋಧಯತ್ ॥೧೫॥

ಆಗ ದೇವರ್ಷಿಗಂಧರ್ವರು ಭೀಷ್ಮರು ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿ ದುಷ್ಕರವಾದ ಕಾರ್ಯವನ್ನು ಮಾಡುತ್ತಿದ್ದಾರೆ ಎಂದು ಸಾಧು ಸಾಧು ಎಂದು ಅವರನ್ನು ಪೂಜಿಸಿದರು.

ಬಲವಾನರ್ಜುನೋ ದಕ್ಷಃ ಕ್ಷಿಪ್ರಕಾರೀ ಚ ಪಾಂಡವಃ ॥೧೬॥
ಕೋಽನ್ಯಃ ಸಮರ್ಥಃ ಪಾರ್ಥಸ್ಯ ವೇಗಂ ಧಾರಯಿತುಂ ರಣೇ ॥೧೭॥
ಋತೇ ಶಾಂತನವಾದ್ ಭೀಷ್ಮಾತ್ ಕೃಷ್ಣಾದ್ವಾ ದೇವಕೀಸುತಾತ್ ।
ಆಚಾರ್ಯವರಮುಖ್ಯಾದ್ವಾ ಭಾರದ್ವಾಜಾನ್ಮಹಾಬಲಾತ್ ॥೧೮॥

ಪಾಂಡುಪುತ್ರನಾದ ಅರ್ಜುನನು ಬಲಿಷ್ಠನಾದವನೂ, ದಕ್ಷನಾದವನೂ ಮತ್ತು ಕ್ಷಿಪ್ರಕಾರಿಯಾದವನು. ಶಂತನು ಪುತ್ರರಾದ ಭೀಷ್ಮರನ್ನು ಬಿಟ್ಟು, ದೇವಕಿಪುತ್ರನಾದ ಕೃಷ್ಣನನ್ನು ಬಿಟ್ಟು, ಮಹಾಬಲಿಷ್ಠರಾದ ಆಚಾರ್ಯಶ್ರೇಷ್ಠರಾದ ದ್ರೋಣರನ್ನು ಬಿಟ್ಟು ಯುದ್ಧದಲ್ಲಿ ಅರ್ಜುನನ ಬಾಣಗಳ ವೇಗವನ್ನು ತಡೆಯಲು ಬೇರೆ ಯಾರು ಸಮರ್ಥರಾಗುತ್ತಾರೆ? (ಎಂದು ಪೂಜಿಸಿದರು).

ಅಸ್ತ್ರೈರಸ್ತ್ರಾಣಿ ಸಂವಿಧ್ಯ ಕ್ರೀಡಂತೌ ಪುರುಷೋತ್ತಮೌ ।
ಚಕ್ಷೂಂಷಿ ಸರ್ವಭೂತಾನಾಂ ಮೋಹಯಂತೌ ಮಹಾಬಲೌ ॥೧೯॥

ಮಹಾಬಲರೂ, ಪುರುಷೋತ್ತಮರೂ ಆದ ಅವರಿಬ್ಬರೂ ಅಸ್ತ್ರಗಳಿಂದ ಅಸ್ತ್ರಗಳನ್ನು ಹೊಡೆದು ಕ್ರೀಡಿಸುತ್ತಾ ಎಲ್ಲಾ ಪ್ರಾಣಿಗಳ ಕಣ್ಣುಗಳಿಗೆ ಮೋಹವನ್ನು ಉಂಟು ಮಾಡಿದರು.

ಪ್ರಾಜಾಪತ್ಯಂ ತಥೈವೈಂದ್ರಮಾಗ್ನೇಯಂ ಚ ಸುದಾರುಣಮ್ ।
ಕೌಬೇರಂ ವಾರುಣಂ ಚೈವ ಯಾಮ್ಯಂ ವಾಯವ್ಯಮೇವ ಚ ॥೨೦॥

ಪ್ರಯುಂಜಾನೌ ಮಹಾತ್ಮಾನೌ ಸಮರೇ ತೌ ವಿರೇಜತುಃ ॥೨೧॥

ಪ್ರಾಜಾಪತ್ಯ, ಐಂದ್ರ, ಘೋರವಾದ ಆಗ್ನೇಯ, ಕೌಬೇರ, ವಾರುಣ, ಯಾಮ್ಯ, ವಾಯವ್ಯ ಮೊದಲಾದ ಅಸ್ತ್ರಗಳನ್ನು ಪ್ರಯೋಗಿಸುತ್ತಾ ಆ ಮಹಾತ್ಮರಿಬ್ಬರೂ ಯುದ್ಧದಲ್ಲಿ ಬಹಳವಾಗಿ ಶೋಭಿಸಿದರು.

ವಿಸ್ಮಿತಾನ್ಯಥ ಭೂತಾನಿ ತೌ ದೃಷ್ಟ್ವಾ ಸಂಯುಗೇ ತಥಾ ।
ಸಾಧು ಪಾರ್ಥ ಮಹಾಬಾಹೋ ಸಾಧು ಭೀಷ್ಮೇತಿ ಚಾಬ್ರುವನ್ ॥೨೨॥

ನೈತದನ್ಯೋ ಮನುಷ್ಯೇಷು ಪ್ರದರ್ಶಯಿತುಮಾಹವೇ ।
ಮಹಾಸ್ತ್ರಾಣಾಂ ಸಂಪ್ರಯೋಗಂ ಸಮರೇ ಭೀಷ್ಮಪಾರ್ಥಯೋಃ ॥೨೩॥

ಅವರಿಬ್ಬರೂ ಯುದ್ಧದಲ್ಲಿ ತೊಡಗಿದುದನ್ನು ನೋಡಿ ಎಲ್ಲಾ ಸೈನ್ಯಕರು ಮತ್ತು ಪ್ರಾಣಿಗಳು ವಿಸ್ಮಯಗೊಂಡರು. ಮಹಾಬಾಹುವಾದ ಪಾರ್ಥನೇ ಸಾಧು, ಮಹಾಬಾಹುವಾದ ಭೀಷ್ಮರೇ ಸಾಧು. ಯುದ್ಧದಲ್ಲಿ ಭೀಷ್ಮಾರ್ಜುನರ ಮಹಾಸ್ತ್ರಗಳ

ಸಂಪ್ರಯೋಗವನ್ನು ತೋರಿಸುವವನು ಮನುಷ್ಯರಲ್ಲಿ ಬೇರೆ ಯಾವನೂ ಇಲ್ಲ ಎಂದು ಮಾತನಾಡಿದರು.

ಏವಂ ಸರ್ವಾಸ್ತ್ರವಿದುಷೋರಸ್ತ್ರಯುದ್ಧಮವರ್ತತ ॥೨೪॥

ಅಥ ಜಿಷ್ಣುರುದಾಹೃತ್ಯ ಶಿತಧಾರೇಣ ಕಾರ್ಮುಕಮ್ ।
ನ್ಯಕೃಂತದ್ ಗೃಧ್ರಪತ್ರೇಣ ಜಾತರೂಪಪರಿಷ್ಕೃತಮ್ ॥೨೫॥

ಹೀಗೆ ಸರ್ವಾಸ್ತ್ರದೀಪ್ತರಾದ ಅವರಿಬ್ಬರಿಗೆ ಅಸ್ತ್ರಯುದ್ಧವು ನಡೆಯಿತು. ಆಗ ಅರ್ಜುನನು ತನ್ನ ಬತ್ತಳಿಕೆಯಿಂದ ಹರಿತವಾದ ಅಲಗುಳ್ಳ ಒಂದು ಗೃಧ್ರಪತ್ರದಿಂದ ಕೂಡಿದ ಬಾಣವನ್ನು ಮೇಲಕ್ಕೆತ್ತಿ ಸುವರ್ಣಾಲಂಕೃತವಾದ ಭೀಷ್ಮರ ಧನುಸ್ಸನ್ನು ಕತ್ತರಿಸಿದನು.

ನಿಮೇಷಾಂತರಮಾತ್ರೇಣ ಭೀಷ್ಮೋಽನ್ಯದ್ ಕಾರ್ಮುಕಂ ರಣೇ ।
ಸಮಾದಾಯ ನರವ್ಯಾಘ್ರಃ ಸಜ್ಯಂ ಚಕ್ರೇ ಮಹಾಬಲಃ ॥೨೬॥

ಶರಾಂಶ್ಚ ಸುಬಹೂನ್ ಕ್ರುದ್ಧೋ ಮುಮೋಚಾಶು ಧನಂಜಯೇ ॥೨೭॥

ಒಂದು ನಿಮಿಷದಲ್ಲಿ ಭೀಷ್ಮರು ಯುದ್ಧದಲ್ಲಿ ಬೇರೆ ಬಿಲ್ಲನ್ನು ತೆಗೆದುಕೊಂಡು ಮಹಾಬಲರೂ, ನರವ್ಯಾಘ್ರರೂ ಆದ ಅವರು ಹೆದೆಯನ್ನು ಬಿಗಿದರು ಮತ್ತು ಧನಂಜಯನ ಮೇಲೆ ಕ್ರುದ್ಧರಾಗಿ ಅನೇಕ ಬಾಣಗಳನ್ನು ಶೀಘ್ರವಾಗಿ ಪ್ರಯೋಗಿಸಿದರು.

ಅರ್ಜುನೋಽಪಿ ಶರಾನ್ ತೀಕ್ಷ್ಣಾನ್ ಭೀಷ್ಮಾಯ ನಿಶಿತಾನ್ ಬಹೂನ್।
ಚಿಕ್ಷೇಪ ಸುಮಹಾತೇಜಾಸ್ತಥಾ ಭೀಷ್ಮಶ್ಚ ಪಾಂಡವೇ ॥೨೮॥

ಅರ್ಜುನನೂ ಸಹ ಭೀಷ್ಮರ ಮೇಲೆ ತೀಕ್ಷ್ಣವಾದ, ಹರಿತವಾದ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಮಹಾತೇಜಸ್ವಿಗಳಾದ ಭೀಷ್ಮರೂ ಸಹ ಅರ್ಜುನನ ಮೇಲೆ ಹಾಗೆಯೇ ಬಾಣಗಳನ್ನು ಪ್ರಯೋಗಿಸಿದರು.

ತಯೋರ್ದಿವ್ಯಾಸ್ತ್ರವಿದುಷೋರಸ್ಯತೋರನಿಶಂ ಶರಾನ್ ।
ನ ವಿಶೇಷಸ್ತದಾ ರಾಜನ್ ಲಕ್ಷ್ಯತೇ ಸುಮಹಾತ್ಮನೋಃ ॥೨೯॥

ಎಲೈ ರಾಜನೇ, ಮಹಾತ್ಮರಾದ, ದಿವ್ಯಾಸ್ತ್ರಗಳನ್ನು ತಿಳಿದ ಅವರಿಬ್ಬರೂ ಹೀಗೆ ಸತತವಾಗಿ ಬಾಣಪ್ರಯೋಗವನ್ನು ಮಾಡುತ್ತಿರುವಾಗ ಅವರಿಬ್ಬರಲ್ಲಿ ಒಬ್ಬರು ಹೆಚ್ಚು ಒಬ್ಬರು ಕಡಿಮೆ ಎಂದು ಹೇಳಲು ಸಾಧ್ಯವಾಗಲಿಲ್ಲ.

ಅಥಾವೃಣೋದ್ ದಶ ದಿಶಃ ಶರೈರತಿರಥಸ್ತಥಾ ।
ಕಿರೀಟಮಾಲೀ ಕೌಂತೇಯಃ ಶೂರಂ(ರಃ) ಶಾಂತನವಂ ತದಾ ॥೩೦॥

ಅನಂತರ ಶೂರನಾದ ಕೌಂತೇಯನಾದ ಕಿರೀಟಮಾಲಿಯಾದ, ಅತಿರಥನಾದ ಅರ್ಜುನನು ಹತ್ತು ದಿಕ್ಕುಗಳನ್ನು ಬಾಣಗಳಿಂದ ಮುಚ್ಚಿ ಭೀಷ್ಮರನ್ನೂ ಸಹ ಬಾಣಗಳಿಂದ ಆಚ್ಛಾದಿಸಿದನು.

ಅತೀವ ಪಾಂಡವೋ ಭೀಷ್ಮಂ ಭೀಷ್ಮಶ್ಚಾತೀವ ಪಾಂಡವಮ್ ।
ಬಭೂವ ತತ್ರ ಸಂಖೇ(ಘೇ)ऽಸ್ಮಿನ್ ಲೋಕೇ ರಾಜಂಸ್ತದದ್ಭುತಮ್ ॥

ರಾಜನೇ, ಅರ್ಜುನನು ಭೀಷ್ಮರಿಗಿಂತ ಶ್ರೇಷ್ಠನಾಗಿರುವಂತೆಯೂ, ಭೀಷ್ಮರು ಅರ್ಜುನನಿಗಿಂತಲೂ ಶ್ರೇಷ್ಠರಾಗಿರುವಂತೆಯೂ ಆ ಯುದ್ಧದಲ್ಲಿ ತೋರುತ್ತಿದ್ದಿತು.

ಪಾಂಡವೇನ ಹತಾಃ ಶೂರಾ ಭೀಷ್ಮಸ್ಯ ರಥರಕ್ಷಿಣಃ ।
ಶೇರತೇ ಸಮರೇ ರಾಜನ್ ಕೌಂತೇಯಸ್ಯಾಹತಾಃ ಶರೈಃ ॥೩೨॥

ಎಲೈ ರಾಜನೇ, ಆ ಯುದ್ಧದಲ್ಲಿ ಅದು ಅದ್ಭುತವಾಗಿದ್ದಿತು. ಪಾಂಡುಪುತ್ರನಾದ ಕೌಂತೇಯನಾದ ಅರ್ಜುನನಿಂದ ಬಾಣಗಳಿಂದ ಹೊಡೆಯಲ್ಪಟ್ಟ ಭೀಷ್ಮರಥದ ರಕ್ಷಕರು ಯುದ್ಧದಲ್ಲಿ ಭೂಮಿಯ ಮೇಲೆ ಮಲಗಿದರು.

ತತೋ ಗಾಂಡೀವನಿರ್ಮುಕ್ತಾ ಇಷವಃ ಪನ್ನಗಾ ಇವ ।
ಅಗಚ್ಛನ್ ಪುಂಖಸಂಸಕ್ತಾಃ ಶ್ವೇತವಾಹನಪತ್ರಿಣಃ ॥೩೩॥

ಅನಂತರ ಪುಂಖವನ್ನು ಹೊಂದಿದ ಅರ್ಜುನನ ಬಾಣಗಳು ಸರ್ಪಗಳಂತೆ ಗಾಂಡೀವದಿಂದ ಹೊರಹೊಮ್ಮಿದವು.

ನಿಷ್ಪತಂತೋ ರಥಾತ್ ತಸ್ಯ ಧೌತಾ ಹೈರಣ್ಯವಾಸಸಃ ।
ಆಕಾಶೇ ಪ್ರತ್ಯದೃಶ್ಯಂತ ಹಂಸಾನಾಮಿವ ಪಂಕ್ತಯಃ ॥೩೪॥

ಅವನ ರಥದಿಂದ ಹೊರಹೊಮ್ಮಿದ, ಸಾಣೆಯನ್ನು ಹಿಡಿದ ಶುಭ್ರವಾದ, ಸುವರ್ಣಮಯವಾದ ಅಲಂಕಾರವನ್ನು ಹೊಂದಿದ್ದ ಆ ಬಾಣಗಳು ಆಕಾಶದಲ್ಲಿ ಹಂಸಗಳ ಪಂಕ್ತಿಯಂತೆ ಕಂಡುಬಂದವು.

ತಸ್ಯ ತದ್ ದಿವ್ಯಮಸ್ತ್ರಂ ಹಿ ಪ್ರಗಾಢಂ ಚಿತ್ರಮಸ್ಯತಃ ।
ಪ್ರೇಕ್ಷಂತೇ ಸ್ಮಾಂತರಿಕ್ಷಸ್ಥಾಃ ಸರ್ವೇ ದೇವಾಃ ಸವಾಸವಾಃ ॥೩೫॥

ಅರ್ಜುನನು ದಿವ್ಯವಾದ, ವಿಚಿತ್ರವಾದ ತನ್ನ ಅಸ್ತ್ರಗಳನ್ನು ಗಾಢವಾಗಿ ಪ್ರಯೋಗಿಸುತ್ತಿರಲು ಅಂತರಿಕ್ಷದಲ್ಲಿನಿಂತು ಇಂದ್ರನೇ ಮೊದಲಾದ ಎಲ್ಲ ದೇವತೆಗಳು ಅದನ್ನು ನೋಡಿದರು.

ತಂ ದೃಷ್ಟ್ವಾ ಪರಮಪ್ರೀತೋ ಗಂಧರ್ವಶ್ಚಿತ್ರಮದ್ಭುತಮ್ ।
ಶಶಂಸ ದೇವರಾಜಾಯ ಚಿತ್ರಸೇನಃ ಪ್ರತಾಪವಾನ್ ॥೩೬॥

ಆ ಅದ್ಭುತವನ್ನೂ, ವಿಚಿತ್ರವನ್ನೂ ನೋಡಿದ ಗಂಧರ್ವರಾಜನಾದ ಪ್ರತಾಪಶಾಲಿಯಾದ ಚಿತ್ರಸೇನನು ದೇವರಾಜನಾದ ಇಂದ್ರನಿಗೆ ಪ್ರಶಂಸಾ ಪೂರ್ವಕವಾಗಿ ಹೀಗೆ ಹೇಳಿದನು.

ಪಶ್ಯೇಮಾನ್ ಅರಿನಿರ್ದಾರಾನ್ ಸಂಸಕ್ತಾನೀವ ಗಚ್ಛತಃ ।
ಚಿತ್ರರೂಪಮಿದಂ ಜಿಷ್ಣೋರ್ದಿವ್ಯಮಸ್ತ್ರಮುದೀರ್ಯತಃ ॥೩೭॥

ಒಂದಕ್ಕೊಂದು ಸೇರಿಕೊಂಡಂತೆ ಹೋಗುತ್ತಾ ಶತ್ರುಗಳನ್ನು ಭೇದಿಸುವ ಈ ಬಾಣಗಳನ್ನು ನೋಡು. ದಿವ್ಯಾಸ್ತ್ರವನ್ನು ಪ್ರಯೋಗಿಸುವ ಅರ್ಜುನನ ಈ ಚಿತ್ರರೂಪವನ್ನು ನೋಡು.

ನೇದಂ ಮನುಷ್ಯಾಃ ಶ್ರದ್ದಧುರ್ನ ಹೀದಂ ತೇಷು ವಿದ್ಯತೇ ।
ಪೌರಾಣಾನಾಂ ಮಹಾಸ್ತ್ರಾಣಾಂ ವಿಚಿತ್ರೋಽಯಂ ಸಮಾಗಮಃ ॥೩೮॥

ಇದನ್ನು ಮನುಷ್ಯರು ನಂಬಲಾರರು. ಏಕೆಂದರೆ ಈ ವಿದ್ಯೆಯು ಅವರಲ್ಲಿ ಇಲ್ಲ. ಪ್ರಾಚೀನವಾದ ಮಹಾಸ್ತ್ರಗಳ ವಿಚಿತ್ರವಾದ ಸಮಾಗಮವು ಇದಾಗಿದೆ.

ಮಧ್ಯಂದಿನಗತಂ ಸೂರ್ಯಂ ಪ್ರತಪಂತಮಿವಾಂಬರೇ ।
ನ ಶಕ್ನುವಂತಿ ಸೈನ್ಯಾನಿ ಪಾಂಡವಂ ಪ್ರತಿವೀಕ್ಷಿತುಮ್ ॥೩೯॥

ಮಧ್ಯಂದಿನ ಕಾಲದಲ್ಲಿ ಆಕಾಶದಲ್ಲಿ ಜ್ವಲಿಸುವ ಸೂರ್ಯನನ್ನು ನೋಡಲು ಹೇಗೆ ಸಾಧ್ಯವಿಲ್ಲವೋ ಹಾಗೆ ಪಾಂಡವನನ್ನು ನೋಡಲು ಸೈನ್ಯಗಳಿಗೆ ಸಾಧ್ಯವಿಲ್ಲ.

ಉಭೌ ವಿಶ್ರುತಕರ್ಮಾಣಾವುಭೌ ವೀರೌ ಮಹೀಕ್ಷಿತಾಮ್ ।
ಉಭೌ ಸದೃಶಕರ್ಮಾಣಾವುಭೌ ಯುಧಿ ದುರಾಸದೌ ॥೪೦॥

ಇಬ್ಬರೂ ಪ್ರಖ್ಯಾತವಾದ ಕರ್ಮವುಳ್ಳವರು. ಇಬ್ಬರೂ ಭೂಮಿಯಲ್ಲಿ ವಾಸಿಸುವವರಲ್ಲಿ ವೀರರು. ಇಬ್ಬರೂ ಸದೃಶವಾದ ಕರ್ಮವನ್ನು ಮಾಡುವವರು ಮತ್ತು ಇಬ್ಬರೂ ಸಮೀಪ ಹೋಗಲು ಸಾಧ್ಯವಿಲ್ಲದವರು (ಎಂದು ಹೇಳಿದನು).

ವೈಶಂಪಾಯನಃ

ಇತ್ಯುಕ್ತೋ ದೇವರಾಜಸ್ತು ಪಾರ್ಥಭೀಷ್ಮಸಮಾಗಮಮ್ ।
ಪೂಜಯಾಮಾಸ ದಿವ್ಯೇನ ಪುಷ್ಪವರ್ಷೇಣ ಭಾರತ ॥೪೧॥

ವೈಶಂಪಾಯನ– ಭಾರತನೇ, ಹೀಗೆ ಹೇಳಲ್ಪಟ್ಟ ದೇವರಾಜನಾದ ಇಂದ್ರನು ಪಾರ್ಥ ಮತ್ತು ಭೀಷ್ಮರ ಸಮಾಗಮವನ್ನು ದಿವ್ಯವಾದ ಪುಷ್ಪವರ್ಷದಿಂದ ಪೂಜಿಸಿದನು.

ತತೋ ಭೀಷ್ಮಃ ಶಾಂತನವೋ ವಾಮಪಾರ್ಶ್ವೇ ಸಮರ್ಪಯತ್ ।
ಅಸ್ಯತಃ ಪ್ರತಿಸಂಧಾಯ ವಿವೃತಂ ಸವ್ಯಸಾಚಿನಃ ॥೪೨॥

ಅನಂತರ ಭೀಷ್ಮರು ಯುದ್ಧಮಾಡುತ್ತಿದ್ದ ಅರ್ಜುನನ ಒಂದು ಅವಕಾಶವನ್ನು ಗಮನಿಸಿ ಅವನ ವಾಮಪಾರ್ಶ್ವಕ್ಕೆ ಬಾಣದಿಂದ ಹೊಡೆದರು.

ತತಃ ಪ್ರಸಹ್ಯ ಬೀಭತ್ಸುಃ ಪೃಥುಧಾರೇಣ ಕಾರ್ಮುಕಮ್ ।
ನ್ಯಕೃಂತದ್ ಗೃಧ್ರಪತ್ರೇಣ ಭೀಷ್ಮಸ್ಯಾಮಿತತೇಜಸಃ ॥೪೩॥

ಆಗ ಅರ್ಜುನನು ಅದನ್ನು ತಡೆದುಕೊಂಡು ತನ್ನ ಬಿಲ್ಲನ್ನು ಹಿಡಿದು ಅಗಲವಾದ ಅಲುಗುಳ್ಳ ಗೃಧ್ರಪತ್ರದಿಂದ ಅಮಿತಪರಾಕ್ರಮಿಯಾದ ಭೀಷ್ಮರ ಧನುಸ್ಸನ್ನು ಕತ್ತರಿಸಿದನು.

ಅಥೈನಂ ದಶಭಿಃ ಪಶ್ಚಾತ್ ಪ್ರತ್ಯವಿಧ್ಯತ್ ಸ್ತನಾಂತರೇ ।
ಯತಮಾನಂ ಪರಾಕ್ರಾಂತಂ ಕುಂತೀಪುತ್ರೋ ಧನಂಜಯಃ ॥೪೪॥

ಅನಂತರ ಪುನಃ ಪ್ರಯತ್ನವನ್ನು ಪಟ್ಟುಪರಾಕ್ರಮವನ್ನು ತೋರಿಸಲು ಹವಣಿಸುತ್ತಿದ್ದ ಭೀಷ್ಮರಿಗೆ ಕುಂತೀಪುತ್ರನಾದ ಧನಂಜಯನು ಸ್ತನಗಳ ಮಧ್ಯದಲ್ಲಿ ಹತ್ತು ಬಾಣಗಳಿಂದ ಹೊಡೆದನು.

ಆಪೀಡಿತೋ ಮಹಾಬಾಹುರ್ಗೃಹೀತ್ವಾ ರಥಕೂಬರಮ್ ।
ಗಾಂಗೇಯೋ ಯುಧಿ ದುರ್ಧರ್ಷಸ್ತಸ್ಥೌ ದೀರ್ಘಮಿವಾತುರಃ ॥೪೫॥

ಪಾರ್ಥನ ಬಾಣಗಳಿಂದ ಚೆನ್ನಾಗಿ ಪೀಡಿತರಾದ ಮಹಾಬಾಹುಗಳೂ, ದುರ್ಧರ್ಷರೂ ಆದ ಭೀಷ್ಮರು ಬಹಳ ನೋವಿನಿಂದ ಹೆಚ್ಚು ಕಾಲದವರೆಗೆ ರಥದ ಕೂಬರವನ್ನು ಹಿಡಿದು ನಿಂತರು.

ತಂ ವಿಸಂಜ್ಞಮಪೋವಾಹ ಸಂಯಂತಾ ರಥವಾಜಿನಾಮ್ ।
ಉಪದೇಶಮನುಸ್ಮೃತ್ಯ ರಕ್ಷಮಾಣೋ ಮಹಾರಥಮ್ ॥೪೬॥

ಅವರು ಹೀಗೆ ಮೂರ್ಛೆ ಹೊಂದುತ್ತಿರಲು ಅವರ ರಥದ ಕುದುರೆಗಳ ಸಾರಥಿಯು ತನ್ನ ಉಪದೇಶವನ್ನು ಸ್ಮರಿಸಿ ಅದಕ್ಕೆ ಅನುಗುಣವಾಗಿ ಮಹಾರಥರಾದ ಅವರನ್ನು ರಕ್ಷಿಸುತ್ತಾ ಯುದ್ಧಭೂಮಿಯಿಂದ ಹೊರಗೆ ಕರೆದುಕೊಂಡು ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ದ್ವಿಷಷ್ಠಿತಮೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಪಂಚತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಅರವತ್ತಮೂರನೆಯ ಅಧ್ಯಾಯ

ಅರ್ಜುನನು ಯುದ್ಧಭೂಮಿಯಿಂದ ಅಪಯಾನ ಮಾಡುತ್ತಿದ್ದಾನೆಂದು ಕರ್ಣನ ಶಂಕೆ. ದ್ರೋಣರಿಂದ ಅದರ ಪರಿಹಾರ.

ವೈಶಂಪಾಯನಃ

ತಾಂಸ್ತಾನ್ ವಿಜಿತ್ಯ ಸಂಗ್ರಾಮೇ ಕುರೂಣಾಂ ಮಿಷತಾಂ ವನೇ ।
ತತೋ ಯುದ್ಧಮನಾಃ ಪಾರ್ಥಃ ಪ್ರಾಯಾತ್ ಪಂಚ ರಥಾನ್ ಪ್ರತಿ ॥

ವೈಶಂಪಾಯನ– ಅರ್ಜುನನು ಕುರುಗಳು ನೋಡುತ್ತಿರುವಂತೆಯೇ ಅನೇಕ ಯೋಧರನ್ನು ಗೆದ್ದು ಪುನಃ ಯುದ್ಧವನ್ನು ಮಾಡಲು ಬಯಸಿ ಅರ್ಜುನನು ಆ ಪಂಚರಥರ ಎದುರಾಗಿ ಹೋದನು.

ಆದದಾನಶ್ಚ ನಾರಾಚಾನ್ ವಿಮೃಶನ್ ಇಷುಧೀ ಅಪಿ ।
ಸಂಸ್ಪೃಶಾನಶ್ಚ ಗಾಂಡೀವಂ ಭೂಯಃ ಕರ್ಣಂ ಸಮಭ್ಯಯಾತ್ ॥೨॥

ಬಾಣಗಳನ್ನು ತೆಗೆದುಕೊಳ್ಳುತ್ತಾ, ಬತ್ತಳಿಕೆಗಳನ್ನು ಕೈಯಿಂದ ನೇವರಿಸುತ್ತಾ, ಗಾಂಡೀವವನ್ನು ಸ್ಪರ್ಶಿಸುತ್ತಾ ಪುನಃ ಕರ್ಣನನ್ನು ಸಮೀಪಿಸಿದನು.

ಅಶ್ವತ್ಥಾಮಾ

ಕರ್ಣ ಯತ್ ತತ್ ಸಭಾಮಧ್ಯೇ ಬಹ್ವಬದ್ಧಂ ಪ್ರಭಾಷಸೇ ।
ನ ಮೇ ಯುಧಿ ಸಮೋಽಸ್ತೀತಿ ತದಿದಂ ಸಮುಪಸ್ಥಿತಮ್ ॥೩॥

ಅಶ್ವತ್ಥಾಮಾ– ಕರ್ಣನೇ, ಯುದ್ಧದಲ್ಲಿ ನನ್ನ ಸಮಾನವಿಲ್ಲವೆಂದು ಸಭೆಯಲ್ಲಿ ಬಹಳ ಅಬದ್ಧವಾಗಿ ಮಾತನಾಡುತ್ತೀಯೆ. ಅದರ ಪರೀಕ್ಷೆಯು ಇದೋ ಪ್ರಾಪ್ತವಾಗಿದೆ.

ಏಷೋಽಂತಕಸಮಃ ಕ್ರುದ್ಧಃ ಸರ್ವಭೂತಾವಮರ್ದನಃ ।
ಅದೂರಾತ್ ಪ್ರತ್ಯುಪಸ್ಥಾಯ ಜೃಂಭತೇ ಕೇಸರೀ ಯಥಾ ॥೪॥

ಈ ಅರ್ಜುನನು ಮೃತ್ಯುವಿಗೆ ಸಮನಾಗಿ ಎಲ್ಲರನ್ನೂ ಮರ್ದಿಸುತ್ತಾ ಸಮೀಪದಲ್ಲಿಯೇ ಎದುರಾಗಿ ಬಂದು ಸಿಂಹದಂತೆ ಜೃಂಭಿಸುತ್ತಿದ್ದಾನೆ.

ಕರ್ಣಃ

ನಾಹಂ ಬಿಭೇಮಿ ಬೀಭತ್ಸೋಃ ಕೃಷ್ಣಾದ್ವಾ ದೇವಕೀಸುತಾತ್ ।
ಪಾಂಡವೇಭ್ಯೋಽಪಿ ಸರ್ವೇಭ್ಯಃ ಕ್ಷತ್ರಧರ್ಮಮನುವ್ರತಃ ॥೫॥

ಕರ್ಣ– ಕ್ಷತ್ರಿಯ ಧರ್ಮವನ್ನು ಅನುಸರಿಸುವ ನಾನು ಅರ್ಜುನನಿಗಾಗಲಿ, ದೇವಕೀಪುತ್ರನಾದ ಕೃಷ್ಣನಿಗಾಗಲೀ ಅಥವಾ ಒಟ್ಟಾರೆ ಎಲ್ಲಾ ಪಾಂಡವರಿಗಾಗಲೀ ಹೆದರುವುದಿಲ್ಲ.

ಸತ್ವಾಧಿಕಾನಾಂ ಪುಂಸಾಂ ತು ಧನುರ್ವೇದೋಪಜೀವಿನಾಮ್ ।
ಗರ್ಜನಾತ್ ಜಾಯತೇ ದರ್ಪಃ ಸ್ವರಶ್ಚ ನ ವಿಷೀದತಿ ॥೬॥

ಧನುರ್ವಿದ್ಯೆಯನ್ನು ಉಪಜೀವಿಸಿದ, ಧೈರ್ಯವು ಹೆಚ್ಚಾದ ಪುರುಷರಿಗೆ ಶತ್ರುಗಳ ಗರ್ಜನೆಯನ್ನು ಕೇಳಿ ದರ್ಪವುಂಟಾಗುತ್ತದೆ. ಸ್ವರವು ಉಡುಗಿಹೋಗುವುದಿಲ್ಲ.

ಪಶ್ಯತ್ವಾಚಾರ್ಯಪುತ್ರೋ ಮಾಮರ್ಜುನೇನ ರಣೇ ಸಹ ।
ಯುಧ್ಯಮಾನಂ ಸುಸಂಯತ್ತಂ ದೈವಂ ತು ದುರತಿಕ್ರಮಮ್ ॥೭॥

ಆಚಾರ್ಯಪುತ್ರನು ಅರ್ಜುನನ ಜೊತೆಯಲ್ಲಿ ಬಹಳ ಎಚ್ಚರಿಕೆಯಿಂದ ಯುದ್ಧ ಮಾಡುವ ನನ್ನನ್ನು ನೋಡುವವನಾಗಲಿ. ಆದರೆ ದೈವವನ್ನು ಯಾರೂ ಮೀರಲಾರರು.

ವೈಶಂಪಾಯನಃ

ತಂ ಸಮಂತಾದ್ ರಥಾಃ ಪಂಚ ಪರಿವಾರ್ಯ ಧನಂಜಯಮ್ ।
ತ ಇಷೂನ್ ಸಮ್ಯಗಸ್ಯಂತೋ ಮುಮುಕ್ಷಂತೋಽಪಿ ಜೀವಿತಮ್ ॥೮॥

ವೈಶಂಪಾಯನ– ಅರ್ಜುನನ ಸುತ್ತಲೂ ಪಂಚರಥಿಕರು ಸುತ್ತುವರಿದು ತಮ್ಮ ಜೀವನದ ಮೇಲೆ ಆಸೆಯನ್ನು ತೊರೆದು ಬಾಣಗಳನ್ನು ಪ್ರಯೋಗಿಸಿದರು.

ತೇ ಲಾಭಮಿವ ಮನ್ವಾನಾಃ ಕ್ಷಿಪ್ರಮಾರ್ಚ್ಛನ್ ಧನಂಜಯಮ್ ।
ಶರೌಘಾನ್ ಸಮ್ಯಗಸ್ಯಂತೋ ಜೀಮೂತಾ ಇವ ವಾರ್ಷಿಕಾಃ ॥೯॥

ಅರ್ಜುನನ ದರ್ಶನವು ತಮಗೆ ಲಾಭವೆಂದು ತಿಳಿದ ಅವರು ಮಳೆಗಾಲದ ಮೋಡಗಳಂತೆ ಬಾಣಗಳ ಸಮೂಹವನ್ನು ಅರ್ಜುನನ ಮೇಲೆ ಶೀಘ್ರವಾಗಿ ಚೆನ್ನಾಗಿ ಪ್ರಯೋಗಿಸಿದರು.

ಬಹುಭಿರ್ನಿಶಿತೈರ್ಬಾಣೈಃ ವಿವಿಧೈರ್ಲೋಮವಾಪಿಭಿಃ ।
ದುರ್ದ್ರುವಾಃ ಪ್ರತ್ಯವಸ್ಥಾಯ ಪ್ರತ್ಯವಿಧ್ಯನ್ ಧನಂಜಯಮ್ ॥೧೦॥

ರಣರಂಗದಿಂದ ಓಡಿಹೋಗದ ಅವರು ಲೋಮವನ್ನೂ ಕತ್ತರಿಸುವ ವಿಚಿತ್ರವಾದ ಮತ್ತು ಹರಿತವಾದ ಬಾಣಗಳಿಂದ ಅರ್ಜುನನ ಎದುರಾಗಿ ಬಂದು ಅವನನ್ನು ಹೊಡೆದರು.

ತತಃ ಪ್ರಹಸ್ಯ ಬೀಭತ್ಸುಃ ಸರ್ವಶಸ್ತ್ರಭೃತಾಂ ವರಃ ।
ದಿವ್ಯಮಸ್ತ್ರಂ ವಿಕುರ್ವಾಣಃ ಪ್ರತ್ಯಯಾದ್ ರಥಸತ್ತಮಾನ್ ॥೧೧॥

ಆಗ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನು ನಕ್ಕು ದಿವ್ಯಾಸ್ತ್ರವನ್ನು ಪ್ರಯೋಗಿಸುವವನಾಗಿ ಆ ರಥಶ್ರೇಷ್ಠರ ಹತ್ತಿರ ಬಂದನು.

ಯಥಾ ರಶ್ಮಿಭಿರಾದಿತ್ಯಃ ಪ್ರಚ್ಛಾದಯತಿ ಮೇದಿನೀಮ್ ।
ಏವಂ ಗಾಂಡೀವನಿರ್ಮುಕ್ತೈಃ ಶರೈಃ ಪ್ರಾಚ್ಛಾದಯದ್ ದಿಶಃ ॥೧೨॥

ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಮುಚ್ಚುವಂತೆ ಅರ್ಜುನನು ಗಾಂಡೀವದಿಂದ ಹೊರಹೊಮ್ಮಿದ ಬಾಣಗಳಿಂದ ದಿಕ್ಕುಗಳನ್ನು ಮುಚ್ಚಿದನು.

ನ ರಥಾನಾಂ ನ ಚಾಶ್ವಾನಾಂ ನ ಧ್ವಜಾನಾಂ ನ ದಂತಿನಾಮ್ ।
ಅವಿದ್ಧಂ ನಿಶಿತೈರ್ಬಾಣೈರಾಸೀದ್ ದ್ವ್ಯಂಗುಲಮಂತರಮ್ ॥೧೩॥

ರಥಗಳಲ್ಲಿ, ಅಶ್ವಗಳಲ್ಲಿ, ಧ್ವಜಗಳಲ್ಲಿ, ಗಜಗಳಲ್ಲಿ ಅರ್ಜುನನ ನಿಶಿತವಾದ ಬಾಣಗಳಿಂದ ಹೊಡೆಯಲ್ಪಡದ ಅಂತರವು ಎರಡು ಅಂಗುಲವೂ ಇರಲಿಲ್ಲ.

ಸರ್ವೇ ಶಾಂತಿಪರಾ ಯೋಧಾಃ ಸ್ವಚಿತ್ತಂ ನಾಭಿಜಜ್ಞಿರೇ ।
ಹಸ್ಯಶ್ವಾಶ್ಚಾಪಿ ವಿತ್ರಸ್ತಾ ವ್ಯವಧೀಯಂತ ಸರ್ವಶಃ ॥೧೪॥

ಎಲ್ಲ ಯೋಧರೂ ಶಾಂತಿಪರರಾಗಿ ತಮ್ಮ ಚಿತ್ತವನ್ನೇ ತಾವು ತಿಳಿಯದಾದರು. ಗಜಗಳೂ ಮತ್ತು ಅಶ್ವಗಳೂ ಸಹ ಹೆದರಿ ಎಲ್ಲ ಕಡೆಗಳಲ್ಲಿಯೂ ಅಡಗಿಕೊಂಡವು.

ಯಥಾ ನಳವನಂ ನಾಗಃ ಪ್ರಭಿನ್ನಃ ಷಷ್ಟಿಹಾಯನಃ ।
ಏವಂ ಸರ್ವಾನ್ ಅಪಾಮೃದ್ನಾದರ್ಜುನಃ ಶಸ್ತ್ರತೇಜಸಾ ॥೧೫॥

ಅರವತ್ತು ವರ್ಷದ ಗಜವು ಮದಿಸಿ ನಳವನವನ್ನು ಪ್ರಕ್ಷುಬ್ಧಗೊಳಿಸಿದಂತೆ ಅರ್ಜುನನು ತನ್ನ ಶಸ್ತ್ರತೇಜಸ್ಸಿನಿಂದ ಎಲ್ಲರನ್ನೂ ಕ್ಷೋಭೆಗೊಳಿಸಿದನು.

ಗಾಂಡೀವಸ್ಯ ಚ ಘೋಷೇಣ ಪೃಥಿವೀ ಸಮಕಂಪತ ।
ಮನಾಂಸಿ ಧಾರ್ತರಾಷ್ಟ್ರಾಣಾಮಪ್ಯಕೃಂತದ್ ಧನಂಜಯಃ ॥೧೬॥

ಗಾಂಡೀವ ಧನುಸ್ಸಿನ ಘೋಷದಿಂದ ಭೂಮಿಯು ನಡುಗಿತು. ಧನಂಜಯನು ಧೃತರಾಷ್ಟ್ರಪುತ್ರರ ಮನಸ್ಸನ್ನೂ ಸಹ ಆ ಘೋಷದಿಂದ ಕತ್ತರಿಸಿದನು.

ತತೋ ವಿಗಾಹ್ಯ ಸೈನ್ಯಾನಾಂ ಮಧ್ಯಂ ಶಸ್ತ್ರಭೃತಾಂ ವರಃ ।
ಸಾರಥಿಂ ಸಮರೇ ಶೂರಮಭ್ಯಭಾಷತ ವೀರ್ಯವಾನ್ ॥೧೭॥

ಸನ್ನಿಯಮ್ಯ ಹಯಾನೇತಾನ್ ಮಂದಂ ವಾಹಯ ಸಾರಥೇ ।
ಆಚಾರ್ಯಪುತ್ರಂ ಸಮರೇ ಯೋಧಯಿಷ್ಯಾಮಿ ಮಾನಿನಮ್ ॥೧೮॥

ಪುರಾ ಹ್ಯೇಷ ನ ಮೇ ಶಬ್ದಃ ಸಾಧೀಭವತಿ ಪೃಷ್ಠತಃ ॥೧೯॥

ಅನಂತರ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ಪರಾಕ್ರಮಶಾಲಿಯಾದ ಅರ್ಜುನನು ಶತ್ರುಸೈನ್ಯದ ಮಧ್ಯವನ್ನು ಪ್ರವೇಶಿಸಿ ಯುದ್ಧದಲ್ಲಿ ಶೂರನಾದ ತನ್ನ ಸಾರಥಿಯನ್ನು ಕುರಿತು ಎಲೈ ಸಾರಥಿಯೇ, ಈ ಅಶ್ವಗಳನ್ನು ಚೆನ್ನಾಗಿ ನಿಯಂತ್ರಿಸಿ ನಿಧಾನವಾಗಿ ನಡೆಸು. ಅಹಂಕಾರವುಳ್ಳ ಅಶ್ವತ್ಥಾಮರನ್ನು ನಾನು ಯುದ್ಧದಲ್ಲಿ ಪ್ರತಿಯಾಗಿ ಯುದ್ಧವನ್ನು ಮಾಡುವೆನು. ಯುದ್ಧಕ್ಕೆ ಮೊದಲು ಭಟರು ಆಡುವ, ನಾನು ಇಂತಹ ಕಾರ್ಯವನ್ನು ಮಾಡುತ್ತೇನೆ ಮುಂತಾದ ಶಬ್ದಗಳು ನನಗೆ ರುಚಿಸುವುದಿಲ್ಲ (ನಾನು ಕಾರ್ಯವನ್ನು ಮಾಡಿ ತೋರಿಸುತ್ತೇನೆ ಎಂದು ಅಭಿಪ್ರಾಯ) ಎಂದು ಹೇಳಿದನು.

ವೈಶಂಪಾಯನಃ

ಏವಮುಕ್ತೋಽರ್ಜುನೇನಾಸಾವಶ್ವತ್ಥಾಮರಥಂ ಪ್ರತಿ ।
ವಿರಾಟಪುತ್ರೋ ಜವನಾನ್ ಭೃಶಮಶ್ವಾನಚೋದಯತ್ ॥೨೦॥

ವೈಶಂಪಾಯನ– ಅರ್ಜುನನಿಂದ ಹೀಗೆ ಹೇಳಲ್ಪಟ್ಟ ವಿರಾಟಪುತ್ರನು ಅಶ್ವತ್ಥಾಮರ ರಥದ ಕಡೆಗೆ ತನ್ನ ಶೀಘ್ರವಾಗಿ ಹೋಗುವ ಅಶ್ವಗಳನ್ನು ಚೆನ್ನಾಗಿ ಪ್ರಚೋದಿಸಿದನು.

ಕರ್ಣಃ

ಏಷೋಽಪಯಾತಿ ಬೀಭತ್ಸುರ್ವ್ಯಥಿತೋ ಗಾಢವೇದನಃ ।
ತಂ ತು ತತ್ರೈವ ಯೋತ್ಸ್ಯಾಮಿ ನಾಯಂ ಮುಚ್ಯೇತ ಜೀವಿತಾತ್ ॥೨೧॥

ಕರ್ಣ– ಈ ಅರ್ಜುನನು ಗಾಢವಾದ ವೇದನೆಯನ್ನು ಹೊಂದಿ ವ್ಯಥೆಯಿಂದ ರಣರಂಗವನ್ನು ಬಿಟ್ಟುಹೋಗುತ್ತಿದ್ದಾನೆ. ಅವನ ಜೊತೆಯಲ್ಲಿ ಅಲ್ಲಿಯೇ ಯುದ್ಧವನ್ನು ಮಾಡುವೆನು. ಅವನು ಜೀವ ಸಹಿತನಾಗಿ ಇಲ್ಲಿಂದ ಹೋಗುವುದು ಬೇಡ.

ದ್ರೋಣಃ

ನೈಷೋಽಭಯಂ ನ ನಿರ್ಯಾತೋ ಮಹಾತ್ಮಾ ಪಾಕಶಾಸನಿಃ ।
ನೈವಂ ಭೀತೋ ನಿವರ್ತೇತ ನ ಪುನರ್ಗಾಢವೇದನಃ ॥೨೨॥

ದ್ರೋಣ– ಮಹಾತ್ಮನಾದ ಇಂದ್ರಪುತ್ರನಾದ ಅರ್ಜುನನು ನಿನಗೆ ಅಭಯವುಂಟಾಗುವಂತೆ ಏನೂ ಹೋಗುತ್ತಿಲ್ಲ. ಭೀತನಾದವನು ಹೀಗೆ ಹೋಗುವುದಿಲ್ಲ ಮತ್ತು ಗಾಢವಾದ ನೋವನ್ನು ಹೊಂದಿದವನೂ ಸಹ ಹೋಗುವುದಿಲ್ಲ.

ಯದ್ಯೇನಮಭಿಸಂಕ್ರುದ್ಧಂ ಪುನರೇವಾಭಿಯಾಸ್ಯತಿ ।
ಬಹೂನ್ಯಸ್ತ್ರಾಣಿ ಜಾನೀತೇ ನ ಪುನರ್ಮೋಕ್ಷ್ಯತೇ ಭವಾನ್ ॥೨೩॥

ಕೋಪಗೊಂಡ ಅವನ ಜೊತೆಯಲ್ಲಿ ನೀನು ಪುನಃ ಯುದ್ಧವನ್ನು ಮಾಡುವಿ. ನೀನು ಅನೇಕ ಅಸ್ತ್ರಗಳನ್ನು ತಿಳಿದಿದ್ದೀಯೆ. ಆದರೆ ಅವನಿಂದ ಬಿಡುಗಡೆಯನ್ನು ಹೊಂದುವುದಿಲ್ಲ.

ದಿಷ್ಟ್ಯಾ ದುರ್ಯೋಧನೋ ಮುಕ್ತೋ ಗಾವಃ ಸರ್ವಾಃ ಪಲಾಯಿತಾಃ ।
ಮುಕ್ತಂ ಮುಕ್ತೈರ್ವ ಸಂಗ್ರಾಮೇ ಕಿಂ ರಣೇನ ಕರಿಷ್ಯತಿ ॥೨೪॥

ದೇವರ ದಯೆಯಿಂದ ದುರ್ಯೋಧನನು ಬಿಡಿಸಲ್ಪಟ್ಟಿದ್ದಾನೆ. ಯುದ್ಧದಲ್ಲಿ ಬಿಡುಗಡೆ ಹೊಂದಿದ ದುರ್ಯೋಧನನನ್ನು ಬಿಟ್ಟು ಎಲ್ಲಾ ಗೋವುಗಳೂ ಓಡಿಹೋಗಿವೆ. ಯುದ್ಧದಿಂದ ನೀನು ಏನು ಮಾಡುವಿ?

ಕ್ರೋಶಮಾತ್ರಮತಿಕ್ರಮ್ಯ ಬಲಮನ್ವಾನಯಾಮಹೇ ।
ಅನ್ವಾಗತಬಲಾಃ ಪಾರ್ಥಂ ಪುನರೇವಾಭಿಯಾಸ್ಯಥ ॥೨೫॥

ಒಂದು ಕ್ರೋಶ ಮಾತ್ರ ದೂರಕ್ಕೆ ಹೋಗಿ ನಮ್ಮ ಸೈನ್ಯವನ್ನು ಪುನಃ ಹಿಂದಿರುಗಿಸೋಣ. ಹಿಂದಿರುಗಿದ ಸೈನ್ಯದ ಜೊತೆಯಲ್ಲಿ ಅರ್ಜುನನನ್ನು ನೀವೆಲ್ಲರೂ ಎದುರಿಸುವವರಾಗಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ತ್ರಿಷಷ್ಟಿತಮೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಷಟ್‌ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಅರವತ್ತನಾಲ್ಕನೆಯ ಅಧ್ಯಾಯ

ಭೀಷ್ಮ ದುಃಶಾಸನರ ಜೊತೆಯಲ್ಲಿ ಅರ್ಜುನನ ಯುದ್ಧ

ವೈಶಂಪಾಯನಃ

ಕರ್ಣಂ ಪರಾಜಿತಂ ದೃಷ್ಟ್ವಾ ಪಾರ್ಥೋ ವೈರಾಟಿಮಬ್ರವೀತ್ ॥೧॥

ಏತಂ ಮಾಂ ಪ್ರಾಪಯೇದಾನೀಂ ರಥವೃಂದಂ ಪ್ರಹಾರಿಣಾಮ್ ॥೨॥

ಯತ್ರ ಶಾಂತನವೋ ಭೀಷ್ಮಃ ಸರ್ವೇಷಾಂ ನಃ ಪಿತಾಮಹಃ ।
ಸುಯುದ್ಧಂ ಕಾಂಕ್ಷಮಾಣೋ ವೈ ರಥೇ ತಿಷ್ಠತಿ ದಂಸಿತಃ ॥೩॥

ವೈಶಂಪಾಯನ– ಕರ್ಣನು ಪರಾಜಿತನಾದುದನ್ನು ನೋಡಿ ಅರ್ಜುನನು ಉತ್ತರನನ್ನು ಕುರಿತು ಈ ನನ್ನನ್ನು, ಎಲ್ಲಿ ನಮ್ಮೆಲ್ಲರಿಗೂ ಪಿತಾಮಹರಾದ ಶಂತನು ಪುತ್ರರಾದ ಭೀಷ್ಮರು ಒಳ್ಳೆಯ ಯುದ್ಧವನ್ನು ಅಪೇಕ್ಷಿಸುತ್ತಾ ರಥದಲ್ಲಿ ಸಜ್ಜಿತರಾಗಿ ಕುಳಿತಿದ್ದಾರೆಯೋ ಅಂತಹ ಅವನ ಸುತ್ತಲೂ ಇರುವ ಪ್ರಹಾರಿಗಳಾದ ರಥದ ಸಮೂಹಕ್ಕೆ ಕರೆದುಕೊಂಡು ಹೋಗು.

ತಾಳೋ ವೈ ಕಾಂಚನೋ ಯತ್ರ ವಜ್ರವೈಡೂರ್ಯಭೂಷಿತಃ ।
ಅತೀವ ಸಮರೇ ಭಾತಿ ಮಾತರಿಶ್ವಪ್ರಕಂಪಿತಃ ॥೪॥

ವಜ್ರವೈಡೂರ್ಯಭೂಷಿತವಾದ ಸುವರ್ಣಮಯವಾದ ವಾಯುವಿನಿಂದ ಕಂಪಿತವಾದ ಭೀಷ್ಮರ ತಾಳಧ್ವಜವು ಯುದ್ಧದಲ್ಲಿ ಬಹಳವಾಗಿ ಕಂಗೊಳಿಸುತ್ತಿದೆ.

ದಾರುಣಂ ಪ್ರಹರಿಷ್ಯಾಮಿ ರಥವೃಂದಾನಿ ಧನ್ವಿನಾಮ್ ।
ಆದಾಸ್ಯಾಮ್ಯಹಮೇತೇಷಾಂ ಧನುಜ್ಯಾವೇಷ್ಟನಾನಿ ಚ ॥೫॥

ಅಸ್ಯಂತಂ ದಿವ್ಯಮಸ್ತ್ರಾಣಿ ಚಿತ್ರಮುತ್ತರ ಪಶ್ಯಸಿ ॥೬॥

ಧನುರ್ಧಾರಿಗಳ ರಥವೃಂದದ ಮೇಲೆ ದಾರುಣವಾಗಿ ಪ್ರಹಾರವನ್ನು ಮಾಡುವೆನು. ಅವರ ಧನುಸ್ಸುಗಳನ್ನೂ ಮತ್ತು ಜ್ಯಾ ಬಂಧಗಳನ್ನೂ ತೆಗೆದುಕೊಳ್ಳುವೆನು (ಕತ್ತರಿಸುವೆನು). ಉತ್ತರನೇ, ವಿಚಿತ್ರವಾದ ದಿವ್ಯಾಸ್ತ್ರಗಳನ್ನು ನೋಡುವಿ.

ಶತಹ್ರದಾಂ ಜೃಂಭಮಾಣಾಂ ಮೇಘಸ್ಥಾಂ ಪ್ರಾವೃಷೀವ ಚ ।
ಸುವರ್ಣಪೃಷ್ಠಂ ಗಾಂಡೀವಂ ಪಶ್ಯಂತು ಕುರವೋ ಯುಧಿ ॥೭॥

ಮಳೆಗಾಲದಲ್ಲಿ ಮೇಘಗಳಲ್ಲಿ ಅಭಿವೃದ್ಧಿಹೊಂದುತ್ತಿರುವ, ಮಿಂಚಿನಂತೆ ಸುವರ್ಣದ ಹಿಡಿಯಿರುವ ನನ್ನ ಗಾಂಡೀವ ಧನುಸ್ಸನ್ನು ಯುದ್ಧದಲ್ಲಿ ಕುರುಗಳು ನೋಡಲಿ.

ದಕ್ಷಿಣೇನಾಥ ವಾಮೇನ ಕತರೇಣ ಸ್ವಿದಸ್ಯತಿ ।
ಇತಿ ಮಾಂ ಶತ್ರವಃ ಸರ್ವೇ ನ ವಿಜ್ಞಾಸ್ಯಂತಿ ಸಾರಥೇ ॥೮॥

ಎಲೈ ಸಾರಥಿಯೇ, ಇವನು ದಕ್ಷಿಣಹಸ್ತದಿಂದ ಪ್ರಯೋಗಿಸುತ್ತಿದ್ದಾನೆಯೋ ಅಥವಾ ವಾಮಹಸ್ತದಿಂದ ಪ್ರಯೋಗಿಸುತ್ತಿದ್ದಾನೆಯೋ ಎಂದು ನನ್ನ ಶತ್ರುಗಳು ಯಾರೂ ನನ್ನನ್ನು ತಿಳಿಯಲಾರರು.

ಅಸ್ತ್ರೋದಕಾಂ ಶರಾವರ್ತಾಂ ನಾಗನಕ್ರಾಂ ರಥಹ್ರದಾಮ್ ।
ನದೀಂ ಪ್ರಸ್ಕಂದಯಿಷ್ಯಾಮಿ ಪರಲೋಕಾಪಹಾರಿಣೀಮ್ ॥೯॥

ಅಸ್ತ್ರಗಳ ಉದಕವುಳ್ಳ, ಬಾಣಗಳ ಸುಳಿಗಳುಳ್ಳ, ಗಜಗಳ ಮೊಸಳೆಗಳುಳ್ಳ, ರಥಗಳ ಮಡುಗಳುಳ್ಳ, ಪರಲೋಕವನ್ನು ಅಪಹರಿಸುವ ನದಿಯನ್ನು ನಾನು ಹರಿಸುತ್ತೇನೆ.

ಪಾಣಿಪಾದಶಿರಃಪೃಷ್ಠಬಾಹುಸ್ಕಂಧಚರಾಚರಮ್ ।
ವನಂ ಕುರೂಣಾಂ ಭೇತ್ಸ್ಯಾಮಿ ಭಲ್ಲೈಃ ಸನ್ನತಪರ್ವಭಿಃ ॥೧೦॥

ಬಾಗಿದ ತುದಿಗಳುಳ್ಳ ಭಲ್ಲಗಳಿಂದ ನಾನು ಪಾಣಿ, ಪಾದ, ಶಿರಸ್ಸು, ಪೃಷ್ಠ, ಬಾಹುಗಳು, ಭುಜ ರೂಪವಾದ ಚರಾಚರಗಳಿರುವ ಕುರುಗಳ ವನವನ್ನು ಭೇದಿಸುವೆನು.

ತೂಣೇಶಯಾಃ ಸುಪುಂಖಾಗ್ರಾ ನಿಶಿತಾ ದುಂದುಭಿಸ್ವನಾಃ ।
ಮಯಾ ಪ್ರಯುಕ್ತಾಃ ಸಂಗ್ರಾಮೇ ಕುರೂನ್ ಧಕ್ಷ್ಯಂತಿ ಸಾಯಕಾಃ ॥

ನಾನು ಪ್ರಯೋಗಿಸುವ ಬತ್ತಳಿಕೆಯಲ್ಲಿ ಮಲಗಿರುವ ಒಳ್ಳೆಯ ಪುಂಖಗಳನ್ನು ತುದಿಯಲ್ಲಿ ಹೊಂದಿರುವ, ದುಂದುಭಿಯ ಸ್ವನಗಳಿಂದ ಹೋಗುವ ಹರಿತವಾದ ಬಾಣಗಳು ಯುದ್ಧದಲ್ಲಿ ಕುರುಗಳನ್ನು ದಹಿಸುವವು.

ಧ್ವಜವೃಕ್ಷಂ ಶರತೃಣಂ ನಾಗಾಶ್ವಶ್ವಾಪದಾಕುಲಮ್ ।
ರಥಸಿಂಹಗಣೈರ್ಯುಕ್ತಂ ಧನುರ್ವಲ್ಲೀಸಮಾಕುಲಮ್ ॥೧೨॥

ವನಮಾದೀಪಯಿಷ್ಯಾಮಿ ಕುರೂಣಾಮಸ್ತ್ರತೇಜಸಾ ॥೧೩॥

ಧ್ವಜವೃಕ್ಷಗಳು, ಶರತೃಣಗಳು, ಗಜಾಶ್ವ ಹಿಂಸಪ್ರಾಣಿಗಳಿಂದ ನಿಬಿಡವಾದ ರಥಸಿಂಹಗಣಗಳಿಂದ ಕೂಡಿದ, ಬಿಲ್ಲಿನ ಬಳ್ಳಿಗಳಿಂದ ಕೂಡಿದ ಕುರುಗಳ ವನವನ್ನು ನಾನು ಅಸ್ತ್ರತೇಜಸ್ಸಿನಿಂದ ಉರಿಯುವಂತೆ ಮಾಡುತ್ತೇನೆ.

ಜಯತೋ ಭಾರತೀಂ ಸೇನಾಮೇಕಸ್ಯ ಮಮ ಸಂಯುಗೇ ।
ಶತಂ ಮಾರ್ಗಾ ಭವಿಷ್ಯಂತಿ ಪಾವಕಸ್ಯೇವ ಕಾನನೇ ॥೧೪॥

ಕಾಡಿನಲ್ಲಿ ಉರಿಯುವ ಅಗ್ನಿಗೆ ನೂರುಮಾರ್ಗಗಳಿದ್ದಂತೆ ಕೌರವರ ಸೇನೆಯನ್ನು ಜಯಿಸುವ ಒಬ್ಬನೇ ಆದ ನನಗೆ ಯುದ್ಧದಲ್ಲಿ ನೂರು ಮಾರ್ಗಗಳು ಇರುವವು.

ಮಯಾ ಚಕ್ರಮಿವಾವಿದ್ಧಂ ಸೈನ್ಯಂ ದ್ರಕ್ಷ್ಯಸಿ ಕೇವಲಮ್ ॥೧೫॥

ತಾನಹಂ ರಥನೀಡೇಭ್ಯಃ ಪರಲೋಕಾಯ ಶಾತ್ರವಾನ್ ।
ಏಕಃ ಪ್ರದ್ರಾವಯಿಷ್ಯಾಮಿ ಚಕ್ರಪಾಣಿರಿವಾಸುರಾನ್ ॥೧೬॥

ನನ್ನಿಂದ ಮುರಿದ ಚಕ್ರದಂತಿರುವ ಕೌರವಸೈನ್ಯವನ್ನು ನೀನು ನೋಡುವಿ. ಚಕ್ರಪಾಣಿಯಾದ ಹರಿಯು ಅಸುರರನ್ನು ಪರಲೋಕಕ್ಕೆ ಕಳುಹಿಸಿದಂತೆ ನಾನೊಬ್ಬನೇ ರಥದ ಅಚ್ಚುಗಳಲ್ಲಿರುವ ಆ ಶತ್ರುಗಳನ್ನು ಪರಲೋಕಕ್ಕೆ ಓಡಿಸುವೆನು.

ಅಸಂಭ್ರಾಂತೋ ರಥೇ ತಿಷ್ಠನ್ ಸಮೇಷು ವಿಷಮೇಷು ಚ ।
ಮಾರ್ಗಮಾವೃತ್ಯ ತಿಷ್ಠಂತಮಪಿ ಭೇತ್ಸ್ಯಾಮಿ ಪರ್ವತಮ್ ॥೧೭॥

ಯಾವ ಗಾಬರಿಯೂ ಇಲ್ಲದೆ ಸಮವಾದ ಮತ್ತು ವಿಷಮವಾದ ಮಾರ್ಗಗಳಲ್ಲಿ ರಥದಲ್ಲಿ ಇರುವವನಾಗಿ ಮಾರ್ಗಕ್ಕೆ ಅಡ್ಡಲಾಗಿ ಬಂದ ಪರ್ವತವನ್ನೂ ಸಹ ಭೇದಿಸುವೆನು.

ಅಹಮಿಂದ್ರಸ್ಯ ಸಂಗ್ರಾಮೇ ದ್ವಿಷತೋ ಬಲದರ್ಪಿತಮ್ ।
ಮಾತಲಿಂ ಸಾರಥಿಂ ಕೃತ್ವಾ ನಿವಾತಕವಚಾನ್ ರಣೇ ॥೧೮॥

ಹತವಾನ್ ಸರ್ವತಃ ಸರ್ವಾನ್ ಧಾವತೋ ಯುಧ್ಯತಸ್ತದಾ ॥೧೯॥

ನಾನು ಇಂದ್ರನ ಯುದ್ಧದಲ್ಲಿ ಮಾತಲಿಯನ್ನು ಸಾರಥಿಯನ್ನಾಗಿ ಮಾಡಿಕೊಂಡು ಬಲದರ್ಪಿತರಾದ ಶತ್ರುಗಳಾದ ಎಲ್ಲಕಡೆಗಳಲ್ಲಿಯೂ ಓಡಾಡುವ ಮತ್ತು ಯುದ್ಧವನ್ನು ಮಾಡುವ ಎಲ್ಲಾ ನಿವಾತಕವಚರನ್ನೂ ಸಂಪೂರ್ಣವಾಗಿ ನಾಶಮಾಡಿದೆನು.

ನಿವಾತಕವಚಾನ್ ಹತ್ವಾ ಗಾಂಡೀವಾಸ್ತ್ರೈಃ ಸಹಸ್ರಶಃ ।
ಪರಂ ಪಾರೇ ಸಮುದ್ರಸ್ಯ ಹಿರಣ್ಯಪುರಮಾರುಜಮ್ ॥೨೦॥

ಗಾಂಡೀವಾಸ್ತ್ರಗಳಿಂದ ಸಹಸ್ರಸಂಖ್ಯೆಯಲ್ಲಿ ನಿವಾತಕವಚರನ್ನು ಸಂಹರಿಸಿ ಸಮುದ್ರದ ಆಚೆಯ ದಡದಲ್ಲಿರುವ ಹಿರಣ್ಯಪುರವನ್ನು ಘಾಸಿಗೊಳಿಸಿದೆನು.

ಹತ್ವಾ ಷಷ್ಟಿಸಹಸ್ರಾಣಿ ರಥಾನಾಮುಗ್ರಧನ್ವಿನಾಮ್ ।
ಪೌಲೋಮಾನ್ ಕಾಲಕೇಯಾಂಶ್ಚ ಸಂಗ್ರಾಮೇ ಭೃಶದಾರುಣಾನ್ ॥
ಅಸುರಾನಹನಂ ರೌದ್ರಾನ್ ರೌದ್ರೇಣಾಸ್ತ್ರೇಣ ಸಾರಥೇ ॥೨೨॥

ಉಗ್ರಧನುಸ್ಸುಳ್ಳ ರಥಿಕರಾದ, ಅತ್ಯಂತ ಘೋರರಾದ ಅರವತ್ತು ಸಾವಿರ ಪೌಲೋಮರನ್ನೂ ಮತ್ತು ಕಾಲಕೇಯರನ್ನೂ ಯುದ್ಧದಲ್ಲಿ ಸಂಹರಿಸಿ ಎಲೈ ಸಾರಥಿಯೇ, ನಾನು ಪಾಶುಪತಾಸ್ತ್ರದಿಂದ ಭಯಂಕರರಾದ ಇನ್ನೂ ಅನೇಕ ಅಸುರರನ್ನು ಕೊಂದೆನು.

ಅಹಮಿಂದ್ರಾದ್ ದೃಢಾಂ ಮುಷ್ಟಿಂ ಬ್ರಹ್ಮಣಃ ಕ್ಷಿಪ್ರಹಸ್ತತಾಮ್ ।
ಪ್ರಗಾಢನಿಪುಣಂ ಚಿತ್ರಮತಿವಿದ್ಧಂ ಪ್ರಜಾಪತೇಃ ॥೨೩॥

ನಾನು ಇಂದ್ರನಿಂದ ದೃಢಮುಷ್ಟಿಯನ್ನೂ, ಬ್ರಹ್ಮದೇವರಿಂದ ಹಸ್ತಕ್ಷಿಪ್ರತೆಯನ್ನೂ, ರುದ್ರದೇವರಿಂದ ಗಾಢವಾದ ಮತ್ತು ನಿಪುಣವಾದ ಮತ್ತು ವಿಚಿತ್ರವಾದ ವೇಗಗಳನ್ನೂ ಪಡೆದಿದ್ದೇನೆ (ಸ್ವೀಕರಿಸಿ ಕಲಿತಿದ್ದೇನೆ).

ರೌದ್ರಂ ರುದ್ರಾದಹಂ ವೇದ್ಮಿ ವಾರುಣಂ ವರುಣಾದಪಿ ।
ಸೌರ್ಯಂ ಸೂರ್ಯಾದಹಂ ವೇದ್ಮಿ ಯಾಮ್ಯಂ ದಂಡಧರಾದಪಿ ॥೨೪॥
ಆಸ್ತ್ರಮಾಗ್ನೇಯಮಗ್ನೇಶ್ಚ ವಾಯವ್ಯಂ ಮಾತರಿಶ್ವನಃ ॥೨೫॥
ವಜ್ರಾದೀನಿ ತಥಾಸ್ತ್ರಾಣಿ ಶಕ್ರಾದಹಮವಾಪ್ತವಾನ್ ॥೨೬॥
ಅನ್ಯೈರ್ದೇವೈರಹಂ ಪ್ರಾಪ್ತಃ ಕೋ ಮಾಂ ವಿಷಹತೇ ಪುಮಾನ್ ॥೨೭॥

ನಾನು ರುದ್ರದೇವರಿಂದ ಪಾಶುಪತಾಸ್ತ್ರವನ್ನೂ, ವರುಣನಿಂದ ವಾರುಣಾಸ್ತ್ರವನ್ನೂ, ಸೂರ್ಯನಿಂದ ಸೌರ್ಯಾಸ್ತ್ರವನ್ನೂ, ದಂಡಧರನಾದ ಯಮನಿಂದ

ಯಾವ್ಯಾಸ್ತ್ರವನ್ನೂ, ಅಗ್ನಿಯಿಂದ ಆಗ್ನೇಯಾಸ್ತ್ರವನ್ನೂ, ವಾಯುವಿನಿಂದ ವಾಯವ್ಯಾಸ್ತ್ರವನ್ನೂ, ಇಂದ್ರನಿಂದ ವಜ್ರ ಮೊದಲಾದ ಆಯುಧಗಳನ್ನೂ ಪಡೆದಿದ್ದೇನೆ. ಬೇರೆ ದೇವತೆಗಳಿಂದಲೂ ಅಸ್ತ್ರಗಳನ್ನು ಪಡೆದಿದ್ದೇನೆ. ನನ್ನನ್ನು ಯಾವ ಪುರುಷನು ಯುದ್ಧದಲ್ಲಿ ತಡೆಯಲು ಸಾಧ್ಯ ?

ಅದ್ಯ ಗಾಂಡೀವನಿರ್ಮುಕ್ತೈಃ ಶರೈಷ್ಫೈ ರೋಮಹರ್ಷಣೈಃ ।
ಕುರೂಣಾಂ ಪಾತಯಿಷ್ಯಾಮಿ ರಥವೃಂದಾನಿ ಧನ್ವಿನಾಮ್ ॥೨೮॥

ಈ ದಿನ ಗಾಂಡೀವದಿಂದ ಮುಕ್ತವಾದ, ರೋಮಾಂಚಕಾರಿಯಾದ ಬಾಣಗಳ ಸಮೂಹದಿಂದ ಧನುರ್ಧಾರಿಗಳಾದ ಕುರುಗಳ ರಥಸಮೂಹಗಳನ್ನು ಉರುಳಿಸುತ್ತೇನೆ.

ವೈಶಂಪಾಯನಃ

ಏವಮಾಶ್ವಾಸಿತಸ್ತೇನ ವೈರಾಟಿಃ ಸವ್ಯಸಾಚಿನಾ ।
ವ್ಯಗಾಹತ ರಥಾನೀಕಂ ಭೀಷ್ಮಂ ಭೀಷ್ಮಸ್ಯ ವಾಜಿಭಿಃ ॥೨೯॥

ಅರ್ಜುನನಿಂದ ಹೀಗೆ ಸಮಾಧಾನಪಡಿಸಲ್ಪಟ್ಟ ಉತ್ತರನು ಭೀಷ್ಮರ ಭಯಂಕರವಾದ ರಥಸಮೂಹವನ್ನು ತನ್ನ ಕುದುರೆಗಳಿಂದ (ಹೂಡಿದ ತನ್ನ ರಥದಲ್ಲಿ) ಪ್ರವೇಶಿಸಿದನು.

ರಥಸಿಂಹಮನಾಧೃಷ್ಯಂ ಜಿಗೀಷಂತಂ ಪರಾನ್ ರಣೇ ।
ಅಭ್ಯಧಾವತ್ ತದೈವೋಗ್ರೋ ಜ್ಯಾಂ ವಿಕರ್ಷನ್ ಧನಂಜಯಃ ॥೩೦॥

ಧನಂಜಯನು ರಥಶ್ರೇಷ್ಠನಾದ ತನ್ನನ್ನು ಗೆಲ್ಲಲು ಬಯಸುವ, ಸೋಲಿಸಲು ಅಸಾಧ್ಯರಾದ ಭೀಷ್ಮರ ಕಡೆಗೆ ಉಗ್ರನಾದ ಅವನು ತನ್ನ ಧನುಸ್ಸಿನ ಹೆದೆಯನ್ನು ಎಳೆಯುತ್ತಾ ಯುದ್ಧದಲ್ಲಿ ಶತ್ರುಗಳಿಗೆ ಅಭಿಮುಖವಾಗಿ ಧಾವಿಸಿದನು.

ದುಃಶಾಸನೋಽಭ್ಯಯಾತ್ ತೂರ್ಣಮರ್ಜುನಂ ಭರತರ್ಷಭ ॥೩೧॥

ಅನ್ಯೇಽಪಿ ಚಿತ್ರಾಭರಣಾ ಯುವಾನೋ ಮೃಷ್ಟಕುಂಡಲಾಃ ।
ಅಗಚ್ಛನ್ ಭೀಮಧನ್ವಾನೋ ಮೌರ್ವೀಂ ಪರ್ಯಸ್ಯ ಬಾಹುಭಿಃ ॥೩೨॥

ಎಲೈ ಭರತರ್ಷಭನೇ, ದುಃಶಾಸನನು ಶೀಘ್ರವಾಗಿ ಅರ್ಜುನನನ್ನು ಎದುರಿಸಿದನು. ವಿಚಿತ್ರಾಭರಣವನ್ನು ಧರಿಸಿದ, ಹೊಳೆಯುವ ಕುಂಡಲಗಳನ್ನು ಧರಿಸಿದ,

ಭಯಂಕರವಾದ ಧನುಸ್ಸುಳ್ಳ ಇನ್ನೂ ಅನೇಕ ಯುವಕರು ಹೆದೆಯನ್ನು ಬಾಹುಗಳಿಂದ ಸವರುತ್ತಾ ಅರ್ಜುನನನ್ನು ಎದುರಿಸಿದರು.

ದುಃಶಾಸನೋ ವಿಕರ್ಣಶ್ಚ ವೃಷಸೇನೋ ವಿವಿಂಶತಿಃ ।
ಅಭೀತಾ ಭೀಮಧನ್ವಾನಂ ಪಾಂಡವಂ ಪರ್ಯವಾರಯನ್ ॥೩೩॥

ದುಃಶಾಸನ, ವಿಕರ್ಣ, ವೃಷಸೇನ, ವಿವಿಂಶತಿ ಇವರು ಹೆದರದೆ ಭಯಂಕರ ಧನುಸ್ಸುಳ್ಳ ಅರ್ಜುನನನ್ನು ಸುತ್ತುವರಿದರು.

ತಸ್ಯ ದುಃಶಾಸನಃ ಷಷ್ಟಿಂ ವಾಮೇ ಪಾರ್ಶ್ವೇ ಸಮರ್ಪಯತ್ ।
ಅಸ್ಯತಃ ಪ್ರತಿಸಂಧಾಯ ಕುಂತೀಪುತ್ರಸ್ಯ ಧೀಮತಃ ॥೩೪॥

ತನ್ನ ಧನುಸ್ಸಿಗೆ ಬಾಣವನ್ನು ಹೂಡಿ ಪ್ರಯೋಗಿಸಲಿರುವ ಮೇಧಾವಿಯಾದ ಅರ್ಜುನನ ಎಡಪಾರ್ಶ್ವಕ್ಕೆ ದುಃಶಾಸನನು ಅರವತ್ತು ಬಾಣಗಳನ್ನು ಪ್ರಯೋಗಿಸಿದನು.

ಪುನಶ್ಚೈವ ಸ ಭಲ್ಲೇನ ವಿದ್ಧ್ವಾ ವೈರಾಟಿಮುತ್ತರಮ್ ।
ದ್ವಿತೀಯೇನಾರ್ಜುನಂ ವೀರಂ ಪ್ರತ್ಯವಿಧ್ಯತ್ ಸ್ತನಾಂತರೇ ॥೩೫॥

ಅವನು ಪುನಃ ಭಲ್ಲದಿಂದ ವಿರಾಟಪುತ್ರನಾದ ಉತ್ತರನನ್ನು ಹೊಡೆದು ಇನ್ನೊಂದು ಬಾಣದಿಂದ ವೀರನಾದ ಅರ್ಜುನನಿಗೆ ಸ್ತನಗಳ ಮಧ್ಯದಲ್ಲಿ ಹೊಡೆದನು.

ತಸ್ಯ ಜಿಷ್ಣುರುದಾವೃತ್ಯ ಕ್ಷುರಧಾರೇಣ ಕಾರ್ಮುಕಮ್ ।
ಪ್ರಾಕೃಂತದ್ ಗೃಧ್ರಪತ್ರೇಣ ಜಾತರೂಪಪರಿಷ್ಕೃತಮ್ ॥೩೬॥

ಅರ್ಜುನನು ಅವನ ಕಡೆಗೆ ತಿರುಗಿ ಗೃಧ್ರಪತ್ರದಿಂದ ಕೂಡಿದ ತನ್ನ ಕ್ಷುರ ಎಂಬ ಚಿಕ್ಕಬಾಣದ ಧಾರೆಯಿಂದ ಸುವರ್ಣದಿಂದ ಅಲಂಕೃತವಾದ ಅವನ ಧನುಸ್ಸನ್ನು ಕತ್ತರಿಸಿದನು.

ಅಥೈನಂ ಪಂಚಭಿರ್ಬಾಣೈಃ ಪ್ರತ್ಯವಿಧ್ಯತ್ ಸ್ತನಾಂತರೇ ।
ಸೋಽಪಯಾತೋ ರಥೋಪಸ್ಥಾತ್ ಪಾರ್ಥಬಾಣಾಭಿಪೀಡಿತಃ ॥೩೭॥

ಸರ್ವಾ ದಿಶಶ್ಚಾಭ್ಯಪತದ್ ಬೀಭತ್ಸುರಪರಾಜಿತಃ ॥೩೮॥

ಪುನಃ ಅರ್ಜುನನು ದುಃಶಾಸನನಿಗೆ ಐದುಬಾಣಗಳಿಂದ ಸ್ತನಗಳ ಮಧ್ಯದಲ್ಲಿ ಹೊಡೆದನು. ಪಾರ್ಥನ ಬಾಣಗಳಿಂದ ಬಹಳ ಪೀಡಿತನಾದ ದುಃಶಾಸನನು ರಥದ ಆಚ್ಚುಪೀಠದಿಂದ ಧುಮುಕಿ ಹೊರಟುಹೋದನು. ಅರ್ಜುನನು ಅಪರಾಜಿತನಾಗಿ ಎಲ್ಲ ದಿಕ್ಕುಗಳಲ್ಲಿಯೂ ಮುಂದೆ ಸಾಗಿದನು.

ತಂ ವಿಕರ್ಣಃ ಶರೈಸ್ತೀಕ್ಷ್ಣೈಃ ಗೃಧ್ರಪತ್ರೈಃ ಶಿಲೀಮುಖೈಃ ।
ವಿವ್ಯಾಧ ಪರವೀರಘ್ನಮರ್ಜುನಂ ಧೃತರಾಷ್ಟ್ರಜಃ ॥೩೯॥

ಧೃತರಾಷ್ಟ್ರಪುತ್ರನಾದ ವಿಕರ್ಣನು ಪರವೀರರನ್ನು ಸಂಹರಿಸುವ ಅರ್ಜುನನ ಮೇಲೆ ಗೃಧ್ರಪತ್ರಗಳಿಂದ ಅಲಂಕರಿಸಿದ ಶಿಲೀಮುಖಗಳನ್ನುಳ್ಳ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಯುದ್ಧ ಮಾಡಿದನು.

ತತಸ್ತಮಪಿ ಕೌಂತೇಯಃ ಶರೇಣ ನತಪರ್ವಣಾ ।
ಲಲಾಟೇऽಭ್ಯಹನದ್ ಗಾಢಂ ಸ ವಿದ್ಧಃ ಪ್ರಾದ್ರವದ್ ಭಯಾತ್ ॥೪೦॥

ಆಗ ಅರ್ಜುನನು ಅವನನ್ನೂ ಸಹ ಬಾಗಿದ ತುದಿಯುಳ್ಳ ಶರದಿಂದ ಹಣೆಯಲ್ಲಿ ಗಾಢವಾಗಿ ಹೊಡೆದನು. ಆ ಪ್ರಹಾರವನ್ನು ಹೊಂದಿದ ವಿಕರ್ಣನು ಭಯದಿಂದ ಓಡಿಹೋದನು.

ತತಃ ಪಾರ್ಥಮಭಿದ್ರುತ್ಯ ದುಃಸಹಃ ಸವಿವಿಂಶತಿಃ ।
ಅವಾಕಿರಂಚ್ಛರೈಸ್ತೀಕ್ಷ್ಣೈಃ ಪರೀಪ್ಸನ್ ಭಾರತಂ ರಣೇ ॥೪೧॥

ಅನಂತರ ದುಃಸಹ ಮತ್ತು ವಿವಿಂಶತಿಗಳು ಅರ್ಜುನನ ಕಡೆಗೆ ಓಡಿ ಬಂದು ತಮ್ಮ ಕೌರವ ಸೈನ್ಯವನ್ನು ರಕ್ಷಿಸಲು ಬಯಸಿ ಅರ್ಜುನನ ಮೇಲೆ ತೀಕ್ಷ್ಣವಾದ ಬಾಣಗಳ ಮಳೆಯನ್ನು ಕರೆದರು.

ತಾವುಭೌ ಗೃಧ್ರಪತ್ರಾಭ್ಯಾಂ ನಿಶಿತಾಭ್ಯಾಂ ಧನಂಜಯಃ ।
ವಿವ್ಯಾಧ ಯುಗಪದ್ ವ್ಯಗ್ರಃ ತಯೋರ್ವಾಹಾನಸೂದಯತ್ ॥೪೨॥

ಅರ್ಜುನನು ಅವರಿಬ್ಬರ ಜೊತೆಯಲ್ಲಿಯೂ ಒಂದೇ ಕಾಲದಲ್ಲಿ ವ್ಯಗ್ರನಾಗಿ ಹರಿತವಾದ ಬಾಣಗಳಿಂದ ಯುದ್ಧವನ್ನು ಮಾಡಿ ಅವರ ರಥದ ಅಶ್ವಗಳನ್ನು ಕೊಂದನು.

ತೌ ಹತಾಶ್ವೌ ಪ್ರವಿದ್ಧಾಂಗೌ ಧೃತರಾಷ್ಟ್ರಾತ್ಮಜಾವುಭೌ ।
ಅಭಿಪತ್ಯ ರಥೈರನ್ಯೈರಪನೀತೌ ಪದಾನುಗೈಃ ॥೪೩॥

ಅಶ್ವಗಳನ್ನು ಕಳೆದುಕೊಂಡು ದೇಹದಲ್ಲಿ ಬಹಳವಾಗಿ ಗಾಯಗೊಂಡ ಧೃತರಾಷ್ಟ್ರನ ಆ ಮಕ್ಕಳಿಬ್ಬರೂ ಬೇರೆ ಬೇರೆ ರಥವನ್ನು ಹತ್ತಿ ಅವರನ್ನು ಅನುಸರಿಸುವ ಪದಾತಿಗಳಿಂದ ಬೇರೆ ಸ್ಥಳಕ್ಕೆ ಕರೆದೊಯ್ಯಲ್ಪಟ್ಟರು.

ವ್ಯದ್ರಾವಯದಶೇಷಾಂಶ್ಚ ಧೃತರಾಷ್ಟ್ರಾತ್ಮಜಾಂಸ್ತದಾ ।
ವಿದ್ರಾವ್ಯ ಚ ರಣೇ ಪಾರ್ಥೋ ರಣಭೂಮಿಂ ವ್ಯರಾಜಯತ್ ॥೪೪॥

ಅರ್ಜುನನು ಧೃತರಾಷ್ಟ್ರನ ಎಲ್ಲ ಮಕ್ಕಳನ್ನೂ ಯುದ್ಧದಲ್ಲಿ ಓಡಿಸಿ ರಣಭೂಮಿಯಲ್ಲಿ ವಿರಾಜಿಸಿದನು.

ಕಿರೀಟಮಾಲೀ ಕೌಂತೇಯೋ ಲಬ್ಧಲಕ್ಷ್ಯಃ ಪ್ರತಾಪವಾನ್ ।
ಸರ್ವಾ ದಿಶಾಶ್ಚಾಭ್ಯಪತತ್ ಬೀಭತ್ಸುರಪರಾಜಿತಃ ॥೪೫॥

ಪಾತಯನ್ನುತ್ತಮಾಂಗಾನಿ ಬಾಹೂಂಶ್ಚ ಪರಿಘೋಪಮಾನ್ ॥೪೬॥

ಅಶೇರತ ಮಹಾವೀರಾಃ ಶತಶೋ ರುಗ್ಮಮಾಲಿನಃ ॥೪೭॥

ಕಿರೀಟಮಾಲಿಯಾದ, ಲಬ್ಧಲಕ್ಷ್ಯನಾದ, ಪ್ರತಾಪಶಾಲಿಯಾದ, ಬೀಭತ್ಸುವಾದ ಅರ್ಜುನನು ಯಾರಿಂದಲೂ ಪರಾಜಯವನ್ನು ಹೊಂದದೆ ಎಲ್ಲ ದಿಕ್ಕುಗಳಲ್ಲಿಯೂ ಹಾಯ್ದು ಕೌರವ ಸೈನಿಕರ ಒನಕೆಯಂತಿದ್ದ ಬಾಹುಗಳನ್ನೂ ಮತ್ತು ಶಿರಸ್ಸುಗಳನ್ನು ಕತ್ತರಿಸಿ ಉರುಳಿಸಿದನು. ಸುವರ್ಣಮಾಲೆಯನ್ನು ಧರಿಸಿದ್ದ ಮಹಾವೀರರು ನೂರಾರು ಸಂಖ್ಯೆಯಲ್ಲಿ ನೆಲದ ಮೇಲೆ ಮಲಗಿದರು.

ಕಮಲದಿನಕರೇಂದುಸನ್ನಿಭೈಃ
ಸಿತದಶನೈಃ ಸುಮುಖಾಕ್ಷಿನಾಸಿಕೈಃ ।
ರುಚಿರಮುಕುಟಕುಂಡಲೈರ್ಮಹೀ
ಪುರುಷಶಿರೋಭಿರುಪಾಸ್ತತಾ ಬಭೌ ॥೪೮॥

ಯುದ್ಧಭೂಮಿಯು ಕಮಲಸೂರ್ಯಚಂದ್ರ ಸದೃಶವಾದ, ಬಿಳಿಯ ದಂತಗಳಿಂದ ಕೂಡಿದ, ಒಳ್ಳೆಯ ಮುಖಾಕ್ಷಿನಾಸಿಕವನ್ನು ಹೊಂದಿದ, ಮನೋಹರವಾದ ಕಿರೀಟಕುಂಡಲಗಳನ್ನು ಧರಿಸಿದ, ಸೈನಿಕರ ಶಿರಸ್ಸುಗಳಿಂದ ಹರಡಿಹೋಯಿತು.

ಸುನಸಂ ಚಾರುದೀಪ್ತಾಕ್ಷಂ ಕ್ಲೃಪ್ತಶ್ಮಶ್ರು ಸ್ವಲಂಕೃತಮ್ ।
ಅದೃಶ್ಯತ ಶಿರಶ್ಛಿನ್ನಮನೇಕಂ ಹೇಮಕುಂಡಲಮ್ ॥೪೯॥

ಒಳ್ಳೆಯ ನಾಸಿಕವುಳ್ಳ, ಸುಂದರವಾದ ಮತ್ತು ಹೊಳೆಯುವ ಕಣ್ಣುಗಳುಳ್ಳ, ಮೀಸೆಗಳನ್ನು ತಿದ್ದಿದ, ಅಲಂಕೃತವಾದ ಹೇಮಕುಂಡಲಗಳನ್ನು ಧರಿಸಿದ, ಅನೇಕ ಶಿರಸ್ಸುಗಳು ಕಂಡುಬಂದವು.

ಏವಂ ತತ್ ಪ್ರಹತಂ ಸೈನ್ಯಂ ಸಮಂತಾತ್ ಪ್ರದ್ರುತಂ ಭಯಾತ್॥೫೦॥

ಹೀಗೆ ಪಾರ್ಥನಿಂದ ಹೊಡೆಯಲ್ಪಟ್ಟ ಆ ಸೈನ್ಯವು ಎಲ್ಲ ಕಡೆಗಳಲ್ಲಿಯೂ ಭಯದಿಂದ ಓಡಿಹೋಯಿತು.

ಕ್ಷಿಪತೋ ಲಘು ಚಿತ್ರಂ ಚ ಸವ್ಯಂ ದಕ್ಷಿಣಮಸ್ಯತಃ ।
ಪಾರ್ಥಸ್ಯ ವಿಶಿಖಾ ಜಗ್ಮುಃ ಶತಶೋಽಥ ಸಹಸ್ರಶಃ ॥೫೧॥

ಕ್ಷಿಪ್ರವಾಗಿ ಮತ್ತು ವೇಗದಿಂದ ಬಲಗೈಯಿಂದ ಮತ್ತು ಎಡಗೈಯಿಂದ ಪ್ರಯೋಗಿಸಲ್ಪಟ್ಟ ಅರ್ಜುನನ ಬಾಣಗಳು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಹೊರಹೊಮ್ಮಿದವು.

ಪ್ರಮಥ್ನನುತ್ತಮಾಂಗಾನಿ ಸೋತ್ಸೇಧಾನಿ ಧನುಷ್ಮತಾಮ್ ।
ಪ್ರಾಹಿಣೋತ್ ತ್ರಿಶತಂ ಯೋಧಾನ್ ಕುರೂಣಾಮಾತತಾಯಿನಾಮ್ ॥

ಧನುರ್ಧಾರಿಗಳಾದ ಶತ್ರುಗಳ ಶಿರಸ್ಸುಗಳನ್ನು ಮೇಲೆ ಚಿಮ್ಮುವಂತೆ ಮರ್ದಿಸಿ ಕತ್ತರಿಸಿ ಶಸ್ತ್ರಧಾರಿಗಳಾದ ಕುರುಗಳ ಮುನ್ನೂರು ಯೋಧರನ್ನು ಯಮಪಟ್ಟಣಕ್ಕೆ ಕಳುಹಿಸಿದನು.

ಪಾತಯನ್ ರಥನೀಡೇಭ್ಯಃ ಕ್ಷತ್ರಿಯಾನ್ ಕ್ಷತ್ರಿಯರ್ಷಭಃ ।
ಪ್ರಗಾಢಧನ್ವಾ ಕೌಂತೇಯೋ ಲಬ್ಧಲಕ್ಷ್ಯಃ ಪ್ರತಾಪವಾನ್ ॥೫೩॥

ಕ್ಷತ್ರಿಯರ್ಷಭನಾದ, ಪ್ರತಾಪಶಾಲಿಯಾದ, ಲಕ್ಷ್ಯವನ್ನು ಎಂದೂ ತಪ್ಪದಿರುವ, ಗಾಢವಾಗಿ ಪ್ರಹಾರ ಮಾಡುವ ಧನುಸ್ಸುಳ್ಳ, ಕುಂತೀಪುತ್ರನಾದ ಅರ್ಜುನನು ರಥದ ಅಚ್ಚುಪೀಠಗಳಿಂದ ಯೋಧರನ್ನು ಉರುಳಿಸಿ (ಯಮಪಟ್ಟಣಕ್ಕೆ ಕಳುಹಿಸಿದನು).

ಅಥ ದುರ್ಯೋಧನಃ ಕರ್ಣಃ ಶಕುನಿಃ ಸೌಬಲಸ್ತದಾ ।
ದ್ರೋಣಶ್ಚ ದ್ರೋಣಪುತ್ರಶ್ಚ ಕೃಪಶ್ಚಾತಿರಥೋ ರಣೇ ॥೫೪॥

ಸಹಿತಾ ವಿಜಯಂ ತತ್ರ ಯೋಧಯಂತೋ ಮಹಾರಥಾಃ ।
ವಿಷ್ಫಾರಯಂತಶ್ಚಾಪಾನಿ ಬಲವಂತಿ ಮಹಾಬಲಾಃ ॥೫೫॥

ಆಗ ದುರ್ಯೋಧನ, ಕರ್ಣ, ಸೌಬಲನಾದ ಶಕುನಿ, ದ್ರೋಣ, ದ್ರೋಣಪುತ್ರರಾದ ಅಶ್ವತ್ಥಾಮರು, ಅತಿರಥರಾದ ಕೃಪರು ಈ ಮಹಾರಥರೆಲ್ಲರೂ ಅರ್ಜುನನ ಜೊತೆಯಲ್ಲಿ ಒಟ್ಟಿಗೆ ಯುದ್ಧವನ್ನು ಮಾಡುವವರಾಗಿ ಮಹಾಬಲರಾದ ಅವರು ತಮ್ಮ ಬಲಿಷ್ಠವಾದ ಬಿಲ್ಲುಗಳನ್ನು ಎಳೆಯುತ್ತಾ (ಮುಂದೆ ಬಂದರು).

ತತಃ ಸ್ವರ್ಣಪತಾಕೇನ ರಥೇನಾದಿತ್ಯವರ್ಚಸಾ ।
ಪುನರಾವೃತ್ಯ ಮಾರ್ಗಸ್ಥಂ ದದೃಶುರ್ವಾನರಧ್ವಜಮ್ ॥೫೬॥

ಆಗ ಸ್ವರ್ಣಪತಾಕೆಗಳುಳ್ಳ, ಆದಿತ್ಯಕಾಂತಿಯುಳ್ಳ ತಮ್ಮ ರಥಗಳಿಂದ ಹಿಂದಿರುಗಿ ತಮ್ಮ ಮಾರ್ಗದಲ್ಲಿ ಎದುರಾಗಿದ್ದ ವಾನರ ಧ್ವಜನಾದ ಅರ್ಜುನನನ್ನು ನೋಡಿದರು.

ತೇ ಮಹಾಸ್ತ್ರೈರ್ಮಹೋತ್ಸಾಹಾಃ ಪರಿವಾರ್ಯ ಧನಂಜಯಮ್ ।
ಅಭ್ಯವರ್ಷನ್ ಸುಸಂಕ್ರುದ್ಧಾ ಮೇಘಾ ಇವ ಮಹಾಚಲಮ್ ॥೫೭॥

ಮಹೋತ್ಸಾಹವುಳ್ಳ ಅವರೆಲ್ಲರೂ ಮಹಾಕ್ರೋಧದಿಂದ ಯುಕ್ತರಾಗಿ ಅರ್ಜುನನನ್ನು ಸುತ್ತುವರಿದು ಮೇಘಗಳು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ತಮ್ಮ ಮಹಾಸ್ತ್ರಗಳಿಂದ ಅವನ ಮೇಲೆ ಬಾಣಗಳ ಮಳೆಯನ್ನು ಕರೆದರು.

ಶರೌಘಾನ್ ಸಮ್ಯಗಸ್ಯಂತೋ ಜೀಮೂತಾ ಇವ ವಾರ್ಷಿಕಾಃ ।
ಯುದ್ಧೇ ತಸ್ಮಿರ್ಮಹಾವೀರ್ಯಾಃ ಪ್ರತಪಂತಃ ಕಿರೀಟಿನಮ್ ॥೫೮॥

ಮಹಾವೀರ್ಯರಾದ ಅವರು ವರ್ಷಾಕಾಲದ ಮೋಡದಂತೆ ಶರಸಮೂಹಗಳನ್ನು ಚೆನ್ನಾಗಿ ಪ್ರಯೋಗಿಸುತ್ತಾ ಯುದ್ಧದಲ್ಲಿ ಅರ್ಜುನನಿಗೆ ತಾಪವನ್ನು ಕೊಡುತ್ತಾ ನಿಂತರು.

ಇಷುಭಿರ್ಬಹುಭಿಸ್ತೂರ್ಣಂ ನಿಶಿತೈರ್ಘೋರಮವಾಪಿಭಿಃ ।
ಅದೂರಾತ್ ಪ್ರತ್ಯವಸ್ಥಾಯ ಪಾಂಡವಂ ಸಮಯೋಧಯನ್ ॥೫೯॥

ಅವರು ಅರ್ಜುನನಿಗೆ ಸಮೀಪದಲ್ಲಿಯೇ ನಿಂತು ಕೂದಲುಗಳನ್ನು ಸೀಳುವ ನಿಶಿತವಾದ ತಮ್ಮ ಅನೇಕ ಬಾಣಗಳಿಂದ ಶೀಘ್ರವಾಗಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತತಃ ಪ್ರಹಸ್ಯ ಬೀಭತ್ಸುಸ್ತದೈಂದ್ರಂ ಪಂಚವಾರ್ಷಿಕಮ್ ।
ಅಸ್ತ್ರಮಾದಿತ್ಯಸಂಕಾಶಂ ಗಾಂಡೀವೇ ಸಮಯೋಜಯತ್ ॥೬೦॥

ಆಗ ಅರ್ಜುನನು ನಕ್ಕು ಐದುದಿಕ್ಕುಗಳಲ್ಲಿಯೂ ಮಳೆಯಂತೆ ಬಾಣಗಳನ್ನು ಸುರಿಸುವ ಆದಿತ್ಯನಂತೆ ಹೊಳೆಯುವ ದಿವ್ಯವಾದ ಐಂದ್ರಾಸ್ತ್ರವನ್ನು ಗಾಂಡೀವ ಧನುಸ್ಸಿನಲ್ಲಿ ಯೋಜಿಸಿದನು.

ನಾಕ್ಷಾಣಾಂ ನ ಚ ಚಕ್ರಾಣಾಂ ನ ರಥಾನಾಂ ನ ವಾಜಿನಾಮ್ ।
ಅಂಗುಲಾದ್ ದ್ವ್ಯಂಗುಲಾದ್ವಾಪಿ ವಿವೃತಂ ಪ್ರತ್ಯದೃಶ್ಯತ ॥೬೧॥

ಆಗ ಅಕ್ಷಗಳಲ್ಲಾಗಲೀ, ಚಕ್ರಗಳಲ್ಲಾಗಲೀ, ರಥಗಳಲ್ಲಾಗಲೀ, ಅಶ್ವಗಳಲ್ಲಾಗಲೀ, ಒಂದು ಅಂಗುಲ ಎರಡು ಅಂಗುಲ ಮಧ್ಯದಲ್ಲಿಯೂ ಅರ್ಜುನನ ಬಾಣವು ಬೀಳದಿರುವ ಸ್ಥಳವಿರಲಿಲ್ಲ.

ಮೋಹಯಿತ್ವಾ ಚ ತಾನ್ ಸರ್ವಾನ್ ಸ ತತ್ರ ಹ್ಯಸ್ತ್ರತೇಜಸಾ ।
ಅರ್ದಯಾಮಾಸ ತೈರ್ಬಾಣೈರರ್ಜುನಃ ಸಮಿತಿಂಜಯಃ ॥೬೨॥

ಸಮಿತಿಂಜಯನಾದ ಅರ್ಜುನನು ಅವರೆಲ್ಲರನ್ನೂ ತನ್ನ ಅಸ್ತ್ರತೇಜಸ್ಸಿನಿಂದ ಮೋಹಿಸಿ ತನ್ನ ಬಾಣಗಳಿಂದ ಅವರನ್ನು ಮರ್ದಿಸಿದನು.

ದುರ್ಯೋಧನಂ ತ್ರಿಸಪ್ತತ್ಯಾ ಶಕುನಿಂ ಪಂಚಭಿಃ ಶರೈಃ ।
ದ್ರೋಣಮೇಕೇನ ಬಾಣೇನ ಕೃಪಂ ದ್ವಾಭ್ಯಾಂ ಮಹಾರಥಮ್ ॥೬೩॥

ಅಶೀತ್ಯಾ ಸೂತಪುತ್ರಂ ತು ಷಷ್ಟ್ಯಾ ದ್ರೌಣಿಂ ತಥೈವ ಚ ।
ದುಃಶಾಸನಮುಖಾನ್ ಸರ್ವಾನ್ ಸ ತತ್ರ ಹ್ಯಸ್ತ್ರತೇಜಸಾ ।
ಅರ್ದಯಾಮಾಸ ತೈರ್ಬಾಣೈಃ ಪಾಂಡವೋಽಸ್ತ್ರಭೃತಾಂ ವರಃ ॥೬೪॥

ದುರ್ಯೋಧನನನ್ನು ಇನ್ನೂರ ಹತ್ತು ಬಾಣಗಳಿಂದಲೂ, ಶಕುನಿಯನ್ನು ಐದು ಬಾಣಗಳಿಂದಲೂ, ದ್ರೋಣರನ್ನು ಒಂದು ಬಾಣದಿಂದಲೂ, ಮಹಾರಥರಾದ ಕೃಪರನ್ನು ಎರಡು ಬಾಣಗಳಿಂದಲೂ, ಕರ್ಣನನ್ನು ಎಂಬತ್ತು ಬಾಣಗಳಿಂದಲೂ ಮತ್ತು ಅಶ್ವತ್ಥಾಮರನ್ನು ಅರವತ್ತು ಬಾಣಗಳಿಂದಲೂ ಅರ್ದಿಸಿ ದುಃಶಾಸನನೇ ಮೊದಲಾದ ಎಲ್ಲರನ್ನೂ ತನ್ನ ಅಸ್ತ್ರತೇಜಸ್ಸಿನಿಂದ ಅಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅವನು ಬಾಣಗಳಿಂದ ಅರ್ದಿಸಿದನು.

ಯಥಾ ರಶ್ಮಿಭಿರಾದಿತ್ಯೋ ವೃಣುತೇ ಸರ್ವತೋ ದಿಶಮ್ ।
ಏವಂ ಕಿರೀಟಿನಾ ಮುಕ್ತಂ ಸರ್ವಂ ಪ್ರಾಚ್ಛಾದಯಜ್ಜಗತ್ ॥೬೫॥

ಆದಿತ್ಯನು ತನ್ನ ಕಿರಣಗಳಿಂದ ಎಲ್ಲ ದಿಕ್ಕುಗಳನ್ನೂ ವ್ಯಾಪಿಸಿದಂತೆ ಅರ್ಜುನನಿಂದ ಪ್ರಯೋಗಿಸಲ್ಪಟ್ಟ ಬಾಣಗಳು ಸರ್ವಜಗತ್ತನ್ನೂ ವ್ಯಾಪಿಸಿದವು.

ಯಥಾ ಬಲಾಹಕೇ ವಿದ್ಯುತ್ ಪಾವಕೋ ವಾ ಶಿಲೋಚ್ಚಯೇ ।
ತಥಾ ಗಾಂಡೀವಮಭವತ್ ಶತಾಯುತಮಿವಾದ್ಭುತಮ್ ॥೬೬॥

ಮೋಡಗಳ ಸಮೂಹದಲ್ಲಿ ಮಿಂಚಿನಂತೆ, ಶಿಲೋಚ್ಚಯದಲ್ಲಿ ಅಗ್ನಿಯಂತೆ ಒಂದೇ ಗಾಂಡೀವಧನುಸ್ಸು ನೂರರಂತೆ, ಹತ್ತುಸಾವಿರದಂತೆ ಅದ್ಭುತವಾಗಿ ತೋರಿತು.

ಯಥಾ ವರ್ಷತಿ ಪರ್ಜನ್ಯೋ ವಿದ್ಯುತ್ ಪತತಿ ಪರ್ವತೇ ।
ವಿಸ್ಫೂರ್ಜಿತೈಃ ದಿಶಃ ಸರ್ವಾ ಜ್ವಲದ್‌ಗಾಂಡೀವಮಾವೃಣೋತ್ ॥೬೭॥

ಪರ್ಜನ್ಯನು ಮಳೆಯನ್ನು ಸುರಿಸಿದಂತೆ, ಪರ್ವತದಲ್ಲಿ ಸಿಡಿಲು ಬಿದ್ದಂತೆ ದೀಪ್ತವಾದ ಗಾಂಡೀವಧನುಸ್ಸು ತನ್ನ ಶಬ್ದದಿಂದ ಎಲ್ಲ ದಿಕ್ಕುಗಳನ್ನು ಆವರಿಸಿತು.

ತ್ರಸ್ತಾಶ್ಚ ರಥಿನಃ ಸರ್ವೇ ಚೈಂದ್ರಮಸ್ತ್ರಂ ವಿಕುರ್ವತಿ ।
ಸರ್ವೇ ಶಾಂತಿಪರಾ ಯೋಧಾಃ ಸ್ವಚಿತ್ತಂ ನಾಭಿಜಜ್ಞಿರೇ ॥೬೮॥

ಸಹಿತಾ ದ್ರೋಣಭೀಷ್ಮಾಭ್ಯಾಂ ಪ್ರವಿಮೋಹಿತಚೇತನಾಃ ॥೬೯॥

ಅರ್ಜುನನು ಐಂದ್ರಾಸ್ತ್ರವನ್ನು ಪ್ರಯೋಗಿಸುತ್ತಿರಲು ಎಲ್ಲ ಯೋಧರು ಶಾಂತಿಪರರಾಗಿ ತಮ್ಮ ಮನಸ್ಸನ್ನೇ ತಿಳಿಯಲಿಲ್ಲ. ಭೀಷ್ಮದ್ರೋಣರಿಂದಲೂ ಸಹಿತರಾದ ಅವರು ಮೋಹಕ್ಕೆ ಒಳಗಾದರು.

ತಾನಿ ಸರ್ವಾಣಿ ಸೈನ್ಯಾನಿ ಭಗ್ನಾನಿ ಭರತರ್ಷಭ ।
ಪ್ರಾದ್ರವಂತ ದಿಶಃ ಸರ್ವಾ ಭಯಾದ್ಪೃ ಸವ್ಯಸಾಚಿನಃ ॥೭೦॥

ಎಲೈ ಭರತರ್ಷಭನೇ, ಹೀಗೆ ಭಗ್ನಗೊಂಡ ಆ ಸೈನ್ಯವೆಲ್ಲವೂ ಅರ್ಜುನನ ಭಯದಿಂದ ಎಲ್ಲ ದಿಕ್ಕುಗಳಿಗೂ ಓಡಿಹೋಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಚತುಃಷಷ್ಟಿತಮೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಸಪ್ತತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಏಕೀಭೂತಾನ್ ಪುನರೇವಾನುಯಾತಾನ್
ಸಮ್ಮೋಹನಾಸ್ತ್ರೇಣ ವಿಮೋಹಯಿತ್ವಾ ।
ಜಗ್ರಾಹ ತೇಷಾಮುತ್ತರೀಯಾಣಿ ಋತೇ ತು
ಭೀಷ್ಮಸ್ಯ ವೇದಾಸ್ತ್ರಘಾತಂ ಸ ಏವ ॥೪೪॥

ಕೌರವರೆಲ್ಲರೂ ಒಂದಾಗಿ ಪುನಃ ಬಂದಾಗ ಅರ್ಜುನ, ಭೀಷ್ಮನನ್ನು ಹೊರತು ಎಲ್ಲರನ್ನೂ ಸಂಮೋಹನಾಸ್ತ್ರದಿಂದ ಮೂರ್ಛೆಗೊಳಿಸಿ ಅವರ ಉತ್ತರೀಯಗಳನ್ನು ತೆಗೆಸಿದ. ಭೀಷ್ಮ ಆ ಸಂಮೋಹನಾಸ್ತ್ರಕ್ಕೆ ವಿಜ್ಞಾನಾಸ್ತ್ರದಿಂದ ಪ್ರತೀಕಾರ ಮಾಡುವುದನ್ನು ಬಲ್ಲವನಾಗಿದ್ದನು.

★ ★ ★ ★

ಅರವತ್ತೈದನೆಯ ಅಧ್ಯಾಯ

ಉತ್ತರನನ್ನು ಸಮಾಧಾನಪಡಿಸಿ ಅರ್ಜುನನಿಂದ ದುರ್ಯೋಧನನ ಕಡೆಗೆ ಗಮನ. ದುರ್ಯೋಧನನ ಪಲಾಯನ.

ಅರ್ಜುನಃ

ದಕ್ಷಿಣಾಮೇವ ತು ದಿಶಂ ಹಯಾನುತ್ತರ ವಾಹಯ ।
ಪುರಾರ್ಥೀ ಚ ಭವತ್ಯೇಷಾಮಯಂ ಶಬ್ದೋಽತ್ರ ತಿಷ್ಠತಾಮ್ ॥೧॥

ಅರ್ಜುನ– ಎಲೈ ಉತ್ತರನೇ, ಸೈನ್ಯದ ಬಲಭಾಗದಿಂದ ಹಿಂದಕ್ಕೆ ಹೋಗು. ಕೌರವರ ಸೈನ್ಯದಲ್ಲಿ ನಾವು ನಗರಕ್ಕೆ ಹಿಂದಿರುಗೋಣ ಎಂಬ ಮಾತು ಕೇಳಿಬರುತ್ತಿದೆ. ಅದನ್ನು ತಡೆಯಲು ಸೇನೆಯ ಬಲಭಾಗದಿಂದ ಸೇನೆಯ ಹಿಂದಕ್ಕೆ ರಥವನ್ನು ನಡೆಸು.

ಅಶ್ವತ್ಥಾಮ್ನಃ ಪ್ರತಿ ರಥಂ ಪ್ರಾಚೀಮುದ್ಯಾಹಿ ಸಾರಥೇ ।
ಅಚಿರಾದ್ ದ್ರಷ್ಟುಮಿಚ್ಛಾಮಿ ಗುರುಪುತ್ರಂ ಯಶಸ್ವಿನಮ್ ॥೨॥

ಎಲೈ ಸಾರಥಿಯೇ, ಅಶ್ವತ್ಥಾಮನ ರಥದ ಎದುರಿಗೆ ಹೋಗಲು ಅಲ್ಲಿಂದ ಪೂರ್ವದಿಕ್ಕಿಗೆ ರಥವನ್ನು ನಡೆಸು. ಕೀರ್ತಿವಂತನಾದ ಗುರುಪುತ್ರನಾದ ಅಶ್ವತ್ಥಾಮನನ್ನು ಶೀಘ್ರವಾಗಿ ನೋಡಲು ಬಯಸುತ್ತೇನೆ.

ವೈಶಂಪಾಯನಃ

ಮೋಹಯಿತ್ವಾ ತು ತಾನ್ ಸರ್ವಾನ್ ಧನುಷ್ಫೋಷೇಣ ಪಾಂಡವಃ ।
ಪ್ರಸವ್ಯಂ ಚೈವಮಾವೃತ್ಯ ಕ್ರೋಶಾರ್ಧಂ ಪ್ರಾದ್ರವತ್ ತತಃ ॥೩॥

ವೈಶಂಪಾಯನ– ಅರ್ಜುನನು ಆಗ ಅವರೆಲ್ಲರನ್ನೂ ತನ್ನ ಗಾಂಡೀವದ ಘೋಷದಿಂದ ಮೋಹಿಸಿ ಎಡಭಾಗಕ್ಕೆ ತಿರುಗಿ ವೇಗವಾಗಿ ಅರ್ಧಕ್ರೋಶದ ದೂರ ಹೋದನು.

ಯಥಾ ಸುಸಂವೃತೋ ಬಾಣಃ ಸುಪರ್ಣಶ್ಚಾಪಿ ಶೀಘ್ರಗಃ ।
ತಥಾ ಪಾರ್ಥರಥಃ ಶೀಘ್ರಮಾಕಾಶೇ ಪರ್ಯವರ್ತತ ॥೪॥

ಚೆನ್ನಾಗಿ ಸಂವೃತವಾದ ಬಾಣದಂತೆ, ಶೀಘ್ರಗಾಮಿಯಾದ ಗರುಡನಂತೆ ಪಾರ್ಥರಥವು ಆಕಾಶದಲ್ಲಿ ಶೀಘ್ರವಾಗಿ ತಿರುಗಿ ಹೊರಟಿತು.

ಮುಹೂರ್ತೋಪರತೇ ಶಬ್ದೇ ಪ್ರತಿಯಾತೇ ಧನಂಜಯೇ ।
ಹಸ್ತ್ಯಶ್ವರಥಪಾದಾತಂ ಪುರಸ್ಕೃತ್ಯ ಮಹಾರಥಾಃ ॥೫॥

ದ್ರೋಣಭೀಷ್ಮಮುಖಾಃ ಸರ್ವೇ ಸೈನ್ಯಾನಾಂ ಜಘನೇ ಯಯುಃ ।
ಯತ್ತಾಃ ಪಾರ್ಥಮಪಶ್ಯಂತಃ ಸಹಿತಾಃ ಶರವಿಕ್ಷತಾಃ ॥೬॥

ಅರ್ಜುನನು ಹಾಗೆ ಹೊರಟು ಹೋಗಿ ಒಂದು ಮುಹೂರ್ತದ ಕಾಲ ಅವನ ಶಬ್ದವು ಕೇಳದಿರಲು ದ್ರೋಣ, ಭೀಷ್ಮ ಎಲ್ಲ ಮಹಾರಥರೂ ಹಸ್ತಿ, ಅಶ್ವ, ರಥ, ಪದಾತಿಗಳನ್ನು ಮುಂದೆ ಮಾಡಿಕೊಂಡು ಅರ್ಜುನನನ್ನು ಕಾಣದೆ ಬಾಣಗಳಿಂದ ಗಾಯಗೊಂಡ ದೇಹವುಳ್ಳವರಾಗಿ ಎಚ್ಚರಿಕೆಯಿಂದ ಸೈನ್ಯದ ಹಿಂದೆ ಹೋದರು.

ಸೈನಿಕಾಃ

ದಿಷ್ಟ್ಯಾ ದುರ್ಯೋಧನೋ ಮುಕ್ತಃ ಸೈನ್ಯಂ ಭೂಯಿಷ್ಠಮಾಗತಮ್ ।
ಕ್ರೋಶಮಾತ್ರಮತಿಕ್ರಮ್ಯ ಬಲಮನ್ವಾನಯಾಮಹೇ ॥೭॥

ಯಾಮ ಯತ್ರ ವನಂ ಗುಲ್ಮಂ ನದೀಮನ್ಮಶಕೀಂ ಪ್ರತಿ ॥೮॥

ಸೈನಿಕರು– ದೇವರ ದಯೆದಿಂದ ದುರ್ಯೋಧನನು ಮುಕ್ತನಾಗಿದ್ದಾನೆ. ಉಳಿದ ಸೈನ್ಯದ ಹೆಚ್ಚು ಭಾಗವು ಒಂದುಗೂಡಿದೆ. ಒಂದು ಕ್ರೋಶದೂರ ಹೋಗಿ ಸೈನ್ಯವನ್ನೆಲ್ಲಾ ಒಂದುಗೂಡಿಸಿ ಅಲ್ಲಿಂದ ಆಶ್ಮಕೀನದಿಯ ತೀರದಲ್ಲಿ ಕಾಡಿಗೋ ಅಥವಾ ಪೊದೆಗಳಿಗೋ ಹೋಗೋಣ.

ವೈಶಂಪಾಯನಃ

ಅಥ ದುರ್ಯೋಧನೋ ದೃಷ್ಟ್ವಾ ಭಗ್ನಂ ಸ್ವಂ ಬಲಮಾಹವೇ ।
ಅಮೃಷ್ಯಮಾಣಃ ಕೋಪೇನ ಪರಿಮಾರ್ಗನ್ ಧನಂಜಯಮ್ ॥೯॥

ನ್ಯವರ್ತತ ಕುರುಶ್ರೇಷ್ಠಃ ಸ್ವೇನಾನೀಕೇನ ಸಂವೃತಃ ।
ವಾರ್ಯಮಾಣೋ ದುರಾಧರ್ಷೈರ್ಭೀಷ್ಮದ್ರೋಣಕೃಪಾದಿಭಿಃ ॥೧೦॥

ವೈಶಂಪಾಯನ– ಆಗ ತನ್ನ ಸೈನ್ಯವು ಯುದ್ಧದಲ್ಲಿ ಭಗ್ನವಾದುದನ್ನು ನೋಡಿ ಕುರುಶ್ರೇಷ್ಠನಾದ ದುರ್ಯೋಧನನು ಕೋಪದಿಂದ ಅರ್ಜುನನನ್ನು ಹುಡುಕುತ್ತಾ ದುರಾಧರ್ಷರಾದ ಭೀಷ್ಮದ್ರೋಣಕೃಪಾದಿಗಳಿಂದ ನಿವಾರಿಸಲ್ಪಟ್ಟರೂ ಸಹ ತನ್ನ ಸೈನ್ಯದಿಂದ ಸಹಿತನಾಗಿ (ಅರ್ಜುನನ ಕಡೆಗೆ) ಹಿಂದಿರುಗಿದನು.

ತತೋऽರ್ಜುನಶ್ಚಿತ್ರಮುದಾರವೇಗಂ
ಸಮೀಕ್ಷ್ಯ ಗಾಂಡೀವಮುವಾಚ ವಾಕ್ಯಮ್ ॥೧೧॥

ಇದಂ ತ್ವಿದಾನೀಮನಯತ್ ಕುರೂಣಾಂ
ಶಿವಂ ಧನುಃ ಶಸ್ತ್ರನಿಬರ್ಹಣಂ ಚ ।
ಅತ್ಯಾಶುಗಂ ವೇಗವದಾಶುಕರ್ತೃ
ತ್ವವಾರಣೀಯಂ ಮಹತೇ ರಣಾಯ ॥೧೨॥

ಆಗ ಅರ್ಜುನನು ವಿಚಿತ್ರವಾದ ಮತ್ತು ಉದಾರವಾದ ವೇಗವುಳ್ಳ ತನ್ನ ಗಾಂಡೀವ ಧನುಸ್ಸನ್ನು ನೋಡಿ ಹೀಗೆ ಮಾತನಾಡಿದನು: ಈ ಮಂಗಳಕರವಾದ, ಶತ್ರುವಿನಾಶಕವಾದ ಧನುಸ್ಸು ಕೌರವರ ಮಂಗಳವನ್ನೆಲ್ಲಾ ಅಪಹರಿಸಿದೆ. ಇದು ಶೀಘ್ರವಾಗಿ ಸಂಚರಿಸುವಂತಹದು, ವೇಗವುಳ್ಳದ್ದು, ತನ್ನ ಕೆಲಸವನ್ನು ಬೇಗ ಮಾಡುವಂತಹದು, ಇನ್ನೊಬ್ಬರಿಂದ ನಿವಾರಿಸಲು ಸಾಧ್ಯವಾಗದುದು ಮತ್ತು ದೊಡ್ಡ ಯುದ್ಧವನ್ನು ಮಾಡಲು ಸಮರ್ಥವಾದುದು.

ಪ್ರದಾರಣಂ ಶತ್ರುವರೂಥಿನೀನಾಮ್
ಅನೀಕಜಿತ್ ಸಂಯತಿ ವಜ್ರಕಲ್ಪಮ್ ॥೧೩॥

ಪ್ರಯಾಹಿ ಯತ್ರೈಷ ಸುಯೋಧನೋ ಹಿ
ತಂ ಪಾತಯಿಷ್ಯಾಮಿ ಶರೈಃ ಸುತೀಕ್ಷ್ಣೈಃ ॥೧೪॥

ಶತ್ರುಸೈನ್ಯಗಳನ್ನು ಸೀಳಿಹಾಕುವಂತಹದು, ಸೈನ್ಯಗಳನ್ನು ಜಯಿಸುವಂತಹದು ಮತ್ತು ಯುದ್ಧದಲ್ಲಿ ವಜ್ರಾಯುಧದಂತೆ ಇರುವಂತಹದು. ಎಲೈ ಉತ್ತರನೇ, ಸುಯೋಧನನು ಎಲ್ಲಿದ್ದಾನೆಯೋ ಅಲ್ಲಿಗೆ ರಥವನ್ನು ನಡೆಸು. ತೀಕ್ಷ್ಣವಾದ ಶರಗಳಿಂದ ಅವನನ್ನು ಹೊಡೆದು ಉರುಳಿಸುವೆನು.

ಆಚಾರ್ಯಪುತ್ರಂ ಚ ಪಿತಾಮಹಂ ಚ
ಸುಯೋಧನಂ ಸೂತಸುತಂ ಚ ಸಂಖೇ ।
ದ್ರೋಣಂ ಕೃಪಂ ಚೈವ ನಿವಾರ್ಯ ಯುದ್ಧೇ
ಶಿರೋ ಹರಿಷ್ಯಾಮಿ ಸುಯೋಧನಸ್ಯ ॥೧೫॥

ಯುದ್ಧದಲ್ಲಿ ಆಚಾರ್ಯಪುತ್ರರಾದ ಅಶ್ವತ್ಥಾಮರನ್ನೂ, ಪಿತಾಮಹರಾದ ಭೀಷ್ಮರನ್ನೂ, ಸುಯೋಧನನನ್ನೂ, ಕರ್ಣನನ್ನೂ, ದ್ರೋಣ ಮತ್ತು ಕೃಪರನ್ನೂ ನಿವಾರಿಸಿ ಸುಯೋಧನನ ಶಿರಸ್ಸನ್ನು ಕತ್ತರಿಸುವೆನು.

ವೈಶಂಪಾಯನಃ

ತದುತ್ತರಶ್ಚಿತ್ರಮುದಾರವೇಗಂ
ಧನುಶ್ಚ ದೃಷ್ಟ್ವಾ ನಿಶಿತಾನ್ ಶರಾಂಶ್ಚ ।
ಭೀತೋಽಬ್ರವೀದರ್ಜುನಮುಗ್ರವೇಗಂ
ನಾಹಂ ತವಾಶ್ವಾನ್ ವಿಷಹೇ ನಿಯಂತುಮ್ ॥೧೬॥

ವೈಶಂಪಾಯನ– ಉತ್ತರನು, ವಿಚಿತ್ರವಾದ ಮತ್ತು ಉದಾರವಾದ ವೇಗವುಳ್ಳ ಗಾಂಡೀವ ಧನುಸ್ಸನ್ನು ಮತ್ತು ಹರಿತವಾದ ಬಾಣಗಳನ್ನು ನೋಡಿ ಭೀತನಾಗಿ ಭಯಂಕರವಾದ ವೇಗವುಳ್ಳ ಅರ್ಜುನನನ್ನು ಕುರಿತು, ನಾನು ನಿನ್ನ ಅಶ್ವಗಳನ್ನು ನಿಯಂತ್ರಿಸಲಾರೆ ಎಂದು ಹೇಳಿದನು.

ತಮಬ್ರವೀತ್ ಮಾತ್ಸ್ಯಸುತಂ ಪ್ರಹಸ್ಯ
ಗಾಂಡೀವಧನ್ವಾ ದ್ವಿಷತಾಂ ನಿಹಂತಾ ॥೧೭॥

ಮಯಾ ಸಹಾಯೇನ ಕುತೋ ಭಯಂ ತೇ
ಪ್ರೇಹ್ಯುತ್ತರಾಶ್ವಾನುಪಮಂತ್ರಯಸ್ವ ॥೧೮॥

ಗಾಂಡೀವ ಧನುರ್ಧಾರಿಯಾದ, ಶತ್ರುಹಂತಕನಾದ ಅರ್ಜುನನು ನಕ್ಕು ಮಾತ್ಸ್ಯಪುತ್ರನಾದ ಉತ್ತರನನ್ನು ಕುರಿತು, ನಾನು ಸಹಾಯವಾಗಿರುವಾಗ ನಿನಗೆ ಏಕೆ ಭಯ? ಉತ್ತರನೇ, ಅಶ್ವಗಳನ್ನು ಸಮಾಧಾನಪಡಿಸಿ ಮುಂದಕ್ಕೆ ನಡೆ ಎಂದು ಹೇಳಿದನು.

ವೈಶಂಪಾಯನಃ

ಆಶ್ವಾಸಿತಸ್ತೇನ ಧನಂಜಯೇನ
ವೈರಾಟರಶ್ವಾನ್ ಪ್ರಚುಚೋದ ಶೀಘ್ರಮ್ ।
ವಿಸ್ಫಾರಯನ್ ತದ್ಧನುರುಗ್ರಘೋಷಂ
ಯುಯುತ್ಸಮಾನಃ ಪುನರೇವ ಜಿಷ್ಣುಃ ॥೧೯॥

ವೈಶಂಪಾಯನ– ಅರ್ಜುನನಿಂದ ಆಶ್ವಸ್ತನಾದ ಉತ್ತರನು ಶೀಘ್ರವಾಗಿ ಅಶ್ವಗಳನ್ನು ಪ್ರಚೋದಿಸಿದನು. ಅರ್ಜುನನು ಉಗ್ರಘೋಷವುಳ್ಳ ತನ್ನ ಧನುಸ್ಸನ್ನು ಎಳೆಯುತ್ತಾ ಪುನಃ ಯುದ್ಧವನ್ನು ಮಾಡುವ ಇಚ್ಛೆಯುಳ್ಳವನಾದನು.

ಗಾಂಡೀವಶಬ್ದೇನ ತು ತತ್ರ ಯೋಧಾ
ಭೂಮೌ ನಿಪೇತುರ್ಬಹವೋಽತಿವೇಲಮ್ ।
ಶಂಖಸ್ಯ ಶಬ್ದೇನ ತು ವಾನರಸ್ಯ
ಶಬ್ದೇನ ತೇ ಯೋಧವರಾಃ ಸಮಂತಾತ್ ॥೨೦॥

ಗಾಂಡೀವ ಶಬ್ದದಿಂದ ಶಂಖಶಬ್ದದಿಂದ, ಹಾಗೂ ಧ್ವಜದಲ್ಲಿದ್ದ ವಾನರನ ಶಬ್ದದಿಂದ ಕೌರವ ಸೈನ್ಯದ ಶ್ರೇಷ್ಠರಾದ ಅನೇಕ ಯೋಧರು ಎಲ್ಲ ಕಡೆಗಳಲ್ಲಿಯೂ ಭೂಮಿಯ ಮೇಲೆ ಬಹಳವಾಗಿ ಕುಸಿದು ಬಿದ್ದರು.

ಅರ್ಜುನಃ

ಏಷೋಽತಿಮಾನೀ ಧೃತರಾಷ್ಟ್ರಪುತ್ರಃ
ಸೇನಾಮುಖೇ ಸರ್ವಸಮೃದ್ಧತೇಜಾಃ ।
ಪರಾಜಯಂ ನಿತ್ಯಮಮೃಷ್ಯಮಾಣೋ
ನಿವರ್ತತೇ ಯುದ್ಧಮನಾಃ ಪುರಸ್ತಾತ್ ॥೨೧॥

ತಮೇವ ಯಾಹಿ ಪ್ರಸಮೀಕ್ಷ್ಯ ಯತ್ತಃ
ಸುಯೋಧನಂ ತತ್ರ ಸಹಾನುಜಂ ಚ ॥೨೨॥

ಅರ್ಜುನ– ಈ ಧೃತರಾಷ್ಟ್ರಪುತ್ರನು ಬಹಳ ಅಹಂಕಾರವುಳ್ಳವನು. ಸೇನಾಮುಖದಲ್ಲಿ ಪೂರ್ಣವಾದ ಸಮೃದ್ಧವಾದ ತೇಜಸ್ಸುಳ್ಳವನು. ಪರಾಜಯವನ್ನು

ಯಾವಾಗಲೂ ಸಹಿಸದೇ ಯುದ್ಧವನ್ನು ಮಾಡುವ ಮನಸ್ಸಿನಿಂದ ಮುಂದೆ ಬರುತ್ತಿದ್ದಾನೆ. ಎಚ್ಚರಿಕೆಯಿಂದ ಅವನನ್ನು ನೋಡಿಕೊಂಡು ಸುಯೋಧನ ಮತ್ತು ಅವನ ತಮ್ಮನಾದ ದುಃಶಾಸನನು ಇರುವಲ್ಲಿಗೆ ರಥವನ್ನು ನಡೆಸು.

ವೈಶಂಪಾಯನಃ

ತಮಾಪತಂತಂ ಪ್ರಸಮೀಕ್ಷ್ಯ ಸರ್ವೇ
ಕುರುಪ್ರವೀರಾಃ ಸಹಸಾऽಭ್ಯಗಚ್ಛನ್ ।
ಪ್ರಹಸ್ಯ ವೀರಃ ಸ ತು ತಾನತೀತ್ಯ
ದುರ್ಯೋಧನೇ ದ್ವೌ ನಿಚಖಾನ ಬಾಣೌ ॥೨೩॥

ವೈಶಂಪಾಯನ– ಹಾಗೆ ತಮ್ಮ ಮೇಲೆ ಎರಗುತ್ತಿದ್ದ ಅರ್ಜುನನನ್ನು ನೋಡಿ ಎಲ್ಲಾ ಕುರುವೀರಶ್ರೇಷ್ಠರು ತಕ್ಷಣ ಅವನಿಗೆ ಎದುರಾದರು. ವೀರನಾದ ಅರ್ಜುನನು ಅವರನ್ನೆಲ್ಲಾ ಮೀರಿ ಎರಡು ಬಾಣಗಳನ್ನು ದುರ್ಯೋಧನನ ದೇಹದಲ್ಲಿ ನಾಟಿಸಿದನು.

ತೇನಾರ್ದಿತೋ ನಾಗ ಇವ ಪ್ರಭಿನ್ನಃ
ಪಾರ್ಥೇನ ವಿದ್ಧೋ ಧೃತರಾಷ್ಟ್ರಸೂನುಃ ।
ಯುಯುತ್ಸಮಾನೋ ದ್ವಿರಥೇನ ಸಂಖೇ
ಸ್ವಯಂ ನಿಗೃಹ್ಯಾರ್ಜುನಮಾಸಸಾದ ॥೨೪॥

ಅರ್ಜುನನಿಂದ ಹೊಡೆಯಲ್ಪಟ್ಟು ಆ ಬಾಣಗಳಿಂದ ಪೀಡಿತನಾದ ಧೃತರಾಷ್ಟ್ರ ಪುತ್ರನು ಮದಿಸಿದ ಗಜದಂತೆ ಯುದ್ಧದಲ್ಲಿ ಅರ್ಜುನನ ಜೊತೆಯಲ್ಲಿ ದ್ವಿರಥನಾಗಿ ಯುದ್ಧವನ್ನು ಮಾಡಲು ಬಯಸಿ ಆ ಬಾಣಗಳನ್ನು ತಾನೇ ಕಿತ್ತು ಅರ್ಜುನನ ಕಡೆಗೆ ಬಂದನು.

ತಂ ಭೀಮಧನ್ವಾನಮುದಗ್ರವೇಗಂ
ಧನಂಜಯಂ ಶತ್ರುಗಣೈರಜಯ್ಯಮ್ ।
ಆಕರ್ಣಪೂರ್ಣಾಯತಚೋದಿತೇನ
ಭಲ್ಲೇನ ವಿವ್ಯಾಧ ಲಲಾಟಮಧ್ಯೇ ॥೨೫॥

ಭಯಂಕರವಾದ ಧನುಸ್ಸುಳ್ಳವನೂ, ಶ್ರೇಷ್ಠವಾದ ವೇಗವುಳ್ಳವನೂ,

ಶತ್ರುಸಮೂಹದಿಂದ ಜಯಿಸಲು ಸಾಧ್ಯವಿಲ್ಲದವನೂ ಆದ ಅರ್ಜುನನನ್ನು ತನ್ನ ಕಿವಿಯವರೆಗೂ ಎಳೆದ ಹೆದೆಗೆ ಜೋಡಿಸಿದ ವಿಸ್ತಾರವಾದ ಭಲ್ಲದಿಂದ (ದುರ್ಯೋಧನನು) ಹಣೆಯ ಮಧ್ಯದಲ್ಲಿ ಹೊಡೆದನು.

ಸ ತೇನ ಬಾಣೇನ ಸಮರ್ಪಿತೇನ
ಜಾಂಬೂನದಾಭೇನ ಸುಸಂಶಿತೇನ ।
ರರಾಜ ಪಾರ್ಥೋ ರುಧಿರಂ ಕ್ಷರನ್ ವೈ
ಯಥೈಕರಶ್ಮಿರ್ಭಗವಾನ್ ದಿವಾಽರ್ಕಃ ॥೨೬॥

ಸುವರ್ಣಮಯವಾದ ಅತ್ಯಂತ ತೀಕ್ಷ್ಣವಾದ ಆ ಬಾಣದಿಂದ ಹೊಡೆಯಲ್ಪಟ್ಟ ಅರ್ಜುನನು ರಕ್ತವನ್ನು ಸುರಿಸುತ್ತಾ ಮಧ್ಯಾಹ್ನದ ಸಮಯದಲ್ಲಿ ಒಂದೇ ಕಿರಣವುಳ್ಳ ಪೂಜ್ಯನಾದ ಸೂರ್ಯನಂತೆ ಶೋಭಿಸಿದನು.

ಅಥಾಸ್ಯ ಬಾಣೇನ ವಿದಾರಿತಸ್ಯ
ಪ್ರಾದುರ್ಬಭೂವಾಸೃಗಜಸ್ರಮುಷ್ಣಮ್ ।
ಸಾ ತಸ್ಯ ಜಾಂಬೂನದಪುಷ್ಪಚಿತ್ರಾ
ಮಾಲೇವ ಧಾರಾಽಭಿವಿರಾಜತೇ ಸ್ಮ ॥೨೭॥

ಆ ಸುಯೋಧನನ ಬಾಣದಿಂದ ತಿವಿದ ಹಣೆಯಿಂದ ಉಷ್ಣವಾದ ರಕ್ತವು ಬಹಳ ಸಮಯದವರೆಗೆ ಹರಿಯಿತು. ಆ ರಕ್ತಧಾರೆಯು ಅವನ ಕೊರಳಿನಲ್ಲಿ ಸುವರ್ಣಮಯವಾದ ಮಾಲೆಯಂತೆ ಶೋಭಿಸಿತು.

ಸ ತೇನ ಬಾಣಾಭಿಹತಸ್ತರಸ್ವೀ
ದುರ್ಯೋಧನೇನೋದ್ಧತಮನ್ಯುವೇಗಃ ।
ಶರಾನುಪಾದಾಯ ವಿಷಾಗ್ನಿಕಲ್ಪಾನ್
ವಿವ್ಯಾಧ ರಾಜಾನಮದೀನಸತ್ವಃ ॥೨೮॥

ದುರ್ಯೋಧನನ ಆ ಬಾಣದಿಂದ ಹೊಡೆಯಲ್ಪಟ್ಟ ವೇಗಶಾಲಿಯಾದ, ಬಹಳ ಕೋಪದ ವೇಗವನ್ನು ಧರಿಸಿದ, ಎಂದೂ ಕುಗ್ಗದ ಮನಸ್ಸುಳ್ಳ ಅರ್ಜುನನು ವಿಷಾಗ್ನಿ ಸದೃಶವಾದ ಬಾಣಗಳನ್ನು ತೆಗೆದುಕೊಂಡು ಅದರಿಂದ ದುರ್ಯೋಧನನನ್ನು ಹೊಡೆದನು.

ದುರ್ಯೋಧನಶ್ಚಾಪಿ ತಮುಗ್ರತೇಜಾಃ
ಪಾರ್ಥಶ್ಚ ದುರ್ಯೋಧನಮೇಕವೀರಃ ।
ಅನ್ಯೋನ್ಯಮಾಜೌ ಪುರುಷಪ್ರವೀರೌ
ಸಮಂ ಸಮಾಜಘ್ನತುರಾಜಮೀಢೌ ॥೨೯॥

ಆಗ ಆಜಮೀಢಕುಲಕ್ಕೆ ಸೇರಿದ ಉಗ್ರತೇಜಸ್ವಿಗಳೂ, ಶ್ರೇಷ್ಠ ವೀರರೂ, ಪುರುಷಶ್ರೇಷ್ಠರೂ ಆದ ಅರ್ಜುನ ಮತ್ತು ದುರ್ಯೋಧನರಿಬ್ಬರೂ ಪರಸ್ಪರವಾಗಿ ಬಾಣಪ್ರಯೋಗಗಳನ್ನು ಮಾಡಿದರು.

ತತಃ ಪ್ರಭಿನ್ನೇನ ಮಹಾಗಜೇನ
ಮಹೀಧರಾಭೇನ ಪುನರ್ವಿಕರ್ಣಃ ।
ರಥೈಶ್ಚತುರ್ಭಿರ್ಗಜಪಾದರಕ್ಷೈಃ
ಕುಂತೀಸುತಂ ಪಾಂಡವಮಭ್ಯಧಾವತ್ ॥೩೦॥

ಆಗ ವಿಕರ್ಣನು ಪುನಃ ಪರ್ವತದಂತಿದ್ದ ಒಂದು ಮದಿಸಿದ ಗಜವನ್ನು ಏರಿ ಆ ಗಜದ ನಾಲ್ಕುಪಾದಗಳನ್ನು ರಕ್ಷಿಸುವ ನಾಲ್ಕು ರಥರಿಂದ ಕೂಡಿಕೊಂಡು ಕುಂತೀಸುತನಾದ ಅರ್ಜುನನ ಕಡೆಗೆ ಧಾವಿಸಿದನು.

ತಮಾಪತಂತಂ ತ್ವರಿತಂ ಗಜೇಂದ್ರಂ
ಧನಂಜಯಃ ಕುಂಭಲಲಾಟಮಧ್ಯೇ ।
ಆಕರ್ಣಪೂರ್ಣೇನ ದೃಢಾಯಸೇನ
ಬಾಣೇನ ವಿವ್ಯಾಧ ಭೃಶಂ ತು ವೀರಃ ॥೩೧॥

ವೀರನಾದ ಅರ್ಜುನನು ತನ್ನ ಕಡೆಗೆ ಶೀಘ್ರವಾಗಿ ಬರುತ್ತಿದ್ದ ಆ ಗಜೇಂದ್ರನಿಗೆ ಕಿವಿಯವರೆಗೂ ಎಳೆದ ದೃಢವಾದ ಕಬ್ಬಿಣದ ಬಾಣದಿಂದ ಚೆನ್ನಾಗಿ ಹೊಡೆದನು.

ಪಾರ್ಥೇನ ಸೃಷ್ಟಃ ಸ ತು ಗೃಧ್ರಪತ್ರೋ
ಹ್ಯಾಪುಂಖದೇಶಾತ್ ಪ್ರವಿವೇಶ ನಾಗಮ್ ।
ವಿದಾರ್ಯ ಶೈಲಪ್ರವರಪ್ರಕಾಶಂ
ಯಥಾಽಶನಿಃ ಪರ್ವತಮಿಂದ್ರಸೃಷ್ಟಃ ॥೩೨॥

ಅರ್ಜುನನು ಪ್ರಯೋಗಿಸಿದ ಗೃಧ್ರಪತ್ರಸಹಿತವಾದ ಆ ಬಾಣವು ಬಿಡದವರೆಗೂ ಆನೆಯ ಶರೀರವನ್ನು ಪ್ರವೇಶಿಸಿತು. ಇಂದ್ರನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧವು ದೊಡ್ಡ ಪರ್ವತವನ್ನು ಸೀಳಿದಂತೆ ಆ ಆನೆಯನ್ನು ಸೀಳಿಹಾಕಿತು.

ಶರಪ್ರತಪ್ತಃ ಸ ತು ನಾಗರಾಜಃ
ಪ್ರವೇಪಿತಾಂಗೋ ವ್ಯಥಿತಾಂತರಾತ್ಮಾ ।
ಸಂಸೀದಮಾನೋ ನ್ಯಪತತ್ ತದೋರ್ವ್ಯಾಂ
ವಜ್ರಾಹತಂ ಶೃಂಗಮಿವಾಚಲಸ್ಯ ॥೩೩॥

ಬಾಣದಿಂದ ಪೀಡಿತನಾದ ಆ ಗಜರಾಜನು ದೇಹದಲ್ಲೆಲ್ಲಾ ನಡುಕವನ್ನು ಹೊಂದಿ ಬಹಳ ವ್ಯಥೆಯಿಂದ ಕೂಡಿದ ಮನಸ್ಸುಳ್ಳದ್ದಾಗಿ ನಾಶವನ್ನು ಹೊಂದುತ್ತಾ ವಜ್ರಾಯುಧದ ಹೊಡೆತಕ್ಕೆ ಸಿಕ್ಕಿದ ಪರ್ವತದ ಶಿಖರದಂತೆ ಭೂಮಿಯ ಮೇಲೆ ಬಿದ್ದಿತು.

ನಿಪಾತಿತೇ ದಂತಿವರೇ ಪೃಥಿವ್ಯಾಂ
ತ್ರಾಸಾದ್ ವಿಕರ್ಣಃ ಸಹಸಾऽವತೀರ್ಯ ।
ತೂರ್ಣಂ ಪದಾನ್ಯಷ್ಟಶತಾನಿ ಗತ್ವಾ
ವಿವಿಂಶತೇಃ ಸ್ಯಂದನಮಾರುರೋಹ ॥೩೪॥

ಆ ಶ್ರೇಷ್ಠವಾದ ಗಜವು ಭೂಮಿಯ ಮೇಲೆ ಬೀಳುತ್ತಿರಲು ಹೆದರಿದ ವಿಕರ್ಣನು ತಕ್ಷಣ ಭೂಮಿಯ ಮೇಲೆ ಇಳಿದು ಶೀಘ್ರವಾಗಿ ಎಂಟುನೂರು ಹೆಜ್ಜೆಗಳನ್ನು ಇಟ್ಟು ವಿವಿಂಶತಿಯ ರಥವನ್ನು ಏರಿದನು.

ನಿಹತ್ಯ ನಾಗಂ ತು ಶರೇಣ ತೇನ
ವಜ್ರೋಪಮೇನಾದ್ರಿವರಪ್ರಕಾಶಮ್ ।
ತಥಾವಿಧೇನೈವ ಶರೇಣ ಪಾರ್ಥೋ
ದುರ್ಯೋಧನಂ ವಕ್ಷಸಿ ನಿರ್ಬಿಭೇದ ॥೩೫॥

ಅರ್ಜುನನು ವಜ್ರಸದೃಶವಾದ ಬಾಣದಿಂದ ಪರ್ವತಶ್ರೇಷ್ಠದಂತಿದ್ದ ಆ ಗಜವನ್ನು ಕೊಂದು ಅಂತಹದೇ ಇನ್ನೊಂದು ಬಾಣದಿಂದ ದುರ್ಯೋಧನನಿಗೆ ಎದೆಯಲ್ಲಿ ಪ್ರಹಾರವನ್ನು ಮಾಡಿ ಭೇದಿಸಿದನು.

ಹತೇ ಗಜೇ ರಾಜನಿ ಚೈವ ಭಿನ್ನೇ
ಭಗ್ನೇ ವಿಕರ್ಣೇ ಚ ಸಪಾದರಕ್ಷೇ ।
ಗಾಂಡೀವಮುಕ್ತೈರ್ವಿಶಿಖೈಃ ಪ್ರಣುನ್ನಾಃ
ತೇ ಯೋಧಮುಖ್ಯಾಃ ಸಹಸಾ ಪ್ರಜಗ್ಮುಃ ॥೩೬॥

ಗಜವು ಹತವಾಗಿ, ರಾಜನು ಎದೆಯಲ್ಲಿ ದೊಡ್ಡ ವ್ರಣವನ್ನು ಹೊಂದಿ, ತನ್ನ ಗಜಪಾದ ರಕ್ಷಕರಿಂದ ಕೂಡಿದ ವಿಕರ್ಣನು ಭಗ್ನವಾಗುತ್ತಿರಲು, ಗಾಂಡೀವ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳಿಂದ ಪೀಡಿತರಾದ ಆ ಕೌರವ ಸೈನ್ಯಮುಖ್ಯರಾದವರು ತಕ್ಷಣ ಹೊರಟರು.

ದೃಷ್ಟ್ವೈವ ಬಾಣೇನ ಹತಂ ಚ ನಾಗಂ
ಯೋಧಾಂಶ್ಚ ಸರ್ವಾನ್ ದ್ರವತೋ ನಿರೀಕ್ಷ್ಯ ।
ರಥಂ ಸಮಾವೃತ್ಯ ಕುರುಪ್ರವೀರೋ
ರಣಾತ್ ಪ್ರದುದ್ರಾವ ಯತೋ ನ ಪಾರ್ಥಃ ॥೩೭॥

ಬಾಣದಿಂದ ಗಜವು ಹತವಾದುದನ್ನೂ ಮತ್ತು ಯೋಧರೆಲ್ಲರೂ ಹಿಂದಿರುಗಿ ಓಡುತ್ತಿರುವುದನ್ನೂ ನೋಡಿದ ಕುರುಪ್ರವೀರನಾದ ದುರ್ಯೋಧನನು ತನ್ನ ರಥವನ್ನು ತಿರುಗಿಸಿ ಅರ್ಜುನನಿಲ್ಲದ ಕಡೆಗೆ ಓಡಿಸಿದನು.

ತಂ ಭೀಮರೂಪಂ ತ್ವರಿತಂ ವ್ರಜಂತಂ
ದುರ್ಯೋಧನಂ ಶತ್ರುಗಣಾವಮರ್ದೀ ।
ಅನ್ವಾಗಮದ್ ಯೋದ್ಧುಮನಾಃ ಕಿರೀಟೀ
ಬಾಣಾಭಿವಿದ್ಧಂ ರುಧಿರಂ ವಮಂತಮ್ ॥೩೮॥

ಭಯಂಕರರೂಪವನ್ನು ಹೊಂದಿದ್ದ, ಶೀಘ್ರವಾಗಿ ಹೋಗುತ್ತಿದ್ದ, ಬಾಣದಿಂದ ಪೀಡಿತನಾಗಿ ರಕ್ತವನ್ನು ಕಾರುತ್ತಿದ್ದ ದುರ್ಯೋಧನನನ್ನು ಶತ್ರುಗಣ ಮರ್ದಕನಾದ ಅರ್ಜುನನು ಯುದ್ಧ ಮಾಡುವ ಮನಸ್ಸುಳ್ಳವನಾಗಿ ಹಿಂಬಾಲಿಸಿದನು.

ತಸ್ಮಿನ್ ಮಹೇಷ್ವಾಸವರೇऽತಿವಿದ್ಧೇ
ಧನಂಜಯೇನಾಪ್ರತಿಮೇನ ಯುದ್ಧೇ ।

ಸರ್ವಾಣಿ ಸೈನ್ಯಾನಿ ಭಯಾರ್ದಿತಾನಿ
ತ್ರಾಸಂ ಯಯುಃ ಪಾರ್ಥಮುದೀಕ್ಷ್ಯ ತಾನಿ ॥೩೯॥

ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ದುರ್ಯೋಧನನು ಅಸದೃಶನಾದ ಧನಂಜಯನಿಂದ ಯುದ್ಧದಲ್ಲಿ ತೀವ್ರವಾಗಿ ಗಾಯಗೊಳ್ಳುತ್ತಿರಲು ಆ ಎಲ್ಲ ಸೈನ್ಯಗಳೂ ಅರ್ಜುನನನ್ನು ನೋಡಿ ಭಯದಿಂದ ನಡುಗಿದವು.

ತತಸ್ತು ತೇ ಶಾಂತಿಪರಾಶ್ಚ ಯೋಧಾ
ದೃಷ್ಟ್ವಾರ್ಜುನಂ ನಾಗಮಿವ ಪ್ರಭಿನ್ನಮ್ ।
ಉಚ್ಚೈರ್ನದಂತಂ ಬಲವಂತಮಾಜೌ
ಮಧ್ಯೇ ಸ್ಥಿತಂ ಸಿಂಹಮಿವರ್ಷಭಾಣಾಮ್ ॥೪೦॥

ಅನಂತರ ಮದಿಸಿದ ಗಜದಂತಿರುವ, ಗಟ್ಟಿಯಾಗಿ ಗರ್ಜಿಸುವ, ಯುದ್ಧದಲ್ಲಿ ಬಲಿಷ್ಠನಾದ, ವೃಷಭದ ಮಧ್ಯೆ ಸಿಂಹದಂತಿರುವ ಆ ಅರ್ಜುನನನ್ನು ನೋಡಿ ಕೌರವರೆಲ್ಲರೂ ಶಾಂತಿಯನ್ನು ಬಯಸುವವರಾದರು.

ಗಾಂಡೀವಶಬ್ದೇನ ತು ಪಾಂಡವಸ್ಯ
ಯೋಧಾ ನಿಪೇತುಃ ಸಹಸಾ ರಥೇಭ್ಯಃ ।
ಭಯಾರ್ದಿತಾಃ ಪಾರ್ಥಶರಾಭಿತಪ್ತಾಃ
ಸಿಂಹಾಭಿಪನ್ನಾ ಇವ ವಾರಣೇಂದ್ರಾಃ ॥೪೧॥

ಸಿಂಹದ ಕೈಗೆ ಸಿಲುಕಿದ ಗಜೇಂದ್ರಗಳಂತೆ ಭಯಾರ್ದಿತರಾಗಿ ಅರ್ಜುನನ ಗಾಂಡೀವ ಶಬ್ದದಿಂದಲೇ ಯೋಧರು ರಥದಿಂದ ಇದ್ದಕ್ಕಿದ್ದಂತೆಯೇ ಬಿದ್ದರು.

ಸಂರಕ್ತನೇತ್ರಃ ಸ್ವಯಮಿಂದ್ರಕಲ್ಪೋ
ವೈಕರ್ತನಂ ದ್ವಾದಶಭಿಃ ಪೃಷತ್ಕೈಃ ।
ವಿವ್ಯಾಧ ತೇಷಾಂ ದ್ರವತಾಂ ಸಮೀಕ್ಷ್ಯ
ದುಃಶಾಸನಂ ಚೈಕರಥೇನ ಪಾರ್ಥಃ ॥೪೨॥

ಕೆಂಪಾದ ಕಣ್ಣುಳ್ಳವನೂ, ಸ್ವತಃ ಇಂದ್ರನಿಗೆ ಸಮಾನನಾದವನೂ ಆದ ಅರ್ಜುನನು ಒಂದು ರಥದಲ್ಲಿ ಕುಳಿತು ಯುದ್ಧವನ್ನು ಮಾಡಿ ಕರ್ಣನನ್ನು ಹನ್ನೆರಡು ಬಾಣಗಳಿಂದ ಹೊಡೆದನು. ಹಾಗೆಯೇ ಓಡಿಹೋಗುತ್ತಿರುವ ಸೈನ್ಯಗಳನ್ನು ನೋಡಿ ದುಃಶಾಸನನಿಗೂ ಹೊಡೆದನು.

ಕರ್ಣೋಽಬ್ರವೀತ್ ಪಾರ್ಥಶರಾಭಿತಪ್ತೋ
ದುರ್ಯೋಧನಂ ದುಷ್ಪ್ರಸಹಂ ಚ ದೃಷ್ಟ್ವಾ ॥೪೩॥

ದೃಷ್ಟೋಽರ್ಜುನೋಽಯಂ ಪ್ರತಿಯಾಮ ಶೀಘ್ರಂ
ಗತ್ವಾ ಪುನರ್ಮಂತ್ರಯತಾಂ ಹಿತಾಯ ।
ಮನ್ಯೇ ಮಯಾ ತಾತ ಕುತೋ ಹಿ ಕಾರ್ಯಂ
ಯದರ್ಜುನೋಽಸ್ಮಾಭಿರಿಹಾದ್ಯ ದೃಷ್ಟಃ ॥೪೪॥

ಭೂಯೋ ವನಂ ಗಚ್ಛತು ಸವ್ಯಸಾಚೀ
ಪಶ್ಯಾಮಿ ಪೂರ್ಣಂ ಸಮಯಂ ನ ತೇಷಾಮ್ ॥೪೫॥

ಪಾರ್ಥಶರಗಳಿಂದ ಪೀಡಿತನಾದ ಕರ್ಣನು ಯುದ್ಧದಲ್ಲಿ ದುಷ್ಪ್ರಸಹನಾದ ದುರ್ಯೋಧನನನ್ನು ನೋಡಿ, ನಾವು ಅರ್ಜುನನನ್ನು ನೋಡಿದ್ದಾಯಿತು. ಶೀಘ್ರವಾಗಿ ಹಿಂದಿರುಗಿ ನಮ್ಮ ಹಿತಕ್ಕೋಸ್ಕರ ಪುನಃ ಮಂತ್ರಾಲೋಚನೆಯನ್ನು ಮಾಡೋಣ. ನಾವು ಈ ದಿನ ಅರ್ಜುನನನ್ನು ನೋಡಿರುವುದರಿಂದ ನಾವು ಪುನಃ ಏಕೆ ಯುದ್ಧವನ್ನು ಮಾಡಬೇಕೆಂದು ಭಾವಿಸುತ್ತೇನೆ. ಅರ್ಜುನನು ಪುನಃ ವನವಾಸಕ್ಕೆ ಹೋಗಲಿ. ಅವರು ಪ್ರತಿಜ್ಞೆ ಮಾಡಿದ ಸಮಯವು ಪೂರ್ಣವಾಗಿಲ್ಲವೆಂದು ನನಗೆ ತೋರುತ್ತದೆ ಎಂದು ಹೇಳಿದನು.

ವೈಶಂಪಾಯನಃ

ಶರಾರ್ದಿತಾಸ್ತೇ ಯುಧಿ ಪಾಂಡವೇನ
ಪ್ರಸಸ್ರುರನ್ಯೋನ್ಯಮಥಾಹ್ವಯಂತಃ ।
ಕರ್ಣೋಽಬ್ರವೀದಾಪತತ್ಯೇಷ ಜಿಷ್ಣುಃ
ದುರ್ಯೋಧನಂ ಸಂಪರಿವಾರ್ಯ ಯಾಮಃ ॥೪೬॥

ವೈಶಂಪಾಯನ– ಯುದ್ಧದಲ್ಲಿ ಅರ್ಜುನನ ಬಾಣಗಳಿಂದ ಪೀಡಿತರಾದ ಅವರು ಒಬ್ಬರನ್ನೊಬ್ಬರು ಆಹ್ವಾನ ಮಾಡುತ್ತಾ ಚಲಿಸಿದರು. ಈ ಅರ್ಜುನನು ಪುನಃ ನಮ್ಮ ಮೇಲೆ ಬೀಳುತ್ತಾನೆ. ಆದ್ದರಿಂದ ದುರ್ಯೋಧನನನ್ನು ಸುತ್ತುವರಿದು ರಕ್ಷಿಸಿ ನಾವು ಹೋಗೋಣ ಎಂದು ಕರ್ಣನು ಹೇಳಿದನು.

ಸರ್ವಾಸ್ತ್ರವಿದ್ ವಾರಣಯೂಥಪಾಭಃ
ಕಾಲೇ ಪ್ರಕರ್ತಾ ಯುಧಿ ಶಾತ್ರವಾಣಾಮ್ ।
ಅಯಂ ಚ ಪಾರ್ಥಃ ಪುನರಾಗತೋ ನೋ
ಕುಲಂ ಚ ರಕ್ಷ್ಯಂ ಭರತರ್ಷಭಾಣಾಮ್ ॥೪೭॥

ಸರ್ವಾಸ್ತ್ರವೇತ್ತನೂ, ಗಜರಾಜಸದೃಶನಾದವನೂ, ಯುದ್ಧಕಾಲದಲ್ಲಿ ಶತ್ರುಗಳನ್ನು ಕತ್ತರಿಸುವವನೂ ಆದ ಈ ಅರ್ಜುನನು ಪುನಃ ಬರುತ್ತಿದ್ದಾನೆ. ಭರತಶ್ರೇಷ್ಠರ ಕುಲವು ರಕ್ಷಿಸಲ್ಪಡಬೇಕು (ಎಂದು ಕರ್ಣನು ಹೇಳಿದನು).

ವೈಶಂಪಾಯನಃ

ಸಮೀಕ್ಷ್ಯ ಪಾರ್ಥಂ ಸಹಸಾऽಪತಂತಂ
ದುರ್ಯೋಧನಃ ಕಾಲಮಿವಾತ್ತಶಸ್ತ್ರಮ್ ।
ತಥಾರ್ತರೂಪಃ ಶರಣಂ ಪ್ರಪೇದೇ
ದ್ರೋಣಂ ಚ ಕರ್ಣಂ ಚ ಕೃಪಂ ಚ ಭೀಷ್ಮಮ್ ॥೪೮॥

ವೈಶಂಪಾಯನ– ಅರ್ಜುನನು ಕತ್ತಿಯನ್ನು ಹಿಡಿದ ಯಮನಂತೆ ಪುನಃ ತನ್ನ ಮೇಲೆ ವೇಗದಿಂದ ಎರಗುತ್ತಿದ್ದುದನ್ನು ನೋಡಿ ಆರ್ತರೂಪನಾಗಿ ದುರ್ಯೋಧನನು ದ್ರೋಣರನ್ನೂ, ಕರ್ಣನನ್ನೂ, ಕೃಪರನ್ನೂ ಮತ್ತು ಭೀಷ್ಮರನ್ನೂ ಶರಣು ಹೊಂದಿದನು.

ತಂ ಭೀತರೂಪಂ ಶರಣಂ ವ್ರಜಂತಂ
ದುರ್ಯೋಧನಂ ಶತ್ರುಸಹೋ ನಿಷಂಗೀ ।
ಇತ್ಯಬ್ರವೀತ್ ಪ್ರೀತಮನಾಃ ಕಿರೀಟೀ
ಬಾಣೇನ ವಿದ್ಧಂ ರುಧಿರಂ ವಮಂತಮ್ ॥೪೯॥

ಭೀತನಾಗಿ ಶರಣಾಗತನಾಗುತ್ತಿದ್ದಂತಹ, ಬಾಣದಿಂದ ಹೊಡೆಯಲ್ಪಟ್ಟು ರಕ್ತವನ್ನು ಕಾರುತ್ತಿದ್ದಂತಹ, ದುರ್ಯೋಧನನನ್ನು ಕುರಿತು ಶತ್ರುಸಹನೂ, ಖಡ್ಗಕಿರೀಟಧಾರಿಯೂ ಆದ ಅರ್ಜುನನು ಸಂತೋಷಗೊಂಡ ಮನಸ್ಸಿನಿಂದ ಹೀಗೆ ಹೇಳಿದನು.

ವಿಹಾಯ ಕೀರ್ತಿಂ ಚ ಯಶಶ್ಚ ಲೋಕೇ
ಯುದ್ಧಾತ್ ಪರಾವೃತ್ಯ ಪಲಾಯಸೇ ಕಿಮ್ ।
ನ ನಂದಯಿಷ್ಯಂತಿ ತವಾಹತಾನಿ
ತೂರ್ಯಾಣಿ ಯುದ್ಧಾದವರೋಪಿತಸ್ಯ ॥೫೦॥

ಲೋಕದಲ್ಲಿ ಕೀರ್ತಿಯನ್ನೂ ಮತ್ತು ಯಶಸ್ಸನ್ನು ತ್ಯಜಿಸಿ ಯುದ್ಧದಿಂದ ಹಿಂದಿರುಗಿ ಏಕೆ ಓಡುತ್ತಿದ್ದೀಯೆ? ಯುದ್ಧದಿಂದ ಓಡಿಹೋಗುವ ನಿನಗೆ ಚೆನ್ನಾಗಿ ಬಾರಿಸಿದ ವಾದ್ಯಗಳು ಸಂತೋಷವನ್ನು ಕೊಡುವುದಿಲ್ಲ.

ನ ಭೋಕ್ಷ್ಯಸೇ ಸೋಽದ್ಯ ಮಹೀಂ ಸಮಗ್ರಾಂ
ಯಾನಾನಿ ವಸ್ತ್ರಾಣ್ಯಥ ಭೋಜನಾನಿ ।
ಕಲ್ಯಾಣಗಂಧೀನಿ ಚ ಚಂದನಾನಿ
ಯುದ್ಧಾತ್ ಪರಾವೃತ್ಯ ತು ಭೋಕ್ಷ್ಯಸೇ ಕಿಮ್ ॥೫೧॥

ಸುವರ್ಣಮಾಲ್ಯಾನಿ ಚ ಕುಂಡಲಾನಿ
ಹಾರಾಂಶ್ಚ ವೈಡೂರ್ಯಕೃತೋಪಧಾನಮ್ ॥೫೨॥

ಚ್ಯುತಸ್ಯ ಯುದ್ಧಾನ್ನ ತು ಶಂಖಶಬ್ದಾಃ
ತಥಾ ಭವಿಷ್ಯಂತಿ ತವಾದ್ಯ ಪಾಪ ॥೫೩॥

ಅಂತಹ ನೀನು ಈ ದಿನ ಸಮಗ್ರವಾದ ಭೂಮಿಯನ್ನು ಭೋಗಿಸುವುದಿಲ್ಲ. ವಾಹನಗಳನ್ನು, ವಸ್ತ್ರಗಳನ್ನು, ಭೋಜನಗಳನ್ನು, ದಿವ್ಯಗಂಧವುಳ್ಳ ಚಂದನಗಳನ್ನು ಯುದ್ಧದಿಂದ ವಿಮುಖನಾಗಿ ಓಡಿಹೋಗಿ ನೀನು ಭೋಗಿಸುತ್ತೀಯಾ? ಯುದ್ಧದಿಂದ ಹಿಮ್ಮೆಟ್ಟಿದ ನಿನಗೆ ಎಲ್ಲೆ ಪಾಪಿಯೇ, ಸುವರ್ಣಮಾಲೆಗಳಾಗಲೀ, ಕುಂಡಲಗಳಾಗಲೀ, ವೈಡೂರ್ಯಖಚಿತ ಹಾರಗಳಾಗಲೀ, ಶಂಖಶಬ್ದಗಳಾಗಲೀ ಹಿಂದಿನಂತೆ ಈ ದಿನ ಇರುವುದಿಲ್ಲ.

ನ ಭೋಗಹೇತೋರ್ವರಚಂದನಂ ಚ
ಸ್ತ್ರಿಯಶ್ಚ ಮುಖ್ಯಾ ಮಧುರಪ್ರಲಾಪಾಃ ।
ಯುದ್ಧಾತ್ ಪ್ರಯಾತಸ್ಯ ನರೇಂದ್ರಸೂನೋಃ
ಪರೇ ಚ ಲೋಕೇ ಫಲದಾ ನ ಚೇಹ ॥೫೪॥

ಯುದ್ಧದಿಂದ ಹಿಮ್ಮೆಟ್ಟಿದ ರಾಜಕುಮಾರನಿಗೆ ಶ್ರೇಷ್ಠವಾದ ಚಂದನವಾಗಲೀ, ಮಧುರಭಾಷಿಣಿಯರಾದ ಶ್ರೇಷ್ಠ ಸ್ತ್ರೀಯರಾಗಲೀ ಈ ಲೋಕದಲ್ಲಿ ಭೋಗವನ್ನು ಕೊಡುವುದಿಲ್ಲ, ಪರಲೋಕದಲ್ಲಿಯೂ ಫಲವನ್ನು ಕೊಡುವುದಿಲ್ಲ.

ಯುಧಿಷ್ಠಿರಸ್ಯಾಸ್ಮಿ ನಿದೇಶಕಾರೀ
ಪಾರ್ಥಸ್ಯತೀಯೋ ಯುಧಿ ಚ ಸ್ಥಿರೋಽಸ್ಮಿ ।
ತದರ್ಥಮಾಹೃತ್ಯ ಮುಖಂ ಪ್ರಯಚ್ಛ
ನರೇಂದ್ರವೃತ್ತಂ ಸ್ಮರ ಧಾರ್ತರಾಷ್ಟ್ರ ॥೫೫॥

ನಾನು ಯುಧಿಷ್ಠಿರನ ಕಿಂಕರನಾಗಿದ್ದೇನೆ. ಕುಂತಿಯ ಮೂರನೆಯ ಪುತ್ರ. ಯುದ್ಧದಲ್ಲಿ ಸ್ಥಿರವಾಗಿ ನಿಂತಿದ್ದೇನೆ. ಎಲೈ ದುರ್ಯೋಧನನೇ, ರಾಜರ ನಡವಳಿಕೆಯನ್ನು ಗಮನಿಸಿ ಧರ್ಮರಾಜನಿಗೆ ಕೊಡಬೇಕಾದ ಸೈನ್ಯವನ್ನು ಕೊಟ್ಟು ನೀನು ನಿನ್ನ ಮುಖವನ್ನೆತ್ತಿ ನಮ್ಮ ಕಡೆಗೆ ನೋಡು.

ಮೋಘಂ ತವೈತದ್ ಭುವಿ ನಾಮಧೇಯಂ
ದುರ್ಯೋಧನೇತೀಹ ಕೃತಂ ಪುರಸ್ತಾತ್ ।
ದುರ್ಯೋಧನಸ್ತ್ವಂ ಪ್ರಥಿತೋಽಸಿ ನಾಮ್ನಾ
ಸುಯೋಧನಃ ಸನ್ ನಿಕೃತಿಪ್ರಧಾನಃ ॥೫೬॥

ಭೂಮಿಯಲ್ಲಿ ನಿನಗೆ ಮೊದಲು ಮಾಡಿದ ದುರ್ಯೋಧನ ಎಂಬ ನಾಮಕರಣವು ವ್ಯರ್ಥವಾದುದು. (ದುರ್ಯೋಧನ ಎಂದರೆ ಅವನ ಜೊತೆಯಲ್ಲಿ ಯುದ್ಧಮಾಡುವುದು ಕಷ್ಟಸಾಧ್ಯ ಎಂದು ಅರ್ಥ). ಲೋಕದಲ್ಲಿ ದುರ್ಯೋಧನ ಎಂದು ಪ್ರಖ್ಯಾತನಾದ ನೀನು ಮೋಸವೇ ಪ್ರಧಾನವಾಗುಳ್ಳ ಸುಯೋಧನ ಮಾತ್ರ.

ನಹೀಹ ದುರ್ಯೋಧನತಾ ತವಾಸ್ತಿ
ಪಲಾಯಮಾನಸ್ಯ ರಣಂ ವಿಹಾಯ ॥೫೭॥

ನ ತೇ ಪುರಸ್ತಾದಥ ಪೃಷ್ಠತೋಽಪಿ
ಪಶ್ಯಾಮಿ ದುರ್ಯೋಧನ ರಕ್ಷಿತಾರಮ್ ।
ಪರೀಪ್ಸ ಯುದ್ಧೇನ ಕುರುಪ್ರವೀರ
ಪ್ರಾಣಾನ್ ಮಯಾ ಬಾಣಬಲಾಭಿತಪ್ತಾನ್ ॥೫೮॥

ಯುದ್ಧವನ್ನು ಬಿಟ್ಟು ಪಲಾಯನ ಮಾಡುವ ನಿನ್ನಲ್ಲಿ ಇಲ್ಲಿ ಯಾವ ದುರ್ಯೋಧನತ್ವವೂ ಕಾಣುತ್ತಿಲ್ಲ. ನಿನ್ನ ಹಿಂದುಗಡೆಯಾಗಲೀ ಅಥವಾ ಮುಂದಿನಿಂದಾಗಲೀ ಎಲೈ ದುರ್ಯೋಧನನೇ, ನಾನು ಯಾವ ರಕ್ಷಕರನ್ನೂ ನಿನಗೆ ಕಾಣುವುದಿಲ್ಲ. ಎಲೈ ಕುರುಪ್ರವೀರನೇ, ನನ್ನ ಬಾಣದ ಬಲದಿಂದ ತಾಪಕ್ಕೀಡಾದ ನಿನ್ನ ಪ್ರಾಣಗಳನ್ನು ಯುದ್ಧವನ್ನು ಮಾಡಿ ರಕ್ಷಿಸಿಕೊಳ್ಳುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಪಂಚಷಷ್ಟಿತಮೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಅಷ್ಟತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ಅರವತ್ತಾರನೆಯ ಅಧ್ಯಾಯ

ಶತ್ರುಗಳನ್ನು ಗೆದ್ದು ಅವರ ವಸ್ತ್ರಗಳನ್ನು ಅಪಹರಿಸಿ ಅರ್ಜುನನ ಪ್ರತಿನಿವೃತ್ತಿ

ವೈಶಂಪಾಯನಃ

ಆಹೂಯಮಾನಸ್ತು ಸ ತೇನ ಸಂಖೇ
ಮಹಾತ್ಮನಾ ವೈ ಧೃತರಾಷ್ಟ್ರಪುತ್ರಃ ।
ನಿವರ್ತಿತಸ್ತಸ್ಯ ಗಿರಾಂಕುಶೇನ
ಗಜೋ ಯಥಾ ಮತ್ತ ಇವಾಂಕುಶೇನ ॥೧॥

ವೈಶಂಪಾಯನ– ಮಹಾತ್ಮನಾದ ಅರ್ಜುನನಿಂದ ಯುದ್ಧದಲ್ಲಿ ಆಹ್ವಾನ ಮಾಡಲ್ಪಟ್ಟ ಧೃತರಾಷ್ಟ್ರ ಪುತ್ರನು ಮತ್ತಗಜವು ಅಂಕುಶದಿಂದ ಹಿಂದೆ ತಿರುಗುವಂತೆ ಅರ್ಜುನನ ಮಾತಿನಿಂದ ಹಿಂದೆ ತಿರುಗಿದನು.

ಸೋಽಮೃಷ್ಯಮಾಣೋ ವಚಸಾಽಭಿಮೃಷ್ಟೋ
ಮಹಾರಥೇನಾತಿರಥಸ್ತರಸ್ವೀ ।
ತತಃ ಸ ಪರ್ಯಾವವೃತೇ ರಥೇನ
ಭೋಗೀ ಯಥಾ ಪಾದತಳಾಭಿಮೃಷ್ಟಃ ॥೨॥

ಅತಿರಥನೂ, ವೇಗಶಾಲಿಯೂ ಆದ ದುರ್ಯೋಧನನು ಮಹಾರಥನಾದ ಅರ್ಜುನನಿಂದ ಮಾತುಗಳಿಂದ ನಿಂದಿಸಲ್ಪಟ್ಟು ಅದನ್ನು ಸಹಿಸದೇ ಕಾಲಿನಿಂದ ತುಳಿದ ಸರ್ಪವು ಹಿಂದೆ ತಿರುಗುವಂತೆ ರಥದಿಂದ ಹಿಂದಕ್ಕೆ ತಿರುಗಿದನು.

ತತೋ ದುರ್ಯೋಧನಃ ಕ್ರುದ್ಧೋ ವಿಕ್ಷಿಪನ್ ಧನುರುತ್ತಮಮ್ ।
ಧೃತಿಂ ಕೃತ್ವಾ ಸುವಿಪುಲಾಂ ಪ್ರತ್ಯುವಾಚ ಧನಂಜಯಮ್ ॥೩॥

ಆಗ ದುರ್ಯೋಧನನು ಬಹಳ ಕೋಪಗೊಂಡು ತನ್ನ ಧನುಸ್ಸನ್ನು ಎಳೆಯುತ್ತಾ ಮಹಾಧೈರ್ಯವನ್ನು ಮಾಡಿ ಧನಂಜಯನನ್ನು ಕುರಿತು ಹೀಗೆ ಮಾತನಾಡಿದನು.

ನಾಹಮಿಂದ್ರಾದಭಿಕ್ರುದ್ಧಾದ್ ಬಿಭೇಮಿ ಭರತರ್ಷಭ ।
ಭುಕ್ತ್ವಾ ಸುವಿಪುಲಂ ರಾಜ್ಯಂ ವಿತ್ತಾನಿ ಚ ಸುಖಾನಿ ಚ ॥೪॥
ಕಿಮರ್ಥಂ ಯುದ್ಧಸಮಯೇ ಪಲಾಯಿಷ್ಯೇ ನರೋತ್ತಮ ॥೫॥

ಭರತರ್ಷಭನೇ, ನಾನು ಬಹಳ ಕೋಪಗೊಂಡ ಇಂದ್ರನಿಗೂ ಹೆದರುವುದಿಲ್ಲ. ನರೋತ್ತಮನೇ, ಸುವಿಶಾಲವಾದ ರಾಜ್ಯವನ್ನು ಭೋಗಿಸಿ ಸಂಪತ್ತನ್ನು ಮತ್ತು ಸುಖವನ್ನು ಭೋಗಿಸಿ ಯುದ್ಧಸಮಯದಲ್ಲಿ ಏಕೆ ಓಡಿಹೋಗಲಿ?

ವೈಶಂಪಾಯನಃ

ಏವಮುಕ್ತ್ವಾ ಮಹಾಬಾಹುಃ ಪ್ರತ್ಯಯುಧ್ಯತ ಫಲ್ಗುನಮ್ ।
ಸನ್ನಿವೃತ್ಯ ತು ಶೀಘ್ರಾಶ್ವಃ ತೋತ್ರಾರ್ದಿತ ಇವ ದ್ವಿಪಃ ॥೬॥

ವೈಶಂಪಾಯನ– ವೇಗವಾದ ಅಶ್ವಗಳುಳ್ಳ, ಮಹಾಬಾಹುವಾದ ಅವನು ಅಂಕುಶದಿಂದ ಹೊಡೆಯಲ್ಪಟ್ಟ ಗಜದಂತೆ ಹಿಂದಿರುಗಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಆಕ್ರಾಂತಭೋಗಸ್ತೇಜಸ್ವೀ ಧನುರ್ವಕ್ರ ಇವೋರಗಃ ।
ರಥಂ ರಥೇನ ಸಂಗಮ್ಯ ಯೋಧಯಾಮಾಸ ಪಾಂಡವಮ್ ॥೭॥

ಕಾಲಿನಿಂದ ಮೆಟ್ಟಿದ ಮಹಾಸಾಮರ್ಥ್ಯವುಳ್ಳ, ಧನುಸ್ಸಿನಂತೆ ವಕ್ರವಾದ ಉರಗದಂತೆ ಅವನು (ಹಿಂದಕ್ಕೆ ತಿರುಗಿ) ತನ್ನ ರಥದಿಂದ ಅರ್ಜುನನ ರಥವನ್ನು ಸಂಘಟ್ಟಿಸಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತಂ ಪ್ರೇಕ್ಷ್ಯ ಕರ್ಣಃ ಪರಿವರ್ತಮಾನೋ
ವಿವೃತ್ಯ ಸಂಸ್ತಭ್ಯ ಚ ಸರ್ವಗಾತ್ರಮ್ ।
ದುರ್ಯೋಧನಂ ದಕ್ಷಿಣತೋ ರರಕ್ಷ
ಪಾರ್ಥಾನ್ನರವೀರೋ ಯುಧಿ ಹೇಮಮಾಲೀ ॥೮॥

ಅದನ್ನು ನೋಡಿದ ಹಿಂದಿರುಗುತ್ತಿದ್ದ ಕರ್ಣನು ತನ್ನ ಸರ್ವದೇಹವನ್ನೂ ಗಟ್ಟಿ ಮಾಡಿಕೊಂಡು ಪುನಃ ಹಿಂದಿರುಗಿ ನರಶ್ರೇಷ್ಠನೂ, ಹೇಮಮಾಲಿಯೂ ಆದ ಅವನು ಬಲಭಾಗದಿಂದ ದುರ್ಯೋಧನನನ್ನು ಅರ್ಜುನನಿಂದ ರಕ್ಷಿಸಿದನು.

ಭೀಷ್ಮಸ್ತದಾ ಶಾಂತನವೋ ನಿವೃತ್ಯ
ಹಿರಣ್ಯಕಕ್ಷ್ಯಾಂಸ್ತ್ವರಯಂಸ್ತುರಂಗಾನ್ ।
ದುರ್ಯೋಧನಂ ಪಶ್ಚಿಮತೋ ರರಕ್ಷ
ಪಾರ್ಥಾನ್ಮಹಾಬಾಹುರಧಿಜ್ಯಧನ್ವಾ ॥೯॥

ಶಂತನು ಪುತ್ರರಾದ ಭೀಷ್ಮರು ಆಗ ಹಿಂದಿರುಗಿ ಸುವರ್ಣಮಯವಾದ ಕಕ್ಷಗಳಿದ್ದ ತಮ್ಮ ಅಶ್ವಗಳನ್ನು ಚೋದಿಸುತ್ತಾ ಮಹಾಬಾಹುವೂ, ಹೆದೆಯನ್ನೇರಿಸಿ ಧನುಸ್ಸನ್ನು ಹಿಡಿದವನೂ ಆದ ಅವರು ಎಡಬದಿಯಿಂದ ದುರ್ಯೋಧನನನ್ನು ಅರ್ಜುನನಿಂದ ರಕ್ಷಿಸಿದರು.

ದ್ರೋಣಃ ಕೃಪಶ್ಚೈವ ತಥಾ ಚ ದ್ರೌಣಿಃ
ದುಃಶಾಸನಶ್ಚೈವ ನಿವೃತ್ಯ ಶೀಘ್ರಮ್ ।
ಸರ್ವೇ ಪುರಸ್ತಾತ್ ಪ್ರಣಿಧಾಯ ಬಾಣಾನ್
ದುರ್ಯೋಧನಾರ್ಥಂ ತ್ವರಿತಾಽಭ್ಯುಪೇಯುಃ ॥೧೦॥

ದ್ರೋಣ, ಕೃಪ, ಅಶ್ವತ್ಥಾಮ, ದುಃಶಾಸನ ಇವರೆಲ್ಲರೂ ಶೀಘ್ರವಾಗಿ ಹಿಂದಿರುಗಿ ಎಲ್ಲರೂ ಮುಂದೆ ಬಾಣಗಳನ್ನು ಇಟ್ಟುಕೊಂಡು ದುರ್ಯೋಧನನನ್ನು ರಕ್ಷಿಸುವ ಸಲುವಾಗಿ ಶೀಘ್ರವಾಗಿ ಸಮೀಪಕ್ಕೆ ಬಂದರು.

ಸರ್ವಾಣ್ಯನೀಕಾನಿ ನಿವರ್ತಿತಾನಿ
ಸಂಪ್ರೇಕ್ಷ್ಯ ಪೂರ್ಣೌಘನಿಭಾನಿ ಪಾರ್ಥಃ ।
ಹಂಸೋ ಯಥಾ ಮೇಘಮಿವಾಪತಂತಂ
ಧನಂಜಯಃ ಪ್ರತ್ಯಪತತ್ ತರಸ್ವೀ ॥೧೧॥

ಪೂರ್ಣಪ್ರವಾಹದಂತಿರುವ ಎಲ್ಲಾ ಸೈನ್ಯವೂ ಹಿಂದಿರುಗಿದ್ದನ್ನು ನೋಡಿ ವೇಗಶಾಲಿಯೂ, ಕುಂತೀಪುತ್ರನೂ ಆದ ಧನಂಜಯನು ಹಂಸವು ಮೇಘದ ಕಡೆಗೆ ಹಾರುವಂತೆ ಅವರ ಮೇಲೆ ಎರಗಿದನು.

ತೇ ಸರ್ವತಃ ಸಂಪರಿವಾರ್ಯ ಪಾರ್ಥಮ್
ಅಸ್ತ್ರಾಣಿ ದಿವ್ಯಾನಿ ಸಮಾದದಾನಾಃ ।
ವವರ್ಷುರಭ್ಯೇತ್ಯ ಶರೈಃ ಸಮಂತಾತ್
ಮೇಘಾ ಯಥಾ ಭೂಧರಮಂಬುವೇಗೈಃ ॥೧೨॥

ಅವರು ಎಲ್ಲ ಕಡೆಗಳಿಂದಲೂ ಅರ್ಜುನನನ್ನು ಸುತ್ತುವರಿದು ದಿವ್ಯಾಸ್ತ್ರಗಳನ್ನು ಕೈಗೆ ತೆಗೆದುಕೊಂಡು ಮೇಘವು ಪರ್ವತದ ಮೇಲೆ ಮಳೆಯನ್ನು ಸುರಿಸುವಂತೆ ಎಲ್ಲ ಕಡೆಗಳಿಂದಲೂ ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತತೋಽಸ್ತ್ರಮಸ್ತ್ರೇಣ ನಿವಾರ್ಯ ತೇಷಾಂ
ಗಾಂಡೀವಧನ್ವಾ ಕುರುಪುಂಗವಾನಾಮ್ ।

ಸಮ್ಮೋಹನಂ ಶತ್ರುಸಹೋऽನ್ಯದಸ್ತ್ರಂ
ಪ್ರಾದುಶ್ಚಕಾರೈಂದ್ರಮವಾರಣೀಯಮ್ ॥೧೩॥

ಗಾಂಡೀವ ಧನುರ್ಧಾರಿಯಾದ ಅರ್ಜುನನು ಕುರುಶ್ರೇಷ್ಠರ ಅಸ್ತ್ರಗಳನ್ನು ತನ್ನ ಅಸ್ತ್ರದಿಂದ ನಿವಾರಿಸಿ ಇಂದ್ರನಿಂದ ಪಡೆದಿದ್ದ, ನಿವಾರಿಸಲು ಅಸಾಧ್ಯವಾದ, ಶತ್ರುಗಳನ್ನು ಸಹಿಸುವ (ಶತ್ರುಗಳನ್ನು ದಮನಮಾಡುವ) ಸಮ್ಮೋಹನಾಸ್ತ್ರವೆಂಬ ಇನ್ನೊಂದು ಅಸ್ತ್ರವನ್ನು ಹೊರತಂದನು (ಪ್ರಾದುರ್ಭವಿಸಿದನು).

ತತೋ ದಿಶಶ್ಚಾನುದಿಶೋ ನಿವಾರ್ಯ
ಶರೈಃ ಸುಘೋರೈರ್ನಿಶಿತೈಃ ಸುಪುಂಖೈಃ ।
ಗಾಂಡೀವಘೋಷೇಣ ಮನಾಂಸಿ ತೇಷಾಂ
ಮಹಾಬಲಃ ಪ್ರವ್ಯಥಯಾಂಚಕಾರ ॥೧೪॥

ಅನಂತರ ಹರಿತವಾದ, ಉಗ್ರವಾದ, ಪುಂಖಸಹಿತವಾದ ಬಾಣಗಳಿಂದ ದಿಕ್ಕುವಿದಿಕ್ಕುಗಳಲ್ಲಿದ್ದ ಕುರುಯೋಧರನ್ನು ನಿವಾರಿಸಿ ಮಹಾಬಲನಾದ ಅವನು ಗಾಂಡೀವ ಧನುಸ್ಸಿನ ಘೋಷದಿಂದ ಅವರ ಮನಸ್ಸಿಗೆ ವ್ಯಥೆಯನ್ನು ಉಂಟುಮಾಡಿದನು.

ತತಃ ಪುನರ್ಭೀಮರವಂ ಪ್ರಗೃಹ್ಯ
ದೋರ್ಭ್ಯಾಂ ಮುದಾ ಶಂಖಮುದಾರಘೋಷಮ್ ।
ವ್ಯನಾದಯನ್ ಸ ಪ್ರದಿಶೋ ದಿಶಃ ಖಂ
ಭುವಂ ಚ ಪಾರ್ಥೋ ದ್ವಿಷತಾಂ ನಿಹಂತಾ ॥೧೫॥

ಅನಂತರ ಅವನು ಪುನಃ ಭಯಂಕರ ಘೋಷವನ್ನು ಮಾಡುವ ಉದಾರ ಘೋಷವನ್ನುಳ್ಳ ಶಂಖವನ್ನು ಸಂತೋಷದಿಂದ ತನ್ನ ಎರಡು ಕೈಗಳಿಂದಲೂ ಹಿಡಿದು ಶತ್ರುಹಂತಕನಾದ ಅವನು ಭೂಮಿಯನ್ನು, ಅಂತರಿಕ್ಷವನ್ನು, ದಿಕ್ಕುವಿದಿಕ್ಕುಗಳನ್ನು ಶಂಖನಾದದಿಂದ ತುಂಬಿದನು.

ತೇ ಶಂಖಶಬ್ದೇನ ಕುರುಪ್ರವೀರಾಃ
ಸಮ್ಮೋಹಿತಾಃ ಪಾರ್ಥಸಮೀರಿತೇನ ।

ಉತ್ಸೃಜ್ಯ ಚಾಪಾನಿ ದುರಾನಮಾನಿ
ಸರ್ವೇ ತದಾ ಮೋಹಪರಾ ಬಭೂವುಃ ॥೧೬॥

ಕುರುಪ್ರವೀರರು ಅರ್ಜುನನು ಊದಿದ ಆ ಶಂಖದ ಶಬ್ದದಿಂದ ಸಮ್ಮೋಹಿತರಾಗಿ ಬಗ್ಗಿಸಲು ಕಷ್ಟಸಾಧ್ಯವಾದ ತಮ್ಮ ಬಿಲ್ಲುಗಳನ್ನು ಕೆಳಗೆ ಹಾಕಿ ಎಲ್ಲರೂ ಮೋಹ ಪರವಶರಾದರು.

ತಥಾ ವಿಸಂಜ್ಞೇಷು ಪರೇಷು ಪಾರ್ಥಃ
ಸಂಸ್ಮೃತ್ಯ ಸಂದೇಶಮಥೋತ್ತರಾಯಾಃ ।
ನಿರ್ಯಾಹಿ ವಾಹಾನಿತಿ ಮಾತ್ಸ್ಯಪುತ್ರಮ್
ಉವಾಚ ಯಾವತ್ ಕುರವೋ ವಿಸಂಜ್ಞಾಃ ॥೧೭॥

ಶತ್ರುಗಳು ಮೂರ್ಛೆಹೋಗುತ್ತಿರಲು ಅರ್ಜುನನು ಉತ್ತರೆಯ ಸಂದೇಶವನ್ನು ಸ್ಮರಿಸಿ ಉತ್ತರನನ್ನು ಕುರಿತು ಕುರುಗಳು ಮೂರ್ಛೆ ಹೊಂದಿರುವಷ್ಟರಲ್ಲಿ ರಥವನ್ನು ಮುಂದೆ ತೆಗೆದುಕೊಂಡು ಹೋಗು ಎಂದು ಹೇಳಿದನು.

ಆಚಾರ್ಯಶಾರದ್ವತಯೋಃ ಸುಶುಕ್ಲೇ
ಕರ್ಣಸ್ಯ ಪೀತಂ ಸುಚಿರಂ ಸುವಸ್ತ್ರಮ್ ।
ದ್ರೌಣೇಶ್ಚ ರಾಜ್ಞಶ್ಚ ತಥೈವ ನೀಲೇ
ವಸ್ತ್ರೇ ಸಮಾದತ್ಸ್ವ ನರಪ್ರವೀರ ॥೧೮॥

ಎಲೈ ನರಪ್ರವೀರನೇ, ದ್ರೋಣರ ಮತ್ತು ಕೃಪಾಚಾರ್ಯರ ಶುಕ್ಲವಸ್ತ್ರವನ್ನೂ, ಕರ್ಣನ ಮನೋಹರವಾದ ಪೀತವಸ್ತ್ರವನ್ನೂ, ಅಶ್ವತ್ಥಾಮ ಮತ್ತು ದುರ್ಯೋಧನರ ನೀಲವಸ್ತ್ರವನ್ನು ತೆಗೆದುಕೋ.

ಭೀಷ್ಮಸ್ಯ ಸಂಜ್ಞಾಂ ತು ತಥೈವ ಮನ್ಯೇ
ಜಾನಾತಿ ಮೇಽಸ್ತ್ರಪ್ರತಿಘಾತಮೇಷಃ ।
ಏತಸ್ಯ ವಾಹಾನ್ ಕುರು ಸವ್ಯತಸ್ತ್ವಮ್
ಏವಂ ಪ್ರಯಾತವ್ಯಮಮೂಢಸಂಜ್ಞೈಃ ॥೧೯॥

ಭೀಷ್ಮರೊಬ್ಬರು ಎಚ್ಚರವಾಗಿರುತ್ತಾರೆಂದು ನಾನು ತಿಳಿಯುತ್ತೇನೆ. ಅವರೊಬ್ಬರೇ ನನ್ನ ಅಸ್ತ್ರಕ್ಕೆ ಪ್ರತಿಘಾತವನ್ನು ತಿಳಿದವರು. ಅವರ ವಾಹನಗಳನ್ನು ಎಡಕ್ಕೆ ಮಾಡಿಕೊಂಡು ಸಂಜ್ಞೆಯನ್ನು ಕಳೆದುಕೊಳ್ಳದ ನಮ್ಮ ಕುದುರೆಗಳಿಂದ ಮುಂದಕ್ಕೆ ಹೋಗು (ಎಂದು ಹೇಳಿದನು).

ರಶ್ಮೀನ್ ಸಮುತ್ಸೃಜ್ಯ ತತೋ ಮಹಾತ್ಮಾ
ರಥಾದವಪ್ಲುತ್ಯ ವಿರಾಟಪುತ್ರಃ ।
ವಸ್ತ್ರಾಣ್ಯುಪಾದಾಯ ಮಹಾರಥಾನಾಂ
ತೂರ್ಣಂ ಪುನಃ ಸ್ವಂ ರಥಮಾರುರೋಹ ॥೨೦॥

ಆಗ ಮಹಾತ್ಮನಾದ ವಿರಾಟಪುತ್ರನು ಕುದುರೆಯ ಕಡಿವಾಣವನ್ನು ಬಿಟ್ಟು ರಥದಿಂದ ಧುಮುಕಿ ಆ ಮಹಾರಥರ ವಸ್ತ್ರಗಳನ್ನು ತೆಗೆದುಕೊಂಡು ಶೀಘ್ರವಾಗಿ ಪುನಃ ತನ್ನ ರಥವನ್ನು ಏರಿದನು.

ಮಹಾಂತಿ ಚೀನಾಂಶುದುಕೂಲಕಾನಿ
ಪಟ್ಟಾಂಶುಕಾನಿ ವಿವಿಧಾನಿ ಮನೋಜ್ಞಕಾನಿ ।
ಹಾರಾಂಶ್ಚ ರಾಜ್ಞಾಂ ಮಣಿಭೂಷಣಾನಿ
ಸುವರ್ಣನಿಷ್ಕಾಭರಣಾನಿ ಮಾರಿಷ ॥೨೧॥

ಮಾಣಿಕ್ಯಬಾಹ್ವಂಗದಕಂಕಣಾನಿ
ಅನ್ಯಾನಿ ರಾಜ್ಞಾಂ ಮಣಿಭೂಷಣಾನಿ ।
ವಸ್ತ್ರಾಣ್ಯುಪಾದಾಯ ಮಹಾರಥಾನಾಂ
ತೂರ್ಣಂ ಪುನಃ ಸ್ವಂ ರಥಮಾರುರೋಹ ॥೨೨॥

ಎಲೈ ಜನಮೇಜಯನೇ, ಬೆಲೆಬಾಳುವ ಚೀನಾಂಬರಗಳನ್ನೂ, ಮನೋಹರವಾದ ವಿಧವಿಧವಾದ ಪಟ್ಟೆವಸ್ತ್ರಗಳನ್ನೂ, ರಾಜರ ಹಾರಗಳನ್ನೂ, ಮಣಿಭೂಷಣಗಳನ್ನೂ, ಸುವರ್ಣನಿಷ್ಕಾಭರಣಗಳನ್ನೂ, ಮಾಣಿಕ್ಯಖಚಿತವಾದ ಅಂಗದ ಮತ್ತು ಕಂಕಣಗಳನ್ನೂ, ರಾಜರ ಬೇರೆ ಆಭರಣಗಳನ್ನೂ, ಮಹಾರಥರಾದ ಅವರ ವಸ್ತ್ರಗಳನ್ನೂ ತೆಗೆದುಕೊಂಡು ಶೀಘ್ರವಾಗಿ ಪುನಃ ತನ್ನ ರಥವನ್ನು ಏರಿದನು.

ರಾಜ್ಞಶ್ಚ ಸರ್ವಾನ್ ಮೃತಸನ್ನಿಕಾಶಾನ್
ಸಮ್ಮೋಹನಾಸ್ತ್ರೇಣ ವಿಸಂಜ್ಞಕಲ್ಪಾನ್ ।
ನಾಸಾಗ್ರವಿನ್ಯಸ್ತಕರಾಂಗುಲೀಕಃ
ಪಾರ್ಥೋ ಜಹಾಸ ಸ್ಮಯಮಾನಚೇತಾಃ ॥೨೩॥

ರಾಜರೆಲ್ಲರೂ ತನ್ನ ಸಮ್ಮೋಹನಾಸ್ತ್ರದಿಂದ ಸಂಜ್ಞೆಯನ್ನು ಕಳೆದುಕೊಂಡು ಮೃತರಂತೆ ಇರುವುದನ್ನು ನೋಡಿ ಅರ್ಜುನನು ಮನಸ್ಸಿನಲ್ಲಿಯೇ ನಗುತ್ತಾ ತನ್ನ ಮೂಗಿನ ಮೇಲೆ ಬೆರಳನ್ನಿಟ್ಟುನಕ್ಕನು.

ತತೋಽನ್ವಶಾತ್ ತಾಂಶ್ಚತುರಃ ಸದಶ್ವಾನ್
ಪುತ್ರೋ ವಿರಾಟಸ್ಯ ಹಿರಣ್ಯಕಕ್ಷಾನ್ ।
ತೇ ತದ್ ವ್ಯತೀಯುರ್ದ್ವಿಷತಾಮನೀಕಂ
ಶ್ವೇತಾ ವಹಂತೋಽರ್ಜುನಮಾಜಿಮಧ್ಯಾತ್ ॥೨೪॥

ಅನಂತರ ವಿರಾಟಪುತ್ರನು ಹಿರಣ್ಯಕಕ್ಷಗಳನ್ನು ಹೊಂದಿದ್ದ ಆ ನಾಲ್ಕು ಕುದುರೆಗಳನ್ನು ಪ್ರಚೋದಿಸಿದನು. ಆ ಶ್ವೇತಾಶ್ವಗಳು ಅರ್ಜುನನನ್ನು ರಣರಂಗದಿಂದ ಹೊರಗೆ ಕರೆದುಕೊಂಡು ಹೋಗುತ್ತಾ ಶತ್ರುಗಳ ಸೈನ್ಯವನ್ನು ದಾಟಿ ಮುಂದೆ ನಡೆದವು.

ತತಃ ಪ್ರಯಾಂತಂ ಪುರುಷಪ್ರವೀರಂ
ಭೀಷ್ಮಃ ಶರೈರಭ್ಯಹನತ್ ತರಸ್ವೀ ।
ಸ ಚಾಪಿ ಭೀಷ್ಮಸ್ಯ ಹಯಾನ್ ನಿಹತ್ಯ
ವಿವ್ಯಾಧ ಪಾರ್ಥೋ ದಶಭಿಃ ಪೃಷತ್ಕೈಃ ॥೨೫॥

ಪುರುಷಪ್ರವೀರನಾದ ಅರ್ಜುನನು ಹಾಗೆ ಹೋಗುತ್ತಿರಲು ವೇಗಶಾಲಿಯಾದ ಭೀಷ್ಮರು ಬಾಣಗಳಿಂದ ಅವನನ್ನು ಹೊಡೆದರು. ಅರ್ಜುನನಾದರೂ ಭೀಷ್ಮರ ಅಶ್ವಗಳನ್ನು ಸಂಹರಿಸಿ ಹತ್ತು ಬಾಣಗಳಿಂದ ಅವರನ್ನು ಹೊಡೆದನು.

ತತೋಽರ್ಜುನೋ ಭೀಷ್ಮಮಪಾಸ್ಯ ಯುದ್ಧೇ
ವಿದ್ಧ್ವಾಽಸ್ಯ ಯಂತಾರಮಧಿಜ್ಯಧನ್ವಾ ।
ತಸ್ಥೌ ವಿಮುಕ್ತೋ ರಥವೃಂದಮಧ್ಯಾದ್
ರಾಹುಂ ವಿದಾರ್ಯೇವ ಸಹಸ್ರರಶ್ಮಿಃ ॥೨೬॥

ಅನಂತರ ಹೆದೆಯೇರಿಸಿದ ಧನುಸ್ಸುಳ್ಳ ಅರ್ಜುನನು ಯುದ್ಧದಲ್ಲಿ ಭೀಷ್ಮರನ್ನು ಬಿಟ್ಟು ಯುದ್ಧದಲ್ಲಿ ಅವರ ಸಾರಥಿಗೆ ಹೊಡೆದು, ರಾಹುವನ್ನು ಭೇದಿಸಿ ಮುಕ್ತನಾದ ಸಹಸ್ರರಶ್ಮಿಯಾದ ಸೂರ್ಯನಂತೆ, ರಥವ್ಯಂದದ ಮಧ್ಯದಲ್ಲಿ ರಣದಿಂದ ವಿಮುಕ್ತನಾಗಿ ನಿಂತನು.

ಲಬ್ಧ್ವಾ ತು ಸಂಜ್ಞಾಂ ಪುರುಷಪ್ರವೀರಃ
ಪಾರ್ಥಂ ಸಮೀಕ್ಷ್ಯಾಥ ಮಹೇಂದ್ರಕಲ್ಪಮ್ ।
ರಣಾದ್ ವಿಮುಕ್ತಂ ಸ್ಥಿತಮೇಕಮಾಜೌ
ಸ ಧಾರ್ತರಾಷ್ಟ್ರಸ್ತ್ವರಿತೋ ಬಭಾಷೇ ॥೨೭॥

ಅಯಂ ಕಥಂಸ್ವಿದ್ ಭವತೋ ವಿಮುಕ್ತಃ
ತಂ ವೈ ಪ್ರಬಧ್ನೀತ ಯಥಾ ನ ಮುಚ್ಯೇತ್ ॥೨೮॥

ಪುರುಷಪ್ರವೀರನಾದ ದುರ್ಯೋಧನನು ಪುನಃ ಸಂಜ್ಞೆಯನ್ನು ಪಡೆದು ಮಹೇಂದ್ರಸದೃಶನಾದ ಅರ್ಜುನನು ರಣದಿಂದ ವೃತ್ತನಾಗಿರುವುದನ್ನು ನೋಡಿ ಅರ್ಜುನನು ಯುದ್ಧದಲ್ಲಿ ಒಬ್ಬನೇ ಇರುವುದನ್ನು ನೋಡಿ ಶೀಘ್ರವಾಗಿ ಇವನು ಹೇಗೋ ನಮ್ಮಿಂದ ಬಿಡಿಸಿಕೊಂಡಿದ್ದಾನೆ. ಅವನು ನಿರ್ಮುಕ್ತನಾಗದಂತೆ ಅವನನ್ನು ಬಂಧಿಸಿ ಎಂದು ಹೇಳಿದನು.

ವೈಶಂಪಾಯನಃ

ತಮಬ್ರವೀತ್ ಶಾಂತನವಃ ಪ್ರವೀಕ್ಷ್ಯ
ಕ್ವ ತೇ ಗತಾ ಬುದ್ಧಿರಭೂತ್ ಕ್ವ ವೀರ್ಯಮ್ ।
ಶಾಂತಿಂ ಸಮಾಸಾದ್ಯ ಯಥಾ ಸ್ಥಿತಸ್ತ್ವಮ್
ಉತ್ಸೃಜ್ಯ ಬಾಣಾಂಶ್ಚ ಧನುಶ್ಚ ಚಿತ್ರಮ್ ॥೨೯॥

ವೈಶಂಪಾಯನ– ಭೀಷ್ಮರು ಅವನನ್ನು ನೋಡಿ ಅವನನ್ನು ಕುರಿತು ನಿನ್ನ ಬುದ್ಧಿಯೂ ನಿನ್ನ ಪರಾಕ್ರಮವೂ ಎಲ್ಲಿಗೆ ಹೋಗಿದ್ದಿತು? ಬಾಣಗಳನ್ನು ಮತ್ತು ನಿನ್ನ ವಿಚಿತ್ರವಾದ ಧನುಸ್ಸನ್ನು ಬಿಟ್ಟು ಭ್ರಾಂತಿಯನ್ನು ಹೊಂದಿ ನೀನು ಕುಳಿತಿದ್ದೆಯಷ್ಟೆ ಎಂದು ಕೇಳಿದರು.

ನ ತ್ವೇವ ಬೀಭತ್ಸುರಲಂ ನೃಶಂಸಂ
ಕರ್ತುಂ ನ ಪಾಪೇಷು ಮನೋ ನಿವಿಷ್ಟಮ್ ।
ಜಹ್ಯಾನ್ನ ಧರ್ಮಂ ತ್ರಿದಿವಸ್ಯ ಹೇತೋಃ
ಸರ್ವೇ ತು ತಸ್ಮಾನ್ನ ಹತಾ ರಣೇಽಸ್ಮಿನ್ ॥೩೦॥

ಅರ್ಜುನನು ಪಾಪಿಷ್ಠರ ವಿಷಯದಲ್ಲಿಯೂ ಕೂಡ ಕ್ರೂರಕರ್ಮವನ್ನು ಮಾಡಲು ಮನಸ್ಸಿನಲ್ಲಿ ಬಯಸುವುದಿಲ್ಲ. ಸ್ವರ್ಗದ ಪ್ರಾಪ್ತಿಯ ಸಲುವಾಗಿಯೂ ಸಹ ಅವನು ಅಧರ್ಮವನ್ನು ಬಿಡುವವನಲ್ಲ. ಆದ್ದರಿಂದ ಈ ಯುದ್ಧದಲ್ಲಿ ನಾವೆಲ್ಲರೂ ಹತರಾಗಿಲ್ಲ.

ಕ್ಷಿಪ್ರಂ ಕುರೂನ್ ಯಾಹಿ ಕುರುಪ್ರವೀರ
ವಿಜಿತ್ಯ ಗಾಶ್ಚ ಪ್ರತಿಯಾತು ಪಾರ್ಥಃ ॥೩೧॥

ಎಲೈ ಕುರುಪ್ರವೀರನೇ, ಬೇಗ ಕುರುದೇಶಕ್ಕೆ ಹಿಂದಿರುಗು. ಅರ್ಜುನನು ಗೋವುಗಳನ್ನು ಜಯಿಸಿ ವಿರಾಟನಗರಕ್ಕೆ ಹೋಗಲಿ.

ಸಮ್ಮೋಹನಾಸ್ತ್ರಪ್ರತಿಮೋಹಿತಾಃ ಸ್ಥ
ಯೂಯಂ ನ ಜಾನೀತ ಧನಾಪಹಾರಮ್ ।
ಪಶ್ಯಾಮಿ ವಸ್ತ್ರಾಭರಣಾನಿ ರಾಜನ್
ವಿರಾಟಪುತ್ರೇಣ ಸಮಾಹೃತಾನಿ ॥೩೨॥

ನೀವೆಲ್ಲರೂ ಸಮ್ಮೋಹನಾಸ್ತ್ರದಿಂದ ಮೋಹಿತರಾಗಿ ಅವನು ಗೋಸಂಪತ್ತನ್ನು ತೆಗೆದುಕೊಳ್ಳುವುದನ್ನು ತಿಳಿಯಲಿಲ್ಲ. ರಾಜನೇ, ವಿರಾಟಪುತ್ರನಾದ ಉತ್ತರನು ವಸ್ತ್ರಾಭರಣಗಳನ್ನು ತೆಗೆದುಕೊಳ್ಳುತ್ತಿದ್ದನ್ನು ನಾನು ನೋಡಿದೆನು.

ನೃಪೇಷು ಸರ್ವೇಷು ಚ ಮೋಹಿತೇಷು
ಹಂತುಂ ಯದೀಚ್ಛೇತ್ ಸ ಹನಿಷ್ಯತೀತಿ ।
ತದಾ ತು ಧರ್ಮಾತ್ಮತಯಾ ನೃವೀರೋ
ನ ಚಾಹನದ್ ವೋ ಬಲಭಿತ್ತನೂಜಃ ॥೩೩॥

ಎಲ್ಲ ರಾಜರೂ ಮೂರ್ಛಿತರಾದಾಗ ಅವನು ಕೊಲ್ಲಲು ಇಷ್ಟಪಟ್ಟಿದ್ದರೆ ಹೀಗೆಯೇ ಕೊಲ್ಲಬಹುದಾಗಿದ್ದಿತು. ಆದರೆ ಇಂದ್ರನ ಪುತ್ರನಾದ ನರಶ್ರೇಷ್ಠನಾದ ಅವನು ಧರ್ಮಾತ್ಮನಾದುದರಿಂದ ನಿಮ್ಮನ್ನು ಕೊಲ್ಲಲಿಲ್ಲ.

ಭಾಗ್ಯೇನ ಯುಷ್ಮಾನವಧೀನ್ನ ಪಾರ್ಥಃ
ಸಂಧಿಂ ಕುರೂಣಾಮನುಮನ್ಯಮಾನಃ ।
ತದ್ ಯಾತ ಯೂಯಂ ಸಹ ಸೈನಿಕೈಸ್ತೈಃ
ಹತಾವಶಿಷ್ಟೈರ್ಗಜಸಾಹ್ವಯಂ ಪುರಮ್ ॥೩೪॥

ನಿಮ್ಮ ಅದೃಷ್ಟದಿಂದ ಕುರುಗಳ ಜೊತೆಯಲ್ಲಿ ಸಂಧಿಯನ್ನು ಬಯಸುವವನಾಗಿ ಅರ್ಜುನನು ನಿಮ್ಮನ್ನು ಕೊಲ್ಲಲಿಲ್ಲ. ಆದ್ದರಿಂದ ನೀವು ಅಳಿದುಳಿದ ಸೈನಿಕರ ಜೊತೆಯಲ್ಲಿ ಹಸ್ತಿನಪುರಕ್ಕೆ ಹಿಂದಿರುಗಿ (ಎಂದು ಹೇಳಿದರು).

ದುರ್ಯೋಧನಸ್ತಸ್ಯ ತು ತನ್ನಿಶಮ್ಯ
ಪಿತಾಮಹಸ್ಯಾತ್ಮಹಿತಂ ವಚೋಽಥ ।
ಅಪ್ರಾಪ್ತಕಾಮೋ ಯುಧಿ ಸೋಽತ್ಯಮರ್ಷೀ
ರಾಜಾ ವಿನಿಃಶ್ವಸ್ಯ ಬಭೂವ ತೂಷ್ಣೀಮ್ ॥೩೫॥

ಬಹಳ ಕೋಪಸ್ವಭಾವದವನಾದ ದುರ್ಯೋಧನನು ಪಿತಾಮಹರ ಆತ್ಮಹಿತವಾದ ಆ ಮಾತುಗಳನ್ನು ಕೇಳಿ ಯುದ್ಧದಲ್ಲಿ ತನ್ನ ಮನೋರಥವು ಪೂರ್ಣವಾಗದೆ ನಿಟ್ಟುಸಿರನ್ನು ಬಿಟ್ಟು ಸುಮ್ಮನಾದನು.

ತಾನ್ ಪ್ರಸ್ಥಿತಾನ್ ಪ್ರೀತಮನಾಃ ಸ ಪಾರ್ಥೋ
ಧನಂಜಯಃ ಸರ್ವಕುರುಪ್ರವೀರಾನ್ ।
ಆಮಂತ್ರ್ಯ ವೀರೋಽನುಯಯೌ ಮುಹೂರ್ತಂ
ಗಾಂಡೀವಘೋಷೇಣ ವಿನಾದ್ಯ ಲೋಕಮ್ ॥೩೬॥

ಅರ್ಜುನನು ಒಂದು ಮುಹೂರ್ತದ ಕಾಲ ಗಾಂಡೀವ ಘೋಷದಿಂದ ಲೋಕಗಳನ್ನು ಪ್ರತಿಧ್ವನಿಸುವಂತೆ ಮಾಡಿ ಸಂತೋಷಗೊಂಡ ಮನಸ್ಸುಳ್ಳವನಾಗಿ ಹಿಂದೆ ಹೋಗುತ್ತಿದ್ದ ಎಲ್ಲಾ ಕುರುವೀರರನ್ನು ಆಮಂತ್ರಿಸಿ ವೀರನಾದ ಅವನು ಹೊರಟನು.

ತೇಷಾಮನೀಕಾನಿ ನಿರೀಕ್ಷ್ಯ ಪಾರ್ಥೋ
ವಿಶೀರ್ಣತೂರ್ಯಧ್ವಜಕಾರ್ಮುಕಾನಿ ।
ಗಾಂಡೀವಧನ್ವಾ ಪ್ರವರಃ ಕುರೂಣಾಂ
ಶಂಖಂ ಪ್ರದಧ್ಮೌ ಬಲವಾನ್ ಬಲೇನ ॥೩೭॥

ಗಾಂಡೀವ ಧನ್ವಿಯಾದ ಕುರುಕುಲದ ಪ್ರವರನಾದ ಅರ್ಜುನನು ಅವರ ಸೈನ್ಯಗಳ ತೂರ್ಯಧ್ವಜಕಾರ್ಮುಕಗಳು ಕತ್ತರಿಸಲ್ಪಟ್ಟಿರುವುದನ್ನು ನೋಡಿ ಬಲಿಷ್ಠನಾದ ಅವನು ತನ್ನ ಬಲದಿಂದ ಶಂಖವನ್ನು ಊದಿದನು.

ತೇ ಶಂಖಶಬ್ದಂ ತುಮುಲಂ ನಿಶಮ್ಯ
ಧ್ವಜಸ್ಯ ಶ್ರುತ್ವಾ ನದತೋಽಂತರಿಕ್ಷೇ ।
ಗಾಂಡೀವಶಬ್ದೇನ ಮುಹುರ್ಮುಹುಸ್ತೇ
ಭೀತಾ ಯಯುಃ ಸರ್ವಧನಂ ವಿಹಾಯ ॥೩೮॥

ಅವರು ತೀವ್ರವಾದ ಶಂಖಶಬ್ದವನ್ನೂ ಮತ್ತು ಅಂತರಿಕ್ಷದಲ್ಲಿ ಪ್ರತಿಧ್ವನಿಸುವ ಧ್ವಜವಾಸಿಯಾದ ಕಪಿಯ ಗರ್ಜನೆಯನ್ನೂ ಕೇಳುತ್ತಾ ಗಾಂಡೀವ ಧನುಸ್ಸಿನ ಶಬ್ದದಿಂದ ಮತ್ತೆ ಮತ್ತೆ ಭೀತರಾಗಿ ತಮ್ಮ ಎಲ್ಲಾ ಧನವನ್ನೂ ಮತ್ತು ವಿರಾಟನ ಗೋಧನವನ್ನೂ ಬಿಟ್ಟು ಹಿಂದಕ್ಕೆ ಹೋದರು.

ತತೋಽರ್ಜುನೋ ದೂರತರಂ ಪ್ರಭಜ್ಯ
ಧನಂ ಚ ಸರ್ವಂ ನಿಖಿಲಂ ನಿವರ್ತ್ಯ ।
ಆಪೃಚ್ಛ್ಯ ತಾನ್ ದೂರತರಂ ಪ್ರಯಾತ್ವಾ
ಧನಂಜಯಸ್ತತ್ರ ಕುರೂನ್ ಮಹಾತ್ಮಾ ॥೩೯॥

ಕುರೂಂಶ್ಚ ಸರ್ವಾನಭಿವಾದ್ಯ ಬಾಣೈಃ
ನ್ಯವರ್ತತೋದಗ್ರಮನಾಃ ಶರೈಃ ಸಃ ॥೪೦॥

ಅನಂತರ ಅರ್ಜುನನು ದೂರಪ್ರಯಾಣವನ್ನು ಮಾಡಿ ವಿರಾಟನ ಗೋಧನವನ್ನೆಲ್ಲಾ ಹಿಂದಿರುಗಿಸಿ ಅವರ ಅನುಮತಿಯನ್ನು ಪಡೆದು ಅಲ್ಪದೂರ ಹೋಗಿ ಮಹಾತ್ಮನಾದ ಅವನು ಎಲ್ಲ ಕುರುಶ್ರೇಷ್ಠರನ್ನು ತನ್ನ ಬಾಣಗಳಿಂದ ನಮಸ್ಕರಿಸಿ ಉನ್ನತವಾದ ಮನಸ್ಸನ್ನು ಹೊಂದಿದವನಾಗಿ ಹಿಂದಿರುಗಿದನು.

ಪಿತಾಮಹಂ ಶಾಂತನವಂ ಮಹಾತ್ಮಾ
ದ್ವಾಭ್ಯಾಂ ಶರಾಭ್ಯಾಮಭಿವಾದ್ಯ ವೀರಃ ।
ದ್ರೋಣಂ ಕೃಪಂ ಚೈವ ಕುರೂಂಶ್ಚ ಮಾನ್ಯಾನ್
ಶರೈರ್ವಿಚಿತ್ರೈರಭಿವಾದ್ಯ ಸಂಖೇ ॥೪೧॥

ದುರ್ಯೋಧನಸ್ಯೋತ್ತಮರತ್ನಚಿತ್ರಂ
ಚಿಚ್ಛೇದ ಪಾರ್ಥೋ ಮಕುಟಂ ಶರೌಘೈಃ ॥೪೨॥

ವೀರನಾದ ಅವನು ಮಹಾತ್ಮರಾದ ಶಂತನುಪುತ್ರರಾದ ಪಿತಾಮಹರಾದ ಭೀಷ್ಮರನ್ನು ಎರಡು ಬಾಣಗಳಿಂದ ನಮಸ್ಕರಿಸಿ, ದ್ರೋಣ, ಕೃಪ ಮತ್ತು ಮಾನ್ಯರಾದ ಕುರುಗಳನ್ನು ಯುದ್ಧದಲ್ಲಿ ವಿಚಿತ್ರವಾದ ಬಾಣಗಳಿಂದ ನಮಸ್ಕರಿಸಿ; ದುರ್ಯೋಧನನ ತಲೆಯ ಮೇಲಿದ್ದ ಕಿರೀಟವನ್ನು ತನ್ನ ಬಾಣಗಳಿಂದ ಕೆಳಗೆ ಉರುಳಿಸಿದನು.

ಧನಂಜಯಂ ನಾಗಮಿವ ಪ್ರಭಿನ್ನಂ
ವಿಸೃಜ್ಯ ಶತ್ರೂನ್ ಪರಿವರ್ತಮಾನಮ್ ।
ಗಾಸ್ತಾ ವಿಜಿತ್ಯಾಭಿಮುಖಂ ಪ್ರಯಾಂತಂ
ನಾಶಕ್ನುವಂಸ್ತೇ ಕುರವೋಽಭಿಸರ್ತುಮ್ ॥೪೩॥

ಗೋಧನವನ್ನು ಜಯಿಸಿ ಶತ್ರುಗಳನ್ನು ಬಿಟ್ಟು ಮದಭಿನ್ನವಾದ ಗಜದಂತೆ ಹಿಂದಿರುಗಿ ಹೋಗುತ್ತಿದ್ದ ಧನಂಜಯನನ್ನು ಸಮೀಪಿಸಲು ಕುರುಗಳಿಗೆ ಸಾಧ್ಯವಾಗಲಿಲ್ಲ.

ಧನಂಜಯಂ ಸಿಂಹಮಿವಾತ್ತಶಸ್ತ್ರಂ
ಗಾ ವೈ ವಿಜಿತ್ಯಾಭಿಮುಖಂ ಪ್ರಯಾಂತಮ್ ।
ಉದೀಕ್ಷಿತುಂ ಪಾರ್ಥಿವಾಸ್ತೇ ನ ಶೇಕುಃ
ಯಥೈವ ಮಧ್ಯಾಹ್ನಗತಂ ತು ಸೂರ್ಯಮ್ ॥೪೪॥

ಗೋವುಗಳನ್ನು ಗೆದ್ದು ನಗರಕ್ಕೆ ಅಭಿಮುಖವಾಗಿ ಕೈಯಲ್ಲಿ ಶಸ್ತ್ರವನ್ನು ಹಿಡಿದು ಸಿಂಹದಂತೆ ಹಿಂದಿರುಗುತ್ತಿದ್ದ ಧನಂಜಯನನ್ನು ಆ ರಾಜರು ಮಧ್ಯಾಹ್ನಗತನಾದ ಸೂರ್ಯನಂತೆ ನೋಡಲೂ ಸಮರ್ಥರಾಗಲಿಲ್ಲ.

ರತ್ನಾನಿ ವಾಸಾಂಸಿ ಚ ತಾನಿ ಗೃಹ್ಯ
ರಣೋತ್ಕಟೋ ನಾಗ ಇವ ಪ್ರಭಿನ್ನಃ ।
ಜಿತ್ವಾ ಚ ವೈರಾಟಮುವಾಚ ಪಾರ್ಥಃ
ಪ್ರಹೃಷ್ಟರೂಪೋ ರಥಿನಾಂ ವರಿಷ್ಠಃ ॥೪೫॥

ರಥಿಕರಲ್ಲಿ ಶ್ರೇಷ್ಠನಾದ, ರಣೋತ್ಕಟನಾದ ಅರ್ಜುನನು ಮದಿಸಿದ ಗಜದಂತೆ ರತ್ನಗಳನ್ನೂ, ಆ ವಸ್ತ್ರಗಳನ್ನೂ ತೆಗೆದುಕೊಂಡು ಸಂತೋಷಗೊಂಡವನಾಗಿ ಉತ್ತರನನ್ನು ಕುರಿತು ಹೇಳಿದನು.

ಆವರ್ತಯಾಶ್ವಾನ್ ಪಶವೋ ಜಿತಾಸ್ತೇ
ಯಾತಾಃ ಪರೇ ಪ್ರೈಹಿ ಪುರಂ ಪ್ರವೇಷ್ಟುಮ್ ।
ಉದ್ಘುಷ್ಯತಾಂ ತೇ ವಿಜಯೋಽದ್ಯ ಶೀಘ್ರಂ
ಗಾತ್ರಂ ತು ತೇ ಸೇವತು ಗಂಧಮಾಲ್ಯಮ್ ॥೪೬॥

ನಿನ್ನ ಗೋವುಗಳು ವಿಚಿತ್ರವಾಗಿವೆ. ಅಶ್ವಗಳನ್ನು ಹಿಂದಿರುಗಿಸು. ಶತ್ರುಗಳು ಹಿಂದೆ ಹೋಗಿದ್ದಾರೆ. ನಿನ್ನ ಪುರಪ್ರವೇಶವನ್ನು ಮಾಡಲು ಹೊರಡು. ನಿನ್ನ ವಿಜಯವು ಶೀಘ್ರವಾಗಿ ಘೋಷಿಸಲ್ಪಡಲಿ. ನಿನ್ನ ದೇಹವು ಗಂಧಮಾಲ್ಯಗಳಿಂದ ಸೇವಿತವಾಗಲಿ.

ಮಾತಾ ತು ತೇ ನಂದತು ಬಾಂಧವಾಶ್ಚ
ತ್ವಾಮದ್ಯ ದೃಷ್ಟ್ವಾ ಸಮುದೀರ್ಣಹರ್ಷಮ್ ॥೪೭॥

ಬಹಳ ಹರ್ಷದಿಂದ ಕೂಡಿರುವ ನಿನ್ನನ್ನು ನೋಡಿ ನಿನ್ನ ತಾಯಿಯೂ ಮತ್ತು ಬಾಂಧವರೂ ಸಂತೋಷಪಡಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಷಟ್‌ಷಷ್ಟಿತಮೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಏಕೋನಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ಅರವತ್ತೇಳನೆಯ ಅಧ್ಯಾಯ

ಅರ್ಜುನನಿಂದ ಪುನಃ ಷಂಡವೇಷ ಸ್ವೀಕಾರ. ನಗರದಲ್ಲಿ ಉತ್ತರನ ಜಯವನ್ನು ಘೋಷಿಸುವಂತೆ ಒತ್ತಾಯ.

ವೈಶಂಪಾಯನಃ

ತತೋ ವಿಜಿತ್ಯ ಸಂಗ್ರಾಮೇ ಕುರೂನ್ ಗೋವೃಷಭೇಕ್ಷಣಃ ।
ಸಮಾನಯಾಮಾಸ ತದಾ ವಿರಾಟಸ್ಯ ಧನಂ ಮಹತ್ ॥೧॥

ವೈಶಂಪಾಯನ– ಅನಂತರ ಗೋವೃಷಭೇಕ್ಷಣನಾದ ಅರ್ಜುನನು ಯುದ್ಧದಲ್ಲಿ ಕುರುಗಳನ್ನು ಗೆದ್ದು ವಿರಾಟನ ದೊಡ್ಡ ಗೋಧನವನ್ನು ಹಿಂದಿರುಗಿಸಿದನು.

ಗತೇಷು ಚ ಪ್ರಭಗ್ನೇಷು ಧಾರ್ತರಾಷ್ಟ್ರೇಷು ಸರ್ವಶಃ ।
ವನಾನ್ನಿಷ್ಕ್ರಮ್ಯ ಗಹನಾದ್ ಬಹವಃ ಕುರುಸೈನಿಕಾಃ ॥೨॥

ಭಯಾತ್ ಸಂತ್ರಸ್ತಮನಸಃ ಸಮಾಜಗ್ಮುಸ್ತತಸ್ತತಃ ॥೩॥

ಧೃತರಾಷ್ಟ್ರ ಪುತ್ರರೆಲ್ಲರೂ ಯುದ್ಧದಲ್ಲಿ ಪ್ರಭಗ್ನರಾಗಿ ಹೊರಟು ಹೋಗುತ್ತಿರಲು ಅನೇಕ ಕುರುಸೈನಿಕರು ಭಯದಿಂದ ನಡುಗುವ ಮನಸ್ಸುಳ್ಳವರಾಗಿ ದಟ್ಟವಾದ ಕಾಡಿನಿಂದ ಅಲ್ಲಲ್ಲಿ ಹೊರಗೆ ಬಂದು ಒಟ್ಟು ಸೇರಿದರು.

ಮುಕ್ತಕೇಶಾಃ ಪ್ರದೃಶ್ಯಂತ ಸ್ಥಿತಾಃ ಪ್ರಾಂಜಲಯಸ್ತದಾ ।
ಕ್ಷುತ್ತೃಷ್ಣಾಪರಿಶ್ರಾಂತಾ ವಿದೇಶಸ್ಥಾ ವಿಚೇತಸಃ ॥೪॥

ಊಚುಃ ಪ್ರಾಂಜಲಯಃ ಸರ್ವೇ ಬ್ರೂಹಿ ಕಿಂ ಕರವಾಮಹೇ ॥೫॥

ಪ್ರಾಣಾನಂತರ್ಮನೋಯಾತಾನ್ ಪ್ರಯಾಚಿಷ್ಯಾಮಹೇ ವಯಮ್ ।
ವಯಂ ಚಾರ್ಜುನ ತೇ ದಾಸಾ ಹ್ಯನುರಕ್ಯಾ ಹ್ಯನಾಥಕಾಃ ॥೬॥

ಅವರು ತಲೆಯನ್ನು ಕೆದರಿಕೊಂಡು ಹಸಿವು ಬಾಯಾರಿಕೆಗಳಿಂದ ಬಳಲಿದವರಾಗಿ ವಿಚೇತಸರಾಗಿ ಎಲ್ಲರೂ ಕೈಗಳನ್ನು ಮುಗಿದು ಅರ್ಜುನನನ್ನು ಕುರಿತು ನಾವು ಏನು ಮಾಡೋಣ ಎಂದು ಹೇಳು. ಮನಸ್ಸಿನ ಒಳಗೇ ಪ್ರವೇಶಿಸಿದ ನಮ್ಮ ಪ್ರಾಣಗಳನ್ನು ನಾವು ಪುನಃ ಬೇಡುತ್ತಿದ್ದೇವೆ. ಅರ್ಜುನನೇ, ನಾವು ನಿಮ್ಮ ದಾಸರು ಮತ್ತು ಅನಾಥರು. ನೀನು ನಮ್ಮನ್ನು ರಕ್ಷಿಸಬೇಕು ಎಂದು ಹೇಳಿದರು.

ಅರ್ಜುನಃ

ಅನಾಥಾನ್ ದುಃಖಿತಾನ್ ದೀನಾನ್ ಕೃಶಾನ್ ವೃದ್ಧಾನ್ ಪರಾಜಿತಾನ್।
ನ್ಯಸ್ತಶಸ್ತ್ರಾನ್ ನಿರಾಶಾಂಶ್ಚ ನಾಹಂ ಹನ್ಮಿ ಕೃತಾಂಜಲೀನ್ ॥೭॥

ಅರ್ಜುನ– ಅನಾಥರನ್ನೂ, ದುಃಖಿತರನ್ನೂ, ದೀನರನ್ನೂ, ಕೃಶರನ್ನೂ, ವೃದ್ಧರನ್ನೂ, ಪರಾಜಿತರನ್ನೂ, ಶಸ್ತ್ರಸಂನ್ಯಾಸ ಮಾಡಿದವರನ್ನೂ, ನಿರಾಶರನ್ನೂ ಮತ್ತು ಕೈಮುಗಿದವರನ್ನೂ ನಾನು ಕೊಲ್ಲುವುದಿಲ್ಲ.

ಭವಂತೋ ಯಾಂತು ವಿಸ್ರಬ್ಧಾ ನಿರ್ಭಯಾ ಹ್ಯಕುತೋಭಯಾಃ ।
ಮಮ ಪಾದರಜೋರಕ್ಷ್ಯಾ ಜೀವಂತು ಸುಚಿರಂ ಭುವಿ ॥೮॥

ನೀವು ಯಾವ ಭಯವೂ ಇಲ್ಲದೆ ವಿಶ್ವಾಸದಿಂದ ಹಿಂದಿರುಗಿ. ನನ್ನ ಪಾದಧೂಳಿಯಿಂದ ರಕ್ಷಿಸಲ್ಪಟ್ಟವರಾಗಿ ಭೂಮಿಯಲ್ಲಿ ಬಹುಕಾಲ ಬದುಕಿ.

ವೈಶಂಪಾಯನಃ

ತಸ್ಯ ತಾಮಭಯಾಂ ವಾಚಂ ಶ್ರುತ್ವಾ ಯೋಧಾಃ ಸಮಾಗತಾಃ ।
ಆಯುಃಕೀರ್ತಿಯಶೋಭಿಸ್ತೇ ತಮಾಶೀರ್ಭಿರಪೂಜಯತ್ ॥೯॥

ವೈಶಂಪಾಯನ– ಅಲ್ಲಿ ಸಮಾಗತರಾಗಿದ್ದ ಯೋಧರು ಅವನ ಅಭಯ ವಾಣಿಯನ್ನು ಕೇಳಿ ಅರ್ಜುನನಿಗೆ ಆಯುಸ್ಸು, ಕೀರ್ತಿ ಮತ್ತು ಯಶಸ್ಸುಗಳನ್ನು ಆಶಂಸಿಸಿ ಅವನನ್ನು ಸನ್ಮಾನಿಸಿದರು.

ಸ ಕರ್ಮ ಕೃತ್ವಾ ಪರಮಾರ್ಯಕರ್ಮಾ
ನಿಹತ್ಯ ಶತ್ರೂನ್ ದ್ವಿಷತಾಂ ನಿಹಂತಾ ।
ಯಾತೋ ಮಹಾಮೇಘ ಇವಾತಪಾಂತೇ
ವಿದ್ರಾವ್ಯ ಪಾರ್ಥಃ ಕುರುಸೈನ್ಯಮೇಕಃ ॥೧೦॥

ಪರಮ ಉದಾರಕಾರ್ಯವನ್ನು ಮಾಡುವ ಶತ್ರುಸಂಹಾರಕನಾದ ಅರ್ಜುನನು ಒಬ್ಬನೇ ಶತ್ರುಗಳನ್ನು ಕೊಂದು ಇನ್ನು ಉಳಿದ ಸೈನ್ಯವನ್ನು ಚದುರಿಸಿ ಬೇಸಿಗೆಯ ಕೊನೆಯಲ್ಲಿ ಬರುವ ಮಹಾಮೇಘದಂತೆ ಹಿಂದಿರುಗಿದನು.

ತಂ ಮಾತ್ಸ್ಯಪುತ್ರಂ ದ್ವಿಷತಾಂ ನಿಹಂತಾ
ವಚೋಽಬ್ರವೀತ್ ಸಂಪರಿಗೃಹ್ಯ ರಾಜನ್ ॥೧೧॥

ಪಿತುಃಸಕಾಶೇ ತವ ತಾತ ಸರ್ವೇ
ವಸಂತಿ ಪಾರ್ಥಾ ವಿದಿತಂ ತ್ವಯೇತಿ ।
ತಾನ್ ಮಾ ಸ್ಮ ಶಂಸೀರ್ನಗರಂ ಪ್ರವಿಶ್ಯ
ಭೀತಃ ಪ್ರಣಶ್ಯೇತ್ ಸ ಚ ಮತ್ಸ್ಯರಾಜಃ ॥೧೨॥

ಎಲೈ ರಾಜನೇ, ಶತ್ರುಸಂಹಾರಕನಾದ ಅವನು ವಿರಾಟನ ಮಗನಾದ ಉತ್ತರನನ್ನು ಕುರಿತು ಪ್ರೀತಿಪಾತ್ರನೇ, ನಿನ್ನ ತಂದೆಯ ಸಮೀಪದಲ್ಲಿ ಎಲ್ಲ ಪಾಂಡವರೂ ವಾಸ ಮಾಡುತ್ತಿದ್ದಾರೆ ಎಂಬುದು ಈಗ ನಿನಗೆ ಹೀಗೆ ತಿಳಿದಿದೆ. ನೀನು ನಗರವನ್ನು ಪ್ರವೇಶಿಸಿ ಅದನ್ನು ನಿನ್ನ ತಂದೆಗೆ ಹೇಳಬೇಡ. ಅದನ್ನು ಕೇಳಿದರೆ ಮತ್ಸ್ಯರಾಜನು ಭಯದಿಂದ ನಾಶವನ್ನು ಹೊಂದಿಯಾನು!

ಮಯಾ ಜಿತಾ ಸಾ ಧ್ವಜಿನೀ ಕುರೂಣಾಂ
ಮಯಾ ಹಿ ಗಾವೋ ವಿಜಿತಾ ದ್ವಿಷದ್ಭ್ಯಃ ।
ಏವಂ ತು ಕಾಮಂ ನಗರಂ ಪ್ರವಿಶ್ಯ
ತ್ವಮಾತ್ಮನಾ ಕರ್ಮ ಕೃತಂ ಬ್ರವೀಹಿ ॥೧೩॥

ನಾನೇ ಕುರುಗಳ ಸೈನ್ಯವನ್ನು ಗೆದ್ದೆನು. ನಾನೇ ಶತ್ರುಗಳಿಂದ ಗೋವುಗಳನ್ನು ಬಿಡಿಸಿದೆನು. ಹೀಗೆ ನಗರವನ್ನು ಪ್ರವೇಶಿಸಿ ನೀನು ನಿನ್ನಿಂದಲೇ ಎಲ್ಲ ಕಾರ್ಯವೂ ನಡೆಯಿತೆಂದು ಹೇಳುವವನಾಗು.

ಉತ್ತರಃ

ಯತ್ ತೇ ಕೃತಂ ಕರ್ಮ ನವಾರಣೀಯಂ
ತತ್ಕರ್ಮ ಕರ್ತುಂ ನ ಮಮಾಸ್ತಿ ಶಕ್ತಿಃ ।
ನ ತ್ವಾಂ ಪ್ರವಕ್ಷ್ಯಾಮಿ ಪಿತುಃಸಕಾಶೇ
ಯಾವನ್ನ ಮಾಂ ವಕ್ಷ್ಯಸಿ ಸವ್ಯಸಾಚಿನ್ ॥೧೪॥

ಉತ್ತರ– ಇನ್ನೊಬ್ಬರು ನಿವಾರಿಸಲು ಸಾಧ್ಯವಾಗದ ನೀನು ಮಾಡುವ ಕರ್ಮವನ್ನು ಮಾಡಲು ನನಗೆ ಶಕ್ತಿಯಿಲ್ಲ. ಸವ್ಯಸಾಚಿಯೇ, ನೀನು ಹೇಳುವವರೆಗೆ (ಅನುಮತಿ ಕೊಡುವವರೆಗೆ) ತಂದೆಯ ಹತ್ತಿರ ನಿನ್ನನ್ನು ಹೇಳುವುದಿಲ್ಲ (ನೀನು ಜಯಿಸಿದೆ ಎಂದು ಹೇಳುವುದಿಲ್ಲ).

ವೈಶಂಪಾಯನಃ

ಸ ಶತ್ರುಸೇನಾಂ ತರಸಾ ವಿಜಿತ್ಯ
ಆಚ್ಛಿದ್ಯ ಸರ್ವಂ ಚ ಧನಂ ಕುರೂಣಾಮ್ ।
ಶ್ಮಶಾನಮಾಗಮ್ಯ ಪುನಃ ಶಮೀಂ ತಾಮ್
ಆಭ್ಯೇತ್ಯ ತಸ್ಥೌ ಶರವಿಕ್ಷತಾಂಗಃ ॥೧೫॥

ವೈಶಂಪಾಯನ– ಅರ್ಜುನನು ಶತ್ರುಸೈನ್ಯವನ್ನು ತನ್ನ ವೇಗದಿಂದ ಸೋಲಿಸಿ ಕುರುಗಳ ಕೈ ಸೇರಿದ ಗೋಧನವನ್ನು ಅವರಿಂದ ಬಿಡಿಸಿ ಪುನಃ ಸ್ಮಶಾನದ ಸಮೀಪಕ್ಕೆ ಬಂದು ಆ ಶಮೀವೃಕ್ಷವನ್ನು ಸಮೀಪಿಸಿ ದೇಹವೆಲ್ಲಾ ಗಾಯದಿಂದ ಕೂಡಿದ ಅವನು ನಿಂತನು.

ತತಃ ಸ ವಹ್ನಿಪ್ರತಿಮೋ ಮಹಾಕಪಿಃ
ಸಹೈವ ಭೂತೈರ್ದಿವಮುತ್ಪಪಾತ ।
ತಥೈವ ಮಾಯಾ ವಿಹಿತಾ ಬಭೂವ
ಧ್ವಜಂ ಚ ಸಿಂಹಂ ಯುಯುಜೇ ರಥೇ ಪುನಃ ॥೧೬॥

ಆಗ ಅಗ್ನಿಯಂತೆ ಜ್ವಲಿಸುತ್ತಿದ್ದ ಮಹಾಕಪಿಯು ಧ್ವಜದಲ್ಲಿದ್ದ ಇತರ ಭೂತಗಳೊಂದಿಗೆ ಆಕಾಶಕ್ಕೆ ಹಾರಿಹೋಯಿತು. ಧ್ವಜವು ಅಂತಹ ಶಕ್ತಿಯುಳ್ಳದ್ದಾಗಿಯೇ ರೂಪುಗೊಂಡಿದ್ದಿತು. ಅರ್ಜುನನು ಪುನಃ ತಾನು ಮೊದಲು ನಗರದಿಂದ ತೆಗೆದುಕೊಂಡು ಬಂದಿದ್ದ ಧ್ವಜವನ್ನೂ ಮತ್ತು ಸಿಂಹ ಚಿಹ್ನೆಯನ್ನೂ ರಥದಲ್ಲಿ ಜೋಡಿಸಿದನು.

ನಿಧಾಯ ತಚ್ಚಾಯುಧಮಾಜಿಮರ್ದನಃ
ಕುರೂತ್ತಮಾನಾಮಿಷುಧೀನ್ ಧ್ವಜಾಂಸ್ತದಾ ।
ಪ್ರಾಯಾತ್ ಸ ಮಾತ್ಸ್ಯೇ ನಗರಂ ಪ್ರವೇಷ್ಟುಂ
ಕಿರೀಟಿನಾ ಸಾರಥಿನಾ ಮಹಾತ್ಮಾ ॥೧೭॥

ಯುದ್ಧದಲ್ಲಿ ಶತ್ರುಮರ್ದನನಾದ ಉತ್ತರನು ಕುರುಶ್ರೇಷ್ಠರ ಬತ್ತಳಿಕೆ, ಧ್ವಜ ಮುಂತಾದವುಗಳನ್ನು ಮೊದಲಿನಂತೆಯೇ ಶಮೀವೃಕ್ಷದಲ್ಲಿಯೇ ಇಟ್ಟು ಸಾರಥಿಯಾದ ಅರ್ಜುನನ ಜೊತೆಯಲ್ಲಿ ಮಹಾತ್ಮನಾದ ಅವನು ನಗರವನ್ನು ಪ್ರವೇಶಿಸಲು ಹೊರಟನು.

ಪಾರ್ಥಶ್ಚ ಕೃತ್ವಾ ಪರಮಾರ್ಯಕರ್ಮ
ನಿಹತ್ಯ ಶತ್ರೂನ್ ದ್ವಿಷತಾಂ ನಿಹಂತಾ ।
ವಿಧಾಯ ಭೂಯಶ್ಚ ತಥೈವ ವೇಷಂ
ಜಗ್ರಾಹ ರಶ್ಮೀನ್ ಪುನರುತ್ತರಸ್ಯ ॥೧೮॥

ಬೃಹನ್ನಳಾವೇಷಮಥೋ ವಿಧಾಯ
ಪ್ರಾಯಾತ್ ಸ ಮಾತ್ಸ್ಯಂ ನಗರಂ ಪ್ರವೇಷ್ಟುಮ್ ॥೧೯॥

ಶತ್ರುಸಂಹಾರಕನಾದ ಅರ್ಜುನನಾದರೂ ಶ್ರೇಷ್ಠವಾದ ಉದಾತ್ತಕರ್ಮವನ್ನು ಮಾಡಿ, ಶತ್ರುಗಳನ್ನು ಸಂಹರಿಸಿ ಮೊದಲಿನಂತೆಯೇ ನಪುಂಸಕವೇಷವನ್ನು ಧರಿಸಿ ಉತ್ತರನ ಕುದುರೆಗಳ ಕಡಿವಾಣಗಳನ್ನು ಹಿಡಿದನು. ಅವನು ಬೃಹನ್ನಳೆಯ ವೇಷವನ್ನು ಧರಿಸಿ ವಿರಾಟನ ರಾಜಧಾನಿಯನ್ನು ಪ್ರವೇಶಿಸಲು ಹೊರಟನು.

ಯಥಾಮಾರ್ಗಂ ಚ ದುಃಖಾರ್ತಾ ಜಗ್ಮುಸ್ತೇ ಹೃತವಾಸಸಃ ॥೨೦॥

ಯತೋ ನಿವೃತ್ತಾಃ ಕುರವಃ ಪ್ರಭಗ್ನಾ ಶಮಮಾಸ್ಥಿತಾಃ ॥೨೧॥

ತಮ್ಮ ವಸ್ತ್ರಗಳನ್ನು ಕಳೆದುಕೊಂಡು ದುಃಖಾರ್ತರಾಗಿದ್ದ ಕುರುಗಳು ಯುದ್ಧದಲ್ಲಿ ಪ್ರಭಗ್ನರಾಗಿ ಶಾಂತಿಯನ್ನು ವಹಿಸಿ ಬಂದದಾರಿಯಲ್ಲಿಯೇ ಹಿಂದಿರುಗಿದರು.

ಅರ್ಜುನಃ

ರಾಜಪುತ್ರ ಪ್ರಪದ್ಯಸ್ವ ಸಮಾನೀತಾನಿ ಸರ್ವಶಃ ।
ಗೋಕುಲಾನಿ ಮಹಾಬಾಹೋ ವೀರ ಗೋಪಾಲಕೈಃ ಸಹ ॥೨೨॥

ಅರ್ಜುನ– ರಾಜಪುತ್ರನೇ, ಮಹಾಬಾಹುವೇ, ವೀರನೇ, ಹಿಂದಿರುಗಿಸಿದ ಈ ಗೋಧನವನ್ನು ಗೋಪಾಲಕರ ಜೊತೆಯಲ್ಲಿ ನೀನು ಸ್ವೀಕರಿಸು.

ತತೋಽಪರಾಹ್ಣೇ ಯಾಸ್ಯಾಮೋ ವಿರಾಟನಗರಂ ಪ್ರತಿ ।
ಆಶ್ವಾಸ್ಯ ಪಾಯಯಿತ್ವಾ ಚ ಪರಿಪ್ಲಾವ್ಯ ಚ ವಾಜಿನಃ ॥೨೩॥

ಅನಂತರ ಕುದುರೆಗಳಿಗೆ ವಿಶ್ರಾಂತಿಯನ್ನು ಕೊಟ್ಟು ಅವುಗಳಿಗೆ ಸ್ನಾನವನ್ನು ಮಾಡಿಸಿ ಅಪರಾಹ್ಣದಲ್ಲಿ ವಿರಾಟನಗರವನ್ನು ಪ್ರವೇಶಿಸೋಣ.

ಗಚ್ಛಂತು ತ್ವರಿತಂ ದೂತಾ ಗೋಪಾಲಾಃ ಪ್ರೇಷಿತಾಸ್ತ್ವಯಾ ।
ನಗರೇ ಪ್ರಿಯಮಾಖ್ಯಾತುಂ ಘೋಷಯಂತು ಚ ತೇ ಜಯಮ್ ॥೨೪॥

ದೂತರಾದ ಗೋಪಾಲಕರು ನಿನ್ನಿಂದ ಕಳುಹಿಸಲ್ಪಟ್ಟು ಶೀಘ್ರವಾಗಿ ರಾಜನಿಗೆ ಪ್ರಿಯವಾರ್ತೆಯನ್ನು ಹೇಳಲು ನಗರಕ್ಕೆ ಹೋಗಿ ನಿನ್ನ ಜಯವನ್ನು ಘೋಷಿಸಲಿ (ಎಂದು ಹೇಳಿದನು).

ವೈಶಂಪಾಯನಃ

ಉತ್ತರಸ್ತ್ವರಮಾಣೋಽಥ ದೂತಾನಾಜ್ಞಾಪಯತ್ ತದಾ ।
ವಚನಾದರ್ಜುನಸ್ಯೈವ ವ್ಯಾಚಕ್ಷಧ್ವಂ ಜಯಂ ಮಮ ॥೨೫॥

ವೈಶಂಪಾಯನ– ಉತ್ತರನು ಶೀಘ್ರವಾಗಿ ಆಗ ದೂತರಿಗೆ ಅರ್ಜುನನ ಮಾತಿನಂತೆಯೇ ನಗರದಲ್ಲಿ ನನ್ನ ಜಯವನ್ನು ಘೋಷಿಸಿ ಎಂದು ಆಜ್ಞೆ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಸಪ್ತಷಷ್ಟಿತಮೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ವಿಧಾಯ ಭೀಷ್ಮಂ ವಿರಥಂ ಜಗಾಮ
ತದಾ ಶ್ರುತ್ವಾ ಮತ್ಸ್ಯಪತಿರ್ಜಿತಾನ್ ಕುರೂನ್ ।
ಮುಮೋದ ಪುತ್ರೇಣ ಜಿತಾ ಇತಿ ಸ್ಮ
ತದಾಽಽಹ ಷಂಡೇನ ಜಿತಾನ್ ಯುಧಿಷ್ಠಿರಃ ॥೪೫॥

ಅರ್ಜುನ ಭೀಷ್ಮನನ್ನು ವಿರಥನನ್ನಾಗಿ ಮಾಡಿ ಹಿಂತಿರುಗಿದ, ವಿರಾಟರಾಜ ಕೌರವರು ಪರಾಜಿತರಾದುದನ್ನು ಕೇಳಿ ತನ್ನ ಮಗನಿಂದಲೇ ಅವರು ಪರಾಜಿತರಾದರೆಂದುಕೊಂಡು ಹಿಗ್ಗಿದ. ಆಗ ಯುಧಿಷ್ಠಿರನೆಂದ, 'ಕೌರವರು ಬೃಹನ್ನಳೆಯಿಂದ ಪರಾಜಿತರಾದರು'.

ತದಾ ಕ್ರುದ್ಧಃ ಪ್ರಾಹರತ್ ತಂ ವಿರಾಟಃ
ಸೋಽಕ್ಷೇಣ ತದ್ ಭೀಮಧನಂಜಯಾಭ್ಯಾಮ್ ।
ಶ್ರುತಂ ತದಾ ಕುಪಿತೌ ತೌ ನಿಶಾಮ್ಯ
ನ್ಯವಾರಯತ್ ತಾವಪಿ ಧರ್ಮಸೂನುಃ ॥೪೬॥

ಆಗ ವಿರಾಟರಾಜ ಕೋಪಗೊಂಡು ಲೆತ್ತದಿಂದ ಧರ್ಮರಾಜನನ್ನು ಹೊಡೆದ. ಇದನ್ನು ಭೀಮಾರ್ಜುನರು ಕೇಳಿದರು. ಕುಪಿತರಾದರು. ಧರ್ಮರಾಜ ನೋಡಿ ಅವರನ್ನು ತಡೆದ.

ನಿಜಸ್ವರೂಪೇಣ ಸಮಾಸ್ಥಿತಾನ್ ನೋ
ಯದಿ ಸ್ಮ ನಾಸೌ ಪ್ರಣಿಪಾತಪೂರ್ವಕಮ್ ।
ಕ್ಷಮಾಪಯೇದ್ ವಧ್ಯ ಇತ್ಯಾತ್ಮರೂಪಂ
ಸಮಾಸ್ಥಿತಾಸ್ತಸ್ಥುರಥಾಪರೇ ದಿನೇ ॥೪೭॥

ನಿಜರೂಪದಿಂದ ನಾವು ಕುಳಿತಾಗ ವಿರಾಟ ನಮಗೆ ತಲೆಬಾಗಿ ಕ್ಷಮೆ ಕೇಳದಿದ್ದರೆ ಆಗ ವಧಾರ್ಹನೆನಿಸುತ್ತಾನೆ ಎಂದ ಧರ್ಮರಾಜ. ಮರುದಿನ ಪಾಂಡವರು ನಿಜರೂಪ ತಳೆದುನಿಂತರು.

★ ★ ★ ★

ಅರವತ್ತೆಂಟನೆಯ ಅಧ್ಯಾಯ

ಉತ್ತರನ ವಿಜಯ ವಿಷಯದಲ್ಲಿ ಕಂಕ-ವಿರಾಟರ ವಿವಾದ. ವಿರಾಟನಿಂದ ತಾಡಿತನಾದ ಕಂಕನ ಮುಖದಿಂದ ರಕ್ತಸ್ರಾವ. ಸೈರಂಧ್ರಿಯಿಂದ ತನ್ನ ಉತ್ತರೀಯದಲ್ಲಿ ರಕ್ತಗ್ರಹಣ.

ವೈಶಂಪಾಯನಃ

ಅವಜಿತ್ಯ ಧನಂ ಚೈವ ವಿರಾಟೋ ವಾಹಿನೀಪತಿಃ ।
ಪ್ರಾವಿಶನ್ನಗರಂ ಹೃಷ್ಟಶ್ಚತುರ್ಭಿಃ ಸಹ ಪಾಂಡವೈಃ ॥೧॥

ವೈಶಂಪಾಯನ– ಸೇನಾನಾಯಕನಾದ ವಿರಾಟನು (ದಕ್ಷಿಣದಿಕ್ಕಿನಲ್ಲಿ) ತನ್ನ ಗೋಧನವನ್ನು ಜಯಿಸಿ (ಇನ್ನೊಂದು ದಿಕ್ಕಿನಿಂದ ಬಂದ) ನಾಲ್ಕು ಜನ ಪಾಂಡವರ ಜೊತೆಯಲ್ಲಿ ಸಂತೋಷದಿಂದ ನಗರವನ್ನು ಪ್ರವೇಶಿಸಿದನು.

ಜಿತ್ವಾ ತ್ರಿಗರ್ತಾನ್ ಸಂಗ್ರಾಮೇ ಗಾಶ್ಚೈವಾನಾಯ್ಯ ಕೇವಲಾಃ ।
ಅಶೋಭತ ಮಹಾರಾಜಃ ಸಹ ಪಾರ್ಥೈಃ ಶ್ರಿಯಾ ವೃತಃ ॥೨॥

ಮಹಾರಾಜನಾದ ಅವನು ಯುದ್ಧದಲ್ಲಿ ತ್ರಿಗರ್ತರನ್ನು ಗೆದ್ದು ತನ್ನ ಗೋವುಗಳನ್ನು ತೆಗೆದುಕೊಂಡು ಬಂದು ತನ್ನ ಸಂಪತ್ತಿನಿಂದ ಒಡಗೂಡಿ ಪಾಂಡವರ ಜೊತೆಯಲ್ಲಿ ಶೋಭಿಸಿದನು.

ತಮಾಸನಗತಂ ವೀರಂ ಸುಹೃದಾಂ ನಂದವರ್ಧನಮ್ ।
ಉಪತಸ್ಥುಃ ಪ್ರಕೃತಯಃ ಸಮಸ್ತಾ ಬ್ರಾಹ್ಮಣೈಃ ಸಹ ॥೩॥

ತನ್ನ ಆಸನದಲ್ಲಿ ಕುಳಿತಿದ್ದ ಸುಹೃದರ ಸಂತೋಷವರ್ಧನನಾದ ಆ ವೀರನನ್ನು ಎಲ್ಲಾ ಪ್ರಜೆಗಳು ಬ್ರಾಹ್ಮಣರ ಜೊತೆಯಲ್ಲಿ ಸ್ತೋತ್ರ ಮಾಡಿದರು.

ಸಭಾಜಿತಃ ಸ ತಾಭಿಸ್ತು ಪ್ರತಿನಂದ್ಯ ಸ ಮತ್ಸ್ಯರಾಟ್ ।
ವಿಸರ್ಜಯಾಮಾಸ ತದಾ ದ್ವಿಜಾಂಶ್ಚ ಪ್ರಕೃತೀಸ್ತದಾ ॥೪॥

ಅವರಿಂದ ಪೂಜಿತನಾದ ಮತ್ಸ್ಯರಾಜನು ಆಗ ಆ ಬ್ರಾಹ್ಮಣರನ್ನೂ ಮತ್ತು ಪ್ರಜೆಗಳನ್ನೂ ಅಭಿನಂದಿಸಿ ಅವರನ್ನು ಕಳುಹಿಸಿಕೊಟ್ಟನು.

ತತಃ ಸ ರಾಜಾ ಮತ್ಸ್ಯಾನಾಂ ವಿರಾಟೋ ವಾಹಿನೀಪತಿಃ ।
ಉತ್ತರಂ ಪರಿಪಪ್ರಚ್ಛ ಕ್ವ ಯಾತ ಇತಿ ಚಾಬ್ರವೀತ್ ॥೫॥

ಅನಂತರ ಮತ್ಸ್ಯರ ನಾಯಕರಾದ ವಿರಾಟರಾಜನು ಉತ್ತರನ ವಿಷಯದಲ್ಲಿ ಅವನು ಎಲ್ಲಿ ಹೋಗಿದ್ದಾನೆ ಎಂದು ಪ್ರಶ್ನೆಯನ್ನು ಮಾಡಿದನು.

ಆಚಖ್ಯುಸ್ತತ್ರ ಸಂಹೃಷ್ಟಾಃ ಸ್ತ್ರಿಯಃ ಕನ್ಯಾಶ್ಚ ವೇಶ್ಮನಿ ।
ಅಂತಃಪುರಚರಾಶ್ಚೈವ ಕುರುಭಿರ್ಗೋಧನಂ ಹೃತಮ್ ॥೬॥

ತಾನ್ ಜೇತುಮತಿಸಂರಬ್ಧ ಏಕ ಏವಾತಿಸಾಹಸಾತ್ ।
ಬೃಹನ್ನಳಾಸಹಾಯಶ್ಚ ನಿರ್ಯಾತಃ ಪೃಥಿವೀಂಜಯಃ ॥೭॥

ಉಪಾಯಾತಾನತಿರಥಾನ್ ದ್ರೋಣಂ ಶಾಂತನವಂ ಕೃಪಮ್ ।
ಕರ್ಣಂ ದುರ್ಯೋಧನಂ ಚೈವ ದ್ರೋಣಪುತ್ರಂ ಚ ಷಡ್ರಥಾನ್ ॥೮॥

ಆಗ ಹಿರಿಯರೂ, ಕನ್ಯೆಯರೂ ಮತ್ತು ಅಂತಃಪುರದಲ್ಲಿ ಇದ್ದ ಸೇವಕರೂ ಸಹ ಕುರುಗಳಿಂದ ಗೋಧನವು ಅಪಹೃತವಾಯಿತು. ಅವರನ್ನು ಗೆಲ್ಲಲು ಒಬ್ಬನೇ ಬಹಳ ಕೋಪಗೊಂಡು, ಬಹಳ ಸಾಹಸದಿಂದ ಬೃಹನ್ನಳೆಯನ್ನು ಸಹಾಯವಾಗಿ ತೆಗೆದುಕೊಂಡು ಭೂಮಿಂಜಯನು ಹೊರಟನು. ಯುದ್ಧಮಾಡಲು ಬಂದ ಅತಿರಥರಾದ ದ್ರೋಣ, ಭೀಷ್ಮ, ಕೃಪ, ಕರ್ಣ, ದುರ್ಯೋಧನ ಮತ್ತು ಅಶ್ವತ್ಥಾಮ ಈ ಷಡ್ರಥರ ಜೊತೆಯಲ್ಲಿ (ಯುದ್ಧಮಾಡಲು ಹೋಗಿದ್ದಾನೆ) ಎಂದು ಹೇಳಿದರು.

ತತೋ ವಿರಾಟಃ ಪರಮಾಭಿತಪ್ತಃ
ಪುತ್ರಂ ನಿಶಮ್ಯೈಕರಥೇನ ಯಾತಮ್ ।
ಬೃಹನ್ನಳಾಸಾರಥಿಮಾಜಿಮರ್ದನಂ
ಪ್ರೋವಾಚ ಸರ್ವಾನಥ ಮಂತ್ರಿಮುಖ್ಯಾನ್ ॥೯॥

ಆಗ ವಿರಾಟನು ಅರಿಮರ್ದನನಾದ ತನ್ನ ಪುತ್ರನು ಬೃಹನ್ನಳೆಯನ್ನು ಸಾರಥಿಯನ್ನಾಗಿ ಮಾಡಿಕೊಂಡು ಏಕರಥದಿಂದ ಹೋಗಿದ್ದಾನೆಂದು ಕೇಳಿ ಬಹಳ ದುಃಖದಿಂದ ಕೂಡಿದವನಾಗಿ ಎಲ್ಲಾ ಮಂತ್ರಿಶ್ರೇಷ್ಠರನ್ನು ಕುರಿತು ಹೀಗೆ ಹೇಳಿದನು.

ಗವಾಂ ಶತಸಹಸ್ರಾಣಿ ಅಭಿಭೂಯ ಮಮಾತ್ಮಜಮ್ ।
ಕುರವಃ ಕಾಲಯಂತಿ ಸ್ಮ ಸರ್ವೇ ಯುದ್ಧವಿಶಾರದಾಃ ॥೧೦॥

ಯುದ್ಧವಿಶಾರದರಾದ ಎಲ್ಲಾ ಕೌರವರೂ ನನ್ನ ಪುತ್ರನನ್ನು ಪರಾಭವಗೊಳಿಸಿ ನನ್ನ ಲಕ್ಷಾಂತರ ಗೋವುಗಳನ್ನು ಧೂಳೀಪಟ ಮಾಡುತ್ತಿದ್ದಾರೆ.

ತಸ್ಮಾದ್ ಗಚ್ಛಂತು ಮೇ ಯೋಧಾ ಬಲೇನ ಮಹತಾ ವೃತಾಃ ।
ಉತ್ತರಸ್ಯ ಪರೀಪ್ಸಾರ್ಥಂ ಯೇ ತ್ರಿಗರ್ತೈರವಿಕ್ಷತಾಃ ॥೧೧॥

ಆದ್ದರಿಂದ ತ್ರಿಗರ್ತರ ಜೊತೆಯ ಯುದ್ಧದಲ್ಲಿ ಗಾಯಗೊಳ್ಳದ ನನ್ನ ಯೋಧರೆಲ್ಲರೂ ದೊಡ್ಡ ಸೈನ್ಯವನ್ನು ತೆಗೆದುಕೊಂಡು ಉತ್ತರನನ್ನು ರಕ್ಷಿಸಲು ಹೋಗಲಿ.

ವೈಶಂಪಾಯನಃ

ಹಯಾಂಶ್ಚ ನಾಗಾಂಶ್ಚ ರಥಾಂಶ್ಚ ಶೀಘ್ರಂ
ವಾದಿತ್ರಸಂಘಾಂಶ್ಚ ತತಃ ಪ್ರಭೂತಾನ್ ।
ಪ್ರಸ್ಥಾಪಯಾಮಾಸ ಸುತಸ್ಯ ಹೇತೋಃ
ವಿಚಿತ್ರವಸ್ತ್ರಾಭರಣೋಪಪನ್ನಮ್ ॥೧೨॥

ವೈಶಂಪಾಯನ– ಆಗ ವಿರಾಟನು ಅಶ್ವಗಳನ್ನೂ, ಗಜಗಳನ್ನೂ, ರಥಗಳನ್ನೂ ಬಹಳವಾದ ವಾದ್ಯಸಮೂಹಗಳನ್ನೂ ವಿಚಿತ್ರವಸ್ತ್ರಾಭರಣಗಳಿಂದ ಅಲಂಕೃತವಾದುದನ್ನಾಗಿ ಮಾಡಿ ಪುತ್ರನ ರಕ್ಷಣೆಯ ಸಲುವಾಗಿ ಶೀಘ್ರವಾಗಿ ಕಳುಹಿಸಿಕೊಟ್ಟನು.

ಏವಂ ಸ ರಾಜಾ ಮತ್ಸ್ಯಾನಾಂ ಮಹಾನಕ್ಷೌಹಿಣೀಪತಿಃ ।
ವ್ಯಾದಿದೇಶಾಥ ಸ ಕ್ಷಿಪ್ರಂ ವಾಹಿನೀಂ ಚತುರಂಗಿಣೀಮ್ ॥೧೩॥

ಹೀಗೆ ಮತ್ಸ್ಯರ ದೊಡ್ಡ ಅಕ್ಷೌಹಿಣೀ ಸೇನೆಯ ಅಧಿಪತಿಯಾದ ವಿರಾಟರಾಜನು ಶೀಘ್ರವಾಗಿ ಚತುರಂಗಸಹಿತವಾದ ಸೈನ್ಯಕ್ಕೆ ಆಜ್ಞೆಯನ್ನು ಮಾಡಿದನು.

ಕುಮಾರಮಾಶು ಜಾನೀತ ಯದಿ ಜೀವತಿ ವಾ ನ ವಾ ।
ಯಸ್ಯ ಯಂತಾ ಗತಃ ಷಂಡೋ ಮನ್ಯೇಽಹಂ ನ ಚ ಜೀವತಿ ॥೧೪॥

ನನ್ನ ಕುಮಾರನು ಬದುಕಿದ್ದಾನೆಯೋ, ಇಲ್ಲವೋ ಎಂದು ತಿಳಿಯಿರಿ. ಯಾವನಿಗೆ ಷಂಡನು ಸಾರಥಿಯೋ ಅವನು ಬದುಕಿರುವುದಿಲ್ಲವೆಂದು ನನಗೆ ತೋರುತ್ತದೆ.

ವೈಶಂಪಾಯನಃ

ತಮಬ್ರವೀದ್ ಧರ್ಮಸುತೋ ವಿರಾಟಮ್
ಆರ್ತಂ ವಿದಿತ್ವಾ ಕುರುಭಿಃ ಪ್ರತಪ್ತಮ್ ॥೧೫॥

ಬೃಹನ್ನಳಾ ಸಾರಥಿಶ್ಚೇನ್ನರೇಂದ್ರ
ಪರೇ ನ ನೇಷ್ಯಂತಿ ತವಾದ್ಯ ಗಾಶ್ಚ ॥೧೬॥

ವೈಶಂಪಾಯನ– ವಿರಾಟನು ಕುರುಗಳ ಕೈಗೆ ತನ್ನ ಮಗನು ಸಿಕ್ಕಿದ್ದಾನೆ ಎಂದು ಯೋಚಿಸಿ ಆರ್ತನಾಗಿರುವುದನ್ನು ತಿಳಿದು ಯುಧಿಷ್ಠಿರನು ನರೇಂದ್ರನೇ, ಬೃಹನ್ನಳೆಯು ಸಾರಥಿಯಾಗಿದ್ದರೆ ಶತ್ರುಗಳು ಈ ದಿನ ನಿನ್ನ ಗೋವುಗಳನ್ನು ತೆಗೆದುಕೊಂಡು ಹೋಗುವುದಿಲ್ಲ ಎಂದು ಹೇಳಿದನು.

ಸರ್ವಾನ್ ಮಹೀಪಾನ್ ಸಹಿತಾನ್ ಕುರೂಂಶ್ಚ
ತಥೈವ ದೇವಾಸುರನಾಗಯಕ್ಷಾನ್ ।
ಅಲಂ ವಿಜೇತುಂ ಸಮರೇ ಸುತಸ್ತೇ
ಸ್ವನುಷ್ಠಿತಃ ಸಾರಥಿನಾ ಹಿ ತೇನ ॥೧೭॥

ಬೃಹನ್ನಳೆಯು ಸರಿಯಾಗಿ ಸಾರಥ್ಯವನ್ನು ಮಾಡುವಾಗ ನಿನ್ನ ಪುತ್ರನು ಎಲ್ಲ ರಾಜರನ್ನೂ ಒಟ್ಟಾದ ಕುರುಗಳನ್ನೂ ಅದರಂತೆ ದೇವಾಸುರನಾಗಯಕ್ಷರನ್ನೂ ಯುದ್ಧದಲ್ಲಿ ಗೆಲ್ಲಲು ಸಮರ್ಥನಾಗುತ್ತಾನೆ.

ಸರ್ವಥಾ ಕುರವಶ್ಚಾಪಿ ಯೇ ಚಾನ್ಯೇ ವಸುಧಾಧಿಪಾಃ ।
ತ್ರಿಗರ್ತಾನ್ ನಿರ್ಜಿತಾನ್ ಶ್ರುತ್ವಾ ನ ಸ್ಥಾಸ್ಯಂತಿ ಕಥಂಚನ ॥೧೮॥

ಕುರುಗಳು ಮತ್ತು ಉಳಿದ ರಾಜರು ತ್ರಿಗರ್ತರು ಪೂರ್ಣವಾಗಿ ಯುದ್ಧದಲ್ಲಿ ನಿರ್ಜಿತರಾದರೆಂದು ಕೇಳಿ ರಣರಂಗದಲ್ಲಿ ನಿಲ್ಲುವುದಿಲ್ಲ (ಎಂದು ಹೇಳಿದನು).

ವೈಶಂಪಾಯನಃ

ಅಥೋತ್ತರೇಣ ಪ್ರಹಿತಾ ದೂತಾಸ್ತೇ ಶೀಘ್ರಗಾಮಿನಃ ।
ವಿರಾಟನಗರಂ ಪ್ರಾಪ್ಯ ಜಯಂ ಪ್ರಾವೇದಯಂಸ್ತದಾ ॥೧೯॥

ವೈಶಂಪಾಯನ– ಆಗ ಉತ್ತರನಿಂದ ಕಳುಹಿಸಲ್ಪಟ್ಟ ಶೀಘ್ರಗಾಮಿಗಳಾದ ಆ ದೂತರು ವಿರಾಟನಗರವನ್ನು ಪ್ರವೇಶಿಸಿ ಉತ್ತರನ ಜಯವನ್ನು ಘೋಷಿಸಿದರು.

ರಾಜಾನಂ ತತ ಆಚಖ್ಯುರ್ಮಂತ್ರಿಭಿರ್ಜಯಮುತ್ತಮಮ್ ।
ಪರಾಜಯಂ ಕುರೂಣಾಂ ಚಾಪ್ಯುಪಾಯಾಂತಂ ತಥೋತ್ತರಮ್ ॥೨೦॥

ಅನಂತರ ಮಂತ್ರಿಗಳಿಂದ ಸಹಿತನಾದ ರಾಜನ ಬಳಿಗೆ ಬಂದು ಕುರುಗಳ ಪರಾಜಯವನ್ನೂ, ಉತ್ತರನ ಶ್ರೇಷ್ಠವಾದ ಜಯವನ್ನೂ ಮತ್ತು ಉತ್ತರನು ಸಮೀಪದಲ್ಲಿಯೇ ಬರುತ್ತಿದ್ದಾನೆ ಎಂಬ ವಿಷಯವನ್ನೂ ತಿಳಿಸಿದರು.

ಸರ್ವಾ ವಿನಿರ್ಜಿತಾ ಗಾವಃ ಕುರವಶ್ಚ ಪರಾಜಿತಾಃ ।
ಉತ್ತರಃ ಸಹ ಸೂತೇನ ಕುಶಲೀ ಚ ಪರಂತಪಃ ॥೨೧॥

ರಾಜನೇ, ಎಲ್ಲಗೋವುಗಳೂ ಜಯಿಸಲ್ಪಟ್ಟಿವೆ. ಕುರುಗಳು ಪರಾಜಿತರಾಗಿದ್ದಾರೆ. ಪರಂತಪನಾದ ಉತ್ತರನು ಸೂತನ ಜೊತೆಯಲ್ಲಿ ಕ್ಷೇಮದಿಂದಿದ್ದಾನೆ (ಎಂದು ಹೇಳಿದರು).

ಕಂಕಃ

ದಿಷ್ಟ್ಯಾ ತೇ ನಿರ್ಜಿತಾ ಗಾವಃ ಕುರವಶ್ಚ ಪರಾಜಿತಾಃ ।
ದಿಷ್ಟ್ಯಾ ತೇ ವಿಜಯೀ ಪುತ್ರಃ ಶ್ರೂಯತೇ ಪಾರ್ಥಿವರ್ಷಭ ॥೨೨॥

ನಾತ್ಯದ್ಭುತಮಿದಂ ಮನ್ಯೇ ಯತ್ ತೇ ಪುತ್ರೋಽಜಯತ್ ಕುರೂನ್ ।
ಧ್ರುವ ಏವ ಜಯಸ್ತಸ್ಯ ಯಸ್ಯ ಯಂತಾ ಬೃಹನ್ನಳಾ ॥೨೩॥

ದೇವೇಂದ್ರಸಾರಥಿಶ್ಚೈವ ಮಾತಲಿರ್ಲಘುವಿಕ್ರಮಃ ।
ಕೃಷ್ಣಸ್ಯ ಸಾರಥಿಶ್ಚೈವ ನ ಬೃಹನ್ನಳಯಾ ಸಮೌ ॥೨೪॥

ಕಂಕ– ದೇವರ ದಯದಿಂದ ಕುರುಗಳು ಪರಾಜಿತರಾಗಿದ್ದಾರೆ ಮತ್ತು ಗೋವುಗಳು ನಿರ್ಜಿತವಾಗಿವೆ. ಪಾರ್ಥಿವರ್ಷಭನೇ, ದೇವರ ದಯದಿಂದ ನಿನ್ನ ಪುತ್ರನು ಜಯಶಾಲಿಯಾಗಿದ್ದಾನೆ ಎಂದು ಕೇಳುತ್ತಿದೆ. ನಿನ್ನ ಪುತ್ರನು ಕುರುಗಳನ್ನು ಜಯಿಸಿದ್ದಾನೆ ಎಂಬ ವಿಷಯವು ಆಶ್ಚರ್ಯಕರವಲ್ಲ ಎಂದು ತಿಳಿಯುತ್ತೇನೆ. ಯಾವನಿಗೆ ಬೃಹನ್ನಳೆಯು ಸಾರಥಿಯಾಗಿರುತ್ತಾನೆಯೋ ಅವನಿಗೆ ಜಯವು ನಿಶ್ಚಿತವಾದುದು. ದೇವೇಂದ್ರನ ಸಾರಥಿಯಾದ ಮಾತಲಿಯಾಗಲೀ, ಶೀಘ್ರಪರಾಕ್ರಮವನ್ನು ಹೊಂದಿದ ಕೃಷ್ಣನ ಸಾರಥಿಯಾದ ದಾರುಕನಾಗಲೀ ಬೃಹನ್ನಳೆಗೆ ಸಮನಾದವರಲ್ಲ.

ವೈಶಂಪಾಯನಃ

ತತೋ ವಿರಾಟೋ ನೃಪತಿಃ ಸಂಪ್ರಹೃಷ್ಟತನೂರುಹಃ ।
ಶ್ರುತ್ವಾ ತು ವಿಜಯಂ ತಸ್ಯ ಕುಮಾರಸ್ಯಾಮಿತೌಜಸಃ ॥೨೫॥

ಸಂತೋಷಯಿತ್ವಾ ದೂತಾಂಸ್ತಾನ್ ಧನರತ್ನೈಶ್ಚ ಸರ್ವಶಃ ॥೨೬॥

ಗತೇ ತ್ವನುಬಲೇ ತಸ್ಮಿನ್ ದೂತವಾಕ್ಯಂ ನಿಶಮ್ಯ ತು ।
ಉತ್ತರಸ್ಯ ಜಯಂ ಪ್ರೀತೋ ವಿರಾಟಃ ಪ್ರತ್ಯಭಾಷತ ॥೨೭॥

ವೈಶಂಪಾಯನ– ಆಗ ವಿರಾಟರಾಜನು ಅಮಿತಪರಾಕ್ರಮಿಯಾದ ತನ್ನ ಕುಮಾರನ ವಿಜಯವಾರ್ತೆಯನ್ನು ಕೇಳಿ ರೋಮಾಂಚಗೊಂಡವನಾಗಿ ಆ ಎಲ್ಲ ದೂತರನ್ನು ಧನರತ್ನಗಳಿಂದ ಸಂತೋಷಪಡಿಸಿ ಅವರೆಲ್ಲರೂ ಹೋದ ಮೇಲೆ ದೂತವಾಕ್ಯವನ್ನು ಕೇಳಿದ ಅವನು ಸಂತೋಷದಿಂದ ಉತ್ತರನ ಜಯದ ವಿಷಯದಲ್ಲಿ (ಜಯವನ್ನು ಆಚರಿಸಲು) ಹೀಗೆ ಮಾತನಾಡಿದನು.

ರಾಜಮಾರ್ಗಾಃ ಕ್ರಿಯಂತಾಂ ವೈ ಪತಾಕಾಭಿರಲಂಕೃತಾಃ ।
ಪುಷ್ಪೋಪಹಾರೈರರ್ಚ್ಯಂತಾಂ ದೇವತಾಶ್ಚಾಪಿ ಸರ್ವಶಃ ॥೨೮॥

ರಾಜಮಾರ್ಗಗಳು ಪತಾಕೆಗಳಿಂದ ಅಲಂಕರಿಸಲ್ಪಡಲಿ. ಎಲ್ಲ ದೇವಾಲಯಗಳಲ್ಲಿ ದೇವತೆಗಳು ಪುಷ್ಪೋಪಹಾರಗಳಿಂದ ಅರ್ಚಿಸಲ್ಪಡಲಿ.

ಕುಮಾರಾ ಯೋಧಮುಖ್ಯಾಶ್ಚ ಗಣಿಕಾಶ್ಚ ಸ್ವಲಂಕೃತಾಃ ।
ವಾದಿತ್ರಾಣಿ ಚ ಸರ್ವಾಣಿ ಪ್ರತ್ಯುದ್ಯಾಂತು ಸುತಂ ಮಮ ॥೨೯॥

ಕುಮಾರರೂ, ಯೋಧಶ್ರೇಷ್ಠರೂ, ಅಲಂಕೃತರಾದ ವೇಶ್ಯೆಯರೂ ಮತ್ತು ಎಲ್ಲ ವಾದ್ಯಗಳೂ ನನ್ನ ಪುತ್ರನನ್ನು ಎದುರುಗೊಳ್ಳಲು ಹೊರಡಲಿ.

ಭವಂತು ತೇ ಲಬ್ಧಜಯೇ ಸುತೇ ಮೇ
ಪೌರಾಶ್ಚ ನಾರ್ಯಶ್ಚ ಪುರೇ ಚ ಮತ್ಯಾ೯ಃ ।
ತೇ ಶುಕ್ಲವಸ್ತ್ರಾಃ ಪ್ರಭವಂತು ಮಾರ್ಗೇ
ಸುಗಂಧಮಾಲ್ಯಾಭರಣಾಶ್ಚ ನಾರ್ಯಃ ॥೩೦॥

ನನ್ನ ಪುತ್ರನು ಜಯವನ್ನು ಪಡೆದಿರುವಾಗ ನನ್ನ ರಾಜಧಾನಿಯಲ್ಲಿ ಸ್ತ್ರೀ ಪುರುಷರೆಲ್ಲರೂ ಶುಕ್ಲವಸ್ತ್ರವನ್ನು ಧರಿಸಿ ನಾರಿಯರು ವಿಶೇಷವಾಗಿ ಸುವರ್ಣ ಮಾಲ್ಯಾಭರಣಗಳಿಂದ ಅಲಂಕೃತರಾಗಿ ಮಾರ್ಗದಲ್ಲಿ ನಿಲ್ಲಲಿ.

ಭಜಂತು ಸರ್ವಾ ಗಣಿಕಾಃ ಸುತಂ ಮೇ
ನಾರ್ಯಶ್ಚ ಕನ್ಯಾಃ ಸಹಕನ್ಯಕಾಶ್ಚ ।
ಸ್ವಲಂಕೃತಾಸ್ತಾ ಸುಭಗಾ ಸುವೇಷಾಃ
ಪುತ್ರಸ್ಯ ಪಂಥಾನಮನುವ್ರಜಂತು ॥೩೧॥

ಎಲ್ಲಾ ವೇಶ್ಯೆಯರು, ಸ್ತ್ರೀಯರು, ದಾಸಿಯರಾದ ಕನ್ಯೆಯರು, ಅವರ ಸ್ನೇಹಿತೆಯರು, ಸುಂದರಿಯರಾದ ಇವರೆಲ್ಲರೂ ಅಲಂಕಾರವನ್ನು ಮಾಡಿಕೊಂಡು ನನ್ನ ಪುತ್ರನ ಮಾರ್ಗವನ್ನು ಅನುಸರಿಸಿ ಹೋಗಲಿ.

ಸಘಂಟಂ ಸಾಂಕುಶಂ ಶೀಘ್ರಂ ಮತ್ತಮಾರುಹ್ಯ ವಾರಣಮ್ ।
ಶೃಂಗಾಟಕೇಷು ಸರ್ವೇಷು ಸಮಾಖ್ಯಾತು ಜಯಂ ಮಮ ॥೩೨॥

ಘಂಟೆ ಮತ್ತು ಅಂಕುಶಗಳಿಂದ ಅಲಂಕೃತವಾದ ಮದಗಜವನ್ನೇರಿ ಎಲ್ಲಾ ಚತುಷ್ಪಥಗಳಲ್ಲಿ ನನ್ನ ಪುತ್ರನ ಜಯವನ್ನು ಶೀಘ್ರವಾಗಿ ಘೋಷಿಸಲಿ.

ಉತ್ತರಾ ಚ ಕುಮಾರೀಭಿರ್ಬಹ್ವಾಭರಣಭೂಷಿತಾ ।
ಸಖೀಂ ವಿಜಿತಸಂಗ್ರಾಮಾಂ ಪ್ರತ್ಯುದ್ಯಾತು ಬೃಹನ್ನಳಾಮ್ ॥೩೩॥

ಉತ್ತರೆಯು ಅನೇಕ ಆಭರಣಗಳಿಂದ ಭೂಷಿತಳಾಗಿ ತನ್ನ ಸ್ನೇಹಿತೆಯರಾದ ಕುಮಾರಿಯರಿಂದ ಸಹಿತಳಾಗಿ ತನ್ನ ಸಖಿಯಾದ ಸಂಗ್ರಾಮದಲ್ಲಿ ಗೆದ್ದು ಹಿಂದಿರುಗುವ ಬೃಹನ್ನಳೆಯನ್ನು ಎದುರುಗೊಳ್ಳಲಿ (ಎಂದು ಹೇಳಿದನು).

ವೈಶಂಪಾಯನಃ

ಶ್ರುತ್ವಾ ತು ವಚನಂ ರಾಜ್ಞಃ ಪೌರಾಃ ಸ್ವಸ್ತಿಕಪಾಣಯಃ ।
ಸರ್ವೇ ಸುಪ್ರೀತಮನಸಃ ಪ್ರತಿಜಗ್ಮುರ್ಯಥೋಚಿತಮ್ ॥೩೪॥

ವೈಶಂಪಾಯನ– ರಾಜನ ಮಾತುಗಳನ್ನು ಕೇಳಿ ಪೌರರೆಲ್ಲರೂ ಸಂತೋಷಗೊಂಡು ಕೈಯಲ್ಲಿ ಮಂಗಳದ್ರವ್ಯಗಳನ್ನು ಹಿಡಿದು ಯಥಾಯೋಗ್ಯವಾಗಿ ಹೊರಟರು.

ಸೂತಾಶ್ಚ ಸರ್ವೇ ಸಹಮಾಗಧಾಶ್ಚ
ದೃಷ್ಟ್ವಾ ವಿರಾಟಸ್ಯ ಪುರಂ ಜನೌಘಾಃ ।
ಭೇರೀಶ್ಚ ತೂರ್ಯಾಣಿ ಚ ವಾರಿಜಾಂಶ್ಚ
ವೇಷೈಃ ಪರಾರ್ಘ್ಯೈಃ ಪ್ರಮದಾಜನಾಶ್ಚ ॥೩೫॥

ವಂದಿಪ್ರವಾದಾಃ ಪಣವಾದಿಕಾಶ್ಚ
ತಥೈವ ವಾದ್ಯಾನಿ ಚ ವಂಶಶಬ್ದಾಃ ।
ಸಕಂಸತಾಲಂ ಮಧುರಂ ಚ ಗೀತಮ್
ಆದಾಯ ನಾರ್ಯೋ ನಗರಾನ್ನಿರೀಯುಃ ॥೩೬॥

ವಿರಾಟನ ಪಟ್ಟಣವು ಅಲಂಕೃತವಾಗುತ್ತಿರುವುದನ್ನು ನೋಡಿ ಜನರ ಸಮೂಹವೂ, ಸೂತರೂ ಮತ್ತು ಎಲ್ಲಾ ಮಾಗಧರೂ ಭೇರಿ, ಶಂಖ ಮೊದಲಾದ ವಾದ್ಯಗಳನ್ನೂ, ಬಹಳ ಶ್ರೇಷ್ಠವಾದ ವೇಷವನ್ನು ಧರಿಸಿದ ಸ್ತ್ರೀಯರನ್ನೂ, ಹೊಗಳುವ ವಂದಿ ಮಾಗಧರನ್ನೂ, ಪಣವಾದಿ ವಾದ್ಯಗಳನ್ನೂ, ಮಧುರ ಗೀತೆಗಳನ್ನೂ, ಕಂಚಿನ ತಾಳಗಳನ್ನೂ ಇನ್ನೂ ಅನೇಕ ವಿಧವಾದ ವಂಶವಾದ್ಯಗಳನ್ನೂ ಜೊತೆ ಮಾಡಿಕೊಂಡು ನಾರಿಯರು ನಗರದಿಂದ ಹೊರಗೆ ಹೊರಟರು.

ಪ್ರತ್ಯುದ್ಯಯುಃ ಪುತ್ರಮನಂತವೀರ್ಯಂ
ತೇ ಬ್ರಾಹ್ಮಣಾಃ ಶಾಂತಿಪರಾಃ ಪ್ರಧಾನಾಃ ।

ಸ್ವಾಧ್ಯಾಯವೇದಾಧ್ಯಯನಕ್ರಮಜ್ಞಾಃ
ಸ್ವಸ್ತಿಕ್ರಿಯಾಗೀತಜಯಪ್ರಧಾನಾಃ ॥೩೮॥

ಶಾಂತಿಪರರಾದ ಸ್ವಾಧ್ಯಾಯ ವೇದಾಧ್ಯಯನ ಕ್ರಮಗಳಲ್ಲಿ ನಿಷ್ಣಾತರಾದ ಸ್ವಸ್ತಿಕ್ರಿಯೆಗಳಲ್ಲಿಯೂ ಜಯವನ್ನು ಗಾನ ಮಾಡುವುದರಲ್ಲಿಯೂ ಪ್ರಧಾನರಾದ ಬ್ರಾಹ್ಮಣರು ಅನಂತ ಪರಾಕ್ರಮಿಯಾದ ಉತ್ತರನನ್ನು ಎದುರುಗೊಳ್ಳಲು ಹೊರಟರು.

ಪ್ರಸ್ಥಾಪ್ಯ ಸೇನಾಂ ಕನ್ಯಾಶ್ಚ ಗಣಿಕಾಶ್ಚ ಸ್ವಲಂಕೃತಾಃ ।
ಮತ್ಸ್ಯರಾಜೋ ಮಹಾಪ್ರಾಜ್ಞಃ ಪ್ರಹೃಷ್ಟ ಇದಮಬ್ರವೀತ್ ॥೩೯॥

ಅಕ್ಷಾನಾಹರ ಸೈರಂಧ್ರಿ ಕಂಕ ದ್ಯೂತಂ ಪ್ರವರ್ತತಾಮ್ ॥೩೯॥

ಮಹಾಪ್ರಾಜ್ಞನಾದ ಮತ್ಸ್ಯರಾಜನು ಸೈನ್ಯವನ್ನು ಚೆನ್ನಾಗಿ ಅಲಂಕೃತರಾದ ಕನ್ಯೆಯರನ್ನೂ, ಗಣಕೆಯರನ್ನೂ ಕಳುಹಿಸಿಕೊಟ್ಟು ಸೈರಂಧ್ರಿಯೇ, ಪಗಡೆಗಳನ್ನು ತೆಗೆದುಕೊಂಡು ಬಾ. ಕಂಕನೇ ದ್ಯೂತವನ್ನು ಆಡೋಣ ಎಂದು ಹೇಳಿದನು.

ವೈಶಂಪಾಯನಃ

ತಂ ತಥಾವಾದಿನಂ ದೃಷ್ಟ್ವಾ ಪಾಂಡವಃ ಪ್ರತ್ಯಭಾಷತ ॥೪೦॥

ನ ದೇವಿತವ್ಯಂ ಹೃಷ್ಟೇನ ಕಿತವೇನೇತಿ ನಃ ಶ್ರುತಮ್ ।
ನ ತ್ವಾಮದ್ಯ ಮುದಾ ಯುಕ್ತಮಹಂ ದೇವಿತುಮುತ್ಸಹೇ ॥೪೧॥

ಪ್ರಿಯಂ ತು ತೇ ಚಿಕೀರ್ಷಾಮಿ ವರ್ತತಾಂ ಯದಿ ರೋಚತೇ ॥೪೨॥

ದ್ಯೂತಂ ಕರ್ತುಂ ನ ವಾಂಛಾಮಿ ನರೇಂದ್ರ ಜನಸಂಸದಿ ॥೪೩॥

ವೈಶಂಪಾಯನ– ಹಾಗೆ ಹೇಳುತ್ತಿರುವ ವಿರಾಟನನ್ನು ಕುರಿತು ಯುಧಿಷ್ಠಿರನು ದ್ಯೂತವನ್ನು ಆಡುವವನು ಬಹಳ ಸಂತೋಷದಲ್ಲಿರುವಾಗ ದ್ಯೂತವನ್ನು ಆಡಬಾರದು ಎಂದು ನಾನು ಕೇಳಿದ್ದೇನೆ. ಇಷ್ಟು ಸಂತೋಷದಲ್ಲಿರುವ ನಿನ್ನ ಜೊತೆಯಲ್ಲಿ ನಾನು ಈ ದಿನ ದ್ಯೂತವನ್ನು ಆಡಲು ಬಯಸುವುದಿಲ್ಲ. ನಿನಗೆ ಇಷ್ಟವಾದರೆ ನಿನಗೆ ಬೇರೆ ಪ್ರಿಯವನ್ನು ಮಾಡಲು ಇಚ್ಛಿಸುತ್ತೇನೆ. ನರೇಂದ್ರನೇ, ಜನರಿರುವ ಈ ಸಭೆಯಲ್ಲಿ ನಿನ್ನ ಜೊತೆಯಲ್ಲಿ ದ್ಯೂತವನ್ನು ಆಡಲು ನಾನು ಇಚ್ಛಿಸುವುದಿಲ್ಲ ಎಂದು ಹೇಳಿದನು.

ವಿರಾಟಃ

ಸ್ತ್ರಿಯೋ ಗಾವೋ ಹಿರಣ್ಯಂ ಚ ಯಚ್ಚಾನ್ಯದ್ ವಸ್ತು ಕಿಂಚನ ।
ನ ಮೇ ಕಿಂಚಿತ್ ತ್ವಯಾ ರಕ್ಷ್ಯಮಂತರೇಣಾಪಿ ದೇವಿತಮ್ ॥೪೪॥

ವಿರಾಟ– ನೀನು ದ್ಯೂತವನ್ನು ಆಡುವುದನ್ನು ಬಿಟ್ಟು ಸ್ತ್ರೀಯರನ್ನಾಗಲೀ, ಗೋವುಗಳನ್ನಾಗಲೀ, ಸುವರ್ಣವನ್ನಾಗಲೀ ಅಥವಾ ಬೇರೆ ನನ್ನ ಯಾವ ವಸ್ತುವನ್ನಾಗಲೀ ರಕ್ಷಣೆ ಮಾಡಿ ನನಗೆ ಪ್ರಿಯವನ್ನುಂಟು ಮಾಡಬೇಕಾದ ಅಗತ್ಯವಿಲ್ಲ.

ಕಂಕಃ

ಕಿಂ ತೇ ದ್ಯೂತೇನ ರಾಜೇಂದ್ರ ಬಹುದೋಷೇಣ ಮಾನದ ।
ದೇವನೇ ಬಹವೋ ದೋಷಾಸ್ತಸ್ಮಾತ್ ತತ್ ಪರಿವರ್ಜಯೇತ್ ॥೪೫॥

ಕಂಕ– ರಾಜೇಂದ್ರನೇ, ಮಾನದನೇ, ಬಹುದೋಷವಿರುವ ದ್ಯೂತದಿಂದ ನಿನಗೆ ಏನಾಗಬೇಕು? ದ್ಯೂತದಲ್ಲಿ ಬಹಳ ದೋಷಗಳಿವೆ. ಆದ್ದರಿಂದ ಅದನ್ನು ಪರಿತ್ಯಜಿಸಬೇಕು.

ಶ್ರುತಸ್ತೇ ಯದಿ ವಾ ದೃಷ್ಟಃ ಪಾಂಡವೋ ವೈ ಯುಧಿಷ್ಠಿರಃ ।
ಸ ರಾಜ್ಯಂ ಧನಮಕ್ಷಯ್ಯಂ ಪಣಮೇಕಮಮನ್ಯತ ॥೪೬॥

ನೀನು ಪಾಂಡುಪುತ್ರನಾದ ಯುಧಿಷ್ಠಿರನನ್ನು ನೋಡಿದ್ದರೆ ಅಥವಾ ಕೇಳಿದ್ದರೆ ಅವನು ಅಕ್ಷಯವಾದ ತನ್ನ ಸಂಪತ್ತನ್ನು ಮತ್ತು ರಾಜ್ಯವನ್ನು ಏಕಪಣವಾಗಿ ಇಟ್ಟನು.

ಕೃಷ್ಣಾಂ ಚ ಭಾರ್ಯಾಂ ದಯಿತಾಂ ಭ್ರಾತೄಂಶ್ಚ ತ್ರಿದಶೋಪಮಾನ್ ।
ನಿಃಸಂಶಯಂ ಸ ಕಿತವಃ ಪಶ್ಚಾತ್ ತಪತಿ ಪಾಂಡವಃ ॥೪೭॥

ಭಾರ್ಯೆಯಾದ ಪ್ರಿಯೆಯಾದ ದ್ರೌಪದಿಯನ್ನು, ದೇವತೆಗಳಂತಿದ್ದ ತಮ್ಮಂದಿರನ್ನು ಪಣಕ್ಕೆ ಒಡ್ಡಿ ನಿಸ್ಸಂಶಯವಾಗಿ ದ್ಯೂತದಲ್ಲಿ ಕಳೆದುಕೊಂಡ ಪಾಂಡುಪುತ್ರನಾದ ಯುಧಿಷ್ಠಿರನು ಪಶ್ಚಾತ್ತಾಪ ಪಡುತ್ತಾನೆ.

ವಿವಿಧಾನಾಂ ಚ ರತ್ನಾನಾಂ ಧನಾನಾಂ ಚ ಪರಾಜಯೇ ।
ಅಥ ಕ್ಷಿತಿವಿನಾಶಶ್ಚ ವಾಕ್ಪಾರುಷ್ಯಮನಂತರಮ್ ॥೪೮॥

ಅವಿಶ್ವಾಸಂ ಬುಧೈರ್ನಿತ್ಯಮೇಕಾಹ್ನಾ ದ್ರವ್ಯನಾಶನಮ್ ।
ದ್ಯೂತೇ ಹಾರಿತವಾನ್ ಸರ್ವಂ ತಸ್ಮಾದ್ ದ್ಯೂತಂ ನ ರೋಚಯೇ ॥

ಅಥವಾ ಮನ್ಯಸೇ ರಾಜನ್ ದೀವ್ಯಾವ ಯದಿ ರೋಚತೇ ॥೫೦॥

ಪರಾಜಯವನ್ನು ಹೊಂದಿದರೆ ವಿವಿಧ ರತ್ನಗಳನ್ನೂ, ಸಂಪತ್ತನ್ನೂ ಮತ್ತು ಭೂಮಿಯನ್ನೂ ಕಳೆದುಕೊಂಡು ಅನಂತರ ಕ್ರೂರವಾದ ಮಾತುಗಳನ್ನೂ ಕೇಳಬೇಕಾಗುತ್ತದೆ. ಬುಧರ ಅವಿಶ್ವಾಸವನ್ನೂ ಒಂದೇ ದಿನದಲ್ಲಿ ಸಕಲ ದ್ರವ್ಯನಾಶವನ್ನೂ ಹೊಂದಬೇಕಾಗುತ್ತದೆ. ಹೀಗೆ ಯುಧಿಷ್ಠಿರನು ಎಲ್ಲವನ್ನೂ ಕಳೆದುಕೊಂಡನು. ಆದ್ದರಿಂದ ದ್ಯೂತವನ್ನು ಇಷ್ಟಪಡುವುದಿಲ್ಲ. ಅಥವಾ ರಾಜನೇ, ನಿನಗೆ ಇಷ್ಟವಾಗುವುದಾದರೆ ದ್ಯೂತವನ್ನು ಆಡೋಣ.

ವೈಶಂಪಾಯನಃ

ಏವಮಾಭಾಷ್ಯ ವಾದೈಸ್ತು ಕ್ರೀಡತಸ್ತೌ ನರೋತ್ತಮೌ ।
ಪ್ರವರ್ತಮಾನೇ ದ್ಯೂತೇ ತು ಮಾತ್ಸ್ಯಃ ಪಾಂಡವಮಬ್ರವೀತ್ ॥೫೧॥

ಪಶ್ಯ ಪುತ್ರೇಣ ಮೇ ಯುದ್ಧೇ ತಾದೃಶಾಃ ಕುರವೋ ಜಿತಾಃ ।
ಕುರವೋಽತಿರಥಾಃ ಸರ್ವೇ ದೇವೈರಪಿ ಸುದುರ್ಜಯಾಃ ॥೫೨॥

ವೈಶಂಪಾಯನ– ಹೀಗೆ ಅನೇಕ ವಿಧವಾದ ಮಾತುಗಳನ್ನು ಆಡಿ ಆ ನರಶ್ರೇಷ್ಠರು ಪುನಃ ದ್ಯೂತವನ್ನು ಆಡಿದರು. ದ್ಯೂತವನ್ನು ಆಡುತ್ತಾ ವಿರಾಟರಾಜನು ಯುಧಿಷ್ಠಿರನನ್ನು ಕುರಿತು ನೋಡು, ಯುದ್ಧದಲ್ಲಿ ನನ್ನ ಪುತ್ರನಿಂದ ಅಂತಹ ಕೌರವರೆಲ್ಲರೂ ಜಿತರಾದರು. ಕುರುಗಳೆಲ್ಲರೂ ಅತಿರಥರು ಮತ್ತು ದೇವತೆಗಳಿಂದಲೂ ಜಯಿಸಲು ಸಾಧ್ಯವಿಲ್ಲದವರು ಎಂದು ಹೇಳಿದನು.

ತತೋಽಬ್ರವೀದ್ ಧರ್ಮರಾಜೋ ದ್ಯೂತೇ ಮಾತ್ಸ್ಯಂ ಯುಧಿಷ್ಠಿರಃ ॥

ದಿಷ್ಟ್ಯಾ ತೇ ವಿಜಿತಾ ಗಾವಃ ಕುರವಶ್ಚ ಪರಾಜಿತಾಃ ।
ಅತ್ಯದ್ಭುತಮಹಂ ಮನ್ಯೇ ಉತ್ತರಶ್ಚೇತ್ ಕುರೂನ್ ಜಯೇತ್ ॥೫೪॥

ಯಂತಾ ಬೃಹನ್ನಳಾ ಯಸ್ಯ ಸಾ ಕಥಂಚಿದ್ ವಿಜೇಷ್ಯತೇ ॥೫೫॥

ಧರ್ಮರಾಜನಾದ ಯುಧಿಷ್ಠಿರನು ಆಗ ದ್ಯೂತದಲ್ಲಿ ವಿರಾಟನನ್ನು ಕುರಿತು, ದೇವರದಯದಿಂದ ಕುರುಗಳು ನಿರ್ಜಿತರಾಗಿದ್ದಾರೆ ಮತ್ತು ನಿನ್ನ ಗೋವುಗಳು ಹಿಂದಿರುಗಿಸಲ್ಪಟ್ಟಿವೆ. ಉತ್ತರನೇ ಕುರುಗಳನ್ನು ಜಯಿಸಿದ್ದರೆ ಅದು ಅತ್ಯದ್ಭುತವಾಗಿರುತ್ತಿದ್ದಿತು ಎಂದು ಭಾವಿಸುತ್ತೇನೆ. ಆ ಬೃಹನ್ನಳೆಯನ್ನು ಸಾರಥಿಯನ್ನಾಗಿ ಹೊಂದಿದವನು ಹೇಗಾದರೂ ಜಯಿಸಿಯೇ ತೀರುತ್ತಾನೆ ಎಂದು ಹೇಳಿದನು.

ವೈಶಂಪಾಯನಃ

ತತೋ ವಿರಾಟಃ ಕ್ಷುಭಿತೋ ಮನ್ಯುನಾऽತಿಪರಿಪ್ಲುತಃ ।
ಉವಾಚ ವಚನಂ ಕ್ರುದ್ಧಃ ಪರಿವ್ರಾಜಮನಂತರಮ್ ॥೫೬॥

ತಾದೃಶೇನ ತು ಯುದ್ಧೇನ ಮಹೇಷ್ವಾಸೇನ ಧೀಮತಾ ।
ಕುರವೋ ನಿರ್ಜಿತಾ ಯುದ್ಧೇ ತತ್ರ ಕಿಂ ಬ್ರಾಹ್ಮಣಾದ್ಭುತಮ್ ॥೫೭॥

ಆಗ ವಿರಾಟನು ಕ್ಷೋಭೆಗೊಂಡು ಕ್ರೋಧದಿಂದ ತುಂಬಿದವನಾಗಿ ಸಂನ್ಯಾಸಿಯನ್ನು ಕುರಿತು ಮೇಧಾವಿಯಾದ, ಮಹಾಧನುರ್ಧಾರಿಯಾದ ನನ್ನ ಪುತ್ರನು ಅಂತಹ ಯುದ್ಧದಲ್ಲಿ ಕುರುಗಳನ್ನು ಜಯಿಸಿದನು. ಬ್ರಾಹ್ಮಣನೇ, ಇದರಲ್ಲಿ ಅದ್ಭುತವೇನು ಎಂದು ಕೇಳಿದನು.

ಯುಧಿಷ್ಠಿರಃ

ಯಂತಾ ತಥಾವಿಧೋ ಯಸ್ಯ ರಥೇ ತಿಷ್ಠತಿ ವೀರ್ಯವಾನ್ ।
ಯದಿ ತತ್ ದುಷ್ಕರಂ ಕುರ್ಯಾತ್ ತತ್ರ ಕಿಂ ನಾದ್ಭುತಂ ಭವೇತ್ ॥

ಯುಧಿಷ್ಠಿರ– ಯಾವನ ರಥದಲ್ಲಿ ಅಂತಹ ಪರಾಕ್ರಮಶಾಲಿಯಾದ ಸಾರಥಿಯು ಇದ್ದಾನೆಯೋ ಅವನು ಅಂತಹ ದುಷ್ಕರವಾದ ಕಾರ್ಯವನ್ನು ಮಾಡಿದರೆ ಅದು ಅದ್ಭುತವಾಗದೇ ಇರಲಾರದು.

ವಿರಾಟಃ

ಪುಮಾಂಸೋ ಬಹವೋ ದೃಷ್ಟಾಃ ಸೂತಾಶ್ಚ ಬಹವೋ ಮಯಾ ।
ವಿಕ್ರಮ್ಯ ಯಂತಾ ಯೋದ್ಧಾ ಚ ನ ಮೇ ದೃಷ್ಟಃ ಕಥಂಚನ ॥೫೯॥

ವಿರಾಟ– ನಾನು ಅನೇಕ ಪುರುಷರನ್ನೂ, ಅನೇಕ ಸೂತರನ್ನೂ ನೋಡಿದ್ದೇನೆ. ಸಾರಥಿಯಾಗಿ ಪರಾಕ್ರಮದಿಂದ ಯುದ್ಧವನ್ನು ಮಾಡುವವನನ್ನು ನಾನು ಎಂದೂ ನೋಡಲಿಲ್ಲ.

ವಿಪ್ರಿಯಂ ನಾಚರೇದ್ ರಾಜ್ಞಾಮನುರೂಪಂ ಪ್ರಿಯಂ ವದೇತ್ ।
ಆಚರನ್ ವಿಪ್ರಿಯಂ ರಾಜ್ಞಾಂ ನ ಜಾತು ಸುಖಮೇಧತೇ ॥೬೦॥

ರಾಜರಿಗೆ ಅಪ್ರಿಯವನ್ನು ಮಾಡಬಾರದು. ಅನುಗುಣವಾಗಿ ಪ್ರಿಯವನ್ನು ಹೇಳಬೇಕು. ರಾಜರಿಗೆ ಅಪ್ರಿಯವನ್ನು ಮಾಡುವವನು ಎಂದೂ ಸುಖವನ್ನು ಹೊಂದುವುದಿಲ್ಲ.

ವಯಸ್ಯತ್ವಾತ್ ತು ತೇ ಸರ್ವಮಪರಾಧಮಿಮಂ ಕ್ಷಮೇ ।
ನೇದೃಶೀಂ ಪ್ರವದೇರ್ವಾಚಂ ಯದಿ ಜೀವಿತುಮಿಚ್ಛಸಿ ॥೬೧॥

ನೀನು ನನ್ನ ಸ್ನೇಹಿತನಾದುದರಿಂದ ಈ ಅಪರಾಧವನ್ನು ಕ್ಷಮಿಸುತ್ತೇನೆ. ನೀನು ಬದುಕಲು ಇಚ್ಛಿಸುವುದಾದರೆ ಇನ್ನೊಮ್ಮೆ ಇಂತಹ ಮಾತನ್ನು ಆಡಬೇಡ.

ವೈಶಂಪಾಯನಃ

ತತೋಽಬ್ರವೀತ್ ಪುನಃ ಕಂಕಃ ಪ್ರಹಸ್ಯ ಕುರುನಂದನ ॥೬೨॥

ಬೃಹನ್ನಳಾಯಾ ರಾಜೇಂದ್ರ ಘುಷ್ಯತಾಂ ನಗರೇ ಜಯಃ ।
ಉತ್ತರೇಣ ಹಿ ಸಾರಥ್ಯಂ ಕೃತಂ ನೂನಂ ಭವಿಷ್ಯತಿ ॥೬೩॥

ವೈಶಂಪಾಯನ– ಎಲೈ ಕುರುನಂದನನೇ, ಆಗ ಕಂಕನು ಪುನಃ ನಕ್ಕು ರಾಜನೇ, ನಗರದಲ್ಲಿ ಬೃಹನ್ನಳೆಯ ಜಯವು ಘೋಷಿಸಲ್ಪಡಲಿ. ಖಂಡಿತವಾಗಿ ಉತ್ತರನೇ ಸಾರಥ್ಯವನ್ನು ಮಾಡಿದ್ದಾನೆ ಎಂದು ನಾನು ತಿಳಿಯುತ್ತೇನೆ.

ನಿಮಿತ್ತಂ ಕಿಂಚಿದುತ್ಪನ್ನಂ ತರ್ಕಶ್ಚಾಪಿ ದೃಢೋ ಮಮ ।
ಇತೋ ಜಾನಾಮಿ ರಾಜೇಂದ್ರ ನಾನ್ಯಥಾ ತದ್ ಭವಿಷ್ಯತಿ ॥೬೪॥

ಅದಕ್ಕೆ ಒಂದು ಸೂಚನೆಯೂ ದೊರಕಿದೆ. ನನ್ನ ಊಹೆಯೂ ದೃಢವಾಗಿದೆ. ರಾಜೇಂದ್ರನೇ, ನಾನು ಇಲ್ಲಿ ಕುಳಿತುಕೊಂಡೇ ಅದು ಬೇರೆ ರೀತಿ ಆಗಿರಲು ಸಾಧ್ಯವಿಲ್ಲ ಎಂದು ತಿಳಿದಿದ್ದೇನೆ.

ಕುರವೋಽಪಿ ಮಹಾವೀರ್ಯಾ ದೇವೈರಪಿ ಸುದುರ್ಜಯಾಃ ।
ಸಸೋಮವರುಣಾದಿತ್ಯೈಃ ಸಕುಬೇರಹುತಾಶನೈಃ ॥೬೫॥

ಕುರುಗಳು, ಮಹಾಪರಾಕ್ರಮಶಾಲಿಗಳು, ಕುಬೇರ ಮತ್ತು ಅಗ್ನಿಗಳಿಂದ ಸಹಿತರಾದ ಸೂರ್ಯಚಂದ್ರ ವರುಣ ಮೊದಲಾದ ದೇವತೆಗಳಿಂದಲೂ ಅವರು ದುರ್ಜಯರಾದವರು.

ಯತ್ರ ಶಾಂತನವೋ ಭೀಷ್ಮೋ ದ್ರೋಣಕರ್ಣೌ ಸುದುರ್ಜಯೌ ।
ಅಶ್ವತ್ಥಾಮಾ ವಿಕರ್ಣಶ್ಚ ಸೋಮದತ್ತೋ ಜಯದ್ರಥಃ ॥೬೬॥

ಭೂರಿಶ್ರವಾಃ ಶಲೋ ಭೂರಿರ್ಜಲಸಂಧಶ್ಚ ವೀರ್ಯವಾನ್ ।
ದುರ್ಯೋಧನೋ ದುಷ್ಪ್ರಸಹೋ ದುಃಶಾಸನವಿವಿಂಶತೀ ॥೬೭॥

ವೃಷಸೇನೋಽಶ್ವಸೇನಶ್ಚ ವಾತವೇಗಸುವರ್ಚಸೌ ।
ಬಾಹ್ಲೀಕಃ ಶೂರಸೇನಶ್ಚ ಯುಯುತ್ಸುಶ್ಚ ಪರಂತಪಃ ॥೬೮॥

ಸೌಬಲಃ ಶಕುನಿಶ್ಚೈವ ದ್ಯುಮತ್ಸೇನಶ್ಚ ಸಾಲ್ವರಾಟ್ ।
ಅನ್ಯೇ ಚ ಬಹವಃ ಶೂರಾ ನಾನಾಜನಪದೇಶ್ವರಾಃ ॥೬೯॥

ಕೃಪೇಣಾಚಾರ್ಯಮುಖ್ಯೇನ ಸಹಿತಾಃ ಕುರವೋ ನೃಪಾಃ ।
ಸಜ್ಜಕಾರ್ಮುಕನಿಸ್ತ್ರಿಂಶಾ ರಥಿನೋ ರಥಯೂಥಪಾಃ ॥೭೦॥

ಅನ್ಯೇ ಚೈವ ಮಹಾವೀರ್ಯಾ ರಾಜಪುತ್ರಾ ಮಹಾರಥಾಃ ॥೭೧॥

ಮರುದ್ಗಣೈಃ ಪರಿವೃತಃ ಸಾಕ್ಷಾದಪಿ ಪುರಂದರಃ ।
ತದ್ಬಲಂ ನ ಜಯೇತ್ ಕ್ರುದ್ಧೋ ಭೀಷ್ಮದ್ರೋಣಾದಿಭಿರ್ವೃತಮ್ ॥೭೨॥

ಎಲ್ಲಿ ಶಂತನು ಪುತ್ರನಾದ ಭೀಷ್ಮನೂ, ಅತ್ಯಂತ ದುರ್ಜಯರಾದ ದ್ರೋಣ-ಕರ್ಣರು, ಅಶ್ವತ್ಥಾಮಾ, ವಿಕರ್ಣ, ಸೋಮದತ್ತ, ಜಯದ್ರಥ, ಭೂರಿಶ್ರವಾ, ಶಲ, ಭೂರಿ, ಪರಾಕ್ರಮಶಾಲಿಯಾದ ಜಲಸಂಧ, ದುರ್ಯೋಧನ, ದುಃಷ್ಪ್ರಸಹ, ದುಃಶಾಸನ, ವಿವಿಂಶತಿ, ವೃಷಸೇನ, ಅಶ್ವಸೇನ, ವಾತವೀರ, ಸುವರ್ಚ, ಬಾಹ್ಲೀಕಾ, ಶೂರಸೇನ, ಪರಂತಪನಾದ ಯುಯುತ್ಸು, ಸುಬಲಪುತ್ರನಾದ ಶಕುನಿ, ಶಾಲ್ವಪತಿಯಾದ

ದ್ಯುಮತ್ಸೇನ ಮತ್ತು ಇನ್ನೂ ಅನೇಕ ಜನಪದದ ಶೂರರಾದ ರಾಜರು, ಆಚಾರ್ಯಶ್ರೇಷ್ಠರಾದ ಕೃಪರಿಂದ ಸಹಿತರಾದ ಕುರುಗಳು ಮತ್ತು ಅನೇಕ ರಾಜರು ಮತ್ತು ಧನುಸ್ಸು ಮತ್ತು ಖಡ್ಗಗಳನ್ನು ಸಿದ್ಧವನ್ನಾಗಿ ಮಾಡಿಕೊಂಡ ರಥಿಕರೂ, ರಥವ್ಯಂದನಾಯಕರೂ, ಮಹಾರಥರೂ, ಮಹಾಪರಾಕ್ರಮಿಗಳೂ ಆದ ರಾಜಪುತ್ರರು ಎಲ್ಲಿದ್ದಾರೆಯೋ ಅಂತಹ ಭೀಷ್ಮದ್ರೋಣಾದಿಗಳಿಂದ ಸಹಿತವಾದ ಸೈನ್ಯವನ್ನು ಮರುದ್ಗಣಗಳಿಂದ ಸಹಿತನಾದ ಕ್ರುದ್ಧನಾದ ಸಾಕ್ಷಾತ್ ಪುರಂದರನೂ ಸಹ ಗೆಲ್ಲಲಾರನು.

ಕಸ್ತದ್ ಬೃಹನ್ನಳಾದನ್ಯೋ ಮನುಷ್ಯಃ ಪ್ರತಿಯೋತ್ಸ್ಯತಿ ॥೭೩॥

ಯಸ್ಯ ಬಾಹುಬಲೇ ತುಲ್ಯೋ ನ ಭೂತೋ ನ ಭವಿಷ್ಯತಿ ।
ಅತೀವಸಮರಂ ದೃಷ್ಟ್ವಾ ಹರ್ಷೋ ಯಸ್ಯ ಹಿ ಜಾಯತೇ ॥೭೪॥

ಬೃಹನ್ನಳೆಯನ್ನು ಬಿಟ್ಟು ಬೇರೆ ಯಾವ ಮನುಷ್ಯನು ಆ ಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡುವನು? ಅವನ ಬಾಹುಬಲಕ್ಕೆ ಸಮನಾದವನು ಹಿಂದೆ ಇರಲಿಲ್ಲ ಮತ್ತು ಮುಂದೆ ಬರುವುದಿಲ್ಲ. ಘೋರವಾದ ಸಮರವನ್ನು ನೋಡಿದರೆ ಅವನಿಗೆ ಹರ್ಷವು ಹೆಚ್ಚಾಗುತ್ತದೆ (ಎಂದು ಹೇಳಿದನು).

ವೈಶಂಪಾಯನಃ

ತೇನ ಸಂಕ್ಷುಭಿತೋ ರಾಜಾ ದೀರ್ಯಮಾಣೇನ ಚೇತಸಾ ।
ಅಬ್ರವೀದ್ ವಚನಂ ತಾತ ಅಜಾನನ್ ವೈ ಯುಧಿಷ್ಠಿರಮ್ ॥೭೫॥

ವೈಶಂಪಾಯನ– ಅದರಿಂದ ಕ್ಷೋಭೆಗೊಂಡು ಬಿರಿದುಹೋಗುತ್ತಿದ್ದ ಹೃದಯವುಳ್ಳ ವಿರಾಟರಾಜನು ತಾನು ಯುಧಿಷ್ಠಿರನ ಜೊತೆಯಲ್ಲಿ ಮಾತನಾಡುತ್ತಿದ್ದೇನೆಂದು ತಿಳಿಯದೆ ಕಂಕನನ್ನು ಕುರಿತು ಹೀಗೆ ಮಾತನಾಡಿದನು.

ಕಂಕ ಮಾ ತ್ವಂ ಬ್ರವೀರ್ವಾಕ್ಯಂ ಪ್ರತಿಕೂಲಂ ದ್ವಿಜೋತ್ತಮ ।
ಬಹುಶಃ ಪ್ರತಿಷಿದ್ಧಃ ಸನ್ ನ ಚೇದ್ ವಾಚಂ ನಿಯಚ್ಛಸಿ ॥೭೬॥

ನಿಯಂತಾ ಚೇನ್ನ ವಿದ್ಯೇತ ನ ಕಶ್ಚಿದ್ ಧರ್ಮಮಾಚರೇತ್ ॥೭೭॥

ಕಂಕನೇ, ದ್ವಿಜೋತ್ತಮನೇ, ನನಗೆ ಪ್ರತಿಕೂಲವಾಗಿ ಮಾತನಾಡಬೇಡ. ಎಷ್ಟು ನಿಷೇಧವನ್ನು ಮಾಡಿದರೂ ನೀನು ನಿನ್ನ ಮಾತನ್ನು ನಿಯಂತ್ರಿಸುತ್ತಿಲ್ಲ. ನಿಯಂತ್ರಣ ಮಾಡುವವನು ಇಲ್ಲದಿದ್ದರೆ ಯಾರೂ ಧರ್ಮವನ್ನು ಆಚರಿಸಲಾರರು (ಎಂದು ಹೇಳಿದನು).

ವೈಶಂಪಾಯನಃ

ತತಃ ಪ್ರಕ್ಷುಭಿತೋ ರಾಜಾ ಸೋಽಕ್ಷೇಣಾಭ್ಯಹನದ್ ಭೃಶಮ್ ॥೭೮॥

ತತಃ ಸ ಕರಿಭೋಗಾಭಂ ಬಾಹುಮುದ್ಯಮ್ಯ ದಕ್ಷಿಣಮ್ ।
ವಿರಾಟಃ ಪ್ರಾಹರತ್ ಕ್ರುದ್ಧಃ ಕರ್ಣಮಾಶ್ರಿತ್ಯ ದಕ್ಷಿಣಮ್ ॥೭೯॥

ಮುಖೇ ಯುಧಿಷ್ಠಿರಂ ಕೋಪಾನ್ನೈವಮಿತ್ಯವಭರ್ತ್ಸಯನ್ ॥೮೦॥

ಬಲವತ್ ಪ್ರತಿವಿದ್ಧಸ್ಯ ತತಃ ಶೋಣಿತಮಾಗಮತ್ ॥೮೧॥

ವೈಶಂಪಾಯನ– ಆಗ ಕ್ಷೋಭೆಗೊಂಡ ರಾಜನು ದಾಳದಿಂದ ಯುಧಿಷ್ಠಿರನಿಗೆ ತೀವ್ರವಾಗಿ ಹೊಡೆದನು. ಆಗ ಆನೆಯ ಸೊಂಡಲಿನಂತಿದ್ದ ತನ್ನ ಬಲಬಾಹುವನ್ನು ಎತ್ತಿ ವಿರಾಟನು ಕೋಪದಿಂದ ಯುಧಿಷ್ಠಿರನಿಗೆ ಬಲಗಿವಿಯ ಸಮೀಪದಲ್ಲಿ ದಾಳದಿಂದ ಜೋರಾಗಿ ಹೊಡೆದನು ಮತ್ತು ಕೋಪದಿಂದ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡಬೇಡ ಎಂದು ಗದರಿಸಿದನು. ಬಲವಾಗಿ ಹೊಡೆಯಲ್ಪಟ್ಟ ಯುಧಿಷ್ಠಿರನ ಮುಖದಿಂದ ರಕ್ತವು ಹೊರಬಂದಿತು.

ಅಕ್ಷೇಣಾಭಿಹತೋ ರಾಜಾ ವಿರಾಟೇನ ಮಹೀಪತಿಃ ।
ತೂಷ್ಣೀಮಾಸೀನ್ಮಹಾಬಾಹುಃ ಕೃಷ್ಣಾಂ ಸಂಪ್ರೇಕ್ಷ್ಯ ದುಃಖಿತಃ ॥೮೨॥

ವಿರಾಟನಿಂದ ದಾಳದಿಂದ ಹೊಡೆಯಲ್ಪಟ್ಟ ರಾಜನಾದ, ಮಹಾಬಾಹುವಾದ ಯುಧಿಷ್ಠಿರನು ದ್ರೌಪದಿಯನ್ನು ನೋಡಿ ದುಃಖಿತನಾಗಿ ಸುಮ್ಮನಾದನು.

ತಸ್ಯ ರಕ್ತೋತ್ಪಲನಿಭಂ ಶಿರಸಃ ಶೋಣಿತಂ ತದಾ ।
ಪ್ರಾವರ್ತತ ಮಹಾಬಾಹೋರಭಿಘಾತಾನ್ಮಹಾತ್ಮನಃ ॥೮೩॥

ಮಹಾತ್ಮನಾದ ಮಹಾಬಾಹುವಾದ ಅವನ ಮುಖದಿಂದ ಆ ಹೊಡೆತದಿಂದಾಗಿ ರಕ್ತೋತ್ಪಲಕ್ಕೆ ಸದೃಶವಾದ ರಕ್ತವು ಶಿರಸ್ಸಿನಿಂದ ಹೊರಬಂದಿತು.

ತದಪ್ರಾಪ್ತಂ ಮಹೀಂ ಪಾರ್ಥಃ ಪಾಣಿಭ್ಯಾಂ ಸಮಧಾರಯತ್ ।
ಅವೈಕ್ಷತ ಚ ಧರ್ಮಾತ್ಮಾ ದ್ರೌಪದೀಂ ಪಾರ್ಶ್ವತಃ ಸ್ಥಿತಾಮ್ ॥೮೪॥

ಯುಧಿಷ್ಠಿರನ ರಕ್ತವು ನೆಲಕ್ಕೆ ಬೀಳುವುದಕ್ಕಿಂತ ಮೊದಲೇ ಅದನ್ನು ತನ್ನ ಕೈಗಳಲ್ಲಿ ಹಿಡಿದ, ಧರ್ಮಾತ್ಮನಾದ ಅವನು ಪಕ್ಕದಲ್ಲಿ ನಿಂತಿದ್ದ ದ್ರೌಪದಿಯನ್ನು ನೋಡಿದನು.

ಸಾ ವೇದನಾಮಭಿಜ್ಞಾಯ ಭರ್ತುಶ್ಚಿತ್ತವಶಾನುಗಾ ।
ಸಾ ವಿಷಣ್ಣಾ ಚ ಭೀತಾ ಚ ಕ್ರುದ್ಧಾ ಚ ದ್ರುಪದಾತ್ಮಜಾ ॥೮೫॥

ಪತಿಯ ವೇದನೆಯನ್ನು ತಿಳಿದ ಪತಿಯ ಚಿತ್ತವಶಳೂ, ಅವನ ಅಭಿಪ್ರಾಯವನ್ನು ತಿಳಿದವಳೂ ಆದ ದ್ರೌಪದಿಯು ವಿಷಣ್ಣಳೂ, ಭೀತಳೂ ಮತ್ತು ಕೋಪಗೊಂಡವಳೂ ಆದಳು.

ಬಾಷ್ಪಂ ನಿಯಮ್ಯ ದುಃಖಂ ಚ ಭರ್ತುರ್ನಿಶ್ರೇಯಕಾರಿಣೀ ।
ಉತ್ತರೀಯೇಣ ಸೂಕ್ಷ್ಮೇಣ ತೂರ್ಣಂ ಜಗ್ರಾಹ ಶೋಣಿತಮ್ ॥೮೬॥

ಅವಳು ತನ್ನ ದುಃಖವನ್ನು ಮತ್ತು ಕಣ್ಣೀರನ್ನು ನಿಯಂತ್ರಿಸಿಕೊಂಡು ಪತಿಯ ಶ್ರೇಯಸ್ಸನ್ನು ಬಯಸುವವಳಾಗಿ ತನ್ನ ತೆಳುವಾದ ಉತ್ತರೀಯದಿಂದ ಶೀಘ್ರವಾಗಿ ಆ ರಕ್ತವನ್ನು ಹಿಡಿದಳು.

ನಿಗೃಹ್ಯ ರಕ್ತಂ ವಸ್ತ್ರೇಣ ಸೈರಂಧ್ರೀ ದುಃಖಮೋಹಿತಾ ।
ಸೌವರ್ಣಂ ಗೃಹ್ಯ ಭೃಂಗಾರಂ ಶೋಣಿತಂ ತದಪಾಸೃಜತ್ ॥೮೭॥

ದುಃಖಮೋಹಿತಳಾದ ಸೈರಂಧ್ರಿಯು ತನ್ನ ವಸ್ತ್ರದಿಂದ ರಕ್ತವನ್ನು ಹಿಡಿದು ಅದನ್ನು ಒಂದು ಸುವರ್ಣಮಯವಾದ ಭೃಂಗಾರದಲ್ಲಿ (ತಂಬಿಗೆಯಲ್ಲಿ) ಹಾಕಿದಳು.

ವಿರಾಟಃ

ಸೈರಂಧ್ರಿ ಕಿಮಿದಂ ರಕ್ತಮುತ್ತರೀಯೇಣ ಗೃಹ್ಯತೇ ।
ಕೋಽತ್ರ ಹೇತುರ್ವಿಶಾಲಾಕ್ಷಿ ತನ್ಮಮಾಚಕ್ಷ್ವ ತತ್ತ್ವತಃ ॥೮೮॥

ವಿರಾಟ– ಸೈರಂಧ್ರಿಯೇ, ಏಕೆ ರಕ್ತವನ್ನು ಉತ್ತರೀಯದಲ್ಲಿ ಹಿಡಿಯುತ್ತಿದ್ದೀಯೆ? ವಿಶಾಲಾಕ್ಷಿಯೇ, ಇದಕ್ಕೆ ಏನು ಕಾರಣ ಎಂದು ನನಗೆ ನಿಜವಾಗಿ ಹೇಳು.

ಸೈರಂಧ್ರೀ

ರಕ್ತಬಿಂದೂನಿ ಕಂಕಸ್ಯ ಯಾವಂತಿ ಧರಣೇಂ ಯಯುಃ ।
ತಾವದ್ ವರ್ಷಾಣಿ ರಾಷ್ಟ್ರೇ ತೇಽನಾವೃಷ್ಟಿರ್ಭವಿಷ್ಯತಿ ॥೮೯॥

ಏತನ್ನಿಮಿತ್ತಂ ಮತ್ಸ್ಯೇಂದ್ರ ಕಂಕಸ್ಯ ರುಧಿರಂ ಮಯಾ ।
ಗೃಹೀತಮುತ್ತರೀಯೇಣ ವಿನಾಶೋ ಮಾ ಭವೇತ್ ತವ ॥೯೦॥

ಸೈರಂಧ್ರೀ– ಕಂಕನ ಎಷ್ಟು ರಕ್ತಬಿಂದುಗಳು ಭೂಮಿಯ ಮೇಲೆ ಬೀಳುತ್ತವೆಯೋ ಅಷ್ಟುವರ್ಷಗಳ ಕಾಲ ನಿನ್ನ ರಾಷ್ಟ್ರದಲ್ಲಿ ಅನಾವೃಷ್ಟಿ ಉಂಟಾಗುವುದು. ಮತ್ಸ್ಯೇಂದ್ರನೇ, ಈ ಕಾರಣದಿಂದ ನಿನಗೆ ವಿನಾಶವುಂಟಾಗದಿರಲಿ ಎಂದು ಉದ್ದೇಶಿಸಿ ನಾನು ಕಂಕನ ರಕ್ತವನ್ನು ಉತ್ತರೀಯದಿಂದ ಹಿಡಿದೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಅಷ್ಟಷಷ್ಟಿತಮೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ಏಕಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ತದಾ ವಿರಾಟಾಸನಮಾಸ್ಥಿತಂ ನೃಪಂ
ಯುಧಿಷ್ಠಿರಂ ವೀಕ್ಷ್ಯ ವಿರಾಟ ಆಹ ।
ಕಿಮೇತದಿತ್ಯೂಚಿವಾನುತ್ತರೋಽಸ್ಯೈ
ತಾನ್ ಪಾಂಡವಾನ್ ಗೋಗ್ರಹಣೇ ಚ ವೃತ್ತಮ್ ॥೪೮॥

ಆಗ ವಿರಾಟನ ಸಿಂಹಾಸನದಲ್ಲಿ ರಾಜಾ ಯುಧಿಷ್ಠಿರ ಕುಳಿತಿದ್ದುದನ್ನು ವಿರಾಟ ಕಂಡು 'ಇದೇನು?' ಎಂದ. ಉತ್ತರ ಅವನಿಗೆ 'ಅವರು ಪಾಂಡವರು' ಎಂದ. ಗೋಗ್ರಹಣದಲ್ಲಿ ನಡೆದ ವೃತ್ತಾಂತವನ್ನೂ ಹೇಳಿದ.

ಅರವತ್ತೊಂಬತ್ತನೆಯ ಅಧ್ಯಾಯ

ಯುದ್ಧದಿಂದ ಉತ್ತರನ ಪ್ರತಿನಿವೃತ್ತಿ

ಜನಮೇಜಯಃ

ಯುದ್ಧಂ ತ್ವಮಾನುಷಂ ದ್ರಷ್ಟುಮಾಗತಾಃ ತ್ರಿದಶಾಃ ಪುರಾ ।
ಕಿಮಕುರ್ವಂತ ತೇ ಪಶ್ಚಾತ್ ಕಥಯಸ್ವ ಮಮಾನಘ ॥೧॥

ಜನಮೇಜಯ– ಎಲೈ ಅನಘನೇ, ಅಮಾನುಷವಾದ ಯುದ್ಧವನ್ನು ನೋಡಲು ಮೊದಲು ಬಂದಿದ್ದ ದೇವತೆಗಳು ಅನಂತರ ಏನನ್ನು ಮಾಡಿದರೆಂದು ನನಗೆ ಹೇಳು.

ವೈಶಂಪಾಯನಃ

ವಾಸವಪ್ರಮುಖಾಃ ಸರ್ವೇ ದೇವಾ ಸರ್ಷಿಪುರೋಗಮಾಃ ।
ಯಕ್ಷಗಂಧರ್ವಸಂಘಾಶ್ಚ ಗಣಾಶ್ಚಾಪ್ಸರಸಾಂ ತಥಾ ॥೨॥

ಯುದ್ಧಂ ತ್ವಮಾನುಷಂ ದೃಷ್ಟ್ವಾ ಕುರೂಣಾಂ ಫಲ್ಗುನಸ್ಯ ಚ ।
ಏಕಸ್ಯ ಚ ಬಹೂನಾಂ ಚ ರೌದ್ರಮತ್ಯುಗ್ರದರ್ಶನಮ್ ॥೩॥

ಅಸ್ತ್ರಜ್ಞಾಮಥ ದಿವ್ಯಾನಾಂ ಪ್ರಯೋಗಾನಥ ಸಂಗ್ರಹಾನ್ ।
ಲಘು ಸುಷ್ಠು ಚ ಚಿತ್ರಂ ಚ ಕೃತೀನಾಂ ಚ ಪ್ರಯತ್ನತಃ ॥೪॥

ಭೀಷ್ಮಂ ಶಾರದ್ವತಂ ದ್ರೋಣಂ ಕರ್ಣಂ ಗಾಂಡೀವಧನ್ವನಾ ।
ಜಿತಾನನ್ಯಾನ್ ಭೂಮಿಪಾಲಾನ್ ದೃಷ್ಟ್ವಾ ಜಗ್ಮುರ್ದಿವೌಕಸಃ ॥೫॥

ವೈಶಂಪಾಯನ– ಋಷಿಗಳನ್ನು ಮುಂದೆ ಮಾಡಿಕೊಂಡ ಇಂದ್ರನೇ ಮೊದಲಾದ ಎಲ್ಲ ದೇವತೆಗಳು, ಯಕ್ಷಗಂಧರ್ವಸಮೂಹಗಳು ಮತ್ತು ಅಪ್ಸರೆಯರ ಗಣಗಳು ಕುರುಗಳಿಗೂ ಮತ್ತು ಅರ್ಜುನನಿಗೂ ಒಬ್ಬನಿಗೂ ಮತ್ತು ಅನೇಕ ಜನರಿಗೂ ನಡೆದ ರೌದ್ರವಾದ, ನೋಡಲು ಭಯಂಕರವಾಗಿದ್ದ ಅಮಾನುಷ ಯುದ್ಧವನ್ನು, ನಿಷ್ಣಾತರಾದವರ ಪ್ರಯತ್ನದಿಂದ ಪ್ರಯೋಗಿಸಲ್ಪಟ್ಟ ಕ್ಷಿಪ್ರವಾದ, ಚಿತ್ರವಾದ, ಚೆನ್ನಾಗಿ ಪ್ರಯೋಗಿಸಲ್ಪಟ್ಟ ದಿವ್ಯಾಸ್ತ್ರಗಳ ಪ್ರಯೋಗವನ್ನು, ನೋಡಿ ಭೀಷ್ಮ, ದ್ರೋಣ, ಕೃಪ, ಕರ್ಣ ಮತ್ತು ಉಳಿದ ಭೂಪಾಲರು ಗಾಂಡೀವ ಧನ್ವನಾದ ಅರ್ಜುನನಿಂದ ಪರಾಜಿತರಾದುದನ್ನು ನೋಡಿ ದೇವತೆಗಳು ಹೊರಟುಹೋದರು.

ಸರ್ವೇಷಾಂ ಪರಿತುಷ್ಟಾಶ್ಚ ಪ್ರಶಸ್ಯ ಚ ಮುಹುರ್ಮುಹುಃ ।
ಅಸಂಗಗತಿನಾ ತೇನ ವಿಮಾನೇನಾಶುಗಾಮಿನಾ ॥೬॥

ಪ್ರತಿಜಗ್ಮುರಸಂಗೇನ ತ್ರಿದಿವಂ ಚ ದಿವೌಕಸಃ ॥೭॥

ಅರ್ಜುನನು ಮಾಡಿದ ಎಲ್ಲ ಯುದ್ಧಕಾರ್ಯಗಳನ್ನು ನೋಡಿ ಸಂತುಷ್ಟರಾಗಿ ಪುನಃ ಪುನಃ ಅವನನ್ನು ಹೊಗಳಿ, ಎಲ್ಲಿಯೂ ಸಿಕ್ಕಿಹಾಕಿಕೊಳ್ಳದೆ ಶೀಘ್ರವಾಗಿ ಚಲಿಸುವ ಆ ವಿಮಾನದಿಂದ ದೇವತೆಗಳು ಸ್ವರ್ಗಕ್ಕೆ ಹೊರಟುಹೋದರು.

ಕುರವೋಽರ್ಜುನಬಾಣೈಶ್ಚ ತಾಡಿತಾಃ ಶರವಿಕ್ಷತಾಃ ।
ಕುರೂನಭಿಮುಖಾ ಯಾತಾಃ ಸಮಗ್ರಬಲವಾಹನಾಃ ॥೮॥

ಅರ್ಜುನನ ಬಾಣಗಳಿಂದ ತಾಡಿತರಾಗಿ ಗಾಯಗೊಂಡ ಕುರುಗಳು ತಮ್ಮ ಉಳಿದ ಪೂರ್ಣವಾದ ಬಲ, ವಾಹನಗಳ ಸಮೇತವಾಗಿ ಕುರುದೇಶಕ್ಕೆ ಅಭಿಮುಖವಾಗಿ ಹೊರಟರು.

ವಿರಾಟನಗರಾಚ್ಚೈವ ಗಜಾಶ್ವರಥಸಂಕುಲಾಃ ।
ಯೋಧೈಃ ಕ್ಷತ್ರಿಯದಾಯಾದೈರ್ಬಲವದ್ಭಿರಧಿಷ್ಠಿತಾಃ ॥೯॥

ವಿರಾಟಪ್ರಹಿತಾ ಸೇನಾ ನಗರಾಚ್ಚೀಗ್ರಯಾಯಿನೀ ।
ಉತ್ತರಂ ಸಹ ಸೂತೇನ ಪ್ರತ್ಯಯಾತ್ ತಮರಿಂದಮಮ್ ॥೧೦॥

ವಿರಾಟನಗರದಿಂದ ಹೊರಟು ಬಲಿಷ್ಠರಾದ ಕ್ಷತ್ರಿಯರಿಂದ ಅಧಿಷ್ಠಿತವಾದ ಗಜಾಶ್ವರಥ ಯೋಧರಿಂದ ನಿಬಿಡವಾದ ವಿರಾಟನು ಕಳುಹಿಸಿದ ಸೈನ್ಯವು ಶೀಘ್ರವಾಗಿ ಚಲಿಸುತ್ತಾ ಬೃಹನ್ನಳೆಯಿಂದ ಕೂಡಿದ ಅರಿಂದಮನಾದ ಉತ್ತರನ ಸಮೀಪಕ್ಕೆ ಹೊರಟಿತು.

ತಸ್ಮಿಂಸ್ತೂರ್ಯಶತಾಕೀರ್ಣೇ ಹಸ್ತ್ಯಶ್ವರಥಸಂಕುಲೇ ।
ಪ್ರಹರ್ಷಃ ಸ್ತ್ರೀಕುಮಾರಾಣಾಂ ತುಮುಲಃ ಸಮಪದ್ಯತ ॥೧೧॥

ನೂರಾರು ವಾದ್ಯಘೋಷಗಳು ಮೊಳಗುತ್ತಾ ಹಸ್ತ್ಯಶ್ವರಥಗಳು ನಿಬಿಡವಾಗಿರುವಾಗ ವಿರಾಟನಗರದ ಸ್ತ್ರೀ-ಕುಮಾರರಿಗೆ ಬಹಳ ಹರ್ಷವುಂಟಾಯಿತು.

ಅರ್ಜುನಸ್ತು ತತೋ ದೃಷ್ಟ್ವಾ ಸೈನ್ಯರೇಣುಂ ಸಮುತ್ಥಿತಮ್ ।
ಸೈನ್ಯಧ್ವಜಂ ನಿಶಾಮ್ಯಾಥ ವೈರಾಟಂ ಸಮಭಾಷತ ॥೧೨॥

ನಗರೇ ತುಮುಲಃ ಶಬ್ದೋ ರೇಣುಶ್ಚಾಕ್ರಮತೇ ನಭಃ ।
ಕಿಂ ನು ಖಲ್ವಪಯಾತಾಸ್ತೇ ಕುರವೋ ನಗರಂ ಗತಾಃ ॥೧೩॥

ತೇ ಚೈವ ನ ಜಿತಾಸ್ಮಾಭಿರ್ಮಹೇಷ್ವಾಸಾಃ ಸುಚೇತಸಃ ।
ಆಮುಂಚ ಕವಚಂ ವೀರ ಚೋದಯಸ್ವ ಚ ವಾಜಿನಃ ॥೧೪॥

ಅರ್ಜುನನು ಆ ಸೈನ್ಯದಿಂದ ಮೇಲೆದ್ದ ಧೂಳನ್ನು ನೋಡಿ ಸೈನ್ಯದ ಧ್ವಜವನ್ನೂ ನೋಡಿ ಉತ್ತರನನ್ನು ಕುರಿತು, ನಗರದಲ್ಲಿ ಬಹಳ ಶಬ್ದವಾಗುತ್ತಿದೆ. ಸೈನ್ಯದ ಧೂಳು ಆಕಾಶವನ್ನು ತಲುಪುತ್ತಿದೆ. ಕುರುಗಳು ಯುದ್ಧಭೂಮಿಯಿಂದ ಹೊರಟು ವಿರಾಟ ನಗರವನ್ನು ಪ್ರವೇಶಿಸಿದರೋ ಹೇಗೆ? ಕುರುಸೈನ್ಯಕ್ಕೆ ಸೇರಿದ ಒಳ್ಳೆಯ ಮನಸ್ಸುಳ್ಳ ಮಹಾಧನುರ್ಧರರು ನಮ್ಮಿಂದ ಸೋಲಿಸಲ್ಪಡಲಿಲ್ಲವೇ? ಎಲೈ ವೀರನೇ, ಕವಚವನ್ನು ಧರಿಸಿ ಅಶ್ವಗಳನ್ನು ಪ್ರಚೋದಿಸು.

ಜವೇನಾಭಿಪ್ರಪದ್ಯಸ್ವ ವಿರಾಟನಗರಂ ಪ್ರತಿ ॥೧೫॥

ನ ತಾವತ್ ತಳನಿಷ್ಘೋಷಂ ಗಾಂಡೀವಸ್ಯ ಚ ನಿಸ್ವನಮ್ ।
ಧ್ವಜಂ ವಾ ದರ್ಶಯಿಷ್ಯಾಮಿ ಕದಾಚಿತ್ ಸ್ವಜನೋ ಭವೇತ್ ॥೧೬॥

ಶೀಘ್ರವಾಗಿ ವಿರಾಟನಗರವನ್ನು ತಲುಪುವವನಾಗು. ನಾನು ತಳನಿಷ್ಘೋಷವನ್ನಾಗಲೀ, ಗಾಂಡೀವದ ಧ್ವನಿಯನ್ನಾಗಲೀ ಅಥವಾ ಧ್ವಜವನ್ನಾಗಲಿ ತೋರಿಸುವುದಿಲ್ಲ. ಇವರು ಒಂದು ಪಕ್ಷ ನಮ್ಮವರೇ ಆಗಿರಬಹುದು (ಎಂದು ಹೇಳಿದನು).

ಉತ್ತರಃ

ಸೇನಾಗ್ರಮೇತನ್ಮತ್ಸ್ಯಾನಾಂ ಗಣಿಕಾಶ್ಚ ಸ್ವಲಂಕೃತಾಃ ।
ಕನ್ಯಾ ರಥೇಷು ದೃಶ್ಯಂತೇ ಪುರೇ ವಿವಿಧವಾಸಸಃ ॥೧೭॥

ಉತ್ತರ– ಇದು ಮತ್ಸ್ಯರಾಜನ ಸೇನಾಮುಖ. ವೇಶ್ಯೆಯರು ಅಲಂಕೃತರಾಗಿದ್ದಾರೆ. ವಿವಿಧ ವಸ್ತ್ರಗಳನ್ನು ಧರಿಸಿರುವ ಕನ್ಯೆಯರು ಪಟ್ಟಣದಲ್ಲಿ ರಥದಲ್ಲಿ ಕಾಣುತ್ತಿದ್ದಾರೆ.

ಉತ್ತರಾಮತ್ರ ಪಶ್ಯಾಮಿ ಸಖೀಭಿಃ ಪರಿವಾರಿತಾಮ್ ।
ಅನೀಕಾನಿ ಪ್ರಕಾಶಂತೇ ಹಸ್ತಿನೋಽಶ್ವಾಶ್ಚ ವರ್ಜಿತಾಃ ॥೧೮॥

ಇಲ್ಲಿ ತನ್ನ ಸಖಿಯರಿಂದ ಕೂಡಿದ ಉತ್ತರೆಯನ್ನು ನೋಡುತ್ತಿದ್ದೇನೆ. ಸೈನ್ಯಗಳು ತೋರುತ್ತಿವೆ. ಆದರೆ ಅಶ್ವಗಳು ಮತ್ತು ಗಜಗಳು ಯುದ್ಧ ಸಲಕರಣೆಗಳಿಂದ ವರ್ಜಿತವಾಗಿವೆ.

ಪಾದಾತಾ ರಥಿನಶ್ಚೈವ ಬಹವೋ ನ ಚ ಶಸ್ತ್ರಿಣಃ ।
ವಿರಾಟವಚನಾತ್ ಸರ್ವೇ ಸಂಹೃಷ್ಟಾಃ ಪ್ರತಿಭಾಂತಿ ಮೇ ॥೧೯॥

ನ ಚ ಮೇಽಸ್ಯ ಪ್ರತೀಘಾತಶ್ಚಿತ್ತಸ್ಯ ಸ್ವಜನೇ ಯಥಾ ॥೨೦॥

ಪದಾತಿಗಳು ಮತ್ತು ರಥಿಕರು ಅನೇಕ ಸಂಖ್ಯೆಯಲ್ಲಿದ್ದಾರೆ. ಆದರೆ ಯಾರೂ ಶಸ್ತ್ರವನ್ನು ಹಿಡಿದಿಲ್ಲ. ವಿರಾಟವಚನದಿಂದ ಎಲ್ಲರೂ ಸಂತೋಷಗೊಂಡಿದ್ದಾರೆ ಎಂದು ನನಗೆ ತೋರುತ್ತಿದೆ. ಈ ಸೈನ್ಯಕ್ಕೆ ಸ್ವಜನರಿಗೆ ಹೇಗೆ ಪ್ರತಿಘಾತವನ್ನು ಮಾಡುವುದಿಲ್ಲವೋ ಅದರಂತೆ ಪ್ರತಿಘಾತ ಮಾಡುವ ಪ್ರಸಂಗವಿಲ್ಲ ಎಂದು ನನಗೆ ತೋರುತ್ತಿದೆ.

ವೈಶಂಪಾಯನಃ

ತತಃ ಶೀಘ್ರಂ ಸಮಾಗಮ್ಯ ಉತ್ತರಃ ಸ್ವಜನಂ ಬಹು ।
ಪರಸ್ಪರಮಮಿತ್ರಘ್ನಃ ಸಸ್ವಜೇ ತಂ ಸಮಾಗತಮ್ ॥೨೧॥

ಪ್ರೀತಿಮಾನ್ ಪುರುಷವ್ಯಾಘ್ರೋ ಹರ್ಷಯುಕ್ತಃ ಪುನಃ ಪುನಃ ॥೨೨॥

ವೈಶಂಪಾಯನ– ಅನಂತರ ಪುರುಷವ್ಯಾಘ್ರನೂ, ಸಂತೋಷದಿಂದ ಕೂಡಿದವನೂ ಆದ ಉತ್ತರನು ಹರ್ಷಯುಕ್ತನಾಗಿ, ಬರುತ್ತಿದ್ದ ಜನರನ್ನು ಶತ್ರುಸಂಹಾರಕನಾದ ಅವನು ಪುನಃ ಪುನಃ ಆಲಿಂಗನ ಮಾಡಿದನು.

ಜನಾಃ

ದಿಷ್ಟ್ಯಾ ಜಯಸಿ ಭದ್ರಂ ತೇ ದಿಷ್ಟ್ಯಾ ಸೂತೋ ಬೃಹನ್ನಳಾ ।
ದಿಷ್ಟ್ಯಾ ಸಂಗ್ರಾಮಮಾಗಮ್ಯ ಭಯಂ ತವ ನ ಕಿಂಚನ ॥೨೩॥

ಜನರು– ದೇವರದಯದಿಂದ ಗೆದ್ದಿದ್ದೀಯೆ. ನಿನಗೆ ಮಂಗಳವಾಗಲಿ. ದೇವರ ದಯದಿಂದ ನಿನಗೆ ಬೃಹನ್ನಳೆಯು ಸೂತಳಾಗಿದ್ದಾಳೆ. ದೇವರದಯದಿಂದಲೇ ಯುದ್ಧ ಭೂಮಿಗೆ ಹೊರಟ ನಿನಗೆ ಯಾವ ಭಯವೂ ಇಲ್ಲ.

ಉತ್ತರಃ

ಅಜೈಷೀದೇಷ ತಾನ್ ಜಿಷ್ಣುಃ ಕುರೂನೇಕರಥೋ ರಣೇ ।
ಏತಸ್ಯ ಬಾಹುವೀರ್ಯಂ ತದ್ ತೇನ ಗಾವೋ ಜಿತಾ ಮಯಾ ॥೨೪॥

ಕುರವೋ ನಿರ್ಜಿತಾ ಯಸ್ಮಾತ್ ಸಂಗ್ರಾಮೇಽಮಿತತೇಜಸಃ ।
ಅಕಾರ್ಷೀದೇಷ ತತ್ಕರ್ಮ ದೇವಪುತ್ರೋಪಮೋ ಯುವಾ ॥೨೫॥

ಏಷ ತತ್ ಪುರುಷವ್ಯಾಘ್ರೋ ವಿಕ್ಷೋಭ್ಯ ಕುರುಮಂಡಲಮ್ ।
ಗಾವಃ ಪ್ರಸಹ್ಯ ಜಿತವಾನ್ ರಣೇ ಮಾಂ ಚಾಪ್ಯಪಾಲಯತ್ ॥೨೬॥

ಉತ್ತರ– ಈ ಅರ್ಜುನನು ಎಲ್ಲಾ ಕುರುಗಳನ್ನೂ ಯುದ್ಧದಲ್ಲಿ ಒಂದು ರಥದಲ್ಲಿ ಕುಳಿತು ಜಯಿಸಿದನು. ನನ್ನ ಗೋವುಗಳು ರಕ್ಷಿತವಾದುದು ಇವನ ಬಾಹುವೀರ್ಯದ ಮಹಿಮೆಯಿಂದ. ಇವನಿಂದಲೇ ಅಮಿತಪರಾಕ್ರಮಿಗಳಾದ ಕುರುಗಳು ಯುದ್ಧದಲ್ಲಿ ನಿರ್ಜಿತರಾದರು. ದೇವಕುಮಾರನಂತಿರುವ ಈ ಯುವಕನು ಆ ಮಹಾಕರ್ಮವನ್ನು ಮಾಡಿದನು. ಈ ಪುರುಷವ್ಯಾಘ್ರನು ಕುರುಸೈನ್ಯವನ್ನು ಅಲ್ಲೋಲಕಲ್ಲೋಲಗೊಳಿಸಿ ತನ್ನ ಬಲದಿಂದ ಗೋವುಗಳನ್ನು ಜಯಿಸಿದನು ಮತ್ತು ನನ್ನನ್ನೂ ರಕ್ಷಿಸಿದನು.

ವೈಶಂಪಾಯನಃ

ಉತ್ತರಸ್ಯ ವಚಃಶ್ರುತ್ವಾ ಶಂಸಮಾನಸ್ಯ ಚಾರ್ಜುನಮ್ ।
ಚೋದಿತಾ ರಾಜಪುತ್ರೇಣ ಜಯಮಂಗಲವಾದಿನಃ ॥೨೭॥

ತತೋ ಗಂಧೈಶ್ಚ ಮಾಲ್ಯೈಶ್ಚ ಧೂಪೈಶ್ಚ ವಸುಸಂಭೃತೈಃ ।
ಕನ್ಯಾಃ ಪಾರ್ಥಮಮಿತ್ರಘ್ನಂ ಕಿರಂತ್ಯಃ ಸಮಪೂಜಯನ್ ॥೨೮॥

ವೈಶಂಪಾಯನ– ಅರ್ಜುನನ ಪ್ರಶಂಸಾರೂಪವಾದ ಉತ್ತರನ ಮಾತುಗಳನ್ನು ಕೇಳಿ ಉತ್ತರನಿಂದ ಪ್ರೇರಿತರಾದ ಜಯಮಂಗಳಗಳನ್ನು ಹೇಳುತ್ತಿದ್ದ ಆ ಜನರು ಮತ್ತು ಕನ್ಯೆಯರೂ ಸಹ ಶತ್ರುಸಂಹಾರಕನಾದ ಅರ್ಜುನನನ್ನು ಗಂಧಮಾಲ್ಯಗಳಿಂದಲೂ,

ಧನಸಹಿತವಾದ ಧೂಪಗಳಿಂದಲೂ ಅವನ ತಲೆಯ ಮೇಲೆ ಎರೆದು ಅವನನ್ನು ಪೂಜಿಸಿದರು.

ಆಪೂರ್ಯಮಾಣೋ ಮಾಲ್ಯೈಶ್ಚ ಗಂಧೈಶ್ಚ ವಿವಿಧೈಃ ಶುಭೈಃ ।
ಸಂಪೂಜ್ಯಮಾನೋ ಲೋಕೇನ ನಗರದ್ವಾರಮಾವಿಶತ್ ॥೨೯॥

ವಿವಿಧವಾದ ಶುಭಮಾಲೆಗಳಿಂದಲೂ, ಗಂಧದಿಂದಲೂ ಜನರಿಂದ ಪೂಜಿಸಲ್ಪಟ್ಟು ತುಂಬಿಹೋಗಿದ್ದ ಅರ್ಜುನನು ನಗರದ್ವಾರವನ್ನು ಪ್ರವೇಶಿಸಿದನು.

ಭೇರ್ಯಶ್ಚ ತೂರ್ಯಾಣಿ ಚ ವೇಣವಶ್ಚ
ವಿಚಿತ್ರವೇಷಾಃ ಪ್ರಮದಾಜನಾಶ್ಚ ।
ಪುರಾದ್ ವಿರಾಟಸ್ಯ ಮಹಾಬಲಸ್ಯ
ನಿಷ್ಕ್ರಮ್ಯ ಭೂಮಿಂಜಯಮಭ್ಯನಂದನ್ ॥೩೦॥

ಭೇರಿಗಳು, ಸಂಗೀತವಾದ್ಯಗಳು, ಕೊಳಲುಗಳು, ವಿಚಿತ್ರವೇಷವನ್ನು ಧರಿಸಿದ್ದ ಪ್ರಮದಾಜನರು ಎಲ್ಲರೂ ಮಹಾಬಲಿಷ್ಠನಾದ ವಿರಾಟನ ನಗರದಿಂದ ಹೊರಬಂದು ಭೂಮಿಂಜಯನನ್ನು ಅಭಿನಂದಿಸಿದರು.

ಪ್ರಶಸ್ಯಮಾನಸ್ತು ಜಯೇನ ತತ್ರ
ಪುತ್ರೋ ವಿರಾಟಸ್ಯ ನ ಹೃಷ್ಯತಿ ಸ್ಮ ।
ಸಂಭಾಷ್ಯಮಾಣಸ್ತು ಜಯೇನ ತೇನ
ಸೋಽಂತರ್ಮನಾಃ ಪಾಂಡವಮೀಕ್ಷ್ಯಮಾಣಃ ॥೩೧॥

ಜಯವನ್ನು ನಿಮಿತ್ತ ಮಾಡಿಕೊಂಡು ಜನರು ಹೊಗಳುತ್ತಿದ್ದರೂ ವಿರಾಟ ಪುತ್ರನಾದ ಉತ್ತರನು ಸಂತೋಷಪಡಲಿಲ್ಲ. ಜಯದ ವಿಷಯದಲ್ಲಿ ಅವನನ್ನು ಕುರಿತು ಮಾತನಾಡಿದಾಗ ಅವನು ಅಂತರ್ಮುಖಿಯಾಗಿ ಪಾಂಡವನನ್ನು ನೋಡಿದನು.

ಪುತ್ರ್ಯಾ ವಿರಾಟಸ್ಯ ತತೋ ವರಾಣಿ
ವಸ್ತ್ರಾಣ್ಯದಾತ್ ಪಾಂಡುಸುತಃ ಸಖೀಭ್ಯಃ ।
ಸಭಾಜಯಂಶ್ಚಾಪಿ ಸಮಾಗತಾಸ್ತಾ
ದೃಷ್ಟ್ವಾ ಜಯಂ ತಚ್ಚ ಬಲಂ ಕುಮಾರ್ಯಃ ॥೩೨॥

ಅನಂತರ ಪಾಂಡುಸುತನಾದ ಅರ್ಜುನನು ವಿರಾಟನ ಮಗಳಾದ ಉತ್ತರೆಗೂ ಮತ್ತು ಅವಳ ಸಖಿಯರಿಗೂ ಶ್ರೇಷ್ಠವಾದ ವಸ್ತ್ರಗಳನ್ನು ಕೊಟ್ಟನು. ಅರ್ಜುನನು ಮತ್ತು ಆ ಸೈನ್ಯವು ಹಿಂದೆ ಬಂದಿದ್ದನ್ನು ನೋಡಿ ಅಲ್ಲಿಗೆ ಬಂದ ಆ ಕುಮಾರಿಯರು ಅವರನ್ನು ಪೂಜಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಏಕೋನಸಪ್ತತಿತಮೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಏಕಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಎಪ್ಪತ್ತನೆಯ ಅಧ್ಯಾಯ

ಉತ್ತರನಿಂದ ದೇವಪುತ್ರನ ಜಯದ ಕಥನ. ರಾಜನ ಸಂತೋಷ ಮತ್ತು ಅರ್ಜುನನಿಂದ ಉತ್ತರೆಗೆ ವಸ್ತ್ರಾದಿದಾನ.

ಜನಮೇಜಯಃ

ಸಭಾಜ್ಯಮಾನಃ ಪೌರೈಶ್ಚ ಸ್ತ್ರೀಭಿರ್ಜಾನಪದೈರಪಿ ।
ಆಸಾದ್ಯಾಂತಃಪುರದ್ವಾರಂ ಪಿತ್ರೇ ಸಂಪ್ರತ್ಯಹಾರಯತ್ ॥೧॥

ಜನಮೇಜಯ– ಪೌರರಿಂದಲೂ ಮತ್ತು ಜಾನಪದರಿಂದಲೂ ಮತ್ತು ಸ್ತ್ರೀಯರಿಂದಲೂ ಪೂಜಿಸಲ್ಪಡುತ್ತಿದ್ದ ಉತ್ತರನು ಅಂತಃಪುರದ ದ್ವಾರವನ್ನು ತಲುಪಿ ದ್ವಾರಪಾಲಕನ ಮೂಲಕ ತಾನು ಬಂದಿದ್ದೇನೆಂಬ ವಾರ್ತೆಯನ್ನು ಕಳುಹಿಸಿದನು.

ತತೋ ದ್ವಾಃಸ್ಥಃ ಸಮಾಗಮ್ಯ ಪ್ರಣಿಪತ್ಯ ಕೃತಾಂಜಲಿಃ ।
ವರ್ಧಯಿತ್ವಾ ಜಯಾಶೀರ್ಭಿರಿದಂ ವಚನಮಬ್ರವೀತ್ ॥೨॥

ಆಗ ದ್ವಾರಪಾಲಕನು ಒಳಗೆ ಬಂದು ರಾಜನಿಗೆ ಕೈಗಳನ್ನು ಮುಗಿದು ಅವನಿಗೆ ಜಯಾಶೀರ್ವಾದಗಳನ್ನು ಹೇಳಿ ಹೀಗೆ ಹೇಳಿದನು.

ರಾಜನ್ ಪೃಥುಯಶಾಃ ಪುತ್ರೋ ಜಿತ್ವಾ ಶತ್ರೂನ್ ಸಮಾಗತಃ ।
ಉತ್ತರಃ ಸಹ ಸೂತೇನ ದ್ವಾರಿ ತಿಷ್ಠತಿ ವಾರಿತಃ ॥೩॥

ಕುಮಾರ್ಯೈರ್ಯೋಧಮುಖ್ಯೈಶ್ಚ ಗಣಿಕಾಭಿಶ್ಚ ಸಂವೃತಃ ।
ಪೌರಜಾನಪದೈರ್ಯುಕ್ತಃ ಪೂಜ್ಯಮಾನೋ ಜಯಾಶಿಷಾ ॥೪॥

ರಾಜನೇ, ಮಹಾಕೀರ್ತಿವಂತನಾದ ನಿನ್ನ ಮಗನಾದ ಉತ್ತರನು ಶತ್ರುಗಳನ್ನು ಗೆದ್ದು ಬಂದು ದ್ವಾರದಲ್ಲಿ ತಡೆಯಲ್ಪಟ್ಟು ನಿಂತಿದ್ದಾನೆ. ಕುಮಾರರಿಂದಲೂ ಶ್ರೇಷ್ಠ ಯೋಧರಿಂದಲೂ, ವೇಶ್ಯೆಯರಿಂದಲೂ ಸಂವೃತನಾಗಿ ಪೌರಜಾನಪದರಿಂದ ಜಯಾಶೀರ್ವಾದಗಳಿಂದ ಪೂಜಿತನಾಗಿ ನಿಂತಿದ್ದಾನೆ (ಎಂದು ಹೇಳಿದನು).

ವೈಶಂಪಾಯನಃ

ತತೋ ಹೃಷ್ಟೋ ಮಹೀಪಾಲಃ ಕ್ಷತ್ತಾರಮಿದಮಬ್ರವೀತ್ ॥೫॥

ಪ್ರವೇಶಯೋಭೌ ತೂರ್ಣಂ ತೌ ದರ್ಶನೇಪ್ಸುರಹಂ ತಯೋಃ ॥೬॥

ವೈಶಂಪಾಯನ– ಆಗ ಸಂತೋಷಗೊಂಡ ರಾಜನು ಸೂತನನ್ನು ಕುರಿತು ಅವರಿಬ್ಬರನ್ನು ಬೇಗ ಪ್ರವೇಶಿಸು. ನಾನು ಅವರಿಬ್ಬರನ್ನೂ ನೋಡಲು ಕಾತರನಾಗಿದ್ದೇನೆ ಎಂದು ಹೇಳಿದನು.

ಕ್ಷತ್ತಾರಂ ಕುರುರಾಜಸ್ತು ಶನೈಃ ಕರ್ಣ ಉವಾಚ ಹ ॥೭॥

ಉತ್ತರಃ ಪ್ರವಿಶತ್ವೇಕೋ ನ ಪ್ರವೇಶ್ಯಾ ಬೃಹನ್ನಳಾ ॥೮॥

ಕುರುರಾಜನಾದ ಯುಧಿಷ್ಠಿರನು ಸೂತನಿಗೆ ಮೆಲ್ಲಗೆ ಕಿವಿಯಲ್ಲಿ ಉತ್ತರನು ಮಾತ್ರ ಪ್ರವೇಶಿಸಲಿ, ಬೃಹನ್ನಳೆಯು ಪ್ರವೇಶಿಸುವುದು ಬೇಡ ಎಂದು ಹೇಳಿದನು.

ಏತಸ್ಯ ಹಿ ಮಹಾಬಾಹೋರ್ವ್ರತಂ ನಿತ್ಯಂ ಮಹಾತ್ಮನಃ ॥೯॥

ಯೋ ಮಮಾಂಗೇ ವ್ರಣಂ ಕುರ್ಯಾತ್
ಶೋಣಿತಂ ವಾ ಪ್ರದರ್ಶಯೇತ್ ।
ಅನ್ಯತ್ರ ಸಂಗ್ರಾಮಗತಾನ್ನ ಸ ಜೀವೇತ್ ಕಥಂಚನ ॥೧೦॥

ಯುದ್ಧವನ್ನು ಬಿಟ್ಟು ಬೇರೆ ಕಾಲದಲ್ಲಿ ಯಾರು ನನ್ನ ದೇಹಕ್ಕೆ ವ್ರಣವನ್ನು ಮಾಡುತ್ತಾರೆಯೋ ಅಥವಾ ನನ್ನ ದೇಹದಿಂದ ರಕ್ತವನ್ನು ಸುರಿಸುತ್ತಾರೆಯೋ ಅವರು ಹೇಗೂ ಬದುಕುವುದಿಲ್ಲ ಎಂಬುದು ಈ ಮಹಾತ್ಮನೂ, ಮಹಾಬಾಹುವೂ ಆದ ಬೃಹನ್ನಳೆಯ ನಿತ್ಯವಾದ ವ್ರತ.

ವ್ಯಕ್ತಂ ಭೃಶಂ ಸುಸಂಕ್ರುದ್ಧೋ ಮಾಂ ದೃಷ್ಟ್ವೈವ ಸಶೋಣಿತಮ್ ।
ವಿರಾಟಂ ಹಿ ಸಹಾಮಾತ್ಯಂ ಹನ್ಯಾತ್ ಸಬಲವಾಹನಮ್ ॥೧೧॥

ಅವನು ರಕ್ತಸಹಿತವಾದ ನನ್ನನ್ನು ನೋಡಿ ಬಹಳ ಕೋಪಗೊಂಡು ವಿರಾಟನನ್ನೂ, ಅವನ ಮಂತ್ರಿಗಳನ್ನೂ ಮತ್ತು ಅವನ ಬಲ, ವಾಹನಗಳನ್ನೂ ಕೊಂದಾನು.

ಇಂದ್ರಂ ವಾऽಪಿ ಕುಬೇರಂ ವಾ ಯಮಂ ವಾ ವರುಣಂ ತಥಾ ।
ಮಮ ಶೋಣಿತಕರ್ತಾರಂ ಮೃದ್ನೀಯಾತ್ ಕಿಂ ಪುನರ್ನರಮ್ ॥೧೨॥

ಕ್ಷಣಮಾತ್ರಂ ಸ ತತ್ರೈವ ದ್ವಾರಿ ತಿಷ್ಠತು ವೀರ್ಯವಾನ್ ॥೧೩॥

ಇಂದ್ರನೇ ಆಗಲಿ, ಕುಬೇರ, ಯಮ ಅಥವಾ ವರುಣನೇ ಆಗಲಿ, ನನ್ನ ದೇಹದಿಂದ ರಕ್ತವನ್ನು ಸುರಿಸಿದರೆ ಅವರನ್ನು ಅವನು ಮರ್ದಿಸುವನು. ಇನ್ನು ಮನುಷ್ಯರ ವಿಷಯದಲ್ಲಿ ಹೇಳತಕ್ಕದ್ದೇನಿದೆ? ಆದ್ದರಿಂದ ಸ್ವಲ್ಪ ಸಮಯದವರೆಗೆ ಪರಾಕ್ರಮಶಾಲಿಯಾದ ಅವನು ಬಾಗಿಲಿನಲ್ಲಿಯೇ ನಿಂತಿರಲಿ.

ವೈಶಂಪಾಯನಃ

ಇತಿ ಪ್ರೋವಾಚ ಧರ್ಮಾತ್ಮಾ ಯುಧಿಷ್ಠಿರ ಉದಾರಧೀಃ ॥೧೪॥

ಇತ್ಯುಕ್ತ್ವಾ ಕ್ಷಮಯಾ ಯುಕ್ತೋ ಧರ್ಮರಾಜೋ ಯುಧಿಷ್ಠಿರಃ ।
ಸಭಾಯಾಂ ಸಹ ಮಾತ್ಸ್ಯೇನ ತೂಷ್ಣೀಮುಪವಿವೇಶ ಹ ॥೧೫॥

ವೈಶಂಪಾಯನ– ಧರ್ಮಾತ್ಮನೂ, ಉದಾರ ಬುದ್ಧಿಯುಳ್ಳವನೂ ಆದ ಯುಧಿಷ್ಠಿರನು ಹೀಗೆ ಹೇಳಿ ಕ್ಷಮೆಯಿಂದ ಯುಕ್ತನಾದ ಅವನು ವಿರಾಟರಾಜನ ಜೊತೆಯಲ್ಲಿ ಸಭೆಯಲ್ಲಿ ಸುಮ್ಮನೆ ಕುಳಿತನು.

ತತೋ ರಾಜಸುತೋ ಜ್ಯೇಷ್ಠಃ ಪ್ರಾವಿಶತ್ ಪೃಥಿವೀಂಜಯಃ ॥೧೬॥

ಸೋಽಭಿವಾದ್ಯ ಪಿತುಃ ಪಾದೌ ಧರ್ಮರಾಜಸ್ಯ ಪಶ್ಯತಃ ।
ತತೋ ರುಧಿರಸಿಕ್ತಾಂಗಂ ಧರ್ಮರಾಜಮಪಶ್ಯತ ॥೧೭॥

ಭೂಮಾವೇಕಾಂತ ಆಸೀನಂ ಸೈರಂಧ್ರ್ಯಾ ಸಮುಪಸ್ಥಿತಮ್ ॥೧೮॥

ಅನಂತರ ಹಿರಿಯ ರಾಜಪುತ್ರನಾದ ಭೂಮಿಂಜಯನು ಪ್ರವೇಶಿಸಿದನು. ಅವನು ಧರ್ಮರಾಜನು ನೋಡುತ್ತಿರುವಂತೆ ತನ್ನ ತಂದೆಯ ಪಾದಗಳಿಗೆ ನಮಸ್ಕರಿಸಿ ಅನಂತರ ರಕ್ತದಿಂದ ತೊಯ್ದ ದೇಹವುಳ್ಳ ಒಂದು ಕಡೆ ಭೂಮಿಯಲ್ಲಿ ಕುಳಿತಿರುವ ಸೈರಂಧ್ರಿಯಿಂದ ಸಹಿತನಾದ ಧರ್ಮರಾಜನನ್ನು ನೋಡಿದನು.

ತತಃ ಪಪ್ರಚ್ಛ ರಾಜಾನಂ ತ್ವರಮಾಣ ಇವೋತ್ತರಃ ॥೧೯॥

ಕೇನಾಯಂ ತಾಡಿತೋ ವಿಪ್ರಃ ಕೇನ ಪಾಪಮಿದಂ ಕೃತಮ್ ॥೨೦॥

ಶ್ರೋತ್ರಿಯೋ ಬ್ರಾಹ್ಮಣಶ್ರೇಷ್ಠ ಇಂದ್ರಾಭಿನವಲಕ್ಷಣಃ ।
ಪೂಜನೀಯೋಽಭಿವಾದ್ಯಶ್ಚ ನ ಪ್ರವಧ್ಯೋಽಯಮೀದೃಶಃ ॥೨೧॥

ಆಗ ಉತ್ತರನು ಶೀಘ್ರವಾಗಿ ರಾಜನನ್ನು ಕುರಿತು ಈ ವಿಪ್ರನನ್ನು ಹೊಡೆದವರು ಯಾರು? ಈ ಪಾಪಕಾರ್ಯವನ್ನು ಮಾಡಿದವನು ಯಾವನು? ಶ್ರೋತ್ರಿಯನೂ, ಬ್ರಾಹ್ಮಣಶ್ರೇಷ್ಠನೂ, ಇಂದ್ರನಂತೆ ಒಳ್ಳೆಯ ಲಕ್ಷಣದಿಂದ ಕೂಡಿದವನೂ ಆದ ಇಂತಹವನು ಪೂಜೆಗೆ ಅರ್ಹನಾದವನು. ನಮಸ್ಕಾರಕ್ಕೆ ಅರ್ಹನಾದವನು. ಎಂದೂ ಪ್ರಹಾರಕ್ಕೆ ಅರ್ಹನಾದವನಲ್ಲ ಎಂದು ಹೇಳಿದನು.

ವಿರಾಟಃ

ಮಯಾಽಯಂ ತಾಡಿತೋ ಜಿಹ್ಮೋ ನ ಚಾಪ್ಯೇತಾವದರ್ಹತಿ ।
ಮಯಾ ಪ್ರಶಸ್ಯಮಾನೇಽಪಿ ತ್ವಯಿ ಷಂಡಂ ಪ್ರಶಂಸತಿ ॥೨೨॥

ತಾಡಿತೋಽಯಂ ಮಯಾ ಪುತ್ರ ದುರಾತ್ಮಾ ಶತ್ರುಕರ್ಶನ ।
ಬೃಹನ್ನಳಾಪ್ರಶಂಸಾಭಿರಸೂಯಾ ಮೇ ಮಹತ್ತಮಾ ॥೨೩॥

ವಿರಾಟ– ನಾನು ನಿನ್ನನ್ನು ಪ್ರಶಂಸೆ ಮಾಡುತ್ತಿದ್ದರೆ ಇವನು ಷಂಡನನ್ನು ಪ್ರಶಂಸೆ ಮಾಡುತ್ತಾನೆ. ಆದ್ದರಿಂದ ಈ ವಂಚಕನಿಗೆ ನಾನು ಪ್ರಹಾರವನ್ನು ಮಾಡಿದೆ. ನಾವು

ಯುದ್ಧವನ್ನು ಬಿಟ್ಟು ಬೇರೆ ಕಾಲದಲ್ಲಿ ಯಾರು ನನ್ನ ದೇಹಕ್ಕೆ ವ್ರಣವನ್ನು ಮಾಡುತ್ತಾರೆಯೋ ಅಥವಾ ನನ್ನ ದೇಹದಿಂದ ರಕ್ತವನ್ನು ಸುರಿಸುತ್ತಾರೆಯೋ ಅವರು ಹೇಗೂ ಬದುಕುವುದಿಲ್ಲ ಎಂಬುದು ಈ ಮಹಾತ್ಮನೂ, ಮಹಾಬಾಹುವೂ ಆದ ಬೃಹನ್ನಳೆಯ ನಿತ್ಯವಾದ ವ್ರತ.

ವ್ಯಕ್ತಂ ಭೃಶಂ ಸುಸಂಕ್ರುದ್ಧೋ ಮಾಂ ದೃಷ್ಟ್ವೈವ ಸಶೋಣಿತಮ್ ।
ವಿರಾಟಂ ಹಿ ಸಹಾಮಾತ್ಯಂ ಹನ್ಯಾತ್ ಸಬಲವಾಹನಮ್ ॥೧೧॥

ಅವನು ರಕ್ತಸಹಿತವಾದ ನನ್ನನ್ನು ನೋಡಿ ಬಹಳ ಕೋಪಗೊಂಡು ವಿರಾಟನನ್ನೂ, ಅವನ ಮಂತ್ರಿಗಳನ್ನೂ ಮತ್ತು ಅವನ ಬಲ, ವಾಹನಗಳನ್ನೂ ಕೊಂದಾನು.

ಇಂದ್ರಂ ವಾऽಪಿ ಕುಬೇರಂ ವಾ ಯಮಂ ವಾ ವರುಣಂ ತಥಾ ।
ಮಮ ಶೋಣಿತಕರ್ತಾರಂ ಮೃದ್ನೀಯಾತ್ ಕಿಂ ಪುನರ್ನರಮ್ ॥೧೨॥

ಕ್ಷಣಮಾತ್ರಂ ಸ ತತ್ರೈವ ದ್ವಾರಿ ತಿಷ್ಠತು ವೀರ್ಯವಾನ್ ॥೧೩॥

ಇಂದ್ರನೇ ಆಗಲಿ, ಕುಬೇರ, ಯಮ ಅಥವಾ ವರುಣನೇ ಆಗಲಿ, ನನ್ನ ದೇಹದಿಂದ ರಕ್ತವನ್ನು ಸುರಿಸಿದರೆ ಅವರನ್ನು ಅವನು ಮರ್ದಿಸುವನು. ಇನ್ನು ಮನುಷ್ಯರ ವಿಷಯದಲ್ಲಿ ಹೇಳತಕ್ಕದ್ದೇನಿದೆ? ಆದ್ದರಿಂದ ಸ್ವಲ್ಪ ಸಮಯದವರೆಗೆ ಪರಾಕ್ರಮಶಾಲಿಯಾದ ಅವನು ಬಾಗಿಲಿನಲ್ಲಿಯೇ ನಿಂತಿರಲಿ.

ವೈಶಂಪಾಯನಃ

ಇತಿ ಪ್ರೋವಾಚ ಧರ್ಮಾತ್ಮಾ ಯುಧಿಷ್ಠಿರ ಉದಾರಧೀಃ ॥೧೪॥

ಇತ್ಯುಕ್ತ್ವಾ ಕ್ಷಮಯಾ ಯುಕ್ತೋ ಧರ್ಮರಾಜೋ ಯುಧಿಷ್ಠಿರಃ ।
ಸಭಾಯಾಂ ಸಹ ಮಾತ್ಸ್ಯೇನ ತೂಷ್ಣೀಮುಪವಿವೇಶ ಹ ॥೧೫॥

ವೈಶಂಪಾಯನ– ಧರ್ಮಾತ್ಮನೂ, ಉದಾರ ಬುದ್ಧಿಯುಳ್ಳವನೂ ಆದ ಯುಧಿಷ್ಠಿರನು ಹೀಗೆ ಹೇಳಿ ಕ್ಷಮೆಯಿಂದ ಯುಕ್ತನಾದ ಅವನು ವಿರಾಟರಾಜನ ಜೊತೆಯಲ್ಲಿ ಸಭೆಯಲ್ಲಿ ಸುಮ್ಮನೆ ಕುಳಿತನು.

ತತೋ ರಾಜಸುತೋ ಜ್ಯೇಷ್ಠಃ ಪ್ರಾವಿಶತ್ ಪೃಥಿವೀಂಜಯಃ ॥೧೬॥

ಸೋಽಭಿವಾದ್ಯ ಪಿತುಃ ಪಾದೌ ಧರ್ಮರಾಜಸ್ಯ ಪಶ್ಯತಃ ।
ತತೋ ರುಧಿರಸಿಕ್ತಾಂಗಂ ಧರ್ಮರಾಜಮಪಶ್ಯತ ॥೧೭॥

ಭೂಮಾವೇಕಾಂತ ಆಸೀನಂ ಸೈರಂಧ್ರ್ಯಾ ಸಮುಪಸ್ಥಿತಮ್ ॥೧೮॥

ಅನಂತರ ಹಿರಿಯ ರಾಜಪುತ್ರನಾದ ಭೂಮಿಂಜಯನು ಪ್ರವೇಶಿಸಿದನು. ಅವನು ಧರ್ಮರಾಜನು ನೋಡುತ್ತಿರುವಂತೆ ತನ್ನ ತಂದೆಯ ಪಾದಗಳಿಗೆ ನಮಸ್ಕರಿಸಿ ಅನಂತರ ರಕ್ತದಿಂದ ತೊಯ್ದ ದೇಹವುಳ್ಳ ಒಂದು ಕಡೆ ಭೂಮಿಯಲ್ಲಿ ಕುಳಿತಿರುವ ಸೈರಂಧ್ರಿಯಿಂದ ಸಹಿತನಾದ ಧರ್ಮರಾಜನನ್ನು ನೋಡಿದನು.

ತತಃ ಪಪ್ರಚ್ಛ ರಾಜಾನಂ ತ್ವರಮಾಣ ಇವೋತ್ತರಃ ॥೧೯॥

ಕೇನಾಯಂ ತಾಡಿತೋ ವಿಪ್ರಃ ಕೇನ ಪಾಪಮಿದಂ ಕೃತಮ್ ॥೨೦॥

ಶ್ರೋತ್ರಿಯೋ ಬ್ರಾಹ್ಮಣಶ್ರೇಷ್ಠ ಇಂದ್ರಾಭನವಲಕ್ಷಣಃ ।
ಪೂಜನೀಯೋಽಭಿವಾದ್ಯಶ್ಚ ನ ಪ್ರವಧ್ಯೋಽಯಮೀದೃಶಃ ॥೨೧॥

ಆಗ ಉತ್ತರನು ಶೀಘ್ರವಾಗಿ ರಾಜನನ್ನು ಕುರಿತು ಈ ವಿಪ್ರನನ್ನು ಹೊಡೆದವರು ಯಾರು? ಈ ಪಾಪಕಾರ್ಯವನ್ನು ಮಾಡಿದವನು ಯಾವನು? ಶ್ರೋತ್ರಿಯನೂ, ಬ್ರಾಹ್ಮಣಶ್ರೇಷ್ಠನೂ, ಇಂದ್ರನಂತೆ ಒಳ್ಳೆಯ ಲಕ್ಷಣದಿಂದ ಕೂಡಿದವನೂ ಆದ ಇಂತಹವನು ಪೂಜೆಗೆ ಅರ್ಹನಾದವನು. ನಮಸ್ಕಾರಕ್ಕೆ ಅರ್ಹನಾದವನು. ಎಂದೂ ಪ್ರಹಾರಕ್ಕೆ ಅರ್ಹನಾದವನಲ್ಲ ಎಂದು ಹೇಳಿದನು.

ವಿರಾಟಃ

ಮಯಾಽಯಂ ತಾಡಿತೋ ಜಿಹ್ಮೋ ನ ಚಾಪ್ಯೇತಾವದರ್ಹತಿ ।
ಮಯಾ ಪ್ರಶಸ್ಯಮಾನೇಽಪಿ ತ್ವಯಿ ಷಂಡಂ ಪ್ರಶಂಸತಿ ॥೨೨॥

ತಾಡಿತೋಽಯಂ ಮಯಾ ಪುತ್ರ ದುರಾತ್ಮಾ ಶತ್ರುಕರ್ಶನ ।
ಬೃಹನ್ನಳಾಪ್ರಶಂಸಾಭಿರಸೂಯಾ ಮೇ ಮಹತ್ತಮಾ ॥೨೩॥

ವಿರಾಟ– ನಾನು ನಿನ್ನನ್ನು ಪ್ರಶಂಸೆ ಮಾಡುತ್ತಿದ್ದರೆ ಇವನು ಷಂಡನನ್ನು ಪ್ರಶಂಸೆ ಮಾಡುತ್ತಾನೆ. ಆದ್ದರಿಂದ ಈ ವಂಚಕನಿಗೆ ನಾನು ಪ್ರಹಾರವನ್ನು ಮಾಡಿದೆ. ನಾವು

ಮಾಡುವ ಪೂಜೆಗೆ ಇವನು ಯೋಗ್ಯನಲ್ಲ. ಎಲೈ ಶತ್ರುಕರ್ಶನನೇ, ಪುತ್ರನೇ, ಈ ದುರಾತ್ಮನನ್ನು ನಾನು ಹೊಡೆದೆ. ಬೃಹನ್ನಳೆಯನ್ನು ಪ್ರಶಂಸೆ ಮಾಡುವುದರಿಂದ ನನಗೆ ದೊಡ್ಡ ಅಸೂಯೆ ಉಂಟಾಯಿತು.

ಉತ್ತರಃ

ಅಕಾರ್ಯಂ ತೇ ಕೃತಂ ರಾಜನ್ ಕ್ಷಿಪ್ರಮೇವ ಪ್ರಸಾದ್ಯತಾಮ್ ।
ಮಾ ತ್ವಂ ಬ್ರಹ್ಮದ್ವಿಷಂ ಘೋರಂ ಸಮೂಲಮುಪನಿರ್ದಹೇತ್ ॥೨೪॥

ಉತ್ತರ– ರಾಜನೇ, ನೀನು ಅಕಾರ್ಯವನ್ನು ಮಾಡಿದ್ದೀಯೆ. ಇವನನ್ನು ಬೇಗ ಪ್ರಸನ್ನೀಕರಿಸಿಕೊ. ಘೋರವಾದ ಈ ದೋಷವು ಬ್ರಹ್ಮದ್ವೇಷವನ್ನು ಮಾಡಿದ ನಿನ್ನನ್ನು ಮೂಲಸಹಿತವಾಗಿ ದಹಿಸದಿರಲಿ.

ವೈಶಂಪಾಯನಃ

ಪುತ್ರಸ್ಯ ವಚನಂ ಶ್ರುತ್ವಾ ವಿರಾಟೋ ರಾಷ್ಟ್ರವರ್ಧನಃ ।
ಕ್ಷಮಯಾಮಾಸ ಕೌಂತೇಯ ಛನ್ನಂ ಬ್ರಾಹ್ಮಣವರ್ಚಸಾ ॥೨೫॥

ವೈಶಂಪಾಯನ– ಪುತ್ರನ ಮಾತನ್ನು ಕೇಳಿ ರಾಷ್ಟ್ರದ ಅಭಿವೃದ್ಧಿ ಮಾಡುವ ವಿರಾಟನು ಬ್ರಾಹ್ಮಣ ವೇಷದಿಂದ ಛನ್ನನಾಗಿದ್ದ ಧರ್ಮರಾಜನ ಕ್ಷಮೆಯನ್ನು ಯಾಚಿಸಿದನು.

ಕ್ಷಮಯಂತಂ ತು ರಾಜಾನಂ ಪಾಂಡವಃ ಪ್ರತ್ಯಭಾಷತ ॥೨೬॥

ಚಿರಂ ಕ್ಷಾಂತಂ ಮಯಾ ರಾಜನ್ ಮನ್ಯುರ್ಮಮ ನ ವಿದ್ಯತೇ ॥೨೭॥

ಯದಿ ಸ್ಮ ತತ್ ಪತೇದ್ ಭೂಮೌ ರುಧಿರಂ ಮಮ ಪಾರ್ಥಿವ ।
ಸರಾಷ್ಟ್ರಸ್ತ್ವಮಿಹೋಚ್ಛೇದಮಾಪದ್ಯೇಥಾ ನರರ್ಷಭ ॥೨೮॥

ಕ್ಷಮೆಯನ್ನು ಯಾಚಿಸುವ ರಾಜನನ್ನು ಕುರಿತು ಧರ್ಮರಾಜನು ರಾಜನೇ, ನಾನು ನಿನ್ನ ಅಪರಾಧವನ್ನು ಬಹಳ ಹಿಂದೆಯೇ ಕ್ಷಮಿಸಿಬಿಟ್ಟಿದ್ದೇನೆ. ನನಗೆ ನಿನ್ನ ಮೇಲೆ ಕೋಪವಿಲ್ಲ. ಎಲೈ ನರರ್ಷಭನೇ, ಒಂದು ಪಕ್ಷ ಆ ರಕ್ತವು ಭೂಮಿಯ ಮೇಲೆ ಬಿದ್ದಿದ್ದರೆ ನಿನ್ನ ರಾಷ್ಟ್ರಸಹಿತನಾಗಿ ನೀನು ವಿನಾಶವನ್ನು ಹೊಂದುತ್ತಿದ್ದೆ ಎಂದು ಹೇಳಿದನು.

ನ ದೂಷಯಾಮಿ ರಾಜೇಂದ್ರ ಯಸ್ತು ಹನ್ಯಾದದೂಷಕಮ್ ।
ಫಲಂ ತಸ್ಯ ಮಹಾರಾಜ ಕ್ಷಿಪ್ರಂ ದಾರುಣಮಾಪ್ನುಯಾತ್ ॥೨೯॥

ರಾಜೇಂದ್ರನೇ, ದೋಷವಿಲ್ಲದಿರುವವನನ್ನು ನಾನು ದೂಷಿಸುವುದಿಲ್ಲ. ಮಹಾರಾಜನೇ, ದೂಷಿಸುವವನು ಶೀಘ್ರವಾಗಿ ಘೋರವಾದ ಫಲವನ್ನು ಹೊಂದುವನು (ಎಂದು ಹೇಳಿದನು).

ವೈಶಂಪಾಯನಃ

ಶೋಣಿತೇ ತು ವ್ಯತಿಕ್ರಾಂತೇ ಪ್ರವಿವೇಶ ಬೃಹನ್ನಳಾ ।
ಅಭಿವಾದ್ಯ ಮಹಾರಾಜಂ ಕಂಕಂ ಚಾಪ್ಯುಪತಿಷ್ಠತ ॥೩೦॥

ವೈಶಂಪಾಯನ– ರಕ್ತವು ಹರಿಯುವುದು ನಿಂತಮೇಲೆ ಬೃಹನ್ನಳೆಯು ಪ್ರವೇಶಿಸಿ ಮಹಾರಾಜನಿಗೆ ನಮಸ್ಕಾರವನ್ನು ಮಾಡಿ ಕಂಕನನ್ನು ನೋಡಿದಳು.

ಕ್ಷಮಯಿತ್ವಾ ತು ಕೌರವ್ಯಂ ರಣಾದುತ್ತರಮಾಗತಮ್ ।
ಪರಿಷ್ವಜ್ಯ ದೃಢಂ ರಾಜಾ ಪ್ರವೇಶ್ಯ ಭವನೋತ್ತಮಮ್ ॥೩೧॥

ಪ್ರಶಶಂಸ ತತೋ ಮಾತ್ಸ್ಯಃ ಶೃಣ್ವತಃ ಸವ್ಯಸಾಚಿನಃ ॥೩೨॥

ಯುಧಿಷ್ಠಿರನ ಕ್ಷಮೆಯನ್ನು ಕೇಳಿ, ವಿರಾಟರಾಜನು ರಣದಿಂದ ಹಿಂದಿರುಗಿದ ಉತ್ತರನನ್ನು ದೃಢವಾಗಿ ಆಲಿಂಗಿಸಿ ಅಂತಃಪುರದೊಳಗೆ ಕರೆದುಕೊಂಡು ಹೋಗಿ ಅರ್ಜುನನು ಕೇಳುತ್ತಿರುವಂತೆಯೇ ಅವನನ್ನು ಪ್ರಶಂಸಿಸಿದನು.

ವಿರಾಟಃ

ತ್ವಯಾ ದಾಯಾದವಾನಸ್ಮಿ ಕೈಕೇಯ್ಯಾನಂದವರ್ಧನ ।
ತ್ವಯಾ ಮೇ ಸದೃಶಃ ಪುತ್ರೋ ನ ಭೂತೋ ನ ಭವಿಷ್ಯತಿ ॥೩೩॥

ವಿರಾಟ– ಕೈಕೇಯಿಯ ಆನಂದವರ್ಧನನಾದ ಪುತ್ರನೇ, ನಿನ್ನಿಂದ ನಾನು ಕೃತ್ಯವಂತನಾಗಿದ್ದಾನೆ. ನನಗೆ ನಿನ್ನಂತಹ ಪುತ್ರನು ಹಿಂದೆ ಇರಲಿಲ್ಲ ಮತ್ತು ಮುಂದೆ ಹುಟ್ಟುವುದಿಲ್ಲ.

ಪದಂ ಪದಸಹಸ್ರೇಣ ಯಶ್ಚರನ್ನಾಪರಾಧ್ಯು(ಧ್ನು)ಯಾತ್ ॥೩೪॥

ಶತ್ರುಗಳ ಒಂದು ಸಹಸ್ರ ಹೆಜ್ಜೆಗೆ ನೀನು ಒಂದು ಹೆಜ್ಜೆಯನ್ನಿಟ್ಟು ಅಂತಹ ಧೈರ್ಯಶಾಲಿಯಾಗಿ, ವೇಗಶಾಲಿಯಾಗಿ ಶತ್ರುಗಳನ್ನು ಗೆದ್ದಿದ್ದೀಯೆ.

ಶೂರಶ್ಚ ಲಘುಹಸ್ತಶ್ಚ ಕರ್ಣೋ ಲಘುಪರಾಕ್ರಮಃ ।
ತೇನ ಕರ್ಣೇನ ತೇ ತಾತ ಕಥಮಾಸೀತ್ ಸಮಾಗಮಃ ॥೩೫॥

ಪ್ರೀತಿಪಾತ್ರನೇ, ಕರ್ಣನು ವೇಗ ಮತ್ತು ಪರಾಕ್ರಮವುಳ್ಳವನು. ವೇಗಶಾಲಿಯಾದ ಹಸ್ತವುಳ್ಳವನು ಮತ್ತು ಶೂರ. ಆ ಕರ್ಣನ ಜೊತೆಯಲ್ಲಿ ನಿನ್ನ ಸಮಾಗಮವು ಹೇಗೆ ಆಯಿತು?

ಪರ್ವತಂ ಯೋ ವಿಭಿಂದ್ಯಾತ್ ತು ರಾಜಪುತ್ರೋ ವರೇಷುಭಿಃ ।
ದುರ್ಯೋಧನೇನ ತೇ ತಾತ ಕಥಮಾಸೀತ್ ಸಮಾಗಮಃ ॥೩೬॥

ಯಾವ ರಾಜಪುತ್ರನು ಶ್ರೇಷ್ಠವಾದ ಬಾಣಗಳಿಂದ ಪರ್ವತವನ್ನೂ ಭೇದಿಸಬಲ್ಲನೋ, ಪ್ರೀತಿಪಾತ್ರನೇ, ಅಂತಹ ದುರ್ಯೋಧನನ ಜೊತೆಯಲ್ಲಿ ನಿನ್ನ ಯುದ್ಧವು ಹೇಗೆ ನಡೆಯಿತು?

ಆಚಾರ್ಯೋ ವೃಷ್ಣಿವೀರಾಣಾಂ ಪಾಂಚಾಲಾನಾಂ ಚ ಯಃ ಪ್ರಭುಃ ।
ಸರ್ವಕ್ಷತ್ರಸ್ಯ ಚಾಚಾರ್ಯಃ ಸರ್ವಶಸ್ತ್ರಭೃತಾಂ ವರಃ ॥೩೭॥

ತೇನ ದ್ರೋಣೇನ ತೇ ತಾತ ಕಥಮಾಸೀತ್ ಸಮಾಗಮಃ ॥೩೮॥

ಪಾಂಚಾಲರಿಗೂ ಮತ್ತು ವೃಷ್ಣಿವೀರರಿಗೂ ಆಚಾರ್ಯರೂ, ಸರ್ವಕ್ಷತ್ರಿಯರಿಗೂ ಆಚಾರ್ಯರೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ ಪ್ರಭುಗಳೂ ಆದ ದ್ರೋಣರ ಜೊತೆಯಲ್ಲಿ ಎಲೈ ಪ್ರೀತಿಪಾತ್ರನೇ, ನಿನ್ನ ಯುದ್ಧವು ಹೇಗಾಯಿತು?

ರಣೇ ಯಂ ಪ್ರೇಕ್ಷ್ಯ ಸೀದಂತಿ ಹತವೀರ್ಯಪರಾಕ್ರಮಾಃ ।
ಕೃಪೇಣ ತೇನ ತೇ ತಾತ ಕಥಮಾಸೀತ್ ಸಮಾಗಮಃ ॥೩೯॥

ಎಲೈ ಪ್ರೀತಿಪಾತ್ರನೇ, ಯುದ್ಧದಲ್ಲಿ ಯಾವ ಕೃಪರನ್ನು ನೋಡಿದ ಮಾತ್ರದಿಂದ ತಮ್ಮ ವೀರ್ಯಪರಾಕ್ರಮಗಳು ನಷ್ಟವಾಗಿ ಯೋಧರು ನಾಶವನ್ನು ಹೊಂದುವರೋ ಅಂತಹ ಕೃಪಾಚಾರ್ಯರ ಜೊತೆಯಲ್ಲಿ ನಿನ್ನ ಸಮಾಗಮವು ಹೇಗೆ ಆಯಿತು?

ಯಸ್ಯ ತದ್ ವಿಶ್ರುತಂ ಲೋಕೇ ಬ್ರಹ್ಮಚರ್ಯಂ ಸುದುಷ್ಕರಮ್ ।
ಪಿತುಃ ಕೃತೇ ಕೃತಂ ಘೋರೇ ಮಹದ್‌ವ್ರತಮನುತ್ತಮಮ್ ॥೪೦॥

ಯೇನ ಯುದ್ಧಂ ಕೃತಂ ಪೂರ್ವಂ ಜಾಮದಗ್ನ್ಯೇನ ವೈ ಸಹ ।
ಭೀಷ್ಮೇಣ ಪುರುಷವ್ಯಾಘ್ರ ನ ಚ ಯುದ್ಧೇ ಪರಾಜಿತಃ ॥೪೧॥

ಯಾವನ ದುಷ್ಕರವಾದ ಬ್ರಹ್ಮಚರ್ಯವು ಲೋಕದಲ್ಲಿ ವಿಶ್ರುತವಾಗಿದೆಯೋ, ಯಾವನು ತಂದೆಯ ಸಲುವಾಗಿ ಘೋರವಾದ ಮಹಾವ್ರತವನ್ನು ಅನುಷ್ಠಾನ ಮಾಡಿದನೋ, ಯಾವನು ಹಿಂದೆ ಪರಶುರಾಮರ ಜೊತೆಯಲ್ಲಿ ಯುದ್ಧವನ್ನು ಮಾಡಿದನೋ ಎಲೈ ಪುರುಷವ್ಯಾಘ್ರನೇ, ಅಂತಹ ಭೀಷ್ಮರು ನಿನ್ನಿಂದ ಹೇಗೆ ಪರಾಜಿತರಾದರು?

ಪರಾಕ್ರಮೀ ಚ ದುರ್ಧರ್ಷೋ ವಿದ್ವಾನ್ ಶೂರೋ ಜಿತೇಂದ್ರಿಯಃ ।
ಕ್ಷಿಪ್ರಕಾರೀ ದೃಢಾವೇಧೀ ವಿಶ್ರುತಃ ಸರ್ವಕರ್ಮಸು ॥೪೨॥

ತೇನ ತೇ ಸಹ ಭೀಷ್ಮೇಣ ಕುರುವೃದ್ಧೇನ ಸಂಯುಗೇ ।
ಯುದ್ಧಮಾಸೀತ್ ಕಥಂ ತೇನ ಸರ್ವಮೇತದ್ ಬ್ರವೀಹಿ ಮೇ ॥೪೩॥

ಪರಾಕ್ರಮಶಾಲಿಯೂ, ಸೋಲಿಸಲು ಅಸಾಧ್ಯನಾದವನೂ, ವಿದ್ವಾಂಸನೂ, ಶೂರನೂ, ಜಿತೇಂದ್ರಿಯನೂ, ಕ್ಷಿಪ್ರವಾಗಿ ಕಾರ್ಯವನ್ನು ಮಾಡುವವನೂ, ದೃಢವಾಗಿ ಶತ್ರುಗಳಿಗೆ ವೇಧವನ್ನು ಉಂಟು ಮಾಡುವವನೂ, ಎಲ್ಲ ಕರ್ಮಗಳಲ್ಲಿಯೂ ಪ್ರಖ್ಯಾತನಾದವನೂ ಆದ ಕುರುವೃದ್ಧರಾದ ಭೀಷ್ಮರ ಜೊತೆಯಲ್ಲಿ ನಿನ್ನ ಯುದ್ಧವು ಹೇಗೆ ನಡೆಯಿತು? ಇದೆಲ್ಲವನ್ನೂ ನನಗೆ ಹೇಳು.

ಆಚಾರ್ಯಪುತ್ರೋ ಯಃ ಶೂರಃ ಸರ್ವಶಸ್ತ್ರಭೃತಾಂ ವರಃ ।
ತೇನ ವೀರೇಣ ತೇ ತಾತ ಕಥಮಾಸೀತ್ ಸಮಾಗಮಃ ॥೪೪॥

ಆಚಾರ್ಯ ಪುತ್ರನೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ, ವೀರನೂ ಆದ ಅಶ್ವತ್ಥಾಮನ ಜೊತೆಯಲ್ಲಿ ಪ್ರೀತಿಪಾತ್ರನೇ, ನಿನ್ನ ಯುದ್ಧವು ಹೇಗೆ ನಡೆಯಿತು?

ಸರ್ವೇ ಚೈವ ಮಹಾವೀರ್ಯಾ ಧಾರ್ತರಾಷ್ಟ್ರಾ ಮಹಾಬಲಾಃ ।
ತೈಶ್ಚ ವೀರೈಶ್ಚ ತೇ ತಾತ ಕಥಮಾಸೀತ್ ಸಮಾಗಮಃ ॥೪೫॥

ಎಲೈ ಪ್ರೀತಿಪಾತ್ರನೇ, ಧೃತರಾಷ್ಟ್ರನ ಪುತ್ರರೆಲ್ಲರೂ ಮಹಾಬಲವುಳ್ಳವರು ಮತ್ತು ಮಹಾವೀರ್ಯವುಳ್ಳವರು. ಆ ವೀರರ ಜೊತೆಯಲ್ಲಿ ನಿನ್ನ ಸಮಾಗಮವು ಹೇಗೆ ನಡೆಯಿತು?

ಉತ್ತರಃ

ನ ಮಯಾ ನಿರ್ಜಿತಾ ಗಾವೋ ನ ಮಯಾ ಕುರವೋ ಜಿತಾಃ ।
ಕೃತಂ ಚ ಕರ್ಮ ತತ್ ಸರ್ವಂ ದೇವಪುತ್ರೇಣ ಕೇನಚಿತ್ ॥೪೬॥

ಉತ್ತರ– ನಾನು ಗೋವುಗಳನ್ನು ಹಿಂದಿರುಗಿಸಲಿಲ್ಲ. ಕುರುಗಳನ್ನೂ ಗೆಲ್ಲಲಿಲ್ಲ. ಯಾವನೋ ಒಬ್ಬ ದೇವಪುತ್ರನು ಆ ಎಲ್ಲ ಕೆಲಸವನ್ನೂ ಮಾಡಿದನು.

ಸ ಹಿ ಭೀತ್ಯಾ ದ್ರವಂತಂ ಮಾಂ ಭೀಷ್ಮದ್ರೋಣಮುಖಾನ್ ಕುರೂನ್ ।
ದೃಷ್ಟ್ವಾ ವಿಷಣ್ಣಂ ಸಂಗ್ರಾಮೇ ದೇವಪುತ್ರೋ ನ್ಯವಾರಯತ್ ॥೪೭॥

ಆ ದೇವಪುತ್ರನಾದರೂ ಭೀಷ್ಮದ್ರೋಣಾದಿ ಕುರುಗಳನ್ನು ನೋಡಿ ಯುದ್ಧದಲ್ಲಿ ವಿಷಾದದಿಂದ ಕೂಡಿ ಹೆದರಿ ಓಡುತ್ತಿದ್ದ ನನ್ನನ್ನು ನೋಡಿ ನಿವಾರಿಸಿದನು.

ಸ ಹ್ಯತಿಷ್ಠದ್ ರಥೋಪಸ್ಥೇ ವಜ್ರಹಸ್ತನಿಭೋ ಯುವಾ ।
ತೇನ ತಾ ನಿರ್ಜಿತಾ ಗಾವಃ ಕುರವಸ್ತೇನ ನಿರ್ಜಿತಾಃ ॥೪೮॥

ತಸ್ಯ ತತ್ ಕರ್ಮ ವೀರಸ್ಯ ನ ಮಯಾ ತಾತ ತತ್ ಕೃತಮ್ ॥೪೯॥

ಆ ಯುವಕನು ವಜ್ರಹಸ್ತನಾದ ಇಂದ್ರನಂತೆ ರಥದ ಅಚ್ಚುಪೀಠದಲ್ಲಿ ನಿಂತು ಗೋವುಗಳನ್ನೂ ಮತ್ತು ಆ ಕುರುಗಳನ್ನೂ ಜಯಿಸಿದನು. ಆ ಕರ್ಮವು ಆ ವೀರನು ಮಾಡಿದುದು. ತಂದೆಯೇ, ನಾನು ಮಾಡಿದುದಲ್ಲ.

ಸ ಹಿ ಶಾರದ್ವತಂ ದ್ರೋಣಂ ದ್ರೋಣಪುತ್ರಂ ಚ ವೀರ್ಯವಾನ್ ।
ಸೂತಪುತ್ರಂ ಚ ಭೀಷ್ಮಂ ಚ ಚಕಾರ ವಿಮುಖಾನ್ ಶರೈಃ ॥೫೦॥

ವೀರ್ಯಶಾಲಿಯಾದ ಅವನು ಕೃಪರನ್ನೂ, ದ್ರೋಣರನ್ನೂ, ದ್ರೋಣಪುತ್ರರಾದ ಅಶ್ವತ್ಥಾಮರನ್ನೂ, ಸೂತಪುತ್ರನಾದ ಕರ್ಣನನ್ನೂ ಮತ್ತು ಭೀಷ್ಮರನ್ನೂ ತನ್ನ ಬಾಣಪ್ರಯೋಗದಿಂದ ವಿಮುಖರನ್ನಾಗಿ ಮಾಡಿದನು.

ದುರ್ಯೋಧನಂ ಚ ಸಮರೇ ಪ್ರಭಿನ್ನಮಿವ ಕುಂಜರಮ್ ।
ಪ್ರಭಗ್ನಮಬ್ರವೀತ್ ಭೀತಂ ರಾಜಪುತ್ರಂ ಮಹಾಬಲಮ್ ॥೫೧॥

ಯುದ್ಧದಲ್ಲಿ ಮದಿಸಿದ ಆನೆಯಂತಿದ್ದ ದುರ್ಯೋಧನನನ್ನು ಪ್ರಭಗ್ನಗೊಳಿಸಿ ಭೀತನಾದ ಮಹಾಬಲನಾದ ಆ ರಾಜಪುತ್ರನನ್ನು ಕುರಿತು ಹೀಗೆ ಹೇಳಿದನು.

ದೇವಪುತ್ರಃ

ನ ಹಸ್ತಿನಪುರೇ ತ್ರಾಣಂ ತವ ಪಶ್ಯಾಮಿ ಕಿಂಚನ ।
ವ್ಯಾಯಾಮೇನ ಪರೀಪ್ಸಸ್ವ ಜೀವಿತಂ ಕೌರವಾತ್ಮಜ ॥೫೨॥

ದೇವಪುತ್ರ– ನಿನಗೆ ಹಸ್ತಿನಪುರದಲ್ಲಿ ಯಾವ ರಕ್ಷಣೆಯೂ ನನಗೆ ತೋರುತ್ತಿಲ್ಲ. ಕೌರವಾತ್ಮಜನೇ, ನೀನು ಹಿಂದಿರುಗಿ ಹೋಗಿ ನಿನ್ನ ಜೀವನವನ್ನು ರಕ್ಷಿಸಿಕೋ (ಲಕ್ಷಾಲಂಕಾರ).

ನ ಹಸ್ತಿನಪುರೇ ಶಕ್ಯಾ ಭೋಕ್ತುಂ ಭೋಗಾಃ ಪಲಾಯತಾ ।
ನ ಮೋಕ್ಷ್ಯಸೇ ಪಲಾಯಂಸ್ತ್ವಂ ರಾಜನ್ ಯುದ್ಧಮನಾ ಭವ ॥೫೩॥

ಪೃಥಿವೀಂ ಭೋಕ್ಷ್ಯಸೇ ಜಿತ್ವಾ ಹತೋ ವಾ ಸ್ವರ್ಗಮಾಪ್ಸ್ಯಸಿ ॥೫೪॥

ಯುದ್ಧದಲ್ಲಿ ಓಡುವ ನಿನ್ನಿಂದ ಹಸ್ತಿನಪುರದಲ್ಲಿ ಯಾವ ಭೋಗಗಳನ್ನೂ ಭೋಗಿಸಲು ಸಾಧ್ಯವಿಲ್ಲ. ರಾಜನೇ, ನೀನು ಓಡಿದರೂ ನಾನು ನಿನ್ನನ್ನು ಬಿಡುವುದಿಲ್ಲ. ಆದ್ದರಿಂದ ಯುದ್ಧಮಾಡುವುದರಲ್ಲಿ ಮನಸ್ಸನ್ನು ಹೊಂದು. ಗೆದ್ದು ಭೂಮಿಯನ್ನು ಭೋಗಿಸುತ್ತೀಯೆ ಅಥವಾ ಹತನಾಗಿ ಸ್ವರ್ಗವನ್ನು ಹೊಂದುವಿ.

ಉತ್ತರಃ

ಸ ನಿವೃತ್ತೋ ನರವ್ಯಾಘ್ರೋ ಮುಂಚನ್ ವಜ್ರನಿಭಾನ್ ಶರಾನ್ ।
ಸಚಿವೈಃ ಸಂವೃತೋ ರಾಜಾ ಭೀಷ್ಮದ್ರೋಣಕೃಪಾದಿಭಿಃ ॥೫೫॥

ಉತ್ತರ– ಹೀಗೆ ಹೇಳಲ್ಪಟ್ಟ ನರವ್ಯಾಘ್ರನಾದ ದುರ್ಯೋಧನರಾಜನು ಭೀಷ್ಮದ್ರೋಣಕೃಪಾದಿಗಳಿಂದಲೂ, ಸಚಿವರಿಂದಲೂ ಸುತ್ತುವರಿಯಲ್ಪಟ್ಟವನಾಗಿ ವಜ್ರದಂತಿದ್ದ ಬಾಣಗಳನ್ನು ಪ್ರಯೋಗಿಸುತ್ತಾ ಯುದ್ಧಕ್ಕೆ ಬಂದನು.

ತಂ ದೃಷ್ಟ್ವಾ ರೋಮಹರ್ಷೋಽಭೂದ್ ದೂರಾತ್ ಸ್ತಂಭಶ್ಚ ಮೇಽಭವತ್।
ಯದಭ್ರಘನಸಂಕಾಶಮನೀಕಂ ವ್ಯಧಮಚ್ಛರೈಃ ॥೫೬॥

ಅವನು (ದೇವಪುತ್ರನು) ದೂರದಿಂದಲೇ ತನ್ನ ಬಾಣಗಳಿಂದ ಮೇಘಸಮೂಹದಂತಿದ್ದ ಆ ದುರ್ಯೋಧನನ ಸೈನ್ಯವನ್ನು ಬಾಣಗಳಿಂದ ಚದುರಿಸುವುದನ್ನು ನೋಡಿ ನನಗೆ ರೋಮಹರ್ಷವೂ ಮತ್ತು ಮನೋವಾಕ್‌ಗಳ ಸ್ತಂಭನವೂ ಉಂಟಾಯಿತು.

ತತ್ ಪ್ರಣುದ್ಯ ರಥಾನೀಕಂ ಸಿಂಹರ್ಷಭಸಮೋ ಯುವಾ ।
ತಾನ್ ಕುರೂನ್ ದ್ರಾವಯದ್ ರಾಜನ್ ರಣೇ ನಾಗ ಇವ ಶ್ವಸನ್ ॥

ತರುಣ ಸಿಂಹಸದೃಶನಾದ ಆ ಯುವಕನು ಕೌರವರಥ ಸಮೂಹವನ್ನು ಮರ್ದಿಸಿ ಎಲೈ ರಾಜನೇ, ಭುಸುಗುಟ್ಟುವ ಸರ್ಪದಂತೆ ಯುದ್ಧದಲ್ಲಿ ಕೌರವರನ್ನು ಓಡಿಸಿದನು.

ಏಕೇನ ತೇನ ಶೂರೇಣ ಷಡ್ರಥಾಃ ಪರಿನಿರ್ಜಿತಾಃ ।
ಶಾರ್ದೂಲೇನೇವ ಮತ್ತೇನ ಮೃಗಾಸ್ಸೃಣಚರಾ ಯಥಾ ॥೫೮॥

ಮದಿಸಿದ ಹುಲಿಯು ಹುಲ್ಲನ್ನು ತಿನ್ನುವ ಜಿಂಕೆಗಳನ್ನು ಓಡಿಸಿದಂತೆ ಆ ಶೂರನು ಒಬ್ಬನೇ ಆರು ಮಹಾರಥರನ್ನು ಪರಾಭವಗೊಳಿಸಿದನು.

ಹಯಾನಾಂ ಚ ಗಜಾನಾಂ ಚ ಶೂರಾಣಾಂ ಚ ಧನುಷ್ಮತಾಮ್ ।
ನಿಹತಾನಿ ಸಹಸ್ರಾಣಿ ಭಗ್ನಾ ಚ ಕುರುವಾಹಿನೀ ॥೫೯॥

ಸಹಸ್ರಸಂಖ್ಯೆಯ ಅಶ್ವಗಳು, ಗಜಗಳು, ಧನುಷ್ಪಾಣಿಗಳಾದ ಶೂರರು ಕೊಲ್ಲಲ್ಪಟ್ಟರು. ಕುರುಸೈನ್ಯವು ಭಗ್ನವಾಯಿತು.

ಸೂತಪುತ್ರಂ ಶರೈರ್ವಿದ್ಧ್ವಾ ಹಯಾನ್ ಹತ್ವಾ ಮಹಾರಥಃ ।
ದೇವಪುತ್ರಸಮಃ ಸಂಖೇ ರಕ್ತಂ ವಸ್ತ್ರಂ ಸಮಾದದೇ ॥೬೦॥

ದೇವಪುತ್ರಸಮನೂ, ಮಹಾರಥನೂ ಆದ ಅವನು ಸೂತಪುತ್ರನಾದ ಕರ್ಣನನ್ನು ಬಾಣಗಳಿಂದ ಹೊಡೆದು, ಅವನ ಅಶ್ವಗಳನ್ನು ಕೊಂದು, ಅವನ ರಕ್ತವಸ್ತ್ರವನ್ನು ತೆಗೆದುಕೊಂಡನು.

ಚತುರ್ಭಿಃ ಪುನರಾನರ್ಚ್ಛದ್ ಭೀಷ್ಮಂ ಶಾಂತನವಂ ರಣೇ ।
ಸ ತಂ ವಿದ್ಧ್ವಾ ಹಯಾಂಸ್ತಸ್ಯ ನಾಸ್ಯ ವಸ್ತ್ರಂ ಸಮಾದದೇ ॥೬೧॥

ಪುನಃ ಅವನು ಶಂತನುಪುತ್ರರಾದ ಭೀಷ್ಮರನ್ನು ನಾಲ್ಕುಬಾಣಗಳಿಂದ ಹಿಂಸಿಸಿದನು. ಅವನು ಅವರ ಅಶ್ವಗಳಿಗೂ ಹೊಡೆದನು. ಆದರೆ ಅವರ ವಸ್ತ್ರಗಳನ್ನು ತೆಗೆದುಕೊಳ್ಳಲಿಲ್ಲ.

ದುರ್ಯೋಧನಂ ಚ ಬಲವಾನ್ ಬಾಣೈರ್ವಿವ್ಯಾಧ ಸಪ್ತಭಿಃ ।
ತಂ ಸ ವಿದ್ಧ್ವಾ ಹಯಾಂಶ್ಚಾಸ್ಯ ಶುಕ್ಲವಸ್ತ್ರಮಥಾದದೇ ॥೬೨॥

ಬಲಿಷ್ಠನಾದ ಅವನು ದುರ್ಯೋಧನನನ್ನು ಏಳುಬಾಣಗಳಿಂದ ಹೊಡೆದು ಹಿಂಸಿಸಿದನು. ಅವನ ಅಶ್ವಗಳನ್ನು ಕೊಂದು ಅವನನ್ನು ಹಿಂಸೆಗೊಳಿಸಿ ಅವನ ಶುಕ್ಲವಸ್ತ್ರವನ್ನು ತೆಗೆದುಕೊಂಡನು.

ದ್ರೋಣಂ ಕೃಪಂ ಚ ಬಲವಾನ್ ಸೋಮದತ್ತಂ ಜಯದ್ರಥಮ್ ।
ಭೂರಿಶ್ರವಸಮಿಂದ್ರಾಭಂ ಶಕುನಿಂ ಚ ಮಹಾರಥಮ್ ॥೬೩॥

ತ್ರಿಭಿಸ್ತ್ರಿಭಿಃ ಶರೈರ್ವಿದ್ಧ್ವಾ ದುಃಶಾಸನಮುಖಾನಪಿ ।
ವಿವಿಧಾನಿ ಚ ವಸ್ತ್ರಾಣಿ ಮಹಾರ್ಹಾಣ್ಯಾಜಹಾರ ಸಃ ॥೬೪॥

ದ್ರೋಣ, ಕೃಪ, ಬಲಿಷ್ಠನಾದ ಸೋಮದತ್ತ, ಜಯದ್ರಥ, ಇಂದ್ರನಿಗೆ ಸದೃಶನಾದ ಭೂರಿಶ್ರವ, ಮಹಾರಥನಾದ ಶಕುನಿ ಮತ್ತು ದುಃಶಾಸನನೇ ಮೊದಲಾದವರು ಇವರೆಲ್ಲರನ್ನು ಮೂರು ಮೂರು ಬಾಣಗಳಿಂದ ಹೊಡೆದು ಅವರ ಬೆಲೆಬಾಳುವ ವಿವಿಧ ವಸ್ತ್ರಗಳನ್ನು ತೆಗೆದುಕೊಂಡನು.

ದ್ವಾಭ್ಯಾಂ ಶರಾಭ್ಯಾಂ ವಿದ್ಧ್ವಾ ತು ತಥಾSSಚಾರ್ಯಸುತಂ ರಣೇ ।
ಚಾಪಂ ಛಿತ್ತ್ವಾ ವಿಕರ್ಣಸ್ಯ ನೀಲೇ ಚಾದತ್ತ ವಾಸಸೀ ॥೬೫॥

ಆಚಾರ್ಯಪುತ್ರರಾದ ಅಶ್ವತ್ಥಾಮರನ್ನು ಯುದ್ಧದಲ್ಲಿ ಎರಡು ಬಾಣಗಳಿಂದ ಹೊಡೆದು ಅವರ ಧನುಸ್ಸನ್ನು ಕತ್ತರಿಸಿ ವಿಕರ್ಣನ ಧನುಸ್ಸನ್ನು ಕತ್ತರಿಸಿ ಅವನ ನೀಲವಸ್ತ್ರಗಳನ್ನು ತೆಗೆದುಕೊಂಡನು.

ವಿರಾಟಃ

ಕ್ವ ಸ ವೀರೋ ಮಹಾಬಾಹುರ್ದೇವಪುತ್ರೋ ಮಹಾಯಶಾಃ ।
ಯೋ ಮಮಾಮೋಚಯತ್ ಪುತ್ರಂ ಕುರುಭಿರ್ಗ್ರಸ್ತಮಾಹವೇ ॥೬೬॥

ವಿರಾಟ– ಯಾವನು ಕುರುಗಳಿಂದ ಗ್ರಸ್ತನಾದ ನನ್ನ ಪುತ್ರನನ್ನು ಯುದ್ಧದಲ್ಲಿ ರಕ್ಷಿಸಿದನೋ ಅಂತಹ ಮಹಾಬಾಹುವೂ, ಮಹಾಕೀರ್ತಿವಂತನೂ ವೀರನೂ ಆದ ದೇವಪುತ್ರನು ಈಗ ಎಲ್ಲಿದ್ದಾನೆ?

ಇಚ್ಛಾಮಿ ತಮಮಿತ್ರಘ್ನಂ ದ್ರಷ್ಟುಮರ್ಚಿತುಮೇವ ಚ ।
ಯೇನ ಹಿ ತ್ವಂ ಚ ಗಾವಶ್ಚ ಮೋಚಿತಾ ದೇವಸೂನುನಾ ॥೬೭॥

ಯಾವ ದೇವಪುತ್ರನಾದ ಅವನಿಂದ ನನ್ನ ಪುತ್ರನಾದ ನೀನು ಮತ್ತು ಗೋವುಗಳು ರಕ್ಷಿಸಲ್ಪಟ್ಟವೋ ಅಂತಹ ಶತ್ರುಸಂಹಾರಕನಾದ ಅವನನ್ನು ನೋಡಿ ಪೂಜಿಸಲು ನಾನು ಬಯಸುತ್ತೇನೆ.

ತಸ್ಮೈ ದಾಸ್ಯಾಮಿ ತಾಂ ಪುತ್ರೀಂ ಶುಭ್ರವಸ್ತ್ರಾಂ ಸುಹಾಟಕಾಮ್ ।
ಸ್ಫುರಿತಂ ಕಟಿಸೂತ್ರಂ ಚ ಸ್ತ್ರೀಸಹಸ್ರಶತಾನಿ ಚ ॥೬೮॥

ಅವನಿಗೆ ಸುವರ್ಣಾಲಂಕೃತಳಾದ ಶುಭವಸ್ತ್ರಧಾರಿಣಿಯಾದ ನನ್ನ ಆ ಪುತ್ರಿಯನ್ನು ಕೊಡುವೆನು. ಹೊಳೆಯುವ ಕಟಿಸೂತ್ರವನ್ನೂ ಮತ್ತು ಒಂದುಲಕ್ಷ ಸ್ತ್ರೀಯರನ್ನು ಕೊಡುವೆನು.

ಉತ್ತರಃ

ಅಂತರ್ಧಾಯ ಗತಸ್ತಾತ ದೇವಪುತ್ರಃ ಪ್ರತಾಪವಾನ್ ।
ಅದ್ಯ ಶ್ವೋ ವಾ ಪರಶ್ವೋ ವಾ ಮನ್ಯೇ ಪ್ರಾದುರ್ಭವಿಷ್ಯತಿ ॥೬೯॥

ಉತ್ತರ– ತಂದೆಯೇ, ಆ ಪ್ರತಾಪಶಾಲಿಯಾದ ದೇವಪುತ್ರನು ಅಂತರ್ಧಾನವನ್ನು ಹೊಂದಿ ಹೊರಟು ಹೋದನು. ಈ ದಿನವೋ ನಾಳೆಯೋ ಅಥವಾ ಅದರ ಮರುದಿನವೋ ಪ್ರಾದುರ್ಭವಿಸುತ್ತಾನೆ ಎಂದು ಭಾವಿಸುತ್ತೇನೆ.

ವೈಶಂಪಾಯನಃ

ಏವಮಾಖ್ಯಾಯಮಾನಸ್ತು ಧನ್ಯಂ ವಸ್ತ್ರೇಣ ಪಾಂಡವಮ್ ।
ವಸಂತಂ ತತ್ರ ನಾಜ್ಞಾಸೀದ್ ವಿರಾಟಃ ಪಾರ್ಥಮರ್ಜುನಮ್ ॥೭೦॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ವಿರಾಟನು ವಸ್ತ್ರದಿಂದ ಮುಚ್ಚಿಕೊಂಡು ಅಲ್ಲಿ ವಾಸಿಸುತ್ತಿದ್ದ ಪಾಂಡುಪುತ್ರನಾದ ಅರ್ಜುನನನ್ನು ಗುರುತಿಸಲಿಲ್ಲ.

ತತಃ ಪಾರ್ಥೋಽಭ್ಯನುಜ್ಞಾತೋ ವಿರಾಟೇನ ಮಹಾತ್ಮನಾ ।
ಸಹ ಪುತ್ರೇಣ ಮಾತ್ಸ್ಯಸ್ಯ ಮಂತ್ರಯಿತ್ವಾ ಧನಂಜಯಃ ॥೭೧॥

ಇತ್ಯೇವಂ ಬ್ರೂಹಿ ರಾಜಾನಂ ವಿರಾಟಂ ಚ ಯುಧಿಷ್ಠಿರಮ್ ॥೭೨॥

ಇತ್ಯುಕ್ತ್ವಾ ಸಹಸಾ ಪಾರ್ಥಃ ಪ್ರವಿಶ್ಯಾಂತಃಪುರಂ ಶುಭಮ್ ।
ದದೌ ರತ್ನಾನಿ ವಸ್ತ್ರಾಣಿ ವಿರಾಟದುಹಿತುಃ ಸ್ವಯಮ್ ॥೭೩॥

ಅನಂತರ ಅರ್ಜುನನು ಮಹಾತ್ಮನಾದ ವಿರಾಟನಿಂದ ಅನುಮತಿಯನ್ನು ಪಡೆದು ಅವನ ಪುತ್ರನ ಜೊತೆಯಲ್ಲಿ ಏಕಾಂತದಲ್ಲಿ ಮಾತನಾಡಿ ವಿರಾಟನಿಗೂ ಮತ್ತು ಯುಧಿಷ್ಠಿರನಿಗೂ ಈ ರೀತಿಯಲ್ಲಿ ಹೇಳು ಎಂದು ಹೇಳಿ ತಕ್ಷಣ ಅಂತಃಪುರವನ್ನು ಪ್ರವೇಶಿಸಿ ವಿರಾಟನ ಪುತ್ರಿಯಾದ ಉತ್ತರೆಗೆ ತಾನೇ ವಸ್ತ್ರಗಳನ್ನೂ ಮತ್ತು ರತ್ನಗಳನ್ನೂ ಕೊಟ್ಟನು.

ಉತ್ತರಾ ತು ಮಹಾರ್ಹಾಣಿ ವಸ್ತ್ರಾಣ್ಯಾಭರಣಾನಿ ಚ ।
ಪ್ರಗೃಹ್ಯ ತಾನಿ ಸರ್ವಾಣಿ ಪ್ರೀತಾ ಸಾನುಚರಾಽಭವತ್ ॥೭೪॥

ತನ್ನ ಅನುಚರರಿಂದ ಸಹಿತಳಾದ ಉತ್ತರೆಯು ಬಹಳ ಬೆಲೆಬಾಳುವ ಆ ವಸ್ತ್ರಗಳನ್ನು ಮತ್ತು ಆಭರಣಗಳನ್ನು ತೆಗೆದುಕೊಂಡು ಸಂತುಷ್ಟಳಾದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಸಪ್ತತಿತಮೋಽಧ್ಯಾಯಃ ॥

॥ ಗೋಗ್ರಹಣಪರ್ವಣಿ ತ್ರಿಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಎಪ್ಪತ್ತೊಂದನೆಯ ಅಧ್ಯಾಯ

ಯುಧಿಷ್ಠಿರನ ಮುಖದಲ್ಲಿ ರಕ್ತವನ್ನು ನೋಡಿ ಭೀಮಾರ್ಜುನರ ರೋಷವಚನಗಳು ಮತ್ತು ಯುಧಿಷ್ಠಿರನಿಂದ ಅವರ ಸಾಂತ್ವನ.

ವೈಶಂಪಾಯನಃ

ಪ್ರದಾಯ ವಸ್ತ್ರಾಣಿ ಕಿರೀಟಮಾಲೀ
ವಿರಾಟಗೇಹೇ ಮುದಿತಃ ಸಖಿಭ್ಯಃ ।
ಕೃತ್ವಾ ಮಹತ್ ಕರ್ಮ ತದಾऽऽಜಿಮಧ್ಯೇ
ದಿದೃಕ್ಷಯಾ ಸೋऽಭಿಜಗಾಮ ಪಾರ್ಥಮ್ ॥೧॥

ವೈಶಂಪಾಯನ– ಕಿರೀಟಮಾಲಿಯಾದ ಅರ್ಜುನನು ಯುದ್ಧದಲ್ಲಿ ಮಹತ್ಕಾರ್ಯವನ್ನು ಮಾಡಿ ವಿರಾಟನ ಅಂತಃಪುರದಲ್ಲಿ ಸಂತೋಷಗೊಂಡವನಾಗಿ ಸಖಿಯರಿಗೆ ವಸ್ತ್ರಗಳನ್ನು ಕೊಟ್ಟು ಯುಧಿಷ್ಠಿರನನ್ನು ನೋಡಲು ಬಯಸಿ ಅವನ ಕಡೆಗೆ ಬಂದನು.

ಸಂಪ್ರೇಕ್ಷಮಾಣಸ್ತ್ವಥ ಧರ್ಮರಾಜಂ
ಪಪ್ರಚ್ಛ ಪಾರ್ಥೋऽಥ ಸ ಭೀಮಸೇನಮ್ ॥೨॥

ಕಿಂ ಧರ್ಮರಾಜೋ ಹಿ ಯಥಾ ಪುರಾ ಮಾಂ
ಮುಖಂ ಪ್ರತಿಚ್ಛಾದ್ಯ ನ ಚಾಹ ಕಿಂಚಿತ್ ॥೩॥

ಅನಂತರ ಧರ್ಮರಾಜನನ್ನು ನೋಡುತ್ತಾ ಅವನು ಭೀಮಸೇನನನ್ನು ಕುರಿತು ಇದೇನು, ಧರ್ಮರಾಜನು ಹಿಂದೆ ನೋಡಿದಂತೆ ನನ್ನನ್ನು ನೋಡದೆ ಮುಖವನ್ನು ಮುಚ್ಚಿಕೊಂಡು ಏನನ್ನೂ ಮಾತನಾಡುತ್ತಿಲ್ಲ ಎಂದು ಕೇಳಿದನು.

ತಮೇವಮುಕ್ತ್ವಾ ಪ್ರತಿಶಂಕಮಾನಂ
ದೃಷ್ಟ್ವಾऽರ್ಜುನಂ ಭೀಮಸೇನಂ ಚ ರಾಜಾ ।
ತತ್ರಾಬ್ರವೀತ್ ತಾವಭಿವೀಕ್ಷ್ಯ ರಾಜಾ
ಯುಧಿಷ್ಠಿರಸ್ತತ್ ಪರಿಮೃಜ್ಯ ರಕ್ತಮ್ ॥೪॥

ಹೀಗೆ ಹೇಳಿ ತನ್ನ ವಿಷಯದಲ್ಲಿ ಶಂಕೆಪಡುತ್ತಿದ್ದ ಅರ್ಜುನನನ್ನೂ ಮತ್ತು ಭೀಮಸೇನನನ್ನೂ ನೋಡಿ ಧರ್ಮರಾಜನು ರಕ್ತವನ್ನು ಒರೆಸಿಕೊಂಡು ಅವರಿಬ್ಬರನ್ನೂ ಕುರಿತು ಮಾತನಾಡಿದನು.

ದುರಾತ್ಮನಾ ತ್ವಯ್ಯಭಿಪೂಜ್ಯಮಾನೇ
ವಿರಾಟರಾಜೇನ ಹತೋಽಸ್ಮಿ ಪಾರ್ಥ ।
ತಸ್ಮಾತ್ ಪ್ರಹಾರಾದ್ ರುಧಿರಸ್ಯ ಬಿಂದೂನ್
ಪ್ರಾಸ್ಯನ್ನ ಚೇಮೇ ಪೃಥಿವೀಂ ಸ್ಪೃಶೇಯುಃ ॥೫॥

ಅರ್ಜುನನೇ, ನಾನು ನಿನ್ನನ್ನು ಪ್ರಶಂಸಿಸುತ್ತಿರುವಾಗ ದುರಾತ್ಮನಾದ ವಿರಾಟರಾಜನು ನನ್ನನ್ನು ಹೊಡೆದನು. ಅವನ ಏಟಿನಿಂದ ಉಂಟಾದ ರಕ್ತಬಿಂದುಗಳನ್ನು ಭೂಮಿಯನ್ನು ಮುಟ್ಟದಿರಲಿ ಎಂದು ಪಾತ್ರೆಯಲ್ಲಿ ಹಿಡಿದಿದ್ದೇನೆ.

ಇತಿ ಪ್ರತಿಚ್ಛಾದ್ಯ ಮುಖಂ ತತೋಽಹಂ
ಮನ್ಯುಂ ನಿಯಚ್ಛನ್ನುಪವಿಷ್ಟ ಆಸಮ್ ॥೬॥

ಆ ಕಾರಣದಿಂದ ನಾನು ಕೋಪವನ್ನು ತಡೆದು ಮುಖವನ್ನು ಮುಚ್ಚಿಕೊಂಡು ಕುಳಿತಿದ್ದೇನೆ.

ಕ್ರುದ್ಧೇ ತು ವೀರೇ ತ್ವಯಿ ಚಾಪ್ರತೀತೇ
ರಾಜೋ ವಿರಾಟೋ ನ ಲಭೇತ ಶರ್ಮ ।
ಅಜಾನತಾ ತೇನ ಚ ಶೌರ್ಯಮಗ್ರ್ಯಂ
ಛನ್ನಸ್ಯ ತೇ ಪಾರ್ಥ ಬಲಂ ಚ ವೀರ್ಯಮ್ ॥೭॥

ಇದಂ ವಿರಾಟೇನ ಮಯಿ ಪ್ರಯುಕ್ತಂ
ತ್ವಾಂ ವೀಕ್ಷಮಾಣೋ ನ ಗತೋಽಸ್ಮಿ ಹರ್ಷಮ್ ॥೮॥

ವೀರನಾದ ನೀನು ಅಸಂತೋಷಗೊಂಡು ಕ್ರುದ್ಧನಾದರೆ ವಿರಾಟರಾಜನಿಗೆ ಶಾಂತಿಯು ದೊರೆಯುವುದಿಲ್ಲ. ಎಲೈ ಪಾರ್ಥನೇ, ಮರುವೇಷದಿಂದ ಛನ್ನನಾದ ನಿನ್ನ ಶ್ರೇಷ್ಠವಾದ ಶೌರ್ಯವನ್ನು, ಬಲವನ್ನು ಮತ್ತು ವೀರ್ಯವನ್ನು ತಿಳಿಯದ

ಎಪ್ಪತ್ತೊಂದನೆಯ ಅಧ್ಯಾಯ

ಯುಧಿಷ್ಠಿರನ ಮುಖದಲ್ಲಿ ರಕ್ತವನ್ನು ನೋಡಿ ಭೀಮಾರ್ಜುನರ ರೋಷವಚನಗಳು ಮತ್ತು ಯುಧಿಷ್ಠಿರನಿಂದ ಅವರ ಸಾಂತ್ವನ.

ವೈಶಂಪಾಯನಃ

ಪ್ರದಾಯ ವಸ್ತ್ರಾಣಿ ಕಿರೀಟಮಾಲೀ
ವಿರಾಟಗೇಹೇ ಮುದಿತಃ ಸಖಿಭ್ಯಃ ।
ಕೃತ್ವಾ ಮಹತ್ ಕರ್ಮ ತದಾऽऽಜಿಮಧ್ಯೇ
ದಿದೃಕ್ಷಯಾ ಸೋऽಭಿಜಗಾಮ ಪಾರ್ಥಮ್ ॥೧॥

ವೈಶಂಪಾಯನ– ಕಿರೀಟಮಾಲಿಯಾದ ಅರ್ಜುನನು ಯುದ್ಧದಲ್ಲಿ ಮಹತ್ಕಾರ್ಯವನ್ನು ಮಾಡಿ ವಿರಾಟನ ಅಂತಃಪುರದಲ್ಲಿ ಸಂತೋಷಗೊಂಡವನಾಗಿ ಸಖಿಯರಿಗೆ ವಸ್ತ್ರಗಳನ್ನು ಕೊಟ್ಟು ಯುಧಿಷ್ಠಿರನನ್ನು ನೋಡಲು ಬಯಸಿ ಅವನ ಕಡೆಗೆ ಬಂದನು.

ಸಂಪ್ರೇಕ್ಷಮಾಣಸ್ತ್ವಥ ಧರ್ಮರಾಜಂ
ಪಪ್ರಚ್ಛ ಪಾರ್ಥೋऽಥ ಸ ಭೀಮಸೇನಮ್ ॥೨॥

ಕಿಂ ಧರ್ಮರಾಜೋ ಹಿ ಯಥಾ ಪುರಾ ಮಾಂ
ಮುಖಂ ಪ್ರತಿಚ್ಛಾದ್ಯ ನ ಚಾಹ ಕಿಂಚಿತ್ ॥೩॥

ಅನಂತರ ಧರ್ಮರಾಜನನ್ನು ನೋಡುತ್ತಾ ಅವನು ಭೀಮಸೇನನನ್ನು ಕುರಿತು ಇದೇನು, ಧರ್ಮರಾಜನು ಹಿಂದೆ ನೋಡಿದಂತೆ ನನ್ನನ್ನು ನೋಡದೆ ಮುಖವನ್ನು ಮುಚ್ಚಿಕೊಂಡು ಏನನ್ನೂ ಮಾತನಾಡುತ್ತಿಲ್ಲ ಎಂದು ಕೇಳಿದನು.

ತಮೇವಮುಕ್ತ್ವಾ ಪ್ರತಿಶಂಕಮಾನಂ
ದೃಷ್ಟ್ವಾऽರ್ಜುನಂ ಭೀಮಸೇನಂ ಚ ರಾಜಾ ।
ತತ್ರಾಬ್ರವೀತ್ ತಾವಭಿವೀಕ್ಷ್ಯ ರಾಜಾ
ಯುಧಿಷ್ಠಿರಸ್ತತ್ ಪರಿಮೃಜ್ಯ ರಕ್ತಮ್ ॥೪॥

ಹೀಗೆ ಹೇಳಿ ತನ್ನ ವಿಷಯದಲ್ಲಿ ಶಂಕೆಪಡುತ್ತಿದ್ದ ಅರ್ಜುನನನ್ನೂ ಮತ್ತು ಭೀಮಸೇನನನ್ನೂ ನೋಡಿ ಧರ್ಮರಾಜನು ರಕ್ತವನ್ನು ಒರೆಸಿಕೊಂಡು ಅವರಿಬ್ಬರನ್ನೂ ಕುರಿತು ಮಾತನಾಡಿದನು.

ದುರಾತ್ಮನಾ ತ್ವಯ್ಯಭಿಪೂಜ್ಯಮಾನೇ
ವಿರಾಟರಾಜೇನ ಹತೋಽಸ್ಮಿ ಪಾರ್ಥ ।
ತಸ್ಮಾತ್ ಪ್ರಹಾರಾದ್ ರುಧಿರಸ್ಯ ಬಿಂದೂನ್
ಪ್ರಾಸ್ಯನ್ನ ಚೇಮೇ ಪೃಥಿವೀಂ ಸ್ಪೃಶೇಯುಃ ॥೫॥

ಅರ್ಜುನನೇ, ನಾನು ನಿನ್ನನ್ನು ಪ್ರಶಂಸಿಸುತ್ತಿರುವಾಗ ದುರಾತ್ಮನಾದ ವಿರಾಟರಾಜನು ನನ್ನನ್ನು ಹೊಡೆದನು. ಅವನ ಏಟಿನಿಂದ ಉಂಟಾದ ರಕ್ತಬಿಂದುಗಳನ್ನು ಭೂಮಿಯನ್ನು ಮುಟ್ಟದಿರಲಿ ಎಂದು ಪಾತ್ರೆಯಲ್ಲಿ ಹಿಡಿದಿದ್ದೇನೆ.

ಇತಿ ಪ್ರತಿಚ್ಛಾದ್ಯ ಮುಖಂ ತತೋಽಹಂ
ಮನ್ಯುಂ ನಿಯಚ್ಛನ್ನುಪವಿಷ್ಟ ಆಸಮ್ ॥೬॥

ಆ ಕಾರಣದಿಂದ ನಾನು ಕೋಪವನ್ನು ತಡೆದು ಮುಖವನ್ನು ಮುಚ್ಚಿಕೊಂಡು ಕುಳಿತಿದ್ದೇನೆ.

ಕ್ರುದ್ಧೇ ತು ವೀರೇ ತ್ವಯಿ ಚಾಪ್ರತೀತೇ
ರಾಜ್ಞೋ ವಿರಾಟಸ್ಯ ನ ಲಭೇತ ಶರ್ಮ ।
ಅಜಾನತಾ ತೇನ ಚ ಶೌರ್ಯಮಗ್ರ್ಯಂ
ಛನ್ನಸ್ಯ ತೇ ಪಾರ್ಥ ಬಲಂ ಚ ವೀರ್ಯಮ್ ॥೭॥

ಇದಂ ವಿರಾಟೇನ ಮಯಿ ಪ್ರಯುಕ್ತಂ
ತ್ವಾಂ ವೀಕ್ಷಮಾಣೋ ನ ಗತೋಽಸ್ಮಿ ಹರ್ಷಮ್ ॥೮॥

ವೀರನಾದ ನೀನು ಅಸಂತೋಷಗೊಂಡು ಕ್ರುದ್ಧನಾದರೆ ವಿರಾಟರಾಜನಿಗೆ ಶಾಂತಿಯು ದೊರೆಯುವುದಿಲ್ಲ. ಎಲೈ ಪಾರ್ಥನೇ, ಮರುವೇಷದಿಂದ ಛನ್ನನಾದ ನಿನ್ನ ಶ್ರೇಷ್ಠವಾದ ಶೌರ್ಯವನ್ನು, ಬಲವನ್ನು ಮತ್ತು ವೀರ್ಯವನ್ನು ತಿಳಿಯದ

ವಿರಾಟನಿಂದ ಈ ಕೆಲಸವು ನನಗೆ ಮಾಡಲ್ಪಟ್ಟಿತು. ಆದ್ದರಿಂದ ನಿನ್ನನ್ನು ನೋಡುತ್ತಾ ನಾನು ಹರ್ಷಪಡುತ್ತಿಲ್ಲ.

ವೈಶಂಪಾಯನಃ

ತೇನಾಪ್ರಮೇಯೇನ ಮಹಾಬಲೇನ
ತಸ್ಮಿಂಸ್ತಥೋಕ್ತೇ ಶಮಮಾಸ್ಥಿತೇನ ।
ತಂ ಭೀಮಸೇನೋ ಬಲವಾನಮರ್ಷೀ
ಧನಂಜಯಂ ಕ್ರುದ್ಧ ಉವಾಚ ವಾಕ್ಯಮ್ ॥೯॥

ವೈಶಂಪಾಯನ– ಅಪ್ರಮೇಯನೂ, ಮಹಾಬಲನೂ ಆದ ಯುಧಿಷ್ಠಿರನು ಶಾಂತಿಯನ್ನು ಆಶ್ರಯಿಸಿ ಹೀಗೆ ಮಾತನಾಡುತ್ತಿರಲು ಬಲಿಷ್ಠನೂ, ಕೋಪವುಳ್ಳವನೂ ಆದ ಭೀಮಸೇನನು ಕೋಪಗೊಂಡು ಅರ್ಜುನನನ್ನು ಕುರಿತು ಹೀಗೆ ಮಾತನಾಡಿದನು.

ನ ಪಾರ್ಥ ನಿತ್ಯಂ ಕ್ಷಮಕಾಲಮಾಹ
ಬೃಹಸ್ಪತಿರ್ಜ್ಞಾನವತಾಂ ವರಿಷ್ಠಃ ।
ಕ್ಷಮೀ ಹಿ ಸರ್ವೈಃ ಪರಿಭೂಯತೇ ಹಿ
ಯಥಾ ಭುಜಂಗೋ ವಿಷವೀರ್ಯಹೀನಃ ॥೧೦॥

ಅರ್ಜುನನೇ, ಜ್ಞಾನಿಗಳಲ್ಲಿ ಶ್ರೇಷ್ಠರಾದ ಬೃಹಸ್ಪತಿಗಳು ಎಲ್ಲಾ ಕಾಲವೂ ಕ್ಷಮೆಯ ಕಾಲವಲ್ಲ ಎಂದು ಹೇಳಿದ್ದಾರೆ. ಕ್ಷಮೆಯುಳ್ಳ ಮನುಷ್ಯನು ವಿಷವೀರ್ಯರಹಿತವಾದ ಸರ್ಪದಂತೆ ಎಲ್ಲರಿಂದಲೂ ಪರಿಭವವನ್ನು ಹೊಂದುತ್ತಾನೆ.

ವಿರಾಟಮದ್ಯೈವ ನಿಹತ್ಯ ಶೀಘ್ರಂ
ಸಪುತ್ರಪೌತ್ರಂ ಸಕುಲಂ ಸಸೈನ್ಯಮ್ ।
ಯೋಕ್ಷ್ಯಾಮಹೇ ಧರ್ಮಸುತಂ ತು ರಾಜ್ಯೇ
ಅದ್ಯೈವ ಶೀಘ್ರಂ ತ್ವರತೈಷ ಮಾತ್ಸ್ಯಃ ॥೧೧॥

ಈ ದಿನವೇ ವಿರಾಟನನ್ನು ಕೊಂದು ಶೀಘ್ರವಾಗಿ ಅವನ ಪುತ್ರಪೌತ್ರರನ್ನೂ, ಕುಲವನ್ನೂ ಮತ್ತು ಸೈನ್ಯವನ್ನೂ ಸಂಹರಿಸಿ ಯುಧಿಷ್ಠಿರನನ್ನು ರಾಜ್ಯದಲ್ಲಿ ನಿಯೋಜಿಸೋಣ. ಶೀಘ್ರವಾಗಿ ಧರ್ಮರಾಜನು ಮತ್ಸ್ಯದೇಶದ ರಾಜನಾಗಿ ಈ ದಿನವೇ ಮಾಡಲ್ಪಡಲಿ.

ಅನೇನ ಪಾಂಚಾಲಸುತಾऽಥ ಕೃಷ್ಣಾ
ಉಪೇಕ್ಷಿತಾ ಕೀಚಕೇನಾನುಯಾತಾ ।
ತಸ್ಮಾದಯಂ ನಾರ್ಹತಿ ರಾಜಶಬ್ದಂ
ರಾಜಾ ಭವ ತ್ವಂ ನೃಪ ಪಾರ್ಥವೀರ್ಯಾತ್ ॥೧೨॥

ಇವನು ಕೀಚಕನು ಹಿಂಬಾಲಿಸಿದ ಪಾಂಚಾಲಕುಮಾರಿಯಾದ ಕೃಷ್ಣೆಯನ್ನು ಉಪೇಕ್ಷಿಸಿದನು. ಆದ್ದರಿಂದ ಇವನು ರಾಜಶಬ್ದಕ್ಕೆ ಅಯೋಗ್ಯನಾದವನು. ರಾಜನೇ (ಯುಧಿಷ್ಠಿರನೇ) ಅರ್ಜುನನ ಪರಾಕ್ರಮದಿಂದ ನೀನೇ ರಾಜನಾಗು.

ರಾಜಾ ಕುರೂಣಾಂ ಚ ಯುಧಿಷ್ಠಿರೋऽಯಂ
ಮಾತ್ಸ್ಯೇಷು ರಾಜಾ ಭವತು ಪ್ರತೀತಃ ।
ತಂ ಮತ್ಸ್ಯದೇಹಂ ಶತಧಾ ಭಿನದ್ಮಿ
ಕುಂಭಂ ಘನೇನೇವ ಯಥಾऽಂಬುಪೂರ್ಣಮ್ ॥೧೩॥

ಕುರುಗಳಿಗೆ ರಾಜನಾದ ಯುಧಿಷ್ಠಿರನು ಮತ್ಸ್ಯದೇಶಕ್ಕೂ ಸಹ ಪ್ರಸಿದ್ಧನಾದ ರಾಜನಾಗಲಿ. ನೀರಿನಿಂದ ತುಂಬಿದ ಮಡಿಕೆಯನ್ನು ದಂಡದಿಂದ ಒಡೆದಂತೆ ಮತ್ಸ್ಯರಾಜನ ದೇಹವನ್ನು ನಾನು ನೂರುಭಾಗವಾಗಿ ಒಡೆಯುತ್ತೇನೆ.

ಅರ್ಜುನಃ

ಭವತಃ ಕ್ಷಮಯಾ ಚೈವ ಸರ್ವೇ ದೋಷಾಶ್ಚ ನೋऽಭವನ್ ॥೧೪॥

ತಸ್ಮಾದೇನಂ ಚ ಹತ್ವಾ ವೈ ಸಬಲಂ ಸಹಬಾಂಧವಮ್ ।
ಪಶ್ಚಾಚ್ಚೈವ ಕುರೂನ್ ಸರ್ವಾನ್ ಹನಿಷ್ಯಾಮೋ ನ ಸಂಶಯಃ ॥೧೫॥

ಅರ್ಜುನ– ನಿನ್ನ ಕ್ಷಮೆಯಿಂದಲೇ ನಮಗೆ ಎಲ್ಲಾ ದೋಷಗಳೂ ಉಂಟಾದವು. ಆದ್ದರಿಂದ ಸೈನ್ಯ ಮತ್ತು ಬಂಧುಸಹಿತನಾದ ವಿರಾಟನನ್ನು ಕೊಂದು ಅನಂತರ ಎಲ್ಲಾ ಕುರುಗಳನ್ನೂ ಕೊಲ್ಲುವೆನು. ಇದರಲ್ಲಿ ಸಂಶಯವಿಲ್ಲ.

ವೈಶಂಪಾಯನಃ

ಭೀಮಸೇನಶ್ಚ ಯೇ ಚಾನ್ಯೇ ತಥೈವೇತಿ ತಮಬ್ರುವನ್ ॥೧೬॥

ವೈಶಂಪಾಯನ– ಭೀಮಸೇನ ಮತ್ತು ಉಳಿದವರು ಹಾಗೆಯೇ ಸರಿ ಎಂದು ಹೇಳಿದರು.

ತಮಬ್ರವೀದ್ ಧರ್ಮಸುತೋ ಮಹಾತ್ಮಾ
ಕ್ಷಮೀ ವದಾನ್ಯಃ ಕುಪಿತಂ ಚ ಭೀಮಮ್ ।
ನ ಪ್ರತ್ಯುಪಸ್ಥಾಸ್ಯತಿ ಚೇತ್ ಸದಾರಃ
ಪ್ರಸಾದನೇ ಸಮ್ಯಗಥಾಸ್ತು ವಧ್ಯಃ ॥೧೭॥

ಮಹಾತ್ಮನೂ, ಕ್ಷಮಾಶೀಲನೂ, ಉದಾರನೂ ಆದ ಧರ್ಮರಾಜನು ಕೋಪಗೊಂಡ ಭೀಮಸೇನನನ್ನು ಕುರಿತು, ವಿರಾಟರಾಜನು ಪತ್ನೀಸಮೇತನಾಗಿ ನಮ್ಮನ್ನು ಸರಿಯಾಗಿ ಸಮಾಧಾನ ಮಾಡಲು ಬರದಿದ್ದರೆ ನೀನು ಹೇಳಿದಂತೆಯೇ ಆಗಲಿ ಎಂದು ಹೇಳಿದನು.

ನ ಹಂತವ್ಯೋ ದುರಾತ್ಮಾಽಯಂ ವಿರಾಟಶ್ಚಾಪಿ ತೇಽರ್ಜುನ ।
ಶ್ವಃ ಪ್ರಭಾತೇ ಪ್ರವೇಕ್ಷ್ಯಾಮಃ ಸಭಾಂ ಸಿಂಹಾಸನೇಷ್ವಿಹ ॥೧೮॥

ರಾಜವೇಷೇಣ ಸಂಯುಕ್ತಾನ್ ಯದಿ ತತ್ರ ನ ಮಂಸ್ಯತೇ ।
ಪಶ್ಚಾದ್ ವಧ್ಯಾಮಹೇ ಸರ್ವಾನ್ ವಿರಾಟೇನ ಸಬಾಂಧವಾನ್ ॥೧೯॥

ಅರ್ಜುನನೇ, ವಿರಾಟನು ದುರಾತ್ಮನಾದರೂ ಅವನನ್ನು ಕೊಲ್ಲಬಾರದು. ನಾಳೆಯ ಪ್ರಾತಃಕಾಲದಲ್ಲಿ ಸಭೆಯನ್ನು ಪ್ರವೇಶಿಸಿ ಸಿಂಹಾಸನವನ್ನು ಏರೋಣ. ರಾಜವೇಷದಿಂದ ಕೂಡಿದ ನಮ್ಮನ್ನು ಅಲ್ಲಿ ಅವನು ಗೌರವಿಸದಿದ್ದರೆ ಅನಂತರ ನಾವೆಲ್ಲಾ ಬಂಧುಸಹಿತನಾದ ವಿರಾಟನನ್ನು ಸಂಹರಿಸೋಣ (ಎಂದು ಹೇಳಿದನು).

ವೈಶಂಪಾಯನಃ

ಇತಿಕರ್ತವ್ಯತಾಂ ಸರ್ವೇ ಮಂತ್ರಯಿತ್ವಾಽಥ ಪಾಂಡವಾಃ ।
ನ್ಯವಸಂಶ್ಚೈವ ತಾಂ ರಾತ್ರಿಂ ಪಾಂಡವಾ ಧರ್ಮವತ್ಸಲಾಃ ॥೨೦॥

ವೈಶಂಪಾಯನ– ಪಾಂಡವರು ಹೀಗೆ ಮರುದಿನ ಮಾಡಬೇಕಾದ ಕಾರ್ಯದ ರೀತಿಯನ್ನು ಮಂತ್ರಾಲೋಚನೆಯಿಂದ ನಿರ್ಧರಿಸಿ ಧರ್ಮವತ್ಸಲರಾದ ಅವರು ಆ ರಾತ್ರಿಯನ್ನು ಕಳೆದರು.

ಪುತ್ರೇಣ ಸಹ ಮಾತ್ಸ್ಯಸ್ತು ಸಂಪ್ರಹೃಷ್ಟೋ ನರಾಧಿಪಃ ।
ತಾಂ ರಾತ್ರಿಮವಸದ್ ಧೀಮಾನ್ ಸಮಾಶ್ವಸ್ತೇನ ಚೇತಸಾ ॥೨೧॥

ಸಂತೋಷಗೊಂಡ ಮೇಧಾವಿಯಾದ ವಿರಾಟರಾಜನೂ ಸಹ ಸಮಾಧಾನ ಹೊಂದಿದ ಮನಸ್ಸಿನಿಂದ ಕೂಡಿದವನಾಗಿ ಮಗನ ಜೊತೆಯಲ್ಲಿ ಆ ರಾತ್ರಿಯನ್ನು ಕಳೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಸಪ್ತತಿತಮೋऽಧ್ಯಾಯಃ ॥

॥ ಗೋಗ್ರಹಣಪರ್ವಣಿ ಚತುಶ್ಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಗೋಗ್ರಹಣಪರ್ವ ॥

★ ★ ★ ★

ವೈವಾಹಿಕಪರ್ವ

ಎಪ್ಪತ್ತೆರಡನೆಯ ಅಧ್ಯಾಯ

ಮರುದಿವಸದಲ್ಲಿ ಪಾಂಡವರಿಂದ ಸಿಂಹಾಸನದಲ್ಲಿ ಉಪವೇಶನ.
ವಿರಾಟನ ಆಕ್ಷೇಪ ಮತ್ತು ಅರ್ಜುನನ ಉತ್ತರ.

ವೈಶಂಪಾಯನಃ

ತತೋ ದ್ವಿತೀಯೇ ದಿವಸೇ ಭ್ರಾತರಃ ಪಂಚ ಪಾಂಡವಾಃ ।
ಸ್ನಾತಾಃ ಶುಕ್ಲಾಂಬರಧರಾಃ ಸರ್ವೇ ಸುಚರಿತವ್ರತಾಃ ॥೧॥

ಯುಧಿಷ್ಠಿರಂ ಪುರಸ್ಕೃತ್ಯ ಸರ್ವಾಭರಣಭೂಷಿತಾಃ ।
ಅಭಿಪನ್ನಾ ಯಥಾ ನಾಗಾ ಭ್ರಾಜಮಾನಾ ಮಹಾರಥಾಃ ॥೨॥

ವಿರಾಟಸ್ಯ ಸಭಾಂ ಪ್ರಾಪ್ಯ ಭೂಮಿಪಾಲಾಸನೇಷ್ವಥ ।
ನಿಷೇದುಃ ಪಾವಕಪ್ರಖ್ಯಾಃ ಸರ್ವೇ ಧಿಷ್ಣ್ಯೇಷ್ವಿವಾಗ್ನಯಃ ॥೩॥

ವೈಶಂಪಾಯನ– ಮರುದಿವಸ ಸಹೋದರರಾದ ಪಂಚಪಾಂಡವರು ಸ್ನಾನವನ್ನು ಮಾಡಿ ಶುಕ್ಲವಸ್ತ್ರಗಳನ್ನು ಧರಿಸಿ ಎಲ್ಲರೂ ಒಳ್ಳೆಯ ವ್ರತವನ್ನು ಮಾಡಿದವರೂ ಮತ್ತು ಸರ್ವಾಭರಣಭೂಷಿತರೂ ಆದ ಆ ಮಹಾರಥರು ಗಜಗಳಂತೆ ಶೋಭಿಸುತ್ತಾ ಧರ್ಮರಾಜನನ್ನು ಮುಂದೆ ಮಾಡಿಕೊಂಡು ವಿರಾಟನ ಸಭೆಯನ್ನು ಪ್ರವೇಶಿಸಿ ಅಗ್ನಿಯ

ತೇಜಸ್ಸುಳ್ಳ ಅವರು ಅಗ್ನಿಗಳು ತಮ್ಮ ಆಶ್ರಯದಲ್ಲಿ ಇರುವಂತೆ ರಾಜರ ಆಸನಗಳಲ್ಲಿ ಕುಳಿತುಕೊಂಡರು.

ತೇಷು ತತ್ರೋಪವಿಷ್ಟೇಷು ವಿರಾಟಃ ಪೃಥಿವೀಪತಿಃ ।
ಆಜಗಾಮ ಸಭಾಂ ರಾಜಾ ಉತ್ತರೇಣ ಸಹ ಪ್ರಭೋ ॥೪॥

ಪ್ರಭುವೇ, ಅವರು ಅಲ್ಲಿ ಕುಳಿತುಕೊಳ್ಳುತ್ತಿರಲು ವಿರಾಟರಾಜನು ಪುತ್ರನಾದ ಉತ್ತರನ ಜೊತೆಯಲ್ಲಿ ಸಭೆಗೆ ಬಂದನು.

ಸ ತಾನ್ ದೃಷ್ಟ್ವಾ ಮಹಾಸತ್ವಾನ್ ಜ್ವಲತಃ ಪಾವಕಾನಿವ ।
ರಾಜವೇಷಾನುಪಾದಾಯ ಪಾರ್ಥಿವೋ ವಿಸ್ಮಿತೋಽಭವತ್ ॥೫॥

ಅವನು ಮಹಾಸತ್ವವುಳ್ಳವರೂ ಮತ್ತು ಅಗ್ನಿಯಂತೆ ಜ್ವಲಿಸುವವರೂ ಆದ ಅವರು ರಾಜವೇಷವನ್ನು ಧರಿಸಿರುವುದನ್ನು ನೋಡಿ ಆಶ್ಚರ್ಯಗೊಂಡನು.

ಕಿಮಿದಂ ಕೋ ವಿಧಿಸ್ತ್ವೇಷ ಭಯಾರ್ತ ಇವ ಪಾರ್ಥಿವಃ ।
ಪುರುಷಪ್ರವರಾನ್ ದೃಷ್ಟ್ವಾ ವಿಷಾದಮಗಮನ್ನೃಪಃ ॥೬॥

ಇದೇನು? ಇದು ಯಾವ ಪದ್ಧತಿ? ಎಂದು ಆ ಪುರುಷಶ್ರೇಷ್ಠರನ್ನು ನೋಡಿ ಭಯಪೀಡಿತನಾದ ರಾಜನು ವಿಷಾದವನ್ನು ಹೊಂದಿದನು.

ಅಥ ಮಾತ್ಸ್ಯೋಽಬ್ರವೀದ್ ಕಂಕಂ ದೇವರಾಜಮಿವ ಸ್ಥಿತಮ್ ।
ಮರುದ್ಗಣೈಃ ಸಹಾಸೀನಂ ತ್ರಿದಶಾನಾಮಿವೇಶ್ವರಮ್ ॥೭॥

ಸ ಕಿಲಾಕ್ಷನಿವಾಪಸ್ತ್ವಂ ಸಭಾಸ್ತಾರೋ ಮಯಾ ಕೃತಃ ।
ಅಥ ರಾಜಾಸನೇ ಕಸ್ಮಾದ್ ಉಪವಿಷ್ಟೋಽಸ್ಯಲಂಕೃತಃ ॥೮॥

ಅನಂತರ ಮರುದ್ಗಣಗಳ ಜೊತೆಯಲ್ಲಿ ಕುಳಿತ ದೇವತೆಗಳ ಪ್ರಭುವಾದ ಇಂದ್ರನಂತಿದ್ದ ಕಂಕನನ್ನು ನೋಡಿ ಮತ್ಸ್ಯರಾಜನಾದ ವಿರಾಟನು ನಿನ್ನನ್ನು ದ್ಯೂತವನ್ನಾಡುವ ಸಭಾಸ್ತಾರನನ್ನಾಗಿ ನಾನು ಮಾಡಿದ್ದೆನಷ್ಟೆ? ಈ ದಿನ ಏಕೆ ಅಲಂಕೃತನಾಗಿ ರಾಜಾಸನದಲ್ಲಿ ಕುಳಿತಿದ್ದೀಯೆ ಎಂದು ಕೇಳಿದನು.

ವೈಶಂಪಾಯನಃ

ಪರಿಹಾಸೇಚ್ಛಯಾ ರಾಜ್ಞೋ ವಿರಾಟಸ್ಯ ನಿಶಮ್ಯ ತತ್ ।
ಸ್ಮಯಮಾನೋಽಬ್ರವೀದ್ ವಾಕ್ಯಮರ್ಜುನಃ ಪರವೀರಹಾ ॥೯॥

ಇಂದ್ರಸ್ಯಾರ್ಧಾಸನಂ ರಾಜನ್ನಯಮಾರೋಢುಮರ್ಹತಿ ।
ಬ್ರಹ್ಮಣ್ಯಃ ಶ್ರುತವಾಂಸ್ಯಾಗೀ ಸರ್ವಲೋಕಾಭಿಪೂಜಿತಃ ॥೧೦॥

ವೈಶಂಪಾಯನ– ವಿರಾಟನ ಆ ಮಾತನ್ನು ಕೇಳಿ ಪರವೀರಘಾತಕನಾದ ಅರ್ಜುನನು ವಿನೋದದ ಉದ್ದೇಶದಿಂದ ನಗುತ್ತಾ ಮಾತನಾಡಿದನು. ಬ್ರಹ್ಮಣ್ಯನೂ ವಿದ್ಯಾವಂತನೂ, ಉದಾರಿಯೂ, ಸರ್ವಲೋಕಪೂಜಿತನೂ ಆದ ಇವನು ಎಲೈ ರಾಜನೇ, ಇಂದ್ರನ ಅರ್ಧಾಸನವನ್ನೂ ಏರಲು ಅರ್ಹನಾದವನು.

ಅಯಂ ಕುರೂಣಾಮೃಷಭಃ ಕುಂತೀಪುತ್ರೋ ಯುಧಿಷ್ಠಿರಃ ।
ಯಸ್ಯ ಕೀರ್ತಿಃ ಸ್ಥಿತಾ ಲೋಕೇ ಸೂರ್ಯಸ್ಯೇವೋದ್ಯತಃ ಪ್ರಭಾ ॥೧೧॥

ಸಂಸರಂತಿ ದಿಶಃ ಸರ್ವಾ ಯಶಸೋಽಸ್ಯ ಗಭಸ್ತಯಃ ।
ಉದಿತಸ್ಯೇವ ಸೂರ್ಯಸ್ಯ ತೇಜಸೋಽನು ಗಭಸ್ತಯಃ ॥೧೨॥

ಯಾವನ ಕೀರ್ತಿಯು ಉದಯಿಸುವ ಸೂರ್ಯನ ಪ್ರಭೆಯಂತೆ ಲೋಕದಲ್ಲಿ ಎಲ್ಲೆಲ್ಲಿಯೂ ಹರಡಿದೆಯೋ ಅಂತಹ ಇವನು ಕುರುಶ್ರೇಷ್ಠನಾದ ಕುಂತೀಪುತ್ರನಾದ ಯುಧಿಷ್ಠಿರ. ಉದಿಸಿದ ಸೂರ್ಯನ ತೇಜಸ್ಸು ಮತ್ತು ರಶ್ಮಿಗಳಂತೆ ಇವನ ಯಶಸ್ಸಿನ ಕಿರಣಗಳು ಎಲ್ಲ ದಿಕ್ಕುಗಳಲ್ಲಿಯೂ ಹರಡಿವೆ.

ಏನಂ ತ್ರಿಂಶತ್ಸಹಸ್ರಾಣಿ ಕುಂಜರಾಣಾಂ ತರಸ್ವಿನಾಮ್ ।
ಅನ್ವಯುಃ ಪೃಷ್ಠತೋ ರಾಜನ್ ಯಾವದಧ್ಯಾವಸತ್ ಕುರೂನ್ ॥೧೩॥

ಎಲೈ ರಾಜನೇ, ಇವನು ಕುರುರಾಜ್ಯದಲ್ಲಿ ಪ್ರತಿಷ್ಠಿತನಾಗಿದ್ದಾಗ ವೇಗಶಾಲಿಗಳಾದ ಮೂವತ್ತುಸಾವಿರ ಗಜಗಳು ಅವನ ಹಿಂದೆ ಹೋಗುತ್ತಿದ್ದವು.

ತ್ರಿಂಶಚ್ಚೈವ ಸಹಸ್ರಾಣಿ ರಥಾನಾಂ ರಥಿನಾಂ ವರಮ್ ।
ಸದಶ್ವೈರುಪಪನ್ನಾನಿ ಪೃಷ್ಠತೋಽನುಯಯುಃ ಪುರಾ ॥೧೪॥

ಒಳ್ಳೆಯ ಅಶ್ವಗಳನ್ನು ಹೂಡಿದ ಮೂವತ್ತು ಸಾವಿರ ರಥಗಳು ಮತ್ತು ಶ್ರೇಷ್ಠ ರಥಿಕರು ಅವನ ಹಿಂದೆ ಹೋಗುತ್ತಿದ್ದರು.

ವಾಜಿನಾಂ ಚ ಶತಂ ರಾಜನ್ ಸಹಸ್ರಾಣ್ಯಯುತಂ ತಥಾ ॥೧೫॥

ಇಮಮಷ್ಟಶತಂ ಶೂರಾಃ ಸುಮೃಷ್ಟಮಣಿಕುಂಡಲಾಃ ।
ತುಷ್ಟುವುರ್ಮಾಗಧೈಃ ಸಾರ್ಧಂ ಸೂತಾಃ ಶಕ್ರಮಿವರ್ಷಯಃ ॥೧೬॥

ರಾಜನೇ, ಹಾಗೆಯೇ ಇವನ ಹಿಂದೆ ಹತ್ತುಸಹಸ್ರ ಅಶ್ವಗಳು ಹೋಗುತ್ತಿದ್ದವು. ಹೊಳೆಯುವ ಮಣಿಕುಂಡಲಗಳನ್ನುಳ್ಳ ಶೂರರಾದ ಎಂಟುನೂರು ಜನ ಸೂತಮಾಗಧರು, ಋಷಿಗಳು ಇಂದ್ರನನ್ನು ಹೊಗಳಿದಂತೆ, ಇವನನ್ನು ಸ್ತೋತ್ರ ಮಾಡುತ್ತಿದ್ದರು.

ಇಮಂ ನಿತ್ಯಮುಪಾತಿಷ್ಠನ್ ಕುರವಃ ಕಿಂಕರಾ ಯಥಾ ।
ಸರ್ವೇ ಚೈವ ನೃಪಾ ರಾಜನ್ ಧನೇಶ್ವರಮಿವಾಮರಾಃ ॥೧೭॥

ರಾಜನೇ, ಕುರುಗಳು ದಾಸರಂತೆ ಯಾವಾಗಲೂ ಇವನ ಸೇವೆಯಲ್ಲಿರುತ್ತಿದ್ದರು. ಉಳಿದ ರಾಜರೂ ಸಹ ದೇವತೆಗಳು ಕುಬೇರನನ್ನು ಒಲೈಸಿದಂತೆ ಇವನನ್ನು ಒಲೈಸುತ್ತಿದ್ದರು.

ಏಷ ಸರ್ವಾನ್ ಮಹೀಪಾಲಾನ್ ಕರಮಾಹಾರಯತ್ ತದಾ ।
ವೈಶ್ಯಾನಿವ ಮಹಾರಾಜ ವಿವಶಾನ್ ಸ್ವವಶಾನಪಿ ॥೧೮॥

ಎಲೈ ಮಹಾರಾಜನೇ, ಇವನು ಎಲ್ಲಾ ರಾಜರನ್ನೂ ತನ್ನ ವಶರನ್ನಾಗಿ ಮಾಡಿಕೊಂಡು ಅವರು ವಿವಶರಾಗಿ ವೈಶ್ಯರಂತೆ ಕಪ್ಪಗಳನ್ನು ಕೊಡುವಂತೆ ಮಾಡಿದನು.

ಅಷ್ಟಾಶೀತಿಸಹಸ್ರಾಣಿ ಸ್ನಾತಕಾನಾಂ ಮಹಾತ್ಮನಾಮ್ ।
ಉಪಜೀವಂತಿ ರಾಜಾನಮೇನಂ ಸುಚರಿತವ್ರತಮ್ ॥೧೯॥

ಈ ಸುಚರಿತ ವ್ರತವುಳ್ಳ ರಾಜನಿಂದ ಮಹಾತ್ಮರಾದ ಎಂಬತ್ತೆಂಟುಸಾವಿರ ಸ್ನಾತಕರು ಉಪಜೀವಿಸುತ್ತಿದ್ದರು.

ಏಷ ವಿಗ್ರಹವಾನ್ ಧರ್ಮ ಏಷ ವೀರ್ಯವತಾಂ ವರಃ ।
ಏಷ ಬುದ್ಧ್ಯಾऽಧಿಕೋ ಲೋಕೇ ಸಾಧೂನಾಂ ಚ ಪರಾಯಣಮ್ ॥

ಇವನು ಶರೀರವನ್ನು ಧರಿಸಿದ ಧರ್ಮ. ಇವನು ಪರಾಕ್ರಮಶಾಲಿಗಳಲ್ಲಿ ಶ್ರೇಷ್ಠನಾದವನು. ಇವನು ಲೋಕದಲ್ಲಿ ಬುದ್ಧಿಯಿಂದ ಎಲ್ಲರಿಗಿಂತಲೂ ಅಧಿಕನಾದವನು. ಸಜ್ಜನರಿಗೆ ಆಶ್ರಯನಾದವನು.

ಏಷೋऽಸ್ತ್ರಂ ವೇತ್ತಿ ತ್ರೈಲೋಕ್ಯೇ ಸಚರಾಚರೇ ।
ನ ಚೈವಾನ್ಯಃ ಪುಮಾನ್ ವೇತ್ತಿ ನ ವೇತ್ಸ್ಯತಿ ಕದಾಚನ ॥೨೧॥

ನ ದೇವಾ ನಾಸುರಾ ಕೇಚಿನ್ನ ಮನುಷ್ಯಾ ನ ರಾಕ್ಷಸಾಃ ।
ಗಂಧರ್ವಯಕ್ಷಪ್ರವರಾ ಸಕಿನ್ನರಮಹೋರಗಾಃ ॥೨೨॥

ಇವನು ಚರಾಚರಸಹಿತವಾದ ಮೂರುಲೋಕಗಳಲ್ಲಿ ಅನೇಕ ಅಸ್ತ್ರಗಳನ್ನು ತಿಳಿದಿದ್ದಾನೆ. ಇವನನ್ನು ಬಿಟ್ಟು ಬೇರೆ ಪುರುಷರು ಅವರು ದೇವತೆಗಳಾಗಲೀ, ಅಸುರರಾಗಲೀ, ಮನುಷ್ಯರಾಗಲೀ, ರಾಕ್ಷಸರಾಗಲೀ, ಗಂಧರ್ವಯಕ್ಷಪ್ರವರರಾಗಲೀ, ಕಿನ್ನರಮಹೋರಗರಾಗಲೀ ಇವನು ತಿಳಿದಿರುವುದನ್ನು ತಿಳಿದಿಲ್ಲ ಮತ್ತು ಮುಂದೆ ಎಂದೂ ತಿಳಿಯುವುದಿಲ್ಲ.

ದೀರ್ಘದರ್ಶೀ ಮಹಾತೇಜಾಃ ಪೌರಜಾನಪದಪ್ರಿಯಃ ।
ಪಾಂಡವಾನಾಮತಿರಥೋ ಯಜ್ವಾ ಧರ್ಮಪರೋ ವಶೀ ॥೨೩॥

ಇವನು ದೀರ್ಘದರ್ಶೀ, ಮಹಾತೇಜಸ್ವಿ, ಪೌರಜಾನಪದಪ್ರಿಯನಾದವನು, ಪಾಂಡವರಲ್ಲಿ ಅತಿರಥನಾದವನು; ಯಾಗಶೀಲನಾದವನು; ಧರ್ಮಪರನಾದವನು ಮತ್ತು ವಶೀಕೃತಮನಸ್ಸುಳ್ಳವನು.

ಮಹರ್ಷಿಕಲ್ಪೋ ರಾಜರ್ಷಿಸ್ತ್ರಿಷು ಲೋಕೇಷು ವಿಶ್ರುತಃ ।
ಬಲವಾನ್ ಧೃತಿಮಾನ್ ಪ್ರಾಜ್ಞಸ್ಸತ್ಯವಾದೀ ಜಿತೇಂದ್ರಿಯಃ ॥೨೪॥

ಇವನು ಮೂರುಲೋಕಗಳಲ್ಲಿಯೂ ಪ್ರಖ್ಯಾತನಾದ ಮಹರ್ಷಿಸದೃಶನಾದ ರಾಜರ್ಷಿ. ಇವನು ಬಲಿಷ್ಠನಾದವನು; ಧೈರ್ಯಶಾಲಿ; ಪ್ರಾಜ್ಞ; ಸತ್ಯವಚನ ಮತ್ತು ಜಿತೇಂದ್ರಿಯನಾದವನು.

ಧನೈಶ್ಚ ಸಂಚಿತೈಶ್ಚೈವ ಶಕ್ರವೈಶ್ರವಣೋಪಮಃ ।
ಯಥಾ ಮನುರ್ಮಹಾತೇಜಾ ಲೋಕಾನಾಂ ಪರಿರಕ್ಷಿತಾ ॥೨೫॥

ಏವಮೇಷ ಮಹಾತೇಜಾಃ ಪ್ರಜಾನುಗ್ರಹಕಾರಕಃ ॥೨೬॥

ಇವನು ತಾನು ಸಂಪಾದಿಸಿದ ಧನದಿಂದ ಇಂದ್ರನಂತೆ, ಕುಬೇರನಂತೆ ಇದ್ದವನು. ಮಹಾತೇಜಸ್ವಿಯಾದ ಮನುವು ಲೋಕಗಳನ್ನು ರಕ್ಷಿಸುವಂತೆ ಇವನೂ ಲೋಕಗಳನ್ನು ರಕ್ಷಿಸುವವನು. ಇವನು ಪ್ರಜೆಗಳನ್ನು ಅನುಗ್ರಹವನ್ನು ಮಾಡಿ ರಕ್ಷಿಸುವವನು.

ಏಷ ವೃದ್ಧಾನ್ ಅನಾಥಾಂಶ್ಚ ವ್ಯಂಗಾನ್ ಪಂಗೂಶ್ಚ ವಾಮನಾನ್ ।
ಪುತ್ರವತ್ ಪಾಲಯಾಮಾಸ ಪ್ರಜಾ ಧರ್ಮೇಣ ಮಾನಯನ್ ॥೨೭॥

ಇವನು ವೃದ್ಧರನ್ನೂ, ಅನಾಥರನ್ನೂ, ಅಂಗಹೀನರನ್ನೂ, ಕುಂಟರನ್ನೂ, ಕುಳ್ಳರನ್ನೂ ಮತ್ತು ಎಲ್ಲಾ ಪ್ರಜೆಗಳನ್ನೂ ಧರ್ಮವನ್ನು ಬೋಧಿಸುತ್ತಾ ಪುತ್ರರಂತೆ ಪಾಲಿಸಿದನು.

ಏಷ ಧರ್ಮೇ ದಮೇ ಚೈವ ದಾನೇ ಸತ್ಯೇ ರತಃ ಸದಾ ।
ಮಹಾಪ್ರಸಾದೋ ಬ್ರಹ್ಮಣ್ಯಃ ಸತ್ಯವಾದೀ ಚ ಪಾರ್ಥಿವಃ ॥೨೮॥

ಇವನು ಯಾವಾಗಲೂ ಧರ್ಮದಲ್ಲಿಯೂ, ದಮದಲ್ಲಿಯೂ, ದಾನದಲ್ಲಿಯೂ ಮತ್ತು ಸತ್ಯದಲ್ಲಿಯೂ ರತನಾದವನು. ಈ ರಾಜನು ಮಹಾನುಗ್ರಹವನ್ನು ಮಾಡುವವನು. ಬ್ರಾಹ್ಮಣರಿಗೆ ವತ್ಸಲನಾದವನು ಮತ್ತು ಸತ್ಯವಾದಿಯಾದವನು.

ಯತ್‌ಪ್ರಭಾವೇಣ ವೈ ಪಶ್ಯ ತಪ್ಯತೇ ವೈ ಸುಯೋಧನಃ ।
ಸಗಣಃ ಸಹ ಕರ್ಣೇನ ಸೌಬಲೇನ ಚ ವೀರ್ಯವಾನ್ ॥೨೯॥

ಅವನ ಪ್ರಭಾವದಿಂದ ತನ್ನ ಪರಿವಾರದಿಂದ ಮತ್ತು ಕರ್ಣನಿಂದ ಮತ್ತು ಶಕುನಿಯಿಂದ ಸಹಿತನಾದ ವೀರ್ಯವಂತನಾದ ಸುಯೋಧನನು ತಾಪವನ್ನು ಪಡುತ್ತಾನೆ ಎಂಬುದನ್ನು ನೋಡು.

ನ ಶಕ್ಯಂತೇ ಗುಣಾಸ್ತಸ್ಯ ಪ್ರಸಂಖ್ಯಾತುಂ ನರೋತ್ತಮ ।
ಏಷ ಧರ್ಮಪರೋ ನಿತ್ಯಮನೃಶಂಸೀ ಚ ಪಾಂಡವಃ ॥೩೦॥

ಎಲೈ ನರೋತ್ತಮನೇ, ಅವನ ಗುಣಗಳನ್ನು ಎಣಿಸಲು ಸಾಧ್ಯವಿಲ್ಲ. ಇವನು ಯಾವಾಗಲೂ ಧರ್ಮಪರನಾದವನೂ ಮತ್ತು ಮೃದುವಾದವನೂ ಆದ ಪಾಂಡುಪುತ್ರನು.

ಏವಂಯುಕ್ತೋ ಮಹಾರಾಜ ಪಾಂಡವಃ ಪುರುಷರ್ಷಭಃ ।
ಕಥಂ ನಾರ್ಹತಿ ರಾಜಾರ್ಹಮಾಸನಂ ಪೃಥಿವೀಪತಿಃ ॥೩೨॥

ಮಹಾರಾಜನೇ, ಇಂತಹ ಗುಣಗಳಿಂದ ಕೂಡಿದ ಪಾಂಡವನಾದ ಪುರುಷರ್ಷಭನಾದ ಈ ಯುಧಿಷ್ಠಿರನು ರಾಜಾರ್ಹವಾದ ರಾಜಾಸನವನ್ನು ಏರಲು ಏಕೆ ಅರ್ಹನಾಗುವುದಿಲ್ಲ? (ಎಂದು ಕೇಳಿದನು)

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ದ್ವಿಸಪ್ತತಿತಮೋऽಧ್ಯಾಯಃ॥

॥ ವೈವಾಹಿಕಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಎಪ್ಪತ್ತಮೂರನೆಯ ಅಧ್ಯಾಯ

ಪಾಂಡವರನ್ನು ಗುರುತಿಸಿದ ವಿರಾಟನ ಹರ್ಷವಚನಗಳು

ವಿರಾಟಃ

ಯದ್ಯೇಷ ರಾಜಾ ಕೌರವ್ಯಃ ಕುಂತೀಪುತ್ರೋ ಯುಧಿಷ್ಠಿರಃ ।
ಕತರೋ ಹ್ಯರ್ಜುನೋ ಭ್ರಾತಾ ಭೀಮಶ್ಚ ಕತಮೋ ಬಲೀ ॥೧॥

ನಕುಲಃ ಸಹದೇವೋ ವಾ ದ್ರೌಪದೀ ವಾ ಯಶಸ್ವಿನೀ ।
ಯದಾ ದ್ಯೂತೇ ಜಿತಾ ಲೋಕೇ ನ ಪ್ರಾಜ್ಞಾಯಂತ ತೇ ಕ್ವಚಿತ್ ॥೨॥

ವಿರಾಟ– ಇವನು ಕುರುಕುಲದಲ್ಲಿ ಜನಿಸಿದ ಕುಂತೀಪುತ್ರನಾದ ಯುಧಿಷ್ಠಿರನಾದರೆ ಅವನ ತಮ್ಮನಾದ ಅರ್ಜುನನು ಯಾರು? ಮತ್ತು ಬಲಿಷ್ಠನಾದ ಭೀಮಸೇನನು ಯಾರು? ನಕುಲ ಸಹದೇವರು ಯಾರು? ಯಶಸ್ವಿನಿಯಾದ ದ್ರೌಪದಿಯು ಯಾರು?

ದ್ಯೂತದಲ್ಲಿ ಅವರು ಪರಾಜಿತರಾದ ಮೇಲೆ ಎಲ್ಲಿಯೂ ಅವರ ಸುದ್ದಿಯೇ ಕೇಳಿಬರಲಿಲ್ಲ.

ಅರ್ಜುನಃ

ಯ ಏಷ ವಲಲೋಽಭೂತ್ ತೇ ಸೂಪಕಾರಶ್ಚ ವೈ (ತೇ) ನೃಪ ।
ಏಷ ಭೀಮೋ ಮಹಾಭಾಗ ಭೀಮವೀರ್ಯಪರಾಕ್ರಮಃ ॥೩॥

ಅರ್ಜುನ– ಎಲೈ ಮಹಾಭಾಗನೇ, ರಾಜನೇ, ನಿನ್ನ ಅಡುಗೆಮನೆಯಲ್ಲಿ ಭಯಂಕರವಾದ ವೀರ್ಯ, ಪರಾಕ್ರಮವುಳ್ಳ ನಿನ್ನ ಸೂಪಕಾರನಾದ ವಲಲನಿರುವನಷ್ಟೆ! ಇವನೇ ಭೀಮ.

ಏಷ ಕ್ರೋಧವಶಾನ್ ಹತ್ವಾ ಪರ್ವತೇ ಗಂಧಮಾದನೇ ।
ಸೌಗಂಧಿಕಾನಿ ಪುಷ್ಪಾಣಿ ಕೃಷ್ಣಾರ್ಥೇ ಸಮುಪಾನಯತ್ ॥೪॥

ಇವನು ಗಂಧಮಾದನಪರ್ವತದಲ್ಲಿ ಕ್ರೋಧವಶರಾದ ದೈತ್ಯರನ್ನು ಸಂಹರಿಸಿ ದ್ರೌಪದಿಗೆ ಸೌಗಂಧಿಕ ಪುಷ್ಪವನ್ನು ತಂದನು.

ಗಂಧರ್ವವ್ಯಪದೇಶೇನ ಕೀಚಕಾನಾಂ ದುರಾತ್ಮನಾಮ್ ।
ಶತಂ ಷಡಧಿಕಂ ಹತ್ವಾ ದ್ರೌಪದೀಂ ಪ್ರತ್ಯನಂದಯತ್ ॥೫॥

ವ್ಯಾಘ್ರಾನ್ ಋಕ್ಷಾನ್ ಗಜಾಂಶ್ಚೈವ ಹತವಾನ್ ವೈ ಪುರೇ ತವ ॥೬॥

ಗಂಧರ್ವನೆಂಬ ನೆಪ (ನಾಮ)ದಿಂದ ದುರಾತ್ಮರಾದ ನೂರೊಂದು ಜನ ಕೀಚಕರನ್ನು ಕೊಂದು ದ್ರೌಪದಿಯನ್ನು ಸಂತೋಷಪಡಿಸಿದನು. ನಿನ್ನ ಪಟ್ಟಣದಲ್ಲಿ ವ್ಯಾಘ್ರಗಳನ್ನು, ಕರಡಿಗಳನ್ನು ಮತ್ತು ಗಜಗಳನ್ನು ಯುದ್ಧದಲ್ಲಿ ಕೊಂದನು.

ಹಿಡಿಂಬಂ ಚ ಬಕಂ ಚೈವ ಕಿರ್ಮ್ಮೀರಂ ಚ ಜಟಾಸುರಮ್ ।
ಹತ್ವಾ ನಿಷ್ಕಂಟಕಂ ಚಕ್ರೇ ಅರಣ್ಯಂ ಸರ್ವತಃ ಸುಖಮ್ ॥೭॥

ಹಿಡಿಂಬ, ಬಕ, ಕಿರ್ಮ್ಮೀರ ಮತ್ತು ಜಟಾಸುರ ಇವರನ್ನು ಕೊಂದು ಅರಣ್ಯವು ಎಲ್ಲಾ ಕಡೆಯಲ್ಲಿಯೂ ಸುಖವಾಗಿಯೂ ನಿರುಪದ್ರವವಾಗಿಯೂ ಇರುವಂತೆ ಮಾಡಿದನು.

ಯಶ್ಚಾಸೀದಶ್ವಬಂಧಸ್ತೇ ನಕುಲೋಽಯಂ ಪರಂತಪಃ ।
ಗೋಸಂಖ್ಯಃ ಸಹದೇವಶ್ಚ ಮಾದ್ರೀಪುತ್ರೌ ಮಹಾಬಲೌ ॥೮॥

ನಿನ್ನ ಅಶ್ವಬಂಧನಾಗಿದ್ದವನೇ ಪರಂತಪನಾದ ನಕುಲ. ಗೋಸಂಖ್ಯನಾದವನು ಸಹದೇವ. ಇವರು ಮಹಾಬಲರಾದ ಮಾದ್ರೀಪುತ್ರರು.

ಶೃಂಗಾರವೇಷಾಭರಣೌ ರೂಪವಂತೌ ಮನಸ್ವಿನೌ ।
ನಾನಾರಥಸಹಸ್ರಾಣಾಂ ಸಮರ್ಥೌ ಭರತರ್ಷಭೌ ॥೯॥

ಇವರು ಶೃಂಗಾರವೇಷಾಭರಣಗಳನ್ನುಳ್ಳವರೂ, ರೂಪಸಂಪನ್ನರೂ, ಧೈರ್ಯಶಾಲಿಗಳೂ ಮತ್ತು ಅನೇಕ ಸಹಸ್ರರಥಗಳನ್ನು ಎದುರಿಸಲು ಸಮರ್ಥರೂ ಆದ ಭರತರ್ಷಭರು.

ಏಷಾ ಪದ್ಮಪಲಾಶಾಕ್ಷೀ ಸುಮಧ್ಯಾ ಚಾರುಹಾಸಿನೀ ।
ಸೈರಂಧ್ರೀ ದ್ರೌಪದೀ ರಾಜನ್ ಯತ್ಕೃತೇ ಕೀಚಕಾ ಹತಾಃ ॥೧೦॥

ಪದ್ಮಪತ್ರಾಕ್ಷಿಯೂ, ಶೋಭನವಾದ ಮಧ್ಯವುಳ್ಳವಳೂ, ಸುಂದರವಾದ ನಗುವುಳ್ಳವಳೂ ಆದ ಈ ಸೈರಂಧ್ರಿಯೇ ದ್ರೌಪದಿ. ರಾಜನೇ, ಅವಳ ಸಲುವಾಗಿ ಕೀಚಕರು ಹತರಾದರು.

ದ್ರುಪದಸ್ಯ ಪ್ರಿಯಾ ಪುತ್ರೀ ಧೃಷ್ಟದ್ಯುಮ್ನಸ್ಯ ಚಾನುಜಾ ।
ಅಗ್ನಿಕುಂಡಾತ್ ಸಮುದ್ಭೂತಾ ದ್ರೌಪದೀ ತ್ವವಗಮ್ಯತಾಮ್ ॥೧೧॥

ಇವಳನ್ನು ದ್ರುಪದನ ಪ್ರಿಯಳಾದ ಪುತ್ರಿ, ಧೃಷ್ಟದ್ಯುಮ್ನನ ತಂಗಿ, ಅಗ್ನಿಕುಂಡದಿಂದ (ವೇದಿಯಿಂದ) ಎದ್ದುಬಂದ ದ್ರೌಪದಿ ಎಂದು ತಿಳಿ.

ಭೀಮಃ

ಅಸ್ತ್ರಜ್ಞೋ ದುರ್ಲಭಃ ಕಶ್ಚಿತ್ ಕೇವಲಂ ಪೃಥಿವೀಮನು ।
ಧನುರ್ಭೃತಾಂ ತಥಾ ಶ್ರೇಷ್ಠಃ ಕೌಂತೇಯೋಽಯಂ ಧನಂಜಯಃ ॥೧೨॥

ಭೀಮ– ಪೃಥಿವಿಯೆಲ್ಲವನ್ನೂ ಹುಡುಕಿದರೂ ಯಾವನಿಗೆ ಸಮನಾದ ಅಸ್ತ್ರಜ್ಞನು ಸಿಗುವುದಿಲ್ಲವೋ ಅಂತಹ ಇವನು ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಕುಂತೀಪುತ್ರನಾದ ಧನಂಜಯ.

ಏತೇನ ಖಾಂಡವಂ ದಗ್ಧಮ್ ಅಕಾಮಸ್ಯ ಶತಕ್ರತೋಃ ।
ದಗ್ಧಂ ನಾಗವನಂ ಚೈವ ಸಹ ನಾಗೈರ್ನರಾಧಿಪ ॥೧೩॥

ಇವನು ಇಂದ್ರನ ಇಚ್ಛೆಗೆ ವಿರುದ್ಧವಾಗಿ ಖಾಂಡವವನವನ್ನು ದಹಿಸಿದನು. ನರಾಧಿಪನೇ, ನಾಗಗಳಿಂದ ಸಹಿತವಾದ ನಾಗವನ್ನೂ ಸಹ ಇವನು ದಹಿಸಿದನು.

ವರ್ಷಂ ಚ ಶರವರ್ಷೇಣ ವಾರಿತಂ ದುರ್ಜಯೇನ ವೈ ।
ಕರಮಾಹಾರಿತಾಃ ಸರ್ವೇ ಪಾರ್ಥಿವಾಃ ಪೃಥಿವೀಪತೇ ॥೧೪॥

ತನ್ನ ಬಾಣಗಳ ಮಳೆಯಿಂದ ಮಳೆಯನ್ನು ತಡೆದನು. ಎಲೈ ರಾಜನೇ, ಇವನು ಎಲ್ಲ ರಾಜರೂ ಕಪ್ಪವನ್ನು ಕೊಡುವಂತೆ ಮಾಡಿದನು.

ಸ್ತ್ರೀವೇಷಂ ಕೃತವಾನೇಷ ತವ ರಾಜನ್ ನಿವೇಶನೇ ।
ಬೃಹನ್ನಳೇತಿ ಯಾಮಾಹುರರ್ಜುನಂ ಜಯತಾಂ ವರಮ್ ॥೧೫॥

ರಾಜನೇ, ನಿನ್ನ ಮನೆಯಲ್ಲಿ ಸ್ತ್ರೀವೇಷವನ್ನು ಧರಿಸಿ ಬೃಹನ್ನಳೆ ಎಂದು ಕರೆಯಲ್ಪಡುತ್ತಿದ್ದವನೇ ಜಯಶೀಲರಲ್ಲಿ ಶ್ರೇಷ್ಠನಾದ ಅರ್ಜುನನು.

ಉಷಿತಾಃ ಸ್ಮ ಸುಖಂ ಸರ್ವೇ ತವ ರಾಜನ್ ನಿವೇಶನೇ ।
ಅಜ್ಞಾತವಾಸೇ ನಿಭೃತಾ ಗರ್ಭವಾಸ ಇವ ಪ್ರಜಾಃ ॥೧೬॥

ಎಲೈ ರಾಜನೇ, ಪ್ರಜೆಗಳು ಗರ್ಭವಾಸವನ್ನು ಮಾಡಿದಂತೆ ಅಜ್ಞಾತವಾಸದ ಸಮಯದಲ್ಲಿ ಯಾರಿಗೂ ತಿಳಿಯದಂತೆ ನಿನ್ನ ಮನೆಯಲ್ಲಿ ನಾವೆಲ್ಲರೂ ಸುಖವಾಗಿ ವಾಸಮಾಡಿದೆವು.

ವೈಶಂಪಾಯನಃ

ಯದಾऽರ್ಜುನೇನ ತೇ ವೀರಾಃ ಕಥಿತಾಃ ಪಂಚ ಪಾಂಡವಾಃ ।
ತದಾऽರ್ಜುನಸ್ಯ ವೈರಾಟಿಃ ಕಥಯಾಮಾಸ ವಿಕ್ರಮಮ್ ॥೧೭॥

ವೈಶಂಪಾಯನ– ಅರ್ಜುನನು ಆ ವೀರರಾದ ಪಂಚಪಾಂಡವರನ್ನು ಪರಿಚಯಿಸಿಕೊಟ್ಟಮೇಲೆ ವಿರಾಟನ ಮಗನಾದ ಉತ್ತರನು ಅರ್ಜುನನ ಪರಾಕ್ರಮವನ್ನು ವರ್ಣಿಸಿದನು.

ಅಯಂ ಸ ದ್ವಿಷತಾಂ ಮಧ್ಯೇ ಮೃಗಾಣಾಮಿವ ಕೇಸರೀ ।
ಅಚರದ್ ರಥವೃಂದೇಷು ನಿಘ್ನಂಸ್ತೇಷಾಂ ಪರಾವರಾನ್ ॥೧೮॥

ಇವನು ಜಿಂಕೆಗಳ ಮಧ್ಯದಲ್ಲಿರುವ ಸಿಂಹದಂತೆ ಶತ್ರುಗಳ ರಥಸಮೂಹದ ಮಧ್ಯದಲ್ಲಿ ಸಂಚರಿಸುತ್ತಾ ಅವರಲ್ಲಿ ಶ್ರೇಷ್ಠರಾದವರನ್ನೂ ಮತ್ತು ಕನಿಷ್ಠರಾದವರನ್ನೂ ಸಂಹರಿಸಿದನು.

ಅನೇನ ವಿದ್ಧಾ ಮಾತಂಗಾ ಮಹಾಮೇಘೋಪಮಾಸ್ತದಾ ।
ಹಿರಣ್ಯಕಕ್ಷ್ಯಾಃ ಸಂಗ್ರಾಮೇ ದಂತಾಭ್ಯಾಮಗಮನ್ಮಹೀಮ್ ॥೧೯॥

ಇವನಿಂದ ಹೊಡೆಯಲ್ಪಟ್ಟ ಮಹಾಮೇಘದಂತಿದ್ದ ಹಿರಣ್ಯಕಕ್ಷವನ್ನು ಧರಿಸಿದ್ದ ಗಜಗಳು ಯುದ್ಧದಲ್ಲಿ ದಂತಗಳ ಮೇಲೆ ಭೂಮಿಗೆ ಕುಸಿದವು.

ಅನೇನ ವಿಜಿತಾ ಗಾವೋ ನಿರ್ಜಿತಾಃ ಕೌರವಾ ಯುಧಿ ।
ಅಸ್ಯ ಶಂಖಪ್ರಣಾದೇನ ಕರ್ಣೌ ಮೇ ಬಧಿರೀಕೃತೌ ॥೨೦॥

ಜಾಯತೇ ರೋಮಹರ್ಷೋ ಮೇ ಸಂಸ್ಮೃತ್ಯಾಸ್ಯ ಧನುರ್ಧ್ವನಿಮ್ ॥

ಇವನು ಗೋವುಗಳನ್ನು ಜಯಿಸಿದನು. ಯುದ್ಧದಲ್ಲಿ ಕೌರವರನ್ನು ಸೋಲಿಸಿದನು. ಇವನ ಶಂಖದ ನಾದದಿಂದ ನನ್ನ ಕಿವಿಗಳು ಕಿವುಡಾಗಿವೆ. ಅವನ ಧನುಸ್ಸಿನ ನಾದವನ್ನು ಸ್ಮರಣೆ ಮಾಡಿ ನನಗೆ ಇನ್ನೂ ರೋಮಹರ್ಷವು ಉಂಟಾಗುತ್ತದೆ.

ಅನೇನ ರಾಜನ್ ವೀರೇಣ ಭೀಷ್ಮದ್ರೋಣಮುಖಾ ರಥಾಃ ।
ದುರ್ಯೋಧನೇನ ಸಹಿತಾ ನಿರ್ಜಿತಾ ಭೀಮಕರ್ಮಣಾ ॥೨೨॥

ರಾಜನೇ, ಭಯಂಕರಕರ್ಮವನ್ನು ಎಸಗುವ ಈ ವೀರನಿಂದ ದುರ್ಯೋಧನ ಸಹಿತರಾದ ಭೀಷ್ಮ-ದ್ರೋಣ ಮಹಾರಥರು ನಿರ್ಜಿತರಾದರು.

ಅಯಂ ಭೀತಂ ದ್ರವಂತಂ ಮಾಂ ದೇವಪುತ್ರೋ ನ್ಯವಾರಯತ್ ।
ಅಸ್ಯ ಬಾಹುಬಲೇನಾಸ್ಮಿ ಜೀವನ್ ಪ್ರತ್ಯಾಗತಃ ಪುರಮ್ ॥೨೩॥

ಹೆದರಿ ಓಡಿಹೋಗುತ್ತಿದ್ದ ನನ್ನನ್ನು ಈ ದೇವಪುತ್ರನು ತಡೆದನು. ಇವನ ಬಾಹುಬಲದಿಂದ ನಾನು ಬದುಕಿ ಹಿಂದಿರುಗಿ ಪಟ್ಟಣಕ್ಕೆ ಬಂದಿದ್ದೇನೆ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಮತ್ಸ್ಯರಾಜಃ ಪ್ರತಾಪವಾನ್ ।
ಧನಂಜಯಂ ಪರಿಷ್ವಜ್ಯ ಪಾಂಡವಾನಪಿ ಸರ್ವಶಃ ॥೨೪॥

ನಮಸ್ಕೃತ್ಯ ತು ರಾಜಾನಂ ರಾಜಾ ರಾಜ್ಯೇऽಭಿಷೇಚಿತಃ ।
ನಾತೃಪ್ಯದ್ ದರ್ಶನೇ ತೇಷಾಂ ವಿರಾಟೋ ವಾಹಿನೀಪತಿಃ ॥೨೫॥

ಸಂಪ್ರೀಯಮಾಣೋ ರಾಜಾನಂ ಯುಧಿಷ್ಠಿರಮಥಾಬ್ರವೀತ್ ॥೨೬॥

ವೈಶಂಪಾಯನ– ಅವನ ಆ ಮಾತುಗಳನ್ನು ಕೇಳಿದ ಪ್ರತಾಪಶಾಲಿಯಾದ ಮತ್ಸ್ಯರಾಜನು ಅರ್ಜುನನನ್ನು ಆಲಿಂಗಿಸಿ, ಎಲ್ಲ ಪಾಂಡವರನ್ನೂ ಆಲಿಂಗಿಸಿ, ಧರ್ಮರಾಜನಿಗೆ ನಮಸ್ಕಾರವನ್ನು ಮಾಡಿ, ಅವನಿಗೆ ರಾಜ್ಯದಲ್ಲಿ ಅಭಿಷೇಕವನ್ನು ಮಾಡಿದನು. ಸೇನಾನಾಯಕನಾದ ವಿರಾಟನು ಅವರನ್ನು ಎಷ್ಟು ನೋಡಿದರೂ ತೃಪ್ತಿಯನ್ನೇ ಹೊಂದಲಿಲ್ಲ. ಅಂತಹ ಸಂತೋಷದಿಂದ ಕೂಡಿದ ಅವನು ರಾಜನಾದ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡಿದನು.

ದಿಷ್ಟ್ಯಾ ಭವಂತಃ ಸಂಪ್ರಾಪ್ತಾಃ ಸರ್ವೇ ಕುಶಲಿನೋ ವನಾತ್ ।
ದಿಷ್ಟ್ಯಾ ಚ ಚರಿತಂ ಕೃಚ್ಛ್ರಮಜ್ಞಾತಂ ತೈರ್ದುರಾತ್ಮಭಿಃ ॥೨೭॥

ದೇವರ ದಯದಿಂದ ನೀವೆಲ್ಲರೂ ಕ್ಷೇಮದಿಂದ ವನದಿಂದ ಹಿಂದಿರುಗಿದ್ದೀರಿ. ದೇವರದಯದಿಂದಲೇ ಆ ದುರಾತ್ಮರಿಗೆ ತಿಳಿಯದಂತೆ ಕಷ್ಟಕರವಾದ ಅಜ್ಞಾತವಾಸವನ್ನು ಮಾಡಿದ್ದೀರಿ.

ಇದಂ ರಾಜ್ಯಂ ಚ ನಃ ಸರ್ವಂ ಯಚ್ಚಾಪಿ ವಸು ಕಿಂಚನ ।
ಅವಿಭಕ್ತಮೇತದ್ ಭವತಾಂ ನೋತ್ಕಂಠಾಂ ಕರ್ತುಮರ್ಹತ ॥೨೮॥

ನಮಗಿರುವ ಈ ರಾಜ್ಯವು ಮತ್ತು ಏನು ಸಂಪತ್ತಿದೆಯೋ ಅವೆಲ್ಲವೂ ಅವಿಭಕ್ತವಾಗಿ ನಿಮ್ಮದೇ ಆಗಿವೆ. ಚಿಂತೆಯನ್ನು ಪಡಬೇಡಿ (ಎಂದು ಹೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ತ್ರಿಸಪ್ತತಿತಮೋऽಧ್ಯಾಯಃ ॥

ವೈವಾಹಿಕಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎಪ್ಪತ್ತಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ತತೋ ವಿರಾಟಃ ಭಯಕಂಪಿತಾಂಗಃ
ಪ್ರಣಮ್ಯ ಪಾರ್ಥಾನ್ ಶರಣಂ ಜಗಾಮ ।
ದದೌ ಚ ಕನ್ಯಾಮುತ್ತರಾಂ ಫಲ್ಗುನಾಯ
ಪುತ್ರಾರ್ಥಮೇವ ಪ್ರತಿಜಗ್ರಾಹ ಸೋऽಪಿ ॥೪೯॥

ಆಗ ವಿರಾಟ ಭಯದಿಂದ ನಡುಗುತ್ತಾ ತಲೆಬಾಗಿ ಪಾಂಡವರನ್ನು ಶರಣು ಹೊಂದಿದ. ಅರ್ಜುನನಿಗೆ ಮಗಳನ್ನು ವಾಗ್ದಾನ ಮಾಡಿದ. ಅವನು ಅವಳನ್ನು ಮಗನಿಗಾಗಿ ಸ್ವೀಕರಿಸಿದ.

★ ★ ★ ★

ಎಪ್ಪತ್ತನಾಲ್ಕನೆಯ ಅಧ್ಯಾಯ

ಉತ್ತರನಿಂದ ಉತ್ತರೆಯನ್ನು ಅರ್ಜುನನಿಗೆ ಕೊಡುವಂತೆ ಒತ್ತಾಯ ಮತ್ತು ಯುಧಿಷ್ಠಿರನ ಅಭಯದಾನ.

ವೈಶಂಪಾಯನಃ

ವಿರಾಟಸ್ಯ ವಚಃ ಶ್ರುತ್ವಾ ಪಾರ್ಥಸ್ಯ ಚ ಮಹಾತ್ಮನಃ ।
ಉತ್ತರಃ ಪ್ರತ್ಯುವಾಚೇದಮಭಿಪನ್ನೇ ಯುಧಿಷ್ಠಿರೇ ॥೧॥

ವೈಶಂಪಾಯನ– ಯುಧಿಷ್ಠಿರನು ಗುರುತಿಸಲ್ಪಡುತ್ತಿರಲು ಉತ್ತರನು ವಿರಾಟನ ಮಾತುಗಳನ್ನೂ ಮತ್ತು ಮಹಾತ್ಮನಾದ ಅರ್ಜುನನ ಮಾತುಗಳನ್ನೂ ಕೇಳಿ ಹೀಗೆ ಮಾತನಾಡಿದನು.

ಪ್ರಸಾದನಂ ಪ್ರಾಪ್ತಕಾಲಂ ಪಾಂಡವಸ್ಯಾಭಿರೋಚಯೇ ।
ತೇಜಸ್ವೀ ಬಲವಾನ್ ಶೂರೋ ರಾಜರಾಜೇಶ್ವರಃ ಪ್ರಭುಃ ॥೨॥

ತೇಜಸ್ವಿಯೂ, ಬಲಿಷ್ಠನೂ, ಶೂರನೂ, ರಾಜರಾಜೇಶ್ವರನೂ, ಪ್ರಭುವೂ ಆದ ಯುಧಿಷ್ಠಿರನನ್ನು ಪ್ರಸನ್ನೀಕರಿಸಿಕೊಳ್ಳುವುದು ಯೋಗ್ಯವಾದುದೆಂದು ನನಗೆ ತೋರುತ್ತದೆ.

ಉತ್ತರಾಂ ಚ ವರಾರೋಹಾಂ ಪಾರ್ಥಸ್ಯಾಮಿತ್ರಕರ್ಶನ ।
ಪ್ರಣಿಪತ್ಯ ಪ್ರಯಚ್ಛಾಮಸ್ತಸ್ಯ ಶಿಷ್ಯಾ ಭವೇಮಹೇ ॥೩॥

ಶತ್ರುಕರ್ಶನನಾದ ರಾಜನೇ, ಸುಂದರಿಯಾದ ಉತ್ತರೆಯನ್ನು ನಮಸ್ಕಾರ ಪೂರ್ವಕವಾಗಿ ಅರ್ಜುನನಿಗೆ ಕೊಟ್ಟುನಾವು ಅವನ ಶಿಷ್ಯರಾಗೋಣ.

ವಯಂ ಚ ಸರ್ವೇ ಸಾಮಾತ್ಯಾಃ ಕುಂತೀಪುತ್ರಂ ಯುಧಿಷ್ಠಿರಮ್ ।
ಪ್ರಸಾದ್ಯ ಹ್ಯುಪತಿಷ್ಠಾಮೋ ರಾಜನ್ ಕಿಂ ಕರವಾಮಹೇ ॥೪॥

ಅಮಾತ್ಯಸಹಿತರಾದ ನಾವೆಲ್ಲರೂ ಕುಂತೀಪುತ್ರನಾದ ಯುಧಿಷ್ಠಿರನನ್ನು ಪ್ರಸನ್ನೀಕರಿಸಿಕೊಂಡು ಅವನ ಸ್ತೋತ್ರವನ್ನು ಮಾಡೋಣ. ರಾಜನೇ, ನೀನು ಏನು ಮಾಡಬೇಕೆಂದು ಯೋಚಿಸುತ್ತೀಯೆ?

ರಾಜಂಸ್ತ್ವಮಸಿ ಸಂಗ್ರಾಮೇ ಗೃಹೀತಸ್ತೇನ ಮೋಕ್ಷಿತಃ ।
ಏತೇಷಾಂ ಬಾಹುವೀರ್ಯೇಣ ಗಾವಶ್ಚ ವಿಜಿತಾಸ್ತ್ವಯಾ ॥೫॥

ರಾಜನೇ, ನೀನು ಸಹ ಯುದ್ಧದಲ್ಲಿ ಗೃಹೀತನಾಗಿದ್ದವನು ಅವನಿಂದ ಬಿಡುಗಡೆಗೊಳಿಸಲ್ಪಟ್ಟಿದ್ದೀಯೆ. ಇವರ ಬಾಹುವೀರ್ಯದಿಂದಲೇ ನಿನ್ನ ಗೋವುಗಳು ಪುನಃ ಜಯಿಸಲ್ಪಟ್ಟವು.

ಕುರವೋ ನಿರ್ಜಿತಾ ಯಸ್ಮಾತ್ ಸಂಗ್ರಾಮೇಽಮಿತತೇಜಸಃ ।
ಏಷ ತತ್ ಸರ್ವಮಕರೋತ್ ಕುಂತೀಪುತ್ರೋ ಯುಧಿಷ್ಠಿರಃ ॥೬॥

ಅಮಿತಪರಾಕ್ರಮಿಗಳಾದ ಕುರುಗಳು ಯುದ್ಧದಲ್ಲಿ ಅವನಿಂದಲೇ ಪರಾಭವವನ್ನು ಹೊಂದಿದರು. ಅವೆಲ್ಲವನ್ನೂ ಕುಂತೀಪುತ್ರನಾದ ಯುಧಿಷ್ಠಿರನೇ ಮಾಡಿದನು.

ಆರ್ಯಾಃ ಪೂಜ್ಯಾಶ್ಚ ಮಾನ್ಯಾಶ್ಚ ಪ್ರತ್ಯುತ್ಥೇಯಾಶ್ಚ ಪಾಂಡವಾಃ ।
ಅರ್ಚ್ಯಾಶ್ಚೈವಾಭಿವಾದ್ಯಾಶ್ಚ ಪ್ರಾಪ್ತಕಾಲಂ ಚ ಮೇ ಮತಮ್ ॥೭॥

ಪಾಂಡವರು ಒಳ್ಳೆಯ ನಡತೆಯುಳ್ಳವರು, ಪೂಜ್ಯರು, ಮಾನ್ಯರು, ಎದುರಿಗೆ ನಿಂತು ಸ್ವೀಕಾರ ಮಾಡಬೇಕಾದವರು, ಅರ್ಚಿಸಲ್ಪಡಬೇಕಾದವರು, ನಮಸ್ಕಾರ ಮಾಡಲ್ಪಡಬೇಕಾದವರು. ಆದ್ದರಿಂದ ನಾನು ಹೇಳಿದುದು ಯೋಗ್ಯವೆಂದು ನನ್ನ ಅಭಿಪ್ರಾಯ.

ಪೂಜ್ಯಂತಾಂ ಪೂಜನೀಯಾಶ್ಚ ಮಹಾಭಾಗಾಶ್ಚ ಪಾಂಡವಾಃ ।
ನ ಹ್ಯೇತೇ ಕುಪಿತಾಃ ಶೇಷಂ ಕುರ್ಯುರಾಶೀವಿಷೋಪಮಾಃ ॥೮॥

ಪೂಜನೀಯರೂ, ಮಹಾನುಭಾವರೂ ಆದ ಪಾಂಡವರು ಪೂಜಿಸಲ್ಪಡಲಿ. ಸರ್ಪಕ್ಕೆ ಸದೃಶರಾದ ಇವರು ಕೋಪಗೊಂಡರೆ ಏನನ್ನೂ ಉಳಿಸುವುದಿಲ್ಲ.

ತಸ್ಮಾತ್ ಶೀಘ್ರಂ ಪ್ರಪದ್ಯಾಮಃ ಕುಂತೀಪುತ್ರಂ ಯುಧಿಷ್ಠಿರಮ್ ।
ಪ್ರಸಾದಯಾಮ ಭದ್ರಂ ತೇ ಸಹ ಪಾರ್ಥೈರ್ಮಹಾತ್ಮಭಿಃ ॥೯॥

ಆದ್ದರಿಂದ ಶೀಘ್ರವಾಗಿ ಕುಂತೀಪುತ್ರನಾದ ಯುಧಿಷ್ಠಿರನಿಗೆ ಶರಣಾಗತರಾಗೋಣ. ಮಹಾತ್ಮರಾದ ಉಳಿದ ಪಾಂಡವರಿಂದ ಸಹಿತನಾದ ಅವನನ್ನು ಪ್ರಸನ್ನನಾಗಿ ಮಾಡಿಕೊಳ್ಳೋಣ. ನಿನಗೆ ಮಂಗಳವಾಗಲಿ.

ಜಾನಾಮ್ಯಹಮಿದಂ ಸರ್ವಮೇಷಾಂ ತು ಬಲಪೌರುಷಮ್ ।
ಕುಲೇ ಚ ಜನ್ಮ ಮಹತಿ ಫಲ್ಗುನಸ್ಯ ಚ ವಿಕ್ರಮಮ್ ॥೧೦॥

ಇವರ ಈ ಎಲ್ಲಾ ಬಲಪೌರುಷಗಳನ್ನೂ, ಮಹಾಕುಲದಲ್ಲಿ ಅವರ ಜನ್ಮವನ್ನೂ ಮತ್ತು ಅರ್ಜುನನ ಪರಾಕ್ರಮವನ್ನೂ ನಾನು ತಿಳಿದಿದ್ದೇನೆ.

ವೈಶಂಪಾಯನಃ

ಉತ್ತರಾತ್ ಪಾಂಡವಾನ್ ಶ್ರುತ್ವಾ ವಿರಾಟೋ ದುಃಖಮೋಹಿತಃ ।
ಉತ್ತರಂ ಚಾಪಿ ಸಂಪ್ರೇಕ್ಷ್ಯ ಪ್ರಾಪ್ತಕಾಲಮಚಿಂತಯತ್ ॥೧೧॥

ವೈಶಂಪಾಯನ– ಉತ್ತರನಿಂದ ಪಾಂಡವರನ್ನು ತಿಳಿದ ವಿರಾಟನು ದುಃಖಮೋಹಿತನಾಗಿ ಉತ್ತರನನ್ನು ನೋಡಿ ಆ ಕಾಲದಲ್ಲಿ ಮಾಡಲು ಯೋಗ್ಯವಾದ ವಿಷಯವನ್ನು ಚಿಂತಿಸಿದನು.

ತತೋ ವಿರಾಟಃ ಸಾಮಾತ್ಯಃ ಸಕಳತ್ರಃ ಸಬಾಂಧವಃ ।
ಉತ್ತರಾಮಗ್ರತಃ ಕೃತ್ವಾ ಶಿರಃಸ್ನಾತಾಂ ಕೃತಾಂಜಲಿಃ ॥೧೨॥

ಭೂಮೌ ನಿಪತಿತಸ್ತೂರ್ಣಂ ಪಾಂಡವಸ್ಯ ಸಮೀಪತಃ ॥೧೩॥

ಅನಂತರ ವಿರಾಟನು ತನ್ನ ಅಮಾತ್ಯರು, ಪತ್ನಿಯರು ಮತ್ತು ಬಾಂಧವರೊಡನೆ ತಲೆಯ ಮೇಲೆ ಸ್ನಾನ ಮಾಡಿ ಶುದ್ಧಳಾದ ಉತ್ತರೆಯನ್ನು ಮುಂದೆ ಮಾಡಿಕೊಂಡು ಕೈಗಳನ್ನು ಜೋಡಿಸಿ ಯುಧಿಷ್ಠಿರನ ಸಮೀಪಕ್ಕೆ ಬಂದು ಭೂಮಿಯ ಮೇಲೆ ಶೀಘ್ರವಾಗಿ ನಮಸ್ಕಾರವನ್ನು ಮಾಡಿದನು.

ವಿರಾಟಃ

ಪ್ರಸೀದತು ಮಹಾರಾಜೋ ಧರ್ಮಪುತ್ರೋ ಯುಧಿಷ್ಠಿರಃ ।
ಪ್ರಚ್ಛನ್ನರೂಪವೇಷತ್ವಾನ್ನಾಗ್ನಿರ್ದಗ್ಧಸ್ತೃಣೈರ್ವೃತಃ ॥೧೪॥

ಶಿರಸಾऽಭಿಪ್ರಪನ್ನೋऽಸ್ಮಿ ಸಪುತ್ರಪರಿಚಾರಕಃ ॥೧೫॥

ವಿರಾಟ– ಧರ್ಮಪುತ್ರನಾದ ಮಹಾರಾಜನಾದ ಯುಧಿಷ್ಠಿರನು ಪ್ರಸನ್ನನಾಗಬೇಕು. ತೃಣಗಳಿಂದ ಮುಚ್ಚಿದ ಅಗ್ನಿಯಂತೆ ಮಾರುವೇಷದಿಂದ ಇದ್ದ ನಿಮ್ಮನ್ನು ನಾನು ಗುರುತಿಸಲಾಗಲಿಲ್ಲ. ನಾನು ನನ್ನ ಪುತ್ರಪರಿವಾರದ ಜೊತೆಗೆ ನಿಮಗೆ ಶಿರಸಾ ಶರಣಾಗತರಾಗಿದ್ದೇನೆ.

ಯದಸ್ಮಾಭಿರಜಾನದ್ಭಿರಧಿಕ್ಷಿಪ್ತೋ ಮಹೀಪತಿಃ ।
ಅವಮತ್ಯ ಕೃತಂ ಸರ್ವಮಯುಕ್ತಂ ಪ್ರಾಕೃತೋ ಯಥಾ ॥೧೬॥

ಕ್ಷಂತುಮರ್ಹಸಿ ತತ್ಸರ್ವಂ ಧರ್ಮಜ್ಞೋ ಬಂಧುವತ್ಸಲಃ ॥೧೭॥

ಮಹೀಪತಿಯಾದ ನಿನ್ನನ್ನು ಸಾಮಾನ್ಯಮನುಷ್ಯನೆಂದು ತಿಳಿದು ನಾನು ಆಡಿದ ಎಲ್ಲಾ ನಿಂದನೆಯ ಮಾತುಗಳನ್ನು ಮತ್ತು ಅಯೋಗ್ಯವಾದ ಎಲ್ಲಾ ಅವಮಾನಗಳನ್ನು ಧರ್ಮಜ್ಞನೂ ಮತ್ತು ಬಂಧುವತ್ಸಲನೂ ಆದ ನೀನು ಕ್ಷಮಿಸಬೇಕು.

ಯದಿದಂ ಮಾಮಕಂ ರಾಷ್ಟ್ರಂ ಪುರಂ ರಾಜ್ಯಂ ಚ ಪಾರ್ಥಿವ ।
ಸದಂಡಕೋಶಂ ವಿಸೃಜೇ ತವ ಭೃತ್ಯೋಽಸ್ಮಿ ಪಾಂಡವ ॥೧೮॥

ವಯಂ ಚ ಸರ್ವೇ ಸಾಮಾತ್ಯಾ ಭವಂತಂ ಶರಣಂ ಗತಾಃ ॥೧೯॥

ಪಾರ್ಥಿವನೇ, ಪಾಂಡವನೇ, ನನ್ನ ರಾಜ್ಯ, ರಾಷ್ಟ್ರ, ರಾಜಧಾನಿ ಮತ್ತು ದಂಡಕೋಶಗಳು ಏನಿವೆಯೋ ಅವೆಲ್ಲವನ್ನೂ ನಿನಗಾಗಿ ಕೊಡುತ್ತಿದ್ದೇನೆ. ನಾನು ನಿನ್ನ ಭೃತ್ಯನಾಗಿದ್ದೇನೆ. ನಾನು ಮತ್ತು ನನ್ನ ಅಮಾತ್ಯರೆಲ್ಲರೂ ನಿನಗೆ ಶರಣಾಗತರಾಗಿದ್ದೇವೆ.

ವೈಶಂಪಾಯನಃ

ತಂ ಧರ್ಮರಾಜಃ ಪತಿತಂ ಮಹೀತಳೇ
ಸಬಂಧುವರ್ಗಂ ಪ್ರಸಮೇತ್ಯ ಪಾರ್ಥಿವಮ್ ।
ಉವಾಚ ವಾಕ್ಯಂ ಪರಲೋಕದರ್ಶನಃ
ಪ್ರನಷ್ಟಮನ್ಯುರ್ಗತಶೋಕಮತ್ಸರಃ ॥೨೦॥

ವೈಶಂಪಾಯನ– ಧರ್ಮರಾಜನು ತನ್ನ ಬಂಧುವರ್ಗದವರೊಡನೆ ಭೂಮಿಯಲ್ಲಿ ಬಿದ್ದಿದ್ದ ಅವನ ಬಳಿಗೆ ಶೀಘ್ರವಾಗಿ ಬಂದು ಪರಲೋಕದೃಷ್ಟಿಯುಳ್ಳ ಅವನು ಕೋಪವನ್ನೂ, ಶೋಕ-ಮತ್ಸರವನ್ನೂ ಕಳೆದುಕೊಂಡವನಾಗಿ ಅವನನ್ನು ಕುರಿತು ಮಾತನಾಡಿದನು.

ನ ತೇ ಭಯಂ ಪಾರ್ಥಿವ ವಿದ್ಯತೇ ಮಯಿ
ಪ್ರತೀತರೂಪೋಽಸ್ಮ್ಯನುಚಿಂತ್ಯ ಪಾರ್ಥಿವ ।
ಏತತ್ ತ್ವಯಾ ಸಮ್ಯಗಿಹೋಪಪಾದಿತಂ
ದ್ವಿಜೈರಮಾತ್ಯೈಃ ಸದೃಶೈಶ್ಚ ಪಂಡಿತೈಃ ॥೨೧॥

ಎಲೈ ರಾಜನೇ, ನಿನಗೆ ನನ್ನಿಂದ ಯಾವ ಭಯವೂ ಇಲ್ಲ. ರಾಜನೇ, ಎಲ್ಲವನ್ನೂ ಯೋಚಿಸಿ ನಾನು ಪ್ರಸನ್ನನಾಗಿದ್ದೇನೆ. ನೀನು ಬ್ರಾಹ್ಮಣರಿಂದ, ಸದೃಶರಾದ ಅಮಾತ್ಯರಿಂದ ಮತ್ತು ಪಂಡಿತರಿಂದ ಕೂಡಿಕೊಂಡು ನಮಗೆ ಎಲ್ಲವನ್ನೂ ಸರಿಯಾಗಿಯೇ ಮಾಡಿದ್ದೀಯೆ.

ಇಮಾಂ ಚ ಕನ್ಯಾಂ ಸಮಲಂಕೃತಾಂ ಭೃಶಂ
ಸಮೀಕ್ಷ್ಯ ತುಷ್ಟೋಽಸ್ಮಿ ನರೇಂದ್ರಸತ್ತಮ ॥೨೨॥

ನರೇಂದ್ರಶ್ರೇಷ್ಠನೇ, ಈ ಅಲಂಕೃತಳಾದ ಕನ್ಯೆಯನ್ನು ನೋಡಿ ನಾನು ಬಹಳ ಸಂತೋಷಗೊಂಡಿದ್ದೇನೆ.

ಕ್ಷಾಂತಮೇತನ್ಮಹಾಬಾಹೋ ಯನ್ಮಾಂ ವದಸಿ ಪಾರ್ಥಿವ ।
ನ ಚೈವ ಕಿಂಚಿತ್ ಪಶ್ಯಾಮಿ ಏಕೃತಂ ತೇ ನರಾಧಿಪ ॥೨೩॥

ಎಲೈ ರಾಜನೇ, ಮಹಾಬಾಹುವೇ, ನೀನು ಹೇಳುವಂತೆ ನಾನು ನಿನ್ನನ್ನು ಕ್ಷಮಿಸಿದ್ದೇನೆ. ನರಾಧಿಪನೇ, ನಾನು ಎಷ್ಟು ಯೋಚಿಸಿದರೂ ನೀನು ಮಾಡಿದ ಯಾವ ಅಪಕಾರವೂ ಗೋಚರಿಸುವುದಿಲ್ಲ.

ವೈಶಂಪಾಯನಃ

ತತೋ ವಿರಾಟಃ ಪರಮಾಭಿತುಷ್ಟಃ
ಸಮೀಕ್ಷ್ಯ ರಾಜಾ ಸಮಯಂ ಚಕಾರ ।
ರಾಜ್ಯಂ ಚ ಸರ್ವಂ ವಿಸಸರ್ಜ ತಸ್ಮೈ
ಸದಂಡಕೋಶಂ ಸಪುರಂ ಮಹಾತ್ಮಾ ॥೨೪॥

ವೈಶಂಪಾಯನ– ಆಗ ವಿರಾಟರಾಜನು ಧರ್ಮರಾಜನನ್ನು ನೋಡಿ ಬಹಳ ಸಂತುಷ್ಟನಾಗಿ ಅವನ ಜೊತೆಯಲ್ಲಿ ಒಪ್ಪಂದವನ್ನು ಮಾಡಿಕೊಂಡನು. ಮಹಾತ್ಮನಾದ ಅವನು ತನ್ನ ರಾಜ್ಯವನ್ನೂ, ದಂಡಕೋಶಗಳನ್ನೂ, ರಾಜಧಾನಿಯನ್ನೂ ಮತ್ತು ಎಲ್ಲವನ್ನೂ ಯುಧಿಷ್ಠಿರನಿಗೆ ಒಪ್ಪಿಸಿದನು.

ಪಾಂಡವಾಂಶ್ಚ ತತಃ ಸರ್ವಾನ್ ಮತ್ಸ್ಯರಾಜಃ ಪ್ರತಾಪವಾನ್ ।
ಧನಂಜಯಂ ಪುರಸ್ಕೃತ್ಯ ದಿಷ್ಟ್ಯಾ ದಿಷ್ಟ್ಯೇತಿ ಚಾಬ್ರವೀತ್ ॥೨೫॥

ಪ್ರತಾಪಶಾಲಿಯಾದ ಮತ್ಸ್ಯರಾಜನು ಅರ್ಜುನನನ್ನು ಮುಂದೆ ಮಾಡಿಕೊಂಡು ಎಲ್ಲಾ ಪಾಂಡವರನ್ನು ಕುರಿತು, ದೇವರ ದಯದಿಂದ ಎಲ್ಲವೂ ಆಯಿತು ಎಂದು ಹೇಳಿದನು.

ಸಮುಪಾಘ್ರಾಯ ಮೂರ್ಧಾನಂ ಸಂಶ್ಲಿಷ್ಯ ಚ ಪುನಃ ಪುನಃ ।
ಯುಧಿಷ್ಠಿರಂ ಚ ಭೀಮಂ ಚ ಮಾದ್ರೀಪುತ್ರೌ ಧನಂಜಯಮ್ ॥೨೬॥

ನಾತೃಪ್ಯದ್ ದರ್ಶನೇ ತೇಷಾಂ ವಿರಾಟೋ ವಾಹಿನೀಪತಿಃ ।

ಧರ್ಮರಾಜನನ್ನು ಆಲಿಂಗಿಸಿ ಪುನಃ ಪುನಃ ಶಿರಸ್ಸಿನಲ್ಲಿ ಆಘ್ರಾಣಿಸಿ ಅದರಂತೆಯೇ ಭೀಮಸೇನನನ್ನೂ, ಅರ್ಜುನನನ್ನೂ ಮತ್ತು ನಕುಲಸಹದೇವರನ್ನೂ ಆಲಿಂಗಿಸಿ ಅವರನ್ನು ಎಷ್ಟು ನೋಡಿದರೂ ಸೇನಾಪತಿಯಾದ ವಿರಾಟನಿಗೆ ತೃಪ್ತಿಯೇ ಉಂಟಾಗಲಿಲ್ಲ.

ಸಂಪ್ರೀಯಮಾಣೋ ರಾಜಾನಂ ಯುಧಿಷ್ಠಿರಮಥಾಬ್ರವೀತ್ ॥೨೭॥

ದಿಷ್ಟ್ಯಾ ಭವಂತಃ ಸಂಪ್ರಾಪ್ತಾಃ ಸರ್ವೇ ಕುಶಲಿನೋ ವನಾತ್ ।
ದಿಷ್ಟ್ಯಾ ಸಂಪಾರಿತಂ ಕೃಚ್ಛ್ರಮಜ್ಞಾತಂ ವೈ ಮಹಾತ್ಮಭಿಃ ॥೨೮॥

ಇದಂ ರಾಜ್ಯಂ ಚ ವಃ ಪಾರ್ಥಾ ಯಚ್ಚಾನ್ಯದ್ ವಸು ಕಿಂಚನ ॥೨೯॥

ಬಹಳ ಸಂತೋಷದಿಂದ ಕೂಡಿ ಅವನು ರಾಜನಾದ ಯುಧಿಷ್ಠಿರನನ್ನು ಕುರಿತು ದೇವರ ದಯದಿಂದ ನೀವೆಲ್ಲರೂ ಕ್ಷೇಮದಿಂದ ವನವಾಸದಿಂದ ಹಿಂದಿರುಗಿದ್ದೀರಿ. ದೇವರ ದಯದಿಂದಲೇ ಮಹಾತ್ಮರಾದ ನಿಮ್ಮಿಂದ ಕಷ್ಟಕರವಾದ ಅಜ್ಞಾತವಾಸವು ಪೂರ್ಣಗೊಳಿಸಲ್ಪಟ್ಟಿತು. ಪಾಂಡವರೇ, ಈ ನನ್ನ ರಾಜ್ಯ ಮತ್ತು ನನ್ನಲ್ಲಿರುವ ಯಾವುದೇ ಸಂಪತ್ತು ಎಲ್ಲವೂ ನಿಮ್ಮದೇ (ಎಂದು ಹೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವಿರಾಟಪರ್ವಣಿ ಚತುಃಸಪ್ತತಿತಮೋऽಧ್ಯಾಯಃ ॥

॥ ವೈವಾಹಿಕಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ಎಪ್ಪತ್ತೈದನೆಯ ಅಧ್ಯಾಯ

ಅರ್ಜುನನಿಂದ ಸೊಸೆಯಾಗಿ ಉತ್ತರೆಯ ಸ್ವೀಕಾರ.
ವಿರಾಟನ ಹರ್ಷ ಮತ್ತು ದುರ್ಯೋಧನನ ದುರ್ಬುದ್ಧಿ.

ವಿರಾಟಃ

ಯಚ್ಚ ವಕ್ಷ್ಯಾಮಿ ತೇ ಸರ್ವಂ ಮಾ ಶಂಕೇಥಾ ಯುಧಿಷ್ಠಿರ ॥೧॥

ಇದಂ ಸನಗರಂ ರಾಷ್ಟ್ರಂ ಸಧನಂ ಸವಧೂಜನಮ್ ।
ಯುಷ್ಮಭ್ಯಂ ಸಂಪ್ರದಾಸ್ಯಾಮಿ ಭೋಕ್ಷ್ಯಾಮ್ಯುಚ್ಛಿಷ್ಟಮೇವ ಚ ॥೨॥

ವಿರಾಟ– ಯುಧಿಷ್ಠಿರನೇ, ನಾನು ಹೇಳುವ ವಿಷಯದಲ್ಲಿ ಸ್ವಲ್ಪವೂ ಶಂಕೆಯನ್ನು ಪಡಬೇಡ. ಈ ನನ್ನ ನಗರ, ಧನಸಹಿತವಾದ ನನ್ನ ರಾಷ್ಟ್ರ, ನನ್ನ ವಧೂಜನರು ಎಲ್ಲರನ್ನೂ ನಿನಗೆ ಕೊಡುವೆನು. ನಿನ್ನ ಉಚ್ಛಿಷ್ಟವನ್ನು ಸ್ವೀಕರಿಸಿ ನಾನು ಜೀವಿಸುವೆನು.

ಅಹಂ ವೃದ್ಧಶ್ಚಿರಂ ರಾಜನ್ ಭುಕ್ತಭೋಗಶ್ಚಿರಂ ಸುಖಮ್ ।
ರಾಜ್ಯಂ ದತ್ತ್ವಾ ತು ಯುಷ್ಮಭ್ಯಂ ಪ್ರವ್ರಜಿಷ್ಯಾಮಿ ಕಾನನಮ್ ॥೩॥

ರಾಜನೇ, ನಾನು ವೃದ್ಧನಾಗಿದ್ದೇನೆ. ಬಹುಕಾಲ ಸುಖವನ್ನು ಅನುಭವಿಸಿದ್ದಾಗಿದೆ. ನಿಮಗೆ ರಾಷ್ಟ್ರವನ್ನು ಕೊಟ್ಟು ನಾನು ಕಾಡಿಗೆ ಹೋಗುತ್ತೇನೆ.

ಉತ್ತರಾಂ ಪ್ರತಿಗೃಹ್ಣಾತು ಸವ್ಯಸಾಚೀ ಧನಂಜಯಃ ।
ಅಯಂ ಹಾಪಯಿತಾ ಭರ್ತಾ ತಸ್ಯಾಃ ಪುರುಷಸತ್ತಮಃ ॥೪॥

ಸವ್ಯಸಾಚಿಯಾದ ಧನಂಜಯನು ಉತ್ತರೆಯನ್ನು ಸ್ವೀಕರಿಸಲಿ. ಪುರುಷಶ್ರೇಷ್ಠನಾದ ಅವನು ಅವಳಿಗೆ ಯೋಗ್ಯನಾದ ಪತಿ.

ವೈಶಂಪಾಯನಃ

ಏವಮುಕ್ತೋ ಧರ್ಮರಾಜಃ ಪಾರ್ಥಮೈಕ್ಷದ್ ಧನಂಜಯಮ್ ।
ಈಕ್ಷಿತಂ ಚಾರ್ಜುನೋ ಜ್ಞಾತ್ವಾ ಮಾತ್ಸ್ಯಂ ವಚನಮಬ್ರವೀತ್ ॥೫॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಧರ್ಮರಾಜನು ಧನಂಜಯನನ್ನು ನೋಡಿದನು. ಅಣ್ಣನ ದರ್ಶನದ ಅಭಿಪ್ರಾಯವನ್ನು ತಿಳಿದ ಅರ್ಜುನನು ವಿರಾಟ ರಾಜನನ್ನು ಕುರಿತು ಈ ರೀತಿ ಹೇಳಿದನು.

ವಯಂ ವನಾಂತರಂ ಪ್ರಾಪ್ತಾ ನ ತೇ ರಾಜ್ಯಂ ಗೃಹಾಮಹೇ ।
ಕಿಂತು ದುರ್ಯೋಧನಾದೀನಾಂ ರಾಜ್ಞಾಂ ರಾಜನ್ ಸ್ಪೃಹಾಮಹೇ ॥೬॥

ನಾವು ಕಾಡಿನಿಂದ ಇನ್ನೊಂದು ಕಾಡಿಗೆ ಬಂದಿದ್ದೇವೆ. ನಿನ್ನ ರಾಜ್ಯವನ್ನು ನಾವು ಸ್ವೀಕರಿಸುವುದಿಲ್ಲ. ಆದರೆ ರಾಜನೇ, ದುರ್ಯೋಧನಾದಿ ರಾಜರು ಹೊಂದಿರುವ (ನಮ್ಮ ರಾಜ್ಯವನ್ನೇ) ನಾವು ಬಯಸುತ್ತೇವೆ.

ಪ್ರತಿಗೃಹ್ಣಾಮ್ಯಹಂ ರಾಜನ್ ಸ್ನುಷಾಂ ದುಹಿತರಂ ತವ ।
ಯುಕ್ತೋ ಹ್ಯಾವಾಂ ಚ ಸಂಬಂಧೋ ಮಾತ್ಸ್ಯಭಾರತವಂಶಯೋಃ ॥೭॥

ರಾಜನೇ, ನಿನ್ನ ಮಗಳನ್ನು ನಾನು ಸೊಸೆಯಾಗಿ ಸ್ವೀಕರಿಸುತ್ತೇನೆ. ಮಾತ್ಸ್ಯವಂಶ ಮತ್ತು ಭರತವಂಶಗಳಿಗೆ ಸಂಬಂಧವು ಯೋಗ್ಯವಾದುದು.

ವಿರಾಟಃ

ಕಿಮರ್ಥಂ ಪಾಂಡವಶ್ರೇಷ್ಠ ಭಾರ್ಯಾಂ ದುಹಿತರಂ ಮಮ ।
ಪ್ರತಿಗೃಹೀತುಂ ನೇಮಾಂ ತ್ವಂ ಮಯಾ ದತ್ತಾಮಿಹೇಚ್ಛಸಿ ॥೮॥

ವಿರಾಟ– ಪಾಂಡವಶ್ರೇಷ್ಠನೇ, ನಾನಾಗಿಯೇ ಕೊಟ್ಟರೂ ಸಹ ಈ ನನ್ನ ಮಗಳನ್ನು ಸ್ವೀಕರಿಸಲು ನೀನು ಏಕೆ ಬಯಸುವುದಿಲ್ಲ?

ಅರ್ಜುನಃ

ಅಂತಃಪುರೇऽಹಮುಷಿತಃ ಸದಾ ಪಶ್ಯನ್ ಸುತಾಂ ತವ ।
ರಹಸ್ಯಂ ಚ ಪ್ರಕಾಶಂ ಚ ವಿಶ್ವಸ್ತಾ ಪಿತೃವನ್ಮಯಿ ॥೯॥

ಅರ್ಜುನ– ನಾನು ಅಂತಃಪುರದಲ್ಲಿ ನಿನ್ನ ಮಗಳನ್ನು ನೋಡಿಕೊಂಡು ಯಾವಾಗಲೂ ವಾಸಮಾಡಿದೆನು. ರಹಸ್ಯದಲ್ಲಿಯೂ ಮತ್ತು ಪ್ರಕಾಶವಾಗಿಯೂ ಅವಳು ನನ್ನಲ್ಲಿ ತಂದೆಯಂತೆ ವಿಶ್ವಾಸವನ್ನು ಹೊಂದಿದ್ದಾಳೆ.

ಪ್ರಿಯೋ ಬಹುಮತಶ್ಚಾಸಂ ನರ್ತನೇ ಗೀತವಾದಿತೇ ।
ಆಚಾರ್ಯವಚ್ಚ ಮಾಂ ನಿತ್ಯಂ ಮನ್ಯತೇ ದುಹಿತಾ ತವ ॥೧೦॥

ನಾನು ನರ್ತನದಲ್ಲಿಯೂ, ಗೀತವಾದ್ಯದಲ್ಲಿಯೂ ಅವಳಿಗೆ ಪ್ರಿಯನೂ ಮತ್ತು ಅವಳಿಂದ ಪೂಜ್ಯನೂ ಆಗಿದ್ದೆನು. ನಿನ್ನ ಮಗಳು ಯಾವಾಗಲೂ ನನ್ನನ್ನು ಗುರುವೆಂದು ಭಾವಿಸುತ್ತಾಳೆ.

ವಯಃಸ್ಥಯಾ ತಥಾ ರಾಜನ್ ಸಹ ಸಂವತ್ಸರೋಷಿತಃ ॥೧೧॥

ಅತಿಶಂಕಾ ತತೋಽಸ್ಥಾನೇ ತವ ಲೋಕಸ್ಯ ಚ ಪ್ರಭೋ ।
ತಸ್ಮಾದಾಮಂತ್ರಯೇ ತ್ವಾಂ ಹಿ ಪುತ್ರಾರ್ಥಂ ವೈ ವಿಶಾಂಪತೇ ॥೧೨॥

ಶುದ್ಧಂ ಜಿತೇಂದ್ರಿಯಮ್ಮನ್ಯೇ ತಸ್ಯಾಃ ಶುದ್ಧಿಃ ಕೃತಾ ಮಯಾ ॥೧೩॥

ಸ್ನುಷಾಯಾಂ ದುಹಿತುರ್ವಾಽಪಿ ಪುತ್ರೋ ವಾಽಽತ್ಮನಿ ವಾ ಪುನಃ ।
ಅತಿಶಂಕಾಂ ನ ಪಶ್ಯಾಮಿ ತೇನ ಶುದ್ಧಿರ್ಭವಿಷ್ಯತಿ ॥೧೪॥

ರಾಜನೇ, ನಾನು ಯೌವನಸ್ಥಳಾದ ನಿನ್ನ ಮಗಳ ಜೊತೆಯಲ್ಲಿ ಒಂದು ವರ್ಷ ವಾಸವನ್ನು ಮಾಡಿದೆ. ಪ್ರಭುವೇ, ಜನರಿಗೆ ಅಯೋಗ್ಯವಾದ ಶಂಕೆ ಉಂಟಾಗಬಹುದು. ಆದ್ದರಿಂದ ರಾಜನೇ, ನಾನು ನನ್ನ ಮಗನಿಗಾಗಿ ಅವಳನ್ನು ಕೊಡಬೇಕೆಂದು ನಿನ್ನನ್ನು ಆಮಂತ್ರಿಸುತ್ತೇನೆ. ನಾನು ಶುದ್ಧನು ಮತ್ತು ಜಿತೇಂದ್ರಿಯನೆಂದು ನನ್ನನ್ನು ತಿಳಿದಿದ್ದೇನೆ. ಅವಳ ಶುದ್ಧಿಯು ನನ್ನಿಂದ ತಿಳಿಯಲ್ಪಟ್ಟಿದೆ. ಸೊಸೆಯ ವಿಷಯದಲ್ಲಿ ಮಗಳ ವಿಷಯದಲ್ಲಿ, ಪುತ್ರನ ವಿಷಯದಲ್ಲಿ ಅಥವಾ ನನ್ನ ವಿಷಯದಲ್ಲಿ ಎಷ್ಟು ಯೋಚನೆ ಮಾದಿದರೂ ಯಾವ ಪ್ರತಿಶಂಕೆಯೂ ಕಾಣುವುದಿಲ್ಲ. ಆದ್ದರಿಂದ ಅವಳಿಗೆ ಶುದ್ಧಿ ಉಂಟಾಗುವುದು.

ಅಭಿಷಂಗಾದಹಂ ಭೀತೋ ಮಿಥ್ಯಾಚಾರಾತ್ ಪರಂತಪ ।
ಸ್ನುಷಾರ್ಥಮುತ್ತರಾಂ ರಾಜನ್ ಪ್ರತಿಗೃಹ್ಣಾಮಿ ತೇ ಸುತಾಮ್ ॥೧೫॥

ಪರಂತಪನೇ, ಲೋಕಾಪವಾದಕ್ಕೂ ಮತ್ತು ಕಪಟದ ನಡವಳಿಕೆಗೂ ನಾನು ಹೆದರುತ್ತೇನೆ. ರಾಜನೇ, ಸೊಸೆಯಾಗಿ ಉತ್ತರೆಯನ್ನು ನಾನು ಸ್ವೀಕರಿಸುತ್ತೇನೆ.

ಸ್ವಸ್ರೀಯೋ ವಾಸುದೇವಸ್ಯ ಸಾಕ್ಷಾದ್ ದೇವಶಿಶುರ್ಯಥಾ ।
ದಯಿತಶ್ಚಕ್ರಹಸ್ತಸ್ಯ ಬಲವಾನಸ್ತ್ರಕೋವಿದಃ ॥೧೬॥

ನನ್ನ ಮಗನು ವಾಸುದೇವನ ಸೋದರಳಿಯನಾಗಿದ್ದಾನೆ. ಸಾಕ್ಷಾತ್ ದೇವಶಿಶುವಿನಂತೆ ಇದ್ದಾನೆ. ಬಲಿಷ್ಠನೂ, ಅಸ್ತ್ರಕೋವಿದನೂ ಆದ ಅವನು ಚಕ್ರಧಾರಿಯಾದ ಕೃಷ್ಣನಿಗೆ ಪ್ರಿಯನಾಗಿದ್ದಾನೆ.

ಅಭಿಮನ್ಯುರ್ಮಹಾಬಾಹುಃ ಪುತ್ರೋ ಮಮ ವಿಶಾಂಪತೇ ।
ಜಾಮಾತಾ ತವ ಯುಕ್ತೋ ವೈ ಭರ್ತಾऽಥ ದುಹಿತುಸ್ತವ ॥೧೭॥

ಎಲೈ ರಾಜನೇ, ನನ್ನ ಪುತ್ರನಾದ ಮಹಾಬಾಹುವಾದ ಅಭಿಮನ್ಯುವು ನಿನಗೆ ಯೋಗ್ಯನಾದ ಅಳಿಯನಾಗುತ್ತಾನೆ. ನಿನ್ನ ಮಗಳಿಗೆ ಯೋಗ್ಯನಾದ ಪತಿಯಾಗುತ್ತಾನೆ.

ವಿರಾಟಃ

ಉಪಪನ್ನಂ ಕುರುಶ್ರೇಷ್ಠ ಕುಂತೀಪುತ್ರೇ ಧನಂಜಯೇ ।
ಯ ಏವಂ ಧರ್ಮನಿತ್ಯಶ್ಚ ಜ್ಞಾತಜ್ಞೇಯಶ್ಚ ಪಾಂಡವಃ ॥೧೮॥

ವಿರಾಟ– ಕುರುಶ್ರೇಷ್ಠನೇ, ಧರ್ಮನಿತ್ಯನೂ ಸರ್ವಜ್ಞನೂ ಆದ ಪಾಂಡುಪುತ್ರನಾದ ನೀನು ಹೀಗೆ ಮಾತನಾಡುವುದು ಕುಂತೀಪುತ್ರನಾದ ಧನಂಜಯನಾದ ನಿನಗೆ ಯೋಗ್ಯವಾಗಿದೆ.

ಯತ್ ಸತ್ಯಂ ಮನ್ಯಸೇ ಪಾರ್ಥ ಕ್ರಿಯತಾಂ ತದನಂತರಮ್ ।
ಸರ್ವೇ ಕಾಮಾಃ ಸಮೃದ್ಧಾ ಮೇ ಸಂಬಂಧೀ ಯಸ್ಯ ಮೇऽರ್ಜುನಃ ॥

ಪಾರ್ಥನೇ, ಯಾವುದು ಹಿತ ಮತ್ತು ಧರ್ಮವೆಂದು ತಿಳಿಯುತ್ತೀಯೋ ಅದನ್ನು ಮಾಡುವವನಾಗು. ಅರ್ಜುನನು ನಮಗೆ ಸಂಬಂಧಿಯಾದ ಮೇಲೆ ನನ್ನ ಎಲ್ಲಾ ಆಸೆಗಳೂ ಪೂರ್ಣವಾದಂತೆಯೇ ಸರಿ.

ವೈಶಂಪಾಯನಃ

ಏವಂ ಬ್ರುವತಿ ರಾಜೇಂದ್ರೇ ಕುಂತೀಪುತ್ರೋ ಯುಧಿಷ್ಠಿರಃ ।
ಅನ್ವಮೋದತ ಸಂಬಂಧಂ ಸಮಯೇ ಕೃಷ್ಣ ಮಾತ್ಸ್ಯಯೋಃ ॥೨೦॥

ವೈಶಂಪಾಯನ– ರಾಜೇಂದ್ರನಾದ ವಿರಾಟನು ಹೀಗೆ ಮಾತನಾಡುತ್ತಿರಲು ಕುಂತೀಪುತ್ರನಾದ ಯುಧಿಷ್ಠಿರನು ಆ ಸಮಯದಲ್ಲಿ ಅರ್ಜುನ ಮತ್ತು ವಿರಾಟನ ಸಂಬಂಧಕ್ಕೆ ತನ್ನ ಅನುಮೋದನೆಯನ್ನು ನೀಡಿದನು.

ದೂತಾನ್ ಮಿತ್ರೇಷು ಸರ್ವೇಷು ವಾಸುದೇವೇ ಚ ಭಾರತ ।
ಪ್ರೇಷಯಾಮಾಸ ಕೌಂತೇಯೋ ವಿರಾಟಶ್ಚ ಮಹೀಪತಿಃ ॥೨೧॥

ಭಾರತನೇ, ಕೌಂತೇಯನಾದ ಅವನು ತನ್ನ ಎಲ್ಲಾ ಮಿತ್ರರಿಗೂ ಮತ್ತು ಕೃಷ್ಣನಿಗೂ ದೂತರನ್ನು ಕಳುಹಿಸಿದನು. ವಿರಾಟರಾಜನೂ ಸಹ ದೂತರನ್ನು ಕಳುಹಿಸಿದನು.

ಪ್ರತಿಗೃಹ್ಯ ಸ್ನುಷಾರ್ಥಂ ವೈ ದರ್ಶಯನ್ ವೃತ್ತಮಾತ್ಮನಃ ।
ಶೀಲಶೌಚಸಮಾಚಾರಂ ಲೋಕಸ್ಯಾವೇದ್ಯ ಫಲ್ಗುನಃ ॥೨೨॥

ಲೋಕೇ ವಿಖ್ಯಾಪ್ಯ ಮಾಹಾತ್ಮ್ಯಂ ಯಶಸಶ್ಚ ಪರಂತಪ ।
ಕೃತಾರ್ಥಃ ಶುಚಿರವ್ಯಗ್ರಃ ತುಷ್ಟಿಮಾನಭವತ್ ತದಾ ॥೨೩॥

ಎಲೈ ಪರಂತಪನೇ, ಅರ್ಜುನನು ಸೊಸೆಯಾಗಿ ಉತ್ತರೆಯನ್ನು ಸ್ವೀಕರಿಸಿದನು. ತನ್ನ ನಡತೆಯನ್ನೂ, ಶೀಲ-ಶೌಚಗಳನ್ನೂ ಜಗತ್ತಿಗೆ ತೋರಿಸಿ, ತನ್ನ ಮಹಿಮೆಯನ್ನು ಮತ್ತು ಕೀರ್ತಿಯನ್ನು ಲೋಕದಲ್ಲಿ ಹರಡಿ ಕೃತಾರ್ಥನಾಗಿ ವ್ಯಗ್ರತೆ ಇಲ್ಲದೆ ಶುಚಿಯಾದ ಅವನು ತೃಪ್ತಿಯನ್ನು ಹೊಂದಿದನು.

ಯುಧಿಷ್ಠಿರಃ

ರಾಜನ್ ಪ್ರೀತೋಽಸ್ಮಿ ಭದ್ರಂ ತೇ ಸಖಾ ಮೇಽಸಿ ಪರಂತಪ ।
ಸುಖಮಧ್ಯುಷಿತಾಃ ಸರ್ವೇ ಅಜ್ಞಾತಾಸ್ತ್ವಯಿ ಪಾರ್ಥಿವ ॥೨೪॥

ಯುಧಿಷ್ಠಿರ– ರಾಜನೇ, ನಾನು ಸಂತೋಷಗೊಂಡಿದ್ದೇನೆ. ನಿನಗೆ ಮಂಗಳವಾಗಲಿ. ಪರಂತಪನೇ, ನೀನು ನನ್ನ ಮಿತ್ರನಾಗಿದ್ದೀಯೆ. ರಾಜನೇ, ಯಾರಿಂದಲೂ ಜ್ಞಾತರಾಗದೆ ನಾವು ನಿನ್ನಲ್ಲಿ ಸುಖವಾಗಿ ವಾಸಮಾಡಿದೆವು.

ವೈಶಂಪಾಯನಃ

ವಿರಾಟನಗರೇ ರಾಜಾ ಧರ್ಮಾತ್ಮಾ ಸಂಶಿತವ್ರತಃ ।
ಪೂಜಿತಶ್ಚಾಭಿಷಿಕ್ತಶ್ಚ ರತ್ನೈಶ್ಚ ಶತಶಶ್ಚಿತಃ ॥೨೫॥

ವೈಶಂಪಾಯನ– ಆಗ ಧರ್ಮಾತ್ಮನೂ, ಶ್ರೇಷ್ಠವ್ರತಧಾರಿಯೂ ಆದ ಯುಧಿಷ್ಠಿರನು ವಿರಾಟನಗರದಲ್ಲಿ ಅಭಿಷಿಕ್ತನಾಗಿ ನೂರಾರು ರತ್ನಗಳಿಂದ ತುಂಬಲ್ಪಟ್ಟವನಾಗಿ ಪೂಜಿಸಲ್ಪಟ್ಟನು.

ತಥಾ ಬ್ರುವಂತಂ ಪ್ರಸಮೀಕ್ಷ್ಯ ರಾಜಾ
ಪರಂ ಪ್ರಹೃಷ್ಟಃ ಸ್ವಜನೇನ ತೇನ ।
ಸ್ನೇಹಾತ್ ಪರಿಷ್ವಜ್ಯ ನೃಪೋ ಭುಜಾಭ್ಯಾಂ
ದದೌ ತಮರ್ಥಂ ಕುರುಪಾಂಡವಾನಾಮ್ ॥೨೬॥

ಹಾಗೆ ಹೇಳಿದ ಧರ್ಮರಾಜನನ್ನು ನೋಡಿ ಸ್ವಜನ ಸಹಿತನಾದ ವಿರಾಟನು ಸಂತೋಷಗೊಂಡು ಸ್ನೇಹದಿಂದ ತನ್ನ ಭುಜಗಳಿಂದ ಅವನನ್ನು ಆಲಿಂಗಿಸಿ ಕುರುವಂಶದಲ್ಲಿ ಹುಟ್ಟಿದ ಪಾಂಡವರಿಗೆ ಅವರು ಕೇಳಿದ ವಸ್ತುಗಳನ್ನೆಲ್ಲಾ ಕೊಟ್ಟನು.

ಯುದ್ಧಾತ್ ಪ್ರಯಾತಾಃ ಕುರವೋ ಹಿ ಮಾರ್ಗೇ
ಸಮೇತ್ಯ ಸರ್ವೇ ಹಿತಮೇವ ತತ್ರ ।
ಆಚಾರ್ಯಪುತ್ರಃ ಶಕುನಿಶ್ಚ ರಾಜಾ
ದುರ್ಯೋಧನಃ ಸೂತಪುತ್ರಶ್ಚ ಕರ್ಣಃ ॥೨೭॥

ಸಮೇತ್ಯ ರಾಜನ್ ಸಹಿತಾಃ ಸಮರ್ಥಂ
ಸಮಾದಿಶನ್ ದೂತಮಥೋ ಸಮಗ್ರಾಃ ॥೨೮॥

ಇತ್ತ ಕಡೆ ಯುದ್ಧದಿಂದ ಹಿಮ್ಮೆಟ್ಟಿದ ಕೌರವರು ಮಾರ್ಗದಲ್ಲಿ ಎಲ್ಲರೂ ಒಂದುಗೂಡಿ ಎಲ್ಲರೂ ದುರ್ಯೋಧನನ ಹಿತವನ್ನು ಬಯಸಿ ಆಚಾರ್ಯಪುತ್ರರಾದ ಅಶ್ವತ್ಥಾಮರು, ಶಕುನಿ, ದುರ್ಯೋಧನ, ಸೂತಪುತ್ರನಾದ ಕರ್ಣ ಎಲ್ಲರೂ ಸೇರಿ ಒಬ್ಬ ಸಮರ್ಥನಾದ ದೂತನನ್ನು ಪಾಂಡವರ ಬಳಿಗೆ ಕಳುಹಿಸಿದರು.

ಯುಧಿಷ್ಠಿರಶ್ಚಾಪಿ ಸುಸಂಪ್ರಹೃಷ್ಟೋ
ದುರ್ಯೋಧನಾದ್ ದೂತಮಪಶ್ಯದಾಗತಮ್ ।
ಸ ಚಾಬ್ರವೀದ್ ಧರ್ಮರಾಜಂ ಸಮೇತ್ಯ
ಯುಧಿಷ್ಠಿರಂ ಪಾಂಡವಮುಗ್ರವೀರ್ಯಮ್ ॥೨೯॥

ಯುಧಿಷ್ಠಿರನಾದರೂ ದುರ್ಯೋಧನನ ಕಡೆಯಿಂದ ಬಂದ ದೂತನನ್ನು ನೋಡಿ ಬಹಳ ಸಂತೋಷಗೊಂಡನು. ಆ ದೂತನಾದರೂ ಉಗ್ರಪರಾಕ್ರಮವುಳ್ಳ ಪಾಂಡುಪುತ್ರನಾದ ಧರ್ಮರಾಜನಾದ ಯುಧಿಷ್ಠಿರನನ್ನು ಸಂಧಿಸಿ ಹೀಗೆ ಮಾತನಾಡಿದನು.

ಧನಂಜಯೇನಾಸಿ ಪುನರ್ವನಾಯ
ಪ್ರವ್ರಾಜಿತಃ ಸಮಯೇ ತಿಷ್ಠ ಪಾರ್ಥ ।
ತ್ರಯೋದಶೇ ಹ್ಯೇಷ ಕಿರೀಟಮಾಲೀ
ಸಂವತ್ಸರೇ ಪಾಂಡವೇಯೋಽದ್ಯ ದೃಷ್ಟಃ ॥೩೦॥

ಪಾರ್ಥನೇ, ಅರ್ಜುನನ ನಿಮಿತ್ತದಿಂದಾಗಿ ಪುನಃ ವನವಾಸಕ್ಕೆ ಹೋಗುವವನಾಗಿದ್ದೀಯೆ. ನಿನ್ನ ಪ್ರತಿಜ್ಞೆಯನ್ನು ನೀನು ರಕ್ಷಿಸಿಕೊ. ಹದಿಮೂರನೆಯ ವರ್ಷದಲ್ಲಿ ಕಿರೀಟಿಯಾದ ಅರ್ಜುನನು ನಮ್ಮಿಂದ ನೋಡಲ್ಪಟ್ಟಿದ್ದಾನೆ (ಎಂದು ಹೇಳಿದನು).

ವೈಶಂಪಾಯನಃ

ತತೋಽಬ್ರವೀದ್ ಧರ್ಮಸುತೋ ಪ್ರಹಸ್ಯ
ಕ್ಷಿಪ್ರಂ ಗತ್ವಾ ಬ್ರೂಹಿ ಸುಯೋಧನಂ ತಮ್ ।
ಪಿತಾಮಹಃ ಶಾಂತನವೋ ಬ್ರವೀತು
ಯದ್ಯತ್ರ ಪೂರ್ಣೋ ನ ತ್ರಯೋದಶೋ ನಃ ॥೩೧॥

ವೈಶಂಪಾಯನ– ಆಗ ಧರ್ಮಸುತನು ನಕ್ಕು ಅವನನ್ನು ಕುರಿತು, ಬೇಗ ಹೋಗಿ ಶಂತನುಪುತ್ರರಾದ ಭೀಷ್ಮರು ನಮ್ಮ ಹದಿಮೂರನೆಯ ವರ್ಷವು ಪೂರ್ಣವಾಗಿದೆಯೋ ಇಲ್ಲವೋ ಎಂದು ಹೇಳಿ ಎಂದು ಕೇಳುವಂತೆ ಸುಯೋಧನನಿಗೆ ಬೇಗ ಹೋಗಿ ಹೇಳು ಎಂದು ಹೇಳಿದನು.

ಸಂವತ್ಸರಾಂತೇ ತು ಧನಂಜಯೇನ
ವಿಷ್ಫಾರಿತಂ ಗಾಂಡಿವಮಾಜಿಮಧ್ಯೇ ।
ಪೂರ್ಣೋ ನ ಪೂರ್ಣೋ ನ ಇತಿ ಬ್ರವೀತು
ಯದಸ್ಯ ಸತ್ಯಂ ಮಮ ತತ್ ಪ್ರಮಾಣಮ್ ॥೩೨॥

ಹದಿಮೂರನೆಯ ಸಂವತ್ಸರವು ಮುಗಿದ ಮೇಲೆ ಅರ್ಜುನನು ರಣರಂಗದಲ್ಲಿ ಗಾಂಡೀವಧನುಸ್ಸನ್ನು ಉಪಯೋಗಿಸಿದನು. ಭೀಷ್ಮರು ನಮ್ಮ ಪ್ರತಿಜ್ಞೆಯು ಪೂರ್ಣವಾಗಿದೆಯೋ ಇಲ್ಲವೋ ಎಂದು ಹೇಳಲಿ. ಅವರು ಏನು ಹೇಳುತ್ತಾರೆಯೋ ಅದು ನನಗೆ ಪ್ರಮಾಣ.

ತೇನೈವಮುಕ್ತಃ ಸ ನಿವೃತ್ಯ ದೂತೋ
ದುರ್ಯೋಧನಂ ಪ್ರಾಪ್ಯ ಶಶಂಸ ಸರ್ವಮ್ ।
ಸಮೇತ್ಯ ದೂತೇನ ಸ ರಾಜಪುತ್ರೋ
ದುರ್ಯೋಧನೋ ಮಂತ್ರಯಾಮಾಸ ತತ್ರ ॥೩೩॥

ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ದೂತನು ಹಿಂದಿರುಗಿ ಹೋಗಿ, ದುರ್ಯೋಧನನಿಗೆ ಎಲ್ಲವನ್ನೂ ಹೇಳಿದನು. ದೂತನ ಜೊತೆಯಲ್ಲಿ ಒಂದುಗೂಡಿ ರಾಜಪುತ್ರನಾದ ದುರ್ಯೋಧನನು ಅಲ್ಲಿ ಪುನಃ ಮಂತ್ರಾಲೋಚನೆಯನ್ನು ಮಾಡಿದನು.

ಭೀಷ್ಮೇಣ ಕರ್ಣೇನ ಕೃಪೇಣ ಚೈವ
ದ್ರೋಣೇನ ಭೂರಿಶ್ರವಸಾ ಚ ಸಾರ್ಧಮ್ ॥೩೪॥

ಸಮ್ಮಂತ್ರ್ಯ ರಾತ್ರೌ ಬಹುಭಿಃ ಸುಹೃದ್ಭಿಃ
ಭೀಷ್ಮೋಽಬ್ರವೀದ್ ಧಾರ್ತರಾಷ್ಟ್ರಂ ಮಹಾತ್ಮಾ ॥೩೫॥

ತೀರ್ಣಪ್ರತಿಜ್ಞೇನ ಧನಂಜಯೇನ
ವಿಷ್ಫಾರಿತಂ ಗಾಂಡಿವಮಾಜಿಮಧ್ಯೇ ॥೩೬॥

ಭೀಷ್ಮರು, ಕರ್ಣ, ಕೃಪ, ದ್ರೋಣ, ಭೂರಿಶ್ರವ ಮೊದಲಾದ ಅನೇಕ ಸುಹೃದಯರ ಜೊತೆಯಲ್ಲಿ ರಾತ್ರಿಯಲ್ಲಿ ಮಂತ್ರಾಲೋಚನೆಯನ್ನು ನಡೆಸಿ ಮಹಾತ್ಮರಾದ ಅವರು ದುರ್ಯೋಧನನನ್ನು ಕುರಿತು, ಪ್ರತಿಜ್ಞೆಯನ್ನು ಪೂರೈಸಿದ ಅರ್ಜುನನು ರಣರಂಗದಲ್ಲಿ ಗಾಂಡೀವವನ್ನು ಸಕ್ರಿಯಗೊಳಿಸಿದ್ದಾನೆ ಎಂದು ಹೇಳಿದರು.

ವೈಶಂಪಾಯನಃ

ತೇ ಧಾರ್ತರಾಷ್ಟ್ರಾಃ ಸಮಯಂ ನಿಶಮ್ಯ
ತೀರ್ಣಪ್ರತಿಜ್ಞಸ್ಯ ಧನಂಜಯಸ್ಯ ।

ವಿಚಿಂತ್ಯ ಸರ್ವೇ ಸಹಿತಾಃ ಸುಹೃದ್ಭಿಃ
ಸಪಾರ್ಥಿವಾಃ ಸ್ವಾನಿ ಗೃಹಾಣಿ ಜಗ್ಮುಃ ॥೩೭॥

ವೈಶಂಪಾಯನ– ಆ ಧೃತರಾಷ್ಟ್ರಪುತ್ರರು ಧನಂಜಯನು ಪ್ರತಿಜ್ಞೆಯನ್ನು ಪೂರೈಸಿದ್ದಾನೆ ಎಂಬ ಭೀಷ್ಮರ ಮಾತನ್ನು ಕೇಳಿ, ಎಲ್ಲರೂ ಚಿಂತಿಸಿ ತಮ್ಮ ಸುಹೃದಯರು ಮತ್ತು ರಾಜರೊಡನೆ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಪಂಚಸಪ್ತತಿತಮೋऽಧ್ಯಾಯಃ ॥

॥ ವೈವಾಹಿಕಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಏವಂ ವಿರಾಟಂ ಮೋಚಯಿತ್ವೈವ ಗಾಶ್ಚ
ತಮಸ್ಯಂಧೇ ಕೀಚಕಾನ್ ಪಾತಯಿತ್ವಾ ।
ಪ್ರಾಪ್ತೋ ಧರ್ಮಃ ಸುಮಹಾನ್ ವಾಯುಜೇನ
ತಸ್ಯಾನು ಪಾರ್ಥೇನ ಚ ಗೋವಿಮೋಕ್ಷಣಾತ್ ॥೫೦॥

ಹೀಗೆ ವಿರಾಟನನ್ನೂ ಗೋವುಗಳನ್ನೂ ಬಿಡಿಸಿ, ಕೀಚಕರನ್ನು ಅಂಧಂತಮಸ್ಸಿನಲ್ಲಿ ಬೀಳಿಸಿ, ಭೀಮ ಬಹಳ ಮಹತ್ತಾದ ಪುಣ್ಯ ಸಂಪಾದಿಸಿದ. ಗೋವುಗಳನ್ನು ಬಿಡಿಸಿದ್ದರಿಂದ ಅನಂತರದ ಪುಣ್ಯಶಾಲಿ ಅರ್ಜುನ.

ಆಯಾತಯನ್ ಕೇಶವಾಯಾಥ ದೂತಾನ್
ಸಹಾಭಿಮನ್ಯುಃ ಸೋऽಪಿ ರಾಮೇಣ ಸಾರ್ದ್ಧಮ್ ।
ಆಗಾದನಂತಾನಂದಚಿದ್ ವಾಸುದೇವೋ
ವಾಹಯಾಮಾಸುರಥಾಭಿಮನ್ಯುಮ್ ॥೫೧॥

ಬಳಿಕ ಪಾಂಡವರು ಶ್ರೀಕೃಷ್ಣನಿಗೆ ದೂತರನ್ನು ಕಳಿಸಿದರು. ಅನಂತರ ಸುಖಜ್ಞಾನ ಸ್ವರೂಪನಾದ ವಾಸುದೇವ ಅಭಿಮನ್ಯು, ಬಲರಾಮರೊಂದಿಗೆ ಬಂದನು. ಬಳಿಕ ಅಭಿಮನ್ಯುವಿಗೆ ವಿವಾಹ ನಡೆಸಿದರು.

★ ★ ★ ★

ಎಪ್ಪತ್ತಾರನೆಯ ಅಧ್ಯಾಯ

ಕೃಷ್ಣನ ಸನ್ನಿಧಿಯಲ್ಲಿ ಅಭಿಮನ್ಯು-ಉತ್ತರೆಯರ ವಿವಾಹ

ವೈಶಂಪಾಯನಃ

ತತಸ್ತ್ರಯೋದಶೇ ವರ್ಷೇ ನಿವೃತ್ತೇ ಪಂಚ ಪಾಂಡವಾಃ ।
ಉಪಪ್ಲಾವ್ಯೇ ವಿರಾಟಸ್ಯ ವಾಸಂ ಚಕ್ರುಃ ಪುರೋತ್ತಮೇ ॥೧॥

ವೈಶಂಪಾಯನ– ಅನಂತರ ಹದಿಮೂರನೆಯ ವರ್ಷವು ಕಳೆಯುತ್ತಿರಲು ಪಂಚಪಾಂಡವರು ವಿರಾಟನ ರಾಜಧಾನಿಯಾದ ಶ್ರೇಷ್ಠಪಟ್ಟಣವಾದ ಉಪಪ್ಲಾವ್ಯದಲ್ಲಿ ವಾಸವನ್ನು ಮಾಡಿದರು.

ತತೋ ಮಿತ್ರೇಷು ಸರ್ವೇಷು ವಾಸುದೇವೇ ಚ ಭಾರತ ।
ಪ್ರೇಷಯಾಮಾಸ ಕೌಂತೇಯೋ ವಿರಾಟಶ್ಚ ಮಹೀಪತಿಃ ॥೨॥

ಎಲೈ ಭಾರತನೇ, ಆಗ ಯುಧಿಷ್ಠಿರನು ಮತ್ತು ವಿರಾಟರಾಜನು ಎಲ್ಲಾ ಮಿತ್ರರಿಗೂ ಮತ್ತು ಕೃಷ್ಣನಿಗೂ ದೂತರನ್ನು ಕಳುಹಿಸಿದರು.

ತೇಷು ತತ್ರೋಪವಿಷ್ಟೇಷು ಪ್ರೇಷಿತೇಷು ತತಸ್ತತಃ ।
ತತ್ರಾಗಮನ್ಮಹಾಬಾಹುರ್ವನಮಾಲೀ ಹಲಾಯುಧಃ ॥೩॥

ದೂತರು ಬೇರೆ ಬೇರೆ ದೇಶಗಳಿಗೆ ಹೋಗಿ ಪಾಂಡವರು ಅಲ್ಲಿಯೇ ಇರುವಾಗ ಮಹಾಬಾಹುವೂ, ವನಮಾಲಿಯೂ ಆದ ಬಲರಾಮನು ಅಲ್ಲಿಗೆ ಬಂದನು.

ತಸ್ಮಿನ್ ಕಾಲೇ ನಿಶಮ್ಯಾಥ ದೂತವಾಕ್ಯಂ ಜನಾರ್ದನಃ ।
ದಯಿತಂ ಸ್ವಸ್ರಿಯಂ ಪುತ್ರಂ ಸುಭದ್ರಾಯಾಃ ಸುಮಾನಿತಮ್ ॥೪॥

ಅಭಿಮನ್ಯುಂ ಸಮಾದಾಯ ರಾಮೇಣ ಸಹಿತಸ್ತದಾ ।
ಸರ್ವಯಾದವಮುಖ್ಯೈಶ್ಚ ಸಂವೃತಃ ಪರವೀರಹಾ ॥೫॥

ಶಂಖದುಂದುಭಿನಿರ್ಘೋಷೈರ್ವಿರಾಟನಗರಂ ಯಯೌ ॥೬॥

ಆ ಸಮಯದಲ್ಲಿ ದೂತವಾಕ್ಯವನ್ನು ಕೇಳಿದ ಜನಾರ್ದನನು ಸುಭದ್ರೆಯ ಪುತ್ರನಾದ ತನ್ನ ಸೋದರಳಿಯನಾದ ಅತ್ಯಂತಮಾನಿತನಾದ ಪ್ರೀತಿಪಾತ್ರನಾದ ಅಭಿಮನ್ಯುವನ್ನು ಕರೆದುಕೊಂಡು ಬಲರಾಮಸಹಿತನಾಗಿ ಸರ್ವಯಾದವಶ್ರೇಷ್ಠರಿಂದಲೂ ಪರಿವೃತನಾದ ಪರವೀರಘಾತುಕನಾದ ಅವನು ಶಂಖದುಂದುಭಿಘೋಷದೊಂದಿಗೆ ವಿರಾಟನಗರಕ್ಕೆ ಬಂದನು.

ಕೃತವರ್ಮಾ ಚ ಹಾರ್ದಿಕ್ಯೋ ಯುಯುಧಾನಶ್ಚ ಸಾತ್ಯಕಿಃ ।
ಅನಾಧೃಷ್ಟಿಸ್ತಥಾಽಕ್ರೂರಃ ಸಾಂಬೋ ನಿಶಠ ಏವ ಚ ॥೭॥

ಪ್ರದ್ಯುಮ್ನಶ್ಚ ಮಹಾಬಾಹುರುಲ್ಮುಕಶ್ಚ ಮಹಾಬಲಃ ।
ಅಭಿಮನ್ಯುಮುಪಾದಾಯ ಸಹ ಮಾತ್ರಾ ಪರಂತಪಾಃ ॥೮॥

ಕೃಷ್ಣೇನ ಸಹಿತಾಃ ಸರ್ವೇ ಪಾಂಡವಾನ್ ದ್ರಷ್ಟುಮಾಗತಾಃ ॥೯॥

ಹೃದಿಕನ ಮಗನಾದ ಕೃತವರ್ಮ, ಸತ್ಯಕನ ಮಗನಾದ ಯುಯುಧಾನ, ಅನಾಧೃಷ್ಟಿ, ಅಕ್ರೂರ, ಸಾಂಬ, ನಿಶಠ, ಮಹಾಬಾಹುವಾದ ಪ್ರದ್ಯುಮ್ನ, ಮಹಾಬಲನಾದ ಉಲ್ಮುಕ ಪರಂತಪರಾದ ಇವರೆಲ್ಲರೂ ತಾಯಿಯಾದ ಸುಭದ್ರೆಯ ಜೊತೆಯಲ್ಲಿ ಅಭಿಮನ್ಯುವನ್ನು ಕರೆದುಕೊಂಡು ಕೃಷ್ಣನ ಜೊತೆಯಲ್ಲಿ ಪಾಂಡವರನ್ನು ನೋಡಲು ಎಲ್ಲರೂ ಬಂದರು.

ಶತನಾಗಸಹಸ್ರಾಣಿ ರಥಾನಾಂ ಚ ಶತಾಯುತಮ್ ।
ಹಯಾನಾಮರ್ಬುದಂ ಪೂರ್ಣಂ ನಿಖರ್ವಂ ಚ ಪದಾತಯಃ ॥

ವೃಷ್ಣ್ಯಂಧಕಾಶ್ಚ ಶತಶೋ ಭೋಜಾಶ್ಚ ಪರಮೌಜಸಃ ।
ಅನ್ವಯುರ್ವೃಷ್ಣಿಶಾರ್ದೂಲಂ ವಾಸುದೇವಂ ಮಹಾದ್ಯುತಿಮ್ ॥೧೧॥

ವೃಷ್ಣಿ ಶಾರ್ದೂಲನಾದ ಮಹಾದ್ಯುತಿಯನ್ನು ಹೊಂದಿದ ಕೃಷ್ಣನು ಹೊರಟಾಗ ಅವನನ್ನು ಒಂದುಲಕ್ಷ ಗಜಗಳು, ಹತ್ತುಲಕ್ಷ ರಥಗಳು, ಅರ್ಬುದ ಅಶ್ವಗಳು ಮತ್ತು ನಿಖರ್ವಸಂಖ್ಯೆಯ ಪದಾತಿಗಳು, ಪರಾಕ್ರಮಿಗಳಾದ ನೂರಾರು ಸಂಖ್ಯೆಯಲ್ಲಿದ್ದ ವೃಷ್ಣಿಗಳು, ಅಂಧಕರು ಮತ್ತು ಭೋಜರು ಎಲ್ಲರೂ ಅವನನ್ನು ಹಿಂಬಾಲಿಸಿದರು.

ಇಂದ್ರಸೇನಾದಯಶ್ಚೈವ ರಥೈಸ್ತೈಃ ಸುಸಮಾಹಿತೈಃ ।
ಉಪೇಯುಃ ಸಾದಿನಃ ಸರ್ವೇ ಪರಿಸಂವತ್ಸರೋಷಿತಾಃ ॥೧೨॥

ಇಂದ್ರಸೇನ ಮೊದಲಾದ ಪಾಂಡವರ ಸಾರಥಿಗಳು ಒಂದು ಸಂವತ್ಸರ ದೂರದಲ್ಲಿ ವಾಸ ಮಾಡುವವರಾಗಿ ಸನ್ನದ್ಧವಾದ ರಥಗಳನ್ನು ತೆಗೆದುಕೊಂಡು ಬಂದರು. ಹಾಗೆಯೇ ಅಶ್ವಾರೋಹಿಗಳೂ ಬಂದರು.

ವಾಸುದೇವಂ ತದಾऽऽಯಾಂತಂ ಶ್ರುತ್ವಾ ಪಾಂಡುಸುತಾಸ್ತದಾ ।
ಮಾತ್ಸ್ಯೇನ ಸಹಿತಾಃ ಸರ್ವೇ ಪ್ರತ್ಯುದ್ಯಾತಾ ಜನಾರ್ದನಮ್ ॥೧೩॥

ಕೃಷ್ಣನು ಬರುತ್ತಿರುವುದನ್ನು ಕೇಳಿದ ಪಾಂಡುಪುತ್ರರು ಆಗ ವಿರಾಟರಾಜನ ಜೊತೆಯಲ್ಲಿ ಎಲ್ಲರೂ ಅವನನ್ನು ಎದುರುಗೊಳ್ಳಲು ಮುಂದೆ ಹೋದರು.

ಶಂಖದುಂದುಭಿನಿರ್ಘೋಷೈರ್ಮಂಗಲೈಶ್ಚ ಜನಾರ್ದನಮ್ ।
ವವಂದುರ್ಮುದಿತಾಃ ಸರ್ವೇ ಪಾದಯೋಸ್ತಸ್ಯ ಪಾಂಡವಾಃ ॥೧೪॥

ಮಾತ್ಸ್ಯೇನ ಸಹಿತಾಃ ಸರ್ವೇ ಆನಂದಾಶ್ರುಪರಿಪ್ಲುತಾಃ ॥೧೫॥

ಶಂಖದುಂದುಭಿನಿರ್ಘೋಷದೊಂದಿಗೆ ಮತ್ತು ಮಂಗಳದೊಂದಿಗೆ ಪಾಂಡವರೆಲ್ಲರೂ ಸಂತೋಷಗೊಂಡು ಕೃಷ್ಣನ ಪಾದಗಳಿಗೆ ವಿರಾಟರಾಜನ ಸಹಿತರಾಗಿ ಎಲ್ಲರೂ ಆನಂದಾಶ್ರುಗಳಿಂದ ಪೂರ್ಣರಾಗಿ ನಮಸ್ಕರಿಸಿದರು.

ಪಾಂಡವಾಃ

ತವ ಕೃಷ್ಣ ಪ್ರಸಾದಾದ್ ವೈ ವರ್ಷಾಣ್ಯೇತಾನಿ ಸರ್ವಶಃ ।
ತ್ರಯೋದಶೋऽಪಿ ದಾಶಾರ್ಹ ಯಥಾ ಸ ಸಮಯಃ ಕೃತಃ ॥೧೬॥

ಉಷಿತಾಃ ಸ್ಮೋ ಜಗನ್ನಾಥ ತ್ವಂ ನಾಥೋ ನೋ ಜನಾರ್ದನ ॥೧೭॥

ರಕ್ಷಸ್ವ ದೇವದೇವೇಶ ತ್ವಾಮದ್ಯ ಶರಣಂ ಗತಾಃ ॥೧೮॥

ಪಾಂಡವರು– ಕೃಷ್ಣನೇ, ದಾಶಾರ್ಹನೇ, ನಿನ್ನ ಅನುಗ್ರಹದಿಂದ ಈ ಎಲ್ಲಾ ಹನ್ನೆರಡು ವರ್ಷಗಳು ಮತ್ತು ಪ್ರತಿಜ್ಞೆಯನ್ನು ಮಾಡಿದಂತೆ ಹದಿಮೂರನೆಯ ವರ್ಷವೂ ಕಳೆಯಿತು. ಜಗನ್ನಾಥನೇ, ನಾವು ಹೀಗೆ ವಾಸವನ್ನು ಮಾಡಿದ್ದೇವೆ. ಜನಾರ್ದನನೇ, ನೀನೇ ನಮ್ಮ ಒಡೆಯ. ದೇವದೇವೇಶನೇ, ಈ ದಿನ ನಿನಗೆ ಶರಣಾಗತರಾಗಿದ್ದೇವೆ. ನಮ್ಮನ್ನು ರಕ್ಷಿಸು.

ವೈಶಂಪಾಯನಃ

ತಾನ್ ವಂದಮಾನಾನ್ ಸಹಸಾ ಪರಿಷ್ವಜ್ಯ ಜನಾರ್ದನಃ ।
ವಿರಾಟಸ್ಯ ಸಹಾಯಾಂಸ್ತಾನ್ ಸರ್ವಯಾದವಸಂವೃತಃ ॥೧೯॥

ಯಥಾರ್ಹಂ ಪೂಜಯಾಮಾಸ ಮುದಾ ಪರಮಯಾ ಯುತಃ ॥೨೦॥

ವೈಶಂಪಾಯನ– ಕೃಷ್ಣನು ಸರ್ವಯಾದವಸಂವೃತನಾಗಿ ವಿರಾಟನಿಗೆ ಸಹಾಯರಾಗಿದ್ದ ಹಾಗೆ ವಂದನೆ ಮಾಡುತ್ತಿದ್ದ ಪಾಂಡವರನ್ನು ಆಲಿಂಗಿಸಿ ಬಹಳ ಸಂತೋಷದಿಂದ ಕೂಡಿದವನಾಗಿ ಯಥಾಯೋಗ್ಯವಾಗಿ ಅವರನ್ನು ಸತ್ಕರಿಸಿದನು.

ವೃಷ್ಣಿವೀರಾಶ್ಚ ತಾನ್ ಸರ್ವಾನ್ ಯಥಾರ್ಹಂ ಪ್ರತಿಪೇದಿರೇ ।
ಕೃಷ್ಣಾ ಚ ದೇವಕೀಪುತ್ರಂ ವವಂದೇ ಪಾದಯೋಸ್ತಥಾ ॥೨೧॥

ವೃಷ್ಣಿವೀರರೂ ಸಹ ಯಥಾಯೋಗ್ಯವಾಗಿ ಪಾಂಡವರೆಲ್ಲರ ಸಮಾಗಮವನ್ನು ಹೊಂದಿದರು. ದ್ರೌಪದಿಯೂ ಸಹ ದೇವಕೀಪುತ್ರನ ಪಾದಗಳಿಗೆ ನಮಸ್ಕರಿಸಿದಳು.

ತಾಮುದ್ಯಮ್ಯ ಸುಸಂಹೃಷ್ಟೋ ನಯನೇ ಪರಿಮಾರ್ಜ್ಯ ಚ ।
ಉವಾಚ ವಾಕ್ಯಂ ದೇವೇಶಃ ಸರ್ವಯಾದವಸನ್ನಿಧೌ ॥೨೨॥

ಬಹಳ ಸಂತೋಷಗೊಂಡ ಕೃಷ್ಣನು ಅವಳನ್ನು ಎತ್ತಿ ಅವಳ ಕಣ್ಣುಗಳನ್ನು ಒರೆಸಿ ದೇವೇಶನಾದ ಅವನು ಸರ್ವಯಾದವ ಸನ್ನಿಧಿಯಲ್ಲಿ ಹೀಗೆ ಮಾತನಾಡಿದನು.

ಶ್ರೀಭಗವಾನ್

ಮಾ ಶೋಕಂ ಕುರು ಕಲ್ಯಾಣಿ ಧಾರ್ತರಾಷ್ಟ್ರಾನ್ ಸಮಾಹಿತಾನ್ ।
ಅಚಿರಾದ್ ಘಾತಯಿತ್ವಾऽಹಂ ಪಾರ್ಥೇನ ಸಹಿತಃ ಕ್ಷಿತಿಮ್ ॥೨೩॥

ಯುಧಿಷ್ಠಿರಾಯ ದಾಸ್ಯಾಮಿ ಯಾತು ತೇ ಮಾನಸೋ ಜ್ವರಃ ॥೨೪॥

ಶ್ರೀಭಗವಾನ್– ಕಲ್ಯಾಣಿಯೇ, ಶೋಕಪಡಬೇಡ. ಒಂದುಗೂಡಿದ ಧೃತರಾಷ್ಟ್ರಪುತ್ರರನ್ನು ಅರ್ಜುನನಿಂದ ಸಹಿತನಾಗಿ ನಾನು ಶೀಘ್ರವಾಗಿ ಸಂಹರಿಸಿ ಭೂಮಿಯನ್ನು ಯುಧಿಷ್ಠಿರನಿಗೆ ಕೊಡುವೆನು. ನಿನಗೆ ಮನೋಜ್ವರ ಉಂಟಾಗುವುದು ಬೇಡ.

ಅಭಿಮನ್ಯುನಾ ಚ ಪಾರ್ಥೇನ ರೌಗ್ಮಿಣೇಯೇನ ತೇ ಶಪೇ ।
ಸತ್ಯಮೇತದ್ ವಚೋ ಮಹ್ಯಮವೇಹಿ ತ್ವಮನಿಂದಿತೇ ॥೨೫॥

ನಾನು ಅಭಿಮನ್ಯು, ಅರ್ಜುನ ಮತ್ತು ರುಗ್ಮಿಣಿಯ ಮಗನಾದ ಪ್ರದ್ಯುಮ್ನನ ಮೇಲೆ ಆಣೆಯನ್ನು ಮಾಡಿ ಹೇಳುತ್ತಿದ್ದೇನೆ. ಅನಿಂದಿತೆಯೇ, ನನ್ನ ಈ ಮಾತು ಸತ್ಯವೆಂದು ತಿಳಿ.

ವೈಶಂಪಾಯನಃ

ಇತ್ಯುಕ್ತ್ವಾ ತಾಂ ವಿಸೃಜ್ಯಾಥ ಪ್ರೀಯಮಾಣೋ ಯುಧಿಷ್ಠಿರಮ್ ।
ಅನಾಪ್ತ ವೃಷ್ಣಿಶಾರ್ದೂಲಃ ಸಹ ವೃಷ್ಣ್ಯಂಧಕೈಸ್ತದಾ ॥೨೬॥

ವೈಶಂಪಾಯನ– ಹೀಗೆ ಹೇಳಿ ಅವಳನ್ನು ಬೀಳ್ಕೊಟ್ಟು ವೃಷ್ಣಿಶಾರ್ದೂಲನಾದ ಅವನು ವೃಷ್ಣ್ಯಂಧಕರಿಂದ ಸಹಿತನಾಗಿ ಯುಧಿಷ್ಠಿರನ ಸಮೀಪದಲ್ಲಿ ಕುಳಿತನು.

ಕಾಶಿರಾಜಶ್ಚ ಶೈಬ್ಯಶ್ಚ ಭಜಮಾನೌ ಯುಧಿಷ್ಠಿರಮ್ ।
ಅಕ್ಷೌಹಿಣೀಭ್ಯಾಂ ಸಹಿತಾವಾಗತೌ ಪೃಥಿವೀಪತೇ ॥೨೭॥

ಎಲೈ ಜನಮೇಜಯನೇ, ಯುಧಿಷ್ಠಿರನ ಭಕ್ತರಾದ ಕಾಶಿರಾಜ ಮತ್ತು ಶೈಬ್ಯ ಇಬ್ಬರೂ ಅಕ್ಷೌಹಿಣಿ ಸೈನ್ಯವನ್ನು ತೆಗೆದುಕೊಂಡು ಅಲ್ಲಿಗೆ ಬಂದರು.

ಅಕ್ಷೌಹಿಣೀಭಿಃ ಪಾಂಚಾಲಸ್ತಿಸೃಭಿಶ್ಚ ಮಹಾಬಲಃ ।
ದ್ರೌಪದ್ಯಾಶ್ಚ ಸುತಾ ವೀರಾಃ ಶಿಖಂಡೀ ಚಾಪರಾಜಿತಃ ॥೨೮॥

ಧೃಷ್ಟದ್ಯುಮ್ನಶ್ಚ ದುರ್ಧರ್ಷಃ ಸರ್ವಶಸ್ತ್ರಭೃತಾಂ ವರಃ ।
ಉಪಪ್ಲಾವ್ಯಂ ಯಯುಃ ಶೀಘ್ರಂ ಪಾಂಡವಾರ್ಥೇ ಮಹಾಬಲಾಃ ॥೨೯॥

ಮಹಾಬಲನಾದ ಪಾಂಚಾಲರಾಜನಾದ ದ್ರುಪದನು ಮೂರು ಅಕ್ಷೌಹಿಣೀ ಸೈನ್ಯವನ್ನು ತೆಗೆದುಕೊಂಡು ಬಂದನು. ವೀರರಾದ ದ್ರೌಪದಿಯ ಮಕ್ಕಳು ಅಪರಾಜಿತನಾದ ಶಿಖಂಡಿ, ದುರ್ಧರ್ಷನೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ ಆದ ಧೃಷ್ಟದ್ಯುಮ್ನ, ಮಹಾಬಲರಾದ ಇವರೆಲ್ಲರೂ ಪಾಂಡವರ ಸಲುವಾಗಿ ಶೀಘ್ರವಾಗಿ ಉಪಪ್ಲಾವ್ಯನಗರಕ್ಕೆ ಬಂದರು.

ತತಃ ಶತಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಸಮೀಪಮಭಿವರ್ತಂತೇ ಯೋಧಾ ಯೌಧಿಷ್ಠಿರಂ ಬಲಮ್ ॥೩೦॥

ಅನಂತರ ನೂರು, ಸಾವಿರ, ಹತ್ತುಸಾವಿರ ಅರ್ಬುದ ಸಂಖ್ಯೆಯಲ್ಲಿ ಯೋಧರು ಬಂದು ಯುಧಿಷ್ಠಿರನ ಸೈನ್ಯವನ್ನು ಸೇರಿದರು.

ಸಮುದ್ರಮಿವ ಘರ್ಮಾಂತೇ ಸ್ರೋತಃಶ್ರೇಷ್ಠಾಃ ಪೃಥಕ್ ಪೃಥಕ್ ।
ಆಪೂರಯನ್ ಮಹೀಪಾಲಾಃ ಸರ್ವೇ ಪಾಂಡುಸುತಂ ತದಾ ॥೩೧॥

ವೇದಾವಭೃಥಸಂಪನ್ನಾಃ ಶೂರಾಃ ಸರ್ವೇ ತನುತ್ಯಜಃ ॥೩೨॥

ಬೇಸಿಗೆಯು ಕಳೆದ ಮೇಲೆ ಶ್ರೇಷ್ಠವಾದ ನದಿಗಳು ಬೇರೆ ಬೇರೆಯಾಗಿ ಬಂದು ಸಮುದ್ರವನ್ನು ಸೇರಿ ಸಮುದ್ರವನ್ನು ತುಂಬಿದಂತೆ, ವೇದಾಧ್ಯಯನಸಂಪನ್ನರಾಗಿ ಅವಭೃಥಸ್ನಾನವನ್ನು ಮಾಡಿದ, ಪಾಂಡವರ ಸಲುವಾಗಿ ಪ್ರಾಣವನ್ನು ಕೊಡಲು ಸಿದ್ಧರಾದ, ಶೂರರಾದ ರಾಜರೆಲ್ಲರೂ ಬಂದು ಯುಧಿಷ್ಠಿರನನ್ನು ಸೇರಿದರು.

ತಾನಾಗತಾನಭಿಪ್ರೇಕ್ಷ್ಯ ಪಾರ್ಥೋ ಜ್ಞಾನಭೃತಾಂ ವರಃ ।
ಪೂಜಯಾಮಾಸ ವಿಧಿವದ್ ಯಥಾರ್ಹಂ ರಾಜಸತ್ತಮಾನ್ ॥೩೩॥

ಜ್ಞಾನಿಗಳಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ಆಗತರಾದ ಆ ರಾಜಶ್ರೇಷ್ಠರನ್ನೆಲ್ಲಾ ನೋಡಿ ಯಥಾಯೋಗ್ಯವಾಗಿ ವಿಧಿಗೆ ಅನುಗುಣವಾಗಿ ಅವರನ್ನು ಪೂಜಿಸಿದನು.

ಪಾರಿಬರ್ಹಂ ದದೌ ಕೃಷ್ಣಃ ಪಾಂಡವಾನಾಂ ಮಹಾತ್ಮನಾಮ್ ।
ಸ್ತ್ರಿಯೋ ರತ್ನಾನಿ ವಾಸಾಂಸಿ ಪೃಥಕ್‌ಪೃಥಗನೇಕಶಃ ॥೩೪॥

ಕೃಷ್ಣನು ಮಹಾತ್ಮರಾದ ಪಾಂಡವರೆಲ್ಲರಿಗೂ ಸ್ತ್ರೀಯರು, ರತ್ನಗಳು, ವಸ್ತ್ರಗಳು ಮುಂತಾದ ಅನೇಕ ಉಡುಗೊರೆಗಳನ್ನು ಬೇರೆಬೇರೆಯಾಗಿ ಕೊಟ್ಟನು.

ರಾಜಾನೋ ರಾಜಪುತ್ರಾಶ್ಚ ನಿವೃತ್ತೇ ಸಮಯೇ ತಥಾ ।
ಯಥಾರ್ಹಂ ಪಾಂಡವಶ್ರೇಷ್ಠೇ ಹ್ಯವರ್ತಂತಾಭಿಪೂಜಿತಾಃ ॥೩೫॥

ಆಸನ್ ಪ್ರಹೃಷ್ಟಮನಸಃ ಪಾರಿಬರ್ಹಂ ದದುಸ್ತದಾ ॥೩೬॥

ಪಾಂಡವರ ಪ್ರತಿಜ್ಞೆಯ ಕಾಲವು ಮುಗಿಯುತ್ತಿರಲು ರಾಜರು ಮತ್ತು ರಾಜಪುತ್ರರು ಯಥಾಯೋಗ್ಯವಾಗಿ ಧರ್ಮರಾಜನಲ್ಲಿ ನಡೆದುಕೊಂಡು ಅವನಿಂದ ಪೂಜಿತರಾಗಿ ಎಲ್ಲರೂ ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ಉಡುಗೊರೆಯನ್ನು ಕೊಟ್ಟರು.

ತೇಷು ತತ್ರೋಪವಿಷ್ಟೇಷು ರಾಜಭಿರ್ವೃಷ್ಣಿಭಿಃ ಸಹ ।
ವಿವಾಹೋ ವಿಧಿವದ್ ರಾಜನ್ ವವೃಧೇ ಕುರುಮಾತ್ಸ್ಯಯೋಃ ॥೩೭॥

ಎಲೈ ರಾಜನೇ, ಆ ರಾಜರೂ ಮತ್ತು ವೃಷ್ಣಿಗಳೂ ಎಲ್ಲರೂ ಅಲ್ಲಿ ಸೇರಿಕುಳಿತಿರಲು ಕೌರವ ಕುಲಕ್ಕೂ ಮತ್ತು ಮಾತ್ಸ್ಯಕುಲಕ್ಕೂ ನಡೆದ ವಿವಾಹವು ಚೆನ್ನಾಗಿ ಬೆಳೆಯಿತು.

ತತಃ ಶಂಖಾ ಮೃದಂಗಾಶ್ಚ ಗೋಮುಖಾ ಡಿಂಡಿಮಾಸ್ತದಾ ।
ಪಾರ್ಥೈಃ ಸಂಯುಜ್ಯಮಾನಸ್ಯ ನೇದುರ್ಮಾತ್ಸ್ಯಸ್ಯ ವೇಶ್ಮನಿ ॥೩೮॥

ಉಚ್ಚಾವಚಾಂಸ್ತದಾ ಜಘ್ನುರ್ವಾದ್ಯಸಂಘಾನ್ ಸಹಸ್ರಶಃ ।
ಭಕ್ಷ್ಯಭೋಜ್ಯಾನ್ನಪಾನಾನಿ ಪ್ರಭೂತಾನ್ಯಭ್ಯಹಾರಯತ್ ॥೩೯॥

ಗಾಯನಾಖ್ಯಾನಶೀಲಾಶ್ಚ ನಟಾ ವೈತಾಲಿಕಾಸ್ತಥಾ ।
ಸ್ತುವಂತಸ್ತಾನುಪಾತಿಷ್ಠನ್ ಸೂತಾಶ್ಚ ಸಹ ಮಾಗಧೈಃ ॥೪೦॥

ಮತ್ಸ್ಯರಾಜನಾದ ವಿರಾಟನು ಪಾಂಡವರ ಜೊತೆಯಲ್ಲಿ ಸಂಬಂಧವನ್ನು ಹೊಂದುತ್ತಿರಲು ಅವನ ಮನೆಯಲ್ಲಿ ಶಂಖಗಳು, ಮೃದಂಗಗಳು, ಗೋಮುಖಗಳು ಮತ್ತು ಡಿಂಡಿಮಗಳು ನಾದವನ್ನು ಮಾಡಿದವು. ಇನ್ನೂ ಅನೇಕ ವಿಧವಾದ ಉಚ್ಚ ಮತ್ತು ನೀಚವಾದ ವಾದ್ಯಗಳನ್ನು ಸಹಸ್ರಸಂಖ್ಯೆಯಲ್ಲಿ ಮೊಳಗಿಸಿದರು. ಸಮೃದ್ಧವಾದ ಭಕ್ಷ್ಯಭೋಜ್ಯಗಳು ಮತ್ತು ಅನ್ನಪಾನಗಳು ಇವುಗಳನ್ನು ವಿರಾಟನು ಎಲ್ಲರಿಗೂ

ನೀಡಿದನು. ಗಾಯನರು, ವ್ಯಾಖ್ಯಾನಶೀಲರು, ನಟರು, ತಾಳಗಳನ್ನು ಹಿಡಿದವರು ಮತ್ತು ಸೂತಮಾಗಧರು ಇವರೆಲ್ಲರೂ ಅವರನ್ನು ಹೊಗಳಿ ಪೂಜಿಸಿದರು.

ಸ್ತ್ರಿಯೋ ವೃದ್ಧಾಃ ಕುಟುಂಬಿನ್ಯ ಉತ್ಸವಜ್ಞಾಶ್ಚ ಮಂಗಲೇ ।
ದ್ರೌಪದ್ಯಂತಃಪುರೇ ಚೈವ ವಿರಾಟಸ್ಯ ಗೃಹೇ ಸ್ತ್ರಿಯಃ ॥೪೧॥

ಸುದೇಷ್ಣಾಂ ತು ಪುರಸ್ಕೃತ್ಯ ಮತ್ಸ್ಯಾನಾಂ ಕೇವಲಾಃ ಸ್ತ್ರಿಯಃ ।
ಆಜಗ್ಮುಶ್ಚಾರುಪೀನಾಂಗ್ಯಃ ಸುಮೃಷ್ಟಮಣಿಕುಂಡಲಾಃ ॥೪೨॥

ಸ್ತ್ರೀಯರು ಮಂಗಳೋತ್ಸವದ ವಿಧಿಯನ್ನು ತಿಳಿದ ವೃದ್ಧರಾದ ಸುಮಂಗಲಿಯರು ದ್ರೌಪದಿಯ ಅಂತಃಪುರದಲ್ಲಿಯೂ ಮತ್ತು ವಿರಾಟನ ಗೃಹದಲ್ಲಿಯೂ ಇದ್ದ ಸ್ತ್ರೀಯರು ಮತ್ತು ಮತ್ಸ್ಯರಾಜನ ಎಲ್ಲಾ ಸ್ತ್ರೀಯರು ಸುಂದರವಾದ ಉನ್ನತವಾದ ಅವಯವಗಳನ್ನು ಉಳ್ಳವರಾಗಿ ಒಳ್ಳೆಯ ಮಣಿಕುಂಡಲಗಳನ್ನು ಧರಿಸಿ ಸುದೇಷ್ಣೆಯನ್ನು ಮುಂದೆ ಮಾಡಿಕೊಂಡು ಬಂದರು.

ಕರ್ಣೋಪಪನ್ನಾಸ್ತಾ ನಾರ್ಯೋ ರೂಪವತ್ಯಃ ಸ್ವಲಂಕೃತಾಃ ।
ಸರ್ವಾಶ್ಚಾಭ್ಯಭವತ್ ಕೃಷ್ಣಾ ರೂಪೇಣ ವಪುಷಾ ಶ್ರಿಯಾ ॥೪೩॥

ಕರ್ಣಾಭರಣಗಳಿಂದ ಕೂಡಿದ ಚೆನ್ನಾಗಿ ಅಲಂಕೃತರಾದ ರೂಪವತಿಯರಾದ ಆ ಸ್ತ್ರೀಯರೆಲ್ಲರನ್ನೂ ದ್ರೌಪದಿಯು ತನ್ನ ರೂಪದಿಂದಲೂ, ದೇಹದಿಂದಲೂ ಮತ್ತು ಕಾಂತಿಯಿಂದಲೂ ಮೀರಿದಳು.

ಪರಿವಾರ್ಯೋತ್ತರಾಂ ಶ್ಲಾಘ್ಯಾಂ ರಾಜಪುತ್ರೀಮಲಂಕೃತಾಮ್ ।
ಸುತಾಮಿವ ಮಹೇಂದ್ರಸ್ಯ ಪುರಸ್ಕೃತ್ಯೋಪತಸ್ಥಿರೇ ॥೪೪॥

ಅವರೆಲ್ಲರೂ ಮಹೇಂದ್ರಕುಮಾರಿಯಂತಿದ್ದ, ಶ್ಲಾಘನೀಯಳಾದ ರಾಜಕುಮಾರಿಯಾದ ಉತ್ತರೆಯನ್ನು ಸುತ್ತುವರಿದು ಅವಳನ್ನು ಮುಂದೆ ಮಾಡಿಕೊಂಡು ಎಲ್ಲಾ ಕಾರ್ಯಗಳನ್ನೂ ಮಾಡಿದರು.

ಭೃಂಗಾರಂ ತು ಸಮಾದಾಯ ಸೌವರ್ಣಂ ಜಲಪೂರಿತಮ್ ।
ಪಾರ್ಥಸ್ಯ ಹಸ್ತೇ ಸಹಸಾ ಸುತಾಮಿಂದೀವರೇಕ್ಷಣಾಮ್ ॥೪೫॥

ಸ್ನುಷಾರ್ಥಂ ಪ್ರಾಕ್ಷಿಪದ್ ವಾರಿ ವಿರಾಟೋ ವಾಹಿನೀಪತಿಃ ॥೪೬॥

ವಿರಾಟರಾಜನು ಜಲಪೂರಿತವಾದ ಬಂಗಾರದ ಪಾತ್ರೆಯನ್ನು ತಂದು ಪಾರ್ಥನ ಕೈಯಲ್ಲಿ ಇಂದೀವರಾಕ್ಷಿಯಾದ ತನ್ನ ಮಗಳ ಕೈಯನ್ನಿಟ್ಟು ಅರ್ಜುನನ ಸೊಸೆಯಾಗಿ ಧಾರಾಪೂರ್ವಕವಾಗಿ ಅರ್ಜುನನ ಕೈಯಲ್ಲಿ ಕೊಟ್ಟನು.

ತಾಂ ಪ್ರತ್ಯಗೃಹ್ಣಾತ್ ಕೌಂತೇಯಃ ಸುತಸ್ಯಾರ್ಥೇ ಮಹಾಮನಾಃ ।
ಸೌಭದ್ರಸ್ಯಾನವದ್ಯಾಂಗೀಂ ವಿರಾಟತನಯಾಂ ತದಾ ॥೪೭॥

ಕುಂತೀಪುತ್ರನೂ, ಮಹಾಮನನೂ ಆದ ಅರ್ಜುನನು ತನ್ನ ಮಗನಾದ ಸುಭದ್ರಾಪುತ್ರನಾದ ಅಭಿಮನ್ಯುವಿನ ಸಲುವಾಗಿ ವಿರಾಟಪುತ್ರಿಯಾದ ಅವಳನ್ನು ಸ್ವೀಕರಿಸಿದನು.

ತತ್ರಾತಿಷ್ಠನ್ಮಹಾರಾಜೋ ರೂಪಮಿಂದ್ರಸ್ಯ ಧಾರಯನ್ ।
ಸ್ನುಷಾಂ ತಾಂ ಪರಿಗೃಹ್ಣಾನಃ ಕುಂತೀಪುತ್ರೋ ಯುಧಿಷ್ಠಿರಃ ॥೪೮॥

ಅಲ್ಲಿ ಮಹಾರಾಜನಾದ ಕುಂತೀಪುತ್ರನಾದ ಯುಧಿಷ್ಠಿರನು ಇಂದ್ರನಂತೆ ರೂಪವನ್ನು ಧರಿಸಿ ಆ ಸೊಸೆಯನ್ನು ಸ್ವೀಕರಿಸುತ್ತಾ ವಿರಾಜಿಸಿದನು.

ದ್ರುಪದಶ್ಚ ವಿರಾಟಶ್ಚ ಶಿಖಂಡೀ ಚ ಮಹಾಯಶಾಃ ।
ಕಾಶಿರಾಜಶ್ಚ ಶೈಬ್ಯಶ್ಚ ಧೃಷ್ಟದ್ಯುಮ್ನಶ್ಚ ಸಾತ್ಯಕಿಃ ॥೪೯॥

ಸಪ್ತೈತೇऽಕ್ಷೌಹಿಣೀಪಾಲಾ ಯಜ್ವಾನೋ ಭೂರಿದಕ್ಷಿಣಾಃ ।
ಪಾಂಡವಂ ಪರಿವಾರ್ಯಾಥ ನಿವಾಸಂ ಚಕ್ರಿರೇ ತದಾ ॥೫೦॥

ದ್ರುಪದ, ವಿರಾಟ, ಮಹಾಕೀರ್ತಿವಂತನಾದ ಶಿಖಂಡೀ, ಕಾಶಿರಾಜ, ಶೈಬ್ಯ, ಧೃಷ್ಟದ್ಯುಮ್ನ ಮತ್ತು ಸಾತ್ಯಕಿ. ಪಾಂಡವರ ಅಕ್ಷೌಹಿಣೀಪಾಲರಾದ ಯಾಗಶೀಲರೂ, ಭೂರಿದಕ್ಷಿಣೆಯನ್ನು ಕೊಡುವವರೂ ಆದ ಈ ಏಳು ಜನರು ಪಾಂಡವನನ್ನು ಸುತ್ತುವರಿದು ಅಲ್ಲಿ ನಿವಾಸವನ್ನು ಮಾಡಿದರು.

ತತ್ರಸ್ಥಾಯಾಂ ತು ಸೇನಾಯಾಂ ವಿರಾಟೋ ಜಗತೀಪತಿಃ ।
ಪ್ರೀತೋ ದುಹಿತರಂ ಗೃಹ್ಯ ಪ್ರದದಾವಭಿಮನ್ಯವೇ ॥೫೧॥

ಎಲ್ಲಾಸೈನ್ಯವು ಅಲ್ಲೇ ಇರುತ್ತಿರಲು ವಿರಾಟರಾಜನು ಸಂತೋಷದಿಂದ ಮಗಳನ್ನು ಕರೆದುಕೊಂಡು ಅಭಿಮನ್ಯುವಿಗೆ ಧಾರೆ ಎರೆದುಕೊಟ್ಟನು.

ಮುದಾ ಗೃಹ್ಯೋತ್ತರಾಂ ಪಾರ್ಥ ಆನಾಯ್ಯ ಚ ಜನಾರ್ದನಮ್ ।
ವಿವಾಹಂ ಕಾರಯಾಮಾಸ ಸೌಭದ್ರಸ್ಯ ಮಹಾತ್ಮನಃ ॥೫೨॥

ಅರ್ಜುನನು ಸಂತೋಷದಿಂದ ಕೂಡಿದವನಾಗಿ ಕೃಷ್ಣನನ್ನು ಕರೆಸಿ ಮಹಾತ್ಮನಾದ ಸುಭದ್ರಾಪುತ್ರನಾದ ಅಭಿಮನ್ಯುವಿನ ವಿವಾಹವನ್ನು (ಕೃಷ್ಣನ ಸನ್ನಿಧಿಯಲ್ಲಿ) ಮಾಡಿಸಿದನು.

ತತೋ ವಿವಾಹೋ ವವೃತೇ ಸ್ಥಿತಃ ಸರ್ವಗುಣಾನ್ವಿತಃ ।
ಸೌಭದ್ರಸ್ಯಾದ್ಭುತಶ್ಚೈವ ಪಿತುಸ್ತವ ಪಿತುಸ್ತದಾ ॥೫೩॥

ಅನಂತರ ನಿನ್ನ ತಂದೆಯ ತಂದೆಯಾದ ಸುಭದ್ರಾಪುತ್ರನಾದ ಅಭಿಮನ್ಯುವಿನ ವಿವಾಹವು ಸರ್ವಗುಣಗಳಿಂದ ಕೂಡಿದುದಾಗಿ ಅದ್ಭುತವಾಗಿ ಜರುಗಿತು.

ಧೌಮ್ಯಃ ಶಿಷ್ಯೈಃ ಪರಿವೃತೋ ಜುಹಾವಾಗ್ನೌ ವಿಧಾನತಃ ।
ಅಗ್ನಿಂ ಪ್ರದಕ್ಷಿಣೀಕುರ್ವನ್ ಸೌಭದ್ರಃ ಪಾಣಿಮಗ್ರಹೀತ್ ॥೫೪॥

ಧೌಮ್ಯರು ತಮ್ಮ ಶಿಷ್ಯರಿಂದ ಸಹಿತರಾಗಿ ವಿಧಿಪೂರ್ವಕವಾಗಿ ಅಗ್ನಿಯಲ್ಲಿ ಹೋಮವನ್ನು ಮಾಡಿದರು. ಅಗ್ನಿಯ ಪ್ರದಕ್ಷಿಣೆಯನ್ನು ಮಾಡುತ್ತಾ ಅಭಿಮನ್ಯುವು ಉತ್ತರೆಯ ಪಾಣಿಗ್ರಹಣವನ್ನು ಮಾಡಿದನು.

ತತಃ ಸಭಾರ್ಯಃ ಸಂಹೃಷ್ಟೋ ಮತ್ಸ್ಯರಾಜೋ ಧನಂ ಮಹತ್ ।
ತಸ್ಮೈ ಶತಸಹಸ್ರಾಣಿ ಹಯಾನಾಂ ವಾತರಂಹಸಾಮ್ ॥೫೫॥

ದ್ವೇ ಗಜಾನಾಂ ಶತೇ ಮುಖ್ಯೇ ವಿರಾಟಃ ಪ್ರದದೌ ಪಿತಾ ।
ಪ್ರಾದಾನ್ಮತ್ಸ್ಯಪತಿರ್ಹೃಷ್ಟಃ ಕನ್ಯಾಧನಮನುತ್ತಮಮ್ ॥೫೬॥

ಆಗ ಪತ್ನೀಸಹಿತನಾದ ಮತ್ಸ್ಯರಾಜನು ಬಹಳ ಧನವನ್ನೂ, ವಾಯುವೇಗವುಳ್ಳ ನೂರುಸಹಸ್ರ ಅಶ್ವಗಳನ್ನೂ, ಇನ್ನೂರು ಶ್ರೇಷ್ಠವಾದ ಗಜಗಳನ್ನೂ ಸಂತೋಷಗೊಂಡ ಅವನು ಶ್ರೇಷ್ಠವಾದ ಕನ್ಯಾಧನವಾಗಿ ನೀಡಿದನು.

ಪಾರಿಬರ್ಹಂ ಚ ಪಾರ್ಥಸ್ಯ ಪ್ರದದೌ ಮತ್ಸ್ಯಪುಂಗವಃ ।
ಕೃಷ್ಣೇನ ಸಹ ಕೌಂತೇಯಃ ಪ್ರತ್ಯಗೃಹ್ಣಾತ್ ಪರಂತಪಃ ॥೫೭॥

ಮತ್ಸ್ಯಪುಂಗವನಾದ ಅವನು ಅರ್ಜುನನಿಗೂ ಉಡುಗೊರೆಯನ್ನು ನೀಡಿದನು. ಕೃಷ್ಣನಿಂದ ಸಹಿತನಾದ ಕೌಂತೇಯನಾದ ಪರಂತಪನಾದ ಅರ್ಜುನನು ಆ ಉಡುಗೊರೆಯನ್ನು ಸ್ವೀಕರಿಸಿದನು.

ಕೃತೇ ವಿವಾಹೇ ತು ತದಾ ಧರ್ಮಪುತ್ರೋ ಯುಧಿಷ್ಠಿರಃ ।
ಬ್ರಾಹ್ಮಣೇಭ್ಯೋ ದದೌ ವಿತ್ತಂ ಯದುಪಾಹರದಚ್ಯುತಃ ॥೫೮॥

ವಿವಾಹವು ಪೂರ್ಣವಾಗುತ್ತಿರಲು ಧರ್ಮಪುತ್ರನಾದ ಯುಧಿಷ್ಠಿರನು ಕೃಷ್ಣನು ತಂದುಕೊಟ್ಟ ಧನವನ್ನೆಲ್ಲಾ ಬ್ರಾಹ್ಮಣರಿಗೆ (ದಕ್ಷಿಣೆಯಾಗಿ) ನೀಡಿದನು.

ಗೋಸಹಸ್ರಾಣಿ ರತ್ನಾನಿ ವಸ್ತ್ರಾಣಿ ವಿವಿಧಾನಿ ಚ ।
ಭೂಷಣಾನಿ ಚ ಸರ್ವಾಣಿ ಯಾನಾನಿ ಶಯನಾನಿ ಚ ॥೫೯॥

ಪಟ್ಟವಾಸಾಂಸಿ ಚಿತ್ರಾಣಿ ದಾಸೀದಾಸಾನ್ ಬಹೂನ್ ದದೌ ।
ನಾಗರಾನ್ ಪ್ರೀತಿಭಿರ್ದಿವ್ಯೈಸ್ತರ್ಪಯಾಮಾಸ ಭೂಪತಿಃ ॥೬೦॥

ಸಹಸ್ರಗೋವುಗಳನ್ನೂ, ವಿವಿಧವಾದ ರತ್ನಗಳನ್ನೂ ಮತ್ತು ವಸ್ತ್ರಗಳನ್ನೂ, ಅಲಂಕಾರಗಳನ್ನೂ, ಎಲ್ಲಾ ವಾಹನಗಳನ್ನೂ ಮತ್ತು ಶಯನಗಳನ್ನೂ, ವಿಚಿತ್ರವಾದ ಪಟ್ಟೆ ವಸ್ತ್ರಗಳನ್ನೂ, ಅನೇಕ ದಾಸ-ದಾಸಿಯರನ್ನೂ ಯುಧಿಷ್ಠಿರನು ನೀಡಿದನು. ಭೂಪತಿಯಾದ ಅವನು ನಗರವಾಸಿಜನರಿಗೆ ಅವರ ಪ್ರೀತಿಯ ದ್ರವ್ಯಗಳನ್ನು ಕೊಟ್ಟು ತೃಪ್ತಿಪಡಿಸಿದನು.

ತನ್ಮಹೋತ್ಸವಸಂಕಾಶಂ ಹೃಷ್ಟಪುಷ್ಟಜನಾಕುಲಮ್ ।
ನಗರಂ ಮತ್ಸ್ಯರಾಜಸ್ಯ ಶುಶುಭೇ ಭರತರ್ಷಭ ॥೬೧॥

ಎಲೈ ಭರತರ್ಷಭನೇ, ಹೃಷ್ಟ-ಪುಷ್ಟಜನರಿಂದ ತುಂಬಿಹೋಗಿದ್ದ ಮತ್ಸ್ಯರಾಜನ ಆ ಉಪಪ್ಲಾವ್ಯನಗರವು ಮಹೋತ್ಸವ ಸದೃಶವಾದ ಆ ವಿವಾಹದಲ್ಲಿ ಬಹಳವಾಗಿ ಶೋಭಿಸಿತು.

ಪುರೋಹಿತೈರಮಾತ್ಯೈಶ್ಚ ಪೌರೈರ್ಜಾನಪದೈಃ ಸಹ ।
ವಿರಾಟೋ ನೃಪತಿಃ ಶ್ರೀಮಾನ್ ಸೌಭದ್ರಾಯಾಭಿಮನ್ಯವೇ ॥೬೨॥

ತಾಂ ಸುತಾಮುತ್ತರಾಂ ದತ್ತ್ವಾ ಮುಮುದೇ ಪರಮಾಂ ತದಾ ॥೬೩॥

ಸಂಪದ್ಯುಕ್ತನಾದ ವಿರಾಟರಾಜನು ಪುರೋಹಿತರು, ಅಮಾತ್ಯರು, ಪೌರಜಾನಪದರು ಇವರ ಸಹಿತನಾಗಿ ತನ್ನ ಮಗಳಾದ ಉತ್ತರೆಯನ್ನು ಸುಭದ್ರೆಯ ಪುತ್ರನಾದ ಅಭಿಮನ್ಯುವಿಗೆ ಕೊಟ್ಟು ಪರಮಸಂತೋಷವನ್ನು ಹೊಂದಿದನು.

ಜನಮೇಜಯಃ

ವೃತ್ತೇ ವಿವಾಹೇ ಹೃಷ್ಟಾತ್ಮಾ ಯದುವಾಚ ಯುಧಿಷ್ಠಿರಃ ।
ತತ್ಸರ್ವಂ ಕಥಯಸ್ವೇಹ ಕೃತವಂತೋ ಯದುತ್ತರಮ್ ॥೬೪॥

ಜನಮೇಜಯ– ವಿವಾಹವು ಕಳೆದ ಮೇಲೆ ಸಂತೋಷಗೊಂಡ ಯುಧಿಷ್ಠಿರನು ಏನು ಮಾತನಾಡಿದನು ಎಂಬುದೆಲ್ಲವನ್ನೂ ನನಗೆ ಹೇಳುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವಿರಾಟಪರ್ವಣಿ ಷಟ್‌ಸಪ್ತತಿತಮೋऽಧ್ಯಾಯಃ ॥

॥ ವೈವಾಹಿಕಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವಿರಾಟಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ವೈವಾಹಿಕಪರ್ವ॥

॥ ಸಮಾಪ್ತಂ ವಿರಾಟಪರ್ವ ॥

★ ★ ★ ★ ★

ನದೀಜ ಲಂಕೇಶವನಾರಿಕೇತುಃ
ನಗಾಹ್ವಯೋ ನಾಮ ನಗಾರಿಸೂನುಃ ।
ಗತ್ಯಾ ಸುರೇಶಃ ಕ್ವಚಿದಂಗನೇವ
ಗುರುರ್ಬಭಾಷೇ ವಚನಂ ತದಾನೀಮ್ ॥

ನದೀಜ= ಎಲೈ ಗಂಗಾಪುತ್ರನಾದ ಭೀಷ್ಮನೇ, ಲಂಕೇಶವನಾರಿಕೇತುಃ= ಲಂಕೇಶನಾದ ರಾವಣನ ವನ= ಅಶೋಕವನಕ್ಕೆ, ಅರಿ= ಶತ್ರುವಾದ ಹನುಮಂತನನ್ನು, ಕೇತುಃ= ಧ್ವಜವಾಗಿ ಉಳ್ಳ, ನಗಾರಿಸೂನುಃ; ನಗಾರಿ= ಪರ್ವತಗಳಿಗೆ ಶತ್ರುವಾದ ಇಂದ್ರನ, ಸೂನುಃ= ಮಗನಾದ; ನಗಾಹ್ವಯೋ ನಾಮ= ಅರ್ಜುನನೆಂಬ ವೃಕ್ಷದ ಹೆಸರುಳ್ಳ ಅರ್ಜುನನು; ಗತ್ಯಾ= ತನ್ನ ನಡಿಗೆಯಲ್ಲಿ; ಸುರೇಶಃ= ಇಂದ್ರನಂತಿದ್ದಾನೆ; ಕ್ವಚಿತ್= ಕತ್ತಿನ ಮೇಲ್ಭಾಗದಲ್ಲಿ; ಅಂಗನೇವ= ಸ್ತ್ರೀಯಂತೆ ಇದ್ದಾನೆ ಎಂದು ದ್ರೋಣಾಚಾರ್ಯರು ಆಗ ಮಾತನಾಡಿದರು.

ISBN 978-93-81807-63-7